

ಜಾನಪದ ಶಿಷ್ಟಪದ
ಡಾ. ಡಿ. ಕೆ. ರಾಜೇಂದ್ರ

ಆಕರ ಗ್ರಂಥಮಾಲೆ

ಜಾನಪದ - ಶಿಷ್ಟಪದ

ಡಾ. ಡಿ. ಕೆ. ರಾಜೇಂದ್ರ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು.

JĀNAPADA SISTAPADA

A Collection of Articles on flok lore

Writer

Dr. D. K. Rajendra

Formerly professor in kannada and Director,
Kuvempu institute of Kannada studies, Mysore University
Mysore - 570 006

Publisher

Administrative officer

Kannada Pustaka Pradhikara
(Kannada Book Authority)
Pampamahakavi Road,
Chamarajapet, Bangalore-560 018

First Print 2003
Pages : IX + 350
Price 120 /-

I S B N. 81-7713-132-X

D. T. P

Yashas Graphics
Agrahara, Mysore.
☎ : (0821) : 482018

Printer :

Sri Rajendra Printers & publishers
Behind Evening Bazaar
Shivarampet, Mysore-570 001.
☎ : 0821-425248

ಅಕ್ಷರ ಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ - ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರ ನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದೂ ತಿಳಿದಿದ್ದೇವೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಹಲವು ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿ ಮುಖ್ಯವಲ್ಲವೇ ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ- ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು ! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. ' ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು

ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ . ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ ! ಅನೇಕ ತಳವರ್ಗದ ಜನಸ್ತಾನಗಳು ಮೊದಲ ಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೂ, ರೂಪಕಗಳಲ್ಲೂ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಇದು ಈಗ ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ -ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೨೦ ರಲ್ಲಿ ಅತ್ಯುತ್ತಮ ತಾಂತ್ರಿಕಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣಾ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದ್ಯಮಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ ! ಕನ್ನಡ ಪುಸ್ತಕ ಪ್ರಾಧಿಕಾರವು ಮಹತ್ವದ ಪ್ರಕಟಣೆಗಳನ್ನು ಹೊರತರುತ್ತಿರುವುದು [illegible].

ವಿಜ್ಞಾನ ಸಾಹಿತ್ಯ ಪ್ರಕಟಣೆ - ಮೊದಲಾದವುಗಳನ್ನು ವಿವಿಧ ಮಾಲೆಗಳಲ್ಲಿ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿದೆ. ನಾಡಿನ ಜನತೆ ಅತ್ಯಂತ ಪ್ರೀತಿಯಿಂದ ನಮ್ಮ ಪ್ರಕಟಣೆಗಳನ್ನು ಸ್ವಾಗತಿಸುತ್ತಿದೆ.

ಡಾ. ಡಿ.ಕೆ. ರಾಜೇಂದ್ರ ಅವರು ಪ್ರಸಿದ್ಧ ಜಾನಪದ ಮತ್ತು ಶಿಷ್ಟಪದದ ಉಪಾಸಕರು. ನಿಜಾರ್ಥದಲ್ಲಿ ಅವರು ಅವೆರಡನ್ನು ಬೇರೆ ಬೇರೆ ಎಂದು ತಿಳಿದಿಲ್ಲ. ಅವು ಒಂದರೊಳಗೊಂದು ಮೈ ಪಡೆಯುತ್ತವೆ. ಈ ತಿಳಿವು ಅವರ ಬರಹಗಳಿಗೆ ತಾತ್ವಿಕ ಕಾರಣವಾಗಿದೆ. ಇಪ್ಪತ್ತೊಂದನೆ ಶತಮಾನವು ನಮಗೆ ಹೊಸ ತಿಳಿವನ್ನು ನೀಡಿವೆ. ಆ ಬಗೆಯ ತಿಳಿವಿನಲ್ಲಿ ಹಲವುಗಳು ಇಲ್ಲವಾಗಿ, ಇರುವುದೆಲ್ಲವೂ ಒಂದರೊಳಗೊಂದೆಂಬ ನಿಜೈಕ್ಯವನ್ನು ತಿಳಿಸಿಕೊಡುವ ಕ್ರಮಗಳು ಪ್ರಕಟವಾಗಿವೆ. ಡಾ. ಡಿ.ಕೆ. ರಾಜೇಂದ್ರ ಅವರ ಈ ಕೃತಿಯು ಈ ಸಂಗತಿಗಳನ್ನು ಉದ್ಘಾಟಿಸುತ್ತದೆ.

ಜಾನಪದವು ಈಗ ಹಲವು ಬಗೆಯ ಅಧ್ಯಯನ ಕ್ರಮಗಳಿಗೆ ಒಳಗಾದರೂ ತನ್ನ 'ಅವ್ವ'ನ ಗುಣವನ್ನು ಅದು ಬಿಟ್ಟುಕೊಟ್ಟಿಲ್ಲ. ಈ ಸೂಕ್ಷ್ಮವು ಡಾ. ಡಿ.ಕೆ. ರಾಜೇಂದ್ರರವರಿಗೆ ತಿಳಿದಿದೆ. ದಕ್ಷಿಣ ಕರ್ನಾಟಕದ ಜಾನಪದದ ಹಲವು ಹಮ್ಮುಗೆಗಳನ್ನು ವ್ಯಾಖ್ಯಾನಿಸುವಾಗ ಮತ್ತು ಕುವೆಂಪು-ಬೇಂದ್ರ ಅವರ ಕೃತಿಗಳನ್ನು ಕುರಿತು ಚಿಂತಿಸುವಾಗ ಶಿಷ್ಟ ಮತ್ತು ಪರಿಶಿಷ್ಟಗಳು ಸೂಕ್ಷ್ಮವಾಗಿ ಒಂದರೊಡನೊಂದು ಸೇರಿಕೊಳ್ಳುತ್ತವೆ. ಜಾನಪದವು ಹೀಗೆ ಅದ್ಯತನಗೊಳ್ಳುವುದೆಂದರೆ ವರ್ತಮಾನಗೊಳ್ಳುವುದೆಂದೂ ಸಂಸ್ಕೃತಿ ನೆಲೆಗಳಲ್ಲಿ ಮೈ ಪಡೆಯುವುದೆಂದೂ ಅರ್ಥ. ಈ ಅರ್ಥದ ಹುಡುಕಾಟಗಳು ಇಲ್ಲಿಯ ಲೇಖನಗಳ ತಾತ್ವಿಕ ರೂಪವನ್ನು ನಿರ್ಧರಿಸಿವೆ. ಕಾವ್ಯ, ಮಹಾಕಾವ್ಯ, ಲಾವಣಿ, ಜಾನಪದ ಗೀತೆ, ಜಾನಪದ ಕಥನ, ಆತ್ಮಚರಿತ್ರೆ, ಗದ್ಯವಿಮರ್ಶೆ ಹೀಗೆ ಹತ್ತಾರು ವಿಷಯಗಳು ಇಲ್ಲಿ ಸಮಗ್ರೀಕರಣಗೊಂಡಿವೆ ; ಕೃತಿಯ ಆಂತರಿಕ ಸ್ವರೂಪವನ್ನು ನಿರ್ಧರಿಸಿವೆ.

'ಜಾನಪದ - ಶಿಷ್ಟಪದ' ಕೃತಿಯನ್ನು ಪುಸ್ತಕ ಪ್ರಾಧಿಕಾರಕ್ಕಾಗಿ ಸಿದ್ಧಪಡಿಸಿಕೊಟ್ಟ ಡಾ. ಡಿ.ಕೆ.ರಾಜೇಂದ್ರ ಅವರ ವಿಶ್ವಾಸ ತುಂಬಾ ದೊಡ್ಡದೆಂದು ಭಾವಿಸಿದ್ದೇನೆ. ಪ್ರಾಧಿಕಾರವು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಪುಸ್ತಕ ಪ್ರಾಧಿಕಾರದ ಸದಸ್ಯ ಮಿತ್ರರ ಒತ್ತಾಸೆ ಈ ಪುಸ್ತಕ ಹೊರಬರುವುದಕ್ಕೆ ಮುಖ್ಯಕಾರಣವಾಗಿದೆ. ಈ ಸಂದರ್ಭದಲ್ಲಿ ಅವರನ್ನು ನೆನೆಯುತ್ತೇನೆ. ಮೈಸೂರಿನ **'ಯಶಸ್ ಗ್ರಾಫಿಕ್ಸ್'** ನ ಶ್ರೀಮತಿ ಎಸ್.ಆಶಾಲತಾ ಅವರು ಬಹು ಶ್ರಮವಹಿಸಿ ಡಿ.ಟಿ.ಪಿ. ಮಾಡಿಕೊಟ್ಟಿದ್ದಾರೆ. **'ರಾಜೇಂದ್ರ ಪ್ರಿಂಟರ್ಸ್'** ನ ಮಾಲೀಕರಾದ ಶ್ರೀ ಷಿ.ಎನ್. ಲೋಕಪ್ಪನವರ ಸ್ನೇಹ. ವಿಶ್ವಾಸ ಮುದ್ರಣ ಪ್ರೀತಿಯನ್ನು ಪ್ರಾಧಿಕಾರವು ನೆನೆಯುತ್ತದೆ. ಕನ್ನಡ ಜನತೆಯು ವಿಶ್ವಾಸದಿಂದ ' ಜಾನಪದ -ಶಿಷ್ಟಪದ ' ಪುಸ್ತಕವನ್ನು ಸ್ವೀಕರಿಸಬೇಕೆಂದು ಬೇಡುತ್ತೇನೆ.

ಅರಿಕೆ

‘ ಜನವಾಣಿ ಬೇರು-ಕವಿವಾಣಿ ಹೂವು’ ಎಂಬುದು ಈಗಾಗಲೇ ಸವಕಲು ಮಾತು. ಆದರೂ ಅದು ತನ್ನ ಹೊಳಪನ್ನು ಕಳೆದುಕೊಂಡಿಲ್ಲ. ಅದು ಎಷ್ಟು ಹಳೆಯದೋ ಅಷ್ಟೇ ಅರ್ಥಗರ್ಭಿತ. ಎಷ್ಟುಅರ್ಥ ಗರ್ಭಿತವಾದದ್ದೊ, ಅಷ್ಟೇ ಭಾವಸಂಬಂಧಿಯಾದದ್ದು, ಅವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಒಂದರ ಹೊರತು ಮತ್ತೊಂದನ್ನು ಸಮೀಕ್ಷಿಸುವುದಾಗಲಿ, ಅರ್ಥೈಸುವುದಾಗಲಿ ಸುಲಭವಲ್ಲ,ಸಾಧುವೂ ಅಲ್ಲ. ಹೂವಿನ ಸಾರ ಬೇರಿನಿಂದಲೇ ಎಂಬುದನ್ನು ಕಡೆಗಣಿಸುವುದು ಕಷ್ಟವಾಗುತ್ತದೆ. ಮೊದ ಮೊದಲು ಶಿಷ್ಟದಲ್ಲಿ ಬೇರು ಬಿಟ್ಟು ಘಟಾನುಘಟಿಗಳೇ ಕಂಡು ಕೊಂಡ ಸತ್ಯ ಇದು. ಜಾನಪದದ ಸವಿಯನ್ನು ಉಂಡ ನಮ್ಮ ಹಿರಿಯ ಸಾಹಿತ್ಯ ವಿಮರ್ಶಕರು, ಕವಿಗಳು, ಸಾಹಿತ್ಯಾಸಕ್ತರು, ಸಾಹಿತ್ಯಾಭಿಮಾನಿಗಳು ಎಲ್ಲರೂ ನಂತರ ಜಾನಪದದ ಸೊಗಡಿಗೆ ಸೊಬಗಿಗೆ ಅದರ ಶ್ರೀಮಂತಿಕೆಗೆ ಮಾರು ಹೋದವರೆ. ಆನಂತರ ಜಾನಪದ - ಶಿಷ್ಟಪದಗಳ ಸಂಬಂಧವನ್ನು ಹುಡುಕ ಹೊರಟು ಅವೆರಡರ ಸಮ್ಮಿಲನದ ಸಾಹಿತ್ಯದಲ್ಲಿನ ಹೆಚ್ಚುಗಾರಿಕೆಯನ್ನು ಅನಾವರಣಗೊಳಿಸುವಲ್ಲಿ ಯಶಸ್ವಿಯಾದರು. ಈ ಗುಂಪಿನಲ್ಲಿ ಹೆಸರಿಸಲೇಬೇಕಾದ ಆರಂಭದ ಹಿರಿಯ ಚೇತನಗಳೆಂದರೆ ಮಾಸ್ತಿ, ಬೇಂದ್ರೆ, ಬಿಎಂಶ್ರೀ, ತೀನಂಶ್ರೀ, ಮುಂತಾದವರು. ಅದಕ್ಕೆ ಹೆಚ್ಚಿನ ಚಾಲನೆಯನ್ನು ಕೊಟ್ಟು ಶಿಸ್ತಿನ ಅಧ್ಯಯನಕ್ಕೆ ಕಾರಣರಾದವರು ಹಲವರು. ಅವರಲ್ಲಿ ಪ್ರಮುಖರು ಪ್ರೊ. ದೇಜಗೌ, ಪ್ರೊ.ಹಾಮಾನಾ. ಪ್ರೊ. ಜೀಶಂಪ ಮುಂತಾದವರು. ಆ ಹುಡುಕಾಟ, ತಡಕಾಟ ಇನ್ನೂ ನಡೆದೇ ಇದೆ. ಅದು ನಿರಂತರ ಚಿರಂತನ.

ಪ್ರಸ್ತುತ ಕೃತಿ, ‘ ಜಾನಪದ-ಶಿಷ್ಟಪದ ’ ಇಂತಹ ಹುಡುಕಾಟ, ತಡಕಾಟದ ಒಂದು ಪ್ರಾಮಾಣಿಕ ಪ್ರಯತ್ನ. ಜಾನಪದ ಹುಟ್ಟಿನಿಂದ ಮೈಗೆ ಹೊಕ್ಕಿದ್ದಾದರೆ, ಶಿಷ್ಟಪದ ಕಲಿಕೆಯಿಂದ ಮನ ಹೊಕ್ಕದ್ದು, ಹಾಗಾಗಿ ಮೈ-ಮನಗಳ ಅನ್ಯೋನ್ಯ ಸಂಬಂಧದಲ್ಲಿ ಹೊರ ಹೊಮ್ಮಿದ ಕೆಲವೊಂದು ವಿಚಾರಗಳು ಇಲ್ಲಿ ಬಿತ್ತರಗೊಂಡಿವೆ. ಎಷ್ಟೇ ದೊಡ್ಡ ಶಿಷ್ಟಕವಿಯಾದರೂ, ಅವನ ಕಾಲುಗಳು ಈ ನೆಲದಿಂದ ದೂರಸರಿದು ನಿಲ್ಲಲು ಸಾಧ್ಯವಿಲ್ಲ. ಹಾಗಾದರೆ ಅವನು ಕೆಲವೊಂದು ಮೂಲಭೂತ ವಿಚಾರಗಳಿಂದ ವಂಚಿತನಾದಂತೆಯೇ! ಹೂವು ಪುಷ್ಟಿಗೊಳ್ಳಬೇಕಾದರೆ, ಬೇರು ಸಾಕಷ್ಟು ಆಳಕ್ಕೆ ಬೇರು ಬಿಟ್ಟು ಗಟ್ಟಿಗೊಂಡಿರಬೇಕಾಗುತ್ತದೆ. ಜಾನಪದ - ಶಿಷ್ಟಪದಗಳ ಸಂಬಂಧ ಅಂತಹುದು. ಜೈನಧರ್ಮದ ಹಿನ್ನೆಲೆಯನ್ನು ಬದಿಗೊತ್ತಿ ವಡ್ಡಾರಾಧನೆಯನ್ನು ಪರಿಶೀಲಿಸಿದರೆ ಅದೊಂದು ಸುಂದರ ಜನಪದ ಕಥಾಗುಚ್ಛವಾಗಿ ಗೋಚರಿಸುವುದೇ ಇದಕ್ಕೆ ಸಾಕ್ಷಿ. ಜಾನಪದ ಆವರಣವನ್ನೇ ಪುಷ್ಟಿಸಿಕೊಂಡು ಶಿಷ್ಟಕವಿಯಿಂದ

ಸೃಷ್ಟಿಯಾಗಿರುವ ಈ ಕತೆಗಳು ಜಾನಪದ ಮತ್ತು ಶಿಷ್ಟಪದಗಳ ನಿಕಟತೆಯನ್ನು ಅನಾವರಣಗೊಳಿಸುತ್ತವೆ. ಅವೆರಡರ ಅನ್ಯೋನ್ಯ ಸಂಬಂಧ ಕೃತಿಯ ವಿಶಿಷ್ಟತೆಗೆ ಕಾರಣವಾಗುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಐತಿಹಾಸಿಕವಾಗಿ ಗಮನಿಸುವಾಗ ಎಲ್ಲ ಕಾಲಘಟ್ಟಗಳಲ್ಲಿಯೂ ಇದಕ್ಕೆ ಸ್ಪಷ್ಟ ನಿದರ್ಶನಗಳು ದೊರೆಯುತ್ತವೆ.

ವಚನಕಾರರ ವಚನಗಳಾಗಲಿ, ಕುಮಾರವ್ಯಾಸನಂತಹ ಕವಿಯ ಕಾವ್ಯವಾಗಲಿ, ಆಧುನಿಕಕ್ಕೆ ಬಂದರೆ ಬೇಂದ್ರೆ, ಕುವೆಂಪು ಅವರಂತಹ ಮಹಾನ್ ಕವಿಗಳು, ಆ ಪರಂಪರೆಯ ನೇತಾರರಾಗಿ ಗಮನಸೆಳೆಯುತ್ತಾರೆ. ಬೇಂದ್ರೆ ತಾವು ಬಳಸುವ ಭಾಷೆ-ಲಯಗಳಲ್ಲಿ ಆ ಮೋಡಿಯನ್ನು ತಂದುಕೊಟ್ಟರೆ, ಕುವೆಂಪು ಅವರಂತಹವರು ಜಾನಪದ ಬದುಕಿನ ಅಂತರಾಳದ ಸತ್ವವನ್ನು ಚಿತ್ರಣಗಳ ಮೂಲಕ ತಮ್ಮ ಕಾದಂಬರಿ, ಕಥೆ ಗೀತೆಗಳಲ್ಲಿ ಸೆರೆಹಿಡಿದುಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಚಂದ್ರಶೇಖರ ಕಂಬಾರರವರ ನಾಟಕಗಳಾಗಾಲಿ, ಸೋಮಶೇಖರ ಇಮ್ರಾಪುರ ಅವರ ಕವಿತೆಗಳಾಗಲಿ, ರಾವ್‌ಬಹುದ್ದೂರ್, ಎಚ್.ಎಲ್. ನಾಗೇಗೌಡ ಅವರುಗಳ ಕಾದಂಬರಿಗಳಾಗಾಲಿ ಯಾವುವೂ ಇವುಗಳಿಂದ ಹೊರತಾದುವುಗಳಲ್ಲ, ವಂಚಿತವಾದವುಗಳಲ್ಲ. ಅವರುಗಳ ಕೃತಿಗಳಲ್ಲಿನ ಹೆಚ್ಚುಗಾರಿಕೆಗೆ ಜಾನಪದ ಸ್ಪರ್ಶವೇ ಕಾರಣ ಎಂಬುದು ಸ್ಪಷ್ಟ.

ಅದೆಷ್ಟೋ ವರ್ಷಗಳ ಕಾಲ ಕಾಲನ ತುಳಿತಕ್ಕೆ ಒಳಗಾದದ್ದು ಜಾನಪದ. ಮಧುರ ಕವಿ ಅದನ್ನು 'ಗೊರವರ ಡುಂಡುಚಿಯೇ ಬೀದಿವಜೆಯೇ ಬೀರನ ಕಥೆಯೇ' ಎಂದು ಹೀಯಾಳಿಸಿದ್ದು ಉಂಟು. ಆದರೆ ಈಗ ಅದಕ್ಕೆ ಮಹತ್ವದ ಸ್ಥಾನ ದೊರೆತಿದೆ. ಅದು ಶಿಷ್ಟ ಸಾಹಿತ್ಯಕ್ಕೆ ಪುಷ್ಟಿ ಕೊಡುತ್ತ ಬಂದದ್ದೇ ಅಲ್ಲದೆ, ಅದಕ್ಕ ಹೊಸತನದ ಮೆರಗನ್ನು ಬೆಡಗನ್ನೂ ಕೊಡುವುದರ ಮೂಲಕ ವಿಭಿನ್ನ ಸಾಹಿತ್ಯ ರೂಪವೊಂದು ಹೊರ ಹೊಮ್ಮಲು ನೀರೆರೆಯಿತು. ಹೊಸ ಚಿಗುರು ಹಳೇಬೇರು ಕೂಡಿ ಆಕರ್ಷಕ ಸಾಹಿತ್ಯ ಶೈಲಿಯೊಂದು ಗರಿಗೆದರಲು ಕಾರಣವಾಯಿತು. ಇದಕ್ಕಾಗಿ ಜನವಾಣಿಗೆ ಕವಿವಾಣಿ ಎಂದೆಂದಿಗೂ ಋಣಿಯಗಬೇಕಾದ ಸಹಜ ಪ್ರಸಂಗ ತಾನೇಯಾಗಿ ಸೃಷ್ಟಿಯಾಗಿದೆ. ಇದನ್ನು ಯಾರೂ ಅಲ್ಲಗಳೆಯಲಾರರು ಎಂದೇ ನನ್ನ ಭಾವನೆ.

ಮೇಲಿನ ಹಲವು ಸಂಗತಿಗಳಿಗೆ ಒತ್ತಾಸೆಯಾದ ಲೇಖನಗಳು ಸಿದ್ಧಗೊಂಡು ಪುಸ್ತಕ ರೂಪದಲ್ಲಿ ಹೊರಬರಲು ಕಾಯುತ್ತಿದ್ದ ಸಂದರ್ಭದಲ್ಲಿಯೇ ಅದಕ್ಕೆ ಚಾಲನೆ ದೊರೆತದ್ದು ನನ್ನ ಆತ್ಮೀಯ ಹಿರಿಯ ಸಾಹಿತ್ಯಮಿತ್ರರಾದ ಪ್ರೊ. ರಾಮೇಗೌಡ (ರಾಗೌ). ಅವರಿಂದ. ಪುಸ್ತಕ ಪ್ರಾಧಿಕಾರಕ್ಕೆ ಹಸ್ತಪ್ರತಿಯನ್ನು ಕಳುಹಿಸುವ ಸೂಚನೆಯನ್ನು ನೀಡಿದವರೂ ಅವರೇ.

ನಾನು ನನ್ನ ವೈಯಕ್ತಿಕ ಕಾರಣಗಳಿಂದಾಗಿ ಅತ್ತ ಗಮನಹರಿಸಲು ಸಾಧ್ಯವಾಗದೆ ಹೋದಾಗ ಕೃತಿಯ ನಾಮಕರಣದ ಜವಾಬ್ದಾರಿಯನ್ನೂ ಹೊತ್ತು ಸಹಕರಿಸಿದ ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರ ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತು ‘ ಜ್ಞಾನದ ಬಲದಿಂದ ಅಜ್ಞಾನದ ಕೇಡು ’ ಎಂಬ ಅಣ್ಣನವರ ವಾಣಿಯನ್ನು ನಿಜಗೊಳಿಸುವ ದಿಟ್ಟ ಹೆಜ್ಜೆಯನ್ನು ಮುಂದಿಟ್ಟಿದೆ. ಇದರ ನೇತೃತ್ವವನ್ನು ವಹಿಸಿರುವ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಕ್ರಿಯಾಶೀಲ ವ್ಯಕ್ತಿ. ಹಲವು ಕನಸುಗಳನ್ನು ಹೊತ್ತವರು. ಅದನ್ನು ಕಾರ್ಯ ರೂಪಕ್ಕೆ ತರುವ ಶಕ್ತಿಯುಳ್ಳವರು, ಸಾಮರ್ಥ್ಯ ಪಡೆದವರು. ಹಸ್ತಪ್ರತಿ ಕೈಸೇರುತ್ತಿದ್ದಂತೆಯೇ ಅದನ್ನು ಪ್ರಕಟಿಸುವ ಉತ್ಸಾಹವನ್ನು ತೋರಿ ಅದನ್ನು ಕಾರ್ಯಗತಗೊಳಿಸಿದ್ದಾರೆ. ಇದಕ್ಕೆ ಕಾರಣರಾದ ಅವರನ್ನು ಹಾಗೂ ಸಮಿತಿಯ ಎಲ್ಲ ಸದಸ್ಯರುಗಳನ್ನು ಗೌರವದಿಂದ ನೆನೆಯುತ್ತೇನೆ.

ಈ ಕೃತಿ ಇಷ್ಟು ಅಂದವಾಗಿ ಹೊರಬರುವಲ್ಲಿ ಶ್ರಮಿಸಿದ, ಡಿ.ಟಿ.ಪಿ. ಕಾರ್ಯ ನಿರ್ವಹಣೆಮಾಡಿಕೊಟ್ಟ ಮೈಸೂರಿನ **‘ಯಶಸ್ ಗ್ರಾಫಿಕ್ಸ್’** ನ ಮಾಲೀಕರಾದ ಶ್ರೀಮತಿ ಎಸ್. ಆಶಾಲತಾ ಅವರನ್ನು, ಅಂದವಾಗಿ ಮುದ್ರಿಸಿ ಕೊಟ್ಟ **‘ ರಾಜೇಂದ್ರ ಪ್ರಿಂಟರ್ಸ್ & ಪಬ್ಲಿಷರ್ಸ್’** ನ ಮಾಲೀಕರಾದ ಶ್ರೀ ಡಿ. ಎನ್.ಲೋಕಪ್ಪ ಅವರುಗಳನ್ನು ಅವರ ಕಾರ್ಯದಕ್ಷತೆ ಹಾಗೂ ಕಾರ್ಯತತ್ಪರತೆಗೆ ಪ್ರೀತಿ ವಿಶ್ವಾಸಗಳಿಂದ ಸ್ಮರಿಸುತ್ತೇನೆ. ಆಕರ್ಷಕ ಮುಖಪುಟವನ್ನು ಮಾಡಿಕೊಟ್ಟ ಖ್ಯಾತ ಕಲಾವಿದ ಶ್ರೀ ರಫೀಕ್ ಉಪ್ಪಿನಂಗಡಿ ಅವರನ್ನು ಹಾಗೂ ಎಲ್ಲಾ ಸಹೃದಯ ಚೇತನಗಳನ್ನು ಪ್ರೀತಿ ಗೌರವಗಳಿಂದ ನೆನೆಯುತ್ತೇನೆ.

ಮೈಸೂರು
೧೫.೫. ೨೦೦೩

ಡಿ.ಕೆ. ರಾಜೇಂದ್ರ
೪೮. 'ಸ್ಪಂದನ'
ಮಾರುತಿ ದೇವಸ್ಥಾನದ ರಸ್ತೆ
ಸರಸ್ವತಿಪುರಂ, ಮೈಸೂರು - ೫೭೦ ೦೦೯

ಪರಿವಿಡಿ

ಜನಪದ ಕಥೆಗಳು : ಒಂದು ವಿಶ್ಲೇಷಣೆ

೧

ಒಂದು ಕಾಲಕ್ಕೆ 'ಅಡುಗೂಲಜ್ಜಿ ಕಥೆ'ಯೆಂದು ತೀರ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಜನಪದ ಕಥೆಗಳು, ಕೇವಲ ಮಕ್ಕಳನ್ನು ರಂಜಿಸಲು, ದೊಡ್ಡವರ ಕಾಲಹರಣ ಮೋಜಿನಿಂದ ಸಾಗಲು ಒಂದು ಸಾಧನ ಎಂದು ಭಾವಿಸಲಾಗಿತ್ತು. ಆದರೆ ಕಾಲ ಕಳೆದಂತೆ, ಮಾನವನ ಗತಕಾಲದ ಒಂದೊಂದು ಅಂಶವೂ ಅಧ್ಯಯನಕ್ಕೆ ಒಳಪಟ್ಟಂತೆ, ಅವುಗಳಲ್ಲಿ ಹುದುಗಿರುವ ಅಪಾರ ಸಂಪತ್ತು ಎಂತಹುದೆಂಬುದು ಕ್ರಮ ಕ್ರಮೇಣ ಗೋಚರಿಸುತ್ತ ಬಂತು. ಪ್ರಾಚೀನ ಮಾನವನ ಬದುಕಿನ ಸುತ್ತ ಮುತ್ತ ಹೊರಹೊಮ್ಮಿದ ಒಂದೊಂದು ಎಳೆಯೂ ಅವನ ಬದುಕಿನ ನಾದವನ್ನು ಸೂಸುವ ತರಂಗವನ್ನು ಒಳಗೊಂಡಿದೆ ಎಂಬುದನ್ನು ಗುರುತಿಸಲಾಯಿತು. ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದಾದ "ಜನಪದ ಕಥೆ" ಅವುಗಳಲ್ಲಿ ಒಂದು.

ಜನಪದ ಕಥೆಗಳು ಜನಪದ ಸಾಹಿತ್ಯದ ಪ್ರಾಚೀನವೂ, ಪ್ರಚಲಿತವೂ ಆದ ಒಂದು ವಿಶಿಷ್ಟ ಪ್ರಕಾರ. ಪರಂಪರೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವ ಹಾಗೂ ಪ್ರಾಚೀನ ಮಾನವನ ಬದುಕು, ಬಯಕೆ, ಆಸೆ, ನಿರಾಸೆ, ಆಕಾಂಕ್ಷೆ, ನಂಬಿಕೆ, ಸಂಪ್ರದಾಯ, ಆಚರಣೆ, ನೋವು, ನಲಿವು, ದ್ವೇಷ, ಅಸೂಯೆ, ಪ್ರೀತಿ, ಪ್ರೇಮ, ಕಾಮ, ಕನಸು, ಕಲ್ಪನೆ ಇತ್ಯಾದಿ ಇತ್ಯಾದಿ ಮಾನವ ಗುಣಾವಗುಣಗಳನ್ನು ಹೊತ್ತು ಬಂದ ಒಂದು ಅಪೂರ್ವ ಸಾಹಿತ್ಯ ಪ್ರಕಾರ. ಅದು ಬರಿಯ ಡೋಂಗಿಯಲ್ಲ, ಪ್ರಾಮಾಣಿಕ ವಿಜ್ಞಾನ. ಅದನ್ನೊಂದು ಕಲೆಯಾಗಿ ಅಭಿವ್ಯಕ್ತಿಸಿದ್ದು ನಮ್ಮ ಜನಪದರ ವಿಶಿಷ್ಟ ಪ್ರತಿಭೆ. ಅಲ್ಲಿ ಭಾಷೆ ಇದೆ, ಸಾಹಿತ್ಯ ಇದೆ, ಮನಶ್ಶಾಸ್ತ್ರದ ಅಂಶಗಳಿವೆ. ಮಾನವಶಾಸ್ತ್ರದ ಗುಣಗಳಿವೆ, ಚಾರಿತ್ರಿಕ ಹಾಗೂ ಸಾಮಾಜಿಕ ಘಟನೆಗಳ ಚಿತ್ರಗಳಿವೆ. ಮಾನವನ ಹಿರಿ-ಕಿರಿತನದ ಗುಣಾವಗುಣಗಳಿವೆ. ಲೌಕಿಕ - ಅಲೌಕಿಕ, ಮಾನುಷ - ಅತಿಮಾನುಷ, ಅಷ್ಟೇ ಏಕೆ ? ಕಾಲ್ಪನಿಕ ಜಗತ್ತಿನ ವಿಸ್ಮಯಕಾರಿ ಅಂಶಗಳು, ಪ್ರಾಣಿ ಪ್ರಪಂಚದ ಅದ್ಭುತ ಸಂಗತಿಗಳು ಅಲ್ಲಿ ದಟ್ಟೈಸಿವೆ. ಪರಂಪರಾಗತವಾಗಿ ಬಂದ ಈ ಸಾಹಿತ್ಯ ಪ್ರಕಾರದಲ್ಲಿ ಕತೆಯ ಅಂಶ ಅದರ ಒಂದು ಮುಖವಾದರೆ, ಇನ್ನುಳಿದ ಮುಖಗಳು ಹಲವಾರು. ಅವೆಲ್ಲವೂ ನಮ್ಮ ಪ್ರಾಚೀನ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ, ಪ್ರಾಚೀನ ಮಾನವನ ಬದುಕನ್ನು ಅರ್ಥಮಾಡಿಕೊಳ್ಳಲು ಬೇಕಾದ ಕೀಲಿಕೈಗಳು. ಪ್ರಪಂಚದ ಯಾವುದೇ ಮೂಲೆಯ, ಯಾವುದೇ ಜನಾಂಗದ, ಯಾವುದೇ ಸಂಸ್ಕೃತಿಯ ಒಂದು ಕತೆ ಇಂತಹ ಒಂದೊಂದು ಕೀಲಿಕೈಯಾಗಿ ಕಾರ್ಯ ನಿರ್ವಹಿಸಬಲ್ಲುದು. ಅಲ್ಲಲ್ಲಿಯ ಜನರ ಬದುಕು ಬವಣೆಗಳನ್ನು ವಿವರಿಸಬಲ್ಲವು. ಈ ಹಿನ್ನೆಲೆಯಲ್ಲಿ ಸ್ಮಿಥ್ ಥಾಂಸನ್ ಅವರು ಹೇಳಿರುವ ಮಾತುಗಳು ಗಮನಾರ್ಹವಾಗಿವೆ : 'Folk tales serve to give expression to the imagination and to bring amusement and excitement to monotonous lines. They will Long Con-

tinue to be one of the chief means of furnishing education and Solace to unlettered men and women".

ಆದುದರಿಂದ ಜನಪದ ಕಥೆಗಳನ್ನು ಕೇವಲ ಒಂದು ಕಥಾ ಪ್ರಕಾರವಾಗಿ ಅಥವಾ ಒಂದು ಸಾಹಿತ್ಯಿಕ ಬಗೆಯಾಗಿ ಅಷ್ಟೇ ನೋಡಲು ಸಾಧ್ಯವಿಲ್ಲ. ನಮ್ಮ ಸಾಂಸ್ಕೃತಿಕ ಅರಿವಿಗೆ ಅದರ ಅಗತ್ಯವಿದೆ, ಸಾಮಾಜಿಕ ಪ್ರಜ್ಞೆಯ ತಿಳಿವಿಗೆ, ಅದರ ಅನಿವಾರ್ಯತೆ ಇದೆ, ಹಾಗೆಯೇ ಅವರ ಅದ್ಭುತ ಕಲಾತ್ಮಕ ಸೃಷ್ಟಿಯ, ಸಾಹಿತ್ಯ ಶಕ್ತಿಯ ಅಳತೆಗೆ ಅದು ಬೇಕಾಗಿದೆ.

ಇಡೀ ವಿಶ್ವದಲ್ಲಿ ಜಾನಪದದ ಅಧ್ಯಯನ ಆರಂಭವಾದಂದಿನಿಂದ, ಅದರಲ್ಲಿ ಜನಪದ ಕಥೆಗಳ ಅಧ್ಯಯನ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಹೇಳಬೇಕೆಂದರೆ ಜಾನಪದ ಅಧ್ಯಯನ ಆರಂಭಗೊಂಡದ್ದೇ ಜನಪದ ಕಥೆಯ ಮೂಲಕ ಎನ್ನಬಹುದು. ಅದಕ್ಕೆ ಒಳ್ಳೆಯ ಪ್ರೇರಣೆ ದೊರತದ್ದೇ ಈ ಒಂದು ಪ್ರಕಾರದಿಂದ. ಜಗತ್ತಿನಾದ್ಯಂತ ಜನಪದ ಕಥೆಗಳು ಮೂಡಿಸಿದ ಕುತೂಹಲ ಅದರ ವ್ಯಾಪಕ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿತು. ಹಲವು ವಿದ್ವಾಂಸರು ಕತೆಗಳ ಮೂಲ ಚೂಲಗಳನ್ನು ಶೋಧಿಸಿ ಹೊರ ತೆಗೆಯುವಲ್ಲಿ ಮುಂದಾದರು. ಹಲವು ಸಿದ್ಧಾಂತಗಳು ಈ ಹಿನ್ನೆಲೆಯಲ್ಲಿ ಹುಟ್ಟಿ ಕೊಂಡುವು. ಜನಪದ ಕಥಾಲೋಕದ ವಿಸ್ಮಯಕಾರಿಯಾದ ಅಂಶಗಳು ವಿದ್ವಾಂಸರಿಗೆ ಸವಾಲಾಗಿ ನಿಂತು, ಅವುಗಳಿಗೆ ಉತ್ತರವನ್ನು ಕಂಡುಕೊಳ್ಳುವಲ್ಲಿ ಶ್ರಮಿಸಿದ್ದು ದೊಡ್ಡ ದೊಡ್ಡ ಹೊತ್ತಗೆಗಳಲ್ಲಿ ಹೊರ ಬಂದುವು. ವಿವಿಧ ದೃಷ್ಟಿಕೋನಗಳಿಂದ ಜನಪದ ಕಥೆಗಳ ಹುಟ್ಟು, ಬೆಳವಣಿಗೆಯನ್ನು ಕುರಿತು ವ್ಯಾಪಕವಾದ ಚಿಂತನೆಯನ್ನು ನಡೆಸಿದ್ದಾರೆ. ಹಲವಾರು ನೆಲೆಗಟ್ಟಿನಲ್ಲಿ ಅವನ್ನು ವಿಶ್ಲೇಷಿಸಿ, ಸರಿಯಾದ ಉತ್ತರವನ್ನು ಕಂಡು ಕೊಳ್ಳಲು ಪ್ರಯತ್ನಿಸಿದರು. ಈ ಪ್ರಯತ್ನ ಹತ್ತೊಂಬತ್ತನೆಯ ಶತಮಾನದ ಆದಿ ಭಾಗದಿಂದಲೇ ಆರಂಭವಾಗಿ ನಿರಂತರವಾಗಿ ಮುಂದುವರೆದದ್ದು ಈಗ ಇತಿಹಾಸ. ಗ್ರಿಮ್ ಸಹೋದರರ 'ಇಂಡೋ ಯೂರೋಪಿಯನ್' ಸಿದ್ಧಾಂತದಿಂದ ಆರಂಭಗೊಂಡು, ಭೆನ್ಫೆಯ 'ಭಾರತೀಯ ಮೂಲ ಸಿದ್ಧಾಂತ'ವನ್ನು ಒಳಗೊಂಡು, ಪ್ರತ್ಯೇಕತಾ ಬಹುಮೂಲ ಸಿದ್ಧಾಂತ, ಪ್ರಕೃತಿ ಸಂಕೇತ ಸಿದ್ಧಾಂತ, ಸ್ವಪ್ನ ಸಿದ್ಧಾಂತ, ಚಾರಿತ್ರಿಕ ಭ್ರಮಕ ಸಿದ್ಧಾಂತ ಮೊದಲಾದವುಗಳನ್ನು ದಾಟಿ 'ರಚನಾ ತತ್ವ'ದವರೆಗೆ ಜನಪದ ಕಥೆಗಳ ವ್ಯಾಪಕ ಅಧ್ಯಯನ ನಡೆದಿದೆ. ಫಿನ್‌ಲೆಂಡಿನ ಕಾರ್ಲ್ಕ್ರಾನ್‌ನ 'ಭೌಗೋಳಿಕ ಚಾರಿತ್ರಿಕ ಸಿದ್ಧಾಂತ' ಹಾಗೂ "ಪುರಾಣದ ಒಡೆದ ಚೂರುಗಳು" - " ಜನಪದ ಕಥೆಗಳು" ಎಂಬ ವಿಚಾರಗಳು ಹೊಸ ವಿಚಾರ ವೇದಿಕೆಯನ್ನೇ ನಿರ್ಮಿಸಲು ಕಾರಣವಾದುವು. ಈ ಎಲ್ಲ ವಾದ ವಿವಾದಗಳ ಹಿನ್ನೆಲೆಯಲ್ಲಿ, ಜನಪದ ಕಥೆಗಳು ನಮ್ಮ ಪ್ರಾಚೀನ ಸಂಸ್ಕೃತಿಯ ನಿಗೂಢವನ್ನು ಒಳಗೊಂಡ ವಿಶಿಷ್ಟ ಸಾಹಿತ್ಯ ಪ್ರಕಾರ ಎಂಬುದು ದೃಢಪಟ್ಟಿತು. ಅವುಗಳಲ್ಲಿ ಮಾನವ ಶಾಸ್ತ್ರೀಯ ಸಿದ್ಧಾಂತ, ಮನೋ ವಿಶ್ಲೇಷಣಾತ್ಮಕ ಸಿದ್ಧಾಂತ, ರಾಚನಿಕ ವಿಶ್ಲೇಷಣ ಸಿದ್ಧಾಂತ - ಇವುಗಳು ಕತೆಯ ಒಳಹೊಕ್ಕು, ಅವುಗಳ ಪದರಗಳಲ್ಲಿ ಅಡಗಿರುವ ಸಾಮಾಜಿಕ, ಸಾಂಸ್ಕೃತಿಕ, ಮಾನಸಿಕ ಮುಂತಾದ ವಿಷಯಗಳನ್ನು ಅರಿಯಲು ಅವಕಾಶ ಮಾಡಿಕೊಟ್ಟವು.

ಅಲ್ಲಿಂದೀಚೆಗೆ, ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಬೆಳಕು ಕಂಡಿರುವ ಜನಪದ ಕಥಾ ಸಂಕಲನಗಳ ಪ್ರಸ್ತಾವನೆಯೇ ಮುಂತಾಗಿ ವಿವಿಧ ಸಂದರ್ಭದ ಬರಹಗಳಲ್ಲಿ ಮೇಲ್ಕಂಡ ವಿಷಯಗಳು ಪ್ರಸ್ತಾಪಗೊಂಡಿವೆ. ಕನ್ನಡದಲ್ಲಿ ಈವರೆಗೆ ಬಂದಿರುವ ಹಲವು ಸಂಕಲನಗಳಲ್ಲಿ ಈ ಅಂಶಗಳು ಬೆಳಕು ಕಂಡಿವೆ. ಹಾಗಾಗಿ ಇದನ್ನು ವಿಸ್ತರಿಸಿ, ಚರ್ವಿತ ಚರ್ವಣವಾಗಿಸುವ ಅಗತ್ಯ ಕಂಡು

ಬರುವುದಿಲ್ಲ. ಬದಲಾಗಿ ಜನಪದ ಕಥೆಗಳ ಸಾಹಿತ್ಯಿಕ ಹಾಗೂ ಸಾಮಾಜಿಕ ಮೌಲ್ಯವನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡುವುದು ನನ್ನ ಉದ್ದೇಶವಾಗಿದೆ.

೨

ಮನುಷ್ಯನ ಭಾವನೆಗಳ ಅಭಿವ್ಯಕ್ತಿ ಸಾಧನಗಳಲ್ಲಿ ಸಾಹಿತ್ಯವೂ ಒಂದು. ಬದುಕಿನಲ್ಲಿ ತಾನು ಕಂಡು ಕೇಳಿ ಅನುಭವಿಸಿದ ನಾನಾ ಬಗೆಯ ಸಂಗತಿಗಳನ್ನು ಹೊರಗೆಡಹುವಲ್ಲಿ ಇತರ ಅಭಿವ್ಯಕ್ತಿ ಮಾರ್ಗದಂತೆಯೇ ಸಾಹಿತ್ಯವೂ ಪ್ರಮುಖ ಮಾಧ್ಯಮವೆನಿಸಿತು. ಕಂಠಸ್ಥ ಸಂಪ್ರದಾಯದ ಸಾಹಿತ್ಯ ಮಾರ್ಗದಲ್ಲಿಯೂ ಅದು ಪ್ರಖರವಾಗಿ ಪ್ರಕಟಣೆಗೊಂಡದ್ದು ಒಂದು ವಿಶೇಷ. ಅವರ ದೃಷ್ಟಿಯಲ್ಲಿ ಅದು ಸಾಹಿತ್ಯ ಅಲ್ಲ. ಆದರೆ ಅವರು ಹಾಗೆ ರಚಿಸಿದ್ದು ಸಾಹಿತ್ಯವಾಯಿತು. ಮೌಖಿಕ ಪರಂಪರೆಯ ಈ ಸಾಹಿತ್ಯ ಪ್ರಕಾರ ಒಂದು ವಿಶಿಷ್ಟ ಕಲಾ ರೂಪವನ್ನು ತಾಳಿ ಬೆಳೆದು ಬಂದದ್ದು ಜನಪದ ಪ್ರತಿಭೆಗೆ ಒಂದು ಸಾಕ್ಷಿ.

ಜನಪದ ಕಥೆಗಳಲ್ಲಿ ಬಾರದ ವಿಷಯವೇ ಇಲ್ಲವೆನ್ನಬಹುದು. ಮನುಷ್ಯನ ವಾಸ್ತವಿಕ ಜೀವನದ ಸಂಗತಿಗಳಿಂದ ಹಿಡಿದು ಅವನ ಕನಸಿನ ಅಥವಾ ಕಾಲ್ಪನಿಕ ಲೋಕ ಸಂಗತಿಗಳೆಲ್ಲವೂ ಅದರಲ್ಲಿ ಸ್ಥಾನ ಪಡೆದಿವೆ. ಮಾನವ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಬರುವ ಎಲ್ಲ ಮುಖಗಳನ್ನೂ ಅದು ಪ್ರತಿಬಿಂಬಿಸುತ್ತದೆ. ದೇವರು, ಧರ್ಮ, ಮಾಟ, ಮಂತ್ರ, ತಂತ್ರ, ಭವಿಷ್ಯ, ಕಣಿ ಹೇಳುವುದು, ಕನಸು ನೆರಳು, ಸಾವು, ಪರಕಾಯ ಪ್ರವೇಶ, ಪುನರ್‌ಜನ್ಮ, ಕಷ್ಟ, ಸುಖ, ದುಃಖ, ಹಾಸ್ಯ, ಮೋಸ, ದಗ, ವಂಚನೆ, ಕಪಟ, ಅಸೂಯೆ, ಮೇಲು, ಕೀಳು, ತ್ಯಾಗ, ಕಾಮ, ಕ್ರೋಧ, ಪ್ರೀತಿ - ಪ್ರೇಮ - ಹೀಗೆ ಒಂದೇ ಎರಡೇ ; ಮನುಷ್ಯ ಜೀವನದ ಎಲ್ಲಾ ಮಿಡಿತಗಳನ್ನು ಜನಪದ ಕಥೆಗಳು ಸೆರೆ ಹಿಡಿದಿವೆ. ಮನುಷ್ಯನ ವಿಚಿತ್ರ ಸ್ವಭಾವಗಳನ್ನು ಈ ಕತೆಗಳು ಬೆತ್ತಲುಗೊಳಿಸಿರುವಷ್ಟು ಮಿಕ್ಕಾವ ಸಾಹಿತ್ಯ ಪ್ರಕಾರವೂ ಬೆತ್ತಲುಗೊಳಿಸಿರಲಾರದು. ಕೆಲವೊಮ್ಮೆ ಜನಪದ ಕಥೆಗಳಲ್ಲಿನ ಸಂಗತಿಗಳು ದ್ರೌಪದಿಯ ಅಕ್ಷಯ ವಸ್ತ್ರವಿದ್ದಂತೆ. ಬರಿದಾಗುವುದೇ ಇಲ್ಲ. ಮನುಷ್ಯನ ವಿಲಕ್ಷಣ ಸ್ವಭಾವಗಳು ಅಷ್ಟೊಂದು ರೀತಿಯಲ್ಲಿ ಬಿಚ್ಚಿಕೊಂಡಿರುವುದು ಅಲ್ಲಿ ಗೋಚರಿಸುತ್ತದೆ. ಹಾಗಾಗಿಯೇ ಫ್ರಾನ್ಜ್ ಬೋಯಾಸ್ ಹೇಳುವ "ಮಾನವ ಶಾಸ್ತ್ರದ ಅರಿವಿಲ್ಲದೆ ಜನಪದ ಕಥೆಗಳನ್ನು ಅರ್ಥೈಸುವುದು ಕಷ್ಟವಾಗುತ್ತದೆ" ಎಂಬ ಮಾತಾಗಲೀ, ವೇಲ್ಯಾಂಡ್ ಹ್ಯಾಂಡ್‌ರ "ಪ್ರಾಚೀನ ಮಾನವನ ಆಧ್ಯಾತ್ಮಿಕ ಹಾಗೂ ಬೌದ್ಧಿಕ ಜೀವನವನ್ನು ಪುನರ್‌ರಚಿಸುವ ಏಕೈಕ ಸಾಧನವಾಗಿಯೂ ಕತೆಗಳು ನಿಲ್ಲುತ್ತವೆ". ಎಂಬ ಮಾತಾಗಲಿ ಅರ್ಥಪೂರ್ಣವಾಗಿ ಕಂಡು ಬರುತ್ತವೆ. ಒಂದು ಸಂಸ್ಕೃತಿಯ ಅಥವಾ ಪರಂಪರೆಯ ಅರಿವಿಲ್ಲದೆ ಅಲ್ಲಿಯ ಯಾವುದೇ ಸಂಗತಿಯನ್ನು ವಿಶ್ಲೇಷಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಲ್ಲಿಯ ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಪ್ರಭಾವ ಅದರ ಮೇಲೆ ಇದ್ದೇ ಇರುತ್ತದೆ. ಯಾವುದೇ ಸಾಹಿತ್ಯ ಸೃಷ್ಟಿಗೆ ಅಲ್ಲಲ್ಲಿಯ ಬದುಕು ಪ್ರೇರಣೆಯಾಗಿರುತ್ತದೆಯಾದರೂ, ಆ ಬದುಕಿಗೆ ಕಾರಣವಾದ ಇನ್ನಿತರ ಹಲವು ಅಂಶಗಳು ಬೇರೊಂದು ರೀತಿಯಲ್ಲಿ ಬಿಚ್ಚಿ ಕೊಂಡಿರುತ್ತದೆ.

ಮನುಷ್ಯನ ಮನಸ್ಸು ವಿಚಿತ್ರವಾದುದು. ಯಾವ ಅಳತೆಗೋಲಿಗೂ ನಿಲುಕದ್ದು. ಸಿಕ್ಕಿದರೂ ಇಷ್ಟೇ ಎಂದು ಖಚಿತವಾಗಿ ಹೇಳಬರುವುದಿಲ್ಲ. ಈ ಸಂಕಲನದ ಮೊದಲ ಕತೆ : 'ಬೆದರುಗೊಂಬೆ' ಈ ದೃಷ್ಟಿಯಿಂದ ಒಂದು ಅಪೂರ್ವ ರೀತಿಯ ಕತೆ. ವಿಚಿತ್ರ ಸ್ವಭಾವದ ಹಲವು ವ್ಯಕ್ತಿಗಳು ಇಲ್ಲಿ

ಒಂದೇ ಕತೆಯಲ್ಲಿ ಕಂಡು ಬರುತ್ತಾರೆ :

ಎರಡು ಹೆಣ್ಣು ಮಕ್ಕಳಿದ್ದು ಹಿರಿಯ ಹೆಂಡತಿಯು ಸಾವಿನ ನಂತರ ಇನ್ನೊಬ್ಬಳನ್ನು ಮದುವೆಯಾದವನ ಪಾಡು, ಅದರಿಂದ ಮಕ್ಕಳಿಗಾಗುವ ಗೋಳು ಸಾಮಾನ್ಯ ಸಂಗತಿಯೆ. ಅದರಲ್ಲಿಯೂ ಕಿರಿಯ ಹೆಂಡತಿಗೆ ಮಕ್ಕಳಿಲ್ಲದೆ ಹೋದಾಗ ಈ ಗೋಳು ಇನ್ನೂ ಹೆಚ್ಚಾಗುತ್ತದೆ. ಮಲತಾಯಿಯ ಕಾಟ ಮಕ್ಕಳನ್ನು ಕಾಡುತ್ತದೆ. ತಂದೆಯ ಸ್ಥಾನದಲ್ಲಿ ಬರುವ ಇಲ್ಲಿಯ ವ್ಯಕ್ತಿ ಬಾಯಿಚಪಲಕ್ಕೆ ಒಳಗಾದವನು. ಎಲ್ಲಿಯೋ ಯಾರ ಮನೆಯಲ್ಲಿಯೋ ತಿಂದ ತಿಂಡಿಯನ್ನು ಮನೆಯಲ್ಲಿ ಮಾಡಿಸಿ ತಿನ್ನಬೇಕೆಂಬ ಬಾಯಿ ಚಪಲ ಅವನದ್ದು. ಅದನ್ನು ಮಾಡಿಸಿ ತಿನ್ನುವ ಹಣದ ತಾಕತ್ತು ಇಲ್ಲದಿದ್ದರೂ, ಬೇರೆ ಇನ್ನಾವ ಮಾರ್ಗದಿಂದಲಾದರೂ ಅದಕ್ಕೆ ಬೇಕಾದ ವಸ್ತುಗಳನ್ನು ಸಂಪಾದಿಸಿ ತಂದು ಮಾಡಿಸುವ ಚಾಣಾಕ್ಷತೆ ಅವನಲ್ಲುಂಟು. ಹಾಗೆಯೇ ಮಾಡುತ್ತಾನೆ ಕೂಡ. ಮಾಡಿದ್ದನ್ನು ತಿನ್ನುವಾಗ ಪಾಲುದಾರರಾಗಿ ಬರುವ ಮಕ್ಕಳನ್ನು ನಿವಾರಿಸಲು ಹೆಂಡತಿಯ ಸಲಹೆಗೆ ಕಿವಿಗೊಡುವ ಪಾತಕಿ ಕೂಡ. "ಈ ಮಕ್ಕಳು ಇದ್ರೆ ಬೇಕು ಬೇಕಾದ್ದೆಲ್ಲ ತಿನ್ನಕಾಗಲ್ಲ. ಇವರಿಬ್ಬರನ್ನು ಎಲ್ಲಾರ ಕಾಡಿಗೆ ಬಿಟ್ಟು ಬನ್ನಿ. ನಾವಿಬ್ಬರೂ ಬೇಕು ಬೇಕಾದ್ದೆಲ್ಲ ಮಾಡಿಕೊಂಡು ತಿನ್ನಬಹುದು" ಎಂಬ ಮಾತನ್ನು ಕೇಳುವಷ್ಟು ಮೂರ್ಖನಾಗಿ ವರ್ತಿಸುತ್ತಾನೆ. ಅದರಂತೆ ಮಾಡುತ್ತಾನೆ ಕೂಡ. ತಿಂಡಿಯ ಚಪಲ, ಜೊತೆಗೆ ಕಿರಿ ಹೆಂಡತಿಯ ಮಾತು.

ಆದರೆ, ಹಾಗೆ ಕಾಡು ಸೇರಿದ ಆ ಇಬ್ಬರು ಹೆಣ್ಣು ಮಕ್ಕಳ ಅದೃಷ್ಟದ ಬಾಗಿಲು ಅಲ್ಲಿಯೇ ತೆರೆದುಕೊಳ್ಳುತ್ತದೆ. ನೀರಡಿಕೆಯಿಂದಾಗಿ ಅಕ್ಕ ತಂಗಿಯರಿಬ್ಬರೂ ಬೇರೆ ಬೇರೆಯಾಗುತ್ತಾರೆ. ಕಿರಿಯವಳು ಬಾಯಾರಿಕೆಯಿಂದ ಜ್ಞಾನ ತಪ್ಪಿ ಬಿದ್ದು ಕಾಡಿಗೆ ಬೇಟೆಯಾಡಲು ಬಂದ ರಾಜಕುಮಾರನ ಕಣ್ಣಿಗೆ ಬಿದ್ದು ಅರಮನೆಯನ್ನು ಸೇರುತ್ತಾಳೆ. ಅವನನ್ನೇ ಮದುವೆಯಾಗುತ್ತಾಳೆ.

ಇತ್ತ ಹಿರಿಯವಳು ಮತ್ತೊಂದು ರೀತಿಯಲ್ಲಿ ತನ್ನ ಅದೃಷ್ಟದ ದಾರಿಯನ್ನು ಕಂಡುಕೊಳ್ಳುತ್ತಾಳೆ. ಇವಳಿಗೂ ಒಂದು ವಿಚಿತ್ರ ಸ್ಥಿತಿಯಲ್ಲಿರುವ ಸತ್ತ ರಾಜಕುಮಾರನ ದರ್ಶನವಾಗುತ್ತದೆ. ಅವನನ್ನು ಬದುಕಿಸಿಕೊಳ್ಳುವ ಸೂಚನೆಯನ್ನು ತಿಳಿದು ಅದರಂತೆ ಮಾಡಿ ರಾಜಕುಮಾರನನ್ನು ಬದುಕಿಸುತ್ತಾಳೆ. ಆದರೆ ವಿಧಿಯ ಚೆಲ್ಲಾಟ ಸ್ವಲ್ಪ ಗೊಂದಲವನ್ನುಂಟುಮಾಡುತ್ತದೆ. ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆ ಹೊಕ್ಕು ಹೋಗು ಎನ್ನುವಂತೆ, ಯಾರಿಗೊ ಕರುಣೆ ತೋರಿದ್ದಕ್ಕೆ ಅವಳೇ ಅಡ್ಡ ಬಂದು ಇವಳ ಬಾಳಿಗೆ ಮುಳ್ಳಾಗುತ್ತಾಳೆ. ತನ್ನನ್ನು ಬದುಕಿಸಿ ಕೊಂಡವಳು ಇವಳೇ ಇರಬೇಕೆಂದು ರಾಜಕುಮಾರ ಅವಳ ಕೈ ಹಿಡಿಯುತ್ತಾನೆ. ಬೆಸ್ತನ ಹೆಂಡತಿ ಎಂಬುದನ್ನು ಮರೆತು ಅವಳು ರಾಜಕುಮಾರನ ಹೆಂಡತಿಯಾಗುತ್ತಾಳೆ. ಇವಳು ಏನನ್ನೂ ಹೇಳಿಕೊಳ್ಳದೆ ಸುಮ್ಮನಾಗುತ್ತಾಳೆ. ಒಂದು ದಿನ ರಾಜಕುಮಾರ ಹೊರಹೊರಟಾಗ ಇಬ್ಬರನ್ನೂ 'ಏನು ಬೇಕು ?' ಎಂದು ಕೇಳಿದಾಗ ಬೆಸ್ತರವನ ಹೆಂಡತಿ ಮುತ್ತಿನ ಹಾರ ಕೇಳುತ್ತಾಳೆ. ಇವಳು ಒಂದು 'ಬೆದರುಗೊಂಬೆ' ಬೇಕು ಎಂದು ಕೇಳುತ್ತಾಳೆ. ಅದರಂತೆ ತಂದುಕೊಡುತ್ತಾನೆ. ಆದರೆ ಬೆದರುಗೊಂಬೆ ಕೇಳಿದ್ದರ ಬಗ್ಗೆ ಅವನಿಗೆ ಕುತೂಹಲ ಕೆರಳಿ, ಅದರ ಬಗ್ಗೆ ಗಮನ ಇಡುತ್ತಾನೆ. ಒಂದು ದಿನ ಅವಳು ತನ್ನ ಕತೆಯನ್ನೆಲ್ಲ ಅದರ ಎದುರು ಹೇಳಿಕೊಳ್ಳುತ್ತಿರುತ್ತಾಳೆ. ಆಗ ಇವನಿಗೆ ನಿಜ ಸಂಗತಿ ಏನೆಂಬುದು ತಿಳಿಯುತ್ತದೆ. ಬೆಸ್ತನ ಹೆಂಡತಿ ಶಿಕ್ಷೆಗೆ ಗುರಿಯಾಗುತ್ತಾಳೆ. ಇವಳು ರಾಜಕುಮಾರನ ಕೈ ಹಿಡಿಯುತ್ತಾಳೆ. ಇಬ್ಬರೂ ತಮ್ಮ ಅರಮನೆಗೆ ಹಿಂತಿರುಗಿದರೆ, ಅಲ್ಲಿ ಇವಳ ತಂಗಿ ಇರುತ್ತಾಳೆ. ಈ ಇಬ್ಬರೂ ಅಣ್ಣ-ತಮ್ಮಂದಿರು. ಆ ಇಬ್ಬರು

ಅಕ್ಕ-ತಂಗಿಯರನ್ನು ಮದುವೆಯಾಗಿರುತ್ತಾರೆ. ಎಲ್ಲ ವಿಚಿತ್ರವಾಗಿ ನಡೆದು ಹೋಗಿರುತ್ತದೆ. ನಾಟಕೀಯವಾಗಿ ಗಮನ ಸೆಳೆಯುತ್ತದೆ.

ಅತ್ತ ಈ ಇಬ್ಬರು ಹೆಣ್ಣು ಮಕ್ಕಳ ತಂದೆ ಮತ್ತು ಮಲತಾಯಿ ಒಣರೊಟ್ಟಿ, ಹಿಟ್ಟು ತಿಂದ್ಕಂಡು ಬದುಕ್ತಾ ಇರ್ತರೆ ; ಇತ್ತ ಇವರಿಬ್ಬರೂ ತುಪ್ಪ, ಅನ್ನ ತಿಂದ್ಕಂಡು ಸುಖವಾಗಿರ್ತರೆ - ಎಂದು ಕತೆ ಮುಕ್ತಾಯ ಹೊಂದುತ್ತದೆ.

ಈ ಕತೆಯಲ್ಲಿ ಬರುವ - ತಂದೆ, ಮಲತಾಯಿ, ಇಬ್ಬರು ಹೆಣ್ಣುಮಕ್ಕಳು, ರಾಜಕುಮಾರರು, ಬೆಸ್ತನ ಹೆಂಡತಿ - ಈ ಪಾತ್ರಗಳೆಲ್ಲವೂ ಸಮಾಜದಲ್ಲಿ ಕಂಡು ಬರುವ ಒಂದೊಂದು ಪಾತ್ರದ ಮಾದರಿಗಳೆಂಬಂತೆ ಇಲ್ಲಿ ಕಂಡು ಬರುತ್ತವೆ. ಕತೆಗಾರ ಇವನ್ನು ವಿಶಿಷ್ಟ ರೀತಿಯಲ್ಲಿ ಚಿತ್ರಿಸಿದ್ದಾನೆ. ಇಬ್ಬರು ಹೆಣ್ಣು ಮಕ್ಕಳಿದ್ದೂ ಎರಡನೆಯ ಮದುವೆಯನ್ನು ಮಾಡಿಕೊಂಡ ವ್ಯಕ್ತಿ ಹೆಂಡತಿಯ ಕೈ ಗೊಂಬೆಯಾಗಿ ವರ್ತಿಸುವುದರ ಸ್ಪಷ್ಟ ಚಿತ್ರಣ ಇಲ್ಲಿದೆ. ಅವನಲ್ಲಿ ವ್ಯಕ್ತಿತ್ವವೆಂಬುದೇ ಕಾಣುವುದಿಲ್ಲ. ಬಾಯಿ ಚಪಲಕ್ಕಾಗಿಯೇ, ಕಿರಿಯ ಹೆಂಡತಿಯ ಪ್ರೀತಿಗಾಗಿ ಸ್ವಂತ ಮಕ್ಕಳನ್ನು ಕಾಡಿಗೆ ಬಿಟ್ಟು ಬರುವಷ್ಟು ಮೂರ್ಖನಾಗುತ್ತಾನೆ. ಬಹುಶಃ ಎರಡನೆಯ ಮದುವೆ ಮಾಡಿಕೊಂಡ ವ್ಯಕ್ತಿಗಳ ಸ್ಥಿತಿಗತಿಯ ಬಗ್ಗೆಯೂ ಈ ಘಟನೆ ಗಮನ ಸೆಳೆಯುತ್ತದೆ. ಅಂತಹ ಒಂದು ಸ್ಥಿತಿಯಲ್ಲಿ ವ್ಯಕ್ತಿ ಹೇಗೆ ವರ್ತಿಸಬಲ್ಲ ಎಂಬುದನ್ನೂ ಸೂಚಿಸುತ್ತದೆ. ಅವನು ಇಲ್ಲಿ ಒಂದು ಕೈಗೊಂಬೆಯಾಗಿಯಷ್ಟೇ ಕಂಡು ಬರುತ್ತಾನೆ.

ಮಲತಾಯಿಯ ಧೋರಣೆ ತಿಳಿದದ್ದೇ. ಅದು ಅತ್ಯಂತ ಸಹಜವೆಂಬಂತೆ ಕಂಡು ಬರುತ್ತದೆ. ಇದಕ್ಕೆ ಅಪವಾದಗಳು ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಜನ್ಮ ಕೊಟ್ಟ ತಂದೆಯೇ ಹಾಗೆ ವರ್ತಿಸಿದಾಗ, ಯಾರದೋ ಮಕ್ಕಳನ್ನು ಗೋಳು ಹೊಯ್ದುಕೊಳ್ಳುವಲ್ಲಿ ಇವಳು ಪಡುವ ಸಂತೋಷಕ್ಕೆ ಅಚ್ಚರಿಪಡಬೇಕಾದದ್ದಿಲ್ಲ. ಆದರೆ ಮಾಡಿದ ಪಾಪಕ್ಕೆ ಶಿಕ್ಷೆ ಅನುಭವಿಸಲೇಬೇಕು ಎಂಬ ಅಂತಿಮ ಸತ್ಯ ಕೊನೆಯಲ್ಲಿ ಪ್ರಕಟಗೊಳ್ಳುತ್ತದೆ. ಯಾರೂ ಅದರಿಂದ ತಪ್ಪಿಸಿಕೊಳ್ಳಲಾರರು, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಬೆಸ್ತನ ಹೆಂಡತಿಯ ಗತಿಯೂ ಅಷ್ಟೇ. ಬೀದಿ ಪಾಲಾದವಳನ್ನು ಬಳಿಗೆ ಕರೆದು ಆಶ್ರಯವಿತ್ತಿದ್ದಕ್ಕೆ ಇವಳಿಗೇ ಅವಳು ಕಂಟಕವಾಗುತ್ತಾಳೆ. ಗಂಡನನ್ನು ಬಿಟ್ಟು ಬಂದ ಅವಳಿಗೆ ಬೇರೆ ದಾರಿ ಬಹಳ ಸುಲಭವಾಗಿ ಸಿಕ್ಕಿದಂತಾಗುತ್ತದೆ. ಅದನ್ನು ಅಷ್ಟೇ ಸರಾಗವಾಗಿ ಅವಳು ಯಾವ ಸಂಕೋಚವೂ ಇಲ್ಲದೆ ಬಳಸಿಕೊಳ್ಳುತ್ತಾಳೆ. ಅವಳಿಗೆ ಯಾವ ಮೌಲ್ಯಗಳು ಅಡ್ಡ ಬರುವುದಿಲ್ಲ. ತಳಮಳವನ್ನುಂಟು ಮಾಡುವುದಿಲ್ಲ. ಹೇಗೋ ಬದುಕಿದರಾಯಿತು ಎನ್ನುವವರಿಗೆ ಯಾವ ಮೌಲ್ಯಗಳು ಇರುವುದಿಲ್ಲ. ಯಾವ ಕಟ್ಟಳೆಗಳೂ ತಡೆಯುಂಟು ಮಾಡುವುದಿಲ್ಲ. ಬದುಕುವುದಷ್ಟೇ ಅವರಿಗೆ ಮುಖ್ಯವಾಗುತ್ತದೆ. ಆದರೆ ಬದುಕು ಎಲ್ಲ ಸಂದರ್ಭದಲ್ಲಿಯೂ ಹಾಗಾಗಲು ಸಾಧ್ಯವಿಲ್ಲ. ಸಮಾಜ ನಿಂತಿರುವುದೇ ಕೆಲವೊಂದು ಕಟ್ಟುಕಟ್ಟಳೆಗಳ ತಳಹದಿಯ ಮೇಲೆ. ಅವುಗಳನ್ನು ಶಾಶ್ವತಗೊಳಿಸಲು ಹಲವಾರು ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು, ಜೀವನ ಮೌಲ್ಯಗಳು ಹುಟ್ಟಿಕೊಂಡಿರುತ್ತವೆ. ಇವೆಲ್ಲವೂ ಒಂದು ಬಗೆಯಾದ ಸಾಮಾಜಿಕ ಪ್ರಜ್ಞೆಯನ್ನು ವ್ಯಕ್ತಿಯಲ್ಲಿ ಉಂಟು ಮಾಡಿರುತ್ತವೆ. ಬದುಕು ಸುಗಮವಾಗಲು, ಸಾಧ್ಯವಾಗಲು ಸಹಾಯಕವಾಗಿರುತ್ತವೆ. ಒಂದು ಸಂಸ್ಕೃತಿಯ ನಿರ್ಮಾಣಕ್ಕೆ ಕಾರಣವಾಗಿರುತ್ತವೆ. ಆದರೂ ಕೆಲವೊಮ್ಮೆ ಅವನ್ನು ಅಲುಗಾಡಿಸುವ ದುಷ್ಟ ಶಕ್ತಿಗಳು ಆಗಾಗ, ಅಲ್ಲಲ್ಲಿ ಹುಟ್ಟಿಕೊಳ್ಳುವುದುಂಟು. ಆದರೆ ಅಲ್ಲೆಲ್ಲ ಉಪ್ಪು ತಿಂದವನು

ನೀರು ಕುಡಿಯಲೇ ಬೇಕಾಗುತ್ತದೆ ಎಂಬ ಸತ್ಯ ಹೊರ ಹೊಮ್ಮುತ್ತದೆ. ಈ ಕತೆಯಲ್ಲಿ ಬರುವ ಈ ಮೂವರೂ ದುಷ್ಟ ವ್ಯಕ್ತಿಗಳು, ಸಮಾಜ ಬಾಹಿರ ಕೆಲಸವನ್ನು ಮಾಡಿದವರು ತಕ್ಕ ಶಿಕ್ಷೆಯನ್ನು ಅನುಭವಿಸುತ್ತಾರೆ. ಇದು ನಮ್ಮ ಜನಪದರು ಕಂಡುಕೊಂಡ ಅಂತಿಮ ಸತ್ಯ. ಎಲ್ಲ ಜನಪದ ಕಥೆಗಳೂ ಸ್ಪಷ್ಟಪಡಿಸುವುದೂ ಇದನ್ನೇ.

ಕಷ್ಟಪಟ್ಟವರಿಗೆ ಫಲವುಂಟು ಎಂಬುದಕ್ಕೆ ಸಾಕ್ಷಿಯಾಗಿ ಇಲ್ಲಿ ಬರುವ ಇಬ್ಬರು ಹೆಣ್ಣು ಮಕ್ಕಳು ಕಂಡು ಬರುತ್ತಾರೆ. ಅವರು ಯಾವ ಪಾಪವನ್ನು ಅರಿಯದವರು. ಮುಗ್ಧರು. ವಿನಾಕಾರಣ ಕಷ್ಟಕ್ಕೆ ಒಳಗಾದವರು, ಆದರೆ ತಮ್ಮ ಪಾಲಿಗೆ ಬಂದದ್ದನ್ನು ಸಂತೋಷದಿಂದ ಸ್ವಾಗತಿಸಿದವರು. ಕಿರಿಯವಳಿಗೆ ತನ್ನ ಬದುಕಿನ ದಾರಿ ಬಹಳ ಸುಲಭವಾಗಿ ದೊರೆತರೆ, ಹಿರಿಯವಳು ಸ್ವಲ್ಪ ಕಷ್ಟಪಡಬೇಕಾಯಿತು ಅಷ್ಟೆ. ತನ್ನ ಪಾಲಿಗೆ ಬಂದದ್ದನ್ನು ತಾಳ್ಮೆಯಿಂದ, ಧೈರ್ಯವಾಗಿ ಎದುರಿಸಿ ಅದರಲ್ಲಿ ಜಯವನ್ನು ಗಳಿಸಿದಳು. ತನ್ನಿಂದ ಉಪಕಾರ ಪಡೆದವಳೇ ತನಗೆ ಶತ್ರುವಾದಾಗಲೂ ಅವಳು ತಾಳ್ಮೆ ಕಳೆದುಕೊಂಡವಳಲ್ಲ. ಪಾಲಿಗೆ ಬಂದದ್ದು ಪಂಚಾಮೃತ ಎಂಬ ನಿಷ್ಠೆಯನ್ನು ಅವಳಲ್ಲಿ ಕಾಣುತ್ತೇವೆ. ಆದರೆ ಕೊನೆಗೆ ಜಯ ಅವಳದ್ದೇ. ಅಂದರೆ ಸತ್ಯಕ್ಕೆ ಜಯ ಎಂಬ ಜೀವನನಿಷ್ಠೆ ಅಲ್ಲಿ ಸ್ಪಷ್ಟಗೊಳ್ಳುತ್ತದೆ. ಇಲ್ಲಿ ಬರುವ ರಾಜಕುಮಾರರಲ್ಲಿಯೂ ಅದೇ ಸದ್ಗುಣಗಳು ಕಂಡು ಬರುತ್ತವೆ. ಕಿರಿಯವನು ಕಾಡಿನಲ್ಲಿ ಕಂಡ ಅನಾಥೆಯನ್ನು ಕೈ ಹಿಡಿದು ಪತ್ನಿಯನ್ನಾಗಿ ಸ್ವೀಕರಿಸುತ್ತಾನೆ. ಎರಡನೆಯವನು ತನ್ನನ್ನು ಉಪಚರಿಸಿ ಉಳಿಸಿ ಕೊಂಡವರು ಯಾರು ಎಂಬುದನ್ನು ಅರಿಯದೆ, ಬೆಸ್ತನ ಹೆಂಡತಿಯ ವಂಚನೆಗೆ ಒಳಗಾಗಿ ಅವಳ ಕೈಯನ್ನೇ ಹಿಡಿಯುತ್ತಾನೆ. ಅವನಲ್ಲಿಯೂ ಪ್ರಾಮಾಣಿಕತೆ, ನಿಷ್ಠೆ ಕಂಡು ಬರುತ್ತದೆ. ಆದರೆ ನಿಜ ಸಂಗತಿ ತಿಳಿದಾಗ ಅವಳನ್ನು ಕ್ರೂರ ಶಿಕ್ಷೆಗೆ ಗುರಿ ಮಾಡುತ್ತಾನೆ.

"ನೂರೊಂದು ಮಕ್ಕಳನ್ನು ಹಡೆದ ಕಥೆ" ಮತ್ತೊಂದು ಬಗೆಯ ಸಮಸ್ಯೆಯನ್ನು ಒಳಗೊಂಡ ಕಥೆ ; ರಾಜನಿಗೆ ಮಕ್ಕಳಿರುವುದಿಲ್ಲ ಎಂಬುದು, ಅದಕ್ಕಾಗಿ ಅವನು ಇನ್ನೊಂದು ಮದುವೆಯನ್ನು ಮಾಡಿಕೊಳ್ಳುವುದು, ಇದರಿಂದ ಹಿರಿಯ ಹೆಂಡತಿಯರಿಗೆ ಕೋಪ ಉಂಟಾಗುವುದು, ಕಿರಿಯವಳಿಗೆ ಮಕ್ಕಳಾದಾಗ ಆ ಕೋಪ ಇನ್ನೂ ಹೆಚ್ಚಾಗಿ ಅಸೂಯೆ ಉಂಟಾಗುವುದು, ಅಸೂಯೆಯಿಂದ ಮಕ್ಕಳಾಗುವ ಸಮಯದಲ್ಲಿ ಸೂಲಗಿತ್ತಿಯ ಸಹಾಯದಿಂದ ಅವನ್ನು ದೂರ ಮಾಡಿ ಆ ಸ್ಥಾನದಲ್ಲಿ ಬೇರೊಂದು ವಸ್ತುವನ್ನಿಟ್ಟು, ಅವನ್ನೇ ಹೆತ್ತಳೆಂದು ರಾಜನಿಗೆ ದೂರು ಹೇಳಿ ಅವಳನ್ನು ಕಾಡು ಪಾಲು ಮಾಡುವುದು, ಅನಂತರ ಅವಳ ಮಕ್ಕಳೇ ಜ್ಞಾಣ್ಮೆಯಿಂದ ರಾಜನಿಗೆ ನಿಜ ಸಂಗತಿಯನ್ನು ತಿಳಿಸಿ ರಾಜನ ಕಣ್ಣು ತೆರೆಸುವುದು ಎಲ್ಲ ಕತೆಗಳಲ್ಲಿಯೂ ಸಾಮಾನ್ಯವಾಗಿ ಬರುವ ಸಂಗತಿ. ಇದಕ್ಕೆಲ್ಲ ಸವತಿ ಮತ್ಸರ ಮುಖ್ಯ ಕಾರಣವಾಗುತ್ತದೆ. ಸಾಮಾಜಿಕ ಸಮಸ್ಯೆಗಳಲ್ಲಿ ಇದೂ ಒಂದು. ಮಲತಾಯಿ ಮತ್ಸರ ಒಂದು ಬಗೆಯದಾದರೆ, ಸವತಿ ಮತ್ಸರ ಮತ್ತೊಂದು ಬಗೆಯದು. ತನಗಿಲ್ಲದ ಸುಖವನ್ನು, ಸೌಲಭ್ಯವನ್ನು ಇತರರು ಅನುಭವಿಸುವುದನ್ನಾಗಲಿ, ಅಥವಾ ತನ್ನ ಸುಖದಲ್ಲಿ ಪಾಲುದಾರರಾಗಿ ಬರುವವರನ್ನಾಗಲಿ ಸಹಿಸುವುದು ವ್ಯಕ್ತಿಗೆ ಕಷ್ಟವಾಗುತ್ತದೆ. ಅದರಲ್ಲಿಯೂ ಹೆಣ್ಣು ತನ್ನ ಪತಿಯ ಸುಖವನ್ನು ಹಂಚಿಕೊಳ್ಳಲು ಇಷ್ಟಪಡಲಾರಳು. ಹಾಗೆಯೇ ತನಗೆ ಮಕ್ಕಳಿರದಿದ್ದರೂ, ತನ್ನ ಸವತಿಯಾಗಿ ಬರುವವಳಿಗೆ ಮಕ್ಕಳಾದಾಗ ಅದನ್ನು ಕಂಡು ಸಂತೋಷ ಪಡುವ ಅಥವಾ ಅದರಲ್ಲಿಯೇ ತನ್ನ ನೋವನ್ನು ಮರೆಯುವ ಉದಾರತೆಯನ್ನು ತೋರುವುದಿಲ್ಲ. ಆ ಮನಸ್ಸು ಬಂದರೂ, ಇನ್ನಿತರ ವಿಚಾರಗಳು ಅದಕ್ಕೆ ಅಡ್ಡಿಯಾಗಿ ನಿಲ್ಲುತ್ತವೆ ಅನ್ನಿಸುತ್ತದೆ. ಕಿರಿಯವಳಾಗಿ ಬಂದವಳು ಮಕ್ಕಳನ್ನು ಹಡೆದಾಗ ಅದನ್ನು ಇವರು ತಮಗಾದ

ಒಂದು ಅವಮಾನ ಎಂದು ಭಾವಿಸಬಹುದು, ಸಹಜವಾಗಿಯೇ ಕಿರಿಯವಳ ಮೇಲೆ ಪ್ರೀತಿ ಹೆಚ್ಚಾಗಿ ನಮ್ಮನ್ನು ದೂರ ಮಾಡಬಹುದು ಎಂಬ ಭಯ ಇವರನ್ನು ಕಾಡಬಹುದು, ಎಲ್ಲರ ನಿರ್ಲಕ್ಷ್ಯಕ್ಕೂ ಗುರಿಯಾಗಬಹುದಾದ ಸಂದರ್ಭ ಒದಗಬಹುದೆಂಬ ಆತಂಕ ಅವರನ್ನು ಅಧೀರರನ್ನಾಗಿಸಬಹುದು - ಈ ಎಲ್ಲ ಕಾರಣಗಳಿಂದ, ಮಕ್ಕಳಿಲ್ಲದ ಅವರಿಗೆ ಮಕ್ಕಳ ಮೇಲೆ ಪ್ರೀತಿಯಿದ್ದರೂ, ಅವರನ್ನು ಪ್ರೀತಿಸುವ ಮನಸ್ಸಾಗದೆ ಹೋಗುವುದು ಸಹಜವೇನೋ ಅನ್ನಿಸುತ್ತದೆ. ಸಾಮಾಜಿಕ ಸಂದರ್ಭಗಳೂ ಇದಕ್ಕೆ ಎಡೆಮಾಡಿ ಕೊಟ್ಟಿರುತ್ತವೆ.

ಅಂದಿನ ಬಂಜೆತನದ ಬವಣೆ ಅತ್ಯಂತ ಕ್ರೂರವಾಗಿತ್ತು. ಇಡೀ ಸಮಾಜದ ದೃಷ್ಟಿಯಲ್ಲಿ ಅಂತಹ ಹೆಣ್ಣು ತೀರ ಅಸ್ಪೃಶ್ಯಳಂತೆ ನಿಲ್ಲಬೇಕಾಗಿತ್ತು, ಯಾವುದೇ ಮಂಗಳ ಕಾರ್ಯದಲ್ಲಿ ಅಂತಹವಳಿಗೆ ಸ್ಥಾನಮಾನಗಳು ಇರುತ್ತಿರಲಿಲ್ಲ. ಇದು ನಮ್ಮ ಸಂಸ್ಕೃತಿಯಲ್ಲಿ ಉಳಿದು ಬೆಳೆದು ಬಂದ ಒಂದು ಕೆಟ್ಟ ಸಂಪ್ರದಾಯ, ನಂಬಿಕೆ. ಅಂತಹವಳು ಬೇರೊಬ್ಬರ ಮಕ್ಕಳನ್ನು ಎತ್ತಿಕೊಳ್ಳುವಂತಿಲ್ಲ, ಅವಳ ಕೈನ ಭಿಕ್ಷೆಯನ್ನು ಈಶ್ವರನೂ ಸ್ವೀಕರಿಸುವುದಿಲ್ಲ. ಮಕ್ಕಳ ತೊಟ್ಟಿಲಶಾಸ್ತ್ರದ ಸಂದರ್ಭಗಳಲ್ಲಿ ಅವಳು ಭಾಗವಹಿಸುವಂತಿಲ್ಲ. ಹೀಗೆ ಒಂದೇ ಎರಡೇ. ಇವು ಇಂದಿಗೂ ಸಂಪೂರ್ಣವಾಗಿ ಮಾಯವಾಗಿವೆ ಎಂದು ಹೇಳಲಾಗುವುದಿಲ್ಲ. ಪಳೆಯುಳಿಕೆಗಳಾಗಿ ಅಲ್ಲಲ್ಲಿ ಇಂದಿಗೂ ತಲೆ ಎತ್ತಿ ನಿಂತಿವೆ. ಈ ಎಲ್ಲ ಹಿನ್ನೆಲೆಯಲ್ಲಿ ಹೆಣ್ಣು ಬೇರೆಯಾವ ರೀತಿಯಲ್ಲಿ ವರ್ತಿಸಲು ಸಾಧ್ಯ ? ಎಂಬ ಪ್ರಶ್ನೆ ಎದುರಾಗುತ್ತದೆ. ಅವಳಲ್ಲಿಯ ಅಸೂಯೆಯ ಬೀಜ ಮೊಳಕೆ ಯೊಡೆದು ಸದಾ ಎಚ್ಚರಗೊಂಡಿರುವುದಕ್ಕೆ ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಇಂತಹ ಗೊಡ್ಡು ಸಂಪ್ರದಾಯಗಳು ಕಾರಣ ಅನ್ನಿಸುತ್ತದೆ. ಮಕ್ಕಳಿಲ್ಲದೆ ಅವಳಲ್ಲಿ ಇತರರ ಮಕ್ಕಳನ್ನು ಎತ್ತಿಕೊಂಡು ಮುದ್ದಾಡುವ ಮನಸ್ಸಿದ್ದರೂ ಅದಕ್ಕೆ ಕಡ್ಡಿ ಚುಚ್ಚಿ ನೋವನ್ನುಂಟು ಮಾಡಿದ್ದು ನಮ್ಮ ಗೊಡ್ಡು ಸಂಪ್ರದಾಯಗಳು ಹಾಗೂ ಕುರುಡು ನಂಬಿಕೆಗಳು. ಅನಂತರ ಅವು ಹೆಣ್ಣಿನ ಕುಲಕ್ಕೇ ಕಳಂಕ ತರುವಷ್ಟು ಪ್ರಬಲವಾಗಿ ಬೆಳೆದು ನಿಂತವು. ಹಾಗಾಗಿಯೇ ಅಂತಹ ಹೆಣ್ಣುಗಳೆಲ್ಲ "ಆಗ ಹುಟ್ಟಿ ಆಗ ಸಾಯುವಂಥ ಕಂದನಕೊಡೊ ಶಿವನೆ, ಬಂಧನ ಪಡಲಾರೆ" ಎಂದು ಶಿವನಲ್ಲಿ ಮೊರೆಯಿಟ್ಟದ್ದು !

ಮಕ್ಕಳಿಲ್ಲವೆಂಬ ಕಾರಣಕ್ಕೆ ಹೇಗೋ ಅನಾಥವಾಗಿದ್ದ ಮಕ್ಕಳನ್ನು ತಂದು ಸಾಕಿಕೊಂಡು ಅದರಲ್ಲಿಯೇ ನೆಮ್ಮದಿ ಹೊಂದುವ ಮನಸ್ಸುಗಳು ಉಂಟು. ಇದೇ ಸಂಕಲನದಲ್ಲಿ ಬರುವ ಮಾಟಗಾರ್ತಿ ಮುದುಕಿ - ಅದಕ್ಕೊಂದು ಉದಾಹರಣೆ. ಕಾಡಿಗೆ ಹೋದಾಗ ಆಕಸ್ಮಿಕವಾಗಿ ಪೊಟರೆಯೊಂದರಲ್ಲಿ ಅಳುತ್ತಿದ್ದ ಎಳೆಯ ಮಕ್ಕಳನ್ನು ತಂದು ಹೆಂಡತಿಗೆ ಕೊಡುತ್ತಾನೆ. ಅವಳೂ ಪ್ರೀತಿಯಿಂದಲೇ ಸಾಕುತ್ತಿರುತ್ತಾಳೆ. ಆದರೆ ಸ್ವಲ್ಪ ದಿನಗಳಲ್ಲಿಯೇ ತಾನು ಗರ್ಭಿಣಿ ಎಂಬುದು ತಿಳಿದಾಗ ಆ ಮಕ್ಕಳನ್ನು ಮತ್ತೆ ಕಾಡಿಗೆ ಬಿಟ್ಟು ಬರುವಂತೆ ಗಂಡನನ್ನು ಒತ್ತಾಯಿಸುತ್ತಾಳೆ. ಅದರಂತೆ ಅವನು ನಡೆದುಕೊಳ್ಳಬೇಕಾಗುತ್ತದೆ. ಕಾಡಿನಲ್ಲಿಯೇ ಬೆಳೆದು ಆ ಮಕ್ಕಳು ದೊಡ್ಡವರಾಗುವುದು, ಬೇಟೆಗೆ ಬಂದ ರಾಜನ ಕಣ್ಣಿಗೆ ಬೀಳುವುದು, ಅವನನ್ನು ಮದುವೆ ಯಾಗುವುದು ಸಾಮಾನ್ಯ ಸಂಗತಿ. ಆದರೆ ಅರಿಯಲಾಗದ ಹೆಣ್ಣಿನ ಮನಸ್ಸಿಗೆ ಇದು ಸಾಕ್ಷಿಯಾಗಿ ನಿಲ್ಲುತ್ತದೆ. ತಾನು ಗರ್ಭಿಣಿ ಎಂಬುದನ್ನು ತಿಳಿದು, ಸಾಕಿದ ಮಕ್ಕಳನ್ನು ಮತ್ತೆ ಕಾಡಿಗೆ ಅಟ್ಟುವ ಅವಳ ಗುಣ ಅಸೂಯೆಯಿಂದ ಕೂಡಿದ್ದೆಂಬುದು ಸ್ಪಷ್ಟವಾಗುತ್ತದೆ. ಇದು ಜನಪದ ಸಂಸ್ಕೃತಿ ಅಥವಾ ಪ್ರಾಚೀನ ಸಂಸ್ಕೃತಿಗೆ ಸಂಬಂಧಪಟ್ಟಿದ್ದಷ್ಟೇ ಎಂದು ಹೇಳುವಂತಿಲ್ಲ. ಇದು ಮಾನವನ ಮನಸ್ಸಿಗೆ ಸಂಬಂಧಪಟ್ಟದ್ದು.

ಅವನ ಕೀಳು ಸ್ವಭಾವಕ್ಕೆ ಸಂಬಂಧಪಟ್ಟದ್ದು. ಇಲ್ಲಿ ಯಾವ ಸಂಪ್ರದಾಯವೂ, ಮೂಢನಂಬಿಕೆಯೂ ಅಡ್ಡಿಯಾಗುವುದಿಲ್ಲ, ಅಡ್ಡಿಯಾಗುವುದು ಸಂಕುಚಿತ ಮನಸ್ಸು ಅಷ್ಟೆ. ಆದರೆ ಹಾಗೆ ವಿನಾಕಾರಣ ಕಷ್ಟಕ್ಕೊಳಗಾದ ವ್ಯಕ್ತಿಗಳಿಗೆ ದೇವರು ರಕ್ಷಣೆ ನೀಡಿಯೇ ನೀಡುತ್ತಾನೆ ಎಂಬ ಸಂಗತಿ ಕೊನೆಯ ಸತ್ಯವಾಗಿ ಉಳಿಯುತ್ತದೆ.

ಮಕ್ಕಳಿಲ್ಲದ ರಾಜ ಆ ಕಾರಣಕ್ಕಾಗಿ ಎರಡನೆಯ ಮದುವೆಯನ್ನು ಮಾಡಿಕೊಂಡಾಗ ಅದು ಅವನ ಪ್ರಾಣಕ್ಕೇ ಕುತ್ತಾಗಬಹುದು. ಹೆಣ್ಣಿನ ಮನಸ್ಸು ಆ ರೀತಿಯಲ್ಲಿಯೂ ಸೇಡು ತೀರಿಸಿಕೊಳ್ಳಬಹುದು. "ಇಂದ್ರನ ಮಗಳು" ಕತೆಯನ್ನು ಇಲ್ಲಿ ಗಮನಿಸಬಹುದು. ತನ್ನ ಗಂಡ ಎರಡನೆಯ ಮದುವೆಯಾದ ಎಂಬ ಕಾರಣಕ್ಕೆ ಮೊದಲ ಹೆಂಡತಿಗೆ ಸಿಟ್ಟು ಬಂದು ಅವಳು ಮಂತ್ರಿಯೊಂದಿಗೆ ಗುಟ್ಟಾಗಿ ಸಂಬಂಧ ಇಟ್ಟುಕೊಳ್ಳುತ್ತಾಳೆ. ಅವನೊಂದಿಗೆ ಸೇರಿ ಗಂಡನನ್ನೇ ಮುಗಿಸಲು ತಂತ್ರ ಹೂಡುತ್ತಾಳೆ. ಅದರಂತೆ ಮಂತ್ರಿ ರಾಜನನ್ನು ಮುಗಿಸುತ್ತಾನೆ. ಕಿರಿಯ ಹೆಂಡತಿಗೆ ಇವರಿಬ್ಬರ ಕುತಂತ್ರ ತಿಳಿಯುತ್ತದೆ. ಸಹಜವಾಗಿಯೇ ನನ್ನನ್ನು ಇವರು ಮುಗಿಸು ತ್ತಾರೆಂದು ಭಾವಿಸಿ ಮಗನ ಸಹಿತ ಅರಮನೆಯನ್ನು ಬಿಟ್ಟು ಹೊರಡುತ್ತಾಳೆ. ಅಸೂಯೆಯೂ, ದ್ವೇಷದ ನಾನಾ ಮುಖಗಳು ಇಲ್ಲಿಯ ಒಂದೊಂದು ಕತೆಯಲ್ಲಿಯೂ ವ್ಯಕ್ತಗೊಂಡಿವೆ. ಇಂತಹ ಕಡೆಗಳಲ್ಲಿ ಹೆಣ್ಣಿನ ಮನಸ್ಸಿನ ಭಾವನೆಗಳನ್ನು, ಅದರ ವಿವಿಧ ಸ್ವರೂಪವನ್ನು ಕತೆಗಾರ ವಿಶಿಷ್ಟ ರೀತಿಯಲ್ಲಿ ನಿರೂಪಿಸುವಲ್ಲಿ ಅದಕ್ಕೊಂದು ಕಲಾತ್ಮಕತೆಯನ್ನು ತರುತ್ತಾನೆ. ಅಂತಹ ಒಂದು ಕತೆ ಮುಂದೆ ಯಾವುದೇ ರೀತಿಯಲ್ಲಿ ತನ್ನ ಬೆಳವಣಿಗೆಯನ್ನು ಕಂಡುಕೊಂಡರೂ ಸರಿ - ತಪ್ಪುಗಳ ನಿರ್ಣಯದ ಹಾದಿಯನ್ನು ಹಿಡಿದಿರುತ್ತದೆ. ಹೆಣ್ಣಾಗಲಿ, ಗಂಡಾಗಲಿ ಯಾವುದೇ ನಿರ್ದಿಷ್ಟ ಸಂದರ್ಭದಲ್ಲಿ ಎಷ್ಟೇ ವಿಚಿತ್ರವಾಗಿ ನಡೆದುಕೊಂಡರೂ, ಅಸಭ್ಯವಾಗಿ ವರ್ತಿಸಿದರೂ ಅದೇ ಸರಿ ಎಂದು ಕತೆಗಾರ ಎಲ್ಲಿಯೂ ಸಮರ್ಥಿಸುವುದಿಲ್ಲ. ನಿಯಮ ಬಾಹಿರವಾಗಿ ನಡೆದು ಕೊಳ್ಳುವುದು ಎಂತಹುದೇ ಸಂದರ್ಭದಲ್ಲಿ ಒಪ್ಪಿತವಾದುದಲ್ಲ ಎಂಬುದು ಆ ಒಂದು ಸಾಂಸ್ಕೃತಿಕ ಚೌಕಟ್ಟಿನಲ್ಲಿ ನಿರ್ಧರಿತವಾದ ಅಂಶ. ತನಗೆ ಸರಿಯೆನಿಸಲಿಲ್ಲವೆಂಬ ಕಾರಣಕ್ಕೆ ನಿಯಮ ಬಿಟ್ಟು ನಡೆಯುವುದನ್ನಾಗಲಿ, ದ್ವೇಷಾಸೂಯೆಗಳಿಂದ ವರ್ತಿಸುವುದನ್ನಾಗಲಿ ಅವರು ಒಪ್ಪುವುದಿಲ್ಲ. ಇಲ್ಲಿ ಕತೆಗಾರ ಎಲ್ಲಿಯೂ ವಿಮರ್ಶಕನಾಗಿ, ಪ್ರಜ್ಞಾಪೂರ್ವಕವಾಗಿ ವರ್ತಿಸುವುದಿಲ್ಲ. ನಿರ್ಮಿತವಾದ ಪರಂಪರೆಯ ಚೌಕಟ್ಟಿನಲ್ಲಿಯೇ ತನ್ನ ಅನುಭವವನ್ನು ತುಂಬುತ್ತಾನೆ. ಅವನು ಅದಕ್ಕೆ ತನ್ನ ಕಲ್ಪನೆಯ ಅಂಶವನ್ನು ಎಷ್ಟು ಬೇಕಾದರೂ ಬೆರೆಸಬಹುದಾದರೂ, ನಿರ್ಮಿತ ಚೌಕಟ್ಟನ್ನು ಮೀರುವಂತಿಲ್ಲ, ಮುರಿಯುವಂತಿಲ್ಲ. ಸಾಮಾಜಿಕ ಪ್ರಜ್ಞೆಯ ಅರಿವು ಮಾತ್ರ ಅವನನ್ನು ಹಿಡಿದು ನಡೆಸುತ್ತದೆ.

೩

ಮಾನವ ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದ ಜನಪದ ಕಥೆಗಳು ಬಹಳ ಮುಖ್ಯ ಅನ್ನಿಸುತ್ತವೆ. ಜನಪದ ಸಂಸ್ಕೃತಿಯ ಒಂದು ಅಂಗವಾಗಿಯೇ ನಿಲ್ಲುವ ಜನಪದ ಸಾಹಿತ್ಯ ಮಾನವನ ವಿವಿಧ ಸಂದರ್ಭದ, ವಿವಿಧ ಭಾವನೆಗಳನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿರು ವುದು ಕಂಡು ಬರುತ್ತದೆ. ಮಾನವ ಶಾಸ್ತ್ರೀಯ ಅರಿವಿಲ್ಲದೆ ಜನಪದ ಕಥೆಗಳನ್ನಾಗಲಿ, ಜನಪದ ಕಥೆಗಳ ಅರಿವಿಲ್ಲದೆ ಸಂಸ್ಕೃತಿಯನ್ನಾಗಲಿ ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗು ವುದಿಲ್ಲ. ಅವೆರಡೂ ಪರಸ್ಪರ ಪೂರಕ. ಒಂದರ ಅರಿವಿನಿಂದ ಮತ್ತೊಂದರ ಒಳಹೊಕ್ಕು ನೋಡಲು ಸಾಧ್ಯ. ಈ ದೃಷ್ಟಿಯಿಂದ

ಜನಪದ ಕಥೆಗಳು ಪುರಾತನ ಕಾಲದ ಪಳೆಯುಳಿಕೆಗಳಾಗಿ ಕಂಡು ಬರುತ್ತವೆ. ಅಲ್ಲಿಯ ಅನೇಕ ಘಟನೆಗಳು ಅಂದಿನ ಸಾಮಾಜಿಕ ಘಟನೆಗಳ ಫಲ. ಸಾಮಾಜಿಕ ಕಾರಣಗಳ ಫಲಶ್ರುತಿ. ಆ ದೃಷ್ಟಿಯಿಂಡ ಜನಪದ ಕಥೆಗಳು ಒಂದು ಪ್ರಾಮಾಣಿಕ ಸಾಮಾಜಿಕ ವಿಜ್ಞಾನವಾಗಿಯೂ ನಿಲ್ಲಬಲ್ಲದು. ಮಾನವ ಸಂಸ್ಕೃತಿಯ ಪುನರ್‌ರಚನೆಗೆ ಈ ಕಥೆಗಳು ಸಹಾಯಕವಾಗಬಲ್ಲವು. ಅದಕ್ಕೆ ಅಗತ್ಯವಾದ ಅನೇಕ ಮಾಹಿತಿಗಳನ್ನು ಇಲ್ಲಿ ಶೋಧಿಸಿ ತೆಗೆಯಲು ಅವಕಾಶವಿದೆ. ಮಾನವ ಶಾಸ್ತ್ರೀಯ ದೃಷ್ಟಿಯಿಂದ ಅಭ್ಯಾಸ ಮಾಡಲು ಯೋಗ್ಯವೆನಿಸಿದ ಅನೇಕ ವಿಚಾರಗಳು ಜನಪದ ಕಥೆಗಳಲ್ಲಿ ಅಡಕವಾಗಿವೆ. ಒಂದು ಸಂಸ್ಕೃತಿಯ ನಿರ್ಮಾಣದಲ್ಲಿ ಇವುಗಳ ಪಾತ್ರವೆಷ್ಟೆಂಬುದನ್ನು ಅರಿಯಲು ಅವಕಾಶವಿದೆ. "ಇಂದ್ರನ ಮಗಳು" ಕಥೆಯ ಒಂದು ಘಟನೆಯನ್ನೇ ನಿದರ್ಶನವಾಗಿ ನೋಡಬಹುದು. ಗಂಡನನ್ನು ಕಳೆದುಕೊಂಡ ಹೆಣ್ಣೊಬ್ಬಳು, ಸವತಿಯ ಕ್ರೂರತೆಯನ್ನು ಅರಿತು ಮಗನ ಸಮೇತ ಅರಮನೆಯನ್ನು ಬಿಟ್ಟು ಹೊರಡುತ್ತಾಳೆ. ಹೊರಡುವಾಗ "ಅಲ್ಲೊಂದು ಸಣ್ಣ ಕಲ್ಲು ತಗಂಡು 'ನನ್ನ ಗಂಡನ ಮನೆ ದೇವರು' ಅಂತ ಹೇಳಿ ಅದುನ್ನ ತನ್ನ ಸೆರಗಿಗೆ ಕಟ್ಕಂಡು ನಡಿತಾಳೆ. ಎಷ್ಟೋ ದೂರ ಬರ್‍ತಳೆ. ಮಗ ಹೊಟ್ಟೆ ಹಸಿವು ಅಂತ ಅಳಾಕೆ ಶುರು ಮಾಡ್ತದೆ. ಆಗ ಅವಳು "ಅಯ್ಯೋ ! ದೇವರು ಎಲ್ಲವ್ನೆ ನಮ್ಗೆ ಇಂಥ ಕಷ್ಟ ಕೊಟ್ಟ" ಅಂತ ಸೆರಗಿಗೆ ಕಟ್ಕಂಡಿದ್ದ ಕಲ್ಲನ್ನು ಬಿಚ್ಚಿ ಎಸಿತಳೆ. ಹಿಂದ್ಗಡೇಲೇ ಬರ್‍ತಿದ್ದ ಮಗ ಅದುನ್ನ ನೋಡಿ "ಇದ್ಯಾಕಮ್ಮ, ವಜ್ರುನ ಎಸ್ದು ಹೋಗ್ತಿದ್ದೀಯಲ್ಲ" ಅಂತಾನೆ. ಇವಳು ಆಶ್ಚರ್ಯ ಆಗಿ ತಿರುಗಿ ನೋಡ್ತಳೆ. ಇವಳು ಎಸ್ದಿದ್ದ ಕಲ್ಲು ವಜ್ರ ಆಗಿರುತ್ತೆ. ಆಗ ಇವಳಿಗೆ ದೇವರ ಮೇಲೆ ಭಕ್ತಿ ಮೂಡತ್ತೆ. ಆಗ ಮಗ "ಅವ್ವಾ, ಅವ್ವಾ ಈ ರತ್ನ ಮಾರಿ ಹಣ ತತ್ತೀನಿ ಅಂತ ಪೇಟೆಗೆ ಹೋಗ್ತನೆ. ಅಲ್ಲೊಬ್ಬ ರತ್ನದ ವ್ಯಾಪಾರಿ ಹತ್ರ ಇದುನ್ನ ತೋರುಸ್ತನೆ. ಅವನು ಅದುನ್ನ ನೋಡಿ "ಇದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ, ಅಷ್ಟೊಂದು ಬೆಲೆ ಬಾಳೋ ವಜ್ರ ಇದು" ಅಂತ ಹೇಳಿ "ನೀವು ಸಾಯೋವರೆಗೂ ನಮ್ಮ ಮನೇಲಿ ಬಂದಿರಿ" ಅಂತ ಹೇಳ್ತನೆ. ಸರಿ ಅಂತ ಒಪ್ಕಂಡು ಇರ್‍ತರೆ.

ಧರ್ಮವನ್ನು ಕುರಿತ 'ಸರ್ವಚೇತನವಾದ'ಕ್ಕೆ ಒಂದು ಉತ್ತಮ ಉದಾಹರಣೆಯಂತೆ ಈ ಸನ್ನಿವೇಶ ಕಂಡು ಬರುತ್ತದೆ. ನಿರ್ಗತಿಕಳಾಗಿ, ನಿರಾಶೆಯಿಂದ ಮನೆ ಬಿಟ್ಟು ಹೊರಟ ಅವಳಿಗೆ ಒಂದು ಸಣ್ಣ ಕಲ್ಲೇ ಗಂಡನ ಮನೆಯ ದೇವರಾಗಿ ಕಾಯುತ್ತದೆ. ಅವಳಲ್ಲಿಯ ಯಾವುದೋ ಒಂದು ನಂಬಿಕೆ, ಶ್ರದ್ಧೆ ಆ ಭಾವನೆಗೆ ಕಾರಣವಾಗುತ್ತದೆ. ಬದುಕಿನಲ್ಲಿ ಆತಂಕದ ಕ್ಷಣಗಳು ಸಹಜ. ಆ ಹಿನ್ನೆಲೆಯಲ್ಲಿ ನಾವು ನಂಬಿದ ನಂಬಿಕೆಗಳು, ಶ್ರದ್ಧಾಭಾವನೆಗಳೂ ಅಧೈರ್ಯ ವನ್ನುಂಟು ಮಾಡುತ್ತವೆ, ಅರ್ಥಹೀನವಾಗಿ ತೋರುವುದೂ ಉಂಟು. ಆ ಸಂದರ್ಭದಲ್ಲಿ ಅವನ್ನು ದೂರೀಕರಿಸುವುದೂ ಉಂಟು. ಆದರೆ 'ನಂಬಿದ ದೇವರು ಕೈ ಬಿಡುವುದಿಲ್ಲ' ಎಂಬಂತೆ ಆ ಕಲ್ಲೇ ವಜ್ರವಾದಾಗ ಮತ್ತೆ ನಂಬಿಕೆ ಮೂಡುತ್ತೆ, ಶ್ರದ್ಧಾಭಾವನೆಗಳು ಗರಿಗೆದರುತ್ತವೆ. ಇಲ್ಲಿ ದೇವರ ಬಗೆಗೆ ನಂಬಿಕೆ ಹುಟ್ಟಿಸುವ, ಅದೂ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬಂತೆ ಸೇರಿದ ಮನೆಯ ದೇವರು ಕಾಯ್ದುತ್ತಾನೆ ಎಂಬ [illegible] ಪ್ರಬಲವಾಗಿ ಮಂಡಿತವಾಗಿದೆ. ಪ್ರಾಚೀನ ಸಂಸ್ಕೃತಿಯ ಅನೇಕ ಧ್ಯೇಯಗಳು, ಮೌಲ್ಯಗಳು ಇಲ್ಲಿ ಹಾಸು ಹೊಕ್ಕಾಗಿ ಕಂಡು ಬರುತ್ತವೆ.

"ಏೀ ಒಲಿದರೆ ಕೊರಡು ಕೊನರುವುದಯ್ಯ" ಎಂಬ ನಂಬಿಕೆಯ ಬೇರು ನಮ್ಮ ಮೂಲ ಸಂಸ್ಕೃತಿಯಲ್ಲಿಯೇ ಆಳವಾಗಿ ಬೇರು ಬಿಟ್ಟಿದ್ದು, "ಬಿದ್ರೆ ಒಳಗಿನ ಚದ್ರ" ಕತೆಯಲ್ಲಿ ಬರುವ ಕಬ್ಬಿಣದ

ಗುಳವೊಂದು ಹೆಣ್ಣಾದ ಕತೆಯಲ್ಲಿ ಆ ದೃಢವಾದ ನಂಬಿಕೆಯನ್ನು ಕಾಣಬಹುದು. ಉಳುವಾಗ ಭೂಮಿಯ ಒಳಗೆ ಸಿಕ್ಕಿದ ಗುಳವನ್ನು ತೆಗೆದು ದಿಣ್ಣೆಯ ಮೇಲೆ ಎಸೆಯುತ್ತಾನೆ. ಎಷ್ಟೋ ದಿನಗಳು ಕಳೆಯುತ್ತವೆ. ಬಿಸಿಲಲ್ಲಿ ಒಣಗಿ ಮಳೆಯಲ್ಲಿ ನೆನೆದು ಅದಕ್ಕೂ ಬೇಸರವಾಗಿ ಒಂದು ದಿನ : "ಅಯ್ಯೋ ಶಿವ್ನೆ ! ಭೂಮಿ ಒಳ್ಗೆ ಹಾಯಾಗಿದ್ದೆ ಇಲ್ಲೊಳ್ಳೆ, ಈಚೆಗೆ ಬಂದು ಸೊರ್ಗದಾಯ್ತಲ್ಲ" ಅಂತ ಗೋಳಿಡ್ತಿರುತ್ತೆ. ಅಷ್ಟೊತ್ನಲ್ಲಿ ಶಿವನೂ - ಪಾರ್ವತೀನೂ ಲೋಕ ಸಂಚಾರ ಹೊರಟರ್ತರೆ. ಇದರ ಗೋಳು ಅವರ ಕಿವಿಗೆ ಬೀಳುತ್ತೆ. "ಪ್ರಾಣಿಯಲ್ಲ ಪಕ್ಷಿಯಲ್ಲ ಇದ್ಯಾವ್ದು ಇಷ್ಟೊತ್ನಲ್ಲಿ ಅಂಗೆ ರೋಧ್ನ ಮಾಡ್ತಾ ಐತಲ್ಲ" ಅಂತ ಇಬ್ಬರೂ ಅಲ್ಲಿಗೆ ಬರ್ತರೆ. ಅದೊಂದು ಕಬ್ಬಿದ ಗುಳ. ಆಗ ಅದು ತನ್ನ ಗೋಳ್ನ ಹೇಳ್ಕಳುತ್ತೆ. ಶಿವ ಪಾರ್ವತಿಯರಿಗೆ ನಗ ಬರುತ್ತೆ. ಇರಿ ಅಂದ್ಬಿಟ್ಟು ಅದುನ್ನ ಹದಿನಾರು ವರ್ಷದ ಒಂದು ಸುಂದರ ಹೆಣ್ಣಂಗೆ ಮಾಡಿ ಹಂಗೇ ಬೆತ್ಲೇ ಬಿಟ್ಟು ಹೋಗ್ಬಿಡ್ತರೆ. ಆ ಕತ್ಲಲೇ ಒಂದು ಕಾಡು ಬಿದ್ದು ಅಲ್ಲೆ ಒಂದು ಬಿದಿರ ಮೆಳೆಯೊಳಗೆ ಸೇರ್ಕಂಡ್ ಬಿಡ್ತಳೆ. ಯಾರೂ ಇಲ್ಲದ್ದು ನೋಡ್ಕಳದು ಹಣ್ಣು ಹಂಪ್ಲು ತಂದು ತಿನ್ನದು, ಅಲ್ಲೇ ನೀರಿರತಾವ ನೀರು ಕುಡಿಯದು, ಸ್ನಾನ ಮಾಡದು ಇಂಗೇ ಕಾಲ ಕಳಿತಿರ್ತಳೆ".

ಮುಂದೆ ಅವಳು ಕಾಡಿಗೆ ಬಂದ ರಾಜಕುಮಾರನ ದೃಷ್ಟಿಗೆ ಬಿದ್ದು ಅವನನ್ನು ಮದುವೆಯಾಗುವುದು ಮುಂದಿನ ಘಟನೆ. ಆದರೆ ಇಲ್ಲಿ ಬಹುಮುಖ್ಯವಾದ ಸಂಗತಿ ಎಂದರೆ, ದೈವ ದೃಷ್ಟಿಗೆ ಬಿದ್ದ ಯಾವುದೇ ಒಂದು ಸಾಮಾನ್ಯ ವಸ್ತುವಿಗೂ ಅದೃಷ್ಟ ಕಾದಿರುತ್ತದೆ ಎಂಬ ಸಾರ್ವತ್ರಿಕವಾದ ನಂಬಿಕೆ. ಜನಪದರ ಧಾರ್ಮಿಕವಾದ ಭಾವನೆಗಳು ಏನೆಲ್ಲ ಮೂಡಿಸುತ್ತವೆ ಎಂಬುದಕ್ಕೆ ಇದೊಂದು ನಿದರ್ಶನವೆನ್ನಬಹುದು. ಅಷ್ಟೇ ಅಲ್ಲ, ಹಾಗೆ ನಂಬಿ ನಡೆದವರನ್ನು ದೇವರು ಎಂದೂ ಕೈ ಬಿಡುವುದಿಲ್ಲ ಎಂಬ ನಂಬಿಕೆಯೂ ಅದರಲ್ಲಿಯೇ ಮುಂದುವರಿಯುತ್ತದೆ. ಕಬ್ಬಿಣದ ಗುಳವನ್ನು ಹೆಣ್ಣಾಗಿ ಮಾಡಿದ್ದೇನೋ ಸರಿ. ಆದರೆ ಹೆಣ್ಣೆಂದ ಮೇಲೆ ಅದಕ್ಕೊಂದು ನೆಲೆ - ಬೆಲೆ ಬೇಕಲ್ಲ ! ಮತ್ತೆ ಶಿವ - ಪಾರ್ವತಿಯರೇ ಅವಳ ತಂದೆ - ತಾಯಿಗಳಾಗಬೇಕಾಗುತ್ತದೆ. ತೌರಿನವರಂತೆ ಮಗಳು, ಅಳಿಯನನ್ನು ನಡೆಸಿಕೊಳ್ಳಬೇಕಾಗುತ್ತದೆ. ಇಲ್ಲೆಲ್ಲ ಜನಪದರ ದೈವಿಕ ಭಾವನೆಗಳು, ನಂಬಿಕೆಗಳು, ಸಂಪ್ರದಾಯಗಳು ಹಲವು ಬಗೆಯಲ್ಲಿ ವ್ಯಕ್ತಗೊಳ್ಳುವುದನ್ನು ಕಾಣಬಹುದು.

ಮನುಷ್ಯ ಪ್ರಯತ್ನವೆಲ್ಲವೂ ಸಂಪೂರ್ಣವಾಗಿ ಮುಗಿಯಿತೆಂದ ಮೇಲೆ ಅಂತಿಮವಾಗಿ ದೇವರಿಗೆ ಮೊರೆ ಹೋಗುವುದು ಇಂದಿಗೂ ಕಂಡು ಬರುವ ಒಂದು ಸಂಗತಿ. ಅಂದರೆ ಇದರ ಬೇರುಗಳು ಪ್ರಾಚೀನ ಸಂಸ್ಕೃತಿಯಲ್ಲಿ ಎಷ್ಟು ನಾಟಿರಬಹುದೆಂಬುದು ಅವರವರ ಆಲೋಚನೆಗೆ ಬಿಟ್ಟದ್ದು. ಮಕ್ಕಳಾಗಲಿಲ್ಲವೆಂದು ಎರಡನೆಯ ಮದುವೆ ಆಗುವುದು ಸಾಮಾನ್ಯ ಸಂಗತಿ. ಆದರೆ ಎರಡನೆಯ ಹೆಂಡತಿಗೂ ಮಕ್ಕಳಾಗದೆ ಹೋದಾಗ ಅವನ ಸಮಸ್ಯೆ ಬಿಗಡಾಯಿಸುತ್ತದೆ. ತನ್ನಲ್ಲಿ ವಿಶ್ವಾಸವನ್ನು ಕಳೆದುಕೊಂಡು ದೇವರಲ್ಲಿ ನಂಬಿಕೆ ಇಡುತ್ತಾನೆ. ಅಂತಹ ಸಂದರ್ಭಗಳಲ್ಲಿ ಕಾಡಿಗೆ ಹೋಗುವುದು, ಋಷಿಯ ದರ್ಶನ ಪಡೆಯುವುದು, ಅವನು ಹೇಳಿದಂತೆ ಮಾವಿನ ಹಣ್ಣಿನ ಫಲವನ್ನು ಹೊಂದುವುದು, ಅದನ್ನು ಗೌರಿ ಅಥವಾ ಮತ್ತಾವುದೋ ವಿಶೇಷ ಸಂದರ್ಭದ ದಿನದಂದು ಹೆಂಡತಿಗೆ ತಿನ್ನಲು ಕೊಡುವುದು - ಇವೆಲ್ಲವೂ ಪರಂಪರೆಯಿಂದ ಬಂದ ಧಾರ್ಮಿಕ ನಂಬಿಕೆಯಿಂದ ಪ್ರೇರಿತವಾದವುಗಳು, ಆಚರಣೆಗಳಿಂದ ಸ್ಥಿರಗೊಂಡವುಗಳು. ಅಂತಹ ಧಾರ್ಮಿಕ ಸಂದರ್ಭದಲ್ಲಿಯೂ ಮನುಷ್ಯ ಕೆಲವೊಮ್ಮೆ ಹೇಗೆ ಸಣ್ಣದಾಗಿ ನಡೆದುಕೊಳ್ಳುತ್ತಾನೆ ಎಂಬುದನ್ನು ಹೇಳಲು ಕತೆಗಾರ ಮರೆಯುವುದಿಲ್ಲ. ಹಾಗೆ

ಬಂದ ವ್ಯಕ್ತಿಗೆ ಋಷಿ, "ಅದರಲ್ಲಿ ಒಂದೇ ಒಂದು ಹಣ್ಣನ್ನು ಮಾತ್ರ ಕಿತ್ಕಂಡು ಹೋಗು" ಅಂತ ಹೇಳಿದರೂ, ರಾಜ ದುರಾಸೆಯಿಂದ ಹೆಚ್ಚು ಮಕ್ಕಳಾಗಲಿ ಎಂಬ ಕಾರಣಕ್ಕಾಗಿ ಒಂದಕ್ಕಿಂತ ಹೆಚ್ಚು ಹಣ್ಣುಗಳನ್ನು ಕಿತ್ತುಕೊಳ್ಳುತ್ತಾನೆ. ಆದರೆ ಕೆಳಗಿಳಿದು ನೋಡಿದರೆ ಒಂದೇ ಒಂದು ಹಣ್ಣು ಮಾತ್ರ ಇರುತ್ತೆ. ಎಷ್ಟು ಸಾರಿ ಮಾಡಿದರೂ ಹಾಗೆಯೇ ಆಗುತ್ತದೆ. ಮತ್ತೆ ಇಲ್ಲಿಯೂ ಕೂಡ ಧಾರ್ಮಿಕ ಪ್ರಭಾವದ ಒಂದು ಅಂಶವನ್ನೇ ಕಾಣುತ್ತೇವೆ. ನಾವು ಏನೇ ಮಾಡಿದರೂ, ಎಷ್ಟು ಲಭ್ಯವೋ ಅಷ್ಟು ಮಾತ್ರ ಲಭ್ಯವಾಗುತ್ತದೆ - ಎಂಬ ಆಧ್ಯಾತ್ಮಿಕ ನೆಲೆಯತ್ತ ನಮ್ಮನ್ನು ಕೊಂಡೊಯ್ಯುತ್ತದೆ. ದುರಾಸೆ ಎಂದೂ ಫಲಿಸುವುದಿಲ್ಲ ಎಂಬ ಸತ್ಯವನ್ನು ಅದು ಸ್ಪಷ್ಟಪಡಿಸುತ್ತದೆ.

'ವಿಧಿ'ಯ ಮೇಲಿನ ನಂಬಿಕೆ ಕೂಡಾ ಪ್ರಾಚೀನ ಮಾನವನಿಗೆ ತನ್ನ ಬದುಕಿನ ವಿವಿಧಾನುಭವ ಸಂದರ್ಭದಲ್ಲಿಯೇ ಬಂದದ್ದಿರಬೇಕು. ತಾನು ವ್ಯವಸ್ಥಿತನಾಗಿ ಯೋಜಿಸುವ ಎಷ್ಟೋ ಕೆಲಸ ಕಾರ್ಯಗಳು ಕೈ ಮೀರಿ ಹೋದಾಗ ಅಥವಾ ಯೋಜಿಸಲು ಸಾಧ್ಯವಾಗದೆ ಅದರಲ್ಲಿ ವಿಫಲನಾದಾಗ ಅಂತಹ ಒಂದು ಪರಿಕಲ್ಪನೆಗೆ ಎಡೆಕೊಟ್ಟಿರಲೂ ಸಾಕು. ಮಾನವನ ಬದುಕು, ಅದರ ಸಂದರ್ಭದಲ್ಲಿ ಉಂಟಾದ ಹಲವು ತೆರನಾದ ಭಾವನೆಗಳು ವಿಧಿಯನ್ನು ನಂಬಲು ಅವನನ್ನು ಪ್ರೇರೇಪಿಸಿರುವುದು ಸಹಜ. "ವಿಧಿಯಮ್ಮ"ನ ಕಥೆ ಅಂತಹ ಒಂದು ಸುಂದರ ಪರಿಕಲ್ಪನೆಯ ಸೃಷ್ಟಿ.

ಪ್ರತಿದಿನ ಬೆಳಿಗ್ಗೆ ಮನೆಯಿಂದ ಹೊರಟು ರಾತ್ರಿ ಬರುತ್ತಿದ್ದ ತನ್ನ ತಾಯಿಯನ್ನು ಮಗಳು ಕೇಳುತ್ತಾಳೆ ! "ಪ್ರತಿ ದಿನವೂ ನೀನು ಎಲ್ಲಿಗೆ ಹೋಗ್ತೀಯ ?" ಎಂದು. ಆಗ ವಿಧಿಯಮ್ಮ ಉತ್ತರಿಸುತ್ತಾಳೆ, "ಪ್ರತಿ ದಿನವೂ ಪ್ರಪಂಚದಲ್ಲಿ ಹುಟ್ಟುವ ಮಕ್ಕಳಿಗೆ ಹಣೆಬರಹ ಬರೆಯಲು ಹೋಗ್ತೇನೆ" ಅಂತ ; ಮಗಳು ಆಶ್ಚರ್ಯವಾಗಿ ಕೇಳ್ತಾಳೆ : "ಹಾಗಾದರೆ ನನ್ನ ಹಣೆಲಿ ಏನು ಬರೆದಿದ್ದೀಯ ಹೇಳು" ಅಂತ ಒತ್ತಾಯ ಮಾಡ್ತಳೆ. ನಿನ್ನ ಹೊಟ್ಟೆಯಲ್ಲಿ ಹುಟ್ಟುವ ಮಗನೇ ನಿನ್ನನ್ನು ಮದುವೆಯಾಗುವ ಹಾಗೆ ಬರೆದಿದ್ದೇನೆ ಎನ್ನುತ್ತಾಳೆ ವಿಧಿಯಮ್ಮ. ಆಗ ತಾಯಿಯ ಮೇಲಿನ ಕೋಪದಿಂದ ವಿಧಿ ನಿಯಮವನ್ನು ಸುಳ್ಳಾಗಿಸಲು ಅವಳು ಮನೆ ಬಿಟ್ಟು ಹೊರಡುತ್ತಾಳೆ. ಎಷ್ಟೋ ದೂರ ಹೋದ ಮೇಲೆ ಒಂದು ಅಜ್ಜಿಯ ಗುಡಿಸಲು ಸಿಕ್ಕುತ್ತೆ. ಅವಳೊಂದಿಗೆ ಇರುತ್ತಾಳೆ. ಅಲ್ಲಿ ಗಂಡಸರ ಸುಳಿವೇ ಇರುವುದಿಲ್ಲ. ಆದರೂ ವಿಧಿ ಲಿಖಿತದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಬೇಟೆಗೆಂದು ಕಾಡಿಗೆ ಬಂದ ರಾಜ ಆ ಗುಡಿಸಲ ಪಕ್ಕದಲ್ಲಿಯೇ ಇದ್ದ ಬಾವಿಯ ಬಳಿ ತನ್ನ ಜಲಬಾಧೆಯನ್ನು ತೀರಿಸಿಕೊಳ್ಳುತ್ತಾನೆ. ಅದೇ ವೇಳೆಗೆ ಮುದುಕಿ ಸಾರಿಗಾಗಿ ಸೊಪ್ಪನ್ನು ತಂದು ಅಡುಗೆ ಮಾಡಿ ಇಬ್ಬರೂ ಊಟ ಮಾಡುತ್ತಾರೆ. ಸ್ವಲ್ಪ ಕಾಲದಲ್ಲಿಯೇ ಆ ಹುಡುಗಿ ಗರ್ಭಿಣಿಯಾಗುತ್ತಾಳೆ. ಗಂಡಸರ ಸುಳಿವೇ ಇಲ್ಲದ ಅಲ್ಲಿ ಇವಳು ಬಸುರಿಯಾದದ್ದು ಆಶ್ಚರ್ಯವೆನಿಸುತ್ತದೆ. ಒಂದು ಗಂಡು ಮಗು ಹುಟ್ಟುತ್ತದೆ. ಅದನ್ನು ಅವಳು ತನ್ನ ಸೀರೆ ಸೆರಗಿನಲ್ಲಿ ಸುತ್ತಿ ಆ ಬಾವಿಯ ಬಳಿ ಮಲಗಿಸುತ್ತಾಳೆ. ಅದು ಒಬ್ಬ ರತ್ನ ವ್ಯಾಪಾರಿಯ ಕೈ ಸೇರುತ್ತದೆ. ತೆಗೆದುಕೊಂಡು ಹೋಗಿ ಚೆನ್ನಾಗಿ ಸಾಕಿ ದೊಡ್ಡವನನ್ನಾಗಿ ಮಾಡ್ತನೆ. ತನ್ನ ಸಾಕು ಮಗನಿಗೆ ಹೆಣ್ಣು ನೋಡಲು ಮತ್ತೆ ಅದೇ ದಾರಿಯಲ್ಲಿ ಬರ್ತಾನೆ. ಬರುವಾಗ ಈ ಹುಡುಗಿ ಕಣ್ಣಿಗೆ ಬೀಳುತ್ತಾಳೆ. ಅಜ್ಜಿ ಸತ್ತು ಹೋಗಿರುತ್ತಾಳೆ ತನ್ನ ಮಗನಿಗೆ ಮದುವೆ ಮಾಡಬಹುದೆಂಬ ದೃಷ್ಟಿಯಿಂದ ಮನೆಗೆ ಕರೆತರುತ್ತಾನೆ. ಮದುವೆಯ ಏರ್ಪಾಡು ಆಗುತ್ತೆ, ಆದರೆ ಮದುವೆ ನಡೆಯುವುದಿಲ್ಲ.

ಇಲ್ಲಿಯವರೆಗೆ ವಿಧಿಯಮ್ಮನ ಹಣೆಬರೆಹ ಸರಿಯಾಗಿಯೆ, ಯಾವ ಅಡ್ಡಿ ಆತಂಕಗಳೂ ಇಲ್ಲದೆ

ನಡೆಯುತ್ತದೆ. ಅದನ್ನು ಯಾರಿಂದಲೂ ತಪ್ಪಿಸಲಾಗುವುದಿಲ್ಲ. ಅಳಿಸಲಾಗುವುದಿಲ್ಲ. ಗಂಡಸರ ಸುಳಿವೇ ಇಲ್ಲದ ಅಲ್ಲಿ ಅವಳು ಗರ್ಭಿಣಿಯಾಗಲು ಕಲ್ಪಿಸಿಕೊಂಡಿರುವ ಸನ್ನಿವೇಶ ವಂತೂ ಅದ್ಭುತವಾಗಿದೆ. ವೈಜ್ಞಾನಿಕವಾಗಿ ಅದು ಏನೇ ಇದ್ದರೂ ಅವರ ಕಲ್ಪನಾ ದೃಷ್ಟಿಯಲ್ಲಿ ಅದು ಸತ್ಯ. ಮದುವೆಯೂ ನಡೆಯಬಹುದಿತ್ತೇನೋ ಆದರೆ, ಅದು ನಮ್ಮ ಸಂಸ್ಕೃತಿ ದೂರವಾದದ್ದು. ತಾಯಿ - ಮಗನ ಮದುವೆ ನಿಷಿದ್ಧ. ಆದರೆ ಅದರ ಹಿಂದೆ ವಿಧಿಯಮ್ಮನ ಬರೆಹದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಹೇಳುವ ಉದ್ದೇಶ ಸ್ಪಷ್ಟ. ಇಲ್ಲಿ ಎರಡು ಪ್ರಬಲ ಪರಿಕಲ್ಪನೆಗಳ ಘರ್ಷಣೆಯನ್ನು ಕಾಣಬಹುದು. ವಿಧಿಬರೆಹ ಅಳಿಸಲಾಗದ್ದು ಹಾಗೆಯೇ ತಾಯಿ - ಮಗನ ಮದುವೆ ನಡೆಯಲಾಗದ್ದು. ಅಂತಹ ಸಂದರ್ಭದಲ್ಲಿಯೂ ಕತೆಗಾರ ಸೊಗಸಾದ ಮುಕ್ತಾಯವನ್ನು ಅದಕ್ಕೆ ಕೊಟ್ಟಿದ್ದಾನೆ. ಹಸು - ಕರು ಅವರನ್ನು ಎಚ್ಚರಿಸುತ್ತವೆ. ಅವಳಲ್ಲಿ ಅನುಮಾನ ಹುಟ್ಟುತ್ತದೆ. ವಿಧಿಯಮ್ಮನ ಬರೆಹವೆ ನಿಜವಾಯಿತೆಂದು ನಂಬುತ್ತಾಳೆ. ಅದನ್ನು ದೃಢಪಡಿಸಿಕೊಳ್ಳಲು ಪರೀಕ್ಷೆಯೊಂದನ್ನು ಒಡ್ಡುತ್ತಾಳೆ. ಅದು ನಿಜವಾಗುತ್ತದೆ. ವಿಧಿಲಿಖಿತದ ಬಗ್ಗೆ ಇರುವ ನಂಬಿಕೆ ಇಂದೂ ಅಳಿಸಿಹೋಗಿಲ್ಲ.

ನಮಗೆ ಅಸಂಗತವೆನಿಸುವ ಹಲವು ಸಂಗತಿಗಳು ಇಲ್ಲಿ ಸಂಗತವಾಗಿ ತೋರುತ್ತವೆ. ಅವರ ದೃಷ್ಟಿಯಲ್ಲಿ ಅವು ಅಸಂಗತವಲ್ಲ. ಅವರ ಜೀವನ ಶ್ರದ್ಧೆಯ ನಂಬಿಕೆಯ ಹಿಂದಿನ ಕೂಸುಗಳು ಆತ್ಮದ ಕಲ್ಪನೆಯೂ ಪ್ರಾಚೀನರಲ್ಲಿ ವಿಚಿತ್ರವಾಗಿಯೇ ಇವೆ. ಪರಕಾಯ ಪ್ರವೇಶವಾಗಲಿ ಸತ್ತವರು ಜೀವ ಪಡೆಯುವುದಾಗಲಿ ಅಥವಾ ಪುನರ್ಜನ್ಮದ ಘಟನೆಗಳಾಗಲಿ ಹೊಸತಲ್ಲ. ಇಂತಹ ಅನೇಕ ಘಟನೆಗಳು ವಿಶಿಷ್ಟ ರೀತಿಯಲ್ಲಿ ಕಥೆಯ ಸ್ಥಾನ ಪಡೆದಿವೆ. ಇವೆಲ್ಲ ಆದಿಮಾನವನ ಪರಿಕಲ್ಪನೆಯ ಕೂಸಿನ ಸಂತಾನ. ಮಾಟ ಮಂತ್ರ ತಂತ್ರ ಮುಂತಾದವು ನಮ್ಮ ಪ್ರಾಚೀನ ಸಂಸ್ಕೃತಿಯ ಫಲಗಳೇ ಆಗಿವೆ. ಅವು ಹಿಂದಿನಷ್ಟೇ ಈಗಲೂ ಪ್ರಬಲವಾಗಿ ಉಳಿದಿವೆ ಎಂಬುದರಲ್ಲಿ ಆಶ್ಚರ್ಯವಿಲ್ಲ. ಮೂಲ ಸಂಸ್ಕೃತಿಯ ಹಲವು ಅಂಶಗಳು ಸ್ಥಾಯಿಯಾಗಿ ಹೇಗೆ ಉಳಿದು ಬಂದಿವೆ ಎಂಬುದಕ್ಕೆ ಇಂತಹವು ಸಾಕ್ಷಿಯಾಗಿ ನಿಲ್ಲುತ್ತವೆ. ಈ ಸಂಕಲನದಲ್ಲಿ ಬರುವ 'ಗುರು - ಶಿಷ್ಯ', 'ಸೂಣ ಮುತ್ತ', 'ದೇವಕನ್ನೇರು', 'ಬಡವ ಮತ್ತು ಕಳ್ರು', 'ಬಡ ಬ್ರಾಹ್ಮಣ' ಮುಂತಾದ ಕಥೆಗಳನ್ನು ಈ ದೃಷ್ಟಿಯಿಂದ ಗಮನಿಸಬಹುದು.

೪

ಸಾಮಾಜಿಕ ಪ್ರಜ್ಞೆಯಿಂದೊಡಗೂಡಿದ ಹಲವಾರು ಸಾಮಾಜಿಕ ವಿಷಯಗಳು ಜನಪದ ಕಥೆಗಳಲ್ಲಿ ತುಂಬಿಕೊಂಡಿವೆ. ಅವೇ ಕಥೆಗಳ ಹುಟ್ಟಿಗೆ ಮೂಲ ಆಕರ ಕೂಡ. ಬಡತನ, ಶ್ರೀಮಂತಿಕೆ, ಅಸೂಯೆ, ಅಸಹನೆ, ಜಿಪುಣತನ, ದ್ವೇಷ, ಸಣ್ಣತನ ಇವುಗಳ ಹಿನ್ನೆಲೆಯಲ್ಲಿ ಅಲುಗಾಡುವ ಅನೇಕ ಸಾಮಾಜಿಕ ಸಂಗತಿಗಳು, ಅವುಗಳನ್ನು ಉಳಿಸಿಕೊಳ್ಳಲು ಹಾಗೂ ಅಲುಗಾಡದಂತೆ ನೋಡಿಕೊಳ್ಳಲು ಹುಟ್ಟಿಕೊಂಡ ಸಂಪ್ರದಾಯಗಳು, ಅವು ನಿರ್ಮಿಸಿದ ಬದುಕು - ಇವುಗಳ ಕಾರಣದಿಂದಾಗಿ ಉಂಟಾದ ಸಾಮಾಜಿಕ ಪ್ರಜ್ಞೆ ಜನಪದ ಕಥೆಗಳಲ್ಲಿ ಒಡಮೂಡಿವೆ. ಪ್ರಾಚೀನ ಸಂಸ್ಕೃತಿಯ ದಟ್ಟತೆಯನ್ನು ವಿಶ್ಲೇಷಿಸಲು ಹಾಗೂ ಅರ್ಥಮಾಡಿಕೊಳ್ಳಲು ಇಂತಹ ಕಥೆಗಳು ಸಹಕಾರಿಯಾಗುತ್ತವೆ. ಕೆಟ್ಟದ್ದನ್ನು ಹೇಳುತ್ತಲೇ ಅದರ ದುಷ್ಪರಿಣಾಮಗಳನ್ನು ಅದರಿಂದ ಅನುಭವಿಸಬೇಕಾಗುವ ಶಿಕ್ಷೆಯನ್ನು ವಿವರಿಸುತ್ತಲೇ ಎಚ್ಚರಿಸುವ ವಿಶಿಷ್ಟ ಕ್ರಮ ಇಲ್ಲಿಯದು. ಹಲವು ಮಂದಿ ಕೂಡಿದಲ್ಲಿ ಕೆಲ ಘಟನೆಗಳು ನಡೆಯಬಹುದಾಗಿದ್ದು ಸಹಜವೆನಿಸಬಹುದು. ಆದರೆ ಅದೇ ಸಂಪ್ರದಾಯವೆನಿಸುವುದಿಲ್ಲ. ಅದನ್ನು ಅಳಿಸಿ ಹಾಕಬೇಕಾಗುತ್ತದೆ.

ಅದು ಕೆಟ್ಟದ್ದು ಶಿಕ್ಷಾರ್ಹವಾದದ್ದು ಎಂಬ ತಿಳುವಳಿಕೆಯನ್ನು ಸಮಾಜದಲ್ಲಿ ಉಂಟು ಮಾಡಬೇಕಾಗುತ್ತದೆ. ಸಮಾಜ ಒಪ್ಪಿ ಸ್ವೀಕರಿಸಿದ ಮೌಲ್ಯಗಳ ಚೌಕಟ್ಟಿನಲ್ಲಿಯೇ ಕಥೆಯೊಂದು ರೂಪುಗೊಂಡಿರುವುದನ್ನು ನೋಡುತ್ತೇವೆ. ಕತೆಗಾರ ಏನೇ ದೊಂಬರಾಟ ಆಡಿದರು ಆ ಚೌಕಟ್ಟನ್ನು ಮೀರುವಂತಿರುವುದಿಲ್ಲ. ಅಷ್ಟರಲ್ಲಿಯೇ ಅವನ ಪಟ್ಟುಗಳೆಲ್ಲವನ್ನೂ ತೋರಿಸಬೇಕಾಗುತ್ತದೆ. ಆಕಾಶದಲ್ಲಿ ಅವನು ಎಷ್ಟೇ ಹಾರಾಡಿದರೂ ಅವನ ಮೂಲ ನೆಲೆ ಈ ಭೂಮಿ ಎಂಬುದನ್ನು ನೆನಪಿನಲ್ಲಿ ಇಟ್ಟಿರಲೇ ಬೇಕಾಗುತ್ತದೆ. ಇಲ್ಲವಾದರೆ ಅದು ಸಲ್ಲದ, ಚಲಾವಣೆ ಕಳೆದುಕೊಂಡ ಆಮದು ನಾಣ್ಯವಾಗುತ್ತದೆ. ಕತೆಯಲ್ಲಿನ ಕಲೆಗಾರಿಕೆಗೆ ಕತೆಗಾರ ಏನೇ ಹೋರಾಡಿದರೂ ಆ ಸಮಾಜದ ಸಂಸ್ಕೃತಿಯ ಬದ್ಧತೆಗೆ ನಿಷ್ಠನಾಗಿರುವುದು ಸ್ಪಷ್ಟವಾಗುತ್ತದೆ.

ಹೆಣ್ಣಿಗೆ ತೌರಿನ ಆಸೆ ಇದ್ದದ್ದೇ. ಆದರೆ ಮದುವೆ ಆದ ಮೇಲೆ 'ಕೊಟ್ಟು ಹೆಣ್ಣು ಕುಲಕ್ಕೆ ಹೊರಗು' ಎಂಬಂತೆ ಕೈ ಹಿಡಿದವನ ಮನೆಯನ್ನು ಬೆಳಗಬೇಕೆಂಬುದು ಧರ್ಮ ನಿಯಮ. ಸಂಪ್ರದಾಯ ಕೂಡ. 'ಗಂಜೀಯ ಕುಡಿದರು ಗಂಡನ ಮನೆ ಲೇಸು' ಎಂಬ ಶ್ರದ್ಧೆ ಹೆಣ್ಣಿನದು. ಅದನ್ನು ದೃಢಪಡಿಸುವ ಪ್ರಸಂಗವೊಂದು "ನೋಣ್ ಮುತ್ತ" ಕಥೆಯಲ್ಲಿ ಬರುತ್ತದೆ : ರಾಜನೊಬ್ಬನಿಗೆ ಏಳು ಮಂದಿ ಹೆಣ್ಣು ಮಕ್ಕಳಿರ್‍ತರೆ. ಎಲ್ರೂ ಮದುವೆಗೆ ಬಂದಿರ್‍ತರೆ. ಒಂದು ದಿನ ರಾಜ ಅವರನ್ನೆಲ್ಲಾ ಕೂರಿಸಿಕೊಂಡು ಪ್ರಶ್ನೆಯೊಂದನ್ನು ಕೇಳುತ್ತಾನೆ "ನಿಮಗೆ ತಂದೆಯ ಮನೆ ಇಷ್ಟವೋ ಗಂಡನ ಮನೆ ಇಷ್ಟವೋ ?" ಎಂದು ಅದಕ್ಕೆ ಮೊದಲ ಆರು ಮಂದಿ ಹೆಣ್ಣು ಮಕ್ಕಳು "ನಮಗೆ ತಂದೆ ಮನೆ ಇಷ್ಟ" ಎಂದು ಉತ್ತರಿಸುತ್ತಾರೆ. ಕಿರಿಯವಳು "ನನಗೆ ಗಂಡನ ಮನೆ ಇಷ್ಟ" ಎಂದು ಉತ್ತರಿಸುತ್ತಾಳೆ. ರಾಜನಿಗೆ ಸಿಟ್ಟು ಬರುತ್ತೆ. ಆ ಆರು ಜನಕ್ಕೂ ಒಳ್ಳೆಯ ರಾಜಕುಮಾರರನ್ನು ನೋಡುವಂತೆ ಮಂತ್ರಿಗೆ ಹೇಳುತ್ತಾನೆ. ಇವಳಿಗೆ ಯಾರಾದರೂ ಒಬ್ಬ ಬಿಕನಾಸಿಯನ್ನು ನೋಡುವಂತೆ ಹೇಳುತ್ತಾನೆ. ಹಾಗೇ ನೋಡಿ ಮದುವೆಯೂ ಆಗುತ್ತದೆ. ಅವರೆಲ್ಲರೂ ರಾಜನ ಮನೆ ಸೇರುತ್ತಾರೆ "ಇವಳು ಬಡವನ ಮನೆಯನ್ನು ಸೇರುತ್ತಾಳೆ. ಮತ್ತೆ ರಾಜ ಅವಳನ್ನು ಕೇಳುತ್ತಾನೆ "ಈಗ ನಿನಗೆ ಯಾರ ಮನೆ ಇಷ್ಟ ?" ಎಂದು. ಆಗಲೂ ಅವಳು ಅದೇ ಉತ್ತರ ಹೇಳುತ್ತಾಳೆ. ಕತೆ ಮುಂದೆ ಬೇರೆ ಬೇರೆ ದಿಕ್ಕನ್ನು ಹಿಡಿದು ಮುಂದುವರೆಯುತ್ತದೆ. ಆದರೆ ಹೆಣ್ಣಿಗೆ ಮದುವೆಯಾದ ಮೇಲೆ ಯಾವ ಮನೆ ಭೂಷಣ ಎಂಬುದು ಇಲ್ಲಿಯ ಪ್ರಶ್ನೆ. ಸಾಮಾಜಿಕವಾಗಿಯೂ ಅದು ಸ್ಥಿರ ಪಟ್ಟ ವಿಷಯ. ಅಲ್ಲಿ ಉಳಿದ ಆರು ಮಂದಿಗಿಂತ ಕಿರಿಯವಳು ಹೆಚ್ಚು ಪ್ರಜ್ಞಾವಂತಳಾಗಿ ಸಾಮಾಜಿಕ ಅರಿವನ್ನು ಉಳ್ಳವಳಾಗಿ ಕಾಣುತ್ತಾಳೆ. ತಂದೆಯ ಮೇಲಿನ ಪ್ರೀತಿ ಬೇರೆ, ಸಾಂಪ್ರದಾಯಿಕವಾದ ನಡವಳಿಕೆ ಬೇರೆ ಇದು ಇಲ್ಲಿ ಸ್ಪಷ್ಟವಾಗುತ್ತದೆ.

ಹೆಣ್ಣಿಗೆ ತೌರಿನ ಆಸೆ ತಪ್ಪಿದ್ದಲ್ಲ. ತೌರಿನವರ ಆಶ್ರಯವಿದ್ದರೆ ತನಗೊಂದು ಬಲ ಎಂಬ ಅರಿವೂ ಅವಳಿಗೆ ಇರುತ್ತದೆ "ಹೆಣ್ಣಿನ ಜನುಮಾಕೆ ಅಣ್ಣಾ ತಮ್ಮರು ಬೇಕು ಬೆನ್ನು ತಟ್ಟುವರು ಸಭೆಯೊಳಗ" ಎಂಬ ಧೈರ್ಯ ಅವಳದ್ದು, ಎಲ್ಲಕ್ಕಿಂತ ಹೆಚ್ಚಾಗಿ ಒಂದು ಹೆಮ್ಮೆ. ಅದರಿಂದ ತನ್ನ ಸ್ಥಾನಮಾನ ಭದ್ರ ಎಂಬ ವಿಶ್ವಾಸ ಕೂಡ. ಹಾಗಾಗಿಯೇ ಏನೂ ಇಲ್ಲದಿದ್ದರೂ ಅತಿಯಾಗಿ ತನ್ನ ತೌರಿನ ಬಗೆಗೆ ಅವಳು ಹೇಳಿಕೊಳ್ಳುತ್ತಿರುತ್ತಾಳೆ. ಅದರಿಂದ ಸಂತೋಷಪಡುತ್ತಾಳೆ. ಏಕೆಂದರೆ ಸಾಮಾಜಿಕ ನಡಾವಳಿಗಳಲ್ಲಿ ತೌರಿಗೂ - ಹೆಣ್ಣಿಗೂ ಇರುವ ಸಂಬಂಧ ಬಿಡಿಸಲಾಗದ್ದು.

"ಬಿದ್ರೆ ಒಳಗಿನ ಚದ್ರೆ", "ನಾಯಿ" ಕತೆಗಳಲ್ಲಿ ಬರುವ ಘಟನೆಗಳನ್ನು ಇಲ್ಲಿ ಉದಾಹರಿಸಬಹುದು. ಬಿದ್ರೆ ಒಳಗಿನ ಚದ್ರೆ ರಾಜಕುಮಾರನ ಕೈ ಹಿಡಿಯುತ್ತಾಳೆ. ಅವಳಿಗೆ ಹಿಂದೆ

ಮುಂದೆ ಯಾರೂ ಇರುವುದಿಲ್ಲ. ಆದರೆ ಹಾಗೆ ಹೇಳಿಕೊಂಡರೆ ಬೆಲೆ ಬರುವುದಿಲ್ಲ ಎಂಬ ಪ್ರಜ್ಞೆ ಅವಳನ್ನು ಕಾಡುತ್ತದೆ. ಹಾಗಾಗಿ ಸುಳ್ಳನ್ನಾದರೂ ಹೇಳಿ ತನ್ನ ಹಾಗೂ ತೌರಿನ ಮಾನವನ್ನಾದರೂ ಕಾಯ್ದುಕೊಳ್ಳಬೇಕೆಂಬ ಗೀಳಿಗೆ ಅವಳು ಒಳಗಾಗುತ್ತಾಳೆ. ಯಾರೂ ಇಲ್ಲದ ಅನಾಥೆಯಾದ ಅವಳು ರಾಜ ಕರೆದಾಗ "ನನ್ಗೂ ನಿನ್ನ ಮೇಲೆ ಇಷ್ಟಾಗೈತೆ ಆದ್ರೆ ಅಷ್ಟೊಂತರ ರಾಜ್ಯ, ತಂದೆ, ತಾಯಿ ಬಿಟ್ಟು ಎಂಗೆ ನಿನ್ನ ಜೊತೆ ಬರೋದು ಅಂತ ಯೋಚ್ನೆ ಮಾಡ್ತಾ ಇದ್ದೀನಿ" ಅಂತಳೆ. ಅವಳ ಸಮಯ ಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆ ಎರಡೂ ಗಮನೀಯ.

ಅವಳು ಅಷ್ಟಕ್ಕೆ ಸುಮ್ಮನಾಗುವುದಿಲ್ಲ. ಗಂಡನ ಮನೆಗೆ ಬಂದ ಮೇಲೂ, ಒಂದು ದಿನ ಗಂಡ - ಹೆಂಡತಿಯರಿಬ್ಬರೂ ಎಲೆ ಅಡಿಕೆ ಹಾಕಿಕೊಳ್ತಾ ಕೂತಿದ್ದಾಗ ಇವಳು ಜೋರಾಗಿ ನಗ್ತಾಳೆ. ರಾಜ ಕಾರಣ ಕೇಳಿದಾಗ ಇವಳು ತಕ್ಷಣ ಹೇಳುವುದಿಲ್ಲ. ಒತ್ತಾಯಿಸಿದಾಗ "ಏನೂ ಇಲ್ಲ ನಮ್ಮಪ್ಪನ ಮನೆ ವೈಭೋಗ ಕಣ್ಮುಂದೆ ಬಂತು ಆಗ ಇದೆಲ್ಲಾ ನೋಡಿ ನಗು ಬಂತು" ಎಂದು ಉತ್ತರಿಸುತ್ತಾಳೆ. ರಾಜನಿಗೆ ಆಶ್ಚರ್ಯವಾಗುತ್ತದೆ "ಎಲಾ ! ನಿಮ್ಮಪ್ಪನ ಮನೆಯವರು ಅಷ್ಟೊಂದು ದೊಡ್ಡೋರಾ ! ಇಷ್ಟು ದಿವ್ಸ ಹೇಳ್ಳೇ ಇಲ್ವಲ್ಲ. ಅಂಗಾರೆ ಅದುನ್ನ ಒಂದಿವ್ಸನಾರಾ ನೋಡಬೇಕು ನಡೀ ಹೋಗನಾ" ಅಂತಾನೆ. ಆಗ ಅವಳು ಇಕ್ಕಟ್ಟಿಗೆ ಸಿಕ್ಕಿಹಾಕಿಕೊಳ್ಳುತ್ತಾಳೆ. ಮತ್ತೆ ಶಿವ ಪಾರ್ವತಿಯರ ಪ್ರವೇಶದಿಂದ ಅದು ಬಗೆ ಹರಿಯುತ್ತದೆ. ಅದು ಬೇರೆ.

ಈ ಸಂಕಲನದಲ್ಲಿ ಬರುವ 'ನಾಯಿ' ಕತೆಯೂ ಈ ದೃಷ್ಟಿಯಿಂದ ಗಮನಿಸಬಹುದಾದದ್ದು. ಮೇಲಿನ ಸಂದರ್ಭವನ್ನು ಇಲ್ಲಿಯ ಕತೆ ಒಳಗೊಂಡಿದ್ದರೂ, ಅದರ ಜೊತೆಯಲ್ಲಿಯೇ ವ್ಯಕ್ತಪಡಿಸುವ ಇನ್ನೂ ಹಲವು ಸಾಮಾಜಿಕ ಕಾರಣಗಳಿಂದಾಗಿ ಅದು ಮಹತ್ವವನ್ನು ಪಡೆದುಕೊಳ್ಳುತ್ತದೆ. 'ನಾಯಿಯಾದರೂ ತಾಯಿ' ಎಂಬ ಸತ್ಯವನ್ನು ಮರೆತವರ ಪಾಡೇನಾಗುತ್ತದೆ ಎಂಬುದಕ್ಕೆ ನಿದರ್ಶನ ಈ ಕತೆ. ಇಲ್ಲಿ ನಾಯಿ, ಕತೆಯ ಉದ್ದಕ್ಕೂ ಮುಖ್ಯ ಪಾತ್ರವೆಂಬಂತೆ ಬರುತ್ತದೆ. ಆದರೆ ಮನುಷ್ಯ ಅದರ ಮುಂದೆ ಎಷ್ಟು ಕೀಳಾಗಿ ನಡೆದುಕೊಳ್ಳುತ್ತಾನೆ ಎಂಬುದು ಸ್ಪಷ್ಟಗೊಳ್ಳುತ್ತದೆ. ಮಾನವೀಯ ಮೌಲ್ಯಗಳನ್ನು ಮರೆತ ವ್ಯಕ್ತಿ ಹೇಗೆ ವ್ಯವಹರಿಸುತ್ತಾನೆ ಎಂಬುದನ್ನು ಇಲ್ಲಿ ಕಾಣಬಹುದು. ನಾಯಿಯನ್ನು ತಾಯಿಯಾಗಿ ಪಡೆದ ಹೆಣ್ಣು ಮಕ್ಕಳಿಬ್ಬರ ಸ್ವಭಾವಗಳು ಬೇರೆ ಬೇರೆ. ಅದೃಷ್ಟವಶಾತ್ ಇಬ್ಬರೂ ಹೇಗೋ ರಾಜನ ಮಗನ, ಮಂತ್ರಿ ಮಗನ ಕೈ ಹಿಡಿಯುತ್ತಾರೆ. ಕಿರಿಯವಳು ರಾಜನ ಮಗನನ್ನು ಮದುವೆಯಾದರೆ, ಹಿರಿಯವಳು ಮಂತ್ರಿ ಮಗನ ಕೈ ಹಿಡಿಯುತ್ತಾಳೆ. ಮಕ್ಕಳನ್ನು ಕಾಣದ ನಾಯಿ ಹುಡುಕಿಕೊಂಡು ಬಂದಾಗ ಹಿರಿಯವಳು ನಾಯಿಯನ್ನು ತಾಯಿ ಎಂದು ಹೇಳಿಕೊಳ್ಳಲು ಅವಮಾನ ಎಂದು ಭಾವಿಸಿ, ಸುಡೋಗಂಜಿ ತಂದು ತಟ್ಟೆಗೆ ಸುರಿಯುತ್ತಾಳೆ. ದೂರದಿಂದ ಬಂದ ನಾಯಿ ಹಸಿದು ಅದಕ್ಕೆ ಬಾಯಿ ಹಾಕಿ ನಾಲಿಗೆ ಸುಟ್ಟುಕೊಂಡು ಅಲ್ಲಿಂದ ಓಡುತ್ತೆ. ಕಿರಿಯವಳು ಅದನ್ನು ಕಂಡು ಸಂತೈಸುತ್ತಾಳೆ. ತನ್ನ ಅರಮನೆಯಲ್ಲಿಟ್ಟುಕೊಂಡು ಚೆನ್ನಾಗಿ ನೋಡಿಕೊಳ್ಳುತ್ತಿರುತ್ತಾಳೆ. ತನ್ನ ಗಂಡ ಬಂದಾಗ ಅವನಿಗೆ ಕಾಣದಂತೆ ಪೆಟ್ಟಿಗೆಯಲ್ಲಿ ಮುಚ್ಚಿಡುತ್ತಾಳೆ. ಆದರೆ ಒಂದು ದಿನ ಮುಚ್ಚಿಡುವಾಗ ಸಿಕ್ಕಿ ಬೀಳುತ್ತಾಳೆ. ಮುಚ್ಚಿಟ್ಟಿದ್ದನ್ನು ತೆಗೆದು ತೋರಿಸಲು ಹೋದಾಗ ಅದು ಚಿನ್ನದ ಗಟ್ಟಿಯಾಗಿರುತ್ತದೆ. ಕೂಡಲೇ ತನ್ನ ತೌರಿನವರು ಕಳುಹಿಸಿಕೊಟ್ಟದ್ದು ಎಂದು ಸುಳ್ಳು ಹೇಳುತ್ತಾಳೆ. ಇಲ್ಲಿ ಅನಿವಾರ್ಯವಾಗಿ ಅವಳು ಸುಳ್ಳು ಹೇಳಬೇಕಾಗುತ್ತದೆ. ಅಪ್ರಜ್ಞಾಪೂರ್ವಕವಾಗಿ ತೌರಿನ ಹಂಬಲ ಅವಳ ಬಾಯಿಂದ ಹೊರಹೊಮ್ಮುತ್ತದೆ. "ಪೆಣ್ಣಿಗೆ

ಕೌರಾಸೆ" ಎಂಬ ಮಾತು ನಿಜವಾಗುತ್ತದೆ. ಆದರೆ ಅಂತಹ ಕೌರನ್ನು ನೋಡಬೇಕೆಂಬ ಆಸೆ ರಾಜನ ಮಗನಿಗೆ ಹುಟ್ಟಿದಾಗ ಅವಳಿಗೆ ತಾಪತ್ರಯವೆನಿಸುತ್ತದೆ. ಆದರೆ ಬೇರೆ ದಾರಿಯಿಲ್ಲ. ಅವಮಾನಕ್ಕಿಂತ ಸಾವೇ ಮೇಲೆಂದು ಹುತ್ತದ ಬಾಯಿಗೆ ಕೈಯಿಟ್ಟಾಗ ಅದೃಷ್ಟದ ಬಾಗಿಲು ಮತ್ತೆ ತೆರೆದುಕೊಳ್ಳುತ್ತದೆ. ಉಪಕಾರ ಪಡೆದ ಹಾವು ತಂದೆ, ತಾಯಿ ಬಂಧು ಬಳಗವಾಗಿ ಕೌರನ್ನು ನಡೆಸಕೊಡುತ್ತದೆ. ಹಿಂತಿರುಗಿ ಹೋಗುವಾಗ ಬೇಕಾದಷ್ಟು ಸಂಪತ್ತನ್ನು ತುಂಬಿ ಕಳಿಸುತ್ತದೆ. ಇದನ್ನು ತಿಳಿದು ಅಕ್ಕನೂ ಅದರಂತೆಯೇ ಹೊರಟಾಗ ಹಾವು ಕಚ್ಚಿ ಸಾಯುತ್ತಾಳೆ.

ಬದುಕು ಪರಸ್ಪರ ಕೊಳು ಕೊಡುಗೆಯ ಆಧಾರದ ಮೇಲೆ ನಿಂತದ್ದು. ಅಲ್ಲಿ ಮಾನವೀಯ ಗುಣಗಳು, ಮೌಲ್ಯಗಳು ಪ್ರಮುಖವೆನಿಸುತ್ತವೆ. ಅವು ಲಯ ತಪ್ಪಿದಾಗ ಬದುಕೂ ಬವಣೆಗೆ ಒಳಗಾಗುತ್ತದೆ. ಕೃತಜ್ಞತೆ ಇಲ್ಲದ, ಉಪಕಾರ ಸ್ಮರಣೆ ಇಲ್ಲದ, ಅನುಕಂಪೆ ತೋರದ ಯಾವ ವ್ಯಕ್ತಿಯೂ ವ್ಯಕ್ತಿಯೆನಿಸಿಕೊಳ್ಳಲಾರ. ಹಾಗೆ ನಡೆದುಕೊಳ್ಳಬಾರದೆಂಬುದು ಯಾವುದೇ ಸಂಸ್ಕೃತಿಯ ಆಶಯ. ಹಾಗೆ ನಡೆದುಕೊಂಡಾಗ ಏನಾಗುತ್ತದೆ ಎಂಬುದಕ್ಕೆ ಇಂತಹ ನಿದರ್ಶನಗಳೇ ಸಾಕ್ಷಿ.

ಮಾನವ ಸ್ವಭಾವ ವಿಚಿತ್ರವಾದುದು. ಅವನ ಗುಣಾವಗುಣಗಳ ರಾಶಿಯಲ್ಲಿ ಅವಗುಣ ಗಳದ್ದೇ ದೊಡ್ಡ ರಾಶಿ ಎನ್ನಬಹುದು. ಇದಕ್ಕೆ ಅಪವಾದಗಳೂ ಗೌಣ. ಅಸಹನೆ, ಅಸೂಯೆ, ಅತೃಪ್ತಿ, ಅಹಂಕಾರ - ಇವುಗಳೇ ಮೊದಲಾಗಿ ದುರಾಸೆ, ದುಷ್ಟ ಬುದ್ಧಿ, ಜಿಪುಣತನ, ಕೃತಘ್ನತಾ ಭಾವಗಳೇ ಮೊದಲಾಗಿ ಒಳಗೊಂಡಿದ್ದು ಹಲವು ಸಂದರ್ಭಗಳಲ್ಲಿ ಅವನನ್ನು ಯಾವುದೇ ಕೀಳು ಪ್ರಾಣಿಗಿಂತ ಕೀಳು ಮಟ್ಟಕ್ಕೆ ಇಳಿಸುವ ಸಂದರ್ಭಗಳು ಕಡಿಮೆಯೇನಿಲ್ಲ. ಮನುಷ್ಯನ ಸ್ವಭಾವ ಯಾವ ಯಾವ ಗಳಿಗೆಯಲ್ಲಿ ಯಾವ ಯಾವ ರೀತಿಯಲ್ಲಿ ವರ್ತಿಸಬಲ್ಲದು ಎಂಬುದನ್ನು ನಮ್ಮ ಜನಪದರು ಚನ್ನಾಗಿ ಅರಿತವರು. ಅಷ್ಟೇ ಅಲ್ಲ ಅದನ್ನು ಸಮರ್ಥವಾಗಿ ಸಮರ್ಪಕವಾಗಿ ನಿರೂಪಿಸುವ ಕಲೆಗಾರಿಕೆಯನ್ನು ಬಲ್ಲವರು. ಈ ಸಮಾಜ ಎಂತಹುದು ? ಇಲ್ಲಿಯ ಜನ ಎಂತಹವರು ? ಇಲ್ಲಿ ನಿಜವಾಗಿಯೂ ಬೆಲೆ ಇರುವುದಾದರೂ ಯಾವುದಕ್ಕೆ ? ನಿಜವಾದ ಪ್ರೀತಿ, ವಿಶ್ವಾಸ ಎಂಬುದು ಇದೆಯೆ ? ಇಲ್ಲಿ ಎಂತಹವರು ಮಾತ್ರ ಬದುಕಲು ಸಾಧ್ಯ ? ಸತ್ಯ, ಧರ್ಮಗಳ ಬೆನ್ನು ಹಿಡಿದು ಹೊರಟವರು ಕೊನೆಗೆ ಏನಾಗುತ್ತಾರೆ ? - ಈ ಎಲ್ಲ ಪ್ರಶ್ನೆಗಳಿಗೂ ಇಲ್ಲಿ ಬರುವ "ಕೋತಿ" ಕಥೆ ಒಂದು ಒಳ್ಳೆಯ ಸಮರ್ಥ ಉತ್ತರವಾಗಿ ನಿಲ್ಲುತ್ತದೆ.

ವ್ಯಕ್ತಿಯ ಗುಣ - ಸ್ವಭಾವಗಳೂ ಕೂಡ ಸಂದರ್ಭ ವಶವಾದವುಗಳು. ಎಷ್ಟೇ ಒಳ್ಳೆಯ ವ್ಯಕ್ತಿ ಸಂದರ್ಭ ವಶದಿಂದ ತನ್ನ ಹಿಂದಿನ ಪ್ರವೃತ್ತಿಗಳಿಗೆ ತಿಲಾಂಜಲಿ ಬಿಡಬಲ್ಲ. ಅಂತಹ ಸಂದರ್ಭದಲ್ಲಿ ಯಾವುದೇ ಸಂಸ್ಕಾರ ಅಥವಾ ಸದ್ಭಾವನೆಗಳು ಅದಕ್ಕೆ ಅಡ್ಡಿಯುಂಟು ಮಾಡದೆ ಹೋಗಬಹುದು. ಅವನಿಗೆ ಅವನ ಗುರಿಯಷ್ಟೇ ಮುಖ್ಯವಾಗಬಹುದು ಅಥವಾ ಲಾಭದ ಅಂಶವಷ್ಟೇ ಗುರಿಯಾಗಬಹುದು. ಅಂತಹ ಸಮಯದಲ್ಲಿ ನಿರುಪದ್ರವಿಯೆನಿಸಿಕೊಂಡ ವ್ಯಕ್ತಿ ಅದಕ್ಕೆ ಬಲಿಪಶುವಾಗುತ್ತಾನೆ.

ಸ್ವಾರ್ಥ ಎಂತಹ ಕೋಮಲ ಮನಸ್ಸನ್ನೂ ಕಠಿಣವಾಗಿಸುತ್ತದೆ. ಕಾರ್ಯ ಸಾಧನೆಗೆ ಅದು ಅನಿವಾರ್ಯ: ವ್ಯಕ್ತಿಯ ಆದರ್ಶಗಳು ಎಲ್ಲಿಯವರೆಗೆ ಅಳ್ಳಾಡದೆ ಉಳಿದಿರುತ್ತವೆಯೆಂದರೆ, ಅವನು ನಿಸ್ವಾರ್ಥಿಯಾಗಿರುವವರೆಗೆ ಮಾತ್ರ. ಅದರ ಅಲುಗಾಟದೊಂದಿಗೆ ಇದೂ ಬುಡಮೇಲಾಗುತ್ತದೆ. 'ಕೋತಿ' ಕಥೆ ಇದಕ್ಕೊಂದು ಸ್ಪಷ್ಟ ನಿದರ್ಶನ.

ತಾಯಿ - ಮಗ ಇಬ್ಬರೇ ಇರುವ ಒಂದು ಚಿಕ್ಕ ಸಂಸಾರ. ತುಂಬಾ ಬಡವರು, ಜೊತೆಗೆ ಮಗ ದಡ್ಡ. ಆದರೆ ತಾಯಿಗೆ ಮಗನ ಮೇಲೆ ಪ್ರೀತಿ. ಕುಲಸ್ತರ ಮನೆಯ ಹೆಣ್ಣನ್ನು ತಂದು ಅವನಿಗೆ ಮದುವೆ ಮಾಡಬೇಕು ಎಂಬ ಒಳ್ಳೆಯ ಮನಸ್ಸು. ಅದಕ್ಕಾಗಿ ಅವಳು ಹಣ ಕೂಡಿ ಹಾಕುತ್ತಿರುತ್ತಾಳೆ. ಆದರೆ ದಡ್ಡ ಮಗ ಅದನ್ನು ಕೊಟ್ಟು ಒಂದು ಕೋತಿ ಕೊಂಡುಕೊಳ್ಳುತ್ತಾನೆ. ಇವಳಿಗೆ ಕೋಪ ಬಂದು ಮಗನನ್ನು ಬೈಯ್ತಾಳೆ. ಕೋತಿಯ ಮೇಲು ಅವಳಿಗೆ ಕೋಪ. ಆದರೆ ಕೋತಿಯ ಮೂಲಕ ತನ್ನ ಅದೃಷ್ಟದ ಬಾಗಿಲು ತೆರೆಯಿತೆಂಬುದು ಅವಳಿಗೆ ಗೊತ್ತಿರುವುದಿಲ್ಲ. ಗೊತ್ತಾದಾಗ ಅವಳಿಗೆ ಎಲ್ಲಿಲ್ಲದ ಸಂತೋಷ ಉಂಟಾಗುತ್ತದೆ. ಹೊಟ್ಟೆಗೂ ಸರಿಯಾಗಿ ಹಾಕದೆ ಅತ್ಯಂತ ನಿರ್ಲಕ್ಷ್ಯದಿಂದ ಕಾಣುತ್ತಿದ್ದ ಕೋತಿಯನ್ನು ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳ ತೊಡಗುತ್ತಾಳೆ. ಸ್ವಂತ ಮಗನನ್ನು ಗಣನೆಗೆ ತೆಗೆದುಕೊಳ್ಳದೆ ಆ ಕೋತಿಗೆ ಹಿರಿದಾದ ಆತಿಥ್ಯವನ್ನು ನೀಡುತ್ತಾಳೆ. ಇದರಿಂದ ಅದೂ ಉತ್ತೇಜಿತವಾಗಿ ಇನ್ನು ಹೆಚ್ಚು ಹೆಚ್ಚು ದೋಚಿ, ಬಾಚಿ ತಂದು ಕೊಡಲು ಪ್ರಾರಂಭಿಸುತ್ತದೆ. ತನ್ನ ಅಪಾಯದ ಅಂಚನ್ನು ಮರೆತು ಮೀರಿ ನಡೆಯುತ್ತದೆ. ತನ್ನ ಬುದ್ಧಿವಂತಿಕೆಯಿಂದ ಆ ದಡ್ಡ ಮಗನಿಗೂ ಒಂದು ಹೆಣ್ಣು ತಂದು ತಾನೇ ಮದುವೆಯನ್ನು ಮಾಡಿ ಮುಗಿಸುತ್ತದೆ. ಅಪಾರ ಸಂಪತ್ತು, ಮಗನ ಮದುವೆ ಇವುಗಳಿಂದ ಅವಳಿಗೆ ಖುಷಿ ಇಮ್ಮಡಿ ಮುಮ್ಮಡಿಯಾಗುತ್ತದೆ. ಇದರಿಂದ ಕೋತಿಗೆ ಪ್ರತಿ ದಿನ ಹಾಲು ಅನ್ನ ಬಡಿಸಿ, ಹಾಸಿಗೆಯ ಮೇಲೆ ಮಲಗಿಸುವುದು ಅಷ್ಟೇ ಅಲ್ಲದೆ ; ಒಂದು ದಿನ ಸಂತೋಷದಲ್ಲಿ ಆ ಕೋತಿಗೆ "ನೀನು ಸತ್ತರೆ ನಿನಗೆ ಚಪ್ಪರ ಕಟ್ಟಿಸ್ತೀನಿ" ಎಂದು ಮೆಚ್ಚುಗೆಯ ಮಾತನ್ನೂ ಆಡುತ್ತಾಳೆ. ಇದರಿಂದ ಕೋತಿಗೆ ಸಂತೋಷವಾದರೂ, ಪರೀಕ್ಷಿಸಿ ನೋಡಬೇಕೆಂದು ಒಂದು ದಿನ ಸತ್ತ ಹಾಗೆ ಕೊಟ್ಟಿಗೆಯಲ್ಲಿ ಬಿದ್ದುಕೊಳ್ಳುತ್ತದೆ. ಮಗ ಅದನ್ನು ನೋಡಿ ಬೆಳಿಗ್ಗೆ ತಾಯಿಗೆ "ಅವ್ವ, ಕೋತಿ ಸತ್ತೋಗೈತೆ" ಅಂತ ಹೇಳ್ತಾನೆ. ಆಗ ಅವಳು "ಕೋತಿ ಸತ್ತೋಗೈತಂತೆ, ತಗಂಡೋಗಿ ತೋಟಕ್ಕೆ ಬಿಸಾಡಿ" ಅಂತ ಆಳುಗಳಿಗೆ ಹೇಳ್ತಾಳೆ.

ಕೋತಿಗೆ ಅವಳ ನಿಜ ಸ್ವರೂಪ ತಿಳಿಯುತ್ತೆ. ಅವಳ ಬಳಿ ಇರಬಾರದು ಎಂದು ಕಾಡಿಗೆ ಹೋಗಿ ತನ್ನ ಬಳಗವನ್ನು ಸೇರಲು ಬಯಸುತ್ತದೆ. ಆದರೆ ಒಮ್ಮೆ ಬಿಟ್ಟು ಹೋಗಿ ಬಂದ ಅದನ್ನು ಅವೂ ಸೇರಿಸುವುದಿಲ್ಲ. ಕೊನೆಗೆ ಅದು ತ್ರಿಶಂಕುವಾಗುತ್ತದೆ.

ಬಹುಶಃ ಈ ಕಥೆ ಸಾರ್ವಕಾಲಿಕ ಸತ್ಯವನ್ನು ಎತ್ತಿ ಹೇಳುವ ಒಂದು ವಾಸ್ತವಿಕತೆ. ಕಾಲ ಉರುಳುತ್ತದೆ, ಋತುಗಳು ಬದಲಾಗುತ್ತವೆ, ಹಗಲು - ರಾತ್ರಿಗಳು ಮೂಡುತ್ತವೆ, ಕತ್ತಲು - ಬೆಳಕು ಕವಿಯುತ್ತದೆ - ಆದರೆ ಇದೆಲ್ಲವೂ ಪ್ರಕೃತಿ ನಿಯಮ, ನೈಜ ಕ್ರಿಯೆಗಳು. ಅವೆಲ್ಲ ಒಂದು ತತ್ವನಿಷ್ಠ ಕ್ರಿಯೆಗಳು. ಸಹಜ ಕ್ರಿಯೆಗಳು. ಆದರೆ, ಮನಸ್ಸು ! ವ್ಯಕ್ತಿತ್ವ ? ಅಲ್ಲಿಯೂ ಬದಲಾವಣೆ ಇರುತ್ತದೆ ನಿಜ. ಆದರೆ ಅಲ್ಲಿ ಕಾಣುವುದು ಯಾವ ತತ್ವ ? ಯಾವ ನಿಷ್ಠೆ ? ಬಹುಶಃ ಅದು ಸಂದರ್ಭಾನುಸಾರವಾದುದಲ್ಲದೆ ಬೇರೆ ಅಲ್ಲ. ಪ್ರಕೃತಿಗಾದರೆ ಒಂದು ಸುಸಂಬದ್ಧಿತವಾದ ಸೂತ್ರವಿರುತ್ತದೆ, ನಿಯಮವಿರುತ್ತದೆ, ಆದರೆ ಮನುಷ್ಯನಿಗೆ ? ಇದಾವುದೂ ಇರುವುದಿಲ್ಲ 'ಗಾಳಿ ಬಂದಾಗ ತೂರಿಕೋ' ಎಂಬುದೇ ಅವನ ಬುದ್ಧಿವಂತಿಕೆಯ ಬದುಕಿನ ಲಕ್ಷಣವಾಗಿರುತ್ತದೆ.

ಇಲ್ಲಿ ದಡ್ಡನ ತಾಯಿ ಮೊದಮೊದಲು ಸಾತ್ವಿಕಳಾಗಿಯೇ ತೋರುತ್ತಾಳೆ. ತನ್ನ ಮಗನಿಗೆ 'ಕುಲಸ್ತರ' ಮನೆಯ ಹೆಣ್ಣನ್ನು ತಂದು ಮದುವೆ ಮಾಡುವುದಕ್ಕಾಗಿ ಕಷ್ಟಪಟ್ಟು ಹಣವನ್ನು ಕೂಡಿ ಹಾಕುತ್ತಿರುತ್ತಾಳೆ. ಕುಲಸ್ತರ ಮನೆಯ ಹೆಣ್ಣು ಸೊಸೆಯಾಗಿ ಬರುವುದರಿಂದ ತನ್ನ ದಡ್ಡ ಮಗ ಬುದ್ಧಿವಂತನಾಗಿ

ಬಾಳಬಹುದು ಎಂಬುದು ಅವಳ ಇಚ್ಛೆ. ಅವಳ ಪ್ರವೇಶದಿಂದಲಾದರೂ ತನ್ನ ಮನೆ ಬೆಳಕಾಗಬಲ್ಲದು ಎಂಬುದು ಅವಳ ಬಯಕೆ. ಸ್ವಭಾವತಃ ಅವಳು ಒಳ್ಳೆಯವಳೆ ಆದರೆ ಒಮ್ಮೆ ದುಡುಮೆಯ ಸುಲಭ ಮಾರ್ಗ ದೊರೆತ ಮೇಲೆ ಅವಳ ಚರ್ಯೆಯೆ ಬದಲಾಗುತ್ತದೆ. ಎಲ್ಲ ಆದರ್ಶಗಳನ್ನೂ ಗಾಳಿಗೆ ತೂರಿಬಿಡುತ್ತಾಳೆ. ಅವಳನ್ನು ಹೊಕ್ಕ ಹಮ್ಮು ಮಗನನ್ನು ಮರೆಸಿ, ಮಂಗನನ್ನು ಮರೆಸುವಷ್ಟು ಹೆಮ್ಮರವಾಗಿ ಬೆಳೆಯುತ್ತದೆ. ಅದೂ ನಟನೆಯೇ. ಆದರೆ ನಟನೆ ಎಂದು ಕೊನೆಯವರೆವಿಗೂ ಎಲ್ಲಿಯೂ ಯಾರಿಗೂ ಅನ್ನಿಸುವುದಿಲ್ಲ. ಸತ್ತ ಕೋತಿಗೆ ಸಮಾಧಿ ಕಟ್ಟಿಸುವ ಉದಾರತೆಯನ್ನು ತೋರುವವರೆಗೂ ಅದು ಪ್ರಕಾಶಗೊಳ್ಳುತ್ತದೆ.

ಆದರೆ, ಮಾನವ ಪ್ರಾಣಿಗಿಂತ, ಮೂಕ ಪ್ರಾಣಿಯೇ ಹೆಚ್ಚು ಬುದ್ಧಿ ಶಾಲಿಯೆಂದು ತೋರುತ್ತದೆ! ಅದು ಬೇಗ ಎಚ್ಚೆತ್ತುಕೊಳ್ಳುತ್ತದೆ. ತನ್ನ ಒಡತಿಯ ನಿಜವಾದ ಬಣ್ಣ ಬಯಲಾದಾಗ ಅದಕ್ಕೆ ನಿರಾಶೆಯಾಗುತ್ತದೆ. ಜಿಗುಪ್ಸೆ ಒತ್ತರಿಸಿ ಬರುತ್ತದೆ. ಹಣಕ್ಕಾಗಿ ಹೀನಾಯವಾಗಿ ವರ್ತಿಸುವ ಮಾನವ ಪ್ರಾಣಿಯ ಬಗೆಗೆ ಅದಕ್ಕೆ ತಿರಸ್ಕಾರ ಮೂಡುತ್ತದೆ. ಆದರೆ ಉಪ್ಪು ತಿಂದಾಗಿದೆ. ಒಡತಿಯನ್ನು ನಂಬಿ ತನ್ನ ಬಳಗವನ್ನೇ ಬಿಟ್ಟು ಬಂದ ಅದಕ್ಕೆ, ದುಃಖ ಆವರಿಸುತ್ತದೆ.

ಇಲ್ಲಿ ಕತೆಯ ಮುಕ್ತಾಯ ಏನೇ ಇದ್ದರೂ, ಕತೆಗಾರ ಮಾನವ ಸ್ವಭಾವವನ್ನು ಸಮರ್ಥವಾಗಿ ಚಿತ್ರಿಸುವಲ್ಲಿ ಪೂರ್ಣ ಯಶಸ್ವಿಯಾಗಿದ್ದಾನೆ. ಕೃತಜ್ಞತೆಯ ಲವಲೇಶವನ್ನೂ ಲೆಕ್ಕಿಸದೆ, ಕೃತಘ್ನನಾಗಿ ನಡೆದುಕೊಳ್ಳುವ ವ್ಯಕ್ತಿಯ ಕೀಳು ಸ್ವಭಾವವನ್ನೂ ಪ್ರಭಾವಶಾಲಿಯಾಗಿ ಚಿತ್ರಿಸಿದ್ದಾನೆ. ಇಲ್ಲಿ "ಕೋತಿ"ಯನ್ನು ಬಳಸಿಕೊಂಡಿರುವುದು ಇನ್ನೂ ಹೆಚ್ಚು ಪರಿಣಾಮಕಾರಿ ಯಾಗಿದೆ. ಸಾಮಾನ್ಯವಾಗಿ ಮನುಷ್ಯನ ಮನಸ್ಸನ್ನು ಕೋತಿಗೆ ಹೋಲಿಸಿ "ಮನಸ್ಸೊಂದು ಮಂಗ" ಎಂದು ಹೇಳುವುದುಂಟು. ಅಂದರೆ ಅದಕ್ಕೆ ಯಾವುದೇ ನಿಶ್ಚಿತ ಧೋರಣೆ ಇರುವುದಿಲ್ಲ, ತೋಚಿದಂತೆ ವರ್ತಿಸುವುದು ಅದರ ಮೂಲ ಗುಣ ಎಂದು ವಾದಿಸುವುದುಂಟು. ಆದರೆ ಕತೆಗಾರ ಇಲ್ಲಿ ಆ ಕೋತಿಯನ್ನೇ ಬಳಸಿಕೊಂಡು, ಅದರ ದೃಢ ನಿಲುವನ್ನು ಅದರ ಮುಂದೆ ಮಾನವ ಮಂಗನಂತೆ - ಕುಣಿಯುವುದನ್ನು ತೋರಿಸುವುದು ಹೆಚ್ಚು ಗಮನಾರ್ಹವೂ ಧ್ವನಿಪೂರ್ಣವೂ ಆಗಿದೆ. ಇದೆಲ್ಲಕ್ಕೂ ಕಾರಣವಾದ ಹಣದ ಮಹಿಮೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಮಂಗ ಹಾಗೂ ಮಾನವ ಸ್ವಭಾವಗಳನ್ನು ಹೆಚ್ಚು ಆಕರ್ಷಕವಾಗಿ ಚಿತ್ರಿಸಲಾಗಿದೆ.

ಜನಪದ ಪ್ರತಿಭೆ, ಹಾಗೂ ಕಥನ ಕಲೆಗೆ ಇಲ್ಲಿನ 'ಕೋತಿ' ಕತೆ ಒಂದು ಸ್ಪಷ್ಟ ನಿದರ್ಶನ. "ಹಣ ಎಂದರೆ ಹೆಣವೂ ಬಾಯಿ ಬಿಡುತ್ತದೆ". ಎಂಬುದಾಗಲೀ, ಹಣದಿಂದಲೆ ಎಲ್ಲವೂ ಎಂಬುದಾಗಲಿ "ದುಡ್ಡಿದ್ದವನೇ ದೊಡ್ಡಪ್ಪ" ಅಥವಾ 'ರಾಗಿ ಕಲ್ಲು ಬೀಸುವವರೆಗೆ ಮಾತ್ರ ನೆಂಟರಿಷ್ಟರು' ಎಂಬಂತಹ ಮಾತುಗಳಾಗಲೀ ಇದಕ್ಕೆ ಪೂರಕವಾಗಿ ನಿಲ್ಲುತ್ತವೆ. ಇವುಗಳ ಮುಂದೆ ಉಳಿದದ್ದೆಲ್ಲವೂ ಗಾಳಿಗೆ ತೂರಿ ಹೋಗುತ್ತವೆ. ಯಾವುದೊಂದು ಗಣನೆಗೆ ಬರುವುದಿಲ್ಲ. ಅದಕ್ಕೆ ಇಲ್ಲಿ ಬರುವ ದಡ್ಡನ ತಾಯಿಯೇ ಸಾಕ್ಷಿ. ಇಲ್ಲಿ ಅಪರೂಪಕ್ಕೆಂಬಂತೆ ಜನಪದ ಕಥೆಯಲ್ಲಿಯೂ ಅಸತ್ಯಕ್ಕೆ ಅಧರ್ಮಕ್ಕೆ ಗೆಲುವು ಸಿಗುತ್ತದೆ ನಿಜ. ಆದರೆ ಕೋತಿಯಂತಹ ಮೂಕ ಪ್ರಾಣಿಯ ಮುಂದೆ ಮಾನವ ತಲೆ ಬಗ್ಗಿಸುವಷ್ಟು ಕೀಳು ಪ್ರಾಣಿಯಾಗಿ ತೋರುತ್ತಾನೆ. ಆ ಮೂಲಕ ಕತೆಗಾರ ಅದಕ್ಕೊಂದು ಅದ್ಭುತ ಮೆರಗನ್ನು ತಂದು ಕೊಟ್ಟಿದ್ದಾನೆ.

ಮನಶ್ಶಾಸ್ತ್ರೀಯ ದೃಷ್ಟಿಯಿಂದ ಇಂತಹ ಕತೆಗಳನ್ನು ವಿಶ್ಲೇಷಿಸಿ ನೋಡಿದಾಗ ಮಾನವ

ಸ್ವಭಾವಗಳು ಏನೆಂಬುದು ಅರ್ಥವಾಗುತ್ತದೆ. ವಿವಿಧ ಸಂದರ್ಭಗಳಲ್ಲಿ ಅದು ವರ್ತಿಸುವ ಬಗೆ ಯಾವ ರೀತಿಯದೆಂಬುದು ವೇದ್ಯವಾಗುತ್ತದೆ.

೫

ಜನಪದ ಕಥೆಗಳಲ್ಲಿ ಹೊರ ಹೊಮ್ಮುವ ಅನೇಕ ಸಂಗತಿಗಳು ಮಾನವನ ಸುಪ್ತ ಬಯಕೆಯ ಅಭಿವ್ಯಕ್ತಿ. ಕನಸಿನ ಲೋಕದಿಂದ ಘಟಿಸಿದುವುಗಳು. ಕತೆಗಳಲ್ಲಿ ಹೊರ ಬರುವ ಅನೇಕ ವಿಚಿತ್ರ, ಅವಾಸ್ತವಿಕ, ಭವ್ಯಾದ್ಭುತ ರಮ್ಯ ಕಲ್ಪನಾ ಪ್ರಪಂಚ, ಮಾನವ ತನ್ನ ನಿಜ ಜೀವನದಲ್ಲಿ ಎಟುಕಿಸಿ ಕೊಳ್ಳಲಾಗದ, ಅಥವಾ ಕಾಣಲಾಗದುದರ ಫಲ. ಪ್ರಾಣಿ ಪಕ್ಷಿಗಳು ಮಾತನಾಡುವುದಾಗಲಿ, ಮನುಷ್ಯರಂತೆ ವರ್ತಿಸುವುದಾಗಲಿ, ಅತಿಮಾನುಷ, ಅಲೌಕಿಕ ಶಕ್ತಿಗಳು ಸೃಷ್ಟಿಸುವ ಕಲ್ಪನಾ ಪ್ರಪಂಚವಾಗಲಿ - ಇವೆಲ್ಲವೂ ವಾಸ್ತವಿಕ ಜೀವನದೊಂದಿಗೆ ಸರಿಸಮನಾಗಿ ವ್ಯವಹರಿಸುವುದನ್ನು ಇಲ್ಲಿ ಮೇಲಿಂದ ಮೇಲೆ ಕಾಣುತ್ತೇವೆ. ಕಿನ್ನರ ಯಕ್ಷಿಣಿ - ಮಾಟಗಾರ್ತಿ ಮುಂತಾದವರು ಅದ್ಭುತ ಲೋಕವನ್ನೇ ಸೃಷ್ಟಿಸಿ ನಮ್ಮನ್ನು ರೋಮಾಂಚನಗೊಳಿಸುತ್ತಾರೆ. ಆ ಚೌಕಟ್ಟಿನಲ್ಲಿ ಅವೆಲ್ಲವೂ ಸಹಜ ಸುಂದರ. ಮನುಷ್ಯ ಭಾವನಾ ಜೀವಿ. ಅವನ ಆಸೆ ಆಕಾಂಕ್ಷೆಗಳಿಗೆ ಗಡಿ ಯೆಂಬುದು ಕಾಣುವುದಿಲ್ಲ. ತನ್ನ ಕನಸಿನ ಲೋಕದಲ್ಲಿ ಅವನು ಸೃಷ್ಟಿಸಿಕೊಳ್ಳುವ ಅನೇಕ ಸಂಗತಿಗಳು ಕಲ್ಪನಾ ಲೋಕದಲ್ಲಿ ನಿರ್ಮಿಸಿಕೊಂಡ ಹಲವು ಅದ್ಭುತಗಳು. ಅವನ ಅಪೇಕ್ಷೆಯನ್ನು ಬಹಿರಂಗಪಡಿಸುತ್ತವೆ. ಅವೆಲ್ಲವೂ ಅವನ ಶ್ರೀಮಂತ ಭಾವನೆಯ ಅಭಿವ್ಯಕ್ತಿ. ಅವೆಲ್ಲವೂ ವಾಸ್ತವಿಕ ಬದುಕಿನಲ್ಲಿ ಅಸಾಧ್ಯವೆಂಬುದು ಸ್ಪಷ್ಟವಾದರೂ, ಆ ಪ್ರಪಂಚದಲ್ಲಿ ನಾವೂ ಮೈ ಮರೆಯುತ್ತೇವೆ. ಒಂದು ಬಗೆಯ ಹಿತವನ್ನು ಪಡೆದ ಅನುಭವ ಆಗುತ್ತದೆ. ಹಾಗಾದರೆ ಎಷ್ಟು ಚೆನ್ನ ! ಎಂಬ ಭಾವನೆಯೇ ಹಾದು ಹೋಗುತ್ತದೆ. ಇಂತಹವುಗಳ ಬಗೆಗೆ ಯಾವ ಶಾಸ್ತ್ರದವರು ಏನೇ ವಿವರಣೆ ಕೊಡಲಿ, ಅವೆಲ್ಲವೂ ಮಾನವನ ಮನಸ್ಸಿನ ಕನಸಿನ ಲೋಕದ ಕೂಸುಗಳು ಎಂಬುದನ್ನು ತಳ್ಳಿ ಹಾಕುವಂತಿಲ್ಲ. ಒಂದು ರೀತಿಯಲ್ಲಿ ಜನಪದ ಕಥೆಗಳ ಜೀವಾಳವೂ ಅದೇ ಎನ್ನಬಹುದು.

ಹೆಣ್ಣೊಬ್ಬಳು ನೂರು ಗಂಡು ಮಕ್ಕಳನ್ನು ಹೆತ್ತು, ಅವರಿಗೆ ಬುದ್ಧಿ ಹೇಳುವ ಒಂದು ಹೆಣ್ಣನ್ನು ಹಡೆಯುವುದು ; "ನಿನಗೆ ಈ ಮಳೆಯಲ್ಲಿ ಯಾವ ಊಟ ಚೆಂದ" ಎಂದು ಕೇಳಿದಾಗ, ನನಗೆ ಯಾವ ಊಟವೂ ಇಷ್ಟವಿಲ್ಲ ; ರತ್ನದ ಸೀರೆ, ಅಪರಂಜಿ ಜಾಕೇಟು ತೊಟ್ಟು, ಸಭೆಯಲ್ಲಿ ಚಿಕ್ಕ ನಾಗೇಂದ್ರ - ದೊಡ್ಡ ನಾಗೇಂದ್ರ ಎಂಬ ಇಬ್ಬರು ಮಕ್ಕಳನ್ನು ಹಿಂದೆ ಬಿಟ್ಟುಕೊಂಡು, ಊಟಕ್ಕೆ ತುಪ್ಪ ಬಡಿಸಿಕೊಂಡು ಹೋಗುವುದು ಚೆಂದ" ಎಂಬುದಾಗಲಿ, ಒಮ್ಮೆ ಹಾಸಿಗೆಯಲ್ಲಿ ಮಲಗಿ ಎದ್ದಾಗ ಹಾಸಿಗೆಯ ಅಡಿಯಲ್ಲಿ ಏಳು ಸಾವಿರ ಹಣವಿರುವುದಾಗಲಿ, ಇಂದ್ರ ಮಂಚದ ಮೇಲೆ ಮಲಗಿದ್ದಾಗ ಇಂದ್ರನ ಮಗಳು ಎಲೆ ಮಡಿಸಿಕೊಡುವುದು, ವಾಯುವಿನ ಮಗಳು ಗಾಳಿ ಬೀಸುವುದು, ಅಗ್ನಿಯ ಮಗಳು ಕಾಲನ್ನು ಇಸುಕುವುದು ಯಾರಿಗೆ ಬೇಡ ; ಏಳು ಮಲ್ಲಿಗೆ ಹೂವಿನ ತೂಕದ ರಾಜಕುಮಾರಿಯಾಗಲಿ ಇವೆಲ್ಲ ಮನುಷ್ಯನ ಸುಪ್ತ ಭಾವನೆಗಳ ವ್ಯಕ್ತ ರೂಪಗಳು. ಬೇರೊಬ್ಬರಿಗೆ ಆರೋಪಿಸಿ ಹೇಳುವುದರ ಮೂಲಕ ಅಥವಾ ಬೇರೊಂದು ಮಾಧ್ಯಮದ ಮೂಲಕ ಅಂತಹುದನ್ನು ಹೊರಹಾಕಿ ತನ್ನ ಮನಸ್ಸನ್ನು ಹಗುರಗೊಳಿಸಿ ಕೊಳ್ಳುವ ಒಂದು ಮಾರ್ಗವಾಗಿ ಕಂಡು ಬರುತ್ತದೆ.

ಇದರಂತೆಯೇ ಅತಿಮಾನುಷ ವ್ಯಕ್ತಿ ಹಾಗೂ ಅಪೌರುಷೇಯ ಶಕ್ತಿಗಳ ಬಗೆಗಿನ ಅವರ ವರ್ಣನೆಗಳು ಜನಪದರ ಅದ್ಭುತ ಕಲಾವಂತಿಕೆಗೆ ಸಾಕ್ಷಿ. ಅವರಲ್ಲಿ ಕಾಣುವ ಅವರ ಕಲ್ಪನಾ ವೈಭವ ಅದ್ಭುತವಾದುದು.

(ಇಂದ್ರನ ಮಗಳು - ಪು. 24)

"ರಾಕ್ಷಸ ಇನ್ನೊಂದು ಕೋಣೆಗೆ ಹೋಗಿ ಏಳು ಕೊಪ್ಪರಿಗೆ ಅನ್ನ, ಆರು ಕೊಪ್ಪರಿಗೆ ಸಾರು, ಹತ್ತು ಕೊಪ್ಪರಿಗೆ ಮಾಂಸ ಎಲ್ಲಾ ತಿಂದು ಭೂಮಿನೇ ನಡ್ಗಂಗೆ ಒಂದು ಸಲ ತೇಗಿ ಹೊರಟು ಹೋಗ್ತನೆ".

"ನೋಡು ಅಲ್ಲೊಂದು ಆಲದ ಮರ, ಆ ಆಲದ ಮರದ ಬೇರುಗಳನ್ನೆಲ್ಲ ಆಗೆದರೆ ಏಳು ಕೋಟಿ ರಾಕ್ಷಸರು, ಅವರನ್ನೆಲ್ಲ ಗೆದ್ದು ಹೋದರೆ ಹುಲಿ, ಸಿಂಹ, ಹಾವು ಮುತ್ತಿಕೊಳ್ತವೆ. ಅವನ್ನೆಲ್ಲಾ ಗೆದ್ದು ಹೋದರೆ ಅಲ್ಲೊಂದು ಕೊಣ (ಕೊಳ), ಆ ಕೊಣದ ತಳದಲ್ಲಿ ಒಂದು ಚಿನ್ನದ ಪೆಟ್ಟಿಗೆ, ಆ ಪೆಟ್ಟಿಗೆಯೊಳಗೆ ಒಂದು ಬಂಗಾರದ ಭರಣಿ, ಅದರೊಳಗೆ ಒಂದು ದುಂಬಿ. ಅದೇ ನನ್ನ ಜೀವ".

(ಇಂದ್ರನ ಮಗಳು - ಪು. 25)

* * * * *

೬

ಜನಪದ ಕಥೆಗಳಲ್ಲಿ ಬರುತ ಕೆಲವೊಂದು ಪ್ರಸಂಗಗಳು ಬೇರೊಂದು ಕಥಾ ಸಂದರ್ಭದ ಪ್ರಭಾವವೇನೋ ಎಂಬಂತೆ ಕಂಡು ಬರುವುದೂ ಉಂಟು. ಎಲ್ಲಿಯೋ ಕೇಳಿದ ಘಟನೆಗಳು ಅವರು ಸೃಷ್ಟಿಸಿದ ಕಥಾ ಸಂದರ್ಭದಲ್ಲಿ ಸೇರಿಕೊಂಡಂತೆ ಅನ್ನಿಸಿದರೂ ಅವು ಅಲ್ಲಿ ಕೃತಕವಾಗಿಯೇನೂ ತೋರುವುದಿಲ್ಲ. ಅಂತಹವುಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಕತೆಗಾರರ ಕೌಶಲ ಅಲ್ಲಿ ಎದ್ದು ಕಾಣುತ್ತದೆ. ಇಲ್ಲಿನ "ಇಂದ್ರನ ಮಗಳು" ಕತೆಯಲ್ಲಿ ಬರುವ ಒಂದೆರಡು ಪ್ರಸಂಗಗಳು ಮಹಾಭಾರತದ ಘಟನೆಗಳನ್ನು ನೆನಪಿಸುತ್ತವೆ :

"ಇಂಗೇ ಇರ್‍ಬೇಕಾಗ ಆ ಊರಲ್ಲಿ ಒಬ್ಬ ರಾಕ್ಷಸ ಇರ್‍ತನೆ. ಅವನಿಗೆ ಪ್ರತಿದಿನವೂ ತಪ್ಪದೆ ಒಂದು ಹಂಡೆ ಅನ್ನ, ಒಂದು ಹಂಡೆ ಸಾರು, ಒಂದು ಹಂಡೆ ಪಾಯ್ಸ, ಒಂದು ಹಂಡೆ ಮಜ್ಗೆ, ಒಂದು ಜೊತೆ ಎತ್ತು ಹಾಗೂ ಒಬ್ಬ ಮನುಷ್ಯನನ್ನು ಆಹಾರವಾಗಿ ಕೊಡ್ಬೇಕಾಗಿರುತ್ತೆ. ಒಂದಿನ ತಪ್ಪಿದ್ರೂ ಆ ರಾಕ್ಷಸ ಊರಿಗೆ ಊರನ್ನೇ ಕಬಳಿಸಿ ಬಿಡ್ತೀನಿ ಅಂತ ಹೆದರಸುತಿರ್‍ತನೆ. ಆ ಊರಿನ ರಾಜನೂ ಆ ರಾಕ್ಷಸನನ್ನು ಕೊಂದೋರಿಗೆ ನಾಲ್ಕು ಮಂದಿ ರಾಜಕುಮಾರಿಯರನ್ನು ಕೊಟ್ಟು ಮದ್ವೆ ಮಾಡ್ತೀನಿ ಅಂತ ಡಂಗೂರ ಹೊಡಿಸಿರ್‍ತನೆ. ಆ ರಾಜನ ಹಿರಿಯ ಮಗಳು ಏಳು ಅಂತಸ್ತಿನ ಉಪ್ಪರಿಗೆ ಮೇಲೆ ನಿಂತ್ಕಂಡು ಯಾರು ಕೊಲ್ತರೆ ಅಂತ ದಿನಾ ನೋಡ್ತಾ ಇರ್‍ತಳೆ. ಆ ದಿನ ವಜ್ರದ ವ್ಯಾಪಾರಿ ಮನೆ ಸರದಿ ಬಂದಿರುತ್ತೆ. ಅವನಿಗೊಬ್ಬನೇ ಮಗ. ಅದೂ ಅವನಿಗೆ ನಾಳೆ ಮದುವೆ ಬೇರೆ ಇರುತ್ತೆ. ಆಗ ಇವ್ನೇನ್ ಮಾಡ್ತನೆ, ಬಂಡಿಗೆ ಎಲ್ಲಾ ತುಂಬಿ ತನ್ನ ಮನೇಲಿದ್ದ ರಾಜನ ಮಗನನ್ನೇ ರಾಕ್ಷಸನ ಹತ್ರಕ್ಕೆ ಊಟ ಕೊಟ್ಟು ಬಾ ಅಂತ ಹೇಳಿ ಕಳಿಸಿಬಿಡ್ತನೆ. ಇವನು ಹೋಗಿ ರಾಕ್ಷಸನನ್ನು ಕೊಂದು ಮನೆಗೆ ಬರ್‍ತನೆ. ಆಗ ವಜ್ರದ ವ್ಯಾಪಾರಿ ನನ್ನ ಮಗ ರಾಕ್ಷಸನನ್ನು ಕೊಂದ ಅಂತ ರಾಜನ ಬಳಿ ಹೋಗಿ ಸುಳ್ಳೇಳ್ತನೆ. ರಾಜ ನಾಲ್ಕು ಮಂದಿ ಹೆಣ್ಣು ಮಕ್ಕಳನ್ನು ಕರೆದು ವಜ್ರದ ವ್ಯಾಪಾರಿ ಮಗನನ್ನು ಮದುವೆ ಮಾಡಿಕೊಳ್ಳುವಂತೆ ಹೇಳ್ತನೆ. ಆಗ ಹಿರಿ ಮಗಳು "ರಾಕ್ಷಸನನ್ನು ಕೊಂದವನು ಇವನಲ್ಲ, ಇವನು ಸುಳ್ಳು ಹೇಳ್ತಿದಾನೆ" ಅಂತ ತಿಳಿಸಿದಾಗ, ವಿಚಾರಣೆ ಮಾಡಿ, ಅವನನ್ನು ಗಲ್ಲಿಗೆ ಹಾಕುಸ್ತಾನೆ. ಇವನ ಮನೇಲಿದ್ದ ರಾಜನ ಮಗನನ್ನು ಕರೆಸಿ ಅವನಿಗೆ ತನ್ನ ನಾಲ್ಕು ಮಂದಿ ಹೆಣ್ಣು ಮಕ್ಕಳನ್ನು ಕೊಟ್ಟು ಮದ್ವೆ ಮಾಡ್ತಾನೆ........".

ಈ ಘಟನೆ ಆಮದಾಗಿ ಬಂದುದಾಗಿರಲಿ ಅಥವಾ ಜನಪದರ ಸೃಷ್ಟಿಯೇ ಆಗಿರಲಿ ಆ ಒಂದು ಕಥೆ ಸಂದರ್ಭಕ್ಕೆ ಸೊಗಸಾಗಿ ಹೊಂದಿಕೊಂಡಿದೆ. ಅದು ತಂದು ಜೋಡಿಸಿದಂತೆ ಎಂದು ಅನಿಸುವುದಿಲ್ಲ. ಕಥಾ ಸಂದರ್ಭದಲ್ಲಿಯೇ ಸಹಜವಾಗಿ ಅರಳಿದ ಕುಸುಮದಂತೆ ಶೋಭಿಸುತ್ತದೆ.

ಹಾಗೆಯೇ "ಶ್ರೀಕೃಷ್ಣ ಪಾರಿಜಾತ"ದ ಕತೆಯನ್ನು ನೆನಪಿಸುವ ಘಟನೆಯೊಂದು ಇದೇ ಕತೆಯಲ್ಲಿ ಸೇರಿಕೊಂಡಿದೆ. "ಒಂದ್ಸಾರಿ ರಾಜಕುಮಾರ ಅಡ್ಡಾಡಿಕೊಂಡು ಬರನ ಅಂತ ಊರಾಚೆ ಹೋಗ್ತನೆ. ಅಲ್ಲಿ ಒಂದು ಮರದಲ್ಲಿ ಒಂದೇ ಒಂದು ಪಾದ್ರಿ ಹೂ ಬಿಟ್ಟಿರುತ್ತೆ. ಅದನ್ನು ಕಿತ್ಕಂಡು ಮನೆಗೆ ಬರ್ತನೆ. ಮನೆಗೆ ಬಂದ್ರೆ ನಾಲ್ಕು ಜನ ರಾಜಕುಮಾರಿಯರು "ನನಗೆ ನನಗೆ" ಅಂತ ಕಿತ್ತಾಡ್ತರೆ. ಇಂದ್ರನ ಮಗಳು ಮಾತ್ರ ಸುಮ್ನಿರ್ತಳೆ. ಆಗ ರಾಜಕುಮಾರ ಪಾದ್ರಿ ಹೂವನ್ನ ಇಂದ್ರನ ಮಗಳಿಗೆ ಕೊಟ್ಬಿಡ್ತನೆ. ಉಳ್ದೋರಿಗೆ ಸಿಟ್ಟು ಬರುತ್ತೆ. ಆಗ ಇಂದ್ರನ ಮಗಳು ರಾಜಕುಮಾರನಿಗೆ "ನನ್ನ ತಂಗಿಯೊಬ್ಬಳು ಆನೆಯ ಹೊಟ್ಟೆಯಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದಾಳೆ. ಅವಳಿಗೆ ದಿನಾಲೂ ಶಿವ ಊಟ ಕಳಿಸ್ತಿರ್ತನೆ. ಅವಳ ಹೆಸರು ಪಾದ್ರಿಸುಗ್ಗಿ ಅಂತ. ಅವಳು ನಕ್ಕರೆ ಪಾದ್ರಿ ಹೂ ಸುರಿಯುತ್ತೆ" ಅಂತ ಹೇಳ್ತಳೆ.

ಪೌರಾಣಿಕ ಘಟನೆಗಳೂ ಜನಪದ ಕತೆಗಳಲ್ಲಿ ಹೇಗೆ ಸ್ಥಾನ ಪಡೆದಿವೆ ಎಂಬುದಾಗಲಿ ಅಥವಾ ಪೌರಾಣಿಕ ಘಟನೆಗಳನ್ನು ಹೋಲುವ ಘಟನೆಗಳು ಇಲ್ಲಿ ಹೇಗೆ ಹುಟ್ಟಿಕೊಂಡು ಸೊಗಸಾಗಿ ನಿರೂಪಿತವಾಗಿವೆ - ಎಂಬುದನ್ನು ಗಮನಿಸುವಾಗ ಕತೆಗಾರನ ಕಥಾ ಕೌಶಲ ತಂತ್ರ ಮೆಚ್ಚುಗೆ ಗಳಿಸುತ್ತದೆ. ಅಲ್ಲಿ ಕೃಷ್ಣ, ಪಾರಿಜಾತದ ಮರವನ್ನೇ ತಂದು ನೆಟ್ಟರೆ, ಜನಪದ ಕಥೆಯಲ್ಲಿ ರಾಜಕುಮಾರ ನಕ್ಕರೆ ಪಾದ್ರಿ ಹೂ ಉದುರುವ ಹೆಣ್ಣನ್ನೇ ತರುತ್ತಾನೆ. ಜನಪದ ಕಥಾ ಚೌಕಟ್ಟಿನಲ್ಲಿ ಬರುವ ಸ್ವಾಭಾವಿಕವಾದ ಅಂಶಗಳು ಅಷ್ಟೇ ಸಹಜವಾಗಿ ಅಲ್ಲಿ ಬಿಚ್ಚಿಕೊಳ್ಳುತ್ತವೆ. ಇದು ದೇವಲೋಕದ ಪಾರಿಜಾತದ ಹೂವಲ್ಲ, ಭೂಲೋಕದ ಪಾದ್ರಿ ಹೂ; ಆದರೆ ಇಲ್ಲಿಯ ಕಥಾನಾಯಕ ಆ ಮೂಲಕ ಸಾಧಿಸುವುದು ಅದಕ್ಕಿಂತ ಹೆಚ್ಚಿನದು - ನಕ್ಕರೆ ಪಾದ್ರಿ ಹೂ ಸುರಿಯುವ ಹೆಣ್ಣನ್ನೇ ತರುತ್ತಾನೆ. ಜನಪದ ಸೃಷ್ಟಿ ಈ ಬಗೆಯದು.

ಜನಪದ ಸಾಹಿತ್ಯ ಅಥವಾ ಸಂಸ್ಕೃತಿ ಎಂದಾಕ್ಷಣ ಅಲ್ಲಿ ಎಲ್ಲವೂ ಪವಿತ್ರ ಅಪವಿತ್ರತೆಯ ಸೋಂಕೇ ಇಲ್ಲ ಎಂದು ಭಾವಿಸಬೇಕಾಗಿಲ್ಲ. ಮಾನವನ ಮೂಲಭೂತ ಸ್ವಭಾವಗಳು, ಗುಣಗಳು, ಆಶಯಗಳು ಎಲ್ಲಾ ಕಡೆಯೂ ಇದ್ದೇ ಇರುತ್ತವೆ. ಎಷ್ಟೇ ಅವನ್ನು ಅದುಮಿಟ್ಟರೂ ಒಂದಲ್ಲ ಒಂದು ಸಂದರ್ಭದಲ್ಲಿ ಸಿಡಿದು ಹೊರ ಹೊಮ್ಮುತ್ತವೆ. ಅವುಗಳಲ್ಲಿ ಲೈಂಗಿಕ ವಿಷಯವೂ ಒಂದು. ಆ ಹಿನ್ನೆಲೆಯಲ್ಲಿ ಉಂಟಾದ ಗಂಡು ಹೆಣ್ಣಿನ ಸಂಬಂಧದ ಬಗೆ ಹಲವು. ಪ್ರೇಮದ ಅಥವಾ ಕಾಮದ ನಾನಾ ರೂಪಗಳನ್ನು ಅಲ್ಲಿ ಕಾಣುತ್ತೇವೆ. ಕೆಲವೊಮ್ಮೆ ಅಸಹ್ಯ ಹುಟ್ಟಿಸಬಹುದಾದ ಕಾಮದ ವಿವಿಧ ಸ್ವರೂಪಗಳ ವರ್ಣನೆ ಜನಪದ ಕಥೆಗಳಲ್ಲಿ ಬಂದಿರುವುದೂ ಉಂಟು. ಆದರೆ ಈ ಬಗೆಯ ಸಾಹಿತ್ಯ ಬಹುಮಟ್ಟಿಗೆ ಅಲ್ಲಿಯೇ ಹುಟ್ಟಿ ಅಲ್ಲಿಯೇ ಸಾಯುವಂತಹುದು ಅಥವಾ ಯಾವುದೋ ಒಂದು ಮಟ್ಟದಲ್ಲಿ ವಲಯದಲ್ಲಿ ಸುತ್ತಾಡುವಂತಹುದು. ಆ ವಿಷಯಕ್ಕೆ ಸಂಬಂಧಿಸಿದ ಸ್ವತಂತ್ರ ಕತೆಗಳು ಹುಟ್ಟಿಕೊಂಡಿದ್ದರೂ, ಅವು ಹೆಚ್ಚು ಬೆಳಕಿಗೆ ಬರುವುದಿಲ್ಲ.

ಲೈಂಗಿಕ ವಿಷಯಗಳು ಮಾನವನ ಮೂಲಭೂತ ಹಾಗೂ ನೈಜ ಭಾವನೆಗಳು. ಅವುಗಳನ್ನು ಅಭಿವ್ಯಕ್ತಿಸುವಲ್ಲಿ ಸಂಕೋಚವೇ ಮೊದಲಾದುವು ಅಡ್ಡಿಯಾಗುವುದುಂಟು. ಆದರೂ ಅದರ

ಹಿನ್ನೆಲೆಯಲ್ಲಿ ನಡೆಯುವ ಬಹುತೇಕ ಘಟನೆಗಳು ವಿಚಿತ್ರವಾಗಿಯಷ್ಟೇ ಅಲ್ಲ ಅತ್ಯಂತ ಕ್ರೂರವಾಗಿಯೂ ಗೋಚರಿಸುತ್ತವೆ. ಗಂಡ ದಂಡಿಗೆ ಹೋದಾಗ ಪರಪುರುಷನೊಡನೆ ಸರಸವಾಡುವ ಹೆಣ್ಣು, ಅದಕ್ಕೆ ಅಡ್ಡಿಯಾದ ಮಗನನ್ನು ಕೊಂದು ಗಂಡನಿಗೆ ಸುಳ್ಳು ಹೇಳುವಷ್ಟು ನೀಚಳಾಗುವುದು ತನ್ನ ಲೈಂಗಿಕ - ವ್ಯವಹಾರವನ್ನು ಸುಗಮವಾಗಿ ನಡೆಸಲು ಕೈ ಹಿಡಿದ ಗಂಡನ ಕಣ್ಣು ಹೋಗಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುವುದು ಮುಂತಾದ ಘಟನೆಗಳು ಸಾಮಾನ್ಯ. ಬಹುವಾಗಿ ವಾಸ್ತವಿಕ 'ಘಟನೆಗಳೇ ಇವಕ್ಕೆ ಪ್ರೇರಕವಾಗಿರುತ್ತವೆ. ಇಂತಹ ಕಡೆಗಳಲ್ಲಿ ಪ್ರೇಮಕ್ಕಿಂತ ಕಾಮವೇ ಪ್ರಧಾನ ಪಾತ್ರ ವಹಿಸಿದಂತೆ ಕಂಡು ಬರುತ್ತದೆ.

"ಪ್ರೇಮಕ್ಕೆ ಕಣ್ಣಿಲ್ಲ" ಎಂಬುದಕ್ಕೆ ಜನಪದ ಕಥೆಗಳಲ್ಲಿಯೂ ನಿದರ್ಶನಗಳಿವೆ. ಈ ಸಂಕಲನದಲ್ಲಿ ಬರುವ ರಾಜನ ಮಗ ಮಂತ್ರಿ ಮಗ ಕತೆ ಜನ್ನನ ಯಶೋಧರ ಚರಿತ್ರೆಯ ಅಮೃತಮತಿ ಪ್ರಸಂಗವನ್ನು ನೆನಪಿಸುತ್ತದೆ. ರಾಜನ ಮಗ ಮಂತ್ರಿಯ ಮಗ ಇಬ್ಬರೂ ಬಾಲ್ಯದ ಸ್ನೇಹಿತರು, ಗಂಡು ಬೇರುಂಡ ಹೆಣ್ಣು ಬೇರುಂಡ ಮಾತನಾಡಿಕೊಳ್ಳುತ್ತಿದ್ದುದರ ಮೇರೆಗೆ ಮಂತ್ರಿಯ ಮಗ, ರಾಜನ ಹೆಂಡತಿಯ ಬಗೆಗೆ ಅನುಮಾನ ಬಂದು ಅವಳಿಗೆ ತಿಳಿಯದಂತೆ ಅವಳ ಬೆನ್ನು ಹತ್ತುತ್ತಾನೆ. ಅವನಿಗೆ ವಿಚಿತ್ರ ಕಾದಿರುತ್ತದೆ - "ರಾಜಕುಮಾರನ ಹೆಂಡ್ತಿ ಅಲ್ಲಿಗೆ ಬರ್‍ತಳೆ. ರಾಜಕುಮಾರ ಮಲಗಿರುವುದನ್ನು ನೋಡಿ ಅಲ್ಲಿ ಸಾಲಾಗಿ ಇಟ್ಟಿರುವ ತಿಂಡಿಗಳನ್ನೆಲ್ಲ ಒಂದು ಬುಟ್ಟಿಗೆ ತುಂಬಿ ಕೊಳ್ತಳೆ. ಬಾಗಿಲನ್ನು ಮುಂದಕ್ಕೆ ಬಿಟ್ಟು ಅಲ್ಲಿಂದ ಹೊರಡ್ತಳೆ. ಅಷ್ಟು ಹೊತ್ತಿಗಾಗಲೇ ಹನ್ನೆರಡು ಗಂಟೆ ಆಗಿರುತ್ತೆ. ಮಂತ್ರಿ ಮಗನೂ ಇವಳು ಹೋದ ದಾರೀಲಿ ಹಿಂದೆ ಹೋಗ್ತನೆ. ಅವಳು ಸೀದಾ ಒಬ್ಬನ ಬಳಿ ಹೋಗಿ ಅವನಿಗೆ ಆ ತಿಂಡಿನೆಲ್ಲಾ ಕೊಡ್ತಳೆ. ಅವನಿಗೆ ಕೈ ಕಾಲು ಎರಡೂ ಇರುವುದಿಲ್ಲ. ಅವನು ಕೋಪದಿಂದ "ಇಷ್ಟು ಹೊತ್ತಿನ ತನ್ಕ ಏನ್ ಮಾಡ್ತಿದ್ದೆ" ಅಂತ ರೇಗ್ತನೆ. ಅದಕ್ಕೆ ಅವಳು "ನನ್ನ ಗಂಡ ಬಂದವ್ನೆ ಅದ್ಕೆ ತಡವಾಯ್ತು" ಅಂತ ಹೇಳ್ತಳೆ. ಇವತ್ತೊ, ನಾಳೆನೋ ನನ್ನ ಕರ್ಕೊಂಡೋಗಕೆ ಬಂದವ್ರೆ" ಅಂತ ಹೇಳ್ತಳೆ. ಅದಕ್ಕೆ ಅವನು "ನನ್ನನ್ನು ಬಿಟ್ಟು ಅವನ ಜೊತೆ ಹೋಗ್ತೀಯ" ಅಂತ ಮೊಂಡು ಕೈಲಿ ಗುದ್ದುತ್ತಾನೆ. ಅದಕ್ಕೆ ಅವಳು "ನಾನು ಏನು ಮಾಡಲಿ ಹೇಳು ನೀನು ಹೇಳಿದಂಗೆ ಕೇಳ್ತೀನಿ" ಅಂತ ಹೇಳ್ತಳೆ. ಆಗ ಅವನು ಅವಳ ಕೈಗೆ ಒಂದು ಮಚ್ಚುಗತ್ತಿಯನ್ನು ಕೊಡ್ತನೆ. "ಇದ್ರಿಂದ ಅವನ ತಲೇನ ಮಲಗಿದ್ದಾಗ ಕತ್ರಿಸಿಬಿಡು, ಆಮೇಲೆ ನಾವಿಬ್ಬರೂ ಸುಖವಾಗಿ ಇರಬಹುದು" ಅಂತ ಹೇಳ್ತನೆ. "ಹಂಗೇ ಆಗ್ಲಿ" ಅಂತ ಒಪ್ಕಂತಳೆ. ಮಚ್ಚುಗತ್ತೀನೂ ತಗಂಡು ಮನೆಗೆ ಬರ್‍ತಳೆ". (ರಾಜನ ಮಗ - ಮಂತ್ರಿ ಮಗ. ಪು. ೮೩)

ಈ ಕತೆಯ ಉಳಿದ ಭಾಗ ಇತರ ಜನಪದ ಕಥೆಗಳಂತೆಯೇ ಮುಕ್ತಾಯವನ್ನು ಕಾಣುತ್ತದೆ. ಮಂತ್ರಿಯ ನೆರವಿನಿಂದ ಎಲ್ಲವೂ ಸರಿ ಹೋಗುತ್ತದೆ. ಆದರೆ 'ಅಮೃತಮತಿ'ಯ ಪ್ರಸಂಗದ ಘಟನೆಯನ್ನು ಹೋಲುವ ಘಟನೆಯೊಂದು ಇಲ್ಲಿ ಸೇರಿಕೊಂಡಿರುವುದು ಕುತೂಹಲವನ್ನು ಕೆರಳಿಸುತ್ತದೆ. ಇದು ಕಾಮವಲ್ಲ, ಪ್ರೇಮ. ಮೊಂಡು ಕೈ ಮೊಂಡು ಕಾಲಿನವನನ್ನು ರಾಜಕುಮಾರಿಯೊಬ್ಬಳು ಪ್ರೀತಿಸಿ, ಕೈ ಹಿಡಿದ ರಾಜಕುಮಾರನನ್ನೇ ಕೊಲೆಗೈಯ್ಯುವ ಸಾಹಸ ಮಾಡುವುದು ಪ್ರೀತಿಯ ಪರಾಕಾಷ್ಠತೆಯನ್ನು ತೋರುತ್ತದೆ. ಮನೋ ವಿಶ್ಲೇಷಣಾತ್ಮಕ ಸಿದ್ಧಾಂತದ ಹಿನ್ನೆಲೆಯಲ್ಲಿ ಇವುಗಳನ್ನು ನೋಡುವುದಾದರೆ, ಮಾನವ ಅದುಮಿಟ್ಟ ಲೈಂಗಿಕ ವಿಷಯಗಳೇ ಇಂತಹ ರೂಪಗಳನ್ನು ತಾಳುತ್ತವೆ ಎನ್ನಬಹುದು. ಜನಪದ ಕಥೆಗಳಲ್ಲಿ ಅಸಂಗತವೆಂದು ಕಂಡು ಬರುವ

ಅನೇಕ ಸಂಗತಿಗಳಿಗೆ ಈ ಲೈಂಗಿಕಾಸಕ್ತಿಯೇ ಕಾರಣವಾಗುತ್ತದೆ. ಫ್ರಾಯ್ಡ್‌ನ ಸಿದ್ಧಾಂತ ಇವುಗಳ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆಯಾದರೂ, ಅದನ್ನು ನಿರ್ದಿಷ್ಟವಾಗಿ ಶೋಧಿಸಲು ಸಿಕ್ಕುವ ಆಕರ ಪೂರ್ಣ ರೂಪದ್ದಲ್ಲ ಅನ್ನಿಸುತ್ತದೆ. ಇಂತಹ ಲೈಂಗಿಕ ವಿಷಯಕ್ಕೆ ಸಂಬಂಧಿಸಿದ ಯಾವುದನ್ನೂ ಯಾರೂ ಪೂರ್ಣವಾಗಿ ಹೇಳುವುದಿಲ್ಲ. ಅವು ಅವರಿಗೂ ಪೂರ್ಣ ರೂಪದಲ್ಲಿ ದೊರೆತಿರುವುದಿಲ್ಲ. ಸಂಕೋಚ ಇದಕ್ಕೆ ಅಡ್ಡಿಯಾಗಿ ನಿಲ್ಲುತ್ತದೆ. ಆ ಬಗೆಯ ಸಾಹಿತ್ಯ ಹೇಳುವವರಾಗಲಿ ಯಾರೂ ಪ್ರಾಮಾಣಿಕವಾಗಿದ್ದಂತೆ ತೋರುವುದಿಲ್ಲ. ಹಾಗಾಗಿಯೇ ಅಂತಹ ಯಾವುದೇ ಘಟನೆಯೊಂದಕ್ಕೆ ಇದ್ದಿರಬಹುದಾದ ನಿರ್ದಿಷ್ಟ ಕಾರಣವನ್ನು, ಹಿನ್ನೆಲೆಯನ್ನು ಹುಡುಕುವುದು ಕಷ್ಟವಾಗುತ್ತದೆ.

"ತೋಳ್ಮೇಲೆ ಮಿಂಡ - ತೊಡೆ ಮೇಲೆ ಗಂಡ" - ಇಂತಹದೇ ವಸ್ತುವನ್ನು ಒಳಗೊಂಡ ಈ ಸಂಕಲನದಲ್ಲಿ ಬರುವ ಕತೆ. ಇಲ್ಲಿ ಮದುವೆಯಾಗುವ ಯುವಕ, ಮದುವೆಗೆ ಮೊದಲೇ ಹೆಣ್ಣುಗಳ ಶೀಲದ ಬಗ್ಗೆಯೇ ಅನುಮಾನ ಇಟ್ಟುಕೊಂಡವನು. ತನ್ನ ತಾಯಿ ಮದುವೆ ಮಾಡಿಕೊಳ್ಳುವಂತೆ ತಿಳಿಸಿದಾಗ, ಅದಕ್ಕೆ ಅವನು ; "ಅಮ್ಮ ಹೊರಗಿನ ಹೆಣ್ಣುಗಳನ್ನ ತಂದು ಮದ್ವೆ ಆದ್ರೆ ಅವರಲ್ಲಿ ಕೆಟ್ಟ ಚಾಳಿಯೆಲ್ಲಾ ಇರುತ್ತೆ. ಅದಕ್ಕೋಸ್ಕರ ನಾನು ಹೇಳ್ದಂಗೆ ಮಾಡೋದಾದ್ರೆ ಮಾತ್ರ ಮದ್ವೆ ಆಗ್ತೀನಿ" ಅಂತನೆ. ತಾಯಿ ಅದಕ್ಕೆ ಒಪ್ಕೊಳ್ತಾಳೆ.

ಆದರೆ ಅದೊಂದು ವಿಚಿತ್ರ ಸೃಷ್ಟಿ. ರೋಮಾಂಚಕವಾದ ಕಲ್ಪನೆ. ಮಗ ತಾಯಿಗೆ : "ಎಣ್ಣೆ ಗಾಣ ಆಡಿಸುವವನ ಬಳಿ ನೀನು ನನ್ನನ್ನು ಕರೆದುಕೊಂಡು ಹೋಗಿ ಆದರ ಮಧ್ಯದಲ್ಲಿ ನಿಲ್ಲಿಸಿ ನನ್ನನ್ನು ಸಮನಾಗಿ ತಲೆಯಿಂದ ಎರಡು ಪಾಲಾಗಿ ಕತ್ತರಿಸು. ಆದರೆ ಕೆಳಗೆ ಒಂದು ತೊಟ್ಟು ರಕ್ತ ಬೀಳದಂಗೆ ನೋಡಬೇಕು. ಎರಡು ಸಮಭಾಗವಾದ ಮೇಲೆ ಒಂದೊಂದು ಭಾಗವನ್ನು ಬೇರೆ ಬೇರೆಯಾಗಿ ಒಂದು ಕುಕ್ಕೆಯಲ್ಲಿ ಕೌಚಿಡು. ಮೂರು ದಿನದ ಮೇಲೆ ಅಲ್ಲಿ ಹೋಗಿ ನೋಡು. ಒಂದರಲ್ಲಿ ಹೆಣ್ಣು ಮಗ, ಮತ್ತೊಂದರಲ್ಲಿ ಗಂಡು ಮಗು ಇರುತ್ತೆ. ಅದನ್ನು ತಂದು ಸಾಕಿ ಅನಂತರ ಮದುವೆ ಮಾಡು" ಎಂದು ಹೇಳ್ತನೆ. ಆಗ ಒಂದು ತೊಟ್ಟು ರಕ್ತ ಅವಳಿಗೆ ಕಾಣದಂತೆ ಚಿಮ್ಮಿ ಹೋಗಿರುತ್ತೆ. ಮೂರು ದಿನ ಬಿಟ್ಟು ಹೋಗಿ ನೋಡಿದಾಗ ಒಂದು ಕುಕ್ಕೆಯಲ್ಲಿ ಹೆಣ್ಣು ಒಂದು ಕುಕ್ಕೆಯಲ್ಲಿ ಗಂಡು ಮಗು ಇರುತ್ತೆ. ದೊಡ್ಡವರಾದ ಮೇಲೆ ಇಬ್ಬರಿಗೂ ಮದುವೆ ಮಾಡುತ್ತಾಳೆ.

ಹೊರಗಿನಿಂದ ಬರುವ ಹೆಣ್ಣು ಹೇಗೋ ಏನೋ ಎಂಬ ಕಾರಣಕ್ಕಾಗಿ ತನ್ನ ಶರೀರದ ಒಂದು ಭಾಗವನ್ನೇ ಹೆಣ್ಣಾಗಿಸಿ ಮದುವೆ ಮಾಡಿಕೊಳ್ಳುತ್ತಾನೆ. ಮೂಲಭೂತವಾಗಿಯೇ ಹೆಣ್ಣಿನ ಶೀಲದ ಬಗೆಗೆ ಅವನಲ್ಲಿ ಶಂಕೆ ಇರುವುದು ಸ್ಪಷ್ಟವಾಗುತ್ತದೆ. ಆದರೆ ಶೀಲದ ಪಾಠವನ್ನಾಗಲಿ, ಪಾತಿವ್ರತ್ಯದ ಪಾಠವನ್ನಾಗಲಿ ಹೇಳಿಕೊಟ್ಟು, ಕಲಿಸುವುದಕ್ಕಾಗುವುದಿಲ್ಲ ಎಂಬುದಕ್ಕೂ ಇಲ್ಲಿ ಸ್ಪಷ್ಟ ಉತ್ತರ ದೊರೆಯುತ್ತದೆ. ಅವನು ಅಷ್ಟೆಲ್ಲ ಮುನ್ನೆಚ್ಚರಿಕೆ ವಹಿಸಿದರೂ ಆಗುವುದನ್ನು ತಡೆಯುವುದಕ್ಕಾಗುವುದಿಲ್ಲ. ಅವನು ಆ ರೀತಿಯ ಅನುಮಾನ ಪಟ್ಟು ಮುನ್ನೆಚ್ಚರಿಕೆ ವಹಿಸಲು ಇರುವ ಕಾರಣವೂ ಸ್ಪಷ್ಟವಾಗಿದೆ. ಅವನ ವೃತ್ತಿ ಅಂತಹುದು - ಹಡಗಿನ ವ್ಯಾಪಾರ. ಒಮ್ಮೆ ಹೋದರೆ ಮತ್ತೆ ಹಿಂತಿರುಗಿ ಬರಲು ಆರು ತಿಂಗಳು ಬೇಕು. ಹಾಗಾಗಿ ಅವನು ಹೆಂಡತಿಯ ಬಗ್ಗೆ ಅನುಮಾನ ಪಡಲು ಕಾರಣ ಅಲ್ಲಿಯೇ ಸ್ಪಷ್ಟವಾಗಿದೆ. ಮನುಷ್ಯನ ನೈಸರ್ಗಿಕ ಒತ್ತಡಗಳ ಬಗೆಗಿನ ಅರಿವು ಅವನಿಗೆ ಚೆನ್ನಾಗಿದ್ದಂತೆ ತೋರುತ್ತದೆ. ಆದರೆ ಅದು ಅವನ ಲೆಕ್ಕಾಚಾರವನ್ನು ಮೀರಿ ಮುಂದುವರೆಯುತ್ತದೆ.

ಗಂಡ ಹಡಗಿನ ವ್ಯಾಪಾರಕ್ಕೆ ಹೊರಡುತ್ತಾನೆ. ಇತ್ತ ಅಂದು ಸಿಡಿದು ಹೋಗಿದ್ದ ಒಂದು ರಕ್ತದ ಕಣ ಸರ್ಪ ರೂಪವನ್ನು ತಾಳಿರುತ್ತದೆ. ಇವನು ಹೋದದ್ದನ್ನು ತಿಳಿದು ಮನುಷ್ಯ ರೂಪವನ್ನು ತಾಳಿ ಇವಳ ಬಳಿಗೆ ಬರುತ್ತದೆ. ಇವಳಿಗೆ ಆಶ್ಚರ್ಯವಾಗುತ್ತದೆ. ಅವಳ ಗಂಡನನ್ನೇ ಹೋಲುತ್ತಿರುತ್ತಾನೆ. ಆದರೆ ಅವನು ತನ್ನ ಸಂಗತಿಯನ್ನು ತಿಳಿಸುತ್ತಾನೆ. ಅವಳಿಗೂ ಇವನ ಮೇಲೆ ಆಸೆಯಾಗುತ್ತದೆ. ಗಂಡ ಬರುವುದು ಇನ್ನೂ ಆರು ತಿಂಗಳು ಎಂಬ ಕಾರಣವೂ ಒಂದು. ಅಲ್ಲಿಯವರೆವಿಗೂ ಇವನ ಜೊತೆ ಸುಖವಾಗಿರಬಹುದೆಂಬ ಇಚ್ಛೆ ಅವಳಲ್ಲಿ ಉಂಟಾಗುತ್ತದೆ. ಆರು ತಿಂಗಳು ಕಳೆಯುತ್ತೆ. ಗಂಡ ಹಿಂತಿರುಗುತ್ತಾನೆ. ಅವನನ್ನು ಕೊಲ್ಲಲು ಯೋಜನೆ ಸಿದ್ಧಪಡಿಸುತ್ತಾರೆ. ಆದರೆ ತಂಗಿಯ ಸಹಾಯದಿಂದ ಬದುಕುಳಿಯುತ್ತಾನೆ. ಆದರೂ ಇವನಿಗೆ ವಿಷಯ ಗೊತ್ತಾಗುವುದಿಲ್ಲ. ಇವನು ಮಂತ್ರಗಪ್ಪೆಯಾಗಿ ಅವಳ ಗಂಡನ ಚಡಾವಿನಲ್ಲಿ ಸೇರಿಕೊಂಡಿರ್‍ತನೆ. ಅದನ್ನು ಹಾಕಿಕೊಳ್ಳುವುದಕ್ಕೆ ಅಂತ ಹೋದಾಗ ತಂಗಿ ಅಣ್ಣನಿಗೆ ಕೊಡವಿ ಹಾಕಿ ಕೊಳ್ಳುವಂತೆ ಎಚ್ಚರಿಸುತ್ತಾಳೆ. ಅದರಿಂದ ಬಿದ್ದ ಮಂಡರಗಪ್ಪೆಯನ್ನು ಕಾಲಿನಿಂದ ತುಳಿದು ಸಾಯಿಸುತ್ತಾನೆ. ಇವಳಿಗೆ ದುಃಖವಾಗುತ್ತದೆ. ಆದರೂ ಬುಡುಬುಡುಕೆಯವನ ಮಂತ್ರದಿಂದ ಅದಕ್ಕೆ ಮತ್ತೆ ಜೀವ ಬರಿಸಿ ತಾಯಿತದಲ್ಲಿ ಸೇರಿಸಿ ತೋಳಿಗೆ ಕಟ್ಟಿಕೊಳ್ಳುತ್ತಾಳೆ. ಮತ್ತೆ ಗಂಡ ಹಿಂತಿರುಗಿದಾಗ "ನಾನು ಒಂದು ಒಗಟು ಹೇಳ್ತಿನಿ ಅದುನ್ನ ಬಿಡಿಸಬೇಕು, ಸೋತ್ರೆ ಪ್ರಾಣ ಕಳ್ಕೊಬೇಕು, ನಾನೂ ನೀವು ಹೇಳಿದ್ದಕ್ಕೆ ಸೋತ್ರೆ ಪ್ರಾಣ ಕಳ್ಕೊತಿನಿ" ಅಂತ ಹೇಳಿ ಒಗಟನ್ನು ಹೇಳ್ತಳೆ".

ಒಂದು ಕಾಸು ಕೊಟ್ಟು ಕರೆಸಿದೆ
ಒಂದು ಕಾಸು ಕೊಟ್ಟು ಸುಟ್ಟೆ
ಒಂದು ಕಾಸು ಕೊಟ್ಟು ಜೀವ ತುಂಬಿಸಿದೆ
ತೋಳ ಮೇಲೆ ಮಿಂಡ
ತೊಡೆ ಮೇಲೆ ಗಂಡ

ಅದನ್ನು ಅಕ್ಕನ ಸಹಾಯದಿಂದ ಬಿಡಿಸಿ ಗೆಲ್ಲುತ್ತಾನೆ. ಮಾತಿನಂತೆ ಅವಳು ಬೆಂಕಿಗೆ ಬಿದ್ದು ಸಾಯ್ತಳೆ, ಜೊತೆಯಲ್ಲಿ ಸರ್ಪವೂ ಅದರಲ್ಲಿ ಬೀಳುತ್ತೆ.

ಅನೈತಿಕ ಲೈಂಗಿಕ ವ್ಯವಹಾರಕ್ಕೆ ಲೈಂಗಿಕ ಅತೃಪ್ತಿಯೇ ಕಾರಣ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಅವನ ವೃತ್ತಿಯ ಕಾರಣದಿಂದಾಗಿ ಮೊದಲೇ ಅವನಲ್ಲಿ ಆ ಅನುಮಾನ ಪ್ರಬಲವಾಗಿ ದೃಢಪಟ್ಟಿರುತ್ತದೆ. ಅವನ ಎಲ್ಲ ಮುನ್ನೆಚ್ಚರಿಕೆಗಳನ್ನು ಮೀರಿ ಶಿಶ್ನದ ಸಂಕೇತವೆಂಬಂತೆ ಸರ್ಪವೂ ಅದರ ಹುಟ್ಟಿನೊಂದಿಗೆ ಜನ್ಮ ತಳೆಯುವುದು, ಹೆಚ್ಚು ಸಾಂಕೇತಿಕವಾಗಿ ಕಂಡು ಬರುತ್ತದೆ. ಸಾಮಾಜಿಕ ಕಟ್ಟುಗಳನ್ನು ಕತ್ತರಿಸಿ ನಿಲ್ಲುವ ಈ ಲೈಂಗಿಕ ವಿಚಾರಗಳು ಅತೃಪ್ತಿಯ ಲೈಂಗಿಕ ಬದುಕಿನ ಹಾಗೂ ವಿಕೃತ ಕಾಮದ ವಿವಿಧ ರೂಪಗಳ ಮೇಲೆ ಬೆಳಕು ಚೆಲ್ಲುತ್ತದೆ. ಮಾನವನ ಮನಸ್ಸಿನ ಭಾವನೆಗಳು ವಿಕೃತರೂಪಗಳೂ ಹೌದು, ಅದುಮಿಟ್ಟ ಅತೃಪ್ತ ಕಾಮನೆಗಳ ಅಭಿವ್ಯಕ್ತ ರೂಪಗಳೂ ಹೌದು.

೮

ಅತಿಮಾನುಷ ಅಂಶಗಳನ್ನು ಒಳಗೊಂಡ ಕತೆಗಳೂ ಈ ಸಂಕಲನದಲ್ಲಿವೆ. ಒಂದು ರೀತಿಯಲ್ಲಿ ಜನಪದ ಕಥೆಗಳ ಜೀವಾಳವೂ ಅದೇ. ಅವುಗಳನ್ನು ಹೆಚ್ಚು ಹೆಚ್ಚು ರಂಜನೀಯ ವಾಗಿಸುವಲ್ಲಿ

ಇವುಗಳ ಪಾತ್ರ ದೊಡ್ಡದು. ಅದರಂತೆಯೇ ಪ್ರಾಣಿ ಕತೆಗಳು, ಹಾಸ್ಯ ಕತೆಗಳು, ಬುದ್ಧಿವಂತಿಕೆಯ ಕತೆಗಳು, ಜಾಣತನ ಪರೀಕ್ಷೆ ಕತೆಗಳು, ಅದೃಷ್ಟ ಪರೀಕ್ಷೆ ಕತೆಗಳು - ಈ ಒಂದೊಂದು ವಿಭಾಗದಲ್ಲಿಯ ಮನುಷ್ಯನ ಮನಸ್ಸಿನ ಮುಖದ ಹಲವು ಭಾವನೆಗಳು ತೆರೆದುಕೊಂಡಿವೆ - 'ಕಿರಿಯನ ಆಸೆ', 'ದೊಡ್ಡದ ಚಿಕ್ಕದ', 'ಅಮರಾವತಿಯ ಅಮರ ಶೇಖರ ರಾಜನ ಕಥೆ', 'ರಾಕ್ಷಸನ ಕಥೆ', 'ಏನಾತಿ ಕಳ್ಳ', 'ಹಣ್ಣು ಹೆಣ್ಣಾದ ಕಥೆ', 'ಕೆಂಚನ ಬುದ್ಧಿವಂತಿಕೆ' ಮುಂತಾದ ಕಥೆಗಳಲ್ಲಿ ಬರುವ ಸನ್ನಿವೇಶಗಳು, ವರ್ಣನೆಗಳು, ಅನುಭವಗಳು ಕತೆಗಾರನ ಸಾಂಸ್ಕೃತಿಕ ಸಂದರ್ಭದ ಕೊಡುಗೆಗಳಾಗಿವೆ. ಈ ಕತೆಗಳಲ್ಲಿ ಬರುವ ಹಲವು ಸಂಗತಿಗಳು ಅಸಂಗತವಾಗಿ ಕಂಡರೂ ಅವೆಲ್ಲವೂ ಅವನ ದಮನಗೊಂಡ ಆಸೆ ಆಕಾಂಕ್ಷೆಗಳ ಹಾಗೂ ಅದುಮಿಟ್ಟ ಭಾವನೆಗಳ ಅಭಿವ್ಯಕ್ತಿಯೆನ್ನಬಹುದು. ಅವರ ಸಾಮಾಜಿಕ ಚೌಕಟ್ಟಿನ ನಂಬಿಕೆಗಳು ಸಂಪ್ರದಾಯಗಳು ಬೇರೆ ಬೇರೆ ಕ್ಷೇತ್ರದ ವಿದ್ವಾಂಸರುಗಳಿಗೆ ಅಧ್ಯಯನ ಸಾಮಗ್ರಿಗಳಾಗಿರುತ್ತವೆ. ಇಲ್ಲಿ ಬರುವ ಸಾಂಸ್ಕೃತಿಕ ಅಂಶಗಳು ಮಾನವ ಶಾಸ್ತ್ರಜ್ಞನಿಗೆ ಸಾಮಗ್ರಿಯಾದರೆ ಅಲ್ಲಿಯ ವ್ಯಕ್ತಿಗಳ ಮನಸ್ಸಿನ ಹಲವು ಭಾವಗಳು ಮನಃಶಾಸ್ತ್ರಜ್ಞರಿಗೆ ಒಳ್ಳೆಯ ಆಕರಗಳಾಗುತ್ತವೆ. ಈ ದೃಷ್ಟಿಯಿಂದ ಜನಪದ ಕಥೆಗಳು ಕೇವಲ ಒಂದು ಸಾಹಿತ್ಯ ರೂಪವಲ್ಲ, ಕಲಾರೂಪವಲ್ಲ, ಸಮಾಜಶಾಸ್ತ್ರಜ್ಞರಿಗೂ ಅದು ಒಳ್ಳೆಯ ಸಾಮಗ್ರಿಯನ್ನು ಒದಗಿಸುತ್ತದೆ. ಮನುಷ್ಯ ತನ್ನ ಜೀವನದಲ್ಲಿ ನೇರವಾಗಿ ಹೇಳಲಾಗದ್ದನ್ನು ಅನುಭವಿಸಲಾಗದ್ದನ್ನು ಇಂತಹ ಒಂದು ಮಾಧ್ಯಮದ ಮೂಲಕ ಪ್ರಾಮಾಣಿಕವಾಗಿ ಹೇಳಿಕೊಳ್ಳುವುದರಿಂದ ಒಂದು ಸಮಾಜದ ಅಥವಾ ಸಂಸ್ಕೃತಿಯ ನಿಜವಾದ ಸ್ವರೂಪ ಏನೆಂಬುದು ಗೊತ್ತಾಗುತ್ತದೆ. ಯಾವುದೇ ವ್ಯಕ್ತಿಯ ನಿಜವಾದ ಸ್ವರೂಪ ವ್ಯಕ್ತವಾಗುವುದು ಇಂತಹ ಮಾಧ್ಯಮದ ಮೂಲಕ. ಅದೂ ಮೌಖಿಕ ಸಾಹಿತ್ಯದ ಮೂಲಕ ಮಾತ್ರ ಸಾಧ್ಯವಾಗುವಂತಹುದು. ಆ ದೃಷ್ಟಿಯಿಂದ ಜನಪದ ಕಥೆಗಳು ನಿಜಕ್ಕೂ ಒಂದು ಪ್ರಾಮಾಣಿಕ ಸಮಾಜ ವಿಜ್ಞಾನ. ನಮ್ಮ ಪ್ರಾಚೀನ ಸಮಾಜದ ಸಂಸ್ಕೃತಿಯ ಕೆಲವೊಂದು ನೈಜವಾದ ಅಂಶಗಳು ಕಂಡು ಬರುವುದು ಜನಪದ ಕಥೆಗಳಲ್ಲಿಯೇ.

೬

ಜನಪದ ಕಥೆಗಳ ಭಾಷೆ, ಶೈಲಿ ಹಾಗೂ ಅವುಗಳ ಕಲಾತ್ಮಕತೆಯ ಬಗೆಗೆ ಹೇಳುವಾಗ ಜನಪದ ಕಥೆಗಳಿಗೆ ತನ್ನದೇ ಆದ ಕಲಾತ್ಮಕ ಚೌಕಟ್ಟಿದೆ ಎಂಬುದನ್ನು ಮರೆಯುವಂತಿಲ್ಲ. ಅದು ಭಾಷೆ, ಹಾಗೂ ನಿರೂಪಣಾ ವಿಧಾನಗಳನ್ನು ಒಳಗೊಂಡಿರುತ್ತದೆ. ಕತೆಯ ಹುಟ್ಟು ವಸ್ತುವನ್ನು ಮಾತ್ರ ಒಳಗೊಂಡದ್ದಲ್ಲ, ಭಾಷೆ ಮತ್ತು ನಿರೂಪಣಾ ವಿಧಾನಗಳನ್ನು ಒಳಗೊಂಡಿರುತ್ತದೆ. ಈ ದೃಷ್ಟಿಯಿಂದ ಅದಕ್ಕೊಂದು ಸಾಂಪ್ರದಾಯಿಕ ಹಿನ್ನೆಲೆ ಇರುವುದನ್ನು ಕಾಣಬಹುದು. ಹಾಗೆಯೇ ಸಾಂಸ್ಕೃತಿಕ ಪರಂಪರೆ ಇರುವುದನ್ನು ಗುರುತಿಸಬಹುದು.

ಜನಪದ ಕಥೆಗಳಿಗೆ ಪರಂಪರೆಯಿಂದ ಸಿದ್ಧವಾದ ಶೈಲಿಯೊಂದಿರುತ್ತದೆ. ಅದು ಯಾರಿಗೆ ಏನೇ ಅನಿಸಿದರೂ ಆ ಶೈಲಿಯೇ ಅದರ ವೈಶಿಷ್ಟ್ಯ ಹಾಗೂ ಅದರ ನಿಜವಾದ ಸ್ವರೂಪ ಎಂಬುದು ಗಮನಾರ್ಹ. ಪುನರುಕ್ತಿಯ ಅಂಶಗಳು ಅದರಲ್ಲಿ ಎಷ್ಟೇ ಕಂಡು ಬಂದರೂ ಬೇರೆ ರೀತಿಯಲ್ಲಿ ಹೇಳಿದಾಗ ಅದು ಜನಪದ ಕಥೆ ಎನಿಸುವುದಿಲ್ಲ ಅಥವಾ ಜನಪದ ಕಥೆಯ ಶೈಲಿಯಾಗುವುದಿಲ್ಲ. ಇಲ್ಲಿ ಬರುವ ಒಂದೊಂದು ವರ್ಗದ ಕತೆಗಳಿಗೂ ಇಂತಹ ಒಂದೊಂದು ಶೈಲಿ ಸಿದ್ಧವಾಗಿರುತ್ತದೆ, ಅದು ಆ ಕತೆಯೊಂದಿಗೇ ಉಳಿದು ಬರುವಂತಹುದು.

ಭಾಷೆ ಕೂಡ ಅಷ್ಟೇ. ಆಯಾ ಪ್ರದೇಶದ ಭಾಷಾ ಸಂಪತ್ತನ್ನು ಸಾಂಸ್ಕೃತಿಕ ಮಹತ್ತ್ವವನ್ನು

ಹೊತ್ತು ಹೊರ ಹೊಮ್ಮಿದಾಗಲೇ ಕತೆ ತನ್ನ ನಿಜವಾದ ಸೊಗಡನ್ನು ಹೊರ ಸೂಸುತ್ತದೆ. ಕತೆಗಾರ ಮೂಲ ಭಾಷೆಯನ್ನು ಬಳಸಿದಾಗ ಕತೆಯೊಂದರ ನಿಜವಾದ ಸೌಂದರ್ಯ ಅರಳಿ ನಿಲ್ಲುತ್ತದೆ. ಇದು ಸಾಧ್ಯವಾಗುವುದು ಕತೆಗಳು ನಗರ ಪ್ರಭಾವದಿಂದ ದೂರ ಉಳಿದಾಗ ಮಾತ್ರ. ಅವು ನಗರ ಪ್ರದೇಶಕ್ಕೆ ಹತ್ತಿರವಾದಷ್ಟೂ ತಮ್ಮ ಮೂಲ ಸತ್ವವನ್ನು ಸಡಿಲಗೊಳಿಸಿಕೊಳ್ಳುತ್ತವೆ. ಭಾಷೆಯಲ್ಲಷ್ಟೇ ಅಲ್ಲ ಹೇಳುವ ಧಾಟಿಯೂ ಸಡಿಲಗೊಂಡಿರುತ್ತದೆ. ಹೊರಗಿನ ಪ್ರಭಾವಗಳು ಅದರ ಅಂದವನ್ನು ಸ್ವರೂಪವನ್ನು ಮಾರ್ಪಡಿಸುವುದೂ ಉಂಟು. ಪ್ರಸ್ತುತ ಸಂಕಲನದ ಕತೆಗಳಲ್ಲಿ ಈ ಎರಡರ ಸಮ್ಮಿಶ್ರಣವನ್ನು ಕಾಣಬಹುದು. ಇಲ್ಲಿಯ ಕೆಲವೊಂದು ಕತೆಗಳು ಗ್ರಾಮೀಣ ಪರಿಸರದಿಂದ ದೂರವಾದವರಿಂದ ಸಂಗ್ರಹಿಸಿದ್ದು ಹಾಗಾಗಿ ಸಹಜವಾಗಿಯೇ ಈ ದೃಷ್ಟಿಯಿಂದ ಕೆಲವೊಂದು ಅಂಶಗಳನ್ನು ಗಮನಿಸಬಹುದು. ಹೆಚ್ಚಾಗಿ ಭಾಷೆ ಮತ್ತು ನಿರೂಪಣಾ ವಿಧಾನಕ್ಕೆ ಸಂಬಂಧಿಸಿದಂತೆ ಅದು ಗೋಚರಿಸುತ್ತದೆ.

ಜನಪದ ಕಥೆಗಳಲ್ಲಿ ನಿರೂಪಣಾ ವಿಧಾನ ಪ್ರಮುಖವಾದರೂ ಅದು ವ್ಯಕ್ತಿ ವಿಶಿಷ್ಟವಾದದ್ದರಿಂದ ಬದಲಾವಣೆ ಅನಿವಾರ್ಯ ಅನಿಸುವುದು ಸಹಜ. ಆದರೂ ಸಾಂಪ್ರದಾಯಿಕ ಚೌಕಟ್ಟೊಂದು ಅದಕ್ಕಿರುತ್ತದೆ. ಆ ವ್ಯಾಪ್ತಿಯಲ್ಲಿ ವಿಹರಿಸಿದಷ್ಟೂ ಅದರ ವೈವಿಧ್ಯ ಹೆಚ್ಚುತ್ತದೆ. ಬದಲಾಗುತ್ತಿರುವ ಪರಿಸರದಲ್ಲಿ ಇದು ಸಹಜ ಹಾಗೂ ಅನಿವಾರ್ಯ. ಆ ಕಾರಣಕ್ಕಾಗಿ ಅವುಗಳನ್ನು ಸಂಗ್ರಹಿಸದೆ ಬಿಡುವುದೂ ಸರಿ ಹೋಗುವುದಿಲ್ಲ. ಇಂತಹ ಕಥೆಗಳಲ್ಲಿ ಕತೆಗಾರನ ಪಾತ್ರ ಏನಿದ್ದರೂ ಕತೆಯೊಂದರ ಹೊರ ರೂಪಕ್ಕೆ ಸಂಬಂಧಿಸಿದಂತೆ ಇರುತ್ತದೆಯೇ ಹೊರತು ಅದರ ಒಳ ಬಂಧಕ್ಕಲ್ಲ. ಆದ್ದರಿಂದ ಅವುಗಳನ್ನು ನಿರ್ಲಕ್ಷಿಸಿ ಕೈ ಬಿಡುವುದು ತಪ್ಪಾಗುತ್ತದೆ.

ಜಾನಪದದಲ್ಲಿ ಮೊದಲ ಪ್ರಾಧಾನ್ಯತೆ ಸಂಗ್ರಹ ಕಾರ್ಯಕ್ಕೆ, ಅನಂತರ ಅಧ್ಯಯನ. ಅಧ್ಯಯನ ವ್ಯಾಪಕವಾಗಿ, ಸಮರ್ಪಕವಾಗಿ ಆಗಬೇಕಾದರೆ ಅದಕ್ಕೆ ಪೂರಕ ಸಾಮಗ್ರಿ ಪೂರ್ಣವಾಗಿ ದೊರೆಯಬೇಕು. ಈ ದೃಷ್ಟಿಯಿಂದ ಸಿಕ್ಕಿದ್ದೆಲ್ಲವನ್ನು ಸಂಗ್ರಹಿಸುವುದು ಒಳಿತು. ಬದಲಾಗುತ್ತಿರುವ ಸಮಾಜವನ್ನು, ಸಂಸ್ಕೃತಿಯನ್ನು, ಮನಸ್ಸನ್ನು ಅರಿಯಲು ಅವು ಸಹಾಯಕವಾಗುತ್ತವೆ.

* * * * *

ಕರಪಾಲ ಮೇಳ

೧

'ಕರಪಾಲ ಮೇಳ' ಯಕ್ಷಗಾನ ಬಯಲಾಟದಂತೆಯೇ ಒಂದು ಸಮ್ಮಿಶ್ರ ಕಲೆ. ಸಂಗೀತ, ಸಾಹಿತ್ಯ, ನೃತ್ಯಗಳಿಂದ ಮುಪ್ಪುರಿಗೊಂಡದ್ದು ; ಬಯಲಾಟದಂತೆಯೇ ಬಯಲಿನಲ್ಲಿ ಆಡುವ ಸಂಪ್ರದಾಯವುಳ್ಳದ್ದು. ಬಯಲಾಟಕ್ಕೂ 'ಮೇಳ' ಎಂಬ ಹೆಸರಿದೆ. ವೇಷಭೂಷಣವೊಂದನ್ನುಳಿದು ಮಿಕ್ಕ ಅಂಶಗಳಲ್ಲಿ ಇವೆರಡರಲ್ಲಿ ಹೆಚ್ಚಿನ ಹೋಲಿಕೆಯನ್ನು ಕಾಣುತ್ತೇವೆ. ಇಲ್ಲಿಯೂ ಮುಖ್ಯ ಕಥೆಗಾರ ವೇಷವನ್ನು ಹಾಕುತ್ತಾನಾದರೂ ಅದೇ ಬೇರೆ ರೀತಿಯಾದುದು. ಯಕ್ಷಗಾನದಲ್ಲಿ ಒಂದೊಂದು ಪಾತ್ರವನ್ನು ಒಬ್ಬೊಬ್ಬರು ಅಭಿನಯಿಸಿದರೆ ಇಲ್ಲಿ ಎಲ್ಲಾ ಪಾತ್ರವನ್ನು ಒಬ್ಬನೇ ಅಭಿನಯಿಸುತ್ತಾನೆ. ಇವೆರಡೂ ಜನಪದ ಕಲೆಗಳೇ ಆಗಿದ್ದು ಬಹು ಹಿಂದಿನಿಂದಲೂ ಹಳ್ಳಿಗರ ಮನಸ್ಸನ್ನು ಸೂರೆಗೊಳ್ಳುತ್ತಾ ಬಂದಿವೆಯಾದರೂ, ಇವುಗಳನ್ನು ಪ್ರತ್ಯೇಕವಾಗಿಯೇ ಗುರುತಿಸಬೇಕಾಗುತ್ತದೆ. ಜನಪದ ರಂಗಭೂಮಿಗೆ ಸೇರಿದಂಥ ಯಕ್ಷಗಾನ ಬಯಲಾಟ, ಸೂತ್ರದ ಗೊಂಬೆಯಾಟ ಮತ್ತು ತೊಗಲು ಗೊಂಬೆಯಾಟಗಳು ಒಂದು ವರ್ಗವಾಗಿ ನಿಂತರೆ, ಕರಪಾಲ ಮೇಳದ ಸಾಲಿಗೆ ಸೇರಿದಂಥ ಚೌಡಿಕೆ ಮೇಳ, ಕಂಸಾಳೆ ಮೇಳ ಮುಂತಾದುವು ಮತ್ತೊಂದು ಗುಂಪಾಗಿ ನಿಲ್ಲುತ್ತವೆ. ಇವುಗಳನ್ನು ಪ್ರತ್ಯೇಕವಾಗಿ ಗುರುತಿಸಲು ಅಥವಾ ವಿಭಾಗಿಸಲು ಇರುವ ಒಂದು ಅಂಶವೆಂದರೆ, "ಅದರ ವಸ್ತು ವಿನ್ಯಾಸದಲ್ಲಿ ಪೌರಾಣಿಕ ಪ್ರಪಂಚದ ನಿಚ್ಚಳ ಪ್ರಭಾವವನ್ನು ಸಂಸ್ಕೃತ ಭೂಯಿಷ್ಠವಾದ ಕ್ಲಿಷ್ಟಭಾಷೆಯ ಬಳಕೆಯನ್ನು ಗಮನಿಸಿದಾಗ ನೆಲದ ಕಂಪನ್ನು ಸಹಜವಾಗಿ ಬೀರುವ, ಹಳ್ಳಿಗರ ಭಾಷೆ, ಅನುಭವಗಳಿಗೆ ಸುಲಭವಾಗಿ ನಿಲುಕಬಹುದಾದ ಶುದ್ಧ ಜನಪದ ಶೈಲಿಯ ಕೋಲಾಟವೇ ಮೊದಲಾದ ಕೆಲವು ಕಲೆಗಳನ್ನು ಪ್ರತ್ಯೇಕಿಸಿಕೊಳ್ಳಬೇಕಾಗುತ್ತದೆ...... ಕರಪಾಲಮೇಳ ಈ ಸರಳ ಜನಪದ ಕಲೆಗಳ ಸಾಲಿನಲ್ಲಿ ಅಗ್ರಗಣ್ಯವೆನಿಸುತ್ತದೆ."[೧] ಈ ಬಗೆಯ ವಿಭಜನೆ ಅಧ್ಯಯನ ದೃಷ್ಟಿಯಿಂದ ಗಮನಾರ್ಹವಾದದ್ದಾಗಿದೆ. ಆದರೆ ಜನರ ಮೇಲಿನ ಪ್ರಭಾವ ಹಾಗೂ ಪರಿಣಾಮದ ದೃಷ್ಟಿಯಿಂದ ಎರಡು ವರ್ಗಗಳೂ ಒಂದೇ. ಎರಡು ವರ್ಗಗಳು ಅಪೂರ್ವ ಕಲೆಯೆನಿಸಿವೆ. ಜನಮನವನ್ನು ಗೆದ್ದುಕೊಂಡಿವೆ. ಅವರ ಧರ್ಮಶ್ರದ್ಧೆಯನ್ನು ಹೆಚ್ಚಿಸಿವೆ. ಮನರಂಜನೆಯನ್ನು ನೀಡುವುದರ ಮೂಲಕ ಅವರ ಮನಸ್ಸನ್ನು ಹಗುರಗೊಳಿಸಿವೆ. ಅವರ ಧಾರ್ಮಿಕ ಹಾಗೂ ಲೌಕಿಕ ಪ್ರಪಂಚಗಳೆರಡನ್ನೂ ಬೆಳಗಿದ ಕಲೆಗಳಾಗಿವೆ.

'ಕರಪಾಲ ಮೇಳ'ವನ್ನು ನಡೆಸುವವರಿಗೆ 'ಕರಪಾಲದವರು' 'ಕರಪಾಲ ಮೇಳದವರು' ಎನ್ನುತ್ತಾರೆ. ಅದರ ಮುಖ್ಯ ಕಥೆಗಾರನನ್ನು 'ಕರಪಾಲದಯ್ಯ' ಎಂಬುದಾಗಿ ಕರೆಯುತ್ತಾರೆ. ಕರ್ನಾಟಕದಲ್ಲಿ ಕಂಡು

---

೧. ಡಾ. ಜೀ.ಶಂ. ಪರಮಶಿವಯ್ಯ : ಜನಪದ ಸಾಹಿತ್ಯ ಸಮೀಕ್ಷೆ. ಪು. ೯

ಬರುವ ವೃತ್ತಿ ಗಾಯಕ ವರ್ಗದಲ್ಲಿ ಕರಪಾಲದವರು 'ಲೌಕಿಕ ವೃತ್ತಿ ಗಾಯಕ' ವರ್ಗಕ್ಕೆ ಸೇರಿದವರು. ಇವರಲ್ಲಿ ನಿರೂಪಕ ವೀರಶೈವನೇ ಆಗಿದ್ದು ಶಿವಕಥೆಗಳನ್ನೇ ವಿಶೇಷವಾಗಿ ಪ್ರಸಾರ ಮಾಡಿದರೂ, ಯಾವ ಒಂದು ದೈವಕ್ಕೂ ನಿರ್ದಿಷ್ಟವಾಗಿ ಅಂಟಿದವರಲ್ಲ, ಹಾಗೆಯೇ ಒಂದು ಧರ್ಮಪ್ರಸಾರ ಕಾರ್ಯವನ್ನು ಕೈಗೊಂಡವರಲ್ಲ. ಅಲ್ಲಿ ಬರುವ ಕಥೆಗಳಲ್ಲಿ ಶಿವನ ಮಹಿಮೆಯೆ ಹೆಚ್ಚಾಗಿ ಕಂಡು ಬಂದು ಭಕ್ತಿ, ಧರ್ಮ ಮುಂತಾದುವುಗಳ ಬಗೆಗೆ ನಿರೂಪಣೆಯಿದ್ದರೂ ಅದೇ ಅದರ ಮುಖ್ಯ ಗುರಿಯಲ್ಲ. "ಅಲ್ಲಿ 'ಕಲೆ' ಪ್ರಧಾನ. ಧರ್ಮ ಗೌಣ. ಈ ದೃಷ್ಟಿಯಿಂದ ಕರಪಾಲದಯ್ಯನನ್ನು ಲೌಕಿಕ ವೃತ್ತಿ ಗಾಯಕನೆಂದೇ ಕರೆಯಬೇಕಾಗುತ್ತದೆ."[೨]

ಈ ಕಲೆ ಉತ್ತರ ಕರ್ನಾಟಕದಿಂದ ದಕ್ಷಿಣಕ್ಕೆ ಬಂದಿತು ಎಂಬುದಾಗಿ ಅಭಿಪ್ರಾಯಗಳಿವೆ. ಇಂದು ದಕ್ಷಿಣ ಕರ್ನಾಟಕದ ಭಾಗದಲ್ಲಿ ಈ ಕಲೆಯನ್ನು ಜೀವಂತವಾಗಿ ಉಳಿಸಿಕೊಂಡು ಬಂದಿರುವ ಖ್ಯಾತ ಕಲಾವಿದ ಕರಪಾಲದ ಸಿದ್ದಯ್ಯನವರ ಪ್ರಕಾರವೂ ಈ ಕಲೆ ಉತ್ತರದಿಂದ ಬಂದದ್ದೇ ಆಗಿದೆ. ಕುರುಡಯ್ಯನವರೆಂಬ ಜಂಗಮರು ಈ ಕಲೆಯನ್ನು ದಕ್ಷಿಣದಲ್ಲಿ ತಂದು ಪ್ರಚಾರ ಮಾಡಿ ಹೋದರೆಂದು ಹೇಳುತ್ತಾರೆ. ಅಲ್ಲದೆ ಸ್ವತಃ ಕರಪಾಲದ ಕಥೆಗಳನ್ನೇ ಪರಿಶೀಲಿಸಿದಾಗಲೂ 'ಕಾಡುಸಿದ್ದಮ್ಮನ ಕಥೆ'ಯಲ್ಲಿ ಬರುವ ಸಿದ್ಧಾರೂಢರ ಮಠ, ಕಾಡುಸಿದ್ದೇಶ್ವರ, ಹುಬ್ಬಳ್ಳಿಯೆಂಬುದೆ ಕೈಲಾಸ, ಸಿದ್ಧಾರೂಢರೆ ಬಸವಣ್ಣ ಮುಂತಾದುವೂ ಸ್ವಲ್ಪಮಟ್ಟಿಗೆ ಈ ಅಂಶವನ್ನು ದೃಢಪಡಿಸುತ್ತವೆ. ಡಾ. ಚಿದಾನಂದಮೂರ್ತಿಗಳು 'ಜಾನಪದ' ದಲ್ಲಿ ಬರೆದ ತಮ್ಮ ಒಂದು ಲೇಖನದಲ್ಲಿಯೂ ಕರಪಾಲದ ಬಗೆಗೆ ಪ್ರಸ್ತಾಪಿಸುತ್ತಾ, ತಾವು ಶಿವಮೊಗ್ಗ ಜಿಲ್ಲೆ ಚನ್ನಗಿರಿ ತಾಲೂಕಿನ ಹಿರೇಕೋಗಲೂರಿನಲ್ಲಿ ವಾಸವಾಗಿದ್ದ ಗದ್ದದಯ್ಯನವರ ಮಠದ ಗದ್ದಿಗೆಯ್ಯನವರಿಂದ ಸಂಗ್ರಹಿಸಿದ ವಿವರನ್ನು ಹೀಗೆ ತಿಳಿಸಿದ್ದಾರೆ : "ಅವರು ತಿಳಿಸಿದಂತೆ, ಕರಪಲ್ಲಗಳು ಉತ್ತರ ಕರ್ನಾಟಕದಲ್ಲಿ ಹೆಚ್ಚು. (ಕರಪಲ್ಲವನ್ನು ದಾವಣಗೆರೆ ಪ್ರಾಂತಕ್ಕೆ ತಂದವರು ತಾವೇ ಎಂದು ಮೂಲತಃ ಬೆಳಗಾಂ ಜಿಲ್ಲೆಯ ಅವರಿಗೆ ಹೆಮ್ಮೆಯಿತ್ತು.) ಅದು ವ್ಯಕ್ತಿಯಿಂದ ವ್ಯಕ್ತಿಗೆ ಬಾಯಿಮಾತಿನ ಮೂಲಕ ಪ್ರಸರಣವಾಗುವ ಕಲೆಯೂ ಆಗಿದೆ, ಶಾಸ್ತ್ರವೂ ಆಗಿದೆ. ಈ ಕಲೆಯನ್ನು ತಾವು ಒಂದು ತಿಂಗಳಲ್ಲಿ ತಮ್ಮ ಗುರುಗಳಾದ ಇಂಡಿ ಮಠದ ವೀರಯ್ಯನವರಿಂದ (ಇವರ ಗುರುಗಳು ಬೆಳ್ಳೂಡಿ ಮರಿಸ್ವಾಮಿಗಳು) ಕಲಿತುದಾಗಿ ಶ್ರೀ ಗದ್ದಿಗೆಯ್ಯನವರು ತಿಳಿಸಿದರು"[೩], ಎಂಬುದಾಗಿ ಹೇಳಿ, ಈ ಕಲೆಯ ವಿವರನ್ನು ಹೀಗೆ ಬರೆಯುತ್ತಾರೆ : 'ಕರಪಲ್ಲ'ದ ಕಲೆ ಬಹುಮಟ್ಟಿಗೆ ಜಂಗಮರಿಗೆ ಮಾತ್ರ ಮೀಸಲಾದುದು. ಅದನ್ನು ಕಲಿತವರನ್ನು 'ಕರಪಲ್ಲದ ಐಗಳು' ಎಂದು ಕರೆಯುತ್ತಾರೆ. ಕರಪಲ್ಲ ಮೇಳ ಸಂಪೂರ್ಣವಾಗಲು ಕೊನೆಯ ಪಕ್ಷ ಮೂವರು ಬೇಕು. ಒಬ್ಬ ಗುರು, ಉಳಿದವರಿಬ್ಬರೂ ಶಿಷ್ಯರು. (ಇದರ ಸಂಖ್ಯೆ ಎರಡಕ್ಕಿಂತ ಹೆಚ್ಚಿರಬಹುದು) : ಗುರುಗಳು ದಮ್ಮಡಿಯಂಥ ವಾದ್ಯವನ್ನು ಹಿಡಿದು ನಿಂತರೆ, ಅವರಿಂದ ಸುಮಾರು ಇನ್ನೂರು - ಮುನ್ನೂರು ಅಡಿ ದೂರದಲ್ಲಿ ಶಿಷ್ಯರು ತಾಳಗಳನ್ನು ಹಿಡಿದು ನಿಲ್ಲುತ್ತಾರೆ. ಗುರುಗಳನ್ನು ಅನುಸರಿಸಿ ಶಿಷ್ಯರು ಹಾಡುತ್ತಾರೆ. ಈ ಹಾಡುಗಳಲ್ಲಿ ಬಹುಮಟ್ಟಿಗೆ ಎಲ್ಲವೂ ಬಸವ, ಚನ್ನಬಸವ ಮುಂತಾದ ಶರಣರಿಗೆ ಸಂಬಂಧಪಟ್ಟ ಕಾಲಜ್ಞಾನಗಳು. ಹೀಗೆ ಇವರು ಸಂಕೇತಗಳಲ್ಲಿ ಊರಿನ ಬೀದಿಗಳಲ್ಲಿ ಹಾಡುತ್ತಿದ್ದರೆ, ಜನ ಮುಖ್ಯವಾಗಿ ಗುರುಗಳ ಸುತ್ತ ನೆರೆಯುತ್ತಾರೆ. ಹಾಡುಗಳನ್ನು

---

೨. ಡಾ. ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು. ಪು. ೨೭೬

೩. ಡಾ. ಎಂ. ಚಿದಾನಂದ ಮೂರ್ತಿ : 'ಜಾನಪದ' ಸಂ. ೧

ಮಧ್ಯೆ ನಿಲ್ಲಿಸಿ, ಗುರುಗಳು ನೆರೆದ ಜನರಲ್ಲಿ ನಿಗದಿಯಾದ ಹಣವನ್ನು - ಒಂದಾಣೆ ಅಥವಾ ಎರಡಾಣೆ- ಕೊಡಲು ಸಿದ್ಧವಿರುವವರು ಹೆಸರುಗಳನ್ನು ತಿಳಿದುಕೊಂಡು, ದೂರದಲ್ಲಿ ನಿಂತಿರುವ ಶಿಷ್ಯರುಗಳಿಗೆ ಬೆರಳೆಣಿಕೆಯಲ್ಲಿ ಸಂಜ್ಞೆಯ ಮೂಲಕ ತಿಳಿಸುತ್ತಾರೆ. ಅವರು ಆ ಸಂಜ್ಞೆಗಳನ್ನು ಅರ್ಥ ಮಾಡಿಕೊಂಡು ಹಣ ಕೊಟ್ಟವರ ಹೆಸರುಗಳನ್ನು ಗಟ್ಟಿಯಾಗಿ ಹೇಳುತ್ತಾರೆ. ಕೆಲವು ಸಾರಿ ಹಣ ಕೊಟ್ಟವರು ತಮ್ಮ ಮನೆದೇವರ ಹೆಸರುಗಳನ್ನು ಹೇಳುವಂತೆ ಮಾಡುವುದೂ ಉಂಟು. ಹೆಸರನ್ನು ಬಾಯಿಬಿಟ್ಟು ಹೇಳದೆ ಸಂಜ್ಞೆಗಳಿಂದ ಹೇಳಿಸುವ ಈ ವಿದ್ಯೆಗೆ ಜನರು ಬೆರಗಾಗುತ್ತಾರೆ. ಕರಪಲ್ಲ ಹೀಗೆ ದುಡಿಮೆಯ ಸಾಧನವೂ ಆಗಿದೆ. ಹೆಸರುಗಳನ್ನು ಹೇಳಿದ ಮೇಲೆ ಮತ್ತೆ ಹಾಡುಗಳನ್ನು ಆರಂಭಿಸಿ ಮುಂದೆ ನಡೆಯುತ್ತಾರೆ. ಮತ್ತೆ ಇನ್ನೊಂದು ಕಡೆ ಕರಪಲ್ಲ ಹೇಳುತ್ತಾರೆ."[೪]

ಆದರೆ ಇಲ್ಲಿ ಮೂಲಭೂತವಾದ ಅಂಶವೆಂದರೆ, ಉತ್ತರ ಕರ್ನಾಟಕದ 'ಕರಪಲ್ಲ'ವೇ ಬೇರೆ, ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತವಿರುವ 'ಕರಪಾಲ ಮೇಳ'ವೇ ಬೇರೆ ಎಂಬುದು. ಹೆಸರನ್ನು ಒಳಗೊಂಡಂತೆಯೇ ನೋಟಕ್ಕೆ ಈ ಎರಡು ಪ್ರಕಾರಗಳಲ್ಲಿಯೂ ಕೆಲವಂಶಗಳಲ್ಲಿ ಹೋಲಿಕೆ ಕಂಡು ಬರುತ್ತದೆಯಾದರೂ ಒಳಹೊಕ್ಕು ನೋಡಿದಾಗ ಅವುಗಳ ಸಂದರ್ಭವೇ ಬೇರೆಯಾಗಿರುವುದು ಗಮನಾರ್ಹ. ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತವಿರುವ 'ಕರಪಾಲ ಮೇಳ'ದಲ್ಲಿಯೂ ಸಂಜ್ಞೆಗಳ ಮೂಲಕ ಹೆಸರನ್ನು ಹೇಳುವ ವಾಡಿಕೆಯಿತ್ತಾದರೂ, ಅದು ಈಗಿಲ್ಲ. ಆದರೆ, ಹಿಂದೆ ಕಥಾಸಂದರ್ಭಕ್ಕೆ ಹೊಂದಿಕೊಂಡಂತೆ ಅದು ರೂಢಿಯಲ್ಲಿದ್ದುದಾಗಿ ತಿಳಿಯುತ್ತದೆ. "ಕಥೆಯಲ್ಲಿ ನಾಯಕ - ನಾಯಕಿಯರಿಗೆ ಮಕ್ಕಳಾಗುವ ಸಂದರ್ಭ ಬರುತ್ತದೆ. ಮಕ್ಕಳಾದಾಗ ಹೆಸರಿಡುವ ಸನ್ನಿವೇಶಕ್ಕೆ ಹೊಂದಿಕೊಂಡಂತೆ ಸಂಜ್ಞೆಗಳ ಮೂಲಕ ಹೆಸರನ್ನು ಹೇಳಿಸಿ ಕಾಣಿಕೆಗಳನ್ನು ಸಂಗ್ರಹಿಸುವ ಸಂಪ್ರದಾಯ ಎಲ್ಲಾ ಕರಪಾಲಮೇಳಗಳಲ್ಲೂ ಕಂಡು ಬರುತ್ತದೆ. ಕಥೆಯನ್ನು ಒಂದು ನಿಲುಗಡೆಗೆ ತಂದು, ದೇವರ ಪಟಕ್ಕೆ ಮಂಗಳಾರತಿ ಮಾಡಿಸಿ ತಟ್ಟೆಯೊಡನೆ ಶಿಷ್ಯನನ್ನು ಜನರ ನಡುವೆ ಕಳುಹಿಸುತ್ತಾನೆ ಗುರು. ತಾನು ಚಪ್ಪರದಲ್ಲಿಯೇ ಉಳಿಯುತ್ತಾನೆ. ಜನರ ನಡುವೆ ಹೋದ ಶಿಷ್ಯ ಹೆಸರು ಹೇಳಿಸಲು ಇಚ್ಛಿಸುವವರಿಂದ ಕಾಣಿಕೆಯನ್ನು ಪಡೆದು, ಅವರ ಹೆಸರನ್ನು ತಿಳಿದು ಸಂಕೇತಗಳ ಮೂಲಕ ಗುರುವಿಗೆ ಸೂಚಿಸುತ್ತಾನೆ. ಸಂಜ್ಞೆಗಳನ್ನು ಅರ್ಥಮಾಡಿಕೊಂಡ ಗುರು ತಟ್ಟನೆ ಅದನ್ನು ಗುರುತಿಸಿ ಪದ್ಯದಲ್ಲಿಯೇ ಉತ್ತರವನ್ನು ಕೊಡುತ್ತಾನೆ. ಕೈ ಸಂಜ್ಞೆಗಳಿಗೆ 'ಕೈ ಕರಣೆ' ಎಂದು ಹೆಸರು. ಹೆಸರು ಹೇಳುವ ಸಂಪ್ರದಾಯದಲ್ಲಿ ಎರಡು ಬಗೆಯ ಸಂಜ್ಞೆಗಳನ್ನು ಪಾಲಿಸುತ್ತಾರೆ. ೧. ಮಾತಿನ ಮೂಲಕ ಸೂಚಿಸುವ ಸಂಕೇತಗಳು. ೨. ಕೈಗಳಿಂದ ಸೂಚಿಸುವ ಸಂಕೇತಗಳು. ಬೆಳಕಿನ ಅನುಕೂಲ ಹೆಚ್ಚಾಗಿಲ್ಲದ ಕಡೆ ಕೈಗಳಿಂದ ನೀಡುವ ಸಂಜ್ಞೆಗಳು ಸ್ಪಷ್ಟವಾಗಿ ಕಾಣದೆ ಹೋಗಬಹುದು. ಅದಕ್ಕಾಗಿ ಮಾತಿನ ಸಂಕೇತಗಳನ್ನು ಅಭ್ಯಾಸ ಮಾಡಿಕೊಂಡಿರುತ್ತಾರೆ."[೫]

ಆದ್ದರಿಂದ ಸ್ಪಷ್ಟವಾಗಿ ಈ ಎರಡು ಪ್ರದೇಶಗಳಲ್ಲಿ ಕಂಡು ಬರುವ ಈ ಪ್ರಕಾರಗಳಲ್ಲಿ ಮೂಲಭೂತ ವ್ಯತ್ಯಾಸಗಳಿರುವುದನ್ನು ಕಾಣಬಹುದು. ದಕ್ಷಿಣ ಕರ್ನಾಟಕ ಭಾಗದ 'ಕರಪಾಲ ಮೇಳ' ಗೀತ, ನೃತ್ಯ, ಅಭಿನಯಗಳಿಂದ ಕೂಡಿದ, ವ್ಯವಸ್ಥಿತವಾದ ರಂಗಸಜ್ಜಿಕೆಯಲ್ಲಿ ಏರ್ಪಡುವ ಒಂದು ಬಗೆಯ ಜನಪದ ನಾಟಕ ರೂಪವೇ ಆಗಿದೆ. ಆದರೆ, ಉತ್ತರ ಕರ್ನಾಟಕ ಭಾಗದ

೪. ಡಾ. ಎಂ. ಚಿದಾನಂದ ಮೂರ್ತಿ : 'ಜಾನಪದ' ಸಂ. ೧. ಪು. ೪೪

೫. ಡಾ. ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು. ಪು. ೨೭೩

'ಕರಪಲ್ಲ'ದಲ್ಲಿ ಈ ಅಂಶಗಳು ಕಂಡು ಬರುವುದಿಲ್ಲ. ಕತೆಗಳನ್ನು ಮಾಡುವ ಮುಖ್ಯಭಾಗವೇ ಅದರಲ್ಲಿಲ್ಲ. ಇಲ್ಲಿ ಅದೇ ಪ್ರಧಾನ ಭಾಗ. ಕತೆಯನ್ನು ಮಾಡುತ್ತಾ ಕುಣಿಯುವ ಸಂದರ್ಭ ಇಲ್ಲಿದೆ. ಅಲ್ಲಿಯೂ ಮೂರು ಮಂದಿ ಕಲಾವಿದರು ಕಲೆಯುತ್ತಾರಾದರೂ ಕುಣಿಯುವ ಪ್ರಸ್ತಾಪವೇ ಕಾಣುವುದಿಲ್ಲ. ಅಲ್ಲದೆ ಕೇವಲ ಸಂಜ್ಞೆಗಳನ್ನು, ಹಾಡುಗಳನ್ನಷ್ಟೇ ಹೇಳಿಕೊಂಡು ಬೀದಿಯಲ್ಲಿ ಹೋಗುವ ಪದ್ಧತಿ ಇಲ್ಲಿಯ ಕರಪಾಲ ಮೇಳಕ್ಕೆ ಸಂಬಂಧಿಸಿದುದೇ ಅಲ್ಲ. ಕೆಲವು ವಿಶೇಷ ಸಂದರ್ಭಗಳಲ್ಲಿ ಇದು ನಡೆಯುವಂಥದು. ಕೆಲವು ಪುಣ್ಯ ಸಂದರ್ಭಗಳಲ್ಲಿ ಈ ಕಲಾವಿದರನ್ನು ಬರಮಾಡಿಕೊಂಡು ಅವರಿಂದ ಇಡೀ ರಾತ್ರಿ ಕತೆಯನ್ನು ಏರ್ಪಡಿಸುತ್ತಾರೆ. ಹೆಚ್ಚು ಕಡಿಮೆ ಬಯಲಾಟಕ್ಕೆ ಸೇರುವಂತೆ, ಇಡೀ ಊರಿನ ಜನವೇ ಅಲ್ಲಿ ಸೇರಿರುತ್ತಾರೆ. ಅಷ್ಟೇ ಅಲ್ಲದೆ, ಪಕ್ಕದ ಊರಿನ ಜನರೂ ಸೇರುವುದುಂಟು. ಅಂತಹ ಸಂದರ್ಭಗಳಲ್ಲಿ ಈ ಕಲಾವಿದರು ವಿಶೇಷ ಆಹ್ವಾನದ ಮೇಲೆ ಹೋಗಿರುತ್ತಾರೆ. ಕೆಲವೊಮ್ಮೆ ತಾವಾಗಿಯೇ ಅಪರೂಪಕ್ಕೆ ಊರೂರಿನ ಮೇಲೆ ಹೋಗುವುದೂ ಉಂಟು. ಈ ಮೇಳದವರ ಬಗೆಗೆ ಇಂದಿಗೂ ಹಳ್ಳಿಗರಿಗೆ ಗೌರವವುಂಟು. ಅವರನ್ನು ಮರ್ಯಾದೆಯಿಂದ ಬರಮಾಡಿಕೊಂಡು, ಸೂಕ್ತ ಸಂಭಾವನೆಯನ್ನಿತ್ತು, ಆಟವನ್ನು ಏರ್ಪಡಿಸುತ್ತಾರೆ.

'ಕರಪಾಲ' ಪದ ನಿಷ್ಪತ್ತಿಯ ಬಗೆಗೆ ಡಾ. ಎಂ. ಚಿದಾನಂದಮೂರ್ತಿ ಹಾಗೂ ಜಿ.ಜಿ. ಮಂಜುನಾಥನ್ ಚರ್ಚಿಸಿದ್ದಾರೆ.

ಡಾ. ಎಂ. ಚಿದಾನಂದಮೂರ್ತಿಗಳು 'ಜಾನಪದ' (ಸಂಚಿಕೆ ಒಂದು)ದಲ್ಲಿ ಬರೆದ 'ಕರಪಲ್ಲ' ಎಂಬ ತಮ್ಮ ಲೇಖನದಲ್ಲಿ, ಇದರ ಮೂಲರೂಪ 'ಕರಪಾಲ' ಅಲ್ಲ 'ಕರಪಲ್ಲ' ಎಂದಿದ್ದಾರೆ. 'ಕರಪಲ್ಲದಲ್ಲಿ ಕೈ ಬೆರಳುಗಳ ಕೆಲಸವೇ ಮುಖ್ಯವಾದುದರಿಂದ ಅದು ಕರಪಲ್ಲವ (= ಬೆರಳು) ಆಗಿರಬಹುದೇ ? ಎಂಬ ಅನುಮಾನವನ್ನು ಎತ್ತಿ, ಅದರಿಂದ 'ಕರಪಲ್ಲ' ಬಂದಿರಬಹುದೆ ? ಎಂಬ ಊಹೆಯನ್ನೂ ಮುಂದಿಟ್ಟು 'ವಿಚಾರವಂತರ ಗಮನವನ್ನು ಅತ್ತ ಸೆಳೆದಿದ್ದೇನೆ' ಎಂಬುದಾಗಿ ತಿಳಿಸಿದ್ದಾರೆ.

ಮುಂದೆ, ಇದೇ ಪ್ರಸ್ತಾಪವನ್ನು ಕೈಗೆತ್ತಿಕೊಂಡ, ಜಿ.ಜಿ. ಮಂಜುನಾಥನ್ ಅವರ ಪ್ರಕಾರ "ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ಅಂತೇವಾಸಿಗಳು ಅಂದರೆ ಅಧಿಕಾರಿಗಳು ರಾಜನಿಗೆ ರಹಸ್ಯ ವೃತ್ತಾಂತವನ್ನು ಸಂಕೇತ ಭಾಷೆಯ ಮೂಲಕ ತಿಳಿಸಬೇಕು ಎಂದಿದೆ. ಕರಪಾಲ ಎಂದರೆ ತೆರಿಗೆ ಅಧಿಕಾರಿ. ಈ ಸೀಮಿತ ಅರ್ಥ ಮುಂದೆ ವಿಸ್ತಾರಗೊಂಡು ಅಧಿಕಾರಿ ಎಂದಾಗಿ, ಕರಪಾಲ 'ಸವುಜ್ಞ ಕಂ' ಎಂದರೆ ಅಧಿಕಾರಿಗಳು ಬಳಸುವ ಸಂಜ್ಞೆಯೆಂದಾಗಿರಬಹುದು. ಈ ರೂಪ 'ಕರಪಾಲ ಮೇಳ' ಎನ್ನುವಲ್ಲಿ ಉಳಿದುಕೊಂಡಿದೆ. ಅಂದರೆ ಅಧಿಕಾರಿಗಳು ಮೇಳಗೊಂಡಾಗ ಪರಸ್ಪರ ಹೀಗೆ ಮಾತನಾಡುತ್ತಿದ್ದಿರಬಹುದು. ಆ ಕರಪಾಲ ಉಚ್ಚಾರಣಾ ಸೌಲಭ್ಯಕ್ಕಾಗಿ ಕರಪಲ, ಕರಪ್ಲ ಇತ್ಯಾದಿ ಆಗಿದೆ. ಅಲ್ಲದೆ ಕರಪ್ಲ = ಕೈಚೇಷ್ಟೆ ಎಂದು ಅರ್ಥಮಾಡಿ ಸವುಜ್ಞ ಕಂ ಸೇರಿಸಿದರೆ ಕರದ ಜೊತೆಯಲ್ಲಿರುವ 'ಪ್ಲ' ಅಥವಾ 'ಪಲ' ಸಂಸ್ಕೃತ ಶಬ್ದವೇ ಕನ್ನಡ ಶಬ್ದವೇ ? ಕನ್ನಡ ಶಬ್ದವಾದರೆ ಅರಿಸಮಾಸವಾಗುತ್ತದೆ. ಆದರೆ ಕರಪಾಲ > ಕರಪಲ > ಕರಪ್ಲ ಆಗಿ ಅವರು ಬಳಸುತ್ತಿದ್ದ ಕೈಚೇಷ್ಟೆಯನ್ನು ಕಂಡವರು ಕರಪ್ಲ (ಕರಪಾಲ) ಕೈಚೇಷ್ಟೆ ಎನ್ನುವ ಅರ್ಥವೂ ಉಂಟಾಗಿ ಮುಂದೆ ಕರಪ್ಲ = ೧. ಅಧಿಕಾರಿ ೨. ಕೈಚೇಷ್ಟೆ ಎನ್ನುವ ಅರ್ಥಗಳಲ್ಲಿ ೨ನೆಯ ಅರ್ಥವೇ ನಿಂತು ಅರ್ಥ ಸಂಕೋಚವಾಗಿರಬಹುದು. ಆದುದರಿಂದ ಕರಪಲ ಕರಪಲ್ಲ ಕರಪಾಲ ಕರಪ್ಲ ಎನ್ನುವ ಮಾತುಗಳಲ್ಲಿ ಕರಪಾಲ ಮೂಲಶಬ್ದವಾಗಿದ್ದು ಕರಪಲ, ಕರಪ್ಲ ಎನ್ನುವುದು ಉಚ್ಚಾರಣಾ ಸೌಲಭ್ಯಕ್ಕೆ ಆಗಿರುವ

ರೂಪಗಳೆಂಬುದು ಸಿದ್ಧವಾಗುತ್ತದೆ."[೬]

ಈ ಎಲ್ಲದರ ಹಿನ್ನೆಲೆಯಲ್ಲಿ ಡಾ. ಜೀ. ಶಂ. ಪರಮಶಿವಯ್ಯನವರು ಅಭಿಪ್ರಾಯ ಪಡುವಂತೆ: 'ಕರಪಲ್ಲ' 'ಕರಪಾಲಮೇಳ' ಎರಡೂ ವಿಭಿನ್ನ ಜನಪದ ಸಂಪ್ರದಾಯಗಳು ಎಂಬ ಸೂಚನೆ ಬರುತ್ತದೆ. ಒಂದು ಚಮತ್ಕಾರಕ್ಕೆ, ಜಾಣ್ಮೆಗೆ ಸಂಬಂಧಪಟ್ಟರೆ ಮತ್ತೊಂದು ಸಂಗೀತ, ಸಾಹಿತ್ಯ, ನೃತ್ಯಗಳ ಸಾಮರಸ್ಯದಿಂದ ಕೂಡಿ 'ಕಲೆ'ಗೆ ಸಂಬಂಧಪಡುತ್ತದೆ. ಹೆಸರು ಹೇಳುವ ಸಂಪ್ರದಾಯ ಈ ಕಥಾಮೇಳದಲ್ಲೂ ಸಮಾವೇಶಗೊಂಡು ಆ ಮೇಳಕ್ಕೂ 'ಕರಪಲ್ಲಮೇಳ' ಎಂಬ ಹೆಸರೇ ಬಳಕೆಗೆ ಬಂದಿರಬೇಕು. 'ಕರಪಾಲ'ದ ಮೂಲರೂಪ 'ಕರಪಲ್ಲ' ಎಂಬುದು ಹೀಗೆ ದೃಢಪಡುತ್ತದೆ. ಕರಪಲ್ಲವ > ಕರಪಲ್ಲ > ಕರಪಾಲ[೭] ಎಂಬ ಅವರ ಸೂಚನೆ ಗಮನಾರ್ಹವಾಗಿದೆ. ಇಂದು ಬೇರೆಬೇರೆಯಾಗಿ ಕಾಣುವ ಈ ಎರಡೂ ಸಂಪ್ರದಾಯಗಳು ಮೂಲತಃ ಒಂದೇ ಆಗಿದ್ದು, ಒಂದೇ ಮೂಲವನ್ನು ಅನುಸರಿಸಿ ಬಂದಿದ್ದು ಕಾಲಾನಂತರದಲ್ಲಿ ಕಾರಣಾಂತರಗಳಿಂದಾಗಿ ಆ ಕಲೆಯಲ್ಲಿಯ ಒಂದೊಂದು ಅಂಶವನ್ನು ಪ್ರಧಾನವಾಗಿ ಉಳಿಸಿ, ಬೆಳೆಸಿಕೊಂಡು ಬಂದಿರಲು ಸಾಧ್ಯ. ಆದ್ದರಿಂದ ಈ ಕಲೆಯ ಮೂಲನೆಲೆ ಯಾವುದು, ಅಲ್ಲಿಂದ ಇಲ್ಲಿಗೆ ಬಂತೆ ಅಥವಾ ಇಲ್ಲಿಂದ ಅಲ್ಲಿಗೆ ಹೋಯಿತೆ ಎಂಬುದನ್ನು ಖಚಿತವಾಗಿ ಹೇಳುವುದು ಕಷ್ಟ.

೨

ಸಂಗೀತ, ಸಾಹಿತ್ಯ, ನೃತ್ಯಗಳಿಂದ ಮುಪ್ಪುರಿಗೊಂಡ 'ಕರಪಾಲ ಮೇಳ' ಹಾಸನ, ಅರಸೀಕೆರೆ, ತಿಪಟೂರು ಭಾಗಗಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಈ ಮೇಳಗಳನ್ನು ನಡೆಸುವ ತಂಡಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿದ್ದರೂ, ಇರುವ ಹಲಕೆಲವು ತಂಡಗಳು ಅತ್ಯಂತ ಸಮರ್ಪಕವಾದುವಾಗಿವೆ. ತಿಪಟೂರಿನ ಕೋನೇಹಳ್ಳಿಯಲ್ಲಿರುವ ಕರಪಾಲ ಸಿದ್ಧಯ್ಯನವರ ತಂಡ, ಹಾಸನ ಜಿಲ್ಲೆಯ ಇಬ್ಬೀಡಿನ ಮೇಳ ಅವುಗಳಲ್ಲಿ ಮುಖ್ಯವಾಗಿ ಹೆಸರಿಸಬಹುದಾದವು. ಕರಪಾಲ ಸಿದ್ಧಯ್ಯನವರ ತಂಡ ಇಂದಿಗೂ ವಿಶಿಷ್ಟವಾದುದಾಗಿದ್ದು, ಹೆಚ್ಚು ಜನಪ್ರಿಯವಾಗಿರುವುದು ಗಮನಾರ್ಹ.*

ಕರಪಾಲ ಮೇಳದಲ್ಲಿ ಸಾಮಾನ್ಯವಾಗಿ ಐದು ಜನ ಭಾಗವಹಿಸುತ್ತಾರೆ. ಅದರಲ್ಲಿ ಒಬ್ಬ ಮುಖ್ಯ ಕಥೆಗಾರ. ಅವನ ಜೊತೆಯಲ್ಲಿ ಇಬ್ಬರು ಸಹ ನೃತ್ಯದವರಿರುತ್ತಾರೆ. ಇನ್ನಿಬ್ಬರು ಹಿಮ್ಮೇಳದವರು. ಕರಪಾಲ ಮೇಳದ ಮುಖ್ಯ ಕಲಾವಿದ ಸಾಮಾನ್ಯವಾಗಿ ವೀರಶೈವ. ಇವನೇ ಕತೆಯ ನಿರೂಪಕ. ಇವನು ಆಡುವುದೂ, ಹಾಡುವುದೂ ಶಿವನ ಕತೆಗಳನ್ನೇ. ಆದರೆ, ಬೇರೆ ಜಾತಿಯವರೂ ಕರಪಾಲದಯ್ಯನ ಸ್ಥಾನವನ್ನು ನಿರ್ವಹಿಸಿದ ನಿದರ್ಶನಗಳು ಕಂಡು ಬರುತ್ತವೆ. ಹರಿಜನರು, ಮಹಮದೀಯರು, ಒಕ್ಕಲಿಗರು, ಮಡಿವಾಳರು, ವಿಶ್ವಕರ್ಮರೂ ಕರಪಾಲದಯ್ಯನ ಪಾತ್ರವನ್ನು ವಹಿಸಿ ಕರಪಾಲದ ಕಥೆಗಳನ್ನು ಮಾಡಿದ ನಿದರ್ಶನಗಳು ದೊರೆಯುತ್ತವೆ.[೮] ಇಷ್ಟಾದರೂ ಮೂಲತಃ

೬. ಜಿ. ಜಿ. ಮಂಜುನಾಥನ್ : ಪ್ರಬುದ್ಧ ಕರ್ನಾಟಕ : ಸಂ. ೫೫, ಸಂ. ೪. ಪು. ೭೯

೭. ಡಾ. ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು. ಪು. ೨೭೮

೮. ಡಾ. ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು. ಪು. ೨೭೮

* ಈ ಎರಡೂ ತಂಡಗಳನ್ನು ಮೊದಲಿಗೆ ಗುರುತಿಸಿದವರು ಡಾ. ಜೀ. ಶಂ. ಪ.

ಇವು ವೀರಶೈವರಿಂದ ಬಂದವುಗಳೇ ಎಂಬುದರಲ್ಲಿ ಅನುಮಾನವಿಲ್ಲ. ಜಂಗಮರೇ ಮೊದಲು ನಡೆಸುತ್ತಿದ್ದ ಈ ಮೇಳಗಳನ್ನು ಕಂಡು ಆಕರ್ಷಿತರಾಗಿ ಬೇರೆಯವರೂ ಇದನ್ನು ಅನುಸರಿಸಿರಬಹುದು. ಇಲ್ಲವೇ ಮುಖ್ಯ ಕಥೆಗಾರನಾದ ಕರಪಾಲದಯ್ಯನ ಜೊತೆ, ಸಹ ನೃತ್ಯದವರಾಗಿಯೋ ಹಿಮ್ಮೇಳದವರಾಗಿಯೋ ಸೇರಿಕೊಂಡವರು, ಮುಖ್ಯ ಕಥೆಗಾರನ ಅಶಕ್ತತೆಯ ಲಾಭವನ್ನು ಪಡೆದುಕೊಂಡು ಆ ಸ್ಥಾನವನ್ನು ಆಕ್ರಮಿಸಿರಲೂ ಸಾಧ್ಯ. ಏಕೆಂದರೆ ಕರಪಾಲ ಮೇಳದ ಸಂಪೂರ್ಣ ಯಶಸ್ಸು ಮುಖ್ಯ ಕಥೆಗಾರನನ್ನು ಅವಲಂಬಿಸಿರುತ್ತದೆ. ಅವನು ಚುರುಕಾಗಿದ್ದಷ್ಟೂ ಪ್ರತಿಭಾನ್ವಿತನಾಗಿದ್ದಷ್ಟೂ ಆ ಕಲೆ ರಂಜಿಸುತ್ತದೆ. ಆಕರ್ಷಕವಾಗಿ ತೋರುತ್ತದೆ. ಅಲ್ಲಿ ಕಥೆ ನೆಪಮಾತ್ರ. ಮುಖ್ಯ ಕಥೆಗಾರ ಅದಕ್ಕೆ ರಕ್ತ ಮಾಂಸವನ್ನು ತುಂಬಿ ಪುಷ್ಟಿಯಾಗಿಸಬೇಕಾಗುತ್ತದೆ. ನಿರೂಪಣಾ ಜಾಣ್ಮೆ ಅವನಲ್ಲಿದ್ದಷ್ಟೂ ಕರಪಾಲಮೇಳ ಸೊಗಸೆನಿಸುತ್ತದೆ. ಎಂತಹ ನೀರಸ ಸನ್ನಿವೇಶಗಳನ್ನಾದರೂ ನಿರೂಪಕನ ಪ್ರತಿಭೆ ಕಳೆಗಟ್ಟಿಸ ಬಲ್ಲುದು. ಒಟ್ಟಿನಲ್ಲಿ ಅವನೊಬ್ಬ ಹುಟ್ಟು ಕಲಾವಿದನೆನಿಸಿದರೆ ಮಾತ್ರ ಕರಪಾಲ ಮೇಳ ಕಣ್ಮನ ತಣಿಸುವ ಕಲೆಯಾಗಬಲ್ಲುದು.

ನಿರೂಪಕನ ಅಕ್ಕಪಕ್ಕದಲ್ಲಿ ಉಳಿದಿಬ್ಬರು ಸಹ ನೃತ್ಯಗಾರರು ಇರುತ್ತಾರೆ. ಇವರೂ ಅದಷ್ಟು ಚತುರರಾಗಿದ್ದರೆ ಮಾತ್ರ ಕರಪಾಲ ಮೇಳ ರಂಜಿಸಬಲ್ಲುದು. ನಿರೂಪಕ ಮುಖ್ಯ ಕಥೆಯನ್ನು ನಿರೂಪಿಸುವಾಗ ಇವರು ಜಾಣ್ಮೆಯಿಂದ 'ಊಂ'ಗುಡುವುದರ ಜೊತೆಗೆ ಸಂದರ್ಭವರಿತು ಅವನನ್ನು ಪ್ರಶ್ನಿಸುವುದರಿಂದ ಮೇಳವನ್ನು ಕಳೆಗಟ್ಟಿಸುವಂಥ ಉತ್ತರಗಳು ಅವನಿಂದ ಬರುತ್ತವೆ. ಆಗ ಅವರುಗಳ ಮಧ್ಯೆ ನಡೆಯುವ ಸಂಭಾಷಣೆ ಕರಪಾಲ ಮೇಳಕ್ಕೆ ಹೊಸತನವನ್ನು ತಂದು ಕೊಡುತ್ತದೆ. ಹಾಗಲ್ಲದೆ ಬರೀ 'ಊಂ'ಗುಡುವವನಾದರೆ, ನಿರೂಪಕ ಹೇಳಿದ್ದನ್ನೇ ಹೇಳಬೇಕಾಗುವ ಸಂದರ್ಭವೊದಗುತ್ತದೆ. ಆದುದರಿಂದ ನಿರೂಪಕನ ಸಹಾಯಕ ಕಲಾವಿದರೂ, ಕರಪಾಲ ಮೇಳದ ಗುಟ್ಟನ್ನು ಅರಿತವರಾಗಿದ್ದು ನೃತ್ಯ ವೈಖರಿ, ಸಂಗೀತ ಜ್ಞಾನ ಮಧುರ ಕಂಠವನ್ನು ಉಳ್ಳವರಾಗಿರಬೇಕು. ಬಯಲಾಟದಲ್ಲಿ ಪಾತ್ರಧಾರಿ ಒಂದು ಹಾಡನ್ನು ಆರಂಭಿಸಿ ಬಿಟ್ಟ ನಂತರ ಅದನ್ನು ಹಿಮ್ಮೇಳದವರೂ ಹಾಗೂ ಭಾಗವತರು ಮುಂದುವರಿಸುವಂತೆ ಇಲ್ಲಿ ಕಥೆಯ ಮಧ್ಯೆ ಬರುವ ಹಾಡನ್ನು ನಿರೂಪಕ ಆರಂಭಿಸುತ್ತಾನೆ. ಅದನ್ನು ಸಹ ನೃತ್ಯಗಾರರು ಮುಂದುವರಿಸಿ ಮುಕ್ತಾಯಗೊಳಿಸಬೇಕಾಗುತ್ತದೆ. ನೃತ್ಯದೊಂದಿಗೇ ಹಾಡನ್ನು ಹಾಡುವ ಚಮತ್ಕಾರ ಅವರಿಗೆ ಒಗ್ಗಿರಬೇಕು. ಇಲ್ಲಿಯ ನೃತ್ಯವಾಗಲೀ ಸಂಗೀತವಾಗಲೀ ತೀರ ಕ್ಲಿಷ್ಟವಾದುದೇನೂ ಅಲ್ಲ. ತುಂಬ ಸರಳವಾದುದು, ಲಲಿತವಾದುದು. ಆದರೆ, ಅದನ್ನು ನಿರ್ವಹಿಸುವಲ್ಲಿಯೂ ಅಷ್ಟೇ ಸೂಕ್ಷ್ಮತೆಯನ್ನು ತೋರಿದಾಗ ಮಾತ್ರ ಅವು ಪ್ರಿಯವೆನಿಸುತ್ತವೆ. ಮೇಳಕ್ಕೂ ಅಪೂರ್ವತೆಯನ್ನು ತಂದುಕೊಡುತ್ತವೆ.

ಕರಪಾಲ ಮೇಳಕ್ಕೆ ವಿಶಿಷ್ಟವಾದ ವೇಷಭೂಷಣಗಳೇನೂ ಇಲ್ಲದಿದ್ದರೂ, ನಿರೂಪಕ ಉಳಿದಿಬ್ಬರು ಸಹಾಯಕ ಕಲಾವಿದರಿಗಿಂತ ಭಿನ್ನವಾದ ರೀತಿಯಲ್ಲಿ ಅಲಂಕರಿಸಿಕೊಂಡಿರುತ್ತಾನೆ. ಅವನು ಮಾಡುವ ಹಾವ, ಭಾವ, ಭಂಗಿಗಳೊಂದಿಗೆ ಅವನು ಧರಿಸುವ ವೇಷವೂ ಒಂದು ರೀತಿಯಲ್ಲಿ ಪ್ರೇಕ್ಷಕರ ಮೇಲೆ ಪ್ರಭಾವವನ್ನು ಬೀರುತ್ತದೆ. ತಲೆಯ ಮೇಲೆ ಉದ್ದನೆಯ ಕಿರೀಟಾಕೃತಿಯ ಕುಲಾವಿ, ಬಣ್ಣ ಬಣ್ಣಗಳಿಂದ ಕೂಡಿ ರಂಗಾಗಿ ಕಾಣುವುದರ ಜೊತೆಗೆ, ಅದರ ತುದಿಯಿಂದ ಇಳಿಬಿದ್ದ ಮುತ್ತಿನ ತುರಾಯಿ ಹಾಗೂ ಅದರ ಸುತ್ತಲೂ ಸುತ್ತಿದ ರುದ್ರಾಕ್ಷಿ ಮಣಿ ವಿಶೇಷವಾಗಿ ಶೋಭಿಸುತ್ತಿರುತ್ತದೆ. ಕಿವಿಯಲ್ಲಿ, ಕೊರಳಲ್ಲಿ, ಕೈಗಳಲ್ಲಿ ಧರಿಸಿದ ರುದ್ರಾಕ್ಷಿ ಮಣಿಗಳು, ಕಾಲಿನಲ್ಲಿ ಕಟ್ಟಿದ ಗೆಜ್ಜೆ, ಕೆಂಪು

ಬಣ್ಣದ, ಸುತ್ತಲೂ ಪಟ್ಟಿಯುಳ್ಳ ಕಚ್ಚೆಪಂಚೆ ಧರಿಸಿ ಅದರ ಮೇಲೆ ಕಾವಿ ನಿಲುವಂಗಿಯನ್ನು ಹಾಕಿ, ಸೊಂಟಕ್ಕೆ ಬೇರೊಂದು ಬಣ್ಣದ ನಡುಪಟ್ಟಿಯನ್ನು ಸುತ್ತಿ, ಕೈಯಲ್ಲಿ ತಾಳ ಹಿಡಿದು ಆತ ನಿಲ್ಲುವ ಭಂಗಿಯೇ ವಿಶಿಷ್ಟವಾದುದು. ಅಲ್ಲದೇ ಮುಖಕ್ಕೆ ಸ್ವಲ್ಪ ವಿಭೂತಿಯನ್ನೇ ಬಣ್ಣದಂತೆ ಬಳಿದುಕೊಂಡು, ಹಣೆಯಲ್ಲಿ ಎದ್ದು ಕಾಣುವಂತೆ ವಿಭೂತಿ ಪಟ್ಟೆಯನ್ನು ಬಳಿದಿರುತ್ತಾನೆ. ನಿರೂಪಕನ ವೇಷವು ಇಷ್ಟಾದರೆ, ಆತನ ಅಕ್ಕಪಕ್ಕದಲ್ಲಿ ನಿಂತ ಉಳಿದಿಬ್ಬರ ವೇಷವಾದರೂ ಸಾಧಾರಣವಾದುದು, ಆದರೂ ಆಕರ್ಷಕವಾದುದು. ಕಚ್ಚೆ ಪಂಚೆ, ಮೇಲೆ ನಿಲುವಂಗಿ, ಬಿಳಿಯ ವಸ್ತ್ರದ ನಡುಪಟ್ಟಿ, ತಲೆಯ ಮೇಲೆ ಸವಾರರು ಕಟ್ಟುವ ರೀತಿಯ ಸೊಗಸಾದ ಕಾವಿಯ ಪೇಟವನ್ನು ಕಟ್ಟಿರುತ್ತಾರೆ. ಹಣೆಗೆ ವಿಭೂತಿಯನ್ನು ಬಳಿದು, ಕಾಲಿಗೆ ಗೆಜ್ಜೆ ಸರವನ್ನು ಕಟ್ಟಿ ಆಕರ್ಷಕವಾಗಿ ಕುಣಿಯುತ್ತಾರೆ. ಇವರಲ್ಲಿ ಒಬ್ಬ ತಾಳವನ್ನು ಮತ್ತೊಬ್ಬ 'ಗುಮ್ಮಟೆ'ಯನ್ನು ಹಿಡಿದಿರುತ್ತಾರೆ. ನಿರೂಪಕ ತನ್ನ ಗದ್ಯ ನಿರೂಪಣೆಯನ್ನು ನಿಲ್ಲಿಸಿ ಹಾಡಿನ ಮೊದಲ ಚರಣವನ್ನು ಎತ್ತಿಕೊಟ್ಟಾಗ, ಈ ಇಬ್ಬರು ಸಹ ನೃತ್ಯಗಾರರು ಹಿಂದಕ್ಕೂ ಮುಂದಕ್ಕೂ ಚಲಿಸುವ ರೀತಿಯ ನೃತ್ಯವನ್ನು ಮಾಡುತ್ತ ಕರಪಾಲ ಮೇಳವನ್ನು ರಸಾತ್ಮಕವಾಗಿಸುತ್ತಾರೆ.

ಈ ಸಹಾಯಕ ನೃತ್ಯಗಾರರು, ಮುಖ್ಯ ಕತೆಯ ಮುನ್ನಡೆಗೆ ಸಹಕಾರಿಗಳಾಗಿದ್ದು, ಗಂಭೀರತೆಯನ್ನು ಪ್ರದರ್ಶಿಸುವುದಷ್ಟೇ ಅಲ್ಲ, ಬಯಲಾಟದ ಹನುಮ ನಾಯಕನಂತೆ ವಿಮರ್ಶಕರೂ, ಹಾಸ್ಯಪ್ರಿಯರೂ ಆಗಿರಬೇಕಾಗುತ್ತದೆ. ತೀರ ದುಃಖದ ಸಂದರ್ಭಗಳು ಬಂದಾಗ ಪ್ರೇಕ್ಷಕರ ದುಃಖಸ್ಥಿತಿಯನ್ನು ಸ್ವಲ್ಪ ಕಳೆದು, ಮತ್ತೆ ಅವರಲ್ಲಿ ಹೊಸ ಚೇತನ ಮೂಡುವಂತೆ ಮಾಡಲು ಇವರು ಎಚ್ಚರವಹಿಸಬೇಕಾಗುತ್ತದೆ. ನಿರೂಪಕ ಒಂದೆರಡು ಉಪಕತೆಗಳನ್ನು ಮಧ್ಯೆ ಮಧ್ಯೆ ಹೇಳುತ್ತಾನಾದರೂ, ಉಳಿದ ಸಂದರ್ಭಗಳಲ್ಲಿ ಸಹನೃತ್ಯಗಾರರೇ, ಆ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಮುಖ್ಯ ಕತೆಯಲ್ಲಿ ಹಾಸ್ಯಕ್ಕೆ ಅವಕಾಶವಿಲ್ಲದಿದ್ದರೂ, ಇವರು ತಮ್ಮ ಜಾಣ್ಮೆಯಿಂದ ಅಂತಹ ಅವಕಾಶವನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ಅಲ್ಲಿಯೇ ಅವರ ನಿಜವಾದ ಪ್ರತಿಭೆ ವ್ಯಕ್ತವಾಗುವುದು. ಆದ್ದರಿಂದ ಇವರೂ ನಿರೂಪಕನಷ್ಟೇ ಶಕ್ತಿಯುತರಾದ ಕಲಾವಿದರಾಗಿರಬೇಕಾಗಿರುತ್ತದೆ.

-ಉಳಿದ ಹಿಮ್ಮೇಳದವರು ಮೃದಂಗ, ಹಾರ್ಮೋನಿಯಂಗಳನ್ನು ಹಿಡಿದು ಪಕ್ಕದಲ್ಲಿ ನಿಂತಿರುತ್ತಾರೆ. ಇವರ ಕೆಲಸ ಹಿಮ್ಮೇಳ ಕೂಡಿಸುವುದಷ್ಟೇ. ಕುಣಿತದಲ್ಲಾಗಲೀ ಅಥವಾ ಸಹ ನೃತ್ಯಗಾರರಂತೆ ಮುಖ್ಯ ಕತೆಯ ಮಧ್ಯೆಯಾಗಲೀ ಭಾಗವಹಿಸುವುದಿಲ್ಲ.

ಕರಪಾಲ ಮೇಳದ ಕಲಾವಿದರು ವೃತ್ತಿಗಾಯಕ ವರ್ಗಕ್ಕೆ ಸೇರಿದವರೇ ಆದರೂ, ಇದರ ಜೊತೆಗೆ ಬೇರೊಂದು ಉಪವೃತ್ತಿಯನ್ನೂ ಜೀವನೋಪಾಯಕ್ಕಾಗಿ ಅವಲಂಬಿಸಿರುತ್ತಾರೆ. ಭಿಕ್ಷಾಟನೆಗೆಂದು ಇವರು ಎಂದೂ ಹೋದವರಲ್ಲ. ವಿಶೇಷ ಸಂದರ್ಭಗಳಲ್ಲಿ ಆಹ್ವಾನದ ಮೇರೆಗೆ ಹೋಗಿ ಕಥೆ ಮಾಡುವುದನ್ನು ಬಿಟ್ಟರೆ, ಕೆಲವು ಊರುಗಳನ್ನು ಸುತ್ತಿ ಬರುತ್ತಾರೆ. ಅಲ್ಲೆಲ್ಲಾ ಗೌರವದಿಂದ ಇವರನ್ನು ಕಂಡು ಕಥೆ ಮಾಡಿಸುತ್ತಾರೆ. ಇಂದಿಗೂ ಈ ಕಲಾವಿದರಿಗಿರುವ ಗೌರವವನ್ನು ಗಮನಿಸಿದಾಗ, ಆ ಕಲೆಯ ಮಹತ್ವವೇನೆಂಬುದು ವೇದ್ಯವಾಗುತ್ತದೆ.

ಕರಪಾಲ ಮೇಳದ ವಾದ್ಯಗಳ ಸಂಖ್ಯೆ ಹೆಚ್ಚೇನೂ ಇಲ್ಲ. ಚೌಡಿಕೆ, ಕಂಸಾಳೆ, ತಂಬೂರಿ ಯವರು, ನೀಲಗಾರರು, ದೊಂಬಿದಾಸರು ಮುಂತಾದ ವೃತ್ತಿಗಾಯಕರು ಬಳಸುವಂತೆಯೇ ತಾಳದ ಜೊತೆಗೆ ಒಂದೊಂದೇ ವಾದ್ಯ ಇದಕ್ಕೂ ಇತ್ತು. ಮೊದಲಿಗೆ ಇದಕ್ಕೆ ಬಳಸಲಾಗುತ್ತಿದ್ದುದು 'ಗುಮ್ಮಟೆ' ಮತ್ತು

'ತಾಳ'ಗಳೆರಡೇ. 'ಗುಮ್ಮಟೆ' ಸಾಧಾರಣ ರೀತಿಯಲ್ಲಿ ಮಾಡಿದ ಒಂದು ವಾದ್ಯವಿಶೇಷ. ಮಣ್ಣಿನಿಂದ ಗುಂಭದಾಕಾರದಲ್ಲಿ ಮಾಡಿದ್ದು. ಇದು ಎರಡು ಕಡೆಯೂ ತೆರವಾಗಿರುತ್ತದೆ. ಅದರ ಒಂದು ಭಾಗವನ್ನು ಉಡದ ಚರ್ಮದಿಂದ ಮುಚ್ಚಿ ಬಿಗಿದಿರುತ್ತಾರೆ. ಮತ್ತೊಂದು ಭಾಗ ಹಾಗೆಯೇ ತೆರವಾಗಿರುತ್ತದೆ. ಆ ಮುಚ್ಚಿದ ಭಾಗವನ್ನು ಬಡಿದಾಗ ವಿಶೇಷ ನಾದವನ್ನು ಹೊರಹೊಮ್ಮಿಸುವ ಈ ವಾದ್ಯ ಕರಪಾಲ ಮೇಳದ ಕುಣಿತ ಮತ್ತು ಗೀತಕ್ಕೆ ಹೆಚ್ಚಿನ ಮೆರಗನ್ನು ನೀಡುತ್ತದೆ. ಸಂಗೀತ, ನೃತ್ಯಕ್ಕೆ ಸಹಾಯಕವಾಗುವ ತಾಳ ಇದ್ದೇ ಇರುತ್ತದೆ. ಆದರೆ, ಇತ್ತೀಚೆಗೆ ಇವುಗಳ ಜೊತೆಗೆ ಹಾರ್ಮೋನಿಯಂ ಮತ್ತು ಮೃದಂಗದ ಬಳಕೆಯೂ ಆಗುತ್ತಿರುವುದು ಹೆಚ್ಚಿನ ಸೇರ್ಪಡೆಯಾಗಿದೆ. ಇವುಗಳು ಕರಪಾಲ ಮೇಳದ ಆಕರ್ಷಣೆಯನ್ನು ಒಂದು ರೀತಿಯಲ್ಲಿ ಹೆಚ್ಚಿಸಿದ್ದರೂ, ಡಾ. ಜೀ.ಶಂ. ಪರಮಶಿವಯ್ಯ ಅವರು ಅಭಿಪ್ರಾಯಿಸುವಂತೆ, ಅವುಗಳ ಅಗತ್ಯವೇನೂ ಅಷ್ಟಾಗಿ ಕಾಣುವುದಿಲ್ಲ. ಈ ಮೇಳದ ನೃತ್ಯ ಹಾಗೂ ಗೀತದ ಸರಳತೆಯನ್ನು ಗಮನಿಸಿದಾಗ, ಇತರ ಮೇಳಗಳಂತೆ ಇದಕ್ಕೂ ತಾಳದ ಜೊತೆಗೆ ಒಂದೇ ವಾದ್ಯದ ಬಳಕೆ ಸಾಕಾಗುತ್ತದೆ. ಇತ್ತೀಚೆಗೆ ಹಿಮ್ಮೇಳದವರ ಸಂಖ್ಯೆಯೂ ಇಮ್ಮಡಿಗೊಳ್ಳುತ್ತಿರುವುದು 'ಸಣ್ಣ ಬಯಲಾಟದ ಕಲ್ಪನೆ' ಕೆಲವು ಸಂದರ್ಭಗಳಲ್ಲಿ ಉಂಟಾಗಲು ಇದು ಕಾರಣವಾಗುತ್ತದೆ. 'ಹೀಗೆ ಈ ಎರಡರ ಹೆಚ್ಚಳದಿಂದಾಗಿ ಗೊಂದಲ ಗಡಿಬಿಡಿಗಳು ಹೆಚ್ಚಿ, ಕೇವಲ ಮೂವರಿಂದ ಹೆಚ್ಚು ಪರಿಣಾಮಕಾರಿಯಾಗಿ ಮುಕ್ತಾಯವಾಗುತ್ತಿದ್ದ ಕರಪಾಲ ಮೇಳ, ಕೆಲವು ಸಂದರ್ಭಗಳಲ್ಲಿ ತನ್ನ ಸಹಜತೆಯಿಂದ ದೂರವಾಗಿ ಬಿಡುತ್ತದೇನೋ ಎಂಬ ಭಯವನ್ನುಂಟುಮಾಡುತ್ತದೆ[೯] ತನ್ನ ನೈಜತೆಯನ್ನು ಉಳಿಸಿಕೊಂಡು ಉಳಿಯುವ ಯಾವುದೇ ಕಲೆಯಾದರೂ, ಯಾವ ಕಾಲಕ್ಕೂ ತನ್ನ ಆಕರ್ಷಣೆಯನ್ನು ಉಳಿಸಿಕೊಂಡೇ ಇರುತ್ತದೆ.

ನಿರೂಪಕ ಮತ್ತು ಇಬ್ಬರು ಸಹನೃತ್ಯದವರು ನಿಲ್ಲುವಷ್ಟು ಸ್ಥಳದಲ್ಲಿ ನಾಲ್ಕು ಕಂಬಗಳನ್ನು ನೆಟ್ಟು, ಕರಪಾಲ ಮೇಳದ ರಂಗಸ್ಥಳವನ್ನು ನಿರ್ಮಿಸುತ್ತಾರೆ. ಪ್ರೇಕ್ಷಕರ ಕಡೆ ತೆರವು ಮಾಡಿ, ಉಳಿದ ಮೂರು ಭಾಗವನ್ನು ಸೋಗೆಯಿಂದ ಮುಚ್ಚಿರುತ್ತಾರೆ. ಅದರ ಒಳಗಡೆ ಮೂವರು ಕಲಾವಿದರು ಸಲೀಸಾಗಿ ಚಲಿಸುವಷ್ಟು ಸ್ಥಳಾವಕಾಶವಿರುತ್ತದೆ. ಸುಮಾರು ಏಳೆಂಟಡಿ ಎತ್ತರ ವಿರುತ್ತದೆ. ಉಳಿದ ಹಿಮ್ಮೇಳದವರಲ್ಲಿ ಹಾರ್ಮೋನಿಯಂ ಮತ್ತು ಮೃದಂಗದವರು ರಂಗದ ಮುಂಭಾಗದಲ್ಲಿ ಹೊರಭಾಗಕ್ಕೆ ಸೇರಿದಂತೆ ಕುಳಿತಿರುತ್ತಾರೆ. ಬಯಲಾಟದಂತಹ ಬಿರುಸಿನ ಕುಣಿತ ಇದಲ್ಲದ ಕಾರಣ, ಅಟ್ಟದ ಅಗತ್ಯ ಇಲ್ಲಿ ಅಷ್ಟಾಗಿ ಕಾಣುವುದಿಲ್ಲ. ಪ್ರೇಕ್ಷಕರು ತಮ್ಮ ಕಣ್ಣಿಗೆ ಕಾಣುವಷ್ಟು ದೂರವೂ ಉದ್ದಕ್ಕೂ ಕುಳಿತಿರುತ್ತಾರೆ.

ಪ್ರೇಕ್ಷಕರು ಸಂಪೂರ್ಣವಾಗಿ ಆ ಮೇಳದಿಂದ ದೂರವಾದವರಲ್ಲ. ಒಂದಲ್ಲ ಒಂದು ರೀತಿಯಲ್ಲಿ ಅವರುಗಳೂ ಅದರಲ್ಲಿ ಭಾಗಿಗಳೇ ಆಗಿರುತ್ತಾರೆ. ಆದರೆ ಅದು ಹೆಚ್ಚಾಗಿ ಆ ಪ್ರೇಕ್ಷಕ ರನ್ನು ಅವಲಂಬಿಸಿರುತ್ತದೆ ಎಂಬುದು ಗಮನಾರ್ಹ. ಮಧ್ಯೆ ಮಧ್ಯೆ ಶಿವನ ಆಗಮನದ ಅಥವಾ ನಿರ್ಗಮನದ ಸಂದರ್ಭ ಬಂದಾಗ ಮುಖ್ಯ ಕತೆಗಾರ "ಜೈ ನಮಃ ಪಾರ್ವತೀ ಪತೇ" ಎಂದು ಹೇಳುವಾಗ ಹಿಮ್ಮೇಳದವರು, ಜೊತೆಯಲ್ಲಿ ಪ್ರೇಕ್ಷಕರೂ "ಹರ ಹರ ಮಹದೇವ" ಎಂದು ತಮ್ಮ ಧ್ವನಿಯನ್ನೂ ಕೂಡಿಸುತ್ತಾರೆ. ಅಷ್ಟೊಂದು ತಲ್ಲೀನತೆ ಅಲ್ಲಿ ಏರ್ಪಟ್ಟಿರುತ್ತದೆ.

ಕೆಲವು ವಿಶೇಷ ಸಂದರ್ಭಗಳಲ್ಲಿ ತಾವಾಗಿಯೇ ಆಹ್ವಾನ ಕೊಟ್ಟು ಕರೆಸಿ ಕರಪಾಲ ಮೇಳವನ್ನು ಏರ್ಪಡಿಸುವುದೂ ಉಂಟು. ಯಾವುದಾದರೂ ಹಬ್ಬದ ಸಂದರ್ಭದಲ್ಲಿ ಅಥವಾ ಆರಾಧನೆಗಳ

---

೯. ಡಾ. ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು. ಪು. ೨೭೭

ಸಂದರ್ಭದಲ್ಲಿ ಇಂತಹ ಪುಣ್ಯಕಥೆಗಳನ್ನು ಕೇಳುವುದರಿಂದ ಒಳ್ಳೆಯದಾಗುತ್ತದೆಯೆಂಬ ನಂಬಿಕೆಯೂ ಅನೇಕರಲ್ಲಿ ಉಳಿದಿದೆ. ಸಾಮಾನ್ಯವಾಗಿ ಎಲ್ಲಾ ಕತೆಗಳೂ ಸುಖಾಂತವಾಗಿ ಮಂಗಳ ದೊಡನೆ ಮುಕ್ತಾಯವಾಗುತ್ತದೆ. ಮಂಗಳವನ್ನು ಹಾಡುವಾಗ ಹಿಮ್ಮೇಳ ಮುಮ್ಮೇಳ ದವರೆಲ್ಲ ಒಟ್ಟಿಗೆ ಕೂಡಿ ಹಾಡುತ್ತಾರೆ. ಒಂದು ರೀತಿಯಲ್ಲಿ ಬಯಲಾಟದ ಮುಕ್ತಾಯದಂತೆಯೇ ಪರಿಣಾಮಕಾರಿಯಾಗಿ ಶೋಭಿಸುತ್ತದೆ.

ಇನ್ನು ಸಾಹಿತ್ಯ ಭಾಗವನ್ನು ಗಮನಿಸಿದರೂ ಅಷ್ಟೇ ಆಕರ್ಷಕವಾದ ಅಂಶಗಳು ಕಂಡು ಬರುತ್ತವೆ. ಕರಪಾಲದ ನೃತ್ಯ ಮತ್ತು ಗೀತದ ಗತ್ತು ಎಷ್ಟು ಮೋಹಕವಾದುದೋ, ಅದರ ಕಥಾನಿರೂಪಣಾ ಧಾಟಿಯೂ ಅಷ್ಟೇ ಮೋಹಕವಾದುದು. ಗದ್ಯ - ಪದ್ಯಗಳಿಂದ ಕೂಡಿದ ಚಂಪೂ ರೂಪದ ಈ ಸಾಹಿತ್ಯ ಕರಪಾಲದವರ ಪ್ರತಿಭಾ ಮೂಸೆಯಲ್ಲಿ ವೈಶಿಷ್ಟ್ಯದ ಶಿಖರವನ್ನು ಮುಟ್ಟುತ್ತದೆ. "ನಾಟಕೀಯವಾಗಿ ಅಭಿನಯ ಪೂರ್ವಕವಾಗಿ ಗದ್ಯದಲ್ಲಿಯೇ ಕತೆಯನ್ನು ನಿರೂಪಿಸುತ್ತಾ ಒಂದೊಂದು ಸನ್ನಿವೇಶವನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ಗ್ರಾಂಥಿಕ ಶೈಲಿಯಲ್ಲಿಯೇ ಅವನ ನಿರೂಪಣೆ ಸಾಗುವುದಾದರೂ ಎಲ್ಲಿಯೂ ಕೃತಕತೆ ತಲೆ ಹಾಕುವುದಿಲ್ಲ. ಸ್ತ್ರೀ ಪಾತ್ರಗಳ ಒನಪು, ವಯ್ಯಾರ ; ಪುರುಷ ಪಾತ್ರಗಳ ಧೀರ, ಗಂಭೀರ ಗತ್ತುಗಾರಿಕೆಗಳು ; ಅಸಹಾಯಕರ ಅನಾಥರ, ದುಃಖಿಗಳ ಆದ್ರ ವರ್ತನೆಗಳು ಎಲ್ಲವನ್ನೂ ತನ್ನ ಮುಖಭಾವದಲ್ಲಿ ಶರೀರದ ಭಂಗಿಗಳಲ್ಲಿ ಧ್ವನಿಯ ಏರಿಳಿತದಲ್ಲಿ ಸಶಕ್ತವಾಗಿ, ಸಜೀವವಾಗಿ, ಅವನು ಮೂಡಿಸುತ್ತಾನೆ, ಕಥಾವಾಹಿನಿಯನ್ನು ಹರಿಸುತ್ತಾನೆ ; ಸರಳವಾದ, ಸಾಮಾನ್ಯವಾದ ಜನಪದ ಕಥೆಗಳು ಅವನ ಕಲ್ಪನಾ ರಮ್ಯತೆಯಿಂದ, ವರ್ಣನಾ ವೈಖರಿಯಿಂದ ಸುಂದರ ಕಲಾಕೃತಿಗಳಾಗಿ ರೂಪುಗೊಳ್ಳುತ್ತವೆ."[೧೦] ನಿರೂಪಕನ ನಿಜವಾದ ಪ್ರತಿಭೆ ವ್ಯಕ್ತವಾಗುವುದು ಇಲ್ಲಿ. ಅವನು ಒಳ್ಳೆಯ ಅಭಿನಯ ಚತುರನಾಗಿರಬೇಕು. ಒಮ್ಮೆಗೇ ಯಾವ ಪಾತ್ರವನ್ನಾಗಲೀ, ಅಭಿನಯಿಸಿ ತೋರುವ ಪ್ರತಿಭಾಶಾಲಿಯಾಗಿರಬೇಕು. ಯಾವ ರಸವನ್ನಾಗಲೀ ಸೂಸುವ ಸಮರ್ಥಶಾಲಿಯಾಗಿರಬೇಕು. ಅಳಲೂ ಬೇಕು, ನಗಲೂ ಬೇಕು, ನಗಿಸಲೂ ಬೇಕು. ಆಗಲೇ ಕರಪಾಲ ಮೇಳ ಕಳೆಗಟ್ಟುವುದು.

ನಿರೂಪಕನಿಗೆ ದೊರೆಯುವುದು ಕಥೆಯ ಅಸ್ಥಿಪಂಜರವಷ್ಟೇ. ಅದಕ್ಕೆ ಸಂಬಂಧಿಸಿದ ಕೆಲವು ಹಾಡುಗಳು ಸಿದ್ಧವಾಗಿರುತ್ತವೆ. ಆ ಹಾಡುಗಳನ್ನೇ ಅವನು ಎಲ್ಲಾ ಕಥೆಗಳಿಗೂ ಆಯಾ ಸಂದರ್ಭಗಳಲ್ಲಿ ಹೊಂದಿಸಿಕೊಂಡು ಹಾಡುತ್ತಾನೆ: ಶಿವನ ಪ್ರಾರ್ಥನೆ, ಮಕ್ಕಳಿಗಾಗಿ ದುಃಖಿಸುವುದು, ಶಿವನು ಭಿಕ್ಷೆಗೆ ಬರುವುದು, ಅರಣ್ಯದಲ್ಲಿ ಹೋಗುವುದು, ಪ್ರಯಾಣ, ಇಂತಹ ಸಂದರ್ಭಗಳು ಸಾಮಾನ್ಯವಾಗಿ ಎಲ್ಲಾ ಕತೆಗಳಲ್ಲಿಯೂ ಬರುವಂತಹುದು. ಹಾಗಾಗಿ ಅಲ್ಲೆಲ್ಲಾ ಹಾಡುವುದು ಒಂದೇ ರೀತಿಯಾದ ಹಾಡುಗಳನ್ನು. ಆದರೆ ಕಲಾವಿದನ ನಿಜವಾದ ಪ್ರತಿಭೆ ವ್ಯಕ್ತವಾಗುವುದು ಕಥಾ ನಿರೂಪಣೆಯಲ್ಲಿ. ಅದು ಕಲಾವಿದನ ಪ್ರತಿಭೆಗನುಗುಣವಾಗಿ ವ್ಯತ್ಯಾಸ ಗೊಳ್ಳುವ ಸಾಧ್ಯತೆಯುಂಟು. ನಿರೂಪಕ ಪ್ರತಿಭಾನ್ವಿತನಾಗಿದ್ದಷ್ಟೂ, ಜಾಣ್ಮೆ ಕೌಶಲಗಳಿಂದ ಕೂಡಿದಷ್ಟು ಆ ಕತೆ ರಮಣೀಯವಾಗಿ ರಂಜಿಸಬಲ್ಲುದು. ಅಲ್ಲಿ ಬರುವ ಒಂದೊಂದು ಪಾತ್ರ ವನ್ನೂ ಅವನು ಜೀವಂತಗೊಳಿಸಬಲ್ಲ, ಆಕರ್ಷಕವಾಗಿಸಬಲ್ಲ. ಆ ಮೂಲಕ ಜನಮನವನ್ನು ಒಮ್ಮೆಗೇ ಗೆದ್ದುಕೊಳ್ಳಬಲ್ಲ, ಸೂರೆಗೊಳ್ಳಬಲ್ಲ.

---

೧೦. ಡಾ. ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು. ಪು. ೨೭೭

ಹಾಗಿಲ್ಲದೆ ಅವನು ಸಪ್ಪೆಯಾಗಿದ್ದರೆ ಕರಪಾಲ ಮೇಳವೂ ನೀರಸವಾಗಿಬಿಡುತ್ತದೆ. ಯಾರಿಂದಲೋ ಕಲಿತದ್ದಷ್ಟನ್ನೇ ಬಾಯಿಪಾಠ ಮಾಡಿದಂತೆ ಹೇಳಿ ಅದರ ಅಂದಗೆಡಿಸುತ್ತಾನೆ. ಪ್ರತಿಭಾನ್ವಿತನಾದ ನಿರೂಪಕನ ಕೈಯಲ್ಲಿ ಕರಪಾಲ ಮೇಳ ಪ್ರತಿ ಸಾರಿಗೂ ಹೊಸ ಹುಟ್ಟನ್ನು ಪಡೆಯುವಂತಹುದು, ಹೊಸ ತಿರುವನ್ನು ಪಡೆಯುವಂತ ಹುದು. ಹಾಗಿದ್ದಾಗ ಮಾತ್ರ 'ಕರಪಾಲ ಮೇಳ' ಎಷ್ಟು ಸಾರಿ ನೋಡಿದರೂ ನಿತ್ಯನೂತನವಾಗಿ ತೋರುತ್ತದೆ.

ಒಟ್ಟನಲ್ಲಿ ಕರಪಾಲ ಮೇಳ ಒಂದು ಸಮ್ಮಿಶ್ರ ಕಲೆಯಾದುದರಿಂದ ಸಾಮೂಹಿಕ ಶ್ರಮದಿಂದ ಶೋಭಿಸುವಂತಹುದು. ಎಲ್ಲರ ಪಾತ್ರವೂ ಅಲ್ಲಿ ಮುಖ್ಯವೇ. ಅವರವರ ಪಾತ್ರವನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದಾಗಲೇ ಅದು ರಂಜನೀಯ ಕಲೆಯಾಗಿ ಪ್ರದರ್ಶಿತವಾಗಬಲ್ಲುದು. ಆದರೆ, ನಿರೂಪಕ ಸೂತ್ರಧಾರನಂತೆ ಅಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ.

೩

ಕರಪಾಲ ಸಾಹಿತ್ಯ : 'ಕರಪಾಲ ಮೇಳ'ದ ಸುಪ್ರಸಿದ್ಧ ಕಲಾವಿದರಾದ ಕರಪಾಲದ ಸಿದ್ಧಯ್ಯ ಅವರಿಂದ ಸಂಗ್ರಹಿಸಿದ ಮೂರು ಕತೆಗಳನ್ನು ಇಲ್ಲಿ ಸಂಕಲಿಸಿ ಕೊಡಲಾಗಿದೆ. 'ಕಾಡು ಸಿದ್ದಮ್ಮ', 'ನೀಲಕಂಠ - ರೂಪಾವತಿ' ಮತ್ತು 'ಬಸವಕುಮಾರ - ಲೋಹಿತ ಕುಮಾರ'. ಇವುಗಳಲ್ಲದೆ 'ಶಿವಯೋಗಿ - ಪರಯೋಗಿ' ಎಂಬ ಇನ್ನೊಂದು ಕತೆಯನ್ನು ಮಾಡುತ್ತಾರಾದರೂ ಅದನ್ನು ಇಲ್ಲಿ ಸಂಕಲಿಸಲಿಲ್ಲ. ಸಾಮಾನ್ಯವಾಗಿ ಇವಿಷ್ಟೇ ಹೆಚ್ಚು ಪ್ರಚಲಿತವಾಗಿರುವ ಕರಪಾಲದ ಕತೆಗಳು. ಬೇರೆ ಕಲಾವಿದರು ಇವುಗಳ ಜೊತೆಗೆ ಇನ್ನೊಂದೆರಡನ್ನು ಹೆಚ್ಚಾಗಿ ಕಲಿತಿರಬಹುದು, ಅಷ್ಟೇ! ಆದರೆ, ಇಲ್ಲಿ ಸಂಗ್ರಹಿಸಿ ಕೊಟ್ಟಿರುವ ಮೂರು ಕತೆಗಳನ್ನು ಮಾತ್ರ ಎಲ್ಲರೂ ಮಾಡುತ್ತಾರೆ.

ಕರಪಾಲ ಸಾಹಿತ್ಯಕ್ಕೆ ಸೇರಿದ ಕತೆಗಳೆಲ್ಲವೂ ಸಾಮಾನ್ಯ ಜನಪದ ಕತೆಗಳೇ. ಅಂತಹ ವಿಶೇಷವೇನೂ ಅವುಗಳಲ್ಲಿ ಕಾಣುವುದಿಲ್ಲ. ಆದರೆ, ಕರಪಾಲದ ಕಲಾವಿದನ ಕೈಯಲ್ಲಿ ಅವು ವಿಶಿಷ್ಟ ರೂಪವನ್ನು ಪಡೆದುಕೊಳ್ಳುತ್ತವೆ. ಹೆಚ್ಚು ಆಕರ್ಷಣೀಯವಾಗಿ ಅದ್ಭುತವಾಗಿ ತೋರುತ್ತವೆ. ಅವುಗಳಲ್ಲಿ ಹೆಚ್ಚಳವನ್ನು ತೋರುವ ಜಾಣ್ಮೆಯು ಕಲಾವಿದನ ಪ್ರತಿಭೆಯನ್ನು ಅದು ಮುಖ್ಯವಾಗಿ ಅವಲಂಬಿಸಿರುತ್ತದೆ. ಪಾತ್ರ ನಿರೂಪಣೆ, ಸನ್ನಿವೇಶ ವರ್ಣನೆ, ಸಂಭಾಷಣಾ ವೈಖರಿ - ಇವುಗಳಲ್ಲಿ ಆ ಕಲಾವಿದ ತನ್ನ ಅದ್ಭುತ ಪ್ರತಿಭೆಯನ್ನು ತೋರಿಸುತ್ತಾನೆ. ಸಾಮಾನ್ಯವಾಗಿ ಸಾಮಾನ್ಯ ಜನಪದ ಕತೆಗಳಲ್ಲಿ ಸ್ಥಳದ, ವ್ಯಕ್ತಿಯ ಹೆಸರುಗಳು ಇರುವುದಿಲ್ಲ- "ಒಂದು ಊರಿನಲ್ಲಿ ಒಬ್ಬ ರಾಜ ಇದ್ದ. ಅವನಿಗೆ ಒಬ್ಬ ಮಗ ಇದ್ದ.........." ಹೀಗೆ ಕತೆ ಮುಂದುವರಿದು ಮುಕ್ತಾಯಗೊಳ್ಳುತ್ತದೆ. ಆದರೆ ಇಲ್ಲಿ ಅವೆಲ್ಲಕ್ಕೂ ಸುಂದರವಾದ ಹೆಸರುಗಳು ಕಲ್ಪಿತವಾಗಿರುತ್ತವೆ. ಅವೂ ಸಾಮಾನ್ಯವಾದ ಹೆಸರುಗಳಲ್ಲ. ಹೆಚ್ಚು ಆಕರ್ಷಕವೆನಿಸಿದ್ದು, ಒಂದು ರೀತಿಯ ಆತ್ಮೀಯತೆಯನ್ನು ಬಹಳ ಬೇಗ ಉಂಟು ಮಾಡುತ್ತದೆ. ಅಲ್ಲಿಯೂ ಕೂಡ ಈ ಕಲಾವಿದನ ಜಾಣ್ಮೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. 'ನೀಲಾವತಿ ಅನ್ನುವುದೊಂದು ಪಟ್ಟಣ. ಆ ಪಟ್ಟಣವನ್ನು ಭಾನುಶೇಖರ ಮಹಾರಾಜನ ಮಗನಾದ ನೀಲಕಂಠ ಮಹಾರಾಜನು, ನಂದೀಪಟ್ಟಣದ ನಂದೀ ರಾಜನ ಮಗಳಾದ ರೂಪವತಿಯನ್ನು ಧರ್ಮಪತ್ನಿಯಾಗಿಸಿಕೊಂಡು ಧರ್ಮದಿಂದ ಆಳ್ತಾ ಇದ್ದ.........' ಹಾಗೆಯೇ 'ನರಸಾವತಿ ಪಟ್ಟಣ. ಅದನ್ನು ಆಳ್ತಿದ್ದಂತಹವನು ನರಸೇಂದ್ರ ಮಹಾರಾಜ. ಅವನ ಧರ್ಮಪತ್ನಿ ನರಸಾವತಿಯಮ್ಮನವರು..........' ಹೀಗೆ ಅರ್ಥಪೂರ್ಣವಾದ ರೀತಿಯಲ್ಲಿ ಹೆಸರುಗಳನ್ನು

ಕಲ್ಪಿಸಲಾಗಿರುತ್ತದೆ. ಇವಿಷ್ಟೇ ಅಲ್ಲದೆ, ಅಲ್ಲಲ್ಲಿ ವಿಶೇಷವಾಗಿ ಸೇರಿಸುವ ಹಾಡುಗಳು ಕತೆಗೆ ಹೆಚ್ಚಿನ ಬೆಡಗನ್ನೂ, ರಮ್ಯತೆಯನ್ನೂ ತಂದು ಕೊಡುತ್ತವೆ. ಸುಂದರ ಕಾವ್ಯದ ಕಲ್ಪನೆಯನ್ನು ಅದು ಮೂಡಿಸುತ್ತದೆ. ಮಧ್ಯೆ ಮಧ್ಯೆ ಹೇಳುವ ಉಪಕತೆಗಳು ಕರಪಾಲ ಮೇಳದ ಸ್ವಾರಸ್ಯವನ್ನು ಹಿರಿದಾಗಿಸುತ್ತವೆ. ಹೀಗೆ ಮೂಲ ವಸ್ತು ಸಾಮಾನ್ಯ ಜನಪದ ಕತೆಯೇ ಆದರೂ, ಅದು ಕರಪಾಲದ ಕಲಾವಿದನ ಕೈಯಲ್ಲಿ ಸುಂದರ ಜನಪದ ಕಾವ್ಯದ ಹರವನ್ನು ಪಡೆದುಕೊಳ್ಳುತ್ತದೆ.

'ಒಂದೂರು. ಒಬ್ಬ ರಾಜ. ಅವನ್ಗೆ ಇಬ್ರು ಹೆಂಡ್ರು. ಎಷ್ಟು ದಿನಾದ್ರೂ ಮಕ್ಳಾಗ್ಲಿಲ್ಲ. ರಾಜ ಕಾಡ್ಗೋದ. ತಪಸ್ಮಾಡ್ದ. ಶಿವ ತನ್ನ ಕೃಪೆಯಿಂದ ಬೇರೊಂದು ಹೆಣ್ಣನ್ನು ತೋರ್ದ. ಅವಳನ್ನು ಅಲ್ಲಿಯೇ ಮದುವೆಯಾಗಿ ಪಟ್ಣಕ್ಕೆ ಕರುದ್ಕೊಂಡ್ ಬಂದ. ಅವಳಿಗೆ ಮಕ್ಳಾದೊ. ಹಿರೀಹೆಂಡ್ತೀರಿಗೆ ಕೋಪ ಬಂತು. ಆ ಮಕ್ಳನ್ನು ಇಲ್ದಂಗೆ ಮಾಡದ್ರು.........' ಸಾಮಾನ್ಯವಾಗಿ ಈ ಚೌಕಟ್ಟು ಎಲ್ಲ ಜನಪದ ಕತೆಗಳಲ್ಲಿಯೂ ಕಾಣುವಂತಹುದು. ಕರಪಾಲ ಮೇಳದ ಕತೆಗಳಾದರೂ ಇದೇ ಚೌಕಟ್ಟಿಗೆ ಒಳಪಟ್ಟವು. ಆದರೆ, ಕರಪಾಲದವರ ಕೈಯಲ್ಲಿ ಅವು ಪಡೆದುಕೊಳ್ಳುವ ಸ್ವರೂಪವೇ ಬೇರೆ.

"ಕಾಡುಸಿದ್ದಮ್ಮ", "ನೀಲಕಂಠ - ರೂಪಾವತಿ", "ಬಸವ ಕುಮಾರ - ಲೋಹಿತ ಕುಮಾರ", "ರುದ್ರೇಶ್ವರ ಮಹಾತ್ಮೆ", ಮೊದಲಾದ ಕೆಲವು ಜನಪ್ರಿಯ ಕರಪಾಲದ ಕಥೆಗಳು ನಮ್ಮ ಜನಪದ ಕಥೆಗಳ ರಾಶಿಯಲ್ಲಿ ಕನ್ನಡ ನಾಡಿನ ಹೆಣ್ಣು ಮಕ್ಕಳಿಗೆ ಹೆಚ್ಚು ಪರಿಚಯವಾದ ಕಥೆಗಳೇ ಆಗಿವೆ. ಆದರೆ, ಅವು ಕರಪಾಲದ ಕಥೆಯ ಸ್ವರೂಪವನ್ನು ಪಡೆದಾಗ ನಿರೂಪಕನ ಬಾಯಲ್ಲಿ ಮೋಹಕವಾಗಿ ಹೊಸ ರೂಪವನ್ನು ಪಡೆದು ಹೊರಬರುವಾಗ ಇನ್ನೂ ಆಕರ್ಷಕವಾಗಿ, ರಸವತ್ತಾಗಿ ತೋರುತ್ತವೆ. ಅಲ್ಲಿ ಬರುವ ಕಥೆಯ ಸನ್ನಿವೇಶಗಳ ಹೊಸತನಕ್ಕಿಂತ, ನಿರೂಪಕನ ಬಾಯಲ್ಲಿ ಅವು ಹೊಸತನವನ್ನು ಪಡೆದು ಅವತರಿಸುವ ಬಗೆ ಅತಿ ಮುಖ್ಯವಾದುದು. ಈ ಒಂದು ಗುಣದಿಂದಲೇ ಜನಪದ ಕಲೆಗಳಲ್ಲಿ ಕರಪಾಲ ಮೇಳ ಅದ್ವಿತೀಯವೆನಿಸುತ್ತದೆ. ಜಾನಪದ ಶೈಲಿ, ಜಾನಪದ ಜೀವನವನ್ನು ಚಿತ್ರಿಸುವ ಸನ್ನಿವೇಶಗಳು, ಜನತೆಯ ಆಶೋತ್ತರಗಳನ್ನು ಮೋಹಕವಾಗಿ ಬಣ್ಣಿಸುವ ಕಥನ ವಿಧಾನ ಇವುಗಳಿಂದಾಗಿ ಕರಪಾಲದ ಕಥೆಗಳು ತಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡಿವೆ.[೧೧]

ಕಾಡು ಸಿದ್ದಮ್ಮನ ಕಥೆ

ಚದುರಂಗರಾಜ ತನ್ನ ಐದು ಜನ ಧರ್ಮಪತ್ನಿಯರೊಡಗೂಡಿ ಚಂದ್ರಾವತಿ ಪಟ್ಟಣವನ್ನು ಆಳ್ತಾ ಇದ್ದ. ಅವರಲ್ಲಿ ಯಾರಿಗೂ ಮಕ್ಕಳಿರಲಿಲ್ಲ. ಒಮ್ಮೆ ಚದುರಂಗರಾಜ ಪರದೇಶವನ್ನು ನೋಡಬೇಕೆಂದು ಮಂದಿ ಮಾರ್ಬಲ, ದಂಡು ದಳವಾಯಿ ಕೂಡಿ ಹೊರಟ. ಇತ್ತ ಶಿವನು ಜಂಗಮನ ವೇಷವನ್ನು ಧರಿಸಿ ಬಂದು ಅರಮನೆಯ ಮುಂಭಾಗದಲ್ಲಿ ನಿಂತು -

ಭಿಕ್ಷವ ನೀಡಿರಮ್ಮ ಜಂಗಮರಿಗೆ
ಭಿಕ್ಷವ ನೀಡಿರಮ್ಮ
ಭಿಕ್ಷಾ ನೀಡಿರಿ ಮೋಕ್ಷಾವ ಪಡೆಯಿರಿ ॥

ಎಂಬುದಾಗಿ ಹಾಡಿಕೊಂಡು ಬರುತ್ತಾನೆ. ಹಾಡಿನ ಧ್ವನಿಯನ್ನು ಕೇಳಿ ಹಿರೇ ಮಡದಿಯಾದ ಸೂರ್ಯಕಾಂತಿ ಹೊರಗೆ ಬಂದು ನೋಡಿ -

೧೧. ಡಾ. ಜೀ.ಶಂ. ಪರಮಶಿವಯ್ಯ : ಜನಪದ ಸಾಹಿತ್ಯ ಸಮೀಕ್ಷೆ. ಪು. ೧೫

ಶಿವನು ಭಿಕ್ಷಕೆ ಬಂದ

ನೋಡು ಬಾರೆ ತಂಗಿ ನೀಡು ಬಾರೆ.........

ಎಂಬುದಾಗಿ ಉಳಿದವರನ್ನೂ ಕರೆಯುತ್ತಾಳೆ. ಆಗ ಎಲ್ಲರೂ ಸೇರಿ ಮುತ್ತೈದೆ ಮೊರದಲ್ಲಿ ಮುತ್ತು ರತ್ನ ವಜ್ರ ವೈಢೂರ್ಯಗಳನ್ನು ತುಂಬಿಕೊಂಡು ನೀಡಲು ಬರುತ್ತಾರೆ. ಅವರು ಬಂಜೆಯರೆಂಬುದನ್ನು ತಿಳಿದು -

ಬಂಜೆ ಕೈಯ್ಯಾಗಳ ಭಿಕ್ಷೆ ಮಂಜುಳ್ಳ ದಾನವು

ಚಂದ್ರಮುಖಿಯೆ ಕೇಳು ನಾನೊಲ್ಲೆ ನಾನೊಲ್ಲೆನು ll

ಎಂಬುದಾಗಿ ಹೇಳಿ ಹೊರಟು ಹೋಗುತ್ತಾನೆ. ದುಃಖಿತರಾದ ರಾಣಿಯರು ಹಾಸಿಗೆಯನ್ನು ಹಿಡಿದು ಮಲಗುತ್ತಾರೆ. ಪರದೇಶಕ್ಕೆ ಹೋಗಿದ್ದ ಚದುರಂಗರಾಜ ಹಿಂತಿರುಗಿ ಬರುತ್ತಾನೆ, ನಗುಮೊಗದಿಂದ ಸ್ವಾಗತಿಸುತ್ತಿದ್ದ ಪತ್ನಿಯರನ್ನು ಮುಂಬಾಗಿಲಲ್ಲಿ ಕಾಣದೆ ಪರಿತಪಿಸುತ್ತಾನೆ. ಮಂಚದ ಮೇಲೆ ಕಣ್ಣೀರನ್ನು ಕಾಲುವೆಯಾಗಿ ಸುರಿಸುತ್ತ ಮಲಗಿರುವುದನ್ನು ಕಂಡು ಕಾರಣವನ್ನು ಕೇಳುತ್ತಾನೆ. ಕೊನೆಗೆ ಮಕ್ಕಳ ಫಲವನ್ನು ಪಡೆದು ಬರುವುದಾಗಿ ಧೈರ್ಯವನ್ನು ಹೇಳಿ ತಾನು ಅರಣ್ಯಕ್ಕೆ ತೆರಳುತ್ತಾನೆ.

ಇತ್ತ ಕಾಂಚೀಪಟ್ಟಣದ ಕಾಂಚೀರಾಜ ಯುದ್ಧದಲ್ಲಿ ಸೋತು, ಒಪ್ಪಂದದಂತೆ ರಾಜ್ಯಕೋಶವನ್ನು ಒಪ್ಪಿಸಿ, ಹೆಂಡತಿಯೊಂದಿಗೆ ಎಂಟು ದಿವಸದ ಹೆಣ್ಣು ಮಗುವನ್ನು ಕರೆದುಕೊಂಡು ಅರಣ್ಯವಾಸಿಯಾಗುತ್ತಾನೆ. ಹೀಗಿರಲು ಒಂದು ದಿನ ಆ ಹೆಣ್ಣು ಮಗುವೊಂದನ್ನೇ ಬಿಟ್ಟು ತಂದೆ ತಾಯಿಗಳಿಬ್ಬರೂ ಶಿವನ ಪಾದವನ್ನು ಸೇರುತ್ತಾರೆ. ಹಸಿವಿನಿಂದ ಮಗು ಗೋಳಿಡುತ್ತದೆ. ಹತ್ತಿರದ ಗುಡಿಯಲ್ಲಿಯೇ ಇದ್ದ ಕಾಡು ಸಿದ್ಧೇಶ್ವರ ಅದರ ಯೋಗಕ್ಷೇಮದ ಹೊಣೆಯನ್ನು ಹೊತ್ತು ಅದಕ್ಕೆ "ಕಾಡು ಸಿದ್ದಮ್ಮ" ಎಂದು ನಾಮಕರಣವನ್ನು ಮಾಡಿ ಸಾಕಿ ದೊಡ್ಡವಳನ್ನಾಗಿ ಮಾಡುತ್ತಾನೆ.

ಶಿವನನ್ನು ಕಾಣಲು ಕಾಡಿಗೆ ಬಂದ ಚದುರಂಗರಾಜ, ಬಾಯಾರಿ ಬಳಲಿ ಬೆಂಡಾಗಿ ಬರುತ್ತಿರಲು ಶಿವನೇ ಅಟ್ಟಿದ ಮಾಯಾ ಪಂಚವರ್ಣದ ಗಿಳಿಯ ಬೆನ್ನತ್ತಿ ಬಂದು, ಅವನ ಸನ್ನಿಧಿಯನ್ನು ಸೇರುತ್ತಾನೆ. ಅಲ್ಲಿ ಕಾಡುಸಿದ್ದಮ್ಮನ ಅಪೂರ್ವ ಸೌಂದರ್ಯವನ್ನು ಕಂಡು ಒಮ್ಮೆಗೇ ಬೆರಗಾಗಿ-

ಯಾವ ದೇಶವೊ ನಿನದು ಯಾವ ರಾಜ್ಯವೊ ನಿನದು

ಯಾವ ರಾಜನ ಮಗಳೊ ಹೇಳಮ್ಮ ನೀನು ll

ಎಂಬುದಾಗಿ ಅವಳ ವಿಚಾರವನ್ನು ತಿಳಿಯಲು ಮುಂದಾಗುತ್ತಾನೆ. ಆದರೆ, ಅದಕ್ಕೆ ಅವಳು 'ನನಗೆ ಏನೊಂದು ಗೊತ್ತಿಲ್ಲ' ಎಂಬುದಾಗಿ ಉತ್ತರಿಸುತ್ತಾಳೆ. ಕೊನೆಗೆ ಅವಳನ್ನು ಮದುವೆ ಯಾಗುವ ಆಸೆಯನ್ನು ವ್ಯಕ್ತಪಡಿಸಿ, ಕಾಡುಸಿದ್ಧೇಶ್ವರನನ್ನು ಭಕ್ತಿಯಿಂದ ಪ್ರಾರ್ಥಿಸುತ್ತಾನೆ. ಕಾಡುಸಿದ್ಧೇಶ್ವರ ಪ್ರತ್ಯಕ್ಷನಾಗಿ, ಕಾಡು ಸಿದ್ದಾದೇವಿಯನ್ನು ಚದುರಂಗರಾಜನಿಗೆ ಧಾರೆಯೆರೆದು ಕೊಟ್ಟು, ಎರಡು ಗಂಡು, ಒಂದು ಹೆಣ್ಣು ಸಂತಾನವನ್ನು ಕರುಣಿಸಿ ಆಶೀರ್ವದಿಸಿ ಕಳುಹಿಸುತ್ತಾನೆ.

ಚದುರಂಗರಾಜ ತನ್ನ ರಾಜ್ಯಕ್ಕೆ ಪತ್ನಿಯೊಂದಿಗೆ ಹಿಂತಿರುಗುತ್ತಾನೆ. ಐವರು ಹಿರಿಯ ಮಡದಿಯರು ಕಾಡುಸಿದ್ದಮ್ಮನ ಮೇಲೆ ದ್ವೇಷವನ್ನು ಕಾರುತ್ತಾರೆ. ಕೆಲವೇ ಕಾಲದಲ್ಲಿ ಅವಳು ಗರ್ಭವತಿಯಾಗುತ್ತಾಳೆ. ಹಿರಿಯ ಮಡದಿಯರು ತಮ್ಮ ಕುತಂತ್ರದಿಂದ, ಹೆರಿಗೆಯ ಸಮಯ ದಲ್ಲಿ

ಸೂಲಗಿತ್ತಿಯ ಸಹಾಯದಿಂದ ಮಗುವಿನ ಪ್ರಾಣವನ್ನು ಕಳೆದು, ಆ ಸ್ಥಳದಲ್ಲಿ ಒನಕೆಯ ತುಂಡನ್ನಿಡುತ್ತಾರೆ. ರಾತ್ರೋರಾತ್ರಿ ಮಗುವನ್ನು ಹೂಗಾರ ಮುದ್ದಣನ ತೋಟದಲ್ಲಿ ಎಸೆದು ಬಂದು, ಒನಕೆಯ ತುಂಡನ್ನು ಜನನವಾಗಿದ್ದಾಳೆಂದು ರಾಜನಿಗೆ ತಿಳಿಸುತ್ತಾರೆ. ರಾಜನು ಸಿದ್ದಮ್ಮನ ಶಿರಚ್ಛೇದನವನ್ನು ಮಾಡುವಂತೆ ಮಂತ್ರಿಗೆ ತಿಳಿಸುತ್ತಾನೆ. ಮಂತ್ರಿ ಇನ್ನೊಮ್ಮೆ ಪರೀಕ್ಷಿಸೋಣವೆಂದು ತಡೆಯುತ್ತಾನೆ. ಎರಡನೆಯ ಗರ್ಭವನ್ನು ಹೊತ್ತಾಗಲೂ, ಅವರ ಕುತಂತ್ರದಿಂದ ಹಿಂದಿನಂತೆಯೇ ಆಗುತ್ತದೆ. ತಿರುವೋ ಗುಂಡನ್ನು ಜನನವಾದಳೆಂದು ರಾಜನಿಗೆ ತಿಳಿಸಿ, ಹುಟ್ಟಿದ ಗಂಡು ಮಗುವನ್ನು ತೆಗೆದುಕೊಂಡು ಹೋಗಿ, ಹೂಗಾರ ಮುದ್ದಣ್ಣನ ತೋಟಕ್ಕೆ ಎಸೆದು ಬರುತ್ತಾಳೆ. ಪುನಃ ಮೂರನೆಯ ಗರ್ಭವನ್ನು ಹೊತ್ತಾಗಲೂ ಅದೇ ರೀತಿ ಮೋಸ ನಡೆಯುತ್ತದೆ, ಹುಟ್ಟಿದ ಹೆಣ್ಣು ಮಗುವನ್ನು ಹೂಗಾರ ಮುದ್ದಣ್ಣನ ತೋಟದಲ್ಲಿ ಒಗೆದು, ಅದರ ಬದಲು ಕಸ ಪೊರಕೆಯನ್ನಿಟ್ಟು ರಾಜನಿಗೆ ವರ್ತಮಾನವನ್ನು ತಿಳಿಸುತ್ತಾರೆ. ಕೋಪೋದ್ರಿಕ್ತನಾದ ಚದುರಂಗರಾಜ ಕಾಡುಸಿದ್ದಮ್ಮನ ತಲೆಯನ್ನು ಕಡಿದು, ತಂಬಿಗೆಯ ರಕ್ತವನ್ನು ತಂದೊಪ್ಪಿಸುವಂತೆ ರಾಜಾಜ್ಞೆಯನ್ನು ಮಾಡುತ್ತಾನೆ.

ಇತ್ತ ಹೂಗಾರ ಮುದ್ದಣ್ಣನ ತೋಟಕ್ಕೆ ಒಗೆದಂತಹ ಮಕ್ಕಳನ್ನು ಶಿವನು ರಕ್ಷಿಸಿ, ಅವಕ್ಕೆ ಜೀವ ತುಂಬಿ, ಹೂಗಾರ ಮುದ್ದಣ್ಣನ ಕೈ ಸೇರುವಂತೆ ಮಾಡುತ್ತಾನೆ. ಮಕ್ಕಳಿಲ್ಲದ ಹೂಗಾರ ಮುದ್ದಣ್ಣ ದಂಪತಿಗಳು ಹರ್ಷದಿಂದ ಆ ಮಕ್ಕಳನ್ನು ಸಾಕುತ್ತಾರೆ. ಬಾಳೆಯ ಬುಡದಲ್ಲಿ ದೊರೆತ ಮಗುವಿಗೆ ಬಾಳಣ್ಣನೆಂದು, ನಿಂಬೆಯ ಬುಡದಲ್ಲಿ ದೊರೆತ ಎರಡನೆಯ ಮಗುವಿಗೆ ನಿಂಬೆಣ್ಣನೆಂದೂ, ಮಲ್ಲಿಗೆಯ ಬುಡದಲ್ಲಿ ದೊರೆತ ಮೂರನೆಯ ಮಗುವಿಗೆ ಮಲ್ಲಿಗೆ ಮಲ್ಲವ್ವನೆಂದು ನಾಮಕರಣವನ್ನು ಮಾಡುತ್ತಾರೆ. ಮೂರು ಮಕ್ಕಳೂ ಹೂಗಾರ ಮುದ್ದಣ್ಣನ ಮನೆಯಲ್ಲಿ ಸುಖವಾಗಿ ಬೆಳೆಯುತ್ತಿರುತ್ತಾರೆ.

ರಾಜಾಜ್ಞೆಯಂತೆ ಕಾಡುಸಿದ್ದಮ್ಮನ ತಲೆಯನ್ನು ಕಡಿಯಲೆಂದು ಕಾಡಿಗೆ ಕರೆತಂದ ಮಂತ್ರಿ, ಆಕಾಶವಾಣಿಯ ಆಜ್ಞೆಯಂತೆ ಅವಳನ್ನು ಕಾಡಿನಲ್ಲಿಯೇ ಒಂದು ಗುಹೆಯಲ್ಲಿ ಬಿಟ್ಟು ರಕ್ತಭೂತಾಳೆ ಮರದಿಂದ ರಕ್ತವನ್ನು ತುಂಬಿಕೊಂಡು ಬಂದು ರಾಜನಿಗೆ ಒಪ್ಪಿಸುತ್ತಾನೆ. ಗುಹೆಯನ್ನು ಸೇರಿದ ಕಾಡುಸಿದ್ದಮ್ಮ ತನ್ನ ರಕ್ತ ಸಂಬಂಧದವರು ಬಂದರೆ ಮಾತ್ರ ಅದರ ದ್ವಾರಕ್ಕೆ ಮುಚ್ಚಿರುವ ಬಂಡೆ ಅರುಗಾಗಲೆಂದು ಶಾಪವನ್ನಿತ್ತು ಶಿವಧ್ಯಾನದಲ್ಲಿ ಮಗ್ನಳಾಗುತ್ತಾಳೆ. ಕೊನೆಗೆ ಶಿವಪಾದವನ್ನು ಸೇರಿ, ಶಿವನ ಪಾದಸೇವೆಯಲ್ಲಿ ನಿರತಳಾಗುತ್ತಾಳೆ.

ಇತ್ತ ಹೂಗಾರ ಮುದ್ದಣ್ಣನ ಮನೆಯಲ್ಲಿ ಬೆಳೆಯುತ್ತಿರುವ ಕಾಡುಸಿದ್ದಮ್ಮನ ಮೂವರು ಮಕ್ಕಳಿಗೂ, ಕ್ರಮವಾಗಿ ಹನ್ನೊಂದು, ಒಂಬತ್ತು, ಏಳು ವರ್ಷಗಳು ತುಂಬಿ ಸಂತೋಷದಿಂದ ಬೆಳೆಯುತ್ತಿರಲು, ಅತ್ತ ಚದುರಂಗರಾಜನ ಅರಮನೆಯಲ್ಲಿ ಅವನ ಐದು ಜನ ಮಡದಿಯರಿಗೂ 'ಉರಿಬಂಧನ' ಕಾಣಿಸಿಕೊಂಡು ಪರದಾಡುತ್ತಿರುತ್ತಾರೆ. ಕೊನೆಗೆ ಶಾಸ್ತ್ರದವರಿಂದ ಇದು 'ಮನೆದೇವರ ಕಾಟ' ಎಂಬುದಾಗಿ ತಿಳಿಯುತ್ತದೆ. ಅವರ ಸಲಹೆಯಂತೆಯೇ ಹೂಗಾರ ಮುದ್ದಣ್ಣನ ತೋಟದ ಬಳಿಯ ಹೊಳೆಯ ಬಳಿ ಬಂದು ಗಂಗೆಪೂಜೆಯಲ್ಲಿ ತೊಡಗುತ್ತಾರೆ. ಅದೇ ವೇಳೆಗೆ ಮಣ್ಣಿನ ಬಸವಣ್ಣನನ್ನು ಮಾಡಿಕೊಂಡು ಆಡುತ್ತಾ, ಮಣ್ಣಿನ ಬಸವಣ್ಣನಿಗೆ ನೀರನ್ನು ಕುಡಿಸಲು -

"ಮಣ್ಣಿನ ಬಸವಣ್ಣ ತಣ್ಣೀರ ಕುಡಿಯಣ್ಣ"

ಎಂದು ಹಾಡುತ್ತಾ ಬಂದ ಮಲ್ಲಿಗೆ ಮಲ್ಲಮ್ಮನನ್ನು ಕಂಡು, ಅವರು ಅಣಕಿಸಿ ಹಾಸ್ಯ ಮಾಡಲು,

ಒಳಗೆ ಪಾಪವ ಮಾಡಿ ಹೊರಗೆ ಮೈ ತೊಳೆದರೆ

ಮಾಡಿದ ಪಾಪಗಳು ಹೋಗುವವೇನ್ರೆ ll

ಎಂದು ಜಗ್ಗಿಸಿ ಮಾತನಾಡುತ್ತಾಳೆ - ಮಲ್ಲಿಗೆ ಮಲ್ಲಮ್ಮ. ಆ ಪುಟ್ಟ ಹುಡುಗಿಯ ಮಾತನ್ನು ಕೇಳಿ ದಂಗು ಬಡಿಯುತ್ತಾರೆ ರಾಣಿಯರು. ಕೋಪದಿಂದ ಅವಳನ್ನು ಹಿಡಿಯಲು ಓಡಿಸಿಕೊಂಡು ಬರುತ್ತಾರೆ. ಹೆದರಿ ಓಡಿಬಂದು ಅಣ್ಣಂದಿರ ರಕ್ಷೆಯನ್ನು ಪಡೆದು ವಿಚಾರವನ್ನು ತಿಳಿಸುತ್ತಾಳೆ. ಮೂವರು ಕೂಡಿ ಅಲ್ಲಿಗೆ ಬರುತ್ತಾರೆ. ಚದುರಂಗ ರಾಜನ್ನೇ ಹೋಲುವ ಆ ಇಬ್ಬರು ಗಂಡು ಮಕ್ಕಳನ್ನು ಕಂಡು ರಾಣಿಯರು ಬೆಚ್ಚಿ ಬೆರಗಾಗುತ್ತಾರೆ. ಏನೋ ಮೋಸ ನಡೆದಿದೆ ಎಂದು ಭಾವಿಸಿ ಅವರುಗಳನ್ನು ಕೊಲ್ಲಿಸಬೇಕೆಂಬ ಉದ್ದೇಶದಿಂದ ಚದುರಂಗರಾಜನ ಬಳಿ ಬಂದು 'ಆ ಹುಡುಗರು ನಮ್ಮನ್ನು ಅಪಮಾನಗೊಳಿಸಿದರು' ಎಂದು ಸುಳ್ಳನ್ನು ಹೇಳುತ್ತಾರೆ. ರಾಜನು ಅವರನ್ನು ಎಳೆತರಿಸಿ ವಿಚಾರಣೆಯಿಲ್ಲದೆ ಶೂಲಕ್ಕೇರಿಸುವಂತೆ ಆಜ್ಞೆಯನ್ನು ಮಾಡುತ್ತಾನೆ. ಅದರಂತೆ ಅವರನ್ನು ಎಳೆತಂದು ಗಲ್ಲುಗಂಬದ ಬಳಿ ನಿಲ್ಲಿಸುತ್ತಾರೆ. ರಾಜನೂ ಅಲ್ಲಿರುತ್ತಾನೆ. ಆ ಸಮಯದಲ್ಲಿ ಮಲ್ಲಿಗೆ ಮಲ್ಲಮ್ಮ ತನ್ನ ಒಂದು ಕೋರಿಕೆಯನ್ನು ಮುಂದಿಡುತ್ತಾಳೆ ; ಅದಕ್ಕಾಗಿ ಬೇಕಾದ - ಒಂದು ಒನಕೆ, ಒಂದು ಒಳಕಲ್ಲು, ಒಂದೇ ಒಂದು ಸೇರು ಬಿದಿರಕ್ಕಿಯನ್ನು ಕೊಡುವಂತೆ ಕೇಳುತ್ತಾಳೆ. ರಾಜ ಒಪ್ಪಿ ಅವೆಲ್ಲವನ್ನು ದೊರಕಿಸಿಕೊಡುತ್ತಾನೆ. ಮಲ್ಲಿಗೆ ಮಲ್ಲಮ್ಮ ರಾಜನ ಎದುರಿನಲ್ಲಿ ಆ ಬಿದಿರಕ್ಕಿಯನ್ನು ಕುಟ್ಟುತ್ತಾ ಸುವ್ವಿ ಪದವನ್ನು ಆರಂಭಿಸುತ್ತಾಳೆ -

ಸುವ್ವ ಬಾ ಸುವ್ವಿ ಸುವ್ವ ಬಾ ll ಸುವ್ವ ll
ಸುವ್ವ ಬಾ ಕಂದಯ್ಯಾ
ಸುವ್ವ ಬಾ ಬಸವಯ್ಯಾ
ಸುವ್ವಿ ಬಾ ಚನ್ನಬಸವಯ್ಯ ll ಸುವ್ವ ll

ಮಧುರಾವತಿಯ ಲಾಗ
ಚದುರಂಗರಾಜರಿಗೆ ll ಸುವ್ವ ll
ಚದುರಂಗರಾಜರಿಗೆ
ಐದು ಜನ ಹೆಂಡರು
ಐದು ಜನ ಹೆಂಡರಿಗೆ
ಸಂತಾನವಿಲ್ಲದೆ ll ಸುವ್ವ ll

....

ಚದುರಂಗರಾಜ ಮಕ್ಕಳ ಫಲವನ್ನು ಪಡೆಯಲು ಅರಣ್ಯಕ್ಕೆ ಹೋದಾಗಿನಿಂದ ಹಿಡಿದು ಆ ಕ್ಷಣದವರೆಗೆ ನಡೆದ ಕಥೆಯನ್ನೆಲ್ಲಾ ಸಮಗ್ರವಾಗಿ ಆ ಬಾಲೆ ನಿರೂಪಿಸುತ್ತಾಳೆ, ಆಗ ನಿಜ ಸಂಗತಿ

ತಿಳಿದು ರಾಜ ಮೂರ್ಛೆ ಹೋಗುತ್ತಾನೆ. ನಂತರ ಸೂಲಗಿತ್ತಿ ನೀಲಿಯನ್ನು ಎಳೆತರಿಸಿ, ವಸ್ತುಸ್ಥಿತಿಯನ್ನು ಅರಿಯುತ್ತಾನೆ. ಕೂಡಲೇ ಎಲ್ಲರೂ ಕೂಡಿ ಕಾಡುಸಿದ್ದಮ್ಮನನ್ನು ಕೂಡಿದ್ದ ಗವಿಯ ಬಳಿ ಹೋಗುತ್ತಾರೆ. ಮಲ್ಲಿಗೆ ಮಲ್ಲಮ್ಮ ತನ್ನ ಹಸ್ತಸ್ಪರ್ಶದಿಂದ ಗವಿಯ ಬಾಗಿಲ ಬಂಡೆ ತೆರೆದುಕೊಳ್ಳುವಂತೆ ಮಾಡುತ್ತಾಳೆ. ತಾಯಿಯ ಅಸ್ಥಿಪಂಜರವನ್ನು ಕಂಡು ಗೋಳಿಡುತ್ತಾರೆ. ಕೊನೆಗೆ ಶಿವನ ಕರುಣೆಯಿಂದ ಜೀವ ಧರಿಸುತ್ತಾಳೆ. ಎಲ್ಲರೂ ಶಿವನ ಆಶೀರ್ವಾದವನ್ನು ಪಡೆದು ಪಟ್ಟಣಕ್ಕೆ ಹಿಂತಿರುಗುತ್ತಾರೆ. ರಾಜನು ಐದು ಜನ ಮಡದಿಯರಿಗೂ, ಸೂಲಗಿತ್ತಿಗೂ ಶಿಕ್ಷೆಯನ್ನು ವಿಧಿಸುತ್ತಾನೆ. ಆದರೆ, ಕಾಡು ಸಿದ್ಧಾದೇವಿ ಮತ್ತು ಮಲ್ಲಿಗೆ ಮಲ್ಲಮ್ಮ ಆ ಶಿಕ್ಷೆಯಿಂದ ಅವರೆಲ್ಲರೂ ಮುಕ್ತರಾಗುವಂತೆ ಮಾಡುತ್ತಾರೆ. ಶಿವನು ಪುಷ್ಪಕ ವಿಮಾನವನ್ನು ತಂದು, ಚದುರಂಗರಾಜ, ಕಾಡುಸಿದ್ದಮ್ಮ ಮತ್ತು ಅವರ ಮೂವರು ಮಕ್ಕಳನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ.

ಈ ಒಟ್ಟು ಕಥೆಯಲ್ಲಿ, ಕಟ್ಟುಕತೆಯ ಚೌಕಟ್ಟು ಸ್ಪಷ್ಟವಾಗಿ ಗೋಚರಿಸಿದರೂ, ಕರಪಾಲದ ಕಲಾವಿದ ಆ ಚೌಕಟ್ಟಿನೊಳಗೇ ಆತ್ಯಾಕರ್ಷಕವಾದ ರೀತಿಯಲ್ಲಿ ಕುಸುರಿ ಕೆಲಸವನ್ನು ಮಾಡಿರುವುದು ಸುವ್ಯಕ್ತವಾಗುತ್ತದೆ. ಹೆಚ್ಚು ಪರಿಣಾಮಕಾರಿಯಾಗುವಂತೆ ಆತ ನಿರ್ಮಿಸಿಕೊಂಡಿರುವ ಸನ್ನಿವೇಶಗಳು, ಅದಕ್ಕೆ ಇಂಬು ಕೊಟ್ಟಂತೆ ಬರುವ ವರ್ಣನೆಗಳು, ಪಾತ್ರ ಚಿತ್ರಣಗಳು ಇವೆಲ್ಲವೂ ಕತೆಯ ಒಟ್ಟಂದವನ್ನು ಕಾಯ್ದುಕೊಂಡಿವೆ. ಒಂದೊಂದು ಘಟನೆಯೂ ಪರಿಣಾಮಕಾರಿ ಯಾಗಿದ್ದು, ಒಂದಕ್ಕೊಂದು ಪೂರಕವಾಗಿದ್ದು, ಎಲ್ಲಿಯೂ ಅಸಹಜತೆಯ ಅಂಶವೇ ತಲೆಹಾಕ ದಿರುವುದು ನಿರೂಪಕನ ಪ್ರತಿಭೆಗೆ ಸಾಕ್ಷಿಯಾಗಿದೆ. ಚದುರಂಗರಾಜ ಪ್ರವಾಸ ಕೈಗೊಳ್ಳುವುದು, ಶಿವ ಜಂಗಮ ವೇಷದಲ್ಲಿ ಬಂದು, ರಾಣಿಯರಲ್ಲಿದ್ದ ಬೇಡಿಕೆಗೆ ನೀರೆರೆಯು ವುದು, ಆ ಕಾರಣಕ್ಕಾಗಿ ಚದುರಂಗರಾಜ ಅರಣ್ಯಕ್ಕೆ ತೆರಳುವುದು, ಅದೇ ಸಮಯಕ್ಕೆ ರಾಜ್ಯಭ್ರಷ್ಟ ನಾಗಿ ಅರಣ್ಯ ಸೇರಿದ ಕಾಂಚೀಪಟ್ಟಣದ ರಾಜನ ಮಗಳು ಕಾಡುಸಿದ್ದಮ್ಮ ಕಾಡುಸಿದ್ದೇಶ್ವರ ಸನ್ನಿಧಿ ಯಲ್ಲಿ ಬೆಳೆದು ದೊಡ್ಡವಳಾಗಿರುವುದು, ಕಾಡುಸಿದ್ದೇಶ್ವರನೇ ಇವರಿಬ್ಬರ ಸಮಾಗಮ ಮಾಡಿಸಲು ಪಂಚವರ್ಣದ ಗಿಳಿಯನ್ನು ಬಿಡುವುದು......... ಹೀಗೆ ಇಲ್ಲಿ ಬರುವ ಘಟನೆ ಗಳೆಲ್ಲವೂ ಅಚ್ಚುಕಟ್ಟಾಗಿ ಜೋಡಿಸಲ್ಪಟ್ಟಿರುವುದು ಗಮನಾರ್ಹವಾಗಿದೆ. ಅಲ್ಲಿ ಯಾವುದೂ ಅಸಮಂಜಸವೆನಿಸುವುದಿಲ್ಲ. ಆ ಕಥೆಯ ಚೌಕಟ್ಟಿಗೆ, ವ್ಯಾಪ್ತಿಗೆ ಒಳಪಟ್ಟಂತೆ ಸುಂದರ ಜೋಡಣೆಯಾಗಿದೆ.

ಐದು ಜನ ರಾಣಿಯರು ಪ್ರಥಮ ಬಾರಿಗೆ ಕಾಡುಸಿದ್ದಮ್ಮನ ಮೂವರು ಮಕ್ಕಳನ್ನು ಒಟ್ಟಿಗೆ ಕಾಣುವಂತಹ ಸಂದರ್ಭ, ಅಲ್ಲಿ ಮಲ್ಲಿಗೆ ಮಲ್ಲಮ್ಮನಿಗೂ ಅವರಿಗೂ ನಡೆಯುವಂತಹ ಸಂಭಾಷಣೆ ಕುತೂಹಲಕಾರಿಯಾಗಿದ್ದು ಹೆಚ್ಚು ಪರಿಣಾಮಕಾರಿಯಾಗಿದೆ. ಕೊನೆಗೆ ಹೆಂಡತಿಯರ ಮಾತನ್ನು ಕೇಳಿ ಆ ಮೂವರನ್ನು ಗಲ್ಲುಗಂಬದ ಬಳಿ ತಂದು ನಿಲ್ಲಿಸಿದಾಗ, ಮಲ್ಲಿಗೆ ಮಲ್ಲಮ್ಮ ಜಾಣ್ಮೆಯಿಂದ ಆ ಸಂದರ್ಭದ ಸದುಪಯೋಗ ಪಡೆದುಕೊಳ್ಳುವ ರೀತಿಯೂ ಮನೋಜ್ಞವಾದುದು. ಹಿಂದಿನ ಇಡೀ ಕಥೆಯನ್ನು ೩೦ - ೪೦ ಸಾಲುಗಳಲ್ಲಿ ನಿರೂಪಿಸಿರುವುದು ನಿರೂಪಕನ ಉಜ್ವಲ ಪ್ರತಿಭೆಗೆ ಒಂದು ಜ್ವಲಂತ ಸಾಕ್ಷಿಯಾಗಿದೆ.

ಕಾಡುಸಿದ್ದಮ್ಮನ ಕಥೆ ಸಾಂದರ್ಭಿಕ ವರ್ಣನೆಗಳಿಂದ ಸ್ವಾರಸ್ಯಪೂರ್ಣವಾಗಿ ರಂಜಿಸು ವಂತೆಯೇ, ಪಾತ್ರ ರಚನೆಯ ದೃಷ್ಟಿಯಿಂದಲೂ ಗಮನಾರ್ಹವಾಗಿದೆ. ಇಲ್ಲಿ ಬರುವ ಚದುರಂಗ ರಾಜನ ಪಾತ್ರವಾಗಲೀ ಕಾಡುಸಿದ್ದಮ್ಮನ ಪಾತ್ರವಾಗಲಿ ಪ್ರಧಾನವಾಗಿ ಕಂಡರೂ, ಉಳಿದ ಪಾತ್ರಗಳು ಅಷ್ಟೇ ಗಮನವನ್ನು ಸೆಳೆಯುವಂಥವು. ಆಯಾ ಪಾತ್ರಗಳ ಗುಣ ಸ್ವಭಾವಗಳು ಸ್ಪಷ್ಟವಾಗಿ, ನಿಖರವಾಗಿ

ವ್ಯಕ್ತವಾಗುವಂತೆ ಅವುಗಳನ್ನು ಕಡೆದು ನಿಲ್ಲಿಸಿದ್ದಾನೆ. ಚದುರಂಗರಾಜನ ವ್ಯಕ್ತಿತ್ವದಲ್ಲಿ ವ್ಯಕ್ತವಾಗುವ ಒಂದು ದೋಷವೆಂದರೆ, ಆತ ಹಿಂದೆ ಮುಂದೆ ನೋಡದೆ ನಿರ್ಣಯ ಗಳನ್ನು ಕೈಗೊಳ್ಳುವುದು. ಆದರೆ, ಅದು ಎಲ್ಲಾ ಸಂದರ್ಭಗಳಲ್ಲಿಯೂ ಅಲ್ಲ. ಸಂತಾನ ಫಲ ವನ್ನು ಪಡೆಯಲು ಕಾಡಿಗೆ ಹೋಗುವ ಮುನ್ನ ಮಕ್ಕಳ ಬಗ್ಗೆ ಅವನು ಪತ್ನಿಯರೊಂದಿಗೆ ನಡೆಸುವ ಮಾತುಕತೆಗಳಲ್ಲಿ, ಅರಣ್ಯದಲ್ಲಿ ಕಾಡುಸಿದ್ದಮ್ಮನನ್ನು ಪ್ರಥಮ ಬಾರಿಗೆ ಕಂಡಾಗ ಅವಳೊಂದಿಗೆ ವ್ಯವಹರಿಸುವ ರೀತಿಯಲ್ಲಿ, ಮಗಳು ಮಲ್ಲಿಗೆ ಮಲ್ಲಮ್ಮನಿಂದ ನಿಜಸ್ಥಿತಿ ತಿಳಿದಾಗ, ಆತ ತನ್ನ ಐದು ಮಂದಿ ಪತ್ನಿಯರ ಬಗ್ಗೆ ಕೈಗೊಳ್ಳುವ ನಿರ್ಣಯದಿಂದ, ಕೊನೆಯಲ್ಲಿ ಗವಿಯಲ್ಲಿ ಕಾಡುಸಿದ್ದಮ್ಮನನ್ನು ಕಂಡಾಗ, ಅವಳಿಂದ ತಾನು ಮಾಡಿದ ಅನ್ಯಾಯದ ಬಗ್ಗೆ ಕ್ಷಮೆಯನ್ನು ಕೇಳುವಾಗ - ಇಲ್ಲೆಲ್ಲ ಚದುರಂಗರಾಜನ ನಿಶ್ಚಲ ಹಾಗೂ ನಿರ್ದಿಷ್ಟ ಅಭಿಪ್ರಾಯ ಗಳೇನೆಂಬುದು ವ್ಯಕ್ತವಾಗಿ ಅವನ ವ್ಯಕ್ತಿತ್ವದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಆದರೆ, ಕಾಡುಸಿದ್ದಮ್ಮ, ಒನಕೆ ತುಂಡನ್ನು, ತಿರುವೊ ಗುಂಡನ್ನು ಕಸಪೊರಕೆಯನ್ನು ಜನನ ವಾದಳೆಂದು ಕೇಳಿದಾಗ, ಒಂಬತ್ತು - ಹನ್ನೊಂದು ವರ್ಷದ ಹುಡುಗರು ತಮ್ಮನ್ನು ಅವಮಾನ ಗೊಳಿಸಿದರೆಂದು ಗಂಗೆ ಪೂಜೆಗೆ ಬಂದಿದ್ದ ಪತ್ನಿಯರು ಬಂದು ದೂರು ಹೇಳಿದಾಗ - ಈ ಎರಡು ಸಂದರ್ಭಗಳಲ್ಲಿ ಹಿಂದೆ ಮುಂದೆ ನೋಡದೆ ತೀರ್ಮಾನಕ್ಕೆ ಬಂದು ಬಿಡುತ್ತಾನೆ. ಮೂರು ಮಕ್ಕಳನ್ನು ಪಡೆಯುವಂತೆ ಆಶೀರ್ವದಿಸಿ ಕಳುಹಿಸಿಕೊಟ್ಟ ಕಾಡುಸಿದ್ದಮ್ಮನಿಂದ ಇಂತಹ ಅಪಚಾರವಾದುದನ್ನು ಬಹಳಸುಲಭವಾಗಿ ಅನುಮಾನವಿಲ್ಲದೆ ಒಪ್ಪಿ ಬಿಡುವುದು ಆಶ್ಚರ್ಯವಾಗಿ ತೋರುತ್ತದೆ. ಇಂತಹ ಒಂದೆರಡು ಸಂದರ್ಭಗಳನ್ನು ಬಿಟ್ಟರೆ ಚದುರಂಗರಾಜನ ವ್ಯಕ್ತಿತ್ವ ಅಪೂರ್ವ ರೀತಿಯಲ್ಲಿ ನಿರೂಪಿತವಾಗಿದೆ.

ಕಾಡುಸಿದ್ದಮ್ಮ ಕಥೆಯ ನಾಯಕಿ. ಶಿವನ ಕೃಪೆಗೆ ಪಾತ್ರಳಾದವಳು. ತಂದೆ - ತಾಯಿಗಳನ್ನು ಅರಿಯದ ಅವಳು ಶಿವನನ್ನೇ ತಂದೆಯೆಂದು ನಂಬಿದ್ದವಳು. ಅವಳು ಕಾಡಿನಲ್ಲಿ ಏಕಾಂಗಿಯಾಗಿದ್ದಾಗಲೂ, ಚದುರಂಗರಾಜ ಅವಳ ಬಳಿ ಹೋಗಿ "ಈ ಅರಣ್ಯದಲ್ಲಿ ಒಬ್ಬಳೇ ಏಕೆ ಇರುವೆ ? ನೀನು ನನ್ನ ಜತೆಯಲ್ಲಿ ಬಂದದ್ದೇಯಾದರೆ ಪಟ್ಟದ ರಾಣಿಯನ್ನಾಗಿ ಮಾಡುವೆ" ಎಂದು ಕರೆದಾಗಲೂ ಅವಳು ಅದಕ್ಕೆ ಆಸೆ ಪಡುವುದಿಲ್ಲ. ಅದಕ್ಕೆ ಬದಲಾಗಿ "ನಾನು ಸ್ವತಂತ್ರಳಲ್ಲ, ನನ್ನ ತಂದೆಯನ್ನು ಕೇಳಬೇಕೆಂದು" ಶಿವನನ್ನು ತೋರುತ್ತಾಳೆ. ಶಿವನ ಅಪ್ಪಣೆಯಂತೆ ಅವನನ್ನು ಮದುವೆಯಾಗಿ ಬಂದ ಮೇಲೂ ಸವತಿಯರು ಎಷ್ಟೇ ಕಾಟವನ್ನು ಕೊಟ್ಟರೂ ಅದೆಲ್ಲವನ್ನೂ ಸಹಿಸಿಕೊಂಡು ಬದುಕನ್ನು ನಡೆಸುತ್ತಾಳೆ. ಅವಳು ಯಾವ ಕಷ್ಟಕ್ಕೂ ಯಾರನ್ನೂ ನಿಂದಿಸಿದವಳಲ್ಲ, 'ಹಿಂದೆ ಮಾಡಿದ ಕರ್ಮ ತನ್ನನ್ನು ಕಾಡುತ್ತಿದೆ' ಎಂದಂದುಕೊಂಡು ಸುಮ್ಮನಾಗುತ್ತಾಳೆ. ಸಾತ್ವಿಕ ಗುಣ ಉದ್ದಕ್ಕೂ ಎದ್ದು ಕಾಣುವಂಥದು. ತನ್ನ ಬಾಳನ್ನೇ ಹಾಳು ಮಾಡಲು ಪ್ರಯತ್ನಿಸಿದವರನ್ನು ಕ್ಷಮಿಸುವಷ್ಟು ಗುಣಶೀಲೆ, ತ್ಯಾಗಶೀಲೆ, ಕರುಣಾಮಯಿ. ನಿಜಸಂಗತಿಯನ್ನು ತಿಳಿದು ಚದುರಂಗರಾಜ ತನ್ನ ಮೊದಲ ಐದು ಜನ ಮಡದಿಯರನ್ನು ಕಾರಾಗೃಹಕ್ಕೆ ಅಟ್ಟಿದಾಗ, ಈಕೆ ಪತಿಯನ್ನು ಬೇಡಿಕೊಂಡು ಅವರುಗಳನ್ನು ಬಿಡುಗಡೆ ಮಾಡಿಸುತ್ತಾಳೆ, ಹೀಗೆ ಉದ್ದಕ್ಕೂ ಕಷ್ಟ ಸಹಿಷ್ಣೆಯಾಗಿ, ಪರಮ ಭಕ್ತೆಯಾಗಿ ಉದಾತ್ತ ಗುಣಗಳಿಂದ ನಮ್ಮ ಗಮನವನ್ನು ಸೆಳೆಯುತ್ತಾಳೆ. ಅವಳ ಪರಮಭಕ್ತಿಗೆ, ಪಾತಿವ್ರತ್ಯಕ್ಕೆ ಮೆಚ್ಚಿ ಶಿವನು ಕೈಲಾಸಕ್ಕೆ ಕರೆದೊಯ್ಯುತ್ತಾನೆ. ಒಂದು ರೀತಿಯ ಅಲೌಕಿಕತೆ ಇವಳ ಬದುಕಿನಲ್ಲಿ ಹೆಚ್ಚಾಗಿ ಕಂಡು ಬಂದರೂ, ಆತ್ಮೀಯ ಭಾವನೆಯನ್ನು ಮೂಡಿಸುವ ವ್ಯಕ್ತಿತ್ವ ಅವಳದ್ದು.

ಬಾಳಣ್ಣ, ನೆಂಬಣ್ಣ, ಮಲ್ಲಿಗೆ ಮಲ್ಲಮ್ಮ ಇವರುಗಳ ಚಿತ್ರಣ ಸೊಗಸಾಗಿ ಮೂಡಿ ಬಂದಿದೆ. ಮಂತ್ರಿಯ ಚಿತ್ರವೂ ಸೊಗಸಾಗಿ ಆಕರ್ಷಿಸುತ್ತದೆ. ನಿರೂಪಕ ತನ್ನ ಅಪೂರ್ವ ಶಕ್ತಿಯಿಂದ ಅದಕ್ಕೆ

ಜೀವ ತುಂಬುತ್ತಾನೆ. ಅವನ ಪ್ರತಿಭಾ ಮೂಸೆಯಲ್ಲಿ ಆ ಪಾತ್ರಗಳೆಲ್ಲ ನಿಜವೆನಿಸಿ ಸ್ವಲ್ಪ ಕಾಲ ಅವರಲ್ಲಿಯೇ ಮೈಮರೆತು ನೋಡಿದಾಗ ಅವುಗಳು ಬಹಳ ಬೇಗ ನಮಗೆ ಹತ್ತಿರವಾಗಿ ಬಿಡುತ್ತವೆ.

ಕಥಾತಂತ್ರ ಹಾಗೂ ಕಥಾ ವಿನ್ಯಾಸದ ದೃಷ್ಟಿಯಿಂದ ಕಾಡು ಸಿದ್ದಮ್ಮನ ಕತೆ ವಿಶಿಷ್ಟವಾದುದು. ಸಾಮಾನ್ಯ ಕಥೆಯಲ್ಲಿಯೇ ಅಸಮಾನ್ಯತೆಯನ್ನು ಮೂಡಿಸುವಲ್ಲಿ ಕಲಾವಿದ ತೋರಿರುವ ಪ್ರತಿಭೆ ನಿಜಕ್ಕೂ ಮೆಚ್ಚುವಂಥದು. "ಕಾವ್ಯದ ಆರಂಭ, ಉತ್ಕರ್ಷ, ಮುಕ್ತಾಯಗಳಲ್ಲಿ ಕತೆಗಾರ ಮಾರ್ಗಕಾವ್ಯದ ಜಾಡನ್ನೇ ಅನುಸರಿಸುವಷ್ಟು ಸುಸಂಬದ್ಧ ರೀತಿಯಲ್ಲಿ ಮೂಲ ಸಾಮಗ್ರಿಯನ್ನು ಹಿಗ್ಗಿಸಿ ಕಾವ್ಯಶಿಲ್ಪವನ್ನು ಕಡೆದಿದ್ದಾನೆ"[೧೨] ಕತೆ ದೇವತಾ ಪ್ರಾರ್ಥನೆಯೊಂದಿಗೆ ಆರಂಭವಾಗಿ ಮಂಗಳದಲ್ಲಿ ಮುಕ್ತಾಯವಾಗುತ್ತದೆಯಾದರೂ, ಉಳಿದೆಲ್ಲ ರೀತಿಯೂ ಮಾರ್ಗ ಕಾವ್ಯದ ಮಾರ್ಗವನ್ನೇ ಅನುಸರಿಸಿರುವುದು ಗಮನಾರ್ಹ.

ನಾವು ಬಲ್ಲವರಲ್ಲ ನಾವು ತಿಳಿದವರಲ್ಲ
ಯಾವ ತಪ್ಪಿದ್ದರೂ ತಿದ್ದಿ ಕೊಡಬೇಕು
ತಿದ್ದಿ ಕೊಡಬೇಕು ।

ಎಂಬುದಾಗಿ ಹೇಳಿ ತಮ್ಮ ವಿಷಯವನ್ನು, ಮಿತಿಯನ್ನು ಪ್ರದರ್ಶಿಸಿ,

ಮುಂದಣ ಕಥೆಯ ಅದರಂದವ ಪೇಳುವೆನು
ಚಂದ್ರಶೇಖರ ನಮಗೆ ವರ ಕೊಡಲು ದೇವ
ವರ ಕೊಡಲು ದೇವ ।

ಎಂದು ಹೇಳಿ ಪೀಠಿಕಾ ಭಾಗವನ್ನು ಮುಕ್ತಾಯಗೊಳಿಸಿ, ಮುಖ್ಯ ಕಥೆಗೆ ಕಾಲಿಡುವ ರೀತಿಯೂ ವಿಶಿಷ್ಟವಾದುದು:

ಮುಂದೆ ಇರುವುದೊಂದು ಅಂದವುಳ್ಳ ಪಟ್ಟಣವು
ಮಧುರಾವತಿಯು ಎಂಬ ಪಟ್ಟಣವಿರಲು
ಪಟ್ಟಣವಿರಲು ।

ಇಷ್ಟನ್ನು ಹೇಳಿ "ಅಯ್ಯಾ ಮಗು ಕೇಳು ! ಇದೇ ಮಧುರಾವತಿ ಮಧುರಾವತಿ ಎಂಬ ಪಟ್ಟಣವು ಯಾವ ರೀತಿಯಿಂದ ಶೋಭಾಯಮಾನವಾಗಿದೆಯಪ್ಪ ಎಂದರೆ" ಎಂದು ಹೇಳಿ ಪಟ್ಟಣದ ವರ್ಣನೆಯನ್ನು -

ಹಾಲು ಮಾರುವ ಬೀದಿ ನೂಲು ಮಾರುವ ಬೀದಿ
ಶಾಲು ಸಕಲಾತಿಗಳ ಮಾರುವ ಬೀದಿ
ಮಾರುವ ಬೀದಿ ।

ಹೀಗೆ ಆ ಪಟ್ಟಣದ ಒಂದೊಂದು ಅಂಗವನ್ನೂ ಆ ಕಲಾವಿದ ತನ್ನದೇ ಆದ ರೀತಿಯಲ್ಲಿ ಬಣ್ಣಿಸುವ ಬಗೆ ಅಪೂರ್ವವಾದುದು.

---

೧೨. ಡಾ. ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು. ಪು. ೩೮೭

ಕಥೆ ಒಂದು ಘಟ್ಟವನ್ನು ಮುಟ್ಟಿದಾಗ ಅಥವಾ ದುಃಖದ ಸನ್ನಿವೇಶಗಳು ಹೆಚ್ಚಾಗಿ ಪ್ರೇಕ್ಷಕರ, ಶ್ರೋತೃಗಳ ಮನ ಭಾರವಾದಾಗ ಸಂದರ್ಭವರಿತು ನಿರೂಪಕ ತರುವ 'ಉಪ ಕಥೆ' ಅವರನ್ನು ಬೇರೊಂದು ಲೋಕಕ್ಕೆ ಕೊಂಡೊಯ್ಯುತ್ತದೆ. ಮನಸ್ಸನ್ನು ಹಗುರಗೊಳಿಸಿ ಎಲ್ಲರನ್ನು ನಗೆಗಡಲಿನಲ್ಲಿ ಮುಳುಗಿಸುತ್ತದೆ. ಮುಖ್ಯ ಕಥೆಯಲ್ಲಿ ಬರುವ ಗಂಭೀರ ಸನ್ನಿವೇಶಗಳನ್ನು ನಿರೂಪಕ ಹೇಗೆ ನಿರ್ವಹಿಸಬಲ್ಲನೋ ಅಷ್ಟೇ ಸಮರ್ಪಕವಾಗಿ ಉಪಕಥೆಯಲ್ಲಿ ಬರುವ ಲಘು ಸನ್ನಿವೇಶಗಳನ್ನು ಅವನು ನಿರ್ವಹಿಸಬಲ್ಲ. ಇದಕ್ಕೂ ಮುಖ್ಯ ಕಥೆಗೂ ಯಾವ ಸಂಬಂಧವೂ ಇರುವುದಿಲ್ಲ. ಉಪಕಥೆಯಲ್ಲಿ ಹಾಡುಗಳು ಬರುವುದಿಲ್ಲ. ಒಂದು ಮುಖ್ಯಕಥೆಯಲ್ಲಿ ಎಷ್ಟು ಉಪಕಥೆಗಳನ್ನಾದರೂ ಹೇಳಬಹುದು. ಆದರೆ ಅದು ಕಥೆಯ ವ್ಯಾಪ್ತಿಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಎರಡು ಕಥೆಗಳನ್ನು ಹೇಳುತ್ತಾರೆ. ಉಪಕಥೆಗಳನ್ನು ಹೇಳುವಾಗ ಅವನ ಭಾಷೆಯೇ ಬೇರೆಯಾಗಿರುತ್ತದೆ. ಈ ಉಪಕಥೆಗಳಲ್ಲಿ ಹಾಸ್ಯದ ಹೊನಲೇ ಹರಿದರೂ, ಅದು ಅಷ್ಟರಲ್ಲಿಯೇ ಪರಿಸಮಾಪ್ತಿಯಾಗದೆ, ಸಮಾಜದ ಹಲವಾರು ದೋಷಗಳನ್ನು ಹಾಸ್ಯದ ಮೂಲಕ ಎತ್ತಿ ತೋರಿ ಅವುಗಳ ಮೇಲೆ ಬೆಳಕನ್ನು ಚೆಲ್ಲುವಂತಿರುತ್ತದೆ. ಸಮಾಜದಲ್ಲಿ ಕಾಣುವ ನಾನಾ ಬಗೆಯ ಜನರ ರೀತಿ ನೀತಿಗಳನ್ನೇ ವ್ಯವಹಾರ ವೈಚಿತ್ರ್ಯಗಳನ್ನೇ ಪರಿಣಾಮಕಾರಿಯಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ಅವನ ಸಾಮಾಜಿಕ ಪ್ರಜ್ಞೆಯಷ್ಟೇ ಅದನ್ನು ಸ್ವಾರಸ್ಯವಾಗಿ ಬಣ್ಣಿಸುವ ವೈಖರಿ ಅನುಪಮವಾದುದು. ಇಂತಹ ಒಂದು ಕಥೆಯನ್ನು ಹೇಳುವುದರ ಮೂಲಕ ಪ್ರೇಕ್ಷಕರಲ್ಲಿ ನವಚೇತನ ಮೂಡುವಂತೆ ಮಾಡಿ ಮತ್ತೆ ಮೊದಲ ಪ್ರಪಂಚಕ್ಕೆ ಅವರನ್ನು ಕರೆದೊಯ್ಯುತ್ತಾನೆ. ಉಪಕಥೆಯನ್ನು ಮುಗಿಸಿ ಮತ್ತೆ ಮೊದಲಿನ ಕಥೆಗೆ ಕರೆದೊಯ್ಯುವಾಗ -

ಅಲ್ಲಿಗಲ್ಲಿಗೆ ಕಥೆಯು ಮಲ್ಲಿಗೆ ವಾಸನೆಯು
ಬಲ್ಲಂಥ ಜಾಣರಿಗೆ ಇದು ಮಧುರವಯ್ಯಾ
ಅತಿ ಮಧುರವಯ್ಯಾ ।
ಮುಂದಲ ಕಥೆಯ ಅದರಂದವ ಪೇಳುವೆನು............

ಎಂಬುದಾಗಿ ಹೇಳಿ ಮುಖ್ಯ ಕಥೆಯನ್ನು ಮುಂದುವರಿಸುತ್ತಾನೆ. ಮುಂದೆ ಸಂಪೂರ್ಣ ಕಥೆಯ ಮುಕ್ತಾಯವಾದರೂ ಅಷ್ಟೇ ಅರ್ಥಪೂರ್ಣವಾಗಿ, ಸಾಂಪ್ರದಾಯಿಕವಾಗಿ ಆಗುತ್ತದೆ.

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಈ ಕಥೆಯು ಸಂಪೂರ್ಣವಾಯ್ತು
ಸಂಪೂರ್ಣವಾಯ್ತು ।

ಎಂದು ಹಾಡಿ ಮುಕ್ತಾಯವಾಗಿ -

ಮಂಗಳವಾಡೀರೆ ಜಯ ಜಯ
ಮಂಗಳವಾಡೀರೆ........

ಎಂದು ಮಂಗಳವನ್ನು ಭಕ್ತಿಯಿಂದ ಹಾಡುತ್ತಾರೆ. ಇವೆಲ್ಲವೂ ಸಾಂಪ್ರದಾಯಿಕವಾಗಿ ನಡೆಯುವಂತಹವು. ಕರಪಾಲ ಮೇಳದಲ್ಲಿ ಸಾಂಪ್ರದಾಯಿಕ ಆಚರಣೆಗಳಾಗಿ ಬೇರು ಬಿಟ್ಟಿರುವ

ಇವುಗಳು ಬಯಲಾಟದ 'ರಂಗ ಸಂಪ್ರದಾಯ'ಗಳಂತೆ ಇಲ್ಲಿಯ ರಂಗ ಸಂಪ್ರದಾಯ'ಕ್ಕೆ ಸಂಬಂಧಿಸಿದುವುಗಳು ಎಂದು ಕರೆಯಬಹುದು.

ಇಲ್ಲಿಯ ಕಥಾ ನಿರೂಪಣಾ ವೈಖರಿ ಹಾಗೂ ಅದರ ಧಾಟಿ ವಿಶಿಷ್ಟವಾದುದು. ಇದು ಒಂದು ರೀತಿ ವಿಶಿಷ್ಟ ಚಂಪೂ ಗದ್ಯಪದ್ಯವಷ್ಟೇ ಅಲ್ಲದೆ, ಸಂಭಾಷಣೆ ಉದ್ದಕ್ಕೂ ಸ್ಥಾನ ಪಡೆದಿರುತ್ತದೆ. ಇವು ಮೂರೂ ಮುಪ್ಪುರಿಗೊಂಡಿರುತ್ತವೆ. ಅವು ಮೂರನ್ನು ಒಟ್ಟಿಗೆ ನಿರ್ವಹಿಸುವ ನಿರೂಪಕನ ಜಾಣ್ಮೆ ಅತ್ಯಪೂರ್ವವಾದುದು. ಹೆಚ್ಚು ಗದ್ಯ ಹಾಗೂ ಸಂಭಾಷಣೆಗಳಲ್ಲಿಯೇ ಕಥೆ ಮುಂದುವರಿಯುತ್ತದೆ. ಆದರೆ, ವೈವಿಧ್ಯಕ್ಕೆಂಬಂತೆ ಅಲ್ಲಿ ಹಾಡುಗಳು ಮಧ್ಯೆ ಮಧ್ಯೆ ಬರುತ್ತವೆ. ಹಾಡುಗಳನ್ನು ಕೈಬಿಟ್ಟು ಕಥೆಯನ್ನು ಯಾವುದೇ ಭಂಗವಿಲ್ಲದೆ ಪೂರ್ಣಗೊಳಿಸಬಹುದು. ಏಕೆಂದರೆ, ಹಾಡಿನ ಅರ್ಥವನ್ನು ಗದ್ಯದಲ್ಲಿ ಮತ್ತೊಮ್ಮೆ ಹೇಳುತ್ತಾನೆ. ಅವೆರಡರ ಸಾಹಿತ್ಯವೂ ಒಂದೇ. ಬಯಲಾಟದಲ್ಲಿ ಬರುವ ಸಾಹಿತ್ಯದಂತೆ, ಕರಪಾಲ ಮೇಳದ ಕಥೆಗಳ ಆರಂಭದಲ್ಲಿಯೇ ಬರುವ ಈ ಭಾಗವನ್ನು ಗಮನಿಸಬಹುದು ;

ನಿರೂಪಕ: ಅಯ್ಯಾ ಮಗು ಕೇಳು ! ಇದೇ ಮಧುರಾವತಿ, ಮಧುರಾವತಿಯೆಂಬ ಪಟ್ಟಣವು ಯಾವ ರೀತಿ ಶೋಭಾಯಮಾನವಾಗಿದೆಯಪ್ಪ, ಅಂದರೆ..........

ಹಿಮ್ಮೇಳ: ಯಾವ ರೀತಿಯಿಂದ ಸ್ವಾಮಿ ?

ನಿರೂಪಕ: ಕೆತ್ತುಗಲ್ಲಿನ ಕೋಟೆ...........

ಹಿಮ್ಮೇಳ : ಕೆತ್ತುಗಲ್ಲಿನ ಕೋಟೆ
ಮುತ್ತಿನ ತೇನೆಗಳು
ಕೊತ್ತಳ ಸೌರಭ
ಬಿತ್ತರಿಸಲಳವೇ ಬಿತ್ತರಿಸಲಳವೇ ll ಕೊತ್ತಳ ll

ನಿರೂಪಕ: ಮಧುರಾವತಿ ಪಟ್ಟಣಕ್ಕೆ ಕಲ್ಲಿನಿಂದ ಕೋಟೆಯನ್ನು ಕಟ್ಟಿ, ಕೆತ್ತುಗಲ್ಲಿನಿಂದ ಅಲಂಕರಿಸಿ, ಮತ್ತೂ ಹೇಗಿದೆಯಪ್ಪ

ಹಿಮ್ಮೇಳ : ಹೇಗಿದೆ ಗುರುವೆ ?

ನಿರೂಪಕ: ಹಾಲು ಮಾರುವ ಬೀದಿ

ಹಿಮ್ಮೇಳ : ಹಾಲು ಮಾರುವ ಬೀದಿ
ನೂಲು ಮಾರುವ ಬೀದಿ
ಶಾಲು ಸಕಲಾತಿಗಳ
ಮಾರುವ ಬೀದಿ ಮಾರುವ ಬೀದಿ ll ಶಾಲು ll

ನಿರೂಪಕ: ಮಧುರಾವತಿ ಪಟ್ಟಣದಲ್ಲಿ ಹಾಲು ಮಾರುವಂಥ ಬೀದಿ ಮತ್ತು ನೂಲು ಮಾರುವಂಥ ಬೀದಿ, ಶಾಲು ಸಕಲಾತಿಗಳನ್ನು ಮಾರುವಂಥ ಬೀದಿಗಳಿಂದ ಕೂಡಿ ಮತ್ತೂ ಹೇಗಿವೆಯಪ್ಪ........

ಎಂದು ಹೀಗೆ ಆ ಪಟ್ಟಣವನ್ನು ಬಣ್ಣಿಸುತ್ತಾ ಹೋಗುತ್ತಾನೆ. ಇಲ್ಲಿಯ ಹಾಡು ಸಂಗೀತದ ಅಂಶವನ್ನು ಇಲ್ಲಿ ಕೂಡಿಸುವುದಕ್ಕಾಗಿ ಮೂಡಿಬಂದದ್ದು ಅಷ್ಟೇ. ಅದಿಲ್ಲದೆ ಪೂರ್ಣ ಕಥೆ ಅರ್ಥವಾಗುತ್ತದೆ, ಆಗಬಲ್ಲದು. ಆದರೆ ಹಾಡು ಅಲ್ಲಿ ಅಗತ್ಯವಾಗಿ ಬೇಕಾಗುತ್ತದೆ. ಅದಿಲ್ಲದೆ ಮೇಳ ಕಳೆಗಟ್ಟುವುದಿಲ್ಲ. ಹಿಮ್ಮೇಳದೊಡಗೂಡಿ ನಿರೂಪಕ ಆ ಹಾಡನ್ನು ಹಾಡಿದಾಗ ಹೊರ ಹೊಮ್ಮುವ ವಿಶಿಷ್ಟ ನಾದ ನಮ್ಮನ್ನು ಸೂರೆಗೊಳ್ಳುತ್ತದೆ. ಅಲ್ಲಿ ಗದ್ಯ - ಪದ್ಯಗಳ ಅಂತರ ಅಷ್ಟಾಗಿ ಗೋಚರಿಸದಿದ್ದರೂ ಪದ್ಯ ಬೀರುವ ಪರಿಣಾಮ ಅತಿಶಯವಾದದ್ದು.

ಇಲ್ಲಿಯ ಹಾಡುಗಳು ಕರಪಾಲದ ನಿರೂಪಕನಿಂದಲೇ ರಚನೆಗೊಂಡವುಗಳು. ಯಾವುದೋ ಒಂದು ಜನಪ್ರಿಯವಾದ ಜನಪದ ಕಥೆಯನ್ನು ಆಯ್ದುಕೊಂಡು ಆ ಹಾಡುಗಳನ್ನು ಅಗತ್ಯವಾದ ಕಡೆಗಳಲ್ಲಿ ಜೋಡಿಸಿಕೊಂಡು ಅದಕ್ಕೊಂದು ವಿಶಿಷ್ಟ ರೂಪವನ್ನು ಕೊಡುತ್ತಾನೆ. ಆ ಸಾಹಿತ್ಯದಂಶದ ದೃಷ್ಟಿಯಿಂದ ಹೆಚ್ಚುಗಾರಿಕೆ ಅಷ್ಟಾಗಿ ಕಾಣಬರದಿದ್ದರೂ ಅದು ಬೀರುವ ಒಟ್ಟಾರೆ ಪರಿಣಾಮದ ದೃಷ್ಟಿಯಿಂದ ಅಪೂರ್ವವಾದುದಾಗಿ ತೋರುತ್ತದೆ.

ಒಟ್ಟಿನಲ್ಲಿ 'ಕಾಡು ಸಿದ್ದಮ್ಮನ ಕಥೆ' ಕರಪಾಲದವರ ಕೈಯಲ್ಲಿ ಕಾವ್ಯದ ಸ್ವರೂಪವನ್ನು ಪಡೆದುಕೊಂಡಿದೆಯೆನ್ನಬಹುದು.

ನೀಲಕಂಠ ರೂಪಾವತಿ

ನೀಲಾವತಿ ಪಟ್ಟಣ. ಭಾನುಶೇಖರ ಮಹಾರಾಜನ ಮಗನಾದ ನೀಲಕಂಠ ಮಹಾರಾಜನು ಅದನ್ನು ಧರ್ಮದಿಂದ ಆಳುತ್ತಿದ್ದನು. ಅವನ ಧರ್ಮಪತ್ನಿ ರೂಪಾದೇವಿ. ಹೀಗಿರಲು ತಂದೆಯ ಮಾತಿನಂತೆ ವಜ್ರಾವತಿ ಪಟ್ಟಣದ ಭುಜಗೇಂದ್ರನ ಮೇಲೆ ದಂಡೆತ್ತಿ ಹೋಗಬೇಕಾಗುತ್ತದೆ. ಮಾರ್ಗ ಮಧ್ಯದಲ್ಲಿ ತಂಗಿರುವಾಗ ಮರದ ಮೇಲಿದ್ದಂತಹ ದೇವ ಲೋಕದ ಪಕ್ಷಿಗಳು 'ಇದೇ ಶುಭದಿನ ಶುಭತಿಥಿ ಶುಭಲಗ್ನದಲ್ಲಿ ಸಂತಾನವಿಲ್ಲದವರು ಇಂದು ರತಿ ಸುಖವನ್ನು ಬಯಸಿದ್ದೇ ಆದರೆ ಅವರಿಗೆ ಸುಪುತ್ರ ಮಗ - ನಕ್ಕರೆ ನವರತ್ನ ಸುರಿಯುವಂಥಾ, ಅತ್ತರೆ ಮುತ್ತು ಸುರಿಯು ವಂಥಾ ಮಗ - ಹುಟ್ಟುತ್ತಾನೆ' ಎಂದು ಗಂಡುಭೇರುಂಡ - ಹೆಣ್ಣು ಭೇರುಂಡ ಮಾತನಾಡುತ್ತಿರು ವುದನ್ನು ಕೇಳಿಸಿಕೊಂಡು ಸಂತಾನವಿಲ್ಲದ ನೀಲಕಂಠ ಮಹಾರಾಜ ಚಿಂತೆಗೀಡಾಗಲು, ಪಕ್ಷಿಗಳೇ ನೆರವಿಗೆ ಬಂದು, ಅವನನ್ನು ರಹಸ್ಯವಾಗಿ ನೀಲಾವತಿ ಪಟ್ಟಣಕ್ಕೆ ಕರೆತಂದು ರೂಪಾವತಿಯೊಂದಿಗೆ ರತಿಸುಖವನ್ನು ಪಡೆಯುವಂತೆ ಮಾಡಿ ಮತ್ತೆ ಆ ಗಳಿಗೆಯಲ್ಲಿಯೇ ಹಿಂದಕ್ಕೆ ಕರೆತಂದುಬಿಡುತ್ತವೆ. ನೀಲಕಂಠ ಮಹಾರಾಜ ಬಂದು ಹೋದ ವಿಚಾರ ರೂಪಾವತಿಗಲ್ಲದೆ ಬೇರೆ ಯಾರಿಗೂ ತಿಳಿದಿರುವುದಿಲ್ಲ.

ರೂಪಾವತಿ ಗರ್ಭ ಧರಿಸುತ್ತಾಳೆ. ಬಾಯಿಗೆ ಬೇಕಾದ್ದನ್ನು ಬಯಸುತ್ತಾಳೆ. ಈ ವಿಚಾರ ಎಲ್ಲರಲ್ಲಿಯೂ ಸಹಜವಾಗಿಯೇ ಶಂಕೆಯನ್ನು ಹುಟ್ಟಿಸುತ್ತದೆ. ನಾನು ಬಂದು ಹೋದ ವಿಚಾರ ವನ್ನಷ್ಟೇ ಹೇಳಬೇಕೆಂಬ ಪತಿಯ ಮಾತನ್ನು ಪಾಲಿಸಿದ ಅವಳಿಗೆ ಕಷ್ಟ ಕಾದಿರುತ್ತದೆ. ಅವಳ ಮಾತನ್ನು ಯಾರೊಬ್ಬರೂ ನಂಬುವುದಿಲ್ಲ. 'ಪತಿಯಿಲ್ಲದಾಗ ಕದ್ದು ಬಸುರಾದಳು' ಎಂಬ ಅಪವಾದ ಅವಳ ಬೆನ್ನಟ್ಟುತ್ತದೆ. ಮಾವ ಭಾನುಶೇಖರ ಮಹಾರಾಜ ವಿಚಾರವನ್ನು ತಿಳಿದು ಕುಲಕ್ಕೆ ಬರುವ ಕಳಂಕವನ್ನು ತಿಳಿದು ಅವಳನ್ನು ಅರಣ್ಯಕ್ಕೆ ಅಟ್ಟುತ್ತಾನೆ. ಘೋರ ಕಾನನದಲ್ಲಿ ದಿಕ್ಕು ಕಾಣದೆ ಅಲೆದು, ಕೊನೆಗೆ ತನ್ನ ತೌರಿನಲ್ಲಾದರೂ ಆಶ್ರಯ ಪಡೆಯಬೇಕೆಂಬ ಆಸೆಯಿಂದ ನಂದೀ ಪಟ್ಟಣದ

ಹಾದಿಯನ್ನು ಹಿಡಿಯುತ್ತಾಳೆ. ಆದರೆ, ಅವಳ ಪಾಲಿಗೆ ಅದೂ ಮುಳ್ಳಾಗುತ್ತದೆ. ಮಗಳ ಮಾತನ್ನು ನಂಬದೆ ಅವರೂ ಹೊರ ಅಟ್ಟುತ್ತಾರೆ. ಗೋಳಿಡುತ್ತಾ ಮುಂದಿನ ದಾರಿ ಹಿಡಿಯುತ್ತಾಳೆ. ಮುಂದೆ ಚಂಪಕ ನಗರ ಸಿಕ್ಕುತ್ತದೆ. ಆ ಪಟ್ಟಣವನ್ನು ಸೇರುತ್ತಾಳೆ. ಧರ್ಮಶೇಖರ ಮಹಾರಾಜ ಅಲ್ಲಿಯ ದೊರೆ. ಆತನ ಧರ್ಮಪತ್ನಿ ನಿರ್ಮಲಾದೇವಿ, ಸಂತಾನ ವಿಲ್ಲದೆ ಇಬ್ಬರೂ ದುಃಖಸಾಗರದಲ್ಲಿ ಮುಳುಗಿದ್ದಾರೆ.

ಚಂಪಕ ನಗರವನ್ನು ಪ್ರವೇಶಿಸಿದ ರೂಪಾವತಿ ತುಂಬು ಗರ್ಭಿಣಿಯಾಗಿದ್ದಾಳೆ. ಧಾರಾಕಾರ ವಾದ ಮಳೆಯಲ್ಲಿ ದಿಕ್ಕು ಕಾಣದೆ ಮಸಣದಲ್ಲಿ ನಡೆದು ಬಂದು, ಹೊಸದಾದ ಸಮಾಧಿಯನ್ನು ತುಳಿದು ಅದರಲ್ಲಿ ಕುತ್ತಿಗೆಯವರೆಗೂ ಹೂತುಹೋಗುತ್ತಾಳೆ. ಆ ಸಮಾಧಿ ಆ ನಗರದ ವೇಶ್ಯೆ ಕಾಳಾಸಾನಿಯ ಮಗಳದ್ದು. ಮೇಲಕ್ಕೆ ಬರಲಾರದೆ ಬೆಳಗಿನವರೆಗೂ ಆ ಸಮಾಧಿಯಲ್ಲಿಯೇ ಅವಳು ಉಳಿಯಬೇಕಾಗುತ್ತದೆ. ಅಂದಿಗೆ ಹನ್ನೊಂದು ದಿನವಾದ್ದರಿಂದ ಕಾಳಾಸಾನಿ ಗುದ್ದೇಶಾಸ್ತ್ರ ಮಾಡಲು ಅಲ್ಲಿಗೆ ಬರುತ್ತಾಳೆ. ರೂಪಾವತಿಯ ಅತಿಶಯವಾದ ರೂಪವನ್ನು ಕಂಡು, ತನ್ನ ಮಗಳಿಗಿಂತಲೂ ಅತಿಶಯವಾದ ರೂಪು ಇವಳದ್ದು ಎಂದು ಆಶೆಪಟ್ಟು, ಅವಳನ್ನು ತನ್ನ ಮನೆಗೆ ಕರೆದೊಯ್ಯುತ್ತಾಳೆ. ದಿನಗಳು ಕಳೆಯುತ್ತವೆ. ರೂಪಾವತಿಗೆ ಪ್ರಸವ ವೇದನೆ ಕಾಣಿಸಿಕೊಳ್ಳುತ್ತದೆ. ಕಾಳಾಸಾನಿ ಸೂಲಗಿತ್ತಿಯನ್ನು ಕರೆಸಿ, ಅವಳಲ್ಲಿ ಹೆಣ್ಣು ಮಗು ಜನನವಾದರೆ ಉಳಿಸು, ಗಂಡು ಮಗು ಜನನವಾದರೆ ಸಾಯಿಸಿ ಕಣ್ಮರೆ ಮಾಡು ಎಂಬುದಾಗಿ ಹೇಳಿ ಕಳುಹಿಸುತ್ತಾಳೆ. ಆದರೆ, ರಂಗಾಸಾನಿಯ ಆಸೆ ಈಡೇರುವುದಿಲ್ಲ. ರೂಪಾವತಿ ರೂಪುಳ್ಳ ಗಂಡು ಮಗುವಿಗೇ ಜನ್ಮ ನೀಡುತ್ತಾಳೆ. ಕಾಳಾಸಾನಿಯ ಅಪ್ಪಣೆಯಂತೆ ಆ ಸೂಲಗಿತ್ತಿ ಗಂಡು ಮಗುವನ್ನು ಎತ್ತಿಕೊಂಡು ಹೋಗಿ ಒಂದು ಮೆಳೆಯ ಬಳಿ ಬಿಟ್ಟು ಬರುತ್ತಾಳೆ. ಆ ಶಿಶು ಮಕ್ಕಳಿಲ್ಲದ ಆ ಪಟ್ಟದರಾಣಿ ನಿರ್ಮಲಾ ದೇವಿಯ ಕೈ ಸೇರುತ್ತದೆ. ಅವನನ್ನು ಅರಮನೆಗೆ ಕರೆತಂದು ಬಿಲ್ವಶೇಖರ ಮಹಾರಾಜನೆಂದು ನಾಮಕರಣ ಮಾಡುತ್ತಾರೆ. ಅವನು ಬೆಳೆದು ದೊಡ್ಡವನಾಗಿ ತಾರುಣ್ಯವನ್ನು ಪಡೆಯುತ್ತಾನೆ. ಚಂಪಕ ನಗರದ ಯುವರಾಜನಾಗಿ ಪಟ್ಟ ಧರಿಸುತ್ತಾನೆ.

ಒಂದು ದಿನ ನಗರವನ್ನು ಸುತ್ತಿ ಬರಬೇಕೆಂದು ಬಿಲ್ವಶೇಖರನು ಪರಿವಾರ ಸಮೇತ ಅಂಬಾರಿಯನ್ನೇರಿ ಹೊರಡುತ್ತಾನೆ. ಪಟ್ಟಣವನ್ನೆಲ್ಲಾ ಸುತ್ತಿಕೊಂಡು ವೇಶ್ಯೆಯಾದ ಕಾಳಾಸಾನಿಯ ಮನೆಯ ಮುಂದೆ ಬಂದಾಗ ರೂಪಾವತಿ ರಾಜಕುಮಾರನ ಕಣ್ಣಿಗೆ ಬೀಳುತ್ತಾಳೆ. ಅವರ ರೂಪಿಗೆ ಮಾರು ಹೋಗುತ್ತಾನೆ. ಒಮ್ಮೆಯಾದರೂ ಇವಳೊಂದಿಗೆ ಮಾತನಾಡಬೇಕೆಂಬ ಬಯಕೆಯನ್ನು ಹೊತ್ತು ಅರಮನೆಗೆ ಬಂದು ಕಾಳಾಸಾನಿಯನ್ನು ಬರಮಾಡಿಕೊಂಡು ವಿಷಯವನ್ನು ತಿಳಿಸುತ್ತಾನೆ. ಅವಳು ಸಂತೋಷದಿಂದ ಒಪ್ಪಿ ತನ್ನ ಮನೆಗೆ ಬಂದು ರೂಪಾದೇವಿಯನ್ನು ಒತ್ತಾಯಿಸಿ ಒಪ್ಪಿಸುತ್ತಾಳೆ. ದಾರಿ ಕಾಣದ ರೂಪಾದೇವಿ ಮೂಕಳಂತೆ ಸುಮ್ಮನಾಗುತ್ತಾಳೆ. ಬಿಲ್ವಶೇಖರ ಶೃಂಗರಿಸಿಕೊಂಡು -

ಕುದುರೆಯ ಕುಣಿಸುತ್ತ
ಕುಡಿಮೀಸೆ ತಿರುವುತ್ತ
ಬರಲಯ್ಯೊ ರಾಜ । ಬರಲಯ್ಯೋ ರಾಜ ।

ಹೀಗೆ ಬಂದು ಕಾಳಾಸಾನಿಯ ಮನೆಯ ಬಾಗಿಲಲ್ಲಿ ನಿಲ್ಲುತ್ತಾನೆ. ಕಾಳಾಸಾನಿ ಸಂಭ್ರಮದಿಂದ

ಸ್ವಾಗತಿಸುತ್ತಾಳೆ. ಇವನೂ ಸಂಭ್ರಮದಿಂದ ಒಳ ನುಗ್ಗುವಾಗ ದಾರಿಯಲ್ಲಿ ಮಲಗಿದ್ದ ಕರುವಿನ ಕಾಲನ್ನು ತುಳಿಯುತ್ತಾನೆ. ಆಗ ಆ ಕರು 'ಅಮ್ಮ ! ನನ್ನ ಕಾಲನ್ನು ಯಾರೋ ಬಹಳ ನೋವಾಗುವಂತೆ ತುಳಿದ' ಎಂದು ಹೇಳುತ್ತದೆ. ಆ ಮಾತಿಗೆ 'ಅವನ್ಯಾರೋ ಮೂರ್ಖ ಬಡ್ಡೀ ಮಗ ಹೆತ್ತ ತಾಯನ್ನು ಗುರುತಿಸದವನು' ಎಂದು ಆ ಗೋವು ಕರುವಿಗೆ ಹೇಳುತ್ತದೆ. ಆ ಕೂಡಲೆ ಬಿಲ್ವಶೇಖರ ಮುಂದಕ್ಕೆ ಒಂದು ಹೆಜ್ಜೆಯನ್ನೂ ಇಡದೆ ನೇರವಾಗಿ ಅರಮನೆಗೆ ಬಂದು ತನ್ನ ತಾಯಿಯ ಬಳಿ :

ಅಮ್ಮ ನಾನೇನು ಹಡೆದ ಮಗನೆ

ಇಲ್ಲ ಪಡೆದ ಮಗನೆ

ಎಂದು ಕೇಳುತ್ತಾನೆ. ನಿರ್ಮಲಾದೇವಿ ವಿಚಾರವನ್ನು ತಿಳಿಸಿ "ಪಡೆದ ಮಗನೇ ಹೊರತು ಹಡೆದ ಮಗನಲ್ಲ"ವೆಂದು ಹೇಳುತ್ತಾಳೆ. ಆಗಲೇ ಕಾಳಾಸಾನಿಯನ್ನು, ಸೂಲಗಿತ್ತಿ ಸಂಗಮ್ಮನನ್ನು ಕರೆಸಿ ನಿಜಸ್ಥಿತಿಯನ್ನು ತಿಳಿದು, ಬಿಲ್ವಶೇಖರ ತನ್ನ ತಾಯಿಯಾದ ರೂಪಾದೇವಿಯನ್ನು ಕರೆತಂದು ಅರಮನೆಯಲ್ಲಿಟ್ಟುಕೊಂಡು ತಂದೆಯನ್ನು ಹುಡುಕುವ ಏರ್ಪಾಡು ಮಾಡುತ್ತಾನೆ.

ಇತ್ತ ಯುದ್ಧದಿಂದ ಹಿಂತಿರುಗಿದ ನೀಲಕಂಠ ಮಹಾರಾಜನು ರೂಪಾವತಿಯಿಲ್ಲದಿರುವುದನ್ನು ತಿಳಿದು ದುಃಖಿತನಾಗಿ ಅವಳನ್ನು ಅರಸುತ್ತಾ ಕಾಡು ಮೇಡುಗಳನ್ನೆಲ್ಲಾ ಅಲೆದು ಸುಸ್ತಾಗಿ ಕೊನೆಗೆ ಚಂಪಕ ನಗರದ ಬಳಿಗೆ ಬಂದು ರಾಜಭಟರ ಮೂಲಕ ಅರಮನೆಯನ್ನು ಸೇರುತ್ತಾನೆ. ತಂದೆ - ತಾಯಿ - ಮಗ ಒಟ್ಟು ಸೇರುತ್ತಾರೆ. ಎಲ್ಲರೂ ಸೇರಿ ನೀಲಾವತಿ ಪಟ್ಟಣಕ್ಕೆ ಬಂದು, ಸ್ವಲ್ಪ ಕಾಲ ಅಲ್ಲಿ ಇರುತ್ತಾರೆ. ಭಾನುಶೇಖರ ಮಹಾರಾಜನಿಗೂ ನಿಜಸ್ಥಿತಿ ತಿಳಿದು ಅವಳಿಗೆ ಕೊಟ್ಟ ಕಷ್ಟಕ್ಕಾಗಿ ದುಃಖ ಪಡುತ್ತಾನೆ. ಬಿಲ್ವಶೇಖರ ಮಹಾರಾಜನು ಸ್ವಲ್ಪ ಕಾಲ ಅಲ್ಲಿಯೇ ಇದ್ದು ನಂತರ ಚಂಪಕ ನಗರಕ್ಕೆ ಹೊರಡುತ್ತಾನೆ. ಇಷ್ಟು ಕಥೆಯಾದ ಮೇಲೆ -

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ

ಇಲ್ಲಿಗೆ ಈ ಕಥೆಯು ಸಂಪೂರ್ಣವಾಯ್ತು

ಸಂಪೂರ್ಣವಾಯ್ತು

ಎಂಬ ಹಾಡಿನೊಂದಿಗೆ ಮುಕ್ತಾಯವನ್ನು ಪಡೆಯುತ್ತದೆ.

ಕಥಾತಂತ್ರದ ದೃಷ್ಟಿಯಿಂದ ಕರಪಾಲದ ಕಥೆಗಳೆಲ್ಲವೂ ಒಂದೇ. ಆದರೆ, ಕತೆ ಮತ್ತು ಅಲ್ಲಿ ಬರುವ ಘಟನಾವಳಿಗಳ ದೃಷ್ಟಿಯಿಂದ ಅಪೂರ್ವವಾದ ಬದಲಾವಣೆಗಳನ್ನೂ ಆಕರ್ಷಕವಾದ ಅಂಶಗಳನ್ನೂ ಕಾಣುತ್ತೇವೆ.

'ನೀಲಕಂಠ - ರೂಪಾವತಿ' ಅಪೂರ್ವವಾದ ಸನ್ನಿವೇಶಗಳಿಂದ ಮನೋಜ್ಞವಾದ ಘಟನೆ ಗಳಿಂದ ಕೂಡಿದ ಒಂದು ಕಥೆ. ಕರಪಾಲದ ಕಲಾವಿದ ಸಾಮಾನ್ಯ ಜನಪದ ಕಥೆಯೊಂದಕ್ಕೆ ಚಿನ್ನದ ಮೆರುಗನ್ನು ಕೊಟ್ಟು ಅತ್ಯಾಕರ್ಷವಾಗಿಸಿದ್ದಾನೆ. ನೀಲಕಂಠ - ರೂಪಾವತಿಯ ಕಥೆ ಅತ್ಯಂತ ಗಂಭೀರವಾಗಿಯೇ ಆರಂಭವಾಗುತ್ತದೆ. ಅದರಲ್ಲಿ ಬರುವ ವಜ್ರಾವತಿ ಪಟ್ಟಣ, ಭುಜಗೇಂದ್ರ, ನೀಲಕಂಠ - ರೂಪಾವತಿ ಭಾನುಶೇಖರ, ನಂದೀರಾಜ ಮುಂತಾದ ಹೆಸರುಗಳೇ ವಿಶಿಷ್ಟ ರೀತಿಯಲ್ಲಿ ನಮ್ಮನ್ನು ಸೆರೆ ಹಿಡಿಯುತ್ತವೆ. ಅಲ್ಲಿ ಬರುವ ಘಟನೆಗಳು ಇದ್ದಕ್ಕಿದ್ದಂತೆ ಪರಿಣಾಮಕಾರಿಯಾದ ತಿರುವನ್ನು ಪಡೆದುಕೊಳ್ಳುವುದು

ನಮ್ಮನ್ನು ಬೆರಗುಗೊಳಿಸುತ್ತದೆ. ಯಾರೊಬ್ಬರೂ ಊಹಿಸದ ರೀತಿಯಲ್ಲಿ ಬೇರೊಂದು ಘಟನೆಗೆ ಪೂರಕವಾಗುವ ರೀತಿಯಲ್ಲಿ ನಡೆಯುವ ಘಟನೆಗಳು ಕಲಾವಿದನ ಪ್ರತಿಭೆಗೆ ಸಾಕ್ಷಿಯಂತಿವೆ.

ಪ್ರಾರಂಭದಲ್ಲಿಯೇ ಬರುವ ಯುದ್ಧದ ಘಟನೆ ಆಕಸ್ಮಿಕವಾಗಿ ತೋರದೆ, ಅನಿವಾರ್ಯವೆಂಬಂತೆ ಸೇರಲ್ಪಟ್ಟು ಕಥೆಗೆ ಒಳ್ಳೆಯ ತಳಹದಿಯನ್ನು ನಿರ್ಮಿಸುತ್ತಾನೆ. ನಂತರದ ದೇವಲೋಕದ ಪಕ್ಷಿಗಳ ಘಟನೆ ಜನಪದ ಕಥೆಗಳಲ್ಲಿ ತೀರ ಸಾಮಾನ್ಯವಾದುದು. ಅದನ್ನೇ ಕರಪಾಲದ ಕಲಾವಿದ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾನೆ. ನಕ್ಕರೆ ನವರತ್ನ ಸುರಿಯು ವಂತಹ ಅತ್ತರೆ ಮುತ್ತು ಸುರಿಯುವಂತಹ ಮಗ ಹುಟ್ಟುವುದು ಜನಪದ ಕಥೆಗಳಿಗೆ ಸಂಬಂಧಿಸಿ ದಂತೆ ಹೊಸದೇನೂ ಅಲ್ಲ. ಆದರೆ, ತಂದೆ - ತಾಯಿಗಳು ಮಗನನ್ನು ಗುರುತಿಸಲು ಒಂದೇ ಉಪಯುಕ್ತ ಸಾಧನವೆಂಬ ರೀತಿಯಲ್ಲಿ ಬಳಕೆಯಾಗಿರುವುದು ಗಮನಾರ್ಹವಾಗಿದೆ. ಹಲವು ಯೋಜನ ದೂರವಿದ್ದವನು ರಾತ್ರೋರಾತ್ರಿ ಬಂದು ಹೋದನೆಂಬುದು ಸಹಜವಾಗಿಯೇ ಎಲ್ಲರಿಗೂ ಆಶ್ಚರ್ಯ ಹುಟ್ಟಿಸುವುದಷ್ಟೇ ಅಲ್ಲ, ಅನುಮಾನ ಹುಟ್ಟಿಸುವ ಪ್ರಸಂಗ ಕೂಡ. ಆದರೆ, ಇಡೀ ಕಥೆಯ ಸ್ವಾರಸ್ಯ ಅಡಗಿರುವುದೇ ಅದರಲ್ಲಿ. 'ಗಂಡನೇ ಬಂದು ಹೋದನೆಂದು' ಸತ್ಯವನ್ನೆ ತಿಳಿಸಬೇಕೆಂದು ಹೇಳಿ ಹೋದ ಪತಿಯ ಮಾತನ್ನು ಪಾಲಿಸ ಹೋದ ರೂಪಾವತಿಗೆ ಇಲ್ಲದ ಕಷ್ಟಗಳು ಎದುರಾಗುತ್ತವೆ. ಆದರೂ, ಅವಳು ಎದೆಗುಂದುವುದಿಲ್ಲ. ಮನೆಯಿಂದ ಹೊರಹಾಕಿದಾಗಲೂ ಗರ್ಭವತಿಯಾದ ಅವಳು ಅರಣ್ಯದತ್ತ ನಡೆಯುತ್ತಾಳೆ. ಕೊನೆಗೆ ಸುತ್ತಿ ಬೇಸತ್ತು ತೌರಿನ ದಾರಿ ಹಿಡಿಯುತ್ತಾಳೆ. ಅಲ್ಲಿಯೂ ಕೂಡ ಅವಳಿಗೆ ಪುರಸ್ಕಾರವಿರುವುದಿಲ್ಲ. ಜನರ ಮನಸ್ಸನ್ನು ಯಾವ ಘಟನೆಗಳು ಬಹಳವಾಗಿ ಸೆರೆ ಹಿಡಿಯಬಲ್ಲವು ಎಂಬುವನ್ನು ನಿರೂಪಿಸುವುದು ಅವನ ಗುರಿ. ಇಲ್ಲಿ ವಾಸ್ತವವಾಗಿ ಅವಳು ಮಹಾ ಪತಿವ್ರತೆಯೇ ಆಗಿದ್ದರೂ, ನಿಜಾಂಶ ಯಾರೊಬ್ಬರಿಗೂ ತಿಳಿಯದ ಕಾರಣ ಅವರ ದೃಷ್ಟಿಯಲ್ಲಿ ಅವಳು ಕೆಟ್ಟಂತೆಯೇ ಆಗಿದೆ. ಈ ಘಟನೆಯ ಹಿನ್ನೆಲೆಯಲ್ಲಿ ಅವಳ ವ್ಯಕ್ತಿತ್ವ ಮತ್ತಷ್ಟು ಮೇಲಕ್ಕೇರುತ್ತದೆ. ಪತಿಯೆಂದು ಹೇಳಿಕೊಂಡು ಮಧ್ಯ ರಾತ್ರಿಯಲ್ಲಿ ಬಂದ ಪತಿಯನ್ನೇ ಪರೀಕ್ಷಿಸಿದ ಆಕೆ ನೀತಿಗೆಡುವುದುಂಟೆ ? ಎಂಬ ಪ್ರಶ್ನೆ ಪ್ರೇಕ್ಷಕರಲ್ಲಿ ಸಹಜವಾಗಿ ಮೂಡುತ್ತದೆ. ಆ ಮೂಲಕ ಅವರ ಅನುಕಂಪವನ್ನು ಗಳಿಸುತ್ತಾನೆ.

ನೀಲಕಂಠ ಮಹಾರಾಜ ಕಥೆಯ ಆರಂಭದಲ್ಲಿ ಕಾಣಿಸಿಕೊಂಡರೆ ಮತ್ತೆ ಅವನ ಆಗಮನ ಕಥೆಯ ಅಂತ್ಯದಲ್ಲಿಯೇ. ಆದರೂ ಇಡೀ ಕಥೆಯ ಚಾಲಕ ಶಕ್ತಿ ಅವನೇ ಆಗಿರುತ್ತಾನೆ. ತನ್ನ ಪತ್ನಿಯ ಧರ್ಮವನ್ನು ಪರೀಕ್ಷಿಸಬೇಕೆಂದೇ ಆತ ಒಡ್ಡಿದ ಒಂದು ಸಮಸ್ಯೆ ಎಷ್ಟೆಲ್ಲಾ ಅನಾಹುತ ಗಳಿಗೆ ಕಾರಣವಾದರೂ, ಅಷ್ಟೆಲ್ಲವನ್ನೂ ಅವನು ಊಹಿಸಿರಲಿಲ್ಲವೆಂಬುದು ಅವನು ತನ್ನ ಧರ್ಮಪತ್ನಿಯನ್ನು ಹುಡುಕಿಕೊಂಡು ಅಲೆಯುವಾಗ ವ್ಯಕ್ತವಾಗುತ್ತದೆ. ಒಂದು ರೀತಿಯ ಹುಡುಗಾಟದ ಅಥವಾ ಸತ್ವಪರೀಕ್ಷೆಯ ಒಂದು ನುಡಿ ದೊಡ್ಡ ಕಿಡಿಯನ್ನೇ ಎಬ್ಬಿಸಿ ದೊಡ್ಡ ದುರಂತಕ್ಕೆ ಕಾರಣವಾಗುತ್ತದೆ.

ಈ ಘಟನೆಯ ನಂತರ ಮುಂದಿನ ಕಥೆಯ ಕಥಾನಾಯಕಿ ರೂಪಾವತಿಯೇ ಆಗಿಬಿಡುತ್ತಾಳೆ. ಅದರ ಉದ್ದಗಲಕ್ಕೂ ವ್ಯಾಪಿಸಿ, ಕೊನೆಯವರೆಗೂ ದುರಂತದ ಛಾಯೆಯಲ್ಲಿಯೇ ನಡೆಯುತ್ತಾಳೆ. ಅತ್ತೆ ಮಾವಂದಿರಿಂದ, ತಂದೆ ತಾಯಿಗಳಿಂದ ದೂರವಾದ ರೂಪಾವತಿ -

ತಂದೆ ತಾಯಿಗಳಿಲ್ಲ
ಬಂಧು ಬಳಗವಿಲ್ಲ

ದಿಕ್ಕಿಲ್ಲ ಎನಗೇ ।। ಹಿಂದೆ ಮುಂದ್ಯಾ ।।

ಇಂಥ ಪರದೇಶಿ ನಾನಾದೆ ಶಿವನೇ

ಶಿವನೇ । ಶಿವನೇ । ಶಿವನೇ ।

ಎಂದು ಕಣ್ಣೀರನ್ನು ಸುರಿಸುತ್ತಾ ಅರಣ್ಯ ಮಾರ್ಗವನ್ನು ಹಿಡಿದು ಬರುತ್ತಿರುವಾಗಲೇ ಕಥೆಯು ಬೇರೊಂದು ಹೊಸ ತಿರುವನ್ನು ಪಡೆದುಕೊಳ್ಳುತ್ತದೆ. ಚಂಪಕನಗರದ ವೇಶ್ಯೆ ಕಾಳಾಸಾನಿಯ ಮನೆಯನ್ನು ಸೇರುವ ಪ್ರಸಂಗ ಕಥೆಯ ಎರಡನೆಯ ಮುಖ್ಯ ಘಟ್ಟವಾಗಿ ನಿಲ್ಲುತ್ತದೆ. ಇದು ಕಥೆಗೆ ಒಂದು ಹೊಸ ತಿರುವನ್ನು ಕೊಡುವುದಷ್ಟೇ ಅಲ್ಲ, ಮುಂದಿನ ಕಥೆಯ ಚಾಲಕ ಶಕ್ತಿಯೂ ಆಗಿ ಪರಿಣಾಮಕಾರಿಯಾಗಿದೆ. ವೇಶ್ಯೆಯಾದ ಕಾಳಾಸಾನಿ ಸಹಜವಾಗಿ ರೂಪವತಿಯಾದ ಹೆಣ್ಣು ಮಕ್ಕಳನ್ನು ಬಯಸುವುದು, ರೂಪಾವತಿಯ ಗರ್ಭದಲ್ಲಿ ಜನನವಾದ ಗಂಡು ಶಿಶುವನ್ನು ಪೊದೆಗೆ ಎಸೆಯುವಷ್ಟು ನಿಷ್ಕರುಣೆಯಾಗುವುದು, ಇದಾವುದೊಂದೂ ಆ ಹಿನ್ನೆಲೆಯಲ್ಲಿ ಅಸಹಜವಲ್ಲ. ಹಾಗೆಯೇ ಮಕ್ಕಳಿಲ್ಲದ ಆ ಪಟ್ಟಣದ ರಾಜದಂಪತಿಗಳು ನಕ್ಕರೆ ನವರತ್ನ ಸುರಿಯುವ, ಅತ್ತರೆ ಮುತ್ತು ಸುರಿಯುವ ಅಪರೂಪದ ಮಗುವನ್ನು ಸಾಕಿಕೊಳ್ಳುವ ಪ್ರಸಂಗವೂ ಸಹಜವಾದದ್ದೇ.

ಮಹಾ ಪತಿವ್ರತೆಯಾದ ರೂಪಾದೇವಿ, ವೇಶ್ಯೆಯೊಬ್ಬಳ ಮನೆಯನ್ನು ಸೇರುವುದು, ತನ್ನ ಆಶಾಕಿರಣವಾಗಿ ಬರಬಹುದೆಂದು ಹಂಬಲಿಸಿದ್ದ ಮಗುವೂ ಕೈಸೇರದಂತಾಗುವುದು, ಕೊನೆಗೆ ಹೆತ್ತ ಮಗನೇ ಅರಿವಿಲ್ಲದೆಯೇ ತಾಯಿಯನ್ನು ಕೂಡುವ ಸಂದರ್ಭ ಒದಗಿ ಬಂದು, ಆದರೆ ಅದೇ ನಿರೂಪಕನ ಅದ್ಭುತ ಜಾಣ್ಮೆಯಿಂದ ತಪ್ಪಿ ಅವಳ ಬಾಳ ಬೆಳಕಿಗೆ ಕಾರಣವಾಗುವುದು - ಇವೆಲ್ಲಾ ಅಪೂರ್ವ ಘಟನೆಗಳಾಗಿದ್ದು ರೂಪಾವತಿಯ ವ್ಯಕ್ತಿತ್ವವನ್ನು ಹಿರಿದಾಗಿಸುತ್ತವೆ. ಮೊದಲಿನಿಂದ ಕೊನೆಯವರೆಗೆ ದುಃಖದ ಮಡುವಿನಲ್ಲಿಯೇ ಬದುಕನ್ನು ದೂಡಿದ ರೂಪಾವತಿ ಪುಟವಿಟ್ಟ ಚಿನ್ನದಂತೆ ಕಂಗೊಳಿಸುತ್ತಾಳೆ.

ಪತಿವಾಕ್ಯ ಪರಿಪಾಲನೆಯ ಪತಿವ್ರತಾ ಧರ್ಮ ಇಷ್ಟೆಲ್ಲ ಅನಾಹುತಗಳಿಗೆ ಕಾರಣವಾಗುತ್ತದೆ. ಆದರೆ, ಇದರ ಉದ್ದಕ್ಕೂ ಒಂದಕ್ಕೊಂದನ್ನು ಕೂಡಿಸುವ ಕೊಂಡಿಯಾಗಿ ಬರುವ ಯಾವ ಘಟನೆಗಳೂ ವಾಸ್ತವಿಕತೆಯ ಎಲ್ಲೆಯನ್ನು ಮೀರಿಲ್ಲ.

'ನೀಲಕಂಠ - ರೂಪಾವತಿ' ಕರಪಾಲದ ಕಲಾವಿದನ ಪ್ರತಿಭಾ ಮೂಸೆಯಲ್ಲಿ ಅಪೂರ್ವ ರೂಪವನ್ನು ಪಡೆದುಕೊಂಡಿದೆ. ಸಾಮಾನ್ಯ ಜನಪದ ಕಟ್ಟುಕಥೆಯ ವ್ಯಾಪ್ತಿಯಿಂದ ಸಿಡಿದು, ಜನಪದ ಕಾವ್ಯದ ವ್ಯಾಪ್ತಿಗೆ ಸೇರುತ್ತದೆ.

ಬಸವಕುಮಾರ - ಲೋಹಿತಕುಮಾರ

ನರಸಾವತಿ ಪಟ್ಟಣ. ಅದನ್ನಾಳುತ್ತಿದ್ದವನು ನರಸೇಂದ್ರ ಮಹಾರಾಜ. ಅವನ ಹಿರಿಯ ಹೆಂಡತಿ ನರಸಾವತಿ ಮತ್ತು ಕಿರಿಯ ಹೆಂಡತಿ ಜೂನಾವತಿ ಒಂದೇ ತಾಯಿಯ ಮಕ್ಕಳು. ಒಂದು ಸಾರಿ ನರಸೇಂದ್ರ ಮಹಾರಾಜ ಹೊರದೇಶ ಪ್ರಯಾಣ ಮಾಡಿರುವಾಗ, ಕೈಲಾಸದ ಶಿವನು ಇವರುಗಳ ಭಕ್ತಿಯನ್ನು ಪರೀಕ್ಷಿಸಲು ಜಂಗಮ ವೇಷವನ್ನು ಧರಿಸಿ ಬರುತ್ತಾನೆ. ಸಂಭ್ರಮದಿಂದ ಅಕ್ಕ - ತಂಗಿಯರಿಬ್ಬರೂ ಮೊರದಲ್ಲಿ ಮುತ್ತು ರತ್ನವನ್ನು ತುಂಬಿಕೊಂಡು ನೀಡಲು ಬರುತ್ತಾರೆ. ಆದರೆ, ಅವರಿಗೆ ಸಂತಾನವಿಲ್ಲವೆಂಬ ಕಾರಣದಿಂದ ಭಿಕ್ಷೆಯನ್ನು ತಿರಸ್ಕರಿಸಿ ಜಂಗಮ ವೇಷಧಾರಿಯಾದ

ಶಿವನು ಹಿಂತಿರುಗುತ್ತಾನೆ. ಈ ಅಕ್ಕ ತಂಗಿಯರಿಬ್ಬರೂ ದುಃಖಿತರಾಗಿ ಹಾಸಿಗೆ ಹಿಡಿದು ಮಲಗುತ್ತಾರೆ. ಪರದೇಶದಿಂದ ಹಿಂತಿರುಗಿದ ನರಸೇಂದ್ರ ಮಹಾರಾಜ ಅವರ ದುಃಖಕ್ಕೆ ಕಾರಣವನ್ನು ಕೇಳುತ್ತಾನೆ, ಅವರು ಮಾತನಾಡದೆ ಮೌನ ವಹಿಸಿರುವುದನ್ನು ಕಂಡು.

ಮಾತಾಡ ಬಾರದೇನೆ ಮೋಹದ ರಮಣಿ
ಮೋಹದ ರಮಣಿ ಮಾತಾಡಬಾರದೇನೆ
ಮಾತಾಡದಿದ್ದರೆ ನಾ ತಾಳಲಾರೆನು
ಮೋಹದಕಾಂತೆ ಮಾತಾಡಬಾರದೇನೆ ll

ಎಂದು ಒತ್ತಾಯಿಸುತ್ತಾನೆ. ಆಗ ಅವರುಗಳು ನಡೆದ ಘಟನೆಯನ್ನು ವಿವರಿಸಿ, 'ನಮಗೆ ಸಂತಾನ ಫಲವನ್ನು ತಂದುಕೊಡಬೇಕೆಂದು' ಕೇಳಿದ್ದಾರೆ. ಅದರಂತೆ ನರಸೇಂದ್ರ ಮಹಾರಾಜ ಶಿವನನ್ನು ಕಂಡು ಸಂತಾನ ಫಲವನ್ನು ಪಡೆದು ಬರಲು ಅರಣ್ಯಕ್ಕೆ ತೆರಳುತ್ತಾನೆ. ಮರಳಲಿಂಗ ವನ್ನು ಮಾಡಿ ಭಕ್ತಿಯಿಂದ ಪ್ರಾರ್ಥಿಸಿದ್ದಾನೆ. ಆಗ ಶಿವನು ಪ್ರತ್ಯಕ್ಷನಾಗಿ, "ನೀನು ಬಂದಿರು ವಂತಹ ಕಾರಣ ಗೊತ್ತು. ಈ ಫಲವನ್ನು ತೆಗೆದುಕೊಂಡು ಹೋಗಿ ನಿನ್ನ ಹಿರೇ ಮಡದಿಯಾಗಿರ ತಕ್ಕಂಥ ನರಸಾವತಿಯಮ್ಮನಿಗೆ ಸೇವನೆ ಮಾಡಿಸು, ಅವಳಿ ಜವಳಿ ಗಂಡು ಸಂತಾನವಾಗುತ್ತವೆ" ಎಂದು ಹೇಳಿ ಆಶೀರ್ವದಿಸಿ ಕಳುಹಿಸಿಕೊಟ್ಟಿದ್ದಾನೆ. ಆದರೆ, ಕಿರಿಯ ಹೆಂಡತಿಯ ಮೇಲಿನ ಮೋಹದಿಂದ ಶಿವನು ಕೊಟ್ಟಂತಹ ಫಲವನ್ನು ಅವಳಿಗೆ ಸೇವನೆ ಮಾಡಿಸುತ್ತಾನೆ. ಆದರೂ, ಕಿರಿಯವಳು ಜೂನಾವತಿ ಗರ್ಭ ಧರಿಸುವುದಿಲ್ಲ. ಶಿವನ ಆಶೀರ್ವಾದ ದಂತೆ ಹಿರಿಯ ಮಡದಿ ನರಸಾವತಿಯೇ ಗರ್ಭ ಧರಿಸುತ್ತಾಳೆ. ಆಗಲೇ ಜೂನಾವತಿ ಅಕ್ಕ ನರಸಾವತಿಯ ಮೇಲೆ ಸವತಿ ಮಾತ್ಸರ್ಯವನ್ನೂ ಬೆಳೆಸುತ್ತಾಳೆ. ಅದು ವಿಕೋಪಕ್ಕೋದಾಗ ನರಸೇಂದ್ರ ಮಹಾರಾಜ ಇಬ್ಬರನ್ನು ಬೇರೆ ಬೇರೆ ಅರಮನೆಯಲ್ಲಿಡುತ್ತಾನೆ.

ಹೀಗಿರುವಾಗ ನರಸಾವತಿ ಒಂದು ಶುಭದಿನದಲ್ಲಿ ಸೂರ್ಯಕೋಟಿ ಪ್ರಕಾಶಮಾನವಾದಂಥ ಅವಳಿ - ಜವಳಿ ಗಂಡು ಮಕ್ಕಳಿಗೆ ಜನ್ಮ ನೀಡುತ್ತಾಳೆ. ಅವರಲ್ಲಿ ಹಿರಿಯವನಿಗೆ ಬಸವಕುಮಾರ, ಕಿರಿಯವನಿಗೆ ಲೋಹಿತಕುಮಾರ ಎಂದು ನಾಮಕರಣ ಮಾಡುತ್ತಾರೆ.

ಈ ವಿಷಯವನ್ನು ತಿಳಿದ ಜೂನಾವತಿ ಅಸೂಯೆ ಪಡುತ್ತಾಳಾದರೂ, ಮಕ್ಕಳನ್ನು ನೋಡಬೇಕೆಂಬ ಕೆಟ್ಟ ಕುತೂಹಲ ಕೆರಳಿ, ಕುಟಿಲೆಯೊಬ್ಬಳ ನೆರವಿನಿಂದ ನರಸಾವತಿಯ ಅರಮನೆಗೆ ಬರುತ್ತಾಳೆ. ನರಸಾವತಿ ಆ ಸಮಯದಲ್ಲಿ ಸ್ನಾನದ ಮನೆಯಲ್ಲಿರುತ್ತಾಳೆ. ಜೂನಾವತಿ ಆ ಇಬ್ಬರು ಮಕ್ಕಳನ್ನು ನೋಡಿ ಅವರಲ್ಲಿ ಕಿರಿಯವನಾದ ಲೋಹಿತ ಕುಮಾರನನ್ನು ಕಂಡು ಮೋಹಗೊಳ್ಳುತ್ತಾಳೆ. "ಈ ಹುಡುಗ ಎಂಥ ಲಕ್ಷಣವಾದ ಹುಡುಗ. ಈ ಹುಡುಗ ತನ್ನ ಹದಿನಾರನೆಯ ವಯಸ್ಸಿಗೆ ನನ್ನ ಪತಿಯಾಗಲಿ, ಹದಿನಾರನೆಯ ವಯಸ್ಸಿಗೆ ನನಗೆ ರತಿ ಸುಖವನ್ನು ಕೊಡುವಂತಾಗಲಿ" ಎಂದು ಮನಸ್ಸಿನಲ್ಲಿ ಆಗಲೇ ಆಲೋಚನೆಯನ್ನು ಹೊತ್ತು, ಇಬ್ಬರೂ ಒಂದೇ ರೀತಿ ಇದ್ದುದರಿಂದ ಇವನ ಗುರುತು ಮುಂದೆ ಸಿಗುವಂತಾಗಲೆಂದು ತನ್ನ ಬೆಳ್ಳುಗುರಿನಿಂದ ಲೋಹಿತಕುಮಾರನ ಹಣೆಯ ಮೇಲೆ ಗೆರೆಯನ್ನು ಎಳೆಯುತ್ತಾಳೆ. ಆಗಲೇ ಮಗು "ಅಮ್ಮ, ಅಮ್ಮ" ಎಂದು ರೋದಿಸುತ್ತದೆ. ಕೂಡಲೇ ನರಸಾವತಿ ಬಂದು ನೋಡಿ, ಅದಕ್ಕೆ ಶುಶ್ರೂಷೆ ಮಾಡಿದ್ದಾಳೆ. ಆ ವೇಳೆಗೆ ಅವರುಗಳು ಅಲ್ಲಿಂದ ಕಾಣೆಯಾಗಿರುತ್ತಾರೆ.

ಹೀಗೆ ದಿನಗಳು ಕಳೆದು ಆ ಮಕ್ಕಳಿಬ್ಬರೂ ಹದಿನಾರು ವರ್ಷ ತುಂಬಿ ದೊಡ್ಡವರಾಗಿ ಬೆಳೆದಿದ್ದಾರೆ. ರಾಜಬೀದಿಯಲ್ಲಿ ಮುತ್ತಿನ ಚೆಂಡು, ಬೆಳ್ಳಿಯ ಲಗ್ಗೆಯನ್ನು ಹಿಡಿದು ಆಟವಾಡುತ್ತಿರುವಾಗ ಆಕಸ್ಮಿಕವಾಗಿ ಚೆಂಡು ಹತ್ತಿರದಲ್ಲಿಯೇ ಇದ್ದ ಚಿಕ್ಕ ತಾಯಿ ಜೂನಾವತಿಯ ಅರಮನೆಯೊಳಕ್ಕೆ ಹೋಗಿ ಬೀಳುತ್ತದೆ. ಜೂನಾವತಿ ಬಹು ದಿನಗಳಿಂದ ಬಯಸಿದ ಬಯಕೆ ಈಡೇರುವಂಥ ಸಂದರ್ಭ ಬಂದಿತೆಂದು ಆ ಮುತ್ತಿನ ಚೆಂಡನ್ನು ಎತ್ತಿಟ್ಟುಕೊಂಡು ಲೋಹಿತಕುಮಾರನ ಬರುವಿಕೆಗಾಗಿ ಕಾಯುತ್ತಿರುತ್ತಾಳೆ. ಆದರೆ, ಬಸವಕುಮಾರ ಚೆಂಡನ್ನು ತೆಗೆದುಕೊಂಡು ಹೋಗಲು ಬಂದದ್ದನ್ನು ಕಂಡು, ಅವನನ್ನೂ ಮಗನೆಂಬ ಪ್ರೀತಿಯಿಂದ ಉಪಚರಿಸಿ, "ಮಗನೇ, ಅದೋ ನಿನ್ನ ತಮ್ಮನಾದ ಲೋಹಿತಕುಮಾರನನ್ನು ಕಳುಹಿಸಿ ಕೊಟ್ಟದ್ದೇಯಾದರೆ ಆತನ ಕೈಯಲ್ಲಿ ಮುತ್ತಿನ ಚೆಂಡನ್ನು ಕೊಡುತ್ತೇನೆ" ಎಂಬುದಾಗಿ ಹೇಳಿ ಹಿಂತಿರುಗಿಸಿದ್ದಾಳೆ ಅದರಂತೆ ಲೋಹಿತಕುಮಾರ ಚೆಂಡನ್ನು ಪಡೆಯಲು ಬರುತ್ತಾನೆ. "ಅಮ್ಮ, ಅಮ್ಮ" ಎಂದು ಕೂಗುತ್ತಾ ಒಳಗೆ ಬಂದ ಲೋಹಿತಕುಮಾರನನ್ನು ಕಂಡು ಮಗನೆಂಬ ಮಮತೆ ಯನ್ನು ಬಿಟ್ಟು ಕಾಮೋದ್ರೇಕದಿಂದ 'ಎಲವೋ ! ನೀನು ಯಾರಿಗೆ ಮಗ, ನಾನು ಯಾರಿಗೆ ತಾಯಿ. ನೀನೇ ಪತಿ, ನಾನೇ ಸತಿ. ನನಗೆ ರತಿಸುಖವನ್ನು ಕೊಡು' ಎಂಬುದಾಗಿ ಮುಂದೆ ಸರಿಯುತ್ತಾಳೆ. ಬೆರಗಾದ ಲೋಹಿತಕುಮಾರ ಅವಳಿಂದ ದೂರವಾಗಿ ನಿಂತು ಚೆಂಡನ್ನು ಕೇಳುತ್ತಾನೆ. ಅವಳು ಕೊಡಲೊಪ್ಪುವುದಿಲ್ಲ. ಅದಕ್ಕೆ ಬದಲಾಗಿ ಅವನನ್ನು ಧರ್ಮಸಂಕಟಕ್ಕೆ ಒಳಗಾಗುವಂತಹ ಕಠಿಣ ಪರಿಸ್ಥಿತಿಗೆ ಗುರಿಮಾಡುತ್ತಾಳೆ. ದೈವ ಬಲದಿಂದ ಅದನ್ನೂ ಗೆಲ್ಲುತ್ತಾನೆ. ತನ್ನ ಆಸೆ ಈಡೇರದಿದ್ದಾಗ ಅವನ ಮೇಲಿನ ಪ್ರೀತಿ ಸೇಡಾಗಿ ಪರಿಣಮಿಸುತ್ತದೆ. ತನ್ನನ್ನು ಅವಮಾನಗೊಳಿಸಲು ಬಂದನೆಂದು ಪತಿಯೊಂದಿಗೆ ಸುಳ್ಳನ್ನು ಹೇಳುತ್ತಾಳೆ. ಮಕ್ಕಳಿಬ್ಬರ ಶಿರಚ್ಛೇದನವನ್ನು ಮಾಡುವಂತೆ ಮಂತ್ರಿಗೆ ಆಜ್ಞೆ ಮಾಡುತ್ತಾನೆ. ಮಂತ್ರಿ ಅವರಿಬ್ಬರನ್ನೂ ಕಾಡಿಗೆ ಕರೆದುಕೊಂಡು ಹೋಗಿ, ಶಿರಚ್ಛೇದನ ಮಾಡದೆ ಅಲ್ಲಿಯೇ ಬಿಟ್ಟು ಬಂದು ರಾಜನಿಗೆ ಸುಳ್ಳು ಹೇಳುತ್ತಾನೆ.

ಅಣ್ಣ - ತಮ್ಮಂದಿರಿಬ್ಬರೂ ಕಾಡಿನಲ್ಲಿ ಅಲೆದು ಸುಸ್ತಾಗಿ ಒಂದು ಮರದ ಕೆಳಗೆ ಕುಳಿತಿದ್ದಾಗ, ಬೇಡನೊಬ್ಬ ಅಲ್ಲಿಗೆ ಬಂದ ದೇವಲೋಕದ ಪಕ್ಷಿಯನ್ನು ಕೊಲ್ಲುತ್ತಾನೆ. ಬಾಣದ ಏಟಿನಿಂದ ಸತ್ತು ಬಿದ್ದಂಥ ಪಕ್ಷಿ ಲೋಹಿತ ಕುಮಾರನ ಕೈ ಸೇರುತ್ತದೆ. ಬೇಡನಿಂದ, ಆ ಪಕ್ಷಿಯನ್ನು ಯಾರು ಸೇವಿಸುತ್ತಾರೋ ಅವರಿಗೆ ರಾಜಪದವಿಯುಂಟಾಗುತ್ತದೆ, ಎಂಬ ವಿಷಯವನ್ನು ತಿಳಿದು ತನ್ನ ಬಳಿಯೇ ಇಟ್ಟುಕೊಳ್ಳುತ್ತಾನೆ. ಬೆಳಗಾಗುತ್ತದೆ. ಆ ಪಕ್ಷಿಯನ್ನೆ ಸಿಗಿದು ಅಣ್ಣ - ತಮ್ಮಂದಿರಿಬ್ಬರೂ ತಿನ್ನುತ್ತಾರೆ. ನಂತರ ಬಸವಕುಮಾರನಿಗೆ ತುಂಬಾ ಬಾಯಾರಿಕೆಯುಂಟಾಗು ತ್ತದೆ. ಹತ್ತಿರ ಎಲ್ಲಿಯೂ ನೀರು ಕಾಣುವುದಿಲ್ಲ. ಅಣ್ಣನನ್ನೂ ಅಲ್ಲಿಯೇ ಕೂರಿಸಿ ಲೋಹಿತ ಕುಮಾರ ನೀರನ್ನು ತರಲು ತೆರಳುತ್ತಾನೆ. ಬಹಳ ದೂರ ಹೋಗಿ, ಹಿಂತಿರುಗಿ ಬರಲು ತಡವಾದ ಕಾರಣ ಕಾಡುಮೃಗಗಳ ಬಾಯಿಗೆ ಆಹುತಿಯಾಗಿರಬೇಕೆಂದು ಭಾವಿಸಿ ಇವನು ಬೇರೊಂದು ದಾರಿಯನ್ನು ಹಿಡಿಯುತ್ತಾನೆ.

ನಡೆದೂ ನಡೆದೂ ಚಂದ್ರಾವತಿ ಎಂಬ ಪಟ್ಟಣವನ್ನು ಸೇರುತ್ತಾನೆ ಬಸವಕುಮಾರ. ಆ ಪಟ್ಟಣದ ರಾಜ ಮಡಿದಿದ್ದಾನೆ. ಅವನಿಗಿದ್ದ ಒಬ್ಬಳೇ ಮಗಳಿಗೆ ಮದುವೆಯನ್ನು ಮಾಡಲು ಸಿದ್ಧತೆಗಳು ನಡೆಯುತ್ತಿರುತ್ತವೆ. ಪಟ್ಟದ ಆನೆ ಇವನನ್ನೇ ಹುಡುಕಿಕೊಂಡು ಬಂದು ಹೂವಿನ ಹಾರ ಹಾಕಿದ ಕಾರಣ, ಇವನೇ ಅವಳ ಪತಿಯಾಗಿ ಆ ರಾಜ್ಯದ ರಾಜನಾಗುತ್ತಾನೆ.

ಇತ್ತ ಲೋಹಿತ ಕುಮಾರ ಬಹಳ ಕಷ್ಟಪಟ್ಟು ಪ್ರಯಾಸದಿಂದ ನೀರನ್ನು ತೆಗೆದುಕೊಂಡು ಬಂದು ಅಣ್ಣನನ್ನು ನೋಡುತ್ತಾನೆ. ಅಲ್ಲಿರುವುದಿಲ್ಲ. ಏನೋ ಆಗಿ ಹೋದನೆಂದು ಭಾವಿಸಿ ಕಾಡುಮೇಡನ್ನು ಸುತ್ತುತ್ತಾ ಬರುತ್ತಿರುತ್ತಾನೆ. ಅದೇ ವೇಳೆಯಲ್ಲಿ ಚಂದ್ರಾವತಿ ಪಟ್ಟಣದ ಮುತ್ತಿನಶೆಟ್ಟರ ಮನೆಯಲ್ಲಿ ಕಳ್ಳತನವಾಗಿ ಭಟರು ಆ ಕಳ್ಳನನ್ನು ಹುಡುಕುತ್ತಾ ಅಲೆಯು ತ್ತಿರುವಾಗ ಲೋಹಿತಕುಮಾರ ಅವರ ಕಣ್ಣಿಗೆ ಬೀಳುತ್ತಾನೆ. ಅವನ ಬಳಿಯಿದ್ದ ನಾಗರತ್ನದ ಹರಳನ್ನು ಕಂಡು ಇವನೇ ಕಳ್ಳನೆಂದು ತಿಳಿದು ಅರಮನೆಗೆ ಎಳೆದುಕೊಂಡು ಹೋಗುತ್ತಾರೆ. ಅವನ ಬಳಿಯಿದ್ದ ನಾಗರತ್ನದ ಹರಳನ್ನು ರಾಜನಾದ ಬಸವಕುಮಾರನಿಗೆ ಒಪ್ಪಿಸಿ, ಅವನನ್ನು ಕಾರಾಗೃಹಕ್ಕೆ ಕೂಡುತ್ತಾರೆ. ಆ ನಾಗರತ್ನದ ಹರಳನ್ನು ಕಂಡು ಆಸೆಪಟ್ಟು, ಅದರಲ್ಲಿ ಪದಕವನ್ನು ಮಾಡಿಕೊಳ್ಳಲು ಚಂದ್ರಕಾಂತಿ ಇಷ್ಟಪಡುತ್ತಾಳೆ. ಅಂತಹ ಇನ್ನಷ್ಟು ಹರಳುಗಳನ್ನು ತರಲು ಬಸವಕುಮಾರ ಊರಿನ ಮುತ್ತಿನ ಶೆಟ್ಟರಿಗೆ ಹೇಳುತ್ತಾನೆ. ಆಗಬಹುದೆಂದು ಹೇಳಿ ಅಂತಹ ಹರಳುಗಳನ್ನು ತರಲು ಮುತ್ತಿನಶೆಟ್ಟರು ರತ್ನಾಪುರಿ ಪಟ್ಟಣಕ್ಕೆ ಹಡಗಿನಲ್ಲಿ ಪ್ರಯಾಣ ಬೆಳೆಸಲು ಸಮುದ್ರ ತೀರದ ಬಳಿ ಹೋಗುತ್ತಾರೆ. ಆದರೆ, ಆ ಹಡಗು ನರಬಲಿಯನ್ನು ಬಯಸಿ ಇವನನ್ನೇ ನುಂಗಲು ಬರುತ್ತದೆ. ಮುತ್ತಿನಶೆಟ್ಟಿ ಅಲ್ಲಿಂದ ಓಡಿಬಂದು ನಡೆದ ಘಟನೆಯನ್ನು ರಾಜನಿಗೆ ತಿಳಿಸುತ್ತಾನೆ. ಆಗ ರಾಜನು "ನಿಮ್ಮ ಮನೆಯಲ್ಲಿ ಕಳ್ಳತನ ಮಾಡಿದ ಕಳ್ಳನೇ ಸಿಕ್ಕಿದ್ದಾನಲ್ಲ. ಆತನನ್ನೇ ಎಳೆದುಕೊಂಡು ಹೋಗಿ ಬಲಿ ಕೊಡಿರಿ" ಎಂದು ಆಜ್ಞೆ ಮಾಡಿದ್ದಾನೆ. ಆದರೆ ಹಡಗು ಅವನನ್ನು ಏನೂ ಮಾಡುವುದಿಲ್ಲ. ಇಬ್ಬರೂ ಕುಳಿತು ರತ್ನಪುರಿ ಪಟ್ಟಣಕ್ಕೆ ಪ್ರಯಾಣ ಮಾಡುತ್ತಾರೆ. ಆದರೆ ಅಲ್ಲಿ ರತ್ನವ್ಯಾಪಾರಿಯಾದ ರತ್ನಶೇಖರ ಮಹಾರಾಜ ಪರದೇಶಕ್ಕೆ ಹೋಗಿರುತ್ತಾನೆ. ಅವನ ಮಗಳು ರತ್ನಕಾಂತಿ ಮನೆಯಲ್ಲಿರುತ್ತಾಳೆ. ಲೋಹಿತಕುಮಾರನ ರೂಪು ಲಾವಣ್ಯ ಧೈರ್ಯ ಸಾಹಸ ಗುಣಗಳನ್ನು ಕಂಡು, ಇವನು ರಾಜಪುತ್ರನೆಂದೇ ನಿರ್ಧರಿಸಿ ಅವನ ಬಗ್ಗೆ ವಿಚಾರಿಸುತ್ತಾಳೆ. ಆದರೆ ಅವನು ಸದ್ಯಕ್ಕೆ ಯಾವ ವಿಚಾರವನ್ನು ಹೊರಗೆಡಹಬಾರದೆಂದು ಹೇಳಿ ಒಂದು ಕಾಗದದಲ್ಲಿ ತನ್ನ ವಿಷಯವನ್ನೆಲ್ಲಾ ಬರೆದುಕೊಡುತ್ತಾನೆ. ಕೊನೆಗೆ ಮೂವರು ಕೂಡಿ ಚಂದ್ರಾವತಿ ಪಟ್ಟಣದ ಕಡೆ ಪ್ರಯಾಣ ಬೆಳೆಸುತ್ತಾರೆ. ಮಾರ್ಗಮಧ್ಯದಲ್ಲಿ ಮೋಸದಿಂದ ಮುತ್ತಿನಶೆಟ್ಟಿ ಲೋಹಿತ ಕುಮಾರನನ್ನು ಸಮುದ್ರದೊಳಕ್ಕೆ ತಳ್ಳಿ ಬಿಡುತ್ತಾನೆ. ಕೂಡಲೇ ಹಿಂದೆ ಇವನಿಂದ ಸಹಾಯ ಪಡೆದಿದ್ದಂತಹ ಮುಂಡಕ ಎಂಬಂತಹ ಕಪ್ಪೆಗಳು ಇವನನ್ನು ಬೆನ್ನಿನ ಮೇಲೆ ಹೊತ್ತುಕೊಂಡು ದಡ ಸೇರಿಸುತ್ತವೆ. ರತ್ನಕಾಂತಿಯನ್ನು ಮದುವೆಯಾಗಬೇಕೆಂಬುದು ಮುತ್ತಿನ ಶೆಟ್ಟಿಯ ಆಸೆ. ಬಸವಕುಮಾರನ ಬಳಿ ಬಂದಾಗಲೂ ತನ್ನ ಆಸೆಯನ್ನು ವ್ಯಕ್ತಪಡಿಸುತ್ತಾನೆ. ಆದರೆ ಅವನನ್ನು ಮದುವೆಯಾಗಲು ಒಪ್ಪದ ಅವಳು ಅವನ ಮಗನಿದ್ದರೆ ಮದುವೆಯಾಗು ವುದಾಗಿ ಹೇಳುತ್ತಾಳೆ. ಅಲ್ಲದೆ ಆ ರಾತ್ರಿಯೇ ಅವನನ್ನು ತನ್ನ ಸ್ವಾಧೀನಕ್ಕೆ ಕೊಡಬೇಕೆಂದು ಹೇಳುತ್ತಾಳೆ. ಅದರಂತೆ ನಡೆಯುತ್ತದೆ. ಸಿಟ್ಟಿಗೆದ್ದ ರತ್ನಕಾಂತಿ ಮರದ ತುಂಡಿ ನಿಂದ ಆ ಮಗನನ್ನು ಕಡಿದು ತುಂಡರಿಸುತ್ತಾಳೆ. ಬೆಳಗಾಗ ಮುತ್ತಿನಶೆಟ್ಟಿ ರಾಜನ ಬಳಿ ದೂರು ತರುತ್ತಾನೆ. ರಾಜ ಬಂದು ನೋಡುತ್ತಾನೆ. ಆಗ ರತ್ನಕಾಂತಿ ಹಡಗಿನಲ್ಲಿ ಬರುವಾಗ ನಡೆದ ಘಟನೆಯನ್ನು ಹೇಳಿ, ತನ್ನ ಬಳಿಯಿದ್ದ ಲೋಹಿತಕುಮಾರನ ಚೀಟಿಯನ್ನು ಬಸವಕುಮಾರನ ಕೈಗೆ ಕೊಡುತ್ತಾಳೆ. ಬಸವಕುಮಾರನಿಗೆ ಅದನ್ನು ನೋಡಿ ಆಶ್ಚರ್ಯವಾಗುತ್ತದೆ. ಇದು ತನ್ನ ತಮ್ಮನದೇ ಎಂಬುದು ತಿಳಿಯುತ್ತದೆ. ತನ್ನ ತಮ್ಮ ಜೀವಂತವಾಗಿದ್ದಾನೆಂಬುದನ್ನು ತಿಳಿದು ಅವನನ್ನು ಹುಡುಕುವ ಏರ್ಪಾಡು ಮಾಡುತ್ತಾನೆ. ಅಣ್ಣ-

ತಮ್ಮಂದಿರು ಒಂದೆಡೆ ಸೇರುತ್ತಾರೆ. ಕೊನೆಗೆ ರತ್ನಕಾಂತಿಗೂ- ಲೋಹಿತಕುಮಾರನಿಗೂ ವಿವಾಹವಾಗುತ್ತದೆ.

ನರಸಾವತಿ ಪಟ್ಟಣವನ್ನು ಬಿಟ್ಟು ಬಹಳ ವರ್ಷಗಳಾದುವೆಂದು ತಂದೆ - ತಾಯಿಗಳನ್ನು ನೋಡಬೇಕೆಂಬ ಹಂಬಲದಿಂದ ಎಲ್ಲರೂ ರಥಾರೂಢರಾಗಿ ಅತ್ತ ಹೊರಡುತ್ತಾರೆ. ಪಟ್ಟಣಕ್ಕೆ ಬಂದ ಅವರ ಸುಳಿವನ್ನು ತಿಳಿದು ಕುಟಿಲೆಯಾದ ಮುದುಕಿ ಜೂನಾವತಿಗೆ ವಿಷಯವನ್ನು ತಿಳಿಸುತ್ತಾಳೆ. ಮತ್ತೆ ಅವಳ ಮಾತಿನಂತೆ ಮೋಸದಿಂದ ಕೊಲ್ಲುವ ಸಾಹಸಕ್ಕೆ ಜೂನಾವತಿ ಕೈ ಹಾಕುತ್ತಾಳೆ. ಆದರೆ, ರತ್ನಕಾಂತಿಯಿಂದ ಅದು ಬಯಲಾಗಿ ಜೂನಾವತಿಯ ವಂಚನೆ ನರಸೇಂದ್ರನಿಗೆ ತಿಳಿಯುತ್ತದೆ. ಅವಳನ್ನು ಶಿಕ್ಷಿಸಲು ಮುಂದಾಗುತ್ತಾನೆ. ಆದರೆ, ಲೋಹಿತ ಕುಮಾರ ತಂದೆಯ ಕಾಲನ್ನು ಹಿಡಿದು ಚಿಕ್ಕಮ್ಮನ ಜೀವವನ್ನು ಉಳಿಸುತ್ತಾನೆ. ನರಸೇಂದ್ರ ಮಹಾರಾಜ ಲೋಹಿತಕುಮಾರನಿಗೆ ನರಸಾವತಿ ಪಟ್ಟಣದ ರಾಜ್ಯಭಾರವನ್ನು ವಹಿಸುತ್ತಾನೆ. ಬಸವಕುಮಾರ ಪತ್ನೀ ಸಮೇತ ಚಂದ್ರಾವತಿ ಪಟ್ಟಣಕ್ಕೆ ತೆರಳುತ್ತಾನೆ. ಎಲ್ಲರೂ ಸುಖವಾಗಿರುತ್ತಾರೆ.

ಕಥೆಯ ಆರಂಭ ಬಹುವಾಗಿ ನೀಲಕಂಠ - ರೂಪಾವತಿಯರ ಕಥೆಯ ರೂಪದಲ್ಲಿಯೇ ಹರಿದು ಬರುತ್ತದೆ. ಮಕ್ಕಳಿಲ್ಲದ ರಾಜದಂಪತಿಗಳು, ರಾಜನಿಲ್ಲದಾಗ ಈಶ್ವರ ಜಂಗಮ ವೇಷ ಧರಿಸಿ ಬರುವುದು, ಬಂಜೆಯರಿಂದ ಭಿಕ್ಷವನ್ನು ತಿರಸ್ಕರಿಸುವುದು, ಪತಿ ಬಂದ ನಂತರ ಸಂತಾನ ಫಲಕ್ಕಾಗಿ ಒತ್ತಾಯಿಸುವುದು, ಅದಕ್ಕಾಗಿ ಅವನು ಕಾಡಿಗೆ ತೆರಳಿ ಶಿವನನ್ನು ಬೇಡುವುದು - ಇಲ್ಲಿಯವರೆಗೆ ಈ ಎರಡು ಕಥೆಗಳಿಗೂ ವ್ಯತ್ಯಾಸವೇನೂ ತೋರುವುದಿಲ್ಲ. ಇದಾದ ನಂತರ ಐತಿಹಾಸಿಕ ಕಥೆಯಾದ ಕುಮಾರರಾಮನ ಕಥೆಯ ರೀತಿಯ ಘಟನೆಗಳೇ ಕಂಡು ಬರುತ್ತವೆ. ಸ್ವಂತ ಚಿಕ್ಕಮ್ಮನೇ ಮಗನನ್ನು ಪ್ರೀತಿಸುವುದು, ಚೆಂಡಾಟದ ಪ್ರಸಂಗ, ಕಿರಿಹೆಂಡತಿಯ ಮಾತನ್ನು ಕೇಳಿ ಮಗನನ್ನೇ ಶಿರಚ್ಛೇದನ ಮಾಡುವಂತೆ ಮಂತ್ರಿಗೆ ಹೇಳುವುದು, ಮಂತ್ರಿ ಹಾಗೆ ಮಾಡದೆ ನೆಲಮಾಳಿಗೆಯಲ್ಲಿ ಬಚ್ಚಿಡುವುದು, ಇಲ್ಲಿಯವರವಿಗೆ ಲೋಹಿತಕುಮಾರನ, ಕುಮಾರರಾಮನ ಬದುಕಿನ ಘಟನೆಗಳು ಒಂದೇ ಆಗಿ ತೋರುತ್ತವೆ. ನಂತರ ಈ ಕಥೆ ಪಡೆದುಕೊಳ್ಳುವ ತಿರುವೇ ಬೇರೆ.

ಕಿರಿಯ ಹೆಂಡತಿಯ ಮೇಲೆ ಹೆಚ್ಚು ಪ್ರೀತಿಯನ್ನು ತೋರುವುದು ಸಾಮಾನ್ಯವಾದ ಅಂಶ. ಎಲ್ಲಾ ಕಾಲದಲ್ಲಿಯೂ ಕಾಣುವಂತಹುದೇ. ಹಾಗಾಗಿ ಶಿವನ ಮಾತನ್ನು ಮರೆತು ಕಿರಿಯ ಹೆಂಡತಿಗೆ ಸಂತಾನ ಫಲದ ಫಲವನ್ನು ಕೊಡುತ್ತಾನಾದರೂ ಹಿರಿಯ ಹೆಂಡತಿಯೇ ಶಿವನ ಆಶೀರ್ವಾದದಿಂದ ಗರ್ಭವತಿಯಾಗುತ್ತಾಳೆ. ಸ್ವಂತ ಅಕ್ಕ - ತಂಗಿಯರೇ ಆದರೂ ಒಬ್ಬರ ಹಿರಿಯ ಗುಣವನ್ನು ಹಾಗೂ ಮತ್ತೊಬ್ಬಳ ನೀಚಗುಣವನ್ನು ನಿರೂಪಕ ಸ್ಪಷ್ಟವಾಗಿ ಎತ್ತಿ ತೋರಿದ್ದಾನೆ. ಹಿರಿಯ ಹೆಂಡತಿ ನರಸಾವತಿ ಎಂದೂ ತಂಗಿಯ ಮೇಲೆ ಅಸೂಯೆ ಪಟ್ಟವಳಲ್ಲ. ನರಸೇಂದ್ರ ಮಹಾರಾಜ ಶಿವಕೊಟ್ಟ ಫಲವನ್ನು ತಂಗಿಗೇ ಕೊಟ್ಟರೂ, 'ಇಬ್ಬರೂ ಒಂದೇ ಮನೆಯನ್ನು ಬೆಳಗಲು ಬಂದವರು. ಅದು ಯಾರಿಂದ ಬೆಳಗಿದರೇನು ?' ಎಂದು ಸಮಾಧಾನಪಟ್ಟುಕೊಳ್ಳುತ್ತಾಳೆ. ಆದರೆ ಜೂನಾವತಿ ಸವತಿ ಮಾತ್ಸರ್ಯವನ್ನೇ ಸಾಧಿಸುತ್ತಾಳೆ. ಅಕ್ಕನ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೇ ಮೋಹಿಸಿ, ಆಸೆ ಈಡೇರದಾಗ ಅವನನ್ನು ದ್ವೇಷಿಸುತ್ತಾಳೆ. ಅವಳ ದುಷ್ಟಗುಣವನ್ನು ತೋರುವ ಹಲವು ಪರಿಣಾಮಕಾರಿ ಘಟನೆಗಳನ್ನು ಕರಪಾಲದ ಕಲಾವಿದ ಜೋಡಿಸಿದ್ದಾನೆ.

ಚಿಕ್ಕಮ್ಮನ ಕಾರಣದಿಂದಾಗಿ ಕಾಡನ್ನು ಸೇರಿದ ಬಸವಕುಮಾರ ಲೋಹಿತ ಕುಮಾರರ ಜೀವನದ ಗತಿ ಕಥೆಯಲ್ಲಿ ಎರಡನೆಯ ಘಟ್ಟವಾಗಿ ನಿಲ್ಲುತ್ತದೆ. ಜನಪದ ಕಟ್ಟು ಕಥೆಗಳಲ್ಲಿ ಬರುವ ಸಾಮಾನ್ಯ ಘಟನೆಗಳೇ ಅವಾದರೂ ಅವುಗಳ ಅಂದವಾದ ಜೋಡಣೆಯಿಂದ ವಿಶಿಷ್ಟ ಸ್ವರೂಪವನ್ನು ಪಡೆದುಕೊಂಡಿವೆ. ಅಷ್ಟೇ ಪರಿಣಾಮಕಾರಿಯಾಗಿಯೂ ಮೂಡಿಬಂದಿವೆ. ಬಾಯಾರಿಕೆಯ ಕಾರಣದಿಂದ ದಿಕ್ಕು ತಪ್ಪಿದ ಅಣ್ಣ - ತಮ್ಮಂದಿರು ಬೇರೆ ಬೇರೆಯಾಗುತ್ತಾರೆ. ದೇವಲೋಕದ ಪಕ್ಷಿಯನ್ನು ತಿಂದ ಕಾರಣದಿಂದಲೋ ಏನೊ ಎಂಬಂತೆ ಹಿರಿಯವನಾದ ಬಸವಕುಮಾರ ಚಂದ್ರಾವತಿ ಪಟ್ಟಣದ ರಾಜನಾಗುತ್ತಾನೆ. ಆದರೆ, ತಾಯಿ ಕಟ್ಟಿಕೊಟ್ಟ ಬುತ್ತಿ ಯನ್ನು ಬಿಚ್ಚಿ ತಿನ್ನುವಾಗಲೇ ಕಹಿಯನ್ನು ಕಂಡ ಲೋಹಿತಕುಮಾರ ತಾನು ಊಹಿಸಿದ್ದಂತೆಯೇ ಕಷ್ಟಗಳ ಪರಂಪರೆಯನ್ನು ಎದುರಿಸುತ್ತಾನೆ. ಅವನಿಗೆ ದೊರೆತ ನಾಗರತ್ನದ ಹರಳು ಮತ್ತು ತಾನು ಮಂಡೂಕನಿಗೆ ಮಾಡಿದ ಉಪಕಾರದಿಂದ ತನಗಾದ ಪ್ರತ್ಯುಪಕಾರ ಇವೆಲ್ಲ ಕಥೆಗೆ ವಿಶೇಷತೆಯನ್ನು ಒದಗಿಸಿವೆ. ನಾಗರತ್ನದ ಹರಳಿನಿಂದ ಕಳ್ಳತನದ ಅಪವಾದ ಆತನ ಮೇಲೆ ಬರುತ್ತದೆಯಾದರೂ, ಅದು ಅವನಿಗೆ ಬೇರೊಂದು ರೀತಿಯಲ್ಲಿ ಉತ್ತಮ ಪ್ರಯೋಜನವನ್ನೇ ಉಂಟು ಮಾಡುತ್ತದೆ. ಹಾಗೆಯೇ ಮಂಡೂಕದಿಂದಲೂ ಕೂಡ.

ಆದರೆ, ತಾನು ರತ್ನಕಾಂತಿಗೆ ತನ್ನ ಸ್ವವಿಷಯವನ್ನು ಹೇಳುವ ಸಂದರ್ಭ ಬಂದಾಗ ಅದನ್ನು ಬಾಯಿಬಿಟ್ಟು ಹೇಳದೆ ಬರೆದುಕೊಡುವುದು ಸ್ವಲ್ಪ ಅಸಹಜವಾಗಿಯೇ ತೋರಿದರೂ ಮುಂದಿನ ಘಟನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವಾಗ ಕಥಾತಂತ್ರದ ದೃಷ್ಟಿಯಿಂದ ಸರಿಯೆನಿಸುತ್ತದೆ.

ಎಲ್ಲ ಜನಪದ ಕಥೆಗಳಲ್ಲಿಯೂ ಸಾಮಾನ್ಯ ವಿಷಯವಾಗಿ ಕಂಡು ಬರುವ ಕಿರಿಯವನ ಸಾಹಸ ಪ್ರವೃತ್ತಿ ಇಲ್ಲಿಯೂ ಕಂಡು ಬರುತ್ತದೆ. ಲೋಹಿತಕುಮಾರ ಎಲ್ಲಾ ತೊಂದರೆಗಳನ್ನು ಎದುರಿಸುತ್ತಾನೆ. ಕೊನೆಗೆ ರಾಜಕುಮಾರಿಯನ್ನು ಮದುವೆಯಾಗಿ ಸುಖವಾಗಿರುತ್ತಾನೆ. ತೊಂದರೆಗಳು ಆರಂಭವಾಗುವುದೂ ಅವನ ಕಾರಣದಿಂದಲೇ, ತೊಂದರೆಗಳು ಅಂತ್ಯಗೊಳ್ಳು ವುದು ಅವನ ಸಾಹಸದಿಂದಲೇ. ಹೀಗಾಗಿ ಲೋಹಿತ ಕುಮಾರ ಕಥಾನಾಯಕನಾಗಿ ನಮಗೆ ತೋರುತ್ತಾನೆ. ಅತ್ಯಂತ ಸೊಗಸಾಗಿ ಅವನ ಪಾತ್ರ ನಿರೂಪಣೆಯಾಗಿದೆ.

ಇಲ್ಲಿ ಬರುವ ಘಟನೆಗಳೂ ಅಷ್ಟೇ ವೈಶಿಷ್ಟ್ಯಪೂರ್ಣವಾಗಿವೆ. ಜನಪದ ಕಲಾವಿದ ಬಹಳ ಎಚ್ಚರದಿಂದ ಅವುಗಳನ್ನು ನಿರ್ವಹಿಸಿದ್ದಾನೆ. ಲೋಹಿತಕುಮಾರ ತನ್ನ ಚಿಕ್ಕತಾಯಿಯಾದ ಜೂನಾವತಿಯ ಅರಮನೆಗೆ ಚೆಂಡನ್ನು ತರಲು ಹೋದಾಗ, ಅಂತಹ ಸಂದರ್ಭವನ್ನೇ ಕಾಯುತ್ತಿದ್ದ ಜೂನಾವತಿ ಇವನಿಂದ ರತಿಸುಖವನ್ನು ಪಡೆಯುವಲ್ಲಿ ಸೋಲುತ್ತಾಳೆ. ಆದರೂ, ಬೇರೊಂದು ರೀತಿಯಲ್ಲಿ ಅವನನ್ನು ದೊಡ್ಡ ಪರೀಕ್ಷೆಗೊ ಒಡ್ಡುತ್ತಾಳೆ. ಲೋಹಿತಕುಮಾರ ಆ ಪರೀಕ್ಷೆಯಲ್ಲಿ ಯಾವ ಅಪಚಾರವನ್ನೂ ಎಸಗದಂತೆ ಗೆಲ್ಲುವುದನ್ನು ತೋರುವಲ್ಲಿ ನಿರೂಪಕನ ಜಾಣ್ಮೆ ಅಪ್ರತಿಮವಾಗಿ ವ್ಯಕ್ತವಾಗುತ್ತದೆ.

ಹಾಗೆಯೇ ಬಸವಕುಮಾರ ಚಂದ್ರಾವತಿ ಪಟ್ಟಣದ ರಾಜನಾಗುವ ಪ್ರಸಂಗ, ಮುತ್ತಿನಶೆಟ್ಟಿಯ ಮನೆಯಲ್ಲಿ ಕಳ್ಳತನವಾಗುವುದು, ಆ ಸಂಬಂಧದಲ್ಲಿ ಲೋಹಿತ ಕುಮಾರ ಬಂಧಿತನಾಗುವುದು, ಅವನ ಬಳಿ ದೊರೆತ ನಾಗರತ್ನದ ಹರಳು, ರತ್ನಪುರಿ ಪಟ್ಟಣದ ರಾಜನ ಮಗಳು ರತ್ನಕಾಂತಿ ಲೋಹಿತಕುಮಾರನಿಗೆ ದೊರೆಯುವುದು, ಇವೆಲ್ಲಾ ಒಂದಕ್ಕೊಂದು ಅಚ್ಚುಕಟ್ಟಾಗಿ ಹೊಂದಿಕೊಂಡು ಕಥೆಯ ಬಂಧವನ್ನು ಅಂದಗೊಳಿಸಿವೆ. ಕರಪಾಲದಯ್ಯನ ನಿರೂಪಣಾ ವೈಖರಿಯಲ್ಲಿ ಅವುಗಳು

ಮತ್ತಷ್ಟು ವೈಶಿಷ್ಟ್ಯವನ್ನು ಪಡೆದುಕೊಳ್ಳುತ್ತವೆ.

* * * * *

ಕರಪಾಲ ಮೇಳದ ಕತೆಗಳಲ್ಲಿ ಬರುವ ಹಾಡುಗಳನ್ನೇ ಪ್ರತ್ಯೇಕವಾಗಿ ಪರಿಶೀಲಿಸಬೇಕಾಗು ತ್ತದೆ, ಮೊದಲೇ ಗಮನಿಸಿದಂತೆ ಈ ಹಾಡುಗಳ ನೆರವಿಲ್ಲದೆಯೂ ಕತೆ ಸಾಗಬಲ್ಲದು, ಅರ್ಥವೂ ಆಗಬಲ್ಲದು. ಆದರೆ, ಹಾಡಿದಾಗ ಆಗುವಷ್ಟು ಪರಿಣಾಮ ಆಗುವುದಿಲ್ಲ. ಇಲ್ಲಿ ಹಾಡನ್ನು ವೈವಿಧ್ಯಕ್ಕಾಗಿ, ಸಂಗೀತದ ಸಂಪರ್ಕವನ್ನು ತರುವುದಕ್ಕಾಗಿ ಸೇರಿಸಿರುವಂತಹುದು. ಯಾವುದೇ ಕಥೆಯನ್ನು ಮಾಡಿದರೂ ಆಯಾ ಸಂದರ್ಭಕ್ಕೆ ಆ ಹಾಡುಗಳನ್ನು ಸೇರಿಸಿಕೊಂಡು ಕಥೆಯನ್ನು ಮಾಡುತ್ತಾರೆ.

ಸಾಹಿತ್ಯಾಂಶದ ದೃಷ್ಟಿಯಿಂದ ಅಂತಹ ಉತ್ಕೃಷ್ಟವಾದ ಹಾಡುಗಳಿವಲ್ಲದಿದ್ದರೂ ಸನ್ನಿವೇಶದ ರಸಾಸ್ವಾದನೆಯನ್ನು ಮನಮುಟ್ಟುವಂತೆ ಮಾಡುವಷ್ಟು ಸಮರ್ಥವಾದುವು. ಕಥೆಯ ಆರಂಭವೇ ಹಾಡಿನೊಂದಿಗೆ ಆಗುತ್ತದೆ. ಗಣಸ್ತುತಿ, ಶಾರದಸ್ತುತಿ, ಶಿವಸ್ತುತಿಗಳಾದ ಮೇಲೆ ಕಥೆಯನ್ನು ಆರಂಭಿಸುವ ಮುನ್ನ -

ಮುಂದಲ ಕಥೆಯದರಂದವ ಪೇಳುವೆನು
ಚಂದ್ರಶೇಖರ ನಮಗೆ ವರಕೊಡಲು ದೇವ
ವರಕೊಡಲು ದೇವ
ಮುಂದೆ ಇರುವುದೊಂದು ಅಂದವುಳ್ಳ ಪಟ್ಟಣವು
ಮಧುರಾವತಿಯು ಎಂಬ ಪಟ್ಟಣವಿರಲು
ಪಟ್ಟಣವಿರಲು

ಎಂದು ಹೇಳಿ ಆ ಮಧುರಾವತಿ ಪಟ್ಟಣವನ್ನು ಬಣ್ಣಿಸುವ ರೀತಿಯಾದರೂ ಅಷ್ಟೇ ಅಪೂರ್ವವಾದುದು. ಕಿತ್ತುಗಲ್ಲಿನ ಕೋಟೆ, ಹುಲಿಮುಖದ್ವಾರ, ಹಾಲು ಮಾರುವ ಬೀದಿ, ಮುತ್ತು ಮಾರುವ ಬೀದಿ, ಅಂಗವಂತರ ಬೀದಿ ಹಾಗೆಯೇ ಅದರ ವಿಸ್ತೀರ್ಣ ಇವುಗಳನ್ನೆಲ್ಲ ಹಾಡಿನಲ್ಲಿಯೇ ಹಾಡಿ ಆರಂಭದಲ್ಲಿಯೇ ಕಥೆಯನ್ನು ಕಳೆಗಟ್ಟಿಸುತ್ತಾನೆ.

ಹಾಗೆಯೇ ಜಂಗಮ ಬಂದು ಭಿಕ್ಷೆಯನ್ನು ಬೇಡುವಾಗ ಹಾಡುವ ಹಾಡೂ ಪರಿಣಾಮ ಕಾರಿಯಾಗಿದೆ.

ಭಿಕ್ಷವ ನೀಡಿರಮ್ಮ
ಜಂಗಮರಿಗೆ ಭಿಕ್ಷವ ನೀಡಿರಮ್ಮ
ಭಿಕ್ಷವ ನೀಡಿರಿ ಮೋಕ್ಷವ ಪಡೆಯಿರಿ
ಭಿಕ್ಷವ ನೀಡಿರಮ್ಮ ಜಂಗಮರಿಗೆ
ಭಿಕ್ಷವ ನೀಡಿರಮ್ಮ

ಎಂದು ಹೇಳಿ "ಹೇ ! ತಿಗಡದಿತ್ತೈತ ತಿಗಡದಿತ್ತೈತ" ಎಂಬುದಾಗಿ ಅದಕ್ಕೆ ಮುಕ್ತಾಯವನ್ನು ಕೊಡುವ ಭಂಗಿಯೂ ವಿಶಿಷ್ಟವಾದುದು. ಹಾಗೆ ಭಿಕ್ಷವನ್ನೂ ಕೇಳಲು ಬಂದ ಜಂಗಮನನ್ನು ಕಂಡು ಹರ್ಷದಿಂದ ಒಳಗಿನಿಂದ ಉಳಿದವರನ್ನು ಕರೆದು ಹಾಡುತ್ತಾ ಭಿಕ್ಷವನ್ನು ನೀಡುವ ದೃಶ್ಯವೂ

ಆಕರ್ಷಕವಾದುದು.

ಶಿವನು ಭಿಕ್ಷಕೆ ಬಂದ
ನೋಡುಬಾರೆ ತಂಗಿ ನೀಡು ಬಾರೆ
ಇವನಂಥ ಚಲುವರಿಲ್ಲ
ನೋಡು ಬಾರೆ ತಂಗಿ ನೀಡು ಬಾರೆ
ಕಾವಿ ಕಮಂಡಲ ನೋಡುಬಾರೆ ತಂಗಿ
ರುದ್ರಾಕ್ಷಿಮಾಲೆಯ ನೋಡು ಬಾರೆ
ಬಗಲಲ್ಲಿ ಜೋಳಿಗೆ ನೋಡುಬಾರೆ ತಂಗಿ
ಕೈಯಲ್ಲಿ ಬೆತ್ತವ ನೋಡುಬಾರೆ

ಆದರೆ, ಬಂಜೆ ಎಂಬ ಕಾರಣದಿಂದ ಆ ಗೃಹಿಣಿ ನೀಡಲು ಬಂದ ಭಿಕ್ಷವನ್ನು ತಿರಸ್ಕರಿಸಿ ಹಿಂದಿರುಗುವ ಜಂಗಮನ ರೀತಿಯಾದರೂ ಹೇಗೆ ?

ನಾನೊಲ್ಲೆ ನಾನೊಲ್ಲೆನು
ನೀ ನೀಡುವ ದಾನವ
ನಾನೊಲ್ಲೆ ನಾನೊಲ್ಲೆನು 1
ನೀ ನೀಡುವ ಭಿಕ್ಷವ
ನಾನೊಲ್ಲೆ ನಾನೊಲ್ಲೆನು 1
ಬಂಜೆ ಕೈಯ್ಯಾಗಳ ಭಿಕ್ಷೆ
ಮಂಜುಳ್ಳ ದಾನವು
ಚಂದ್ರಮುಖಿಯೆ ಕೇಳು
ನಾನೊಲ್ಲೆ ನಾನೊಲ್ಲೆನು

ಹೀಗೆ ಅತ್ಯಂತ ನಾಟಕೀಯವಾಗಿ ಬರುವ ದೃಶ್ಯಗಳಲ್ಲಿ ಹಾಡು ಚಿನ್ನದ ರೇಖೆಯಂತೆ ಅದನ್ನು ಅಂದಗೊಳಿಸುತ್ತದೆ. ಹಿಮ್ಮೇಳವೂ ಜೊತೆಗೂಡುವುದರಿಂದ ಅದರ ಹೊಳಪು ಮತ್ತೂ ಹೆಚ್ಚಿದಂತಾಗುತ್ತದೆ.

ರಾಜ ಪ್ರಯಾಣ ಹೊರಡುವಂತಹ ಸಂದರ್ಭದಲ್ಲಿ ಬರುವಂತಹ

ಕುದುರೆಯ ಕುಣಿಸುತ್ತ
ಕುಡಿಮೀಸೆ ತಿರುವುತ್ತ
ಬೋರಗುಟ್ಟುತಲಾಗ
ಬರಲಯ್ಯೊ ರಾಜ ಬರಲಯ್ಯೊ ರಾಜ

ಈ ಹಾಡು, ಮೇಲಿಂದ ಮೇಲೆ ಎಲ್ಲಾ ಕಥೆಗಳಲ್ಲಿಯೂ ಬರುವಂಥದು. ಇದು ಮೀಸೆ ಇರಲಿ ಇಲ್ಲದಿರಲಿ ಎಲ್ಲರಿಗೂ ಹಾಡುವಂತಹ ಹಾಡುಗಳು.

ಕೆಲವು ಹಾಡುಗಳು ಆ ಸಂದರ್ಭಕ್ಕೆ ಅಷ್ಟಾಗಿ ಹೊಂದಿಕೊಳ್ಳದಿದ್ದರೂ, ಯಾವುದೋ ಒಂದು ಅಂಶ ಆ ಹಾಡಿನಲ್ಲಿರುವುದನ್ನು ಗಮನಿಸಿಯೋ ಅಥವಾ ಅಲ್ಲಿ ಒಂದು ಹಾಡು ಬರಲೇಬೇಕು ಎಂಬ ಕಾರಣದಿಂದಲೋ ಹಾಡುವುದೂ ಉಂಟು. ಬರೇ ಗದ್ಯದಲ್ಲಿ ಕಥೆಯನ್ನು ಮುಂದುವರಿಸಿ ಬೇಸರಿಸುವುದು ಅವರಿಗಿಷ್ಟವಿಲ್ಲ, ಮಧ್ಯೆ ಮಧ್ಯೆ ಸಂಗೀತ ಪ್ರವೇಶಿಸಬೇಕು ಅಷ್ಟೇ. ರಾಜನು ಅಂಬಾರಿಯ ಮೇಲೆ ಕುಳಿತು ನಿಧಾನವಾಗಿ ಅಂಬಾರಿಯನ್ನು ಬಿಡುವ ಸಂದರ್ಭಕ್ಕೂ ಒಂದೇ ಹಾಡು, ಹೆಣ್ಣೊಂದು ಅರಣ್ಯದಲ್ಲಿ ಸುತ್ತಿ ಬಳಲಿ ಬೆಂಡಾಗಿ ಕಾಲನ್ನು ಮುಂದಕ್ಕೆ ಇಡಲಾಗದೆ ಒಂದೊಂದೇ ಹೆಜ್ಜೆಯನ್ನು ಪ್ರಯಾಸದಿಂದ ಇಡುವುದಕ್ಕೂ ಒಂದೇ ಹಾಡು. ಆದರೆ, ಹೆಸರು ಮಾತ್ರ ಬದಲಾಗಿರುತ್ತದೆ.

ಅಂಬಾರಿಯ ಮೇಲೆ ರಾಜಕುಮಾರ ಬರುವುದು :

ಒಂದೊಂದೆ ಹೆಜ್ಜೆಯ
ಚಂದದಿಂದಿಡುತಾಲಿ
ಬಿಲ್ಲಶೇಖರ ರಾಜ
ಹೊರಟನು ಬೇಗ ಹೊರಟನು ಬೇಗ

ಕಾಡಿನಲ್ಲಿ ಸುಸ್ತಾಗಿ ಅಲೆಯುವ ಹೆಣ್ಣು :

ಒಂದೊಂದೆ ಹೆಜ್ಜೆಯ
ಚಂದದಿಂದಿಡುತಾಲಿ
ಬಹುದುಃಖ ಮಾಡುತಾಳೆ
ರೂಪಾವತಿಯೂ ರೂಪಾವತಿಯೂ

ಇಲ್ಲಿ ವಿರೋಧಾಭಾಸಗಳು ಏನೇ ಇದ್ದರೂ, ಎಷ್ಟೇ ಇದ್ದರೂ ಅವರ ದೃಷ್ಟಿಯಲ್ಲಿ ಇವೆಲ್ಲ ಗೌಣ. ಮಧ್ಯೆ ಮಧ್ಯೆ ಹಾಡುಗಳು ಬೇಕು, ಆ ಹಾಡು ಏನಾದರೂ ಒಂದಿಷ್ಟು ಆ ಸಂದರ್ಭಕ್ಕೆ ಹೊಂದಿದಂತೆ ಸಂಬಂಧವನ್ನು ಹೊಂದಿದ್ದರಷ್ಟು ಸಾಕು. ಹೆಚ್ಚೇನನ್ನೂ ಅವರು ಬಯಸುವುದಿಲ್ಲ. ಆ ದೋಷಗಳೇನಿದ್ದರೂ ನಿರೂಪಕನ ನಿರೂಪಣಾ ವೈಖರಿಯಲ್ಲಿ ಕಣ್ಮರೆಯಾಗಿ ಬಿಡುತ್ತವೆ.

ಇಷ್ಟಾದರೂ ಕರಪಾಲ ಮೇಳ ಸರ್ವರ ಮನಸೆಳೆಯುವ ಕಲೆ. ಇದರಲ್ಲಿ ಬಯಲಾಟದ ಧಾಟಿಯೂ ಇದೆ, ಹರಿಕಥೆಯ ಮೋಹಕತೆಯೂ ಇದೆ, ಜನಪದ ಸಂಗೀತದ ಸ್ವಾರಸ್ಯವೂ ಇದೆ. ಒಟ್ಟಿನಲ್ಲಿ ಪ್ರೇಕ್ಷಕರನ್ನು ಬಹುಬೇಗ ತನ್ನ ತೆಕ್ಕೆಗೆ ಒಳಪಡಿಸಿಕೊಳ್ಳುವ ಆಕರ್ಷಣೆ, ಅಪೂರ್ವತೆ ಇದಕ್ಕಿದೆ. ಹಾಗಾಗಿ ಕರಪಾಲ ಮೇಳ ಇಂದಿಗೂ ಹೆಚ್ಚು ಜನಪ್ರಿಯವಾದ ಕಲೆಯಾಗಿ ಜೀವಂತವಾಗಿ ಉಳಿದುಬಂದಿದೆ.

*   *   *   *   *

ದಕ್ಷಿಣ ಕರ್ನಾಟಕದ ಬುಡಕಟ್ಟುಗಳು

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ಏಳರಷ್ಟು ಆದಿವಾಸಿಗಳಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿಯೂ ಈಶಾನ್ಯ ಮತ್ತು ದಕ್ಷಿಣ ಭಾರತದ ಭಾಗಗಳಲ್ಲಿ ಇವರ ಸಂಖ್ಯೆ ಹೆಚ್ಚು ಎಂದು ಹೇಳಲಾಗಿದೆ. ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯಿಂದ, ಬದುಕಿನ ರೀತಿ ನೀತಿಗಳಿಂದ ಇವರು ವಿದ್ವಾಂಸರ ಗಮನವನ್ನು ಸೆಳೆದಿದ್ದಾರಾದರೂ, ಅವರ ಬಗ್ಗೆ ನಡೆಯ ಬೇಕಾದ ಅಧ್ಯಯನ ಸಾಕಷ್ಟಿದೆ ಎಂಬ ಅತೃಪ್ತಿ ಇದ್ದೇ ಇದೆ.

ಕರ್ನಾಟಕ ಕೂಡ ಬುಡಕಟ್ಟು ಜನರಿಂದ ಸಮೃದ್ಧವಾದ ಭಾಗವೇ ಆಗಿದೆ. ಸುಮಾರು ೭೪,೨೯೩ ಚ.ಮೈ.ಗಳಷ್ಟು ಅರಣ್ಯ ಭಾಗದಲ್ಲಿ ೨೬ ಬಗೆಯ ಆದಿವಾಸಿಗಳು ಹಂಚಿ ಹೋಗಿದ್ದಾರೆ ಎಂದು ಗುರುತಿಸಲಾಗಿದೆ. ಹೀಗೆ ಕಂಡು ಬರುವ ಬುಡಕಟ್ಟುಗಳನ್ನು ಪ್ರಾದೇಶಿಕ ವಾಗಿ - ಕರಾವಳಿ ಕರ್ನಾಟಕದ ಬುಡಕಟ್ಟುಗಳು, ಉತ್ತರ ಕರ್ನಾಟಕದ ಬುಡಕಟ್ಟುಗಳು, ಹೈದರಾಬಾದ್ ಕರ್ನಾಟಕದ ಬುಡಕಟ್ಟುಗಳು ಹಾಗೂ ದಕ್ಷಿಣ ಕರ್ನಾಟಕ ಭಾಗದ ಬುಡಕಟ್ಟುಗಳು ಎಂದು ಅಧ್ಯಯನದ ದೃಷ್ಟಿಯಿಂದ ವಿಂಗಡಿಸಿಕೊಳ್ಳುವುದು ಸೂಕ್ತವೆಂದು ತೋರುತ್ತದೆ. ಈ ಗುಂಪಿನಲ್ಲಿ ಶುದ್ಧ ಆದಿವಾಸಿ ಸ್ಥಿತಿಯಲ್ಲಿರುವವರು, ಆದಿವಾಸಿ ಸ್ಥಿತಿಯಿಂದ ಸುಧಾರಣೆ ಗೊಳ್ಳುತ್ತಿರುವವರೂ ಸೇರುತ್ತಾರೆ.

ಲಂಬಾಣಿಗಳು, ಕಾಡುಗೊಲ್ಲರು, ಹಾಲಕ್ಕಿಗೌಡರು, ಮುಂತಾದವರು ಆದಿವಾಸಿ ಸ್ಥಿತಿಯಿಂದ ಸುಧಾರಣೆಗೊಳ್ಳುತ್ತಿರುವವರ ಗುಂಪಿನಲ್ಲಿ ಸೇರುತ್ತಾರೆ. ಶುದ್ಧ ಆದಿವಾಸಿ ಗುಂಪಿನಲ್ಲಿ ಬರುವ ವರೆಂದರೆ : ಕಾಡುಕುರುಬರು, ಜೇನು ಕುರುಬರು, ಮುಳ್ಳು ಕುರುಬರು, ಸೋಲಿಗರು, ಎರವರು, ಇರುಳರು, ಕೊರಗರು, ಹಸಲರು, ಮಲೆಕುಡಿಯರು, ಸಿದ್ಧಿಯರು, ಗೊಂಡರು, ಮುಂಡರು ಮುಂತಾದ ಕೆಲ ಮುಖ್ಯ ಆದಿವಾಸಿಗಳನ್ನು ಹೆಸರಿಸಬಹುದು.

ಈ ಬುಡಕಟ್ಟು ಜನರಲ್ಲಿ ಕೆಲವೊಂದು ಬುಡಕಟ್ಟಿನವರು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ಕಂಡು ಬಂದರೆ, ಇನ್ನು ಕೆಲವು ಬುಡಕಟ್ಟುಗಳು ಬೇರೆ ಬೇರೆ ಕಡೆ ನೆಲಸಿರುವುದು ಗಮನಾರ್ಹ. ಮಲೆಕುಡಿಯರು ಕೊಡಗಿನ ಮಡಿಕೇರಿ, ವೀರರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕುಗಳಲ್ಲಿ ನೆಲಸಿರುವಂತೆಯೇ, ದಕ್ಷಿಣ ಕನ್ನಡದ ಪುತ್ತೂರು, ಕಾರ್ಕಳ, ಕುಂದಾಪುರ ಮತ್ತು ಬೆಳ್ತಂಗಡಿ ತಾಲ್ಲೂಕುಗಳಲ್ಲಿಯೂ ವ್ಯಾಪಿಸಿದ್ದಾರೆ. ತಾವು ಕೊಡಗಿನ ಮೂಲನಿವಾಸಿಗಳು ಎಂದು ಅವರು ಹೇಳಿಕೊಂಡರೂ, ಹೊರಗಿನಿಂದ ಬಂದವರು ಎಂಬ ಒಂದು ವಾದವೂ ಇದೆ. 'ಕೊರಗ'ರ ಬಗ್ಗೆಯೂ ಇಂತಹುದೇ ಅಭಿಪ್ರಾಯವಿದೆ. ಅವರಾಡುವ ಭಾಷೆ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ್ದಾಗಿದ್ದು, ಅದು ಉತ್ತರ ದ್ರಾವಿಡ ಭಾಷಾವರ್ಗಕ್ಕೆ ಸೇರಿದ್ದು ಎಂಬ ಅಂಶ ಗಮನಾರ್ಹ. 'ಗೊಂಡ'ರ ಬಗ್ಗೆಯೂ ಇದೇ ಅಭಿಪ್ರಾಯವಿದೆ. ಮಧ್ಯ ಭಾರತದಿಂದ ವಲಸೆ ಬಂದವರು ಎಂದು ಹೇಳಲಾಗುತ್ತದೆ.

'ದಕ್ಷಿಣ ಕರ್ನಾಟಕದ ಬುಡಕಟ್ಟುಗಳು' ಎಂದು ಹೇಳುವಾಗ, ಅಲ್ಲಿಗೇ ಸೀಮಿತವಾದ ಪ್ರಧಾನ ಬುಡಕಟ್ಟುಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗಿದೆ. ಇವರ ಪ್ರಾದೇಶಿಕ ಗಡಿಗಳನ್ನು ನಿರ್ದಿಷ್ಟವಾಗಿ ಗುರುತಿಸಲಾಗದ ಕಾರಣ - ಪುನರುಕ್ತಿಯಾಗಬಾರದೆಂಬ ಕಾರಣಕ್ಕಾಗಿ ಪಕ್ಕದ ಜಿಲ್ಲೆಯಲ್ಲಿಯೂ ವ್ಯಾಪಿಸಿರುವ ಕೆಲವೊಂದು ಬುಡಕಟ್ಟುಗಳನ್ನು ಇಲ್ಲಿ ಕೈ ಬಿಟ್ಟಿದ್ದೇನೆ. ಹಾಗಾಗಿ ನನ್ನ ಈ ಪ್ರಬಂಧದ ವ್ಯಾಪ್ತಿಯಲ್ಲಿ - ಸೋಲಿಗರು, ಕಾಡುಕುರುಬರು, ಜೇನು ಕುರುಬರು, ಎರವರು, ಮ್ಯಾಸ ಬೇಡರು, ಕಾಡುಗೊಲ್ಲರು ಹಾಗೂ ಕೊಡಗಿನ ಪಣಿಯರನ್ನು ಮಾತ್ರ ಸಮೀಕ್ಷಿಸಿದ್ದೇನೆ.

ಬುಡಕಟ್ಟು ಜನರ ಸಂಸ್ಕೃತಿ, ಬದುಕು, ವಿಶಿಷ್ಟ ರೀತಿಯದು. ಅವರ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು, ಕಲೆ - ಸಾಹಿತ್ಯ ಮುಂತಾದುವೆಲ್ಲವೂ ವಿಭಿನ್ನ ರೀತಿಯವು. ಅನಾದಿ ಕಾಲದಿಂದಲೂ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಂದ ಕಾರಣದಿಂದಾಗಿ ಇತರರೊಂದಿಗಿನ ಸಂಪರ್ಕ ಇಲ್ಲವಾಗಿ ಅವರ ಸಂಸ್ಕೃತಿ ಇತ್ತೀಚಿನವರೆವಿಗೂ ಶುದ್ಧ ರೂಪದಲ್ಲಿ ಉಳಿದು ಬರಲು ಸಾಧ್ಯವಾಗಿತ್ತು. ಇತ್ತೀಚೆಗೆ ಬುಡಕಟ್ಟು ಸಂಸ್ಕೃತಿಯ ಹೊರ ವಲಯದ ಮೇಲೆ ಅಲ್ಪ ಸ್ವಲ್ಪ ಹೊರ ಸಂಸ್ಕೃತಿಯ ಪ್ರಭಾವ ಆದಂತೆ ತೋರಿದರೂ, ಅದರ ಆಂತರಿಕ ಸತ್ವ ಕಳೆಗುಂದಿಲ್ಲ. ಈ ದೃಷ್ಟಿಯಿಂದ ಒಂದೊಂದು ಬುಡಕಟ್ಟು ಸಂಸ್ಕೃತಿಯೂ ಪ್ರತ್ಯೇಕ ಪರಿಶೀಲನೆಗೆ ಯೋಗ್ಯವೆನಿಸುತ್ತದೆ. ಕೆಲವೊಂದು ಬುಡಕಟ್ಟುಗಳು ಆದಿವಾಸಿ ಸ್ಥಿತಿಯ ನಂಬಿಕೆ, ಸಂಪ್ರದಾಯಗಳನ್ನು ಆಚರಿಸಿಕೊಂಡು ಬಂದಿದ್ದರೂ, ಅವರ ಜೀವನ ವಿಧಾನಗಳಲ್ಲಿ ವ್ಯತ್ಯಾಸ ಕಂಡು ಬರುತ್ತವೆ. ಕರ್ನಾಟಕದಲ್ಲಿ ವ್ಯಾಪಿಸಿರುವ ಲಂಬಾಣಿಗಳು, ಕಾಡು ಗೊಲ್ಲರು ವಿಸ್ತಾರವಾದ ಪ್ರದೇಶದಲ್ಲಿ ವ್ಯಾಪಿಸಿದ್ದು, ಗ್ರಾಮೀಣ ಪರಿಸರದ ಮುಂದುವರಿದ ಸ್ಥಿತಿಗತಿಗಳು ಇವರಲ್ಲಿಯೂ ಗೋಚರಿಸುತ್ತವೆ. ಇವರ ಜೀವನ ವಿಧಾನಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡು ಬರುತ್ತಿವೆ.

ಆದರೂ ಒಂದು ಪ್ರದೇಶದ ಮೂಲ ನಿವಾಸಿಗಳೆನಿಸಿದ ಆದಿವಾಸಿಗಳು, ಗ್ರಾಮೀಣ ಜನರಿಗಿಂತ ವಿಭಿನ್ನ ರೀತಿಯ ಬದುಕನ್ನು ನಡೆಸುತ್ತ ಬಂದವರು. ವಿಶಿಷ್ಟ ಬಗೆಯ ಸಂಸ್ಕೃತಿಯನ್ನು ರೂಢಿಸಿಕೊಂಡವರು. ಹೆಚ್ಚಾಗಿ ಅವರು ಅಲೆಮಾರಿಗಳು. ಆಹಾರಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಾರೆ. ಬೆಟ್ಟ - ಗುಡ್ಡ, ಕಾಡು - ಮೇಡುಗಳಲ್ಲಿ ದೊರಕುವ ಗೆಡ್ಡೆ - ಗೆಣಸು, ಸೊಪ್ಪು - ಸೊದೆಗಳನ್ನು ಆಹಾರವಾಗಿಸಿಕೊಳ್ಳುತ್ತಾರೆ. ಸಣ್ಣ ಪುಟ್ಟ ಪ್ರಾಣಿ ಬೇಟೆ, ಪಶುಪಾಲನೆ, ಅವರದ್ದೇ ಆದ ವಿಶಿಷ್ಟ ಬಗೆಯ ಬೇಸಾಯ - ಅವರ ಜೀವನೋಪಾಯಗಳು. ನಾಗರಿಕ ಸಮಾಜದಿಂದ ದೂರವಾಗಿ ದಟ್ಟಡವಿಗಳಲ್ಲಿ ತಮ್ಮದೇ ಆದ ವಿಶಿಷ್ಟ ಬಗೆಯ ಜೀವನವನ್ನು ನಡೆಸುತ್ತಿರುವ ಈ ಬುಡಕಟ್ಟು ಜನರ ಬದುಕು ಒಂದು ಪ್ರಾಚೀನ ಸಂಸ್ಕೃತಿಯ ಅಧ್ಯಯನವೇ ಆಗಿದೆ ಎನ್ನಬಹುದು.

ಬುಡಕಟ್ಟು ಸಮಾಜ ತನ್ನದೇ ಆದ ಕೆಲವೊಂದು ಸಾಮಾನ್ಯ ಲಕ್ಷಣಗಳನ್ನು ಹೊಂದಿದೆ. ಇವು ಎಲ್ಲಾ ಬುಡಕಟ್ಟು ಸಮಾಜಕ್ಕೂ ಅನ್ವಯಿಸುತ್ತವೆ ಎಂದು ಹೇಳಬಹುದಾದರೂ, ಅಲ್ಪಸ್ವಲ್ಪ ವ್ಯತ್ಯಾಸಗಳೂ ಸಹಜ :

1. ಒಂದು ಆದಿವಾಸಿ ಬುಡಕಟ್ಟಿಗೆ ಸೇರಿದವರೆಲ್ಲರೂ ಒಂದೇ ಭೌಗೋಳಿಕ ಪ್ರದೇಶದಲ್ಲಿ ವಾಸ ಮಾಡುತ್ತಾರೆ. ಸಾಮುದಾಯಿಕ ಭಾವನೆಯನ್ನು ಬೆಳೆಸಿಕೊಳ್ಳಲು ಇದು ಸಹಾಯಕವಾಗುತ್ತದೆ.

2. ತಮ್ಮದೇ ಆದ ಆಡುಭಾಷೆಯನ್ನು ಬೆಳೆಸಿಕೊಂಡಿರುತ್ತಾರೆ. ಅದು ಇತರರಿಗೆ ಸುಲಭವಾಗಿ ಅರ್ಥವಾಗದ ಮಿಶ್ರ ಭಾಷೆಯಾಗಿರುತ್ತದೆ.

3. ಆದಿವಾಸಿಗಳಲ್ಲಿ ರಕ್ತ ಸಂಬಂಧಕ್ಕೆ ಹೆಚ್ಚು ಪ್ರಾಧಾನ್ಯತೆ ಕಂಡು ಬರುತ್ತದೆ. ಅದರ ಆಧಾರದ ಮೇಲೆಯೇ ಕುಲಗಳು ಹುಟ್ಟಿಕೊಳ್ಳುತ್ತವೆ.

4. ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಗಳು ಒಂದೊಂದು ಬುಡಕಟ್ಟಿಗೂ ಪ್ರತ್ಯೇಕವಾಗಿ ಕಂಡು ಬರುತ್ತದೆ. ಆಸ್ತಿಯ ಹಕ್ಕಾಗಲಿ, ವಿವಾಹದ ರೀತಿ ನೀತಿಯಾಗಲಿ, ವಿಭಿನ್ನ ರೀತಿಯಲ್ಲಿ ಕಂಡು ಬರುತ್ತವೆ. ಮಾತೃ ಪ್ರಧಾನ - ಪಿತೃ ಪ್ರಧಾನ ಕುಟುಂಬದ ಬಗೆಗಳೂ ಕಂಡು ಬರುತ್ತವೆ.

5. ಆದಿವಾಸಿಗಳ ಸಮಾಜ ಸರಳವಾದದ್ದು. ತಮ್ಮ ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಾರೆ. ನಾಳಿನ ಚಿಂತೆ ಅವರಲ್ಲಿ ಕಡಿಮೆ. ವರ್ತಮಾನವಷ್ಟೇ ಅವರಿಗೆ ಮುಖ್ಯ. ಸ್ವಾವಲಂಬಿಗಳಾಗಿ, ಸ್ವತಂತ್ರರಾಗಿ ಬದುಕಲಿಚ್ಛಿಸುತ್ತಾರೆ. ಹೊರಗಿನ ಆಕ್ರಮಣವಾದಾಗ ಒಟ್ಟಾಗಿ ಎದುರಿಸುತ್ತಾರೆ. ಸಮಾನತ್ವದ ಭಾವನೆ ಅತಿಯಾಗಿ ಕಂಡು ಬರುತ್ತದೆ.

6. ಅವರ ಸಾಮಾಜಿಕ ಬದುಕು ಸರಳವಾಗಿ ಕಂಡರೂ, ಧಾರ್ಮಿಕ ಜೀವನ ಅಷ್ಟೇ ಸಂಕೀರ್ಣವಾಗಿರುವುದು ಗಮನಾರ್ಹ. ಈ ವಿಚಾರದಲ್ಲಿ ಒಂದೊಂದು ಬುಡಕಟ್ಟಿಗೂ ಅಲ್ಪಸ್ವಲ್ಪ ವ್ಯತ್ಯಾಸಗಳಿವೆ. ಪ್ರಕೃತಿ ಪೂಜೆ ಅವರಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಕುಲದೇವತಾ ಪದ್ಧತಿ ಅವರಲ್ಲಿ ಪ್ರಮುಖವಾಗಿ ತೋರುತ್ತದೆ.

7. ಸ್ತ್ರೀ ಸ್ವಾತಂತ್ರ್ಯ ಬುಡಕಟ್ಟು ಜನರಲ್ಲಿ ಹೆಚ್ಚಾಗಿಯೇ ಇದೆ. ವಿಧವಾ ವಿವಾಹ ಬಹುತೇಕ ಎಲ್ಲಾ ಬುಡಕಟ್ಟುಗಳಲ್ಲಿ ಕಂಡು ಬರುತ್ತದೆ. ವಧುವಿಗೆ ತೆರಕಟ್ಟಿ ಮದುವೆಯಾಗಬೇಕಾದ ಪರಿಸ್ಥಿತಿ ಬುಡಕಟ್ಟು ಜನರಲ್ಲಿ ಆಚರಣೆಯಲ್ಲಿದೆ.

8. ವಿವಾಹದ ವಿಷಯದಲ್ಲಿಯಂತೂ ಬುಡಕಟ್ಟು ಜನಾಂಗಗಳಲ್ಲಿ ಹೆಚ್ಚಿನ ಸ್ವಾರಸ್ಯ ಹಾಗೂ ಸ್ವಾತಂತ್ರ್ಯವಿರುವುದು ಗಮನಾರ್ಹ. ತನ್ನ ಶಕ್ತಿ ಪ್ರದರ್ಶನದಿಂದ ಹೆಣ್ಣನ್ನು ಒಲಿಸಿಕೊಳ್ಳುವುದು, ಪ್ರೀತಿಸಿದ ಹೆಣ್ಣನ್ನು ಕರೆದೊಯ್ದು ನಂತರ ಮನೆಯವರಿಗೆ ತಿಳಿಸುವುದು, ಮುಂತಾದ ಹೆಚ್ಚು ಆರೋಗ್ಯಕರವಾದ ಮನಸ್ಸಿನ ಆಚರಣೆಗಳು ಅನೇಕ ಆದಿವಾಸಿಗಳಲ್ಲಿ ರೂಢಿಯಲ್ಲಿವೆ. ನಾಗರಿಕ ಸಮಾಜದಲ್ಲಿ ಅಪರಾಧವೆನಿಸಬಹುದಾದ ಸಂಗತಿಗಳು ಇಲ್ಲಿ ಮಾನ್ಯ.

9. ಆದಿವಾಸಿಗಳಲ್ಲಿ ಕಂಡು ಬರುವ ಕಲೆ ವಿಶಿಷ್ಟ ಬಗೆಯದು. ಹಾಡು, ಕುಣಿತ, ಚಿತ್ರಕಲೆ, ವಾದ್ಯವಿಶೇಷಗಳು ಎಲ್ಲವೂ ಅವರ ಅಭಿರುಚಿಯನ್ನೂ ವಿಶೇಷ ಆಸಕ್ತಿಯನ್ನು ಪ್ರತಿಬಿಂಬಿಸುತ್ತವೆ.

10. ಸಮೂಹ ನೃತ್ಯ ಬುಡಕಟ್ಟು ಜನಾಂಗದ ಒಂದು ವಿಶೇಷ. ಹೆಣ್ಣು - ಗಂಡು, ದೊಡ್ಡವರು - ಮಕ್ಕಳು, ಎಲ್ಲರೂ ಒಟ್ಟಿಗೇ ಕೂಡಿ ಹಾಡಿ ಕುಣಿಯುವ ದೃಶ್ಯ ಮನಮೋಹಕ.

11. ಸಾಹಿತ್ಯ ಸೃಷ್ಟಿಯಲ್ಲಿಯೂ ಅವರು ಹಿಂದೆ ಬಿದ್ದಿಲ್ಲ. ಕೆಲವೊಂದು ಬುಡಕಟ್ಟುಗಳು ಮಹಾ ಕಾವ್ಯದ ಕರ್ತೃಗಳೂ ಆಗಿವೆ.

12. ಹಚ್ಚೆ ಅವರ ವಿಶೇಷ ಚಿತ್ರಕಲೆ. ತಮ್ಮ ಶರೀರವನ್ನು ವಿವಿಧ ರೀತಿಯಲ್ಲಿ ಶೃಂಗರಿಸಿಕೊಳ್ಳಲು ಹಚ್ಚೆಯನ್ನು ಹೊಯ್ಸಿಕೊಳ್ಳುತ್ತಾರೆ.

13. ಅವರದ್ದೇ ಆದ ವೈದ್ಯ ಪದ್ಧತಿಯೂ ಒಂದು ವಿಶೇಷವೇ.

ಇದಿಷ್ಟು ಪೂರ್ವ ಪೀಠಿಕೆಯ ಹಿನ್ನೆಲೆಯಲ್ಲಿ ಒಂದೊಂದು ಬುಡಕಟ್ಟನ್ನೂ ಇಲ್ಲಿ ಸ್ಥೂಲವಾಗಿ ಪರಿಶೀಲಿಸಲಾಗಿದೆ :

ಸೋಲಿಗರು : ಮೈಸೂರು ಜಿಲ್ಲೆಯ ಕೊಳ್ಳೆಗಾಲ, ಚಾಮರಾಜನಗರ, ಬಿಳಿಗಿರಿ ರಂಗನಬೆಟ್ಟ, ಮಹದೇಶ್ವರ ಬೆಟ್ಟ, ಎಳಂದೂರು, ಹೆಗ್ಗಡದೇವನಕೋಟೆ ಹಾಗೂ ಹುಣಸೂರು ತಾಲ್ಲೂಕುಗಳಲ್ಲಿ ವಿಶೇಷವಾಗಿ ನೆಲಸಿರುವ ಇವರು : ತುಮಕೂರು, ಬೆಂಗಳೂರು, ಚಿತ್ರದುರ್ಗ, ಕೋಲಾರ, ಶಿವಮೊಗ್ಗ, ಹಾಸನ ಜಿಲ್ಲೆಗಳಲ್ಲಿಯೂ ಕಂಡು ಬರುತ್ತಾರೆ. ತಮಿಳುನಾಡು ಹಾಗೂ ಆಂಧ್ರ ಪ್ರದೇಶದಲ್ಲಿಯೂ ಸೋಲಿಗ ಜನಾಂಗ ಇದೆ. ಆದರೆ ಇವರ ಮುಖ್ಯ ನೆಲೆ ಕರ್ನಾಟಕ. ಅದರಲ್ಲಿಯೂ ಮೈಸೂರು ಜಿಲ್ಲೆ. ಅವರ ಮುಖ್ಯ ಕೇಂದ್ರ ಬಿಳಿಗಿರಿ ರಂಗನಬೆಟ್ಟ ಹಾಗೂ ಮಲೆಯ ಮಹದೇಶ್ವರನ ಬೆಟ್ಟ. ಸೋಲಿಗರ ಜೀವನ ನಿರ್ವಹಣೆಗೆ ಈ ದಟ್ಟ ಬೆಟ್ಟ ಗುಡ್ಡ ಹಾಗೂ ಕಾಡು ಪ್ರದೇಶ ಹೆಚ್ಚು ಸೂಕ್ತವಾಗಿದೆ.

ಕುಲದ ಪದ್ಧತಿ ಸೋಲಿಗರಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಐದು ಕುಲದವರು, ಏಳು ಕುಲದವರು ಹಾಗೂ ಹದಿನಾಲ್ಕು ಕುಲದವರು ಎಂಬ ಗುಂಪುಗಳು ಇವರಲ್ಲಿವೆ. ಈ ಬಗೆಯ ಕುಲದ ವ್ಯವಸ್ಥೆ ನೆಂಟಸ್ತಿಕೆ ಬೆಳೆಸಲು ಹಾಗೂ ಬಂಧುತ್ವವನ್ನು ಗುರುತಿಸಿಕೊಳ್ಳಲು ಸಹಾಯಕವಾಗುತ್ತದೆ. ಇದರಂತೆಯೇ ಅವರಲ್ಲಿ ಕೆಲವು ಒಳಗುಂಪುಗಳೂ ಗೋಚರಿಸುತ್ತವೆ. ಈ ಒಳಗುಂಪುಗಳು ಅವರು ಪ್ರಾದೇಶಿಕವಾಗಿ ಹಂಚಿ ಹೋಗಿರುವ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ : ಊರ ಸೋಲಿಗರು, ಕಾಡು ಸೋಲಿಗರು, ಮಲೆ ಸೋಲಿಗರು, ಊರುಬತ್ತಿ ಸೋಲಿಗರು, ಹಾಗೂ ಬುರುಡೆ ಸೋಲಿಗರು ಮುಂತಾಗಿ ಕಂಡು ಬರುತ್ತಾರೆ. ಈ ವಿಂಗಡಣೆ ಎಷ್ಟಿದೆ ಎಂದು ನಿರ್ದಿಷ್ಟವಾಗಿ ಕಂಡು ಬರುವುದಿಲ್ಲ. 'ದೇವರ ಸೋಲಿಗ' ಎಂಬ ಒಂದು ಗುಂಪೂ ಇರುವುದಾಗಿ ತಿಳಿಯುತ್ತದೆ.

ಜೀವನ ಕ್ರಮದಲ್ಲಿ ಸೋಲಿಗರಲ್ಲಿ ಕಂಡು ಬರುವ ಕೆಲವೊಂದು ಆಚರಣೆಗಳು, ನಂಬಿಕೆಗಳು, ಹಾಗೂ ಸಂಪ್ರದಾಯಗಳು ವಿಶೇಷವಾಗಿವೆ. ಹುಟ್ಟಿನಿಂದ ಸಾವಿನ ತನಕ ನಡೆಸುವ ಆಚರಣೆಗಳಲ್ಲಿ ಕೆಲವೊಂದು ವಿಶೇಷತೆ ಕಂಡು ಬರುತ್ತವೆ :

1. ಬಸುರಿ ಹೆಂಗಸಿಗೆ ದೆವ್ವ - ಭೂತಗಳ ಕಾಟವಿದೆಯೆಂದು ನಂಬುತ್ತಾರೆ.

2. ಹೆಂಡತಿ ಬಸುರಿಯಾದಾಗ ಗಂಡಸು ಕಾಡಿನಲ್ಲಿ ಹೆಚ್ಚು ಓಡಾಡದ ನಿಷೇಧ ಇದೆ.

3. ಹೆಣ್ಣು ಋತುಮತಿಯಾದಾಗ ಆಚರಿಸುವ ಆಚರಣೆಗಳೂ ವಿಶಿಷ್ಟವಾಗಿವೆ. ಗುಡಿಸಲು ಕಟ್ಟುವಾಗ ಸೋದರ ಮಾವನ ಪಾತ್ರ ಹಾಗೂ ಸೂತಕ ತೆಗೆಯುವಾಗ ಐದು ಜನ ಕುಲಸ್ಥರ ಪಾತ್ರ ಪ್ರಮುಖವಾಗಿ ಕಂಡು ಬರುತ್ತದೆ.

4. ಸೋಲಿಗರಲ್ಲಿ ಐದು ಕುಲಗಳಿರುವ ಕಾರಣ, ಐದರ ಸಂಖ್ಯೆ ಬಹು ಮುಖ್ಯ.

ವಿವಾಹ ಪದ್ಧತಿ : ಸೋಲಿಗರ ವಿವಾಹ ಪದ್ಧತಿ ತುಂಬ ಸರಳವಾದದ್ದು. ವೈವಿಧ್ಯಮಯವಾದ ಎಲ್ಲ ಬಗೆಯ ವಿವಾಹ ಪದ್ಧತಿಗಳೂ ಸೋಲಿಗರಲ್ಲಿ ಕಂಡು ಬರುತ್ತವೆ. ಅಪಹರಣ ವಿವಾಹ, ಸೇವಾ ವಿವಾಹ, ಅಕ್ರಮ ಪ್ರವೇಶ ವಿವಾಹ, ಬಹು ಪತ್ನಿತ್ವ, ಏಕ ಸಂಗಾತಿ ವಿವಾಹ, ವಿಧವಾ ವಿವಾಹ, ಮೈದುನ ವಿವಾಹ ಪದ್ಧತಿಗಳು ಹೆಚ್ಚು ರೂಢಿಯಲ್ಲಿವೆ. ಇವುಗಳೆಲ್ಲದರಲ್ಲಿ ಹೆಚ್ಚು ಬಳಕೆಯಲ್ಲಿ ಕಂಡು ಬರುವುದು 'ಅಪಹರಣ ವಿವಾಹ'. ಇದರ ಪ್ರಕಾರ ಪ್ರೀತಿಸಿದ ಗಂಡು - ಹೆಣ್ಣು

ಸ್ವಲ್ಪ ದಿನ ಕಾಣೆಯಾಗಿ ಹಿಂತಿರುಗಿದ ನಂತರ ಕುಲ ಪಂಚಾಯಿತಿಗೆ ದಂಡ ತೆತ್ತು ಊಟ ಹಾಕಿದರೆ ಮದುವೆಗೆ ಒಪ್ಪಿಗೆ ದೊರೆತಂತೆಯೇ. ಇನ್ನೂ ಕೆಲವೊಮ್ಮೆ ಇದು ಹಿರಿಯರ ಒಪ್ಪಿಗೆಯಂತೆ ಈ ಅಪಹರಣ ಪೂರ್ವ ನಿಯೋಜಿತವಾಗಿಯೂ ನಡೆಯುವುದುಂಟು. ಆಗಲೂ ದಂಡ ತೆರಬೇಕಾಗುತ್ತದೆ.

ಕನ್ಯಾಶುಲ್ಕ ಕೊಡುವ ಪದ್ಧತಿಯೂ ಸೋಲಿಗರಲ್ಲಿದೆ. ವಿವಾಹ ವಿಚ್ಛೇದನಕ್ಕೂ ಇವರಲ್ಲಿ ಅವಕಾಶ ಉಂಟು. ಕುಲ ಪಂಚಾಯ್ತಿಯ ಸಮ್ಮುಖದಲ್ಲಿ ಇದು ನಡೆಯುತ್ತದೆ. ತನ್ನ ಮೊದಲ ಗಂಡನಿಂದ ವಿವಾಹ ವಿಚ್ಛೇದನ ಪಡೆದ ಮೇಲೆ ಅವಳು ಕನ್ಯಾಶುಲ್ಕವನ್ನು ಹಿಂತಿರುಗಿಸಬೇಕಾಗುತ್ತದೆ. ವಿಚ್ಛೇದನ ಪಡೆದ ನಂತರ ಕೂಡಾವಳಿ ಮಾಡಿಕೊಳ್ಳಲು ಅವಕಾಶವಿದೆ. ವಿಚ್ಛೇದ ಕಾರ್ಯ ಹೆಚ್ಚು ಸಾಂಕೇತಿಕವಾಗಿ ಆಚರಣೆಗೊಳ್ಳುತ್ತದೆ. ಪಂಚಾಯ್ತಿ ಸಮ್ಮುಖದಲ್ಲಿ ಒಂದು ಕಡ್ಡಿಯನ್ನು ಎರಡು ತುಂಡಾಗಿ ಮುರಿದರೆ ಗಂಡ - ಹೆಂಡತಿ ಬೇರ್ಪಟ್ಟಂತೆ.

ವಿಧವಾ ವಿವಾಹಕ್ಕೂ ಸೋಲಿಗರಲ್ಲಿ ಅವಕಾಶವಿದೆ. ಆ ಸಂದರ್ಭದಲ್ಲಿಯೂ ಕನ್ಯಾಶುಲ್ಕವನ್ನು ಕೊಡಬೇಕಾಗುತ್ತದೆ.

ಮರಣ ಸಂದರ್ಭದ ಆಚರಣೆಗಳು : ಆದಿ ಮಾನವನಲ್ಲಿ ಕಂಡು ಬಂದ ಎರಡು ಆತ್ಮದ ಕಲ್ಪನೆ ಸೋಲಿಗರಲ್ಲಿಯೂ ಕಂಡು ಬರುತ್ತದೆ. ಸೋಲಿಗರು ಇದನ್ನು 'ಸೂಲು' ಎಂದು ಕರೆಯುತ್ತಾರೆ. ಇದನ್ನೇ 'ಚಿಕ್ಕ ಸೂಲು', 'ದೊಡ್ಡ ಸೂಲು' ಎಂದು ಕರೆಯುತ್ತಾರೆ. 'ಚಿಕ್ಕಸೂಲು' ದೇಹದಲ್ಲಿ ಇರುವವರೆಗೆ ಮಾತ್ರ ಮನುಷ್ಯ ಬದುಕಿರುತ್ತಾನೆ. ನಂತರ ಅದು 'ದೊಡ್ಡ ಸೂಲ'ನ್ನು ಸೇರಿಕೊಳ್ಳುತ್ತದೆ ಎಂಬುದು ಅವರ ನಂಬಿಕೆ.

ಶವವನ್ನು ಹೂಳುವ ಪದ್ಧತಿ ಇವರಲ್ಲಿದೆ. ಗುಂಡಿಯೊಳಗೆ ಹೆಣವನ್ನು ಮಲಗಿಸುವ ಮೊದಲು ಅವರು ಮಾಡುವ ಆಚರಣೆಗಳು ವಿಶೇಷವಾಗಿವೆ. ಶವದ ಗುಂಡಿಯೊಳಗೆ - ಕಾರೆಮುಳ್ಳು, ತರಗು, ರಾಗಿ ಮುದ್ದೆ, ಒಂದು ಚೆಂಬು ನೀರು, ತಿಂಡಿ, ಎಲೆ ಅಡಿಕೆ ಮುಂತಾದುವನ್ನು ಇಡುವ ಪದ್ಧತಿ ಇದೆ. ತಿಥಿಯ ದಿನ ಮಾಂಸಾಹಾರವನ್ನು ಸಿದ್ಧಪಡಿಸುತ್ತಾರೆ. ಇದಾದ ನಂತರ ಅವರು ಆಚರಿಸುವ 'ಧಾನ್ಯ ಹಿಡಿಯುವ ಪದ್ಧತಿ' ಒಂದು ವಿಶೇಷ. ತಿಥಿಗೆ ಬಂದವರಲ್ಲಿ ಹನ್ನೆರಡು ಮಂದಿ ಮಾತ್ರ ಉಳಿದು, ಎಲ್ಲರೂ ಅವರವರ ಕೈಯಲ್ಲಿ ಒಂದು ಹಿಡಿ ರಾಗಿಯನ್ನು ಒಂದು ಕೈಯಲ್ಲಿ, ಮತ್ತೊಂದು ಕೈಯಲ್ಲಿ ಒಂದು ಬಿಂದಿಗೆ ನೀರು ಹಿಡಿದು ಪೂಜೆ ಮಾಡಿರುವ ಮೆಳೆಯ ಹತ್ತಿರ ಬಂದು ಈ ಆಚರಣೆ ನೆರವೇರಿಸುತ್ತಾರೆ. ಹೀಗೆ ಮಾಡುವುದರಿಂದ ಸತ್ತವರ ಆತ್ಮ ಭೂಮಿಯನ್ನು ಬಿಟ್ಟು ಹೋಗುತ್ತದೆ ಎಂಬ ನಂಬಿಕೆ ಇದೆ.

ಅದೇ ದಿನ ರಾತ್ರಿ ಇನ್ನೊಂದು ಆಚರಣಾ ವಿಧಿಯನ್ನು ಸೋಲಿಗರು ಆಚರಿಸುತ್ತಾರೆ. ಇದು, ಸತ್ತ ವ್ಯಕ್ತಿ ಸತ್ತವರ ಲೋಕಕ್ಕೆ ಹೋಗಿದ್ದಾನೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲು ನಡೆಸುವ ಆಚರಣೆ. ಆ ದಿನ ಮಾಡಿದ ಅನ್ನ, ಸಾರು, ಮುದ್ದೆಯನ್ನು, ಒಂದು ಚೆಂಬು ತುಂಬ ನೀರು ಸಹಿತ ಎಲ್ಲವನ್ನೂ ಸತ್ತ ಜಾಗದಲ್ಲಿ ಇರಿಸಿ ಅದರ ಮೇಲೆ ಬಿದಿರ ಕುಕ್ಕೆಯನ್ನು ಮುಚ್ಚುತ್ತಾರೆ. ಬೆಳಗ್ಗೆ ನೋಡಿದಾಗ ಅದರಲ್ಲಿ ಸ್ವಲ್ಪ ಕಡಿಮೆಯಾಗಿದ್ದರೆ, ಸತ್ತ ವ್ಯಕ್ತಿ ಸತ್ತವರ ಲೋಕಕ್ಕೆ ಹೋಗಿದ್ದಾನೆ ಎಂದು ನೆಮ್ಮದಿ ಹೊಂದುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಅವರು ಆಚರಿಸುವ 'ಈರು ಮುರಿಯುವುದು' ಹಾಗೂ 'ಕಲ್ಲು ಸೇವೆ' ಕೂಡ ಸತ್ತವರ ಆತ್ಮವನ್ನು ಸತ್ತವರ ಮನೆಗೆ ಸೇರಿಸುವ ಸಲುವಾಗಿ ಮಾಡುವ ಆಚರಣೆಗಳು.

ಸೋಲಿಗರಗಲ್ಲಿ ಕಂಡು ಬರುವ ಇನ್ನಿತರ ಕೆಲವು ಧಾರ್ಮಿಕ ಆಚರಣೆಗಳು ಹಾಗೂ ನಂಬಿಕೆಗಳೂ ಗಮನ ಸೆಳೆಯುತ್ತವೆ. ಮಳೆ ಬಾರದೆ ಹೋದಾಗ ಮಳೆ ಬರಿಸಲು ಅಂತಹ ವಿಶೇಷವಾದ ಆಚರಣೆಗಳು ಕಂಡು ಬರದಿದ್ದರೂ, ಅತಿವೃಷ್ಟಿಯಾದಾಗ ಅವರು ನಡೆಸುವ ಒಂದು ಆಚರಣೆ ವಿಶಿಷ್ಟವಾಗಿದೆ. ಸೋಲಿಗರಲ್ಲಿ ಹಿರಿಯನಾದವನೊಬ್ಬ ಒಂದು ಭೂತಾಳೆ ಮತ್ತು ಒಂದು ಕೊಡಲಿಯನ್ನು ಹಿಡಿದು ಒಂದು ಬೆಟ್ಟದ ತುದಿಗೆ ಹೋಗುತ್ತಾನೆ. ಅಲ್ಲಿ ನಿಂತು ನಿರ್ವಾಣ ಸ್ಥಿತಿಯಲ್ಲಿ ಭೂತಾಳೆಯನ್ನು ಚೂರು ಚೂರಾಗಿ ಕತ್ತರಿಸಿ, ಆ ಚೂರನ್ನು ನೀರಿನಲ್ಲಿ ಎಸೆಯುತ್ತಾನೆ. ಹೀಗೆ ಮಾಡುವುದರಿಂದ ಅತಿವೃಷ್ಟಿ ಕಡಿಮೆಯಾಗುತ್ತದೆ ಎಂದು ಅವರು ನಂಬುತ್ತಾರೆ.

ಶಕುನಗಳು - ನಂಬಿಕೆಗಳು : ಸೋಲಿಗರಲ್ಲಿ ಶಕುನಗಳು ಮತ್ತು ನಂಬಿಕೆಗಳು ವಿಶೇಷವಾಗಿವೆ. ಅವುಗಳನ್ನು ಅತಿಯಾಗಿ ನಂಬುತ್ತಾರೆ ಹಾಗೂ ಅವಕ್ಕೆ ತಮ್ಮದೇ ಆದ ಕಾರಣಗಳನ್ನು ಅವರು ನೀಡುತ್ತಾರೆ. ಕೆಲವೊಂದು ವಿಚಿತ್ರವಾದ ನಂಬಿಕೆಗಳೂ ಅವರಲ್ಲಿವೆ. ಬೇಟೆಗೆ ಹೊರಟಾಗ 'ತುಂಬಿದ ಅರಬಿ' ಅವರಿಗೆ ಅಪಶಕುನ. ಬೇಟೆ ಸಿಕ್ಕುವುದಿಲ್ಲ ಎಂಬ ನಂಬಿಕೆಯಿಂದ ಹಿಂತಿರುಗುತ್ತಾರೆ. ಹಾಗೆಯೇ ಪ್ರಯಾಣ ಸಂದರ್ಭದಲ್ಲಿ ಮೊಲ ಎದುರಾದರೆ ಕೆಟ್ಟದ್ದೆಂದೂ, ಕತ್ತೆ ಎದುರಾದರೆ ಒಳ್ಳೆಯದೆಂದೂ ನಂಬುತ್ತಾರೆ. ಹಲ್ಲಿಯ ಶಕುನದ ಬಗ್ಗೆಯೂ ಅವರಿಗೆ ವಿಶೇಷ ನಂಬಿಕೆ ಇದೆ. ಅದು ಬೇರೆ ಬೇರೆ ದಿಕ್ಕಿನಲ್ಲಿ ಲೊಚಗುಟ್ಟಿದಾಗ ಬೇರೆ ಬೇರೆ ರೀತಿಯಲ್ಲಿ ಅರ್ಥೈಸಿ ಅದನ್ನು ನಂಬುತ್ತಾರೆ. ರಾತ್ರಿ ಮಲಗುವಾಗ ಪಶ್ಚಿಮ ದಿಕ್ಕಿಗೆ ತಲೆ ಹಾಕಿ ಅವರು ಮಲಗುವುದಿಲ್ಲ. ಅದಕ್ಕೆ ಅವರು ಕೊಡುವ ಕಾರಣವೆಂದರೆ - ಪಶ್ಚಿಮ ದಿಕ್ಕು ಹೊತ್ತು ಬೀಳುವ ದಿಕ್ಕಾದ್ದರಿಂದ, ತಲೆಯೂ ಬಿದ್ದು ಹೋದೀತೆಂಬುದು. ಕನಸಿನಲ್ಲಿ ಹೆಣ ಕಾಣಿಸಿಕೊಂಡರೆ ಮರು ದಿನ ಒಳ್ಳೆಯ ಬೇಟೆ ಸಿಕ್ಕುತ್ತದೆ ಎಂಬ ನಂಬಿಕೆ ಇದೆ.

ಹಬ್ಬಗಳು : ನಾಡಿನವರು ಆಚರಿಸುವ ಹಬ್ಬಗಳು, ಕಾಡಿನ ಈ ಜನರಲ್ಲಿ ಇಲ್ಲ. ಇದ್ದರೂ ನಾಡಿನವರ ಪ್ರಭಾವದಿಂದ ಸ್ವಲ್ಪಮಟ್ಟಿಗೆ ಕೆಲವರು ಆಚರಿಸುತ್ತಾರೆ. ಸೋಲಿಗರ ಬದುಕಿನಲ್ಲಿ ಬೇಟೆಯಷ್ಟೇ ವ್ಯವಸಾಯವೂ ಮುಖ್ಯವಾದುದರಿಂದ ಅವರಲ್ಲಿ ವ್ಯವಸಾಯ ಸಂಬಂಧವಾದ ಹಬ್ಬಗಳೇ ಹೆಚ್ಚು. ಮೊದಲು ಭೂಮಿತಾಯಿಗೆ ಅವರು ಕೃತಜ್ಞತೆ ಸಲ್ಲಿಸುತ್ತಾರೆ. ಅಂತಹ ಹಬ್ಬಗಳಲ್ಲಿ - ಹೊಸ ರಾಗಿ ಹಬ್ಬ, ರೊಟ್ಟಿ ಹಬ್ಬ ಹಾಗೂ ಮುನಿ ಮಾಡುವುದು ಮುಖ್ಯವಾಗಿ ಕಂಡು ಬರುತ್ತದೆ. ಇವುಗಳಲ್ಲಿ 'ಹೊಸ ರಾಗಿ ಹಬ್ಬ' ಒಂದು ಕುಟುಂಬದ ತೀರ್ಮಾನದಂತೆ ನಡೆಯುವುದಾದರೆ, 'ರೊಟ್ಟಿ ಹಬ್ಬ' ಸಾಮೂಹಿಕವಾದ ಹಬ್ಬ. ಇದನ್ನು 'ರೊಟ್ಟಿಯ ಪೂರ' ಎಂದೂ ಕರೆಯುತ್ತಾರೆ. ಇದು ಸಂಕ್ರಾಂತಿ ತಿಂಗಳ ಬೆಳದಿಂಗಳ ಬೆಳಕಿನಲ್ಲಿ ನಡೆಯುವ ಹಬ್ಬ. ಮನೆ ಮನೆಯಿಂದ ಮೊದಲೇ ಸಂಗ್ರಹಿಸಿದ್ದ ಹಸಿಯ ಹಿಟ್ಟನ್ನು ಬಾಳೆ ಎಲೆಯ ಮೇಲೆ ಹರಡಿ, ಅಲ್ಲಿಯೇ ರೊಟ್ಟಿಯನ್ನು ತಟ್ಟಿ ಕೆಂಡದಲ್ಲಿ ಸುಡುತ್ತಾರೆ. ಅದಕ್ಕೆ ಬೇಕಾದ ತರಕಾರಿ ಪಲ್ಯವೂ ಸಿದ್ಧವಾಗಿರುತ್ತದೆ. ಇಡೀ ರಾತ್ರಿ ಹಾಡುತ್ತ, ಕುಣಿಯುತ್ತ ಸುಟ್ಟ ರೊಟ್ಟಿಯನ್ನು ಮುಗಿಸುತ್ತಾರೆ. ಸೋಲಿಗರಲ್ಲಿ ಕಂಡು ಬರುವ 'ಮುನಿ ಹಬ್ಬ' ನಾಗರಿಕ ಸಮಾಜದ ಒಂದು ಕೊಡುಗೆ ಎಂದು ಹೇಳುತ್ತಾರೆ. ತಮ್ಮ ತಮ್ಮ ಭೂಮಿಯಲ್ಲಿ ಪ್ರಾಣಿ ಬಲಿ ಕೊಟ್ಟು ಇದನ್ನು ಆಚರಿಸಲಾಗುತ್ತದೆ.

ಇವಿಷ್ಟೇ ಅಲ್ಲದೆ ಸೋಲಿಗರು - ಸಂಕಮ್ಮನ ಹಬ್ಬ, ದನದ ಹಬ್ಬ, ಕರುವಾಡು, ಮಾರಿಹಬ್ಬ, ಮುಂತಾದುವನ್ನೂ ಆಚರಿಸುತ್ತಾರೆ. 'ಸಂಕಮ್ಮ' ಸೋಲಿಗರ ಬುಡಕಟ್ಟಿನ 'ತಾಯಿ' ಎಂಬ ನಂಬಿಕೆ

ಇರುವುದರಿಂದ ಈ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಈ ಹಬ್ಬವನ್ನು ಅನುಸರಿಸಿದ 'ಜಾತ್ರೆಗಳೂ' ಅವರಲ್ಲಿ ವಿಶೇಷವಾಗಿ ಆಚರಣೆಗೊಳ್ಳುತ್ತವೆ.

ಸೋಲಿಗರ ಭೌತಿಕ ಸಂಸ್ಕೃತಿಯೂ ಆಕರ್ಷಕವಾಗಿದೆ. ಅವರ ಆಹಾರ ಪದ್ಧತಿ, ಉಡುಗೆ - ತೊಡಿಗೆ,-ಗೃಹ ವ್ಯವಸ್ಥೆ ಎಲ್ಲವೂ ಅವರಿಗೇ ವಿಶಿಷ್ಟವಾದದ್ದು. ಸೋಲಿಗರು ಮಾಂಸಾಹಾರಿಗಳಾದರೂ, ಬೇಟೆಯಷ್ಟೇ ಅವರು ವ್ಯವಸಾಯವನ್ನೂ ಕಸುಬಾಗಿಸಿಕೊಂಡವರು. 'ಕಾಡು ಗೆಣಸು, ಜೇನುತುಪ್ಪ' ಅವರಿಗೆ ಪ್ರಿಯವಾದದ್ದೆಂಬುದು ಅವರ ಪುರಾಣ ಕಥೆಗಳಿಂದಲೇ ತಿಳಿಯುತ್ತದೆ. 'ರಾಗಿ' ಅವರ ಮತ್ತೊಂದು ಪ್ರಿಯವಾದ ಬೆಳೆ. ಅದರಿಂದ ತಯಾರಿಸಿದ 'ಹಿಟ್ಟು - ರೊಟ್ಟಿ' ಮುಖ್ಯ ಆಹಾರ.

ಸೋಲಿಗರ ಉಡುಗೆ - ತೊಡಿಗೆಯಲ್ಲಿ ಅಂತಹ ಹೆಚ್ಚುಗಾರಿಕೆ ಏನೂ ಕಾಣುವುದಿಲ್ಲ. ಗಂಡಸರು ಸೊಂಟದಿಂದ ಮಂಡಿಯವರೆಗೆ ಮಾತ್ರ ಬಟ್ಟೆ ಧರಿಸಿದರೆ, ಹೆಂಗಸರು ಸೊಂಟದಿಂದ ಇಮ್ಮಡಿಯವರೆಗೆ ಎಂಟು ಗಜದ ಗಟ್ಟಿ ಸೀರೆಯನ್ನು ಉಡುತ್ತಿದ್ದರು. ಈಗ ಸಾಕಷ್ಟು ಸುಧಾರಣೆ ಕಂಡು ಬಂದಿದೆ.

ಕಾಡಿನಲ್ಲಿ ದೊರೆಯುವ ಸಾಮಗ್ರಿಯನ್ನೇ ಬಳಸಿ ಅನುಕೂಲಕ್ಕೆ ತಕ್ಕಂತೆ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಸಾಮಾನ್ಯವಾಗಿ ಸೋಲಿಗರ ಗುಡಿಸಲು ಕೋಣೆ ಮತ್ತು ಪಡಸಾಲೆಯಿಂದ ಕೂಡಿರುತ್ತದೆ. ವಿಶೇಷವೆಂದರೆ ಒಂದೊಂದೇ ಕುಟುಂಬಗಳು ದೂರ ಉಳಿದಾಗ, ಕಾಡು ಪ್ರಾಣಿಗಳ ಭಯದಿಂದ ಮರಗಳ ಮೇಲೆ ಕೊಂಬೆಗಳಿಗೆ ಸೇರಿದಂತೆ ಕಟ್ಟಿಕೊಳ್ಳುವ ಪ್ರಾಚೀನ ರೀತಿಯ ಗೃಹ ವ್ಯವಸ್ಥೆ ಆಕರ್ಷಕ.

ಸೋಲಿಗರು ಕಾಡುಗಳನ್ನೇ ಬಹುವಾಗಿ ಅವಲಂಬಿಸಿದ್ದರೂ, ನಾಗರಿಕ ಸಂಪರ್ಕದ ಕಾರಣ ಅವರ ಆರ್ಥಿಕ ಜೀವನ ಬದಲಾವಣೆಯ ಹಾದಿ ಹಿಡಿದಿದೆ. ಆ ಕಾರಣದಿಂದ ಭೌತಿಕ ಬದಲಾವಣೆಗಳು ಕಾಣಿಸಿಕೊಳ್ಳತೊಡಗಿವೆ. ಜೀವನೋಪಾಯದ ಮೂಲಗಳು ವಿಸ್ತಾರಗೊಳ್ಳುತ್ತಿವೆ.

ಕಾಡು ಕುರುಬರು ಮತ್ತು ಜೇನು ಕುರುಬರು :

ಕಾಡು ಕುರುಬರನ್ನು ಪ್ರಧಾನವಾಗಿ - ಬೆಟ್ಟ ಕುರುಬ ಮತ್ತು ಜೇನು ಕುರುಬ ಎಂದು ವಿಂಗಡಿಸಲಾಗಿದೆ. ಈ ಎರಡು ಜನಾಂಗಗಳೂ ವೃತ್ತಿಯಿಂದ ಬೇರೆಯಾದರೂ, ನೆಲಸಿರುವ ಪ್ರದೇಶ ಒಂದೇ ಆಗಿದೆ. ಹಾಗೆಯೇ ಅವರಿಬ್ಬರ ನಡುವೆ ಸ್ಪಷ್ಟವಾದ ವ್ಯತ್ಯಾಸಗಳೂ ಕಂಡು ಬರುತ್ತವೆ.

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ, ಹುಣಸೂರು ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಹಾಗೂ ಕೊಡಗಿನ ವೀರರಾಜಪೇಟೆ, ಸೋಮವಾರಪೇಟೆ ಮತ್ತು ಮಡಿಕೇರಿ ತಾಲ್ಲೂಕುಗಳಲ್ಲಿ ಇವರು ಕಂಡು ಬರುತ್ತಾರೆ. ಕಾಡು ಕುರುಬರಲ್ಲಿ - ಬೆಟ್ಟ ಕುರುಬರು ಬೇಟೆಯಲ್ಲಿ ನಿಷ್ಣಾತರು. ವ್ಯವಸಾಯವೂ ಅವರಿಗೆ ತಿಳಿದಿದೆ. 'ಕೆತ್ತು ಬೇಸಾಯ'ವನ್ನು ಅವರು ಅವಲಂಬಿಸಿದವರು. ಬಿದುರಿನಲ್ಲಿ ಮೊರ, ಕುಕ್ಕೆ ಮುಂತಾದ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ.

ಕಾಡಿನಲ್ಲಿಯೇ ಇದ್ದುಕೊಂಡು ಚೂಪಾದ ಮುಳ್ಳಿನಂತಹ ಆಯುಧಗಳನ್ನು ಬಳಸುತ್ತಿದ್ದ ಮತ್ತೊಂದು ಗುಂಪನ್ನು ಮುಳ್ಳು ಕುರುಬರು ಎಂದು ಹೆಸರಿಸಲಾಗಿದೆ. ಮುಳ್ಳು ಕುರುಬರು ಎಲ್ಲ ರೀತಿಯಿಂದಲೂ - ಬೆಟ್ಟ ಕುರುಬರು ಹಾಗೂ ಜೇನು ಕುರುಬರಿಗಿಂತ ಭಿನ್ನ ಎಂದು ಗುರುತಿಸಲಾಗಿದೆ. (ಮೇಲ್ಮಟ್ಟ) ಬೇಟೆ, ಆಹಾರ ಸಂಗ್ರಹಣೆ ಜೊತೆಗೆ ; ಕೃಷಿ, ಟೀ ಮತ್ತು ರಬ್ಬರ್ ತೋಟಗಳಲ್ಲಿ ಕೂಲಿ ಕೆಲಸ ಇತ್ಯಾದಿಗಳನ್ನು ಅವಲಂಬಿಸಿ ಬದುಕುತ್ತಿದ್ದಾರೆ. ವೈನಾಡಿನ ಈ ಮುಳ್ಳು ಕುರುಬರು

ಈ ಬುಡಕಟ್ಟಿನಿಂದ ಬೇರೆಯಾಗಿಯೇ ನಿಲ್ಲುತ್ತಾರೆ. ಮುಳ್ಳು ಕುರುಬರ ಸಂಖ್ಯೆ ಕರ್ನಾಟಕದಲ್ಲಿ ಇಲ್ಲವೇ ಎಲ್ಲ ಎನ್ನುವಷ್ಟು ಕಡಿಮೆ ಇದೆ. ಕರ್ನಾಟಕದ ಎಲ್ಲೆ ಭಾಗಗಳಲ್ಲಿ ಮಾತ್ರ ಇವರು ನೆಲಸಿದ್ದಾರೆ.

ಕಾಡು ಕುರುಬರು ವಾಸ ಮಾಡುವ ಪ್ರದೇಶವನ್ನು 'ಹಾಡಿ' ಎಂದು ಕರೆಯಲಾಗುತ್ತದೆ. (ಗ್ರಾಮ ಎಂಬ ಅರ್ಥ). ಬಿದಿರೇ ಇವರ ಬದುಕಿನ ಒಂದು ಭಾಗವೂ ಆದ್ದರಿಂದ, ಎಲ್ಲದಕ್ಕೂ ಅದನ್ನೇ ಪ್ರಧಾನವಾಗಿ ಬಳಸುತ್ತಾರೆ. ಕಾಡಿನಲ್ಲಿ ಸಿಗುವ ಎಲ್ಲವೂ ಇವರ ವಾಸಗೃಹಕ್ಕೆ ಬಳಸಲಾಗುತ್ತದೆ. ಕಾಡು ಕುರುಬರ ಹಾಡಿಗಳು ಚಿಕ್ಕದಾಗಿ, ಚೊಕ್ಕವಾಗಿ ನಿರ್ಮಾಣಗೊಂಡಿರುತ್ತವೆ.

ಇವರ ಆಹಾರ ಪದ್ಧತಿ, ಉಡುಪು ಎಲ್ಲವೂ ಸರಳ - ವಿಶಿಷ್ಟ. ನೋಡಿದ ಕೂಡಲೇ ಸುಲಭವಾಗಿ ಗುರುತಿಸುವಷ್ಟು ವಿಶಿಷ್ಟವಾಗಿ ಅವರ ಉಡುಗೆ ತೊಡಿಗೆಗಳಿರುತ್ತವೆ. ಪುರುಷರು ಲಂಗೋಟಿ ಧರಿಸಿದರೆ ಅಥವಾ ಒಂದು ತುಂಡು ಪಂಚೆಯನ್ನು ಸೊಂಟಕ್ಕೆ ಕಟ್ಟಿ, ಮಂಡಿಯವರೆಗೆ ಬರುವಂತೆ ಉಡುತ್ತಾರೆ. ಹಾಗೆಯೇ ಕಾಡುಕುರುಬರ ಹೆಂಗಸು ಎಂದು ಗುರುತಿಸುವಷ್ಟು ಸರಳವಾಗಿ ಮಹಿಳೆಯರು ನಾಲ್ಕು ಗಜದ ಸೀರೆಯನ್ನು ವಿಶಿಷ್ಟ ವಿನ್ಯಾಸದಲ್ಲಿ ಉಟ್ಟಿರುತ್ತಾರೆ.

ಸೊಪ್ಪಿನ ಸಾರು, ರಾಗಿ ಮುದ್ದೆ ಅವರಿಗೆ ಪ್ರಿಯವಾದ ಆಹಾರ. ಅಕ್ಕಿಯ ಬಳಕೆ ಅಪರೂಪ. ಮಾಂಸಾಹಾರವೂ ಅವರಿಗೆ ಪ್ರಿಯವಾದದ್ದೇ. ಕುಡಿತದ ರುಚಿಯನ್ನೂ ಹಚ್ಚಿಕೊಂಡಿದ್ದಾರೆ.

ಕಾಡಿನಲ್ಲಿಯೇ ಹುಟ್ಟಿ ಬೆಳೆದ ಅವರಿಗೆ ಅಲ್ಲಿಯ ಪ್ರತಿಯೊಂದು ಗಿಡ-ಮರ, ಪ್ರಾಣಿ - ಪಕ್ಷಿಗಳ ಪರಿಚಯ ಚೆನ್ನಾಗಿಯೇ ಇದೆ. ಅವುಗಳ ಗುಣ, ಸ್ವಭಾವಗಳನ್ನು ಚೆನ್ನಾಗಿಯೇ ಅರ್ಥಮಾಡಿಕೊಂಡು, ಅವುಗಳ ಪ್ರಯೋಜನವನ್ನು ಹಲವು ರೀತಿಯಲ್ಲಿ ಬಳಸಿಕೊಳ್ಳುತ್ತ ಬಂದಿದ್ದಾರೆ. ಅವುಗಳ ಔಷಧಿ ಗುಣವನ್ನೂ ಬಲ್ಲವರಾಗಿ ಅದನ್ನು ಸಾರ್ಥಕಪಡಿಸಿಕೊಳ್ಳುತ್ತ ಬಂದಿದ್ದಾರೆ.

ಕಾಡು ಕುರುಬರಲ್ಲಿ ಸುಮಾರು ೧೮ ಕುಲಗಳು ಇರುವುದಾಗಿ ಗುರುತಿಸಲಾಗಿದೆ. ತಮ್ಮ ಕುಲಗಳನ್ನು ಇವರು 'ಸಾಲುಗಳು' ಎಂಬುದಾಗಿಯೂ ಹೇಳಿಕೊಳ್ಳುತ್ತಾರೆ. ಇವರ ಕುಟುಂಬ ವ್ಯವಸ್ಥೆ ಮತ್ತು ಸ್ತ್ರೀ ಸ್ಥಾನಮಾನ ವಿಶಿಷ್ಟ ಸ್ವರೂಪದ್ದು. ಇವರಲ್ಲಿ ಸಾಮಾನ್ಯವಾಗಿ ವಿಭಕ್ತ ಕುಟುಂಬಗಳೇ ಹೆಚ್ಚು. ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಕಂಡು ಬಂದರೂ, ಸ್ತ್ರೀಗೂ ಮಹತ್ವದ ಸ್ಥಾನವಿದೆ. ಕುಟುಂಬದ ಎಲ್ಲ ಕೆಲಸ ಕಾರ್ಯಗಳಲ್ಲಿಯೂ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಾಳೆ.

ವಿವಾಹ ಪದ್ಧತಿ ಇವರಲ್ಲಿಯೂ ಸರಳವಾಗಿದೆ. ಪಲಾಯನ ವಿವಾಹ ಪದ್ಧತಿ ಇವರಲ್ಲಿಯೂ ರೂಢಿಯಲ್ಲಿದೆ. ವಿವಾಹ ವಿಚ್ಛೇದನಕ್ಕೂ ಅವಕಾಶವಿದೆ. ಆದರೆ ಅದಕ್ಕೆ ಸರಿಯಾದ ಕಾರಣಗಳನ್ನು ಕೊಡಬೇಕಾಗುತ್ತದೆ. ಹೆಚ್ಚು ಕಡಿಮೆಯಾದರೆ ನ್ಯಾಯಸ್ಥಾರ ಮುಂದೆ ದಂಡ ತೆರಬೇಕಾಗುತ್ತದೆ. ವಿಧವಾ ಹಾಗೂ ವಿಧುರ ವಿವಾಹಕ್ಕೂ ಅವಕಾಶವಿದೆ. ಈ ಸಂದರ್ಭದಲ್ಲಿ ಯಾವ ಸಂಪ್ರದಾಯಗಳನ್ನು ಆಚರಿಸುವುದಿಲ್ಲ. ಒಬ್ಬರನ್ನೊಬ್ಬರು ಕೂಡಿಕೊಳ್ಳುವುದು ಅಷ್ಟೇ. ಇದನ್ನು 'ಕೂಡಾವಳಿಕೆಲ್ಲುಗ' ಎನ್ನುತ್ತಾರೆ.

ಜನನ ಸಂಸ್ಕಾರದಲ್ಲಿ ಅಂತಹ ವಿಶೇಷತೆ ಕಂಡು ಬರುವುದಿಲ್ಲ. ಶವ ಸಂಸ್ಕಾರ ಪದ್ಧತಿ ಸ್ವಲ್ಪ ಭಿನ್ನವಾಗಿದೆ. ಹೂಳುವ ಮತ್ತು ಸುಡುವ ಎರಡೂ ಪದ್ಧತಿಗಳೂ ಇವರಲ್ಲಿ ರೂಢಿಯಲ್ಲಿವೆ. ಕಾಡು ಪ್ರಾಣಿಗಳಿಂದ ಅಕಾಲ ಮರಣಕ್ಕೆ ತುತ್ತಾದವರನ್ನು ಸುಡಲಾಗುತ್ತದೆ. ಇನ್ನಿತರ ಆಚರಣೆಗಳು ಇತರ ಬುಡಕಟ್ಟು ಜನರಲ್ಲಿಯಂತೆ ಸಾಮಾನ್ಯವಾಗಿ ತೋರುತ್ತವೆ.

5.

ಕಾಡುಕುರುಬರ ಆರ್ಥಿಕ ಚಟುವಟಿಕೆಗಳು ವಿವಿಧ ಬಗೆಯವು. ಬೆತ್ತ - ಬಿದಿರಿನ ವಸ್ತುಗಳನ್ನು ತಯಾರಿಸುವುದರಿಂದ, ಬೇಟೆ, ಬೇಸಾಯ ಇತ್ಯಾದಿಗಳ ಮೂಲಕ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ. ಇತ್ತೀಚೆಗೆ ಒಂದೆಡೆ ನೆಲಸಿ ಬೇಸಾಯಕ್ಕೇ ಹೆಚ್ಚು ಕಟ್ಟು ಬಿದ್ದಿರುವುದು ಒಂದು ದೊಡ್ಡ ಪರಿವರ್ತನೆ.

ಎಲ್ಲ ಬುಡಕಟ್ಟು ಜನರೂ ನಂಬಿ ಆಚರಿಸುವಂತೆ ಕಾಡು ಕುರುಬರೂ ಪ್ರಕೃತಿಯ ಆರಾಧಕರು. ಅದರ ಪ್ರತಿಯೊಂದು ಅಂಗಗಳನ್ನು ಅವರು ಭಕ್ತಿಯಿಂದ ಪೂಜಿಸುತ್ತಾರೆ, ನಂಬುತ್ತಾರೆ. ಹಬ್ಬ ಹರಿದಿನಗಳು ಇವನ್ನು ಆಧರಿಸಿಯೇ ಹುಟ್ಟಿಕೊಂಡವುಗಳು.

ಭೂತ - ಪ್ರೇತಗಳ ಬಗ್ಗೆ ಅವರಿಗೆ ಹೆಚ್ಚಿನ ನಂಬಿಕೆ ಇದೆ. ಅಂತೆಯೇ ಮಾಟ, ಮಂತ್ರ, ಯಕ್ಷಿಣಿ ವಿದ್ಯೆಗಳನ್ನೂ ಬಲವಾಗಿ ನಂಬುತ್ತಾರೆ. ಕಾಯಿಲೆಗಳಿಗೆ ಸಂಬಂಧಿಸಿದ ಸ್ತ್ರೀ ದೇವತೆಗಳಿಗೆ ಬಲಿ ಕೊಡುವುದರ ಮೂಲಕ ಅವನ್ನು ಒಲಿಸಿಕೊಳ್ಳಬಹುದೆಂಬ ನಂಬಿಕೆ ಕಾಡು ಕುರುಬರಲ್ಲಿದೆ. "ಬುಂಡೆ ಕರೆಯುವ ಪದ್ಧತಿ" - ಅಂದರೆ, ದೇವರನ್ನು ಕರೆದು ಅದರೊಂದಿಗೆ ಮಾತನಾಡುವ ಆಚರಣೆ ಇವರಲ್ಲಿದೆ.

ಕಾಡು ಕುರುಬರಲ್ಲಿ ಕಂಡು ಬರುವ 'ಬಳು' ಸಂಪ್ರದಾಯ ಅತ್ಯಂತ ವಿಶಿಷ್ಟವಾದದ್ದು. ಮಕ್ಕಳಿಲ್ಲದವರು ತಮ್ಮಗೆ ಮಕ್ಕಳಾಗಲೆಂದು ಹರಕೆ ಹೊತ್ತು ಇದನ್ನು ಆಚರಿಸುತ್ತಾರೆ. ಇದೊಂದು ಹೆಚ್ಚು ಕಟ್ಟು ನಿಟ್ಟಿನ ಸಂಪ್ರದಾಯಬದ್ಧ ಆಚರಣೆ. ಇದರಷ್ಟೇ ವಿಶೇಷವಾದ 'ಜಾತ್ರೆ' ಕೂಡ ಇವರಲ್ಲಿದೆ. ಇದನ್ನು ಕಾಡು ಕುರುಬರು, ಜೇನು ಕುರುಬರು ಹಾಗೂ ಗಿರಿಜನೇತರರು ಒಟ್ಟುಗೂಡಿ ನಡೆಸುತ್ತಾರೆ. ಇದನ್ನು 'ಬಗಲಾರ್ ಜಮ್ಮ' ಎಂದು ಕರೆಯುತ್ತಾರೆ. ಈ ಮೂವರೂ ಒಟ್ಟುಗೂಡಿ ನಡೆಸುವ ಈ ಜಾತ್ರೆ ವಿಶಿಷ್ಟವಾದದ್ದು. ಕೊಂಡವನ್ನು ಸಿದ್ಧಪಡಿಸಿ, ಅದರ ಎರಡು ಪಕ್ಕಗಳಲ್ಲಿ ಗಂಡಸರು, ಹೆಂಗಸರು ಕುಳಿತು ಕೊಳ್ಳುತ್ತಾರೆ. ಗಂಡಸರು ಕೂರುವ ಭಾಗಕ್ಕೆ 'ಅಜ್ಜ ಪಟ್ಟ' ಎಂದು, ಹೆಂಗಸರು ಕೂರುವ ಭಾಗಕ್ಕೆ 'ಅಜ್ಜಿ ಪಟ್ಟ' ಎಂದೂ ಕರೆಯುತ್ತಾರೆ. ಹಾಡು, ಕುಣಿತ ಎಲ್ಲವೂ ಸಾಂಗವಾಗಿ ನಡೆಯುತ್ತದೆ.

ಇವರ ಭಾಷೆ 'ಮಿಶ್ರಭಾಷೆ'. ತಮಿಳು, ಮಲೆಯಾಳಂ ಭಾಷೆಗಳು ಮಿಶ್ರಗೊಂಡು ಕನ್ನಡದ ಅವರದ್ದೇ ಆದ ಸ್ವತಂತ್ರ ಭಾಷೆ ರೂಪುಗೊಂಡಿದೆ. ಜನಪದ ಸಾಹಿತ್ಯ ಸಾಕಷ್ಟು ಪ್ರಮಾಣದಲ್ಲಿ ಕಂಡು ಬರುತ್ತದೆ.

ಜೇನು ಕುರುಬ ಬುಡಕಟ್ಟು, ಇತರ ಅಂಶಗಳಂತೆಯೇ ಚಾರಿತ್ರಿಕವಾಗಿಯೂ ಗಮನ ಸೆಳೆಯುತ್ತದೆ. ಕಾಡಿನಲ್ಲಿ ಬೇಸಾಯದ ಜೊತೆಗೆ, ಜೇನು ಸಂಗ್ರಹಿಸುವ ಕಲೆಗಾರಿಕೆಯನ್ನೂ ಹೊಂದಿರುವ ಇವರು ಆನೆಯನ್ನು ಹಿಡಿದು ಪಳಗಿಸುವುದರಲ್ಲಿಯೂ ನಿಷ್ಣಾತರೆನಿಸಿದ್ದಾರೆ. ಬೇರೆ ಬೇರೆ ರಾಜರುಗಳಿಗೆ ಇವರು ಆನೆಗಳನ್ನು ಹಿಡಿದು ಪಳಗಿಸಿಕೊಡುತ್ತಿದ್ದರು ಎಂಬುದಕ್ಕೆ ಮೈಸೂರು ದಸರಾ ಸಂದರ್ಭದಲ್ಲಿ ಇಂದಿಗೂ ಅವರು ಹೊಂದಿರುವ ಸಂಬಂಧ ಪುರಾವೆಯಾಗಿದೆ. ಇದು ಬಹುಶಃ ಮೈಸೂರು ಅರಸರು ವಿಜಯದಶಮಿ ನಡೆಸಲು ಆರಂಭಿಸಿದ ಕಾಲದಿಂದಲೂ ಇದ್ದಿರಲು ಸಾಧ್ಯ. ಆದರೆ ಇದಕ್ಕೆ ನಿರ್ದಿಷ್ಟ ಆಧಾರಗಳಿಲ್ಲ. ಜೇನು ಕುರುಬರು ಮಹಾ ಸಾಹಸಿಗಳು ಎಂಬುದಕ್ಕೆ ಇದಿಷ್ಟು ಸಾಕು.

ಜೇನು ಕುರುಬರು ವಾಸಿಸುವ ಸ್ಥಳ ವಿಶಿಷ್ಟ ವಿನ್ಯಾಸದಿಂದ ಕೂಡಿದ್ದು. ಅಲ್ಲಿಯ ಕಟ್ಟುಪಾಡುಗಳು

ಅತಿ ಎನ್ನುವಷ್ಟು ಹೆಚ್ಚಾಗಿ ಕಂಡು ಬರುತ್ತವೆ. ಗ್ರಾಮದ ಮಧ್ಯಭಾಗದ 'ಅಗ್ನಿ ಕುಂಡ'ಕ್ಕೆ ಹೆಚ್ಚಿನ ಪ್ರಾಧಾನ್ಯತೆ. ಅದೇ ಅವರ ನ್ಯಾಯ ನಿರ್ಣಯದ ಕೇಂದ್ರ. ಅದನ್ನು ಎಲ್ಲರೂ ಗೌರವದಿಂದ ಕಾಣುತ್ತಾರೆ.

ಜೇನು ಕುರುಬರಲ್ಲಿ 'ಅಪವಿತ್ರತೆಯ ಪರಿಕಲ್ಪನೆ' ಬಹಳವಾಗಿದೆ. ಅವುಗಳನ್ನು ಬಹು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾರೆ - ಹೆಣ್ಣು ಮೈ ನೆರೆದಾಗ, ಮಗುವಿಗೆ ಜನ್ಮವಿತ್ತಾಗ, ಸಾವು ಸಂಭವಿಸಿದಾಗ ಆಚರಿಸುವ ಆಚರಣೆಗಳು ಕಠಿಣವಾಗಿ ತೋರುತ್ತವೆ. ವಾಸಿಸುವ ಗುಡಿಸಲಿನಲ್ಲಿ ಸಾವು ಸಂಭವಿಸದಂತೆ ಎಚ್ಚರ ವಹಿಸುತ್ತಾರೆ. ತಕ್ಷಣ ಅಂತಹ ವ್ಯಕ್ತಿಯನ್ನು ತಾತ್ಕಾಲಿಕವಾಗಿ ನಿರ್ಮಿಸಿದ ಅಪವಿತ್ರ ಗುಡಸಲಿಗೆ ಸಾಗಿಸುತ್ತಾರೆ. ನಂತರ ಆ ಗುಡಿಸಲನ್ನು ಸುಟ್ಟು ಬಿಡುತ್ತಾರೆ. ಒಂದು ಪಕ್ಷ ವಾಸಿಸುವ ಗುಡಿಸಿಲಿನಲ್ಲಿಯೇ ಸತ್ತರೆ, ಆ ಗುಡಿಸಲನ್ನೂ ಸುಟ್ಟು ಹಾಕುತ್ತಾರೆ. ಅವರು ವಾಸಿಸುವ ಎಲ್ಲೆಗಾಗಲಿ, ಗುಡಿಸಿಲಿನೊಳಗ್ಗಾಗಲಿ ಆ ಕುಟುಂಬಕ್ಕೆ ಅಥವಾ ಆ ಜನಾಂಗಕ್ಕೆ ಸೇರದ ವ್ಯಕ್ತಿ ಪ್ರವೇಶಿಸುವಂತಿಲ್ಲ. ಹಾಗೆ ಪ್ರವೇಶಿಸಿದರೆ, ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಇಂತಹ ನಂಬಿಕೆಗಳು ಹಾಗೂ ಕಟ್ಟುಪಾಡುಗಳು ಜೇನು ಕುರುಬರಲ್ಲಿ ವಿಶೇಷವಾಗಿವೆ.

ಜೇನು ಕುರುಬರಲ್ಲಿ ಮೂರ್ತಿ ಪೂಜೆಯಾಗಲಿ, ದೇವರ ಪೂಜೆಯಾಗಲಿ ಇಲ್ಲ. ಅದಕ್ಕೆ ಬದಲು 'ಆದಿ ಅಯ್ಯ' - 'ಗಾಳಿ' ಆತ್ಮವನ್ನು ಕರೆದು ಅದರ ಜೊತೆ ಸಂವಾದ ನಡೆಸಿ ತಮ್ಮ ಕಷ್ಟ - ಸುಖಗಳನ್ನು ಹೇಳಿಕೊಳ್ಳುತ್ತಾರೆ. ಈ ಶಕ್ತಿಯನ್ನು ಪಡೆದು ಕೊಂಡವನು ಹಾಡಿಗೊಬ್ಬ ಇದ್ದು, ಅವನನ್ನು 'ಗುಡ್ಡ' ಎಂದು ಕರೆಯುತ್ತಾರೆ. ಆದಿ ಅಯ್ಯನ ಚೇತನವು ಅವನಲ್ಲಿ - ಭೂತ, ಭವಿಷ್ಯಗಳನ್ನು ತಿಳಿಯುವ ಶಕ್ತಿಯನ್ನು ತುಂಬುತ್ತದೆ. ಆ ಚೇತನ ಮೈದುಂಬಿ ಬಂದು ಅವನಿಂದ ಕಾರ್ಯಗಳನ್ನು ಮಾಡಿಸುತ್ತದೆ. ಅವರು ಪಡೆದುಕೊಳ್ಳುವ ಶಕ್ತಿಯನ್ನಾಧರಿಸಿ ಗುಡ್ಡರನ್ನು - ಹಾಡಿಯ ಗುಡ್ಡ, ನೆರಳು ಕರೆಯುವ ಗುಡ್ಡ, ಜೇಟೆ ಒಡೆಯೋ ಗುಡ್ಡ, ಬಿಲ್ಲು ಒಡೆಯೋ ಗುಡ್ಡ - ಎಂದು ವಿಂಗಡಿಸುತ್ತಾರೆ. ಅದರಂತೆ ಇವರ ಕಾರ್ಯಗಳು ಬೇರೆ ಬೇರೆ ಇರುತ್ತವೆ. ತಮ್ಮ ಹಾಡಿಯವರನ್ನು ಎಲ್ಲ ರೀತಿಯಿಂದಲೂ ರಕ್ಷಿಸುವುದೇ ಇವರ ಹೊಣೆ.

ಜೇನು ಕುರುಬರು ಮಾಟ - ಮಂತ್ರ ಇತ್ಯಾದಿಗಳನ್ನು ಬಹಳವಾಗಿ ನಂಬುತ್ತಾರೆ. ಆತ್ಮದ ಬಗ್ಗೆ ಇವರಲ್ಲಿ ವಿಪರೀತವಾದ ಕಲ್ಪನೆಗಳಿವೆ. ಅದಕ್ಕನುಗುಣವಾದ ಆಚರಣೆಗಳೂ ಹುಟ್ಟಿಕೊಂಡಿವೆ.

ಎರವರು : ಕೊಡಗಿನ ದಕ್ಷಿಣ ಭಾಗದಲ್ಲಿ ಎರವ ಬುಡಕಟ್ಟಿನವರು ಕಂಡು ಬರುತ್ತಾರೆ. ಇವರಲ್ಲಿ ಎರಡು ವರ್ಗವನ್ನು ಗುರುತಿಸಲಾಗಿದೆ - ಪಣಿಯ ಎರವರು ಮತ್ತು ಪಂಜಿರಿ ಎರವರು ಎಂದು. ಇವರು ಕೊಡಗಿನ ಮೂಲ ನಿವಾಸಿಗಳೇ ಅಥವಾ ಹೊರಗಿನಿಂದ ಬಂದವರೇ ಎಂಬುದರ ಬಗ್ಗೆ ಚರ್ಚೆ ಇದೆ. ಕೇರಳದ ವೈನಾಡಿನಿಂದ ಬಂದವರು ಎಂದು ಕೆಲವರು ಸೂಚಿಸುತ್ತಾರೆ. ಅಲೆಮಾರಿಗಳಾಗಿ ಹೊರಗಿನಿಂದ ಬಂದ ಇವರು ಕೊಡವರನ್ನೇ ಅವಲಂಬಿಸಿ ಬದುಕಬೇಕಾಯಿತು. 'ಎರವರು' ಎಂಬುದು ಕೊಡವರೇ ಇವರಿಗೆ ಇಟ್ಟ ಹೆಸರಿರಬೇಕು. ಕೊಡವ ಭಾಷೆಯಲ್ಲಿ 'ಎರವರು' ಎಂದರೆ 'ಬೇಡುವವರು' ಎಂದರ್ಥ. 'ಪಣಿಯ ಎರವರು' ಮತ್ತು 'ಪಂಜಿ ಎರವರ' ಉಗಮದ ಬಗ್ಗೆ ಪೌರಾಣಿಕ ಕತೆಗಳೂ ಇವೆ. ಈ ಎರಡೂ ಪಂಗಡಗಳೂ ದೇವ ಮೂಲದಿಂದ ಬೆಳೆದು ಬಂದವು ಎಂಬ ನಂಬಿಕೆ ಇದೆ.

ಇತಿಹಾಸ ಇವರನ್ನು ಗುಲಾಮರು ಎಂದು ಗುರುತಿಸುತ್ತದೆ. ಇವರು ಜಮೀನುದಾರರ ಆಸ್ತಿಯಾಗಿದ್ದರು. ಜಮೀನನ್ನು ಮಾರುವಾಗ ಇವರ ಸಹಿತ ಜಮೀನನ್ನು ಮಾರಲಾಗುತ್ತಿತ್ತು. ಪಣಿಯ ಎರವರಲ್ಲಿ 21 ಕುಲಗಳು, ಪಂಜಿರ ಎರವರಲ್ಲಿ 28 ಕುಲಗಳು ಇರುವುದಾಗಿ ಗುರುತಿಸಲಾಗಿದೆ. ಈ ಎರಡು ಗುಂಪುಗಳ ನಡುವೆ ವಿವಾಹ ಸಂಬಂಧ ನಡೆಯುವಂತಿಲ್ಲ.

ಕಾಡಿನಲ್ಲಿ ವಾಸಿಸುವ ಎರವರ ಜೀವನ ಉಳಿದವರಿಗಿಂತ ಭಿನ್ನವಾಗಿದೆ. ಸಂಘಟಿತವಾದ ವ್ಯವಸ್ಥೆ ಇವರಲ್ಲಿ ಕಾಣಬರುತ್ತದೆ. ಇವರ ಗುಂಪಿನ ಮುಖ್ಯಸ್ಥನಿಗೆ 'ಕಜೌಲಾಡಿ', 'ಮೂಫ' ಎಂದು ಕರೆಯುತ್ತಾರೆ. ಸಮುದಾಯದೊಳಗಿನ ಎಲ್ಲ ತೀರ್ಮಾನಗಳನ್ನು ಇವರು ತೆಗೆದುಕೊಳ್ಳುತ್ತಾರೆ. ಅದಕ್ಕೆ ತನ್ನದೇ ಆದ ವ್ಯವಸ್ಥೆಯನ್ನು ಅವರು ಮಾಡಿಕೊಂಡಿದ್ದಾರೆ. ಇವರ ವಸತಿ, ಉಡುಗೆ ತೊಡುಗೆಗಳಲ್ಲಿ ಅಂತಹ ವ್ಯತ್ಯಯ ಕಂಡು ಬರುವುದಿಲ್ಲ. ಇವರ ದಿನಚರಿಯೂ ಕಾಲಬದ್ಧವಾಗಿದೆ. ಗಂಡಸರು - ಹೆಂಗಸರು ಬೆಳಿಗ್ಗೆ ಎದ್ದು ತಮ್ಮ ತಮ್ಮ ಕೆಲಸಗಳಿಗೆ ಹೊರಟರೆ, ಮುದುಕ - ಮುದುಕಿಯರು ಮನೆಯಲ್ಲಿ ಉಳಿಯುತ್ತಾರೆ. ಮಕ್ಕಳು ಮೀನು ಹಿಡಿಯಲು, ಗೆಡ್ಡೆ - ಗೆಣಸು ತರಲು ಕಾಡಿಗೆ ತೆರಳುತ್ತಾರೆ.

ಜನನ - ಮರಣಗಳ ಸಂದರ್ಭದಲ್ಲಿ ಎರವರಲ್ಲಿ ಕಂಡು ಬರುವ ಎರಡು ಆಚರಣೆಗಳು ವಿಶಿಷ್ಟವಾಗಿವೆ. ಮಗು ಹುಟ್ಟಿದ ಮೂರನೆಯ ದಿನ 'ಪಣಿಯ' ಎರವರ ಪೂಜಾರಿ ಮನೆಗೆ ಬಂದು ಹುಂಜ ಒಂದನ್ನು ಮಗುವಿನ ತಲೆಯ ಮೇಲೆ ಹಿಡಿದು ಅದರ ರಕ್ತ ಸುರಿಸುತ್ತ ಅದರ ಮೇಲೆ ಯಾವ ಕೆಟ್ಟ ದೃಷ್ಟಿಯೂ ಬೀಳದಂತೆ ಪ್ರಾರ್ಥಿಸುತ್ತಾನೆ. ಹಾಗೆಯೇ ಮರಣ ಸಮೀಪಿಸುತ್ತಿದ್ದಂತೆ ಆ ವ್ಯಕ್ತಿಯ ಬಾಯಿಗೆ ತೆಂಗಿನ ಕಾಯಿ ನೀರನ್ನು ಹನಿಹನಿಯಾಗಿ ಕುಡಿಸಲಾಗುತ್ತದೆ. ಇವರಲ್ಲಿಯೂ ಹೂಳುವ - ಸುಡುವ ಎರಡು ಪದ್ಧತಿಗಳೂ ರೂಢಿಯಲ್ಲಿವೆ. ಅಕಾಲ ಮರಣಕ್ಕೆ ತುತ್ತಾದವರನ್ನು ಸುಡುತ್ತಾರೆ. ಋತುಮತಿಯಾದ ಹೆಣ್ಣನ್ನು ಮನೆಯ ಒಳಗೇ ಇಟ್ಟುಕೊಳ್ಳುತ್ತಾರೆ. ಆದರೆ 15 ದಿನಗಳ ಕಾಲ ಅವಳು ಯಾವ ಗಂಡಸರ ಮುಖವನ್ನೂ ನೋಡುವಂತಿಲ್ಲ. ಎರವರಲ್ಲಿ ಅಂತಹ ಅತಿಯಾದ ಕಟ್ಟುಪಾಡುಗಳು ಕಂಡು ಬರುವುದಿಲ್ಲ.

ವಿವಾಹದ ಬಗೆಗಳೂ ಎರವರಲ್ಲಿ ಸರಳವಾಗಿವೆ. ನಾಲ್ಕು ಬಗೆಯ ವಿವಾಹ ಪದ್ಧತಿಗಳು ಕಂಡು ಬರುತ್ತವೆ - ಹೊಂದಾಣಿಕೆ ಮದುವೆ, ಆಯ್ಕೆ ಮದುವೆ, ಪಲಾಯನ ಮದುವೆ ಹಾಗೂ ಬಲಾತ್ಕಾರದ ಮದುವೆ. 'ಪಲಾಯನದ ಮದುವೆ' ಎಲ್ಲ ಬುಡಕಟ್ಟುಗಳಲ್ಲಿಯೂ ಸಾಮಾನ್ಯ. ಮರುವಿವಾಹಕ್ಕೆ, ವಿಚ್ಛೇದನಕ್ಕೆ ಇವರಲ್ಲಿಯೂ ಅವಕಾಶವಿದೆ. ಆದರೆ ಅದು ಸಂಘಟನೆಯ ಮುಖ್ಯಸ್ಥರ ಮುಂದೆ ತೀರ್ಮಾನಕ್ಕೆ ಬರುತ್ತದೆ.

ಎರವರು ಸರ್ವಚೇತನವಾದಿಗಳು. ಇವರಿಗೆ ದೆವ್ವಗಳ ಬಗ್ಗೆಯೂ ನಂಬಿಕೆ ಇದೆ. ಬಲಿ ಸಂಪ್ರದಾಯವೂ ಕಂಡು ಬರುತ್ತದೆ. ಇವರು ಬಳಸುವ ಭಾಷೆ - ನೇರವಾಗಿ, ಸುಲಭವಾಗಿ ಇತರರಿಗೆ ಅರ್ಥವಾಗದ ದಕ್ಷಿಣ ದ್ರಾವಿಡ ಗುಂಪಿಗೆ ಸೇರಿದ ಅವರದ್ದೇ ಆದ ವಿಶಿಷ್ಟ ಭಾಷೆ ಎಂದು ಗುರುತಿಸಲಾಗಿದೆ.

ಎರವರ ಸಾಹಿತ್ಯ, ಸಂಗೀತ, ಕುಣಿತ, ವಾದ್ಯವಿಶೇಷಗಳು ವಿಶಿಷ್ಟ. ಊದುವ 'ಚೀನೀ' ವಾದ್ಯ ಹಾಗೂ ಬಡಿಯುವ 'ತುಡಿ' ಚರ್ಮವಾದ್ಯ. ಇವು ಅವರ ಸಂಸ್ಕೃತಿಯ ಅವಿಭಾಜ್ಯ ಭಾಗಗಳೂ ಹೌದು. ರಾತ್ರಿ ಊಟದ ನಂತರ ಹೆಂಗಸರು, ಗಂಡಸರು ಪ್ರತ್ಯೇಕ ಪ್ರತ್ಯೇಕವಾಗಿ ಬಹು ಹೊತ್ತಿನವರೆಗೆ ಹಾಡುತ್ತ ಕುಣಿಯುತ್ತಾ ಮೋಜನ್ನು ಅನುಭವಿಸುತ್ತಾರೆ.

ಕೊಡಗಿನ ಪಣಿಯರು : ಕೊಡಗು ಜಿಲ್ಲೆಯ ವೀರರಾಜಪೇಟೆ ಸುತ್ತಮುತ್ತ ನೆಲಸಿದ್ದಾರೆ. ಮೂಲತಃ ಇವರು ಕೇರಳದವರು. ಇವರ ಮೂಲ ಪುರುಷರು 'ಅಂಜಲ ತಪ್ಪೆ' ಮತ್ತು 'ಅಂಜಲ ತಮ್ಮೆ' ಎಂದು ಹೇಳುತ್ತಾರೆ. ಕೃಷಿ ಇವರ ಪ್ರಧಾನ ವೃತ್ತಿಯಾಗಿದ್ದರೂ, ಈಗ ಎಲ್ಲವನ್ನೂ ಕಳೆದುಕೊಂಡು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಹೇಗೆಂದರೆ ಹಾಗೆ ಬದುಕುವ ಜನ. ನಾಳಿನ ಚಿಂತೆ ಇಲ್ಲ. ಕೂಲಿಯಿಂದ ಬದುಕು. ಕೂಲಿ ಸಿಕ್ಕದಿದ್ದರೆ ಕಾಡಿನ ಗೆಡ್ಡೆ ಗೆಣಸು ಗತಿ. ಬೇಟೆ ಕೂಡ ಉಂಟು. ಕುಡಿತ, ಹೆಣ್ಣು - ಗಂಡು ಎನ್ನದೆ ಎಲ್ಲರನ್ನೂ ಸಮಾನವಾಗಿ ಆವರಿಸಿದೆ.

ಪಣಿಯರಲ್ಲಿ - ಪಣಿಯ, ಪಂಜರಿ ಪಣಿಯ ಮತ್ತು ಕಾಕ ಪಣಿಯ ಎಂದು ಮೂರು ಜಾತಿಗಳನ್ನು ಗುರುತಿಸಿಕೊಳ್ಳುತ್ತಾರೆ. ಇವರಲ್ಲಿ ಒಂದೊಂದು ಜಾತಿಯವರೂ ತಾವು ಉತ್ತಮರು ಎಂದು ಹೇಳಿಕೊಳ್ಳುವುದು ಕಂಡು ಬರುತ್ತದೆ. ಮೊದಲಿಗೆ ಇವರಲ್ಲಿ ವಿವಾಹ ಸಂಬಂಧ ಇರಲಿಲ್ಲವಾದರೂ, ಇತ್ತೀಚೆಗೆ ಬೆಳೆದು ಬಂದಿದೆ. ಸಂಪ್ರದಾಯ, ಆಚರಣೆಗಳಲ್ಲಿ ಮೂಲಭೂತ ವ್ಯತ್ಯಾಸಗಳೇನೂ ಇಲ್ಲ. ಆದರೆ ಭಾಷೆಯಲ್ಲಿ ಅದು ಕಂಡು ಬರುತ್ತದೆ. ಪಂಜರಿ ಪಣಿಯರ ಭಾಷೆಯಲ್ಲಿ ಕನ್ನಡದ ಹೋಲಿಕೆ ಹೆಚ್ಚಾಗಿ ಕಂಡು ಬಂದರೆ, ಉಳಿದ ಎರಡು ಗುಂಪುಗಳಲ್ಲಿ ಕೊಡವ ಹಾಗೂ ಮಲೆಯಾಳಂ ಭಾಷೆಯ ಮಿಶ್ರಣ ಹೆಚ್ಚಾಗಿ ಕಂಡು ಬರುತ್ತದೆ. ಕುಲ ಪದ್ಧತಿ ಇವರಲ್ಲಿಯೂ ಇದೆ. ಒಂದೇ ಕುಲದಲ್ಲಿ ಮದುವೆ ಕಾರ್ಯ ನಡೆಯುವಂತಿಲ್ಲ.

ವಿವಾಹ ವಿಚ್ಛೇದನಕ್ಕೆ ಇವರಲ್ಲಿಯೂ ಅವಕಾಶವಿದೆ. ಪುನರ್ ವಿವಾಹವನ್ನೂ ಮಾಡಿಕೊಳ್ಳಬಹುದು. ವಿಧವಾ ವಿವಾಹವೂ ಉಂಟು. ಸಾಂಪ್ರದಾಯಿಕ ಮದುವೆಯ ಆಚರಣೆ ಇವರಲ್ಲಿ ವಿಶೇಷವಾಗಿದೆ. ಹೆಣ್ಣು ನೋಡುವ ಕಾರ್ಯ ಮುಗಿದ ಮೇಲೆ, ಹುಡುಗ - ಹುಡುಗಿ 12 ತಿಂಗಳು ಸೇರುವಂತಿಲ್ಲ. ಅಷ್ಟು ತಿಂಗಳುಗಳೂ ಹುಡುಗಿಯ ಮನೆಯಲ್ಲಿಯೇ ಅವಳನ್ನು ಸಾಕುವ ಖರ್ಚನ್ನು ಹುಡುಗ ಕೊಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಅವರ ಪರೀಕ್ಷೆಗಳೂ ನಡೆಯುತ್ತವೆ. ಇದರಲ್ಲಿ ನ-ಪಾಸಾದರೆ ಆ ಮದುವೆ ಬಿದ್ದು ಹೋಗುವ ಸಾಧ್ಯತೆಗಳೂ ಉಂಟು. ಇವರು ಮದುವೆ ಸಂದರ್ಭದಲ್ಲಿ ಆಚರಿಸುವ, ಎಲ್ಲ ಬಗೆಯ ಧಾನ್ಯದ ಬೀಜಗಳ ಗಂಟನ್ನು ಹೆಣ್ಣು - ಗಂಡಿನವರು ಪರಸ್ಪರ ವಿನಿಮಯ ಮಾಡಿಕೊಳ್ಳುವುದು ಹೆಚ್ಚು ಸಾಂಕೇತಿಕವಾಗಿ ಕಂಡು ಬರುತ್ತದೆ.

ಪಣಿಯರಲ್ಲಿಯ ಸತ್ತ ನಂತರದ ಕ್ರಿಯಾವಿಧಿಗಳು ತುಂಬ ಶ್ರದ್ಧೆಯಿಂದ ಕೂಡಿವೆ. 'ಸತ್ತವರು ಮತ್ತೆ ಮೈ ಹಿಡಿಯುತ್ತಾರೆ' ಎಂಬ ನಂಬಿಕೆ ಅವರಲ್ಲಿರುವುದರಿಂದ ಚಾಚೂ ತಪ್ಪದೆ ಇವುಗಳನ್ನು ಆಚರಿಸುತ್ತಾರೆ. ಇವರಲ್ಲಿಯೂ ಹೂಳುವ ಪದ್ಧತಿ ಇದೆ.

ಹಬ್ಬಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಹಬ್ಬಗಳನ್ನು ಅವರು ಆಚರಿಸುತ್ತಾರಾದರೂ, ಅವರದ್ದೇ ಆದ ಸಂಸ್ಕೃತಿಯ ಪ್ರತೀಕವಾದ ಹಬ್ಬಗಳೆಂದರೆ, 'ಕುಳಿಯಂದರೆ' ಮತ್ತು 'ಮಾರಿ ಕೋಳು'. ದೇವರುಗಳು ಜನರ ಮೈ ಮೇಲೆ ಬಂದು ಕುಣಿಯುವುದೇ ಈ ಹಬ್ಬದ ವಿಶೇಷ.

ಕೂಲಿಗಳಾಗಿ ಹುಟ್ಟಿ, ಕೂಲಿಗಳಾಗಿಯೇ ಬದುಕುತ್ತಿರುವ ಪಣಿಯರು, ಆರ್ಥಿಕವಾಗಿ ಹಿಂದುಳಿದವರಾದರೂ, ಸಾಂಸ್ಕೃತಿಕವಾದ ಶ್ರೀಮಂತಿಕೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಇವರ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನದ ಅಗತ್ಯವಿದೆ.

ಮ್ಯಾಸ ಬೇಡರು : ಮ್ಯಾಸ ಬೇಡರು, ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕ

ಭಾಗಗಳೆರಡರಲ್ಲಿಯೂ ಕಂಡು ಬರುತ್ತಾರೆ. ದಕ್ಷಿಣ ಕರ್ನಾಟಕದ ತುಮಕೂರು ಹಾಗೂ ಚಿತ್ರದುರ್ಗ ಭಾಗದಲ್ಲಿ ವಿಶೇಷವಾಗಿದ್ದಾರೆ. ಇವರು ತಮ್ಮನ್ನು ಕೆಲವೊಮ್ಮೆ ಬೇಡರೆಂದು, ನಾಯಕ ಜನಾಂಗದವರೆಂದೂ ಕರೆದುಕೊಳ್ಳುವುದುಂಟು. ತಮ್ಮ ಮೂಲವನ್ನು ಹೇಳಿಕೊಳ್ಳುವಾಗ - ವ್ಯಾಸ ಮಹಾಕವಿಯ ಮೂಲವನ್ನು, ವ್ಯಾಸನೂ ಬೇಡನಾದುದರಿಂದ ಅವನ ಗೋತ್ರವನ್ನೂ ಹೇಳಿಕೊಳ್ಳುತ್ತಾರೆ. ಇದಲ್ಲದೆ 'ಮ್ಯಾಸರು' ಎಂಬ ಪದ 'ಮೇಯಿಸುವವರು' ಎಂಬುದರಿಂದ ಬಂತೆಂದೂ ಹೇಳುತ್ತಾರೆ. ಏಕೆಂದರೆ, ದನ ಮೇಯಿಸುವುದು ಇವರ ಪ್ರಧಾನ ವೃತ್ತಿಯಾದುದೂ ಇದಕ್ಕೆ ಕಾರಣವಿರಬಹುದು. ವಿಜಯನಗರ ರಾಜರ ಕಾಲದಲ್ಲಿ ಇವರು ಮೀಸಲು ಪಡೆಯವರಾಗಿದ್ದುದರಿಂದ - ಮೀಸಲು ನಾಯಕರು, ಮ್ಯಾಸ ನಾಯಕರಾಗಿರ ಬೇಕೆಂದೂ ಊಹಿಸಲಾಗಿದೆ.

ಚಿತ್ರದುರ್ಗದ ಪಾಳೆಯಗಾರರಲ್ಲಿ ಅನೇಕರು ಬೇಡರು ಅಥವಾ ವ್ಯಾಧರು ಇದ್ದರು. ಈ ಜಾತಿಯವರಲ್ಲಿಯೇ - ಊರು ಬೇಡರು ಮತ್ತು ಮೇಸ ಬೇಡರು ಎಂಬ ಎರಡು ಪಂಗಡಗಳನ್ನು ಗುರುತಿಸಲಾಗಿದೆ. ಇವರಲ್ಲಿ ಮೇಸ ಬೇಡರು ಅತ್ಯಂತ ಪರಿಶುದ್ಧರು, ಅವರಲ್ಲಿ ಮದ್ಯಪಾನ ನಿಷೇಧವಿದೆ, ಈಚಲು ಚಾಪೆಯನ್ನು ಕೂಡ ಹಾಸಿ ಮಲಗುವುದಿಲ್ಲ ಎಂದು ಹೇಳುತ್ತಾರೆ.

ಬೇಡ ನಾಯಕರ ಹುಟ್ಟಿನ ಬಗೆಗೆ ಹಲವು ದಂತ ಕತೆಗಳಿವೆ. ಮ್ಯಾಸ ಬೇಡ ಬುಡಕಟ್ಟಿನ ಹುಟ್ಟನ್ನು - ಬ್ರಹ್ಮ, ವಿಷ್ಣು, ಮಹೇಶ್ವರರೊಂದಿಗೆ ಸಂಬಂಧ ಕಲ್ಪಿಸಿ ಹೇಳಲಾಗಿದೆ. ಹಾಗೆಯೇ ಅವರ ಮೂಲನೆಲೆ ಆಂಧ್ರದ ಶ್ರೀಶೈಲ ಎಂದೂ ಕೆಲವರು, ಉತ್ತರದ ಕಡೆಯಿಂದ ಬಂದಿರಬೇಕೆಂದೂ ಕೆಲವರು ಅಭಿಪ್ರಾಯಿಸುತ್ತಾರೆ. ಆದರೆ ಶ್ರೀಶೈಲದ ಕಡೆಯಿಂದಲೇ ಬಂದಿರಬೇಕೆಂಬುದಕ್ಕೆ ಹೆಚ್ಚು ಪುರಾವೆಗಳು ದೊರೆಯುತ್ತವೆ.

ಬೇಡ ನಾಯಕರು ವಾಸಿಸುವ ಸ್ಥಳವನ್ನು 'ಹಟ್ಟಿ' ಎಂದು ಕರೆಯುತ್ತಾರೆ. ಒಂದು ಹಟ್ಟಿಯಲ್ಲಿ 50ರಿಂದ 60 ಗುಡಿಸಲುಗಳು ಇರುತ್ತವೆ. ಹಳ್ಳಿಯ ಸುತ್ತ ಬೇಲಿಯನ್ನು ನಿರ್ಮಿಸಿಕೊಂಡಿರುತ್ತಾರೆ. ಪಶುಪಾಲನೆಯ ಜೊತೆಗೆ ಮಧ್ಯೆ ಮಧ್ಯೆ ಸೈನಿಕ ವೃತ್ತಿಯನ್ನೂ ಅವಲಂಬಿಸಿದ್ದು ಇವರು ; ಸಣ್ಣ ಪ್ರಮಾಣದ ವ್ಯವಸಾಯದಲ್ಲೂ ತಮ್ಮನ್ನು ತೊಡಗಿಸಿಕೊಂಡು ಬಂದವರು. ವೃತ್ತಾಕಾರಕ್ಕೆ ಕಟ್ಟುವ ಒಂದಂಕಣದ ಇವರ ಗುಡಿಸಲುಗಳು ಆಕರ್ಷಕವಾಗಿರುತ್ತವೆ. ಈಗ ಇವರಲ್ಲಿ ಸಾಕಷ್ಟು ಸುಧಾರಣೆ ಕಂಡು ಬರುತ್ತಿದೆ. ಇನ್ನೂ ಬುಡಕಟ್ಟು ಸಂಪ್ರದಾಯಕ್ಕೆ ಅಂಟಿ ಬದುಕುತ್ತಿರುವವರು ಸಂಕಷ್ಟ ಸ್ಥಿತಿಯಲ್ಲಿರುವುದನ್ನು ಬಿಟ್ಟರೆ, ಉಳಿದವರು ಉತ್ತಮ ಸ್ಥಿತಿಯ ಕಡೆಗೆ ಚಲಿಸುತ್ತಿದ್ದಾರೆ.

ಊರ ಹೊರಗೆ ಗುಡಿಸಲು ಕಟ್ಟಿಕೊಂಡು ವಾಸಿಸುವ ಮ್ಯಾಸ ನಾಯಕರ ಜೀವನ ಕ್ರಮ ಬುಡಕಟ್ಟಿನ ಎಲ್ಲ ಲಕ್ಷಣಗಳನ್ನು ಬಹುವಾಗಿ ಹೊಂದಿವೆ. ಪಿತೃ ಪ್ರಧಾನ ಕುಟುಂಬವಿದ್ದರೂ, ಹೆಣ್ಣು ಮಕ್ಕಳ ಬಗೆಗೆ ಹೆಚ್ಚು ಉದಾರತೆ ಕಂಡು ಬರುತ್ತದೆ. ಇಂದಿಗೂ ಅವರಲ್ಲಿ ವರದಕ್ಷಿಣೆ ಇಲ್ಲ. ವಧುವಿಗೆ ಇವರೇ ತೆರ ಕಟ್ಟುವ ಪದ್ಧತಿ ಇದೆ. ಇವರ ಮದುವೆಗಳಲ್ಲಿ ಗಂಡಿನವರಿಗೆ ಬೀಳುವ ಖರ್ಚೇ ಹೆಚ್ಚು. ವಿಧವೆಯಾದವಳಿಗೆ ತೌರಿನ ಆಸ್ತಿಯಲ್ಲಿ ಪಾಲು ದೊರೆಯುತ್ತದೆ. ವಿಧವೆಯಾದ ಹೆಂಗಸು ಸೀರಡಿಕೆ ಮಾಡಿಕೊಳ್ಳಲು ಅವಕಾಶವಿದೆ. ಆದರೆ ಸೀರಡಿಕೆ ನಂತರ ಅವಳು ಪಡೆದ ಮಕ್ಕಳನ್ನು ಕುಲಸ್ಥರು ಮದುವೆ ಮಾಡಿಕೊಳ್ಳುವುದಿಲ್ಲ. ಸೂರ್ಯ ವಂಶ, ಚಂದ್ರ ವಂಶಕ್ಕೆ ಸೇರಿದ ಗುಂಪುಗಳು ಇವರಲ್ಲಿರುವುದರಿಂದ ; ಸೂರ್ಯ ವಂಶಕ್ಕೆ ಸೇರಿದವರ ಮದುವೆಗಳು ಸೂರ್ಯೋದಯದ ನಂತರ ನಡೆದರೆ, ಚಂದ್ರ ವಂಶಕ್ಕೆ ಸೇರಿದವರ ಮದುವೆ ರಾತ್ರಿ ಹೊತ್ತು ನಡೆಯುತ್ತವೆ. ಹೆಣ್ಣು

ಋತುಮತಿಯಾದಾಗ ಇವರು ಬಹಳ ಹಿಂದೆ ಆಚರಿಸುತ್ತಿದ್ದ ಆಚರಣೆಗಳು ಬಹು ಕಟ್ಟುನಿಟ್ಟಾಗಿದ್ದು; ಈಗ ಸಡಿಲಗೊಂಡಿವೆ. ಋತುಮತಿ ಯಾದ ಹೆಣ್ಣಿಗೆ ಹಿಂದೆ 'ಕಲ್ಲು ಮರಿಗೆ'ಯಲ್ಲಿ ಊಟ ಹಾಕುತ್ತಿದ್ದರು. ಅದನ್ನು ಮೊದಲ ದಿನ ಒಂದು ಬೆರಳಲ್ಲಿ, ಎರಡನೆಯ ದಿನ ಎರಡು ಬೆರಳಲ್ಲಿ, ಮೂರನೆಯ ದಿನ ಮೂರು ಬೆರಳಲ್ಲಿ ಹೀಗೆ ತಿನ್ನಬೇಕಾಗಿತ್ತು. ಐದನೆಯ ದಿನ ಪೂರ್ಣ ಕೈಯಲ್ಲಿ ಊಟ ಮಾಡುವ ಆಚರಣೆ ಇತ್ತು. ಈಗ ಅದು ಬದಲಾಗಿದೆ. ಶವಸಂಸ್ಕಾರಕ್ಕೆ ಸಂಬಂಧಿಸಿದಂತೆ ನೋಡುವಾಗ, ಹೂಳುವ ಪದ್ಧತಿ ಇವರಲ್ಲಿದೆ. ಮೂರನೆಯ ದಿನಕ್ಕೆ ಮಾಂಸದೂಟ ಊಟ ಮಾಡುತ್ತಾರೆ. ಮಾಡಿದ ಅಡುಗೆಯನ್ನು ಗುಡ್ಡೆಯ ಬಳಿ ತಂದು ನಡೆಸುವ ಕ್ರಿಯೆ ವಿಶೇಷವಾಗಿದೆ. ಎಲ್ಲರೂ ಎದ್ದು ನಿಂತು, ಸತ್ತ ವ್ಯಕ್ತಿಯನ್ನು ಉದ್ದೇಶಿಸಿ ಅವನನ್ನು ಊಟಕ್ಕೆ ಆಹ್ವಾನಿಸಿ ನಂತರ ಎಲ್ಲರೂ ಕುಳಿತು ಊಟ ಮಾಡುತ್ತಾರೆ.

ಇವರ ಕುಲಪದ್ಧತಿ ಹೆಚ್ಚು ವ್ಯಾಪಕವಾಗಿದೆ. ತಮ್ಮ ಗುಂಪನ್ನು ಅನೇಕ ಬೆಡಗುಗಳಾಗಿ ವಿಂಗಡಿಸಿಕೊಂಡಿದ್ದು, ಆ ಒಂದೊಂದು ಬೆಡಗಿಗೂ ಒಂದು ಕಥೆ ಹುಟ್ಟಿಕೊಂಡಿರುವುದು ಗಮನಾರ್ಹ. ಇವರು ಪರಸ್ಪರ ಭೇಟಿಯಾದಾಗ ಕುಲ ಕೇಳಿಕೊಳ್ಳುವ ಪದ್ಧತಿ ಇದೆ. ಅನೇಕ ವಿಷಯಗಳಲ್ಲಿ ಈ 'ಕುಲ' ಹೆಚ್ಚಿನ ಪಾತ್ರ ವಹಿಸುವುದೇ ಇದಕ್ಕೆ ಕಾರಣ.

ಎಲ್ಲ ಬುಡಕಟ್ಟಿನವರಂತೆ ಎಲ್ಲ ತೀರ್ಮಾನಗಳೂ ಅವರ 'ಕಟ್ಟೆ ಮನೆ'ಯಲ್ಲಿಯೇ ಆಗುತ್ತವೆ. ಯಾವುದೇ ಜಗಳ ಅವರ ಗುಂಪಿನಿಂದ ಹೊರಗೆ ಹೋಗುವುದಿಲ್ಲ. ಮ್ಯಾಸ ಬೇಡರ 'ಪೆಟ್ಟಿಗೆ ದೇವರು' ವಿಶೇಷವಾದದ್ದು. ಹಿಂದೆ ಹೆಚ್ಚು ಅಲೆಮಾರಿಗಳಾಗಿದ್ದ ಕಾರಣ ಸಂಚಾರಕ್ಕೆ ಅನುಕೂಲವಾಗುವಂತೆ ಪೆಟ್ಟಿಗೆ ದೇವರುಗಳನ್ನು ಮಾಡಿಕೊಂಡಿದ್ದಂತೆ ಕಾಣುತ್ತದೆ. ಅವುಗಳಲ್ಲಿ ಎರಡೆರಡು ಸಾಲಿಗ್ರಾಮಗಳಿರುತ್ತವೆ. ಇವಕ್ಕೆ ಸಂಬಂಧಿಸಿದ ಹಬ್ಬಗಳೂ - ಜಾತ್ರೆಗಳೂ ನಡೆಯುತ್ತವೆ. ಆದರೆ ಅಲೆಮಾರಿಗಳಾದ ಕಾರಣ ಇವರಲ್ಲಿ ಹಬ್ಬ ಹರಿದಿನಗಳು ಅಷ್ಟೊಂದು ವಿಶೇಷವಾಗಿ ಕಾಣಿಸುವುದಿಲ್ಲ.

ಕಾಡು ಗೊಲ್ಲರು : ದಕ್ಷಿಣ ಕರ್ನಾಟಕ ಭಾಗದ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಾಡುಗೊಲ್ಲರು ಹೆಚ್ಚಾಗಿ ಕಂಡು ಬರುತ್ತಾರೆ. ಬಹು ಹಿಂದೆ ಬೇಡ ನಾಯಕರು ಮತ್ತು ಕಾಡುಗೊಲ್ಲರು ಒಂದೇ ಬುಡಕಟ್ಟಿನವರಾಗಿ ಅಣ್ಣ ತಮ್ಮಂದಿರಂತೆ ಇದ್ದು, ಯಾವುದೋ ಸಂದರ್ಭದಲ್ಲಿ ಬೇರ್ಪಟ್ಟಿರಬೇಕೆಂದು ಹೇಳಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ಒಂದು ಕಥೆಯೂ ರೂಢಿಯಲ್ಲಿದೆ. ಇದಕ್ಕೆ ಬರಗಾಲದ ಘಟನೆಯೊಂದನ್ನು ವಿವರಿಸುತ್ತಾರೆ. ಆದರೂ ಈ ಎರಡೂ ಬುಡಕಟ್ಟುಗಳ ಜೀವನ ಕ್ರಮದಲ್ಲಿ ಹೆಚ್ಚು ಸಾಮ್ಯ ಕಂಡು ಬರುತ್ತದೆ. ಅಂತೆಯೇ ಬೇಡ ನಾಯಕರಿಗಿಂತ ಕಾಡು ಗೊಲ್ಲರು ಹೆಚ್ಚು ಸೌಮ್ಯವಾಗಿ ಕಂಡು ಬರುತ್ತಾರೆ. ಕಲೆ, ಸಾಹಿತ್ಯ ಕೂಡ ಕಾಡು ಗೊಲ್ಲರಲ್ಲೇ ಹೆಚ್ಚು. ಕಾಡುಗೊಲ್ಲರ 'ಜುಂಜಪ್ಪನ ಕಾವ್ಯ' ಜನಪದ ಮಹಾಕಾವ್ಯಗಳಲ್ಲಿ ಒಂದು.

ಶತಶತಮಾನಗಳಿಂದಲೂ ಪಶುಪಾಲನೆ ಮಾಡುತ್ತ ಬಂದಿರುವುದೇ ಇವರ ವೃತ್ತಿ. ಕಳೆದ ಶತಮಾನದಲ್ಲಿ ಕಾಡುಗೊಲ್ಲರು ಪೂರ್ಣ ಅಲೆಮಾರಿಗಳಾಗಿದ್ದರು. ಈಗ ಒಂದು ಕಡೆ ನೆಲಸಿ ವ್ಯವಸಾಯದ ಜೊತೆಗೆ, ಕುರಿ ಸಾಕಾಣಿಕೆಯನ್ನೂ ಪ್ರಧಾನ ವೃತ್ತಿಯಾಗಿಸಿಕೊಂಡಿದ್ದಾರೆ. ಬದಲಾಗುತ್ತಿರುವ ಜೀವನದಲ್ಲಿ ಈಗ ಅವರು ಒಂದು ದ್ವಂದ್ವ ಸ್ಥಿತಿಯಲ್ಲಿದ್ದಾರೆ.

ಕಾಡುಗೊಲ್ಲರು ವಾಸಕ್ಕೆ ಕಟ್ಟಿಕೊಳ್ಳುವ ಗುಡಿಸಲುಗಳು ಇತರ ಬುಡಕಟ್ಟಿನವರ ಗುಡಿಸಲುಗಳಂತೆ ಸರಳವಾದದ್ದೇ ಆದರೂ, ಅವರು ಆರಾಧಿಸುವ - ಜುಂಜಪ್ಪ, ಕ್ಯಾತಪ್ಪ, ಪಾತಪ್ಪ, ಸಿರಿಯಣ್ಣ ದೇವತೆಗಳಿಗೆ ಕಟ್ಟುವ ಗುಬ್ಬಗಳು ವಿಶೇಷವಾಗಿರುತ್ತವೆ. ಅದರ ಒಳಗೆ ಈ ದೇವತೆಗಳ ಜೊತೆಗೆ, ಆಗಿ ಹೋದ ತಮ್ಮ ಕುಲದ ವೀರರ ಆಯುಧಗಳನ್ನು ಇಟ್ಟು ಪೂಜಿಸುತ್ತಾರೆ. ಇದಕ್ಕೆ ವಿಶೇಷ ರಕ್ಷಣೆಯನ್ನೂ ಒದಗಿಸುತ್ತಾರೆ. ಇವುಗಳ ಸುತ್ತ ದಟ್ಟವಾದ ಮುಳ್ಳು ಬೇಲಿ ಇರುತ್ತದೆ.

ಕಾಡುಗೊಲ್ಲರು ಮತ್ತು ಊರು ಗೊಲ್ಲರಿಗೆ ಯಾವ ಸಂಬಂಧವೂ ಕಂಡು ಬರುವುದಿಲ್ಲ. ಕಾಡುಗೊಲ್ಲರ ಭಾಷೆ ಅಚ್ಚಗನ್ನಡವಾದರೆ, ಊರು ಗೊಲ್ಲರ ಭಾಷೆ ತೆಲುಗು. ಇವರ ನಡುವೆ ಕೊಳು - ಕೊಡುಗೆ ಸಂಬಂಧವೂ ಇಲ್ಲ. ಕಾಡುಗೊಲ್ಲರ ಉಡುಗೆ ತೊಡಿಗೆ ಸರಳ. ಗಂಡಸರು ಮಂಡಿಯವರೆಗೆ ಕಚ್ಚೆ ಹಾಕಿ, ಹೆಗಲ ಮೇಲೆ ದಪ್ಪ ಕರಿಕಂಬಳಿ ಹಾಕಿ, ಕೈಯಲ್ಲಿ ಉದ್ದನೆಯ ಕೋಲು ಹಿಡಿದು, ಕಾಲಿಗೆ ಚಪ್ಪಲಿ ಧರಿಸಿರುತ್ತಾರೆ. ಹೆಂಗಸರು ಕುಪ್ಪಸವಿಲ್ಲದ ಸೀರೆ ಉಟ್ಟು, ಕೈಗೆ ಗೊಲ್ಲ ಕಡಗ ಹಾಕಿರುತ್ತಾರೆ. ಹಿಂದಿನ ಹೆಂಗಸರು ಕೈ ತುಂಬ ಬಳೆ ತೊಟ್ಟರೂ, ಹಣೆಗೆ ಕುಂಕುಮ ಇಡುತ್ತಿರಲಿಲ್ಲ. ವಿಶೇಷವೆಂದರೆ ಗೊಲ್ಲ ಹೆಂಗಸರು ತಾವು ವಿಧವೆಯರಾದರೆ, ಮಂಗಳಕರವಾದುದೆಂಬುದನ್ನು ಯಾವುದನ್ನೂ ತೆಗೆಯುವುದಿಲ್ಲ. ಕಾರಣ ತಾವು ಕೃಷ್ಣನ ಕುಲಕ್ಕೆ ಸೇರಿದವರು ಎಂದು ಹೇಳಿ, ಅವನೇ ತಮ್ಮ ಪತಿಯಾದುದರಿಂದ ವೈಧವ್ಯ ಇಲ್ಲ ಎಂಬುದು.

ಕಾಡು ಗೊಲ್ಲರಲ್ಲಿ ಕಂಡು ಬರುವ ಒಂದು ವಿಶೇಷವೆಂದರೆ, ತಾವು ವಾಸಿಸುವ ಹಟ್ಟಿಗಳಿಗೆ ತಮ್ಮ ದೇವರ ಹೆಸರನ್ನೇ ಇಟ್ಟುಕೊಳ್ಳುವುದು ವಾಡಿಕೆ. ಹಾಗೆಯೇ ಆಯಾ ಹಳ್ಳಿಯ ದೇವರ ಹೆಸರನ್ನೇ ವ್ಯಕ್ತಿಗಳೂ ಇಟ್ಟುಕೊಳ್ಳುವುದು ಕಂಡು ಬರುತ್ತದೆ. ಉದಾ. : 'ಕಾತಪ್ಪನ ಹಟ್ಟಿ' ಎಂದಿದ್ದರೆ ಅಲ್ಲಿ ವಾಸಿಸುವ ವ್ಯಕ್ತಿಗಳು - ಕ್ಯಾತಣ್ಣ, ಕ್ಯಾತಪ್ಪ, ಕ್ಯಾತಯ್ಯ, ಕ್ಯಾತ, ದೊಡ್ಡ ಕ್ಯಾತ, ಚಿಕ್ಕ ಕ್ಯಾತ ಇತ್ಯಾದಿ.

ಕಾಡುಗೊಲ್ಲರ ಹಲವು ಸಂಪ್ರದಾಯಗಳು ಹೆಚ್ಚು ಕಟ್ಟು ನಿಟ್ಟಿನವು. ಹೆಣ್ಣು ಋತುಮತಿಯಾದಾಗ, ಶಿಶುವಿಗೆ ಜನ್ಮವಿತ್ತಾಗ, ಸಾವನ್ನಪ್ಪಿದಾಗ ಆಚರಿಸುವ ಆಚರಣೆಗಳು ಸ್ವಲ್ಪ ಕಠಿಣವಾಗಿಯೇ ತೋರಿದರೂ, ಅವರ ನಂಬಿಕೆಗಳತ್ತ ಅವು ಬೆರಳು ಮಾಡುತ್ತವೆ. ಋತುಮತಿಯಾದ ಹೆಣ್ಣು ಇಪ್ಪತ್ತೆರಡು ದಿನಗಳು ಹಟ್ಟಿಯಿಂದ ಹೊರಗೆ ನಿರ್ಮಿಸಿದ ಗುಡಿಸಲಿನಲ್ಲಿ ಇರಬೇಕಾಗುತ್ತದೆ. ಅನಂತರವೇ ಅವಳನ್ನು ಹಟ್ಟಿಯ ಒಳಕ್ಕೆ ಬರ ಮಾಡಿಕೊಳ್ಳುವುದು. ಜನನ ಸಂದರ್ಭದ ಆಚರಣೆಯೂ ಇಷ್ಟೇ ಕಟ್ಟು ನಿಟ್ಟು. ಗರ್ಭಿಣಿಯಾದ ಹೆಂಗಸಿಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತಿದ್ದಂತೆಯೇ, ಹಟ್ಟಿಯ ಹೊರಗಿನ ಗುಡಿಸಲಿಗೆ ಕರೆದೊಯ್ಯುತ್ತಾರೆ. ಹನ್ನೊಂದನೆಯ ದಿನದ ಸೂತಕ ಕಳೆಯುವವರೆಗೆ ಅವಳ ವಾಸ ಅಲ್ಲಿಯೇ. 'ಜನ್ನಿಗೆ ಕುರಿ ಹಾಲು' ಕುಡಿಸಿ ಹಟ್ಟಿಗೆ ಬರ ಮಾಡಿಕೊಳ್ಳುತ್ತಾರೆ. ಸೂತಕ ಕಳೆದುಕೊಳ್ಳುವ ಎಲ್ಲ ಸಂದರ್ಭದಲ್ಲಿಯೂ ಈ 'ಜನಿಗೇ ಕುರಿಯ ಹಾಲಿನ' ಪಾತ್ರ ಪ್ರಮುಖ. ತಮ್ಮ ಕುರಿಯ ಹಿಂಡಿನಲ್ಲಿಯೇ ಆಯ್ಕೆ ಮಾಡಿ ಬಿಟ್ಟ ಹೆಣ್ಣು ಕುರಿ. ಅದರ ಕಿವಿಯನ್ನು ಉದ್ದುದ್ದ ಸೀಳಿ ಬಿಟ್ಟಿರುತ್ತಾರೆ. ಅದಕ್ಕೆ ವಿಶೇಷ ಗೌರವವೂ ಉಂಟು. ಸಾವಿನ ಆಚರಣೆಗಳಲ್ಲಿ ಹೆಚ್ಚಿನ ವ್ಯತ್ಯಾಸಗಳು ಕಂಡು ಬರುವುದಿಲ್ಲ. ಆದರೆ, ಕೂಳು ಬೇಯಿಸುವ ಎಲ್ಲ ಸಂದರ್ಭದಲ್ಲಿಯೂ ವಿಧವೆಯ ಪಾತ್ರ ಹಾಗೂ ಎಲೆ ಅಡಿಕೆಯ ಪಾತ್ರ ಗಮನ ಸೆಳೆಯುತ್ತದೆ.

ಕಾಡುಗೊಲ್ಲರ ನ್ಯಾಯವ್ಯವಸ್ಥೆ ತುಂಬಾ ಕಠಿಣವಾದದ್ದು. ಅವರ ಎಲ್ಲ ಸಮಸ್ಯೆಗಳೂ ಹಟ್ಟಿಯಲ್ಲಿಯೇ ತೀರ್ಮಾನ. ಇದಕ್ಕಾಗೆ 'ಕಟ್ಟೆ ಮನೆ' ಇರುತ್ತದೆ. ಹಟ್ಟಿಯ ಯಜಮಾನನೇ ಅಲ್ಲಿ ಮುಖ್ಯ ನ್ಯಾಯಾಧೀಶ. ಅಕ್ರಮ ಸಂಬಂಧಗಳಿಗೆ ಇವರಲ್ಲಿ ಕಠಿಣ ಶಿಕ್ಷೆ ಇದೆ. ಹೆಣ್ಣು - ಗಂಡು ಎಲ್ಲರಿಗೂ ಇದು ಸಮಾನ. ಹೆಂಗಸಾಗಲಿ, ಗಂಡಸಾಗಲಿ ಹಟ್ಟಿಯ ಹೊರಗಿನ ಸಂಬಂಧವನ್ನು ಇಟ್ಟುಕೊಂಡರೆ ಅಂತಹವರನ್ನು ಹಟ್ಟಿಯಿಂದ ಉಚ್ಚಾಟಿಸಲಾಗುತ್ತದೆ. ಅದೇ ಹಟ್ಟಿಯ ಹೆಣ್ಣು ಅಥವಾ ಗಂಡಿನೊಡನೆ ಸಂಬಂಧವಿಟ್ಟುಕೊಂಡರೆ ಅದಕ್ಕೆ ವಿಧಿಸುವ ಶಿಕ್ಷೆಯೇ ಬೇರೆ ಇರುತ್ತದೆ. ಅಂತಹವರು ಮೂರು ಕಠಿಣ ಪರೀಕ್ಷೆಗಳನ್ನು ಎದುರಿಸಿ ಗೆಲ್ಲಬೇಕಾಗುತ್ತದೆ. ಅಪರಾಧವೆಸಗಿದ ವ್ಯಕ್ತಿ ಏಳು ಕೆರೆ, ಅಥವಾ ಏಳು ಬಾವಿಗಳ ಸ್ನಾನ ಮಾಡಬೇಕಾಗುತ್ತದೆ. ಇದಕ್ಕೆ ಮೊದಲು ಅವರು 'ಜಲಧಿಗೆ' ಹೋಗುವ ಮಾರ್ಗದಲ್ಲಿ ನಿರ್ಮಿಸಿದ ಮೂರು ಗುಡಿಸಲುಗಳಲ್ಲಿ ಅಗ್ನಿ ಪರೀಕ್ಷೆಗೆ ಗುರಿಯಾಗಬೇಕಾಗುತ್ತದೆ. ಒಂದನೆಯ ಗುಡಿಸಲಿನಲ್ಲಿ ಅಂತಹ ವ್ಯಕ್ತಿಯನ್ನು ಕೂರಿಸಿ ಬೆಂಕಿ ಹಚ್ಚುತ್ತಾರೆ. ಅದರಿಂದ ಅವನ್ನು ತಪ್ಪಿಸಿಕೊಂಡು ಹೊರ ಬಂದರೆ, ಎರಡನೆಯದು, ಹಾಗೆಯೇ ಮೂರನೆಯದು. ಹೀಗೆ ಶುದ್ಧೀಕರಣಗೊಂಡ ನಂತರ 'ಜಲಧಿ ಸ್ನಾನ'. ನಂತರ ನೆಲವನ್ನು ತೋಡಿ ಅದರಲ್ಲಿ ಗಂಜಿ ತುಂಬಲಾಗುತ್ತದೆ, ಅದನ್ನು ಅವನು ನಾಯಿಯಂತೆ ನೆಕ್ಕಬೇಕು - ಆಗ ಹಟ್ಟಿಯ ಯಜಮಾನ ಅವನನ್ನು ನಾಯಿ ಕರೆದಂತೆ ಕರೆಯುತ್ತಾರೆ. ನಂತರ ಪೊರಕೆ ಸೇವೆಯೂ ನಡೆಯುತ್ತವೆ. ಕೊನೆಯ ಘಟ್ಟವಾಗಿ, ಪೂಜಾರಿ ಅವನ ನಾಲಗೆಯನ್ನು ಸುಡುವ ಬೇವಿನ ಕಡ್ಡಿಯಿಂದ ಸುಡುವುದೂ ಇದೆ. ಇಷ್ಟೆಲ್ಲ ಶಿಕ್ಷೆಯ ನಂತರ ಅವನೇ ಕಟ್ಟಿದ ದಂಡದ ಹಣದಿಂದ ಅಲ್ಲಿ ಸೇರಿದವರಿಗೆ ಊಟ ಹಾಕುತ್ತಾರೆ.

ಕಾಡುಗೊಲ್ಲರಲ್ಲಿ ಕಲೆ ಮತ್ತು ಸಾಹಿತ್ಯ ಶ್ರೀಮಂತವಾಗಿದೆ. ಅವರಲ್ಲಿ ಕಂಡು ಬರುವ ಕೋಲಾಟ ವಿಶಿಷ್ಟವಾದದ್ದು. ಇಡೀ ರಾತ್ರಿ ಕೋಲಾಟವಾಡುತ್ತ ಮೈಮರೆಯುತ್ತಾರೆ. ನಾಟಕ, ಬಯಲಾಟಗಳಿಗೂ ಅವರು ಮನ ಸೋತಿದ್ದಾರೆ. 'ಜುಂಜಪ್ಪನ ಕಾವ್ಯ' ಕಾಡುಗೊಲ್ಲರ ಧಾರ್ಮಿಕ ಕಾವ್ಯವಾಗಿ ಶ್ರೀಮಂತಗೊಂಡಿದೆ. ಅವರ ವಿಶಿಷ್ಟ ವಾದ್ಯವಾದ 'ಗಣೆ'ಯನ್ನು ಊದುತ್ತ ಭಕ್ತಿಯಿಂದ ಇದನ್ನು ಹಾಡುತ್ತಾರೆ. ಗೊಲ್ಲ ಮಹಿಳೆಯರು ಹಾಡುವ ಐತಿಹಾಸಿಕ ಕಥನ ಗೀತೆಗಳೂ ಪ್ರಚಲಿತವಾಗಿವೆ.

ಯಾವುದೇ ಬುಡಕಟ್ಟು ತಮ್ಮ ನಡುವೆಯೇ ಆಗಿ ಹೋದ ಸಾಂಸ್ಕೃತಿಕ ವೀರರನ್ನು ತಮ್ಮ ಸಾಂಸ್ಕೃತಿಕ ನಾಯಕರನ್ನಾಗಿ ಗೌರವಿಸುತ್ತಾರೆ. ಅವರ ಮೇಲೆ ಕಥೆ ಕಾವ್ಯಗಳನ್ನು ಕಟ್ಟಿ ಹಾಡುತ್ತಾರೆ. ಅವರ ಆದರ್ಶಗಳನ್ನೇ ತಮ್ಮ ಸಂಪ್ರದಾಯವನ್ನಾಗಿ, ನಂಬಿಕೆಯಾಗಿ ಆಚರಿಸ ತೊಡಗುತ್ತಾರೆ. ಇವರುಗಳಿಗೆ ಸಂಬಂಧಿಸಿದ - ಜುಂಜಪ್ಪನ ಪುರಾಣ, ಎತ್ತಯ್ಯನ ಪುರಾಣ, ಚಿತ್ರ ದೇವರು ಪುರಾಣ ಹೀಗೆ ಹಲವು ಪುರಾಣಗಳ ಸೃಷ್ಟಿ ಅವರಲ್ಲಾಗಿದೆ.

ಜನಪದ ವೈದ್ಯ ಕಾಡುಗೊಲ್ಲರಲ್ಲಿ ವಿಶೇಷ. ಅವರದ್ದೇ ಆದ ಪರಿಣಾಮಕಾರಿಯಾದ ಔಷಧ ಪದ್ಧತಿಯನ್ನು ಅವರು ಕಂಡು ಕೊಂಡಿದ್ದಾರೆ. ಪಶುವೈದ್ಯದಲ್ಲಿ ಅವರು ನಿಪುಣರು. ಒಂದು ಕಾಲಕ್ಕೆ 'ಮಾಟ - ಮೋಡಿ' ವಿದ್ಯೆಯೂ ಇವರಲ್ಲಿ ಬಲವಾಗಿದ್ದು ಈಗ ಕಣ್ಮರೆಯಾಗುತ್ತಿದೆ. ಮೋಡಿ ವಿದ್ಯೆಯಲ್ಲಿ ಅನೇಕ ವೇಳೆ ಮ್ಯಾಸ ಬೇಡರಿಗೂ ಇವರಿಗೂ ದೊಡ್ಡ ದೊಡ್ಡ ಸ್ಪರ್ಧೆಗಳೇ ನಡೆಯುತ್ತಿದ್ದುದುಂಟು. ಜುಂಜಪ್ಪನ ಕಾವ್ಯದಲ್ಲಿಯೇ ಇದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ.

ಬುಡಕಟ್ಟು ಜನರ ಬಗ್ಗೆ ಅಂತಿಮವಾಗಿ ಹೇಳುವುದಾದರೆ, ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ನಿರ್ಮಿಸಿಕೊಂಡು ಅದರಲ್ಲಿಯೇ ಬದುಕನ್ನು ನಡೆಸುತ್ತಿದ್ದ ಅವರು ಈಗ ಸ್ಥಿತ್ಯಂತರದ ಹಾದಿ

ಹಿಡಿದಿದ್ದಾರೆ. ಅದು ಸಹಜ ಕೂಡ. ಆದರೆ ಎಲ್ಲರಿಗೂ ಸಮಾನವಾಗಿ ಈ ಒಂದು ಅವಕಾಶ ದೊರೆತಿಲ್ಲ. ಇನ್ನು ಕೆಲವರು ಭೌತಿಕ ಬದುಕಿಗೆ ಅದನ್ನು ಅಳವಡಿಸಿಕೊಂಡರೂ, ಸಾಂಸ್ಕೃತಿಕ ನೆಲೆಯಲ್ಲಿ ಮೂಲಕ್ಕೆ ಕಟ್ಟು ಬಿದ್ದಿದ್ದಾರೆ.

* * * * *

ಗ್ರಂಥ ಋಣ

1. ಕಾಡುಗೊಲ್ಲರ ಬುಡಕಟ್ಟುಗಳು, ಸಂ. - ೧ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
2. ಜಾನಪದ - ೧೯೯೧, ಸಂ. : ಜಿ.ಎಸ್. ಭಟ್
3. ಕರ್ನಾಟಕ ಜಾನಪದ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
4. ಜಾನಪದ : ಕೆಲವು ಅಧ್ಯಯನಗಳು : ಡಾ. ಅಂಬಳಿಕೆ ಹಿರಿಯಣ್ಣ
5. ಕಾಡುಗೊಲ್ಲರು : ಡಾ. ತೀ.ನಂ. ಶಂಕರನಾರಾಯಣ
6. ಗಿರಿಜನ ನಾಡಿಗೆ ಪಯಣ : ಪ್ರೊ. ಹಿ. ಚಿ. ಬೋರಲಿಂಗಯ್ಯ
7. ಸೋಲಿಗರು : ಮೈ.ನ. ನಾಗರಾಜ
8. **Tribal Development in India - K.P. Singh**
9. ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 'ಬುಡಕಟ್ಟು ಸಂಸ್ಕೃತಿ' ಸಂಪುಟಗಳು.

* * * * *

ದಕ್ಷಿಣ ಕರ್ನಾಟಕದ ಜನಪದ ಚಿತ್ರಕಲೆಯ ವೈಶಿಷ್ಟ್ಯ

ಯಾವುದೇ ಬಗೆಯ ಅಭಿವ್ಯಕ್ತಿ ಆಯಾ ಪ್ರದೇಶದ, ಆಯಾ ವ್ಯಕ್ತಿಯ - ಅನುಭವದ, ಅನಿಸಿಕೆಯ, ಕಲ್ಪನೆ ಹಾಗೂ ಪ್ರತಿಭೆಯ ಫಲ. ಅದು ವ್ಯಕ್ತಿಗತನಾಗಿರುವಂತೆಯೇ, ಪ್ರಾದೇಶಿಕ ವೈಶಿಷ್ಟ್ಯವನ್ನೂ ಪಡೆದಿರುತ್ತದೆ. ಹಾಗೆಯೇ ವ್ಯಕ್ತಿಗತವಾದುದನ್ನೂ, ಪ್ರಾದೇಶಿಕವಾದುದನ್ನೂ ಸಾರ್ವತ್ರಿಕಗೊಳಿಸಿ ಆಸ್ವಾದಿಸಲು ಯೋಗ್ಯವನ್ನಾಗಿಸುವಲ್ಲಿಯೇ ಅದರ ಯಶಸ್ಸು ಹಾಗೂ ಹೆಚ್ಚುಗಾರಿಕೆ ಕಂಡು ಬರುತ್ತದೆ. ಯಾವುದೇ ಅಭಿವ್ಯಕ್ತಿ ಮಾಧ್ಯಮ ಇದಕ್ಕೆ ಹೊರತಾಮುದಲ್ಲ.

ಕಲೆ ಮತ್ತು ಮಾನವನ ಸಂಬಂಧ ನಿಕಟವಾದದ್ದು, ಅಷ್ಟೇ ಪ್ರಾಚೀನವಾದದ್ದೂ ಕೂಡ. ಮಾನವನ ಆರಂಭದ ಅಲೆಮಾರಿ ಬದುಕಿನಿಂದಲೇ ಈ ಬಗೆಯ ಕಲೆಯ ಎಳೆಗಳನ್ನು ಗುರುತಿಸಲು ಸಾಧ್ಯ. ಕಲ್ಲು. ಮಣ್ಣು, ಮರದಿಂದ ಹಿಡಿದು, ತನಗೆ ದೊರೆತ ಎಲ್ಲ ಬಗೆಯ ವಸ್ತುಗಳ ಮೇಲೂ ಆತ ತನ್ನ ಕಲಾ ಪ್ರತಿಭೆಯನ್ನು ತೋರುತ್ತಾ ಬಂದಿದ್ದಾನೆ. ಪ್ರಕೃತಿಯನ್ನು ಪ್ರತಿಬಿಂಬಿಸುವುದರ ಜೊತೆಗೆ, ತನ್ನ ಮನಸ್ಸಿನ ಭಾವನೆಗಳನ್ನು ಅನಾವರಣಗೊಳಿಸುತ್ತ ಬಂದಿದ್ದಾನೆ. ಅವು ಜನಪದ ಸಂಸ್ಕೃತಿಯ ಸಂಕೇತವಾಗಿ, ಜನಪದ ಬದುಕಿನ ಕುರುಹುಗಳಾಗಿ ನಮಗೆ ಇಂದಿಗೂ ಅಧ್ಯಯನ ಯೋಗ್ಯವಾಗಿವೆ.

ಕರ್ನಾಟಕವನ್ನು ಜನಪದ ಕಲೆಗಳ ತೌರು ಎಂದು ಕರೆದಿರುವುದುಂಟು. ಇದು ಕೇವಲ ಅಭಿಮಾನದ ಮಾತಲ್ಲ. ಹಲವು ಜನಪದ ಕಲಾಪ್ರಕಾರಗಳು ಇಲ್ಲಿ ಇಡಿಕಿರಿದು ತುಂಬಿವೆ. ಕರ್ನಾಟಕದ ಒಂದೊಂದು ಭಾಗವೂ ಇದಕ್ಕೆ ಸಾಕ್ಷಿಯಾಗಿ ನಿಲ್ಲುವಷ್ಟು ಸಾಮರ್ಥ್ಯವನ್ನು ಪಡೆದುಕೊಂಡಿವೆ. ಆದರೆ ದುರ್ದೈವದ ಸಂಗತಿಯೆಂದರೆ ಈವರೆಗೆ ಅದರ ಅನೇಕ ಪ್ರಕಾರಗಳನ್ನು ಸಮಗ್ರವಾಗಿ ಗುರುತಿಸಿ ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವಾಗದೆ ಇರುವುದು.

ಕರ್ನಾಟಕ ವಿಶ್ವವಿದ್ಯಾನಿಲಯ ತಾನು ಯಶಸ್ವಿಯಾಗಿ ನಡೆಸುತ್ತ ಬಂದಿರುವ ಇಂತಹ ಸಮ್ಮೇಳನಗಳ ಮೂಲಕ ಆ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸುತ್ತ ಬಂದಿದೆ. ಕಡೆಗಣಿಸಲ್ಪಟ್ಟಿದ್ದ ಹಲವು ವಿಷಗಳನ್ನು ಕೈಗೆತ್ತಿಕೊಂಡು ಅಧ್ಯಯನವನ್ನು ನಡೆಸುವ ಮಾರ್ಗವನ್ನು ಕಲ್ಪಿಸಿದೆ. 'ಆಕಾಶ ಜಾನಪದ' 'ವಸತಿ ಜಾನಪದ'ದಂತಹ ವಿಷಯಗಳ ಮೇಲೆ ಸಮ್ಮೇಳನಗಳನ್ನು ನಡೆಸಿ ಬೆರಗುಗೊಳಿಸಿದ್ದಾರೆ. ಇದಕ್ಕಾಗಿ ಅವರು ಅಭಿನಂದನಾರ್ಹರು. ಪ್ರಸ್ತುತ 'ಜನಪದ ಚಿತ್ರಕಲೆ'ಯ ಬಗ್ಗೆ ಆಸಕ್ತಿ ಹೊರಳಿಸಿದೆ. ಇದೂ ಕೂಡ ಈವರೆವಿಗೆ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಒಂದು ಪ್ರಕಾರ. ಅದನ್ನು ವ್ಯವಸ್ಥಿತವಾಗಿ ಗುರುತಿಸುವ ಪ್ರಯತ್ನವಾಗಲಿ, ಅಧ್ಯಯನವಾಗಲಿ ಹೆಚ್ಚು ನಡೆದಿಲ್ಲ. ಆ ಕೆಲಸ ಈಗ ಆರಂಭವಾಗುತ್ತಿದೆ. ಇಷ್ಟರಿಂದಲೇ ಈ ಕೆಲಸ ಪೂರೈಸಿತೆಂದು ಭಾವಿಸಿದರೆ ತಪ್ಪಾಗುತ್ತದೆ.

ಮುಂದಿನ ವಿಸ್ತೃತ ಅಧ್ಯಯನಕ್ಕೆ ಇದು ನಾಂದಿ ಅಷ್ಟೇ.

ಯಾವುದೇ ಕಲೆ ಯಾವುದೇ ಒಂದು ಪ್ರದೇಶಕ್ಕೆ ಸೀಮಿತವೆಂದು ಭಾವಿಸುವುದು ತಪ್ಪಾಗುತ್ತದೆ. ಒಂದು ವ್ಯಾಪಕವಾದ ಭೌಗೋಳಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ಅದು ವಿಸ್ತೃತವಾಗಿ ಕಂಡು ಬರುವಂತೆಯೇ, ಆಂತರಿಕವಾದ ಸಂಬಂಧವನ್ನು ಉಳಿಸಿಕೊಂಡೇ ಬಾಹ್ಯ ರೂಪದ ಹಲವು ವ್ಯತ್ಯಾಸಗಳನ್ನು ಅದು ತೋರುತ್ತದೆ. ಈ ವ್ಯತ್ಯಾಸ ಪ್ರಾದೇಶಿಕ ದೂರ ಹಾಗೂ ಸಾಂಸ್ಕೃತಿಕ ದೂರದಿಂದ ಉಂಟಾಗುವಂತಹುದು. ಕರ್ನಾಟಕದ ಜನಪದ ಚಿತ್ರಕಲೆಗೆ ಸಂಬಂಧಿಸಿದಂತೆ ಪರಿಶೀಲಿಸುವಾಗಲೂ ಈ ಮಾತು ಸುಳ್ಳಾಗುವುದಿಲ್ಲ.

ಕರ್ನಾಟಕದ ಜನಪದ ಚಿತ್ರಕಲೆಯನ್ನು ಐತಿಹಾಸಿಕವಾಗಿ ಗಮನಿಸುವಾಗ, ಪ್ರಾಚೀನ ಮಾನವನ ಗವಿಚಿತ್ರಗಳ ಸಂಬಂಧವನ್ನು ಹೊಂದಿದ್ದರೂ ; ಅಲ್ಲಿಂದ ಇಲ್ಲಿಯವರೆಗೆ ಅದು ಪಡೆದಿರುವ ವೈವಿಧ್ಯ - ವೈಶಿಷ್ಟ್ಯ ಹಾಗೂ ಪ್ರಾದೇಶಿಕ ಭಿನ್ನತೆ ನಿಜಕ್ಕೂ ಅಧ್ಯಯನಕ್ಕೆ ಸವಾಲಾಗಿ ನಿಲ್ಲುವಂತಹುದು.

ಕಲೆಗೂ, ಮಾನವನ ಸೌಂದರ್ಯಪ್ರಜ್ಞೆಗೂ ಇರುವ ಸಂಬಂಧ ನಿಕಟವಾದದ್ದು. ಸೌಂದರ್ಯ ದೃಷ್ಟಿಯೇ ಕಲೆಯ ಸೃಷ್ಟಿಗೆ ಮೂಲಕಾರಣ - ಪ್ರೇರಣ ಎಲ್ಲವೂ. ಬಹುಶಃ ಈ ಪ್ರಜ್ಞೆ ಆಧುನಿಕರಿಗಿಂತ ಜನಪದರಲ್ಲಿ ಹೆಚ್ಚಿನ ಅಂಶದಲ್ಲಿತ್ತೆಂದು ತೋರುತ್ತದೆ. ನಾವು ಅನೇಕ ವೇಳೆ ಸರಳತೆಯ ಹೆಸರಿನಲ್ಲಿ ನಿಜವಾದ ಸೌಂದರ್ಯ ದೃಷ್ಟಿಯನ್ನು ಇಲ್ಲವಾಗಿಸಿಕೊಳ್ಳುತ್ತಿದ್ದೇವೆ ಅನಿಸುತ್ತದೆ. ಅದಕ್ಕೆ ಇಂದಿನ ಕಾಲಸ್ಥಿತಿಯೂ ಕಾರಣವಿರಬಹುದು. ಆದರೆ ಜನಪದರದ್ದು ಇದಕ್ಕೆ ಹೊರತಾದ ದೃಷ್ಟಿ. ತಾವು ಬಳಸುವ, ಬಯಸುವ ಯಾವುದೇ ಆದರೂ 'ಅದು ಹೀಗೆಯೇ ಇರಬೇಕು' ಎಂದು ಆಶಿಸಿದವರು, ಅದರಂತೆ ಅದನ್ನು ಪಡೆಯಲು ಇಚ್ಛಿಸಿದವರು. ಕಲೆಯ ಸೃಷ್ಟಿ ವಸ್ತುವಿನಲ್ಲಿಯೂ ಆ ದೃಷ್ಟಿಯನ್ನು ಬೆಳೆಸಿಕೊಂಡವರು ಅವರು. ಗಾಡಿಯ ನೊಗವಾಗಲಿ, ಮನೆಯ ಬಾಗಿಲಾಗಲಿ, ಗುಡಿಸಲಿನ ಗೋಡೆಯಾಗಲಿ, ಮಣ್ಣಿನ ಮಡಕೆಯಾಗಲಿ, - ಹೀಗೆ ಯಾವುದೆಂದರೆ ಅದರ ಮೇಲೆ ಸುಂದರವಾದ ಚಿತ್ರಗಳನ್ನು ಅವರು ಸೊಗಸಾಗಿ ಬಿಡಿಸುತ್ತ ಬಂದಿದ್ದಾರೆ. ತಮ್ಮದೇ ಆದ ಚಿತ್ರ ಜಗತ್ತನ್ನು ನಿರ್ಮಿಸುತ್ತ ಬಂದಿದ್ದಾರೆ.

ಒಂದು ದೃಷ್ಟಿಯಿಂದ ಇಡೀ ಜನಪದ ಚಿತ್ರ ಕಲಾ ಜಗತ್ತೇ ವಿಶಿಷ್ಟವಾದುದು. ಅದು ಅವರ ಬದುಕಿನ, ಸಂಸ್ಕೃತಿಯ ಹಲವು ಅಂಶಗಳನ್ನು ಬಿತ್ತರಿಸುತ್ತದೆ. ಹಾಗೆ ನಿರ್ಮಾಣಗೊಂಡ ವಸ್ತುವಿನ ಹಿನ್ನೆಲೆ ಎಷ್ಟೇ ಭಿನ್ನತೆಯನ್ನು ತೋರಿದರೂ, ಕಲೆಯ ದೃಷ್ಟಿಯಿಂದ ವ್ಯಕ್ತವಾಗುವುದು ಒಂದೇ ಅಂಶ - ಅದು ಅವರ ಕಲಾದೃಷ್ಟಿ, ಸೌಂದರ್ಯ ದೃಷ್ಟಿ.

ದಕ್ಷಿಣ ಕರ್ನಾಟಕದ ಜನಪದ ಚಿತ್ರಕಲೆಯನ್ನು ಹಾಗೂ ಅದಕ್ಕೆ ಬಳಸಿರುವ ವಸ್ತುಗಳನ್ನು; ಅವುಗಳು ಪಡೆದುಕೊಂಡಿರುವ ಸಾಮಾಜಿಕ, ಧಾರ್ಮಿಕ ಹಾಗೂ ಇತರ ಸಾಂಸ್ಕೃತಿಕ ಸಂಬಂಧಗಳನ್ನು ಪರಿಶೀಲಿಸುವಾಗ ; ಕರ್ನಾಟಕದ ಇತರ ಭಾಗಗಳಿಗಿಂತ ತೀರ ಭಿನ್ನವಾದ ಅಥವಾ ವಿರುದ್ಧವಾದ ಸ್ಥಿತಿಯೇನೂ ಅಷ್ಟಾಗಿ ಕಂಡು ಬರುವುದಿಲ್ಲ. ಏಕೆಂದರೆ ಇವೆಲ್ಲವೂ ಸಾಂಸ್ಕೃತಿಕವಾಗಿ ಹೆಚ್ಚು ಅಂತರವಿಲ್ಲದೇ ಇದ್ದ ಸಮಾನ ಭಾವನೆಯ ಸ್ಥಿತಿಯಲ್ಲಿ ಹುಟ್ಟಿಕೊಂಡು, ಅದೇ ಪರಂಪರೆಯಲ್ಲಿ ಬೆಳೆದು ಬಂದವುಗಳು. ಹೀಗಾಗಿ ಇಲ್ಲಿಯೂ - ಕಲ್ಲು, ಮಣ್ಣು, ಮರ ಹಾಗೂ ಮನುಷ್ಯನ ಮೈಮೇಲೆ

ಬರೆದ, ಕೊರೆದ ಚಿತ್ರಕಲೆಗಳು ಕಂಡು ಬರುತ್ತವೆ. ಹಾಗೆಯೇ ಸೌಂದರ್ಯ ಪ್ರಜ್ಞೆಯನ್ನು ಒಳಗೊಂಡು ದೇವರು - ಧರ್ಮ, ಮಾಟ - ಮಂತ್ರ ; ಮುಂತಾದವುಗಳ ಜೊತೆಗೆ ಮೂಢ ನಂಬಿಕೆಗಳನ್ನೂ ಗರ್ಭೀಕರಿಸಿಕೊಂಡ ಚಿತ್ರಕಲೆಗಳು ಇಲ್ಲಿವೆ. ಅವುಗಳಲ್ಲಿ ಕೆಲವನ್ನು ಹೀಗೆ ಪಟ್ಟಿ ಮಾಡಬಹುದು :

* ದೇವಸ್ಥಾನದ ಗೋಡೆಗಳು
* ಮನೆಯ ಗೋಡೆಗಳು
* ಬಂಡೆ, ಕಲ್ಲು, ಚಪ್ಪಡಿಗಳು
* ಮನೆಯ ಬಾಗಿಲು
* ದೇವಸ್ಥಾನದ ಬಾಗಿಲು
* ಅಡುಗೆ ಮನೆಯಲ್ಲಿ ಬಳಸುವ ವಸ್ತುಗಳು
* ಗಾಡಿ, ನೊಗ, ನೇಗಿಲು ಇತ್ಯಾದಿ
* ತೊಗಲು ಗೊಂಬೆ - ಸೂತ್ರದ ಗೊಂಬೆ
* ಮುಖವಾಡಗಳು
* ರಂಗವಲ್ಲಿ
* ಹಬ್ಬದ ಸಂದರ್ಭದಲ್ಲಿ
* ಮೈ ಮೇಲಿನ ಹಚ್ಚೆಯ ಚಿತ್ರಗಳು
* ಮದುವೆಯ ಸಂದರ್ಭದಲ್ಲಿ
* ಮಾಟ - ಮಂತ್ರ ಇತ್ಯಾದಿ
* ಓಲೆಗರಿಯ ಚಿತ್ರಗಳು
* ಜನಪದ ಆಟಿಕೆಗಳು
* ಹುಲಿ ವೇಷ
* ಯಕ್ಷಗಾನ ವೇಷಭೂಷಣಗಳು
* ಇನ್ನಿತರೆ ವಸ್ತುಗಳ ಮೇಲೆ (ಕೊಬ್ಬರಿ ಇತ್ಯಾದಿ)
* ಕಕ್ಕಸು ಗೋಡೆಯ ಹಾಗೂ ರಸ್ತೆ ಬದಿಯ ಚಿತ್ರಕಲೆ

ಜನಪದರ ಕಲಾದೃಷ್ಟಿ ಹಾಗೂ ಸೃಷ್ಟಿ ಎರಡೂ ವಿಶಿಷ್ಟವೇ. ಅವರಲ್ಲಿ ಕಲೆ ಬದುಕಿನ ಒಂದು ಅವಿಭಾಜ್ಯ ಅಂಗವಾಗಿಯೇ ಬೆಳೆದು ಬಂದಿದೆ. ಯಾವುದನ್ನೂ ಅವರು ಸರಳವಾಗಿ ಸ್ವೀಕರಿಸಿದವರಲ್ಲ. ಅಷ್ಟರಿಂದಲೇ ತೃಪ್ತರಾದವರಲ್ಲ. ಕಲಾತ್ಮಕವಾದ ಜನಪದರ ಜೀವನಾಭಿರುಚಿ ಬದುಕಿನ ಎಲ್ಲ ರಂಗದಲ್ಲಿಯೂ ಗೋಚರಿಸುತ್ತದೆ. ಕಲೆ ಇಲ್ಲದ ಬದುಕೇ ಇಲ್ಲ ಎಂಬಷ್ಟರ ಮಟ್ಟಿಗೆ ಜನಪದರ ಬದುಕಿನಲ್ಲಿ ಅದು ಹಾಸು ಹೊಕ್ಕಾಗಿ ಬೆಸೆದು ಕೊಂಡಿದೆ. ಆದರೆ ಬಹು ಮುಖ್ಯವಾದ ಅಂಶವೆಂದರೆ, ಇವೆಲ್ಲದರ ಹಿಂದೆ ಅವರ ಜೀವನದ ಶ್ರದ್ಧೆ, ನಂಬಿಕೆ, ಆಚಾರಗಳ ಮುದ್ರೆ ಇದ್ದೇ ಇರುತ್ತದೆ

ಎಂಬುದು. ಅದೆಲ್ಲ ಏನೇ ಇದ್ದರೂ, ಅದೆಲ್ಲದರ ಜೊತೆಗೆ ಎದ್ದು ಕಾಣುವ ಕಲೆಯ ಅಂಶವೂ ಅಷ್ಟೇ ಮುಖ್ಯವಾದದ್ದು.

ಇಷ್ಟು ವ್ಯಾಪಕವಾದ ಈ ಚಿತ್ರಕಲೆಯ ಜಗತ್ತನ್ನು ಅಧ್ಯಯನದ ದೃಷ್ಟಿಯಿಂದ ಸ್ಥೂಲವಾಗಿ ಏಳು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದೆಂದು ತೋರುತ್ತದೆ.

* ಬಂಡೆ - ಕಲ್ಲು ಚಪ್ಪಡಿಗಳ ಮೇಲೆ ಕೊರೆದ ಚಿತ್ರಗಳು
* ಮಣ್ಣಿನ ಗೋಡೆಗಳ ಮೇಲೆ ಬಣ್ಣದಿಂದ ಬರೆದ ಚಿತ್ರಗಳು
* ಮರದ ಮೇಲೆ ಬಿಡಿಸಿದ ಚಿತ್ರಗಳು
* ನೆಲದ ಮೇಲೆ ಚಿತ್ರಿಸಿದ ಚಿತ್ರಗಳು
* ಬಟ್ಟೆ ಹಾಗೂ ಓಲೆಗರಿಯ ಮೇಲಿನ ಚಿತ್ರಗಳು
* ತೊಗಲು ಮುಂತಾದ ವಸ್ತುಗಳ ಮೇಲಿನ ಚಿತ್ರಗಳು
* ಮನುಷ್ಯನ ಮೈಮೇಲೆ ಬರೆದ ಚಿತ್ರಗಳು

ಇವಾವುವೂ ದಕ್ಷಿಣ ಕರ್ನಾಟಕದ ಭಾಗಕ್ಕಷ್ಟೇ ಸೀಮಿತವಾದವುಗಳಲ್ಲ, ವಿಶ್ವವ್ಯಾಪಿಯಾದವುಗಳು. ಆದರೆ ಆಯಾ ಭಾಗದ ಜನರ ನಂಬಿಕೆ, ಸಂಪ್ರದಾಯ, ಆಚರಣೆಗಳಿಗನುಗುಣವಾಗಿ ಅಲ್ಪ ಸ್ವಲ್ಪ ಪ್ರಾದೇಶಿಕವಾದ ವ್ಯತ್ಯಾಸಗಳು ಅಲ್ಲಿ ಕಂಡು ಬರುತ್ತವೆ ಅಷ್ಟೆ.

* ಬಂಡೆ - ಕಲ್ಲು ಚಪ್ಪಡಿಗಳ ಮೇಲೆ ಕೊರೆದ ಚಿತ್ರಕಲೆ :

ಬಹುಶಃ ಇದೇ ಅತ್ಯಂತ ಪ್ರಾಚೀನ ಚಿತ್ರಕಲಾ ಮಾಧ್ಯಮ ಎಂದು ತೋರುತ್ತದೆ. ಪ್ರಾಚೀನ ಗವಿಯ ಚಿತ್ರಗಳು ಇದಕ್ಕೆ ಸಾಕ್ಷಿ. ಎಲ್ಲೆಂದರಲ್ಲಿ, ಯಾವಾಗ ಬೇಕಾದರೂ ಸುಲಭವಾಗಿ ತನ್ನದಾಗುತ್ತಿದ್ದ ಈ ಮಾಧ್ಯಮವನ್ನು ಇಂದಿನವರೆವಿಗೂ ಮಾನವ ಬಳಸಿಕೊಳ್ಳುತ್ತ ಬಂದಿದ್ದಾನೆ. ಇದಕ್ಕೆ ಇಂದಿನ ಆಧುನಿಕ ಚಿತ್ರಕಲೆಯೂ ಸಾಕ್ಷಿಯಾಗಿ ನಿಲ್ಲುತ್ತದೆ. ಪ್ರಕೃತಿಯ ನಡುವೆಯೇ ಬದುಕುತ್ತಿದ್ದ ಅವನು ತನ್ನ ಮನಸ್ಸಿನ ಭಾವನೆಗಳನ್ನು, ತಾನು ಕಂಡ ಪ್ರಾಣಿ, ಪಕ್ಷಿ, ಮನುಷ್ಯ ಕೃತಿಗಳನ್ನು ಕಲ್ಲು ಬಂಡೆಗಳ ಮೇಲೆ ಬಿಡಿಸುತ್ತ ಬಂದಿದ್ದಾನೆ. ಕಲ್ಲಿನ ಮೇಲೆ ಕಲ್ಲಿನಿಂದಲೇ ಚಿತ್ರಿಸುತ್ತ ಬಂದಿದ್ದಾನೆ. ಬಹುತೇಕ ಇಂತಹ ಕಲಾಪ್ರಕಾರದಲ್ಲಿ ಪ್ರಕೃತಿಯ ಪ್ರತಿಬಿಂಬ ಮೇಲುಗೈಯಾಗಿ ಕಾಣುವಂತೆಯೇ ; ಧಾರ್ಮಿಕವಾದ ಹಾಗೂ ಸಾಂಪ್ರದಾಯಿಕವಾದ ಆಚರಣೆಗಳೂ ಮೇಳೈಸಿರುವುದು ಗಮನೀಯ. ಇಂತಹ ಎರಡು ವಿಭಿನ್ನ ರೀತಿಯ ಆಚರಣೆಗಳು ಹಾಸನ ಮತ್ತು ಮಂಡ್ಯ ಜಿಲ್ಲೆಯ ಹಲವು ಕಡೆಗಳಲ್ಲಿ ಕಂಡು ಬರುತ್ತವೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ದೇವರ ಹೊಸಳ್ಳಿಯಲ್ಲಿ ದೆವ್ವವನ್ನು ಬಿಡಿಸಲು ಕಲ್ಲಿನ ಮೇಲೆ ಹೆಣ್ಣು - ಗಂಡಿನ ಚಿತ್ರವನ್ನು ಬಿಡಿಸಿ ಅದಕ್ಕೆ ಪ್ರಾಣಿ ಬಲಿಯನ್ನು ಕೊಡುವ ಸಂಪ್ರದಾಯವಿದೆ. ಅಂತೆಯೇ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ 'ಹದ್ದಿನ ಕಲ್ಲು ಹನುಮಂತರಾಯ' ಕೂಡ ಇದಕ್ಕೆ ಪ್ರಸಿದ್ಧಿ. ದೆವ್ವ ಹಿಡಿದವರನ್ನು ಅಲ್ಲಿಗೆ ಕರೆತಂದು, ಅವರ ಆಕೃತಿಯ ನೆರಳು ಆ ಬಂಡೆಯ ಮೇಲೆ ಬೀಳುವಂತೆ ಮಾಡಿ ಅದೇ ಆಕೃತಿಯ ಚಿತ್ರವನ್ನು ಅದರ

ಮೇಲೆ ಬಿಡಿಸುತ್ತಾರೆ. ಇದೂ ಕೂಡ ವಿಶಿಷ್ಟ ಆಚರಣೆಯಾಗಿ ಇಂದಿಗೂ ರೂಢಿಯಲ್ಲಿದೆ.

*** ಮಣ್ಣಿನ ಗೋಡೆಯ ಮೇಲೆ ಬಣ್ಣದಿಂದ ಬರೆದ ಚಿತ್ರಗಳು :**

ಇದು ಅತ್ಯಂತ ವ್ಯಾಪಕವಾಗಿ ಎಲ್ಲ ಕಡೆಗಳಲ್ಲಿಯೂ ಕಂಡು ಬರುತ್ತದೆ. ಮನೆ, ಗುಡಿಸಲು, ದೇವಸ್ಥಾನ - ಹೀಗೆ ಗೋಡೆ ಇದ್ದೆಡೆಯಲ್ಲೆಲ್ಲಾ ಸಾಮಾನ್ಯವಾಗಿ ಬಣ್ಣದ ಚಿತ್ರಗಳು ಗೋಚರಿಸುತ್ತವೆ. ಮುಖ್ಯವಾಗಿ ಇದು, ಕಲೆಗೂ ಮಾನವನಿಗೂ ಇರುವ ಸಂಬಂಧವನ್ನು, ಪ್ರೇಮವನ್ನು ತೋರುತ್ತದೆ. ಅವನ ಸೌಂದರ್ಯ ಪ್ರಿಯತೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ತನ್ನ ಪರಿಸರವನ್ನು ಕಲಾತ್ಮಕವಾಗಿ ಇಟ್ಟುಕೊಳ್ಳಬೇಕೆಂಬ ಎಚ್ಚರ ಅವನಲ್ಲಿ ಮನೆ ಮಾಡಿರುವುದು ಅವನು ಬಳಸುವ, ವಾಸಿಸುವ ಎಲ್ಲ ಕಡೆಗಳಲ್ಲಿಯೂ ಎಚ್ಚರಗೊಂಡಂತಿರುವುದು ಗಮನಾರ್ಹ.

ಬಹುತೇಕ ಎಲ್ಲಾ ಕಡೆಗಳಲ್ಲಿಯೂ ದೇವಸ್ಥಾನದ ಗೋಡೆಗಳ ಮೇಲೆ ವಿವಿಧ ಬಗೆಯ ಬಣ್ಣ ಬಣ್ಣದ ಚಿತ್ರಗಳನ್ನು ಆಕರ್ಷಕವಾಗಿ ಬರೆದಿರುತ್ತಾರೆ. ಹುಲಿ, ಸಿಂಹ, ಪಕ್ಷಿ ಮುಂತಾದ ಪ್ರಾಣಿಗಳ ಚಿತ್ರಗಳಂತೆಯೇ, ಹೂವಿನ ಬಳ್ಳಿ, ಮರ, ಗಿಡಗಳಂತಹ ಸುಂದರ ಚಿತ್ರಗಳೂ ಅಲ್ಲಿ ಕಾಣಸಿಗುತ್ತವೆ. ಇವುಗಳಿಲ್ಲದ ದೇವಸ್ಥಾನಗಳು ಅಪರೂಪ ಎಂದೇ ಹೇಳಬಹುದು. ಜನಪದರ ಆಸಕ್ತಿ - ಭಕ್ತಿಯ ಪ್ರತೀಕವಾಗಿ ಇವನ್ನು ಗುರುತಿಸಬಹುದು. ಅದು ಸಣ್ಣ ಗುಡಿಯಾಗಲಿ ದೊಡ್ಡ ದೇವಸ್ಥಾನವಾಗಲಿ ಈ ಕಲೆಯ ಅಂಶ ಮಾತ್ರ ಸಾಮಾನ್ಯವಾಗಿ ಎದ್ದು ತೋರುತ್ತದೆ.

ಇದೇ ದೃಷ್ಟಿ, ಜನಪದರು ವಾಸಿಸುವ ಮನೆಗಳವರೆಗೂ ಹರಿದಿರುವುದನ್ನು ಕಾಣಬಹುದು. ಬಡವರಾಗಲಿ, ಶ್ರೀಮಂತರಾಗಲಿ ತಮ್ಮ ತಮ್ಮ ಶಕ್ತ್ಯಾನುಸಾರ ತಮ್ಮ ತಮ್ಮ ಮನೆಗಳನ್ನು ವಿವಿಧ ರೀತಿಯಲ್ಲಿ ಅಲಂಕರಿಸಿಕೊಳ್ಳುವುದು ಸಾಮಾನ್ಯ. ಶ್ರೀಮಂತರ ಮನೆಗಳಾದರೆ ಮನೆಯ ಮುಂಭಾಗದ ಜಗುಲಿಯಿಂದ ಹಿಡಿದು, ಒಳಗಿನ ದೇವರ ಮನೆಯವರೆಗೆ ಎಲ್ಲ ಕಡೆಗಳಲ್ಲಿಯೂ ಆಕರ್ಷಕವಾಗಿ ಬಗೆಬಗೆಯ ಬಣ್ಣದ ಚಿತ್ರಗಳಿಂದ ಕಲಾ ಶ್ರೀಮಂತಿಕೆ ಮೆರೆಯುವಂತೆ ಮಾಡುತ್ತಾರೆ. ಮುಂಭಾಗದ ಜಗಲಿಗಳ ಕಾಲು ಭಾಗ ಎತ್ತರದ ಗೋಡೆಗೆ ಸುತ್ತಲೂ ಹೂಬಳ್ಳಿಯ ಚಿತ್ರವನ್ನು ಬಿಡಿಸುವುದುಂಟು. ಹಾಗೆಯೇ ಜಗುಲಿಯ ಎರಡೂ ಕಡೆಗಳಲ್ಲಿಯೂ ಇರುವ 'ದೀಪದ ಗೂಡ'ನ್ನು ಆಕರ್ಷಕವಾಗಿ ಅಲಂಕರಿಸಿರುತ್ತಾರೆ. ಪ್ರತೀ ದಿನ ಸಂಜೆಯ ಹೊತ್ತು ಅವುಗಳಲ್ಲಿ ದೀಪ ಹಚ್ಚಿ ಇಡುವುದರಿಂದ, ಅದಕ್ಕೆ ವಿಶೇಷ ಗಮನ ಕೊಡುತ್ತಾರೆ. ಕೆಲವೆಡೆಗಳಲ್ಲಿ ದೀಪದ ಗೂಡಿನ ಇಕ್ಕೆಲಗಳಲ್ಲಿಯೂ ಗಿಣಿಯಂತಹ ಪಕ್ಷಿಯ ಚಿತ್ರಗಳನ್ನು ಬಿಡಿಸುವುದೂ ವಾಡಿಕೆ. ಹೀಗೆಯೇ ವರಾಂಡ, ನಡುಮನೆ, ದೇವರ ಮನೆ ಇತ್ಯಾದಿಗಳನ್ನು ಚಿತ್ರಾಲಯವನ್ನಾಗಿಸುವವರೂ ಉಂಟು.

ಬಡವರ ಗುಡಿಸಲುಗಳೂ ಇವುಗಳಿಂದ ಹೊರತಾಗಿಲ್ಲ. ಅವರು ಕೂಳಿನಲ್ಲಿ ಬಡವರಾದರೂ ಕಲೆಯಲ್ಲಿ ಬಡವರಲ್ಲ. ಗುಡಿಸಲಿನ ಸುತ್ತ ಹಾಕುವ ಮೋಟು ಗೋಡೆ ಹಾಗೂ ಒಳ ಗೋಡೆ ಹಾಗೂ ಹೊರ ಪುಟ್ಟಮಣ್ಣಿನ ಜಗಲಿಯನ್ನೂ ಅಷ್ಟೇ ಪುಟ್ಟದಾಗಿ ಆಕರ್ಷಣೀಯವಾಗಿಸುವ ಕಲಾಶ್ರೀಮಂತಿಕೆ ಅಲ್ಲಿ ಎದ್ದು ಕಾಣುತ್ತದೆ. ತೀರ ಬಡವರ ಗುಡಿಸಲುಗಳಾದರೆ ಅಲ್ಲಿ ಮೋಟು ಗೋಡೆ ಮತ್ತು ಜಗಲಿಗೆ, ಇದ್ದಲು ಪುಡಿ ಬೆರೆಸಿದ ಸಗಣಿಯಿಂದ ಬಳಿದು ವಿಶಿಷ್ಟ ಬಣ್ಣದ ಆಕಾರಕ್ಕೆ ತರುತ್ತಾರೆ. ಅದರ ಮೇಲೆ ಸುಣ್ಣದಿಂದಲೋ ಅಥವಾ ಕೆಮ್ಮಣ್ಣಿನ ಬಣ್ಣದಿಂದಲೋ ಬಗೆಬಗೆಯ ಚಿತ್ತಾರಗಳನ್ನು ಬರೆದು ಅಲಂಕರಿಸುವುದುಂಟು. ಆ ಕಪ್ಪು ಹಿನ್ನೆಲೆಯಲ್ಲಿ ಸುಣ್ಣದ ಅಥವಾ ಕೆಮ್ಮಣ್ಣಿನ

ಬಣ್ಣದ ಚಿತ್ರ ಎದ್ದು ಕಾಣುತ್ತದೆ.

ದಕ್ಷಿಣ ಕರ್ನಾಟಕ ಭಾಗದ ಬಹುತೇಕ ಗುಡಿಸಲುಗಳು ಈ ಮಾದರಿಯಲ್ಲಿ ಕಂಡು ಬರುವಂತೆಯೇ, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬಳಿ ಇರುವ ಕಾಡು ಕುರುಬರ ಹಾಗೂ ಜೇನು ಕುರುಬರ ಗುಡಿಸಲುಗಳೂ ಇದೇ ಮಾದರಿಯಲ್ಲಿ ಕಂಡು ಬರುತ್ತವೆ. ಅವರು ಗುಡಿಸಲುಗಳನ್ನು ಅಲಂಕರಿಸಿಕೊಳ್ಳುವ ಬಗೆ ಅಪೂರ್ವ ರೀತಿಯದು. 'ಮನೆಯೊಳಗೆ ಮನೆಯೊಡೆಯನಿದ್ದಾನೆ' ಎಂಬುದನ್ನು ಅದು ಸಾರಿ ಹೇಳುತ್ತದೆ.

* ಮರದ ಮೇಲೆ ಬಿಡಿಸಿದ ಚಿತ್ರಗಳು :

ದೇವಸ್ಥಾನದ ಬಾಗಿಲುಗಳು ಹಾಗೂ ಮನೆಯ ಬಾಗಿಲುಗಳ ಕಲಾತ್ಮಕ ರೂಪವೇ ಮತ್ತೊಂದು ಬಗೆಯದು. ಇದು ಮರದ ಕೆತ್ತನೆಗೂ ಸಂಬಂಧಪಟ್ಟಿದ್ದರೂ, ಅಲ್ಲಿಯ ಚಿತ್ರಕಲೆ ಜನಪದ ಪ್ರತಿಭೆಗೆ ನಿದರ್ಶನ. ಬಾಗಿಲಿನ ಚೌಕಟ್ಟಾಗಲಿ ಅಥವಾ ಬಾಗಿಲಾಗಲಿ ಎರಡೂ ಕಲೆಯ ದೃಷ್ಟಿಯಿಂದ ಹಾಗೂ ಸಾಂಸ್ಕೃತಿಕ ಮಹತ್ವದ ದೃಷ್ಟಿಯಿಂದ ಪರಿಶೀಲನ ಯೋಗ್ಯವಾದುವು. ಅಲ್ಲಿ ಹೂವು, ಬಳ್ಳಿ, ಪಕ್ಷಿ ಚಿತ್ರಗಳ ಜೊತೆಗೆ ಸೂರ್ಯ, ಚಂದ್ರ ಮತ್ತು ದೇವತೆಗಳ ಚಿತ್ರಗಳೂ ಸ್ಥಾನ ಪಡೆದಿರುತ್ತವೆ. ಕೆಲವೆಡೆಗಳಲ್ಲಿ ದೀಪದ ಕಂಬದಾಕೃತಿಯ ಚಿತ್ರಗಳೂ ಪ್ರತಿಬಿಂಬಿತವಾಗಿರುತ್ತವೆ. ಬಾಗಿಲಿನ ಅಲಂಕರಣವೂ ಅಷ್ಟೇ ವೈವಿಧ್ಯದಿಂದ ಕೂಡಿ ಆಕರ್ಷಕವಾಗಿರುವುದುಂಟು. ಇವುಗಳಲ್ಲಿ ಒಂದು ಬಗೆಯ ಕಲಾ ಪೈಪೋಟಿಯನ್ನೇ ಕಾಣಬಹುದು.

ಒಳ ಹೊಕ್ಕರೆ ದೇವಾಲಯದ ಕಂಬಗಳು ಹಾಗೂ ಶ್ರೀಮಂತರ ಮನೆಯ ಕಂಬಗಳು ಒಂದೊಂದೂ ಕಲಾ ಶ್ರೀಮಂತಿಕೆಯನ್ನು ಮೆರೆಯುತ್ತವೆ. ಮೇಲಿನಿಂದ ಕೆಳಗಿನವರೆಗೆ ಅದರ ಅಂದ - ಚೆಂದವನ್ನು ಕಣ್ತುಂಬ ಈಕ್ಷಿಸಬಹುದು. ಜನಪದರ ಕಲಾಪ್ರೀತಿ, ಜೀವನ ಪ್ರೀತಿ ಇವುಗಳಲ್ಲಿ ಎದ್ದು ಕಾಣುತ್ತದೆ.

ಈ ಬಗೆಯ ಕಲಾಪ್ರೀತಿ ದೇವಾಲಯಕ್ಕಷ್ಟೇ ; ಮನೆಗಳಿಗಷ್ಟೇ ಸೀಮಿತವಾದುದಲ್ಲ, ಅದು ಆ ಸಂಬಂಧವಾಗಿ ಬಳಸುವ ಎಲ್ಲ ಬಗೆಯ ವಸ್ತುಗಳಲ್ಲಿಯೂ ಗೋಚರಿಸುತ್ತದೆ. ತೇರಿನ ಒಂದು ಸಣ್ಣ ಭಾಗವನ್ನು ಈ ದೃಷ್ಟಿಯಿಂದ ಪರಿಶೀಲಿಸಬಹುದು. ಹಾಗೆಯೇ ಜನಪದರು ತಮ್ಮ ಬದುಕಿಗೆ ಸಂಬಂಧಿಸಿದಂತೆ ಬಳಸುವ ಪ್ರತಿಯೊಂದು ವಸ್ತುವೂ ಈ ದೃಷ್ಟಿಯಿಂದ ಮಹತ್ವದ್ದಾಗಿ ಕಾಣುತ್ತದೆ

* ವೃತ್ತಿಗೆ ಸಂಬಂಧಿಸಿದಂತೆ ಬಳಸುವ ವಸ್ತುಗಳು
* ಮನೆಯ ದಿನಬಳಕೆಯ ವಸ್ತುಗಳು
* ಅಪರೂಪವಾಗಿ ಬಳಸುವ ಮನೆಯ ವಸ್ತುಗಳು

ಈ ಎಲ್ಲದರಲ್ಲಿಯೂ ಚಿತ್ರಗಳ ಸಂಗಮವನ್ನೇ ಕಾಣಬಹುದು. ಅವರು ಬಳಸುವ ಅಡುಗೆ ಮನೆಯ ವಸ್ತುಗಳಾಗಲಿ, ಆಟದ ಸಾಮಾನುಗಳಾಗಲಿ, ಧಾರ್ಮಿಕಾಚರಣೆಯ ಸಂದರ್ಭದ ವಸ್ತುಗಳಾಗಲಿ ಒಂದೊಂದೂ ಒಂದೊಂದು ಅಪೂರ್ವ ಕಲಾಕೃತಿಗಳಾಗಿಯೇ ಗೋಚರಿಸುತ್ತವೆ. ಸಣ್ಣ ಪುಟ್ಟ ವಸ್ತುವಿನಲ್ಲಿಯೂ ತಮ್ಮ ಚಿತ್ರಕಲಾ ಪ್ರತಿಭೆಯನ್ನು ಮೆರೆಯುವ ಉತ್ಸಾಹವನ್ನೂ, ಆಸಕ್ತಿಯನ್ನೂ ಅವರು ತೋರಿದ್ದಾರೆ.

ಮನೆಯ ಬಾಗಿಲುಗಳ ಮೇಲೆ ಬಿಡಿಸಿದ ಚಿತ್ರಗಳಂತೆಯೇ ; ಹಸೆಮಣೆ, ದೀವಟಿಗೆ, ಮುಂತಾದವುಗಳ ಮೇಲಿನ ಚಿತ್ರಗಳೂ ಅಪೂರ್ವ ಕಲಾಕೃತಿಗಳಾಗಿವೆ. ಎತ್ತಿನ ಗಾಡಿ, ಜನಪದ ವಾದ್ಯವಿಶೇಷಗಳ ಮೇಲೆ ಬಿಡಿಸಿದ ಚಿತ್ರಗಳೂ ವಿಶಿಷ್ಟ ರೂಪದವು. ಮರದ ಗಾಲಿಯ ಗಾಡಿಗಳು ಕಣ್ಮರೆಯಾಗುತ್ತಿದ್ದು, ಟೈರು ಗಾಲಿಯ ಗಾಡಿಗಳು ಆಧುನಿಕತೆಯನ್ನು ದಟ್ಟವಾಗಿ ಪ್ರತಿನಿಧಿಸುತ್ತಿದ್ದರೂ, ಗಾಡಿಯ ಅಕ್ಕಪಕ್ಕದ ಹಲಗೆಯ ಮೇಲೆ ಬರೆದ ಬಣ್ಣ ಬಣ್ಣದ ವೈವಿಧ್ಯಮಯ ಚಿತ್ರಗಳು ಜನಪದ ಪರಂಪರೆಯನ್ನು ನವೀನ ರೂಪದಲ್ಲಿ ಪ್ರತಿಬಿಂಬಿಸುತ್ತವೆ.

* ಮಣ್ಣಿನ ಮಡಕೆ - ಕುಡಿಕೆಗಳ ಮೇಲಿನ ಚಿತ್ರಗಳು :

ಕಲ್ಲಿನ ಮೇಲಿನ ಚಿತ್ರಕಲೆಯಂತೆಯೇ, ಇದಕ್ಕೂ ಸಾಕಷ್ಟು ಪ್ರಾಚೀನವಾದ ಪರಂಪರೆ ಇದೆ. ಯಾವುದೇ ವೃತ್ತಿಯವರಾದರೂ, ಪ್ರತಿಯೊಬ್ಬರೂ ತಮ್ಮ ತಮ್ಮ ವೃತ್ತಿಯಲ್ಲಿ ಕಲಾ ಶ್ರೀಮಂತಿಕೆಯನ್ನು ಉಳಿಸಿಕೊಂಡೇ ಬಂದಿದ್ದಾರೆ. ಕುಂಬಾರರಂತೂ ಸಣ್ಣದಾಗಲಿ, ದೊಡ್ಡದಾಗಲಿ ಮಣ್ಣಿನ ವಸ್ತುಗಳನ್ನು ಸಿದ್ಧಪಡಿಸುವಾಗಲೇ ಅದರಲ್ಲಿ ಶಾಶ್ವತವಾಗಿ ಉಳಿಯುವ ಸೂಕ್ಷ್ಮ ಚಿತ್ರಗಳನ್ನು ಬಿಡಿಸುತ್ತಲೇ ಬಂದಿದ್ದಾರೆ. ದಿನ ಬಳಕೆಯ ವಸ್ತುಗಳನ್ನು ಸಾಮಾನ್ಯವಾಗಿ ಅಲಂಕರಿಸಿದರೆ, ವಿಶೇಷ ಸಂದರ್ಭಗಳಲ್ಲಿ ಬಳಸುವ ವಸ್ತುಗಳನ್ನು ವಿಶೇಷ ರೀತಿಯಲ್ಲಿ ಹಾಗೂ ದವಸ ಧಾನ್ಯಗಳನ್ನು ತುಂಬಿಡುವ ಅತಿ ದೊಡ್ಡ ಗುಡಾಣಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಕಲಾತ್ಮಕವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಇವೆಲ್ಲವೂ ಮಣ್ಣಿನ ಮಡಿಕೆ - ಕುಡಿಕೆಗಳ ಮೇಲೆ ಹಸಿಯಾಗಿದ್ದಾಗಲೇ ಕೊರೆಯುವ ಚಿತ್ರಗಳಾದರೆ, ಇದಕ್ಕೆ ಸಂಬಂಧಿಸಿದಂತೆ ಮತ್ತೊಂದು ಬಗೆಯ ಚಿತ್ರಕಲೆಯೂ ಹೆಚ್ಚು ವರ್ಣರಂಜಿತವಾಗಿ ಕಂಡು ಬರುತ್ತದೆ.

ಹಬ್ಬ, ಮದುವೆಯಂತಹ ಶುಭ ಕಾರ್ಯಗಳ ಸಂದರ್ಭದಲ್ಲಿ ಬಳಸುವ - ಮೊಗೆ, ಗಡಿಗೆಗಳನ್ನು ಅಪೂರ್ವ ರೀತಿಯಲ್ಲಿ ಅಲಂಕರಿಸುವಲ್ಲಿ ಚಿತ್ರಕಲೆಯ ಸೊಬಗನ್ನು ಕಾಣಬಹುದು. ಇವುಗಳಿಗೆ ಮೊದಲು ಬಿಳಿಯ ಬಣ್ಣವನ್ನು ಪೂರ್ತಿ ಬಳಿದು, ಅದರ ಮೇಲೆ ಕೆಂಪು, ಹಳದಿ ಬಣ್ಣಗಳಿಂದ ವಿಶಿಷ್ಟ ರೀತಿಯಲ್ಲಿ ಚಿತ್ರಗಳನ್ನು ಬರೆಯುತ್ತಾರೆ. ಮದುವೆಯ ಸಂದರ್ಭದಲ್ಲಿ ಶಾಸ್ತ್ರದ ನೀರನ್ನು ತರುವ ಗಡಿಗೆಗಳು, ಧಾರೆ ಮಾಡಲು ಬಳಸುವ ಮೊಗೆ ಮುಂತಾದುವು. ಈ ದೃಷ್ಟಿಯಿಂದ ಹೆಚ್ಚು ಆಕರ್ಷಕವಾಗಿ ಕಣ್ಮನ ಸೆಳೆಯುತ್ತವೆ. ಇವು ಆ ಸಂದರ್ಭಕ್ಕೆ ಶೋಭೆಯನ್ನು ತರುವುದರ ಜೊತೆಗೆ, ಅಲ್ಲಿಯ ಸಾಂಸ್ಕೃತಿಕ ಮಹತ್ವವನ್ನೂ ಪಡೆದುಕೊಂಡಿರುತ್ತವೆ.

* ನೆಲದ ಮೇಲೆ ಚಿತ್ರಿಸುವ ಚಿತ್ರಗಳು :

ನೆಲದ ಮೇಲೆ ಬರೆಯುವ ಚಿತ್ರಗಳಲ್ಲಿ ಹೆಚ್ಚಿನ ವೈವಿಧ್ಯವನ್ನು ಕಾಣುವಂತೆಯೇ, ಅದನ್ನು ಬರೆಯಲು ಬಳಸುವ ವಸ್ತುವಿನಲ್ಲಿಯೂ ಹೆಚ್ಚು ವೈವಿಧ್ಯ ಕಂಡು ಬರುತ್ತದೆ. ಇದು 'ರಂಗವಲ್ಲಿ' ಕಲೆ ಎಂದೇ ಪ್ರಸಿದ್ಧಿವಾಗಿದೆ.

ಜನಪದರ ಬದುಕು ಆರಂಭಗೊಳ್ಳುವುದೇ ಇದರಿಂದ. ಬೆಳಗ್ಗೆ ಎದ್ದು, ಮನೆಯ ಮುಂದೆ ಸಗಣಿ ನೀರು ಹಾಕಿ, ವಿವಿಧ ಬಗೆಯ ರಂಗವಲ್ಲಿ ಚಿತ್ರಗಳನ್ನು ಪ್ರತಿ ದಿನ ಬಿಡುತ್ತಾರೆ. ದೇವಸ್ಥಾನಗಳ ಮುಂಭಾಗದಲ್ಲಿಯೂ ಪ್ರತಿ ದಿನ ಈ ಕಾರ್ಯ ನಡೆಯುತ್ತದೆ. ಅನೇಕ ಸಂದರ್ಭಗಳಲ್ಲಿ ರಂಗವಲ್ಲಿಯ ಸ್ಪರ್ಧೆಗಳು ನಡೆಯುವುದೂ ಉಂಟು. ರಂಗವಲ್ಲಿಯನ್ನು ಬಿಡಲು ಸಾಮಾನ್ಯವಾಗಿ ಬಿಳಿ ಸುಣ್ಣದ

ಕಲ್ಲು, ಸಿದ್ದೆ ಮಣ್ಣನ್ನು ಬಳಸುತ್ತಾರಾದರೂ, ವಿಶೇಷ ಸಂದರ್ಭದಲ್ಲಿ ಅಕ್ಕಿ ಹಿಟ್ಟಿನ ಪುಡಿಯಿಂದಲೂ ರಂಗವಲ್ಲಿ ಬಿಡುವುದುಂಟು. ನಂತರ ಅದಕ್ಕೆ ಬಣ್ಣ ತುಂಬುವ ಕೆಲಸವನ್ನೂ ಕಲಾತ್ಮಕವಾಗಿ ಮಾಡುತ್ತಾರೆ. ಚುಕ್ಕಿ ರಂಗೋಲೆ, ಕಡ್ಡಿ ರಂಗೋಲೆ ಎಂದು ಅದರಲ್ಲಿಯೂ ಹತ್ತು ಹಲವು ಬಗೆಗಳುಂಟು. ಹಬ್ಬ ಜಾತ್ರೆಗಳ ಸಂದರ್ಭಗಳಲ್ಲಿ ಮನೆಯ ಮುಂದಿನ ಬೀದಿಗಳನ್ನು ಶುಭ್ರಗೊಳಿಸಿ, ಸಗಣಿ ನೀರನ್ನು ಹಾಕಿ ದೊಡ್ಡ ದೊಡ್ಡ ರಂಗವಲ್ಲಿ ಚಿತ್ರಗಳನ್ನು ಬಿಡಿಸುವುದು ಒಂದು ಅಪೂರ್ವ ದೃಶ್ಯ.

ಇತ್ತೀಚಿನ ದಿನಗಳಲ್ಲಿ ರಂಗವಲ್ಲಿಯ ಕಲೆ ಇನ್ನೂ ಹೆಚ್ಚಿನ ವೈವಿಧ್ಯವನ್ನೂ, ವೈಶಿಷ್ಟ್ಯವನ್ನೂ ಪಡೆದುಕೊಂಡಿದೆ. ರಂಗವಲ್ಲಿ ಪುಡಿಗೆ ಬದಲಾಗಿ, ಹಿಟ್ಟಿಗೆ ಬದಲಾಗಿ ; ಹೂವು, ಹಸಿರು ಎಲೆ, ಉಪ್ಪು ಮುಂತಾದ ವಸ್ತುಗಳನ್ನು ಬಳಸಿ ಕಣ್ಣಿಗೆ ಹಬ್ಬ ಉಂಟು ಮಾಡುವ ವರ್ಣಮಯ ಕಲಾಜಗತ್ತನ್ನು ಸೃಷ್ಟಿಸುತ್ತಾರೆ. ಇದು ರಂಗವಲ್ಲಿಯ ಮುಂದುವರೆದ ಪರಂಪರೆ.

ಇದಕ್ಕೆ ಸಂಬಂಧಿಸಿದಂತೆ ದಕ್ಷಿಣ ಕರ್ನಾಟಕ ಭಾಗದ ಎರಡು ಪ್ರಮುಖ ಸಂಪ್ರದಾಯಗಳನ್ನು ಇಲ್ಲಿ ಉಲ್ಲೇಖಿಸಬೇಕು : ಒಂದು : 'ತಿಂಗಳು ಮಾವನ ಪೂಜೆ', ಮತ್ತೊಂದು : 'ಕೊಂತಿ ಪೂಜೆ'. ಈ ಎರಡೂ ಆಚರಣೆಗಳೂ ಚಿತ್ರಕಲೆಯ ದೃಷ್ಟಿಯಿಂದಲೂ ಮಹತ್ವ ಪಡೆದವುಗಳು. ಒಂದು ರಂಗವಲ್ಲಿಗೆ ಸಂಬಂಧಿಸಿದ್ದಾದರೆ, ಮತ್ತೆ ಪುಷ್ಪಾಲಂಕರಣಕ್ಕೆ.

ತಿಂಗಳು ಮಾವನ ಪೂಜೆ, ಮಳೆರಾಯನಿಗೆ ಸಂಬಂಧಿಸಿದ್ದು. ಮಳೆ ಬಾರದೆ ಇದ್ದಾಗ ಮಳೆರಾಯನ ಒಡೆಯನಾದ ತಿಂಗಳು ಮಾವನನ್ನು ಆಹ್ವಾನಿಸಲು ಜನಪದರು ಈ ಆಚರಣೆಯನ್ನು ಮಾಡುತ್ತಾರೆ. ಇದೊಂದು ವಿಶಿಷ್ಟ ಸಂಪ್ರದಾಯ ಕೂಡ. ತುಮಕೂರು, ಹಾಸನ, ಚಿಕ್ಕಮಂಗಳೂರು, ಮಂಡ್ಯ ಜಿಲ್ಲೆಗಳಲ್ಲಿ ಈ ಆಚರಣೆಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ. ಇದರ ಹಲವು ವಿಶೇಷಗಳ ಜೊತೆಗೆ, ರಂಗೋಲಿಯಲ್ಲಿ ಚಿತ್ರ ಬಿಡಿಸುವುದೂ ಒಂದು.

ಪೂಜೆಗೆ ಮುನ್ನ ಹಳ್ಳಿಯ ಹೆಂಗಸರು, ಹೆಣ್ಣು ಮಕ್ಕಳು ಊರಿನ ದೇವಸ್ಥಾನದ ಮುಂಭಾಗದ ಅಂಗಳದಲ್ಲಿ ಅಥವಾ ಒಂದು ಕೇರಿಯ ದೊಡ್ಡದಾದ ಅಂಗಳವನ್ನು ಸ್ವಚ್ಛಗೊಳಿಸಿ, ಸಗಣಿಯಿಂದ ಸಾರಿಸಿ ಅದರ ಮೇಲೆ - ತೇರು, ಚಂದ್ರ, ಹನುಮ, ಸರ್ಪ, ನೇಗಿಲು ಮುಂತಾದ ಚಿತ್ರಗಳನ್ನು ರಂಗೋಲಿಯಿಂದ ಸುಂದರವಾಗಿ ಬಿಡಿಸುತ್ತಾರೆ. ರಂಗೋಲಿಯಿಂದ ಬರೆದ ಚಂದ್ರನ ಮೇಲೆ ಒಂದು ಮಣೆ ಹಾಗೂ ಅದರ ಮೇಲೊಂದು ಕಳಸವೊಂದನ್ನಿಟ್ಟು, ತಿಂಗಳು ಮಾವನಿಗೆ ರಾಗಿ ಮುದ್ದೆ ಅಥವಾ ರೊಟ್ಟಿಯ ಎಡೆ ಇಡುತ್ತಾರೆ. ನಂತರ ಸಾಂಪ್ರದಾಯಿಕವಾದ ಆಚರಣೆ ನಡೆಯುತ್ತದೆ. ತಿಂಗಳು ಮಾವನ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಅಪಾರ ಜನಪದ ಸಾಹಿತ್ಯ ದೊರೆಯುತ್ತದೆ.

ತಿಂಗು ತಿಂಗಳಿಗೂ ತಿಂಗಳ ಮಾವನ ಪೂಜೆ

ಗಳಿಸಲು 'ಕೊಂತಿ ಪೂಜೆ'. ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ವಿಶೇಷವಾಗಿ ಈ ಸಂಪ್ರದಾಯ ಕಂಡು ಬರುತ್ತದೆ. ಪ್ರತಿ ವರ್ಷ ಕಾರ್ತಿಕ ಮಾಸದ ಬೆಳದಿಂಗಳ ರಾತ್ರಿಯಲ್ಲಿ ಹದಿನಾರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುವ ಜನಪದ ಸಂಪ್ರದಾಯ. ಕೆಲವು ಭಾಗಗಳಲ್ಲಿ ದೀವಳಿಗೆಯ ಮೊದಲ ಅಥವಾ ಕಡೆಯ ಸೋಮವಾರ ಆರಂಭವಾಗಿ ಒಂದು ತಿಂಗಳು ಕಾಲ ಆಚರಣೆಗೊಳ್ಳುವುದೂ ಉಂಟು. ಮಹಾಭಾರತದ ಆದರ್ಶ ಸತಿ ಕುಂತಿಯೇ ಆಡುಮಾತಿನಲ್ಲಿ ಇಲ್ಲಿಯ 'ಕೊಂತಿ'. ವಿಶೇಷವಾಗಿ ಹೆಣ್ಣು ಮಕ್ಕಳಿಗಾಗಿ ಈ ಸಂಪ್ರದಾಯ.

ಅಂದು ರಾತ್ರಿ ಊರಿನ ಹೆಂಗಸರೆಲ್ಲ ಸೇರಿ ಕೊಂತಿಯನ್ನು ಕೂಡಿಸುವ ಸ್ಥಳವನ್ನು ಸಗಣಿಯಿಂದ ಸಾರಿಸಿ ಸ್ವಚ್ಛಗೊಳಿಸುತ್ತಾರೆ. ಅಲ್ಲಿಂದ ಆರಂಭಗೊಳ್ಳುವ ಈ ಆಚರಣೆ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ನಡೆಯುತ್ತದೆ. ಇಲ್ಲಿಯೂ ಕೂಡ ರಂಗವಲ್ಲಿಯ ವೈಭವವನ್ನು ಕಾಣಬಹುದಾದರೂ, ಅದಕ್ಕಿಂತ ಮಿಗಿಲಾದದ್ದು ಇಲ್ಲಿನ ಹೂವಿನ ಚಿತ್ರಾಲಂಕರಣ. ಹುಚ್ಚೆಳ್ಳು ಹೂವು, ಪತ್ರೆ ಮುಂತಾದವುಗಳಿಂದ ಸುಂದರವಾಗಿ ಅಲಂಕರಿಸುತ್ತಾರೆ.

ಈ ಸಂದರ್ಭದಲ್ಲಿ ಹಾಡುವ ಹಾಡುಗಳು ತಿಂಗಳು ಮಾವನ ಹಾಡುಗಳಂತೆಯೇ ವಿಶಿಷ್ಟವಾಗಿ ಆ ಸಂಪ್ರದಾಯವನ್ನು ಸ್ಪಷ್ಟಪಡಿಸುತ್ತವೆ :

ಒಮ್ಕೊಂತಿ ಪೂಜೆ; ಒನ್ನೆಲ್ಲ ತಾರ್ಸಿ
ಇಂಬಿಗೆ ಹೋದಣ್ಣ, ಏನೇನು ತಂದಾನು
ಇಂಬಾಳೆ ತಂದಾನು, ಮುಂಬಾಳೆ ತಂದಾನು
ಇಷ್ಟೆಲ್ಲನೂ ತಂದೋನೂ

ಎನ್ನುವುದರಿಂದ ಆರಂಭವಾಗಿ -

ಬಾಳೆಯ ತೋಟದಲಿ ಬಾಲನಾಡುತ ಬಂದ
ಬಾಲೆಸ್ತ್ರೀ ಶಿವನ ಪಾದಕ್ಕೆ ಎತ್ತಿದಳಾರತಿಯ
ಶ್ರೀ ದ್ರೌಪದೀದೇವಿ ಬೆಳಗಿದಳಾರತಿಯ

ಎನ್ನುವವರೆಗೆ, ಅದರ ಸಾಹಿತ್ಯರಾಶಿ ತುಂಬಿ ತುಳುಕುತ್ತದೆ.

* ತೊಗಲು ಮುಂತಾದ ವಸ್ತುಗಳ ಮೇಲಿನ ಚಿತ್ರಗಳು :

ಜನಪದರ ಚಿತ್ರಕಲಾ ವೈಭವವನ್ನು ಕಾಣಲು, ಅವರು ತೊಗಲು ಗೊಂಬೆಗಳ ರಚನೆಯಲ್ಲಿ ತೋರಿರುವ ಪ್ರತಿಭೆಯೇ ಸಾಕು. ಅತ್ಯಂತ ನವುರಾದ, ಸೂಕ್ಷ್ಮ ಕಲಾಜಗತ್ತನ್ನು ಅಲ್ಲಿ ಅವರು ತೆರೆದಿಟ್ಟಿದ್ದಾರೆ. ಅಲ್ಲಿಯ ಕುಸರಿ ಕೆಲಸ, ಬಣ್ಣಗಾರಿಕೆ ಇವೆಲ್ಲವೂ ಪರಿಣತ ಪ್ರತಿಭೆಯ ಫಲ. ಆಯಾ ಪಾತ್ರಗಳಿಗನುಗುಣವಾಗಿ ರಚನೆಗೊಂಡ ಗೊಂಬೆಗಳ ರಚನೆಯ ಕಲಾಶ್ರೀಮಂತಿಕೆ ನಿಜಕ್ಕೂ ಅಚ್ಚರಿಗೊಳಿಸುತ್ತದೆ. ಸ್ತ್ರೀ ಪಾತ್ರಗಳ ಹಾಗೂ ರಾಜಪಾತ್ರಗಳ ಆಭರಣ ವೈಭವವಂತೂ ಅದ್ಭುತ. ಮೂಗಿನ ಮುತ್ತಿನ ಮಣಿಯಿಂದ ಹಿಡಿದು ; ಕೊರಳಿನ ದೊಡ್ಡ ಮುತ್ತಿನ ಹಾರದವರೆಗೆ ಅದರ ವೈವಿಧ್ಯವನ್ನು ಗುರುತಿಸಬಹುದು. ಕೆಂಪು, ಕಪ್ಪು, ಹಸಿರು ಬಣ್ಣಗಳನ್ನೇ ಹೆಚ್ಚಾಗಿ ಬಳಸಿ ಸಿದ್ಧಪಡಿಸಿದ ಈ ಗೊಂಬೆಗಳು ಇಂದಿಗೂ ಕಳೆಗುಂದದೆ ಇರುವುದು ಆ ಕಲೆಗಾರಿಕೆಯ ವೈಶಿಷ್ಟ್ಯವೆನ್ನಬಹುದು.

ಜನಪದ ವಾದ್ಯಗಳಲ್ಲಿ ಬಡಿಯುವ ವಾದ್ಯಗಳೆಲ್ಲವೂ ಚರ್ಮದಿಂದಲೇ ಸಿದ್ಧಪಡಿಸಿದವುಗಳು. ತಮಟೆ, ನಗಾರಿ, ಡೋಲುಗಳಂತಹ ಚರ್ಮವಾದ್ಯಗಳೆಲ್ಲವೂ ಆಕಾರದಲ್ಲಿ ದೊಡ್ಡದಾಗಿರುವಂತೆಯೇ, ಕಲಾ ಕುಸುಮಗಳಾಗಿಯೂ ಗಮನ ಸೆಳೆಯುತ್ತವೆ. ವೃತ್ತಾಕಾರವಾದ ಈ ವಾದ್ಯಗಳ ಚರ್ಮದ ಭಾಗವನ್ನು ರಂಗವಲ್ಲಿಯಂತಹ ಚಿತ್ರಗಳ ಮೂಲಕ ಅಲಂಕರಿಸುತ್ತಾರೆ. ಸೂರ್ಯ, ಚಂದ್ರ ಮತ್ತು ಗೆರೆಯನ್ನೇ ಹೆಚ್ಚಾಗಿ ಬಳಸಿದ ಚಿತ್ರಗಳು ಹೆಚ್ಚಾಗಿ ಕಂಡು ಬರುತ್ತವೆ.

ಜನಪದರು ಸಿದ್ಧಪಡಿಸುವ ಪಾದರಕ್ಷೆಗಳೂ ಇದರಿಂದ ವಂಚಿತವಾಗಿಲ್ಲ. ಜನಪದರು ಅಲ್ಲಿಯೂ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಚರ್ಮವನ್ನು ಕಲಾತ್ಮಕವಾಗಿ ಕತ್ತರಿಸಿ ಅಲಂಕರಿಸುವುದರ ಮೂಲಕವೋ, ಅದರ ಸಣ್ಣ ಸಣ್ಣ ಚೂರುಗಳನ್ನು ಕಲಾತ್ಮಕವಾಗಿ ಕತ್ತರಿಸಿ ಜೋಡಿಸುವುದರ ಮೂಲಕವೋ ಅಥವಾ ಸಣ್ಣ ಸಣ್ಣ ರಂಧ್ರಗಳನ್ನು ಕೊರೆದು ಅಂದಗೊಳಿಸುವುದರ ಮೂಲಕವೋ ಪಾದರಕ್ಷೆಗಳನ್ನು ಕಲಾತ್ಮಕವಾಗಿಸುತ್ತಾರೆ. ವ್ಯವಸಾಯ ಹಾಗೂ ಗಾಡಿ ಹೊಡೆಯುವ ಸಂದರ್ಭದಲ್ಲಿ ಬಳಸುವ ಬಾರು ಕೋಲು ಅವರ ದೃಷ್ಟಿಯಿಂದ ಮರೆಯಾಗಿಲ್ಲ. ಕೋಲಿಗೆ ಚರ್ಮದ ಬಾರನ್ನು ಎಳೆ ಎಳೆಯಾಗಿ ಜೋಡಿಸಿ ಕಟ್ಟಿ, ಅದನ್ನು ಚರ್ಮದ ಚೂರುಗಳಿಂದ ಅಂದಗೊಳಿಸುವುದುಂಟು.

* ಮನುಷ್ಯನ ಮೈಮೇಲೆ ಬರೆದ ಚಿತ್ರಗಳು :

ಜನಪದ ಚಿತ್ರಕಲೆ ಕೇವಲ ಮಣ್ಣು, ಮರ, ನೆಲ, ಗೋಡೆಗಳ ಮೇಲೆ ಕಂಡು ಬರುವುದಷ್ಟೇ ಅಲ್ಲ, ಅದು ಜೀವಂತ ವ್ಯಕ್ತಿಯ ಚರ್ಮದ ಮೇಲೂ ಬಗೆಬಗೆಯಲ್ಲಿ ಚಿತ್ರಣಗೊಳ್ಳುವುದನ್ನು ಕಾಣಬಹುದು. ಕೈ ಮೈ ಮುಖದ ಮೇಲೆ ಹಾಕುವ ಹಚ್ಚೆ, ವಿವಿಧ ಬಣ್ಣಗಳಿಂದ ಮೈ ಹಾಗೂ ಮುಖದ ಮೇಲೆ ಬರೆಯುವ ವರ್ಣಮಯ ಚಿತ್ರಗಳು ಅದ್ಭುತ ಕಲಾಲೋಕವನ್ನೇ ನೆನಪಿಸುತ್ತವೆ.

ಗ್ರಾಮೀಣ ಸಮಾಜದಲ್ಲಿ ಹಚ್ಚೆ ಹೂಯುವ ಸಂಪ್ರದಾಯ ಇಂದಿಗೂ ರೂಢಿಯಲ್ಲಿದೆ. ಇದೊಂದು ಅದ್ಭುತ ಚಿತ್ರಕಲೆಯಾಗಿಯೇ ಬೆಳೆದು ಬಂದಿದೆ. ನಂಬಿಕೆ, ಪ್ರೀತಿ ಹಾಗೂ ವಿಶ್ವಾಸಗಳ ಸಂಕೇತವಾಗಿ ಈ ಸಂಪ್ರದಾಯ ಉಳಿದು ಬಂದಿದೆ. ಬುರುಡೇಬೆಸ್ತರು ಹಾಗೂ ಕೊರಮ ಶೆಟ್ಟರು ಜನಾಂಗದಲ್ಲಿ ಹಚ್ಚೆ ಹೂಯುವ ಕಲಾವಿದರು ಕಂಡು ಬರುತ್ತಾರೆ. ಹಚ್ಚೆ ಹೂಯುವವರೂ ಹೆಂಗಸರೇ ಆಗಿರುತ್ತಾರೆ. ವಿವಿಧಾಕೃತಿಯಲ್ಲಿ ಅತ್ಯಂತ ಕಲಾತ್ಮಕವಾದ ಚಿತ್ರಗಳನ್ನು ಬಿಡಿಸುವ ಕಲೆಗಾರಿಕೆ ಅವರಿಗೆ ಸಿದ್ಧಿಸಿದ್ದು, ರಂಗವಲ್ಲಿಯಂತಹ ಚಿತ್ರಗಳಿಂದ ಹಿಡಿದು, ಬಗೆಬಗೆಯ ಹೂ, ಪ್ರಾಣಿ, ಪಕ್ಷಿ ಹಾಗೂ ದೇವರ ಚಿತ್ರಗಳನ್ನೂ ಅಂದವಾಗಿ ಬಿಡಿಸುತ್ತಾರೆ. ಇವು ಶರೀರದ ಮೇಲೆ ವ್ಯಕ್ತಿಯ ಅಂತಿಮ ಕಾಲದವರೆವಿಗೂ ಉಳಿಯುವ ಚಿತ್ರಗಳಾದರೆ, ಮುಖ ಮತ್ತು ಮೈ ಮೇಲೆ ಬಣ್ಣಗಳಿಂದ ಬಿಡಿಸುವ ಚಿತ್ರಗಳು ಮತ್ತೊಂದು ಬಗೆಯವು. ಹಗಲು ವೇಷ, ಕೋಡಂಗಿ, ಯಕ್ಷಗಾನದ ಪಾತ್ರಗಳು, ಹುಲಿ ವೇಷ, ಪಾಳೇಗಾರ ವೇಷ ಮುಂತಾದ ಪಾತ್ರಗಳ ಸಂದರ್ಭಗಲ್ಲಿ ಆಯಾ ಸನ್ನಿವೇಶಕ್ಕೆ - ಪಾತ್ರಕ್ಕೆ ತಕ್ಕಂತೆ ಅದ್ಭುತ ಕಲಾಪ್ರತಿಭೆಯನ್ನು ಜನಪದರು ಮೆರೆದಿದ್ದಾರೆ. ಹುಲಿ ವೇಷದ ಸಂದರ್ಭದಲ್ಲಿಯಂತೂ ಇಡೀ ಶರೀರಕ್ಕೆ ಹಳದಿ ಮತ್ತು ಕಪ್ಪು ಬಣ್ಣಗಳಿಂದ ಹುಲಿಯ ವೇಷವನ್ನೇ ಹೋಲುವಂತೆ ಬಿಡಿಸುವ ಚಿತ್ರ ವಿಶಿಷ್ಟವಾಗಿರುತ್ತದೆ.

* ಮುಖವಾಡಗಳು :

ವಿವಿಧ ಸಂದರ್ಭಗಳ ಹಿನ್ನೆಲೆಯಲ್ಲಿ ಧರಿಸುವ ಮುಖವಾಡಗಳ ಸಿದ್ಧತೆ ಜನಪದ ಚಿತ್ರಕಲೆಗೆ

ಹೆಚ್ಚಿನ ಮೆರಗನ್ನು ಉಂಟು ಮಾಡಿದೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಕಂಡು ಬರುವ ಸೋಮನ ಕುಣಿತ, ಗಾರುಡಿ ಗೊಂಬೆ ಇತ್ಯಾದಿಗಳಿಗೆ ಬಳಸುವ ಮುಖವಾಡಗಳು ವರ್ಣರಂಜಿತವಾದವುಗಳು. ದೇವರ ಉತ್ಸವದ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ಈ ಜನಪದ ಕುಣಿತಗಳು ಕಣ್ಮನವನ್ನು ಸೂರೆಗೊಳ್ಳುತ್ತವೆ.

ಯಾವ ಭಾಗದ ಚಿತ್ರಕಲೆಯೇ ಆಗಲಿ, ಒಟ್ಟಾರೆ ಜನಪದ ಚಿತ್ರಕಲೆ ತನ್ನ ವೈಶಿಷ್ಟ್ಯವನ್ನು ದಟ್ಟವಾಗಿ ಉಳಿಸಿಕೊಂಡು ಬಂದಿದೆ. ಅವರಿಗೆ ಯಾವುದೇ ಒಂದು ವಸ್ತುವಿನ ಬಳಕೆಯಷ್ಟೇ ಮುಖ್ಯವೆನಿಸುವುದಿಲ್ಲ. ಅದು ಹೇಗಿರಬೇಕೆಂಬುದೂ ಅಷ್ಟೇ ಮುಖ್ಯವಾಗುತ್ತದೆ. ಅದರ ಫಲವೇ ಈ ಎಲ್ಲಾ ಕಲಾಶ್ರೀಮಂತಿಕೆ. ಸಾಮಾನ್ಯ ಬಳಕೆಯ ಒಂದು ವಸ್ತುವೂ ಅವರಿಗೆ ಕಲಾತ್ಮಕವಾಗಿರಬೇಕು.

ಜನಪದ ಕಲೆಗಳಲ್ಲಿ ಪ್ರಾದೇಶಿಕತೆ ಇದೆಯಾದರೂ, ಅವುಗಳ ವ್ಯತ್ಯಾಸವನ್ನು ಗುರುತಿಸಬಹುದಾದರೂ, ಪೂರ್ಣವಾಗಿ ಅಲ್ಲ. ಏಕೆಂದರೆ, ಜನಪದ ಸಂಸ್ಕೃತಿಯ ಮೂಲ ಬಹುತೇಕವಾಗಿ ಒಂದು ಸಮಾನ ಸ್ಥಿತಿಯನ್ನೂ, ಸಮಾನ ಮನೋಧರ್ಮವನ್ನು ಅವಲಂಬಿಸಿ ಸೃಷ್ಟಿಗೊಂಡದ್ದು. ಹಾಗಾಗಿ ಬಹುತೇಕ ಜನಪದ ಚಿತ್ರಕಲೆಗಳಲ್ಲಿ ಹೋಲಿಕೆಯೇ ಹೆಚ್ಚು. ಕೆಲವೊಂದು ಅಪವಾದಗಳೂ ಇಲ್ಲವೆಂದಲ್ಲ. ಆದರೆ ಅವು ಬಹಳ ಕಡಿಮೆ.

ದಕ್ಷಿಣ ಕರ್ನಾಟಕದ ಜನಪದ ಚಿತ್ರಕಲೆಗಳ ವೈಶಿಷ್ಟ್ಯವನ್ನು ನಾವು, ಕೊಂತಿ ಪೂಜೆ, ತಿಂಗಳ ಮಾವನ ಪೂಜೆ, ಸೋಮನ ಕುಣಿತಗಳಂತಹ ಸಾಂಪ್ರದಾಯಿಕ ಆಚರಣೆಗಳ ಸಂದರ್ಭದಲ್ಲಿ ಗುರುತಿಸಬಹುದೇ ಹೊರತು, ರಂಗವಲ್ಲಿ, ಹಚ್ಚೆ ಮುಂತಾದ ಸಾರ್ವತ್ರಿಕ ಕಲೆಗಳಲ್ಲಿ ಸಾಧ್ಯವಾಗುವುದಿಲ್ಲ.

ಇಷ್ಟಾದರೂ, ಜನಪದ ಚಿತ್ರಕಲೆಗೆ ವಿಶಿಷ್ಟ ಮೆರಗಿದೆ, ಸೊಬಗಿದೆ, ಸೋಪನ್ನತೆ ಇದೆ. ಸಾಮಾನ್ಯವಾದುದರಲ್ಲಿ ಅಸಮಾನ್ಯವಾದುದನ್ನು ಚಿತ್ರಿಸಬಲ್ಲ ಅದ್ಭುತ ಕಲ್ಪನಾಶಕ್ತಿ ಹಾಗೂ ಕಲಾಪ್ರತಿಭೆ ಇದೆ.

* * * * *

ಪದವವೆ ನಮ್ಮ ಎದೆಯಲ್ಲಿ - ಹಾಡ್ಗತೆಗಳು

೧

'ಪದವವೆ ನಮ್ಮ ಎದೆಯಲ್ಲಿ'ಯ ಆರನೆಯ ದಳ - 'ಹಾಡ್ಗತೆಗಳು'. ಜಾನಪದ ಕ್ಷೇತ್ರದಲ್ಲಿ ಕೆಲವು ಉತ್ತಮ ಸಂಕಲನಗಳನ್ನು ಹೊರತಂದಿರುವ ಎಚ್. ಎಲ್. ನಾಗೇಗೌಡರು ೧೯೭೬ರಲ್ಲಿ ಸಂಪಾದಿಸಿ ಪ್ರಕಟಿಸಿದ ಈ ಕೃತಿ ಒಂದು ಉತ್ತಮ ಸಂಕಲನ. ಜನಪದ ಗೀತೆಗಳ ಹಲವು ಪ್ರಮುಖ ಪ್ರಕಾರಗಳು ಇದರಲ್ಲಿ ಪರಿಚಯಗೊಂಡಿವೆ - ಸೋಬಾನೆ ಪದಗಳು, ಒಸಗೆ ಪದಗಳು, ಲಾಲಿ ಪದಗಳು, ಬಾಂಧವ್ಯದ ಹಾಡುಗಳು, ದೇವಿ ಮತ್ತು ದೇವರು, ಹೊಲೆಯರು ಹೊಗಳುವ ಪದಗಳು, ಕೋಲಾಟದ ಪದಗಳು, ಹಚ್ಚೆ ಹೊಯ್ಯುವ ಪದಗಳು, ಮಕ್ಕಳ ಪದಗಳು ಮುಂತಾದುವುಗಳಂತೆಯೇ 'ಹಾಡ್ಗತೆಗಳೂ' ಇದರಲ್ಲಿಯೂ ಒಂದು ದಳ, ಇವೆಲ್ಲವೂ ಕತೆಗಳನ್ನು ಹೇಳುವ ಹಾಡುಗಳು. ಇವುಗಳಲ್ಲಿ ಕೆಲವು ಹೆಂಗಸರು ಹೇಳುವ ಹಾಡುಗಳಾದರೆ, ಉಳಿದುವು ಗಂಡಸರು ಹೇಳುವ ಹಾಡುಗಳು. ಗಂಡಸರಲ್ಲಿ ವೃತ್ತಿಗಾಯಕರಾಗಿರಬಹುದು ಇಲ್ಲವೇ ಸಾಮಾನ್ಯ ಗಾಯಕರು ಆಗಿರಬಹುದು. ಇವರು ವಾದ್ಯದ ಹಿನ್ನೆಲೆಯಲ್ಲಿ ಹಾಡುವ ಹಾಡ್ಗತೆಗಳು ಕೆಲವಾದರೆ, ಮತ್ತೆ ಕೆಲವು ಯಾವ ವಾದ್ಯದ ಹಿನ್ನೆಲೆಯೂ ಇಲ್ಲದೆ ರಾಗಿ ಬೀಸುವಾಗಲೋ, ಕಳೆ ಕೀಳುವಾಗಲೋ ಹಾಡುವ ಹಾಡ್ಗತೆಗಳು ಮತ್ತೆ ಕೆಲವು.

'ಹಾಡ್ಗತೆಗಳು' ಭಾಗದಲ್ಲಿ ಒಟ್ಟು ಹದಿನಾಲ್ಕು ಹಾಡ್ಗತೆಗಳಿವೆ: ಪಾಪಿಗೇಡಿ ಅಣ್ಣಯ್ಯ, ಬಂಜೆ ಹೊನ್ನಮ್ಮ, ಕಾಟಿ ವಕ್ಕಲು ಕೋಣವೇಗೌಡ, ಕಲಿಯುಗದೊಳಗೆ ಕರ್ಮವೆಚ್ಚಿತು, ಬಾಳಿಗಂಜಿ ಬಂಜೆ ಹೊನ್ನಮ್ಮ, ಸತ್ಯವಂತ ನಾಗಾಮಣಿ, ಗೌರಮ್ಮನ ಮೇಲೆ, ಕತ್ತಲೆರಾಯ, ಕುಸುಮಾಲೆ, ಕೆಂಗಪ್ಪನ ಹಟ್ಟಿ ತಿಮ್ಮಮ್ಮ, ಎಳೆಯನು ಕೆಂಗಪ್ಪ, ಎಳೆಗ ನಾತಗರ ಸಾಕಿ, ತುಂಬಿದ ಬಳ್ಳಾರಿವಳಿಗೆ, ಮಕ್ಕಳಿಲ್ಲದ ಬಂಜೆ ಹೊಕ್ಕಳು ನಂಜನಗೂಡ, ಎತ್ತಿದೆ ನಾಗವ್ವನಾ ಸ್ಮರಣೆಯಾ - ಈ ಕಥನ ಗೀತೆಗಳಲ್ಲಿ ಕೆಲವು ಈಗಾಗಲೇ ಹೆಚ್ಚು ಜನಪ್ರಿಯವಾಗಿದ್ದು, ಬೇರೆ ಬೇರೆ ಸಂಕಲನಗಳಲ್ಲಿ ಬೆಳಕು ಕಂಡಿವೆಯಾದರೂ ಒಂದೆರಡು ಸಣ್ಣ ಪುಟ್ಟ ಪಾಠಾಂತರಗಳೊಡನೆ ಇಲ್ಲಿ ಕಂಡು ಬರುವುದು ಗಮನಾರ್ಹ.

ಇಲ್ಲಿಯ ಮೊದಲ ಹಾಡ್ಗತೆಯಾದ - 'ಪಾಪಿಗೇಡಿ ಅಣ್ಣಯ್ಯ' ಅದೇ ಹೆಸರಿನಲ್ಲಿಯೇ ಡಾ॥ ಜೀ. ಶಂ. ಪರಮಶಿವಯ್ಯ ಅವರು ಸಂಪಾದಿಸಿರುವ 'ದೊಂಬಿದಾಸರ ಲಾವಣಿಗಳು' ಸಂಕಲನದಲ್ಲಿಯೂ ದೊರೆಯುತ್ತದೆ. 'ಘಾತುಕ ಅಣ್ಣಯ್ಯ' ಎಂಬ ಮತ್ತೊಂದು ಪಾಠಾಂತರವನ್ನು ಅವರು ಕೊಟ್ಟಿದ್ದಾರೆ. ನಂ. ನಾರಾಯಣ ಗೌಡರು ಸಂಪಾದಿಸಿರುವ 'ಚೌಡಿಕೆ ಕಾವ್ಯಗಳು' ಸಂಕಲನದಲ್ಲಿ 'ಅಣ್ಣ - ತಂಗಿ' ಎಂಬ ಶೀರ್ಷಿಕೆಯಲ್ಲಿಯೂ ಈ ಕಥನಗೀತೆ ಕಂಡು ಬರುತ್ತದೆ. ಕರ್ನಾಟಕದಾದ್ಯಂತವೂ ಕಂಡು ಬರುವ ಈ ಕಥನಗೀತೆ ಸಾಕಷ್ಟು ಬದಲಾವಣೆಗಳೊಂದಿಗೆ ಕಾಣಿಸಿಕೊಳ್ಳುತ್ತದೆ. ಹಾಗೆಯೇ

ಬೇರೆ ಬೇರೆ ಸಂಪ್ರದಾಯಕ್ಕೆ ಸೇರಿದ ಗಾಯಕರೂ ಇದನ್ನು ಹಾಡುತ್ತಾರೆ. ಪ್ರಸ್ತುತ ಲೇಖನದಲ್ಲಿ ಮೂವರು ಸಂಗ್ರಹಕಾರರೂ ಎರಡು ಸಂಪ್ರದಾಯದವರಿಂದ ಸಂಗ್ರಹಿಸಿರುವುದನ್ನು ಪರಿಶೀಲಿಸಿದೆ.

ಡಾ|| ಜೀ. ಶಂ. ಪರಮಶಿವಯ್ಯನವರು ಹಾಗೂ ಎಚ್. ಎಲ್. ನಾಗೇಗೌಡರು, ದೊಂಬಿದಾಸರಿಂದ ಈ ಹಾಡ್ಗತೆಯನ್ನು ಸಂಗ್ರಹಿಸಿದ್ದಾರೆ. ಒಬ್ಬರು ತುರುವೇಕೆರೆ ಭಾಗದಲ್ಲಿ ಸಂಗ್ರಹಿಸಿದ್ದರೆ ಮತ್ತೊಬ್ಬರು ಚನ್ನರಾಯ ಪಟ್ಟಣ ಭಾಗದಲ್ಲಿ ಸಂಗ್ರಹಿಸಿದ್ದಾರೆ. ಭೌಗೋಳಿಕ ವಾಗಿ ಅಂತಹ ಅಂತರ ಕಂಡು ಬರದಿದ್ದಕೂ ಕಥೆಯಲ್ಲಿ ಅಂತರ ಬಹಳವಿದೆ. ಎಚ್. ಎಲ್. ನಾಗೇಗೌಡರ 'ಹಾಡ್ಗತೆಗಳು' ಭಾಗದಲ್ಲಿ ಬರುವ ಕಥೆಯನ್ನು ಹೀಗೆ ಸಂಗ್ರಹಿಸಬಹುದು:

ವರ್ಷಕ್ಕೊಂದು ಸಾರಿ ಬರುವ ದೀಪಾವಳಿಗೆ, ತನ್ನನ್ನು ಕರೆದುಕೊಂಡು ಹೋಗಲು ಅಣ್ಣಾ ಬರುವನೆಂಬ ಕನಸನ್ನು ಕಾಣುತ್ತಾಳೆ - ಗಂಡನ ಮನೆಯಲ್ಲಿರುವ ಹೆಣ್ಣು ಮಗಳು. ಅದಕ್ಕಾಗಿ ಸಂತೋಷಿಸಿ -

ಅಣ್ಣ ರಾಜನು ಬರುತಾನೆ
ಈಡುಗಾಯ ಒಡುವೇನೊ
ಜೋಡುಗಾಯ ಒಡುದೇನೊ
ಊರು ಮುಂದಲ ದೇವರಿಗೆ
ಹರಕೆನಾದರು ಮಾಡುತಾಳೆ

ಅಣ್ಣನ ಬರುವನ್ನು ಇಷ್ಟೊಂದು ಸಂಭ್ರಮದಿಂದ ನಿರೀಕ್ಷಿಸುತ್ತಿರುವಂತೆಯೇ ಅಣ್ಣಾ ಬರುತ್ತಾನೆ. ಅವಳ ಸಂತೋಷಕ್ಕೆ ಎಣೆಯಿಲ್ಲದಾಗುತ್ತದೆ. ಅಪರೂಪಕ್ಕೆ ಬಂದ ಅಣ್ಣನಿಗಾಗಿ -

ಹಾಲಿನಲ್ಲಿ ಅಕ್ಕಿ ತೊಳೆದು
ಅಣ್ಣನಿಗಡಿಗೆ ಮಾಡ್ಕವ್ಳೆ

ಮಾರನೆಯ ದಿನ ಅತ್ತೆ, ಮಾವ, ಗಂಡನ ಅಪ್ಪಣೆಯನ್ನು ಪಡೆದು ಅಣ್ಣನೊಂದಿಗೆ ತೌರಿಗೆ ಹೊರಡುತ್ತಾಳೆ. ಹೋಗುತ್ತ ಹೋಗುತ್ತ ಅಣ್ಣಾ, ಊರುದಾರಿಯನ್ನು ಬಿಟ್ಟು ಕಾಡುದಾರಿಯನ್ನು ಹಿಡಿದಿದ್ದಾನೆ: ತಂಗಿ ತೊಟ್ಟಿದ್ದ ಒಡವೆ, ವಸ್ತ್ರ, ಅವನನ್ನು ರಾಕ್ಷಸನನ್ನಾಗಿ ಮಾಡುತ್ತವೆ. ಸ್ವಾರ್ಥದ ಮುದ್ದೆಯನ್ನಾಗಿಸಿವೆ -

ತಂಗಿ ತೊಟ್ಟ ಆಭರಣ
ನನ್ನ ಹೆಂಡ್ತೀಗಾದರೆ ಇಲ್ಲವಲ್ಲೊ
ಕಾಡಿಗೆ ಕರದುಕೊಂಡು ಹೋಗಬೇಕು
ತಂಗಿ ತಲೆಯ ಹುಯ್ಯಾಬೇಕು
ಬೆಟ್ಟದ ಪುರದ ಕಾಡಿನಲ್ಲಿ
ಮಾನಭಂಗ ಮಾಡಬೇಕು

ಎಂದು ಮನದಲ್ಲಿಯೇ ಆಲೋಚಿಸಿದ್ದಾನೆ. ಅದರಂತೆ ಕಾಡಿನ ಮಧ್ಯೆ ಕರೆತಂದಿದ್ದಾನೆ.

ನೀ ತೊಟ್ಟಿರೋ ಸೀರೆ ಒಡವೆ
ಬಿಚ್ಚು ಮಡಗೆ ಹೊಲೆರಾಡೆ

ಎಂದು ಕೆಟ್ಟ ಮಾತುಗಳಿಂದ ಮಾತನಾಡಿಸಿದ್ದಾನೆ. ಅವಳು ಎಷ್ಟು ಅಂಗಲಾಚಿ ಬೇಡಿದರೂ ಕೇಳುವಂತಿಲ್ಲ. 'ಎಂಟು ತಿಂಗಳ ಬಿಮ್ಮನಿಸೆ ಮಾನಭಂಗ ಮಾಡಬೇಡ' ಎಂದು ಕಾಲನ್ನು ಹಿಡಿದು ಬೇಡಿದರೂ ಅವನು ಕೇಳುವಂತಿಲ್ಲ ಸೀರೆಯ ಕೊಡದಿದ್ರೆ ಎಳೆಗೊಂದು ಕಂಡ ಮಾಡೆನು' ಎಂದು ಕ್ರೂರವಾಗಿ ನುಡಿಯುತ್ತಾನೆ. ಆಗ ಅವನೇ ಮುಂದಾಗಿ -

ಕಣ್ಣಿಗೆ ಬಟ್ಟೆ ಬಿಗಿದಾನೆ
ಸೀರೆ ಒಡವೆ ಬಿಚ್ಯಾನೆ
ಪಾಪಿಗೇಡಿ ಅಣ್ಣಯ್ಯ
ಕಾರೆ ಮುಳ್ಳು ತತ್ತಾನೆ
ಕಣ್ಣಿಗಾದರೂ ಹೊಡಿತಾನೆ
ಈಚಲು ಮುಳ್ಳು ತತ್ತಾನೆ
ಬಾರಿ ಹಿಂಸೆ ಮಾಡುತ್ತಾನೆ

ಆಗ ತಾಳಲಾರದೆ ಅವಳ ಗರ್ಭದಲ್ಲಿಯ ಪಿಂಡವೇ ಮಾವನನ್ನೂ ಕುರಿತು -

ಬೇಡ ಬೇಡ ಮಾವಯ್ಯ
ಆಸೆಯಿಂದ ಕರುತಂದ
ತಂಗಿಗೆ ಮೋಸ ಮಾಡುಬೇಡ
ಅತ್ಯಮ್ಮ ಸತ್ತರೆ
ಇನ್ನೊಬ್ಬಳ ತರಬಲ್ಲೆ
ಒಡುಟ್ಟಿದ ತಂಗಿ ಕೊಂದರೆ
ಇನ್ನೊಂದು ಸಾರಿ ಸಿಕ್ಕುವಳೆ

ಎಂದು ಬುದ್ಧಿ ಹೇಳುತ್ತದೆ. ಆದರೆ, ಈತ ಯಾವುದಕ್ಕೂ ಜಗ್ಗುವವನಲ್ಲ. ಅವಳು ತೌರಿಗೆ ಬಂದರೆ ಎಲ್ಲವನ್ನೂ ಹೇಳುತ್ತಾಳೆಂದು, ಅವಳನ್ನು ಕೊಲ್ಲಲು ಮುಂದಾಗುತ್ತಾನೆ. ತನ್ನ ಕೈಲಿದ್ದ ಕತ್ತಿ ಮಾಯಕಾರ ಶಿವನಿಂದ ಕಣ್ಮರೆಯಾಗಲು, ಬಳಿಯಿದ್ದ ಕಲ್ಲನ್ನು ತಲೆಯ ಮೇಲೆ ಹಾಕಲು ಕೈಗೆತ್ತಿಕೊಳ್ಳಲು ಹೋಗಿದ್ದಾನೆ. ಆಗ ಕಲ್ಲಿನಡಿ ಮಲಗಿದ್ದ ಸರ್ಪ ಅವನ ಕೈ ಕಚ್ಚಿದೆ. ತನ್ನ ಪ್ರಾಣ ಉಳಿಸುವಂತೆ ತಂಗಿಯನ್ನು ಬೇಡಿದ್ದಾನೆ. 'ಕೈ ಕಾಲು ಕಟ್ಟಿದೀಯ, ಹ್ಯಾಗೆ ಬರಲೋ ಅಣ್ಣಯ್ಯ' ಎಂದು ತನ್ನ ಅಸಹಾಯಕತೆಯನ್ನು ತೋರಿದ್ದಾಳೆ. ಅಣ್ಣನ ಸ್ಥಿತಿಯನ್ನು ಕಂಡು ದುಃಖಿಸಿದ್ದಾಳೆ. ಈಕೆಯ ಸತ್ಯವನ್ನು ಪರೀಕ್ಷಿಸಲು ಶಿವನು ಬರುತ್ತಾನೆ. ದುಃಖಕ್ಕೆ ಕಾರಣವನ್ನು ಕೇಳುತ್ತಾನೆ. ತಂಗಿ ಅಣ್ಣನನ್ನು ಬಿಟ್ಟು ಕೊಡುವುದಿಲ್ಲ. ಅಣ್ಣನ ಸಾವಿಗೆ ನಿಜವಾದ ಕಾರಣವನ್ನು ಹೇಳದೆ -

ಕಾಡಿನಲಿ ಬರುವಾಗ
ಏಳು ಜನ ಕಳ್ಳರು
ಸೀರೆ ಒಡವೆ ಕದ್ದರು
ಜಲ್ಮ ಖಾಲಿ ಮಾಡಿದರು
ಇಷ್ಟು ಕೊಲೆಯ ಕೊಟ್ಟರು

ಎಂದು ಹೇಳುತ್ತಾಳೆ. ಇವಳು ಅಣ್ಣನ ಆಸೆಯನ್ನು ಬಿಡದ ಸತ್ಯವಂತೆ ಎಂದು ತಿಳಿದು, ಅವಳ ಕೈಕಾಲುಗಳನ್ನು ಬಿಚ್ಚಿ ಸೀರೆ ಒಡವೆಗಳನ್ನು ಕೊಡುತ್ತಾನೆ. 'ಅವನು ಮಾಡಿದ ಕರ್ಮ ಅನುಭವಿಸಲಿ ನನ್ನ ಜೊತೆ ಬಾ ತೌರಿಗೆ ಬಿಡುತ್ತೇನೆ' ಎಂದು ಕರೆದರೂ ಆಕೆ ಒಪ್ಪುವುದಿಲ್ಲ. ಅಣ್ಣನನ್ನು ಬದುಕಿಸಿಕೊಳ್ಳುತ್ತಾಳೆ. ಬದುಕಿಕೊಂಡ ಅಣ್ಣ ತಂಗಿಯ ಕಾಲನ್ನು ಹಿಡಿದು ಕ್ಷಮೆ ಯಾಚಿಸುತ್ತಾನೆ. ತಾಯಿ - ತಂದೆ, ಅತ್ತೆ - ಮಾವರಿಗೆ ಹೇಳಬೇಡವೆಂದು ಭಾಷೆ ಪಡೆಯುತ್ತಾನೆ. ಅದರಂತೆ ಅವಳು ನಡೆಯುತ್ತಾಳೆ. ತೌರಿಗೆ ಬಂದ ಮಗಳು ಬಳಲಿರುವುದನ್ನು, ಸೀರೆ ಮಾಸಿರುವುದನ್ನು ಕಂಡು ತಾಯಿ ಕೇಳಿದಾಗ, ಬೇರೆ ಕಾರಣವನ್ನು ಹೇಳುತ್ತಾಳೆ. ತನ್ನ ಒಡವೆ ವಸ್ತ್ರವನ್ನೆಲ್ಲಾ ಅತ್ತಿಗೆಗೆ ಕೊಡುತ್ತಾಳೆ. ಬೇಡವೆಂದರೂ, ಒಪ್ಪಿಸುತ್ತಾಳೆ. ತಂದೆ - ತಾಯಿಯರನ್ನು ಕರೆದುಕೊಂಡು ಗಂಡನ ಮನೆಗೆ ಹಿಂತಿರುಗುತ್ತಾಳೆ. ಸೀರೆ ಒಡವೆಗಳಿಲ್ಲದಿದ್ದನ್ನು ಕಂಡು, ಅತ್ತೆ - ಮಾವ ಪ್ರಶ್ನಿಸುತ್ತಾರೆ, ದಾರಿಯಲ್ಲಿ ಕಳ್ಳರು ಕಿತ್ತುಕೊಂಡರೆಂದು ಸುಳ್ಳು ಹೇಳುತ್ತಾಳೆ. ಸೊಸೆ ಸುಖವಾಗಿ ಹಿಂತಿರುಗಿದ್ದಕ್ಕೆ ಸಂತೋಷಿಸಿ, ಅದನ್ನು ಮರೆಯುತ್ತಾರೆ.

ಕೈಲಾಸದ ಶಿವ ಈಕೆಯ ಸತ್ಯಕ್ಕೆ ಮೆಚ್ಚಿ, ನರಲೋಕದಲ್ಲಿ ಇಂಥವಳು ಇರಬಾರದೆಂದು ತೀರ್ಮಾನಿಸಿ, ಅವಳನ್ನು ದೇವಲೋಕಕ್ಕೆ ಕರೆದೊಯ್ಯುತ್ತಾನೆ. 'ಹೂವಿನಿಂದ ನಾರು ಸ್ವರ್ಗ ಸೇರುವಂತೆ' ಅವಳ ಪತಿ ಹಾಗೂ ಅತ್ತೆ - ಮಾವಂದಿರೂ ಜೊತೆಯಲ್ಲಿ ಕೈಲಾಸಕ್ಕೆ ಹೋಗುತ್ತಾರೆ.

* * * * *

ಡಾ॥ ಜೀ. ಶಂ. ಪರಮಶಿವಯ್ಯನವರ 'ದೊಂಬಿದಾಸರ ಲಾವಣಿಗಳು' ಸಂಕಲನದಲ್ಲಿ ಸಂಗ್ರಹಿಸಿ ಕೊಟ್ಟಿರುವ, ಇದರ ಎರಡು ಪಾಠಾಂತರಗಳೂ ಇದರಿಂದ ಸಂಪೂರ್ಣವಾಗಿ ಅಲ್ಲಲ್ಲಿ ಬೇರೆಯಾಗಿರುವುದು ಗಮನಾರ್ಹ.

'ಘಾತುಕ ಅಣ್ಣಯ್ಯ' ಪಾಠಾಂತರದಲ್ಲಿ ಅಣ್ಣ, ತಂಗಿಯ ಮನೆಗೆ ಬಂದು ತಂಗಿಯನ್ನು ಕರೆದುಕೊಂಡು ಹೊರಡುವವರೆಗಿನ ಕಥೆ ಒಂದೇ ರೀತಿ ಇದೆ. ತಂಗಿ ಅಣ್ಣನ ಬರುವಿಗಾಗಿ ಕಾಯುವುದು, ದೇವರಲ್ಲಿ ಹರಕೆ ಹೊರುವುದು ಈ ಎಲ್ಲ ಪ್ರಸಂಗವೂ ಉಂಟು. ಆದರೆ, ಪ್ರಯಾಣ ಹೊರಟು ಅಣ್ಣ ಊರುದಾರಿಯನ್ನು ಬಿಟ್ಟು, ಕಾಡುದಾರಿಯನ್ನು ಹಿಡಿಯುವ, ಅವಳಿಂದ ಒಡವೆಗಳನ್ನು ಪಡೆಯುವ ಪ್ರಸಂಗಗಳು ಬೇರೆಯಾಗಿಯೇ ಚಿತ್ರಿತವಾಗಿವೆ.

ದಾರಿ ಬಿಟ್ಟು, ಕಾಡು ಮಾರ್ಗವ
ಹಿಡಿದನು ಅವರಣ್ಣ
ಯಾಕೋ ಅಣ್ಣ ದಾರಿಯ ಬಿಟ್ಟು,
ಕಾಡಿಗೆ ಕರೆತಂದೆ

ಏನು ಮಾಡಲಿ ತಂಗಿ ನಮಗೆ

ದಾರಿಯು ತಪ್ಪಿತಲ್ಲ

ಮುಂದೆ ದಾರಿಯು ತಪ್ಪಿತಲ್ಲ

ಕಾಡಿನೊಳಗೆ ಕಳ್ಳರ ಕಾಟ

ಬಹಳ ಉಂಟಮ್ಮ

ನಮಗೆ ಬಹಳ ಉಂಟಮ್ಮ

ವಡವೆ ವಸ್ತ್ರವ ಗಂಟು ಕಟ್ಟಿ

ತಾ ನನ್ನ ಕೈಗೆ

ತಂಗಿ ತಾ ನನ್ನ ಕೈಗೆ

ಎಂದು ಹೇಳಿ ಉಪಾಯವಾಗಿ ಬಿಚ್ಚಿಸಿ ಇಟ್ಟುಕೊಳ್ಳುತ್ತಾನೆ. ಕೆಟ್ಟ ಮಾತುಗಳನ್ನು ಆಡುವುದಾಗಲೀ, ಮಾನಭಂಗ ಮಾಡುವ ಪ್ರಸಂಗವಾಗಲಿ ಇಲ್ಲಿ ಬರುವುದಿಲ್ಲ. ಆದರೆ, ಅವಳನ್ನು ಕೊಲ್ಲಲು ಮುಂದಾಗುವುದು, ತಾನೇ ಹಾವು ಕಚ್ಚಿ ಸಾಯುವುದು, ಮತ್ತೆ ಶಿವನ ಕರುಣೆಯಿಂದ ಅಣ್ಣನನ್ನು ಪಡೆಯುವುದು ಇದೆಲ್ಲ ಒಂದೇ ರೀತಿ ಇದೆ. ತಂದೆ ತಾಯಿಗಳಿಗೆ, ಅತ್ತೆ - ಮಾವಂದಿರಿಗೆ ಹೇಳಬೇಡವೆಂದು ಭಾಷೆಯನ್ನು ತೆಗೆದುಕೊಳ್ಳುವ, ಅತ್ತಿಗೆಗೆ ಒಡವೆ ವಸ್ತ್ರಗಳನ್ನು ಬಿಚ್ಚಿಕೊಡುವ, ಸಂದರ್ಭಗಳು ಇಲ್ಲಿ ಬರುವುದಿಲ್ಲ. ಅದಕ್ಕೆ ಬದಲಾಗಿ -

ತಂದೆ ತಾಯಿ ಮುಂದೆ ನಿಂತು

ಒಂದೊಂದ ಹೇಳಿದಳು

ಬರುವ ವರ್ಷಕ್ಕೆ ಬರುವುದಿಲ್ಲ

ಕಳುಹ ಬೇಡಿರಿ

ಕರೆಯಲು ಅಣ್ಣನ ಕಳುಹಬೇಡಿರಿ

ಅಣ್ಣ ಮಾಡಿದ ಗಾತುಕತನವ

ಎಷ್ಟೆಂದು ಹೇಳಲಿ

ನಾನು ಎಷ್ಟೆಂದು ಹೇಳಾಲಿ

ನೀವು ಮಾಡಿದ ದಾನ ಧರ್ಮಕೆ

ಪ್ರಾಣ ಉಳಿದೀತು

ಅಣ್ಣನ ಪ್ರಾಣ ಉಳಿದೀತು

ನಮ್ಮ ನಿಮ್ಮ ಋಣವು ಈಗ

ಇಲ್ಲಿಗೆ ತೀರೀತು

ತಾಯಿ ಇಲ್ಲಿಗೆ ಎರವಾಯ್ತು

ಬರುವ ವರ್ಷಕೆ ಬರುವುದಿಲ್ಲ

ಕಳುಹಲು ಬೇಡಿರಿ

ಅಣ್ಣನ ಕಳುಹಲು ಬೇಡಿರಿ

ಎಂದು ತಂದೆ - ತಾಯಿಗಳಿಗೆ ಹೇಳಿ ಗಂಡನ ಮನೆಗೆ ಹೊರಟು ಹೋಗುತ್ತಾಳೆ. ಶಿವನು ಬಂದು ಕೈಲಾಸಕ್ಕೆ ಕರೆದುಕೊಂಡು ಹೋಗುವ ಸನ್ನಿವೇಶವೂ ಇಲ್ಲಿ ಬರುವುದಿಲ್ಲ.

*   *   *   *   *

ಮತ್ತೊಂದು ಪಾಠವೂ ಇವೆರಡರಿಂದಲೂ ಭಿನ್ನವಾಗಿದೆ : ಇದರಲ್ಲಿ ಮೇಲಿನ ಎರಡು ಪಾಠಗಳಿಗಿಂತ ವರ್ಣನೆ, ವಿವರಣೆ ಹೆಚ್ಚಾಗಿದ್ದರೂ ಅಣ್ಣ ಬಂದು ತಂಗಿಯನ್ನು ದೀಪಾವಳಿಗೆ ಕರೆದು, ಅಲ್ಲಿಂದ ಹೊರಡುವವರೆಗೂ ಯಾವ ವ್ಯತ್ಯಾಸವೂ ಇಲ್ಲ. ಆದರೆ, ಮುಂದೆ ಕಾಡುದಾರಿಯನ್ನು ಅಣ್ಣ ಹಿಡಿದಾಗ, ತಂಗಿ ಆ ಬಗ್ಗೆ ಪ್ರಶ್ನಿಸಿದಾಗ - ದಾರಿ ತಪ್ಪಿತೆಂದು ಸುಳ್ಳನ್ನೇ ಹೇಳಿದರೂ, ಮುಂದೆ ನಡೆಯುವ ಘಟನೆಗಳಲ್ಲೂ ಹೆಚ್ಚಾಗಿ, ನಾಗೇಗೌಡರು ಸಂಗ್ರಹಿಸಿಕೊಟ್ಟಿರುವ ಪಾಠವನ್ನೇ ಹೋಲುತ್ತವೆ. ಇಲ್ಲಿಯೂ ಅಣ್ಣ ಅಷ್ಟೇ ಕ್ರೂರಿಯಾಗಿ ಕಂಡು ಬರುತ್ತಾನೆ. ಮಾನಭಂಗ ಮಾಡಲೂ ಮುಂದಾಗುತ್ತಾನೆ. ಅವಳನ್ನು ಕೊಲ್ಲಲು ಮುಂದಾಗುವ, ಹಾವು ಅವನನ್ನೇ ಕಚ್ಚುವ, ಅಣ್ಣನನ್ನು ಬದುಕಿಸಿಕೊಳ್ಳುವ ಪ್ರಸಂಗಗಳು ಇಲ್ಲಿಯೂ ಬರುತ್ತವೆ. ~~ಅಣ್ಣನ ಮೇಲೆ~~ ದೂರನ್ನು ಹೇಳುವ ಪ್ರಸಂಗ ಇಲ್ಲಿ ಬರದಿದ್ದರೂ ಹಿಂತಿರುಗಿ ಹೋಗುವಾಗ ಅಣ್ಣನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವ ಇಚ್ಛೆಯಿಲ್ಲದಿರುವುದು ವ್ಯಕ್ತವಾಗುತ್ತದೆ.

ಅಣ್ಣನ ಜೊತೆಯಲಿ ಹೋದರೆ ಕಾಡುದಾರೀಲಿ ಹೋಗುತಾನೆ

ಊರು ದಾರಿ ಬಿಡುತಾನೆ ಕಾಡುದಾರೀಲಿ ಹೋಗುತಾನೆ

ಕಾಡಿನಲ್ಲಿ ಕಲ್ಲುಮುಳ್ಳು ತುಳಿಯಲಾರೆ ನಮ್ಮಪ್ಪ

ನೀನು ಆದರೆ ಬೇಗ ಬೇಗ ಕರೆಕೊಂಡಾದರೂ ಹೋಗಪ್ಪ

ಎನ್ನುವಲ್ಲಿ ಈ ಅಂಶವನ್ನು ಗುರುತಿಸಬಹುದು. ಕೈಲಾಸಕ್ಕೆ ಕರೆದುಕೊಂಡು ಹೋಗುವ ಪ್ರಸಂಗ ಇಲ್ಲಿಯೂ ಬರುವುದಿಲ್ಲ.

ಚೌಡಿಕೆ ಸಂಪ್ರದಾಯದವರು ಹಾಡುವ 'ಅಣ್ಣ - ತಂಗಿ', ದೊಂಬಿದಾಸರು ಹಾಡುವ ಹಾಡ್ಗತೆಗಿಂತ ಸಂಪೂರ್ಣ ಬೇರೆಯಾದುದು. ಇಲ್ಲಿ ಆರಂಭದಿಂದ ಅಂತ್ಯದವರೆವಿಗೂ, ಎಲ್ಲ ಸಂದರ್ಭಗಳೂ ಬೇರೆ ಬೇರೆಯಾಗಿಯೇ ಬರುತ್ತವೆ. ಚೌಡಿಕೆ ಕಾವ್ಯದಲ್ಲಿ ಬರುವ ಅಣ್ಣ - ತಂಗಿಯರ ಕಥೆ ಹೀಗಿದೆ

ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದನೆಂಬ ಕಾರಣದಿಂದ ಹುಟ್ಟುತ್ತಲೇ ತಂದೆ ತಾಯಿಗಳು ದೂರ ಮಾಡಿದ್ದ ಅಣ್ಣನ ಗುರುತನ್ನು ಹಿಡಿದ ತಂಗಿ ಮಾತನಾಡಿಸಿ, ಅಂಬಿಗ, ಅಣ್ಣನನ್ನು ಹೊಳೆ ದಾಟಿಸುವಂತೆ ಕೇಳಿಕೊಳ್ಳುತ್ತಾಳೆ. 'ಅಣ್ಣ' ಎಂದು ಸಂಭೋದಿಸಿದ ಅವಳನ್ನು ಕುರಿತು :

ಕೇಳೆ ಕೇಳೆ ಸೀಲವಂತರ್ಹೆಣ್ಣೆ

ಮಾತು ಮಾತು ಇದ್ದಗೆ ನೀನು

ಯಣ್ಣ ಯಪ್ಪ ಅನ್ನಲಿ ಬೇಡ
ನನ್ಗೆ ನಿಮ್ಮಪ್ಪ ಮಾವಾಗಬೇಕು
ನನ್ಗೆ ನಿಮ್ಮವ್ವ ಅತ್ತ್ಯಾಗಬೇಕು
ನನ್ಗೆ ನಿಮ್ಮಕ್ಕಾರು ಅತಿಗಾಗಬೇಕು
ನಿಮ್ಮಾಣ್ಣರು ಬಾಮ್ಮೈದ್ರು ಕಾಣೆ

ಕನ್ನೆ ಪ್ರಾಯ್ದ ಬಾಲೆ !

ಎಂದು ಹೇಳುತ್ತಾನೆ. 'ತಂಗಿ ಮೇಲೆ ಅಣ್ಣನು ಕಾಮಿಸದುಂಟ' - ಬೇಡ ಅಣ್ಣ ಎಂದು ಅಂಗಲಾಚುತ್ತಾಳೆ. ಆದರೆ, ಅವನು ಅದಕ್ಕೆ ಕಿವಿಗೊಡುವುದಿಲ್ಲ. ಬದಲಾಗಿ ಅವಳ ಗಂಡನ ಒಂದೊಂದು ಅಂಗವನ್ನೂ ಜರಿದು, ತನ್ನೊಂದಿಗಿರುವಂತೆ ಪ್ರೇರೇಪಿಸುತ್ತಾನೆ. ಆದರೆ, ಅದಕ್ಕೆ ಬದಲಾಗಿ ಅವಳು ಅಣ್ಣನಿಗೆ ಬೇರೆ ಆಸೆಯನ್ನು ಹುಟ್ಟಿಸುತ್ತಾಳೆ -

ತಂಗಿ ಮೇಲೆ ಮನಸಿಡಬೇಡ
ನಾಲ್ಕು ರಾಜ್ಯವ ತಿರ್‍ಗೀ ನಾನು
ಕನ್ನಡಿಗೆ ಕಡುಜಾಣೆ ತಂದು
ಬಿದಿರೆಗಳ ಚದುರೆಯ ತಂದು
ನನ್ನ ರೂಪಿನ ಪಟವಾನೆ ತಿದ್ದಿ
ಗ್ವಾಡೆ ಮೇಗಲು ಚಿತ್ತಾರ ಬರೆದು
ಚಿತ್ತುರದ ಗೊಂಬೇಯ ತಿದ್ದಿ
ನಿನ್ನ ಕೈಗೆ ನಾ ಕೊಡುತೀನಿ
ಬಳೆಯ ಬಂಗಾರವೆಲ್ಲ ಹುಡಿಸಿ
ಸೀರೆ ಕುಪ್ಪಸ ಎಲ್ಲಾ ತೊಡಿಸಿ
ಒಪ್ಪ ಲಗ್ನವ ನಿನಗೆ ಮಾಡುತೀನಿ

ನಮ್ಮಣ್ಣ ಕೇಳೋ !

ಎಂದು ಅಣ್ಣನನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ, ಅವನು ಅಷ್ಟಕ್ಕೆ ಬಗ್ಗುವವನಲ್ಲ -

ಚಿತ್ತಾರದ ಗೊಂಬೆಯ ಒಲ್ಲೆ
ನಿನ್ನ ಮಂಡೆ ಕೂದಲ ಬರಬಾರಿ ಬಂದಾರೆನೆ
ಎಲ್ಲೆಲ್ಲೋದರೆ ನಿನುಗಂಡ ನಾನೆ ಕಾಣೆ

ಕನ್ನಪ್ರಾಯ್ದ ಬಾಲೆ

ಕಾಲು ನೋಡೆ ಕದಿಲೀಯ ಕಂಬ

ತೋಳು ನೋಡೆ ಬಾಳೇಯ ದಿಂಡು

ಬೆನ್ನು ಸೋಡೆ ಚಿತ್ರದ ಹಲಗೆ

ಹುಬ್ಬು ನೋಡು ಚಂದ್ರನ ರೇಖೆ

ಕಣ್ಣು ನೋಡು ಗಜನಿಂಬೆ ಹಣ್ಣು

ಮೂಗು ನೋಡು ಸಂಪಿಗೆ ಎಸಳು

ಎಂದು ಅವಳ ಒಂದೊಂದು ಅಂಗವನ್ನು ಬಣ್ಣಿಸುತ್ತಾನೆ. ಅವಳ ಯಾವ ಬುದ್ಧಿವಾದವೂ ಅವನಿಗೆ ಹಿತವೆನಿಸುವುದಿಲ್ಲ. ಸಂಜನಗೂಡಿಗೆ ಹೋಗಿ, ದೇವರ ಹರಕೆಯನ್ನು ತೀರಿಸಿ ಬರಬೇಕೆಂದು ಹೇಳಿ, 'ನಾಳೆ ಬರುವಾಗ ಇಲ್ಲಿಯೇ ಬರುತೀನಣ್ಣ' - ನಮ್ಮಣ್ಣ ಕೇಳೋ ಎಂದು ಆಸೆಯನ್ನು ಹುಟ್ಟಿಸುವ ಉಪಾಯವನ್ನು ಹೂಡುತ್ತಾಳೆ. ಅದಕ್ಕೂ ಅಣ್ಣ ಜಗ್ಗುವುದಿಲ್ಲ ; ಕೊನೆಗೆ ಗಂಗಮ್ಮನ ಪೂಜೆಯ ಮಾಡಿ ನಿನ್ನ ವಾಸ ನಾನಾಗುತೀನಿ' ಎಂದು ಹೇಳಿ ಗಂಗೆ ಪೂಜೆಯನ್ನು ಮಾಡಿ - 'ಧರ್ಮ ಕರ್ಮ ನಿಮ್ಮೊಳಗಿಲುವೇನಮ್ಮ ಜಲಧಿ ಗಂಗಮ್ಮ ತಾಯಿ !' ಎಂದು ಗಂಗೆಯ ಮೇಲೆ ಭಾರ ಹಾಕುತ್ತಾಳೆ. ಕೊನೆಗೆ ಅವನು ಮೈ ಕೈ ಮುಟ್ಟಲು ಮುಂದಾದಾಗ ಹೊಳೆಗೆ ಹಾರಿಕೊಳ್ಳುತ್ತಾಳೆ. ಹಾರಿದ ಕೂಡಲೇ -

ಅತ್ತಲ್ಗಂತೆ ಅತ್ತಾದಳಣ್ಣ

ಇತ್ತಲ್ಗಂತೆ ಇತ್ತಾದಳಣ್ಣ

ನಟ್ಟ ನಡುವೇಲಿ ಗಂಗಮ್ಮ ತಾಯಿ

ಮಾರ್ಗವನ್ನೆ ಬಿಡುತಾಳಲ್ಲೊ

ಜಲಧಿ ಗಂಗಮ್ಮ ತಾಯಿ !

ಆಚೆ ದಡದಲ್ಲಿ ತಂಗ್ಯಾದಳಣ್ಣ

ಈಚೆ ದಡದಲ್ಲಿ ಅಣ್ಣಾದನಂತೆ

ಶೀಲವಂತರ್ಹೆಣ್ಣು ಹೋಗುತಾಳೊ

ಪತಿವ್ರತೆ ಬಾಲೆ !

ನೀರಿಗೆ ಹಾರಿದ ಆ ಹೆಣ್ಣನ್ನು ರಕ್ಷಿಸಲು ಗಂಗೆ ಮುಂದಾಗುತ್ತಾಳೆ. ಅಣ್ಣ - ತಂಗಿಯರು ಬೇರೆ ಬೇರೆಯಾಗುವಂತೆ ನೀರನ್ನೇ ಇಬ್ಭಾಗವಾಗಿಸುತ್ತಾಳೆ. ಅಣ್ಣ - ತಂಗಿಯರು ಬೇರೆ ಬೇರೆ ದಡದಲ್ಲಿ ಉಳಿಯುತ್ತಾರೆ. ಇನ್ನು ಅವಳು ನನಗೆ ದಕ್ಕುವುದಿಲ್ಲವೆಂದು ಬಗೆದು ಆ ದಡಕ್ಕೆ ಹಾರಲು ಹೋಗಿ ಯಾವ ದಡವನ್ನೂ ಸೇರಲಾಗದೆ -

ತೇಲುತಾನೆ ಮುಳುಗುತಾನೆ

ಗುಟುಕು ನೀರ ಕುಡಿಯುತಾನೆ

ಕೊಚ್ಚಿಂಗೆ ತಾನೆ ಹೋಗುತಾನೆ

ಅನ್ಯೆಕಾರ ಪಾಪಿ

ನೀರಿನಲ್ಲಿ ಹೀಗೆ ತೇಲಿಕೊಂಡು ಹೋಗುತ್ತಾನೆ. ಆಗಲೂ ಅಣ್ಣನಿಗಾಗಿ, ಗಂಗೆಯಲ್ಲಿ ತಂಗಿಯ ಪ್ರಾರ್ಥನೆ ಕರುಳು ಮಿಡಿಯುತ್ತದೆ :

ಕೇಳು ಕೇಳೆ ಗಂಗಮ್ಮ ತಾಯಿ
ಕಲ್ಲು ಮುಳ್ಳಿಗಾಕಲಿ ಬೇಡ
ಮುಳ್ಳು ಕಲ್ಲೀಗಾಕಲಿ ಬೇಡ
ನಟ್ಟ ನಡುವೇಲಿ ನಮ್ಮಣ್ಣನನ್ನು
ತಕ್ಕಂಡೆ ಹೋಗೆಯಮ್ಮ
ಜಲಧಿ ಗಂಗಮ್ಮ ತಾಯಿ !

ಹೀಗೆಂದು ಪ್ರಾರ್ಥಿಸಿ ಗಂಡನ ಮನೆಗೆ ಹಿಂದಿರುಗುತ್ತಾಳೆ. ಅತ್ತೆ - ಮಾವಂದಿರಿಗೆ ನಮಸ್ಕರಿಸಿ, ಗಂಡನ ಪಾದಕ್ಕೆ ನಮಸ್ಕರಿಸಲು ಹೋದಾಗ ಅವನು :

ನಿಲ್ಲುನಿಲ್ಲೇ ಪರಮ ಗಯ್ಯಾಳಿ
ಅಣ್ಣನಿಗೆ ಸೆರಗಾಸಿದ್ದೀಯ
ನೀನು ನನ್ನ ಮುಟ್ಟಬೇಡ

ಎಂದು ದೂರ ತಳ್ಳುತ್ತಾನೆ. ಆದರೆ, ಅವನಿಗೆ ಬಂದಿದ್ದ ಕುಷ್ಠರೋಗ ಇವಳ ಸ್ಪರ್ಷದಿಂದ ನಿವಾರಣೆಯಾಗಲು ಇವಳ ಪಾತಿವ್ರತ್ಯ ಉಳಿದಂತಾಗುತ್ತದೆ. ಪತಿಗೆ ಇವಳ ಮೇಲಿನ ನಂಬಿಕೆ ಉಳಿಯುತ್ತದೆ. ಇದೂ ಕೂಡ ಶಿವನಿಂದಲೆ ಆಗಿದ್ದ ವ್ಯವಸ್ಥೆ.

* * * * *

ಈ ಹಾಡ್ಗತೆಗೆ ಸಂಬಂಧಿಸಿದ ಈ ನಾಲ್ಕು ಪಾಠಾಂತರಗಳನ್ನು ಗಮನಿಸಿದಾಗ, ಮೊದಲ ಮೂರು ಪಾಠಗಳಲ್ಲಿ ಕೆಲವು ವ್ಯತ್ಯಾಸಗಳು ಕಂಡು ಬರುವಂತೆಯೇ ಹಲವು ಸಾಮ್ಯಗಳೂ ಇರುವುದು ಗಮನಾರ್ಹ. ಅಣ್ಣ, ತಂಗಿಯನ್ನು ದೀಪಾವಳಿ ಹಬ್ಬಕ್ಕೆ ಕರೆದುಕೊಂಡು ಹೋಗಲು ಬರುವುದು, ತಂಗಿ ಅಣ್ಣನ ಬರುವಿಗೆ ಆಸೆಯಿಂದ ಕಾಯುತ್ತಿರುವುದು ಮೂರು ಪಾಠಗಳಲ್ಲಿಯೂ ಒಂದೇ ಆಗಿ ಕಂಡು ಬರುತ್ತದೆ. ನಂತರದ ಘಟನೆಗಳ ನಿರೂಪಣೆಯಲ್ಲಿ ವ್ಯತ್ಯಾಸಗಳು ಕಾಣಿಸಿಕೊಂಡು ಪಾಠ ಭೇದಗಳನ್ನು ಹೆಚ್ಚಿಸಿವೆ. ಅಣ್ಣನ ಕ್ರೂರವರ್ತನೆ ಇಲ್ಲಿಯ ಮೊದಲ ಹಾಗೂ ನಾಲ್ಕನೆಯ ಪಾಠಗಳಲ್ಲಿ ದಟ್ಟವಾಗಿ ಕಾಣಬರುತ್ತದೆ. ಆದರೆ, ನಾಲ್ಕು ಪಾಠಗಳಲ್ಲಿಯೂ ತಂಗಿಯ ಅಪರಿಮಿತವಾದ ಪ್ರೇಮ, ವಾತ್ಸಲ್ಯ ಅಷ್ಟೇ ದಟ್ಟವಾಗಿ ಅಣ್ಣನ ಮೇಲಿರುವುದು ಗಮನಾರ್ಹ. ತನ್ನ ಪ್ರಾಣವನ್ನೂ, ಶೀಲವನ್ನೂ ಕಳೆಯಲು ಬಂದ ಅಣ್ಣನ ಮೇಲೆ ಆಕೆ ಇನ್ನಿಲ್ಲದ ಮಮತೆಯನ್ನು ತೋರುತ್ತಾಳೆ. ಸತ್ತ ಅಣ್ಣನನ್ನು ಬದುಕಿಸಿಕೊಳ್ಳುವುದನ್ನು ಇಲ್ಲಿ ಮೊದಲ ಮೂರು ಪಾಠಗಳಲ್ಲಿ ಕಾಣುತ್ತೇವೆ. ಹೆಂಡತಿಯ ಮುಂದೆ, ತಂದೆ - ತಾಯಿಗಳ ಮುಂದೆ, ಕೊನೆಗೆ ಸಾಕ್ಷಾತ್ ಭಗವಂತನ ಮುಂದೆಯೂ ಅಣ್ಣನ ಮರ್ಯಾದೆಯನ್ನು ಉಳಿಸಲು ತಂಗಿ ಸುಳ್ಳು ಹೇಳುವುದನ್ನು ಗಮನಿಸುತ್ತೇವೆ. ಚೌಡಿಕೆ ಸಂಪ್ರದಾಯದಲ್ಲಿ ಬರುವ ಇಲ್ಲಿಯ ನಾಲ್ಕನೆಯ ಪಾಠವಾದ 'ಅಣ್ಣ - ತಂಗಿ' ಮೊದಲ ಮೂರು ಪಾಠಗಳಿಗಿಂತ ಬೇರೆಯಾಗಿ ಕಂಡರೂ, ಆ ಮೂರು ಪಾಠಗಳಲ್ಲಿ ಕಂಡು ಬರುವ 'ಧನಕನಕ' ವಸ್ತುಗಳಿಗೆ ಬದಲಾಗಿ ಇಲ್ಲಿ

'ಕಾಮ' ಪ್ರಧಾನವಾಗಿ ಕಂಡು ಬರುತ್ತದೆ. ಮೊದಲ ಮೂರು ಪಾಠಗಳ ಕಥೆಯೂ ಸುಖಾಂತವಾಗಿದ್ದರೆ, ಇದು ದುःಖಾಂತವಾಗಿರುವುದು ಗಮನಾರ್ಹ. ಇದು ದುರಂತದಲ್ಲಿ ಕೊನೆಗೊಳ್ಳುತ್ತದೆ. ಅಣ್ಣನ ಸ್ವಾರ್ಥ, ಕ್ರೌರ್ಯ, ದೌರ್ಜನ್ಯ, ತಂಗಿಯ ನಿರ್ವಿಕಾರ ಪ್ರೇಮ, ವಾತ್ಸಲ್ಯ, ಅಭಿಮಾನ ಇವುಗಳ ನಡುವಣ ಹೋರಾಟದಂತೆ ಕಂಡು - ನಿರ್ವಿಕಾರ ಪ್ರೇಮ, ವಾತ್ಸಲ್ಯಕ್ಕೆ ಜಯ ಎಂಬುದನ್ನು ಇಲ್ಲಿ ಮನಗಾಣುತ್ತೇವೆ. 'ಹಾಡ್ಗತೆಗಳ'ಲ್ಲಿಯೇ ಬರುವ 'ಸತ್ಯವಂತೆ ನಾಗಮಣಿ' ಮೊದಲ ಮೂರು ಪಾಠಗಳನ್ನು ಹೆಚ್ಚಾಗಿ ಹೋಲುತ್ತದೆ.

ಕರುಳನ್ನು ಹಿಂಡಿ ಕಣ್ಣೀರನ್ನು ಕರೆಯುವಂತೆ ಕಲಾವಿದರ ಪ್ರತಿಭಾ ಮೂಸೆಯಲ್ಲಿ ಮೂಡಿಬರುವ ಈ 'ಹಾಡ್ಗತೆ' ಇಂದಿಗೂ ಜನಪ್ರಿಯವಾಗಿ ಎಲ್ಲೆಡೆಯೂ ಹರಡಿ ಕೊಂಡಿದೆ. ಹಾಗಾಗಿಯೇ ಇದರ ಹಲವಾರು ಪಾಠಾಂತರಗಳು ದೊರೆಯಲು ಕಾರಣವಾಗಿರುವುದು.

೨

ಇಲ್ಲಿಯ ಎರಡನೆಯ ಹಾಡ್ಗತೆ - 'ಬಂಜೆ ಹೊನ್ನಮ್ಮ'. ಬಂಜೆತನದ ನಿಷ್ಫಲತೆಯನ್ನು ನಿರೂಪಿಸುವ ಕರುಣಾಜನಕ ಕಥೆ. ತಾಯ್ತನದ ಮಹತ್ವ, ಬಂಜೆತನದ ಹೀನತೆ - ಇವುಗಳ ಚಿತ್ರಣ ಕಲಾವಿದನ ಪ್ರತಿಭಾ ಮೂಸೆಯಲ್ಲಿ ಮನಮುಟ್ಟುವಂತೆ ಮೂಡಿಬಂದಿವೆ. ವೃತ್ತಿಗಾಯಕರೂ, ಸಾಮಾನ್ಯ ಗಾಯಕರೂ ಹಾಡುವ ಈ ಹಾಡ್ಗತೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯೂ ದೊರೆಯುವುದಲ್ಲದೆ ಬೇರೆ ಬೇರೆ ಪಾಠಗಳೂ ದೊರಕುತ್ತವೆ. ಪ್ರಸ್ತುತ ಲೇಖನದಲ್ಲಿ ಆರು ಅಂತಹ ಪಾಠಗಳನ್ನು ಗಮನಿಸಿದ್ದು ಆರೂ ಗಮನಾರ್ಹ ರೀತಿಯಲ್ಲಿ ಪಾಠ ಭೇದಗಳನ್ನು ಹೊಂದಿರುವುದು ಗಮನೀಯ.

ಎಚ್. ಎಲ್. ನಾಗೇಗೌಡರ 'ಪದವವೆ ನಮ್ಮ ಎದೆಯಲ್ಲಿ' ಸಂಕಲನದಲ್ಲಿಯೇ ಇದರ ಮೂರು ಪಾಠಗಳು ದೊರೆಯುತ್ತವೆ. ಮೊದಲನೆಯದು - ದೊಂಬಿ ದಾಸರಿಂದ ಸಂಗ್ರಹಿಸಿದ 'ಬಂಜೆ ಹೊನ್ನಮ್ಮ'. ಎರಡನೆಯದು ದೊಂಬಿದಾಸರ ಹೆಣ್ಣು ಗಾಯಕಿಯಿಂದ ಸಂಗ್ರಹಿಸಿದ - 'ಬಾಳುಗಂಚಿ ಬಂಜೆ ಹೊನ್ನಮ್ಮ', ಮೂರನೆಯದು ಸಾಮಾನ್ಯ ಗಾಯಕಿಯಿಂದ ಸಂಗ್ರಹಿಸಿದ 'ಮಕ್ಕಳಿಲ್ಲದ ಬಂಜೆ ಹೊಕ್ಕಳು ನಂಜನಗೂಡ'.

ಇಲ್ಲಿ ಮೊದಲನೆಯ ಪಾಠದ ಕಥೆಯನ್ನು ಸಂಗ್ರಹಿಸಿಕೊಟ್ಟು, ಉಳಿದವುಗಳನ್ನು ಅದರೊಂದಿಗೆ ತೌಲನಿಕವಾಗಿ ಗಮನಿಸಲಾಗಿದೆ.

ಏಳು ಜನ ಹೆಣ್ಣು ಮಕ್ಕಳಲ್ಲಿ ಕೊನೆಯವಳು ಹೊನ್ನಮ್ಮ. ಆರು ಜನ ಅಕ್ಕಂದಿರೂ ಮಕ್ಕಳನ್ನು ಪಡೆದು ಗಂಡನ ಮನೆಯಲ್ಲಿ ಸುಖವಾಗಿದ್ದಾರೆ. ಆದರೆ ಹೊನ್ನಮ್ಮನಿಗೆ ಮಾತ್ರ ಮಕ್ಕಳಾಗದೆ ಬಂಜೆ ಎನಿಸಿಕೊಂಡು ಹೀನ ಬಾಳನ್ನು ಬಾಳುವಂತಾಗಿದೆ. ಮಕ್ಕಳಿಗಾಗಿ ಶಿವನನ್ನು ಕಾಡಿದ್ದಾಳೆ, ಬೇಡಿದ್ದಾಳೆ. ಕೊನೆಗೆ ಕೋಪದಿಂದ ಸಿಡಿದಿದ್ದಾಳೆ, ಮಿಡಿದಿದ್ದಾಳೆ. ಅಕ್ಕಂದಿರೂ ಅವಳ ದರ್ಶನ ಪಡೆಯಲು ಇಚ್ಛಿಸುವುದಿಲ್ಲ. ಕೆರೆ, ಕಟ್ಟೆ, ಭಾವಿ, ಮರ, ಗಿಡ, ಬಳ್ಳಿಗಳೂ ಅವರ ಸ್ಪರ್ಶದಿಂದ ದೂರಾಗುತ್ತವೆ. ಸಾಯುವುದಕ್ಕೂ ಅವಕಾಶವಾಗದೆ, ಬದುಕುವುದಕ್ಕೂ ಸಾಧ್ಯವಾಗದೆ ಭೂಲೋಕದಲ್ಲಿಯೇ ನರಕಯಾತನೆಯನ್ನು ಅನುಭವಿಸುತ್ತಾಳೆ. ಶಿವನನ್ನು ಎಡೆಬಿಡದೆ ಪ್ರಾರ್ಥಿಸುತ್ತಾ ಬಂದಳು. ಬಂಜೆಂಬ ಶಬ್ದವನ್ನು ತೊಲಗಿಸಿಕೊಳ್ಳಲು ಶಿವನಲ್ಲಿ -

ಕುಂಟನಾದರು ಶಿವರಾಯ

ಕುರುಡನಾದರು ಶಿವರಾಯ

ಹೆಡ್ಡನಾಗಲೊ ಶಿವರಾಯ

ಹೆಳವನಾಗಲೊ ಶಿವರಾಯ

ಈವತ್ತು ಹುಟ್ಟಲೊ

ನಾಳೀಕೆ ಸಾಯಲೊ

ಬಂಜೆ ಎನಿಸಿಕೊಂಡು ನಾನು

ಬಾಳಲಾರೆ ಧರೆಯಲ್ಲಿ

ಎಂದು ಪ್ರಾರ್ಥಿಸಿ ಶಿವನಲ್ಲಿ ಗೋಳಿಟ್ಟಿದ್ದಾಳೆ. ಸಕಲ ಪ್ರಾಣಿ, ಪಕ್ಷಿ, ವೃಕ್ಷಗಳಿಗೆ ಸಂತಾನ ಫಲ ಕೊಟ್ಟಿದ್ದೀಯ ಶಿವನೆ, ನನಗೇಕೆ ಕೊಟ್ಟಿಲ್ಲ ? ಎಂದು ಪ್ರಶ್ನಿಸಿದ್ದಾಳೆ.

ಬಂಜೆ ಹೊನ್ನಮ್ಮ ಭೂಲೋಕದಲ್ಲಿ ಬದುಕಿದ್ದೂ ಹೆಣದಂತಾಗುತ್ತಾಳೆ. ಅವಳ ಬಾಳೂ ಬರಡಾಗುತ್ತದೆ. ಅವಳು ಮುಟ್ಟಿದ್ದೆಲ್ಲ ಮಣ್ಣು, ಸರ್ವನಾಶ, ನೆರೆಹೊರೆಯವರಿರಲಿ, ಒಡಹುಟ್ಟಿದ ಅಕ್ಕಂದಿರು, ಕೊನೆಗೆ ಹೆತ್ತ ತಾಯಿಗೂ ಅವಳು ಬೇಡವಾಗುತ್ತಾಳೆ -

ಹೆತ್ತಂತ ತಾಯಿತಂದೆ

ಕೆಟ್ಟ ಮಾತುಗಳಾಡ್ಯಾರೆ

ಅಯ್ಯೊ ಅಯ್ಯೊ ಗೊಡುಮುಂಡೆ

ನೀನ್ಯಾಕೆ ಬಂದೆ ನಮ್ಮನೆಗೆ ?

ಹೊಟ್ಟೇಲಿ ಮಕ್ಕಿಲ್ಲ

ಕೊಳದಲ್ಲಿ ನೀರಿಲ್ಲ

ಇಂತ ಪಾಪಿಗೇಡಿ ಗೊಡುಮುಂಡೆ

ನಮ್ಮನಿಗೆ ಬರಬ್ಯಾಡ

ಹೆತ್ತಂತ ತಾಯಿತಂದೆ

ಕತ್ತಿಡಿದು ನೂಕಿದರು

ನೊಂದು ಬೆಂದು ನಿರಾಶಳಾದ ಹೊನ್ನಮ್ಮ, ಮಕ್ಕಳನ್ನು ತೋರಿಸದೆ ಮರೆ ಮಾಡಿದ ಅಕ್ಕಂದಿರ ಮೇಲಿನ ಕೋಪದಲ್ಲಿ ಅಕ್ಕನ ಮಕ್ಕಳಿಗೆ -

ಕ್ಯಾಸೆಲ್ಲಿರೋ ಮಕ್ಕಳು

ಕೊಳೆತೇ ಹೋಗಲೋ ಜಗದೀಶ

ಸಾವೆಲ್ಲಿರೋ ಮಕ್ಕಳು ಜಗದೀಶ

ಹುತ್ತವಾಗಿ ಬೆಳೆಯಾಲೊ

ಬೀದಿಲ್ಲಾಡೋ ಮಕ್ಕಳು

ಸಂತೋಷದಿಂದ ಸಲಿಯಾಲೊ

ಎಂದು ಶಾಪವಿತ್ತು ಹುಚ್ಚಿಯಂತೆ ವರ್ತಿಸುತ್ತಾಳೆ. ಬೇಕಾದ ಬೇಡವಾದ ಕಡೆಗಳಲ್ಲೆಲ್ಲ ಅಲೆಯುತ್ತಾಳೆ. ಸಾಯುವುದಕ್ಕೂ ದಾರಿ ಕಾಣದೆ ದಿಕ್ಕೆಟ್ಟು ತಿರುಗುತ್ತಾಳೆ. ಅತ್ತೆ ಮಾವ ಗಳಿಸಿದ್ದ ಆರು ಕೋಟಿ ಹಣದಲ್ಲಿ ತಂದೆ ತಾಯಿ ಗಳಿಸಿದ್ದ ಮೂರು ಕೋಟಿ ಹಣದಲ್ಲಿ ದಾನಧರ್ಮ ಮಾಡುತ್ತಾಳೆ. ಯಾವುದೂ ಪ್ರಯೋಜನಕ್ಕೆ ಬರುವುದಿಲ್ಲ. ಅವಳ ಬಂಜೆತನ ನೀಗುವುದಿಲ್ಲ. ಅವಳ ಹೊಯ್ದಾಟ ತೊಳಲಾಟ ಬಳಲಾಟವನ್ನು ನೋಡಲಾರದೆ ಕೊನೆಗೆ ಶಿವ ಕಾಣಿಸಿಕೊಳ್ಳುತ್ತಾನೆ -

ನಿನ್ನ ಸತ್ಯಾಕೆ ಮೆಚ್ಚಿರುವೆ

ಭಾಗ್ಯನಾದರು ಕೊಟ್ಟಿರುವೆ

ಪುತ್ರ ಭಾಗ್ಯವ ಕೊಟ್ಟೇನು

ನೀ ಬದುಕುಹೋಗೆ ಹೊನ್ನಮ್ಮ

ಎಂದು ಆಶೀರ್ವದಿಸಿ ಕಳುಹಿಸುತ್ತಾನೆ. ಅದರಂತೆ ಹೊನ್ನಮ್ಮ ಮುತ್ತಿನಂತ ಏಳು ಹೆಣ್ಣು ಮಕ್ಕಳನ್ನು ಪಡೆದಿದ್ದಾಳೆ. ಮಕ್ಕಳು ಹುಟ್ಟಿದ ಮೂರೇ ದಿನಕ್ಕೆ ಹೊನ್ನಮ್ಮನ ಧರ್ಮ ಕರ್ಮವನ್ನು ತಿಳಿಯಬೇಕೆಂದು ಹುಟ್ಟಿದಂತಹ ಮಕ್ಕಳಿಗೆ ಶಿವನು -

ಕಜ್ಜಿ ಕುರ ಕೊಟ್ಟವನೆ

ಕಜ್ಜಿ ಕುರ ಕಂಡವಳೆ

ಅಸಹ್ಯವನ್ನೆ ಪಟ್ಟವಳೆ

ತೂಗಡಿಸಿ ತೂಗಡಿಸಿ

ಏಳು ಮಕ್ಕಳ ಕೊಂದಳು

ಕುಂಟನಾಗಲಿ, ಕುರುಡನಾಗಲಿ, ಹೆಡ್ಡನಾಗಲಿ, ಹೆಳವನಾಗಲಿ ; ಇಂದು ಹುಟ್ಟಿ ಇಂದು ಸಾಯುವಂತಹ ಮಗುವನ್ನಾಗಲಿ ಕೊಟ್ಟು ಬಂಜೆತನವನ್ನು ನೀಗು ಎಂದು ಅಂಗಲಾಚಿದ ಹೊನ್ನಮ್ಮ, ಚರ್ಮದ ಮೇಲೆ ಕಾಣಿಸಿಕೊಂಡು ವಾಸಿಯಾಗುವ ಚರ್ಮರೋಗಕ್ಕೇ ಅಸಹ್ಯಪಟ್ಟು, ಮುದ್ದು ಮಕ್ಕಳನ್ನು ಕೊಲ್ಲುತ್ತಾಳೆ. ಶಿವ ಪ್ರತ್ಯಕ್ಷನಾಗಿ - 'ಹುಟ್ಟು ಹುಟ್ಟಿದ ಮಕ್ಕಳ ನೀ ಹುತ್ತಾಕ್ಕೆ ತುಂಬೆ ಎಲೆ ಬಂಜೆ' ಎಂದು ಶಾಪವೀಯುತ್ತಾನೆ. ನಂತರ ಅವಳಿಗೆ ಜ್ಞಾನೋದಯವಾಗಿ ಹಲವು ಪುಣ್ಯ ಕಾರ್ಯಗಳನ್ನು ಮಾಡಿಕರ್ಮ ಕಳೆದುಕೊಳ್ಳುತ್ತಾಳೆ.

ಎರಡನೆಯ ಪಾಠ ದೊಂಬಿದಾಸರಿಂದಲೇ ಸಂಗ್ರಹಿಸಿದ್ದು, ಆದರೆ - ಹೆಂಗಸೊಬ್ಬಳಿಂದ ಸಂಗ್ರಹಿಸಿರುವುದಾಗಿ ಸಂಗ್ರಹಕಾರರು ತಿಳಿಸಿದ್ದಾರೆ. ಆದರೆ ಇಲ್ಲಿಯ ಕಥೆಯ ತಿರುವುಗಳೇ ಬೇರೆ ಬೇರೆ.

ಏಳು ಜನ ಅಕ್ಕ ತಂಗಿಯರಲ್ಲಿ ಹೊನ್ನಮ್ಮ ಕೊನೆಯವಳು. ಮಕ್ಕಳಿಲ್ಲದ ಬಂಜೆ. ಮಕ್ಕಳಿಗಾಗಿ ಹಂಬಲಿಸುವುದು, ಒಡಹುಟ್ಟಿದವರು, ಹಾಗೂ ಇಡೀ ಸಮಾಜ ಅವಳ ಬಗ್ಗೆ ತೋರುವ ನಿರ್ಲಕ್ಷ್ಯ, ಇವೆಲ್ಲವೂ ಕರುಳು ಮಿಡಿಯುವಂತೆ ಮೊದಲ ಪಾಠದಲ್ಲಿಯಂತೆಯೇ ಇಲ್ಲಿಯೂ ಇದೆ. ಆದರೆ

ಮುಂದಿನ ಭಾಗ ಅತ್ಯಂತ ಸ್ವಾರಸ್ಯವಾದ ರೀತಿಯಲ್ಲಿ ಇಲ್ಲಿ ಕಂಡು ಬರುತ್ತದೆ :

ಜೀವನದಲ್ಲಿ ರೋಸಿದ ಹೊನ್ನಮ್ಮ ಗಂಡನಿಗೆ ತಾಳಿಯನ್ನು ಬಿಚ್ಚಿ ಒಪ್ಪಿಸಿ ಸಾಯಲು ಸಿದ್ಧಳಾಗಿ ಹೊರಡುತ್ತಾಳೆ. ಮೊದಲು ನಾಗರಾಜನ ಪಟ್ಟಣಕ್ಕೆ ಹೋಗುತ್ತಾಳೆ. ಆದರೆ ನಾಗರಾಜ ಅವಳನ್ನು ಕಚ್ಚಿ ಸಾಯಿಸಲು ಒಪ್ಪುವುದಿಲ್ಲ. ನಂತರ ಹುಲಿರಾಜನ ಪಟ್ಟಣಕ್ಕೆ ಹೋಗುತ್ತಾಳೆ. ಅಲ್ಲಿಯೂ ಅವಳಿಗೆ ಅದೇ ಉತ್ತರ ದೊರೆಯುತ್ತದೆ.* ನಂತರ ಅವಳು ನೇರವಾಗಿ ದೇವಲೋಕಕ್ಕೆ ಹೋಗುತ್ತಾಳೆ. ಅಲ್ಲಿ ತಪಸ್ಸಿಗೆ ಕುಳಿತುಕೊಳ್ಳುತ್ತಾಳೆ. ಅದಾದರೂ ಅತ್ಯಂತ ಭಯಂಕರವಾದ ತಪಸ್ಸು - ಒಂದು ಕಲ್ಯಾಣಿಯ ಬಳಿ, ಸೂಜಿಯ ಮೇಲೆ ಸೂಜಿಯನ್ನು ನಿಲ್ಲಿಸಿ, ಆ ಸೂಜಿಯ ತುದಿಗೆ ನಿಂಬೆ ಹಣ್ಣನ್ನು ಚುಚ್ಚಿ, ಅದರ ಮೇಲೆ ತಪಸ್ಸಿಗೆ ಕೂರುತ್ತಾಳೆ. ಅಲ್ಲಿ ನೀರಿಗಾಗಿ ಬಂದ ಪಾರ್ವತಿ ಆಕೆಯನ್ನು ಕಂಡು, ಅವಳ ತಪಸ್ಸಿಗೆ ಆಶ್ಚರ್ಯಪಟ್ಟು ಬಂದ ಕಾರಣವನ್ನು ವಿಚಾರಿಸುತ್ತಾಳೆ. ಹೊನ್ನಮ್ಮ ತನ್ನ ದುಃಖವನ್ನೆಲ್ಲ ಹೇಳಿಕೊಳ್ಳುತ್ತಾಳೆ. ಪಾರ್ವತಿ ಕನಿಕರಪಟ್ಟು ಅವಳನ್ನು ಒಂದು ಪಲ್ಲಿಯನ್ನಾಗಿ ಮಾಡಿಕೊಂಡು, ಭರಣಿಯಲ್ಲಿಟ್ಟು ಕೊಂಡು ಬಾಳೆಕಾಯಿಗೆ ಸಿಕ್ಕಿಸಿಕೊಂಡು - ಶಿವನೊಡನೆ ತಾನು ಪಗಡೆಯಾಡುತ್ತಿರುವಾಗ ಗೋಡೆಯಿಂದ ಬಂದು ಶಿವನ ಪಾದವನ್ನು ಬಿಡದೆ ಹಿಡಿದುಕೊಳ್ಳುವಂತೆ ತಿಳಿಸಿ, ತೆಗೆದುಕೊಂಡು ಹೋಗುತ್ತಾಳೆ. ಅದರಂತೆ ಅವಳು ಶಿವನ ಪಾದವನ್ನು ಹಿಡಿದು, ಸಂತಾನ ಫಲವನ್ನು ಕೊಡುವಂತೆ ಬೇಡುತ್ತಾಳೆ. ಶಿವ ಒಪ್ಪಿ, ಆಶೀರ್ವದಿಸಿ 'ಮಗುಟ್ಟಿದ ಮೂರು ತಿಂಗಳಿಗೆ ಬತ್ತೀನಿ' ಎಂದು ಹೇಳಿ ಕಳುಹಿಸಿ ಕೊಡುತ್ತಾನೆ. ಹೊನ್ನಮ್ಮನಿಗೆ ಗಂಡು ಮಗುವಾಗುತ್ತದೆ. ಹೇಳಿದ ಮಾತಿನಂತೆ ಈಶ್ವರ ಪರೀಕ್ಷಾರ್ಥವಾಗಿ ಹೊನ್ನಮ್ಮನಲ್ಲಿಗೆ ಬರುತ್ತಾನೆ. ಮಗನೊಡನೆ ಚಕ್ಕಂದವಾಡುತ್ತಿದ್ದ ಹೊನ್ನಮ್ಮ ಜಂಗಮ ರೂಪದ ಈಶ್ವರನನ್ನು ತೃಣವಾಗಿ ಕಾಣುತ್ತಾಳೆ, ಭಿಕ್ಷೆ ಬೇಡಿ ಬಂದವನನ್ನು ಅವಮಾನಗೊಳಿಸಿ, ಕೆಂಡವನ್ನು ತಂದು ಸುರಿಯುತ್ತಾಳೆ. ಆದರೆ ಅದು ಚಿನ್ನದ ಗಟ್ಟಿಯಾಗುತ್ತದೆ. ಆಗಲೂ ಹೊನ್ನಮ್ಮನಿಗೆ ಅರಿವಾಗುವುದಿಲ್ಲ. ಅವಳಿಗೆ ಅರಿವನ್ನು ಮೂಡಿಸಬೇಕೆಂಬ ದೃಷ್ಟಿಯಿಂದ ಶಿವ ಅಲುಗದೆ ನಿಲ್ಲುತ್ತಾನೆ. ಆಗ ಹೊನ್ನಮ್ಮ ಹಳೇಪರಕೆಯಿಂದ ಹೊಡೆದು ಹಳ್ಳಕ್ಕೆ ತಳ್ಳುತ್ತಾಳೆ.ಪಾರ್ವತಿ ಇದನ್ನು ಕಂಡು ಓಡಿ ಬಂದು 'ಸಂತಾನ ಫಲ ಕೊಟ್ಟ ಶಿವನನ್ನೇ ಹೀಗೆ ಮಾಡಿದೆಯ' ಎಂದು ಕೋಪದಿಂದ - 'ನಿನಗೆ ವರ್ಷಕ್ಕೊಂದು ಮಗು ಹುಟ್ಟಿ ಸಾಯಲಿ, ಸತ್ತ ಮಕ್ಕಳನ್ನೆಲ್ಲ ಹುತ್ತಕ್ಕೆ ತುಂಬು' ಎಂದು ಶಾಪ ಕೊಡುತ್ತಾಳೆ. ತನ್ನ ತಪ್ಪು ಅರಿವಾಗಿ, ಹೊನ್ನಮ್ಮ ಕ್ಷಮೆ ಯಾಚಿಸಿದಾಗ - 'ನೀನು ದಂಡಿನ ಶಿವರದ ಬೆಟ್ಟಕ್ಕೋಗಿ ಸೇರಿಕೋ. ವರ್ಷಕ್ಕೊಂದು ಸಾರಿ ನಿನಗೆ ಅನ್ನ, ಧೂಪ ಹಾಕುತ್ತಾರೆ. ನಿನ್ನ ಗಂಡ 'ಕರಗಲ್ಲು' ಆಗಿ ವರ್ಷಕ್ಕೊಂದು ದಿವ್ಯ ಅನ್ನ ಹಾಕಿಸಿಕೊಳ್ಳಲಿ' ಎಂದು ಆಶೀರ್ವದಿಸಿ ಮಾಯವಾಗುತ್ತಾರೆ. ಇಲ್ಲಿ ಹೊನ್ನಮ್ಮ ದೇವತೆಯಾಗಿ ಹೋಗುತ್ತಾಳೆ.

ಇಲ್ಲಿ ಎರಡನೆಯ ಪಾಠದ ಉತ್ತರಾರ್ಧ ಸಂಪೂರ್ಣ ಬೇರೆಯ ತಿರುವನ್ನೇ ಪಡೆದುಕೊಂಡಿದೆ. ಮೊದಲನೆಯ ಪಾಠದ ಪೂರ್ವಾರ್ಧದಲ್ಲಿ ಕಂಡುಬರುವ ಸ್ವಲ್ಪ ಮಟ್ಟಿನ ತೊಡಕು ಇಲ್ಲಿ ಪರಿಹಾರವಾದಂತೆ ಕಂಡಬರುತ್ತದೆಯಾದರೂ ಸಂಪೂರ್ಣವಾಗಿ ಅಲ್ಲ. ಮೊದಲ ಪಾಠದಲ್ಲಿ ಹೊನ್ನಮ್ಮ ಕಜ್ಜಿಗೆ ಜಿಗುಪ್ಸೆಗೊಂಡು ಏಳು ಮಕ್ಕಳನ್ನು ತೂಗಡಿಸಿಕೊಂಡೇ ಸಾಯಿಸುವುದು ತೀರ ಅಸಹಜವಾಗಿ, ಆಶ್ಚರ್ಯಕರವಾಗಿ ತೋರಿದರೂ ; ಅಷ್ಟೊಂದು ಕ್ರೂರವಾಗಿ ನಡೆದುಕೊಂಡ ಅವಳಿಗೆ -

ಹುಟ್ಟುಬಾರದ ಹೊನ್ನಮ್ಮ
ಹೊನ್ನಾಲುದೇವಿ ಕಥೆಯನ್ನು

ಕೇಳಿದಂತ ಜನಗಳಿಗೆ

ಮಾಡಿದಂತ ಕರ್ಮವೇ

ಹರಿಯಲೋ ಜಗದೀಶ

ಎಂದು ಹೇಳುವಲ್ಲಿ ಸ್ಪಷ್ಟತೆಯಾಗಲಿ, ಔಚಿತ್ಯವಾಗಲಿ ಕಾಣುವುದಿಲ್ಲ. ಸತ್ತಂತಹ ಮಗುವನ್ನು ಹುತ್ತಕ್ಕೆ ಹಾಕುವ ಪ್ರಸ್ತಾಪ ಈ ಎರಡೂ ಪಾಠಗಳಲ್ಲಿಯೂ ಬಂದಿರುತ್ತದೆಯಾದರೂ, ಮೊದಲನೆಯದರಲ್ಲಿ ಅದಕ್ಕೆ ಸ್ಪಷ್ಟತೆ ದೊರೆಯುವುದಿಲ್ಲ. ಅಲ್ಲಿಯ ನಿರೂಪಣೆಯಲ್ಲಿ ಏನೋ ತೊಡಕಿದ್ದಂತೆ ಅನಿಸುತ್ತದೆ. ವಿಕೃತ ಪಾಠಾಂತರಕ್ಕೆ ಒಳ್ಳೆಯ ಉದಾಹರಣೆಯೆನಿಸುತ್ತದೆ.

ಎರಡನೆಯ ಪಾಠದಲ್ಲಿ ಅಲೌಕಿಕತೆಯ, ಅಸಹಜತೆಯ ಅಂಶ ಹೆಚ್ಚಾಗಿದ್ದರೂ, ಕಾಲ್ಪನಿಕ ದೃಷ್ಟಿ ಚೆನ್ನಾಗಿದೆ. ಈಶ್ವರ ಪರೀಕ್ಷಿಸಲು ಬರುವುದು, ಹೊನ್ನಮ್ಮ ಇಡೀ ಜಗತ್ತನ್ನೇ ಮರೆತು ವರ್ತಿಸುವುದು, ಅದಕ್ಕೆ ತಕ್ಕ ಶಾಸ್ತಿ ಎಂಬಂತೆ ಶಾಪಕ್ಕೆ ಗುರಿಯಾಗುವುದು, ಇಲ್ಲೆಲ್ಲ ಸ್ಪಷ್ಟತೆ ಇದೆ. ಮೊದಲನೆಯ ಪಾಠದ ಪೂರ್ವಾರ್ಧದ ಕೆಲವು ತೊಡಕುಗಳು ಇಲ್ಲಿ ಬಗೆಹರಿಯುವುದು ಗಮನಾರ್ಹ.

ಇದೇ ಸಂಕಲನದ ಮತ್ತೊಂದು ಪಾಠ, ಸಾಮಾನ್ಯ ಗಾಯಕಿಯಿಂದ ಸಂಗ್ರಹಿಸಿದ್ದು, ತ್ರಿಪದಿ ರೂಪದಲ್ಲಿದೆ. ಹೆಚ್ಚಿನ ವಿವರಣೆ ಇಲ್ಲದೆ, ವ್ಯಾಪ್ತಿಯಲ್ಲಿ ಅತ್ಯಂತ ಚಿಕ್ಕದಾಗಿ ಕಂಡು ಬಂದರೂ, ಮೇಲಿನ ಎರಡು ಪಾಠಗಳಿಗಿಂತ ಸಂಪೂರ್ಣ ಭಿನ್ನವಾಗಿದೆ. ಈ ಹಾಡ್ಗತೆಯ ಉತ್ತರಾರ್ಧ ಬಂಜೆಯ ಬೇಗೆಯನ್ನು ಬಣ್ಣಿಸುವಂತಹದೇ ಆದರೂ ಇದರ ರೀತಿಯೇ ಬೇರೆ. ತನ್ನ ಹೀನಸ್ಥಿತಿಗೆ ತಾನೇ ಕೊರಗುತ್ತಾಳೆ, ಮರುಗುತ್ತಾಳೆ. ಇವಳ ದುಃಖವನ್ನು ಕಂಡು ಶಿವ ಬರುತ್ತಾನಾದರೂ, ಅವಳಿಗೆ ಮಕ್ಕಳ ಫಲವನ್ನು ಕರುಣಿಸುವುದಿಲ್ಲ. ಅದಕ್ಕೆ ಬದಲಾಗಿ ಇರುವ ಸ್ಥಿತಿಯನ್ನೂ ಅದಕ್ಕಿರುವ ಕಾರಣವನ್ನು ತಿಳಿಸಿ ಬಿಡುತ್ತಾನೆ -

ತಾಯಿ ತಂದೆಯ ನಿಂದಿಸಿ ಬೈಯ್ಯಿಸಿ

ಪುತ್ರಾಜಿ ಫಲ ನಿನಗಿಲ್ಲ

ಅತ್ತೆ ಮಾವದೀರ ನಿಂದಿಸಿ ಬೈಯ್ಯಿಸಿ

ಈ ಲೋಕದ ಫಲ ನಿನಗಿಲ್ಲ

ಈ ಕಾರಣಗಳಿಂದಾಗಿ ಈ ಜನ್ಮದಲ್ಲಿ ನಿನಗೆ ಮಕ್ಕಳಿಲ್ಲ, ಎಂದು ಸ್ಪಷ್ಟವಾಗಿ ಹೇಳಿ ಬಿಡುತ್ತಾನೆ. ಅಷ್ಟೇ ಅಲ್ಲ ; ಮುಂದಿನ ಜನ್ಮದಲ್ಲಾದರೂ ಮಕ್ಕಳನ್ನು ಪಡೆಯಬೇಕೆಂದಿದ್ದರೆ ಈಗಿನಿಂದಲೇ ಮಾಡಬೇಕಾದುದನ್ನು ಈಶ್ವರನೇ ಸೂಚಿಸುತ್ತಾನೆ -

ಹಸುವಿಗುಲ್ಲನಾಕಿ ಸಿಶವಿಗ್ಹಾಲನಾಕಿ

ಮುಂದಾರು ಫಲ ದೊರಿಕ್ಯಾವು |

ಹಾಲು ದಾನವ ಮಾಡೆ ಅನ್ನದಾನವ ಮಾಡೆ

ಮ್ಯಾಲೇಳು ಫಲ ದೊರಿಕ್ಯಾವು |

ಮೊದಲ ಎರಡು ಪಾಠಾಂತರಗಳಲ್ಲಿ, ಕೊನೆಯಲ್ಲಿ ಹೊನ್ನಮ್ಮ ಮಕ್ಕಳನ್ನು ಪಡೆದರೂ ಅವು

ವಿಕಾರಕ್ಕೆ ಒಳಗಾಗುತ್ತವೆ. ದುರಂತಕ್ಕೆ ಕಾರಣವಾಗುತ್ತವೆ. ಆದರೆ ಇಲ್ಲಿ ಅವಳಿಗೆ ಮಕ್ಕಳ ಫಲವೇ ದೊರೆಯುವುದಿಲ್ಲ ; ಜೊತೆಗೆ, ಅವಳು ಮಕ್ಕಳನ್ನು ಪಡೆಯಲಾಗದಿರಲು ಕಾರಣವೇನೆಂಬುದು ಮೊದಲ ಎರಡು ಪಾಠಗಳಲ್ಲಿ ನಮಗೆ ತಿಳಿಯುವುದಿಲ್ಲ. ಆದರೆ ಇಲ್ಲಿ, ಅವಳು ತಂದೆ ತಾಯಿಗಳಿಗೆ, ಅತ್ತೆಮಾವಂದಿರಿಗೆ ಮಾಡಿದ ದ್ರೋಹ ಎಂಬುದು ವ್ಯಕ್ತವಾಗುತ್ತದೆ. ಅದಕ್ಕೆ ಪರಿಹಾರವೆಂಬಂತೆ - ಹಸು, ಕರು, ಶಿಶುವಿಗೆ, ಹುಲ್ಲು, ಹಾಲು ದಾನ ಮಾಡಬೇಕೆಂಬಲ್ಲಿ - ಇದುವರೆವಿಗೆ ಅವಳಲ್ಲಿದ್ದ ಈ ಎಲ್ಲ ಕೊರತೆಗಳನ್ನು ಸೂಚಿಸುತ್ತದೆ. ಈ ಎಲ್ಲ ಕೊರತೆಯಿಂದಾಗಿ ಕೊನೆಗೂ ಅವಳು ಮಕ್ಕಳನ್ನು ಪಡೆಯದೇ ಹೋಗುವುದು ಇಲ್ಲಿಯ ವೈಶಿಷ್ಟ್ಯವಾಗಿದೆ.

'ಪದವವೆ ನಮ್ಮ ಎದೆಯಲ್ಲಿ' ಸಂಕಲನದಲ್ಲಿ ಕಂಡು ಬರುವ ಈ ಮೂರೂ ಪಾಠಗಳೂ ಮೂರು ಬಗೆಯವಾದರೆ, ಡಾ. ಜೀ. ಶಂ. ಪರಮಶಿವಯ್ಯ ಅವರು - 'ದೊಂಬಿದಾಸರ ಲಾವಣಿಗಳು' ಹಾಗೂ 'ಜನಪದ ಕಾವ್ಯ ಕಥೆಗಳಲ್ಲಿ' ಸಂಗ್ರಹಿಸಿಕೊಟ್ಟಿರುವ ಎರಡು ಪಾಠಗಳು ಎರಡು ರೀತಿಯವಾಗಿದ್ದು, ಶ್ರೀ ನಾಗೇಗೌಡರು ಸಂಗ್ರಹಿಸಿಕೊಟ್ಟಿರುವ ಈ ಮೂರು ಪಾಠಗಳಿಗಿಂತ ಭಿನ್ನವಾಗಿರುವುದು ಪರಿಶೀಲನಾರ್ಹವಾಗಿದೆ.

'ದೊಂಬಿದಾಸರ ಲಾವಣಿಗಳು' ಸಂಕಲನದಲ್ಲಿ ಬರುವ 'ಬಂಜೆ ಹೊನ್ನಮ್ಮ'ನ ಕಥೆಯ ಸಾರ ಹೀಗಿದೆ :

ಉತ್ತರಾರ್ಧ ಹೆಚ್ಚು ಕಡಿಮೆ ಒಂದೇಯಾಗಿ ಕಂಡು ಬರುತ್ತದೆ. ಬಂಜೆಯ ಘೋರ ದುಃಖ ಅಷ್ಟೇ ಘೋರ ರೀತಿಯಲ್ಲಿ ವರ್ಣಿತವಾಗಿದೆ. ಆದರೆ ಈ ಭಾಗದಲ್ಲಿ ಹೊನ್ನಮ್ಮನ ಗಂಡನಾದ ಕರಿಯಣ್ಣಗೌಡನ ಪಾತ್ರ ಹೆಚ್ಚಾಗಿ ಬರುವುದು ಗಮನೀಯ. ಗಂಗೆಪೂಜೆಗೆ ಹೋದ ಹೊನ್ನಮ್ಮ ಎಷ್ಟು ಹೊತ್ತಾದರೂ ಹಿಂತಿರುಗಿ ಬಾರದಿರಲು, ಅವಳನ್ನು ಹುಡುಕಿಕೊಂಡು ಹೋಗುವ ಸನ್ನಿವೇಶ ಹಾಗೂ ಅವಳು ಮಕ್ಕಳ ಫಲಕ್ಕಾಗಿ ಕಡುದುಃಖಮಾಡುತ್ತಿರುವುದನ್ನು ಕಂಡು........

ಎಲ್ಲಿಯ ತನಕ ಬರಬಲ್ಲವು
ನೀನು ದುಃಖಪಡುತೀಯಾ |

ಎಂದು ಸಮಾಧಾನ ಹೇಳುವುದು ಮೊದಲ ಮೂರು ಪಾಠಗಳಲ್ಲಿಯೂ ಕಾಣಬರುವುದಿಲ್ಲ.

ಹೊನ್ನಮ್ಮನ ಆರು ಮಂದಿ ಅಕ್ಕಂದಿರು, ಹೊನ್ನಮ್ಮನ ಬರುವನ್ನು ಕಂಡು ಅವಳ ದೃಷ್ಟಿ ತಮ್ಮ ತಮ್ಮ ಮಕ್ಕಳ ಮೇಲೆ ಬೀಳದಿರಲೆಂದು ಮನೆಯೊಳಗೆ ಕೂಡಿ ಹಾಕುವ ಸನ್ನಿವೇಶ ನಾಗೇಗೌಡರು ಸಂಪಾದಿಸಿರುವ ಮೊದಲೆರಡು ಹಾಡ್ಗತೆಗಳಲ್ಲಿಯೂ ಬರುತ್ತದೆಯಾದರೂ, ಡಾ. ಜೀಶಂಪ ಅವರು ಸಂಪಾದಿಸಿರುವ ಈ ಹಾಡ್ಗತೆಯಲ್ಲಿ ಬರುವ ರೀತಿಯೇ ಬೇರೆ. ಇಲ್ಲಿ ಆ ಸಂದರ್ಭ ಒಟ್ಟು ಕಥೆಗೇ ಒಂದು ತಿರುವನ್ನು ಕೊಟ್ಟಿದೆ. ಮಕ್ಕಳನ್ನು ಹಡೆದ ಅಹಂಭಾವದಲ್ಲಿ ತಂಗಿಯೆಂಬುದನ್ನು ಮರೆತು ಹೀನಾಯವಾಗಿ ಕಾಣುತ್ತಿದ್ದ ಅವರಿಗೆ ದೊಡ್ಡ ತೇಜೋವಧೆಯನ್ನುಂಟು ಮಾಡುವ ಸಾಧನವಾಗಿ ಮಾರ್ಪಡುತ್ತದೆ. ಮಕ್ಕಳನ್ನು ಕಳೆದುಕೊಂಡು ದುಃಖಿಸುತ್ತಿದ್ದ ಈ ಆರೂ ಮಂದಿಯ ಮನೆಗೆ ಜಂಗಮ ವೇಷದಲ್ಲಿ ಭಿಕ್ಷೆ ಕೇಳಲು ಬಂದ ಪರಮೇಶ್ವರ ಅವರುಗಳಿಗೆ ಮಕ್ಕಳನ್ನು ಬದುಕಿಸಿಕೊಳ್ಳುವ ದಾರಿಯನ್ನು ತೋರುತ್ತಾನೆ -

ಬಂಜೆಯಾದ ಹೊನ್ನಮ್ಮನನ್ನು

ಗಂಡಾ ಹೆಂಡಿರ ಕರ್‍ಕಂಡು ಬಂದು
ನಿಮ್ಮ ಮನೆಯಲ್ಲಿ ಪೂಜೆಯ ಮಾಡಿದರೆ
ನಿಮ್ಮ ಮಕ್ಕಳಿಗೆ ಜೀವ ಬರುತ್ಕೆತೆ
ಬಂಜೆ ಹೊನ್ನಮ್ಮನ ಕರೆಸಿ ನೀವಾದರೆ
ಅವಳ ಪೂಜೆಯನೆ ಮಾಡಿದರೆ
ಎಂದಿನಂತೆ ಆಗುತವೆ ಎಂದ ಆವಾಗ
ಮೂರು ಮಾತ ಹೇಳಿ ಮಾಯವಾದ ಶಿವನು

ಅದರಂತೆ ಹೊನ್ನಮ್ಮನ ಅಕ್ಕಂದಿರೆಲ್ಲರೂ ಸೇರಿ ಹೊನ್ನಮ್ಮನನ್ನು ಅವಳ ಗಂಡನನ್ನೂ ಮನೆಗೆ ಕರೆತಂದು, ಮನೆದೇವರ - ಕುಲದೇವರ ಹಬ್ಬವನ್ನು ಆಚರಿಸುತ್ತಾರೆ. ಮಕ್ಕಳೆಲ್ಲರೂ ಮೊದಲಿನಂತೆ ಆಡಿಕೊಂಡಿವೆ. ಕೆಲಕಾಲದಲ್ಲಿಯೇ ಹೊನ್ನಮ್ಮ ಗಂಡು ಮಗುವೊಂದಕ್ಕೆ ಜನ್ಮವಿತ್ತು ಆ ಕೂಡಲೇ ಅಸುನೀಗುತ್ತಾಳೆ. ತೀರ ಅನಿರೀಕ್ಷಿತವಾದ, ಅಷ್ಟೇ ಭಿನ್ನವಾದ ಮುಕ್ತಾಯ. ಇಲ್ಲಿಯ ಮೊದಲ ಮೂರು ಪಾಠಗಳಲ್ಲಿಯೂ ಈ ಬಗೆಯ ಮುಕ್ತಾಯ ಇಲ್ಲ. ಕೊನೆಗೆ ಹೊನ್ನಮ್ಮನನ್ನು ಮಣ್ಣು ಮಾಡಿ ಅಕ್ಕಂದಿರೆಲ್ಲರೂ ಸೇರಿ ಹಿಪ್ಪೇ ತೋಪಿನಲ್ಲಿ ಹೊನ್ನಮ್ಮನ ದೇವಸ್ಥಾನವನ್ನು ಕಟ್ಟಿಸುತ್ತಾರೆ. ಹೊನ್ನಮ್ಮ ದೇವಾಂಶ ಸಂಭೂತಳಾಗುತ್ತಾಳೆ. ಈ ಅಂಶ ಮೊದಲ ಎರಡು ಪಾಠಗಳಲ್ಲಿಯೂ ಮಿಂಚಿ ಮಾಯವಾದಂತಾಗುತ್ತದೆಯಾದರೂ, ಇಲ್ಲಿ ಸ್ವಲ್ಪ ಅದು ಹಿಡಿತಕ್ಕೆ ಸಿಕ್ಕಿದಂತೆ ಗೋಚರಿಸುತ್ತದೆ.

ಜೀವನದುದ್ದಕ್ಕೂ ಪಡಬಾರದ ಪಾಡನ್ನು ಪಟ್ಟು, ತಾಯ್ತನಕ್ಕೆ ಹಂಬಲಿಸಿ ಕೊನೆಗೂ ಗೆಲುವನ್ನು ಕಂಡು, ದೇವತಾ ಸ್ಥಾನವನ್ನು ಪಡೆಯುತ್ತಾಳೆ. ಹೊನ್ನಮ್ಮನ ಬದುಕಿನ ಅಂತ್ಯ ಕೆಲವು ಕಡೆಗಳಲ್ಲಿ ವಿಚಿತ್ರವಾಗಿ ಕಾಣುವುದೂ ಉಂಟು.

ಡಾ. ಜೀಶಂಪ ಅವರೇ ತಮ್ಮ 'ಜನಪದ ಕಾವ್ಯ ಕಥೆ'ಗಳಲ್ಲಿ ಸಂಗ್ರಹಿಸಿಕೊಟ್ಟಿರುವ ಪಾಠ ಮತ್ತೊಂದು ಬಗೆಯದು. ಅದು ಇವೆಲ್ಲಕ್ಕಿಂತಲೂ ಭಿನ್ನವಾದುದು - ಅಷ್ಟೇ ವಿಶಿಷ್ಟ ರೀತಿಯದು. ಇದನ್ನು 'ದೇವರ ಗುಡ್ಡ'ರಿಂದ ಸಂಗ್ರಹಿಸಿರುವುದಾಗಿ ಹೇಳಿಕೊಂಡಿದ್ದಾರೆ. ಇದರ ಕಥಾರೀತಿಯೇ ಆರಂಭದಿಂದ ಅಂತ್ಯದವರೆಗೂ ಬೇರೆ -

ಅಷ್ಟಭಾಗ್ಯವ ತಂದರೇನು
ಮಕ್ಕಳ ಭಾಗ್ಯವ ತರಲಿಲ್ಲ
ಸಾಲು ಸೀರೆಯ ಉಟ್ಟರೇನು
ತೋಳಲಿ ಒರಗೋ ಮಗನಿಲ್ಲ

ಎಂಬ ಕೊರಗು ಹೊನ್ನಮ್ಮನನ್ನು ಹಿಂಡಿದೆ. ಅದಕ್ಕಾಗಿ ಹಂಬಲಿಸಿದ್ದಾಳೆ, ಹರಕೆ ಹೊತ್ತಿದ್ದಾಳೆ, ತನ್ನ ತೊಡೆಯ ಮೇಲೆ ಮುದ್ದಾದ ಕಂದ ಮಲಗಿ ಲಲ್ಲೆಗರೆಯುತ್ತಿರುವುದನ್ನು ಕಂಡು ಎದ್ದು ಕುಳಿತ್ತಿದ್ದಾಳೆ, ಆದರೆ ಅದು ಬರಿಯ ಕನಸು. ಮತ್ತೆ ದುಃಖ ಉಮ್ಮಳಿಸಿ ಹಾಗೇ ಬೆಳಕು ಹರಿಸಿದ್ದಾಳೆ.

ಹೊನ್ನಮ್ಮನ ದುಃಖಕ್ಕೆ ಮುಕ್ತಾಯ ಹಾಡಬೇಕೆಂಬ ದೃಷ್ಟಿಯಿಂದ ಶಿವ - ನಾರಾಯಣ ಇಬ್ಬರು - ಜೋಗಯ್ಯ - ದಾಸಯ್ಯರ ವೇಷ ಧರಿಸಿ ಬೆಳಗಾಗುತ್ತಲೇ ಹೊನ್ನಮ್ಮನ ಮನೆ ಬಾಗಿಲಿಗೆ ಭಿಕ್ಷಕ್ಕಾಗಿ ಬಂದಿದ್ದಾರೆ. ಹೊನ್ನಮ್ಮ ಮಡಿಯುಟ್ಟು ಚಿನ್ನ - ಬೆಳ್ಳಿ ಬಟ್ಟಲುಗಳ ತುಂಬ ಮುತ್ತು, ರತ್ನಗಳನ್ನು ತುಂಬಿಕೊಂಡು ಭಿಕ್ಷೆ ನೀಡಲು ಬಂದಿದ್ದಾಳೆ. ಜೋಗಯ್ಯನಿಗೆ ಚಿನ್ನದ ಬಟ್ಟಲನ್ನು ಇತ್ತು, ಕಾಲಿಗೆ ನಮಸ್ಕರಿಸಿದ್ದಾಳೆ. ದಾಸಯ್ಯನಿಗೆ ಬೆಳ್ಳಿಯ ಬಟ್ಟಲನ್ನಿತ್ತು ನಮಸ್ಕಾರವನ್ನೂ ಮಾಡದೆ ಸುಮ್ಮನಾಗಿದ್ದಾಳೆ. ಹೊನ್ನಮ್ಮನ ವರ್ತನೆ ನಾರಾಯಣನಿಗೆ ಕೋಪ ತರುತ್ತದೆ. ಹೊನ್ನಮ್ಮನಿಂದ ಭಿಕ್ಷೆಯನ್ನು ಪಡೆಯದಂತೆ ಶಿವನನ್ನು ತಡೆದು ಎಲ್ಲವನ್ನು ಅಲ್ಲಿಯೆ ಚೆಲ್ಲಾಡಿ ಬಂದ ವೇಗದಲ್ಲಿಯೇ ಹಿಂತಿರುಗುತ್ತಾರೆ. ಮನೆಯ ಬಾಗಿಲಿಗೆ ಬಂದ ಭಾಗ್ಯ ಇಲ್ಲವಾಗುತ್ತದೆ. ಹೊನ್ನಮ್ಮ ತನ್ನ ಅವಿವೇಕಕ್ಕಾಗಿ ತಾನೇ ಪೇಚಾಡಿಕೊಳ್ಳುತ್ತಾಳೆ.

ಮುಂದೆ ಹುಟ್ಟಿದ ಕಂದನ
ತೇರಿಗೆ ಆಹುತಿ ಕೊಡುತೀನಿ

ಎಂದು ನಂಜನಗೂಡಿನ ನಂಜುಂಡೇಶ್ವರನನ್ನೇ ಆಶ್ರಯಿಸುತ್ತಾಳೆ. ತನ್ನತ್ತ ಬರುತ್ತಿರುವ ಹೊನ್ನಮ್ಮನನ್ನು ಕಂಡು ಅವಳನ್ನು ಪರೀಕ್ಷಿಸುವುದಕ್ಕೋಸ್ಕರ - ಮೈ ತುಂಬ ಕಜ್ಜಿ, ತುರಿ, ಕೀವು, ರಕ್ತ ತುಂಬಿದ ಮಗುವನ್ನು ಅಡ್ಡವಾಗಿಸುತ್ತಾನೆ. ಹೊನ್ನಮ್ಮ ಅದನ್ನು ನೋಡಿ ಅಸಹ್ಯಪಟ್ಟುಕೊಳ್ಳುತ್ತಾಳೆ. ಆ ಮಗು ಇವಳ ಬಳಿ ಬರಲು ಹಾತೊರೆದರೂ ಇವಳು ದೂರವಾಗುತ್ತಾಳೆ. ಕೊನೆಗೆ ನಂಜಯ್ಯ ತನ್ನ ನಿಜರೂಪದಲ್ಲಿಯೇ ಹೊನ್ನಮ್ಮನಿಗೆ ದರ್ಶನ ಕೊಡುತ್ತಾನೆ. ಮಕ್ಕಳನ್ನು ಬೇಡಿದ ಅವಳಿಗೆ, ಅವಳ ಹಿಂದಿನ ಜನ್ಮದ ಕರ್ಮದ ಪಟ್ಟಿಯನ್ನೇ ಮುಂದಿಡುತ್ತಾನೆ - ಮಕ್ಕಳಿಗೆ ಮೊಂಡಗೈಯ್ಯಲೆತ್ತಿ ಹೊಡೆದಿದ್ದಳು, ಹಸುಳೆಗೆ ಹಾಲೆರೆಯೆಂದರೆ ಕಳ್ಳಿಯ ಹಾಲು ನೀಡಿದ್ದಳು, ಶಿಶುವಿಗೆ ಬೆಣ್ಣೆ ನೀಡೆಂದರೆ ಸುಣ್ಣವನ್ನು ಬಾಯಿಗೆ ಹಾಕಿದ್ದಳು, ತುಂಬಿದ ಬಾವಿಗೆ ಬಾಗಿ ನೋಡಿ ಬಾಯ ತಂಬುಲ ಉಗಿದಿದ್ದಳು -

ಇಂಥ ಕರ್ಮವ ಮಾಡಿದ ಚಾಂಡಾಳಿ
ಬಾಲನ ಭಾಗ್ಯವು ನಿನಗಿಲ್ಲ
ಅಲ್ಲಿ ತರದ ಭಾಗ್ಯವನು
ಇಲ್ಲೆಲ್ಲಿ ತರಲೆ ಹೆಣ್ಣು ಮಗಳೆ

ಎಂದು ನಿರ್ದಾಕ್ಷಿಣ್ಯವಾಗಿ ಹೇಳಿ ಕಳುಹಿಸುತ್ತಾನೆ. ಹೊನ್ನಮ್ಮ ನಿರುತ್ತರಳಾಗಿ ನಿರಾಶೆಯಿಂದ ಹಿಂತಿರುಗುತ್ತಾಳೆ. ದುಃಖ ಒತ್ತಿ ಬರುತ್ತದೆ.

ಹೊನ್ನಮ್ಮ ಹಿಂತಿರುಗಿ ಬಂದು ಮತ್ತೊಂದು ಲಗ್ನವಾಗುವಂತೆ ಗಂಡನಿಗೆ ತಿಳಿಸುತ್ತಾಳೆ. ಅವಳ ಮಕ್ಕಳನ್ನಾದರೂ ಮುದ್ದಾಡಬಹುದೆಂಬುದು ಹೊನ್ನಮ್ಮನ ಆಸೆ. ಆದರೆ ಪತಿಯ ಅನುಮತಿ ಅದಕ್ಕಿಲ್ಲ. ಕೊನೆಗೆ ಕೋಡುಗಲ್ಲೊಂದನ್ನೇರಿ ತಪಸ್ಸು ಮಾಡಲಾರಂಭಿಸುತ್ತಾಳೆ, ಬಂಜೆಯ ದುಃಖವನ್ನರಿತ ಪಾರ್ವತಿ ಪ್ರತ್ಯಕ್ಷಳಾಗಿ ಮೂಗು ಬೆಕ್ಕೊಂದನ್ನು ಹೊನ್ನಮ್ಮನ ಕೈಗಿತ್ತು -

ಮಕ್ಕಳ ಗ್ಯಾನ ಆದಾಗ

ಬೆಕ್ಕನೆ ನೀನು ಮುದ್ದಾಡು

ಮಕ್ಕಳ ಸಂತಾನ ಆಗುತದೆ

ಅದರಂತೆ ಕಾಲಾನಂತರದಲ್ಲಿ ಹೊನ್ನಮ್ಮನಿಗೆ ಗಂಡು ಮಗುವಾಗುತ್ತದೆ. ಆದರೆ ಕೋಪಗೊಂಡಿದ್ದ ಶಿವ - ನಾರಾಯಣರಿಗೆ ಮತ್ತಷ್ಟು ಸಿಟ್ಟೇರುತ್ತದೆ. ಹೊನ್ನಮ್ಮನ ಮೇಲೆ ಕೋಪ ತೀರಿಸಿಕೊಳ್ಳಲು ಅವರು ಮುಂದಾಗುತ್ತಾರೆ. ಹೊನ್ನಮ್ಮ ನೀರಿಗೆ ಹೋಗಿದ್ದ ಸಂದರ್ಭವನ್ನು ನೋಡಿ ಘಟಸರ್ಪ ಒಂದನ್ನು ಮಗುವಿನ ಬಳಿ ಬಿಡುತ್ತಾರೆ. ಆದರೆ ಪಾರ್ವತಿ ಕೊಟ್ಟ ಬೆಕ್ಕು ಸರ್ಪವನ್ನು ಕೊಂದು ಮಗುವನ್ನು ಉಳಿಸುತ್ತದೆ. ಬೆಕ್ಕಿನ ಬಾಯಿ - ಮೈಯೆಲ್ಲಾ ರಕ್ತವಾಗಿರುವುದನ್ನು ದೂರದಿಂದ ಕಂಡ ಹೊನ್ನಮ್ಮ, ಬೆಕ್ಕು ಮಗುವನ್ನು ಕೊಂದಿರಬೇಕೆಂದು ತಿಳಿದು ಹೊತ್ತಿದ್ದ ಕೊಡವನ್ನು ಅದರ ಮೇಲೆ ಹಾಕುತ್ತಾಳೆ. ಬೆಕ್ಕು ಅಲ್ಲಿಯೇ ಪ್ರಾಣ ಬಿಡುತ್ತದೆ. ಒಳಗೆ ಬಂದು ನಿಜಸಂಗತಿಯನ್ನು ತಿಳಿದ ಮೇಲೆ ಬೆಕ್ಕಿನ ಸಾವಿಗಾಗಿ ಮರುಗಿ - ಮಗು ಹಾಗೂ ಬೆಕ್ಕು ಸಮೇತ ಬೆಂಕಿಗೆ ಹಾರಲು ಮುಂದಾಗುತ್ತಾಳೆ. ಅಷ್ಟರಲ್ಲಿ ಶಿವ - ನಾರಾಯಣರು ಬಂದು ಬೆಕ್ಕನ್ನು ಬದುಕಿಸಿ ಕೊಟ್ಟು ಎಲ್ಲರನ್ನೂ ಕೈಲಾಸಕ್ಕೆ ಕರೆದೊಯ್ಯುತ್ತಾರೆ.

ಇದಿಷ್ಟು ಇಲ್ಲಿಯ ಕತೆ. ಆದರೆ ಮೇಲೆ ಗಮನಿಸಿದ ನಾಲ್ಕು ಪಾಠಗಳಿಗಿಂತ ಇದು ತೀರ ಭಿನ್ನವಾದುದು. ಇಲ್ಲಿ ಶಿವನ ಜೊತೆಗೆ ನಾರಾಯಣನು ಹೊನ್ನಮ್ಮನಿಗೆ ವರ ಕೊಡಲು ಬರುವುದರ ಜೊತೆಗೆ, ಹೊನ್ನಮ್ಮನ ಒಂದು ಅಚಾತುರ್ಯದಿಂದ ಅವರಿಬ್ಬರೂ ಕೋಪಗೊಂಡು ಹೋಗುವುದು ಒಂದು ಅಪೂರ್ವ ಘಟನೆಯಾದರೆ ; ಹೊನ್ನಮ್ಮ ಶಿವನ ಭಕ್ತಳೆಂಬುದೂ ಇದರಿಂದ ಸ್ಪಷ್ಟವಾಗುವಂತಹುದು. ಅಲ್ಲದೆ, ಜನಪದರಿಗೆ ಬೇಗ ನೆನಪಿಗೆ ಬರುವವನು ಶಿವ. ಎಲ್ಲರೂ, ಎಲ್ಲದಕ್ಕೂ ಶಿವನನ್ನೇ ಆಶ್ರಯಿಸುವುದು ಜನಪದ ಕಥೆ - ಗೀತೆಗಳಲ್ಲಿ ಸಾಮಾನ್ಯ. ಆದರೆ ಇಲ್ಲಿ ನಾರಾಯಣನ ಪ್ರವೇಶವೂ ಆಗಿರುವುದು, ಜೊತೆಗೆ ಅದನ್ನು ಹೆಚ್ಚು ಪರಿಣಾಮಕಾರಿಯಾಗಿ, ಔಚಿತ್ಯ ಪೂರ್ಣವಾಗಿ ಬಳಸಿಕೊಂಡಿರುವುದೂ ವೈಶಿಷ್ಟ್ಯವಾಗಿದೆ.

ಶಿವ - ನಾರಾಯಣರಿಬ್ಬರ ಕೋಪಕ್ಕೂ ತುತ್ತಾಗಿದ್ದೇನೆಂಬುದನ್ನರಿತ ಹೊನ್ನಮ್ಮ, ಶಿವನೊಬ್ಬನನ್ನೇ ಆಶ್ರಯಿಸಿದಾಗಲೂ ಅವನೂ ಕೋಪಗೊಂಡು ಅವಳ ಪಾಪದ ಪಟ್ಟಿಯನ್ನು ಪಟಿಸಿದಾಗ, ಪಾರ್ವತಿ ಹೊನ್ನಮ್ಮನ ನೆರವಿಗೆ ಬರುವುದೂ ಒಂದು ವಿಶೇಷವಾಗಿದೆ. ಅಷ್ಟೇ ಅಲ್ಲದೆ ವಿಶೇಷ ಬಗೆಯಲ್ಲಿ ಅವಳಿಗೆ ಸಂತಾನ ಫಲವನ್ನು ಕೊಡುವುದೂ ಗಮನಾರ್ಹ. ಬೆಕ್ಕು ಮಗುವನ್ನು ಉಳಿಸಿ, ಸರ್ಪವನ್ನು ಕೊಲ್ಲುವ ಸನ್ನಿವೇಶ ಕೂಡ ಅಪೂರ್ವವಾದುದು. ಕೊನೆಗೆ ಶಿವ - ನಾರಾಯಣರಿಬ್ಬರೂ ಬಂದು ಸುಖಾಂತವಾಗಿಸುವುದೂ ಅಷ್ಟೇ ಮಹತ್ವದ್ದಾಗಿ ತೋರುತ್ತದೆ. ಬೆಕ್ಕು ಇಲ್ಲೊಂದು ಪ್ರಮುಖ ಪಾತ್ರವೆಂಬಂತೆ ನಮ್ಮ ಮನಸ್ಸಿನಲ್ಲಿ ನಿಲ್ಲುತ್ತದೆ. ಹೊನ್ನಮ್ಮ ಮೂಕ ಪ್ರಾಣಿಯನ್ನು ಕೊಂದ ಪಾಪಕ್ಕೆ ಪ್ರಾಯಶ್ಚಿತ್ತ ಅನುಭವಿಸಲು ಸಿದ್ಧವಾಗುವುದು, ಅವಳ ಪರಿವರ್ತಿತ ಪುನರ್ಜನ್ಮದ ಜೀವನಕ್ಕೆ ಸ್ಪಷ್ಟ ಉದಾಹರಣೆಯಾಗುತ್ತದೆ.

ಹೀಗಾಗಿ ಗುಡ್ಡರು ಹಾಡುವ ಈ ಹಾಡ್ಗತೆ, ದೊಂಬಿದಾಸರು ಹಾಗೂ ಸಾಮಾನ್ಯ ಗಾಯಕರು ಹಾಡುವ ಹಾಡ್ಗತೆಗಿಂತ ಭಿನ್ನ ಪಾಠಭೇದಗಳನ್ನು ಹೊಂದಿರುವುದು ಗಮನಿಸಬೇಕಾದ ಅಂಶ.

ಕರಾಕೃ ಅವರು, ದೊಂಬಿದಾಸರಿಂದಲೇ ಸಂಗ್ರಹಿಸಿರುವುದಾಗಿ ಹೇಳಿ 'ಜಾನಪದ ಕಥನ ಗೀತೆಗಳು'

ಸಂಕಲನದಲ್ಲಿ ಕೊಟ್ಟಿರುವ 'ಬಂಜೆ ಹೊನ್ನಮ್ಮ' ಕಥೆಯ ಪೂರ್ವಾರ್ಧ ಅಂತಹ ವ್ಯತ್ಯಾಸಗಳನ್ನೇನೂ ಹೊಂದಿರದಿದ್ದರೂ, ಉತ್ತರಾರ್ಧ ಬೇರೆಯಾಗಿದೆ. ಮಕ್ಕಳಿಲ್ಲದ ಹೊನ್ನಮ್ಮ ಶಿವನನ್ನು ಬೇಡಲು 'ನೂರು ಮಂದಿ ಮಕ್ಕಳ ಫಲ' ಕೊಡುತ್ತಾನೆ. ಆದರೆ ಇದನ್ನು ಕಂಡು ಸಹಿಸದ ಅಕ್ಕಂದಿರು ವಿಷದ ಕಜ್ಜಾಯವನ್ನಿತ್ತು ಸಾಯಿಸಿಬಿಡುತ್ತಾರೆ.. ಹೊನ್ನಮ್ಮ ಗೋಳಾಡಿಕೊಂಡು ಬಂದು ಮತ್ತೆ ಶಿವನಲ್ಲಿ ಬೇಡುತ್ತಾಳೆ. ಸತ್ತು ಹೋದ ಮಕ್ಕಳನ್ನೆಲ್ಲ ಶಿವ ಮತ್ತೆ ಬದುಕಿಸಿಕೊಡುತ್ತಾನೆ.

ಈ ಆರೂ ಪಾಠಗಳನ್ನು ಒಟ್ಟಾರೆ ಗಮನಿಸಿದಾಗ, ಮೂಲ ಕಥೆಯೊಂದು ಜನಪದರ ಬಾಯಲ್ಲಿ ಯಾವ ಯಾವ ರೂಪವನ್ನು ಹೇಗೆ ಹೇಗೆ ತಾಳಬಹುದೆಂಬುದು ವೇದ್ಯವಾಗುತ್ತದೆ. ವೃತ್ತಿಗಾಯಕರಲ್ಲಿ ಹೆಚ್ಚು ವಿಸ್ತಾರವಾಗಿ ಅದು ಕಂಡು ಬಂದರೆ ಸಾಮಾನ್ಯ ಗಾಯಕರಲ್ಲಿ ಅದು ಸಂಕ್ಷಿಪ್ತವಾಗಿ ಸಂಗ್ರಹಿತವಾಗಿರುವುದನ್ನು ಕಾಣುತ್ತೇವೆ. ಇಲ್ಲಿ ಹಲವು ಘಟನೆಗಳು ಬಿಟ್ಟು ಹೋಗುತ್ತವೆ. ಸಾಮಾನ್ಯ ಗಾಯಕರಿಗೆ ಮುಖ್ಯ ಕಥೆಯಷ್ಟೇ ಪ್ರಮುಖವಾಗಿ ತೋರಿದರೆ, ವೃತ್ತಿ ಗಾಯಕರಿಗೆ ಅದನ್ನು ಬೆಳೆಸಲು, ವಿವರಿಸಲು ಹೆಚ್ಚು ಘಟನಾವಳಿಗಳಿರುವುದು ಅಗತ್ಯವಾಗಿ ತೋರುತ್ತದೆ.

ಇಲ್ಲಿ ಮೂಲ ಪಾಠವನ್ನು ಗುರುತಿಸುವ ಪ್ರಶ್ನೆ ಬಂದಿದ್ದರೂ, ಹೊನ್ನಮ್ಮನ ಕಥೆಯಲ್ಲಿ ತೊಡಕಿರುವುದಂತೂ ಸ್ಪಷ್ಟ. 'ಹೊನ್ನಾಲ ದೇವಿಯ ಕಥೆ'ಗೂ 'ಬಂಜೆ ಹೊನ್ನಮ್ಮನ ಕಥೆ'ಗೂ ಕಥೆಯ ಉತ್ತರಾರ್ಧದಲ್ಲಿ ತೊಡರುಂಟಾಗಿರುವುದನ್ನು ಇಲ್ಲಿಯ ಕೆಲವು ಪಾಠಗಳಲ್ಲಿ ಗುರುತಿಸಬಹುದು. ಬಹುತೇಕ ಪಾಠಗಳಲ್ಲಿ ಆಕೆಗೆ ದೇವಸ್ಥಾನವನ್ನು ಕಟ್ಟಿಸಿದರು ಎಂಬ ಪ್ರಸ್ತಾಪ ಬರುವಲ್ಲಿ ಅನುಮಾನವಿದೆ. ನಾಗೇಗೌಡರು ಸಂಗ್ರಹಿಸಿರುವ 'ಬಾಳುಗಂಚಿ ಬಂಜೆ ಹೊನ್ನಮ್ಮ'ನಲ್ಲಿ ಸ್ಪಷ್ಟವಾಗಿ - 'ದಂಡಿನಶಿವರದ ಹೊನ್ನಮ್ಮ' ಆಗಿದೆ. 'ವರ್ಷಕ್ಕೊಂದು ದಿನ ನಿನಗೆ ಅನ್ನ ಹಾಕ್ತಾರೆ' ಎಂದಿದೆ. ಆದರೆ ಇದು ಹೊನ್ನಾಲ ದೇವಿಗೆ ಸಂಬಂಧಿಸಿದ್ದು. ಅಲ್ಲಿ ಈಗಲೂ ವರ್ಷಕ್ಕೊಂದು ಸಾರಿ ಆ ದೇವಿಯ ಜಾತ್ರೆ ನಡೆಯುತ್ತಿದ್ದು, 'ಮಡೆ'* ಹೊರುವ ಪದ್ಧತಿ ಇದೆ. ಆದ್ದರಿಂದ ಈ ಕಥೆಯ ಭಾಗ ಅಲ್ಲಿ ಸೇರಿಕೊಂಡಿರಲೂ ಸಾಧ್ಯ.

'ಬಯಲುಸೀಮೆಯ ಲಾವಣಿಗಳು' ಸಂಕಲನದಲ್ಲಿ ಕಾಳೇಗೌಡ ನಾಗವಾರ ಅವರು ದೊಂಬಿದಾಸರಿಂದಲೇ ಸಂಗ್ರಹಿಸಿ ಕೊಟ್ಟಿರುವ ಹಾಡ್ಗತೆ ಯಾವ ಹೆಚ್ಚು ಅಲೌಕಿಕತೆಯ ಅಂಶವನ್ನು ಒಳಗೊಂಡಿರದೆ ಸರಳವಾಗಿ ರೂಪು ತಳೆದಿದೆ. ಮಕ್ಕಳಿಲ್ಲದ ಆಕೆ ಬಹಳ ನೊಂದು, ನಿಟ್ಟುಸಿರು ಬಿಟ್ಟು ಕೊನೆಗೆ ಶಿವನತ್ತ ನೋಡುತ್ತಾಳೆ. ನೀರನ್ನು ಮೊಗೆಯಲು ಹೋದಾಗ ಅಲ್ಲಿ ಅವಳಿಗೆ ಎರಡು ಗಂಡು ಮಕ್ಕಳು ಕಾಣಿಸಿಕೊಳ್ಳುತ್ತವೆ. ಜೊತೆಗೆ -

"ಕೇಳು ಕೇಳೆ ಎಲೆ ಬಂಜೆ ನೀನು
ನಿನ್ನ ಕರ್ಮವು ಇಲ್ಲಿಗೆ ತೀರಿಸ್ತೀವಿ
ಇಬ್ಬರ ಮಕ್ಕಳ ಸಂತಾನ ಕೊಟ್ಟಿದ್ದೀವಿ
ನೀನಾದರೆ ಹೋಗಮ್ಮ ಈಗ"

ಎಂದು ಆಶೀರ್ವದಿಸಿ ಕಳುಹಿಸಿಕೊಡುತ್ತಾರೆ. ಆಗ ಎಲ್ಲರೂ ಹತ್ತಿರವಾಗುತ್ತಾರೆ. ಬಂಜೆತನವನ್ನು ಕಳೆದುಕೊಂಡ ಹೊನ್ನಮ್ಮನನ್ನು ಸಂಭ್ರಮ ಸಡಗರಗಳಿಂದ ಆದರಿಸುತ್ತಾರೆ. ಹುಟ್ಟಿದ ಮಕ್ಕಳಿಗೆ ಸೂರ್ಯ ಚಂದ್ರರೆಂದು ಹೆಸರಿಟ್ಟು ಕರೆಯುತ್ತಾರೆ.

ಈ ಎಲ್ಲಾ ಪಾಠಾಂತರಗಳ ಒಟ್ಟು ಹಿನ್ನೆಲೆಯಲ್ಲಿ ಹೊನ್ನಮ್ಮನ ಬದುಕನ್ನು ಪರಿಶೀಲಿಸುವುದಾದರೆ - ಮಕ್ಕಳ ಭಾಗ್ಯವಿಲ್ಲದ ಹೆಣ್ಣೊಬ್ಬಳು ಸಮಾಜದ ಅನಿಷ್ಟವೆನಿಸಿಕೊಂಡು, ಯಾರಿಗೂ ಬೇಡವಾಗಿ, ನೊಂದು ಬೆಂದು ಬೆಂಡಾಗಿ ಬಗೆ ಬಗೆಯಲ್ಲಿ ಮಕ್ಕಳ ಫಲಕ್ಕಾಗಿ ಭಗವಂತನನ್ನು ಪ್ರಾರ್ಥಿಸುವ ಸತ್ಯಾಂಶ ಇಲ್ಲಿ ವ್ಯಕ್ತವಾಗುತ್ತದೆ. ಇದು ಇಲ್ಲಿಯ ಮೊದಲ ಅಂಶ.

ಎರಡನೆಯದಾಗಿ - ಭಾರತೀಯ ಧರ್ಮದಂತೆ, ಜನಪದರ ನಂಬಿಕೆಯಂತೆ, ಆಕೆ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮ - ಮಕ್ಕಳು ಮರಿಗಳನ್ನು, ಪಕ್ಷಿ ವೃಕ್ಷಗಳನ್ನು ಹೀನಾಯವಾಗಿ ಕಂಡ ಫಲ, ತಂದೆ ತಾಯಿಗಳನ್ನು ಅತ್ತೆಮಾವಂದಿರನ್ನು ಕಡೆಗಣಿಸಿದ ಕಾರಣ ಈ ಜನ್ಮದಲ್ಲಿ ಸಂತಾನ ಹೀನಳಾದಳೆಂಬುದು ಸ್ಪಷ್ಟ.

ತನ್ನ ಪ್ರಾಯಶ್ಚಿತ್ತದಿಂದಾಗಿ ಶಿವನ ಕರುಣೆಯನ್ನು ಮತ್ತೆ ಗಳಿಸಿ ಮಕ್ಕಳ ಫಲವನ್ನು ಪಡೆದರೂ, ಇನ್ನೂ ಸಂಸ್ಕಾರ ಸಾಲದೆಂಬಂತೆ ಮತ್ತೆ ಶಾಪಕ್ಕೆ ಒಳಗಾಗುವುದು. ಅವಳ ಹುಟ್ಟೇ ಒಂದು ಘೋರಪಾಪ ಎಂಬಂತೆ ಇಡೀ ಸಮಾಜ ಅವಳನ್ನು ಕಡೆಯಾಗಿ ಕಾಣುವುದು - ಒಡಹುಟ್ಟಿದವರೂ, ತಂದೆ ತಾಯಿಗಳೂ ತೃಣವಾಗೆಣಿಸುವುದು ; ಹೊನ್ನಮ್ಮನ ಬದುಕನ್ನು ಕರಕಷ್ಟವಾಗಿಸಿ ಕೊನೆಗೆ ಅವಳು ದೈವಬಲದಿಂದ ಗೆಲುವನ್ನು ಪಡೆಯುವುದು. ಅಷ್ಟೆ ಅಲ್ಲದೆ, ಮಕ್ಕಳನ್ನು ಕಳೆದುಕೊಂಡ ಅಕ್ಕಂದಿರೇ ಹೊನ್ನಮ್ಮನ ಮರೆಹೊಕ್ಕು ತಮ್ಮ ತಮ್ಮ ಮಕ್ಕಳನ್ನು ಬದುಕಿಸಿಕೊಳ್ಳುವುದು, ಇವನ್ನೆಲ್ಲ ನೋಡಿದರೆ ಬಹುಶಃ ಈ ಕಾರಣಗಳಿಂದಾಗಿ ಅವಳಿಗೆ 'ಸತ್ಯವಂತೆ ಹೊನ್ನಮ್ಮ' ಎಂಬ ಹೆಸರು ಬಂದಿರಬೇಕು. ಶಿವನ ಕೃಪೆಗೆ ಪಾತ್ರಳಾದ ಅವಳಿಗೆ ಸಮಾಜದಲ್ಲಿ ಮನ್ನಣೆ, ಮಹತ್ವ ದೊರೆತಿರಬೇಕು. ಅವಳನ್ನು ಪೂಜನೀಯ ವ್ಯಕ್ತಿಯನ್ನಾಗಿ ಕಂಡಿರಬೇಕು. ತಾಯ್ತನದ ಅವಳ ಹಂಬಲ ಹಲವರ ಮನ ಕರಗಿಸಿರಬೇಕು. ಅವಳ ನಿರಂತರ ಸಾಧನೆಗೆ ಮೆಚ್ಚಿಗೆ ವ್ಯಕ್ತಪಡಿಸಿರಬೇಕು. ಜನಪದ ಮನದಲ್ಲಿ ಮೂಡಿದ ಅವಳ ಬಗೆಗಿನ ಬಗೆಬಗೆಯ ಚಿತ್ರ ಹೀಗೆ ವೈವಿಧ್ಯವನ್ನು ತಾಳಿರಬೇಕು.

೩

ಈ ಸಂಕಲನದ ಮತ್ತೊಂದು ಹಾಡ್ಗತೆ - 'ಕಾಟವಕ್ಕಲ ಕೊಣವೇಗೌಡ'. 'ಜಿಪುಣಾಗ್ರೇಸರ ಚಕ್ರವರ್ತಿ'. ಜಿಪುಣತನಕ್ಕೆ ಮತ್ತೊಂದು ಹೆಸರಾಗಿ ಕೊಣವೇಗೌಡ ಇಂದಿಗೂ ಜನರ ಬಾಯಲ್ಲಿ ಉಳಿದಿದ್ದಾನೆ. ಮಾರೇಗೌಡ ಎಂಬ ಹೆಸರೂ ಅವನಿಗಿದೆ.

ಬಚ್ಚಲು ಕಲ್ಲೆ ಬೆಳ್ಳಿ, ಬಂಗಾರ
ಹಸಿಯ ಕಲ್ಲೆ ನವರತ್ನ
ರನ್ನದ ಕಣಜ ಚಿನ್ನದ ಕಣಜ

ನಲವತ್ತೊಂದು ಆಡಿನ ಸಾಲು
ಹತ್ತು ಹಿಂಡು ದನಗಳ ಸಾಲು
ಇಪ್ಪತ್ತೊಂದು ಎಮ್ಮೆಯ ಸಾಲು

ಇಷ್ಟೆಲ್ಲ ಇದ್ದರೂ, ದಾನಧರ್ಮದ ಹೆಸರನ್ನೇ ಕೇಳದವನು. ಕೈಯೆತ್ತಿ ಕೊಟ್ಟದ್ದು ಅವರ

ವಂಶಕ್ಕೇ ಬಂದದ್ದಲ್ಲ. 'ಕುಡಿಯಲು ನೀರಕೊಟ್ಟವನಲ್ಲ', ಅಷ್ಟೇ ಅಲ್ಲ, ಜನರ ಕಾಟದಿಂದ ದೂರವಿರಲು ಅವನು ಹೆಂಡತಿಗೆ ಹೇಳಿಕೊಡುವ ಉಪಾಯವಾದರೂ ಎಂಥದು -

ಕಡಿಯೋ ನಾಯ ಮನೆಮುಂದೆ ಕಟ್ಟಿ
ಹಾಯೋ ಹಸವ ಬಾಕ್ಲಲಿ ಕಟ್ಟಿ
....
ಹಿತ್ತಲಿಗೆ ಹೋಗಿ ಚೆತ್ತಲೆ ಬಾರೆ
ನಾಚಿಕಂಡೆ ಓಡೋಯ್ತಾರೆ

ಇಷ್ಟೇ ಅಲ್ಲ. ಅಡಿಗೆ ಮಾಡುವ ವಿಧಾನವನ್ನು ಹೆಂಡತಿಗೆ ಹೇಳಿಕೊಡುತ್ತಾನೆ :

ಮೂರು ವರ್ಷದ ಮುಗ್ಗಿನ ಜೋಳ
ಆರು ವರ್ಷದ ಬುರುಡೆ ರಾಗಿ
ಅಳೆದು ಮೂರು ಪಾವು ತಕ್ಕೊಳ್ಳೆಣ್ಣೆ
ಮಾಡಲಿ ಬೇಡ ಕೇರಲಿ ಬೇಡ
ಬಿಸಲಿಗಾಕಿ ಒಣಗಿಸಬೇಡ
ಗಾಳಿಗಾಕಿ ತೂರಲುಬೇಡ
ಗುಬ್ಬಿಕ್ಕರ್ಧ ತಿಂದೋಯ್ತವೆ
....
ಸೊಪ್ಪು ಗಿಪ್ಪುಸೋಸಿಯ ಜೋಕೆ
ಹುಳಗಿಳ ತಗದಿಯ ಜೋಕೆ
ಸೊಪ್ಪಿಗೆ ಉಪ್ಪೊಂದಾಕಿಯ ಜೋಕೆ

ಹೆಂಡತಿಯಾದರೂ ಅವನಿಗೆ ತಕ್ಕವಳೇ. ಚಾಚೂ ತಪ್ಪದೆ ನಡೆಯುವಂತಹವಳು. ಊರಿನ ಹತ್ತಿರ ಜಮೀನು ಮಾಡಿದರೆ ಕಂದಾಯ ಕೊಡಬೇಕಾಗುತ್ತದೆಯೆಂದು ಕಾಡು ಮೇಡಿನಲ್ಲಿ ಭೂಮಿ ಮಾಡಿದ್ದಾನೆ. ಹೆಚ್ಚು ಬೀಜ ಬಿತ್ತಿ ಮಳೆ ಹೋದರೆ ನಷ್ಟವಾಗುತ್ತದೆಯೆಂದು ಮೂರು ಪಾವು ಜೋಳವನ್ನ ನೂರೆಕರೆಗೆ ಬಿತ್ತುತ್ತಾನೆ. ಊಟ ಮಾಡುವಾಗ ಕೈಯಲ್ಲಿ ತಿಂದರೆ ಕೈಗಾಗುತ್ತದೆಯೆಂದು ನಾಯಿಯಂತೆ ಬಗ್ಗಿ ನಾಲಗೆಯಲ್ಲಿಯೇ ನೆಕ್ಕುತ್ತಾನೆ. ಕುಡಿಯುವ ಗಂಜಿಗೆ ನೊಣ ಬಿದ್ದರೆ, ಅಷ್ಟು ನಷ್ಟವಾಗುತ್ತದೆಯೆಂದು -

ನೊಣವನಾದರೆ ಹಿಡಕೊಂಡನು
ಒಂದು ಜಬ್ಬಾಟ ಜಬ್ಬಿದನು
ಒಂದು ಜಬ್ಬಾಟ ಜಬ್ಬಿದ ಗೌಡ
ಒಂದು ಸೀಪಾಟ ಸೀಪಿದ ಗೌಡ

ಇಂತಹ ಜಿಪುಣಗೌಡನನ್ನು ಪರೀಕ್ಷಿಸಿ ನೋಡಬೇಕೆಂದು ಪರಮೇಶ್ವರನು ಮುದುಕ ವೇಷವನ್ನು

ಧರಿಸಿ ಬರುತ್ತಾನೆ. ಹೊಲದಲ್ಲಿದ್ದ ಕೊಣವೇಗೌಡನನ್ನು ಒಂದು ಜೋಳದ ತೆನೆ ಕೊಡುವಂತೆ ಕೇಳಿದ್ದಾನೆ. "ಈ ಜೋಳದ ಹೊಲ ನನ್ನದಲ್ಲ ಊಟದ ವೇಳೆಗೆ ಬಂದರೆ ಊಟವನ್ನಾದರೂ ಕೊಡಿಸಬಹುದು" ಎಂದು ಉತ್ತರಿಸಿದ್ದಾನೆ. ಮುದುಕ ಅದಕ್ಕೇ ಗಂಟು ಬಿದ್ದಿದ್ದಾನೆ. ಗೌಡ ತನ್ನ ಆಲೋಚನೆ ತಪ್ಪಾಯಿತೆಂದು ಭಾವಿಸಿ ಮನೆಗೆ ಬಂದವನೇ ಸತ್ತವನಂತೆ ಬಿದ್ದವನೆ. ಅವನ ಹೆಂಡತಿ ಕೈ ಕಾಲು ಮುರಿದು, ತುಂಬ ಬಟ್ಟೆ ಹೊದಿಸಿ, ಅದರ ಮೇಲೆ ಬೆಲ್ಲದ ನೀರನ್ನು ಚೆಲ್ಲಿದ್ದಾಳೆ - ನೊಣ ಮುತ್ತಿಕೊಳ್ಳಲು. ಆದರೆ ಪರೀಕ್ಷಿಸಲೆಂದೇ ಬಂದ ಪರಮೇಶ್ವರ ಅಷ್ಟಕ್ಕೇ ಬಿಡದೆ ಹಟತೊಟ್ಟು ಅವನನ್ನು ಬದುಕಿಸುವುದಾಗಿ ಅಲ್ಲಿಯೇ ಉಳಿದಿದ್ದಾನೆ. ಕೊನೆಗೆ ತನ್ನ ಪ್ರಯತ್ನದಲ್ಲಿ ತಾನೇ ಸೋತು ಕೋಣವೇ ಗೌಡನಿಗೆ

ನೀನು ಎಷ್ಟು ಬೆಳೆದ ಕಾಲಕು
ಪರಮ ಲೋಭಿ ಆಗಯ್ಯ ನೀನು !

- ಎಂದು ಶಾಪವನ್ನಿತ್ತಿದ್ದಾನೆ.

ಪರಮ ಲೋಭಿಯೊಬ್ಬನ ಕಥೆ ಇಲ್ಲಿ ಅತ್ಯಂತ ಸ್ವಾರಸ್ಯಕರವಾಗಿ ನಿರೂಪಿತವಾಗಿದೆ. ಪರಮೇಶ್ವರನಿಗೂ ಜಗ್ಗದ ಅವನು ಕೊನೆಗೆ ಶಾಪಕ್ಕೆ ಗುರಿಯಾಗುತ್ತಾನೆ.

ಇದರ ಇನ್ನೂ ಹಲವು ಪಾಠಗಳು ದೊರೆಯುತ್ತವೆಯಾದರೂ, ಅವನ ಜಿಪುಣತನವನ್ನು ಬಣ್ಣಿಸುವ ವಿವರಗಳನ್ನು ಬಿಟ್ಟರೆ ಅಂತಹ ಮಹತ್ವದ ಬದಲಾವಣೆಗಳನ್ನುಳ್ಳ ಪಾಠಗಳು ಕಾಣುವುದಿಲ್ಲ. ಡಾ. ಜೀ. ಶಂ. ಪರಮಶಿಯ್ಯನವರೂ ದೊಂಬಿದಾಸರಿಂದಲೇ ಸಂಗ್ರಹಿಸಿರುವ 'ಮಾರೇಗೌಡ' ಶೀರ್ಷಿಕೆಯ ಪಾಠದ ಅಂತ್ಯ ಹೆಚ್ಚು ಸ್ಪಷ್ಟತೆಯಿಂದ ಕೂಡಿದೆ:

ದಾನಧರ್ಮವ ಮಾಡದ ಪಾಪಿ
ಕಲಿಯುಗದಲ್ಲಿ ಇರಲು ಬಾರ್ದು
ಎಂದು ಕೈಲಾಸಕೆ ಕಳುಸ್ದ ಸ್ವಾಮಿ

ಎಂದಿದೆ. ಆದರೆ ಮೊದಲ ಪಾಠದ ಮುಕ್ತಾಯವೇ ಬೇರೊಂದು ರೀತಿ ಇದೆ. ಅಂತಹವರಿಗೆ ಸಮಾಜದಲ್ಲಿ ಸ್ಥಾನವಿಲ್ಲ ಎಂಬುದು ಇಲ್ಲಿ ವ್ಯಕ್ತವಾಗುವ ಅಂಶ.

ಕಾಳೇಗೌಡ ನಾಗವಾರ ಅವರು 'ಬಯಲು ಸೀಮೆಯ ಲಾವಣಿಗಳು' ಸಂಕಲನದಲ್ಲಿ ಸಂಗ್ರಹಿಸಿಕೊಟ್ಟಿರುವ 'ಕೋಣವೇಗೌಡ', ಹಾಡ್ಗತೆಯ ಮುಕ್ತಾಯವೇ ಬೇರೊಂದು ರೀತಿ. ಕೋಣವೇಗೌಡನ ಜಿಪುಣ ಸ್ವಭಾವವನ್ನು ಬದಲಿಸಲು ಸಾಧ್ಯವೇ ಇಲ್ಲ ಎಂದು ನಿರ್ಧರಿಸಿದ ಶಿವನು

ಪ್ರಪಂಚದಲ್ಲಿ ನೀನಿರಬ್ಯಾಡ
ನಿನ್ನ ನಡತೆಯ ಕಲಿಯುತ್ತಾರೆ
ಮೂರು ದಿವಸದ ಮಧ್ಯಾನಕ್ಕೆ
ಕೈಲಾಸಕ್ಕೆ ಬಾರೋ ಗೌಡ

ಎಂದು ಆಹ್ವಾನಿಸಿ ಮಾಯವಾಗುತ್ತಾನೆ.

ಇದರ ಎಷ್ಟೇ ಪಾಠಗಳು, ಪಾಠಾಂತರಗಳು ದೊರೆತರೂ ಮೂಲ ಅಂಶ ಮಾತ್ರ ಒಂದೇ - ಅವನೊಬ್ಬ ಪರಮ ಲೋಭಿ ಅವನ ಲೋಭಿತನವನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂಬುದು. ಅದನ್ನು ಮನದಟ್ಟು ಮಾಡಲು ಕೆಲವು ಪಾಠಗಳಲ್ಲಿ ಬೇರೆ ಬೇರೆ ಘಟನೆಗಳ ವಿವರ ಬರುತ್ತದೆ ಅಷ್ಟೆ. ಇಷ್ಟನ್ನು ಬಿಟ್ಟರೆ, ಅಂತಹವರಿಗೆ ಸಮಾಜದಲ್ಲಿ ಸ್ಥಾನವಿಲ್ಲವೆಂದು ನಿರ್ಣಯಿಸಿ ಅಲ್ಲಿಂದ ಇಲ್ಲವಾಗಿಸುವ ತಂತ್ರ ಕೆಲವೆಡೆ ಗೌಣವೆನಿಸಬಹುದಾದ ರೀತಿಯಲ್ಲಿ ಅಂತರ ಕಾಣಬರುತ್ತದೆ ಅಷ್ಟೆ.

೪

ದೊಂಬಿದಾಸರು ಹಾಡುವ ಹಾಡ್ಗತೆಗಳಲ್ಲಿ ಮನಸೆಳೆಯುವ ಮತ್ತೊಂದು ಹಾಡ್ಗತೆ - 'ಕಲಿಯುಗದೊಳಗೆ ಕರ್ಮವೆಚ್ಚಿತು'. ಇದೇ ಹಾಡ್ಗತೆ ಡಾ. ಜೀಶಂಪ ಅವರ 'ದೊಂಬಿದಾಸರ ಲಾವಣಿ'ಗಳು ಸಂಕಲನದಲ್ಲಿ 'ತಟವಾಣಿ ಹೆಣ್ಣು' ಎಂಬ ಶೀರ್ಷಿಕೆಯಲ್ಲಿಯೂ, ಕರಾಕೃ ಅವರ 'ಜಾನಪದ ಕಥನ ಗೀತೆಗಳು' ಎಂಬ ಸಂಕಲನದಲ್ಲಿ 'ಕಲಿಯುಗದ ಬಾಲೆ' ಎಂಬ ಶೀರ್ಷಿಕೆ ಯಲ್ಲಿಯೂ, ಪ್ರಕಟವಾಗಿವೆ. ಇವೂ ಕೂಡ ದೊಂಬಿದಾಸರಿಂದಲೇ ಸಂಗ್ರಹಿಸಲಾದುವುಗಳು. ಮೂಲ ಕಥೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ. ವರ್ಣನೆಗೆ ಸಂಬಂಧಿಸಿದಂತೆ ಅಲ್ಲಲ್ಲಿ ಒಂದೆರಡು ಸಣ್ಣ ಪುಟ್ಟ ವ್ಯತ್ಯಾಸಗಳಿವೆ.

ಆರು ಜನ ಅಕ್ಕತಂಗಿಯರಲ್ಲಿ ಮಕ್ಕಳಿಲ್ಲದ ಕೊನೆಯವಳು ಮಲ್ಲಿಕಾರ್ಜುನನನ್ನು ಬೇಡಿ ಮಕ್ಕಳನ್ನು ಪಡೆಯುತ್ತಾಳೆ - ಎಂದು ನಾಗೇಗೌಡರು ಸಂಗ್ರಹಿಸಿರುವ ಪಾಠದಲ್ಲಿ ಕಂಡು ಬಂದರೆ, ಡಾ. ಜೀಶಂಪ ಹಾಗೂ ಕರಾಕೃ ಅವರುಗಳು ಸಂಗ್ರಹಿಸಿರುವ ಪಾಠಗಳಲ್ಲಿ -

ಕಲಿಯುಗದೊಳಗೊಂದು ಕೌತುಕಾದೀತು
ಕುಂತು ಕೇಳಿರಣ್ಣಾ
ನೀವು ತಿಳಿದು ನೋಡಿರಣ್ಣಾ
ನೆಲೆಯ ತಿಳಿಯದ ಹೆಣ್ಣನು ಮೆಚ್ಚಿದರೆ
ಬಾಯಲಿ ಮಣ್ಣಣ್ಣಾ
ಶಿವನೆ ಬಾಯಲಿ ಮಣ್ಣಣ್ಣಾ

ಎಂದು, ಒಂದು ಸಣ್ಣ ಪೀಠಿಕೆಯೊಂದಿಗೆ ಕಥೆ ಆರಂಭವಾಗುತ್ತದೆ. ದೇವರನ್ನು ಬೇಡಿ ಪಡೆದ ಇಬ್ಬರು ಮಕ್ಕಳಿಗೆ - ಸೂರ್ಯ, ಚಂದ್ರ ಎಂದು ಹೆಸರಿಡುತ್ತಾರೆ. ಮುಂದೆ ಗಂಡನಿಗೆ ದಂಡಿಗೆ ಹೋಗಲು ಕರೆ ಬರುತ್ತದೆ. ಮಕ್ಕಳ ಮೇಲಿನ ಪ್ರೀತಿ ಅವನನ್ನು ಸ್ವಲ್ಪ ತಡೆಯುತ್ತದೆ-

ಮಕ್ಕಳ ಬಿಟ್ಟು ದಂಡಿಗೆ ಹೋಗಕೆ
ಮನಸೆ ಬರುದಲ್ಲೆ
ಹ್ಯಾಗ ಹೋಗಲೆಣ್ಣೆ
ನಾನ್ಯಾಂಗೆ ಹೋಗಲೆಣ್ಣೆ
ನಾನ್ಯಾವ ರೀತಿ ಹೋಗಲೆಣ್ಣೆ

ಎಂದು ಪೇಚಾಡಿಕೊಳ್ಳುತ್ತಾನೆ. ಕೊನೆಗೂ ಕರ್ತವ್ಯದ ಕಡೆ ಗಮನ ಕೊಟ್ಟು ಹೋಗಲು ಸಿದ್ಧವಾಗುತ್ತಾನೆ. ಆದರೆ ಹೋಗುವ ಮುನ್ನ ಮಕ್ಕಳ ಬಗೆಗೆ ಎಚ್ಚರದಿಂದಿರುವಂತೆ ಹೆಂಡತಿಗೆ ಮೇಲಿಂದ ಮೇಲೆ ತಿಳಿಸಿ ಹೋಗುತ್ತಾನೆ -

ನಾನಾದರು ದಂಡಿಗೆ ಹೊರಟೆ

ಮಕ್ಕಳು ಬಲು ಜೋಕೆ

ಮನೆ ಕಡೆ ಬಲು ಜೋಕೆ

ಕಂದರು ಬಲು ಜೋಕೆ

ನನ್ನ ಬಾಲರು ಬಲು ಜೋಕೆ

ಆದರೆ, ಗಂಡ ದಂಡಿಗೆ ಹೊರಟ ಕೂಡಲೇ ಈ ಬಾಲೆ ಶೃಂಗರಿಸಿಕೊಂಡು ನೀರಿಗೆ ಹೊರಡುತ್ತಾಳೆ. ಇವಳ ಬೆಡಗು ಬಿನ್ನಾಣವನ್ನು ಕಂಡ ಕಾಮಣ್ಣನೊಬ್ಬ, "ಯಾವೊಳೆ ಬಾಲೆ ನೀರಿಗೋಗೋಳು ನಿಂತು ಮಾತಾಡೆ" ಎಂದು ತನ್ನತ್ತ ಗಮನ ಸೆಳೆಯುವಂತೆ ಮಾಡುತ್ತಾನೆ. ಅದಕ್ಕೆ ಅವಳು, "ಕೂಡಿದ ಗಂಡ ದಂಡಿಗೆ ಹೋದ ಸಂಜಿಕು ಬಾ ಗೆಣೆಯ" ಎಂದು ಮನೆಗೆ ಆಹ್ವಾನಿಸಿ ಅಲ್ಲಿ ನಿಲ್ಲದೆ ಹೊರಟು ಹೋಗುತ್ತಾಳೆ. ಅದರಂತೆ ಸಂಜೆ ಮನೆಗೆ ಬರುತ್ತಾನೆ. ಊಟೋಪಚಾರವೆಲ್ಲ ಮುಗಿದು ಚಕ್ಕಂದದಲ್ಲಿ ತೊಡಗಿದ್ದಾಗ ಆಡಲು ಹೋಗಿದ್ದ ಮಕ್ಕಳಿಬ್ಬರು ಮನೆಗೆ ಬರುತ್ತಾರೆ. ಈ ದೃಶ್ಯವನ್ನು ಕಂಡು ಚಕಿತರಾಗಿ -

ಅಪ್ಪನಾದರೆ ದಂಡಿಗೆ ಹೋದ

ಯವ್ವ ಇವನ್ಯಾರೆ ?

ಎಂದು ಪ್ರಶ್ನಿಸುತ್ತವೆ. ತನ್ನ ಗುಟ್ಟು ಬಯಲಾಗುತ್ತದೆಯೆಂದರಿತ ಅವಳು ಮಕ್ಕಳಿಬ್ಬರನ್ನು ಕ್ರೂರ ರೀತಿಯಲ್ಲಿ ಕೊಂದು ಕೊಟ್ಟಿಗೆಯಲ್ಲಿಡುತ್ತಾಳೆ. ದಂಡಿನಲ್ಲಿದ್ದ ತಂದೆಗೆ ಮಕ್ಕಳಿಬ್ಬರೂ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಕೂಡಲೇ ಅವನು ಹೊರಟು ಬರುತ್ತಾನೆ. ಗಂಡನಿಗೂ ವಿಷ ಹಾಕುತ್ತಾಳೆ. ಅವನ ಕಣ್ಣುಗಳು ಮೊದಲು ಹೋಗುತ್ತವೆ. ಅವನನ್ನೂ ಕೊಟ್ಟಿಗೆಗೆ ನೂಕುತ್ತಾಳೆ; ಅಲ್ಲಿ ಮಕ್ಕಳಿಬ್ಬರ ದೇಹವನ್ನು ನೋಡುತ್ತಾನೆ. ಆಗ ಇವಳು ಆ ಕೊಟ್ಟಿಗೆಗೆ ಬೆಂಕಿ ಹಚ್ಚುತ್ತಾಳೆ. ಶಿವ ಹೂಮಳೆಗರೆದು ಅವರನ್ನೆಲ್ಲ ಬದುಕಿಸಿ ಇವಳನ್ನು ಸಾಯಿಸಿದ್ದಾನೆ.

ಇಷ್ಟು ಇಲ್ಲಿಯ ಕಥೆ. ಆದರೆ ಕಲಾವಿದ ಅದನ್ನು ಸೊಗಸಾಗಿ ನಿರೂಪಿಸಿದ್ದಾನೆ. ಕಲಿಗಾಲದ ಮಹಿಮೆ ಏನೆಂಬುದನ್ನು ಕಲಿಯುಗದ ಹೆಣ್ಣು ಎಂತಹವಳೆಂಬುದನ್ನು ಚಿತ್ರಿಸಲು ಹೊರಟಿದ್ದಾನೆ. ಆದರೆ ಆ ಹೆಣ್ಣಿನ ಪಾತ್ರಕ್ಕೆ ಸಂಬಂಧಿಸಿದಂತೆ ತಕ್ಕ ಹಿನ್ನೆಲೆ ಬರುವುದಿಲ್ಲ. ಮಕ್ಕಳಿಲ್ಲದ ಅವಳು, ಉಪವಾಸವಿದ್ದು, ಮಲ್ಲಿಕಾರ್ಜುನನನ್ನು ಬೇಡಿ ಮಕ್ಕಳನ್ನು ಪಡೆಯುತ್ತಾಳೆ. ಪ್ರೀತಿಯಿಂದ ಸಾಕಿ ಸಲಹುತ್ತಾಳೆ. ಆದರೆ ಗಂಡ ದಂಡಿಗೆ ಹೊರಟ ಮರುಕ್ಷಣವೇ ಆಕೆ ಹಾದರಗಿತ್ತಿಯಾಗಿ, ಮಕ್ಕಳನ್ನು ನಿಷ್ಕರುಣೆಯಾಗಿ ಕೊಲ್ಲುತ್ತಾಳೆ. ಹಾಗೆಯೇ ದಂಡಿನಿಂದ ಹಿಂತಿರುಗಿದ ಗಂಡನನ್ನೂ ವಿಷವಿಕ್ಕಿ ಕೊಲ್ಲುತ್ತಾಳೆ. ಈ ಘಟನೆಗಳಿಗೆ ಸಾಕಷ್ಟು ಹಿನ್ನೆಲೆ ಇದ್ದಿದ್ದರೆ ಮತ್ತಷ್ಟು ಪುಷ್ಟಿಗೊಳ್ಳುತ್ತಿದ್ದುವು. ಮಿಂಡನಾಗಿ ಬಂದವನು, ಅವಳ ಹಿಂದಿನ ಪ್ರೇಮಿಯಾದರೂ ಆಗಿದ್ದಿದ್ದರೆ ಅಥವಾ ಅವಳ ಸ್ವಭಾವಕ್ಕೆ

ತಕ್ಕಂತೆ ಬಯಸದೆಯೇ ಮಕ್ಕಳು ಆಗಿ ಅವರುಗಳ ಬಗೆಗೆ ಪ್ರೀತಿಯ ಲವಲೇಶವೂ ಇಲ್ಲದಂತೆ ಚಿತ್ರಿತವಾಗಿದ್ದಿದ್ದರೆ ಮತ್ತೂ ಪರಿಣಾಮಕಾರಿಯೆನಿಸುತ್ತಿತ್ತು. ಒಂದು ಹೆಣ್ಣು ಇದ್ದಕ್ಕಿದ್ದಂತೆಯೇ ಕಾಳಿಯ ರೂಪವನ್ನು ತಾಳುವುದು ವಿಚಿತ್ರವಾಗಿ ತೋರುತ್ತದೆ.

ಈ ಹಿನ್ನೆಲೆಯನ್ನು ಮರೆತು ನೋಡಿದಾಗ ಇನ್ನುಳಿದ ಘಟನೆಗಳ ಚಿತ್ರಣ ನಮ್ಮನ್ನು ಸ್ಪಂದಿಸುತ್ತದೆ. ವಾಸ್ತವವಾದ ಕ್ರೂರ ಹಿನ್ನೆಲೆಯಲ್ಲಿಯೇ ಬಂದಂತಹ 'ಕಲಿಯುಗದ ಬಾಲೆಯ' ಮನಸ್ಥಿತಿಯಾದರೂ ಹೇಗಿರಬಹುದೆಂಬುದರ ಚಿತ್ರಣ ಸೊಗಸಾಗಿ ಮೂಡಿ ಬಂದಿದೆ. ಕಾಮಣ್ಣನನ್ನು ಮನೆಗೆ ಕರೆದ ಬಾಲೆಯನ್ನು ಕುರಿತು 'ನಾನು ನಿನ್ನ ಮನೆಗೆ ಬಂದರೆ, ಮಕ್ಕಳವರಲ್ಲೆ' ಎಂದು ಪ್ರಶ್ನಿಸಿದಾಗ ಅದಕ್ಕೆ ಅವಳು ಕೊಡುವ ಉತ್ತರ ಮೈ 'ಝುಂ' ಎನ್ನಿಸುತ್ತದೆ-

ಇಬ್ಬರ ಮನಸು ಒಂದಾಗಿದ್ರೆ
ಕುತಿಗೆ ಕುಯಿಸೇನು
ಗೆಣೆಯ, ಪೆಟೆಗೇಲಿ ತುರಿಕೇನು
ಮಕ್ಕಳ ಕತ್ತೆ ಮುರಿದೇನು,
ನಿಮ್ಮಂತ ಗೆಣೆಯರು ಮನಿಗೆ ಬಂದರೆ
ಏನು ಆನಂದ
ಗೆಣೆಯ, ಯಾವ ಸಂತೋಷ
ಏನು ಐಭೋಗ !

ಎಂದು ಚಪ್ಪರಿಸುತ್ತಾಳೆ.

ಮತ್ತೊಂದು ಘಟನೆ ಹೃದಯ ಹಿಂಡುವಂತಹುದು : ಶರೀರದ ನರನಾಡಿಗಳನ್ನೂ ಮಿಡಿಯುವಂತಹುದು : ತಾಯಿ, ಮಕ್ಕಳನ್ನು ಹಿಂಸಿಸುವ, ಕೊಲ್ಲುವ ದೃಶ್ಯ. ಅದಕ್ಕಿಂತ ಹೆಚ್ಚಾಗಿ, ಆ ಮಕ್ಕಳಿಬ್ಬರ ಪರಸ್ಪರ ಪ್ರೀತಿ ಇನ್ನಿಲ್ಲದ ರೀತಿಯಲ್ಲಿ ವ್ಯಕ್ತಗೊಂಡಿದೆ -

ನನ್ನನಾದರೆ ಕೊಲ್ಲೆಯವ್ವ
ಅಣ್ಣನ ಕೊಲುಬ್ಯಾಡ
ಅಣ್ಣಯನ ಕೊಲುಬ್ಯಾಡ

ಎಂದು ತಮ್ಮ ತಾಯಿಯನ್ನು ಕೇಳಿಕೊಳ್ಳುವುದು,

ನನ್ನನಾದರೆ ಕೊಲ್ಲೆ ಯವ್ವ -
ತಮ್ಮನ ಕೊಲುಬ್ಯಾಡ
ತಮ್ಮಯ್ಯನ ಕೊಲು ಬ್ಯಾಡ

ಎಂದು ಅಣ್ಣ ತಾಯಿಯನ್ನು ಬೇಡಿಕೊಳ್ಳುವುದು ಮನಸ್ಸನ್ನು ಕಲುಕುತ್ತದೆ. ಆದರೆ, ಅದಕ್ಕೆ ಅವಳು -

ಇಬ್ಬರಲಿ ಒಬ್ಬನ ಬಿಟ್ಟರ

ಒಬ್ಬನ ಬಿಡಲಾರೆ

ನನ ಪ್ರಾಣಕೆ ಬತ್ತೈತೆ !

ಎಂದು ಹೇಳಿ ಇಬ್ಬರನ್ನೂ ತೀರಿಸುತ್ತಾಳೆ. 'ಕಲಿಯುಗದೊಳಗೆ ಕರ್ಮವೆಚ್ಚಿತು ಲಾಲಿಸಿ ಕೇಳಿರಣ್ಣ, ತಿಳಿದು ನೋಡಿರಣ್ಣ' ಎಂದು ಹೇಳಿ, ಅಂತ ಹೆಣ್ಣೊಬ್ಬಳ ಚಿತ್ರವನ್ನು ಚಿತ್ರಿಸಿದ್ದಾನಾದರೂ, ಅದಕ್ಕೆ ತಕ್ಕ ಪರಿಸರವನ್ನು ಕಲ್ಪಿಸುವಲ್ಲಿ, ಪುಷ್ಟಿಗೊಳಿಸುವಲ್ಲಿ ವಿಫಲನಾಗಿದ್ದಾನೆ. ಆದರೆ ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದು ಆಗುತ್ತದೆ ಎಂಬ ಉದಾತ್ತ ತತ್ತ್ವ ಕೊನೆಯಲ್ಲಿ ಪ್ರತಿಪಾದಿತವಾಗಿದೆ.

೫

'ಗೌರಮ್ಮನ ಮೇಲೆ' - ದೊಂಬಿದಾಸರಿಂದಲೇ ಸಂಗ್ರಹಿತವಾದುದಾದರೂ ಅಷ್ಟೊಂದು ಸ್ಪಷ್ಟತೆ ಇಲ್ಲ. ಮಧ್ಯೆ ಮಧ್ಯೆ ತೊಡಕಿದೆ. ಕರೆಯಲು ಬಂದ ಅಣ್ಣನೊಂದಿಗೆ ತೌರಿಗೆ ಹೋಗಲು ಗೌರಮ್ಮ, ಪರಮೇಶ್ವರನ ಅಪ್ಪಣೆ ಬೇಡಲು ಬರುತ್ತಾಳೆ. ಶಿವರಾಯ, ಏಕೆ ? ಏನು ? ನನಗೇನು ತರುತ್ತೀಯ ? ಮೊಂತಾಗಿ ರೇಗಿಸುತ್ತಾನೆ. ತೌರಿನವರು ಬಡವರು. ಏನೂ ಗತಿಯಿಲ್ಲದವರು ಎಂಬುದು ಶಿವನ ಅಭಿಪ್ರಾಯ :

ಅಕ್ಕಿಯ ನುಚ್ಚಿಗೆ ಅರಿಶ್ನದ ದೂಳಿಗೆ

ಯಾವ ತವರಂತ ಮರೆದೀಯಲ್ಲೆ, ನೀನು

ಎಂತ ತವರಂತ ಬಗಸೀದಲೆ ?

ಎಂದು ಹೀಯಾಳಿಸುತ್ತಾನೆ ಶಿವ. ಅದಕ್ಕೆ ಗೌರಿಯ ಉತ್ತರವಾದರೂ ಎಂತಹುದು -

ಅಕ್ಕಿಯ ನುಚ್ಚು ಸಾಕು ಅರಿಶ್ನದ ದೂಳು ಸಾಕು

ಅರಗಳಿಗೆ ನಾನಿದ್ದು ಬರುವೇನಲ್ಲ ಶಿವನೆ

ಚಣ ಹೊತ್ತು ನಾನಿದ್ದು ಬರುವೇನಲ್ಲ

ಎಂದು ನುಡಿಯುತ್ತಾಳೆ. 'ಹೆಣ್ಣು ಮಕ್ಕಳಿಗೆ ತೌರಾಸೆ' ಎಂಬುದನ್ನು ದೃಢವಾಗಿ ತೋರಿ ಕೊಡುವುದೇ ಇದರ ಮುಖ್ಯ ಉದ್ದೇಶವಾಗಿದೆ. ಅದು ದೇವತೆಗಳಿಗೂ ಬಿಟ್ಟದ್ದಲ್ಲ. ಗೌರಮ್ಮನಿಗೆ ಭೂಲೋಕವೇ ತೌರುಮನೆ ಎಂಬ ಹಳ್ಳಿಗರ ಕಲ್ಪನೆಯೂ ಇಲ್ಲಿ ಗಮನಾರ್ಹ. ಗೌರಿಯ ತೌರಾಸೆಯನ್ನು ಕಂಡು, ಅವಳು ಬರುವಾಗ - ತೌರಿನವರು ಬಡವರಾದರೂ ಹೊತ್ತು ತಂದುದನ್ನು ಕಂಡು :

ವರ್ಷಕೆ ಒಂದು ಸಾರಿ ಹೋಗಿಬಾರೆ ಗೌರಮ್ಮ

ಹುಟ್ಟಿದ ಮಕ್ಕಳಿಗಿನ್ನ ತೌರನೆನಸೆ, ನೀನು

ಹುಟ್ಟೋಮಕ್ಕಳಿಗಿನ್ನ ತೌರ ನೆನಸೆ

ಎಂದು ಹೇಳಿ, ಮುಂದೆ ಎಂದೆಂದೂ ಹೋಗಿ ಬರುವಂತೆ ಅಪ್ಪಣೆ ನೀಡುತ್ತಾನೆ. ಗೌರಿ ಹಬ್ಬಕ್ಕೆ ಸಂಬಂಧಿಸಿದಂತೆ, ಆ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಈ ಹಾಡ್ಗತೆ ರಚನಾ ದೃಷ್ಟಿಯಿಂದಲೂ ಸೊಗಸೆನಿಸುತ್ತದೆ.

೬

'ಕರ್ತಿರಾಯ' - 'ಕಾಳಿಂಗರಾಯ', 'ಕತ್ತಲೆರಾಯ' ಎಂಬ ಶೀರ್ಷಿಕೆಗಳಲ್ಲಿ ದೊರೆತಿರುವುದು 'ಕಾಳಿಂಗರಾಯ'ನೆಂಬುವನ ಕಥೆ. ಇದುವರೆವಿಗೂ ಇದರ 3-4 ಪಾಠಗಳು ದೊರೆತಿವೆ. ಕರೀಂಖಾನ್, 'ಕತ್ತಲೆರಾಯನ ಕತೆ' ಎಂಬ ಶೀರ್ಷಿಕೆಯಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕತ್ತಲೆರಾಯ ಕಾಳಿಂಗ ರಾಯನ ತಂದೆ. ಕರಾಕೃ ಅವರು ಚಿತ್ರದುರ್ಗ ಜಿಲ್ಲೆಯಲ್ಲಿ ಸಂಗ್ರಹಿಸಿರುವ 'ಕಾಳಿಂಗರಾಯ', ಮತಿ ಘಟ್ಟ ಮೂರ್ತಿಯವರೂ, ಮಲೆನಾಡು ಭಾಗದಲ್ಲಿ ಇದರ ಒಂದು ಪಾಠವನ್ನು ಸಂಗ್ರಹಿಸಿರು ವುದಾಗಿ ತಿಳಿಯುತ್ತದೆ. ಇವಲ್ಲದೆ, ಕುಮಾರರಾಮ ಸಾಂಗತ್ಯದಲ್ಲಿ - 'ಕಾಳಿಂಗರಾಯ', 'ಸಾರಂಗಧರ' ಹಾಗೂ 'ಕರಿಭಂಟ' ಈ ಮೂರು ಕಥೆಗಳನ್ನು ಹೆಸರಿಸಲಾಗಿದೆ.*

'ಕಾಳಿಂಗರಾಯ' ಸುವಿಸ್ತಾರವಾದ ವರ್ಣನೆಗಳಿಂದ ಕೂಡಿದ ದೀರ್ಘ ಕಾವ್ಯ. ಒಂದೊಂದು ಘಟ್ಟವೂ ವರ್ಣನಾಪ್ರಧಾನವಾಗಿದ್ದು ಹೆಚ್ಚು ಆಕರ್ಷಕವೆನಿಸುತ್ತದೆ. ತಾಯ್ತನದ ಹಂಬಲವನ್ನೂ, ಪುತ್ರವಾತ್ಸಲ್ಯವನ್ನೂ, ಪತಿಯೇ ಪರದೈವವೆಂದು ನಂಬಿದ ಸತಿಯ ಸದ್ಗುಣ ಹಾಗೂ ವೀರನಿಷ್ಠೆ ಯನ್ನೂ, - ಮನಮುಟ್ಟುವಂತೆ ಇಲ್ಲಿ ಚಿತ್ರಿಸಲಾಗಿದೆ. ವೃದ್ಧಾಪ್ಯದಲ್ಲಿಯೂ ವರಬೇಡಿ ಮಗನನ್ನು ಪಡೆದು ಕೊನೆಗೆ ಅಲ್ಪಾಯುವಾಗಿ ಕಳೆದುಕೊಂಡ ತಾಯಿ, ಸತ್ತವನನ್ನು ಗಂಡನನ್ನಾಗಿ ಪಡೆದು ಕೊನೆಗೆ ಬದುಕಿಸಿಕೊಂಡ ಚೆನ್ನವ್ವೆ - ಇವರುಗಳ ಮಧ್ಯೆ ನಿಲ್ಲುವ ಕಾಳಿಂಗರಾಯ - ಈ ಮೂರು ಪ್ರಧಾನ ಪಾತ್ರಗಳನ್ನಾಗುಳ್ಳ ಈ ಹಾಡ್ಗತೆ ಮನಸೆಳೆಯುತ್ತದೆ.

ಇಲ್ಲಿಯ ಕಥೆ ಇಷ್ಟು : ಬಹಳ ಕಾಲದ ಮೇಲೆ - ಕತ್ತಲರಾಯ, ಮದುರಂಬೆಯರು, ಕಾಳಿಂಗ ರಾಯನನ್ನು ಮಗನನ್ನಾಗಿ ಪಡೆಯುತ್ತಾರೆ. ಮೊದಲೇ ಅವನು ಅಲ್ಪಾಯಸ್ಸಿನವನೆಂಬುದು ತಿಳಿಯುತ್ತದೆ. ತಂದೆ ತಾಯಿ ಬಹಳ ಎಚ್ಚರ ವಹಿಸುತ್ತಾರೆ. ಆದರೆ ವಿಧಿ ಸಂಚನ್ನು ಅವರು ವಂಚಿಸಲಾಗುವುದಿಲ್ಲ. ಮಗ ಬೇಟೆಗೆಂದು ಹಟ ಹಿಡಿದು ಹೊರಡುತ್ತಾನೆ. ಜೊತೆಯಲ್ಲಿ ಮಂತ್ರಿಯೇ ಮೊದಲಾಗಿ ಹಿಂಬಾಲಿಸುತ್ತಾರೆ. ಆದರೂ ಮರಣ ಸಂಭವಿಸುತ್ತದೆ. ತಾಯಿ, ಸತ್ತ ಮಗನಿಗೇ ಮದುವೆ ಮಾಡಲು, ಹೆಣ್ಣು ಕರೆದುಕೊಂಡು ಬರುವಂತೆ ಮಂತ್ರಿಗೆ ಹೇಳುತ್ತಾಳೆ. ಹಣದ ಆಸೆಯಿಂದ ಹೆಣ್ಣು ದೊರೆಯುತ್ತದೆ. ಹಾಗೆಯೇ ಅವಳ ಬಲದಿಂದ ಕಾಳಿಂಗರಾಯನೂ ಜೀವ ತಳೆಯುತ್ತಾನೆ.

ನಾಗೇಗೌಡರು ಸಂಗ್ರಹಿಸಿಕೊಟ್ಟಿರುವ 'ಕರ್ತಿರಾಯ' ಅಸಮಗ್ರವಾಗಿದೆ. ಕರಾಕೃ ಅವರು ಸಂಗ್ರಹಿಸಿಕೊಟ್ಟಿರುವ 'ಕಾಳಿಂಗರಾಯ'ದಲ್ಲಿ ಇದರ ಪೂರ್ಣಪಾಠ ದೊರೆಯುತ್ತದೆ. ನಾಗೇಗೌಡರು ಸಂಗ್ರಹಿಸಿರುವ ಕಥೆಯಲ್ಲಿ ಬಹಳ ಕಾಲ ಮಕ್ಕಳಾಗದ ಕತ್ತಲರಾಯ - ಮದುರಂಬೆ ದಂಪತಿಗಳು ಅದಕ್ಕಾಗಿ ಹಂಬಲಿಸುವ ಚಿತ್ರ ಬರುವುದೇ ಇಲ್ಲ. ಆದರೆ ಕರಾಕೃ ಅವರು ಸಂಪಾದಿಸಿರುವ ಪಾಠದಲ್ಲಿ ಇದು ದೀರ್ಘವಾಗಿ ವರ್ಣಿತವಾಗಿದೆ :

ವೃದ್ಧಾಪ್ಯ ಸಮೀಪಿಸಿದರೂ ಲೆಕ್ಕಿಸದೆ ಮದುರಂಬೆ ಶಿವನಲ್ಲಿ ಪುತ್ರಭಿಕ್ಷೆಯನ್ನು ಬೇಡುತ್ತಾಳೆ, ಅದಕ್ಕೆ ಶಿವನು -

ಅಣ್ಣೆ ಹೂವಿನಂಗೆ ಕೆನ್ಯಾಗೆ ನೆರೆ ಬಂದೊ
ಕಂದಾನ ಸಂತಾನ ನಿನಗ್ಯಾಕೆ || ತಾ ||

---

* ಡಾ|| ಜಿ. ವರದರಾಜರಾವ್ ಕುಮಾರ ರಾಮ ಸಾಂಗತ್ಯಗಳು. ಪು. ೧೮೧

ಹತ್ತಿ ಹೂವಿನಂಗೆ ನೆತ್ಯಾಗೆ ನೆರೆ ಬಂದ್ರೋ

ಪುತ್ರನ ಸಂತಾನ ನಿನಗ್ಯಾಕೆ || ತಾ ||

ಎಂದು ಪ್ರಶ್ನಿಸುತ್ತಾನೆ. ಆದರೆ ಮದುರಂಬೆ ಅಷ್ಟಕ್ಕೇ ಬಿಡುವುದಿಲ್ಲ. 'ಬಂಜೆಂಬ ಸೊಲ್ಲ ಬಿಡಿಸಯ್ಯಾ' ಎಂದು ಅಂಗಲಾಚಿ ಬೇಡುತ್ತಾಳೆ. ಕೊನೆಗೆ ಅವಳ ಬಯಕೆ ಈಡೇರುತ್ತದೆ. ಅವಳು ತಾಯಿಯಾಗುತ್ತಾಳೆ. ಇಲ್ಲೆಲ್ಲ ಸುದೀರ್ಘವಾದ ವರ್ಣನೆ ಬರುತ್ತದೆ. ಅವನು ಅಲ್ಪಾಯು ಎಂಬ ಸೂಚನೆ ಶಿವನಿಂದಲೂ ತಿಳಿದಿರುತ್ತದೆ. ಅರಮನೆಯ ಜೋಯಿಸರೂ ಅದನ್ನೇ ಹೇಳುತ್ತಾರೆ. ಆದರೆ ಅವೆಲ್ಲವನ್ನೂ ಮರೆತು ಬೇಕಾದ ರೀತಿಯಲ್ಲಿ ಮಗನಿಗೆ ಸರ್ವವಿಧದ ಸೌಕರ್ಯಗಳನ್ನು ಮಾಡಿಕೊಡುತ್ತಾರೆ.

ಒಂದು ದಿನ ಕಾಳಿಂಗರಾಯ ಗೆಳೆಯರೊಂದಿಗೆ ಚೆಂಡಾಟವಾಡುತ್ತಿರುವಾಗ ವಿಧಿ ಮಾಯೆಯ ಕಣ್ಣು ಅವನ ಮೇಲೆ ಬೀಳುತ್ತದೆ -

ರಾಜನ ಮಗನಾದ್ರೆ ಬೀದ್ಯಾಗೆ ಸೆಂಡಾಡಬೇಕು

ನಾಳೋಗಬೇಕು ಹುಲಿಬೇಟೆ | ಹೋಗದಿದ್ರೆ |

ಸ್ವಾರಿ ಕರೆಕೊಂತ ಇರಬೇಕು || ಲೆ ||

ವಿಧಿ ಅವನಲ್ಲಿ ಹುಲಿ ಬೇಟೆಯ ಬೀಜವನ್ನು ಬಿತ್ತುತ್ತಾಳೆ. 'ನಾಠ್ಯಂದ ಮಾತು ಉಕ್ಕುತದೆ ನಮ್ಮ ಒಡಲಾಗೆ' ಎಂದು ತಾಯಿಯನ್ನು ಒಪ್ಪಿಸಿ ಬೇಟೆಗೆ ಹೊರಡಲು ಸಿದ್ಧವಾಗುತ್ತಾನೆ.

ಇದಿಷ್ಟು ಭಾಗ, ನಾಗೇಗೌಡರು ಸಂಪಾದಿಸಿರುವ ಭಾಗದಲ್ಲಿ ಬರುವುದಿಲ್ಲ. ಕಾಳಿಂಗರಾಯ ಬೇಟೆಗೆ ಹೊರಡುವಲ್ಲಿಂದ ಕತೆ ಆರಂಭವಾಗುತ್ತದೆ. ಇಲ್ಲಿಯೂ ಕೂಡ ಈ ಎರಡು ಪಾಠಗಳಲ್ಲಿ ಸಾಕಷ್ಟು ಭೇದಗಳು ಕಂಡು ಬರುತ್ತವೆ. ಕರಾಕ್ರ ಅವರ ಪಾಠದಲ್ಲಿ ವಿಧಿಯೇ ನೇರವಾಗಿ ನಿಂತು ಕಾಳಿಂಗರಾಯನನ್ನು ಸಾವಿನತ್ತ ಕೊಂಡೊಯ್ಯಲು ಸತತ ಪ್ರಯತ್ನ ನಡೆಸುವುದನ್ನು ಕಾಣುತ್ತೇವೆ. ಮಾಯದ ಗುಡಿಯನ್ನು ಮಾಡಿ, ಅದರಲ್ಲಿ ಹುಲಿಯ ಚಿತ್ರವನ್ನು ಗೀಜುಗನ ಹಿಂಡಿನ ಚಿತ್ರವನ್ನು ಕೊರೆದು ವಿಧಿಯಮ್ಮನ ಮೂಲಕ ಕಳುಹಿಸಿಕೊಡುತ್ತಾನೆ ಶಿವರಾಯ. ವಿಧಿಯೇ, ತನ್ನ ಕೈವಾಡದಿಂದ ಕಾಳಿಂಗರಾಯ ಅದನ್ನು ಪ್ರವೇಶಿಸುವಂತೆ ಮಾಡುತ್ತಾಳೆ. ಗೀಜಗನ ಹಿಂಡನ್ನು ಕಂಡು ಒಳ ನುಗ್ಗಿದ ಕಾಳಿಂಗರಾಯ ಅಲ್ಲಿಯ ಮಾಯದ ಹುಲಿಯ ಬಾಯಿಗೆ ಬಲಿಯಾಗುತ್ತಾನೆ-

ಕೆಂಡದಂಥ ಕಣ್ಣು ಕೊಕ್ಕಾರದಂಥ ಮೀಸೆ

ಹಟ್ಟಿ ಬಂದ ಹುಲಿಯೆ ಎಟ್ಟಿದಂಗಾಯ್ತು ||

ಅರೆಬಂದ ಹುಲಿಯ ಇರಿಯೋನ ಹೊತ್ತಿಗೆ

ನನ್ನ ಬಾಲ ಕಾಳಿಂಗ ಸಿಗ್ಬೆಬಿದ್ದ

ಕಾಳಿಂಗ ಮಾಡಿದ ಸುದ್ದಿಯನ್ನು ತಿಳಿದು ತಾಯಿಯೇ ಅಲ್ಲಿಗೆ ಧಾವಿಸಿ ಬರುತ್ತಾಳೆ. ಹುಚ್ಚಿಯಂತೆ ಅಲೆಯುತ್ತಾಳೆ. ಅವಳು ಬರು ಬರುವ ಬರದಲ್ಲಿಯೇ ಅವಳ ದುಃಖ ಆವೇಶಗಳನ್ನು ಕವಿ ಚಿತ್ರಿಸುತ್ತಾನೆ :

ಮಡಿದ ಕಾಳಿಂಗನ ಹಡೆದವ್ವ ಬರುತಾಳೆ

ಕಡೆಯೋಳು ಸಮುದ್ರಾವು ಕಲಿಕ್ಯಾವು ।। ಹೇ ।।

ಹಡೆದವ್ವ ಅಡವಿ ಹೋಗುತಾಳೆ ।। ಹೇ ।।

ಸತ್ತ ಕಾಳಿಂಗನ ಹೆತ್ತವ್ವ ಬರುತಾಳೆ

ಸುತ್ತೇಳು ಸಮುದ್ರಾವೆ ಕಲಿಕ್ಯಾವು । ಕಾಳಿಂಗನ ।। ಹೇ ।।

ಹೆತ್ತವ್ವ ಅಡವಿ ಹೋಗುತಾಳೆ ।। ಹೇ ।।

ಏಳು ಸಮುದ್ರ ಕಲಕಿ ಕುಲುಕುವಷ್ಟು ರಭಸದಲ್ಲಿ ಅವಳ ಬರವು. ಅವಳ ದುಃಖ ಹೇಳ ತೀರದು. ಈ ಸಂದರ್ಭಗಳೂ ನಾಗೇಗೌಡರು ಸಂಗ್ರಹಿಸಿರುವ ಪಾಠದಲ್ಲಿ ಬರುವುದಿಲ್ಲ. ಬದಲಾಗಿ, ಸತ್ತ ಕಾಳಿಂಗನನ್ನು ಮಂತ್ರಿಯೇ ಹೊತ್ತು ತರುತ್ತಾನೆ. - 'ಸತ್ತಿದ್ದ ಶವವ ಹೊತ್ತುಕೊಂಡು ಪರದಾನಿ ಬಂದನು ಊರಿಗೆ ಪರದಾನಿ' ಎಂದು ಚಿತ್ರಿತವಾಗಿದೆ.

ಸತ್ತ ಕಾಳಿಂಗನಿಗೇ ಮದುವೆ ಮಾಡಿಸುವ ಸಂದರ್ಭ, ಗಂಡನನ್ನು ಮರಳಿ ಪಡೆಯುವ ಸಂದರ್ಭ - ಇವುಗಳಲ್ಲಿ ಎರಡು ಪಾಠಗಳಲ್ಲಿಯೂ ಹೆಚ್ಚು ಕಡಿಮೆ ಒಂದೇ ಆಗಿ ಬರುತ್ತದೆ. ಆದರೂ ಕರಾಕ್ಕ ಅವರ ಪಾಠದಲ್ಲಿಯ ವಿಸ್ತಾರ ವರ್ಣನೆ ನಾಗೇಗೌಡರ ಪಾಠದಲ್ಲಿ ಕಾಣುವುದಿಲ್ಲ.

ಹಲವು ದೃಷ್ಟಿಯಿಂದ 'ಕಾಳಿಂಗರಾಯ' ಒಂದು ಉತ್ತಮ ಕಾವ್ಯ. ವರ್ಣನೆ, ಪಾತ್ರ ಸೃಷ್ಟಿ ಹಾಗೂ ಪಾತ್ರ ಪೋಷಣೆಯ ದೃಷ್ಟಿಯಿಂದಂತೂ ಆಕರ್ಷಕ. ಮದುರಂಬೆ, ಚೆನ್ನವ್ವ, ಕಾಳಿಂಗರಾಯ ಮತ್ತು ಪ್ರಧಾನಿಯ ಪಾತ್ರಗಳು ಮನಸ್ಸಿನಲ್ಲಿ ಉಳಿಯುತ್ತವೆ, ಕಾಳಿಂಗರಾಯ ಇಡೀ ಕಥೆಯ ಕೇಂದ್ರ ಬಿಂದು. ಅತ್ತ ಪುತ್ರವಾತ್ಸಲ್ಯದ ಪರಮ ನಿಧಿಯೆನಿಸಿದ ಮದುರಂಬೆ, ಇತ್ತ ಪತಿಯೇ ಪರದೈವವೆಂದು ಪರಮನಿಷ್ಠೆಯುಳ್ಳ ಸಾಧ್ವೀಮಣಿ ಚೆನ್ನವ್ವ - ಇವರುಗಳ ಮಧ್ಯೆ ನಿಲ್ಲುವ ಕಾಳಿಂಗರಾಯನ ಪಾತ್ರ ಒಂದು ಅದ್ಭುತ ಚಾಲಕ ಶಕ್ತಿಯಾಗಿ ನಮ್ಮ ಗಮನವನ್ನು ಸೆಳೆಯುತ್ತದೆ.

೭

ಬಹುಶಃ ನಡೆದ ಘಟನೆಯೊಂದರ ಮೇಲೆಯೇ ನಿರೂಪಿತವಾಗಿರುವ ಲಾವಣಿ - 'ತುಂಬಿದ ಬಳ್ಳಾರಿ ವಳಗೆ'. ಇದರದ್ದೇ ಇನ್ನೊಂದು ಪಾಠ. ಚೌಡಿಕೆ ಸಂಪ್ರದಾಯದವರಿಂದ 'ಬಳ್ಳಾರಿ ತತ್ತ್ವ' ಎಂಬ ಶೀರ್ಷಿಕೆಯಲ್ಲಿ ದೊರೆಯುತ್ತದೆ. ನಂ. ನಾರಾಯಣಗೌಡರು ಸಂಪಾದಿಸಿ ಪ್ರಕಟಿಸಿರುವ 'ಚೌಡಿಕೆ ಕಾವ್ಯಗಳು' ಕೃತಿಯಲ್ಲಿ ಈ ಪಾಠವನ್ನು ಕಾಣಬಹುದು. ಬಳ್ಳಾರಿಯಲ್ಲಿಯೇ ಸಂಭವಿಸಿದ ಘಟನೆಯಿದೆಂದು ಕಲಾವಿದರು ಹೇಳುತ್ತಾರೆ. ಈ ಘಟನೆಗೆ ಸಂಬಂಧಿಸಿದ ಮಗುವಿನ ಸಮಾಧಿಯೊಂದನ್ನು ಅವರು ಅಲ್ಲಿ ತೋರುತ್ತಾರೆ. ಹಾಗಾಗಿ ಆ ಸ್ಥಳದಲ್ಲಿಯೇ ನಡೆದ ಘಟನೆ ಇದೆಂಬುದೂ ವೇದ್ಯ.

ಇದೊಂದು ಸಣ್ಣ ಘಟನೆ. ಆದರೆ, ಹೃದಯ ಕಲಕುವಂತಹುದು. ಮಗುವಿನ ಮೈ ಮೇಲಿದ್ದ ವಸ್ತ್ರಾಭರಣಗಳ ಆಸೆಯಿಂದಾಗಿ ಸ್ವಂತ ಸೋದರಮಾವ, ಶಾಲೆಗೆ ಹೊರಟಿದ್ದ ಮಗುವನ್ನು ತಿಂಡಿಯ ಆಸೆ ಹುಟ್ಟಿಸಿ ಕರೆತಂದು, ಎಲ್ಲವನ್ನೂ ಕಿತ್ತುಕೊಂಡು ಬಾವಿಗೆ ತಳ್ಳುತ್ತಾನೆ. ಇಷ್ಟು ಕಥೆ. ಆದರೆ ನಿರೂಪಣೆಯಲ್ಲಿ - ಮನವನ್ನು ತಟ್ಟುವ, ಮುಟ್ಟುವ ಹೊಳಪಿದೆ, ಮೊನಚಿದೆ ; ಹೃದಯವನ್ನು ಕಲಕುವ, ಕರಗಿಸುವ ಶಕ್ತಿಯಿದೆ, ಯುಕ್ತಿಯಿದೆ.

ಈ ಎರಡೂ ಪಾಠಗಳನ್ನು ಗಮನಿಸುವಾಗ - ಹುಡುಗನ ಸಾವು ಸಂಭವಿಸುವವರೆಗಿನ ಘಟನೆಗಳು ಎರಡು ಪಾಠಗಳಲ್ಲಿಯು ಒಂದೆಯಾಗಿ ಬರುತ್ತದೆ. ನಾಗೇಗೌಡರು ಸಂಗ್ರಹಿಸಿರುವ ಪಾಠದಲ್ಲಿ ಅಷ್ಟಕ್ಕೇ ಮುಕ್ತಾಯವೂ ಆಗುತ್ತದೆ. ಆದರೆ, ಚೌಡಿಕೆಯವರು ಹಾಡುವ ಪಾಠದಲ್ಲಿ ಅದು ಮುಂದುವರಿಯುತ್ತದೆ. ಅಲ್ಲದೆ ಇತರ ವರ್ಣನೆಗಳೂ ಇದರಲ್ಲಿ ಹೆಚ್ಚಾಗಿಯೇ ಬರುತ್ತವೆ. ಸೊಂಟಕ್ಕೆ ಕಲ್ಲನ್ನು ಕಟ್ಟಿ ಏಳಾಳುದ್ದ ಬಾವಿಗೆ ಹಾಕಲು ಬಂದ ಸೋದರಮಾವನನ್ನು ಕುರಿತು ಆ ಬಾಲಕ ಕರುಳು ಮಿಡಿಯುವಂತೆ -

ಯಾಕೋ ಸೋದರಮಾವ
ಬ್ಯಾಡ ಸೋದರಮಾವ
ಕೈಯೆತ್ತಿ ಮುಗಿಯುತೀನಿ
ನಿನ ಕಾಲಿಗೆ ಬೀಳುತೀನಿ
ನಿನ್ನ ಏಳ್ಜಾನ ಮಕ್ಕಳೊಳಗೆ
ನಾನೊಬ್ಬ ಮಗನೆ ಕಾಣೊ
ನನ್ನ ಪ್ರಾಣನಾದರೆ ಕಳಿಬ್ಯಾಡ
ಮಾವಯ್ಯ - ಅಯ್ಯೊ ಸೋದರಮಾವ
....
ಒಡವೆ ವಸ್ತ್ರಗಳ ಕೊಳ್ಳೊ
ಬದ್ದು ಬಳೆಗಾಳ ಕೊಳ್ಳೊ
ಎಲ್ಲಾ ಒಡವೇಯ ಕೊಳ್ಳೊ
ನಮ ತಂದೆ ತಾಯಿ ಕಾಣದಾಂಗೆ
ವಂಬೈನೂರು ರೂಪಾಯ ನಿನಗೆ
ತಂದು ಕೊಡುತೀನಿ
ಅಯ್ಯೊ ಸೋದರ ಮಾವ
ನಾನು ಸತ್ತೋದ ಮೇಲೆ
ನನ್ನ ವಂಶಾಕೆ ಶಿವನೆ
ಯಾರು ದಿಕ್ಕಿಲ್ಲ ಕಾಣೊ
ನನ್ನ ಪ್ರಾಣನಾದರೆ ಕಳಿಯ ಬ್ಯಾಡ
ಮಾವಯ್ಯ - ಅಯ್ಯೊ ಸೋದರ ಮಾವ !

ಎಂದು ಬಗೆ ಬಗೆಯಲ್ಲಿ ಬೇಡಿಕೊಳ್ಳುತ್ತಾನೆ. ಆದರೆ ಇದಾವುದು ಅವನ ಮನವನ್ನು ತಟ್ಟುವುದಿಲ್ಲ. ಇಂತಹ ಮನತಟ್ಟುವ ಭಾವನೆಗಳು ಮೊದಲ ಪಾಠದಲ್ಲಿ ಇಲ್ಲವಾಗಿವೆ. ಸತ್ತ

ಮಗನ ಕಂಡು ತಾಯಿ ಗೋಳಿಡುವ ಕರುಣಾಜನಕ ದೃಶ್ಯವೂ ಅಲ್ಲಿ ಇಲ್ಲವಾಗಿದೆ. ಸೋದರಮಾವ ಎಸಗಿದ ಕೃತ್ಯವನ್ನೆಲ್ಲ ಕಣ್ಣಾರೆ ಕಂಡವರೊಬ್ಬರು ಅದನ್ನೆಲ್ಲ ಬೆಳಕಿಗೆ ತಂದು ನಿರಪರಾಧಿಯೊಬ್ಬಳನ್ನು ಪಾರು ಮಾಡಿದ್ದಲ್ಲದೆ, ಅಪರಾಧಿಗೆ ಗಲ್ಲುಶಿಕ್ಷೆ ದೊರೆಯುವಂತೆ ಮಾಡುತ್ತಾರೆ.

ಸಣ್ಣದೊಂದು ಘಟನೆ, ಜನಪದ ಕವಿಯ ಪ್ರತಿಭಾ ಮೂಸೆಯಲ್ಲಿ ಅರಳಿ ಹೂವಾಗಿ ಕಾವ್ಯ ದೃಷ್ಟಿಯಲ್ಲಿ ಕಂಪನ್ನು ಸೂಸಿದೆ.

೮

'ಎತ್ತಿದೆ ನಾಗವ್ವನಾ ಸ್ಮರಣೆಯಾ' ಇಲ್ಲಿಯ ಒಂದು ಅಪೂರ್ಣ ಸಂಗ್ರಹ. ಇದರ ಎರಡು ಪಾಠಾಂತಗಳು ದೊರೆತಿವೆ. ಡಾ. ಜೀಶಂಪ ಅವರು ತಮ್ಮ 'ಜನಪದ ಖಂಡ ಕಾವ್ಯಗಳಲ್ಲಿ' ಇದರ ಇನ್ನೊಂದು ಪಾಠವನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಮೊದಲ ಪಾಠದ ಕಥೆಯ ಸಾರಾಂಶ ಇಷ್ಟು: ದಂಡಿಗೆ ಹೊರಡಲಿರುವ ನಾಗಣ್ಣನಿಗೆ ಮದುವೆ ಮಾಡಬೇಕೆಂದು, ನಾಗವ್ವನನ್ನು ಕೇಳಲು ಬರುತ್ತಾರೆ. ಆದರೆ ಆ ಸಂದರ್ಭದಲ್ಲಿ ಆದ ಅಪಶಕುನಗಳಿಂದಾಗಿ, ಮದುವೆಯಾಗಲು ನಾಗವ್ವ ಒಪ್ಪುವುದಿಲ್ಲವಾದರೂ, 'ಮಾತಿಗೆ ತಪ್ಪೋರು ನಾವಲ್ಲ' ಎಂಬ ತಂದೆಯ ಹಟದಿಂದಾಗಿ ಮದುವೆ ನಡೆದು ಹೋಗುತ್ತದೆ. ನಾಗವ್ವನಲ್ಲಿ ಮೊದಲಿನಿಂದ ಕೊನೆಯವರೆವಿಗೂ ಅಸಮಧಾನ ಇದ್ದೇ ಇರುತ್ತದೆ. ಮದುವೆ ಮುಗಿದ ಕೂಡಲೇ ನಾಗಣ್ಣ ಯುದ್ಧಕ್ಕೆ ಹೊರಡುತ್ತಾನೆ. ಆಗಲೂ ಅಪಶಕುನಗಳು ಎದುರಾಗುತ್ತವೆ. ಆದರೆ, ಅವಾವನ್ನು ಲಕ್ಷಿಸದೆ ಅವನು ಮುನ್ನಡೆಯುತ್ತಾನೆ. ಇಲ್ಲಿಗೆ ನಾಗೇಗೌಡರು ಸಂಗ್ರಹಿಸಿರುವ ಪಾಠದ ಕಥೆ ಮುಕ್ತಾಯವಾಗುತ್ತದೆ. ಮುಂದೆ ಅವರೇ ಅಡಿ ಟಿಪ್ಪಣಿಯಲ್ಲಿ "ಹಾಡು ಅಪೂರ್ಣವಾದಂತಿದೆ. ಆಯುಧ ಮುರಿದ ಮೇಲೆ ನಾಗಣ್ಣ ಯುದ್ಧದಲ್ಲಿ ಮಡಿದು ನಾಗವ್ವನ ಬಾಳಿಗೆ ಕೊನೆಯಾಗಿ ಆಕೆ ಚಿತೆಯನ್ನೇರಿ ಸತಿಯಾಗಿರಬೇಕು." ಎಂದು ಹೇಳಿದ್ದಾರೆ. ವರ್ಣನೆಯೇ ಹೆಚ್ಚಾಗಿ ಬರುವ ಈ ಹಾಡ್ಗತೆಯಲ್ಲಿ ಕಥೆ ಕಡಿಮೆ.

ಡಾ. ಜೀಶಂಪ ಅವರು ಸಂಗ್ರಹಿಸಿರುವ ಪಾಠ ಇದರಿಂದ ಸಂಪೂರ್ಣ ಭಿನ್ನವಾದುದು : ಮೊದಲ ಪಾಠದಲ್ಲಿ ನಾಗಣ್ಣ ಎಂಬ ಹೆಸರಿನಲ್ಲಿ ಬರುವವನೇ ಇಲ್ಲಿಯ ಚಿಂದಯ್ಯ. ಎಷ್ಟೇ ಅಡೆತಡೆಗಳು ಬಂದರೂ, ನಾಗವ್ವನನ್ನು ತಂದುಕೊಳ್ಳುವ ಸಂದರ್ಭ ಒದಗಿ ಬರುತ್ತದೆ. ಲಗ್ನ ನಿಶ್ಚಯವಾಗುತ್ತದೆ. ಆದರೆ ಹೆಜ್ಜೆ ಹೆಜ್ಜೆಗೂ ಅಪಶಕುನಗಳು ಕಾದಿರುತ್ತವೆ. ಮದುವೆಯ ಶಾಸ್ತ್ರಗಳು ಇನ್ನು ನಡೆಯುತ್ತಿರುವಾಗಲೇ ಚಿಂದಯ್ಯ ತನ್ನ ತಂಗಿಯಿಂದ - ಬೇಡರು ತಮ್ಮ ಮೇಕೆಗಳನ್ನೆಲ್ಲ ಕದ್ದು ಹೊಡೆಯುತ್ತಿದ್ದಾರೆಂಬ ಸುದ್ದಿಯನ್ನು ತಿಳಿದು ಕಟ್ಟಿದ ಕಂಕಣದಲ್ಲಿಯೇ ಬಿಲ್ಲನ್ನು ಹಿಡಿದು ಹಿಂಬಾಲಿಸುತ್ತಾನೆ. ಅವರಿಂದ ಮೇಕೆಗಳನ್ನೆಲ್ಲ ಬಿಡಿಸಿಕೊಂಡು ಹಿಂತಿರುಗು ತ್ತಾನೆ. ಆದರೆ ಮನೆಗೆ ಬಂದು ನೋಡಿದಾಗ, ಕುಂಟಾಡಿನ ಮರಿಯೊಂದು ಇಲ್ಲವೆಂಬುದನ್ನು ತಿಳಿದು, ಮತ್ತೆ ಅದನ್ನು ಹುಡುಕಿ ತರಲು ಧಾವಿಸುತ್ತಾನೆ. ಆದರೆ ಮತ್ತೆ ಆತ ಮನೆಗೆ ಹಿಂತಿರುಗುವುದಿಲ್ಲ.

ಮುಂಗೋಳಿ ಕೂಗಿತು ಮೂಡು ಕೆಂಪೇರಿತು
ಸೀಗೆಯ ಮೆಳೆಯಲ್ಲಿ ಮಲಗವನೆ | ಚಿಂದಯ್ಯ
ಹಾಳು ಬೇಡರು ಅವನ ಕಡಿದರು.

ಸೀಗೆಯ ಮೆಳೆಯ ಬಳಿ ಕಾದು ಕುಳಿತಿದ್ದ ಬೇಡರು ಚಿಂದಯ್ಯನನ್ನು ಮೋಸದಿಂದ ಕೊಲ್ಲುತ್ತಾರೆ. ಇತ್ತ ಸಾವಿನ ಸುದ್ದಿಯನ್ನು ತಿಳಿದ ನಾಗವ್ವ ಮದುವೆಗೆ ಮುನ್ನವೇ ಮಡಿದ ಚಿಂದಯ್ಯನಿಗಾಗಿ ಗೋಳಿಡುತ್ತಾಳೆ: ಚಿಂದಯ್ಯನ ಶವಸಂಸ್ಕಾರಕ್ಕೆ ಸಿದ್ಧತೆ ನಡೆಯುತ್ತದೆ. ನಾಗವ್ವನು ಚಿಂದಯ್ಯನ ಜೊತೆ ಚಿತೆ ಏರಲು ಸಿದ್ಧವಾಗುತ್ತಾಳೆ. ಲಗ್ನ ನಿಶ್ಚಯವಾದಂದೇ ಅವನು ತನ್ನ ಪತಿಯೆಂದು ಅವಳು ಸಾರುತ್ತಾಳೆ. ಯಾರ ಹಿತೋಪದೇಶವೂ ಅವಳ ದೃಢ ನಿಲುವನ್ನು ಕದಲಿಸಲು ಸಾಧ್ಯವಾಗುವುದಿಲ್ಲ. ಗಂಡನಾಗಬೇಕಾಗಿದ್ದವನೊಡನೆಯೇ ಸಾಯುವುದೇ ಸರಿಯೆಂದು ನಿರ್ಧರಿಸುತ್ತಾಳೆ. ಯಾರ ಯಾವ ಆಸೆಯೂ ಅವಳನ್ನು ತಡೆಯಲಾಗುವುದಿಲ್ಲ -

ನೀ ನೂರ ಕೊಟ್ಟರೆ ನನ್ನ ಕೊಪ್ಪಿನ ಬೆಲೆಯಿಲ್ಲ
ಅತ್ತೆಯ ಮಗನೆ ಚಿಂದಯ್ಯ | (ನಾ) ಕುಟ್ಟೆ
ನಾ ಹತ್ತೋದೆ ಲೇಸು ಒಡಗಿಚ್ಚ
ನೀ ಹೊನ್ನು ಕೊಟ್ಟರೆ ನನ್ನ ವಾಲೆಯ ಬೆಲೆಯಿಲ್ಲ
ಮಾವನ ಮಗನೆ ಚಿಂದಯ್ಯ | (ನಾ) ಕುಟ್ಟೆ
ನಾ ಹತ್ತೋದೆ ಲೇಸು ಒಡಗಿಚ್ಚ

ಒಂದೇ ಮನದಲ್ಲಿ ಚಿತೆಯನ್ನು ಏರಿ ನಿಲ್ಲುತ್ತಾಳೆ. ಮದುವೆಯಾಗದೆಯೇ ಸಹ್ಯಗಮನವನ್ನು ಅನುಸರಿಸುತ್ತಾಳೆ ನಾಗವ್ವ:

ಹೆಣ್ಣೀಗೆ ಮಣ್ಣು ಬಿದ್ದೊ ಕಣ್ಣಿಗೆ ಸೆತ್ತಬಿದ್ದೊ
ಸಣ್ಣ ಸೀರೆಮ್ಯಾಲೆ ಕಿಡಿಬಿದ್ದೊ | ನಾಗವ್ವನ |
ಎಣೆಗಂಟು ಸಲುಗಿ ಉರಿದ್ಹೋದೊ |

ಎಂದು ಕವಿ ಮುಕ್ತಾಯ ಹಾಡುತ್ತಾನೆ.

ಈ ಎರಡು ಪಾಠಗಳನ್ನು ಪರಿಶೀಲಿಸಿದಾಗ, ಕಥೆಯ ಹೊರಪದರದ ಸಾಮ್ಯವೊಂದನ್ನುಳಿದು ಮಿಕ್ಕೆಲ್ಲದರಲ್ಲಿಯೂ ಸಾಕಷ್ಟು ಭೇದವಿರುವುದನ್ನು ಕಾಣುತ್ತೇವೆ. ಮೊದಲ ಪಾಠದಲ್ಲಿ, ನಾಗಣ್ಣ ಮದುವೆಯಾದ ನಂತರ ಯುದ್ಧಕ್ಕೆ ಹೋಗಿ -

ಆರು ಸಾವಿರ ದಂಡ ಹಾರಾರಿ ಕಡಿದನೊ
ಮೇಲೊಂದು ಸಾವಿರವ ಕೈ ಬಳಸಿ ಕಡಿಯೋವತ್ತಿಗೆ
ಅವನು ಹಿಡಿದಿದ್ದ ಆಯುಧವೆ ಮುರಿದ್ಹೋದೊ

ಎಂದು ಕಥೆ ಅಪೂರ್ಣ ರೀತಿಯಲ್ಲಿ ಮುಕ್ತಾಯವಾಗುತ್ತದೆ. ಆದರೆ ಇಲ್ಲಿ, ಚಿಂದಣ್ಣ ಮದುವೆಗೆ ಮುಂಚೆಯೇ ಬೇಡರೊಡನೆ ಆಡು ಬಿಡಿಸಿಕೊಂಡು ಬರಲು ಹೋಗಿ ಮೋಸದಿಂದ ಕೊಲೆಗೀಡಾಗುತ್ತಾನೆ. ಮೊದಲ ಪಾಠದಲ್ಲಿ ವರ್ಣನೆ ಅತಿಯಾಗಿ ಕಂಡು ಬಂದರೆ ಎರಡನೆಯ ಪಾಠದಲ್ಲಿ ಸಂಕ್ಷಿಪ್ತತೆಯೇ ವಿಶೇಷವಾಗಿ ಕಾಣಬರುತ್ತದೆ. ಸಂಕೇತಗಳ ಮೂಲಕ ಹೆಚ್ಚಿನ ಕಲ್ಪನೆಗೆ ಅವಕಾಶ ಮಾಡಿಕೊಡುವ ಸಂದರ್ಭಗಳೇ ಇಲ್ಲಿ ಹೆಚ್ಚು. ವಿಧಿಯ ಚೆಲ್ಲಾಟವನ್ನು ಎರಡು ಕಡೆಯೂ

ದಟ್ಟವಾಗಿ ಕಾಣುತ್ತೇವೆ. ದುರಂತದ ಮಡು ಎರಡರಲ್ಲಿಯೂ ಇದೆಯಾದರು, ಎರಡನೆಯ ಪಾಠದಲ್ಲಿ ಅದು ಭೋರ್ಗರೆದು ಹರಿಯುತ್ತದೆ. ಅಲ್ಲಿ ನಾಗವ್ವ ಮದುವೆಯ ನಂತರ ದುರಂತಕ್ಕೀಡಾದರೆ, ಇಲ್ಲಿ ಮದುವೆ ಮುಗಿಯದೆಯೇ ದುರಂತಕ್ಕೀಡಾಗಿ, ಕೊಂಡಕ್ಕೇ ಧಾರೆ ಎರೆಸಿಕೊಂಡು ಅಸುನೀಗುತ್ತಾಳೆ. ಮುಗ್ಧ ಹೆಣ್ಣೊಬ್ಬಳ ದುರಂತ ಚಿತ್ರ, ಎಲ್ಲರ ಸಹಾನುಭೂತಿಯನ್ನೂ ಗಳಿಸಿ ಅಚ್ಚಳಿಯದೆ ಮನದಲ್ಲಿ ನಿಲ್ಲುತ್ತದೆ.

ಸ್ವತಂತ್ರ ಕೃತಿಗಳ ರಚನೆಯಷ್ಟೇ ಅಲ್ಲದೆ, ಅನುವಾದ ಮುಂತಾದ ಕೃತಿಗಳ ರಚನೆಯಲ್ಲಿಯೂ ತಮ್ಮ ಸಾಮರ್ಥ್ಯವನ್ನು ಸಮರ್ಥವಾಗಿಯೇ ತೋರಿರುವ ನಾಗೇಗೌಡರು ಜನಪದ ಸಾಹಿತ್ಯ ಸಂಗ್ರಹಣೆ - ಸಂಪಾದನೆಯಲ್ಲಿಯೂ ಶಾಸ್ತ್ರೀಯ ದೃಷ್ಟಿಯನ್ನು ತೋರಿರುವುದು ಗಮನಾರ್ಹ. ಈ ದೃಷ್ಟಿಯಿಂದ ಅವರ 'ಪದವವೆ ನಮ್ಮ ಎದೆಯಲ್ಲಿ' ಒಂದು ಉತ್ತಮ ಸಂಕಲನ. ಅದರಲ್ಲಿಯ 'ಹಾಡ್ಗತೆಗಳು' ಭಾಗ ಈಗಾಗಲೇ ಪರಿಶೀಲಿಸಿರುವಂತೆ ಉತ್ತಮ ಹಾಡ್ಗತೆಗಳನ್ನೊಳಗೊಂಡದ್ದು. ಸಂಗ್ರಹ ಕಾರ್ಯದಲ್ಲಿ ಅವರು ತೋರಿರಬಹುದಾದ ನಿಷ್ಠೆಯನ್ನು, ಪಟ್ಟಿರಬಹುದಾದ ಶ್ರಮವನ್ನು ಅಲ್ಲಿಯ ಪಾಠಗಳೇ ಹೇಳುತ್ತವೆ. ಬಗೆ ಬಗೆಯ ಧಾಟಿಗಳಿಂದ, ಕಥೆಗಳಿಂದ, ಛಂದೋರೂಪಗಳಿಂದ ಕೂಡಿ ವೈವಿಧ್ಯದ ಸೀಮೆಯನ್ನು ಮುಟ್ಟಿದೆ.

ಪ್ರಸ್ತುತ ಲೇಖನದಲ್ಲಿ ಇಲ್ಲಿಯ ಬಹುತೇಕ ಹಾಡ್ಗತೆಗಳಿಗೆ ಬೇರೆ ಬೇರೆ ಪಾಠಾಂತರಗಳನ್ನು ಗುರುತಿಸಿ ತೌಲನಿಕವಾದ ಒಂದು ಅಧ್ಯಯನವನ್ನು ನಡೆಸಲಾಗಿದೆ. ಹಾಗೆ ಅಧ್ಯಯನ ನಡೆಸುವಲ್ಲಿ ಪ್ರಸ್ತುತ ಕೃತಿಯ ಹಾಡ್ಗತೆಗಳ ನಿರ್ದೇಶನವನ್ನು ಮಾಡುವ ಪ್ರಯತ್ನ ಮಾಡಲಾಗಿದೆ. ಜನಪದರ ವೈವಿಧ್ಯಮಯ ಬದುಕಿನ, ವೈಶಿಷ್ಟ್ಯಪೂರ್ಣ ನಿರೂಪಣೆ ಇಲ್ಲಿದೆ. ಅದು ಕಾಲ ಕಾಲಕ್ಕೆ ಹಿಗ್ಗುತ್ತ - ಕುಗ್ಗುತ್ತ, ಬಗ್ಗುತ್ತ - ಬಳಕುತ್ತ ಬಂದು ರೀತಿಯನ್ನು ಅದರ ನೀತಿಯನ್ನು ಇಲ್ಲಿಯ ಪಾಠಾಂತರಗಳಲ್ಲಿ ಗುರುತಿಸಬಹುದಾದ ಸಾಧ್ಯತೆಗಳಿವೆ.

*   *   *   *   *

ಪಾರ್ತಿಸುಬ್ಬನ ಯಕ್ಷಗಾನ : ವಸ್ತು - ವಿನ್ಯಾಸ

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಯಕ್ಷಗಾನ ಸಾಹಿತ್ಯ ಎಲ್ಲಿ ನಿಲ್ಲುತ್ತದೆ ? ಎಂಬುದು ಒಂದು ರೀತಿಯಲ್ಲಿ ಎದುರಾಗುವ ಪ್ರಶ್ನೆಯೇ, ಏಕೆಂದರೆ ಜನಪದ ಸಾಹಿತ್ಯದ ಇನ್ನುಳಿದ ಪ್ರಕಾರಗಳಿಗೆ ಕವಿಗಳಿದ್ದರೂ, ಅವರು ಯಾರು ? ಎಂಬುದು ಗೊತ್ತಿರುವುದಿಲ್ಲ. ಅಲ್ಲದೆ ಅದು ಒಬ್ಬನ ಸೃಷ್ಟಿಯಾಗಿರುವುದಿಲ್ಲ. ಸಮಷ್ಟಿಯ ಸೃಷ್ಟಿ. ಆದರೆ ಯಕ್ಷಗಾನ ಸಾಹಿತ್ಯದ್ದು ಹಾಗಲ್ಲ. ಇಲ್ಲಿ ಪ್ರಸಂಗ ಸಾಹಿತ್ಯದ ಕವಿಯನ್ನು ಗುರುತಿಸುತ್ತೇವೆ. ಅವನ ಕಾಲ, ದೇಶ ಮುಂತಾದವುಗಳ ಬಗ್ಗೆ ಚರ್ಚಿಸುತ್ತೇವೆ. ಉಳಿದ ಸಾಹಿತ್ಯ ಕಂಠಸ್ಥವಾಗಿ ಬಂದಿದ್ದಾದರೆ ಇದು ಗ್ರಂಥಸ್ಥವಾಗಿ ಬಂದದ್ದು. ಹೀಗಿದ್ದೂ ಇದನ್ನು ಜನಪದ ಸಾಹಿತ್ಯ ಪ್ರಕಾರದಲ್ಲಿ ಸೇರಿಸುವುದು ಎಷ್ಟು ಸಮಂಜಸ ? ಇದು ಕೆಲವರಲ್ಲಿ ಏಳಬಹುದಾದ ಪ್ರಶ್ನೆ.

ಯಕ್ಷಗಾನ ಪ್ರಸಂಗ ಸಾಹಿತ್ಯದ ಕರ್ತೃಗಳು ಯಾರು ಎಂಬುದು ಗೊತ್ತಿದ್ದರೂ, ಅವುಗಳೆಲ್ಲಾ ಲಿಖಿತ ರೂಪದಲ್ಲಿದ್ದರೂ ಅವು ಎಷ್ಟರಮಟ್ಟಿಗೆ ಪೂರ್ಣ ಶಿಷ್ಟ ರೂಪಕ್ಕೆ ಸೇರುತ್ತವೆ ? ಎಂಬ ಪ್ರಶ್ನೆಯೂ ಅಷ್ಟೇ ಗಹನವಾಗಿ ಎದುರಾಗುತ್ತದೆ.

ಈ ಎರಡೂ ತರಹದ ಪ್ರಶ್ನೆಗಳಿಗೂ ಕೊಡಬಹುದಾದ ಒಂದೇ ಉತ್ತರವೆಂದರೆ - ಇದು ಲಿಖಿತ ರೂಪದಲ್ಲಿದ್ದರೂ ಕರ್ತೃ ಯಾರು ಎಂಬುದು ಗೊತ್ತಿದ್ದರೂ ಇದು ಶಿಷ್ಟ ವರ್ಗಕ್ಕೆ ಸೇರಿದ್ದಲ್ಲ ಎಂಬುದು.

ಯಕ್ಷಗಾನ ಪ್ರಸಂಗ ಸಾಹಿತ್ಯ ಅರ್ಧನಾರೀಶ್ವರನಂತೆ, ಅದರ ಕವಿನಿರ್ಮಿತ ಭಾಗ ಪದ್ಯವಾದರೂ ಅದರ ಮುಂದಿನ ಗದ್ಯಭಾಗ ಜಾನಪದಕ್ಕೆ ಪೂರ್ಣವಾಗಿ ಸೇರುವಂತಹುದು. ಅದು ಕೇಳುವುದು ನೆನಪಿಡುವುದು ಮತ್ತು ನೋಡುವುದು ಅನುಕರಣೆ ಮಾಡುವುದು ಇವುಗಳಿಂದಲೇ ಬಂದದ್ದು. ಇದು ಗ್ರಂಥಸ್ಥ ಭಾಗದಲ್ಲಿ ಸೇರಿದ್ದಲ್ಲ. ಆದರೆ ಯಕ್ಷಗಾನದ ಒಟ್ಟು ಸಾಹಿತ್ಯ ಸ್ವರೂಪದಲ್ಲಿ ಇದು ಪರಿಗಣಿತವಾಗಬೇಕಾದ ಅಂಶ. ಅಲ್ಲದೆ ಯಾವ ಯಕ್ಷಗಾನ ಪ್ರಸಂಗ ರಚನಾಕಾರನೂ, ವ್ಯಾಕರಣ, ಛಂದಸ್ಸುಗಳ ಕಡೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ರಚನೆಯನ್ನು ಕೈಗೊಂಡವನಲ್ಲ. ಹಾಗೆಂದು ಕಡೆಗಣಿಸಿದವರೂ ಅಲ್ಲ. ಆದರೆ ಅವರ ಪ್ರಧಾನ ದೃಷ್ಟಿ ಇದ್ದದ್ದು ವಸ್ತುವಿನ ಕಡೆಗೆ ಹಾಗೂ ಭಕ್ತಿಭಾವದ ಕಡೆಗೆ. ಆದುದರಿಂದ ಪ್ರಸಂಗ ಸಾಹಿತ್ಯದ ರಚನೆ ಶಿಷ್ಟ ಸಾಹಿತ್ಯ ರಚನೆಗಿಂತ ರಚನಾಕಾರನ ದೃಷ್ಟಿಗಿಂತ ಭಿನ್ನವಾದುದು. ಆದ್ದರಿಂದಲೇ ಇದು ಪೂರ್ಣ ಶಿಷ್ಟವೂ ಅಲ್ಲ, ಪೂರ್ಣ ಜಾನಪದವೂ ಇಲ್ಲದ ಮಧ್ಯಂತರದ ಒಂದು ದೇಸೀರೂಪ. ಅದಕ್ಕೆ ತನ್ನದೇ ಆದ ಕೆಲವೊಂದು ವೈಶಿಷ್ಟ್ಯಗಳೂ ಇವೆ ಎಂಬುದು ಗಮನಾರ್ಹ.

ಯಕ್ಷಗಾನ ಪ್ರಸಂಗ ರಚನೆಗಳು ಶಿಷ್ಟವೇ ಜಾನಪದವೇ ಎಂಬ ಅಭಿಪ್ರಾಯಗಳು ಇದ್ದೇ ಇವೆ. ಅವು ಒಂದು ಕಡೆ ಸಂಪ್ರದಾಯಬದ್ಧವಾದ ಶಾಸ್ತ್ರೀಯ ಮಾರ್ಗ ಸಂಗೀತದ ರಚನಾ ಸ್ವರೂಪವನ್ನು ಒಳಗೊಂಡದ್ದೆಂಬಂತೆ ತೋರುವಂತೆಯೇ, ಮತ್ತೊಂದೆಡೆ ಜನಪದ ಸಂಪ್ರದಾಯದ

ಜಾಡನ್ನು ಹಿಡಿದ ದೇಸೀಮಾರ್ಗವನ್ನು ಅನುಸರಿಸಿದಂತೆಯೂ ಕಂಡು ಬರುತ್ತದೆ. ಈ ಬಗೆಯಾದ ಚರ್ಚೆಗಳು ಏನೇ ಇದ್ದರೂ, ಯಕ್ಷಗಾನ ಪ್ರಸಂಗ ರಚನೆಗಳು ಒಟ್ಟಾಗಿ ತನ್ನದೇ ಆದ ಒಂದು ವಿಶಿಷ್ಟ ಶೈಲಿಯನ್ನು ರೂಢಿಸಿಕೊಂಡು ಬಂದದ್ದು ಎಂಬುದರಲ್ಲಿ ಸಂಶಯವಿಲ್ಲ. ಅದಕ್ಕೆ ತನ್ನದೇ ಆದ ಒಂದು ಧಾಟಿ ಇದೆ. ಸ್ವರೂಪವಿದೆ, ವೈಶಿಷ್ಟ್ಯವಿದೆ.

ಇಂದು ಸುಮಾರು ನಾಲ್ಕುನೂರಕ್ಕೂ ಮಿಕ್ಕ ಹಳೆಯ ಯಕ್ಷಗಾನ ಪ್ರಸಂಗಗಳಿವೆ ಎಂದು ಹೇಳಲಾಗಿದೆ. ರಚನೆಗೊಂಡಿದ್ದು ಅಳಿದು ಹೋಗಿರಬಹುದಾದ ಪ್ರಸಂಗಗಳು ಎಷ್ಟೆಂಬುದು ತಿಳಿಯುವುದಿಲ್ಲ. ಹೀಗೆ ಉಳಿದಿರುವ ಯಕ್ಷಗಾನ ಪ್ರಸಂಗಗಳಲ್ಲಿ ಮೇಲಿಂದ ಮೇಲೆ ಆಡುವ ಜನಪ್ರಿಯ ಪ್ರಸಂಗಗಳ ಸಂಖ್ಯೆ ಸುಮಾರು ೫೦ನ್ನು ದಾಟಲಾರವು ಎಂಬ ಅಭಿಪ್ರಾಯವೂ ಇದೆ.

ಈ 'ಜನಪ್ರಿಯತೆ' ಎಂಬುದು ಹೇಗೆ ಉಂಟಾಗುತ್ತದೆ ? ಇದು ಬಹಳ ಮುಖ್ಯವಾದ ಪ್ರಶ್ನೆ. ಯಕ್ಷಗಾನ ಕಲೆ ಒಂದು ಸಮ್ಮಿಶ್ರ ಕಲೆ ನಿಜ. ಆದರೆ ಎಲ್ಲ ಅಂಗೋಪಾಂಗಗಳೂ ಸೇರಿಯೇ ಒಟ್ಟು ಕಲೆಯ ಜನಪ್ರಿಯತೆ ಕಂಡು ಬರುತ್ತದೆ ಎಂಬುದೂ ನಿಜವಾದರೂ, ಅದರಲ್ಲಿ ಬಹು ಮುಖ್ಯವಾಗಿ ಕಾಣಿಸಿಕೊಳ್ಳುವುದು 'ಪ್ರಸಂಗ' ಎಂಬುದು ಗಮನಾರ್ಹ. ಏಕೆಂದರೆ ಪ್ರಸಂಗದ 'ವಸ್ತು'ವನ್ನು ಆಧರಿಸಿಯೇ ಮಿಕ್ಕ ಅಂಶಗಳು ತಲೆ ಎತ್ತಿ ನಿಲ್ಲುತ್ತವೆ. ಪ್ರಸಂಗದ 'ಕಥೆ' ಅಷ್ಟೇ ಮುಖ್ಯವಾಗುವುದಿಲ್ಲ. ಅದರಲ್ಲಿನ 'ವಸ್ತು' ಕೂಡ ಬಹು ಮುಖ್ಯವೆನಿಸುತ್ತದೆ. ಪ್ರಸಂಗದಲ್ಲಿ ಇರುವ ಕಥೆಯೊಂದು ಆ ಪ್ರಸಂಗಕ್ಕೆ ಸಂಬಂಧಿಸಿದ ಘಟನೆಗಳನ್ನು ಒಳಗೊಂಡಿರುತ್ತದೆ. ಆದರೆ ಜನಪ್ರಿಯ ಪ್ರಸಂಗವೆನಿಸಲು ಅದಷ್ಟೇ ಸಾಕೆನಿಸುವುದಿಲ್ಲ. ಅದರಲ್ಲಿನ 'ವಸ್ತು' ಅದರ ಸ್ವರೂಪ, ಹಾಗೂ ಅದರ ಪ್ರಸ್ತುತತೆ ಒಂದು ಪ್ರಸಂಗದ ಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತವೆ. ಒಂದು ಕಥೆಯಲ್ಲಿ ವ್ಯಕ್ತವಾಗುವ ತತ್ವ ವಸ್ತುವಿನ ರೂಪದಲ್ಲಿ ಪ್ರೇಕ್ಷಕನಿಗೆ ಹತ್ತಿರವಾದದ್ದಾಗುತ್ತದೆ. ಓದುಗನ, ಕೇಳುಗನ ಅಥವಾ ಪ್ರೇಕ್ಷಕನ ಮನವನ್ನು ತಾಕುವುದು ಇದೇ. ಎಷ್ಟೇ ಒಳ್ಳೆಯ ಕಥೆಯನ್ನು ಆಯ್ಕೆ ಮಾಡಿಕೊಂಡರು ಅದರಲ್ಲಿ ಒಳ್ಳೆಯ ವಸ್ತು ಇಲ್ಲದೆ ಹೋದಾಗ ನೀರಸವೆನಿಸಬಹುದು. ಬಹಳ ಕಾಲ ಅಂತಹ ಪ್ರಸಂಗ ಉಳಿಯದೆ ಹೋಗಬಹುದು.

'ಕಥೆ' ಯಾವ ಕಾಲದ್ದೇ ಆಗಿದ್ದರೂ ಅದರಲ್ಲಿ ಬರುವ ವಸ್ತು ಸಾರ್ವಕಾಲಿಕವಾದುದ್ದಾಗಿದ್ದು, ಪ್ರೇಕ್ಷಕರನ್ನು ತಟ್ಟಿ ಎಚ್ಚರಿಸುವಂತಿರಬೇಕು. ಕೆಲವೊಂದು ಯಕ್ಷಗಾನ ಪ್ರಸಂಗಗಳು ಚಿರಾಯುವಾಗಿ ಕೇಳಿದಷ್ಟೂ ನೋಡಿದಷ್ಟೂ ಹಿತವೆನಿಸುವುದು ಈ ಕಾರಣಕ್ಕಾಗಿ. ಕೃಷ್ಣಾರ್ಜುನ ಕಾಳಗ, ಕರ್ಣಾರ್ಜುನ ಕಾಳಗ, ಭೀಷ್ಮ ವಿಜಯದಂತಹ ಪ್ರಸಂಗಗಳು ಹೆಚ್ಚು ಹೆಚ್ಚು ಜನಪ್ರಿಯವಾಗಿರುವುದು ಈ ಕಾರಣಕ್ಕಾಗಿಯೇ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಇಲ್ಲಿ ಮುಖ್ಯವಾಗಿ ಏಳುವ ಪ್ರಶ್ನೆಯೆಂದರೆ, ಪ್ರಸಂಗ ಕರ್ತೃ ತಾನು ಪ್ರಸಂಗ ರಚನೆ ಮಾಡುವಾಗ ಮೊದಲು ಕಥೆಯನ್ನು ನೋಡುತ್ತಾನೋ ಅಥವಾ ವಸ್ತುವನ್ನು ನೋಡುತ್ತಾನೋ? ಎಂಬುದು. ಇದು ಕವಿಯ ಪ್ರತಿಭೆಗೆ, ಜಾಣ್ಮೆಗೆ ಸಂಬಂಧಪಟ್ಟ ವಿಷಯ. ಸೂಕ್ಷ್ಮಮತಿಯಾದ ಪ್ರಸಂಗ ಕರ್ತೃ ಒಳ್ಳೆಯ ವಸ್ತುವುಳ್ಳ ಒಳ್ಳೆಯ ಕಥೆಯನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಒಳ್ಳೆಯ ವಸ್ತುವುಳ್ಳ ಒಳ್ಳೆಯ ಕಥೆಯನ್ನು ಆಯ್ಕೆ ಮಾಡಿಕೊಂಡಾಗ ಅದು ಬಹಳ ಬೇಗ ಜನಪ್ರಿಯವಾಗುತ್ತದೆ. ಬಹಳ ಕಾಲ ಉಳಿಯುತ್ತದೆ. ಇಲ್ಲವಾದರೆ ಬಹಳ ಬೇಗ ಜನಪ್ರಿಯವಾಗಿ ಅಷ್ಟೇ ಬೇಗ ಅಳಿಯಲೂ ಬಹುದು. ಏಕೆಂದರೆ

ಪ್ರಸ್ತುತವೆನಿಸದ ವಿಷಯದ ಚರ್ಚೆ ಯಾರಿಗಾದರೂ ಬೇಸರ ತರಬಹುದು. ಅಸಮಂಜಸವೆನಿಸಬಹುದು. ಇಂದು ಎಷ್ಟೋ ಪ್ರಸಂಗಗಳು ಮೂಲೆಗುಂಪಾಗಿರುವುದು ಇದೇ ಕಾರಣಕ್ಕಾಗಿ. ಪುರಾಣದ ಕಥೆಯೇ ಆದರೂ ಅದರ ವಸ್ತು ನಮ್ಮ ಬದುಕಿಗೆ, ನಮ್ಮ ಸುತ್ತಮುತ್ತಲ ಘಟನೆಗಳಿಗೆ ಹತ್ತಿರವಾದಾಗ, ನಾವೂ ಕೂಡ ಅದಕ್ಕೆ ಬಹಳ ಬೇಗ ಹತ್ತಿರವಾಗುತ್ತೇವೆ. ಅದಕ್ಕೆ ಸ್ಪಂದಿಸುತ್ತೇವೆ. ಅಲ್ಲಿಯ ವಸ್ತು ನಮ್ಮ ಬದುಕಿನ ಘಟನೆಗಳಿಗಿಂತ ಬೇರೆ ಅನಿಸುವುದಿಲ್ಲ. ದೂರ ಎನಿಸುವುದಿಲ್ಲ. ಸಮಕಾಲೀನ ಸಮಸ್ಯೆಗಳ ಮೇಲೆಯೂ ಅವು ಬೆಳಕು ಚೆಲ್ಲಬಲ್ಲವು. ಪ್ರಸಂಗ ಕರ್ತೃವಿನ ನಿಜವಾದ ಪ್ರತಿಭೆ, ಜಾಣ್ಮೆ, ಸೂಕ್ಷ್ಮತೆ ವ್ಯಕ್ತವಾಗುವುದು ಒಳ್ಳೆಯ ವಸ್ತುವುಳ್ಳ ಕಥೆಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿಯೇ.

ಈ ಹಿನ್ನೆಲೆಯಲ್ಲಿ ಪಾರ್ತಿಸುಬ್ಬನ ಪ್ರಸಂಗ ಸಾಹಿತ್ಯವನ್ನು ಪರಿಶೀಲಿಸುವುದಾದರೆ, ವಸ್ತು ಮತ್ತು ವಿನ್ಯಾಸ ಎರಡೂ ದೃಷ್ಟಿಯಿಂದಲೂ ಹಲವು ವಿಶೇಷಗಳನ್ನು ಮೆರೆದಿರುವುದು ಗಮನಾರ್ಹ. ಯಕ್ಷಗಾನ ಪ್ರಸಂಗ ಸಾಹಿತ್ಯ ವಿಶಿಷ್ಟ ಬಗೆಯದು. ಅದು ಒಂದು ರೀತಿಯಲ್ಲಿ ಕಾವ್ಯದ ಬಗೆಯಲ್ಲಿದ್ದರೂ, ಅದು ಪ್ರದರ್ಶಿತವಾಗುವುದು ನಾಟಕ ರೂಪದಲ್ಲಿ. ಪುರಾಣದ ಕಥೆ ಮತ್ತು ಅದು ಒಳಗೊಂಡ ವಸ್ತು ಏನೇಯಿದ್ದರೂ, ಪ್ರಸಂಗ ಕರ್ತೃ ಅದನ್ನು ಅಳವಡಿಸಿ ಪ್ರಸಂಗವಾಗಿಸುವಲ್ಲಿ ತನ್ನ ಸ್ವೋಪಜ್ಞತೆಯನ್ನು ತೋರಬೇಕಾಗುತ್ತದೆ. ಪ್ರಸಂಗದ ನಿಜವಾದ ಸತ್ವ ಒದಗಿಬರಬೇಕಾಗುವುದು ಇದರಲ್ಲಿಯೇ. ಆಯ್ದುಕೊಂಡ ಕಥೆಯೊಂದಕ್ಕೆ ಪರಿಣಾಮಕಾರಿಯಾದ ನಿಶ್ಚಿತ ರೂಪವೊಂದನ್ನು ಕೊಡುವಲ್ಲಿ ಮೂಲ ಕಥೆಯೊಂದಕ್ಕೆ ಸುಂದರ ಚೌಕಟ್ಟನ್ನು ನಿರ್ಮಿಸಿ ಅದನ್ನು ಚೇತೋಹಾರಿಯನ್ನಾಗಿಸುವಲ್ಲಿ ಪ್ರಸಂಗದ ಕರ್ತೃ ತನ್ನ ಪ್ರತಿಭೆಯನ್ನು ವ್ಯಯಿಸಬೇಕಾಗುತ್ತದೆ.

ಒಳ್ಳೆಯ ಕಥೆ ಮತ್ತು ಅದರಲ್ಲಿನ ವಸ್ತು ಪ್ರಸಂಗವೊಂದನ್ನು ಶ್ರೇಷ್ಠವೆನಿಸಬಹುದು. ಇಲ್ಲಿ ಒಳ್ಳೆಯ ಎನ್ನುವಾಗ ಅದರ ಚಿರಂತನತೆ ಮುಖ್ಯವಾಗುತ್ತದೆ. ಆಗ ಹುಟ್ಟಿ ಆಗ ಸಾಯುವಂತಹ ಪ್ರಸಂಗಗಳು ಈ ಸಾಲಿನಲ್ಲಿ ನಿಲ್ಲುವುದಿಲ್ಲ. ತಾತ್ಕಾಲಿಕವಾದ, ಅಲ್ಪ ಆಶಯಗಳನ್ನೊಳಗೊಂಡ ವಸ್ತು ಎಷ್ಟೇ ತೃಪ್ತಿಯನ್ನು ನೀಡಬಹುದಾದರೂ, ದೀರ್ಘ ರಸಾನುಭವಕ್ಕೆ ಕಾರಣವಾಗುವುದಿಲ್ಲ. ಇದು ಪ್ರಸಂಗ ಕರ್ತೃವಿನ ಪ್ರತಿಭಾ ಅಭಾವದಿಂದ ಉಂಟಾಗುವಂತಹುದು.

ಯಾವ ಪ್ರಸಂಗವನ್ನೂ ಇಡಿಯಾಗಿ ಪ್ರದರ್ಶನಕ್ಕೆ ಬಳಸಿಕೊಳ್ಳಲಾಗುವುದಿಲ್ಲ ಎಂಬುದು ತಿಳಿಯ ವಿಷಯ. ಇಲ್ಲಿ ಪ್ರಸಂಗ ಕರ್ತೃವಿನ ದೃಷ್ಟಿ ಮುಖ್ಯವಾಗಿ ಕತೆ ಹೇಳುವುದರ ಕಡೆಗೆ ಇರುತ್ತದೆ. ಹಾಗಾಗಿ ಅದನ್ನು ಪ್ರದರ್ಶನಕ್ಕೆ ತರುವಾಗ ಅನಾವಶ್ಯಕವಾದ ವರ್ಣನೆಗಳನ್ನು, ನೀರಸವೆನಿಸುವ ಸನ್ನಿವೇಶಗಳನ್ನು ಕತ್ತರಿಸಿ, ಪ್ರಯೋಗ ಯೋಗ್ಯವಾದವುಗಳನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಒಂದು ಬಗೆಯಾದ ಸಂಪಾದನಾ ಕಾರ್ಯ ಭಾಗವತನಿಂದ ನಡೆಯುತ್ತದೆ. ಭಾಗವತ ಎಚ್ಚರಿಕೆಯಿಂದ ಮೂಲ ಕರ್ತೃವಿನ ಉದ್ದೇಶಕ್ಕೆ ಧಕ್ಕೆಯುಂಟಾಗದಂತೆ ಈ ಕಾರ್ಯವನ್ನು ಮಾಡಿದರೆ ಚಂತೆಯಿಲ್ಲ. ಇಲ್ಲವಾದಲ್ಲಿ ಮೂಲ ಕೃತಿಗೆ ಅಪರಾಧ ಮಾಡಿದಂತಾಗುತ್ತದೆ. ಇಲ್ಲಿ ಮುಖ್ಯ ಅಂಶವೆಂದರೆ, ಭಾಗವತನಿಗೆ ಹೆಚ್ಚು ಕೆಲಸ ಕೊಡದಂತೆ ಪ್ರಸಂಗ ಕರ್ತೃ ಪ್ರಸಂಗವನ್ನು ರಚಿಸಿದ್ದಾಗ ಅವನ ಮೂಲ ಆಶಯ ನೇರವಾಗಿ ಪರಿಣಾಮಕಾರಿಯಾಗಿ ಪ್ರೇಕ್ಷಕರನ್ನು ತಲುಪಲು ಸಾಧ್ಯವಾಗುತ್ತದೆ. ಆದರೆ ಇಂತಹ ಪ್ರಸಂಗ ಕರ್ತೃಗಳ ಸಂಖ್ಯೆ ವಿರಳ.

ಪಾರ್ತಿಸುಬ್ಬ, ರಾಮಾಯಣದ ಕಥೆಗಳಲ್ಲಿ ವಿಶೇಷವಾಗಿ ಆಯ್ಕೆ ಮಾಡಿಕೊಂಡು ಪ್ರಸಂಗ

ರಚಿಸಿದವನು. ರಾಮಾಯಣದ ಕಥೆಯನ್ನು ಯಕ್ಷಗಾನದಲ್ಲಿ ಹೇಳಿದವರಲ್ಲಿ ಈತನೇ ಮೊದಲಿಗ (ಕುಕ್ಕಿಲ್ಲ ಕೃಷ್ಣಭಟ್ಟ : ಕನ್ನಡ ವಿಷಯ ವಿಶ್ವಕೋಶ) ಎಂಬ ಹೆಗ್ಗಳಿಕೆಗೂ ಪಾತ್ರವಾದವನು. ರಾಮಾಯಣದ ಪುತ್ರಕಾಮೇಷ್ಠಿಯಿಂದ ಆರಂಭಿಸಿ ಕುಶಲವರ ಕಾಳಗದವರೆಗೆ ಪ್ರಸಂಗಗಳನ್ನು ರಚಿಸಿದ್ದಾನೆ. (ಪುತ್ರಕಾಮೇಷ್ಠಿ - ಸೀತಾಕಲ್ಯಾಣ, ಪಟ್ಟಾಭಿಷೇಕ, ಪಂಚವಟಿ, ಪಂಚವಟಿ - ವಾಲಿಸಂಹಾರ, ಉಂಗುರಸಂಧಿ ಸೇತುಬಂಧನ, ಅಂಗದ ಸಂಧಾನ, ಕುಂಭಕರ್ಣಾದಿ ಕಾಳಗ, ಕುಶಲವರ ಕಾಳಗ, ಇದಲ್ಲದೆ ಕೃಷ್ಣಚರಿತೆ, ಐರಾವತ ಹಾಗೂ ಸಭಾಲಕ್ಷ್ಯ.)

ಪಾರ್ತಿಸುಬ್ಬನ ಪ್ರಸಂಗಗಳ ಕಥಾವಸ್ತು ಮತ್ತು ಅದರ ವಿನ್ಯಾಸ ಹಲವು ವೈಶಿಷ್ಟ್ಯಗಳಿಂದ ಕೂಡಿರುವುದು ಗಮನಾರ್ಹ. ಇದಕ್ಕೆ ಬಹುಶಃ ಅವನು ಬೆಳೆದು ಬಂದ ಹಿನ್ನೆಲೆ ಹಾಗೂ ಪರಿಸರವೂ ಕಾರಣವೆನ್ನಬಹುದು. ಸುಬ್ಬನಿಗೆ ಕೇರಳದ ಹಾಗೂ ಕಥಕಳಿಯ ಸಂಪರ್ಕ ಹಾಗೂ ಪ್ರಭಾವ ಇತ್ತೆಂಬುದು ತಿಳಿದ ವಿಷಯ. ಕಥಕಳಿಯಲ್ಲಿ ಭಾಗವತನಾಗಿಯೂ ಕಲಾಸೇವೆ ಮಾಡಿದನೆಂಬುದು ಗಮನಿಸಬೇಕಾದ ಅಂಶ. ಹಾಗಾಗಿ ಸುಬ್ಬನು ಮಲೆಯಾಳಂ ಭಾಷೆಯ 'ರಾಮನಾಟ್ಟಮ್' ಕಾವ್ಯಾನುಸರಣೆಯಿಂದ ಪ್ರಭಾವಿತನಾಗಿ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ ಎಂಬ ಹೇಳಿಕೆಯಲ್ಲಿ ಅಸತ್ಯವೇನು ಕಾಣಿಸುವುದಿಲ್ಲ. ಆ ಕಾರಣಕ್ಕಾಗಿಯೇ ಮಲೆಯಾಳಂ ಭಾಷೆಗೆ ಸಹಜವಾದ ಸಂಸ್ಕೃತ ಪದಗಳ ಮೇಲುಗೈ. ಅವನ ಆರಂಭಿಕ ರಚನೆಗಳಲ್ಲಿ ಕಂಡು ಬರುತ್ತವೆ. ಪಂಚವಟಿಯವರೆಗಿನ ರಚನೆಗಳಲ್ಲಿ ಇದನ್ನು ಧಾರಾಳವಾಗಿ ಗುರುತಿಸಬಹುದು. ಅದರ ಹಿಡಿತದಿಂದ ಬಿಡಿಸಿಕೊಂಡ ಸ್ವತಂತ್ರ ರಚನೆ ಗೋಚರಿಸುವುದು 'ಪಂಚವಟಿಯ' ನಂತರದ ರಚನೆಗಳಲ್ಲಿ. ಪಾರ್ತಿಸುಬ್ಬನ ಸ್ವೋಪಜ್ಞತೆ ಅಲ್ಲಿಂದ ಮುಂದಿನ ರಚನೆಗಳಲ್ಲಿ ಸ್ವಚ್ಛಂದವಾಗಿ ಅರಳಿರುವುದನ್ನು ಕಾಣಬಹುದು. ಪ್ರಸಂಗವೊಂದನ್ನು ಸುಂದರವಾಗಿಸುವಲ್ಲಿ ಪಾರ್ತಿಸುಬ್ಬ ತೋರಿರುವ ಶ್ರದ್ಧೆ ಔಚಿತ್ಯಪ್ರಜ್ಞೆ ಅದರಲ್ಲಿ ವ್ಯಕ್ತಗೊಂಡಿರುವ ಸ್ವೋಪಜ್ಞತೆ ಅವನ ಪ್ರತಿಭಾ ಶಕ್ತಿಗೆ ಜ್ವಲಂತ ಸಾಕ್ಷಿ. ಅಂತಹ ಸಂದರ್ಭಗಳಲ್ಲಿ ಅವನು ಧಾರಾಳವಾಗಿ ತನ್ನತನವನ್ನು ಮೆರೆದಿದ್ದಾನೆ. ಕಥಕಳಿ ರಾಮಾಯಣದಲ್ಲಿದ್ದಂತೆಯೇ ತೊರವೆ ರಾಮಾಯಣದಿಂದಲೂ ಉತ್ತಮವಾದದ್ದನ್ನು ಆಯ್ಕೆ ಮಾಡಿ ಬಳಸಿಕೊಂಡಿದ್ದಾನೆ. ಉದಾಹರಣೆಗೆ 'ಸೀತಾಸ್ವಯಂವರ' 'ಸೇತುಬಂಧ', 'ಅಂಗದ ಸಂಧಾನ' ಕಥಾ ಭಾಗಗಳು ಕಥಕಳಿಯಲ್ಲಿ ಸಂಕ್ಷೇಪವಾಗಿದ್ದು, ಅವುಗಳನ್ನು ವಿಸ್ತರಿಸುವಲ್ಲಿ ಪಾರ್ತಿಸುಬ್ಬ ಕನ್ನಡ ತೊರವೆ ರಾಮಾಯಣವನ್ನು ಆಕರವಾಗಿಸಿಕೊಂಡಿದ್ದಾನೆ. ಇಲ್ಲಿ ತೊರವೆ ರಾಮಾಯಣದಲ್ಲಿ ಬರುವುದು, ಕಥಕಳಿಯಲ್ಲಿ ಇರುವುದಿಲ್ಲ. ಕಥಕಳಿಯಲ್ಲಿ ಇರುವುದು, ತೊರವೆ ರಾಮಾಯಣದಲ್ಲಿ ಬರುವುದಿಲ್ಲ. ಆದರೆ ಪಾರ್ತಿಸುಬ್ಬ ಅವೆರಡರಲ್ಲಿಯೂ ಕಾಣಬರುವ ಒಳ್ಳೆಯ ಅಂಶಗಳನ್ನು ಯಕ್ಷಗಾನದ ಪ್ರಸಂಗಗಳಲ್ಲಿ ತಂದಿರುವುದು ಗಮನೀಯ. ವಾಲ್ಮೀಕಿ ರಾಮಾಯಣದಲ್ಲಿ ಕಾಣಬರದ ಕೆಲವೊಂದು ಅಂಶಗಳನ್ನು ಆತ ತೊರವೆ ರಾಮಾಯಣದಿಂದಲೋ ಅಥವಾ ಕಥಕಳಿಯಿಂದಲೋ ಆರಿಸಿದ್ದಾನೆಂಬುದು ಪರಿಶೀಲನಾರ್ಹ.

ಕಥೆ ಅಥವಾ ವಸ್ತು ಯಾವುದೇ ಇರಲಿ, ಏನೇ ಇರಲಿ ಅದಕ್ಕೆ ಒಂದು ಸುಂದರ ರೂಪವನ್ನು ಕೊಡುವುದು ಕವಿ ಪ್ರತಿಭೆಯ ಕಾರ್ಯ. ಆ ಸೌಂದರ್ಯ ಪ್ರಜ್ಞೆ ಕವಿ, ಕಲಾವಿದರಿಗೆ ಅವಶ್ಯಕವಾಗಿ ಬೇಕಾಗುತ್ತದೆ. ಹಲವು ಆಕರಗಳನ್ನು ಬಳಸಿಕೊಂಡ ಎಂದ ಮಾತ್ರಕ್ಕೆ ಅವನ ಪ್ರತಿಭೆಗೆ ಅಥವಾ ಸ್ವೋಪಜ್ಞತೆಗೆ ಕುಂದುಂಟಾಗುವುದಿಲ್ಲ. ಕಲೆಯನ್ನಲ್ಲದೆ ಶಿಲ್ಪ ಶಿಲೆಯನ್ನು ನಿರ್ಮಿಸುವುದಿಲ್ಲ. ಒಂದು ಸುಂದರ ಮೂರ್ತಿಯನ್ನು ಕಡೆದು ನಿಲ್ಲಿಸಲು ಬೇಕಾದ ಆಕಾರಗಳನ್ನು ಹಲವೆಡೆಯಿಂದ

ಬಳಸಿಕ್ಕೊಳ್ಳುವುದು ತಪ್ಪಲ್ಲ. ಆದರೆ ಹಾಗೆ ಬಳಸಿಕೊಂಡದ್ದರಿಂದ ಫಲಿತಾಂಶ ಏನಾಗಿದೆ ಯೆಂಬುದು ಮುಖ್ಯವಾಗುತ್ತದೆ. ಆ ದೃಷ್ಟಿಯಿಂದ ನೋಡುವಾಗ ಪಾರ್ತಿಸುಬ್ಬ ತನ್ನ ಸೋಪಜ್ಞತೆ ಯನ್ನು ಮೆರೆದಿದ್ದಾನೆ. ಅವನ ಪ್ರಸಂಗಗಳು ಸ್ವತಂತ್ರ ಕೃತಿಗಳಾಗಿ ಕಲಾತ್ಮಕವಾಗಿ ಬೆಳಗಲು ಕಾರಣವಾಗಿವೆ.

ಪಾರ್ತಿಸುಬ್ಬ ಸೃಜನಶೀಲ ಪ್ರತಿಭೆಯ, ರಸಪ್ರಜ್ಞೆಯುಳ್ಳ ಪ್ರಸಂಗ ಕರ್ತೃ. ಹೆಚ್ಚಾಗಿ ರಾಮಾಯಣದಿಂದಲೇ ಪ್ರಸಂಗ ರಚನೆ ಮಾಡಿರುವ ಅವನು ವಿಶಿಷ್ಟವೆನಿಸಿರುವುದು ತನ್ನ ಕಾವ್ಯ ಕಲೆಗಾರಿಕೆಯಿಂದ. ಸನ್ನಿವೇಶ ನಿರ್ಮಾಣವಾಗಲಿ, ಪಾತ್ರ ನಿರೂಪಣೆಯಾಗಲಿ, ಬದುಕಿನ ಒಳ - ಹೊರಗನ್ನು ಚಿತ್ರಿಸುವ ಕ್ರಮದಲ್ಲಾಗಲಿ, ಸನ್ನಿವೇಶಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುವ ಬಗೆಯಲ್ಲಾಗಲಿ ಅಥವಾ ವರ್ಣನೆಗಳನ್ನು ಮಾಡುವ ರೀತಿಯಲ್ಲಾಗಲಿ ಸೋಪಜ್ಞತೆಯನ್ನು ಮೆರೆದಿದ್ದಾನೆ. ಯಾವುದೇ ಕೃತಿಯ ಕಲಾತ್ಮಕತೆ ರೂಪ ಪಡೆಯುವುದು ಇವುಗಳಿಂದಲೇ. ಕೃತಿಯ ಕರ್ತೃ ಅದಕ್ಕೆ ಕೊಡುವ ವಿಶಿಷ್ಟ ಬಗೆಯ ವಿನ್ಯಾಸದಿಂದಾಗಿ ಆ ಒಂದು ಕೃತಿ ಹೆಚ್ಚು ಮೌಲಿಕವಾಗುತ್ತದೆ.

ಓದುಗನನ್ನೋ, ಕೇಳುಗನನ್ನೋ, ಅಥವಾ ಪ್ರೇಕ್ಷಕನನ್ನೋ ಮಂತ್ರಮುಗ್ಧನನ್ನಾಗಿಸುವ ಒಂದು ಅಪೂರ್ವ ಆಸಕ್ತಿಯೇ ಅದರ ವಿನ್ಯಾಸವೆನಿಸಿಕೊಳ್ಳುತ್ತದೆ. 'ತಂತ್ರ'ವೆನಿಸಿಕೊಳ್ಳುತ್ತದೆ. ಅದಿಲ್ಲದೆ ಒಂದು ಕೃತಿ ಭಿನ್ನವಾಗಿ ತೋರಲಾರದು. ವೈಶಿಷ್ಟ್ಯವನ್ನು ಪ್ರದರ್ಶಿಸಲಾರದು.

ದೃಶ್ಯಕಾವ್ಯವಾದ ಯಕ್ಷಗಾನದಲ್ಲಿ ವರ್ಣನೆಗೆ ಹೆಚ್ಚು ಅವಕಾಶ ಇದ್ದಂತೆ ತೋರುವುದಿಲ್ಲ. ಬರುವ ವರ್ಣನೆ ಏನಿದ್ದರೂ ಸ್ವಲ್ಪಮಟ್ಟಿಗೆ ಯುದ್ಧ ಹಾಗೂ ಶೃಂಗಾರಕ್ಕೆ ಸಂಬಂಧಿಸಿದ ಸ್ತ್ರೀ ಅಂಗಾಂಗ ವರ್ಣನೆಗಳು. ಇಷ್ಟನ್ನು ಬಿಟ್ಟರೆ ಪ್ರಕೃತಿಯ ಅದ್ಭುತ ಚೆಲುವನ್ನಾಗಲಿ ಅಥವಾ ಅಂತಹುದೇ ಬೇರಾವುದನ್ನಾಗಲಿ ತಮ್ಮ ಕಲ್ಪನೆಯ ಕಣ್ಣಲ್ಲಿ ಕಂಡು ಹಿಡಿದಿಟ್ಟಿರುವುದು ಅಪರೂಪ. ಆದರೆ ಪಾರ್ತಿಸುಬ್ಬನ ಯಕ್ಷಗಾನಗಳಲ್ಲಿ ಅದು ಹೆಚ್ಚಾಗಿ ಕಂಡುಬರದಿದ್ದರೂ, ಅದಕ್ಕೆ ಸ್ಥಾನ ಕೊಟ್ಟು ತನ್ನ ಕವಿಹೃದಯವನ್ನು ತೆರೆದು ತೋರಿರುವುದು ಗಮನಾರ್ಹ. ಆ ಮೂಲಕ ತನ್ನ ಪ್ರಸಂಗಗಳಿಗೊಂದು ವಿಶೇಷತೆಯನ್ನು ತಂದುಕೊಂಡಿದ್ದಾನೆ. ಅವನ ಪಂಚವಟಿ ಉಂಗುರಸಂಧಿ ಪ್ರಸಂಗಗಳಲ್ಲಿ ಈ ಅಂಶವನ್ನು ಗುರುತಿಸಬಹುದು. ಪಂಚವಟಿಯಲ್ಲಿ ರಾಮನು ಸೀತೆಗೆ ಅಲ್ಲಿಯ ವನದ ಸಿರಿಯನ್ನು ಬಣ್ಣಿಸಿ ಹೇಳುವ ಸಂದರ್ಭ ದೀರ್ಘವಾಗಿಯೇ ಬಂದಿದೆ. ಅಲ್ಲಿಯ ಪ್ರಕೃತಿ ರಮಣೀಯತೆಯನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುವ ಸನ್ನಿವೇಶ ಸುಬ್ಬನ ಪ್ರಕೃತಿ ಪ್ರಿಯತೆಗೆ ಸಾಕ್ಷಿ.

ಕಂಡೆಯಾ ಜನಕಸುತೆ ಕಡುವಿಚಿತ್ರಗಳ
ದಂಡಕಾ ವನದೊಳಹ ಸಕಲ ವಸ್ತುಗಳ ||
ಇದೆ ಲವಂಗ ವಿಳಂಗ ಕುರವಕವುಬದರಿ
ಇದೆ ಕಕ್ಕೆ ಕಲಗು ಕಮ್ಮರ ಕಡಿಕು ಕದಳಿ ||
ಆಲ ಲಂಬಟೆ ಕಣಲುಬೆಟ್ಟ ಮೊಬ್ಬುಳಿಯು
ಸಾಲ ಕಿತ್ತಳೆ ಪನಸ ಬಿಲ್ವ ಸಮಿಧೆಗಳು ||
ತೂಗುತಿಹ ಚೂತಫಲವಿದೆ ಸುತ್ತಮುತ್ತ

ಪೂಗಪುನ್ನಾಗ ಕಲ್ಲರಳಿಯಶ್ವತ್ಥ ||
ಇದೆ ತನಸೆ ಇಡಸೆ ತಂಡಲೀಲ ರಂಜೆಗಳು
ಇದಕೊ ರುದ್ರಾಕ್ಷಿ ಖರ್ಜೂರ ಬೆಳಲೆಗಳು ||
ಬಿದಿರು ಬಿಲವಟ್ಟಾಲ ಬೀಜಪುರ ಮತ್ತೆ
ಇದೆ ನೆಲ್ಲಿ ಮಧುಕ ಮಾದಳ ಮುರುಗ ಇತ್ತೆ ||

ಸುಮಾರು ಹತ್ತೊಂಬತ್ತು ದ್ವಿಪದಿಗಳಲ್ಲಿ ಈ ಬಣ್ಣನೆ ಮುಂದುವರೆಯುತ್ತದೆ.

ಇದೇ ರೀತಿ ಉಂಗುರ ಸಂಧಿಯಲ್ಲಿ ಬರುವ ಉದ್ಯಾನವನದ ವರ್ಣನೆ ಕೂಡ ಸೊಗಸಾಗಿದೆ. ಯಕ್ಷಗಾನ ಪ್ರಮುಖವಾಗಿ ವೀರ - ರೌದ್ರ ರಸಗಳಿಂದ ಕೂಡಿದ್ದಾದರೂ, ಪಾರ್ತಿಸುಬ್ಬನಂತಹ ಕವಿಗಳು ತಮ್ಮ ಕಲೆಗಾರಿಕೆಯಿಂದ ರಸಪ್ರಜ್ಞೆಯಿಂದ ಇತರ ರಸಗಳಿಗೂ ಎಡೆಮಾಡಿ ಕೊಡಬಲ್ಲರು. ಸುಬ್ಬನ ಕೃತಿಗಳು ಮಾತ್ರ ನಿಜವಾದ ಅರ್ಥದಲ್ಲಿ ನವರಸಭರಿತವಾದವುಗಳು. ಮಾಯಾಶೂರ್ಪನಖಿಯ ಶೃಂಗಾರ, ಕಪಿಗಳ ಲಂಕಾವಾಸಿಗಳ ನಡೆಯಿಂದ ಮಾಡುವ ಹಾಸ್ಯ, ಶ್ರೀರಾಮ ಸೀತಾವಿಲಾಸಗಳಲ್ಲಿ ಕೋಡಿವರಿಯುವ ಕರುಣರಸ, ರಾಮ - ರಾವಣರ ಯುದ್ಧ ಪ್ರಕರಣದ ವೀರರೌದ್ರರಸ, ಪರಿತ್ಯಕ್ತ ಸೀತೆಯ ಭಯಾನಕ ಸ್ಥಿತಿ ; ರಣರಂಗದ ಭೀಭತ್ಸ, ಕುಂಭಕರ್ಣಾದಿಗಳ ಅದ್ಭುತ ವರ್ಣನೆ ಹೀಗೆ ಎಲ್ಲೆಡೆಯೂ ಸುಬ್ಬನ ಪ್ರತಿಭೆ ಏಕಪ್ರಕಾರವಾಗಿ ಮೆರೆದಾಡಿರುವುದನ್ನು ಕಾಣಬಹುದಾಗಿದೆ ಎಂಬ ಅಭಿಪ್ರಾಯದಲ್ಲಿ ಸತ್ಯವಿದೆ (ಕೇಶವ ಉಚ್ಚಿಲಿ). ಇಂತಹವುಗಳನ್ನು ತರುವಲ್ಲಿ ಅವನು ಹಲವು ಆಕರಗಳನ್ನು ಆಧರಿಸಿದ್ದಾನೆ ಎಂಬುದು ಇಲ್ಲಿ ಗೌಣ. ಹಾಗೆ ನೋಡಿದರೆ ಬಹುತೇಕ ಯಕ್ಷಗಾನ ಕಲೆಗಳು ಇತರ ಹಲವು ಆಕರಗಳನ್ನು ಇಟ್ಟುಕೊಂಡೇ ಕೃತಿ ರಚನೆ ಮಾಡಿರುವುದು. ಆದರೆ ನಿಲ್ಲುವ ಪ್ರಶ್ನೆ ಎಂದರೆ, ಹಾಗೆ ಬಳಸಿಕೊಂಡ ಎಷ್ಟು ಮಂದಿ ಸುಬ್ಬನ ಸಾಲಿನಲ್ಲಿ ನಿಲ್ಲಬಲ್ಲರು ಎಂಬುದು. ಅಂತಹ ಬಳಕೆಯ ಮೂಲಕ ಸುಬ್ಬ ತನ್ನ ಪ್ರಸಂಗಗಳಿಗೆ ಒಳ್ಳೆಯ ವಿನ್ಯಾಸವನ್ನು ತಂದುಕೊಟ್ಟಿದ್ದಾನೆ. ಅದರಲ್ಲಿನ ಕಥೆ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಕಾಣಿಸಿಕೊಳ್ಳುವ ತಂತ್ರವನ್ನು ಅಳವಡಿಸಿಕೊಂಡಿದ್ದಾನೆ.

ಅಷ್ಟೆ ಅಲ್ಲ, ಪಾರ್ತಿಸುಬ್ಬನ ಕರ್ತೃತ್ವದಲ್ಲಿನ ಸೋಪಜ್ಞತೆ ಮಾನವ ಸ್ವಭಾವಗಳ ಚಿತ್ರವೂ ಹಾಗೂ ಭಾಷೆಯ ಬಳಕೆಯಲ್ಲಿಯೂ ಎದ್ದು ಕಾಣುತ್ತದೆ. ಇಡೀ ಪ್ರಸಂಗವನ್ನು ಸ್ವಾರಸ್ಯವಾಗಿ ವಿನ್ಯಾಸಗೊಳಿಸಿ ನಿರೂಪಿಸುವಲ್ಲಿ ಪಾರ್ತಿಸುಬ್ಬ ಎಲ್ಲ ಮೂಲಗಳನ್ನು ಸಮರ್ಥ ರೀತಿಯಲ್ಲಿ ಬಳಸಿಕೊಂಡಿದ್ದಾನೆ.

ಪಾರ್ತಿಸುಬ್ಬ ಮಣ್ಣಿನ ವಾಸನೆಯನ್ನು ಚೆನ್ನಾಗಿ ಅಳವಡಿಸಿಕೊಂಡಿದ್ದಾನೆ. ಅವನ ಪಾತ್ರಗಳು ಈ ನೆಲಕ್ಕಂಟಿದವುಗಳು. ಅವು ಸಹಜ ಮಾನವ ಸ್ವಭಾವಗಳನ್ನು ಮಿಡಿಯುತ್ತವೆ. ಸೀತೆ ಕಾಡಿಗೆ ಹೊರಡುವ ಸಂದರ್ಭ ತನ್ನ ವಸ್ತ್ರಾಭರಣಗಳನ್ನು ತೆಗೆದಿಟ್ಟು ನಾರುಡಿಯನ್ನು ಉಟ್ಟು ಹೊರಡಬೇಕಾದ ಸಂದರ್ಭ. ವಾಲ್ಮೀಕಿ, ತೊರವೆ ರಾಮಾಯಣಗಳಲ್ಲಿ ಈ ಸನ್ನಿವೇಶ ಬೇರೆಯಾಗಿಯೇ ಚಿತ್ರಿತವಾಗಿದೆ. ಆಕೆ ಸ್ವಸಂತೋಷದಿಂದ ಪಟ್ಟೆಸೀರೆ, ಆಭರಣಗಳನ್ನು ತೆಗೆದಿಟ್ಟು, ನಾರುಡೆಯನ್ನು ಧರಿಸುತ್ತಾಳೆ. ಆದರೆ ಸುಬ್ಬನಲ್ಲಿ ಅದು ವಿಶೇಷತೆಯಿಂದ ಗಮನ ಸೆಳೆಯುತ್ತದೆ. ಸೀತೆ ಮಹಾಸತಿಯಾದರೂ, ಆಕೆಯೂ ಒಂದು ಹೆಣ್ಣು, ಹೆಣ್ಣಿಗಿರಬೇಕಾದ ವಸ್ತ್ರಾಭರಣಗಳ ವ್ಯಾಮೋಹ ಸಹಜವಾದದ್ದು

ಎಂಬುದನ್ನು ಚಿತ್ರಿಸಿದ್ದಾನೆ.

ಪಟ್ಟೆಯ ಸೀರೆಯ ಬಿಚ್ಚಿ ಚಿನ್ನವ ತೆಗೆವಾಕೆ
ಕೊಟ್ಟವಲ್ಯಲವ ಕಾಣುತ್ತ ||
ಸೃಷ್ಟಿ ದೇವಿಯೇ ನೀ ನೋಡೆಂದು ಕಂಬನಿದುಂಬಿ
ಉಟ್ಟಳು ಜನಕನ ಪುತ್ರಿ ||

ಸೀತೆ ಮಹಾಸತಿಯಾದರೂ, ಆ ನೆಲದ ಸಾಮಾನ್ಯ ಹೆಣ್ಣು ಎಂಬುದನ್ನು ವ್ಯಕ್ತಪಡಿಸುವಲ್ಲಿ ಪಾರ್ತಿಸುಬ್ಬ ನಮಗೆ ಹೆಚ್ಚು ಹತ್ತಿರವಾಗುತ್ತಾನೆ ಹಾಗೂ ಅಂತರಂಗವನ್ನು ತಲುಪುತ್ತಾನೆ.

ಪ್ರಸಂಗದಲ್ಲಿ ಜನಪದ ಭಾಷೆಯ ಸೊಗಡನ್ನು ತರುವಲ್ಲಿಯೂ ಅದರ ಅಂದ ಚೆಂದಗಳನ್ನು ಹೆಚ್ಚಿಸಿದ್ದಾನೆ. ಗಾದೆ ಮಾತುಗಳ ಬಳಕೆ ಭಾಷಾ ಬಂಧವನ್ನು ಹೆಚ್ಚಿಸುವುದಷ್ಟೇ ಅಲ್ಲದೆ ನಿಶ್ಚಿತ ಪರಿಣಾಮವನ್ನು ಉಂಟು ಮಾಡಿ ಒಟ್ಟಂದವನ್ನು ರೂಪಿಸುವಲ್ಲಿ ಸಹಾಯಕವಾಗಬಲ್ಲದು. ಉಂಗುರಸಂಧಿಯಲ್ಲಿ ಹನುಮಂತನು ರಾವಣ ರಕ್ಕಸನ ಪುರವನ್ನು ಹುಡುಕಿಕೊಂಡು ಬರುವ ಸಂದರ್ಭದಲ್ಲಿ ತೃಣಬಿಂದು ಮುನಿಯನ್ನು ಕಂಡು ರಾವಣೇಶ್ವರನೆಂಬ ರಕ್ಕಸನ ಪುರವೆಲ್ಲಿ ? ಎಂದು ಕೇಳಿದಾಗ, ತೃಣಬಿಂದು ಕೊಡುವ ಉತ್ತರ ಸ್ವಾರಸ್ಯವೂ, ಪರಿಣಾಮಕಾರಿಯೂ ಆಗಿದೆ.

ಕುರುಡನ ಕಯ್ಯ ಕನ್ನಡಿಯೇಕೆ ಬಧಿರಗೆ
ಸ್ವರಸಂಗೀತಗಳ ಮಾತೇಕೆ ||
ಎರಡೂ ಕಾಲಿಲ್ಲದ ಹೆಳವಗೆ ಯಾತ್ರೆಯ
ತಿರುಗಾಟದ ಸುದ್ದಿಯೇಕೆ ||
ತಿರಿದುಂಬಾತನ ಮನ ಪಲ್ಲಕಯೇರುವ
ತೆರನಂತಾಯಿತು ನಿನ್ನ ಮನಸು ||
ಮರಮರ ಚರಿಪವಾನರ ನಿನಗಾಲಂಕಾ
ಪುರದರಸಿನ ಸುದ್ದಿಯೇಕೆ ||

ಎಂದು ಹೇಳಿ ಅದರ ಬಣ್ಣನೆಯನ್ನು ಮಾಡುತ್ತಾನೆ. ಎಷ್ಟು ಸರಳವೋ ಅಷ್ಟೇ ಸ್ವಾರಸ್ಯವಾಗಿ ಸಂಭಾಷಣೆಯನ್ನು ಹೆಣೆಯುವ ಕೌಶಲ, ಹಾಗೂ ಅಲ್ಲಿ ಔಚಿತ್ಯಪೂರ್ಣವಾಗಿ ತರುವ ಜಾನಪದ ಕಣಜದಿಂದ ಆಯ್ದು ತೆಗೆದ ಪದಪ್ರಯೋಗಗಳು ಹೃದಯಸ್ಪರ್ಶಿಯಾಗಿ ತೋರುತ್ತವೆ. ಅಲ್ಲಿಯ ಭಾಷೆ ಗೋವಿಂದ ಪೈ ಅವರು ಹೇಳುವಂತೆ ಪಡಸಾಲೆಯಲ್ಲಿ ಕುಳಿತು ಪಟ್ಟಾಂಗ ಹೊಡೆಯುವ ಭಾಷೆ.

ಒಳ್ಳೆಯ ಪ್ರಸಂಗ ಸಾಹಿತ್ಯ ಒಂದು ಒಳ್ಳೆಯ ಸುಂದರವಾದ ಸೌಧವಿದ್ದಂತೆ. ಅಲ್ಲಿಯ ಬಳಕೆಯಾಗುವ ಇಟ್ಟಿಗೆ, ಕಲ್ಲು, ಸಿಮೆಂಟು, ಕಬ್ಬಿಣ, ಅಷ್ಟೇ ಮುಖ್ಯವಾಗುವುದಿಲ್ಲ. ಅದನ್ನು ಸಮರ್ಥವಾಗಿ ಬಳಸಿ ಕಟ್ಟುವ ಕಲಾವಿದನ ಕೈಚಳಕವೂ ಅಷ್ಟೇ ಮುಖ್ಯವೆನಿಸುತ್ತದೆ. ಹಾಗೆ ಬಳಸುವ ಒಂದೊಂದು ವಸ್ತುವಿನಲ್ಲಿಯೂ ಸಮರ್ಥನಾದ ಕಲೆಗಾರ ತನ್ನ ಪ್ರಾವೀಣ್ಯವನ್ನು ಮೆರೆಯಬಲ್ಲ ಅಪೂರ್ವವಾದ ವಿನ್ಯಾಸದ ಮೂಲಕ ವಿಶೇಷತೆಯನ್ನು ತೋರಬಲ್ಲ. ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು ಅಂತಹ

ಕಲೆಗಾರಿಕೆಯನ್ನು ಮರೆದಿವೆ. ಕಥೆ ಹಳೆಯದೇ ಆದರೂ, ತನ್ನ ಸ್ೋಪಜ್ಞತೆಯಿಂದ ವಿಶಿಷ್ಟ ಪ್ರತಿಭೆಯಿಂದ ನಾವೀನ್ಯವನ್ನು ತಂದಿದ್ದಾನೆ. ಅವನದ್ದು ಒಣ ಪಾಂಡಿತ್ಯ ಪ್ರದರ್ಶನವಲ್ಲ, ಜನಮನವನ್ನು ಮುಟ್ಟುವ ಹಿತಮಿತವೆನಿಸಿದ ಅಪ್ಯಾಯಮಾನವಾದ ರಚನಾ ವಿಧಾನ.

*　　*　　*　　*　　*

ಕರ್ನಾಟಕ ವೃತ್ತಿಗಾಯಕ ಸಂಶೋಧನೆ ಹಾಗೂ ಜೀಶಂಪ

"'ಜೀಶಂಪ' ಎಂದರೆ 'ಜಾನಪದ' - 'ಜಾನಪದ' ಎಂದರೆ ಜೀಶಂಪ". ಈಗಾಗಲೇ ಸವಕಲು ಮಾತು. ಕೆಲವರಿಗೆ ಇದು ಉತ್ಪ್ರೇಕ್ಷೆಯ ಮಾತಾಗಿಯೂ ಕಾಣಬಹುದು. ಆದರೆ ಅವರನ್ನು ಹತ್ತಿರದಿಂದ ಬಲ್ಲ ಯಾರಿಗಾದರೂ ಹಾಗನಿಸುವುದಿಲ್ಲ ಅನ್ನಿಸುತ್ತದೆ. ಆ ಕ್ಷೇತ್ರದಲ್ಲಿಯ ಅವರ ಸಾಧನೆಯನ್ನು ಗಮನಿಸಿ ಅವರನ್ನು 'ಜಾನಪದ ಮಹಾಮತ್ಸ್ಯ'[1] ಎಂದು ಕರೆದವರೂ ಉಂಟು. ಯಾರೇ ಒಬ್ಬ ವ್ಯಕ್ತಿ, ಯಾವುದೇ ಒಂದು ಕೆಲಸಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಶ್ರಮ, ಶ್ರದ್ಧೆಗಳಿಂದ ದುಡಿದಾಗ, ಆ ಕ್ಷೇತ್ರಕ್ಕೆ ಒಂದು ಹೊಸ ತಿರುವನ್ನು ಕೊಟ್ಟು, ಹೊಸ ಜಾಗೃತಿಯನ್ನು ಉಂಟು ಮಾಡಲು ಶಕ್ತನಾದಾಗ ಇಂತಹ ಪ್ರಶಂಸೆಯ ಮಾತುಗಳಿಗೆ ಕಾರಣನಾಗುತ್ತಾನೆ. ಅಂತಹವರ ಸಾಲಿನಲ್ಲಿ ಡಾ. ಜೀ. ಶಂ. ಪರಮಶಿವಯ್ಯ ಅವರೂ ಒಬ್ಬರು.

ಮೂಲತಃ ಅವರು ಒಳ್ಳೆಯ ಕಥೆಗಾರರಾಗಿ, ಕವಿಗಳಾಗಿ, ಪ್ರಬಂಧಕಾರರಾಗಿ ಹಾಗೂ ವಿಮರ್ಶಕರಾಗಿ ಹೆಸರು ಮಾಡಿದ್ದಾರಾದರೂ, ಅವರನ್ನು ಸಂಪೂರ್ಣವಾಗಿ ಮರುಳು ಮಾಡಿದ ಕ್ಷೇತ್ರ - ಜಾನಪದ. ಸೃಜನಶೀಲ ಪ್ರತಿಭೆಯ ಈ ವ್ಯಕ್ತಿ ಜಾನಪದದ ಗೀಳಿಗೆ ಒಳಗಾಗಿ ಶಿಷ್ಟ ಸಾಹಿತ್ಯ ಕ್ಷೇತ್ರವನ್ನು ಕೈ ಬಿಟ್ಟದ್ದು ಸಾಮಾನ್ಯ ಸಂಗತಿಯೇನೂ ಅಲ್ಲ, ಅದೊಂದು ದೊಡ್ಡ ತ್ಯಾಗ ಎಂದರೂ ಸರಿಹೋಗುತ್ತದೆ. ಅವರಲ್ಲಿಯ ಈ ಸೃಜನಶೀಲ ಪ್ರತಿಭೆ, ಬೇರೆ ಬೇರೆ ರೂಪದಲ್ಲಿ ಜಾನಪದ ಕ್ಷೇತ್ರದಲ್ಲಿಯೂ ಬಳಕೆಯಾದುದನ್ನು ಕಂಡಾಗ ಸಮಾಧಾನವೂ ಉಂಟಾಗುತ್ತದೆ. ಮೂಲತಃ ಒಬ್ಬ ಸೃಜನಾತ್ಮಕ ಲೇಖಕನಾದವನು ಇಂತಹ ಬೇರೊಂದು ಕ್ಷೇತ್ರವನ್ನು ಪ್ರವೇಶಿಸಿದಾಗ ಆಗಬಹುದಾದ ಪ್ರಯೋಜನ ಎಂತಹುದೆಂಬುದಕ್ಕೆ ಡಾ|| ಜೀ. ಶಂ. ಪರಮಶಿವಯ್ಯ ಅವರು ಒಂದು ಅತ್ಯುತ್ತಮ ಉದಾಹರಣೆ. ಸಾಹಿತ್ಯಾಭಿರುಚಿಯ, ಸಂಶೋಧನ ದೃಷ್ಟಿಯ ಈ ವ್ಯಕ್ತಿ ಜಾನಪದದತ್ತ ಪ್ರವೇಶಿಸಿದಾಗ ಸಹಜವಾಗಿಯೇ ಅವರ ಮೊದಲ ಗಮನ ಹರಿದದ್ದು ಜನಪದ ಕಾವ್ಯಗಳ ಕಡೆಗೆ. ೧೯೫೦ರ ಸುಮಾರಿನಲ್ಲಿಯೇ ಕಂಸಾಳೆಯವರ ಕಾವ್ಯವನ್ನು ಸಂಗ್ರಹಿಸುವುದರ ಮೂಲಕ ಜಾನಪದಕ್ಕೆ ಅವರ ನೇರ ಪ್ರವೇಶ ವಾಯಿತು. ಆಗ ಅವರಿನ್ನೂ ಕಾಲೇಜ್ ವಿದ್ಯಾರ್ಥಿ. ಜನಪದ ಸಾಹಿತ್ಯದ ಸ್ವಾರಸ್ಯಕರ ಭಾಗ ಗಳನ್ನು ಸಂಗ್ರಹಿಸಿ, ಅವುಗಳನ್ನು ಗದ್ಯ ಚಿತ್ರಗಳ ರೂಪದಲ್ಲಿ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಲೇಖನ ಮಾಲೆಯಾಗಿ ಪ್ರಕಟಗೊಳಿಸಿದರು. ಪುಸ್ತಕ ಪ್ರಪಂಚ, ಪ್ರಜಾವಾಣಿ, ಜನಪ್ರಗತಿ, ಸುಧ ಮುಂತಾದ ಪತ್ರಿಕೆಗಳಲ್ಲಿಯೇ ಅಲ್ಲದೆ, ಆಕಾಶವಾಣಿಯ ಮೂಲಕವೂ

---

೧. ಡಾ|| ಸಿ.ಪಿ.ಕೆ. : ಜಾನಪದ ಪ್ರತಿಭೆ

ಜನಪ್ರಿಯ ಮಾಲಿಕೆ ಯಾಗಿ ಬಿತ್ತರಗೊಡವು. ಈಬರಹಗಳು ಕರ್ನಾಟಕದಲ್ಲಿಯೇ ಜಾನಪದದ ಬಗೆಗೆ ಒಳ್ಳೆಯ ಸದಭಿರುಚಿಯನ್ನು ಮೂಡಿಸಲು ಸಹಾಯಕವಾದವು. ಸ್ವಾರಸ್ಯವಾದ ಕಥೆ, ಆಕರ್ಷಕವಾದ ಬರವಣಿಗೆ - ಇವುಗಳಿಂದಾಗಿ ಜಾನಪದ ಜಗತ್ತಿನ ಶ್ರೀಮಂತಿಕೆ ಹೊರಜಗತ್ತಿಗೆ ತಿಳಿಯುವಂತಾ ಯಿತು. ಜನಪದ ಸಾಹಿತ್ಯವನ್ನು ಒಳ್ಳೆಯ ಸಾಹಿತ್ಯ ಚೌಕಟ್ಟಿಗೆ ಒಳಪಡಿಸಿ ಎಲ್ಲಾ ವರ್ಗದ ಜನರಿಗೂ ಪರಿಚಯಿಸಿಕೊಟ್ಟು ಜನಪ್ರಿಯಗೊಳಿಸಿ, ಆಸಕ್ತಿಯನ್ನು ಕೆರಳಿಸಿದ ಕೀರ್ತಿ ಡಾ|| ಜೀಶಂಪ ಅವರದ್ದು. ಇವೆಲ್ಲಾ ಒಂದು ದೃಷ್ಟಿಯಲ್ಲಿ ಕ್ರಿಯಾತ್ಮಕ ಲೇಖನಗಳೂ ಹೌದು, ಸಂಶೋಧನ ಲೇಖನಗಳೂ ಹೌದು. ಒಂದು ವಿಶಿಷ್ಟ ಬಗೆಯ ತಂತ್ರವನ್ನು ಅಳವಡಿಸಿಕೊಂಡು, ಸಾಹಿತ್ಯಬದ್ಧವಾದ ರೀತಿಯಲ್ಲಿ ಅವುಗಳನ್ನು ಹೆಚ್ಚು ಆಕರ್ಷಕಗೊಳಿಸಿದ್ದು ಅವರ ಒಂದು ಸಾಧನೆ.

ಹೀಗೆ ಜಾನಪದ ಜಗತ್ತನ್ನು ಪ್ರವೇಶಿಸಿದ ಡಾ|| ಜೀಶಂಪ ಅವರು ಆ ಕ್ಷೇತ್ರದಲ್ಲಿ ಇಂತಹ ಹಲವು ಸಾಧನೆಗಳನ್ನು ಮೇಲಿಂದ ಮೇಲೆ ಮಾಡುತ್ತಾ ಬಂದದ್ದು ಅವರ ವಿಶಿಷ್ಟ ಪ್ರತಿಭೆ ಹಾಗೂ ಸಂಶೋಧನಾ ದೃಷ್ಟಿಗೆ ಸಾಕ್ಷಿ. ಕರ್ನಾಟಕ ಜಾನಪದ ಕ್ಷೇತ್ರದ ಉದ್ದಗಲವನ್ನು ಅಳೆಯುವುದರ ಮೂಲಕವೇ ಜಗತ್ತಿನ ಜಾನಪದದ ಆಳವನ್ನು ಅಳೆಯುವ ಪ್ರಯತ್ನವನ್ನು ನಡೆಸಿದ್ದು ಅವರ ಮತ್ತೊಂದು ಮಹತ್ಸಾಧನೆ. ಕರ್ನಾಟಕದಲ್ಲಿಯ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ದೃಷ್ಟಿಯ ಬಳಕೆಗೆ ಅದು ಸ್ವಲ್ಪಮಟ್ಟಿಗೆ ಸಹಾಯಕವಾಯಿತೆಂಬುದನ್ನು ಬಿಟ್ಟರೆ - 'ಕರ್ನಾಟಕ ವೃತ್ತಿಗಾಯಕ ಸಂಶೋಧನೆ'ಯ ಸಂಪೂರ್ಣ ಫಲದ ಕೀರ್ತಿಗೆ ಅವರೇ ಭಾಜನರು.

ವೃತ್ತಿಗಾಯಕರು ವಿಶ್ವದಾದ್ಯಂತ ಕಂಡು ಬರುತ್ತಾರೆ. ಸರ್ ವಾಲ್ಟರ್‌ಸ್ಕಾಟ್ ತನ್ನ 'Minstrels of Scotish Border' ಗ್ರಂಥದಲ್ಲಿ ಇಂತಹ ವೃತ್ತಿಗಾಯಕರ ಅನೇಕ ವಿವರಗಳನ್ನು ಕೊಡುತ್ತಾನೆ. ಇಂಗ್ಲೆಂಡ್‌ನಲ್ಲಿ ಥಾಮಸ್ ಪೆರ್ಸಿ ಕೂಡ ಇಂತಹ ವೃತ್ತಿಗಾಯಕರ ಕೆಲವು ಸ್ವಾರಸ್ಯಕರ ಘಟನೆಗಳನ್ನು ವಿವರಿಸಿದ್ದಾನೆ. ಹದಿನಾರನೆಯ ಶತಮಾನದಲ್ಲಿ ಎಲಿಜಬೆತ್ ರಾಣಿಯ ಸತ್ಕಾರ ಕೂಟವೊಂದರಲ್ಲಿ ವೃತ್ತಿಗಾಯಕನೊಬ್ಬ ಹಾಡಿ ರಂಜಿಸಿದ ವಿವರವನ್ನು ಅಲ್ಲಿ ಹಾಜರಿದ್ದ ಲೇಖಕನೊಬ್ಬ ಬರೆದಿದ್ದಾನೆ. ಸೈನ್ಯದಲ್ಲಿ ವೃತ್ತಿಗಾಯಕರ ವೇಷ ಧರಿಸಿದ ಗೂಢಚಾರಿಗಳು ನಡೆಸುತ್ತಿದ್ದ ಚಟುವಟಿಕೆಗಳ ಅನೇಕ ವಿವರಗಳು ಲಭ್ಯವಾಗಿವೆ. ರಷ್ಯಾದ ಜನಪದ ಕಾವ್ಯ ಸಂಪ್ರದಾಯದಲ್ಲಿ 'ಸ್ಕೊಮರಾಕ್ಸಿ' ಎಂಬ ವೃತ್ತಿಗಾಯಕನ ಪಾತ್ರ ವಿಶಿಷ್ಟವಾಗಿ ಕಂಡು ಬರುತ್ತದೆ.

ಪೆರ್ಸಿಯಾಗಲಿ ಅಥವಾ ಸರ್‌ವಾಲ್ಟರ್ ಸ್ಕಾಟ್ ಆಗಲಿ ಇಂತಹ ವೃತ್ತಿಗಾಯಕರನ್ನು ಗುರುತಿಸಿ, ಅವರ ಸಾಹಿತ್ಯವನ್ನು ಸಂಗ್ರಹಿಸಿ, ಆ ಬಗೆಗೆ ಅಧ್ಯಯನ ನಡೆಸಿ ಒಂದು ಹೊಸ ಲೋಕವನ್ನೇ ತೆರೆದರಾದರೂ ; ಅವರ ಸಂಪ್ರದಾಯ ಮತ್ತಿತರ ವಿಷಯಗಳ ಕಡೆಗೆ ಗಮನ ಹರಿಸಲಿಲ್ಲ. ಈ ವೃತ್ತಿಗಾಯಕ ಸಾಹಿತ್ಯದಷ್ಟೇ ಅವರ ಸಂಪ್ರದಾಯ, ಆಚರಣೆ ಮುಂತಾದುವೂ ಪ್ರಮುಖವಾದುವು ಎಂಬುದನ್ನು ಅಷ್ಟಾಗಿ ಗುರುತಿಸಿದಂತೆ ಕಾಣುವುದಿಲ್ಲ. ಜಾನಪದ ತರುಣ ವಿದ್ವಾಂಸರ ಮೆಕ್ಕ ಎಂದು ಹೆಸರಾಗಿರುವ ಫಿನ್‌ಲೆಂಡಿನಲ್ಲಿ ಮಹಾಕಾವ್ಯ - 'ಕಲೇವಾಲ'ದ ಸಂಗ್ರಹಣೆ ನಡೆಯಿತೆ ಹೊರತು, ಅದನ್ನು ಹಾಡಿದ ವೃತ್ತಿಗಾಯಕರ ಬದುಕಿನ ವಿವರಗಳ ಸಂಗ್ರಹಣೆ ನಡೆಯಲಿಲ್ಲ. ಆ ಕಾವ್ಯಕ್ಕೆ ಸಂದ ಕೀರ್ತಿ, ಖ್ಯಾತಿ ಅವನ್ನು ಎಷ್ಟೋ ವರ್ಷಗಳಿಂದ ಕಂಠಸ್ಥವಾಗಿಯೇ ಉಳಿಸಿಕೊಂಡು ಬಂದ ಗಾಯಕ ವರ್ಗಕ್ಕೆ ದೊರೆಯದೇ ಹೋದುದು, ಅವರ ವೈಯಕ್ತಿಕ ಜೀವನದ ವರ್ಣರಂಜಿತ ಅಂಶಗಳು ಬೆಳಕಿಗೆ ಬಾರದೆ ಹೋದುದು ಒಂದು ಕೊರತೆಯೆಂದೇ ಹೇಳಬಹುದು.

ಭಾರತದಲ್ಲಿಯೂ ವೃತ್ತಿಗಾಯಕರ ಸಂಖ್ಯೆಗೇನೂ ಕಡಿಮೆ ಇಲ್ಲ. ಒಂದೊಂದು ಭಾಷಾ ಪ್ರದೇಶದಲ್ಲಿಯೂ ಇವರನ್ನು ಅಪಾರ ಸಂಖ್ಯೆಯಲ್ಲಿ ಕಾಣಬಹುದು. ಕೆಲವೆಡೆಗಳಲ್ಲಿ ಇವರನ್ನು ಗುರುತಿಸಿ ಅವರ ಸಾಹಿತ್ಯವನ್ನು ಸಂಗ್ರಹಿಸುವುದಕ್ಕಿಂತ ಹೆಚ್ಚಿನ ಕೆಲಸ ಆಗಿಲ್ಲ. ಅವರ ವೇಷಭೂಷಣ ಹಾಗೂ ಸಾಹಿತ್ಯಕ್ಕೆ ಮಾರುಹೋದ ಕೆಲವು ಆಸಕ್ತರು, ಅವರನ್ನು ಆ ಸ್ತರದಲ್ಲಿಯೇ ಕಂಡು ತೃಪ್ತರಾದರೆನ್ನಬಹುದು.

ಕರ್ನಾಟಕದಲ್ಲಿ ಜನಪದ ವೃತ್ತಿಗಾಯಕರ ಸ್ಪಷ್ಟ ಚಿತ್ರಣ ಮೂಡಿದ್ದು ಡಾ. ಜೀಶಂಪ ಅವರ ಮೂಲಕವೇ. ಅದರ ನಿಜವಾದ ಅಧ್ಯಯನ ಆರಂಭಗೊಂಡದ್ದು ಅವರಿಂದಲೇ. ಅದಕ್ಕೆ ಮೊದಲು ಕೆಲವು ಜನಪದ ವೃತ್ತಿಗಾಯಕರ ಹೆಸರುಗಳು ಅಲ್ಲಲ್ಲಿ ಕೇಳಿಬರುತ್ತವೆಯಾದರೂ - ಈಗಿನ ಅರ್ಥ ಮತ್ತು ವ್ಯಾಪ್ತಿಯಲ್ಲಲ್ಲ. ಗ್ರೋವರ್, ಫ್ಲೀಟ್, ಮಾಸ್ತಿ ಮುಂತಾದವರು ಒಬ್ಬೊಬ್ಬರ ಹೆಸರನ್ನು ಹೇಳಿದ್ದರಾದರೂ - ಅವರ್‍ಯಾರೂ ಭಿಕ್ಷುಕರ ಹಂತದಿಂದ ಮೇಲೇರಿಲ್ಲ, ಅವರ ಸಮಗ್ರ ಸಾಹಿತ್ಯದ ಸಂಗ್ರಹಣೆಯನ್ನಾಗಲೀ, ಪರಿಚಯವನ್ನಾಗಲೀ ಯಾರೂ ಮಾಡಿಕೊಡಲಿಲ್ಲ.

ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ ಬಂದ ಸಿಂಪಿ ಲಿಂಗಣ್ಣ, ಅರ್ಚಕ ಬಿ. ರಂಗಸ್ವಾಮಿ, ಮತಿಘಟ್ಟ ಕೃಷ್ಣಮೂರ್ತಿ, ಡಾ|| ಗದ್ದಿಗೀಮಠ, ಡಾ. ಎಲ್. ಆರ್. ಹೆಗಡೆ, ಬಿ. ಬಿ. ಮಹಿಷವಾಡಿ, ಕ.ರಾ.ಕೃ. ಮುಂತಾದವರು ಕರ್ನಾಟಕದ ವೃತ್ತಿಗಾಯಕರ ಬಗೆಗೆ ಅವರನ್ನು ಕೇವಲ ಭಿಕ್ಷುಕ ಹಾಡುಗಾರರಂತೆ ಗಮನಿಸಿ ಕೆಲವು ಸಾಹಿತ್ಯ ಭಾಗಗಳನ್ನು ಸಂಗ್ರಹಿಸಿದರು ಎಂಬುದನ್ನು ಬಿಟ್ಟರೆ - ಅವರ ಸಮಗ್ರ ಸಾಹಿತ್ಯದ ಸಂಗ್ರಹಣೆ, ಪರಿಚಯವನ್ನಾಗಲಿ ಅಥವಾ ಅವರ ಸಂಪ್ರದಾಯದ ಪರಿಚಯವನ್ನಾಗಲಿ ಯಾರೂ ಮಾಡಿಕೊಡಲಿಲ್ಲ.

ಕರ್ನಾಟಕ ವೃತ್ತಿಗಾಯಕ ಸಂಶೋಧನೆ ಹಾಗೂ ಅವರ ಸಮಗ್ರ ಸಾಹಿತ್ಯವೂ ಸೇರಿದಂತೆ ಅವರ ಆಚಾರ ವಿಚಾರ ನಡಾವಳಿಗಳ ಅಧ್ಯಯನ ವ್ಯಾಪಕವಾಗಿ ಆರಂಭಗೊಂಡದ್ದು ಡಾ. ಜೀಶಂಪ. ಅವರಿಂದ. ವೃತ್ತಿಗಾಯಕರ ಸಾಹಿತ್ಯದಷ್ಟೇ ಅವರ ಬದುಕೂ ವರ್ಣಮಯ ಎಂಬುದನ್ನು ಗುರುತಿಸಿ, ಅವರ ಬದುಕಿನ ಸೂಕ್ಷ್ಮ ಎಳೆಗಳನ್ನು ಗುರುತಿಸಿ, ಪರಿಚಯಿಸಿ ಅವರು ಕೇವಲ ಭಿಕ್ಷುಕರಲ್ಲ ನಮ್ಮ ಸಂಸ್ಕೃತಿಯ ಅಮೂಲ್ಯ ಅಂಶಗಳನ್ನು ಅಪೂರ್ವ ಜನಪದ ಕಾವ್ಯ ಪರಂಪರೆಯನ್ನೂ, ಶತ ಶತಮಾನಗಳಿಂದ ಮೌಖಿಕ ಪರಂಪರೆಯ ಸಾರವನ್ನು ಹೊತ್ತು ಉಳಿಸಿಕೊಂಡು ಬಂದವರು ಎಂಬುದನ್ನು ತಿಳಿಸಿ ಇಂತಹ ವೃತ್ತಿಗಾಯಕರ ಬಗೆಗೆ ಗೌರವ ಹೆಚ್ಚುವಂತೆ ಮಾಡಿದ ಕೀರ್ತಿ ಡಾ. ಜೀಶಂಪ ಅವರದ್ದು. ಕರ್ನಾಟಕ ವೃತ್ತಿಗಾಯಕರ ಅಮೂಲಾಗ್ರ ಅಧ್ಯಯನ ಪ್ರಥಮ ಬಾರಿಗೆ ಇವರಿಂದ ನಡೆಯಿತು.

ನಮ್ಮ ಜನಪದ ಕಾವ್ಯದ ಆಶ್ಚರ್ಯಕರವೂ, ಅದ್ಭುತವೂ ಆದ ಹೊಸದಿ ಗಂತವೊಂದು ಇವರಿಂದ ತೆರೆದುಕೊಂಡು ಜನಪದ ಕಾವ್ಯ ರಸಿಕರಲ್ಲಿ ರೋಮಾಂಚವನ್ನುಂಟು ಮಾಡಿತು.

'ವೃತ್ತಿಗಾಯಕ' ಪದ ಪ್ರಯೋಗವೇ ಜಾನಪದ ಕ್ಷೇತ್ರಕ್ಕೆ ಅವರ ಒಂದು ವಿಶಿಷ್ಟ ಕಾಣಿಕೆ. ಇದಕ್ಕೆ ಮೊದಲು ಅವರೇ 'ಕಥೋಪ ಜೀವಿಗಳು' ಎಂದು ಅವರನ್ನು ಕರೆದಿದ್ದಾರಾದರೂ (೧೯೬೭) ಅದು ಅವರಿಗೆ ಸಮಾಧಾನ ನೀಡಿದಂತೆ ಕಾಣುವುದಿಲ್ಲ. ಈ ಬಗೆಯ ಹಾಡುಗಾರರನ್ನು ಆಳವಾಗಿ ಅಧ್ಯಯನ ಮಾಡಿದಂತೆ ಅದರ ವ್ಯಾಪ್ತಿ ಮತ್ತು ಅರ್ಥವನ್ನು ಒಳಗೊಂಡ ಪದವೊಂದನ್ನು ಅವರು ಹುಡುಕಿದಂತೆ ಕಾಣುತ್ತದೆ. ಈವೊಂದು 'great tradition'ನ ಅರ್ಥವನ್ನು ಸಂಪೂರ್ಣವಾಗಿ

ಒಳಗೊಂಡಂತೆ 'ವೃತ್ತಿಗಾಯಕ' ಎಂಬ ಪದ ಮೂಡಿ ಬಂದಿತು. ಅವರ ಮಹತ್ವವನ್ನು ಗುರುತಿಸಿದಂತೆ, ಅದಕ್ಕೆ ತಕ್ಕ ಹೆಸರೂ ಹುಟ್ಟಿಕೊಂಡಿತು. ಸಾಮಾನ್ಯ ಭಿಕ್ಷುಕ ಸ್ಥಾನದಿಂದ ಅವರನ್ನು ಬೇರ್ಪಡಿಸಿ, ದೊಡ್ಡ ಪರಂಪರೆಯ ಪ್ರತಿನಿಧಿಗಳನ್ನಾಗಿ ಒಂದು ಸಂಸ್ಕೃತಿಯ ಸಂರಕ್ಷಕರಂತೆ ಅವರನ್ನು ಕಂಡು ಗೌರವಿಸುವ ದ್ಯೋತಕವಾಗಿ ಈ ಶಬ್ದ ಉಳಿಯುತ್ತದೆ. ಈ ಬಗೆಯ ಹಾಡುಗಾರರನ್ನು ಪ್ರಮುಖವಾಗಿ ಮೂರು ದೃಷ್ಟಿಯಿಂದ ಅವರು ಅಧ್ಯಯನ ಮಾಡಿದರು.

೧. ಸಾಂಸ್ಕೃತಿಕವಾಗಿ ಒಂದು ದೊಡ್ಡ ಸಂಪ್ರದಾಯಕ್ಕೆ ಸಂಬಂಧ ಪಟ್ಟವರು.

೨. ಅವರದ್ದೇ ಆದ ವಿಶಿಷ್ಟ ವೇಷಭೂಷಣ, ವಾದ್ಯವಿಶೇಷಗಳನ್ನು ಹೊಂದಿದವರು.

೩. ದೀರ್ಘ ಕಾವ್ಯಗಳನ್ನು ಅಪಾರ ಸಂಖ್ಯೆಯಲ್ಲಿ ಉಳಿಸಿಕೊಂಡು ಬಂದವರು.

'ವೃತ್ತಿಗಾಯಕ' - ಹೆಸರೇ ಸೂಚಿಸುವಂತೆ ಹಾಡುವುದನ್ನೇ ವೃತ್ತಿಯಾಗಿಸಿಕೊಂಡವನು. ವೈವಿಧ್ಯಮಯ ವೇಷಭೂಷಣ, ವಿಶಿಷ್ಟ ವಾದ್ಯವಿಶೇಷಗಳಿಂದ ಕೂಡಿ ಸುದೀರ್ಘ ಕಾವ್ಯಗಳನ್ನು ವಿಶೇಷ ಸಂದರ್ಭಗಳಲ್ಲಿಯಷ್ಟೇ ಅಲ್ಲದೆ, ಇತರ ಬಿಡುವಿನ ದಿನಗಳಲ್ಲಿ ಕಾಣಬರುವ ಇವರನ್ನು ಜೀಶಂಪ ಪ್ರಧಾನವಾಗಿ ಮೂರು ವರ್ಗಗಳಾಗಿ ವಿಂಗಡಿಸಿದ್ದಾರೆ -

೧. ಧಾರ್ಮಿಕ ವೃತ್ತಿಗಾಯಕರು

೨. ಲೌಕಿಕ ವೃತ್ತಿಗಾಯಕರು

೩. ಅರೆ ವೃತ್ತಿಗಾಯಕರು

ಜನಪದ ಗಾಯಕರ ಸಂಪ್ರದಾಯಗಳನ್ನು ಹೆಚ್ಚಾಗಿ ಅಧ್ಯಯನ ಮಾಡಲು ಸಾಧ್ಯವಾದಂತೆ, ಈ ಬಗೆಯ ವರ್ಗೀಕರಣವೂ ಸಾಧ್ಯವಾಯಿತೆನ್ನಬಹುದು. ಅವರ ಸಾಹಿತ್ಯದ ಸ್ವರೂಪ, ಸಂಪ್ರದಾಯದ ಹಿನ್ನೆಲೆ ಹಾಗೂ ವಾದ್ಯವಿಶೇಷಗಳ, ವೈಶಿಷ್ಟ್ಯದ ಅಧ್ಯಯನದ ಹಿನ್ನೆಲೆಯಲ್ಲಿ ಈ ಅಂತರವನ್ನು ಗುರುತಿಸಲಾಯಿತೆನ್ನಬಹುದು.

೧೯೫೦ರ ಸುಮಾರಿನಲ್ಲಿ ಆರಂಭವಾದ ಡಾ|| ಜೀಶಂಪ ಅವರ ಜನಪದ ಸಾಹಿತ್ಯ ಸಂಗ್ರಹಣೆ ಮತ್ತು ಸಂಶೋಧನೆ ನಿರಂತರವಾಗಿ ಬೆಳವಣಿಗೆಯ ಹಾದಿ ಹಿಡಿಯಿತು. ಅವರ ಸಾಹಿತ್ಯ ಸಂಗ್ರಹಣೆಯಿಂದ ಆರಂಭವಾದ ಅಧ್ಯಯನ, ಹಂತ ಹಂತವಾಗಿ ಅವರ ಸಂಪ್ರದಾಯದ ಹಲವು ಮಜಲುಗಳನ್ನು ವಿವರವಾಗಿ ವಿಶ್ಲೇಷಿಸುವವರೆಗೆ ವಿಸ್ತರಿಸಿತು. ಮೂಲಭೂತವಾಗಿ ಒಬ್ಬ ಜಾನಪದಾಸಕ್ತನಲ್ಲಿ ಇರಬೇಕಾದ ಗುಣ ಅವರಲ್ಲಿ ಹೇರಳವಾಗಿ ಇದ್ದುದೇ ಇದಕ್ಕೆ ಕಾರಣ ವೆನ್ನಬಹುದು. ಅವರಲ್ಲಿಯ ತಾಳ್ಮೆ, ಶ್ರದ್ಧೆ, ಆಸಕ್ತಿ - ಇವುಗಳು ಅಚ್ಚರಿ ಹುಟ್ಟಿಸು ವಂತಹವು. ನಿರಾಶರಾಗದೆ, ವಿಷಯವೊಂದರ ಬೆನ್ನೇರಿ ಹೋಗುವ ಅವರ ಸಾಹಸ ಮನೋಭಾವ ಅವರ ಈ ಎಲ್ಲ ಸಾಧನೆಗಳ ಗುಟ್ಟೆನ್ನಬಹುದು. ಯಾರೇ ಒಬ್ಬ ವ್ಯಕ್ತಿ ಜನಪದ ಗಾಯಕನಂತೆ ಕಂಡಾಗ, ಅವನು ಎಲ್ಲಿಯೇ ಸಿಕ್ಕಿದರೂ ಅವನ ಬೆನ್ನು ಹತ್ತಿ ಅವನ ಮೂಲಚೂಲಗಳನ್ನು ವಿಚಾರಿಸಿ ವಿಷಯ ಸಂಗ್ರಹಿಸುವ ಅವರ ಸ್ವಭಾವ ಕುತೂಹಲ ಹುಟ್ಟಿಸುವಂತಹುದು. ಸಿಕ್ಕಿದ ಎಳೆಯನ್ನು ಹಿಡಿದು ಆ ಮೂಲಕ ಸಮಗ್ರ ಕೋಟೆಗೆ ಲಗ್ಗೆ ಇಡುವ ಅವರ ಸಂಶೋಧನ ಪ್ರವೃತ್ತಿ ಅನುಕರಣೀಯ.

ಮಹದೇಶ್ವರನ ಸಂಪ್ರದಾಯಕ್ಕೆ ಸೇರಿದ ಕಂಸಾಳೆಯವರ ಸಾಹಿತ್ಯ ಸಂಗ್ರಹಣೆಯಿಂದ ಡಾ. ಜೀಶಂಪ

ಅವರ ವೃತ್ತಿಗಾಯಕರ ಸಂಶೋಧನೆ ಆರಂಭವಾಯಿತು. ೧೯೫೦ರಲ್ಲಿ ಅವರಿನ್ನೂ ಸೀನಿಯರ್ ಇಂಟರ್‌ಮಿಡಿಯೇಟ್ ವಿದ್ಯಾರ್ಥಿ. ಸುತ್ತೂರಿನ ಮಾದಪ್ಪನಿಂದ ಕಂಸಾಳೆ ಕಾವ್ಯದ ಕೆಲವು ಭಾಗಗಳನ್ನು ಸಂಗ್ರಹಿಸಿದರು. ನಂತರ ಹಿನಕಲ್ ಹನುಮಂತಯ್ಯ, ಗೂಳೂರಿನ ಲಿಂಗಶೆಟ್ಟಿ, ಪಡವಾರಹಳ್ಳಿ ಮಾದಪ್ಪ ಮುಂತಾದವರಿಂದ ಮಾದೇಶ್ವರನ ಕಾವ್ಯದ ಉಳಿದ ಭಾಗಗಳನ್ನು ಸಂಗ್ರಹಿಸುವುದರ ಮೂಲಕ ಹೊಸ ಲೋಕವೊಂದನ್ನು ಅವರು ಕಂಡುಕೊಂಡರು. ನಂತರ ಆ ಸಂಪ್ರದಾಯದ ಇತರ ಕಲಾವಿದರನ್ನು ಸಂಧಿಸಿ ಅವರಿಂದ ಉಳಿದೆಲ್ಲ ಭಾಗಗಳನ್ನೂ ಹಾಗೂ ಅವರ ಹಿನ್ನೆಲೆಯನ್ನೂ ಸಂಗ್ರಹಿಸಿದರು.

ಈ ಅವಧಿಯಲ್ಲಿಯೇ ದೊಂಬಿದಾಸರು ಮತ್ತು ಜುಂಜಪ್ಪನ ಗಣೆಯವರ ಸಂಶೋಧನೆಯೂ ಆರಂಭಗೊಂಡಿತು. ಅವರಿಂದ ಅವರ ಸಾಹಿತ್ಯದ ಜೊತೆಗೆ ಸ್ವಲ್ಪ ಮಟ್ಟಿಗೆ ಅವರ ಸಂಪ್ರದಾಯಗಳ ಸಂಗ್ರಹಣೆಯೂ ನಡೆಯಿತು. ಮಳವಳ್ಳಿಯ ಬಸ್ ನಿಲ್ದಾಣದಲ್ಲಿ ಆಕಸ್ಮಿಕವಾಗಿ ಸಿಕ್ಕಿದ ನೀಲಗಾರ ಗುರುಬಸವಯ್ಯನನ್ನು ಗುರುತಿಸಿ ಅವನಿಂದ ನೀಲಗಾರ ಸಾಹಿತ್ಯದ ಸಂಗ್ರಹಣೆ ೧೯೬೦ರ ಅವಧಿಯಲ್ಲಿ ಆರಂಭಗೊಂಡು ನಂತರ ದೊಡ್ಡರಾಚಯ್ಯ, ಮಳವಳ್ಳಿ ರಾಚಯ್ಯ ಇವರುಗಳಿಂದ ಅಪಾರ ಸಾಹಿತ್ಯ ಸಂಗ್ರಹಣೆ ಮಾಡುವುದರ ಮೂಲಕ ಅದು ಒಂದು ಘಟ್ಟವನ್ನು ಮುಟ್ಟಿತು.

ಡಾ|| ಜೀಶಂಪ. ಅವರ ವೃತ್ತಿಗಾಯಕರ ಸಂಶೋಧನೆಯನ್ನು ಎರಡು ಸ್ತರಗಳಲ್ಲಿ ಗುರುತಿಸಬಹುದು. ಒಂದು : ಎಲ್ಲಿಯೋ ಹೇಗೋ ಸಿಕ್ಕಿದ ಕಲಾವಿದರಿಂದ ಸಿಕ್ಕಿದಷ್ಟು ಮಾಹಿತಿಯನ್ನು ಮೊದಲಿಗೆ ಸಂಗ್ರಹಿಸುವುದು. ಎರಡು : ಅವರ ಮೂಲ ನೆಲೆಗೇ ಹೋಗಿ, ಆ ಪರಿಸರದಲ್ಲಿಯೇ ಬದುಕಿರುವ ಹಿರಿಯ ಕಲಾವಿದರನ್ನು ಸಂದರ್ಶಿಸಿ, ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವುದು. ಇದರಿಂದಾಗಿ ಒಂದೊಂದು ಸಂಪ್ರದಾಯದ ಸಮಗ್ರ ಅಧ್ಯಯನ ಸಾಧ್ಯವಾಯಿತೆನ್ನಬಹುದು.

೧೯೬೪ರಲ್ಲಿ ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿಯ ಜಾನಪದ ಸಂಶೋಧನೆಗೆ ತೊಡಗಿದ ಮೇಲೆ ಅವರು ಈ ವೃತ್ತಿಗಾಯಕರನ್ನು ನೋಡುವ ದೃಷ್ಟಿಯೇ ಬದಲಾಯಿತೆನ್ನ ಬಹುದು. ಅವರ ಸಂಶೋಧನೆಗೆ ಹಾಗೂ ಅಧ್ಯಯನಕ್ಕೆ ಒಂದು ಹೊಸ ತಿರುವು ಇಲ್ಲಿಂದ ದೊರೆತಂತಾಯಿತು. ಮೊದಮೊದಲಿಗೆ ಸಾಹಿತ್ಯದ ಸ್ತರದಲ್ಲಿಯಷ್ಟೇ ಇದ್ದ ಅವರ ಸಂಶೋಧನಾ ಹಾಗೂ ಅಧ್ಯಯನ ದೃಷ್ಟಿ ಆ ಗಾಯಕರ ಸಂಪ್ರದಾಯದ ಅಧ್ಯಯನದ ಕಡೆಗೂ ಸಮಪ್ರಮಾಣ ದಲ್ಲಿ ಹರಿಯಿತು. ಲೌಕಿಕ ವೃತ್ತಿಗಾಯಕರ ವರ್ಗಕ್ಕೆ ಸೇರಿದ ಕರಪಾಲದವರು ಸಿಕ್ಕಿದ ಮೇಲೆ ಅವರ ಸಂಪ್ರದಾಯ ಮತ್ತು ಕತೆಗಳ ವಿವರಣಾತ್ಮಕ ಅಧ್ಯಯನ ಆರಂಭವಾಯಿತು. ನಂತರ ಅದು ಎಲ್ಲ ವೃತ್ತಿಗಾಯಕ ವರ್ಗದ ಅಧ್ಯಯನಕ್ಕೂ ವ್ಯಾಪಿಸಿತು.

ತುಮಕೂರು, ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಚೌಡಿಕೆಯವರನ್ನು ಗುರುತಿಸಿದ್ದು ಇದೇ ಅವಧಿಯಲ್ಲಿಯೇ. ಪ್ರಸಿದ್ಧ ಕಲಾವಿದ ಕರಪಾಲದ ಸಿದ್ದಯ್ಯ ಹಾಗೂ ಅವರ ಸಾಹಿತ್ಯ ಬೆಳಕಿಗೆ ಬಂದದ್ದು ಈ ಸಮಯದಲ್ಲಿಯೇ. ಇವುಗಳ ನಂತರರ ಒಂದರ ಮೇಲೆ ಒಂದರಂತೆ - ಗೊರವರು, ಗೊಂದಲಿಗರು, ಹೆಳವರು, ಕಿಂದರಿ ಜೋಗಿಗಳು, ತಂಬೂರಿ ಯವರು, ತೆಲುಗು ಜಂಗಮರು ಹೀಗೆ ಇಪ್ಪತ್ತಕ್ಕೂ ಹೆಚ್ಚು ವೃತ್ತಿಗಾಯಕರ ಸಂಶೋಧನೆ ಮತ್ತು ಅಧ್ಯಯನ ನಿರಂತರವಾಗಿ ಅವರಿಂದ ಸಾಧ್ಯವಾಯಿತು. ೧೯೬೫ರಲ್ಲಿ ಅರಸೀಕೆರೆಯ ಬಳಿ ಅವರು ಗುರುತಿಸಿದ ಕಿಂದರಿ ಜೋಗಿಗಳ ಸಂಶೋಧನೆ ಒಂದು ಹೊಸ ಅಂಶವನ್ನೇ ಬೆಳಕಿಗೆ ತಂದಿತು. ಕುವೆಂಪು ಅವರ ಕಿನ್ನರಿ ಜೋಗಿಯನ್ನು ನೋಡಿ ಅವರನ್ನು

ಹೇಗೋ ಕಲ್ಪಿಸಿಕೊಳ್ಳಲಾಗಿತ್ತು. ಅವರು ಬಳಸುವ ವಾದ್ಯದ ಸ್ಪಷ್ಟ ಕಲ್ಪನೆಯೂ ಇರಲಿಲ್ಲ. ಅದೊಂದು ಊದುವ ವಾದ್ಯವೆಂದು ಭಾವಿಸಲಾಗಿತ್ತು. ಆದರೆ ಕಿನ್ನರಿ ಜೋಗಿಗಳ ಆಕರ್ಷಕ ತಂತಿವಾದ್ಯ ಅದರ ಧ್ವನಿಯಂತೆಯೇ ಆಕಾರವೂ ಮೋಹಕವೆಂಬುದು ಈ ಸಂಶೋಧನೆಯ ನಂತರ ಬೆಳಕಿಗೆ ಬಂದ ಅಂಶ.

ಡಾ|| ಜೀಶಂಪ ಅವರ ವೃತ್ತಿಗಾಯಕ ಸಂಶೋಧನೆಯಲ್ಲಿ ಕಂಡು ಬರುವ ಮತ್ತೊಂದು ಪ್ರಮುಖ ಅಂಶ ಅವರ ಉದಾರತೆಗೆ ಹಾಗೂ ಜಾನಪದದ ಬಗೆಗೆ ಅವರಿಗಿರುವ ಕಾಳಜಿಗೆ ಸಂಬಂಧಿಸಿದುದು. ಎಲ್ಲವನ್ನೂ ತಾನೊಬ್ಬನೇ ಮಾಡುತ್ತೇನೆ, ಮಾಡಬೇಕು ಎಂಬ ದುರಾಸೆ ಅವರಿಗಿಲ್ಲದಿರುವುದು. ತಾವು ಗುರುತಿಸಿದ ಕಲಾವಿದರಿಂದ ಸಂಪೂರ್ಣ ಸಾಹಿತ್ಯವನ್ನು ತಾವೊಬ್ಬರೇ ಸಂಗ್ರಹಿಸಲು ಸಾಧ್ಯವಾಗದೇ ಹೋದಾಗ ತಮ್ಮ ಶಿಷ್ಯರಿಂದ ಆ ಕೆಲಸವನ್ನು ಮುಂದುವರಿಸಿ ಆ ಕೀರ್ತಿಯನ್ನು ಅವರಿಗೂ ಹಂಚಿದ ನಿದರ್ಶನಗಳೂ ಇವೆ. ಶಿವಮೊಗ್ಗ ಜಿಲ್ಲೆಯ ಗೊಂದಲಿಗರನ್ನು ಗುರುತಿಸಿ ಅವರ ಅಧ್ಯಯನವನ್ನು ತಾವು ಆರಂಭಿಸಿ, ನಂತರ ಅವರ ಸಾಹಿತ್ಯ ಸಂಗ್ರಹಣೆಯ ಹೊಣೆಯನ್ನು ಬೇರೆಯವರಿಗೆ ವಹಿಸಿಕೊಟ್ಟರು.[೨] ಹಾಗೆಯೇ ೧೯೬೪ರ ಅವಧಿಯಲ್ಲಿಯೇ ಕರಪಾಲದವರನ್ನು ಗುರುತಿಸಿ ಅವರ ಅಧ್ಯಯನವನ್ನು ನಡೆಸಿದ್ದರೂ ಅವರ ಸುಮಗ್ರ ಸಾಹಿತ್ಯವನ್ನು ಮೂಲ ಸೆಲೆ ಉಳಿಯುವಂತೆ ಸಂಗ್ರಹಿಸುವ ಜವಾಬ್ದಾರಿಯನ್ನು ಈ ಲೇಖಕನಿಗೆ ವಹಿಸಿದ್ದು ಮತ್ತೊಂದು ನಿದರ್ಶನ.[೩] ಡಾ. ಅಂಬಳಿಕೆ ಹಿರಿಯಣ್ಣ ಅವರು ಸಂಗ್ರಹಿಸಿ, ಪ್ರಕಟಿಸಿರುವ ತಂಬೂರಿ ಕಾವ್ಯಗಳು, ಕಿನ್ನರಿ ಕಾವ್ಯಗಳೂ ಹಾಗೂ ಈಗ ಅಚ್ಚಿನಲ್ಲಿರುವ ಚೌಡಿಕೆ ಕಾವ್ಯಗಳ ಸಂಗ್ರಹಣೆಯಲ್ಲಿಯೂ ಇವರ ನೆರವು ಇದೆ. ಇಂತಹ ಸಂದರ್ಭಗಳಲ್ಲಿ ಶಿಷ್ಯರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ, ಕಲಾವಿದರ ಪರಿವೀಕ್ಷಣೆ ನಡೆಸಿ, ಸಂಗ್ರಹದ ಕೆಲಸವನ್ನು ಹಚ್ಚಿ ಬರುವ ಇವರ ದೃಷ್ಟಿ ಅನುಕರಣೀಯ.

ಜಾನಪದದಂದತಹ ವಿಷಯದ ಅಧ್ಯಯನದಲ್ಲಿ ಇಂತಹ ಉದಾರನೀತಿ ಅನಿವಾರ್ಯವೆನಿಸುತ್ತದೆ. ಎಲ್ಲವನ್ನು ತಾನೊಬ್ಬನೇ ಮಾಡಿ ಹೆಸರು ಪಡೆಯಬೇಕು ಎಂದು ಹೊರಟಾಗ ಒಂದು ಬಗೆಯ ಅನಾಹುತ ಸಂಭವಿಸಲೂ ಬಹುದು. ಹೆಚ್ಚು ಕಾಲ ಕಳೆದಂತೆ ಆ ಸಾಹಿತ್ಯದ ಸ್ವರೂಪ ಬದಲಾಗಬಹುದು. ಇಲ್ಲವೇ ಆ ಕಲಾವಿದನೇ ಕಣ್ಮುಚ್ಚಬಹುದು. ಅಂತಹ ಸಂದರ್ಭದಲ್ಲಿ ಅವನ ಜೊತೆಯಲ್ಲಿಯೇ ಅವನ ಅಮೂಲ್ಯ ಸಾಹಿತ್ಯವೂ ಕಣ್ಮರೆಯಾಗುತ್ತದೆ. ಈ ಕಾರಣದಿಂದಾಗಿ ಆದಷ್ಟು ಬೇಗ ಎಲ್ಲ ಬಗೆಯ ಸಾಹಿತ್ಯ ಸಂಗ್ರಹಣೆ ಮತ್ತು ಅದರ ಅಧ್ಯಯನ ಆಗಬೇಕಾದ್ದು ಅತ್ಯಗತ್ಯ. ಈ ದೃಷ್ಟಿಯಿಂದ ಆಸಕ್ತ ಸಂಗ್ರಹಕಾರರನ್ನು ಗುರುತಿಸಿ ಇಂತಹ ಕಾರ್ಯವನ್ನು ಅವರು ಮಾಡಿಸುತ್ತ ಬಂದಿದ್ದಾರೆ. ಇದು ನಿಜಕ್ಕೂ ಅನುಕರಣೀಯ ಹಾಗೂ ಪ್ರಶಂಸನೀಯ.

ಇದುವರೆಗೆ ಗುರುತಿಸಲಾಗಿರುವ ವೃತ್ತಿಗಾಯಕರನ್ನು ಧಾರ್ಮಿಕ ಲೌಕಿಕ ಹಾಗೂ ಅರೆ ವೃತ್ತಿಗಾಯಕ ಎಂದು ಮೂರು ವರ್ಗವಾಗಿ ವಿಂಗಡಿಸಲಾಗಿದೆ. ಅವರುಗಳು ಬಳಸುವ ವಿಶೇಷ ವಾದ್ಯಗಳನ್ನು ಅದರೊಂದಿಗೆ ಗುರುತಿಸಲಾಗಿದೆ.

ಧಾರ್ಮಿಕ :

೧. ದೇವರ ಗುಡ್ಡರ ಸಂಪ್ರದಾಯ - ಕಂಸಾಳೆ

---

೨. ಕ್ಯಾತನಹಳ್ಳಿ ರಾಮಣ್ಣ - ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು

೩. ಡಾ|| ಡಿ.ಕೆ. ರಾಜೇಂದ್ರ - ಕರಪಾಲ ಮೇಳ

೨. ನೀಲಗಾರ ಸಂಪ್ರದಾಯ - ತಂಬೂರಿ

೩. ಗೊರವರ ಸಂಪ್ರದಾಯ - ಢಮರುಗ

೪. ಜುಂಜಪ್ಪನ ಸಂಪ್ರದಾಯ - ಗಣೆ

೫. ಚೌಡಿಕೆ ಸಂಪ್ರದಾಯ - ಚೌಡಿಕೆ

೬. ಗೊಂದಲಿಗರ ಸಂಪ್ರದಾಯ - ತುಂತುಣಿ

೭. ವಾಘೆ ಮುರುಳಿ ಸಂಪ್ರದಾಯ - ತುಂತುಣಿ

೮. ಆಸಾದಿ ಸಂಪ್ರದಾಯ - ಹಲಗೆ

೯. ದೇವ ಸೋಲಿಗ ಸಂಪ್ರದಾಯ - ಉಜ್ಜುಗಡ್ಡಿ

೧೦. ಭೂತೇರ ಸಂಪ್ರದಾಯ - ತುಂತುಣಿ

ಲೌಕಿಕ :

೧. ದೊಂಬಿದಾಸರ ಸಂಪ್ರದಾಯ - ಏಕತಾರಿ

೨. ತೆಲುಗು ಜಂಗಮರ ಸಂಪ್ರದಾಯ - ಏಕತಾರಿ

೩. ಚೌಡಿಕೆ ಸಂಪ್ರದಾಯ (ಲೌಕಿಕ) - ಶೃತಿ ಚೌಡಿಕೆ

೪. ಲಂಬಾಣಿ ಸಂಪ್ರದಾಯ - ತಣಿಗೆ

೫. ತಂಬೂರಿ ಸಂಪ್ರದಾಯ - ತಂಬೂರಿ

೬. ಕರಪಾಲ ಸಂಪ್ರದಾಯ - ಗುಮ್ಮಟೆ

೭. ಕಿನ್ನರಿ ಜೋಗಿ ಸಂಪ್ರದಾಯ - ಕಿನ್ನರಿ

೮. ಹೆಳವರ ಸಂಪ್ರದಾಯ - ಗಂಟೆ

೯. ಸಾರಿಂದ ಸಂಪ್ರದಾಯ - ಸಾರಿಂದ

೧೦. ಬುರ್ರ ಕಥಾ ಸಂಪ್ರದಾಯ - ಬುರ್ರ

೧೧. ಸ್ತ್ರೀ ಸಂಪ್ರದಾಯ - ....

ಅರೆ ವೃತ್ತಿಗಾಯಕ ಸಂಪ್ರದಾಯಗಳು :

೧. ಅಂಟಿಕೆ ಪಂಟಿಕೆ ಸಂಪ್ರದಾಯ - ತಮ್ಮಟೆ

೨. ಭಾಗವಂತಿಕೆ ಸಂಪ್ರದಾಯ - ತಾಳ

೩. ಕಲ್ಗಿತುರಾ ಸಂಪ್ರದಾಯ - ದಪು ಅಥವಾ ಕಡ

೪. ಡೊಳ್ಳು ಸಂಪ್ರದಾಯ - ಡೊಳ್ಳು

೫. ವೀರಗಾಸೆ ಸಂಪ್ರದಾಯ - ಸಮೇಳ

೬. ಹಾಲಕ್ಕಿ ಗೌಡರ ಸಂಪ್ರದಾಯ - ಗುಮ್ಮಟೆ

೭. ಭೂತ ಸಂಪ್ರದಾಯ - ಚಂಡೆ

೮. ಕೋಲು ಮೇಳ ಸಂಪ್ರದಾಯ - ದಮ್ಮಡಿ

ವೃತ್ತಿಗಾಯಕರ ಕಥೆ ಮತ್ತು ಸಂಪ್ರದಾಯದಷ್ಟೇ ಅವರು ಬಳಸುವ ವಾದ್ಯ ವಿಶೇಷಗಳೂ ಮಹತ್ತರದವು : ಆ ವೃತ್ತಿಗಾಯಕ ಸಂಪ್ರದಾಯದೊಂದಿಗೆ ಆ ವಾದ್ಯ ವಿಶೇಷದ ನಿಕಟ ನಂಟೂ ಇರುತ್ತದೆ ಎಂಬುದನ್ನು ಗುರುತಿಸಿ ಅವುಗಳ ವಿವರವನ್ನು ಸಾಕಷ್ಟು ವಿಸ್ತೃತವಾಗಿ ಕೊಟ್ಟಿದ್ದಾರೆ.

ಇದರಂತೆಯೇ ವೃತ್ತಿಗಾಯಕರ ವೇಷಭೂಷಣಗಳ ಪ್ರಸ್ತಾಪವನ್ನೂ ಸಾಕಷ್ಟು ವಿವರವಾಗಿ ಕೊಟ್ಟಿದ್ದಾರೆ. ಅವರು ಬಳಸುವ ಒಂದೊಂದು ಲಾಂಛನಕ್ಕೂ ವಿಶೇಷ ಅರ್ಥವನ್ನೂ ಅವರು ಮನಗಾಣಿಸಿದ್ದಾರೆ. ಮೈಲಾರಲಿಂಗನ ಸಂಪ್ರದಾಯದ ಗೊರವರ ವೇಷಭೂಷಣಗಳ ವರ್ಣನೆ ಅವರನ್ನು ಕಣ್ಣು ಮುಂದೆ ತಂದು ನಿಲ್ಲಿಸುವಷ್ಟು ಸ್ಪಷ್ಟವಾಗಿ ಕಂಡು ಬರುತ್ತದೆ.

"ಹೊಕ್ಕಳಗಂಟ ಹುಲೀಚರ್ಮ, ರಟ್ಟೆಬಳೆ, ಕಾಲುಗೆಜ್ಜೆ, ಕೊರಳ ಕವಡೆ, ಎಲೆಸಂಚಿ, ಕವಡೆ ಪಟ್ಟಿ- ಭಂಡಾರದ ಚೀಲ, ಪಿಳ್ಳಂಗೋವಿ ಮುಂತಾದುವನ್ನು ಬಳಸುತ್ತಾರೆ. ಕರಡಿಯ ಕೂದಲ ಟೋಪಿ, ಕರಿಯ ನಿಲುವಂಗಿ ಅದರ ಮೇಲೆ ಅಗಲವಾದ ಕವಡೆ ಪಟ್ಟಿಗಳನ್ನು ಇವರು ಧರಿಸುವರು. ಇದರ ಜೊತೆಗೆ ಹಣೆ ಮತ್ತು ಕಣ್ಣುಗಳು ತುಂಬುವಂತೆ ವಿಭೂತಿ ಪಟ್ಟೆಗಳನ್ನು ಬಳಿದು, ನಡುವೆ ಕುಂಕುಮವನ್ನು ಲೇಪಿಸುವರು. ಕುತ್ತಿಗೆಯನ್ನು ವಿಭೂತಿ ಆವರಿಸುತ್ತದೆ. ಬಿಳಿಪು, ಕೆಂಪು ಬಣ್ಣಗಳಿಂದ ತುಂಬಿದ ಮುಖ ನಾನಾ ರೀತಿಯ ಚಿತ್ರ - ವಿಚಿತ್ರ ವೇಷಭೂಷಣಗಳಿಂದ ಗೊರವಯ್ಯನ ಆಕೃತಿಯೇ ಮೈ ಜುಮ್ಮೆನ್ನಿಸುತ್ತದೆ.[೪]

* * * * *

ಜನಪದ ಕಾವ್ಯಕಥೆಗಳ ವಿಮರ್ಶೆ ಡಾ. ಜೀಶಂಪ ಅವರ ವೃತ್ತಿಗಾಯಕರ ಅಧ್ಯಯನದ ಮತ್ತೊಂದು ಮಹತ್ವದ ಘಟ್ಟ. ನೀಲಗಾರ ಮೇಳ ಮತ್ತು ಅವರ ಸಮಗ್ರ ಕತೆಗಳು, ಕಂಸಾಳೆ ಮೇಳ ಮತ್ತು ಅವರ ಸಮಗ್ರ ಕತೆಗಳು, ಜುಂಜಪ್ಪನ ಮೇಳ ಮತ್ತು ಅವರ ಸಮಗ್ರ ಕತೆಗಳು - ಹೀಗೆ ಹಲವು ಜನಪದ ಕಾವ್ಯಗಳನ್ನು ಹಲವು ವೈಶಿಷ್ಟ್ಯಗಳೊಡನೆ ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿಕೊಟ್ಟಿದ್ದಾರೆ. ಅವರ ಪಿಎಚ್.ಡಿ. ಮಹಾ ಪ್ರಬಂಧ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು', ಕನ್ನಡ ವೃತ್ತಿಗಾಯಕರ ಕಾವ್ಯಗಳು, ದೊಂಬಿದಾಸರು, ಕರುಣೆ ಕಣ್ಣ ತೆರೆಯೆ, ಪಿರಿಯಾಪಟ್ಟಣದ ಕಾಳಗ, ಎರಡು ಜನಪದ ಕಾವ್ಯ, ಜನಪದ ವೀರಕಾವ್ಯಗಳು, ಹೆಳವರ ಕಾವ್ಯ, ಭಾಗವಂತಿಕೆ ಮೇಳ, ಮುಡುಕುತೊರೆ ಮಲ್ಲಿಕಾರ್ಜುನ ಮುಂತಾದ ಶೀರ್ಷಿಕೆಗಳಲ್ಲಿ ಅವರು ಹೊರತಂದಿರುವ ವೃತ್ತಿಗಾಯಕ ಕಾವ್ಯಗಳು ಅಪಾರ ಅಧ್ಯಯನದ ಮುನ್ನುಡಿಯನ್ನು ಒಳಗೊಂಡಿದ್ದು, ಅವರ ಸಂಶೋಧನಾ ದೃಷ್ಟಿಗೆ ಹಾಗೂ ಆಳವಾದ ಅಧ್ಯಯನಕ್ಕೆ ಸಾಕ್ಷಿಯಾಗಿವೆ. ಅವರು ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿ ಮಾಡಿರುವ ಸಮಗ್ರ ಸಾಹಿತ್ಯದ ವಿಮರ್ಶೆ ತುಂಬಾ ಸಾಹಿತ್ಯಬದ್ಧವಾದ ಬರವಣಿಗೆ.

ಅವರ ಈ ಒಂದೊಂದು ಕೃತಿಯಿಂದ ಜನಪದ ವೃತ್ತಿಗಾಯಕ ಲೋಕದ ಉದ್ದಗಲವನ್ನೂ ಹಾಗೂ ಎತ್ತರ ಬಿತ್ತರಗಳನ್ನು ವಿಶಿಷ್ಟ ರೀತಿಯಲ್ಲಿ ತೆರೆದು ತೋರುತ್ತವೆ. ಈ ದೃಷ್ಟಿಯಿಂದ

---

೪. ಡಾ|| ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು ಪು. ೨೪೭

ಮೊದಲು ಹೆಸರಿಸಬೇಕಾದ ಕೃತಿ 'ಜನಪದ ಕಾವ್ಯ ಕತೆಗಳು', ಇದರ ಮುನ್ನುಡಿಯಲ್ಲಿ ಅವರು ಹೇಳಿರುವ ಮಾತು ಗಮನಾರ್ಹ. 'ನಮ್ಮ ಲಾವಣಿಕಾರರ ಮೂಲ ಸಾಹಿತ್ಯ ಸಹಸ್ರಾರು ಪುಟಗಳ ವ್ಯಾಪ್ತಿಯನ್ನು ಮೀರುತ್ತದೆ. ಆ ಮೂಲಕ ಕಾವ್ಯಗಳನ್ನೆಲ್ಲಾ ಅನೇಕ ಪಾಠಾಂತರಗಳ ನೆರವಿನಿಂದ ಸಂಪಾದಿಸುವ ಅಗತ್ಯವಿರುವುದರಿಂದ ಅವುಗಳ ಪ್ರಕಟಣ ಪೂರ್ವದಲ್ಲಿ ಇಂತಹ ಒಂದು ಪ್ರಯತ್ನದ ಮೂಲಕ ಆ ಸಾಹಿತ್ಯದ ಶ್ರೀಮಂತಿಕೆಯನ್ನು ಪರಿಚಯಿಸುವುದೇ ನನ್ನ ಮುಖ್ಯ ಗುರಿಯಾಗಿದೆ. ಆದುದರಿಂದ ಇದನ್ನು ಯಾರೂ ಒಂದು ಜನಪದ ಸಾಹಿತ್ಯ ಎಂದು ಪರಿಗಣಿಸಬೇಕಾಗಿಲ್ಲ. ಮೂಲ ಸಾಹಿತ್ಯದ ಕೈದೀವಿಗೆ ಎಂಬಷ್ಟಕ್ಕೆ ಮಾತ್ರ ಇದರ ಪರಿಮಿತಿಯನ್ನು ಸೀಮಿತಗೊಂಡರೆ ಸಾಕು'.

ಅವರ ಜನಪದ ಕಾವ್ಯಕಥೆಗಳಲ್ಲಿ, ಮೂಲಕಾವ್ಯಗಳ ಗದ್ಯ ಚಿತ್ರದ ಜೊತೆಗೆ ಕಾವ್ಯ ಸಂಪ್ರದಾಯಗಳ ಪರಿಚಯವೂ ಇದೆ. ನಮ್ಮ ಜನಪದ ಕಾವ್ಯ ಪರಂಪರೆಯ ರಸಲೋಕಕ್ಕೆ ಈ ಕೃತಿ ಒಂದು ಹೆಬ್ಬಾಗಿಲು. ಮೂರು ಜನಪದ ಮಹಾ ಕಾವ್ಯಗಳ ಹಾಗೂ ಇತರ ಖಂಡ ಕಾವ್ಯಗಳ ಮೊದಲ ಪರಿಚಯವನ್ನು ದೊರಕಿಸಿಕೊಡುವ ಈ ಕೃತಿಗೆ ಒಂದು ಐತಿಹಾಸಿಕ ಮಹತ್ವವೂ ಇದೆ. ಅಲ್ಲದೆ ಜನಪದ ಕಾವ್ಯಗಳ ಜೀವನಾಡಿಯನ್ನು ಹಿಡಿದು ಅದರ ಕಾವ್ಯ ಸ್ವಾರಸ್ಯದ ವಿವಿಧ ಮಗ್ಗುಲುಗಳನ್ನು ರಂಜನೀಯವಾದ ಶೈಲಿಯಲ್ಲಿ ನೀಡಿರುವ ಒಂದು ವಿನೂತನ ಪ್ರಯೋಗವನ್ನು ಇಲ್ಲಿ ಕಾಣಬೇಕಾಗಿದೆ. ನಮ್ಮ ಜನಪದ ಸಾಹಿತ್ಯವನ್ನು ಇಂತಹ ಸಾಹಿತ್ಯದ ಸುವರ್ಣ ಚೌಕಟ್ಟಿನಲ್ಲಿ ಕೊಟ್ಟವರು ಅತಿ ವಿರಳ. ಬರವಣಿಗೆಯ ಸ್ವಾರಸ್ಯವನ್ನು ಶೈಲಿಯ ಮಾಧುರ್ಯವನ್ನು ಅರಿಯಲು ಅಲ್ಲಿಯ ಗದ್ಯ ಚಿತ್ರಗಳನ್ನೇ ಓದಬೇಕು. ನಮ್ಮ ಜನಪದ ಕಾವ್ಯಕ್ಕೆ ಒಂದು ವಿಶೇಷವಾದ ಪಟ್ಟ ದೊರೆತದ್ದು ಈ ಕೃತಿಯಲ್ಲಿಯೇ. ಇಲ್ಲಿ ಅಡಕವಾಗಿರುವ ಬರಹಗಳು ಅದಕ್ಕೂ ಹಿಂದೆ ಒಂದೂವರೆ ದಶಕದ ಅವಧಿಯಲ್ಲಿ ನಾಡಿನ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟಗೊಂಡು ನಮ್ಮ ಜನಪದ ಸಾಹಿತ್ಯದ ಮಧುರ ಪರಿಮಳವನ್ನು ನಾಡಿನಾದ್ಯಂತ ಹರಡಿ ಆ ಸಾಹಿತ್ಯದ ಬಗೆಗೆ ಅಪಾರ ಜನಪ್ರಿಯತೆಯನ್ನು ತಂದುಕೊಡುವಲ್ಲಿ ಅವು ವಹಿಸಿದ ಪಾತ್ರವನ್ನು ಇಲ್ಲಿ ಮರೆಯುವಂತಿಲ್ಲ.

ಈ ಲೇಖನಗಳಲ್ಲಿ ಒಂದು ಕಡೆ ಸೃಜನಶೀಲ ಲೇಖಕನ ಕಲೆಗಾರಿಕೆ ಕಂಡು ಬಂದರೆ ಇನ್ನೊಂದು ಕಡೆ ಸಂಶೋಧಕನ ವಿಶ್ಲೇಷಣಾತ್ಮಕ ದೃಷ್ಟಿಯೂ ಕಂಡು ಬರುತ್ತದೆ. ಮೂಲತಃ ಶ್ರೇಷ್ಠ ಕತೆಗಾರರಾಗಿದ್ದ ಜೀಶಂಪ ಅವರು ಇಲ್ಲಿ ತಮ್ಮ ಸಾಹಿತ್ಯದ ಹಾಗೂ ಸಂಶೋಧನಾತ್ಮಕ ಗುಣಗಳನ್ನು ಸಾಮರಸ್ಯಗೊಳಿಸಿರುವುದು ಒಂದು ವಿಶೇಷವೆಂದು ಹೇಳಬಹುದು.

ಕರಪಾಲ ಕಂಸಾಳೆ ನೀಲಗಾರ ಹಾಗೂ ಜುಂಜಪ್ಪನ ಕಥೆಗಳು ಅಲ್ಲದೆ ಕೆಲವು ಹೆಂಗಸರ ಹಾಡ್ಗತೆಗಳನ್ನು ಈ ಕೃತಿಯ ಮೂಲಕ ಸ್ವಾರಸ್ಯಕರವಾಗಿ ಪರಿಚಯಿಸಿಕೊಟ್ಟಿದ್ದಾರೆ. ಮೂಲಕತೆಯ ಕೆಲವು ಭಾಗಗಳನ್ನು ಆರಿಸಿ ಪರಿಚಯಿಸಿ ಕೊಡುವಾಗ ಅವರು ಅವಕ್ಕೆ ಕೊಡುವ ಒಂದೊಂದು ಶೀರ್ಷಿಕತೆಯೂ ಓದುಗರ ಕುತೂಹಲವನ್ನು ಕೆರಳಿಸಿ ಆಸಕ್ತಿಯನ್ನು ಮೂಡಿಸುವಂತವು, 'ತೋಳಿಗೆ ಒರಗುವ ಮಗನಿಲ್ಲ' 'ಹ್ಯಾಗೆ ಕೊಂದಪ್ಪ ನನ್ನ ಮಡದೀಯ' 'ಮಂಟೇದ ಒಡೆಯರೇ ಮುಂದೆ ಹೋಗಿ' 'ಮಲ್ಲಿಗೆ ಹೂವ ತರುವೆ' 'ಕಾಕ್ಹಾಕಿ ದನವ ಕರೆದ್ಹಾನೋ' 'ಆ ಹೆಣ್ಣ ನಾನು ತರುತೀನಿ' 'ಜಗಳವ ನೋಡಿ ನಗುತಾನೆ' ಹೀಗೆ ಒಂದೊಂದು ಒಂದೊಂದು ಬಗೆಯವು. ಶೀರ್ಷಿಕೆಯ ಮೂಲಕವೇ ಓದುಗರನ್ನು ಆಕರ್ಷಿಸುವ ಅವರ ಮೋಡಿ ಉದ್ದಕ್ಕೂ ಅದೇ ಧಾಟಿಯಲ್ಲಿಯೇ ಮುಂದುವರಿಯುತ್ತದೆ.

'ಯೋಗಿ ಬಂದವರೆ ನೋಡಿರಿ' ಎಂಬ ಶೀರ್ಷಿಕೆಯಲ್ಲಿ ಮಂಟೇಸ್ವಾಮಿ ಸಂಪ್ರದಾಯದ ನೀಲಗಾರರನ್ನು ಅವರು ಪರಚಯಿಸಿ ಕೊಡುವ ರೀತಿ ಮೋಹಕವಾಗಿದೆ. ಇದ್ದಕ್ಕಿದ್ದಂತೆಯೇ ವಿಷಯ ಪ್ರವೇಶ ಮಾಡಿದಂತೆ ಕಂಡರೂ ಕ್ರಮೇಣ ಅದರ ಆಳ ಅಗಲಗಳನ್ನು ಪರಿಚಯಿಸಿಕೊಡುವ ಅವರ ಶೈಲಿ ವಿಶಿಷ್ಟವಾದುದು -

> "ತಲೆಯ ಮೇಲೆ ಕೆಂಪು ರುಮಾಲು, ಮೈಯಲ್ಲಿ ಕರಿಯ ನಿಲುವಂಗಿ ಮಂಡಿಯಿಂದ ತುಸು ಕೆಳಗೆ ಚಾಚಿರುವ ಕಚ್ಚೆಯ ಪಂಚೆ ಕೈಯಲ್ಲಿ ಪುರಾತನಧೇಂಬಂತಿರುವ ಅಷ್ಟೇನೂ ಉದ್ದವಲ್ಲದ ನಾಗರಹೆಡೆಯ ಅಥವಾ ಸಿಂಹದ ಮುಖದ ಕರಿಯ ತಂಬೂರಿ, ಜೊತೆಯಲ್ಲಿ ಚಿಟಗಿ ಬೇರೆ........
>
> ಮಂಟೇದವರು ಬರುತ್ತಿರುವರೇ !
>
> ಹೌದು ಮಂಟೇಸ್ವಾಮಿಯ ಸಂಪ್ರದಾಯದ ನೀಲಗಾರರು ಅವರು. ಆ ಮಹಾಮಹಿಮರ ಅವರ ಶಿಷ್ಯರಾದ ಚಿಕ್ಕಲ್ಲೂರು ಸಿದ್ದಾಪ್ಪಾಜಿಯವರ ಕಪ್ಪಡಿ ರಾಚಪ್ಪಾಜಿಯವರ, ಮಳವಳ್ಳಿ ಹಾಗೂ ಬೊಪ್ಪಗೌಡನಪುರದ ಅರಸು ಮನೆತನದ ಸ್ವಾಮಿಗಳ ಮಹಿಮೆಯ ಪ್ರಸಾರಕ್ಕೆ ಮೀಸಲಾದ ವಿಶಿಷ್ಟ ಭಕ್ತರು. ಎಂಟುನೂರು ವರ್ಷಗಳ ಹಿಂದಿನ ಧಾರ್ಮಿಕ ಹೊನಲೊಂದು ಕರ್ನಾಟಕದ ಆ ತುದಿಯ ಕಲ್ಯಾಣದಿಂದ ದಕ್ಷಿಣದ ಅಂಚಿನ ಚಿಕ್ಕಲ್ಲೂರಿನವರೆಗೆ ಹರಿದು ಹಬ್ಬಿದುದರ ಕಥೆಯನ್ನೇ ಪ್ರಧಾನವಾಗಿ ಹಾಡಿದ್ದಾರೆ. ಆ ಮಹಿಮಾಪುರುಷರ ಲೀಲೆಗಳನ್ನು ಸಾರುತ್ತಾ ಸಾಗಿದ್ದಾರೆ."[೫]

ಹೀಗೆ ಆರಂಭವಾಗಿ ಮುಂದುವರಿಯುವ ಅವರ ಗದ್ಯ ಚಿತ್ರ ಉದ್ದಕ್ಕೂ ಅದೇ ಬಗೆಯ ಆಸಕ್ತಿಯನ್ನು ಬೆಳೆಸಿಕೊಂಡು ಹೋಗುತ್ತದೆ. ನಿರಾಯಾಸವಾಗಿ ದೊಡ್ಡ ಪರಂಪರೆಯೊಂದರ ಪರಿಚಯವನ್ನು ಮಾಡಿಕೊಡುತ್ತದೆ. ೧೯೭೧ರಲ್ಲಿ ಪ್ರಕಟಗೊಂಡ ಈ ಕೃತಿಯಲ್ಲಿ ಮಾದೇಶ್ವರ ಕಾವ್ಯ ಹಾಗೂ ಮಂಟೇಸ್ವಾಮಿ ಕಾವ್ಯಗಳ ಮೊದಲ ಪರಿಚಯ ನಮಗೆ ದೊರೆಯುತ್ತದೆ.

ಅವರ ಮತ್ತೊಂದು ಮಹತ್ವದ ಕೃತಿ 'ಮಂಟೇಸ್ವಾಮಿ ಕಾವ್ಯ'. ಸವಿಸ್ತಾರವಾದ ಮುನ್ನುಡಿ ಯೊಡನೆ ನೀಲಗಾರ ಸಂಪ್ರದಾಯದ ಸಮಗ್ರ ಸಾಹಿತ್ಯವನ್ನು ಈ ಮೂಲಕ ಸಂಗ್ರಹಿಸಿಕೊಟ್ಟಿ ದ್ದಾರೆ. ಹೆಜ್ಜೆ ಹೆಜ್ಜೆಗೂ ಪವಾಡಗಳ ಮಳೆಗರೆವ ಅಂಶಗಳಿಂದೊಡಗೂಡಿದ ಈ ರಮ್ಯ ಜನಪದ ಕಾವ್ಯ ಪರಂಪರೆಯಲ್ಲಿ ವಿಶಿಷ್ಟವಾದುದು. ೧೯೭೩ರಲ್ಲಿ ಪ್ರಕಟಗೊಂಡ ಈ ಕೃತಿ ಆ ಅವಧಿಯಲ್ಲಿ ಬಂದ ಕೃತಿಗಳಲ್ಲಿ ಶ್ರೇಷ್ಠ ಮಟ್ಟದ್ದು. " 'ಮಂಟೇಸ್ವಾಮಿ ಕಾವ್ಯ'ವನ್ನು ಆದಷ್ಟು ಹಿರಿಯ ತಲೆಮಾರಿನ ಕಲಾವಿದರಿಂದ ಸಂಗ್ರಹಿಸಿ, ಮೂಲ ಸ್ವರೂಪವನ್ನು ನಿರ್ಧರಿಸಿ ಮೂರು ಕವಲು ಗಳನ್ನು ಸಮಗ್ರ ವಾಗಿ ಇಲ್ಲಿ ನೀಡಿದ್ದೇನೆ". ಎಂದು ಅವರೇ ಹೇಳುವಲ್ಲಿ ಈ ಕಾವ್ಯದ ಮಹತ್ವ ವನ್ನು ಗುರುತಿಸಬಹು ದಾಗಿದೆ. ಪ್ರಸ್ತಾವನೆಯ ಭಾಗದಲ್ಲಿ ಮಂಟೇಸ್ವಾಮಿ ಮೂಲದ ಬಗೆಗೆ ಅವರು ಎತ್ತಿರುವ ಹಲವು ಸಮಸ್ಯೆಗಳು ಕುತೂಹಲಕಾರಿಯಾಗಿವೆ. ಅದನ್ನು ಅಷ್ಟಕ್ಕೇ ಕೈ ಬಿಡದೆ ಮುಂದುವರಿದು ಹೇಳುವ ಹಲವು ವಿಚಾರಗಳು ನಮ್ಮನ್ನು ಹೆಚ್ಚು ಆಲೋಚನೆಗೆ ಒಡ್ಡುತ್ತವೆ. ಮಂಟೇಸ್ವಾಮಿಯ ಸಂಪ್ರ ದಾಯದಲ್ಲಿ ಶೈವ, ವೈಷ್ಣವಗಳ

---

೫. ಡಾ|| ಜೀ.ಶಂ. ಪರಮಶಿವಯ್ಯ : ಜನಪದ ಕಾವ್ಯ ಕಥೆಗಳು ಪು. ೧೫೭

ಸಂಗಮವಿದ್ದಂತೆ ತೋರುತ್ತದೆ. ನೀಲಗಾರನು ಹಿಡಿಯುವುದು ತಂಬೂರಿ. ಇದು ದಾಸ ಪರಂಪರೆಯ ಸಂಕೇತ. ಸಿದ್ದಪ್ಪಾಜಿಯವರಿಗೆ ಮುತ್ತತ್ತಿರಾಯನಿಂದ ಬಳು ವಳಿಯಾಗಿ ಈ ತಂಬೂರಿ ಬಂದಿತು, ಮುತ್ತತ್ತಿರಾಯ ಆಂಜನೇಯ. ಪರಮ ವೈಷ್ಣವ. ಮಂಟೇ ಸ್ವಾಮಿಗಳು ಕಲ್ಯಾಣದಿಂದ ಬಂದ ಶರಣಶ್ರೇಷ್ಠರು. ಪರಮ ಶೈವರು. ಪರಶಿವನೇ ಅವರೆಂಬ ನಂಬಿಕೆ ಭಕ್ತರಿಗೆ. ಅವರ ಲಾಂಛನ ಗುರು ನೀಡಿದ್ದು - ರುದ್ರಾಕ್ಷಿ, ವಿಭೂತಿ ಎರಡನ್ನೂ ಇವರು ಧರಿಸುತ್ತಾರೆ. ಯಾವ ಮತೀಯ ಚೌಕಟ್ಟಿಗೂ ಒಳಗಾಗದೆ ಮಂಟೇಸ್ವಾಮಿ ಸಂಪ್ರದಾಯ ಉಳಿದು ಬಂದಿದೆ. ಅನೇಕ ಜಾತಿಯವರು ನೀಲಗಾರರಾಗಿ ದೀಕ್ಷೆ ಪಡೆಯುತ್ತಾರೆ. ಕಲ್ಯಾಣದ ಕೆಲವು ಕಪಟಿಗಳಾದ ಜಂಗಮ ರನ್ನು ಮಹಮದೀಯರಾಗುವಂತೆ ಮಂಟೇಸ್ವಾಮಿಯವರು ಶಪಿಸುತ್ತಾರೆ. ಮಂಟೇಸ್ವಾಮಿ ಮಠಕ್ಕೆ ಮಹಮದೀಯರು ವಿಶಿಷ್ಟ ಸಂದರ್ಭಗಳಲ್ಲಿ ನಡೆದುಕೊಳ್ಳುತ್ತಾರೆ. ಇದನ್ನು ಗಮನಿಸಿದಾಗ ಮಂಟೇಸ್ವಾಮಿ ಸಂಪ್ರದಾಯ ಕುತೂಹಲವನ್ನು ಕೆರಳಿಸುತ್ತದೆ.[೬]

ಜನಪದ ಸಾಹಿತ್ಯ ಸಂಗ್ರಹಣೆ ಕೇವಲ ಕಂಠಸ್ಥವಾದುದನ್ನು ಗ್ರಂಥಸ್ಥವಾಗಿಸುವುದಲ್ಲ ; ಸಂಗ್ರಹಕಾರನ ಜವಾಬ್ದಾರಿ ಇನ್ನೂ ಇದೆ ಎಂಬುದನ್ನು ಇಂತಹ ವಿಚಾರಗಳ ಮೂಲಕ ಅವರು ಸಂಗ್ರಹಕಾರನನ್ನು ಎಚ್ಚರಿಸಿದ್ದಾರೆ. ಅವರ ಎಲ್ಲಾ ಸಂಪಾದಿತ ಕೃತಿಗಳಲ್ಲಿಯೂ ಈ ಅಂಶವನ್ನು ದಟ್ಟವಾಗಿ ಗುರುತಿಸಬಹುದು.

೧೯೭೭ರಲ್ಲಿ ಪ್ರಕಟಗೊಂಡ 'ದೊಂಬಿದಾಸರ ಲಾವಣಿಗಳು' ದೊಂಬಿದಾಸರು ಹಾಡುವ ಬಹು ಮುಖ್ಯ ಕತೆಗಳೆಲ್ಲವನ್ನು ಒಳಗೊಂಡ ಒಂದು ಸಂಕಲನ. ಅವರ ಒಟ್ಟು ಹದಿನಾರು ಕತೆಗಳು ಪೂರ್ಣ ರೂಪದಲ್ಲಿ ಇಲ್ಲಿ ಬೆಳಕು ಕಂಡಿವೆ. ಪ್ರಸ್ತಾವನೆಯ ಭಾಗದಲ್ಲಿ ದೊಂಬಿದಾಸರನ್ನು ಕುರಿತ ಒಂದು ಅಧ್ಯಯನವೇ ಇದೆ. ಹಾಗೆಯೇ ಇಲ್ಲಿ ಸಂಗ್ರಹಿಸಿಕೊಟ್ಟಿರುವ ಅವರ ಸಾಹಿತ್ಯ ಭಾಗದ ವಿಮರ್ಶೆಯೂ ಹೆಚ್ಚಿನ ಅಧ್ಯಯನಕ್ಕೆ ದಾರಿ ಮಾಡಿಕೊಡಲು ಪ್ರೇರಕವಾಗುವಂತೆ ಪ್ರಸ್ತಾಪಿತವಾಗಿದೆ. ದೊಂಬಿದಾಸರು ಹಾಡುವ ಲಾವಣಿಗಳಲ್ಲಿ ಪ್ರಸಿದ್ಧವಾದ 'ಮಾಗಡಿ ಕೆಂಪೇಗೌಡ'ನ ಲಾವಣಿಯ ಬಗೆಗೆ ಅವರು ಹೇಳುವ ಮಾತುಗಳು ಗಮನೀಯ. ಹೆಳವರು, ತೆಲುಗು ಜಂಗಮರು, ದೊಂಬಿದಾಸರು ಈ ಮೂರು ಸಂಪ್ರದಾಯದವರೂ ಪ್ರಕೃತ ಕತೆಯನ್ನು ಹಾಡುತ್ತಾರೆ. ಆದರೆ ದೊಂಬಿದಾಸರಲ್ಲಿ ಈ ಕತೆ ಹೆಚ್ಚಾಗಿ ನೆಲಸಿರುವಂತೆ ತೋರು ತ್ತದೆ. ಇದರ ಚಾರಿತ್ರಿಕ ಮೌಲ್ಯಕ್ಕಿಂತ ಜನಪದ ಕತೆಯ ಆವರಣ ಇಲ್ಲಿ ಮುಖ್ಯವಾದುದು. ಜನಪದ ಕತೆಗಳಲ್ಲಿ ಕಾಣಬರುವ ಆಶ್ಚರ್ಯಗಳು ಈ ಕತೆಯಲ್ಲಿ ಹೆಣೆದುಕೊಂಡು ಚಾರಿತ್ರಿಕ ಅಂಶಗಳನ್ನು ಮಸುಕುಗೊಳಿಸಿವೆ.[೭]

ಹೀಗೆ ಇವರ - ಹೆಳವರ ಕಾವ್ಯಗಳಾಗಲಿ, ಎರಡು ಜನಪದ ಕಾವ್ಯಗಳಾಗಲಿ, ಕರುಣೆ ಕಣ್ಣಾ ತೆರೆಯೆ ಅಥವಾ ಜನಪದ ವೀರ ಕಾವ್ಯಗಳಾಗಲಿ ಒಂದೊಂದೂ ಇಂತಹ ಅಪೂರ್ವ ಸಂಗತಿಯನ್ನು, ಸಂಶೋಧನಾ ದೃಷ್ಟಿಯನ್ನು ಒಳಗೊಂಡ ಸಂಕಲನಗಳಾಗಿವೆ. ಇತ್ತೀಚೆಗೆ ಪ್ರಕಟಗೊಂಡ ಅವರ 'ಕನ್ನಡ ವೃತ್ತಿಗಾಯಕ ಕಾವ್ಯಗಳು' ಗಾತ್ರ ಹಾಗೂ ಗುಣ ಎರಡು ದೃಷ್ಟಿಯಿಂದಲೂ ಮಹತ್ವದ ಕೃತಿ. ಒಂದು ಸಾವಿರದ ನೂರು ಪುಟಗಳಿಗೂ ಮಿಕ್ಕ ಈ ಕೃತಿ - ತಂಬೂರಿ ಕಾವ್ಯ, ತೆಲುಗು

---

೬. ಡಾ|| ಜೀ.ಶಂ. ಪರಮಶಿವಯ್ಯ : ಶ್ರೀ ಮಂಟೇಸ್ವಾಮಿ ಕಾವ್ಯ. ಪು. xix

೭. ಡಾ|| ಜೀ.ಶಂ. ಪರಮಶಿವಯ್ಯ : ಶ್ರೀ ಮಂಟೇಸ್ವಾಮಿ ಕಾವ್ಯ. ಪು. xix

ಜಂಗಮರ ಕಾವ್ಯ, ಕಂಸಾಳೆ ಕಾವ್ಯ, ನೀಲಗಾರರ ಕಾವ್ಯ ಹಾಗೂ ಸ್ತ್ರೀ ಸಂಪ್ರದಾಯದ ಕಾವ್ಯಗಳನ್ನೊಳಗೊಂಡಿದೆ. ಒಟ್ಟು ಇಪ್ಪತ್ತನಾಲ್ಕು ಕಾವ್ಯಗಳ ಈ ಬೃಹತ್‌ಗ್ರಂಥ ಹಲವು ಅಪೂರ್ವ ಲಾವಣಿಗಳ ಒಂದು ಸಂಚಯ. ವಿಸ್ತಾರವಾದ ಪ್ರಸ್ತಾವನೆಯಲ್ಲಿ ಪ್ರಸ್ತಾಪಿತವಾಗಿರುವ ಹಲವು ವಿಚಾರಗಳು ಕಾವ್ಯ ಭಾಗಕ್ಕೆ ಸಂಬಂಧಿಸಿದ ವಿಮರ್ಶೆ ಅತ್ಯಂತ ಮೌಲಿಕವಾಗಿದ್ದು ಒಂದು ವಿಶಿಷ್ಟ ಕೊಡುಗೆಯಾಗಿದೆ. ವೃತ್ತಿಗಾಯಕರ ಕಾವ್ಯ ಮತ್ತು ಮೇಳಗಳನ್ನು ಕುರಿತು ಅವರು ಮಂಡಿಸಿರುವ ಕೆಲವು ವಿಚಾರಗಳು, ಅದಕ್ಕೆ ಸಂಬಂಧಿಸಿದ ಒಳ್ಳೆಯ ವಿಮರ್ಶೆಯಾಗಿದೆ. ಆ ಕಾವ್ಯಗಳ ಸತ್ವ ಮತ್ತು ಸ್ವರೂಪವನ್ನು ಪರಿಚಯಿಸುವ ಉತ್ತಮ ಭಾಗವಾಗಿದೆ. ವೃತ್ತಿಗಾಯಕರ ಕಾವ್ಯಗಳನ್ನು ಕುರಿತು ಇವರು ಬರೆಯುವಾಗ ಜನಪದ ಕಾವ್ಯಗಳೆಲ್ಲ ಸರ್ವಶ್ರೇಷ್ಠವೆಂದು ಭಾವಾವೇಶದಿಂದ ಹೇಳದೆ, ವಸ್ತುನಿಷ್ಠವಾಗಿ ಅವುಗಳ ಸ್ವರೂಪವನ್ನು ಕುರಿತು ಚರ್ಚಿಸುತ್ತಾರೆ. ಅವರ ಪ್ರಾಮಾಣಿಕ ವಿಮರ್ಶಾ ಧೋರಣೆಗಳನ್ನು ಇಲ್ಲಿ ಕಾಣಬಹುದು. ಅಂತಹ ಒಂದು ಭಾಗವನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ:

"ವೃತ್ತಿ ಗಾಯಕರ ಕಾವ್ಯಗಳು ಎಲ್ಲ ಸಂದರ್ಭದಲ್ಲಿಯೂ ಕಾವ್ಯಾಂಶದಿಂದ ತುಂಬಿ ತುಡಿಯಬೇಕಾಗಿಲ್ಲ. ಅಲ್ಲಿ ಕಥೆಗೆ ಪ್ರಾಧಾನ್ಯವೇ ಹೊರತು ಕಾವ್ಯಕ್ಕಲ್ಲ. ಇವೆಲ್ಲ ಹಾಡಿನಲ್ಲಿ ಮೂಡಿರುವ ಕಥೆಗಳೇ ಹೊರತು ಕಾವ್ಯ ಸತ್ವವನ್ನು ಎಲ್ಲ ಕಡೆಯೂ ನಿರೀಕ್ಷಿಸುವುದಿಲ್ಲ. ಕಥೆಗಾಗಿ ಇಲ್ಲಿ ವೃತ್ತಿಗಾಯಕ ಇರುತ್ತಾನೆ. ಕಥೆಯನ್ನು ವೈವಿಧ್ಯಮಯಗೊಳಿಸಲು ಅದಕ್ಕೊಂದು ಹೊಸ ವಾತಾವರಣವನ್ನು ಕಲ್ಪಿಸಲು ನಿರೂಪಣೆಯನ್ನು ಹೆಚ್ಚು ಹಿತವಾಗಿಸಲು ಅವನು ಇಲ್ಲಿ ಸಂಗೀತವನ್ನು ಆಶ್ರಯಿಸುತ್ತಾನೆ. ಈ ಕಾವ್ಯಗಳ ರಚನೆ ಕೆಲವೆಡೆ ತುಂಬಾ ಸಡಿಲ, ಶಿಥಿಲ. ಹಾಡದೆಯೇ ಓದಿದಾಗ ಸಾಮಾನ್ಯ ಗದ್ಯ. ಅದು ಒರಟು ಭಾಷೆಯಲ್ಲಿ ಕೃತಕವಾದ ರೀತಿಯಲ್ಲಿ ಹೆಣೆದುಕೊಂಡಂತೆ ತೋರುತ್ತದೆ. ಆದುದರಿಂದ ಇವು ಹಾಡಿಸಿ ಕೇಳಬೇಕಾದ ಕಾವ್ಯಗಳೇ ಹೊರತು ಓದಬೇಕಾದ ಕಾವ್ಯ ಎನಿಸುವುದಿಲ್ಲ. ಆದರೆ, ಅದರ ಲಯದ ಜಾಡನ್ನು ಹಿಡಿದು, ಪಲ್ಲವಿಯನ್ನು ಅಳವಡಿಸಿಕೊಂಡು ಮಟ್ಟಿನ ಜಾಡಿನಲ್ಲಿ ಸಾಗಿದರೆ ಅವು ಹಾಡಿಸಿಕೊಳ್ಳುತ್ತವೆ. ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುತ್ತವೆ. ಸಾಧಾರಣವಾದ ಪಲ್ಲವಿಗಳು ಈ ಹಾಡಿನ ಸಂಗೀತವನ್ನು ನಿಯಂತ್ರಿಸುತ್ತವೆ. ತಂದ ನಾನು ತಂದಾನ ತಾನನ, ತಂದನ್ನ ತಾನ, ಕೋಲನ್ನ ಕೋಲೆ, ಮುಂತಾದ ಕೆಲವು ಲಯಬದ್ಧವಾದ ರಚನೆಗಳು ಇಡೀ ಕಾವ್ಯಕ್ಕೆ ಸಂಗೀತದ ಶರೀರವನ್ನು ತೊಡಿಸುತ್ತವೆ. ಹಿಮ್ಮೇಳದವರು, ವಾದ್ಯ ಸಂಗೀತ, ಇವುಗಳಿಂದಾಗಿ ಸಂಗೀತದ ಗುಂಗು ತನ್ನದೇ ಆದ ರಸಲೋಕವನ್ನು ಸೃಷ್ಟಿಸುತ್ತದೆ."[೮]

ಇಂತಹ ವಿಚಾರಗಳು ಡಾ. ಜೀಶಂಪ ಅವರ ಆಳವಾದ ಅಧ್ಯಯನದ ಫಲವಾಗಿ ಮೂಡಿ ಬಂದವುಗಳು. ಇದರಂತೆಯೇ ಅವರು ಮಾಡಿರುವ ಒಂದೊಂದು ಕಾವ್ಯದ ವಿಮರ್ಶೆಯೂ ಗಮನಾರ್ಹ.

ಕರ್ನಾಟಕ ವೃತ್ತಿಗಾಯಕ ಸಂಶೋಧನೆಯ ಪೂರ್ಣಫಲ ನಮಗೆ ಸಮಗ್ರವಾಗಿ ಒಂದೆಡೆ ದೊರೆಯುವುದು ಅವರ ಪಿಹೆಚ್.ಡಿ. ಮಹಾಪ್ರಬಂಧ - 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು' ಕೃತಿಯಲ್ಲಿ. ಅವರು ನಡೆಸಿದ ವೃತ್ತಿಗಾಯಕ ಸಂಶೋಧನೆಯ ಎಳೆ ಎಳೆಯನ್ನು ಇಲ್ಲಿ

೮. ಡಾ|| ಜೀ.ಶಂ. ಪರಮಶಿವಯ್ಯ : ಕನ್ನಡ ವೃತ್ತಿಗಾಯಕ ಕಾವ್ಯಗಳು. ಪು. xxxi

ಗುರುತಿಸಬಹುದಾಗಿದೆ. ಅವರ ಕ್ಷೇತ್ರ ಕಾರ್ಯದ ಹಾಗೂ ದೀರ್ಘಾನುಭವದ ಫಸಲು ಇಲ್ಲಿ ದಟ್ಟವಾಗಿ ಹೊರಹೊಮ್ಮಿದೆ. ಸಮಗ್ರ ವೃತ್ತಿಗಾಯಕರ ಸ್ಪಷ್ಟ ಕಲ್ಪನೆಯನ್ನು ಹಾಗೂ ಅವರ ಏನೆಲ್ಲ ಅಂಶಗಳನ್ನು ವಿಶ್ಲೇಷಿಸಿ, ವಿಮರ್ಶಿಸಿ, ವ್ಯಾಪಕವಾದ ಅಧ್ಯಯನವನ್ನು ನಡೆಸಲಾಗಿದೆ.

ಧಾರ್ಮಿಕ ವೃತ್ತಿಗಾಯಕರ ಸ್ವರೂಪ ಮತ್ತು ಲಕ್ಷಣಗಳನ್ನು ವಿವರಿಸುವಾಗ ಅವರು ಕೊಡುವ ಅಂಶಗಳು ವೃತ್ತಿಗಾಯಕರ ಬಗೆಗೆ ಅವರು ನಡೆಸಿರುವ ಆಳವಾದ ಅಧ್ಯಯನಕ್ಕೆ ಸಾಕ್ಷಿಯಾಗಿವೆ. ವೃತ್ತಿಗಾಯಕ ಸಂಪ್ರದಾಯದ ಸಮಗ್ರ ಚಿತ್ರಣವನ್ನು ಅವರು ಅಲ್ಲಿ ಕೊಡುತ್ತಾರೆ.

೧. ಅವು ನಿರ್ದಿಷ್ಟ ಪುಣ್ಯ ಕ್ಷೇತ್ರವೊಂದಕ್ಕೆ ಸಂಬಂಧಪಡುತ್ತವೆ.

೨. ಆರಾಧ್ಯ ದೈವವೊಂದರ ಧಾರ್ಮಿಕ ಗುರುವೊಬ್ಬರ ಮಹಿಮೆಗಳನ್ನು ಪ್ರಸಾರ ಮಾಡುವ ಉದ್ದೇಶದಿಂದ ಕೂಡಿರುತ್ತವೆ.

೩. ದುಷ್ಟ ಶಿಕ್ಷಣ - ಶಿಷ್ಟ ರಕ್ಷಣೆಗಳು ಆ ಕಾವ್ಯದ ಸ್ಪಷ್ಟ ಉದ್ದೇಶವಾಗಿರುತ್ತದೆ.

೪. ಅದ್ಭುತಗಳನ್ನು ಪವಾಡಗಳನ್ನು ಮೆರೆದು ಶಿಷ್ಯ ಪರಂಪರೆಯನ್ನು ಪಡೆದುಕೊಳ್ಳುವ ರೀತಿ ಕಂಡು ಬರುತ್ತದೆ.

೫. ಸಾಮಾನ್ಯವಾಗಿ ಅರ್ಧ ಐತಿಹಾಸಿಕ, ಅರ್ಧ ಕಾಲ್ಪನಿಕ ಅಂಶಗಳಿಂದ ಕೂಡಿರಬಹುದು, ಪೌರಾಣಿಕ ಅಂಶವೇ ಹೆಚ್ಚಾಗಿರಬಹುದು.

೬. ಕಾವ್ಯಗಾಯಕನ ಜೀವನ ವಿವರಗಳನ್ನು ಯಾತ್ರೆಯನ್ನು ಕೈಗೊಂಡ ನೆಲೆಗಳನ್ನು ಬಣ್ಣಿಸುತ್ತವೆ.

೭. ಪ್ರತಿ ಸಂಪ್ರದಾಯದಲ್ಲೂ ಗುರುಮಠವೊಂದರಿಂದಲೋ, ಹಿರಿಯ ಭಕ್ತರಿಂದಲೋ ದೀಕ್ಷೆಯನ್ನು ಪಡೆದ ಶಿಷ್ಯರು ಈ ಕಾವ್ಯಗಳ ಪ್ರಸಾರಕ್ಕಾಗಿಯೇ ಮೀಸಲಾಗಿರುತ್ತಾರೆ.

೮. ಕಾವ್ಯಗಳು ಸಾಕಷ್ಟು ವಿಸ್ತಾರವಾಗಿದ್ದು ಅನೇಕ ರಾತ್ರಿಗಳು ಹಾಡುವಷ್ಟು ವ್ಯಾಪಕತೆಯನ್ನು ಪಡೆದುಕೊಂಡಿರುತ್ತವೆ.

೯. ನಿರ್ದಿಷ್ಟ ಸಂದರ್ಭಗಳಲ್ಲಿ ವಿಶೇಷ ಪೂಜೆಗಳನ್ನು ನಡೆಸಿ ಹಾಡಬೇಕಾದುವುಗಳಾಗಿರುತ್ತವೆ.

೧೦. ನಿರ್ದಿಷ್ಟ ದೈವದ ಭಕ್ತರು ಮಾತ್ರ ಆಹ್ವಾನಿಸಿ, ಆ ದೈವದ ಸಂಕೇತವೊಂದನ್ನು ಪೂಜಿಸಿ, ದೇವರ ಶಿಷ್ಯನಿಂದ ಸ್ವಾಮಿಯ ಪುಣ್ಯಕಥೆಯನ್ನು ಹಾಡಿಸಿ, ಕಷ್ಟ ಪರಿಹಾರ ಮಾಡಿಕೊಳ್ಳುವ ದೃಷ್ಟಿ ಪ್ರಧಾನವಾಗಿರುತ್ತದೆ.[೯]

ಒಂದೊಂದು ವೃತ್ತಿಗಾಯಕ ಸಂಪ್ರದಾಯದವರೂ ಆಚರಿಸುವ ಒಂದೊಂದು ಬಗೆಯ ಆಚರಣೆಯ ವಿವರವನ್ನು ಅವರು ಆಮೂಲಾಗ್ರವಾಗಿ ಸಂಗ್ರಹಿಸಿ ಕೊಟ್ಟಿದ್ದಾರೆ. ಕಾವ್ಯದ ಭಾಗವನ್ನು ಹೊರಗಿಟ್ಟು ಇವರ ಈ ಸಂಶೋಧನೆಯನ್ನು ಪರಿಶೀಲಿಸಿದಾಗ ಅದೊಂದು ಸಾಂಸ್ಕೃತಿಕ ಅಧ್ಯಯನವಾಗಿ ಗೋಚರಿಸುತ್ತದೆ. ಕಾಡುಗೊಲ್ಲರ ಜುಂಜಪ್ಪನ ಸಂಪ್ರದಾಯ ದವರನ್ನು ಕುರಿತು ಪ್ರಸ್ತಾಪಿಸುವಾಗ ಒಂದೆಡೆ ಹೇಳುತ್ತಾರೆ :

೯. ಡಾ|| ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು. ಪು. ೮೧

"ಕಾಡುಗೊಲ್ಲರು ನಾಗರಿಕತಾ ದೂರವಾದ ಗ್ರಾಮಾಂತರ ಪ್ರದೇಶಗಳಲ್ಲಿ ಗುಡ್ಡಗಾಡುಗಳಲ್ಲಿ ವಾಸ ಮಾಡುವ ಜನ. ಮೂಲ ಸಂಸ್ಕೃತಿ ಇವರಲ್ಲಿ ನಿಶ್ಚಳವಾಗಿ ಉಳಿದು ಬಂದಿದೆ. ಪ್ರಮುಖ ಗ್ರಾಮವೊಂದರ ಸಮೀಪದಲ್ಲಿ ಒಂದು ಗೊಲ್ಲರ ಹಟ್ಟಿಯೂ ಇರುತ್ತದೆ. ಆ ಗ್ರಾಮದ ಹೆಸರಿನಲ್ಲಿ ಹಟ್ಟಿಯನ್ನು ಕರೆಯಲಾಗುತ್ತದೆ. ಕೆಲವೆಡೆ ಇತರ ಜನಾಂಗದವರೂ ಸೇರಿದಂತೆ ಊರುಗಳಲ್ಲಿಯೇ ಇವರು ಕಂಡು ಬರುತ್ತಾರೆ. ಆದರೆ ಪ್ರತ್ಯೇಕ ಭಾಗದಲ್ಲಿ ಗೊಲ್ಲರ ಗುಂಪು ವಾಸಿಸುತ್ತದೆ. 'ಕಳ್ಳಿ' ಅವರ ಮನೆಗಳನ್ನು ಪ್ರತ್ಯೇಕಿಸುತ್ತದೆ........ ಅತ್ಯಂತ ಕಟ್ಟುನಿಟ್ಟಾಗಿ ಮತಾಚಾರಗಳನ್ನು ನಡೆಸಿಕೊಂಡು ಬರುವ ಇವರು ಮುಟ್ಟುತಟ್ಟುಗಳಲ್ಲಿ ಅತ್ಯಂತ ಎಚ್ಚರಿಕೆಯಿಂದ ನಡೆದುಕೊಳ್ಳುತ್ತಾರೆ. ಹೆಂಗಸರು ಋತುಮತಿಯಾದಾಗ, ಮುಟ್ಟಾದಾಗ, ಬಾಣಂತಿಯಾದಾಗ, ಹಟ್ಟಿಯಿಂದ ದೂರದ ಗುಡಿಸಲೊಂದರಲ್ಲಿ ಇರಬೇಕಾಗುತ್ತದೆ. 'ಗೊಲ್ಲಗಡಗ' ಹೆಂಗಸರ ಆಭರಣಗಳಲ್ಲಿ ಮುಖ್ಯವಾದುದು"[೧೦]

ಹೀಗೆ ಆ ಒಂದು ಜನಾಂಗದ ಬದುಕಿನ ಎಳೆ ಎಳೆಯನ್ನೂ ಅವರ ಸಾಹಿತ್ಯದ ಸೊಗಸಿನೊಂದಿಗೇ ನೀಡುತ್ತಾರೆ. ಹಾಗೆಯೇ ಅವರ ಸಾಹಿತ್ಯವನ್ನೂ ಕುರಿತು ಹೇಳುತ್ತಾ: "ಜುಂಜಪ್ಪನ ಕಾವ್ಯ ಕನ್ನಡ ಜನಪದ ಕಾವ್ಯಗಳ ಸಾಲಿನಲ್ಲಿ ಒಂದು ಅಗ್ರಮಾನ್ಯ ಕೃತಿ. ಗೊಲ್ಲ ಸಂಸ್ಕೃತಿಯ ನೈಜ ಚಿತ್ರಣವನ್ನು ನೀಡುವ ಈ ಕೃತಿ ಅವರ ಪಾಲಿನ ಮತಗ್ರಂಥಗಳನ್ನು ಪ್ರತಿಪಾದಿಸುವ ಪವಿತ್ರ ಕೃತಿ. ಜೊತೆಗೆ ತನ್ನ ಕಾವ್ಯಗುಣಗಳಿಂದ ಶ್ರೇಷ್ಠತೆಯನ್ನು ಪಡೆದ ಉನ್ನತ ಜನಪದ ಕಾವ್ಯ......... ಯಾವುದೋ ನಿಬಿಡಾರಣ್ಯದ ನಡುವೆ ಗಿರಿವನಗಳ ಹಸಿರ ಕಣಿವೆಗಳಲ್ಲಿ ಅಲೆದ ಸಂತೃಪ್ತಿ ಈ ಕಾವ್ಯದಲ್ಲಿ ದೊರೆಯುತ್ತದೆ. ಗಂಭೀರವಾದ ಪ್ರಶಾಂತವಾದ ಕಾವ್ಯದ ಶರೀರದಂತೆಯೇ ಅಷ್ಟೇ ಉನ್ನತವಾದ ಜುಂಜಪ್ಪನ ಪಾತ್ರವೂ ಮನಸ್ಸಿನ ಮೇಲೆ ಚಿರ ಮುದ್ರೆಯನ್ನೊತ್ತುತ್ತದೆ."[೧೧]

ದಕ್ಷಿಣ ಕರ್ನಾಟಕದ ಧಾರ್ಮಿಕ ಜನಪದ ಕಾವ್ಯಗಳ ಪ್ರಧಾನ-ಲಕ್ಷಣಗಳನ್ನು ಅವರು ತಮ್ಮ ಆಳವಾದ ಅಧ್ಯಯನದ ಹಿನ್ನೆಲೆಯಲ್ಲಿ ನೀಡಿದ್ದಾರೆ. ಅವರು ನೀಡುವ ವಿವರಣೆ, ವಿಶ್ಲೇಷಣೆಗಳು ವೃತ್ತಿಗಾಯಕ ವರ್ಗದ ಸ್ಪಷ್ಟ ಚಿತ್ರಣವನ್ನು ನೀಡುತ್ತವೆ:

೧. ತಮ್ಮ ಅಧಿದೈವಕ್ಕೆ ಸಂಬಂಧಿಸಿದ ಜನಪದ ಕಾವ್ಯವೊಂದನ್ನು ಪರಂಪರಾನುಗತವಾಗಿ ಕಾಪಾಡಿಗೊಂಡು ಬಂದ, ಹಾಡಿಕೊಂಡು ಬಂದ ವಿಶಿಷ್ಟ ಗಾಯಕ ವರ್ಗವೊಂದಿರುತ್ತದೆ.

೨. ದೈವದ ಸಂಕೇತವಾದ ಜನಪದ ವಾದ್ಯಗಳನ್ನು ಬಳಸಿ ಮೇಳಗಳೋಪಾದಿಯಲ್ಲಿ ಆ ಕಾವ್ಯಗಳನ್ನು ಹಾಡಲಾಗುತ್ತದೆ. ಆ ವಾದ್ಯಗಳನ್ನು ಉಳಿದ ಸಂದರ್ಭಗಳಲ್ಲಿ ದೇವರ ಗದ್ದುಗೆಯ ಮೇಲೆ ಇಟ್ಟು ಪೂಜಿಸಲಾಗುತ್ತದೆ.

೩. ದೇವರ ಲಾಂಛನಗಳನ್ನು ಧರಿಸಿ ವಿಶೇಷ ಮತಾಚರಣೆಯ ಸಂದರ್ಭದಲ್ಲಿ ಅಥವಾ ಪೂಜಾ ಸಂದರ್ಭದಲ್ಲಿ ಹಬ್ಬ ಹರಿದಿನಗಳಲ್ಲಿ ಯಾತ್ರೆ ಜಾತ್ರೆಗಳಲ್ಲಿ ಮಾತ್ರ ಹಾಡಬಹುದಾದ ಕಾವ್ಯಗಳಾಗಿರುತ್ತವೆ.

೪. ಕೊನೆಯ ಪಕ್ಷ ಒಂದು ರಾತ್ರಿಯಾದರೂ ಹಾಡುವಷ್ಟು ವ್ಯಾಪಕತೆ ಈ ಕಾವ್ಯಗಳಿಗಿರುತ್ತದೆ. ಹತ್ತು ಹಲವು ರಾತ್ರಿಗಳು ಹಾಡುವಷ್ಟು ವಿಸ್ತಾರವಾಗಿಯೂ ಇರಬಹುದು.

---

೧೦. ಅದೇ - ಪು. ೨೦೧

೧೧. ಅದೇ - ಪು. ೨೪೪

೫. ಸಾಮಾನ್ಯವಾಗಿ ಅಧಿದೈವ ಕಥಾನಾಯಕನಾಗಿ ಅಥವಾ ಮುಖ್ಯಪಾತ್ರವಾಗಿ ಕಾಣಿಸಿ ಕೊಳ್ಳಬಹುದು ಇಲ್ಲವೇ ಆ ದೈವದ ದಳಪತಿ, ಶಿಷ್ಯ ಹಿಂಬಾಲಕ ಆ ಸ್ಥಾನದಲ್ಲಿ ಸ್ಥಾಪಿತವಾಗ ಬಹುದು.

೬. ಕಥೆ ಎಲ್ಲಿಂದಲೋ ಆರಂಭವಾಗಿ ಸಂಬಂಧಪಟ್ಟ ಪುಣ್ಯ ಕ್ಷೇತ್ರದಲ್ಲಿ ಐಕ್ಯಗೊಳ್ಳ ಬಹುದು. ಇಲ್ಲವೇ ಅಲ್ಲಿಂದಲೇ ಆರಂಭವಾಗಿ ಹತ್ತು ದಿಕ್ಕಿನಲ್ಲಿ ಹತ್ತು ಪ್ರದೇಶದಲ್ಲಿ ನಡೆದಾಡ ಬಹುದು.

೭. ಒಕ್ಕಲು ಮಾಡಿಕೊಳ್ಳುವ ಭಕ್ತರನ್ನು, ಶಿಷ್ಯರನ್ನು ಪಡೆಯುವ ಉದ್ದೇಶದಲ್ಲಿ ಕಥಾನಾಯಕ ತನ್ನ ಮಹಿಮೆಗಳನ್ನು ಮೆರೆಯಬಹುದು ಇಲ್ಲವೇ ದುಷ್ಟ ಶಿಕ್ಷಣ - ಶಿಷ್ಟ ರಕ್ಷಣೆಯ ಉದ್ದೇಶವನ್ನು ಹೊಂದಿರಬಹುದು.

೮. ಶುದ್ಧ ಪದ್ಯರೂಪದಲ್ಲಿ ಇಲ್ಲವೆ ಗದ್ಯ ಪದ್ಯ ಮಿಶ್ರಿತ ರೀತಿಯಲ್ಲಿ ಕಾವ್ಯ ಇರಬಹುದು. ಬರಿಯ ಗದ್ಯದಲ್ಲೇ ಇರುವ ಕಥೆ ಈ ಕಾವ್ಯದ ವ್ಯಾಪ್ತಿಗೆ ಬರಲಾರದು. ವಾದ್ಯವನ್ನು ಬಳಸಿ ಕೊಂಡು ಹಾಡಬೇಕಾದುದರಿಂದ ಅನಿವಾರ್ಯವಾಗಿ ಹಿಮ್ಮೇಳ ಮುಮ್ಮೇಳಗಳು ಇದ್ದೇ ಇರುತ್ತವೆ.

೯. ಯಾವ ದೈವದ ಕತೆಯನ್ನು ಹಾಡುತ್ತಾರೋ ಅಂತಹವರಿಗೆ ಆ ದೈವದ ಹೆಸರಿನಲ್ಲಿ ದೀಕ್ಷೆ ಆಗಿರಬೇಕು. ದೀಕ್ಷೆಯನ್ನು ನೀಡುವವನು ಹಿರಿಯ ಗುಡ್ಡನಾಗಿರಬಹುದು, ಇಲ್ಲವೇ ಕ್ಷೇತ್ರಕ್ಕೆ ಸಂಬಂಧಿಸಿದ ಶ್ರೀಮಠವೊಂದರಲ್ಲಿನ ಗುರುವೊಬ್ಬನಿಂದ ದೀಕ್ಷೆ ಪಡೆಯಬಹುದು.

೧೦. ಕಥಾನಾಯಕ ದೈವದ ವ್ಯಾಪ್ತಿಗೆ ಏರಿದ ಒಬ್ಬ ಮಹಾಪುರುಷನಾಗಿರಬಹುದು. ಅನಿರೀಕ್ಷಿತವಾಗಿ ಉದ್ಭವವಾದ ಶಕ್ತಿ ವಿಶೇಷವೂ ಆಗಿರಬಹುದು.

೧೧. ಕಥೆಗೆ ಸಂಬಂಧಿಸಿದ, ನಾಯಕನಿಗೆ ಸಂಬಂಧಿಸಿದ ಅವಶೇಷಗಳು ಅವುಗಳ ಐತಿಹ್ಯಗಳು, ನಿರ್ದಿಷ್ಟ ಸ್ಥಳಗಳಲ್ಲಿ ದೊರೆಯಬೇಕು.

೧೨. ಹಿಂದೊಮ್ಮೆ ನಿಜವಾಗಿ ನಡೆದ ಕಥೆಯೇ ಎಂಬಂತೆ ಅದು ನಿರೂಪಿತವಾಗಬೇಕು.

ಇದೊಂದು ಅಪೂರ್ವ ಕೃತಿ. ಈ ಬಗೆಯ ಕೃತಿ ಕನ್ನಡ ಜಾನಪದ ಕ್ಷೇತ್ರಕ್ಕೆ ಹೊಸದು, ಹಾಗೂ ವಿಶಿಷ್ಟ ಬಗೆಯದು. ವಿಶ್ವದ ವಿದ್ವಾಂಸರ ವಿಚಾರಗಳ ಹಿನ್ನೆಲೆಯಲ್ಲಿ ಲಾವಣಿಯ ಮೂಲ, ಅವುಗಳ ಸ್ವರೂಪ, ಲಕ್ಷಣಗಳಿಂದ ಹಿಡಿದು ಜನಪದ ಕಾವ್ಯಗಳ ಮಟ್ಟುಗಳವರೆಗೆ ಅವರು ನಡೆಸಿರುವ ಅಧ್ಯಯನ ಶ್ರೇಷ್ಠ ಮಟ್ಟದ್ದಾಗಿದೆ. ಈ ಕೃತಿಯ ಕಾರಣದಿಂದಾಗಿ ಕರ್ನಾಟಕ ಜಾನಪದ ಅಧ್ಯಯನಕ್ಕೆ ಒಂದು ಹೊಸ ತಿರುವು ದೊರೆತಂತಾಯಿತು. ಅಷ್ಟೇ ಅಲ್ಲ, ಭಾರತೀಯ ಜಾನಪದ ಅಧ್ಯಯನ ಒಂದು ಹೊಸ ಅಧ್ಯಾಯವೂ ಇಲ್ಲಿಂದ ಆರಂಭವಾಗುತ್ತದೆ ಎಂದೇ ಹೇಳಬಹುದು.

ಸಮಗ್ರ ಜಾನಪದಕ್ಕೆ ಡಾ. ಜೀಶಂಪ ಅವರ ಕೊಡುಗೆ ಅಪೂರ್ವವಾದುದು. ಕಲೆ, ಸಾಹಿತ್ಯ, ಸಂಸ್ಕೃತಿ, ವೈಜ್ಞಾನಿಕ ದೃಷ್ಟಿಯ ಬಳಕೆ ಮುಂತಾದುವುಗಳಿಗೆ ಸಂಬಂಧಿಸಿದಂತೆ ನಿರಂತರವಾಗಿ ದುಡಿಯುತ್ತ ಬಂದಿದ್ದಾರೆ - ಅಧ್ಯಯನ ನಡೆಸುತ್ತಾ ಬಂದಿದ್ದಾರೆ. ಕರ್ನಾಟಕದ ವೃತ್ತಿಗಾಯಕರ ವೈಶಿಷ್ಟ್ಯವನ್ನು ಅಮೆರಿಕಾದ ವಿಸ್ಕಾನ್‌ಸನ್ ವಿಶ್ವವಿದ್ಯಾನಿಲಯದ ವಿಚಾರ ಸಂಕೀರ್ಣದಲ್ಲಿ ಮೊತ್ತ ಮೊದಲ ಬಾರಿಗೆ ಪರಿಚಯಿಸಿ ಕೊಟ್ಟ ಕೀರ್ತಿಯೂ ಅವರದ್ದೇ. ಹಾಗೆಯೇ ಕರ್ನಾಟಕ ದಲ್ಲಿಯೇ ಹಲವರ ದೃಷ್ಟಿಯಲ್ಲಿ ಕೇವಲ ಭಿಕ್ಷುಕರಂತೆ ತೋರುತ್ತಿದ್ದ ಈ ಗಾಯಕರಿಗೆ, ಹೆಸರಿನ ಮೂಲಕವೇ

ಒಳ್ಳೆಯ ಕೀರ್ತಿ ದೊರೆಯುವಂತೆ, ಅವರ ಸ್ಥಾನವನ್ನು ಹೆಚ್ಚಿಸಲು ಕಾರಣರಾದ ವರೂ ಅವರೇ. ವೃತ್ತಿ ಗಾಯಕರು ತಮ್ಮ ಸಾಹಿತ್ಯ ಶ್ರೀಮಂತಿಕೆಯಿಂದಲೇ, ತಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾದುದು, ಆ ಸಂಬಂಧವಾದ ಅಧ್ಯಯನ ಹೊರಬಿದ್ದ ಮೇಲೆಯೇ.

ಡಾ|| ಜೀಶಂಪ ಅವರ ಈ ವೃತ್ತಿಗಾಯಕ ಅಧ್ಯಯನ ಜಾನಪದ ಕ್ಷೇತ್ರದಲ್ಲಿ ವೃತ್ತಿಗಾಯಕ ಪರಂಪರೆ ಹೇಗೆ ಒಂದು ಕಾವ್ಯ ಸಂಪತ್ತನ್ನು ಉಳಿಸಿಕೊಂಡು ಬರುವಲ್ಲಿ ಪ್ರಧಾನ ಪಾತ್ರ ವಹಿಸಿದೆ ಎಂಬುದನ್ನು ಖಚಿತಪಡಿಸುವಲ್ಲಿ ಯಶಸ್ವಿಯಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕದ ಅಧ್ಯಯನ ಭಾರತೀಯ ವೃತ್ತಿಗಾಯಕ ಅಧ್ಯಯನಕ್ಕೂ ದಿಕ್ಸೂಚಿಯಾಗಬಲ್ಲದು. ನಮ್ಮ ಕಂಸಾಳೆಯವರಂತೆ, ನೀಲಗಾರರಂತೆ, ದೊಂಬಿದಾಸರಂತೆ ಅನೇಕ ಬಗೆಯ ವೃತ್ತಿಗಾಯಕರು ಭಾರತದ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಕಂಡು ಬರುತ್ತಾರೆ. ಅಂತಹ ಕೆಲವು ಸಂಪ್ರದಾಯಗಳನ್ನು ಡಾ. ಜೀಶಂಪ ಅವರೇ ಹೆಸರಿಸಿದ್ದಾರೆ. ಕರ್ನಾಟಕದ ಈ ಅಧ್ಯಯನ ಮಾದರಿಯಲ್ಲಿ ಸಮಗ್ರ ಭಾರತದ ವೃತ್ತಿಗಾಯಕರ ಪರಿವೀಕ್ಷಣೆ ನಡೆಯಬೇಕು, ಅವರ ಸಂಪ್ರದಾಯ ಹಾಗೂ ಕಾವ್ಯಗಳ ಅಧ್ಯಯನವೂ ಆಗಬೇಕು. ರಾಜಸ್ಥಾನ, ಬಂಗಾಳಿ, ಆಂಧ್ರ ಮುಂತಾದ ಕಡೆಗಳಲ್ಲಿ ಈ ನಿಟ್ಟಿನಲ್ಲಿ ಸ್ವಲ್ಪ ಮಟ್ಟಿನ ಕೆಲಸ ನಡೆದಿದೆಯಾದರೂ, ವೃತ್ತಿಗಾಯಕ ಸಂಪ್ರದಾಯಗಳನ್ನು ಪ್ರತ್ಯೇಕ ಹಿನ್ನೆಲೆಯಲ್ಲಿ ನೋಡುವ ಕಾರ್ಯ ಆಗಬೇಕಾಗಿದೆ. ಭಾರತೀಯ ಸಂಸ್ಕೃತಿಯ ಮೂಲ ಸೆಲೆಗಳನ್ನು ಭೇದಿಸಲು ರಾಮಾಯಣ, ಮಹಾಭಾರತಗಳಂತೆಯೇ ನಮ್ಮ ಜನಪದ ಕಾವ್ಯಗಳೂ ಸಹಾಯಕವಾಗುತ್ತವೆ. ಒಂದು ದೃಷ್ಟಿಯಿಂದ ರಾಮಾಯಣ, ಮಹಾಭಾರತಗಳಿಗಿಂತ ಹಿಂದಿನ ಮೂಲ ಸಂಸ್ಕೃತಿಯ ತೋರ್‌ಬೆರಳುಗಳಾದ ಈ ಕಾವ್ಯಗಳ ಸಂಗ್ರಹ ಹಾಗೂ ವಿಶ್ಲೇಷಣೆ ವಿಶಿಷ್ಟ ಸಾಂಸ್ಕೃತಿಕ ಮಹತ್ವದ ಅಂಶವಾಗಿರುತ್ತದೆ. ಭಾರತದಾದ್ಯಂತ ಇರಬಹುದಾದ ಸಾವಿರಾರು ಜನಪದ ಕಾವ್ಯಗಳ ಸಂಗ್ರಹ, ಅಧ್ಯಯನ ಮುಂತಾದುವಕ್ಕೆ ಪ್ರೇರಕವಾಗಿರಲು ಡಾ. ಜೀಶಂಪ ಅವರ ವೃತ್ತಿಗಾಯಕ ಅಧ್ಯಯನಗಳು ಆದಷ್ಟು ಬೇಗ ಇಂಗ್ಲೀಷಿನಲ್ಲಿ ಲಭ್ಯವಾಗುವಂತೆ ಮಾಡಬೇಕಾಗಿದೆ. ಆಗ ಮಾತ್ರ ಇಂತಹ ಅಧ್ಯಯನಗಳ ಸಾರ್ಥಕತೆಯನ್ನು ಕಾಣಬಹುದು. ಕೊನೆಯ ಪಕ್ಷ ಅವರ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಗ್ರಂಥದ ಸಂಗ್ರಹಿತ ಭಾಗವಾದರೂ ಇಂಗ್ಲೀಷಿನಲ್ಲಿ ದೊರೆಯುವಂತಾದರೆ ಒಳ್ಳೆಯದು. ಈ ಕಾರ್ಯವನ್ನು ಯಾರಾದರೂ ಮಾಡಬೇಕು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯೇ ಈ ಕಾರ್ಯವನ್ನು ಕೈಗೊಂಡರೆ ಸಂತೋಷ.

* * * * *

ಕರ್ನಾಟಕದಲ್ಲಿ ಜಾನಪದ ಪತ್ರಿಕೆಗಳು

ಜಾನಪದ ಸಂಬಂಧವಾದ ಚಟುವಟಿಕೆಗಳು ಹೆಚ್ಚಾದಂತೆ ಅದು ತನ್ನ ಬೃಹತ್ ರೂಪವನ್ನು ತೋರುತ್ತ ಹೊರಟಂತೆ, ಅದನ್ನು ಪ್ರಕಾಶಗೊಳಿಸುವ ಮಾಧ್ಯಮಗಳೂ ಕಾಣಿಸಿಕೊಳ್ಳತೊಡಗಿ ದವು. ಮೊದ ಮೊದಲಿಗೆ ಕೇವಲ ಜನಪದ ಗೀತಕ್ಕೆ ಸೀಮಿತವಾಗಿದ್ದ ಜಾನಪದ ಜಗತ್ತು ಬಹುತೇಕವಾಗಿ ಸಣ್ಣಪುಟ್ಟ ಸಂಕಲನ ರೂಪದ ಗ್ರಂಥಗಳಿಗೆ ಮಿತಿಗೊಂಡಿತ್ತು. ಅನಂತರ ಅದರ ಬಾಹುಳ್ಯ ಹೆಚ್ಚಿದಂತೆಲ್ಲ ವಿವಿಧ ಪ್ರಕಟಣ ಮಾಧ್ಯಮಗಳೂ ಬೆಳಕಿಗೆ ಬರಲಾರಂಭಿಸಿದುವು. ಪ್ರಾರಂಭದಲ್ಲಿ ಜಾನಪದದ ವರ್ಣಮಯ ಲೋಕವನ್ನು ಬಣ್ಣಿಸಲು ಪ್ರತ್ಯೇಕವಾದ ಪತ್ರಿಕೆಗಳು ಇರಲಿಲ್ಲ. ಎಲ್ಲೋ ಕೆಲವೊಂದು ಪತ್ರಿಕೆಗಳಲ್ಲಿ ಅಲ್ಲೊಂದು ಇಲ್ಲೊಂದು ಲೇಖನವೋ ಅಥವಾ ಸಂಗ್ರಹವೋ ಪ್ರಕಟಗೊಳ್ಳುತ್ತಿದ್ದುವು. ಅವುಗಳಲ್ಲಿ ಬಹು ಮುಖ್ಯವಾಗಿ ಹೆಸರಿಸುವಂತಹುದು 'ಇಂಡಿಯನ್ ಆಂಟಿಕ್ವಯರಿ'.

'ಇಂಡಿಯನ್ ಆಂಟಿಕ್ವಯರಿ' ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಅತ್ಯಂತ ಮಹತ್ವದ, ವಿವಿಧ ಬಗೆಯ ಲೇಖನಗಳನ್ನು ಸಂಗ್ರಹಗಳನ್ನು ಒಳಗೊಂಡು ಪ್ರಕಟಗೊಳ್ಳುತ್ತಿದ್ದ ಪತ್ರಿಕೆ. ಅದರಲ್ಲಿ ವಿವಿಧ ವಿಷಯಗಳ ಜೊತೆಗೆ ಕನ್ನಡ ಜಾನಪದ ಸಂಬಂಧವಾದ ಸಂಗ್ರಹಗಳೂ - ಲೇಖನಗಳೂ ಪ್ರಕಟಗೊಳ್ಳುತ್ತಿದ್ದುವು. ಇಂಗ್ಲೀಷ್ ಭಾಷಾಮಾಧ್ಯಮದಲ್ಲಿ ಪ್ರಕಟಗೊಳ್ಳುತ್ತಿದ್ದ ಈ ಪತ್ರಿಕೆಯಲ್ಲಿ ಜಾನಪದದ ಹಲವು ವಿಷಯಗಳು ಪ್ರಥಮ ಬಾರಿಗೆ ಬೆಳಕು ಕಂಡು ಜಗತ್ತಿನ ವಿದ್ವಾಂಸರ ಗಮನ ಸೆಳೆಯಲು ಕಾರಣವಾಯಿತು. ಈ ಸಮಯದಲ್ಲಿ ಬಹುಮುಖ್ಯವಾಗಿ ಹೆಸರಿಸಬೇಕಾದ ಹೆಸರೆಂದರೆ ಜೆ. ಎಫ್. ಫ್ಲೀಟ್ ಅವರದ್ದು. ಜನಪದ ಸಂಬಂಧವಾದ ಸಂಗ್ರಹಣೆ ಹಾಗೂ ಪ್ರಕಟಣೆಯಲ್ಲಿ ಇವರ ಮೂಲೋದ್ದೇಶ ಏನೇ ಇದ್ದರೂ, ಅವರ ಕಾರ್ಯ ಅತ್ಯಂತ ಶ್ಲಾಘನೀಯ. ಸಮಕಾಲೀನವಾದ ಲಾವಣಿಗಳನ್ನೇ ಸಂಗ್ರಹಿಸಿ ಕೊಟ್ಟಿದ್ದರೂ, ಅದು ಐತಿಹಾಸಿಕ ಮಹತ್ವದಿಂದ ಕೂಡಿದ ಒಂದು ಸಾಧನೆ.

ಹಲವು ದೃಷ್ಟಿಯಿಂದ 'Indian Antiquary' ಅತ್ಯಂತ ಮಹತ್ವದ ಒಂದು ಪತ್ರಿಕೆ. ಜನಪದ ಸಂಬಂಧವಾದ ವಿಷಯದಲ್ಲಿಯಂತೂ ಅದು ಪ್ರಾತಃಸ್ಮರಣೀಯವಾದ ಪತ್ರಿಕೆ. ಫ್ಲೀಟ್ ಸಂಗ್ರಹಿಸಿ ಪ್ರಕಟಿಸಿದ ಸ್ವಾತಂತ್ರ್ಯಪೂರ್ವದ ಎಂಟು ಲಾವಣಿಗಳು ಇದರಲ್ಲಿ ಪ್ರಕಟಗೊಂಡವು. ಬ್ರಿಟೀಷರು ರಾಜಕೀಯವಾಗಿ ನಡೆಸಿದ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದ ಜನರ ಪ್ರತಿಭಟನೆಯ ಧ್ವನಿ ಈ ಎಂಟು ಲಾವಣಿಗಳು. ಐತಿಹಾಸಿಕ ದಾಖಲೆಯಿಂದ ಕೂಡಿದ ಈ ಲಾವಣಿಗಳನ್ನು ಅತ್ಯಂತ ಶಾಸ್ತ್ರೀಯವಾಗಿ ಸಂಗ್ರಹಿಸಿ ಸಂಪಾದಿಸಿ ಇದರಲ್ಲಿ ಸಂಕಲಿಸಿದ್ದಾರೆ.

ಅನಂತರ ಹೀಗೆ ಪಾರ್ಶ್ವಿಕವಾಗಿ ಜಾನಪದದ ವಿಷಯವನ್ನು ಒಳಗೊಂಡು ಹೊರ ಬರುತ್ತಿರುವ ಪತ್ರಿಕೆಗಳಲ್ಲಿ ಪ್ರಮುಖವಾಗಿ ಹೆಸರಿಸಬಹುದಾದವುಗಳೆಂದರೆ - ಮಾನವಿಕ ಕರ್ನಾಟಕ, ಸುಧಾ,

ತರಂಗ, ಮಯೂರ, ಜನಪದ ಇವು ಮುಖ್ಯವಾದುವೆನ್ನಬಹುದು. ಈ ಬಗೆಯ ವಾರ ಹಾಗೂ ಮಾಸಿಕಗಳಲ್ಲಿ ಗಂಭೀರವಾದ ಸಂಶೋಧನ ಲೇಖನಗಳಾಗಲಿ, ವಿಷಯವಾಗಲಿ ಪ್ರಕಟವಾಗದಿದ್ದರೂ ಕಥೆ, ಗೀತೆ, ಗಾದೆ, ಒಗಟು ಹಾಗೂ ಮನರಂಜನೆಯನ್ನು ನೀಡಬಹುದಾದ ಇತರ ಲಘು ಬರಹಗಳನ್ನೊಳಗೊಂಡ ಲೇಖನಗಳು ಪ್ರಕಟಗೊಳ್ಳುತ್ತಿವೆ. ಕೆಲವೊಂದು ಪತ್ರಿಕೆಗಳಲ್ಲಿ ಬೇರೆ ಬೇರೆ ಭಾಷೆಯ ಜನಪದ ಕಥೆಗಳ ಕನ್ನಡ ಅನುವಾದಗಳು ಪ್ರಕಟಗೊಳ್ಳುತ್ತಿರುವುದನ್ನು ಕಾಣಬಹುದು. ಆದರೂ ಹೆಚ್ಚಿನ ರೀತಿಯಲ್ಲಿ ಜಾನಪದ ಸಂಬಂಧವಾದ, ಇಂತಹ ಪತ್ರಿಕೆಗಳಲ್ಲಿಯೇ ಪ್ರಕಟಗೊಳ್ಳಲು ಯೋಗ್ಯವಾದ ಲೇಖನಗಳ ಸಂಖ್ಯೆ ಅಷ್ಟಾಗಿ ಕಂಡು ಬರುತ್ತಿಲ್ಲ. ಸುಧಾ, ತರಂಗ, ಮಯೂರದಂತಹ ಪತ್ರಿಕೆಗಳ ಓದುಗರಿಗೆ ಜಾನಪದ ಸಂಬಂಧವಾದ ವಿಷಯವನ್ನು ಬೇರೊಂದು ರೀತಿಯಲ್ಲಿಯೇ ತಿಳಿಸುವುದರ ಮೂಲಕ ನಮ್ಮ ಮೂಲ ಸಂಸ್ಕೃತಿಯ ಅರಿವನ್ನು ಆ ಸಾಹಿತ್ಯದ ಸೊಬಗನ್ನು ಅವರಿಗೆ ಪರಿಚಯಿಸಿಕೊಡಲು ಸಾಧ್ಯವಾಗುತ್ತದೆ. ಏಕೆಂದರೆ ನಮ್ಮ ಸಮಾಜದಲ್ಲಿ ಈ ತರಹದ ಪತ್ರಿಕೆಗಳನ್ನು ಓದುವವರ ಸಂಖ್ಯೆ ಹೆಚ್ಚಾಗಿರುವುದು ಇದಕ್ಕೆ ಕಾರಣ. ಈ ಸಾಲಿನಲ್ಲಿ ಸ್ವಲ್ಪ ಭಿನ್ನವಾಗಿ ನಿಲ್ಲುವ ಪತ್ರಿಕೆಯೆಂದರೆ 'ಮಾನವಿಕ ಕರ್ನಾಟಕ'.

ಮೈಸೂರು ವಿ.ವಿ. ನಿಲಯದಿಂದ ತ್ರೈಮಾಸಿಕಗಳಾಗಿ ಹೊರಬರುತ್ತಿರುವ 'ಪ್ರಬುದ್ಧ ಕರ್ನಾಟಕ' 'ವಿಜ್ಞಾನ ಕರ್ನಾಟಕಗಳಂತೆ' 'ಮಾನವಿಕ ಕರ್ನಾಟಕ'ವೂ ಒಂದು. ಇದರಲ್ಲಿ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಬಗೆಬಗೆಯ ಲೇಖನಗಳೂ ಪ್ರಕಟಗೊಳ್ಳುತ್ತಿವೆ ಜನಪದಕ್ಕೆ ಸಂಬಂಧಿಸಿದಂತೆ, ಹೆಚ್ಚು ಪ್ರೌಢವಾದ ಹಾಗೂ ಸಂಶೋಧನಾತ್ಮಕವಾದ ಲೇಖನಗಳೂ ಪ್ರಕಟಗೊಳ್ಳುತ್ತಿರುವುದು ಗಮನಾರ್ಹ. ಈ ಮೇಲಿನ ಪತ್ರಿಕೆಗಳ ಉದ್ದೇಶವೇ ಬೇರೆಯಾದುದರಿಂದ ಅವುಗಳಿಂದ ಇದಕ್ಕಿಂತ ಹೆಚ್ಚಾಗಿ ನಿರೀಕ್ಷಿಸುವುದು ಸರಿಯಲ್ಲ.

ಕರ್ನಾಟಕದಲ್ಲಿ 'ಜಾನಪದ' ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಸ್ಥಾನ ಪಡೆದ ಮೇಲೆ ಜಾನಪದ ಪತ್ರಿಕೆಗಳೂ ಪೂರ್ಣ ಪ್ರಮಾಣದಲ್ಲಿ ಒಂದೊಂದಾಗಿ ತಲೆಯೆತ್ತ ತೊಡಗಿದುವು. ಸಂಶೋಧನೆ, ಸಂಗ್ರಹ ಕಾರ್ಯ, ಸಂಪಾದನೆ ಹೆಚ್ಚಿದಂತೆಲ್ಲ ಅವುಗಳನ್ನು ಕುರಿತ ವಿಮರ್ಶೆ ಅಧ್ಯಯನಗಳೂ ಹೆಚ್ಚಿನ ರೀತಿಯಲ್ಲಿ ಹೊರಬರತೊಡಗಿದುವು. ಹಾಗಾಗಿ ಅದಕ್ಕಾಗಿಯೇ ಮೀಸಲಾದ ಪತ್ರಿಕೆ ಯೊಂದರ ಅಗತ್ಯ ಹಿಂದಿಗಿಂತಲೂ ಹೆಚ್ಚಾಗಿ ಕಾಣಿಸಿಕೊಳ್ಳತೊಡಗಿತು. ಸಂದರ್ಭದ ಅನಿವಾರ್ಯತೆ ಯನ್ನು ಅರಿತು ಹೀಗೆ ಹುಟ್ಟಿಕೊಂಡ ಕನ್ನಡ ಜಾನಪದ ಪತ್ರಿಕೆಗಳಲ್ಲಿ ಪ್ರಮುಖವಾದುವುಗಳೆಂದರೆ:

೧. ಜಾನಪದ

೨. ಜಾನಪದ ಜಗತ್ತು

೩. ಮೂಡಲವಾಯು

೪. ಜಾನಪದ ಗಂಗೋತ್ರಿ

ಇವಲ್ಲದೆ ಇಂಗ್ಲೀಷಿನಲ್ಲಿ ಕನ್ನಡ ಜಾನಪದ ವಿಷಯವನ್ನು ಹೆಚ್ಚಾಗಿ ಹಾಗೂ ಉಳಿದ ಭಾಷಾ ಜಾನಪದ ವಿಚಾರಗಳನ್ನು ಒಳಗೊಂಡಂತೆ ಪ್ರಕಟವಾಗುತ್ತಿರುವ ಪತ್ರಿಕೆಗಳಲ್ಲಿ ಹೆಸರಿಸಬಹುದಾದುವೆಂದರೆ :

1. Karnataka Folklore news Letter

2. Journal of Indian Folkoloreistis

3. Prasaranga

4. F F I News Bullitan

ಕರ್ನಾಟಕದಲ್ಲಿ ಜಾನಪದ ಸಂಬಂಧವಾಗಿ ಪ್ರಪ್ರಥಮವಾಗಿ ಅದಕ್ಕೆಂದೇ ಮೀಸಲಾಗಿ ಹೊರಟ ಪತ್ರಿಕೆಯೆಂದರೆ 'ಜಾನಪದ'. ಎಲ್ಲಾ ದೃಷ್ಟಿಯಿಂದಲೂ ಇದಕ್ಕೊಂದು ಐತಿಹಾಸಿಕ ಮಹತ್ವವಿದೆ. ಕೇವಲ ಕಾಲದ ದೃಷ್ಟಿಯಿಂದಷ್ಟೇ ಅಲ್ಲದೆ ; ಅದರ ಗಾತ್ರ, ಆಕಾರ, ರೂಪ ಹಾಗೂ ಅದು ವಿವಿಧ ವಿಷಯಗಳನ್ನು ಸತ್ವಯುತವಾಗಿ ಒಳಗೊಂಡು ಹೊರಬಂದ ರೀತಿ ಇತ್ಯಾದಿ ಇತ್ಯಾದಿ ಕಾರಣಗಳಿಂದಾಗಿಯೂ 'ಜಾನಪದ' ಪತ್ರಿಕೆ ಕನ್ನಡ ಜಾನಪದದ ಒಂದು ಶ್ರೇಷ್ಠ ಹಾಗೂ ಮಹತ್ವದ ಪತ್ರಿಕೆಯಾಗಿ ದಾಖಲೆಯನ್ನು ಸ್ಥಾಪಿಸಿತೆನ್ನಬಹುದು.

ಕರ್ನಾಟಕದಲ್ಲಿನ ಜಾನಪದ ಚಟುವಟಿಕೆಯನ್ನು ಗಮನಿಸಿ, ಅದಕ್ಕೊಂದು ಸರಿಯಾದ ರೂಪವನ್ನು ಕೊಡುವ ದೃಷ್ಟಿಯಿಂದ 1968ರಲ್ಲಿ ತರೀಕೆರೆಯಲ್ಲಿ ನಡೆದ ಪ್ರಥಮ ಜಾನಪದ ಸಮ್ಮೇಳನದ ಸಂದರ್ಭದಲ್ಲಿ 'ಕರ್ನಾಟಕ ಜಾನಪದ ಪರಿಷತ್ತು' ಸ್ಥಾಪನೆಗೊಂಡಿತು. ಅದರ ಕಾರ್ಯಕಾರಿ ಸಮಿತಿಯ ಪ್ರಥಮಾಧ್ಯಕ್ಷರಾಗಿ ಪ್ರೊ. ದೇ. ಜವರೇಗೌಡರು, ಉಪಾಧ್ಯಕ್ಷರಾಗಿ ಶ್ರೀ ಕೆ.ಆರ್. ಲಿಂಗಪ್ಪ, ಕೋಶಾಧ್ಯಕ್ಷರಾಗಿ ಡಾ. ಹಾ. ಮಾ. ನಾಯಕರು, ಕಾರ್ಯದರ್ಶಿಗಳಾಗಿ ಡಾ. ಜೀ. ಶಂ. ಪರಮಶಿವಯ್ಯ ಮತ್ತು ಗೋ. ರು. ಚನ್ನಬಸಪ್ಪ ಹಾಗೂ ಕರ್ನಾಟಕದ ವಿವಿಧ ಭಾಗದಿಂದ ಆ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಹದಿನೇಳು ಸದಸ್ಯರನ್ನೊಳಗೊಂಡ ಜಾನಪದ ಪರಿಷತ್ತೊಂದು ಸ್ಥಾಪನೆಯಾಯಿತು. ಈ ಪರಿಷತ್ತು ಕನ್ನಡ ಜಾನಪದ ಚಟುವಟಿಕೆಗಳನ್ನು ಹೆಚ್ಚಿಸುವಲ್ಲಿ ಹಾಗೂ ಸಂಗ್ರಹಕಾರ್ಯ ಮತ್ತು ಸಂಶೋಧನ ದೃಷ್ಟಿಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಅಂತಹ ಒಂದು ಧ್ಯೇಯೋದ್ದೇಶವನ್ನೇ ಇಟ್ಟುಕೊಂಡು 'ಜಾನಪದ' ಎಂಬ ಹೆಸರಿನ ಪತ್ರಿಕೆಯೊಂದನ್ನು ಪ್ರಾರಂಭಿಸಿತು. ಅರ್ಧವಾರ್ಷಿಕೆಯಾಗಿ ಹೊರಬಂದ ಈ ಪತ್ರಿಕೆ ನಿಜಕ್ಕೂ ಒಳ್ಳೆಯ ಆಸೆ ಭರವಸೆಗಳನ್ನೇ ಮೂಡಿಸಿ ಹೊರಬಂತು.

ಈ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ, ಕರ್ನಾಟಕದಲ್ಲಿ ಜಾನಪದ ಜಾಗೃತಿಗೆ ಕಾರಣರಾದ ವಿದ್ವಾಂಸರ ತಂಡವೇ ಇತ್ತು. 'ಜಾನಪದ' ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಪ್ರೊ. ದೇ. ಜವರೇಗೌಡರು, ಸಂಪಾದಕರುಗಳಾಗಿ ಡಾ. ಹಾ. ಮಾ. ನಾಯಕ ಹಾಗೂ ಡಾ. ಜೀ. ಶಂ. ಪರಮಶಿವಯ್ಯ ಅವರುಗಳು ಹಾಗೂ ಸದಸ್ಯರುಗಳಾಗಿ, ಶ್ರೀಗಳಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಿಂಪಿ ಲಿಂಗಣ್ಣ ಮತ್ತು ಪಿ. ಆರ್. ತಿಪ್ಪೇಸ್ವಾಮಿ ಹಾಗೂ ವ್ಯವಸ್ಥಾಪಕ ಸಂಪಾದಕರಾಗಿ ಗೋ. ರು. ಚನ್ನಬಸಪ್ಪ, ಇಂತಹ ಸಂಪಾದಕ ಮಂಡಲಿಯಿಂದ ಕೂಡಿದ 'ಜಾನಪದ' ಪತ್ರಿಕೆ ಬಿರುಸಿನಿಂದಲೇ ಅಚ್ಚುಕಟ್ಟುತನದ ಎಲ್ಲಾ ಲಕ್ಷಣಗಳನ್ನು ಒಳಗೊಂಡು ಹೊರಬರಲಾರಂಭಿಸಿತು.

ಅರ್ಧವಾರ್ಷಿಕೆಯಾಗಿ ಹೊರಬರಲು ಆರಂಭವಾದ 'ಜಾನಪದ' ಪತ್ರಿಕೆಯ ಪ್ರಥಮ ಸಂಚಿಕೆಗೆ ಸಂಪಾದಕೀಯ ಬರೆಯುತ್ತಾ ಅದರ ಸಂಪಾದಕರು ಹೀಗೆ ಬರೆದರು. "ಕರ್ನಾಟಕ ಜಾನಪದ ಪರಿಷತ್ತು ತನ್ನ ಧ್ಯೇಯ - ಧೋರಣೆಗಳಲ್ಲಿ ವಿಸ್ತಾರವಾದ, ವ್ಯಾಪಕವಾದ ಕಾರ್ಯಕ್ರಮಗಳನ್ನು

ಅಳವಡಿಸಿಕೊಂಡಿದೆ. ನಾಡಿನ ಸಮಗ್ರ ಜಾನಪದ ವಿದ್ವಾಂಸರ, ಸಾಹಿತ್ಯಾಭಿಮಾನಿಗಳ ಸಹಕಾರದ ಜೊತೆಗೆ ಆರ್ಥಿಕ ಮುಗ್ಗಟ್ಟನ್ನೂ, ನಿವಾರಿಸಿಕೊಂಡು ಕಾರ್ಯಮಗ್ನವಾಗಲು ಈಗ ಪ್ರಕಟವಾಗುತ್ತಿರುವ 'ಜಾನಪದ' ಪತ್ರಿಕೆ ನಾಂದಿಯಾಗುತ್ತದೆ. ಭಾರತೀಯ ಭಾಷೆಗಳಲ್ಲಿ ಜಾನಪದ ಅಧ್ಯಯನಕ್ಕೆ ಮೀಸಲಾದ ಪತ್ರಿಕೆ ಬಹುಶಃ ಇದೊಂದೆ ಎಂದು ತೋರುತ್ತದೆ. ಉತ್ತಮ ವಿದ್ವಾಂಸರಿಂದ ಜಾನಪದ ವಿಷಯಗಳ ಮೇಲೆ ಸಂಶೋಧನಾತ್ಮಕ, ವಿಮರ್ಶಾತ್ಮಕ ಪರಿಚಯಾತ್ಮಕ ಲೇಖನಗಳನ್ನೂ, ಇತರ ಸಂಗ್ರಹಗಳನ್ನೂ ಜಾನಪದ ಕೃತಿ ಪರಿಚಯವನ್ನೂ ಮಾಡುವುದರ ಜೊತೆಗೆ, ಜಾನಪದ ಸಂಗ್ರಾಹಕರಿಗೆ, ವಿದ್ಯಾರ್ಥಿಗಳಿಗೆ, ಜಾನಪದ ಅಭಿಮಾನಿಗಳಿಗೆ ಆ ನಿಟ್ಟಿನಲ್ಲಿ ಉತ್ತಮ ಸ್ಫೂರ್ತಿಯನ್ನು ಮಾರ್ಗದರ್ಶನವನ್ನು ನೀಡಲು ನೆರವಾಗುವುದೆಂದು ಆಶಿಸಲಾಗಿದೆ" ಇಂತಹ ಒಂದು ಬೃಹತ್ ಯೋಜನೆಯನ್ನು ಹಾಕಿಕೊಂಡು ಈ ಪತ್ರಿಕೆಯನ್ನು ಆರಂಭಿಸಲಾಯಿತು. ಅದರಂತೆಯೇ 'ಜಾನಪದ'ದ ಮೊದಲ ಆರು ಸಂಚಿಕೆಗಳು ಸರ್ವಾಂಗ ಸುಂದರವಾಗಿ ಮಹತ್ವದ ಲೇಖನಗಳನ್ನೂ ಸಂಗ್ರಹಗಳನ್ನೂ ಒಳಗೊಂಡು ಹೊರಬಂದವು. ಜಾನಪದ ಕ್ಷೇತ್ರದ ಒಂದು ಪ್ರತಿಷ್ಠಿತ ಪತ್ರಿಕೆಯಾಗಿ ಅದು ಜಾನಪದಾಸಕ್ತರ ಗಮನವನ್ನು ಬಹುಬೇಗ ಸೆಳೆಯಿತು. ಅದರ ಸಂಪಾದಕರುಗಳಾದ ಡಾ. ಹಾ. ಮಾ. ನಾಯಕ ಹಾಗೂ ಡಾ. ಜೀ. ಶಂ. ಪ. ಅವರುಗಳು ಹೆಚ್ಚು ಉತ್ಸಾಹದಿಂದ ಕೆಲಸ ಮಾಡಿ ಅದರ ಕೀರ್ತಿಯನ್ನು ಬೆಳಗಿಸಲು ಶ್ರಮಿಸಿದರು. ತರುಣ ಜಾನಪದ ವಿದ್ವಾಂಸರಿಗಂತೂ ಅದೊಂದು ವರದಾನವಾಗಿ ಸ್ಫೂರ್ತಿಯ ಚಿಲುಮೆಯಾಗಿ ಹೊಸ ಉತ್ಸಾಹವನ್ನು ತುಂಬಲು ಕಾರಣವಾಯಿತು.

ಆದರೆ ಈ ಉತ್ಸಾಹ ಬಹಳ ಕಾಲ ಉಳಿಯಲಿಲ್ಲ. ಕನ್ನಡದ ಇತರ ಹಲವು ಪತ್ರಿಕೆಗಳಂತೆ ಇದೂ ನೆಲ ಕಚ್ಚಿತು. ಇತರ ಪತ್ರಿಕೆಗಳಿಗೆ ಅಡ್ಡಿಯಾದಂತೆಯೇ ಆರ್ಥಿಕ ಮುಗ್ಗಟ್ಟು ಅದರ ಮುನ್ನಡೆಗೆ ತಡೆಗೋಲಾಯಿತು. 1978ರಲ್ಲಿ ಹೊರಬಂದ ಎಂಟನೆಯ ಸಂಚಿಕೆಯಲ್ಲಿ ಅದರ ಸಂಪಾದಕರು ಅರಿಕೆಯ ಭಾಗದಲ್ಲಿ ಹೀಗೆ ಬರೆದರು. "ಕಾರಣಾಂತರಗಳಿಂದ 'ಜಾನಪದ ಪತ್ರಿಕೆ'ಯ ಪ್ರಕಟನೆ ಕಳೆದ ಮೂರು - ನಾಲ್ಕು ವರ್ಷಗಳಿಂದ ಸ್ಥಗಿತಗೊಂಡಿತು. ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಒಳ್ಳೆಯ ಸ್ಫೂರ್ತಿಯನ್ನು ನೀಡಿದ್ದ ಇಂತಹ ಉನ್ನತ ಮಟ್ಟದ ಸಂಶೋಧನ ಪತ್ರಿಕೆ ಪ್ರಕಟವಾಗದಿದ್ದುದಕ್ಕೆ ನಾವು ವಿಷಾದಿಸುತ್ತೇವೆ. ಇನ್ನು ಮುಂದೆ ಈ ಪತ್ರಿಕೆಯನ್ನು ಒಂದು ವ್ಯವಸ್ಥಿತ ರೂಪದಲ್ಲಿ ತರಲು ಪ್ರಯತ್ನಿಸಲಾಗುತ್ತದೆ". ಆದರೆ ಆ ಪ್ರಯತ್ನ ಫಲಿಸಲಿಲ್ಲ ಎಂಬುದಕ್ಕೆ ಆದಾದ ನಂತರ ಒಂದೇ ಒಂದು ಸಂಚಿಕೆ ಬಂದು ನಿಂತು ಹೋಗಿರುವುದೇ ಸಾಕ್ಷಿ. ಅದೇನೇ ಇರಲಿ ಇಂತಹ ಒಂದು ಪ್ರತಿಷ್ಠಿತ ಪತ್ರಿಕೆ ಅಳಿದು ಹೋಗದಂತೆ ಉಳಿಸಿಕೊಳ್ಳಬೇಕಾದ್ದು ಜನಪದಾಸಕ್ತರೆಲ್ಲರ ಕರ್ತವ್ಯವಾಗಿತ್ತು. ಡಾ|| ಜೀಶಂಪ ಅವರು ಇದಕ್ಕಾಗಿ ಜಾಹಿರಾತುಗಳ ಮೂಲಕವಾದರೂ ಹಣ ಸಂಗ್ರಹಿಸಿ ಪ್ರಕಟಣೆಯನ್ನು ಮುಂದುವರಿಸಲು ಪ್ರಯತ್ನಿಸಿದ್ದುದನ್ನು ನಾನು ಬಲ್ಲೆ. ಮಿತ್ರರಾದ ಹ.ಕ. ರಾಜೇಗೌಡರು ಹಾಗೂ ನಾನೂ ಕೂಡ ಜೊತೆಗೂಡಿದ್ದು ಅದರ ಶ್ರಮವನ್ನು ಅನುಭವಿಸಿದ್ದೇವೆ. ಏನೇ ಆದರೂ ಜಾಹಿರಾತಿನಿಂದಲೇ ಪತ್ರಿಕೆಯೊಂದನ್ನು ಸತತವಾಗಿ ನಡೆಸುವುದೂ ಸಾಧ್ಯವಿಲ್ಲ ಎಂಬ ಸತ್ಯವೂ ಅನುಭವಕ್ಕೆ ಬಂದು ಅದನ್ನು ಕೈ ಬಿಡಲಾಯಿತು. ಅಂತೂ ಸದ್ಯಕ್ಕೆ ಜಾನಪದ ಪತ್ರಿಕೆ ನಿಂತಿದೆ. ಆದರೆ ಯಾವಾಗ ಬೇಕಾದರೂ ಮತ್ತೆ ಮುನ್ನಡೆಯಬಹುದಾದ ಅವಕಾಶವನ್ನು ಉಳಿಸಿಕೊಂಡಿದೆ. ಬೇಗ ಹಾಗಾಗಲೆಂದು ಆಶಿಸುವುದಷ್ಟೇ ಸದ್ಯದ ಕೆಲಸವಾಗಿದೆ.

ಇದಾದ ನಂತರ ಜಾನಪದಕ್ಕೆ ಮೀಸಲಾದಂತೆ ಆರಂಭವಾದ ಮತ್ತೊಂದು ಪತ್ರಿಕೆ 'ಜಾನಪದ

ಜಗತ್ತು' ಬೆಂಗಳೂರಿನ ಕರ್ನಾಟಕ ಜಾನಪದ ಟ್ರಸ್ಟ್‌ನಿಂದ ಹೊರಬರಲಾರಂಭಿಸಿದೆ. ಈ ಪತ್ರಿಕೆ ಒಳ್ಳೆಯ ಆಸೆ - ಭರವಸೆಗಳನ್ನು ಮೂಡಿಸಿತು. ಹೆಸರೇ ಸೂಚಿಸುವಂತೆ ಜಾನಪದ ಜಗತ್ತನ್ನು ತೆರೆದೂ ತೋರಿಸುವ ಸಾಹಸವನ್ನೆ ಪ್ರದರ್ಶಿಸಿತು. ಶ್ರೀ ಎಚ್.ಎಲ್. ನಾಗೇಗೌಡರು ಪ್ರಧಾನ ಸಂಪಾದಕರಾಗಿ, ಡಾ. ಎಚ್. ಜೆ. ಲಕ್ಕಪ್ಪ ಗೌಡ, ಶ್ರೀ ವಿ.ಎನ್. ಸೀತಾರಾಮು ಮತ್ತು ಶ್ರೀ ಗೋ.ರು. ಚನ್ನಬಸಪ್ಪ ಅವರ ಸಂಪಾದಕತ್ವದಲ್ಲಿ 1979ರಲ್ಲಿ ಆರಂಭವಾದ ಈ ಪತ್ರಿಕೆ ಕೂಡ ಹಲವು ಏಳು - ಬೀಳುಗಳನ್ನು ಎದುರಿಸಬೇಕಾಯಿತು. 'ಜಾನಪದ ಜಗತ್ತಿನ' ಪ್ರಧಾನ ಸಂಪಾದಕರ 1982 ಸಂಯುಕ್ತ ವಿಶೇಷ ಸಂಚಿಕೆಯ ಕೊನೆಯ ಪುಟಗಳ ಮಾತಿನಲ್ಲಿಯೇ ಅದನ್ನು ಗಮನಿಸುವುದಾದರೆ "ನಮ್ಮ ಪತ್ರಿಕೆಗೆ ಮೂರು ವರ್ಷಗಳು ತುಂಬಿದುವು. ಮೊದಲ ಎರಡು ವರ್ಷ ಇದನ್ನು ಎರಡು ತಿಂಗಳಿಗೊಂದರಂತೆ ತಂದೆವು. ಮೂರನೆಯ ವರ್ಷ ಮೂರು ತಿಂಗಳಿಗೊಂದರಂತೆ ತಂದೆವು. ಇಷ್ಟು ಉತ್ತಮವಾದ ವಿಷಯ, ಓರಣ, ಮುದ್ರಣಗಳನ್ನುಳ್ಳ ಪತ್ರಿಕೆಗೆ ತಕ್ಕ ಪ್ರೋತ್ಸಾಹ ಇಲ್ಲದಿರುವುದು ವ್ಯಸನದ ಸಂಗತಿ. ಕೇವಲ ಜಾಹಿರಾತುಗಳಿಂದ ಎಷ್ಟು ದಿನ ಪತ್ರಿಕೆ ನಡೆಸಲು ಸಾಧ್ಯ ? ಕೊಡುವವರು ಎಷ್ಟು ಕೊಟ್ಟಾರು ?........ ಪತ್ರಿಕೆಯನ್ನು ನಿಲ್ಲಿಸುವ ಆಲೋಚನೆ ಮಾಡಿದೆವು. ಆದರೆ ಟ್ರಸ್ಟಿನ ಆಡಳಿತ ಮಂಡಲಿಯು ಇತ್ತೀಚೆಗೆ ಸಭೆ ಸೇರಿ ಪತ್ರಿಕೆ ನಿಲ್ಲಿಸುವುದು ಬೇಡ, ಇಂಥ ಪತ್ರಿಕೆ ಆರು ತಿಂಗಳಿಗೊಂದರಂತೆ ಬಂದರೂ ಚಿಂತೆಯಿಲ್ಲ, ಮುಂದುವರಿಸಿಕೊಂಡು ಹೋಗಬೇಕೆಂದು ತೀರ್ಮಾನ ಕೈಗೊಂಡಿತು. ಈ ತೀರ್ಮಾನದಂತೆ 1983ನೆಯ ಜನವರಿಯಿಂದ ವರ್ಷಕ್ಕೆ ಎರಡು ಪತ್ರಿಕೆಗಳನ್ನು ಪ್ರಕಟಿಸಲಾಗುವುದು". ಇದು 'ಜಾನಪದ ಜಗತ್ತಿನ' ಕಥೆ.

ಕನ್ನಡ ಜಾನಪದದ ಹೆಮ್ಮೆಯ ಪತ್ರಿಕೆಯಾದ 'ಜಾನಪದ'ವೂ ಹೊಸ ಆಸೆ - ಭರವಸೆಗಳನ್ನು ಮೂಡಿಸಿ ಹೊರಬಂದ ಪತ್ರಿಕೆ. ಒಂದೆರಡು ವರ್ಷಗಳಲ್ಲಿಯೇ ತಣ್ಣೀರ ರಚಿಸಿಕೊಂಡಂತೆ ಹಿಂದೆ ಬಿದ್ದಿದ್ದು ನೋವನ್ನುಂಟು ಮಾಡುವ ಸಂಗತಿಯೇ ಆಗಿದೆ. 'ಜಾನಪದ ಜಗತ್ತು' ಉತ್ತಮ ರೀತಿಯಲ್ಲಿ ಹೊರಬರುತ್ತಿದ್ದು, ಯುವ ಸಂಶೋಧಕರಿಗೆ ಹಾಗೂ ಸಂಗ್ರಹಕಾರರಿಗೆ ಪ್ರೋತ್ಸಾಹದಾಯಕವಾಗಿ ಕೆಲಸ ಮಾಡುವ ಪತ್ರಿಕೆಯಾಗಿದೆ. ಸಂಗ್ರಹಿತ ಜಾನಪದ ವಿಷಯಗಳು ಹಾಗೂ ಹೊಸ ಹೊಸ ಸಂಶೋಧನೆಗಳು ಬಹಳ ಬೇಗ ಪ್ರಕಟವಾಗಲು ನೆರವಾಗುವ ಇಂತಹ ಪತ್ರಿಕೆಗಳು ತ್ರೈಮಾಸಿಕವಾಗಿಯಾದರೂ ಹೊರಬಂದರೆ ಒಳ್ಳೆಯದೆಂಬ ಅನಿಸಿಕೆ ಯಾರಿಗಾದರೂ ಬರುವುದು ಸಹಜ.

1969ರಲ್ಲಿ ತಿಪಟೂರು ತಾಲ್ಲೂಕು ಕೊನೇಹಳ್ಳಿಯಲ್ಲಿ ಸ್ಥಾಪನೆಯಾದ 'ಮೂಡಲಪಾಯ ಯಕ್ಷಗಾನ ಟ್ರಸ್ಟ್' ಅನಿಯತಕಾಲಿಕವಾಗಿ ಹೊರಡಿಸುತ್ತಿರುವ 'ಮೂಡಲಪಾಯ' ಪತ್ರಿಕೆ ಇಲ್ಲಿ ವಿಶೇಷವಾಗಿ ಹೆಸರಿಸಬೇಕಾದ್ದು. ಡಾ. ಜೀಶಂಪ ಅವರ ವಿಶೇಷ ಪರಿಶ್ರಮದಿಂದ ಸ್ಥಾಪನೆಯಾದ ಮಹತ್ವಾಕಾಂಕ್ಷೆಯ ಈ ಟ್ರಸ್ಟ್ ಹಾಗೂ ಅದರ ಅಂಗವಾಗಿ ಪ್ರಕಟವಾಗುತ್ತಿರುವ 'ಮೂಡಲಪಾಯ' ಪತ್ರಿಕೆ ಮುಖ್ಯವಾಗಿ ಬಯಲಾಟವನ್ನು ಕೇಂದ್ರವಾಗಿ ಇಟ್ಟುಕೊಂಡಿದ್ದು, ನಶಿಸಿ ಹೋಗುತ್ತಿದ್ದ ಮೂಡಲಪಾಯ ಯಕ್ಷಗಾನಕ್ಕೆ ಕಾಯಕಲ್ಪ ಮಾಡುವ ವಿವಿಧ ಯೋಜನೆಗಳಲ್ಲಿ ಇದೂ ಕೂಡ ಒಂದಾಗಿ ಅದರ ಪುನರುಜ್ಜೀವನ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿತು. ಮುಖ್ಯವಾಗಿ ಮೂಡಲಪಾಯದ ವಿಚಾರವನ್ನು ನಾಡಿನ ವಿವಿಧ ಮೂಲೆಗಳಿಗೆ ಮುಟ್ಟಿಸುವಲ್ಲಿ ಹಾಗೂ ವಿದ್ವಾಂಸರ ಮತ್ತು ಆಸಕ್ತರ ಗಮನವನ್ನು ಅದರತ್ತ ಸೆಳೆಯುವಲ್ಲಿ ಈ ಪತ್ರಿಕೆ ಕೆಲಸ ಮಾಡಿದ ರೀತಿ ವಿಶಿಷ್ಟವಾದುದು ಇದರ ಕೀರ್ತಿ ಮುಖ್ಯವಾಗಿ ಅದರ ಕೇಂದ್ರ ಶಕ್ತಿಯಾದ ಡಾ. ಜೀಶಂಪ ಅವರಿಗೆ ಸಲ್ಲುವಂತಹುದು.

'ಮೂಡಲಪಾಯ' ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಡಾ. ಜೀಶಂಪ ಅವರು ಪ್ರಧಾನ ಸಂಪಾದಕರಾಗಿ ಶ್ರೀ ಪಿ. ಆರ್. ತಿಪ್ಪೇಸ್ವಾಮಿ, ಶ್ರೀ ಹ. ಕ. ರಾಜೇಗೌಡ ಹಾಗೂ ಡಾ. ಡಿ. ಕೆ. ರಾಜೇಂದ್ರ ಅವರ ಸಂಪಾದಕತ್ವದಲ್ಲಿ ಹಾಗೂ ಎರಡನೆಯ ಪತ್ರಿಕೆ ಶ್ರೀ ಹ.ಕ. ರಾಜೇಗೌಡ ಮತ್ತು ಡಾ|| ಡಿ.ಕೆ. ರಾಜೇಂದ್ರ ಅವರ ಸಂಪಾದಕತ್ವದಲ್ಲಿ ಹೊರಬಂದುವು.

ಕರ್ನಾಟಕದ ಜನಪದ ರಂಗಭೂಮಿಯ ವಿವಿಧ ಮುಖಗಳ ವಿಚಾರವನ್ನು ಪ್ರಧಾನವಾಗಿ ಒಳಗೊಂಡು ಹೆಚ್ಚು ಉಪಯುಕ್ತವಾಗಿ ಹೊರಬರುತ್ತಿದ್ದ ಈ ಪತ್ರಿಕೆ ಕೂಡ ಉಸಿರು ಕಟ್ಟಿದಂತಾಗಿ ಕುಂಠಿತವಾಗಿದೆ. ನಶಿಸಿ ಹೋಗುತ್ತಿದ್ದ ಕಲೆಯೊಂದಕ್ಕೆ ಜೀವ ತುಂಬುವಲ್ಲಿ ಮುಂದಾದ ಇಂತಹ ಪತ್ರಿಕೆಯೊಂದು ನಶಿಸಿ ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿ ಕನ್ನಡಿಗರೆಲ್ಲರದ್ದಾಗಿದೆ. ಅದರ ಉದಯಕ್ಕೆ ಕಾರಣರಾದ ಡಾ. ಜೀಶಂಪ ಅವರ ಆಸೆಯೂ ಅದೇ ಆಗಿದೆ : ಎಂದಾದರೊಂದು ದಿನ ಈ ಪತ್ರಿಕೆ ಮತ್ತೆ ತಲೆ ಎತ್ತಿ ಭದ್ರವಾಗಿ ನೆಲೆಯೂರಿ ನಿಲ್ಲುತ್ತದೆ, ತನ್ನ ಗುರಿಯನ್ನು ಸಾಧಿಸುತ್ತದೆ ಎಂಬುದು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹೊರತರುತ್ತಿರುವ 'ಜಾನಪದ ಗಂಗೋತ್ರಿ' ಜಾನಪದ ಪತ್ರಿಕೆಗಳ ಸಾಲಿನಲ್ಲಿ ಹೆಸರಿಸಬಹುದಾದ ಮತ್ತೊಂದು ಮಹತ್ವದ ಪತ್ರಿಕೆ. 1986ರಲ್ಲಿ ತ್ರೈಮಾಸಿಕವಾಗಿ ಆರಂಭವಾದ ಈ ಪತ್ರಿಕೆ ಅಲ್ಲಿಂದ ಇಲ್ಲಿಯವರೆಗೆ ಜೀವಂತವಾಗಿ ಹಾಗೂ ಗಮನಾರ್ಹವಾದ ಒಂದು ಪತ್ರಿಕೆಯಾಗಿ ಉಳಿದು ಬಂದಿರುವುದೇ ಇದರ ಮೊದಲ ಒಂದು ವಿಶೇಷತೆ. ಜಾನಪದ ಅಧ್ಯಯನ ವ್ಯವಸ್ಥಿತ ರೀತಿಯಲ್ಲಿ ರೂಪುಗೊಳ್ಳಬೇಕಾದರೆ, 'ಜಾನಪದ ಪತ್ರಿಕೆ'ಯೊಂದು ಅತ್ಯಗತ್ಯ ಎಂಬುದನ್ನು ಮನಗಂಡ ಅಕಾಡೆಮಿ, ಆಗಿನ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ಎಚ್. ಎಲ್. ನಾಗೇಗೌಡರ ಪ್ರಧಾನ ಸಂಪಾದಕಪತ್ವದಲ್ಲಿ 'ಜಾನಪದ ಗಂಗೋತ್ರಿ'ಯನ್ನು ಆರಂಭಿಸಿತು. ಇದರ ಮೊದಲ ಸಂಪಾದಕತ್ವ ಅಕಾಡೆಮಿಯ ಸದಸ್ಯರೇ ಆಗಿದ್ದ ಶ್ರೀ ಹ. ಕ. ರಾಜೇಗೌಡರಿಗೆ ದೊರೆಯಿತು. ಇಂತಹ ಪತ್ರಿಕೆಯೊಂದರ ಅನಿವಾರ್ಯತೆಯನ್ನು ಚೆನ್ನಾಗಿ ಮನಗಂಡಿದ್ದ ಅವರು ಅದನ್ನು ಅತ್ಯಂತ ಗಮನಾರ್ಹ ಪತ್ರಿಕೆಯಾಗಿ ಹೊರ ತರುವಲ್ಲಿ ಯಶಸ್ವಿಯಾದರು. ಅವರು ತಮ್ಮ ಸಂಪಾದಕೀಯದಲ್ಲಿ ಜಾನಪದದ ಬಗ್ಗೆ ವ್ಯಕ್ತಪಡಿಸಿರುವ ಕಾಳಜಿ ಹಾಗೂ ಅಕಾಡೆಮಿಯಿಂದ ಹೊರಬರುತ್ತಿರುವ ಈ ಪತ್ರಿಕೆ ಉಳಿದ ಪತ್ರಿಕೆಗಳಂತೆ ಆರ್ಥಿಕ ಕಾರಣಗಳಿಂದಾಗಿ ನೆಲ ಕಚ್ಚುವಂತಾಗುವುದಿಲ್ಲ ಎಂಬ ಆಶಯ ಗಮನಾರ್ಹವಾದದ್ದೇ ಆಗಿದೆ. ಅವರು ಬರೆಯುತ್ತಾರೆ: "ಜನಪದ ಕಲೆ, ಸಾಹಿತ್ಯ ಇವುಗಳಿಂದಾಗಿ ಅಕಾಡೆಮಿಯು ತನ್ನದೇ ಆದ ತ್ರೈಮಾಸಿಕವೊಂದನ್ನು ಹೊರತರಬೇಕೆಂಬುದು ನಮ್ಮ ಸದಸ್ಯರೆಲ್ಲರ ಹಂಬಲ. ದಿನಪತ್ರಿಕೆಗಳ ಭಾನುವಾರದ ವಿಶೇಷಾಂಕಗಳಲ್ಲಿ, ವಾರಪತ್ರಿಕೆ ಮಾಸಿಕ ಇತ್ಯಾದಿಗಳಲ್ಲಿ ಆಗಾಗ ಕಾಣಸಿಕೊಳ್ಳುವ ಕಲೆ ಮತ್ತು ಸಾಹಿತ್ಯ ಕುರಿತ ಲೇಖನಗಳನ್ನು ಬಿಟ್ಟರೆ ಜಾನಪದಕ್ಕಾಗಿಯೇ ಮೀಸಲಾದ ಪತ್ರಿಕೆಗಳು ಅಪರೂಪ ವೆಂದೇ ಹೇಳಬೇಕು....... ಈ ಎಲ್ಲಾ ಪತ್ರಿಕೆಗಳನ್ನು ಪ್ರಮುಖವಾಗಿ ಕಾಡಿದ ಸಮಸ್ಯೆಗಳೆಂದರೆ ಹಣ ಮತ್ತು ಒಳ್ಳೆಯ ಲೇಖನಗಳು. ಅಕಾಡೆಮಿಯ 'ಜಾನಪದ ಗಂಗೋತ್ರಿ'ಗೆ ಈ ಸಮಸ್ಯೆಗಳಿರಲಾರವೆಂದು ನಮ್ಮ ನಂಬಿಕೆ. ಆದುದರಿಂದ ಇದು ಕರ್ನಾಟಕ ಜಾನಪದ ಜಗತ್ತಿಗೆ ಒಳ್ಳೆಯ ಕಾಣಿಕೆ ಸಲ್ಲಿಸುತ್ತದೆಂಬ ಹಾರೈಕೆ ನಮ್ಮದು". 'ಜಾನಪದ ಗಂಗೋತ್ರಿ'ಯ ಪ್ರಥಮ ಸಂಪಾದಕರ ಈ ಹಾರೈಕೆ ಇಲ್ಲಿಯವರೆಗೂ ಮುಂದುವರಿದಿದೆ. ಅದು ನಿರಂತರವಾಗಿರಲಿ ಎಂದು

ಹಾರೈಸುವುದು ನಮ್ಮೆಲ್ಲರ ಕರ್ತವ್ಯ. ಏಕೆಂದರೆ ಶ್ರೀ ರಾಜೇಗೌಡರು ವ್ಯಕ್ತಪಡಿಸಿರುವಂತೆ ಅಕಾಡೆಮಿಯಿಂದ ಹೊರಬರುತ್ತಿರುವ ಈ ಪತ್ರಿಕೆಗೆ ಹಣದ ಭಯ ಬರುವುದಿಲ್ಲ - ಬರಬಾರದು. ಆದರೆ ಮುಂದಿನ ಸಂಪಾದಕರುಗಳು ಒಳ್ಳೆಯ ಲೇಖನಗಳ ಅಭಾವವಾಗದಂತೆ ನೋಡಿಕೊಂಡು ಅದೊಂದು ಒಳ್ಳೆಯ ಪತ್ರಿಕೆಯಾಗಿ ಉಳಿಯುವಂತೆ ನೋಡಿಕೊಳ್ಳುವ ಅಗತ್ಯವಿದೆ ಅಷ್ಟೆ.

ಶ್ರೇಷ್ಠ ಜಾನಪದ ವಿದ್ವಾಂಸರೂ, ಜಾನಪದ ಅಕಾಡೆಮಿಯ ಸದಸ್ಯರೂ ಆದ ಡಾ. ಜೀಶಂಪ ಅವರು 'ಕರ್ನಾಟಕ ಜಾನಪದ : ಸುವರ್ಣಯುಗ' ಎಂಬ ಮೊದಲ ಲೇಖನವನ್ನು ಒಳಗೊಂಡು ಹೊರಬಂದ ಮೊದಲ ಸಂಚಿಕೆ, ಸಂಪಾದಕರ ಜಾಣತನವನ್ನೂ - ಔಚಿತ್ಯ ಪ್ರಜ್ಞೆಯನ್ನೂ ಮೆರೆದಿದೆ. ಇಂತಹ ಒಂದು ಪರಂಪರೆ ಮುಂದುವರಿಯುವಂತಾಗಲಿ ಎಂಬುದು ಜಾನಪದಾಸಕ್ತರೆಲ್ಲರ ಆಶಯ ಎಂಬುದರಲ್ಲಿ ಸಂಶಯವಿಲ್ಲ.

ಮೇಲಿನ ಮೂರು ಪತ್ರಿಕೆಗಳು ಕನ್ನಡವಾದರೆ, ಉಳಿದ ಮೂರು ಇಂಗ್ಲೀಷಿನಲ್ಲಿ ಹೊರಬರುತ್ತಿರುವ ಪತ್ರಿಕೆಗಳು. ಅವುಗಳಲ್ಲಿ FFI ಪ್ರಕಟಿಸಿದ ಇಂಗ್ಲೀಷ್ ಪತ್ರಿಕೆ 'Journal of Indian Folkloreistis' ಪ್ರಮುಖವಾದುದು. ಇದರ ಸಂಪಾದಕರು ಡಾ. ಹಾ. ಮಾ. ನಾಯಕರು ಹಾಗೂ ಜವಾಹರ್‌ಲಾಲ್ ಹಂಡು. ಹಾಗೆಯೇ ಇದರ ಜೊತೆಯಲ್ಲಿಯೇ ಡಾ. ಜೀ. ಶಂ. ಪರಮಶಿವಯ್ಯ ಮತ್ತು ಡಾ. ಜವಾಹರ್‌ಲಾಲ್ ಹಂಡು ಇವರುಗಳ ಸಂಪಾದಕತ್ವದಲ್ಲಿ ಹೊರ ಬಂದ FFI News Bulletin ಕೂಡ ಗಮನಾರ್ಹ.

1978ರಲ್ಲಿ 'Journal of Indian Folkoloreistis'ನ ಮೊದಲ ಸಂಚಿಕೆ ಡಾ. ಹಾ. ಮಾ. ನಾಯಕ ಹಾಗೂ ಡಾ. ಜವಹರ್‌ಲಾಲ್ ಹಂಡು ಅವರುಗಳ ಸಂಪಾದಕತ್ವದಲ್ಲಿ ಬೆಳಕು ಕಂಡಿತು. ಅದರಲ್ಲಿ ಸಂಪಾದಕರು ಪತ್ರಿಕೆಯ ಉದ್ದೇಶವನ್ನು ಹೀಗೆ ವ್ಯಕ್ತಪಡಿಸುತ್ತಾರೆ : "The Journal of Indian Folkloreistics aptly reflects the beginning of a new era in the study of Indian Folklore. Whatever the past the new era will be dominated by a serious scholarly endeavour to understand the multifaceted expression of folk culture, and through this, the nature of Indian civilization. For the foreign scholar, folklore provides an inroad into the various aspects of Indian life and thought which has hitherto been all but inaccessible. To the Indian scholar it provides an opportunity to realize the significance and extent of a dynamic and uniquely expressive contribution the Indian people have made to the world.

The Journal does not restricts itself to the Indian materials alone. Nor do we intended to restirict the contributions to only those who call themselves folkloreists".

ರಾಷ್ಟ್ರೀಯ ಮಟ್ಟದಲ್ಲಿ ಜಾನಪದ ಅಧ್ಯಯನವನ್ನು ಚುರುಕುಗೊಳಿಸುವ ದೃಷ್ಟಿಯಿಂದ, ಆ ಕ್ಷೇತ್ರದಲ್ಲಿ ಆಸಕ್ತರಾದವರನ್ನು ಒಟ್ಟುಗೂಡಿಸುವ ದೃಷ್ಟಿಯಿಂದ ಸ್ಥಾಪನೆಯಾದ FFI ಬಿರುಸಿನಿಂದಲೇ ತನ್ನ ಕಾರ್ಯವನ್ನು ಆರಂಭಿಸಿತು. ಇದನ್ನು ಕುರಿತು ಡಾ. ಜೀಶಂಪ ಅವರು 'ಜಾನಪದ'ಪತ್ರಿಕೆಯ

ಎಂಟನೆಯ ಸಂಚಿಕೆಯ ಸಂಪಾದಕೀಯದಲ್ಲಿ ಹೀಗೆ ಬರೆದಿದ್ದಾರೆ. "ಭಾರತದಲ್ಲಿ ಬಹುಮಟ್ಟಿಗೆ ಉನ್ನತ ಅಧ್ಯಯನ ವಿಷಯಗಳಿಗೆ ಸಂಬಂಧಿಸಿದಂತೆ ಇಂತಹ ಒಂದು ಸಂಸ್ಥೆಯ ಅಗತ್ಯವಿದ್ದು, ಅದು ಈಗಲಾದರೂ ಅಸ್ತಿತ್ವಕ್ಕೆ ಬಂದಿರುವುದು ಸಂತೋಷದ ವಿಷಯ. ಕೆಲವು ತಿಂಗಳುಗಳ ಹಿಂದೆ ಕಲ್ಕತ್ತಾದಲ್ಲಿ ಕೇಂದ್ರೀಯ ಭಾಷಾ ಸಂಸ್ಥೆಯ ಹಾಗೂ ಕಲ್ಕತ್ತಾದ 'ಜಾನಪದ ಪರಿಷತ್ತಿನ' ಆಶ್ರಯದಲ್ಲಿ ನಡೆದ ಅಖಿಲ ಭಾರತ ಜಾನಪದ ಸಮ್ಮೇಳನದ ಸಂದರ್ಭದಲ್ಲಿ 'FFI' ಉದಯವಾಗಿದೆ. ಭಾರತದ ಪ್ರಸಿದ್ಧ ಜಾನಪದ ತಜ್ಞರೆಲ್ಲ ಸಂಘಟಿತರಾಗಿರುವುದು ಶುಭದ ಸೂಚನೆಯಾಗಿದೆ. ಈಗಾಗಲೇ FFI ತನ್ನ ವಾರ್ತಾ ಪತ್ರಗಳನ್ನು ಬಿಡುಗಡೆ ಮಾಡಿ ಸಮಗ್ರ ಭಾರತದಲ್ಲಿ ಹೊಸ ಗಾಳಿಯೊಂದು ಬೀಸುವಂತೆ ಮಾಡಿದೆ. ವಿದೇಶಗಳಿಗೂ ಈ ವಾರ್ತಾಪತ್ರ ಮುಟ್ಟಿ, ಭಾರತೀಯ ಜಾನಪದ ಚಟುವಟಿಕೆಗಳ ಕಡೆಗೆ ಹೊರಗಿನ ವಿದ್ವಾಂಸರುಗಳ ದೃಷ್ಟಿಯೂ ಭಾರತದತ್ತ ಹರಿಯುತ್ತಿದೆ. ಉನ್ನತಮಟ್ಟದ ಪತ್ರಿಕೆಯೊಂದನ್ನು FFI ಇಂಗ್ಲಿಷಿನಲ್ಲಿ ಇಷ್ಟರಲ್ಲಿಯೇ ಪ್ರಕಟಿಸಲಿದೆ. ಇದು ಭಾರತೀಯ ಜಾನಪದ ಅಧ್ಯಯನದ ಒಂದು ಹೊಸ ಶಕೆಯನ್ನು ಆರಂಭಿಸುತ್ತದೆ ಎಂಬುವರಲ್ಲಿ ಅನುಮಾನವಿಲ್ಲ. ಜೊತೆಗೆ FFI ಚೈತನ್ಯದಾಯಕ ಚಟುವಟಿಕೆಗಳಿಂದ ನಮ್ಮ ಜಾನಪದ ಅಧ್ಯಯನ ಒಂದು ಒಳ್ಳೆಯ ನಿಲುವನ್ನು ಪಡೆಯುತ್ತದೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಜನಪದ ಅಧ್ಯಯನಕ್ಕೆ ಒಳ್ಳೆಯ ಭವಿಷ್ಯವಿದೆ ಎಂದು ಹಾರೈಸಬಹುದಾಗಿದೆ."

ರಾಜ್ಯಮಟ್ಟದಲ್ಲಿ 'ಕರ್ನಾಟಕ ಜಾನಪದ ಪರಿಷತ್ತು' ಹಾಗೂ ಅದರ ಜೊತೆಯಲ್ಲಿ 'ಜಾನಪದ ಪತ್ರಿಕೆ'ಯೊಂದು ಆರಂಭವಾದಂತೆ ರಾಷ್ಟ್ರಮಟ್ಟದಲ್ಲಿ FFI (Folklore Fellows of India) ಪರಿಷತ್ ಒಂದು ಆರಂಭವಾಗಿ ಅದರ ಜೊತೆಯಲ್ಲಿಯೇ ಉತ್ತಮ ಮಟ್ಟದ ಪತ್ರಿಕೆಯೊಂದು ಆರಂಭವಾದದ್ದು ಜಾನಪದದ ಶುಭೋದಯವನ್ನೇ ಸಾರಿತು. ಒಳ್ಳೆಯ ದೃಷ್ಟಿ ಧೋರಣೆಗಳನ್ನು ಇಟ್ಟುಕೊಂಡೇ ಆರಂಭವಾದ ಈ ಪತ್ರಿಕೆ ಕೂಡ ತೂಕಡಿಸುವಂತಾದುದು ದುರ್ದೈವದ ಸಂಗತಿ. ಭಾರತದಂತಹ ದೊಡ್ಡ ರಾಷ್ಟ್ರದ ವಿವಿಧ ಭಾಗಗಳ ಅಪಾರ ಜಾನಪದವನ್ನು ಪರಸ್ಪರ ತಿಳಿಯುವುದಕ್ಕೆ, ಅರ್ಥಮಾಡಿಕೊಳ್ಳುವುದಕ್ಕೆ ಹಾಗೂ ಹೊರಗಿನವರಿಗೆ ಭಾರತದ ಜಾನಪದ ಸಂಪತ್ತನ್ನು ಅರಿವು ಮಾಡಿಕೊಡುವುದಕ್ಕೆ ಇಂತಹ ಪತ್ರಿಕೆಯ ಅಗತ್ಯವಿತ್ತು. ಆದರೆ ಇಂತಹ ಪತ್ರಿಕೆಯೊಂದು ನಿಂತು ಹೋಯಿತೋ ಎಂಬಂತಾಗಿರುವುದು ಜಾನಪದ ದೃಷ್ಟಿಯಿಂದ, ಜಾನಪದಾಸಕ್ತರ ದೃಷ್ಟಿಯಿಂದ ತುಂಬಲಾರದ ನಷ್ಟ ಎಂದೇ ಹೇಳಬಹುದು.

ಜಾನಪದ ಸಂಬಂಧವಾಗಿ ಉದಯವಾದ ಮತ್ತೊಂದು ಇಂಗ್ಲಿಷ್ ಪತ್ರಿಕೆ 'Karnataka Folklore news letter. 1988ರಲ್ಲಿ ಆರಂಭವಾದ ಈ ಪತ್ರಿಕೆ ತ್ರೈಮಾಸಿಕವಾಗಿ ಹೊರಬರುತ್ತದೆ. ಬಹುವಾಗಿ Journal of Indian Folkloretics ಪತ್ರಿಕೆಯ ಕೊರತೆಯನ್ನು ಬೇರೊಂದು ರೀತಿಯಲ್ಲಿ ತುಂಬಿಕೊಡುವ ಸಾರ್ಥಕ ಕೆಲಸವನ್ನು ಮಾಡುತ್ತಿದೆ. ಡಾ. ಬಿ.ಎ. ವಿವೇಕ ರೈ ಹಾಗೂ ಡಾ. ಪೀಟರ್ ಜೆ. ಕ್ಲಾಸ್ ಇವರುಗಳ ಸಂಪಾದಕತ್ವದಲ್ಲಿ ಹೊರಬರುತ್ತಿರುವ ಈ ಪತ್ರಿಕೆ ಜಾನಪದ ಚಟುವಟಿಕೆಗಳನ್ನು ಗುರುತಿಸಿ, ಸಾಕಷ್ಟು ವಿವರಗಳನ್ನು ದಾಖಲಿಸುವುದರ ಮೂಲಕ ಜಾನಪದ ಅಧ್ಯಯನಕ್ಕೆ ಒಳ್ಳೆಯ ಮಾಹಿತಿಯನ್ನು ದೊರಕಿಸಿಕೊಡುವಲ್ಲಿ ಮುಂದಾಗಿದೆ. ಜಾನಪದ ಕ್ಷೇತ್ರದಲ್ಲಿ ವ್ಯಾಪಕವಾದ ಹಾಗೂ ವಿಶೇಷ ಸೇವೆಯನ್ನು ಸಲ್ಲಿಸುತ್ತ ಬಂದಿರುವ ಡಾ. ಜಿ. ಶಂ. ಪರಮಶಿವಯ್ಯ, ಪ್ರೊ. ಕು. ಶಿ. ಹರಿದಾಸಭಟ್, ಡಾ. ಎಂ. ಚಿದಾನಂದ ಮೂರ್ತಿ ಹಾಗೂ ಡಾ. ಜವಾಹರಲಾಲ್

ಹಂಡು ಇವರುಗಳನ್ನು ಸಲಹೆಗಾರರಾಗಿ ಹೊಂದಿರುವ ಈ ಪತ್ರಿಕೆ, ನುರಿತ ಜಾನಪದ ವಿದ್ವಾಂಸರಿಬ್ಬರ ಸಂಪಾದಕತ್ವದಲ್ಲಿ ವಿಶೇಷ ರೀತಿಯಲ್ಲಿ ಹೊರಬರುತ್ತಿರುವುದು ಸಂತಸದ ಸಂಗತಿ. ಬಹುವಾಗಿ ಕನ್ನಡ ಜಾನಪದದ ಚಟುವಟಿಕೆಗಳನ್ನು ಹೊರಗಿನವರಿಗೆ ಪರಿಚಯಿಸುವ ಒಂದು ಮಹತ್ವದ ದೃಷ್ಟಿಯನ್ನು ಹೊಂದಿರುವ ಈ ಪತ್ರಿಕೆ ಸಂಶೋಧನಾ ಚಟುವಟಿಕೆಗಳಿಗೂ ಒಳ್ಳೆಯ ಸ್ಫೂರ್ತಿಯನ್ನು ಒದಗಿಸಲು ಕಾರಣವಾಗಿದೆ. ಅಷ್ಟೇ ಅಲ್ಲದೆ, ಅಂತರರಾಷ್ಟ್ರೀಯ ಜಾನಪದ ವಿಚಾರಗಳು, ಪುಸ್ತಕ ವಿಮರ್ಶೆ, ಸಂಶೋಧನೆಯ ವಿಚಾರ ಇತ್ಯಾದಿ ಇತ್ಯಾದಿಗಳನ್ನು ಪ್ರಮುಖವಾಗಿ ಒಳಗೊಂಡು ಪ್ರಕಟವಾಗುತ್ತಿರುವ ಈ ಪತ್ರಿಕೆ ಹೆಚ್ಚು ಮಹತ್ವದ್ದಾಗಿದೆ. ಈ ಪತ್ರಿಕೆಯ ಸಂಪಾದಕರು ಪತ್ರಿಕೆಯ ಮೂಲ ಉದ್ದೇಶವನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ. "The Karnataka Folklore news letter is intended to do two things : to make the work which has been, and is being, done on Karnataka folklore more accessible to a wider national and international audience ; and, to keep Karnataka folkloreists better informed about what is going on in folklore nationally and internationally". ಈ ಉದ್ದೇಶದ ಹಿನ್ನೆಲೆಯಲ್ಲಿ ಈ ಪತ್ರಿಕೆ ಮಹತ್ವವನ್ನು ಅರಿಯಬಹುದಾಗಿದೆ.

ಉಡುಪಿಯ ಯಕ್ಷಗಾನ ಕೇಂದ್ರ ಹಾಗೂ 'ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ' ಇವುಗಳು ಒಟ್ಟುಗೂಡಿ ಪ್ರಕಟಿಸುತ್ತಿರುವ 'ಪ್ರಸಂಗ' ಒಂದು ವಾರ್ತಾ ಪತ್ರವಾಗಿ ಅಲ್ಲಿಯ ಜಾನಪದ ಚಟುವಟಿಕೆಗಳನ್ನು ಬಿತ್ತರಿಸುವ ಕೆಲಸವನ್ನು ಮಾಡುತ್ತಿದೆ. ಸಂಗ್ರಹಣೆ, ಸಂಶೋಧನೆ, ವೀಡಿಯೋ ಚಿತ್ರೀಕರಣ, ವಿಚಾರಗೋಷ್ಠಿಗಳು ಇತ್ಯಾದಿ ಚಟುವಟಿಕೆಗಳನ್ನು ಪ್ರಕಟಿಸುವ ಕೆಲಸ ಮಾಡುತ್ತಾ ಬಂದಿರುವ ಈ ಪತ್ರಿಕೆ ಅವರ ಸ್ವಂತ ಪ್ರಸಾರಕ್ಕಾಗಿ ಆರಂಭಿಸಿದ ಒಂದು ವಾರ್ತಾಪತ್ರವಾದರೂ, ಜಾನಪದಾಸಕ್ತರ ಹಾಗೂ ಸಂಶೋಧಕರ ದೃಷ್ಟಿಯಿಂದ ಗಮನಾರ್ಹವಾದುದಾಗಿದೆ.

ಜಾನಪದಕ್ಕೆಂದೇ ಮೀಸಲಾಗಿ ಹೊರಬರಲಾರಂಭಿಸಿದ ಇವಿಷ್ಟು ಪತ್ರಿಕೆಗಳು ಒಳ್ಳೆಯ ಸದುದ್ದೇಶದಿಂದಲೇ ತಮ್ಮ ಕಾರ್ಯವನ್ನು ಆರಂಭಿಸಿದುವಾದರೂ, ಅವುಗಳಲ್ಲಿ ಕೆಲವು ಕಾರಣಾಂತರಗಳಿಂದ ಹಿಂದೆ ಬಿದ್ದುವು. ಇನ್ನು ಕೆಲವು ಹಾಗೂ ಹೀಗೂ ಮುನ್ನಡೆದಿವೆ. ಮತ್ತೆ ಕೆಲವು ದಿಟ್ಟವಾಗಿ ನಿಲ್ಲಬಲ್ಲ ಸಾಮರ್ಥ್ಯವನ್ನು ತೋರುತ್ತಾ ಮುನ್ನಡೆದಿವೆ. ಜಾನಪದ ಇಂದು ನಮ್ಮ ಎಲ್ಲಾ ಅಧ್ಯಯನಗಳ ಕೇಂದ್ರ ಬಿಂದುವೆನಿಸಿರುವ ಸಂದರ್ಭದಲ್ಲಿ ಅದರ ಎಲ್ಲ ವಿಚಾರಗಳೂ ಎಲ್ಲರಿಗೂ ಸುಲಭವಾಗಿ ದೊರೆಯುವ ವ್ಯವಸ್ಥೆಯ ಅನಿವಾರ್ಯತೆ ಇದೆ. ಆದರಿಂದ ಸಂಶೋಧನ ಚಟುವಟಿಕೆಗಳು ಚುರುಕಾಗಿ ನಡೆಯಲು ಸಾಧ್ಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಪತ್ರಿಕೆ ನಡೆಸುವವರ ಮೇಲಷ್ಟೇ ಎಲ್ಲಾ ಜವಾಬ್ದಾರಿಗಳನ್ನು ವಹಿಸಿ ಹಿಂದೆ ನಿಂತು ನೋಡುವುದು ಸರಿಯಲ್ಲ. ಅವರ ಕೈಯನ್ನು ಬಲಗೊಳಿಸುವ ಪ್ರಯತ್ನವನ್ನಾದರೂ ಮಾಡಿದರೆ - ಇಂತಹ ಎಷ್ಟೋ ಪತ್ರಿಕೆಗಳ ಅವಸಾನವನ್ನು ತಪ್ಪಿಸಬಹುದು. ಪತ್ರಿಕೆ ನಡೆಸುವ ವ್ಯಕ್ತಿಗೆ ಎಷ್ಟೇ ಶ್ರದ್ಧೆ, ಆಸಕ್ತಿ, ಉತ್ಸಾಹವಿದ್ದರೂ ಹಣವಿಲ್ಲದೆ ಏನನ್ನು ಸಾಧಿಸಲಾಗದು ಎಂಬ ವಿಷಯ - ಶೂನ್ಯದಿಂದ ಏನನ್ನೂ ಹೊಂದಲಾಗುವುದಿಲ್ಲ ಎಂಬ ವೈಜ್ಞಾನಿಕ ಸತ್ಯದಷ್ಟೇ ಸ್ಪಷ್ಟ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ ?

* * * * *

ಮಾಟ - ಮಂತ್ರ - ಮೋಡಿ

ಮಾಟ - ಮಂತ್ರಗಳು ಇಂದು ನೆನ್ನೆಯವಲ್ಲ. ಧರ್ಮದಷ್ಟೇ ಪ್ರಾಚೀನವಾದುವುಗಳು. ಈ ಧರ್ಮಕ್ಕೂ, ಮಾಟ - ಮಂತ್ರಿಗಳಿಗೂ ಸಂಬಂಧವೇ ಇಲ್ಲ - ಎಂದು ಒಂದು ಕಾಲದವರೆವಿಗೂ ಭಾವಿಸಲಾಗಿತ್ತಾದರೂ ; ನಂತರ ಆ ಅಭಿಪ್ರಾಯ ಬದಲಾಯಿತು. ಅವೆರಡೂ ಅವಿಭಾಜ್ಯ ಅಂಗಗಳು ಎನ್ನುವಷ್ಟರ ಮಟ್ಟಿಗೆ ಅವುಗಳ ಸಂಬಂಧವನ್ನು ಕಲ್ಪಿಸಿದುದು ಅಥವಾ ಕಂಡುಕೊಂಡುದು - ಸಮಾಜದಲ್ಲಿ ಮಂತ್ರವಿದ್ಯೆ ಮತ್ತು ಧರ್ಮ ಅವೆರಡಕ್ಕೂ ಇದ್ದ ಸಮಾನ ಸ್ಥಾನವನ್ನು ಸೂಚಿಸುತ್ತದೆ. ಫ್ರೇಸರನ ಪ್ರಕಾರ, ದೇವತಾರಾಧನೆಯ ಮುಂದಿನ ಘಟ್ಟವೆ ಮಾಟ - ಮಂತ್ರ ಮುಂತಾದುವು. ಮಂತ್ರವಿದ್ಯೆಯನ್ನು ಫ್ರೇಸರ್, 'ಪ್ರಾಚೀನ ವಿಜ್ಞಾನ' ಎಂದೇ ಕರೆದಿದ್ದಾನೆ. ಧರ್ಮಕ್ಕೂ ಮಂತ್ರವಿದ್ಯೆಗೂ ಸಂಬಂಧ ಇರುವಂತೆಯೇ, ಮಂತ್ರವಿದ್ಯೆಗೂ - ವಿಜ್ಞಾನಕ್ಕೂ ಹಲವಂಶಗಳಲ್ಲಿ ಸಂಬಂಧವಿದೆ ಎಂಬುದನ್ನು ಗುರುತಿಸಲಾಗಿದೆ. ಇವುಗಳ ಕಾರ್ಯವಿಧಾನದಲ್ಲಿ ಹೆಚ್ಚಿನ ಸಾಮ್ಯತೆ ಕಂಡು ಬರುತ್ತದೆ.

ಧರ್ಮ, ಮಾಟ - ಮಂತ್ರ ಮುಂತಾದುವು ಬಹು ಹಿಂದಿನಿಂದಲೂ ನಮ್ಮ ಸಮಾಜದಲ್ಲಿ ಬೇರು ಬಿಟ್ಟು ಬಂದವುಗಳು. ಮಾನವ, ತನ್ನ ಜೀವನದಲ್ಲಿ ಉಂಟಾದ ಸಂದಿಗ್ಧತೆಯಿಂದ ಪಾರಾಗಲು, ಪರಿಹಾರವನ್ನು ಕಂಡುಕೊಳ್ಳಲು ಇಂತಹವುಗಳನ್ನು ಕಲ್ಪಿಸಿ ಸೃಷ್ಟಿಸಿಕೊಂಡ ನಿಜಜೀವನದಲ್ಲಿ ಉಂಟಾದ ಕಹಿ ಘಟನೆಗಳನ್ನು - ಪ್ರಸಂಗಗಳನ್ನು ಎದುರಿಸಲು ಅಲೌಕಿಕ ಶಕ್ತಿಗಳ ಮೊರೆ ಹೊಕ್ಕ. ಅಂತಹ ಶಕ್ತಿಗಳನ್ನು ಪೂಜಿಸಿ, ಪ್ರಾರ್ಥಿಸುವುದರ ಮೂಲಕ ಅವುಗಳನ್ನು ಒಲಿಸಿಕೊಳ್ಳಲು ಸಾಧ್ಯ ಎಂಬುದನ್ನು ಹೇಗೋ ಕಂಡುಕೊಂಡ. ಆ ಮೂಲಕ ಒಂದು ಬಗೆಯ ಆತ್ಮಸ್ಥೈರ್ಯ, ನಂಬಿಕೆ ಬೆಳೆಯತೊಡಗಿ ಅದನ್ನೇ ಮುಂದುವರಿಸಿದ. ಇದರ ಫಲವೇ ದೇವರು - ಧರ್ಮ. ತನ್ನಿಂದ ಸಾಧಿಸಲು ಅಸಾಧ್ಯವಾದುದನ್ನು ಇಂತಹ ಶಕ್ತಿಗಳ ಮೂಲಕ ಸಾಧಿಸಬಹುದು ಎಂಬ ಅಭಿಪ್ರಾಯ ಅವನಲ್ಲಿ ಅಂಕುರಿಸಿದ ಮೇಲೆ ಅಂತಹ ಶಕ್ತಿಗಳನ್ನು ಬಲವಾಗಿ ನಂಬಿದ. ಮಂತ್ರವಿದ್ಯೆಯೂ ಇಂತಹ ಗುರಿಯಿಂದ ಹೊರತಾದುದಲ್ಲ. ಹಲವರು ಧರ್ಮವನ್ನು ಬಲವಾಗಿ ನಂಬಿ ನಡೆದಂತೆಯೇ, ಕೆಲವರು ಮಂತ್ರ-ಮಾಟಗಳನ್ನೂ ನಂಬಿದರು ; ಮತ್ತೆ ಕೆಲವರು ಎರಡನ್ನೂ ನಂಬಿಕೊಂಡರು.

ಧರ್ಮ ಮತ್ತು ಮಂತ್ರವಿದ್ಯೆ - ಇವೆರಡರಲ್ಲಿಯೂ ಕೆಲವು ಸಮಾನ ಲಕ್ಷಣಗಳಿರುವಂತೆಯೇ, ಮತ್ತೆ ಕೆಲವು ವ್ಯತ್ಯಾಸಗಳೂ ಇವೆ. ಇವೆರಡೂ ಅಗೋಚರವಾದ, ಅಲೌಕಿಕ ಶಕ್ತಿಗಳನ್ನು ಮೂಲ ಬಂಡವಾಳವಾಗಿಸಿಕೊಂಡು ಕಾರ್ಯ ನಡೆಸುತ್ತವೆ. ಧರ್ಮದ ಪ್ರತಿನಿಧಿ ಯಾಗಿ ಪುರೋಹಿತ ನಿಂತರೆ, ಮಂತ್ರವಿದ್ಯೆಯ ಪ್ರತಿನಿಧಿಯಾಗಿ ಮಂತ್ರವಾದಿ ನಿಲ್ಲುತ್ತಾನೆ. ಇವರಿಬ್ಬರೂ, ಅವುಗಳನ್ನು ನಂಬಿದವರ ಪರವಾಗಿ ನಿಂತು ಕಾರ್ಯ ನಡೆಸುತ್ತಾರೆ. ಆ ಮೂಲಕ ಅವರವರ ಮನಸ್ಸಿಗೆ ನೆಮ್ಮದಿಯನ್ನು ಉಂಟು ಮಾಡಲು ಪ್ರಯತ್ನಿಸುತ್ತಾರೆ. ಅವರ ಮಾನಸಿಕ ಒತ್ತಡವನ್ನು ತೊಡೆದು ಹಾಕಲು ಶ್ರಮಿಸುತ್ತಾರೆ. ಈ ಬಗೆಯ ಸಾದೃಶ್ಯಗಳಂತೆಯೇ, ಹಲವು ವೈದೃಶ್ಯಗಳೂ ಕಂಡು ಬರುತ್ತವೆ.

ಧರ್ಮವನ್ನನುಸರಿಸಿದ ವ್ಯಕ್ತಿ ಸನ್ಮಾರ್ಗದಲ್ಲಿ ನಡೆದರೆ, ಮಾಟ - ಮಂತ್ರವನ್ನು ನಂಬಿದ ವ್ಯಕ್ತಿ ದುರ್ಮಾರ್ಗದಲ್ಲಿ ನಡೆಯುತ್ತಾನೆ. ಸಾಧನೆಯ ಗುರಿ ಒಂದೇ ಆದರೂ, ಅನುಸರಿಸುವ ಮಾರ್ಗ ಮಾತ್ರ ಬೇರೆ ಬೇರೆ. ಧರ್ಮಾನುಚರಣೆಯ ಪುರೋಹಿತ ವಿಧೇಯತೆಯಿಂದ, ಶರಣಾಗತ ಭಾವನೆಯಿಂದ ಪೂಜೆ ಸಲ್ಲಿಸಿ ಪ್ರಾರ್ಥಿಸಿದರೆ ; ಮಾಂತ್ರಿಕಾಚರಣೆಯ ಮಂತ್ರವಾದಿ, ಅಂತಹದೇ ಗುರಿಯನ್ನು ದಬ್ಬಾಳಿಕೆಯಿಂದ ಸಾಧಿಸಲು ಪ್ರಯತ್ನಿಸುತ್ತಾನೆ. ಆ ಶಕ್ತಿಯನ್ನೇ ವಶಪಡಿಸಿಕೊಂಡು, ಅದು ತನಗೆ ವಿಧೇಯವಾಗಿ ನಡೆದುಕೊಳ್ಳುವಂತೆ ವಶೀಕರಿಸಿಕೊಳ್ಳುತ್ತಾನೆ. ದಬ್ಬಾಳಿಕೆ, ಬಲಾತ್ಕಾರ ಮಂತ್ರವಿದ್ಯೆಯಲ್ಲಿ ಎದ್ದು ಕಾಣುವ ಅಂಶಗಳು. ಧರ್ಮ ಸಾಮೂಹಿಕವಾದುದಾದರೆ, ಮಂತ್ರವಿದ್ಯೆ ರಹಸ್ಯ ಮಾರ್ಗಿ. ಮಂತ್ರವಿದ್ಯೆಗೆ ಬಲಿಯಾದ ವ್ಯಕ್ತಿ ಎಲ್ಲವನ್ನೂ ಗೋಪ್ಯವಾಗಿ ನಡೆಸಲು ಪ್ರಯತ್ನಿಸುತ್ತಾನೆ. ಗುರಿ ಮುಟ್ಟಿದ ಮೇಲೂ ಅದನ್ನು ಯಾರಿಗೂ ಅವನು ತಿಳಿಸಲಿಚ್ಛಿಸುವುದಿಲ್ಲ. ಆದರೆ ಧರ್ಮದ ರೀತಿಯೇ ಬೇರೆ. ಅವರದ್ದು ರಾಜ ಮಾರ್ಗ.

ಮಂತ್ರ - ಮಾಟಗಳು, ರಹಸ್ಯ ಮಾರ್ಗಿಗಳಾಗಿರುವಂತೆಯೇ ಹಿಂಸಾಮಾರ್ಗಿಗಳೂ ಕೂಡ. ಸಾಮಾನ್ಯವಾಗಿ ಬಲಿ ಇಲ್ಲಿ ಅನಿವಾರ್ಯ. ಸ್ವಂತ ಬಯಕೆಗಳನ್ನು ಈಡೇರಿಸಿಕೊಳ್ಳಬೇಕೆಂಬ ಅಭಿಲಾಷೆಯ ಜೊತೆಗೆ, ಬೇರೊಬ್ಬನ ಮೇಲೆ ಸೇಡನ್ನು ತೀರಿಸಿಕೊಳ್ಳುವ ದೃಷ್ಟಿಯೇ ಮಾಟ - ಮಂತ್ರಗಳಲ್ಲಿ ಹೆಚ್ಚು. ಹಾಗಾಗಿ, ಸಂಕುಚಿತ ಮನಸ್ಸಿನ, ಸೇಡಿನ ಮನೋಭಾವದ ಜನ ಬೇಗ ಮಾಟ - ಮಂತ್ರಗಳಿಗೆ ಶರಣಾಗುತ್ತಾರೆ. ಏಕೆಂದರೆ, ಅದು ಶೀಘ್ರಗಾಮಿ. ಧರ್ಮದಂತೆ ಮಂದಗಾಮಿಯಲ್ಲ ಮಂತ್ರವಿದ್ಯೆ. ಅಲ್ಲದೆ, ಮಾಂತ್ರಿಕಶಕ್ತಿಯ ಮೂಲಕ ಗುರಿಯನ್ನು ಸಾಧಿಸುವ ಭರವಸೆ ಹೆಚ್ಚಾಗಿರುತ್ತದೆ. ಮಂತ್ರವಾದಿಯೂ ಆ ಭರವಸೆಯನ್ನು ನಂಬಿದವರಿಗೆ ಕೊಡುತ್ತಾನೆ. ಮಂತ್ರವಾದಿ, ಅಲೌಕಿಕ ಶಕ್ತಿಯೊಂದನ್ನು ವಶೀಕರಿಸಿಕೊಂಡಿದ್ದು, ಆ ಶಕ್ತಿ ಮಂತ್ರವಾದಿಯ ಮಾತನ್ನು ಕೇಳುತ್ತದೆ ಎಂಬ ನಂಬಿಕೆ ಹಲವರಿಗಿರುವುದರಿಂದ ಅಂತಹವರು ಶೀಘ್ರ ಗುರಿಸಾಧನೆಗಾಗಿ ಮಂತ್ರವಾದಿಯ ಬಳಿ ತೆರಳುತ್ತಾರೆ. ಧರ್ಮ ಹಾಗೂ ಧರ್ಮದ ಪ್ರತಿನಿಧಿಯೆನಿಸಿದ ಪುರೋಹಿತ ಎಲ್ಲರ ಶ್ರೇಯಸ್ಸಿಗಾಗಿ, ಸುಖಕ್ಕಾಗಿ ಪ್ರಾರ್ಥಿಸಿದರೆ, ಮಾಟ - ಮಂತ್ರಗಳ ಪ್ರತಿನಿಧಿಯೆನಿಸಿದ ಮಂತ್ರವಾದಿ, ತನಗೆ ಶರಣಾದವರ ರಕ್ಷಣೆಗಾಗಿ ಹಾಗೂ ಅದರ ವಿರುದ್ಧವಾದವರ ವಿನಾಶಕ್ಕಾಗಿ ಪ್ರಾರ್ಥಿಸುತ್ತಾನೆ. ಎರಡೂ, ಅಲೌಕಿಕ - ಅಗೋಚರ ಶಕ್ತಿಗಳಿಂದಲೇ ನಡೆಯುವಂತಹುದು ; ಅದರೂ ಅವುಗಳು ಬೀರುವ ಪರಿಣಾಮ ಮತ್ತು ಪ್ರಭಾವಗಳು ಬೇರೆ ಬೇರೆ. ಒಂದು ಲೋಕಕಲ್ಯಾಣಕ್ಕೆ ಶ್ರಮಿಸಿದರೆ, ಮತ್ತೊಂದು ಸ್ವಾರ್ಥಕಲ್ಯಾಣಕ್ಕೆ ಪಣತೊಡುತ್ತದೆ.

ಆದರೆ, ವ್ಯಾಪಕಾರ್ಥದಲ್ಲಿ ನೋಡುವಾಗ - ಎರಡರಲ್ಲಿಯೂ ಲೋಪದೋಷಗಳಿವೆ. ಮಂತ್ರವಿದ್ಯೆಯನ್ನು ಒಳ್ಳೆಯ ಕಾರ್ಯಕ್ಕೂ ಬಳಸಿಕೊಳ್ಳಬಹುದಾದರೂ, ಬಳಸುವವರು ಕಡಿಮೆ. ಮಾಟ - ಮಂತ್ರಗಳಿಗೆ ಜನ ಹೆಚ್ಚಾಗಿ ಹೆದರುವುದರಿಂದ, ಅದರತ್ತ ಹೋಗುವವರ ಸಂಖ್ಯೆಯೂ ಕಡಿಮೆ. ಹಾಗಾಗಿ ಶೀಘ್ರ ಗುರಿ ಸಾಧಿಸಬೇಕೆಂಬ ಮನೋವೃತ್ತಿಯವರು ಮಾತ್ರ ಅತ್ತ ಸುಳಿಯುತ್ತಾರೆ. ಧರ್ಮ - ನಿಜವಾದ ಅರ್ಥದಲ್ಲಿ ಎಷ್ಟು ಆಚರಣೆಯಾಗುತ್ತಿದೆ ? ಎಂಬುದನ್ನು ಗಮನಿಸಿದಾಗ, ಧರ್ಮದ ಹೆಸರಿನಲ್ಲಿಯೂ ಎಷ್ಟೊಂದು ಅಧರ್ಮ ನಡೆಯುತ್ತದೆ ? ಎಂಬುದು ವೇದ್ಯವಾಗುತ್ತದೆ. ಆದರೂ ನಿರಪಾಯಕಾರಿಯಾದ ಧರ್ಮವನ್ನು ಅವಲಂಬಿಸುವವರೇ ಹೆಚ್ಚು. ಮಂತ್ರದ ಕಾರ್ಯಾಚಾರಕನಾದ ಮಂತ್ರವಾದಿಗೂ, ಧರ್ಮದ ಕಾರ್ಯಾಚಾರಕನಾದ ಪುರೋಹಿತನಿಗೂ

ಸಮಾಜದಲ್ಲಿ ಇರುವ ಸ್ಥಾನಮಾನವನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಮಂತ್ರವಾದಿಗೆ ಹೆದರಿ ನಡೆಯುವಂತೆ ಜನ, ಪುರೋಹಿತರಿಗೆ ಹೆದರುವುದಿಲ್ಲ. ಆದರೆ, ಪುರೋಹಿತನ ಬಗೆಗೆ ಅವರಿಗಿರುವ ಗೌರವ ಭಾವನೆ ಮಂತ್ರವಾದಿಯ ಬಗೆಗೆ ಇರುವುದಿಲ್ಲ. ಕೆಲವು ಆದಿವಾಸಿಗಳಲ್ಲಿ ಪುರೋಹಿತರಾಗಿದ್ದುಕೊಂಡೂ ಮಂತ್ರವಾದಿಯ ಕೆಲಸ ನಿರ್ವಹಿಸಿದ ನಿದರ್ಶನಗಳು ಉಂಟು. ಸೈಬೀರಿಯಾದ ಆದಿವಾಸಿಗಳಲ್ಲಿ ಇಂತಹವರನ್ನು 'ಶಾಮನ್' ಎಂದು ಕರೆಯುತ್ತಾರೆ. ಎರಡೂ ಶಕ್ತಿಗಳನ್ನು ಮೈಗೂಡಿಸಿಕೊಂಡಿದ್ದ ಇವರಿಗೆ ಸಮಾಜದಲ್ಲಿ ಗೌರವದ ಸ್ಥಾನವಿತ್ತು. ಇವರಲ್ಲಿ ಕೆಲವರು ವೈದ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಈತ ದೇವರ ಅಥವಾ ಭೂತದ ನೆರವಿನಿಂದ ತನ್ನ ಬಳಿಗೆ ಬಂದವರ ಇಚ್ಛೆಯನ್ನು ಈಡೇರಿಸಲು ನೆರವಾಗುತ್ತಿದ್ದ. ಆದರೆ, ಅನೇಕ ಕಡೆ, ಮಾಂತ್ರಿಕನೆಂದರೆ ; ಕೆಡುಕು ಮಾಡುವವನು - ಎಂದೇ ಅಭಿಪ್ರಾಯವಿದೆ. ಅಮಾನುಷ ರೀತಿಯಲ್ಲಿ ತನಗಾಗದವನನ್ನು ನಿವಾರಿಸಿಕೊಳ್ಳುವುದಕ್ಕಷ್ಟೇ - ಮಂತ್ರ - ಮಾಟಗಳನ್ನು ಬಳಸಿಕೊಂಡವರ ಸಂಖ್ಯೆ ವಿರಳವೇನಲ್ಲ.

ಮಂತ್ರ - ಮಾಟ ಮುಂತಾದುವುಗಳಿಗೆಲ್ಲ ನಂಬಿಕೆಯೇ ಮೂಲ ಆಧಾರ. ಮಂತ್ರವಾದಿ ಯನ್ನು ನಂಬಿ ಒಬ್ಬ ವ್ಯಕ್ತಿ ತನ್ನ ಪರಿಸ್ಥಿತಿಯನ್ನು ಅವನಿಗೆ ವಿವರಿಸುತ್ತಾನೆ. ಅದಕ್ಕೆ ಪರಿಹಾರ ವನ್ನು ಬೇಡುತ್ತಾನೆ. ಮಂತ್ರವಾದಿಯ ಭರವಸೆಯ ಮೇಲೆ ಆ ವ್ಯಕ್ತಿ ನಿಶ್ಚಿಂತನಾಗಿರುತ್ತಾನೆ. ಅಮೆರಿಕೆಯ ಕ್ಯಾಲಿಫೋರ್ನಿಯಾದ ಬುಡಕಟ್ಟು ಜನಾಂಗದಲ್ಲಿ ಮಂತ್ರವಾದಿಗಳಿಗೆ ಹೆಚ್ಚಿನ ಗೌರವವಿರುವುದು ಈ ಕಾರಣಕ್ಕಾಗಿ - ಅವರು, ತಮ್ಮ ಮಂತ್ರಶಕ್ತಿಯಿಂದ ಸಮಾಜದ ಹಲವು ಅನಿಷ್ಟಗಳನ್ನು ಹೋಗಲಾಡಿಸಲು ಮುಂದಾಗುವುದು. ಸ್ವಾರ್ಥಕ್ಕಾಗಿ ಅದನ್ನು ಬಳಸಿಕೊಳ್ಳು ವವರೂ ಉಂಟು.

ಪ್ರಪಂಚದ ಅನೇಕ ಭಾಗಗಳಲ್ಲಿಯ ಜನರಂತೆಯೇ, ಕರ್ನಾಟಕದ ಅನೇಕ ಭಾಗಗಳಲ್ಲಿ ಇಂದಿಗೂ ಇಂತಹ ಮಾಟ - ಮಂತ್ರಗಳಿಗೆ ಬೆಲೆ ಕೊಡುವ ಜನರಿದ್ದಾರೆ. ಬೇರೆ ಬೇರೆ ಹಂತಗಳಲ್ಲಿ, ಬೇರೆ ಬೇರೆ ಕಾರಣಗಳಿಗಾಗಿ ಅವುಗಳನ್ನು ಆಚರಿಸುತ್ತಾರೆ. ಸುಲಭವಾಗಿ, ಬೇಗ ಪರಿಹಾರ ಕಾಣದ ವಿಷಯಗಳಲ್ಲಿ ಇಂತಹವುಗಳ ಮೊರೆ ಹೋಗುವುದು ಸಾಮಾನ್ಯ. ದೆವ್ವ ಪಿಶಾಚಿಗಳಿಗೆ ಹೆದರಿ ಅಥವಾ ಅವು ದೂರವಿರಲಿ ಎಂಬ ಕಾರಣಕ್ಕಾಗಿ ಮನೆಯ ಮುಂದಿನ ಬಾಗಿಲಿಗೆ ಮೂರು ನಾಮವನ್ನು ಬಳಿಯುವುದಾಗಲಿ, ತೆಂಗಿನ ಕಾಯನ್ನು ಮಂತ್ರಿಸಿ ಕಟ್ಟುವುದಾಗಲಿ ಅಥವಾ ಹಳೆಯ ಚಪ್ಪಲಿಗಳನ್ನು ಮನೆಯ ಹೊರಭಾಗದ ನಾಲ್ಕು ಮೂಲೆಗಳಿಗೂ ಕಟ್ಟುವುದಾಗಲಿ - ಹಳ್ಳಿಯ ಅನೇಕ ಮನೆಗಳಲ್ಲಿ ಕಂಡು ಬರುವ ದೃಶ್ಯ. ದೇವರ ಪೂಜಾರಿಗಳಲ್ಲಿಯೇ ಕೆಲವರು ಇದನ್ನು ಮಾಡಿಕೊಡುತ್ತಾರೆ. ಇಲ್ಲವೇ ಇದಕ್ಕಾಗಿಯೇ ಕೆಲವರಿರುವುದೂ ಉಂಟು. "ಹಣೆಗೆ ಎಂತಹದೋ ಕಪ್ಪು ಬೊಟ್ಟನ್ನಿಟ್ಟು ಹೆಂಗಸರನ್ನು ತಮ್ಮ ಹಿಂದೆಯೇ ಬರುವಂತೆ ಮಾಡುತ್ತಾರೆ" ಎಂಬ ಸುದ್ದಿ ಹೊಸದೇನೂ ಅಲ್ಲ. ಇಂತಹದ್ದರ ಬಗೆಗೆ ಹುಟ್ಟಿ ಕೊಂಡಿರುವ ಕತೆಗಳೇ ಅಪರಿಮಿತವಾಗಿವೆ.

ಮಾಟ - ಮಂತ್ರ, ಧರ್ಮದಂತೆಯೇ ವಿಶ್ವದಾದ್ಯಂತವೂ ಕಂಡು ಬರುತ್ತದೆ. ಒಂದೊಂದು ಜನಾಂಗದಲ್ಲಿ, ಒಂದೊಂದು ಬಗೆಯಲ್ಲಿ ಅದರ ಆಚರಣೆ ಇರುವುದು ಗಮನಾರ್ಹ. ಒಂದು ಕಡೆ ಅದಕ್ಕೆ ಅತಿ ಹೆಚ್ಚಿನ ಮಾನ್ಯತೆ ಇದ್ದರೆ, ಇನ್ನೊಂದೆಡೆ ಅಷ್ಟೇ ನಿರ್ಲಕ್ಷ್ಯವೂ ಇದೆ. ಆದರೂ, ಮಂತ್ರವಿದ್ಯೆ ಎಲ್ಲರ ಸ್ವತ್ತಾಗಿ ಕಂಡು ಬರದಿದ್ದರೂ ; ಕೆಲವರ ಸ್ವತ್ತಾಗಿ, ಮತ್ತೆ ಕೆಲವರಿಗೆ ಕುತ್ತಾಗಿರುವುದು ಸಾಮಾನ್ಯ ಅಂಶ.

ವಿಶ್ವದಾದ್ಯಂತ ಕಂಡು ಬರುವ ಈ ಮಂತ್ರವಿದ್ಯೆಯ ಅಧ್ಯಯನದ ಆಧಾರದ ಮೇಲೆ, ಪ್ರಸಿದ್ಧ ಮಾನವಶಾಸ್ತ್ರಜ್ಞನಾದ ಫ್ರೇಜರ್ ಎರಡು ಸೂತ್ರಗಳನ್ನು ರೂಪಿಸಿದ್ದಾನೆ. ವಿಶ್ವದ ಎಲ್ಲ ಭಾಗದಲ್ಲಿಯೂ - ಎಲ್ಲ ಆದಿವಾಸಿ ಸಮಾಜದಲ್ಲಿಯೂ ಮಾಂತ್ರಿಕ ವಿದ್ಯೆ, ಈ ಎರಡು ಸೂತ್ರಗಳ ಆಧಾರದ ಮೇಲೆಯೇ ನಡೆಯುವಂತಹುದು ಎಂದು ಆತ ತೀರ್ಮಾನಿಸುತ್ತಾನೆ. ಅವನ ಸೂತ್ರಗಳು :

೧. ಕಾರಣದಂತೆ ಪರಿಣಾಮ (Like Produces like)

೨. ಒಮ್ಮೆ ತಟ್ಟಿದ ಸೋಂಕು ಬಿಟ್ಟೋಡದ ಸೋಂಕು.

(Once in contact always in contact)

ಮೊದಲನೆಯದನ್ನು 'ಸಾದೃಶ್ಯತೆಯ ನಿಯಮ' ಎಂದು ಕರೆಯಲಾಗಿದೆ. ಇದಕ್ಕೆ ಸಂಬಂಧಪಟ್ಟ ಮಂತ್ರವಿದ್ಯೆಯನ್ನು - 'ಅನುಕರಣ ಮಂತ್ರವಿದ್ಯೆ' ಎಂದೂ ಕರೆದಿದ್ದಾನೆ. ಇದು 'ಬಾಲನಾಗಮ್ಮನ ಕಥೆ'ಯಲ್ಲಿ ಬರುವ ಮಾಯಾಮರಾಟಿಯ ಪ್ರಸಂಗವನ್ನು ನೆನಪಿಗೆ ತರುವಂತಹುದು ; ಆ ಮಾಯಾಮರಾಟಿಯ ಜೀವ ಏಳು ಸಮುದ್ರದಾಚೆ ಇರುವ, ಯಾವುದೋ ಒಂದು ದೊಡ್ಡ ಮರದ ಮೇಲಿರುವ ಪಕ್ಷಿಯಲ್ಲಿದೆ ; ಆ ಪಕ್ಷಿಯ ಶರೀರದ ಒಂದೊಂದು ಭಾಗವನ್ನು ಊನವಾಗಿಸಿದಂತೆ, ಈ ಮಾಯಾಮರಾಟಿಯ ಶರೀರದ ಭಾಗಗಳೂ ಊನವಾಗುತ್ತವೆ. ಕೊನೆಗೆ ಆ ಪಕ್ಷಿಯ ಪ್ರಾಣದೊಂದಿಗೆ ಈತನ ಪ್ರಾಣವೂ ಹೋಗುತ್ತದೆ. ಇದು ಒಂದು ಕಾಲ್ಪನಿಕ ಕಥೆಯೆನಿಸಿದರೂ, ಸಾದೃಶ್ಯತೆಯ ಅಥವಾ ಅನುಕರಣೆಯ ಮಂತ್ರವಿದ್ಯೆಯಲ್ಲಿ ಇದರ ಕೆಲವೊಂದು ಅಂಶಗಳನ್ನು ಕಾಣುತ್ತೇವೆ. ತನಗಾಗದವನೊಬ್ಬನ ಮೇಲೆ ಸೇಡನ್ನು ತೀರಿಸಿಕೊಳ್ಳಲು ಮಂತ್ರವಾದಿಯ ಬಳಿ ಹೋದಾಗ, ಆ ಮಂತ್ರವಾದಿ ಸೇಡಿಗೊಳಗಾದ ವ್ಯಕ್ತಿಯನ್ನು ಹೋಲುವ ಗೊಂಬೆಯನ್ನು ಮರದಿಂದಲೋ, ಮಣ್ಣಿನಿಂದಲೋ ಅಥವಾ ಮತ್ತಾವುದೋ ವಸ್ತುವಿನಿಂದಲೋ ಮಾಡಿ ಅದಕ್ಕೆ ತನ್ನ ಮಂತ್ರಶಕ್ತಿಯಿಂದ ಜೀವಕಳೆ ಬರುವಂತೆ ಮಾಡುತ್ತಾನೆ. ನಂತರ ತನಗೆ ತೋರಿದ ರೀತಿಯಲ್ಲಿ ಆ ಮೂರ್ತಿಗೆ ಹಿಂಸೆ ಕೊಡಲು ಪ್ರಾರಂಭಿಸುತ್ತಾನೆ. ಅದರ ಕೈ ಕಾಲು ಮುರಿಯುವುದೋ, ಶರೀರದ ನಾನಾ ಭಾಗಗಳಿಗೆ ಮೊಳೆ ಚುಚ್ಚುವುದೋ, ಇಲ್ಲ ಬೆಂಕಿಯಲ್ಲಿ ಸುಡುವುದೋ - ಹೀಗೆ ನಾನಾ ರೀತಿಯಲ್ಲಿ ಹಿಂಸಿಸುತ್ತಾರೆ. ಇದರ ಉದ್ದೇಶ, ಹೀಗೆ ಮಾಡುವುದರಿಂದ ಆ ಹಿಂಸೆಯೆಲ್ಲವೂ ಉದ್ದೇಶಿತ ವ್ಯಕ್ತಿಗೆ ತಾಗುತ್ತದೆ ಎಂಬುದು. ಅದರಿಂದ ಅವನು ನೋವನ್ನೋ ಅಥವಾ ಕೊನೆಗೆ ಸಾವನ್ನೋ ಅನುಭವಿಸುತ್ತಾನೆ. ಇದರಿಂದ, ದೂರದಲ್ಲಿಯೇ ನಿಂತು ಶತ್ರುನಾಶ ಮಾಡಿದಂತಾಗುತ್ತದೆ.

ಸಾದೃಶ್ಯತೆಯ ನಿಯಮದ ಮೇಲೆ ನಡೆಯುವ ಈ ಅನುಕರಣ ಮಂತ್ರ ವಿದ್ಯೆ, ಅನೇಕ ಸಂದರ್ಭದಲ್ಲಿ ಯಶಸ್ವಿಯಾದ ನಿದರ್ಶನಗಳೂ ಇವೆ. ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿರುವ ವಾಲ್ಟರ್ ಬಿ. ಕ್ಯಾನನ್ - ಇದರ ಯಶಸ್ಸಿಗೆ ಇರಬಹುದಾದ ಕಾರಣವನ್ನು ಗುರುತಿಸಿ, ನೀಡಿರುವ ವಿವರಣೆ ಸಮರ್ಪಕವಾಗಿರುವಂತೆ ತೋರುತ್ತದೆ. ಜನರಿಗೆ ಈ ಬಗೆಯ ಮಾಟ - ಮಂತ್ರಗಳ ಬಗೆಗೆ ಇರುವ ದೃಢವಾದ ನಂಬಿಕೆ ಹಾಗೂ ಅತಿಯಾದ ಭಯವೇ ಇದರ ಯಶಸ್ಸಿಗೆ ಕಾರಣ ಎಂಬುದು ಕ್ಯಾನನ್ನ ಅಭಿಪ್ರಾಯ. ತನ್ನ ಮೇಲೆ ಮಾಟ - ಮಂತ್ರದ ಪ್ರಯೋಗವಾಗಿರಬೇಕೆಂದು ಭ್ರಮಿಸಿ, ಭಯಪಟ್ಟ ವ್ಯಕ್ತಿ ಅದೇ ಗುಂಗಿನಲ್ಲಿ ಚಿಂತೆಗೆ ಒಳಗಾಗುತ್ತಾನೆ. ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು, ಆತ ಊಟ ತಿಂಡಿಗಳನ್ನು ತೊರೆದು ಕ್ಷೀಣಿಸತೊಡಗುತ್ತಾನೆ. ಅದೇ ಸ್ಥಿತಿ

ಮುಂದುವರೆದರೆ ಅದು ಆತನ ಸಾವಿಗೂ ಕಾರಣವಾಗಬಹುದು. ಕ್ಯಾನನ್ ಹೇಳುವ ಹಾಗೆ, ಮಾಟ - ಮಂತ್ರದ ಶಕ್ತಿಗಿಂತ ಅದರಿಂದ ಉಂಟಾದ ಭಯ ಆ ವ್ಯಕ್ತಿಯ ಅವಸಾನಕ್ಕೆ ಕಾರಣವಾಗಬಹುದು. ಸಾದೃಶ್ಯತೆಯ ಮೇಲಿನ ಈ ಅನುಕರಣ ಮಂತ್ರವಿದ್ಯೆಯನ್ನು ಶತ್ರುನಾಶಕ್ಕಷ್ಟೇ ಅಲ್ಲದೆ, ಕೆಲವು ಒಳ್ಳೆಯ ಕಾರ್ಯಗಳಿಗೂ ಬಳಸಿಕೊಂಡಿರುವ ಬಳಸಿಕೊಳ್ಳುವ ನಿದರ್ಶನಗಳೂ ಇವೆ. ಆದಿವಾಸಿಗಳು ತಮ್ಮ ಪರಿಸರದ ಸುತ್ತ ಮುತ್ತ ನಡೆಯುತ್ತಿದ್ದ ಘಟನೆಗಳ ಬಗೆಗೆ ಭಾವಿಸಿಕೊಂಡ ರೀತಿ, ಇಂತಹ ಚಟುವಟಿಕೆಗಳಿಗೆ ಮುಖ್ಯ ಕಾರಣ ಎನಿಸುತ್ತದೆ. ಮಳೆ ಬರುವುದು - ಮಳೆ ಬರುವುದಕ್ಕೆ ಮುನ್ನ ಗುಡುಗುವ ಗುಡುಗಿನ ಶಬ್ದವೇ ಕಾರಣ ಎಂದು ಭಾವಿಸಿ ; ಮಳೆ ಇಲ್ಲದಾಗ ಅಥವಾ ತಮಗೆ ಮಳೆ ಬೇಕೆನಿಸಿದಾಗ - ದೊಡ್ಡ ದೊಡ್ಡ ಬಂಡೆಗಳನ್ನು ಗುಡ್ಡದ ಮೇಲಿಂದ ಕೆಳಕ್ಕೆ ಉರುಳಿಸುವುದರ ಮೂಲಕ ಅಂತಹ ಶಬ್ದವನ್ನು ಉಂಟು ಮಾಡುತ್ತಿದ್ದರು. ಗುಡುಗಿನಂತಹ ಆ ಬಂಡೆಗಳ ಶಬ್ದಕ್ಕೆ ಮಳೆ ಬರುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು. ಛೋಟಾನಾಗಪುರದ ಆದಿವಾಸಿಗಳು ಹೀಗೆ ನಂಬಿದ್ದರು. ಕರ್ನಾಟಕದಲ್ಲಿ ಪ್ರಚಲಿತವಿರುವ 'ಕೊಂತಿಪೂಜೆ'ಯಾಗಲಿ ಅಥವಾ 'ಮಳೆದೇವರು' ಆಚರಣೆಗಳಾಗಲಿ ಇಂಥದೇ ಕಾರಣಕ್ಕಾಗಿ ಹುಟ್ಟಿಕೊಂಡುವುಗಳು. ಇದರಂತೆಯೇ, ಬೇಗ ಗರ್ಭಿಣಿಯರಾಗಲಿ ಎಂಬ ಕಾರಣದಿಂದ, ಮಕ್ಕಳಾಗದ ಹೆಂಗಸರಿಗೆ ಮಗುವನ್ನೇ ಹೋಲುವಂತಹ ಗೊಂಬೆಗಳನ್ನು ಮಾಡಿಕೊಡುವ ಪದ್ಧತಿ ಎಸ್ಕಿಮೋ ಜನರಲ್ಲಿ ಇತ್ತೆಂಬುದು ಗಮನಾರ್ಹ. ಅವರು ಇದನ್ನು ಮಾಟ - ಮಂತ್ರದ ಹೆಸರಿನಲ್ಲಿ ಕರೆದರೂ, ವಾಸ್ತವಿಕ ಸಂಗತಿಯೇ ಬೇರೆ. ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿ ಮುಖ್ಯವಾಗಿ ಇದನ್ನು ಗಮನಿಸಬೇಕಾಗುತ್ತದೆ. ಹೀಗೆ ಗೊಂಬೆಯನ್ನು ಬಂಜೆಯರಿಗೆ ಕೊಡುವುದರಿಂದ, ಅವರಲ್ಲಿ ಅದಮ್ಯವಾಗಿ ಅಡಗಿರುವ ತಾಯ್ತನದ ಹಂಬಲ ಉದ್ರೇಕಗೊಂಡು ಗರ್ಭಧಾರಣೆಗೆ ಕಾರಣವಾಗಬಹುದೆಂಬುದು. ಆದಿವಾಸಿಗಳಲ್ಲಿ ಕೆಲವರು ಮೀನಿನ ಬೇಟೆಗೆ ಹೋಗುವ ಮೊದಲು ಮೀನಿನ ಬಲೆಯನ್ನು ತಾವೇ ಸುತ್ತಿಕೊಂಡು ಹೊರಳಾಡುತ್ತಿದ್ದರು. ಇದರ ಉದ್ದೇಶವಾದರೂ, ಮೀನುಗಳು ಬಲೆಗೆ ಬೇಗ ಬೀಳಲಿ, ಬೇಟೆ ಯಶಸ್ವಿಯಾಗಲಿ ಎಂಬುದೇ ಆಗಿದೆ. ಇಂತಹ ಲೆಕ್ಕವಿಲ್ಲದಷ್ಟು ಆಚರಣೆಗಳು ವಿಚಿತ್ರ ರೀತಿಯಲ್ಲಿ ವಿಶ್ವದಾದ್ಯಂತವೂ ಇರುವುದನ್ನು ಕಾಣಬಹುದು.

ಇನ್ನು ಫ್ರೇಜರನ ಎರಡನೆಯ ಸೂತ್ರ ; "ಒಮ್ಮೆ ತಟ್ಟಿದ ಸೋಂಕು ಬಿಟ್ಟೋಡದ ಸೋಂಕು". ಇದನ್ನು 'ಸೋಂಕು ಮಂತ್ರವಿದ್ಯೆ' ಎಂದೇ ಕರೆದಿದ್ದಾನೆ. ಒಬ್ಬ ವ್ಯಕ್ತಿಗೆ ಸಂಬಂಧಿಸಿದ ಯಾವುದೋ ಒಂದು ವಸ್ತುವನ್ನು ಆಧರಿಸಿ ಆ ಮೂಲಕ ಅವನಿಗೆ ಕೆಡುಕನ್ನುಂಟು ಮಾಡುವುದು. ವಿಶೇಷವಾಗಿ - ಕೂದಲು, ಉಗುರು ಹಾಗೂ ತಾವು ಬಳಸುವ ಬಟ್ಟೆ ಬರೆಗಳ ಬಗೆಗೆ ಆದಿವಾಸಿಗಳು ತುಂಬ ಎಚ್ಚರಿಕೆಯಿಂದಿರುತ್ತಿದ್ದರು. ಅವುಗಳು ತಮಗಾಗದವರ ಕೈಗೆ ಸಿಕ್ಕಿದರೆ ಅವನ್ನು ಬಳಸಿಕೊಂಡು ತಮಗೆ ಕೆಡುಕನ್ನುಂಟು ಮಾಡಬಹುದೆಂಬ ಭಯವೇ ಇದಕ್ಕೆ ಮುಖ್ಯ ಕಾರಣವಾಗಿತ್ತು. ಹಾಗಾಗಿ ಅವುಗಳನ್ನು ಜೋಪಾನವಾಗಿ ಕಾಯ್ದುಕೊಳ್ಳುತ್ತಿದ್ದರು. ತಮ್ಮ ಕೂದಲು, ಉಗುರುಗಳನ್ನು ಕಾಣದಂತೆ ನೆಲದಲ್ಲಿ ಹೂಳುತ್ತಿದ್ದರು. ಆಸ್ಟ್ರೇಲಿಯಾದ ಗುಡ್ಡಗಾಡು ಜನರ ನಂಬಿಕೆಯಂತೆ, ತಮಗಾಗದ ಒಬ್ಬ ವ್ಯಕ್ತಿಯನ್ನು ಕುಂಟನನ್ನಾಗಿ ಮಾಡುವುದು ಬಹಳ ಸುಲಭ. ತಮಗಾಗದ ವ್ಯಕ್ತಿ ಓಡಾಡುವ ಜಾಗವನ್ನು ಗಮನಿಸಿ ಅವನ ಕಾಲ ಹೆಜ್ಜೆ ಗುರುತಿನಲ್ಲಿ ಗಾಜಿನ ಚೂರನ್ನೋ ಅಥವಾ ಹರಿತವಾದ ಮೂಳೆಯ ಚೂರುಗಳನ್ನೋ ಅವಿತಿಟ್ಟರೆ ಸಾಕು, ಅವನ ಕತೆ ಮುಗಿದಂತೆ. ಹಾಗಾಗಿ ಆದಿವಾಸಿಗಳು

ಒಬ್ಬರ ಬಟ್ಟೆಯನ್ನು ಮತ್ತೊಬ್ಬರು ಧರಿಸುವುದಿಲ್ಲ. ಸತ್ತಾಗ ಅವರವರ ಬಟ್ಟೆಯನ್ನು ಈ ಕಾರಣಕ್ಕಾಗಿಯೇ ಅವರವರ ಜೊತೆಯಲ್ಲಿಯೇ ಸುಟ್ಟು ಬಿಡುತ್ತಿದ್ದರು.

ಇಂದಿಗೂ, ಅತ್ಯಾಧುನಿಕರೆನಿಸಿಕೊಂಡವರಲ್ಲಿಯೂ ನಾವು ಕಾಣುವ - ದೃಷ್ಟಿ ನಿವಾಳಿಸುವುದೋ, ಹೊಟ್ಟೆಗೆ ಸಂಬಂಧಿಸಿದ ಯಾವುದೋ ಕಾಯಿಲೆಯನ್ನು ನಿವಾಳಿಸಿ ಮೂರು ದಾರಿ ಕೂಡಿದ ಕಡೆ ಅದನ್ನು ಹಾಕುವುದು - ಮುಂತಾದುವುಗಳೂ ಈ ವಲಯದಿಂದ ದೂರವಾದುವುಗಳಲ್ಲ. ಹಾಗೆ ದಾರಿಯಲ್ಲಿ ಹಾಕುವ ಉದ್ದೇಶ, ಕಾಣದೆ ಅದನ್ನು ದಾಟಿದವನಿಗೆ ಆ ಸೋಂಕು ತಟ್ಟಲಿ ಎಂಬುದು. ಆದರೆ ಕೆಲವೊಮ್ಮೆ, ಅದನ್ನು ದಾರಿಯಲ್ಲಿ ನೋಡಿದ ವ್ಯಕ್ತಿ ಮೂರು ಸಾರಿ ಅದರತ್ತ ಉಗಿದು ಮತ್ತೆ ಹಿಂತಿರುಗಿ ನೋಡದೆ ಹೋಗುವುದೂ - ಆ ಸೋಂಕು ತನಗೆ ತಟ್ಟದಿರಲಿ ಎಂಬ ಕಾರಣಕ್ಕಾಗಿ.

ಇವುಗಳಂತೆಯೇ ಕೆಲವು ನುಡಿಗಳು ಮಾಂತ್ರಿಕಶಕ್ತಿಯ ಮಹತ್ವವನ್ನು ಪಡೆದಿವೆ ಎಂದು ಭಾವಿಸಲಾಗಿದೆ. ಇವುಗಳನ್ನು ಮಾಂತ್ರಿಕ ನುಡಿಗಳು (Spells) ಎಂದು ಕರೆಯಲಾಗಿದೆ. ಇಂತಹ ನುಡಿಗಳು ಕೆಲವು ವ್ಯಕ್ತಿಗಳ ಬಾಯಿಂದ ಹೊರಬಿದ್ದಾಗ ಅವು ಪರಿಣಾಮಕಾರಿಯಾಗಿದ್ದು, ಪ್ರಭಾವ ಬೀರುತ್ತವೆ ಎಂಬ ನಂಬಿಕೆ ಪ್ರಬಲವಾಗಿದೆ. ಎಲ್ಲರ ಮನೆಯಲ್ಲಿಯೂ ಮಕ್ಕಳಿಗೆ ದೃಷ್ಟಿಯಾದಾಗ, ಸಾಮಾನ್ಯವಾಗಿ ಕಾಣುವ - ಕಡ್ಡಿ ನಿವಾಳಿಸುವಾಗ, ಉಪ್ಪು ಮೆಣಸಿನಕಾಯಿ ನಿವಾಳಿಸುವಾಗ ಜೊತೆಯಲ್ಲಿ ನುಡಿಯುವ ನುಡಿಗಳಂತೆಯೇ, ಕಾಯಿಲೆಗಳನ್ನು ಗುಣಪಡಿಸಲು, ಉಳುಕನ್ನು ತೆಗೆಯಲು ಹಾವು - ಚೇಳು ಕಚ್ಚಿದಾಗ ಅವುಗಳನ್ನು ನಿವಾರಿಸಲು ಮಾಂತ್ರಿಕ ನುಡಿಗಳನ್ನು ಪ್ರಯೋಗಿಸುತ್ತಾರೆ. ಈಗಲೂ ಹಾವು ಕಚ್ಚಿದವರನ್ನು ಕೇವಲ ಮಂತ್ರದಿಂದಲೇ ಬದುಕಿಸಲು ಸಾಧ್ಯ ಎಂಬ ನಂಬಿಕೆ ಹಲವರಲ್ಲಿದೆ. ಕರ್ನಾಟಕದಲ್ಲಷ್ಟೇ ಅಲ್ಲ, ಭಾರತದ ಅನೇಕ ಭಾಗಗಳಲ್ಲಿ ಇಂತಹ ನಂಬಿಕೆ ಪ್ರಬಲವಾಗಿದೆ. ಚನ್ನಪಟ್ಟಣ ತಾಲ್ಲೂಕಿನ ತಿಮ್ಮಸಂದ್ರದಲ್ಲಿರುವ ಮನೆತನವೊಂದು - ಹಾವು ಚೇಳು ಕಚ್ಚಿದ್ದಕ್ಕೆ, ಕೇವಲ ಮಂತ್ರದಿಂದಲೇ ಗುಣಪಡಿಸುವುದರಲ್ಲಿ ಹೆಸರಾಗಿದೆ. ಇಂದಿಗೂ ಜನ ಅಲ್ಲಿಗೆ ಬರುತ್ತಾರೆ. ಅಷ್ಟೇ ಅಲ್ಲ, ಸಿಡಿಲು ಬಡಿಯುವ ಸಂದರ್ಭದಲ್ಲಿ ಅರ್ಜುನನ ದಶನಾಮಗಳನ್ನು ಜಪಿಸಿದರೆ ಯಾವ ತೊಂದರೆಯೂ ಆಗುವುದಿಲ್ಲ ಎಂಬ ನಂಬಿಕೆಯೂ ರೂಢಿಯಲ್ಲಿದೆ. ಸೂತ್ರಪ್ರಾಯವಾದ ಕೆಲವು ಮಾಂತ್ರಿಕ ನುಡಿಗಳು ಉತ್ತಮ ಔಷಧಕ್ಕಿಂತಲೂ ಪರಿಣಾಮಕಾರಿಯಾದುದು ಎಂಬ ನಂಬಿಕೆ ಹಲವರಲ್ಲಿದೆ. ಉತ್ತರ ಅಮೇರಿಕೆಯ ಮೂಲನಿವಾಸಿಗಳಲ್ಲಿ ಮಾಂತ್ರಿಕ ನುಡಿಗಳ ಬಗೆಗೆ ಅತಿಯಾದ ನಂಬಿಕೆಯಿದ್ದುದು ತಿಳಿಯುತ್ತದೆ. ಒಂದು ನಿರ್ದಿಷ್ಟ ಮನೆತನಕ್ಕೆ ಸೇರಿದ ಜನ ಮಾತ್ರ ಅಂತಹ ಮಾಂತ್ರಿಕ ನುಡಿಗಳನ್ನು ವಂಶದ ಆಸ್ತಿಯಾಗಿ ಕಾಯ್ದುಕೊಂಡು ಬರುತ್ತಿದ್ದರು. ಬೇರೆಯವರು ಕಲಿತು ಉಚ್ಚರಿಸಿದರೂ ಅದು ಪ್ರಭಾವ ಬೀರುವುದಿಲ್ಲ ಎಂಬ ನಂಬಿಕೆಯೂ ಇತ್ತು. ಹಾಗಾಗಿ ಕೆಲವರ ಬಾಯಲ್ಲಿ ಮಾತ್ರ ಅವು ಶಕ್ತಿಯುತವಾಗಿ, ಪರಿಣಾಮಕಾರಿಯಾಗಿ ಪ್ರಯೋಗವಾಗುತ್ತಿದ್ದುವು. ಮುಖ್ಯವಾಗಿ, ಕಾಯಿಲೆ ಮತ್ತು ಅನಿಷ್ಟಗಳ ನಿವಾರಣೆಗೆ ಈ 'ಮಾಂತ್ರಿಕ ನುಡಿ'ಗಳ ಬಳಕೆಯನ್ನು ನೋಡುತ್ತೇವೆ.

ಮಂತ್ರ - ಮಾಟಗಳಿಗೆ ಸಂಬಂಧಿಸಿದಂತೆ, ನಿರ್ದಿಷ್ಟವಾದ ಕೆಲವು ವಸ್ತುಗಳ ಬಳಕೆಯನ್ನು ನೋಡುತ್ತೇವೆ. ಅವುಗಳಲ್ಲಿ ವಿಶೇಷವಾದ ಶಕ್ತಿ ಇದೆ ಎಂಬುದೇ ಇದಕ್ಕೆ ಮುಖ್ಯ ಕಾರಣ. ಈ ವಸ್ತುಗಳನ್ನು ಆರಾಧಿಸುವುದಷ್ಟೇ ಅಲ್ಲದೆ, ಮೈ ಮೇಲೆಯೂ ಧರಿಸುತ್ತಾರೆ. ಇಂತಹ ಮಾಂತ್ರಿಕ ವಸ್ತುಗಳಿಗೆ ಮಾಂತ್ರಿಕ ಆಚರಣೆಯ ಸಂದರ್ಭದಲ್ಲಿ ವಿಶೇಷವಾದ ಪೂಜೆ ಸಲ್ಲುತ್ತದೆ. ತಲೆಬುರುಡೆ,

ಮಂತ್ರದಂಡ ಮುಂತಾದುವುಗಳಿಗೆ ಅತಿಶಯವಾದ ಶಕ್ತಿ ಇದೆ ಎಂದೇ ಅವರ ಭಾವನೆ. ತಾವು ನಡೆಸುವ ಮಾಂತ್ರಿಕ ಆಚರಣೆಗಳೆಲ್ಲವೂ ಅಂತಹ ವಸ್ತುಗಳ ಮೂಲಕವೇ ಪರಿಣಾಮಕಾರಿಯಾಗಿ ಪ್ರಯೋಗವಾಗುತ್ತವೆ ಎಂದೇ ಅವರು ನಂಬುತ್ತಾರೆ. ಮತ್ತೆ ಕೆಲವು ವಸ್ತುಗಳನ್ನು ತಮ್ಮ ಶರೀರದ ಮೇಲೆಯೇ ಧರಿಸುತ್ತಿದ್ದರು. ಇದರಿಂದ ದೆವ್ವ ಭೂತಗಳ ಕಾಟವಿರುವುದಿಲ್ಲ - ಎಲ್ಲ ಅನಿಷ್ಟಗಳೂ ತಾವಾಗಿಯೇ ದೂರವಾಗುತ್ತವೆ ಎಂಬ ವಿಶ್ವಾಸ ಇಂದಿಗೂ ಅನೇಕ ಜನರಲ್ಲಿಯೂ ಉಳಿದಿರುವುದು ಗಮನಾರ್ಹ. ಸ್ವತಃ ಮಂತ್ರವಾದಿಗಳೇ ಕೊರಳಿಗೆ, ತೋಳಿಗೆ ಇಂತಹ ತಾಯಿತಗಳನ್ನು ಕಟ್ಟಿಕೊಳ್ಳುವುದುಂಟು. ಮನೆಯ ಬಾಗಿಲಿಗೆ ತೆಂಗಿನ ಕಾಯನ್ನು ಮಂತ್ರಿಸಿ ಕಟ್ಟುವುದು, ಹಳ್ಳಿಯ ಮನೆಗಳಲ್ಲಿ ಕೆಲವರು ಹಳೆಯ ಚಪ್ಪಲಿಗಳನ್ನು ಮನೆಯ ಹೊರಭಾಗದಲ್ಲಿ ನಾಲ್ಕು ಮೂಲೆಗಳಿಗೂ ನೇತು ಬಿಡುವುದು - ಇವೆಲ್ಲ ಇಂತಹ ನಂಬಿಕೆಯ ಹಿನ್ನೆಲೆಯಲ್ಲಿಯೇ ಕಾಣಿಸಿಕೊಂಡವುಗಳು.

ಈ ಮಾಟ - ಮಂತ್ರಗಳು ಸಮಾಜದಲ್ಲಿ ಅಂದಿನಿಂದ ಇಂದಿನವರೆವಿಗೂ ವಿವಿಧ ಸ್ತರಗಳಲ್ಲಿ, ವಿವಿಧ ಪ್ರಮಾಣದಲ್ಲಿ ಉಳಿದುಕೊಂಡೇ ಬಂದಿವೆ. ಅನೇಕ ಸಂದರ್ಭದಲ್ಲಿ ಒಳ್ಳೆಯದನ್ನು ಮಾಡಿರುವಂತೆಯೇ ಕೆಟ್ಟದ್ದನ್ನೂ ಮಾಡಿದೆ. ಕೆಲವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿರುವಂತೆಯೇ ಮತ್ತೆ ಕೆಲವರಲ್ಲಿ ಭಯವನ್ನೂ ಅಂಜಿಕೆಯನ್ನೂ ಉಂಟು ಮಾಡಿವೆ. ಹೀಗಾಗಿ, ಸಾಧುವಾದ ಧರ್ಮಕ್ಕೆ ಅಳುಕದ ಜನ, ಅಸಾಧುವೆನಿಸಿದ ಮಂತ್ರವಿದ್ಯೆಗೆ ಇಂದಿಗೂ ಅಳುಕಿ ನಡೆಯುವುದನ್ನು ಕಾಣಬಹುದು. ಅಜ್ಞಾನ - ಅಂಧಕಾರದಲ್ಲಿ ತೊಳಲಾಡುತ್ತಿದ್ದ ಆದಿವಾಸಿಗಳಲ್ಲಿದ್ದಷ್ಟು ಪ್ರಮಾಣದಲ್ಲಿ ಇಂದು ಮಂತ್ರ ವಿದ್ಯೆಯ ಪ್ರಾಬಲ್ಯವನ್ನು ಕಾಣದಿದ್ದರೂ, ಅದು ಸಂಪೂರ್ಣವಾಗಿ ಮಾಯವಾಗಿಲ್ಲ ಎಂಬುದಂತೂ ನಿಶ್ಚಿತ. ಈ ನಿಟ್ಟಿನಲ್ಲಿ ಕ್ರೋಬರ್, ಮಂತ್ರ ಮಾಟಗಳನ್ನು ಕುರಿತು ಹೇಳಿರುವ ಮಾತು ಗಮನಾರ್ಹ : ಒಂದು ಸಮಾಜ ಈ ಬಗೆಯ ಮಂತ್ರ - ಮಾಟಗಳಿಗೆ ಎಷ್ಟೆಷ್ಟು ಶ್ರದ್ಧೆ ಆಸಕ್ತಿಗಳನ್ನು ತೋರುತ್ತದೋ ಅದು ಅಷ್ಟಷ್ಟೂ ಹಿಂದಾಗಿರುತ್ತದೆಯೆಂದೂ ; ಅದು ಅವುಗಳಿಂದ ದೂರವಾದಷ್ಟೂ ಆಧುನಿಕವಾಗಿ ಮುಂದುವರಿಯಲು ಸಾಧ್ಯವಾಗುತ್ತದೆ ಎಂದೂ ಭಾವಿಸುತ್ತಾನೆ. ಅಜ್ಞಾನ ಹೆಚ್ಚಿದಷ್ಟೂ ಮನುಷ್ಯ ಮೂಢ ನಂಬಿಕೆಗಳಿಗೆ ಒಳಗಾಗುತ್ತಾನೆ - ಎಂದು ಭಾವಿಸಿದರೂ, ರಕ್ತಗತವಾಗಿ, ಪರಂಪರಾಗತವಾಗಿ ಬಂದ ಕೆಲವು ಅಂಶಗಳು ನಾಗರಿಕ ಸಮಾಜದಲ್ಲಿಯೂ ಕಂಡು ಬರುವುದನ್ನು ನೋಡಿದಾಗ - ನಾವಿನ್ನೂ ಅಜ್ಞಾನದಿಂದ ಸಂಪೂರ್ಣವಾಗಿ ಮುಕ್ತರಾಗಿಲ್ಲ ಎಂಬುದು ವೇದ್ಯವಾಗುತ್ತದೆ. ಆದರೂ, ಮಾಟ - ಮಂತ್ರಗಳ ಬಗೆಗೆ, ಮಂತ್ರವಾದಿಗಳ ಬಗೆಗೆ ಹಿಂದೆ ಇದ್ದ ಭಯ - ಭೀತಿಯ ವಾತಾವರಣ ಇಂದು ಇಲ್ಲವಾಗಿದೆ ಎಂಬುದು ಸಮಾಧಾನಕರ ವಿಷಯ ಅಷ್ಟೆ.

* * * *

ಇವುಗಳಂತೆಯೇ ಮೋಡಿ ಕೂಡ ಒಂದು ಕಾಲಕ್ಕೆ ಭಯವನ್ನು ಹುಟ್ಟಿಸುವ ಇದೇ ರೀತಿ - ನೀತಿಯ ಒಂದು ಪ್ರಕಾರವಾಗಿತ್ತು. ಆದರೆ, ಇಂದು ಅದು ಒಂದು ಮನರಂಜನೆಯ ಕಲೆಯಾಗಿ ಸ್ಥಾನ ಪಡೆದಿದೆ. ನೋಡುವವರ ಮೈ ನಡುಗಿಸುವ, ಭಯದ ವಾತಾವರಣದಲ್ಲಿಯೇ ಚಮತ್ಕಾರ ಪ್ರಧಾನವಾದ ಪ್ರದರ್ಶನ ನೀಡುವ ಈ ಪ್ರಕಾರ ಇಂದು ಒಂದು ಕಲೆಯ ಸ್ಥಾನವನ್ನು ಪಡೆದುಕೊಂಡಿದೆ. ಮೋಡಿ ಹಾಕಿ ಮರುಳು ಮಾಡುವುದು ಒಂದು ವಿದ್ಯೆ. ವಿಶಿಷ್ಟ ಬಗೆಯ ಒಂದು ಕಲೆ ಕೂಡ. ನೋಡುವವರ ಕಣ್ಣಿಗೆ ಅದೆಲ್ಲವೂ ನಿಜವಾಗಿಯೇ, ಕಣ್ಣೆದುರಿಗೆ ನಡೆಯುತ್ತಿರುವಂತೆಯೇ ತೋರುತ್ತದೆ. ಕತ್ತಿಯಿಂದ ಕಡಿದುಕೊಳ್ಳುವುದು, ಬೆಂಕಿಯ ನಡುವೆ ಸಿಕ್ಕಿ ನರಳಾಡುವುದು, ಹಾವು ಚೇಳುಗಳ ಕಡಿತಕ್ಕೆ ಒಳಗಾಗುವುದು, ಯಾವುದೋ

ಅಲೌಕಿಕ ಶಕ್ತಿಯ ಕೈಗೆ ಸಿಕ್ಕಿದಂತೆ ಒದ್ದಾಡುವುದು, ರಕ್ತ ಕಾರುವುದು ಇನ್ನೂ ಮುಂತಾಗಿ - ಇವೆಲ್ಲಾ ಮೋಡಿಯಲ್ಲಿ ಸಾಮಾನ್ಯ. ಇದರಂತೆಯೇ ಅವುಗಳಿಂದ ಪಾರಾಗಲು ಪ್ರತಿ ಮೋಡಿಯನ್ನು ಹಾಕುವುದೂ, ಆ ಮೂಲಕ ತನ್ನ ಚಮತ್ಕಾರವನ್ನೂ, ಶಕ್ತಿಯನ್ನೂ ತೋರುವುದು ಇದರಲ್ಲಿ ಸಾಮಾನ್ಯ.

ಪಕ್ಷ ಮತ್ತು ಪ್ರತಿಪಕ್ಷಗಳ ನಡುವೆ ನಡೆಯುವ ಈ ಚಮತ್ಕಾರ ವಿದ್ಯೆ ರೋಮಾಂಚನ ವನ್ನುಂಟು ಮಾಡುವುದಷ್ಟೇ ಅಲ್ಲದೆ, ನಮ್ಮ ಕುತೂಹಲವನ್ನೂ ಕೆರಳಿಸುತ್ತದೆ. ಮಾಟ - ಮಂತ್ರಗಳಿಗೆ ಹೆದರುತ್ತಿದ್ದಂತೆಯೇ ಜನ ಈ ಮೋಡಿಗೆ ಹೆದರುತ್ತಿದ್ದರು. ಮಾಂತ್ರಿಕನಂತೆಯೇ ಈ ಮೋಡಿಕಾರನೂ ಅಲೌಕಿಕ ಶಕ್ತಿಗಳ ಸಿದ್ಧಿಯನ್ನು ಪಡೆದವನೆಂದು ಭಾವಿಸಿದ್ದರು. ಅಂತಹ ಪ್ರದರ್ಶನಗಳನ್ನು ನೋಡುವಾಗ ಜೀವವನ್ನು ಕೈಯಲ್ಲಿ ಹಿಡಿದು ನೋಡುತ್ತಿದ್ದರು. ಅಷ್ಟೊಂದು ಅದ್ಭುತ ಚಮತ್ಕಾರ ಹಾಗೂ ವೈಶಿಷ್ಟ್ಯ ಈ ಮೋಡಿಯದು.

ಮೋಡಿಯಲ್ಲಿ ಪ್ರಮುಖವಾಗಿ ಎರಡು ವಿಧ - 'ರಾಜಮೋಡಿ' ಮತ್ತು 'ರಣಮೋಡಿ'. ಇವುಗಳಲ್ಲಿ 'ರಾಜಮೋಡಿ' ಮನರಂಜನೆಗಷ್ಟೇ ಸೀಮಿತವಾದುದು. ತನ್ನ ಬಗೆಬಗೆಯ ಚಮತ್ಕಾರಗಳಿಂದ ಜನರನ್ನು ರಂಜಿಸುವುದು ಇದರ ವಿಶೇಷ. ಕೆಲವು ಅಪಾಯದ ಸನ್ನಿವೇಶಗಳಂತೆ ಕಂಡರೂ, ಅಪಾಯ ತಗ್ಗಲುವುದಿಲ್ಲ. ಆದರೆ, 'ರಣಮೋಡಿ'ಯ ಮಹತ್ವವೇ ಬೇರೆ. ಇದು, ಎದುರಾಳಿಗಳನ್ನು ಗೆಲ್ಲಲು ಬಳಸುವ ವಿದ್ಯೆ. ಎದುರಾಳಿಯ ತಂತ್ರದಿಂದ ಪಾರಾಗಲು ಹಾಗೂ ಎದುರಾಳಿಯನ್ನು ಗೆಲ್ಲಲು ಇದನ್ನು ಬಳಸಲಾಗುತ್ತದೆ. ಇದರಲ್ಲಿ ಪ್ರಾಣಾಪಾಯ ಸಂಭವಿಸಿದರೂ ಸಂಭವಿಸಬಹುದು. ಎದುರಾಳಿ ಹಾಕಿದ ಮೋಡಿಯಿಂದ ಪಾರಾಗಲಾರದೆ ಪ್ರಾಣ ಕಳೆದುಕೊಂಡ ಘಟನೆಗಳ ಕತೆಗಳಿಗೂ ಕಡಿಮೆಯಿಲ್ಲ.

ಮೋಡಿ ವಿದ್ಯೆಯಲ್ಲಿ ಪರಿಣತಿ ಪಡೆದವರಲ್ಲಿ ಗೊಲ್ಲರು ಪ್ರಧಾನವಾಗಿ ಕಂಡು ಬರುತ್ತಾರೆ. ಈ ವಿದ್ಯೆ ಕಂಚಿಗೊಲ್ಲರು ಮತ್ತು ಪೆದ್ದಟ್ಟಿಗೊಲ್ಲರಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಹರಿಜನರಲ್ಲಿಯೂ ಸ್ವಲ್ಪಮಟ್ಟಿಗೆ ಇದು ಕಂಡುಬರುತ್ತದೆ. ಅವರುಗಳ ಪ್ರಕಾರ ಈ ಒಂದು ಅದ್ಭುತ ವಿದ್ಯೆ ವಂಶಪಾರಂಪರ್ಯವಾಗಿ ಬಂದದ್ದಾದರೂ, ವ್ಯಕ್ತಿಯ ಸತತ ಪ್ರಯತ್ನ, ಶ್ರದ್ಧೆ ಹಾಗೂ ಶ್ರಮವೂ ಅಗತ್ಯವಾಗಿ ಬೇಕು ಎಂಬುದು. ಮಾಟ - ಮಂತ್ರಗಳ ಮಂತ್ರವಾದಿಗಳಂತೆಯೇ ಈ ಮೋಡಿಕಾರರೂ ಅಮಾವಾಸ್ಯೆಯ ಮಧ್ಯರಾತ್ರಿಯಲ್ಲಿ ಸ್ಮಶಾನದಲ್ಲಿ ಅನೇಕ ವರ್ಷಗಳ ಕಾಲ ಕಠಿಣವಾದ ಆಚರಣೆಗಳನ್ನು ಆಚರಿಸಬೇಕಾಗುತ್ತದೆ. ಸೂರ್ಯ - ಚಂದ್ರ ಗ್ರಹಣಗಳ ದಿನಗಳು ಇವರಿಗೆ ಪ್ರಶಸ್ತವಾದುವು. ಇಂತಹ ದಿನಗಳಲ್ಲಿಯೇ ಮೋಡಿ ವಿದ್ಯೆ ಕೈಗೂಡುವುದು - ಎಂಬುದು ಅವರ ಭಾವನೆ. ದೈವದತ್ತವಾಗಿ ಬಂದ ವಿದ್ಯೆ ಇದೆಂದು ಭಾವಿಸುವವರೂ ಉಂಟು.

ಮೋಡಿ ಒಂದು ಕಲೆಯೂ ಹೌದು, ಅದ್ಭುತ ಚಮತ್ಕಾರಯುಕ್ತವಾದ ವಿದ್ಯೆಯೂ ಹೌದು. ಹಿಂದಿನಷ್ಟು ಪ್ರಾಮುಖ್ಯತೆ ಇಂದು ಇವರಿಗಿಲ್ಲವಾದರೂ, ಅಲ್ಲಲ್ಲಿ ಅಪರೂಪವಾಗಿ ಕಂಡು ಬರುತ್ತಾರೆ. ಅವರ ಹೆಮ್ಮೆಯ ಈ ಒಂದು ಕಲೆ, ಇಂದು ಕೇವಲ ಹೊಟ್ಟೆಪಾಡಿನ ಒಂದು ಸಾಧನವಾಗಿ ಮಾತ್ರ ಉಳಿದಿದೆ. ಒಂದು ಕಾಲಕ್ಕೆ ರಾಜರ ಹಾಗೂ ಸರ್ಕಾರದ ಸಂಬಂಧವನ್ನು ಹೊಂದಿದ್ದ ಈ ಪ್ರದರ್ಶನಕಾರರು, ಇಂದು ಹೇಳಹೆಸರಿಲ್ಲದಂತಾಗುತ್ತಿದ್ದಾರೆ. ಮೋಡಿ ಪ್ರದರ್ಶನವನ್ನು ಏರ್ಪಡಿಸುವ ಪೂರ್ವಭಾವಿಯಾಗಿ ಅವರು ಸರ್ಕಾರದ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತಿತ್ತು ಎಂಬುದನ್ನು ಗಮನಿಸಿದಾಗ, ಅದರ ಮಹತ್ವ ಹಾಗೂ ವೈಶಿಷ್ಟ್ಯ ವೇದ್ಯವಾಗುತ್ತದೆ. ಇತರ ವೃತ್ತಿಗಾಯಕರಂತೆ,

ಈ ಮೋಡಿಕಾರರೂ ಮೋಡಿ ವಿದ್ಯೆಯನ್ನು ವೃತ್ತಿಯಾಗಿಸಿಕೊಂಡವರು. ಅದರಲ್ಲಿಯೇ ಬದುಕುತ್ತ ಬಂದವರು.

ಹಾವಾಡಿಗರು, ಇದೇ ಸಾಲಿನಲ್ಲಿ ಬರುವ ಮತ್ತೊಂದು ವರ್ಗ. ಹಾವುಗಳನ್ನು ಹಿಡಿದು ಆಡಿಸಿ ಜೀವನ ಸಾಗಿಸುವ ಕಲೆಯನ್ನು ಬಲ್ಲ ಇವರು ಮೋಡಿ ವಿದ್ಯೆಯನ್ನೂ ಸ್ವಲ್ಪ ಮಟ್ಟಿಗೆ ಬಲ್ಲವರು. ಇವರು ಕಂಚಿಗೊಲ್ಲರಷ್ಟು ಪರಿಣತರಲ್ಲದಿದ್ದರೂ, ತಮ್ಮದೇ ಆದ ರೀತಿಯಲ್ಲಿ ಜನರನ್ನು ರಂಜಿಸುವ, ಬೆರಗುಗೊಳಿಸುವಷ್ಟು ಪ್ರಮಾಣದ ಮೋಡಿ ತಂತ್ರವನ್ನು ಬಲ್ಲವರು. ಕೆಲವು ವಸ್ತುಗಳನ್ನು ಮಾಯವಾಗಿಸುವುದಾಗಲಿ, ಮಣ್ಣಿನಿಂದಲೋ ಅಥವಾ ಮತ್ತೊಂದರಿಂದಲೋ ಬೇರೊಂದು ಉತ್ತಮ ವಸ್ತುವನ್ನು ತೋರಿಸುವುದಾಗಲಿ, ಇಲ್ಲವೇ ಒಬ್ಬನನ್ನು ಸತ್ತವನಂತೆ ಮಲಗಿಸಿ ಅವನ ಮುಖದ ತುಂಬ ಬಟ್ಟೆ ಹೊದಿಸಿ, ಗುಂಪಿನ ಜನರನ್ನು ಆಶ್ಚರ್ಯಗೊಳಿಸುವಂತಹ ಪ್ರಶ್ನೆಗಳನ್ನು ಕೇಳುವುದಾಗಲಿ ಇಲ್ಲಿ ಸಾಮಾನ್ಯ. ಹಾವು ಕಚ್ಚಿದ್ದಕ್ಕೆ ತಾಯಿತವನ್ನು ಮಂತ್ರಿಸಿಕೊಡುವ ಮಂತ್ರವಿದ್ಯೆಯನ್ನೂ ಇವರು ಬಲ್ಲರು. ಹಾಗೆಯೇ ದೆವ್ವ ಪಿಶಾಚಿಗಳಿರುವೆಡೆಗಳಲ್ಲಿಯೂ ಧೈರ್ಯವಾಗಿ ಓಡಾಡುವಂತೆ ಧೈರ್ಯ ತುಂಬುವ ಯಂತ್ರತಂತ್ರಗಳನ್ನು ಈ ಹಾವಾಡಿಗರು ಮಾಡಿ, ಆ ಸ್ಥಳದಲ್ಲಿಯೇ ಹಣಕ್ಕೆ ಮಾರಾಟ ಮಾಡುತ್ತಾರೆ. ಇಂದಿಗೂ ಇದು ಸಾಮಾನ್ಯವಾದ ನೋಟ. ನಿಜವಾದ ಮೋಡಿಕಾರರು ಇಂದು ಕಣ್ಮರೆಯಾಗುತ್ತಿದ್ದರೂ, ಇಂತಹ ಹಾವಾಡಿಗರನ್ನು - ಎಲ್ಲ ಸಂತೆಗಳಲ್ಲಿ, ಜಾತ್ರೆಗಳಲ್ಲಿ, ಹಳ್ಳಿಯ ಇತರ ಸ್ಥಳಗಳಲ್ಲಷ್ಟೇ ಅಲ್ಲದೆ ; ನಗರಗಳ ಬಸ್ ನಿಲ್ದಾಣ ಅಥವಾ ಜನ ಸೇರುವ ಪ್ರಮುಖ ಸ್ಥಳಗಳಲ್ಲಿ ಕಾಣಬಹುದು. ಇಲ್ಲಿ ಗಾಂಭೀರ್ಯ ಅಥವಾ ಭಯಕ್ಕಿಂತ, ತಮಾಷೆ ಹಾಗೂ ಮನರಂಜನೆಯ ದೃಷ್ಟಿ ಮುಖ್ಯವಾಗಿ ತೋರುತ್ತದೆ.

ಹಾವಾಡಿಸುವುದು ಹಾವಾಡಿಗರ ಮುಖ್ಯ ಕಸುಬಾದರೂ, ಈ ಬಗೆಯ ಮೋಡಿ ವಿದ್ಯೆಯನ್ನು - ಕೇವಲ ಜನರನ್ನು ಆಕರ್ಷಿಸಲು ಇವರು ಕಲಿತಿದ್ದಾರೆ ಅನಿಸುತ್ತದೆ. ಹಾಗಾಗಿ ಇವರಿಗೆ ಅದೊಂದು ತಮಾಷೆ ತೋರುವ ಸಾಧನ ಅಷ್ಟೆ.

ಮಾಟ - ಮಂತ್ರ - ಮೋಡಿ - ಇವುಗಳು ಸಮಾಜದಲ್ಲಿ ಧರ್ಮದ ಸಮ ಸಮಕ್ಕಲ್ಲದಿದ್ದರೂ, ಬೇರೊಂದು ರೀತಿಯಲ್ಲಿ ಅವರನ್ನು ಹದ್ದುಬಸ್ತಿನಲ್ಲಿಡುವ ಕಾರ್ಯವನ್ನು ಸಾಧಿಸಿಕೊಂಡು ಬಂದಿವೆ. ಧರ್ಮ ಸಾತ್ವಿಕ ರೀತಿಯಲ್ಲಿ ಅದನ್ನು ಸಾಧಿಸಿದರೆ, ಇವುಗಳು ಭಯ, ಕುತೂಹಲಗಳ ಸಂಗಮದಲ್ಲಿ ಮಾನವನನ್ನು ನಡೆಸಿಕೊಂಡು ಬಂದಿವೆ. ಆದರೂ, ಧರ್ಮಕ್ಕಿರುವ ವ್ಯಾಪಕತೆ ಇವುಗಳಿಗಿಲ್ಲ ಎಂಬುದೂ ಸ್ಪಷ್ಟ ಸಂಗತಿ. ಮಾಟ - ಮಂತ್ರ -ಮೋಡಿಗಳು ಕಾಲಕಾಲಕ್ಕೆ ಬೇರೆ ಬೇರೆ ಸ್ವರೂಪವನ್ನೂ, ಸ್ಥಾನಮಾನವನ್ನೂ ಪಡೆದುಕೊಂಡು ಬಂದಿರುವುದನ್ನು ಗಮನಿಸಿದಾಗ - ಧರ್ಮದ ನಿಚ್ಚಳ ಸ್ವರೂಪವೇನು ? ಎಂಬುದು ಮನದಟ್ಟಾಗುತ್ತದೆ ; ಹಾಗೂ ಅದು ಸಮಾಜದ ಮೇಲೆ ಶಾಶ್ವತವಾಗಿ ಬೀರಿರುವ ಪ್ರಭಾವವೆಂತಹುದೆಂಬುದೂ ವ್ಯಕ್ತವಾಗುತ್ತದೆ.

* * * * *

ಗ್ರಾಮೀಣ ಜಾನಪದ

'ಗ್ರಾಮೀಣ ಜಾನಪದ' ಎನ್ನುವಾಗಲೇ - ಆ ಹೆಸರಿನಲ್ಲಿಯೇ ಒಂದು ಬಗೆಯ ಗೊಂದಲವಿರುವಂತೆ ತೋರುತ್ತದೆ. ಜಾನಪದ ಮೂಲತಃ, ದಟ್ಟವಾಗಿ ಕಂಡು ಬರುವುದೇ ಗ್ರಾಮಗಳಲ್ಲಿ. ಅದರ ಮೂಲ ನೆಲೆಯೇ ಆದಾದ್ದರಿಂದ, 'ನಗರ ಜಾನಪದ' ಎಂಬುದರಿಂದ ಇದನ್ನು ಪ್ರತ್ಯೇಕಿಸಿ ಹೇಳಲಷ್ಟೇ - 'ಗ್ರಾಮೀಣ ಜಾನಪದ' ಎಂಬುದನ್ನು ಬಳಸಬಹುದೆಂದು ತೋರುತ್ತದೆ.

ಜಾನಪದ, ಆದಿವಾಸಿ ಸಮಾಜದಿಂದ, ನಾಗರಿಕತೆಯ ತುತ್ತ ತುದಿ ಏರಿದ ಸಮಾಜದವರೆವಿಗೂ ತನ್ನ ಬಾಹುವನ್ನು ಚಾಚಿದೆ ಎನ್ನುತ್ತಾನೆ - ಎಂ. ಎಸ್ಪಿನೋಸ ಎಂಬ ವಿದ್ವಾಂಸ. ಆದರೆ, ಅದು ನಾಗರಿಕ ಅಥವಾ ಶಿಕ್ಷಿತ ಸಮಾಜದ ಕಡೆಗೆ ಸಾಗಿದಂತೆ ತನ್ನಲ್ಲಿಯ ಜಾನಪದ ಅಂಶಗಳನ್ನು ತೆಳುವಾಗಿಸಿಕೊಳ್ಳುತ್ತಾ ಹೋಗುತ್ತದೆ ಅಷ್ಟೆ.

ಸಂಸ್ಕೃತಿಯ ವಿಕಾಸವನ್ನು - ಆದಿವಾಸಿ, ಗ್ರಾಮೀಣ ಮತ್ತು ನಗರ ಸಂಸ್ಕೃತಿಗಳು ಎಂದು ಮೂರು ಸ್ತರಗಳಲ್ಲಿ ಗುರುತಿಸಬಹುದು. ವಿದ್ವಾಂಸರು ಮಾನವ ಸಂಸ್ಕೃತಿಯನ್ನು ಶುದ್ಧ ಜನಪದ ಸಂಸ್ಕೃತಿ (pure folkculture) ಮಧ್ಯಮ ಸಂಸ್ಕೃತಿ (Intermediate culture) ಪ್ರೌಢ ಸಂಸ್ಕೃತಿ (Learned culture) ಎಂದು ಗುರುತಿಸುತ್ತಾರೆ.

ಆದಿವಾಸಿ ಜಾನಪದದಲ್ಲಿ - ಎಲ್ಲವೂ ಪೂರ್ಣ ಜಾನಪದವೇ ಆಗಿರುತ್ತದೆ. ಅದು ಯಾವುದೊಂದರ ಪ್ರಭಾವಕ್ಕೂ ಒಳಗಾಗಿರದೆ, ತನ್ನ ಮೂಲ ಸ್ವರೂಪವನ್ನು ಸಂಪೂರ್ಣವಾಗಿ ಉಳಿಸಿಕೊಂಡು ಬಂದಿರುತ್ತದೆ. ಶುದ್ಧ ಜನಪದ ಸಂಸ್ಕೃತಿಯನ್ನು ಅಲ್ಲಿ ಕಾಣಬಹುದು. ಮಾನವನ ಉದಯದೊಡನೆಯೇ ಜಾನಪದದ ಉದಯವೂ ಆಯಿತಾದ್ದರಿಂದ, ಅದರ ಮೂಲ ರೂಪವನ್ನು ಅಲ್ಲಿಯೇ ಕಾಣಲು ಸಾಧ್ಯ. ಆರ್.ಎಸ್. ಬಾಗ್ಸ್ ಹೇಳುವ ಹಾಗೆ :

> Folklore lives its fullest, purest and most natural life, away from learned culture.[೧]

ಮಧ್ಯಮ ಮತ್ತು ಪ್ರೌಢ ಸಂಸ್ಕೃತಿಯಿಂದ ಸಂಪೂರ್ಣ ದೂರನಿಂತ ಆದಿವಾಸಿಗಳ ಬದುಕು, ಶುದ್ಧ ಜಾನಪದವೇ ಆಗಿರುತ್ತದೆ. ಶುದ್ಧ ಸಂಸ್ಕೃತಿ ಅಲ್ಲಿ ಎದ್ದು ಕಾಣುತ್ತದೆ. ಯಾವುದೇ ನಾಗರಿಕ ಪ್ರಭಾವಕ್ಕೆ ಒಳಗಾಗದ ಅವರಲ್ಲಿ ಅವರದ್ದೇ ಆದ ಸಾಂಪ್ರದಾಯಿಕ ಆಚರಣೆಗಳು, ಹಸಿಹಸಿಯಾಗಿ ಉಳಿದು ಬಂದಿರುತ್ತವೆ. ಅವರ ಎಲ್ಲ ವ್ಯವಹಾರಗಳಿಗೂ, ಸಮಸ್ಯೆಗಳಿಗೂ ಅವರಲ್ಲಿಯೇ ಉತ್ತರವಿರುತ್ತದೆ. ಅವರ ಎಲ್ಲ ಜ್ಞಾನದ ನಿಧಿಯೂ ಅದೇ ಆಗಿರುತ್ತದೆ. ಅವರು ಬಳಸುವ ವೈದ್ಯ, ಆಚರಿಸುವ ಆಚರಣೆಗಳು, ನಂಬಿಕೆ, ಇವೆಲ್ಲ ಅವರ ಬಾಳಿಗೆ ಅತ್ಯವಶ್ಯಕವಾದುವುಗಳೇ. ಅವರ

---

೧. **R.S. Boggs : SDLF- Vol I, P. ೬೯೧೦**

ಆಚಾರ ವಿಚಾರಗಳು, ಆಟ ಮುಂತಾದುವೆಲ್ಲ ಅವರ ಬದುಕಿನ ಚೌಕಟ್ಟನ್ನು ನಿರ್ಮಿಸಿದಂತೆಯೇ, ಅವರಿಗೆ ಮನರಂಜನೆಯನ್ನು ನೀಡುವ ಸಾಧನಗಳೂ ಹೌದು'.

ಅವರಿಗೆ ಅವರ ಜೀವನವೇ ವಿದ್ಯಾಕ್ಷೇತ್ರ. ಪ್ರಕೃತಿಯೇ ಗುರು. ಬದುಕಿನ ಏಳು ಬೀಳುಗಳಿಂದಲೇ ಕಲಿತ ಜೀವನದ ಪಾಠ, ಅವರದ್ದೇ ಆದ ಕೆಲವು ನಿಯಮಗಳನ್ನು ನಿರ್ಮಿಸಿಕೊಳ್ಳಲು ಕಾರಣವಾಗಿರುತ್ತವೆ. 'ದಕ್ಷಿಣ ಅಮೆರಿಕಾದ ಇಂಡಿಯನ್ನರ ಪಾಲಿಗೆ ಅಲ್ಲಿನ ಜನಪದ ಕತೆಗಳೇ ಸಕಲ ವಿದ್ಯೆಯ ಆಗರ. ಆಫ್ರಿಕೆಯ ಗಾದೆಗಳಲ್ಲಿ ನ್ಯಾಯ, ನೀತಿ, ಧರ್ಮಗಳೆಲ್ಲ ಸಮಾವೇಶಗೊಳ್ಳುತ್ತವೆ. ನ್ಯಾಯ ತೀರ್ಮಾನಕ್ಕೂ ಗಾದೆಗಳನ್ನೇ ಸಂಪೂರ್ಣವಾಗಿ ಅವಲಂಬಿಸುತ್ತಾರೆ. ಕರ್ನಾಟಕದ ಕಾಡುಗೊಲ್ಲರಿಗೆ ಮತಸಂಬಂಧವಾದ ಆಚಾರ ವಿಚಾರಗಳನ್ನು ಕೆಲವು ಲಾವಣಿಗಳೇ ಸಿದ್ಧಪಡಿಸುತ್ತವೆ.'[೨] ಹಾಗೆಯೇ ಸೋಲಿಗರು, ಜೇನುಕುರುಬರು, ಕಾಡುಕುರುಬರಲ್ಲಿಯೂ ಕಾಣಬಹುದು.

ಸಾಂಪ್ರದಾಯಿಕವಾಗಿ, ಪರಂಪರಾನುಗತವಾಗಿ ಬೆಳೆದು ಬಂದ ಸಂಸ್ಕೃತಿಯನ್ನು ಅವರು ಉಳಿಸಿಕೊಂಡು ಬಂದಿದ್ದಾರೆ. ಆ ಒಂದು ಚೌಕಟ್ಟಿನಲ್ಲಿಯೇ ಅದು, ವ್ಯತ್ಯಾಸಗೊಂಡಿರಬಹುದಾದರೂ, ಬೇರೊಂದು ಸಂಸ್ಕೃತಿಯ ಪ್ರಭಾವದಿಂದ ಅದು ವ್ಯತ್ಯಾಸಗೊಂಡಿತೆಂದು ಹೇಳಲಾಗುವುದಿಲ್ಲ.

ಆದಿವಾಸಿ ಸಂಸ್ಕೃತಿಯಲ್ಲಿ ಪರಂಪರೆಯ ನಿಚ್ಚಳವಾದ ಬಿಗುವನ್ನು ಕಾಣುತ್ತೇವೆ. ಅದು ಹಾಗೆಯೇ ವ್ಯಕ್ತಿಯಿಂದ ವ್ಯಕ್ತಿಗೆ ಹರಿದು ಬರುತ್ತದೆ. ನಾಗರಿಕತೆ ಮತ್ತು ಅಕ್ಷರ ಜ್ಞಾನದಿಂದ ದೂರವಾಗಿರುವವರೆಗೂ ಅದು ಹಾಗೆಯೇ ಉಳಿದು ಬರುತ್ತದೆ.

ಶುದ್ಧ ಸಂಸ್ಕೃತಿ ಉಳಿದು ಬರುವುದಕ್ಕೆ, ತನ್ನದೇ ಆದ ವಿಶಿಷ್ಟ ವಾತಾವರಣ, ಪರಿಸರ ಬೇಕಾಗುತ್ತದೆ. ಇಲ್ಲವಾದರೆ ಅದು ಬತ್ತಿ ಹೋಗುತ್ತದೆ. ಬಾಗ್ಸ್‌ನ ಹೇಳಿಕೆ ಇಲ್ಲಿ ಗಮನಾರ್ಹ:

> Folklore materials Thrive in a society in which there are people of considerable native intelligence, artistic apprecia-tion memory imagination and creative urge. Who can com-prehend, value, remember and recreate their native folklore and thus propogate it as a living tradition.[೩]

ಆದಿವಾಸಿ ಜಾನಪದದಲ್ಲಿ ಅದರ ಸಂಪೂರ್ಣ ಸ್ವರೂಪವನ್ನು ಸತ್ವವನ್ನು ಕಂಡರೆ; 'ಗ್ರಾಮೀಣ ಜಾನಪದ'ದಲ್ಲಿ ಅದು ಸ್ವಲ್ಪ ಬದಲಾವಣೆಯ ಹಾದಿ ಹಿಡಿದಿರುವುದನ್ನು ಗುರುತಿಸಬಹುದು. ಅಲ್ಲಿ ಅದು ನೂರಕ್ಕೆ ನೂರರಷ್ಟು ಜಾನಪದ ಅಂಶಗಳನ್ನು ಉಳಿಸಿಕೊಂಡು ಬಂದಿದ್ದರೆ, ಇಲ್ಲಿ ನೂರಕ್ಕೆ ಎಂಬತ್ತರಷ್ಟು ಭಾಗ ಮಾತ್ರ ಉಳಿಯುವಂತಾಗಿರುತ್ತದೆ. ಉಳಿದ ಇಪ್ಪತ್ತರಷ್ಟು ಭಾಗ, ನಾಗರಿಕ ಪ್ರಭಾವಕ್ಕೆ ಒಳಗಾಗಿ ಕಣ್ಮರೆಯಾಗುತ್ತ ಬರುತ್ತದೆ.

'ಗ್ರಾಮೀಣ ಜಾನಪದ' - ಆದಿವಾಸಿ ಮತ್ತು ನಗರ ಜಾನಪದಗಳ ಮಧ್ಯಂತರದ್ದು. ಇದು ಆದಿವಾಸಿ ಸಂಸ್ಕೃತಿಯ ಮುಂದಿನ ಒಂದು ಹೆಜ್ಜೆ ಎನ್ನಬಹುದು. ಸಹಜವಾಗಿಯೇ ಕೆಲವು ಕಟ್ಟು ಕಟ್ಟಳೆಗಳು, ಇಲ್ಲಿ ಸಡಿಲಗೊಂಡಿರುತ್ತವೆ. ಸಂಪ್ರದಾಯಗಳು ಸಮರೂಪದಲ್ಲಿ ಕಾಣಿಸಿಕೊಳ್ಳುತ್ತವೆ;

---

೨. ಡಾ. ಜೀ. ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು. ಪು. ೫

೩. R.S. Boggs : SDFL- P. ೬೯೧೦

ಕತೆ, ಗೀತೆ, ಗಾದೆ, ಒಗಟು, ಮಾಟ ಮಂತ್ರ ಮುಂತಾದವುಗಳು ಮೊದಲಿನ ತಮ್ಮ ಪ್ರಖರತೆಯನ್ನು ಹೊಂದಿರದಿದ್ದರೂ ಉಸಿರಾಡುತ್ತಿರುತ್ತವೆ. ಆದಿವಾಸಿ ಸಂಸ್ಕೃತಿಯ ಬಿಗುವು ಅಲ್ಲಿ ಕಾಣದಿದ್ದರೂ, ಅದಕ್ಕೆ ಹತ್ತಿರವಾದ ಸಂಸ್ಕೃತಿಯೊಂದು ಮಾತ್ರ ಅಲ್ಲಿರುತ್ತದೆ.

ಸಂಪೂರ್ಣ ಶಿಕ್ಷಿತ ವರ್ಗದಿಂದ ದೂರವಿದ್ದ ಜನಪದ ಸಮಾಜವೊಂದು, ಅದಕ್ಕೆ ಹತ್ತಿರ ವಾಗುತ್ತಾ ಹೋದಂತೆ, ತನ್ನಲ್ಲಿಯ ಜಾನಪದ ಅಂಶದ ಸತ್ವಗಳನ್ನು ಅದು ಕಳೆದುಕೊಳ್ಳುತ್ತಾ ಹೋಗುತ್ತದೆ. ಬದಲಾವಣೆಗೆ ಅಡಿಪಾಯವಾಗುತ್ತದೆ. ಅಂತಹ ಪ್ರಭಾವಗಳನ್ನು ಬಾಗ್ಸ್ ಹೀಗೆ ಪಟ್ಟಿ ಮಾಡುತ್ತಾನೆ :

> When he reads books, follows the written law laid down by his legislative body, or the latest dogma of scientific theory taught in his school or classical music or modernistic art expounded by his teacher, and when he learns and follows the dogma of his church he is not 'folk'. Rather, he is following learned culture which is distinguished from traditional culture.[೪]

ಹೀಗಾಗಿ, ವಿದ್ಯೆ ಹೆಚ್ಚು ಹೆಚ್ಚು ಪ್ರವೇಶ ಮಾಡಿದಂತೆ, ನಾಗರಿಕ ಸೌಲಭ್ಯಗಳು ಹೆಚ್ಚಾದಂತೆ, ಆಧುನಿಕ ವಿಚಾರಗಳು ಪ್ರವೇಶಿಸಿದಂತೆಲ್ಲ, ಜಾನಪದ ಅಂಶಗಳು ಜಾಳು ಜಾಳಾಗುತ್ತ ಹೋಗುತ್ತವೆ. ಮುಂದಿನ ಮತ್ತೊಂದು ಸ್ಥಿತಿಗೆ ದಾರಿ ಮಾಡಿಕೊಡುತ್ತವೆ. ಸಿನಿಮಾ, ನಾಟಕ, ರೇಡಿಯೋ, ಪತ್ರಿಕೆ, ನಗರ ಸಂಬಂಧ ಮುಂತಾದುವುಗಳಿಂದಾಗಿ 'ಗ್ರಾಮೀಣ ಜಾನಪದ' ತನ್ನ ಸ್ವರೂಪವನ್ನು ಬದಲಾಯಿಸಿಕೊಂಡು ಹೋಗುವತ್ತಲೇ ಹೆಚ್ಚು ಒತ್ತನ್ನು ಕೊಡುವುದು ಕಂಡು ಬರುತ್ತದೆ.

ಇನ್ನು 'ನಗರ ಸಂಸ್ಕೃತಿ'ಗೆ ಬಂದರೆ, ಭಾರತದಂತಹ ದೇಶದಲ್ಲಿ ಒಂದು ವಿಚಿತ್ರ ಸ್ಥಿತಿಯ ಹಿನ್ನೆಲೆಯನ್ನು ಕಾಣುತ್ತೇವೆ. ಪಾಶ್ಚಾತ್ಯ ನಗರ ಸಂಸ್ಕೃತಿಯನ್ನು ಗಮನಿಸಬಹುದಾದರೆ, ಅಲ್ಲಿ ಸಂಪೂರ್ಣ ನಗರೀಕರಣವಾಗಿರುವುದರಿಂದ, ಭಾರತದ ಪರಿಸ್ಥಿತಿಗಿಂತ ಭಿನ್ನವೆಂದೇ ಹೇಳಬಹುದು. ಆದರೆ, ಭಾರತದ ನಗರಗಳ ಸಂಸ್ಕೃತಿಯ ಅಧ್ಯಯನಕ್ಕೆ ಕೈ ಹಾಕಿದಾಗ ಬಹುಮಟ್ಟಿಗೆ - ಗ್ರಾಮೀಣ ಮತ್ತು ನಗರ ಸಂಸ್ಕೃತಿಗಳ ಸಮನ್ವಯವನ್ನು ಕಾಣುತ್ತೇವೆ.

ಮೈಸೂರಿನಂತಹ ನಗರವನ್ನೇ ತೆಗೆದುಕೊಂಡರೂ, ಈ ಅಂಶಕ್ಕೆ ಪುಷ್ಟಿ ದೊರೆಯುತ್ತದೆ. ಮೈಸೂರಿನ ಮಧ್ಯಭಾಗದಲ್ಲಿಯೇ ಇರುವ - ಕನ್ನೇಗೌಡನ ಕೊಪ್ಪಲು, ಪಡುವಾರಹಳ್ಳಿ, ಕುಂಬಾರ ಕೊಪ್ಪಲು ಅಥವಾ ಒಕ್ಕಲಗೇರಿಯಂತಹ ಭಾಗಗಳನ್ನು ನೋಡಿದಾಗ, ನಗರ ಸಂಬಂಧವನ್ನು ಸ್ವಲ್ಪ ಹೊತ್ತು, ಸ್ವಲ್ಪಮಟ್ಟಿಗೆ ಮರೆಸುತ್ತವೆ. ಈ ಪ್ರದೇಶಗಳು, ಜನಪದ ಕಲಾವಿದರಿಂದ, ಸಂಪ್ರದಾಯಗಳಿಂದ, ಆಚರಣೆಗಳಿಂದ ಇಡಿಕಿರಿವಿದೆ. ಜೊತೆಯಲ್ಲಿಯೇ ಸರಸ್ವತೀಪುರಂ, ಜಯಲಕ್ಷ್ಮೀ ಪುರಂ, ಕೃಷ್ಣಮೂರ್ತಿಪುರಂನಂತಹ ಪ್ರದೇಶಗಳು ನಾಗರಿಕತೆಯ ಸೂಚಕವಾಗಿ ಬೆಳೆಯುತ್ತಿವೆ.

ನಗರ ದೂರವಾದ ಗ್ರಾಮವೊಂದರಲ್ಲಿ ನಡೆಯುವಂತಹ ಜಾನಪದ ಚಟುವಟಿಕೆಗಳು ಈಗಲೂ ಇಲ್ಲೆಲ್ಲ ನಡೆಯುತ್ತವೆ. ಮಾದೇಶ್ವರನ ಸಂಪ್ರದಾಯದ ಕಲಾವಿದರು, ಮಂಟೇಸ್ವಾಮಿ ಸಂಪ್ರದಾಯದ

೪. ಅದೇ

ಕಲಾವಿದರು, ಅಷ್ಟೇ ಅಲ್ಲದೆ, ಕೊಂತಿ ಪೂಜೆ, ಬಯಲಾಟ ಮುಂತಾದುವುಗಳೂ ಇಲ್ಲಿ ಸರ್ವೇಸಾಮಾನ್ಯ. ಮನೆಗಳಾಗಲಿ, ಜಗುಲಿಗಳಾಗಲಿ, ಅವರ ನಡೆನುಡಿ, ನಡಾವಳಿಗಳಾಗಲಿ ಗ್ರಾಮೀಣ ಜಾನಪದವನ್ನು, ಸಮಾಜವನ್ನು ನೆನಪಿಗೆ ತರುವಂತಹುದು. ಹಾಗೆಯೇ ಇವುಗಳ ಅತ್ತಿತ್ತ ನೋಡಿದಾಗ, ನಗರ ಸಂಸ್ಕೃತಿಯನ್ನು ಧಾರಾಳವಾಗಿ ಕಾಣುತ್ತೇವೆ.

'Folklore is a lively fossil which refuses to die'[೫] ಎಂಬ ಮಾತು ಈ ಹಿನ್ನೆಲೆಯಲ್ಲಿ ಹೆಚ್ಚು ಸಮರ್ಥನೀಯ. ಜಾನಪದ ಸುಲಭವಾಗಿ ಸಾವನ್ನಪ್ಪದ ಒಂದು ದಿವ್ಯಶಕ್ತಿ. ಹೇಗಾದರೂ ತಲೆಯೆತ್ತಲು ಅದು ಸತತ ಹೋರಾಟ ನಡೆಸುತ್ತದೆ. ಒಂದೆಡೆ ಕಣ್ಮರೆಯಾದಂತೆ ಕಂಡರೂ ಮತ್ತೆಲ್ಲಿಯೋ ಇನ್ನೊಂದು ರೂಪದಲ್ಲಿ ಅದು ತಲೆ ಎತ್ತುವುದು ಕಂಡು ಬರುತ್ತದೆ. ಬಲಿ ಕೊಡುವ ಸಂಪ್ರದಾಯ ಇಂದಿಗೂ ಇದೆ. ನರಬಲಿ ಸಂಪೂರ್ಣ ಮಾಯವಾಗಿದೆ ಎಂದು ಭಾವಿಸುವಂತಿಲ್ಲ. ಶಿಶುಬಲಿಯ ಸುದ್ದಿ ಆಗಾಗ್ಗೆ ಕಿವಿಯ ಮೇಲೆ ಬೀಳುತ್ತಲೇ ಇದೆ - ಅದೂ ನಗರಗಳಲ್ಲಿಯೇ ಹೆಚ್ಚು. ಆದರೂ, ಕೆಲವೊಂದು ಅಂಶಗಳು ತೀರ ನಿರ್ಲಕ್ಷ್ಯಕ್ಕೊಳಗಾದಾಗ ಕಣ್ಮರೆಯಾಗುತ್ತವೆ. ಮದುವೆ, ಹಬ್ಬ ಮುಂತಾದುವುಗಳಿಗೆ ಸಂಬಂಧಿಸಿದ ಅನೇಕ ಆಚರಣೆಗಳು ಇಂದು ಇಲ್ಲ. ಇನ್ನು ಕೆಲವು ಬೇರೆ ಸ್ವರೂಪ ಪಡೆದುಕೊಂಡಿರುವುದನ್ನು ಕಾಣಬಹುದು. ಬದಲಾದ ಪರಿಸರದಲ್ಲಿ ಅವುಗಳು ಉಳಿದು ಬರುವುದೂ ಕಷ್ಟವಾಗುತ್ತದೆ. ಆದರೆ, ಅವುಗಳ ಆಶಯಗಳು ಮಾತ್ರ ಸ್ವಲ್ಪ ಮಟ್ಟಿಗಾದರೂ ಹಿಂದೆ ನಿಂತು ಕೆಲಸ ಮಾಡುತ್ತವೆ. ರಾಷ್ಟ್ರೀಯ - ಅಂತರರಾಷ್ಟ್ರೀಯ ಖ್ಯಾತಿವೆತ್ತ ವಿಜ್ಞಾನಿಗಳೂ, ವಿದ್ವಾಂಸರುಗಳೂ ; ದೇವರು - ಧರ್ಮದ ವಿಷಯದಲ್ಲಿ ನಡೆದುಕೊಳ್ಳುವುದನ್ನು ಗಮನಿಸಿದಾಗ ಇದರ ಅರಿವಾಗುತ್ತದೆ.

ದಟ್ಟವಾದ ನಾಗರಿಕ ಪ್ರಭಾವವಿರುವ ನಗರಗಳಲ್ಲಿಯೂ ಜಾನಪದ ಅಂಶಗಳು ಸ್ವಲ್ಪ ಮಟ್ಟಿಗಾದರೂ ಉಳಿದು ಬರಲು ಇದೇ ಕಾರಣ. ಅಲ್ಲದೆ, ನಗರಗಳಾಗಲಿ ಅಥವಾ ನಗರಗಳಲ್ಲಿರುವ ಜನಗಳಾಗಲೀ ಇದ್ದಕ್ಕಿದ್ದಂತೆಯೇ ಉದ್ಭವಿಸಿದುವುಗಳಲ್ಲ. ನಗರಗಳ ಬೆಳವಣಿಗೆ ಆಗುವುದಕ್ಕೆ ಮೊದಲು ಬಹುತೇಕ ಮಂದಿ ಗ್ರಾಮಗಳಲ್ಲಿಯೇ ಇದ್ದವರು. ಅವರು ಕಾಲಕ್ರಮದಲ್ಲಿ ಪರಿಸ್ಥಿತಿಗನುಗುಣವಾಗಿ, ನಗರವನ್ನು ಪ್ರವೇಶಿಸಿದ ಮಾತ್ರಕ್ಕೆ, ತಮ್ಮ ಮೂಲಮೌಲ್ಯಗಳನ್ನೇ ಕಳೆದುಕೊಂಡರು ಎಂದಲ್ಲ. ಆ ಹೊಸ ವಾತಾವರಣದಲ್ಲಿಯೂ, ಅದನ್ನು ಉಳಿಸಿಕೊಂಡು ಬರಲು ನಿರಂತರವಾಗಿ ಪ್ರಯತ್ನ ನಡೆಸುತ್ತಲೇ ಬಂದಿರಬೇಕು. ಆದರೆ, ಕಾಲ ಕಳೆದಂತೆ ; ಪರಿಸ್ಥಿತಿಯ ಒತ್ತಡ ಹೆಚ್ಚಾದಂತೆ, ಕೆಲವಂಶಗಳನ್ನು ಕೈ ಬಿಡುವುದು ಅನಿವಾರ್ಯವಾಗುತ್ತದೆ. ಹಾಗಾದಾಗ ಮೂಲ ಸಂಸ್ಕೃತಿಯ ಕೆಲವಂಶಗಳು ನಷ್ಟ ಹೊಂದುತ್ತವೆ ಎನ್ನಬಹುದಾದರೂ, ಅದರ ಮೂಲಸ್ವರೂಪವೇ ಇಲ್ಲದಂತಾಗುತ್ತದೆ ಎನ್ನುವಂತಿಲ್ಲ.

ಸಂಸ್ಕೃತಿಯ ಸ್ವರೂಪ, ಗ್ರಾಮೀಣ ಪರಿಸರಕ್ಕಿಂತ ನಗರದ ಪರಿಸರದಲ್ಲಿ ಬೇಗ ಬೇಗ ಬದಲಾಗಲು ಅವಕಾಶಗಳು ಹೆಚ್ಚು. ಪ್ರಭಾವಗಳು, ಪ್ರೇರಣೆಗಳು ಹೆಚ್ಚಾಗಿರುತ್ತವೆ. ಇದಕ್ಕೆ ನಿಶ್ಚಿತ ಕಾರಣ - ಆರ್. ಎಸ್. ಬಾಗ್ಸ್ ಅವರು ಹೇಳುವಂತೆ ; 'ತಕ್ಕ ಪರಿಸರ ಇಲ್ಲದೆ ಹೋಗುವುದು'. ಆದಿವಾಸಿ ಸಂಸ್ಕೃತಿಯಿಂದ ನಗರ ಸಂಸ್ಕೃತಿಯವರೆಗೆ, ಜನಪದ ಸಂಸ್ಕೃತಿಯಲ್ಲಿ ಆಗುತ್ತ ಬಂದ ಬದಲಾವಣೆಯನ್ನು ಪರಿಶೀಲಿಸಿದರೆ ಈ ಅಂಶ ಸ್ಪಷ್ಟಗೊಳ್ಳುತ್ತದೆ.

---

೫. Charies Franis Potter : S.D.L.F. - P. .S. Boggs : SDFL- P.೪೦೧

ಗ್ರಾಮೀಣ ಸಂಸ್ಕೃತಿಯ ಸ್ವರೂಪ ಏನೆಂಬುದನ್ನು ಪರಿಶೀಲಿಸುವಾಗ, - 'ಸಂಸ್ಕೃತಿ' ಮತ್ತು 'ಜಾನಪದ' - ಇವುಗಳಿಗೆ ವಿದ್ವಾಂಸರು ನೀಡಿರುವ ವಿವರಣೆಗಳಲ್ಲಿ ಒಂದೊಂದನ್ನಾದರೂ ಗಮನಿಸಬೇಕಾಗುತ್ತದೆ. ಸಂಸ್ಕೃತಿಯನ್ನು ಕುರಿತ ಟೈಲರ್‌ನ ಒಂದು ಹೇಳಿಕೆ ಹೀಗಿದೆ :

> That complex whole which includes knowledge. belief. art, morals. law. custom and any other capabilities and habits acquired by man as a member of a society".[೬]

ಒಂದು ಸಮಾಜದ ಸದಸ್ಯನಾಗಿ ವ್ಯಕ್ತಿ ಗಳಿಸಿಕೊಂಡದ್ದೆಲ್ಲವೂ ಸಂಸ್ಕೃತಿಯ ವ್ಯಾಪ್ತಿಗೆ ಒಳಪಡುತ್ತದೆ. ಅದು ಆ ಒಂದು ಸಮಾಜದ ಸ್ಥಿತಿಗತಿಗನುಗುಣವಾಗಿ ರೂಪು ತಳೆದಿರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಸಂಸ್ಕೃತಿಯ ಸ್ವರೂಪವನ್ನು ಪರಿಶೀಲಿಸುವಾಗ - ಮತ್ತೆ ಇದು, ಬಾಗ್ಸ್ ಅವರು ಸಂಸ್ಕೃತಿಯನ್ನು ವಿಭಾಗಿಸುವಾಗ ಹಾಗೆ 'ಮಧ್ಯಮ ಸಂಸ್ಕೃತಿ (Intermediate culture)'ಗೆ ಬಂದು ನಿಲ್ಲುತ್ತದೆ.

ಗ್ರಾಮೀಣ ಸಂಸ್ಕೃತಿ, ಆದಿವಾಸಿ ಹಾಗೂ ನಗರ ಸಂಸ್ಕೃತಿಗಿಂತ ಭಿನ್ನವಾದುದು. ಅದೇ ಅದರ ವೈಶಿಷ್ಟ್ಯ. ಜಾರ್ಜ್ ಹೇಜೋರ್ಗ್ ಹೇಳುತ್ತಾನೆ.

> "Such a wide expansion of meaning. stemming from a special 'folk' concept. has not been applied in the study of 'Primitive' or pre-literature socities where the anthropologist's background in social science and linguistics appears indispensable for the study of native cultures as a whole. and also for a fruitful evaluation of the function and history of oral folklore.[೭]

ಆದರೆ, ಈ ಅಂತರವನ್ನು ಅನೇಕರು, ಅನೇಕ ವೇಳೆ ಅಷ್ಟಾಗಿ ಗಮನಿಸಿದಂತೆ ಕಾಣುವುದಿಲ್ಲ. ಗಮನಿಸಿದರೂ, ಗೌಣವೆಂಬಂತೆ ಮುಂದೆ ಹೋಗುವುದು ಕಾಣುತ್ತದೆ ಎನ್ನುತ್ತಾನೆ.

ಗ್ರಾಮೀಣ ಸಂಸ್ಕೃತಿ ಹೆಚ್ಚು ವಿಶಿಷ್ಟವಾದುದು. ಚಿಕ್ಕದಾದ, ಪ್ರತ್ಯೇಕವಾದ ತನ್ನದೇ ಆದ ಪ್ರಪಂಚದಲ್ಲಿ - ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧ ತುಂಬ ಹತ್ತಿರವಾಗಿರುತ್ತದೆ. 'ರಕ್ತ ಸಂಬಂಧ' ಹೆಣೆದುಕೊಂಡಿದ್ದು, ಪ್ರಧಾನವಾಗಿ ಎದ್ದು ತೋರುತ್ತದೆ. ಇದನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯಗಳೆರಡರಲ್ಲಿಯೂ ಗುರುತಿಸಬಹುದು. ಪರಂಪರೆಯಿಂದ ಬಂದ ಸಂಪ್ರದಾಯಗಳನ್ನು, ಆಚರಣೆಗಳನ್ನು ಸಾಂಸ್ಕೃತಿಕ ಅಂಶಗಳನ್ನು ಆದಷ್ಟೂ ಉಳಿಸಿಕೊಂಡು ಬರಲು ಹೆಣಗಾಡುವುದನ್ನು ಕಾಣಬಹುದು. ಅಲ್ಲಲ್ಲಿ ಕೈ ಬಿಟ್ಟು ಹೋಗುತ್ತಿರುವ ಕೆಲವು ಸಂಪ್ರದಾಯಗಳನ್ನು ಕಂಡು ವ್ಯಥೆ, ದುಃಖ, ವ್ಯಕ್ತಪಡಿಸುವ ವರ್ಗವೂ ಉಂಟು. ಕೆಲವೆಡೆಗಳಲ್ಲಿ, ಸಂಸ್ಕೃತಿಯ ಮೂಲ ಅಂಶಗಳನ್ನು ಉಳಿಸಿಕೊಂಡು ಬರುವ ಹೋರಾಟ ನಡೆಯುತ್ತಿರುವಾಗಲೇ ಮತ್ತೊಂದೆಡೆ, ಮತ್ತೊಂದು ವರ್ಗ ಅಂತಹವುಗಳ ವಿರುದ್ಧ ನಡೆಸುವ ಚಟುವಟಿಕೆಗಳೂ ಕಂಡು ಬರುತ್ತವೆ. ಇಂತಹ ಒಂದು ಇಕ್ಕಟ್ಟಿನ

---

೭. George Herzoge : S.D.L.F.- P. - ೪೦೦

೬. E.B.Tayior : Primitive Culture- P. ೧

ಪರಿಸ್ಥಿತಿಯಲ್ಲಿ ಗ್ರಾಮೀಣ ಜಾನಪದ ಉಳಿದು ಬಂದಿದೆ.

ಜಾನಪದದ ಶಾಖೋಪ ಶಾಖೆಗಳಾದ - ಕಲೆ, ಸಂಪ್ರದಾಯ, ನಂಬಿಕೆ, ವೈದ್ಯ, ಭವಿಷ್ಯ, ಮಾಟ, ಮಂತ್ರ, ನಾಟಕ, ಸಂಗೀತ, ಉಡುಗೆ, ತೊಡುಗೆ, ಅಡಿಗೆ, ಭಾಷೆ, ಮಾತುಗಾರಿಕೆ ಮುಂತಾದುವೆಲ್ಲ ತಮ್ಮ ತಮ್ಮ ವೈಶಿಷ್ಟ್ಯಗಳನ್ನು ಇಂದಿಗೂ ಉಳಿಸಿಕೊಂಡೇ ಬಂದಿವೆ, ಪ್ರಭಾವವನ್ನು ಬೀರುತ್ತಲೇ ಬಂದಿವೆ.

ಇವುಗಳಲ್ಲಿ ಜನಪದ ಕಲೆಗಳದ್ದೇ ಒಂದು ಪ್ರಪಂಚ. ನೃತ್ಯ, ನಾಟಕ, ಆಟ ಮುಂತಾದುವುಗಳ ಅನೇಕಾನೇಕ ಒಳಪ್ರಕಾರಗಳು ಜನಪದ ಕಲೆಗಳ ಶ್ರೀಮಂತಿಕೆಯನ್ನು ವೈಭವವನ್ನು, ಬಿಚ್ಚಿ ತೋರುತ್ತವೆ. ಹಬ್ಬ ಹರಿದಿನಗಳಲ್ಲಿ, ಬೇಟೆ - ಕೂಟಗಳಲ್ಲಿ ಮೇಲಿಂದ ಮೇಲೆ ಕಂಡು ಬರುವ ಹಲವು ಬಗೆಯ ನೃತ್ಯಗಳು - ಗೀತ, ಕುಣಿತ, ಆಭರಣ ವಿಶೇಷಗಳೇ ಮೊದಲಾದುವು, ಗ್ರಾಮೀಣರ ಅಭಿರುಚಿಯನ್ನು ಸ್ಪಷ್ಟಗೊಳಿಸುತ್ತವೆ.

ಸಿನಿಮಾ, ನಾಟಕ, ಟೆಲಿವಿಷನ್ ಯುಗದಲ್ಲಿಯೂ, ಯಕ್ಷಗಾನ ಬಯಲಾಟಗಳು ದೇಶ ವಿದೇಶಗಳಲ್ಲಿ ಕಹಳೆಯನ್ನು ಊದುತ್ತಿವೆ. ತೊಗಲುಗೊಂಬೆಯಾಟ, ಸೂತ್ರದ ಗೊಂಬೆ ಆಟಗಳು ಇಂದಿಗೂ ತಮ್ಮ ಪ್ರಾಮುಖ್ಯತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ 'ಭೂತಕೋಲ' ಇಂದಿಗೂ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡೇ ಬಂದಿದೆ. ಯಾವ ನಾಗರಿಕ ಅಥವಾ ಶಿಕ್ಷಣದ ಪ್ರಭಾವವೂ ಇದರ ಮೇಲೆ ಆದಂತೆ ಕಾಣುವುದಿಲ್ಲ. ಒಂದೊಂದು ಮನೆಗೆ ಸಂಬಂಧಿಸಿದಂತೆ, ತಲೆತಲಾಂತರದಿಂದಲೂ ಇದನ್ನು ನಡೆಸಿಕೊಂಡು ಬಂದಿದ್ದಾರೆ. ಹಾಗೆ ಇದನ್ನು ನಡೆಸಿಕೊಂಡು ಬಂದವರು, ಪ್ರತಿ ವರ್ಷ 'ಕೋಲ' ಕಟ್ಟಿಸುತ್ತಾರೆ. ಹರಕೆ ಹೊತ್ತು ಕೋಲ ಕಟ್ಟಿಸುವುದೂ ಉಂಟು. ಆಗ, ತಮ್ಮಲ್ಲಿಯ ತೊಂದರೆಗಳನ್ನು, ಕಷ್ಟಗಳನ್ನೂ ಅದರಲ್ಲಿ ಹೇಳಿಕೊಳ್ಳುತ್ತಾರೆ. ಯಾವುದೇ ಸಮಸ್ಯೆ ಕೈ ಮೀರಿ ಹೋಗುವಂತೆ ತೋರಿದಾಗ, ತಮಗೆ ಅನ್ಯಾಯವಾಗುವಂತೆ ಕಂಡು ಬಂದಾಗ, ಆ ಭೂತಕ್ಕೆ ಕೈ ಮುಗಿದು ಅದರೊಂದಿಗೆ ಹೇಳಿಕೊಳ್ಳುವುದುಂಟು. ಅಲ್ಲಿಯ ಜನ ಇಂದಿಗೂ ಅದಕ್ಕೆ ಭಯಪಡುತ್ತಾರೆ. ಹಾಗಾಗಿ ಅನೇಕ ಸಮಸ್ಯೆಗಳು ಆ ಮೂಲಕ ಪರಿಹಾರಗೊಳ್ಳುತ್ತವೆ. ಭೂತದ ಆಶ್ವಾಸನೆಯಿಂದ ಸಮಾಧಾನಗೊಳ್ಳುತ್ತಾರೆ. ಕಲಿತವರೂ ಈ ಸಂಪ್ರದಾಯಕ್ಕೆ ಶರಣಾಗಿರುವ ನಿದರ್ಶನಗಳು ಹೇರಳ.

'ಭೂತ ಕೋಲ' ಇಂದು ಅಲ್ಲೊಂದ ಕಲೆಯಾಗಿ ಅಷ್ಟೇ ಉಳಿದಿಲ್ಲ. ಮೂಲ ಸಂಪ್ರದಾಯದ ಎಲ್ಲ ಅಂಶಗಳನ್ನು ಒಳಗೊಂಡು, 'ಜನಪದ ಸಂಸ್ಕೃತಿ'ಯ ಒಂದು ಪ್ರಮುಖ ಭಾಗವೇ ಆಗಿ ಕಂಡು ಬರುತ್ತದೆ. ನಂಬಿಕೆ, ನಡಾವಳಿಗಳನ್ನೆಲ್ಲ ಸಂಪೂರ್ಣವಾಗಿ ಉಳಿಸಿಕೊಂಡು ಬಂದಿದೆ.

ಜನಪದ ನಂಬಿಕೆಗಳು, ಜನರನ್ನು ಎಚ್ಚರಿಸುವ, ಪ್ರೋತ್ಸಾಹಿಸುವ, ಹಾಗೂ ಅವರನ್ನು ನಿಯಂತ್ರಿಸುವ ಅಂಶಗಳನ್ನು ಒಳಗೊಂಡುವು. ಹಲವು ನಂಬಿಕೆಗಳು ಅವರನ್ನು ದಾರಿ ತಪ್ಪದಂತೆ ರಕ್ಷಿಸಿಕೊಂಡು ಬಂದಿವೆ. ಎಲ್ಲ ಸಂಪ್ರದಾಯಗಳ ಉಳಿವಿಗೂ ಈ ನಂಬಿಕೆಗಳೇ ಕಾರಣ. ಕೆಲವು ಮೂಢನಂಬಿಕೆಗಳು ಇವೆಯಾದರೂ, ಎಲ್ಲವನ್ನೂ ಹಾಗೆಂದೇ ಭಾವಿಸುವಂತಿಲ್ಲ. ಬಹುತೇಕ ನಂಬಿಕೆಗಳು ಆತ್ಮವಿಶ್ವಾಸವನ್ನು ಮೂಡಿಸಬಲ್ಲುವು. ಮತ್ತೆ ಕೆಲವು ವೈಜ್ಞಾನಿಕ ಹಿನ್ನೆಲೆಯಿಂದಲೂ ಮಹತ್ವವಾದುವುಗಳು.

"ಒಂದು ಕಾಲಕ್ಕೆ ಸರ್ವವ್ಯಾಪಿಯಾಗಿದ್ದ 'ಜನಪದ ವೈದ್ಯ' ಇಂದು ಕೆಲಮಟ್ಟಿಗೆ ಅಲ್ಲಲ್ಲಿ ಇದ್ದೇ ಇದೆ. ಕೆಲವು ರೋಗಗಳಿಗಂತೂ ಇಂದಿಗೂ ಅದೇ ಸಿದ್ಧೌಷಧ ಎಂಬ ಭಾವನೆ - ಕಲಿತವರಲ್ಲಿಯೂ ಬೇರೂರಿರುವಷ್ಟು ಪ್ರಬಲವಾಗಿ ಅದು ಕಂಡು ಬರುತ್ತದೆ. 'ಜಾಂಡೀಸ್'ನಂತಹ ರೋಗಕ್ಕೆ 'ಜನಪದ ವೈದ್ಯ'ಕ್ಕೇ ಶರಣು ಹೋಗುವ ವಿದ್ಯಾವಂತರು ಅನೇಕ. ಜನಪದ ವೈದ್ಯರ ಹಿಂದೆ ಅಡಕವಾಗಿರುವ ಹಲವು ನಂಬಿಕೆಗಳೂ ಅದರ ವೈಶಿಷ್ಟ್ಯಕ್ಕೆ ಕಾರಣವಾಗಿವೆ.

ಮಾಟ, ಮಂತ್ರ, ಮೋಡಿ, ಕಣಿ - ಮುಂತಾದುವು ಇಡೀ ಜನಪದ ಸಮಾಜವನ್ನು - ಅಚ್ಚರಿ, ಭಯಗಳಿಂದ ತಲ್ಲಣಿಸುವಂತೆ ಮಾಡಿದ್ದ ಕಾಲವೂ ಇತ್ತು. ಇಂದಿಗೂ ಈ ಭಾವನೆ ಅಥವಾ, ಪರಿಸ್ಥಿತಿ ಸಂಪೂರ್ಣ ಹೋಗಿಲ್ಲ. ಅಲ್ಲಲ್ಲಿ ಅವುಗಳ ಪ್ರಭಾವ, ಪ್ರಾಬಲ್ಯಗಳು ಕೇಳಿಬರುತ್ತವೆ.

ರಾಷ್ಟ್ರದ ಮುನ್ನಡೆಯ ಸೂತ್ರವನ್ನು ಹಿಡಿದವರೂ, ಇವುಗಳನ್ನು ನಂಬಿ ಹಲವು ಕಾರ್ಯಗಳಿಗೆ ಕೈ ಹಾಕುವುದನ್ನು ಪತ್ರಿಕೆಗಳ ಮೂಲಕ ತಿಳಿದಿದ್ದೇವೆ. ಹಿಂದಿನಿಂದಲೂ ಒಳ್ಳೆಯ ಹಾಗೂ ಕೆಟ್ಟ ಪರಿಣಾಮಗಳು ಇಂತಹವುಗಳ ಮೂಲಕ ಸಮಾಜದಲ್ಲಿ ನಡೆಯುತ್ತಲೇ ಬಂದಿವೆ. ನಮ್ಮ ಸಮಾಜ ದಲ್ಲಿ ಧರ್ಮ ಒಂದು ಬಗೆಯ ಕೆಲಸವನ್ನು ಮಾಡುತ್ತ ಬಂದರೆ, ಮತ್ತೊಂದು ಕಡೆ, ಮಾಟ - ಮಂತ್ರ ಮುಂತಾದುವು ಮತ್ತೊಂದು ಬಗೆಯ ಕೆಲಸವನ್ನು ಮಾಡುತ್ತಲೇ ಬಂದಿವೆ. ಧರ್ಮಕ್ಕೆ ಹೆದರದ ಜನರನ್ನೂ, ಇವುಗಳು ಹೆದರಿಸಿಕೊಂಡು ಬಂದಿವೆ. ಈಗ ಮಂತ್ರವಾದಿಗಳು ಹೆಚ್ಚಾಗಿ ಕಂಡು ಬರುವುದೇ ನಗರಗಳಲ್ಲಿ. ಭವಿಷ್ಯ ಹೇಳುವವರ ಸಂಖ್ಯೆಯೂ ಅಷ್ಟೇ. ಹಳ್ಳಿಗಳಿರಲಿ, ನಗರಗಳ ಮನೆಗಳಲ್ಲಿಯೂ - ಹಂಚಿಕಡ್ಡಿ, ಉಪ್ಪು, ಮೆಣಸಿನಕಾಯಿ, ಇದ್ದಲು ಮುಂತಾದುವನ್ನು ಮಂತ್ರಿಸುವ ದೃಶ್ಯ ತೀರ ಸಾಮಾನ್ಯ.

ಇವುಗಳನ್ನೆಲ್ಲ ಗಮನಿಸುವಾಗ, ಜನಪದ ಸಂಸ್ಕೃತಿಯ ಪ್ರಭಾವ ಎಷ್ಟರಮಟ್ಟಿಗೆ ಎಲ್ಲಿಂದ ಎಲ್ಲಿಯವರೆಗೆ ಹರಡಿದೆ ಎಂಬುದು ವೇದ್ಯವಾಗುತ್ತದೆ. ಹಾಗೆಯೇ, ಅದರ ಬೇರುಗಳು ಎಷ್ಟು ಆಳಕ್ಕೆ ಹೋಗಿ, ಕಿತ್ತೊಗೆಯಲಾರದಷ್ಟು ಸುತ್ತಿಕೊಂಡಿವೆ ಎಂಬುದೂ ತಿಳಿಯುತ್ತದೆ.

ಇನ್ನು ಇದನ್ನು ಕುರಿತ ಅಧ್ಯಯನದ ಹಿನ್ನೆಲೆಯನ್ನು ಗಮನಿಸಬಹುದು. 19ನೆಯ ಶತಮಾನ ದಲ್ಲಿಯೇ ಕೆಲವು ಪಾಶ್ಚಾತ್ಯ ವಿದ್ವಾಂಸರುಗಳು ಕನ್ನಡ ಜಾನಪದ ಕ್ಷೇತ್ರವನ್ನು ಪ್ರವೇಶಿಸಿದರು. ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿಯೇ ಪ್ರಕಟವಾದ ಮಾಸ್ತಿಯವರ 'ಕನ್ನಡ ಲಾವಣಿ ಸಾಹಿತ್ಯ' ಒಂದು ಐತಿಹಾಸಿಕ ಮಹತ್ವವನ್ನುಳ್ಳ ಕೃತಿ. ಜಾನಪದ ಲೋಕದ ಒಂದು ವಿಸ್ಮಯಕಾರಿ ಭಾಗವನ್ನು ಅವರು ಅಲ್ಲಿ ತೆರೆದು ತೋರಿದರು. ಕನ್ನಡ ಗ್ರಾಮೀಣ ಜಾನಪದ ಅಧ್ಯಯನ ಕಾರ್ಯ ಇಲ್ಲಿಂದ ಆರಂಭವಾಗಿ 1931ರಲ್ಲಿ ಕನ್ನಡದ ಅನರ್ಘ್ಯ ರತ್ನವೇ ಆದ 'ಗರತಿ ಹಾಡು' ಹಲಸಂಗಿ ಸಹೋದರರಿಂದ ಹೊರಬಿತ್ತು. ಬಿ. ಎಂ. ಶ್ರೀ, ಬೇಂದ್ರೆ, ಮಾಸ್ತಿಯವರಂತಹ ವಿದ್ವಾಂಸರ ಮುನ್ನುಡಿ, ಮುಂದಿನ ಜಾನಪದ ಅಧ್ಯಯನ ಹಾಗೂ ಸಂಗ್ರಹಣೆಗೂ ಒಳ್ಳೆಯ ಚಾಲನೆಯನ್ನು ನೀಡಿತು. ಅಲ್ಲಿಂದ ಆರಂಭವಾದ ಜಾನಪದ ಅಧ್ಯಯನ, ಮುಂದೆ - ಅರ್ಚಕ ರಂಗಸ್ವಾಮಿ, ಸಿಂಪಿ ಲಿಂಗಣ್ಣ, ಗದ್ದಗೀಮಠ, ಗೊರೂರು, ಬಿ.ಎಸ್. ರಂಗಸ್ವಾಮಿ, ದೇವುಡು, ಕರಾಕೃ, ಪಿ. ಆರ್. ತಿಪ್ಪೇಸ್ವಾಮಿ ಮುಂತಾದವರಿಂದ ವಿಸ್ತೃತಗೊಳ್ಳುತ್ತ ಮುನ್ನಡೆಯಿತು. ೧೯೨೪ರಲ್ಲಿಯೇ, ನಡಕೇಡಿಯಂಡ ಚಿಣ್ಣಪ್ಪ ಅವರು ಸಂಗ್ರಹಿಸಿ ಪ್ರಕಟಿಸಿದ 'ಪಟ್ಟೋಲೆ ಪಳಮೆ' ಕೂಡ ಗಮನಾರ್ಹ ಕೃತಿ.

ಜಾನಪದ ಅಧ್ಯಯನದಲ್ಲಿ ವೈಜ್ಞಾನಿಕ ದೃಷ್ಟಿ ತಲೆದೋರಿ, ಅದು ತನ್ನ ವಿಶ್ವ ರೂಪವನ್ನು

ತೋರಿಸತೊಡಗಿದ್ದು - ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಟ್ಟಿದ್ದ ಕನ್ನಡ ಲೇಖಕರ ಸಮ್ಮೇಳನ (1966) ಮತ್ತು ತರೀಕೆರೆಯಲ್ಲಿ ನಡೆದ ಮೊದಲನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ (1967) - ಇವುಗಳ ಮೂಲಕ. ಇವುಗಳ ಅಂಗವಾಗಿ ಹೊರಬಿದ್ದ 'ಸುವರ್ಣ ಸಂಚಯ' ಹಾಗೂ 'ಹೊನ್ನ ಬಿತ್ತೇವು ಹೊಲಕೆಲ್ಲ' ಪ್ರತ್ಯೇಕವಾಗಿ ಹೆಸರಿಸಬೇಕಾದ ಕೃತಿಗಳು.

ಇವೆರಡೂ ಕೃತಿಗಳೂ, ಕರ್ನಾಟಕದಲ್ಲಿ ಜಾನಪದ ಅಧ್ಯಯನ ತನ್ನೆಲ್ಲ ಮೂಲೆ ಮಗ್ಗುಲುಗಳನ್ನೂ ಗುರುತಿಸಿಕೊಂಡು ಮುನ್ನಡೆಯಲು ಪ್ರೇರಣೆ ನೀಡಿದುವುಗಳು. ಇಲ್ಲಿಂದ ಹೊಸ ಘಟ್ಟವೊಂದು ಆರಂಭವಾಗುತ್ತದೆ. ಅದರ ಪ್ರತಿನಿಧಿಗಳಾಗಿ ಡಾ. ದೇಜಗೌ, ಡಾ. ಹಾಮಾನಾ ಮತ್ತು ಡಾ. ಜೀಶಂಪ ಅವರುಗಳು ನಿಲ್ಲುತ್ತಾರೆ. ವಿಶ್ವವಿದ್ಯಾನಿಲಯದಲ್ಲಿ ಜಾನಪದಕ್ಕೆ ಒಂದು ಸ್ಥಾನವನ್ನು ದೊರಕಿಸಿಕೊಡುವುದರ ಮೂಲಕ, ಜಾನಪದ ಅಧ್ಯಯನ ತನ್ನ ಪೂರ್ಣದೃಷ್ಟಿಯನ್ನು ಕಂಡುಕೊಳ್ಳಲು ಈ ಮೂವರು ವಿದ್ವಾಂಸರುಗಳೂ ಕಾರಣ. ಡಾ. ಹಾ. ಮಾ. ನಾಯಕ ಅವರು, Folkloreಗೆ ಸಂವಾದಿಯಾಗಿ 'ಜಾನಪದ' ಎಂಬ ಶಬ್ದವನ್ನು ಚಲಾವಣೆಗೆ ತಂದು ಅದರ ನಿಜವಾದ ಅರ್ಥವನ್ನೂ, ಮನದಟ್ಟು ಮಾಡಿಸುವುದರ ಮೂಲಕ, ಜಾನಪದದ ವ್ಯಾಪ್ತಿ ಮತ್ತು ವೈವಿಧ್ಯ ಎಷ್ಟೆಂಬುದನ್ನು ತೋರಿಸಿಕೊಡಲು ನೆರವಾದರು. ಕ್ರಮವಾದ ಅಧ್ಯಯನಕ್ಕೆ ಕಾರಣರಾದರು. ಅವರ 'ಕನ್ನಡ ಜಾನಪದ ಗ್ರಂಥಸೂಚಿ' ಈ ದೃಷ್ಟಿಯಿಂದ ಒಂದು ದಿಕ್ಸೂಚಿಯಾದ ಗ್ರಂಥವಾಗಿದ್ದು, ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಪ್ರೇರಣೆ ನೀಡುವ ಗ್ರಂಥವಾಗಿದೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ನಡೆದು ಬಂದ ದಾರಿಯನ್ನು ಪರಿಶೀಲಿಸುವಾಗ, ಪ್ರತ್ಯೇಕವಾಗಿ ಹೆಸರಿಸಬೇಕಾದ ಹೆಸರು ಡಾ. ಜೀ. ಶಂ. ಪರಮಶಿವಯ್ಯ ಅವರದ್ದು. ಪ್ರಾರಂಭದಿಂದಲೂ ಜಾನಪದ ಅಧ್ಯಯನವನ್ನು ಪೂರ್ಣದೃಷ್ಟಿಯಿಂದ ಗಮನಿಸುತ್ತ, ಆ ನಿಟ್ಟಿನಲ್ಲಿ ಕೆಲಸ ಮಾಡುತ್ತ ಬಂದವರು ಇವರು.

ಅವರ ಮಹಾಪ್ರಬಂಧ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಒಂದು ಮಹತ್ವದ ಕೃತಿ. ಜನಪದ ಸಾಹಿತ್ಯದ ಪ್ರಮುಖ ಕಾವ್ಯಗಳ ಸಮಗ್ರ ಪರಿಚಯ ಈ ಮೂಲಕ ನಮಗಾಗುತ್ತದೆ. ಮುಂದೆ, ಎಚ್. ಎಲ್. ನಾಗೇಗೌಡ, ಡಾ. ಎಂ. ಎಸ್. ಸುಂಕಾಪುರ, ಡಾ. ಎಲ್. ಆರ್. ಹೆಗ್ಗಡೆ ಮುಂತಾದ ಹಿರಿಯರ ಸಾಲಿನಲ್ಲಿ ಅನೇಕ ತರುಣ ವಿದ್ವಾಂಸರುಗಳು ಆ ಕ್ಷೇತ್ರದಲ್ಲಿ ದುಡಿಯುತ್ತ ಬಂದರು. ಜಾನಪದದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಕೃತಿಗಳನ್ನು ಹೊರ ತಂದರು. ಜಾನಪದದ ವ್ಯಾಪ್ತಿ, ವೈವಿಧ್ಯ ಎಷ್ಟೆಂಬುದನ್ನು ಸ್ಪಷ್ಟವಾಗಿ ಗುರುತಿಸಲು ಸಹಾಯಕವಾಗುವಷ್ಟು ಅದು ಸಂಗ್ರಹಣೆಗೊಂಡಿದೆ. ಗದ್ಯಕಥೆಗಳು, ಗೀತೆಗಳು, ಲಾವಣಿಗಳು, ಕಲೆಗಳು, ಗಾದೆಗಳು, ಒಗಟುಗಳು, ನಂಬಿಕೆಗಳು, ಸಂಪ್ರದಾಯಗಳು, ಅಡುಗೆ, ಕ್ರೀಡೆಗಳು, ವ್ಯಕ್ತಿವಿಶೇಷಗಳು ಮೊದಲಾದ ಪ್ರಕಾರಗಳಲ್ಲಿ ಸಾಕಷ್ಟು ಕೆಲಸ ನಡೆದಿದೆ.

* * * * *

ಸಂಶೋಧನೆ, ಸಂಪಾದನೆಗಳಂತೆಯೇ ವಿಮರ್ಶೆಯ ಕಾರ್ಯವೂ ನಡೆಯುತ್ತ ಬಂದಿದೆ. ನಿಜವಾದ ಅರ್ಥದ ವಿಮರ್ಶೆಗಿಂತ, ಜನಪದ ಸಾಹಿತ್ಯದ ಸ್ವಾರಸ್ಯವನ್ನು ಬಣ್ಣಿಸುವ ಬರಹಗಳೇ ಹೆಚ್ಚೆನ್ನಬಹುದು. ಅಲ್ಲಲ್ಲಿ ಅವುಗಳ ನಿಜವಾದ ಸತ್ವಪರೀಕ್ಷೆಯನ್ನು ಮಾಡುವ ಪ್ರಯತ್ನಗಳೂ ನಡೆದಿವೆ.

ಮಾಸ್ತಿ, ಬೆಟಗೇರಿ ಕೃಷ್ಣಶರ್ಮ, ಗದ್ದಗೀಮಠ, ಗೊರೂರು, ಸಿಂಪಿ ಲಿಂಗಣ್ಣ, ದೇಜಗೌ, ಹಾಮಾನಾ, ಜೀಶಂಪ, ಸಿಪಿಕೆ, ಕಂಬಾರ, ಇಮ್ರಾಪುರ, ಲಠ್ಠೆ, ರಾಗೌ, ರಾಮಚಂದ್ರಗೌಡ, ಡಿ.ಕೆ. ರಾಜೇಂದ್ರ, ಶ್ರೀಕಂಠಕೂಡಿಗೆ, ಶಂಕರನಾರಾಯಣ, ದೇವೇಂದ್ರ ಕುಮಾರ್ ಹಕಾರಿ, ಎ. ಹಿರಿಯಣ್ಣ ಮುಂತಾದವರು ಹಲವು ವಿಮರ್ಶಾ ಕೃತಿಗಳನ್ನು ಪ್ರಕಟಿಸಿದ್ದಾರೆ.

ಕಳೆದ ಒಂದು ದಶಕದ ಅವಧಿಯಲ್ಲಿ ಹೊರಬಂದ ಹಲವು ಜಾನಪದ ಸಂಬಂಧವಾದ ಪಿಎಚ್.ಡಿ. ಪ್ರಬಂಧಗಳೂ ಸಂಶೋಧನೆ, ಸಂಪಾದನೆ ಮತ್ತು ವಿಮರ್ಶಾ ಕ್ಷೇತ್ರಕ್ಕೆ ತಮ್ಮದೇ ಆದ ರೀತಿಯ ಕೊಡುಗೆಯನ್ನು ಕೊಟ್ಟಿವೆ.

ಜಾನಪದ ಕ್ಷೇತ್ರದ ಆಳ ಅಗಲಗಳನ್ನು ಹೊರಗೆಡಹುವ ಕೃತಿಗಳು ಹೊರ ಬಂದಿವೆ. ಅಪಾರ ಕ್ಷೇತ್ರಾನುಭವ, ಆಳವಾದ ಜಾನಪದ ಅಧ್ಯಯನ, ಅಪೂರ್ವವಾದ ಸಂಶೋಧನಾ ದೃಷ್ಟಿ - ಇವುಗಳು ಮೈಪ್ಪುರಿಗೊಂಡಿರುವುದನ್ನು ಹಲವರಲ್ಲಿ ಕಾಣಬಹುದಾದರೂ, ಮತ್ತೆ ಕೆಲವರು ಈ ಯಾವ ಗುಣಗಳೂ ಇಲ್ಲದೆ, ಜಾನಪದದ ಹೆಸರಿನಲ್ಲಿ ಅಪ್ರಬುದ್ಧ ಹಾಗೂ ಅಸಂಬದ್ಧ ಗ್ರಂಥಗಳನ್ನು ಪ್ರಕಟಿಸಿರುವುದೂ ಉಂಟು. ಇಲ್ಲಿ ಒಂದು ಉದಹಾರಣೆಯನ್ನು ಕೊಡುವುದಾದರೆ - ಡಾ. ನಂ. ತಪಸ್ವೀಕುಮಾರ್ ಅವರ 'ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ'.

ಈ ಕೃತಿಯ ಶೀರ್ಷಿಕೆ ಗಮನಾರ್ಹವಾಗಿ ಕಂಡರೂ, ಹೂರಣವೆಲ್ಲ ಅವರಿವರಿಂದ ಕಬಳಿಸಿದ್ದು. ಮುಖ್ಯವಾಗಿ ಡಾ. ಹಾ. ಮಾ. ನಾಯಕರ 'ಕನ್ನಡ ಜಾನಪದ ಗ್ರಂಥ ಸೂಚಿ' ಮತ್ತು ಡಾ. ಜೀ. ಶಂ. ಪ. ಅವರ ಬಹುತೇಕ ಬರಹಗಳಿಗೆ ಇವರು ಋಣಿಯಾಗಿದ್ದಾರೆ. ಬೇರೆಯವರ ಲೇಖನಗಳಿಂದ ವಿಷಯಗಳನ್ನು ಆರಿಸಿಕೊಳ್ಳಬಾರದೆಂದಲ್ಲ, ಸಾಧ್ಯವಾದರೆ ಮೂಲ ಕೃತಿಯನ್ನು ನೋಡಬೇಕಾಗುತ್ತದೆ, ಇಲ್ಲವಾದರೆ, ಲೇಖನಗಳನ್ನು ಭಟ್ಟಿ ಇಳಿಸುವಾಗ ಎಚ್ಚರ ವಹಿಸಬೇಕು. ಡಾ. ನಂ. ತಪಸ್ವೀಕುಮಾರ್ ಅವರು ಇದಾವುದನ್ನೂ ಲಕ್ಷಿಸಿದಂತೆ ಕಾಣುವುದಿಲ್ಲ.

ಇವರಿಗೆ, 'ಮಲೆನಾಡಿನ ಮದುವೆ'ಯನ್ನು ಪ್ರಕಟಿಸಿದ ಕೆ. ವಿ. ಲಿಂಗಪ್ಪನವರಿಗೂ, 'ಮಾರ್ನೌಮಿ ಪದ'ಗಳನ್ನು ಪ್ರಕಟಿಸಿದ ಕೆ.ಆರ್. ಲಿಂಗಪ್ಪನವರಿಗೂ ವ್ಯತ್ಯಾಸವೇ ಗೊತ್ತಿಲ್ಲ. ಎಂದರೆ, ಇವರು ಮೂಲಗ್ರಂಥಗಳನ್ನು ಒಮ್ಮೆ ನೋಡುವ ತಾಳ್ಮೆಯನ್ನೂ ತೋರಿಲ್ಲ. ಇಂತಹ ಅಭ್ಯಾಸವೂ ಇವರಿಗೆ ಇದ್ದಂತಿಲ್ಲ. ಪಿಎಚ್.ಡಿ. ಪ್ರಬಂಧವೊಂದರ ಭಾಗವಾಗಿ ಈ ಕೃತಿ ರಚಿತವಾದದ್ದು - ಎಂದಾಗ ಇನ್ನೂ ಆಶ್ಚರ್ಯವಾಗುತ್ತದೆ. ಇವರ ಪಿಹೆಚ್.ಡಿ. ಪ್ರಬಂಧದಲ್ಲಿ ಅಚ್ಚಾಗಿರುವ ಛಾಯಾ ಚಿತ್ರಗಳಿಗೂ ಒಳಗಿನ ವಿಷಯಗಳಿಗೂ ಅರ್ಥಾತ್ ಸಂಬಂಧವಿಲ್ಲ. 'ಪೂಜಾನೃತ್ಯ'ದ ಛಾಯಾಚಿತ್ರವನ್ನು 'ಚಿಟ್‌ಮೇಳ' ಎಂದು ಕರೆದಿದ್ದಾರೆ. ಇವರ ಕ್ಷೇತ್ರಕಾರ್ಯದ ಅನುಭವಕ್ಕೆ ! ಇಂತಹ ನಿದರ್ಶನಗಳು ಹಲವಾರಿವೆ.

ಜಾನಪದದ ಅಧ್ಯಯನ ಹೀಗಾಗದೆ, ಕ್ರಮವಾಗಿ ನಡೆದಾಗ ಮಾತ್ರ ಅದರ ನಿಜವಾದ ಮೌಲ್ಯಗಳನ್ನು ಗುರುತಿಸಲು ಸಾಧ್ಯ. ಗ್ರಾಮೀಣ ಜಾನಪದದ ಮೇಲೆ ಆಗಿರುವ ನಾಗರಿಕತೆಯ ಪ್ರಭಾವ, ನಾಗರಿಕತೆಯ ಮೇಲೆ ಆಗಿರುವ ಜಾನಪದದ ಪ್ರಭಾವ ಇವುಗಳನ್ನು ಗುರುತಿಸುವ ಕಾರ್ಯ ಸರಿಯಾದ ರೀತಿಯಲ್ಲಿ ಆಗಬೇಕಾಗಿದೆ. ಅಲ್ಲಲ್ಲಿ ಇಂತಹ ಕೆಲಸಗಳು ಆಗಿವೆ ಯಾದರೂ, ಆಗಬೇಕಾದ ಕೆಲಸ ಇನ್ನೂ ಬಹಳವಿದೆ.

* * * * *

ಚಾವಾಯಿ

ಹಬ್ಬಗಳು ಜನಪದ ಬದುಕಿನಲ್ಲಿ ವಿಶಿಷ್ಟ ಸ್ಥಾನ ಪಡೆದು ಕೊಂಡಿವೆ. ಅಂತೆಯೇ ಜನಪದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿಯೂ ಮೆರೆದಿವೆ. ಜನಪದರ ಪಾಲಿಗೆ ಅವು ಕೇವಲ ಸಾಂಪ್ರದಾಯಿಕವಾದ ಒಣ ಆಚರಣೆಗಳಲ್ಲ. ಬದುಕಿನ ಸರ್ವತೋಮುಖವಾದ ಚೇತನದ ಚಿಲುಮೆಗಳು. ಧಾರ್ಮಿಕವಾದ ಆಚರಣೆಗಳ ಜೊತೆ ಜೊತೆಯಲ್ಲಿಯೇ, ಲೌಕಿಕವಾದ ಹಾಗೂ ಕಲಾತ್ಮಕವಾದ ಆಚರಣೆಗಳೂ ಅದರಲ್ಲಿ ಬೆರೆತು ಅದಕ್ಕೊಂದು ಅಪೂರ್ವತೆಯನ್ನು ತಂದು ಕೊಡುತ್ತವೆ.

ಭಾರತ ಹಳ್ಳಿಗಳ ನಾಡೆಂತೋ, ಅಂತೆಯೇ ಹಬ್ಬಗಳ ಬೀಡು ಹೌದು. ಅಲ್ಲಿ ಕಂಡು ಬರುವ ಸಮರಸದ ಬದುಕು ನಿಜಕ್ಕೂ ಅನುಕರಣೀಯ. ಹಬ್ಬಗಳ ಸಾಲಿನಲ್ಲಿ 'ನವರಾತ್ರಿ' ಅಂತಹ ಒಂದು ಅಪೂರ್ವವಾದ, ಕಣ್ಮನ ಸೂರೆಗೊಳ್ಳುವ ಹಬ್ಬ. ಗುಡಿಸಲಿನಿಂದ - ಅರಮನೆಯವರೆವಿಗೂ ಎಲ್ಲರೂ ಸಂಭ್ರಮದಿಂದ, ಉತ್ಸಾಹದಿಂದ ಒಟ್ಟುಗೂಡಿ ಆಚರಿಸುವ ಹಬ್ಬ.

ಭಾರತದ ಇನ್ನಿತರ ಭಾಗಗಳಲ್ಲಿ 'ವಿಜಯದಶಮಿ' ಎಂದು ವಿಶೇಷವಾಗಿ ಕರೆಸಿಕೊಂಡು ಆಚರಿಸಲ್ಪಡುವ ಈ ಹಬ್ಬ, ಕನ್ನಡ ನಾಡಿನಲ್ಲಿ - ನವರಾತ್ರಿ, ದಸರಾ, ಮಾನವಮಿ, ಎಂದೇ ಹೆಚ್ಚು ಪ್ರಚಲಿತ. 'ಬನ್ನಿ ಹಬ್ಬ' ಎಂದೂ ಕೆಲವೆಡೆ ಕರೆಯುತ್ತಾರೆ.

'ನವರಾತ್ರಿ' ಬರುವುದು ಆಶ್ವೀಜ ಶುದ್ಧದಲ್ಲಿ. ಜನಪದರ ಬದುಕಿನಲ್ಲಿ ಇದಕ್ಕೆ ಹೆಚ್ಚಿನ ಮಹತ್ವವಿದೆ. ಮುಂಗಾರು ಬೆಳೆ ಮನೆ ಸೇರಿದ್ದು, ಹಿಂಗಾರು ಬೆಳೆ ಭೂಮಿಯಲ್ಲಿ ಹಚ್ಚಹಸಿರಾಗಿ ಕಣ್ಮನಗಳನ್ನು ತಣಿಸುತ್ತಿರುತ್ತದೆ. ರೈತ ಸಂತಸದಲ್ಲಿ ತೇಲಾಡುತ್ತಿರುತ್ತಾನೆ. "ಮಾನವಮಿ ಹೊತ್ತಿಗೆ ಮಾಳೆಲ್ಲ ಹೊಡೆ" ಎಂಬ ಗಾದೆಯೇ ಇದೆ. ಅಷ್ಟೇ ಅಲ್ಲ, ಆ ಕಾಲದಲ್ಲಿ ದನಗಳನ್ನೂ ಕೆಣಕುವಂತಿರುವುದಿಲ್ಲ. ಅವೆಲ್ಲವೂ ನೊಣ ಕುಳಿತರೆ ಜಾರುವಂತೆ ಹಸಿರನ್ನು ಮೆಯ್ದು ಮಿಂಚುತ್ತಿರುತ್ತವೆ. ಅದಕ್ಕಾಗಿಯೇ - "ಮಾರ್ನಮಿಲಿ ದನ ಕೆಣಕಬೇಡ" ಎಂಬ ಗಾದೆಯೂ ಹುಟ್ಟಿಕೊಂಡಿದೆ.

ಭೂಮಿತಾಯಿಯ ಪೂಜೆಯೂ ಈ ಹಬ್ಬದ ಒಂದು ವಿಶೇಷ. ಹೊಸ ಬೆಳಸಿಗೆ, ಸಮೃದ್ಧಿಗೆ ಇದು ಸಂಕೇತ. ರೈತ ಕೊಡುಗೈ ದೊರೆಯಾಗಿ ಸಂತಸದಲ್ಲಿ ತೇಲಾಡುತ್ತಿರುತ್ತಾನೆ. ನವರಾತ್ರಿ ಹಬ್ಬದ ವಿಶೇಷವೆನಿಸಿದ 'ಬನ್ನಿ'ಯನ್ನು ಪೂಜಿಸಿ, ಹಾಡಿ - ಕುಣಿದು - ಕುಪ್ಪಳಿಸುತ್ತಾನೆ :

ಊರ ಸೀಮೆಯ ದಾಟಿ ಕಾಡಗಡಿಯನು ಸೇರಿ

ಕಾಡ ಸಂಪತ್ತು ತರಬನ್ನಿ |

ಬೆಳೆವ ಬೆಳಸಿಗೆ ಬನ್ನಿ ಭೂಮಿ ತಾಯಿಗೆ ಬನ್ನಿ

ನಾಡ ಸಂಪತ್ತು ಬೆರಿ ಬನ್ನಿ ||
ಅರಸನ ಅಂಗಳಕ ಸರಸ ರಂಗಾಹೊಯ್ತು
ಹೊರಸಿ ತಂದಾರ ಸಿರಿ ಬನ್ನಿ |
ದೇವ ದೇವ ಬನ್ನಿ ದೈವ ದೈವದ ಬನ್ನಿ
ನಾವು ಮುಡಿವುದು ನಮ ಬನ್ನಿ ||
ಗೆಜ್ಜೆ ಗೆಜ್ಜೇ ಹಾಕಿ ಗುಜ್ಜೇರು ಕುಣಿವಾರ
ವಜ್ರರ ವಡ್ಯಾಣ ಫಿಲ ಫಿಲ |
ನಾವು ಕುಣಿಯೋಣ ಬನ್ನಿ ನೋವ ಮರಿಯೋಣ ಬನ್ನಿ
ಜೀವ ಒಂದಾಗಿ ಇರಬನ್ನಿ ||

ಕಾಲಿಗೆ ಗೆಜ್ಜೆ ಕಟ್ಟಿ, ಕೈಯಲ್ಲಿ ಕೋಲ ಹಿಡಿದು ಹಾಡುತ್ತ ಕುಣಿಯುವ ಹೆಣ್ಣು - ಗಂಡುಗಳ ಜೋಡಿ ಕುಣಿತ ಕಣ್ಣಿಗೊಂದು ಹಬ್ಬ. ಮಕ್ಕಳ ಸಂಭ್ರಮಕ್ಕಂತೂ ಅಡ್ಡಿ ಇರುವುದಿಲ್ಲ. ಪ್ರಕೃತಿಯ ಸೊಬಗಿನ ಇಂತಹ ಕಾಲವನ್ನು ಕುರಿತು ಶಿಷ್ಟ ಕವಿಗಳೂ ಅದನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸಿರಾದುದು ಕವಿಯಾತ್ಮಂ
ರಸಪಾನ ಸ್ನಾನದಲಿ

* * * * *

ನವರಾತ್ರಿಯ ಹಬ್ಬಕ್ಕೆ ಪೌರಾಣಿಕವಾದ, ಐತಿಹಾಸಿಕವಾದ, ಧಾರ್ಮಿಕವಾದ ಹಾಗೂ ಸಾಮಾಜಿಕವಾದ ಹಿನ್ನೆಲೆ ಹಾಗೂ ಮಹತ್ವವಿದೆ. ಪೌರಾಣಿಕ ಹಿನ್ನೆಲೆಯನ್ನು ಗಮನಿಸುವಾಗ - ದೇವತೆಗಳಿಗೂ ದಾನವರಿಗೂ ನಡೆದ ಯುದ್ಧದಲ್ಲಿ, ದುಷ್ಟ ಶಕ್ತಿ ಅಳಿದು, ಶಿಷ್ಟ ಶಕ್ತಿ ಮೆರೆದುದನ್ನು ಆಚರಿಸಲು ಹುಟ್ಟಿಕೊಂಡ ಹಬ್ಬ ಇದು. ದಾನವ ಶಕ್ತಿಯನ್ನು ಅಡಗಿಸಿ, ದೈವೀ ಶಕ್ತಿ ಮೆರೆದ ಸಂಕೇತವಾಗಿಯೂ ವಿಜಯ ದಶಮಿ ಪ್ರಚಲಿತವಾಗಿದೆ.

ದುಷ್ಟ ರಾವಣನನ್ನು ಕೊಂದು ರಾಮನು ಗೆಲುವನ್ನು ಪಡೆದ ದಿನವೂ ಅದೇ ಎಂಬ ನಂಬಿಕೆಯೂ ಇದೆ. ದುರ್ಗೆ ಚಾಮುಂಡಿ ಮಹಿಷಾಸುರನನ್ನು ಸಂಹರಿಸಿದ ದಿನವೂ ಇದೇ ಎಂದು ನವರಾತ್ರಿಯ ಹತ್ತನೆಯ ದಿನ ವಿಜಯ ದಶಮಿಯನ್ನು ವಿಜಯದ ಸಂಕೇತವಾಗಿ, ಶಿಷ್ಟ ಶಕ್ತಿಯ ಸಂಕೇತವಾಗಿ ಆಚರಿಸಲಾಗುತ್ತದೆ.

ಅಂತೆಯೇ, ಮಹಾಭಾರತದ ಕತೆಗೂ, ಮಹಾನವಮಿ ಹಬ್ಬಕ್ಕೂ ಹತ್ತಿರದ ನಂಟು. ಪಾಂಡವರ ಅಜ್ಞಾತವಾಸದ ಕಡೆಯ ದಿನ ಅದು. ಗೋಗ್ರಹಣ ಸಂದರ್ಭದಲ್ಲಿ ಅರ್ಜುನ, ಬನ್ನಿವೃಕ್ಷದಲ್ಲಿ

ಅಡಗಿಸಿಟ್ಟಿದ್ದ ಶಸ್ತ್ರಾಸ್ತ್ರಗಳನ್ನು ಹಿಂದಕ್ಕೆ ಪಡೆದು ಕೌರವರ ಮೇಲೆ ಯುದ್ಧ ಮಾಡಿ ಜಯ ಗಳಿಸಿದ ದಿನ ಕೂಡ ಅದೇ. ಹಾಗಾಗಿ 'ಬನ್ನಿ ಪೂಜೆ' ಆ ದಿನಗಳಲ್ಲಿ ವಿಶೇಷ. ಜನಪದರು ಅದನ್ನು ಕುರಿತು ಹಲವು ಬಗೆಯಲ್ಲಿ ಹಾಡಿದ್ದಾರೆ :

ಬನ್ನಿ ಮುಡಿಯೋಣ ಬಾರ ಕೋಲು ಕೋಲ ।
ಚಿನ್ನ ತರುವೋಣ ಬಾರ ಕೋಲು ಕೋಲ ॥ ಪ ॥
ಇಂದು ಮುಡಿಯುವ ಬನ್ನಿ ಮುಂದೆ ಮಗ ಹೊನ್ನಾಗಿ ।
ಕುಂದಣದಾರೂತಿ ಬೆಳಗುದಕ ॥ ಪ ॥

ಐತಿಹಾಸಿಕವಾಗಿ ನೋಡುವಾಗ ವಿಜಯನಗರ ಅರಸರ ಕಾಲದಲ್ಲಿ ಈ ಹಬ್ಬ ಉಚ್ಛ್ರಾಯ ಸ್ಥಿತಿಯಲ್ಲಿ ಆಚರಿಸಲಾಗುತ್ತಿತ್ತು ಎಂಬುದಕ್ಕೆ ಹಲವಾರು ದಾಖಲೆಗಳಿವೆ. ಕಪ್ಪ ಕಾಣಿಕೆಗಳನ್ನು ಒಪ್ಪಿಸಲು, ತಮ್ಮ ತಮ್ಮ ಸೈನ್ಯಗಳನ್ನು ಸಜ್ಜುಗೊಳಿಸಿಕೊಳ್ಳಲು, ಹಾಗೂ ವಿಜಯ ಯಾತ್ರೆ ಹೊರಡಲು ಸೂಕ್ತ ಸಮಯವೆಂದು ಭಾವಿಸಲಾಗಿತ್ತು. ಹಂಪೆಯಲ್ಲಿ ಇಂದಿಗೂ ಅವಶೇಷವಾಗಿ ಕಂಡು ಬರುವ 'ಮಹಾನವಮಿ ದಿಬ್ಬ'. ಅದರ ವೈಭವದ ಕುರುಹಾಗಿ ಉಳಿದಿದೆ. ಈ ಮಹಾನವಮಿ ವಿಜಯನಗರ ಸಾಮ್ರಾಜ್ಯದ ಶ್ರೀಮಂತವಾದ ಒಂದು ಸಾಂಸ್ಕೃತಿಕ ಪರಂಪರೆಯಾಗಿಯೂ ಉಳಿದು ಬಂದಿದೆ.

ವಿಜಯನಗರ ಸಾಮ್ರಾಜ್ಯದ ಪಥನಾನಂತರ ಇದರ ವೈಭವವೂ ಕಣ್ಮರೆಯಾಯಿತಾದರೂ, ಮತ್ತೆ ಆ ಪರಂಪರೆಯನ್ನು ಜೀವಂತಗೊಳಿಸಿದವರು ಮೈಸೂರು ಅರಸರು. ಹೆಚ್ಚು ಕಡಿಮೆ ಅದೇ ಮಾದರಿಯಲ್ಲಿ ನವರಾತ್ರಿ ಉತ್ಸವ ಮುಂದುವರೆದುಕೊಂಡು ಬಂದಿತ್ತು. ಅಂತೆಯೇ ಅದು ಮನೆ ಮನೆಯಲ್ಲಿಯೂ 'ದಸರಾ ಗೊಂಬೆ'ಗಳ ಮೂಲಕ ದಸರೆಯ ಅಣಕು ಪ್ರದರ್ಶನ ಇಂದಿನವರೆಗೂ ರೂಢಿಯಲ್ಲಿ ಉಳಿದು ಬರುವಂತಾಯಿತು. ಅರಮನೆಯ ಅರಸರ ದಸರಾ, ಜನಸಾಮಾನ್ಯರ ದಸರವೂ ಆಯಿತು. ಅದೊಂದು ನಾಡಹಬ್ಬವಾಗಿ ಜನಪ್ರಿಯವಾಯಿತು.

'ನವರಾತ್ರಿ' - ಪ್ರಮುಖವಾಗಿ ಶಕ್ತಿ ದೇವತೆಯ ಆರಾಧನೆಯ ಹಬ್ಬ. ಈ ಆದಿ ಶಕ್ತಿಯೇ ಮಹಿಷಾಸುರ ಮರ್ಧಿನಿ. ಮಹಾನ್ ಶಕ್ತಿ. ಅವಳನ್ನು ಭಕ್ತರು ಹಲವು ರೂಪಗಳಲ್ಲಿ ಕಂಡಿದ್ದಾರೆ. ಹಲವು ಹೆಸರುಗಳಲ್ಲಿ ಕರೆದಿದ್ದಾರೆ. ಹಲವು ವಿಧಗಳಲ್ಲಿ ಆರಾಧಿಸುತ್ತ ಬಂದಿದ್ದಾರೆ. ಶಿಷ್ಟರು ಅವಳನ್ನು ಕಂಡಿರುವ ಬಗೆ ಒಂದಾದರೆ, ಜನಪದರು ಆ ಮಹಾನ್ ಶಕ್ತಿ ದೇವತೆಯನ್ನು ಕಂಡು ಕೊಂಡಾಡಿರುವ ಬಗೆಯೇ ಬೇರೊಂದು ಬಗೆಯದು. ನವರಾತ್ರಿ ಬಂತೆಂದರೆ ಊರಿನವರೆಲ್ಲ ಒಟ್ಟುಗೂಡಿ, ಕೈಯಲ್ಲಿ ಕೋಲನ್ನು ಹಿಡಿದು, ಕಾಲಿಗೆ ಗೆಜ್ಜೆ ಕಟ್ಟಿ, ಕುಣಿಯುತ್ತ ಚಾಮುಂಡಿಯ ವೈಭವವನ್ನು ಮನಃಪೂರ್ವಕ ಬಣ್ಣಿಸುವ ವೈಖರಿ ವಿಶಿಷ್ಟವಾದುದು :

ಕೋಲು ಕೋಲು ಕೋಲೆ ಕೋಲನ್ನ ಕೋಲು ಕೋಲೆ
ಕೋಲು ಕೋಲು ಕೋಲೆ ಕೋಲನ್ನ ಕೋಲು ಕೋಲೆ ॥ ಪ ॥
ಅಕ್ಕ ಹೊರಟಾಳೆ ಅಕ್ಕಯ್ಯ ಹೊರಟಾಳೆ
ಅಕ್ಕಿ ಹೊಂಬಾಳೆ ಮಡಕೊಂಡು ಕೋಲೆ
ಅಕ್ಕಿ ಹೊಂಬಾಳೆ ಮಡಕೊಂಡು ಚಾಮುಂಡಿ

ಅಕ್ಕ ಹೊರಟಾಳೆ ಜಲಧಿಗೆ ಕೊಲೆ

ತಾಯಿ ಹೊರಟಾಳೆ ತಾಯವ್ವ ಹೊರಟಾಳೆ

ತಾಯಿ ಹೊಂಬಾಳೆ ಮಡಕೊಂಡು ಕೋಲೆ

ತಾಯಿ ಹೊಂಬಾಳೆ ಮಡಕೊಂಡು ಚಾಮುಂಡಿ

ತಾಯಿ ಹೊರಟಾಳೆ ಜಲಧಿಗೆ ಕೋಲೆ

ಅರಸಿನ್ ಸೀಗೆಕಾಯಿ ಹಸನಾಗಿ ತೊಟ್ಟುಕೊಂಡು

ನವರತ್ನ ಸೀರೆನುಟ್ಟುಕೊಂಡು ಕೊಲೆ

ನವರತ್ನ ಸೀರೆನುಟ್ಟುಕೊಂಡು ಚಾಮುಂಡಿ

ಬಂದಾಳೆ ಕಾರಂಜಿ ಕೆರೆಗಾಗಿ ಕೊಲೆ ll ಪ ll

- ಆದಿಶಕ್ತಿಯ ಹಲವು ರೂಪಗಳಲ್ಲಿ ಒಂದಾದ ಪಾರ್ವತಿ, ಜನಪದರಿಗೆ ಹತ್ತಿರವಾದ ದೇವತೆ. ಅವರ ಎಲ್ಲ ಕಷ್ಟ - ಸುಖಗಳಿಗೂ ಬೇಗ ನೆರವಾಗುವ ದೇವತೆ. ಹಾಗಾಗಿ ಅವಳನ್ನು ತಮ್ಮ ಹತ್ತಿರದ ಬಂಧುವಿನಂತೆ ಅವರು ಕಾಣುತ್ತಾರೆ. ಅಷ್ಟೇ ಭಯ - ಭಕ್ತಿಯಿಂದ ಪೂಜಿಸುತ್ತಾರೆ. ಈ ಆದಿಶಕ್ತಿಯ ನಾಮಗಳು, ರೂಪಗಳು ಹಲವು. ಅವಳ ಒಂದೊಂದು ರೂಪವೂ, ಒಂದೊಂದು ನಾಮವೂ ಜನಮನದಲ್ಲಿ ಅಚ್ಚೊತ್ತಿ ನಿಂತಿದೆ. ಆಯಾ ರೂಪದಲ್ಲಿಯೇ, ಆಯಾ ಹೆಸರಿನಲ್ಲಿಯೇ ಅವಳನ್ನು ಕಂಡು, ಕರೆದು ತೃಪ್ತಿ ಹೊಂದುತ್ತಾರೆ. ಗ್ರಾಮದೇವತೆಯಾಗಿದ್ದ ಚಾಮಾಯಿಯೇ ಚಾಮುಂಡೇಶ್ವರಿ. ಸಹಸ್ರನಾಮಗಳ ಶಕ್ತಿದೇವತೆ - ಚಾಮಾಯಿ.

ಆದಿಶಕ್ತಿ, ಸರ್ವಶಕ್ತಿ, ಮಹೇಶ್ವರಿ, ಚಂಡಿ, ಚಾಮುಂಡಿ, ಕಾಳಿ, ಕಾತ್ಯಾಯಿನಿ, ಅಂಬಾ, ಈಶ್ವರಿ, ಭಗವತಿ, ದುರ್ಗಿ, ಮಹಾದೇವಿ, ಮಹಾ ಕಾಳಿ, ಚಾಮಾಯಿ, ಮಹಿಷಾಸುರ ಮರ್ಧಿನಿ, ದೇವಿ, ಭವಾನಿ, ಮುಂತಾದ ಅವತಾರಗಳಲ್ಲಿ ಕಂಡು, ಕರೆದು ಆರಾಧಿಸುತ್ತಾರೆ. ಈ ಆದಿಶಕ್ತಿಯ ಪ್ರಸ್ತಾಪ ಶಿಷ್ಟ ಪುರಾಣ, ಜನಪದ ಪುರಾಣಗಳೆರಡರಲ್ಲಿಯೂ ಧಾರಾಳವಾಗಿ ಬರುತ್ತದೆ. ಅವಳ ಹಿರಿಮೆ ಗರಿಮೆಗಳನ್ನು ಈ ಎರಡೂ ಪುರಾಣಗಳಲ್ಲಿಯೂ ಮೈಮರೆತು ಕೊಂಡಾಡಿದ್ದಾರೆ.

ಶಿಷ್ಟ ಪುರಾಣಗಳಲ್ಲಿ - ಮಾರ್ಕಂಡೇಯ ಪುರಾಣ, ಕಾಲಿಕಾ ಪುರಾಣ, ಶ್ರೀದೇವಿ ಭಾಗವತ, ಸ್ಕಾಂದ ಪುರಾಣ ಹಾಗೂ ವರಾಹ ಪುರಾಣಗಳು ದೇವಿಯ ಮಹತ್ಮ್ಯವನ್ನು ಅದ್ಭುತವಾಗಿ ವರ್ಣಿಸಿವೆ. ಇಲ್ಲಿ ಬರುವ ಸರ್ವಶಕ್ತೆಯಾದ ಆದಿಶಕ್ತಿ ತ್ರಿಮೂರ್ತಿಗಳ ತೇಜಃಪುಂಜದಿಂದ ನಾರೀರೂಪವನ್ನು ತಾಳಿ ಮಹಿಷಾಸುರ ಮರ್ಧಿನಿಯೆನಿಸಿದಳು.

ಹಾಗೆ ರೂಪುಗೊಂಡ ನಾರೀ ರೂಪದಲ್ಲಿ - ಶಂಭುವಿನ ತೇಜದಿಂದ ನಾರಿಯ ಮುಖ ವಾಯಿತು. ಯಮನ ತೇಜದಿಂದ ಕೇಶರಾಶಿಯಾಯಿತು, ವಿಷ್ಣುವಿನ ತೇಜದಿಂದ ಬಾಹುಗಳಾ ದವು, ಸೋಮದೇವತೆ ತೇಜದಿಂದ ಸ್ತನಯುಗ್ಮವಾಯಿತು, ಇಂದ್ರನ ತೇಜದಿಂದ ನಡು ವಾಯಿತು, ವರುಣನ ತೇಜದಿಂದ ಮೊಣಕಾಲು ತೊಡೆಗಳಾದುವು, ಭೂದೇವಿಯ ತೇಜದಿಂದ ಕಟಿ ಭಾಗವಾಯಿತು, ಬ್ರಹ್ಮನ ತೇಜದಿಂದ ಪಾದಗಳಾದವು, ಸೂರ್ಯನ ತೇಜದಿಂದ ಪಾದಾಂಗುಲಿಗಳಾದವು. ವಸುದೇವತೆಯ ತೇಜದಿಂದ ಕೈ ಬೆರಳುಗಳಾದವು, ಕುಬೇರನ ತೇಜದಿಂದ ನಾಸಿಕೇಂದ್ರಿಯ, ಪ್ರಜಾಪತಿಯ ತೇಜದಿಂದ

ದಂತಗಳು, ಅಗ್ನಿಯ ತೇಜದಿಂದ ಮೂರು ಕಣ್ಣುಗಳು, ಹುಬ್ಬುಗಳು, ಉಳಿದೆಲ್ಲ ದೇವತೆಗಳ ತೇಜೋರಾಶಿಯೂ ಕೂಡಿ ಸರ್ವಮಂಗಳ ದೇವಿಯಾದ ಚಾಮುಂಡಿ ಅವತರಿಸಿದಳು.

ಇಷ್ಟೆಲ್ಲ ತೇಜಸ್ಸನ್ನೂ ತುಂಬಿಕೊಂಡ ಆ ಸರ್ವಶಕ್ತಿ ದುಷ್ಟ ಶಕ್ತಿಯಾದ ಮಹಿಷನನ್ನು ಕೊಂದು ಮಹಿಷಾಸುರ ಮರ್ಧಿನಿಯೆನಿಸಿದ ಆದಿಶಕ್ತಿಯನ್ನು ವಿವಿಧ ಬಗೆಯಲ್ಲಿ ಬಣ್ಣಿಸಿದ್ದಾರೆ. ಇಲ್ಲಿ ಬರುವ ಮಹಿಷ ಮತ್ತು ಮಹಿಷಾಸುರ ಮರ್ಧಿನಿಯ ಕಥೆ ಸ್ವಾರಸ್ಯವಾಗಿ ಮೂಡಿ ಬಂದಿದೆ. ದುಷ್ಟ ಶಕ್ತಿ ಎಷ್ಟೇ ಮೆರೆದರೂ, ಕೊನೆಗೆ ಅದಕ್ಕೇ ಮೃತ್ಯು ಎಂಬ ಸತ್ಯ ಶಿಷ್ಟ ಶಕ್ತಿಯ ಮೇಲುಗೈ ಯಿಂದ ಸ್ಪಷ್ಟವಾಗುತ್ತದೆ.

ಅಷ್ಟೇ ಅಲ್ಲ, ಎಲ್ಲ ದೇವತೆಗಳೂ ತಮ್ಮ ತಮ್ಮ ಆಯುಧಗಳನ್ನು ಆ ಶಕ್ತಿ ದೇವತೆಗಿತ್ತು, ಅಸುರ ಸಂಹಾರಕ್ಕೆ ಮತ್ತಷ್ಟು ಶಕ್ತಿ ತುಂಬಿದರು. ಈಶ್ವರನ ತ್ರಿಶೂಲ, ವಿಷ್ಣುವಿನ ಚಕ್ರಾಯುಧ, ವರುಣನ ಶಂಖ, ವಾಯುವಿನ ಬಿಲ್ಲು, ದೇವೇಂದ್ರನ ವಜ್ರಾಯುಧ, ಅಗ್ನಿಯ ಶಕ್ತ್ಯಾಯುಧ, ಯಮನ ದಂಡ, ಬ್ರಹ್ಮನ ಕಮಂಡಲ, ಕಾಲದೇವತೆಯ ಖಡ್ಗ, ಐರಾವತದ ಗಂಟೆ, ಪ್ರಜಾಪತಿಯ ಅಕ್ಷಮಾಲೆ, ಸೂರ್ಯನ ರಶ್ಮಿ, ವಿಶ್ವಕರ್ಮನ ಚೂಡಾಮಣಿ, ಕುಂಡಲ ಮತ್ತು ಅರ್ಧ ಚಂದ್ರಗಳಷ್ಟೇ ಅಲ್ಲದೆ, ಉಳಿದೆಲ್ಲ ದೇವತೆಗಳ ರಕ್ಷಾಕವಚಗಳೂ, ವೇಷಭೂಷಣಾದಿ ಗಳೂ ದೇವಿಗೆ ಕೊಡುಗೆಯಾಗಿ ಬಂದುವು. ಅಸುರ ಪ್ರಭುವಾದ ಮಹಿಷಾಸುರನ ಮರ್ಧನಕ್ಕೆ ಎಲ್ಲ ಸಿದ್ಧತೆಗಳೂ ಆದುವು.

ಜನಪದ ಪುರಾಣದ ಪ್ರಕಾರ, ಇದರ ಕಥೆಯೇ ಬೇರೆ. ಚಾಮುಂಡಿ, ಉಜ್ಜಯಿನಿ ದೇಶದ ಬಿಜ್ಜಳರಾಯನ ಏಳು ಜನ ಹೆಣ್ಣು ಮಕ್ಕಳಲ್ಲಿ ಕೊನೆಯವಳು. ಏಳು ಜನ ಅಕ್ಕ ತಂಗಿಯರಲ್ಲಿ ಮನಸ್ತಾಪ ಬಂದು ಜಗಳವಾಡಿ ಊರು ಬಿಟ್ಟು ಬೇರೆ ಬೇರೆ ಸ್ಥಳಗಳನ್ನು ಸೇರುತ್ತಾರೆ. ಕೊನೆಯವಳಾದ ಚಾಮುಂಡಿ ತಾನೆಲ್ಲಿ ಸೇರುವುದೆಂದು ಅಲೆಯುತ್ತ ಬರುತ್ತಿರುವಾಗ ಆಕರ್ಷಕವಾದ ಮಹಿಷಮಂಡಲ ಅವಳ ಕಣ್ಣಿಗೆ ಬೀಳುತ್ತದೆ. ಅಲ್ಲಿಯೇ ನೆಲಸುವುದೆಂದು ಚಾಮುಂಡಿ ನಿರ್ಧರಿಸುತ್ತಾಳೆ. ಆದರೆ ಅಲ್ಲಿಯ ರಾಕ್ಷಸ ರಾಜನಾದ ಮಹಿಷಾಸುರನ ಭಂಟರು ಅವಳನ್ನು ತಡೆಯ ಬಂದು, ಅವಳ ಉರಿಗಣ್ಣಿಗೆ ಹೆದರಿ ಒಡೆಯನ ಬಳಿ ಓಡುತ್ತಾರೆ. ಕೊಬ್ಬಿದ್ದ ಮಹಿಷಾಸುರನನ್ನು ಚಾಮುಂಡಿ ಸಂಹರಿಸಿ ಅಲ್ಲಿಯೇ ನೆಲೆಯೂರುತ್ತಾಳೆ. ಮೈಸೂರು ಅರಸರ ಮನೆದೇವರಾಗಿ, ಆರಾಧ್ಯ ದೈವವಾಗಿ ಉಳಿಯುತ್ತಾಳೆ. ಅದರ ವರ್ಣನೆಯನ್ನು ಅವರ ಸಾಹಿತ್ಯದಿಂದಲೇ ಕೇಳಬೇಕು :

ತಂದನಾ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಂದನಾನಾ ತಾನಾನಾ ॥ ಪ ॥
ಚಲದಲ್ಲಿ ಚಾಮುಂಡಮ್ಮ
ವರದಲ್ಲಿ ಲಕ್ಷ್ಮಿದೇವಿ
ವಿದ್ಯೆಲಿ ಶಾರದಾಂಬ
ವರವ ಪಾಲಿಸು ತಾಯೆ ॥ ತಂದನಾ ॥
ಮಾಯರಾತಿ ನಮ್ಮಮ್ಮ
ಬೆಟ್ಟದ ಚಾಮುಂಡಿ

ನಂಜಲ ಗೂಡಿನ ದೊರೆಯ

ಮಡುವಿ ಚಾಮುಂಡಿ ತಾಯಿ || ತಂದನಾ ||

ಮಾಯರಾತಿ ಬೆಟ್ಟದ ಚಾಮುಂಡೇಶ್ವರಿ

ವರಾವತಾರವನೆತ್ತುಕೊಂಡು

ಮಹಿಷಾಸುರನ ಸಂಹಾರ ಮಾಡಿ

ಚಾಮುಂಡೇಶ್ವರಿ ಚಾಮರಾಜರಿಗೆ ಮನೆದೇವರಾಗಿ || ತಂದನಾ ||

ಶಿವನಿಂದ ವರವ ಪಡೆದ ,

ಬೆಟ್ಟದ ಚಾಮುಂಡವ್ವ

ವರವ ಪಾಲಿಸು ತಾಯ

ನಂಬಿದ ಭಕ್ತರ ಮ್ಯಾಲೆ|| ತಂದನಾ ||

ಚಾಮುಂಡೇಶ್ವರಿ ಮೈಸೂರಿನ ಅಧಿದೇವತೆ. ನವರಾತ್ರಿಯಲ್ಲಿ ಅವಳಿಗೆ ವಿಶೇಷ ಪೂಜೆ. ಆ ದಿನಗಳಲ್ಲಿ ಕೈಗೊಂಡ ಕಾರ್ಯಗಳೆಲ್ಲವೂ ಕೈಗೂಡುತ್ತವೆ ಎಂಬ ನಂಬಿಕೆ ಎಲ್ಲರದ್ದೂ. ರಾಜರು ವಿಜಯ ಯಾತ್ರೆಯನ್ನು ಕೈಗೊಳ್ಳುತ್ತಿದ್ದುದಷ್ಟೇ ಅಲ್ಲ, ಸಾಮಾನ್ಯ ಜನರೂ ತಮ್ಮ ಮಹತ್ವದ ಕಾರ್ಯಗಳಿಗೆ ಅಂದೇ ಪೀಠಿಕೆಯನ್ನು ಹಾಕುತ್ತಾರೆ. ನವರಾತ್ರಿಯ ವಿಶೇಷವಾದ "ಬನ್ನಿ"ಯನ್ನು ಹಂಚುವುದರ ಮೂಲಕ ವ್ಯವಹಾರದ ಸಂಬಂಧಗಳನ್ನು ಕುದುರಿಸುತ್ತಾರೆ.

"ಬನ್ನಿಮರ" ಕೇವಲ ಮರ ಅಲ್ಲ. ಅದರಲ್ಲಿ 'ಮಹಾಕಾಳಿ' ನೆಲಸಿದ್ದಾಳೆ ಎಂಬ ನಂಬಿಕೆ ಜನಪದರದ್ದು. ಹಾಗಾಗಿಯೇ ಅದನ್ನು 'ಬನ್ನಿ ಮಹಾಕಾಳಿ' ಎಂದು ಕರೆಯುತ್ತಾರೆ. ಸಾಕ್ಷಾತ್ ಚಾಮುಂಡಿಯೇ ಅದರಲ್ಲಿ ನೆಲಸಿದ್ದಾಳೆ ಎಂಬ ಭಾವನೆ ಜನಪದರದಲ್ಲಿದೆ. ರಾಜ ಮಹಾರಾಜರೂ ಬನ್ನಿಪೂಜೆಯನ್ನು ವಿಜೃಂಭಣೆಯಿಂದ ಮಾಡುತ್ತಿದ್ದರು. 'ಬನ್ನಿ ಹಬ್ಬ' ಅಥವಾ 'ಮಹಾನವಮಿ ಮಂಟಪ' ಇಂದಿಗೂ ಎಲ್ಲ ಗ್ರಾಮಗಳಲ್ಲಿಯೂ ಇದೆ.

ಆದಿಶಕ್ತಿಯ ಆರಾಧನಾ ಉತ್ಸವವಾದ ನವರಾತ್ರಿಯೇ ಮಹಾನವಮಿ. ನಮ್ಮ ಹಳ್ಳಿಗಳಲ್ಲಿ "ಮಾರಲಮ್ಮಿ" ಎಂದು ಕರೆಯುವುದು ಇದನ್ನೇ. ಈ "ಮಾರಲಮ್ಮಿ"ಯೇ 'ಮಹಾನವಮಿ'. ಗ್ರಾಮೀಣ ಜನರು ಈ ಹಬ್ಬವನ್ನು ಹೆಚ್ಚು ಭಕ್ತಿಯಿಂದ ಆಚರಿಸುತ್ತಾರೆ. 'ಮಗನನ್ನು ಮಾರಿ ಮಾರಲಮ್ಮಿ ಮಾಡು' ಎಂಬಂತಹ ಗಾದೆಗಳೂ ಇವೆ. ಅಂದು ಶಕ್ತಿದೇವತೆಯನ್ನು ವಿಶೇಷವಾಗಿ ಪೂಜಿಸಿ, ಆರಾಧಿಸಿ ತಮ್ಮ ಬೇಡಿಕೆಗಳನ್ನು ಮುಂದಿಡುತ್ತಾರೆ.

ವ್ಯಾಪಾರಸ್ಥರು, ವ್ಯವಹಾರಸ್ತರುಗಳಷ್ಟೇ ಅಲ್ಲ, ಹೆಣ್ಣು ಮಕ್ಕಳು, ತಮ್ಮ ತೌರಿನ ಸಂಬಂಧ ಶಾಶ್ವತವಾಗಿ ಉಳಿಯುವಂತಾಗಲೆಂದು ಹರಕೆ ಹೊತ್ತು ದೇವಿಯನ್ನು ಪೂಜಿಸುತ್ತಾರೆ. "ಬನ್ನಿ"ಯನ್ನು ಹಂಚುವ ನೆಪದಲ್ಲಿ ತೌರಿನ ಸಂಬಂಧದ ಕೊಂಡಿಯನ್ನು ಬಿಗಿಗೊಳಿಸಿಕೊಳ್ಳಲು ಹವಣಿಸುತ್ತಾರೆ :

ದಸರೇಕ ತವರೀಗೆ ಕುಸಲದಲಿ ನಾ ಹೋದೆ

ಸೊಸಿ ನೋಡಿ ಕೊಟ್ಟೆ ಓಡಿ ಬನ್ನಿ | ಅಣ್ಣಯ್ಯ |

ಖುಸಿಲಿಂದ ಬೊಟ್ಟ ಸೊಸಿಗಿಟ್ಟೆ ||

ತವರಿಗೆ ಹೋಗಿ ಅಣ್ಣನಿಗೆ ಬನ್ನಿ ಹಂಚುವ ನೆಪದಲ್ಲಿ ಅಣ್ಣನ ಮಗಳಿಗೆ ಹಣೆಗಿಟ್ಟು ತನ್ನ ಸೊಸೆಯನ್ನಾಗಿಸಿಕೊಳ್ಳುವ ಹಂಬಲವನ್ನು ವ್ಯಕ್ತಪಡಿಸುತ್ತಾಳೆ. ಅಷ್ಟೇ ಅಲ್ಲ, ತನ್ನ ಮಗ - ಸೊಸೆಯರ ಜೋಡಿಯನ್ನು ಕಂಡು ಹಿರಿ ಹಿಗ್ಗುತ್ತಾಳೆ. ತನ್ನ ಮಗ, ಮಗಳು, ಸೊಸೆ - ಮೂವರನ್ನೂ ಒಂದೇ ಸಮನಾಗಿ ಕಂಡು ದೃಷ್ಟಿ ತಾಕೀತೆಂದು ಅಂಜುತ್ತಾಳೆ. ದಸರೆಯ ಸಂದರ್ಭದಲ್ಲಿ ಬನ್ನಿ ಮುಡಿದ ಮಗನ ವೇಷಕ್ಕೆ ತಾಯಿ ಖುಷಿಯಿಂದ ಮೈ ಮರೆಯುತ್ತಾಳೆ.

ಬನ್ನಿಯ ಮುಡಿಯಾಕ ಸಣ್ಣ ಸೊಸಿ ಮನಿಯಾಗ
ಕಣ್ಣುಳ್ಳ ಮಗ ಮಂದ್ಯಾಗ | ಮುಡಿದಾರ
ಹೊನ್ನ ತುಂಬ್ಯಾರ ಉಡಿಯಾಗ ||
ಕಣ್ಣು ಮೂಗಿಲೆ ನನ್ನ ಹೆಣ್ಣು ಮಗಳು ಚೆಲುವಿ
ಬಣ್ಣಕ ನನ್ನ ಸೊಸಿ ಚೆಲುವಿ | ದಸರೇಕ
ಬನ್ನಿ ಮುಡಿದಾಗ ಮಗ ಚೆಲುವ ||

ನವರಾತ್ರಿಯೆಂದರೆ, ಆದಿಶಕ್ತಿ, ಸರ್ವಶಕ್ತೆಯೆನಿಸಿದ ಶಕ್ತಿ ದೇವತೆಯ ಆರಾಧನೆ. ಇದರ ಮೊದಲ ಮೂರು ದಿನಗಳು ಕೆಟ್ಟ ಶಕ್ತಿಯ ಪರಿಹಾರಾರ್ಥವಾಗಿ ದುರ್ಗಾ ಪೂಜೆ ವೈಭವದಿಂದ ನಡೆಯುತ್ತದೆ. ದುಷ್ಟ ಶಕ್ತಿ ಅಳಿದು ಶಿಷ್ಟ ಶಕ್ತಿ ಮೆರೆದ ಸಂಕೇತವಾಗಿ ಈ ಆಚರಣೆ ಜರುಗುತ್ತದೆ. ಅಷ್ಟೇ ಅಲ್ಲ, ಶರತ್ಕಾಲ, ವಸಂತ ಕಾಲಗಳೆರಡರಲ್ಲೂ ಜಗತ್ತಿನಲ್ಲಿ ರೋಗರುಜಿನಗಳು ಹೆಚ್ಚುತ್ತವಂತೆ. ಇದನ್ನು ಹೋಗಲಾಡಿಸಲೂ ಶಕ್ತಿದೇವತೆಯ ಆರಾಧನೆ ವಿಶೇಷವಾಗಿ ನಡೆಯುತ್ತದೆ.

ಶ್ರೀ ಲಕ್ಷ್ಮೀ ಬನ್ನಿ ಮಹಾಕಾಳಿ ನಮಸ್ತೆ
ಶ್ರೀ ಶಿವನ ಅರ್ಧಾಂಗಿ ಶಕ್ತಿ ನಮಸ್ತೆ
ಸಿರಿದೇವಿ ಕೊಡು ವರವ ಸರ್ವೆ ನಮಸ್ತೆ
ಭರದಿ ಸೂತನಗಿರಿಯ ಕಾಳಿ ನಮಸ್ತೆ

ಎಂದು ಸ್ತುತಿಗೈದು, ಶಕ್ತಿದೇವತೆಯಾದ ಚಾಮಾಯಿಯನನ್ನು ಭಕ್ತಿಯಿಂದ ಉಪಾಸನೆ ಗೈಯುತ್ತಾರೆ.

ಮೂರು ಹಂತಗಳಲ್ಲಿ ನಡೆಯುವ ಶಕ್ತಿಪೂಜೆಯ ಎರಡನೆಯ ಹಂತ - ಸುಖ, ಸಂಪದ ಗಳನ್ನು ಕೊಡುವಂತೆ ಮಹಾಲಕ್ಷ್ಮಿಯನ್ನು ಅರ್ಚಿಸಿ ಬೇಡುವುದು. ಮಳೆ, ಬೆಳೆ, ಐಶ್ವರ್ಯ ಗಳನ್ನಷ್ಟೇ ಅಲ್ಲದೆ ; ತಿಳಿಗೊಳಗಳುಕ್ಕಿ ಹರಿಯುವಂತಾಗಲಿ, ಗೋವ್ಗಳು ಕರೆಯುವಂತಾಗಲಿ, ನಳಿನ ಮುಖಿಯರು ಸುಪುತ್ರರನ್ನು ಪಡೆದು ಬಣ್ಣ ಬಂಗಾರ ಪುಣ್ಯವು ಹೆಚ್ಚುವಂತಾಗಲಿ ಎಂದು ಲಕ್ಷ್ಮಿಯನ್ನು ವೈಭವದಿಂದ ಆಚರಿಸುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಮಾನೌಮಿ ಸಂದರ್ಭದಲ್ಲಿಯೇ ಹಾಡುವ 'ಮಾನಾಮಿಪದಗಳ' ಸೊಬಗನ್ನು ನೋಡಿ :

ಶ್ರೀ ಸಕಲ ಸಾಮ್ರಾಜ್ಯ
ಲಕ್ಷ್ಮೀ ನಿವಾಸ ವಿಜಯೀಭವ

ದಿಗ್ವಿಜಯೀ ಭವ

ಎಂದು ಆರಂಭಿಸಿ :

ಮಳೆ ಬಂದು ಬೆಳೆ ಬಂದು ಇಳೆ ತಣಿಯಲೆಂದು
ತಿಳಿಗೊಳಗಳುಕ್ಕಿ ಗೋವ್ಗಳು ಕರೆಯಲೆಂದು
ನಳಿನ ಮುಖಿಯರು ಸುಪುತ್ರರ ಪಡೆಯಲೆಂದು
ಬಣ್ಣ ಬಂಗಾರ ಪುಣ್ಯವು ಹೆಚ್ಚಲೆಂದು
ಆಶ್ವೀಜ ಶುದ್ಧ ಮಾನಮಿ ಬರಲೆಂದು
ಐಶ್ವರ್ಯ ಸಕಲ ಸಂಪದ ಹೆಚ್ಚಲೆಂದು
ಈಶ್ವರನ ಕೃಪೆ ನಿಮಗೆ ಸುಖಿಯಾಗಲೆಂದು
ಶಾಶ್ವತದಿ ಹರಸಿದೆವು ಬಾಲಕರು ಬಂದು
ಶ್ರೀವರನು ಗಿರಿಜೇಶ ನಿಮಗೆ ಸಂಪದವ
ಈಯುತಿಹ ಎಲ್ಲಮಂ ಕೇಳಿರೀ ಪದವಾ
ಶ್ರೀ ಮಹಾಲಕ್ಷ್ಮಿ ನಿಮಗೊಲಿಯಬೇಕೆಂದು
ಭೂಲೋಕದೊಳಗುಳ್ಳ ಭಾಗ್ಯ ನಿಮಗೆಂದು

ಶಕ್ತಿಪೂಜೆಯ ಕೊನೆಯ ಮೂರು ದಿನಗಳು - ವಿದ್ಯಾ ಬುದ್ಧಿಯನ್ನು ವೃದ್ಧಿಗೊಳಿಸಲೆಂದು ವಿದ್ಯಾಧಿದೇವತೆಯಾದ ಸರಸ್ವತಿಯನ್ನು ಆರಾಧಿಸಲಾಗುತ್ತದೆ. ದಸರಾ ಹಬ್ಬದ ಸರಸ್ವತೀ ಪೂಜೆಗೆ ಒಂದು ವಿಶೇಷ. ಒಂಬತ್ತು ದಿನಗಳೂ ಶಕ್ತಿದೇವತೆಯಾದ ಚಾಮುಂಡೇಶ್ವರಿಯ ಉಪಾಸನಾ ಸಂದರ್ಭದಲ್ಲಿ ಜರುಗುವ ಈ ಎಲ್ಲಾ ಪೂಜಾ ವಿಧಿಗಳಿಗೂ ಹೆಚ್ಚಿನ ಮಹತ್ವವಿದೆ. ಬಹುತೇಕವಾಗಿ ಎಲ್ಲರೂ ಸಾಮೂಹಿಕವಾಗಿ ಇದನ್ನು ಆಚರಿಸುತ್ತಾರೆ. ರಾಜರ ಆಸ್ಥಾನದಲ್ಲೆಂತೋ ಅಂತೆಯೇ, ಜನಸಾಮಾನ್ಯನ ಅಂಗಳದಲ್ಲಿಯೂ ಇವು ನಡೆಯುತ್ತವೆ. ಮಾನೌಮಿ ಪದಗಳಲ್ಲಿ ಬರುವ 'ಹಲಗೆ ತೊಳೆಯುವ ಪದ'ಗಳಲ್ಲಿ ಇದರ ವರ್ಣನೆಯನ್ನು ನೋಡಿ :

ಚನ್ನ ಶಾರದೆಯೆಂಬ ಹಲಗೆಯನು ತೊಳೆವ
ಕನ್ನಡದ ಲಕ್ಷ್ಮಿಯನು ಬಣ್ಣಿಸಲಳವೇ
ಗಲಗಲನೆ ನಲಿವ ಗೆಜ್ಜೆಗಳ ಸರಪಳಿಯಾ
ಹಲಗೆ ಹೂವಿನ ಕೋಲು ಹೊಳೆವ ಗೊಂಡೇವು
ಮುಂದೆ ಬಾಲಕರು ಚೌಪದಿಗಳನು ಹಾಡಿ
ಧಿಂ ಧಿಮಿ ಧಿಮಿ ಎಂಬ ವಾದ್ಯಗಳು ಕೂಡಿ
ಬಂದು ಮಹಾಲಕ್ಷ್ಮಿಯನು ನಗುತ ಸ್ತುತಿ ಮಾಡಿ
ಚಂದದಿಂ ಹಲಗೆಯನು ತೊಳೆದು ಬಲಗೊಡಿ

ಚಾಮಾಯಿ, ಜನಪದ ಬದುಕಿನಲ್ಲಿ ಹಾಸುಹೊಕ್ಕಾಗಿ ಹಬ್ಬಿರುವ ದೇವತೆ. ಅವರ ಪಾಲಿಗೆ ಅವಳು ಹತ್ತಿರದ ಬಂಧು. ತಮ್ಮನ್ನು ರಕ್ಷಿಸಲು ಬಂದಿರುವ ಶಕ್ತಿ. ಹಲವು ಸಾರಿ ತಮ್ಮಲ್ಲಿಯೇ ಒಬ್ಬಳಂತೆ ಅವಳನ್ನು ಕಾಣುತ್ತಾರೆ, ಮಾತನಾಡಿಸುತ್ತಾರೆ. ನವರಾತ್ರಿಯ ಸಂದರ್ಭದಲ್ಲಿ ತಮ್ಮ ತಮ್ಮ ಊರಿನ ಗ್ರಾಮದೇವತೆಯಲ್ಲಿಯೇ ಆ ಶಕ್ತಿಸ್ವರೂಪವನ್ನು ಕಂಡು ವೈಭವದಿಂದ ಪೂಜಾವಿಧಿಗಳನ್ನು ನಡೆಸುತ್ತಾರೆ. ಪಾಡ್ಯದ ದಿನ ಗ್ರಾಮದೇವತೆಯನ್ನು ಪಟ್ಟಕ್ಕೆ ಕೂರಿಸುವ ಆಚರಣೆ. ಹೆಚ್ಚು ಸಂಭ್ರಮ ಸಡಗರಗಳಿಂದ ಊರಿನವರೆಲ್ಲರೂ ಕೂಡಿ ಈ ಆಚರಣೆಯನ್ನು ಎಸಗುತ್ತಾರೆ. ಇದಕ್ಕಾಗಿ ತೋಟದ ಹೂವೆಲ್ಲ ಬರಿದಾಗಿರುತ್ತದೆ.

ದೇವರ ಮುಂದೆ ಪಾಡ್ಯದ ದಿನ ಹಚ್ಚಿದ ದೀಪ, ದಶಮಿಯವರೆಗೆ ಆರಬಾರದೆಂಬ ನಂಬಿಕೆ ಇದೆ. ಹತ್ತು ದಿನಗಳೂ ಹಗಲು - ರಾತ್ರಿ, ಹಚ್ಚಿದ ದೀಪ ನಂದದಂತೆ ನೋಡಿಕೊಳ್ಳುತ್ತಾರೆ. ಆ ನಂದಾದೀಪದ ಬೆಳಕಿನಲ್ಲಿ ದೇವಿಯ ಪೂಜೆ ಪ್ರತಿ ದಿನ ತಪ್ಪದೆ ನಡೆಯುತ್ತದೆ. ನವರಾತ್ರಿಯ ಅಷ್ಟು ದಿನಗಳೂ ಗ್ರಾಮೀಣ ಬದುಕಿನಲ್ಲಿ ನವೋತ್ಸಾಹ ಎದ್ದು ಕಾಣುತ್ತದೆ. ಅದು ಕೇವಲ ಧಾರ್ಮಿಕ ಆಚರಣೆ ಅಷ್ಟೇ ಅಲ್ಲ ; ಕಲಾರಾಧನೆಯೂ ಆಗಿರುತ್ತದೆ.

ನಾಡ ಹಬ್ಬವಾದ ನವರಾತ್ರಿ, ಧಾರ್ಮಿಕ ಮಹತ್ವವನ್ನು ಪಡೆದಿರುವಂತೆಯೇ ಸಾಂಸ್ಕೃತಿಕ ಮಹತ್ವವನ್ನೂ ಪಡೆದುಕೊಂಡಿದೆ. ದೇವಿಯನ್ನು ಕುರಿತ ಹಾಡುಗಳು ಮೇಲಿಂದ ಮೇಲೆ ಕೇಳಿ ಬರುತ್ತವೆ. ಅವರವರ ಭಾವಕ್ಕೆ ತಕ್ಕಂತೆ ದೇವಿ ಅವರಿಗೆ ಕಾಣಿಸಿಕೊಳ್ಳುತ್ತಾಳೆ. ಅವಳ ಅಂದ ಚೆಂದವನ್ನು ಎಷ್ಟು ಹೊಗಳಿ ಹಾಡಿದರೂ ಅವರಿಗೆ ತೃಪ್ತಿಯೆನಿಸುವುದಿಲ್ಲ. ತಮ್ಮ ತಮ್ಮ ಮನದ ಅಭೀಪ್ಸೆಯನ್ನು ಅವಳಿಗೆ ಆರೋಪಿಸಿ ಹಾಡಿ ಭಕ್ತಿಯ ಧಾರೆ ಎರೆಯುತ್ತಾರೆ :

ಮೂಗುತಿ ಮುಂಭಾರ ಹೆಣೆಗಂಟು ಹಿಂಭಾರ
ಜಗಜಂಪಿನೋಲೆ ಕಿವಿಭಾರ | ಮಾಳವ್ವ
ನಿನ ದೊಡ್ಡ ಗುಂಡಿನ ಸರ ಎದೆ ಭಾರ
ಅಮ್ಮನ ಗುಡಿಸುತ್ತ ಘಮ್ಮನ್ನದೇನಮ್ಮ
ಗಂಡು ಭೂತಾಳೆ ಗಜನಿಂಬೆ | ಮರದಡಿ
ದಂಡು ಬಿಟ್ಟವಳೆ ಕೆಂಪವ್ವ
ಗದ್ದುಗೆ ಬಿಟ್ಟು ಎದ್ದು ಬಾರೆ ಕೆಂಪವ್ವ
ಅಲ್ಲಿದ್ದರೆ ನಿನ್ನ ಶಿವನಾಣೆ | ಸೀರ್‍ಯಾದ
ಮೊಗ್ಗು ಬಂದಾವೆ ಮುಡಿ ಬಾರೆ ||
ಕೆಂಪವ್ವ ಕೆಂಪವ್ವ ನಿನ್ನ ಮುಖವೆಲ್ಲ ಸಪ್ಪಗೆ
ರಂಗಕೆ ಬಂದೋರು ನಗುತಾರೆ | ಕೆಂಪವ್ವ
ಕಾಲಿಗೆ ಬಿದ್ದೇನು ಕಲಿಯಾಗೆ ||

ಒಡವೆಯ ಭಾರ, ಹೂವಿನ ಭಾರಗಳಿಂದ ಸೊರಗಿದ್ದಲ್ಲದೆ, ಭಕ್ತಾದಿಗಳ ಬಿಡುವಿಲ್ಲದ

ಥೇಟಿಯಿಂದ ಸೊರಗಿದಂತೆ ಕಂಡ ದೇವಿಯನ್ನು - "ರಂಗಕೆ ಬಂದೋರು ನಗುತಾರೆ ಕೆಂಪವ್ವ, ಕಾಲಿಗೆ ಬಿದ್ದೇನು ಕಲಿಯಾಗೆ" ಎಂದು ಬೇಡುತ್ತಾರೆ. ದೇವಿಯ ಮುಂದೆ ಪ್ರದರ್ಶನಗೊಳ್ಳುವ ಹಲವು ಬಗೆಯ ಜನಪದ ಕಲೆಗಳ ಪ್ರದರ್ಶನ, ಅವಳನ್ನು ಉಲ್ಲಾಸಗೊಳಿಸಲೋ ಎಂಬಂತೆ ಭಾಸವಾಗುತ್ತವೆ. ನಂದೀ ಕೋಲಿನ ಕುಣಿತ, ಕೋಲಾಟ, ಗಾರುಡಿ ಗೊಂಬೆ, ದೀವಟಿಕೆ, ನಗಾರಿ ಮುಂತಾದವುಗಳ ವೈಭವ ಪೈಪೋಟಿಯಲ್ಲೆಂಬಂತೆ ಪ್ರದರ್ಶನಗೊಳ್ಳುತ್ತಿರುತ್ತವೆ. ಇವುಗಳ ಜೊತೆಗೆ ತಮಟೆ, ಓಲಗದವರ ಸಂಭ್ರಮ ಹೇಳತೀರದು.

ಆಯುಧಪೂಜೆ - ಶಕ್ತಿ ದೇವತೆಯ ಆರಾಧನಾ ಸಂದರ್ಭದ ಮತ್ತೊಂದು ವಿಶೇಷ. ಇದಕ್ಕೆ ಹೆಚ್ಚಿನ ಮಹತ್ವವಿದೆ. ರಾಜಮಹಾರಾಜರುಗಳು ಯುದ್ಧಕ್ಕೆ ಸಿದ್ಧರಾಗಲು ಆಯುಧಗಳನ್ನು ಶುಚಿಗೊಳಿಸಿ ಪೂಜೆಗೆ ಸಿದ್ಧಪಡಿಸುವಂತೆ, ರೈತರೂ ವ್ಯವಸಾಯ ಸಾಧನಗಳನ್ನು ತೊಳೆದು ಸ್ವಚ್ಛಗೊಳಿಸಿ ಪೂಜಿಸುತ್ತಾರೆ. ಎತ್ತು - ಗಾಡಿಗಳನ್ನು ಶೃಂಗರಿಸಿ ಹೊಸ ಉತ್ಸಾಹದಲ್ಲಿ ಮೆರೆದಾಡುತ್ತಾರೆ.

ನವರಾತ್ರಿ ಹಬ್ಬದ ಕೊನೆಯ ದಿನ ನಡೆಯುವ ದೇವಿಯ ಉತ್ಸವದಲ್ಲಿ ಊರಿಗೆ ಊರೇ ಪಾಲ್ಗೊಳ್ಳುತ್ತದೆ. ದೇವರ ಗುಡಿಯಿಂದ ಮಾನವಮಿ ಮಂಟಪದವರೆಗೆ ಸಾಗುವ ಈ ಉತ್ಸವ ವಿಜಯದ ಸಂಕೇತವನ್ನು ಹೊತ್ತು ನಿಂತದ್ದು. ಆದರೂ ಭಕ್ತಿಯೋರ್ವಳಿಗೆ, ದೇವಿ ಮುನಿದಂತೆ ತೋರುತ್ತಾಳೆ. ತಕ್ಷಣವೇ ಅದಕ್ಕೆ ಕಾರಣವನ್ನೂ ಅವಳು ಊಹೆ ಮಾಡಿ, ಊರ ಗೌಡಗಳಿಗೆ ತಿಳಿಸುತ್ತಾಳೆ :

ಊರು ದೊಡ್ಡದೆಂದು, ಬೀದಿ ಚಿಕ್ಕದೆಂದು
ಯಾಕೆ ಕೆಂಪವ್ವ ಮುನಿದಲ್ಲೆ | ಗೌಡಗಳಿರ
ನೀವು ಬಿಡಿರಯ್ಯ ಬೀದಿ ಚೌಕಾವ ||

ಊರು ದೊಡ್ಡದಾದರೂ, ಊರಿನ ಬೀದಿ ಕಿರಿದು. ಓಲಾಡಿ, ವಾಲಾಡಿ ಬರುವ ದೇವಿಗೆ ಅದು ಸಾಕೆನಿಸುವುದಿಲ್ಲ ಎಂಬ ಭಾವನೆ ಭಕ್ತರದ್ದು. ಹಿಂದೆ ಮುಂದೆ ಜಗ್ಗಾಡಿ ಬರುವ ಆ ಉತ್ಸವ ಮೂರ್ತಿಯನ್ನು ಕಂಡು "ಬಿಡಿರಯ್ಯ ಬೀದಿ ಚೌಕಾವ" ಎಂದು ಕರೆ ನೀಡುತ್ತಾಳೆ. ಮೆರವಣಿಗೆಯಲ್ಲಿ ಮೆರೆದಾಡಿ ಬಂದ ಚಾಮಾಯಿ ಮಾನವಮಿಯ ಮಂಟಪದಲ್ಲಿ ವಿಶ್ರಮಿಸುತ್ತಾಳೆ. ಹಾಡುಗಳು ಕೇಳಿ ಬರುತ್ತಿರುತ್ತವೆ. ವಾದ್ಯಗಳ ಧ್ವನಿ ಮೊಳಗುತ್ತಿರುತ್ತದೆ. ಕುಣಿತಗಳು ನಿರಂತರವಾಗಿ ನಡೆಯುತ್ತಿರುತ್ತವೆ.

ಇದೇ ಸಂದರ್ಭದಲ್ಲಿ ದೇವಿಯ ಎದುರಿನಲ್ಲಿ ಸಾಂಪ್ರದಾಯಿಕವಾದ ಆಚರಣೆಗಳೂ ಆರಂಭಗೊಳ್ಳುತ್ತವೆ. ಅರ್ಚಕರು ಬನ್ನಿಯ ರೆಂಬೆಯನ್ನು ತಂದು ಅಲ್ಲಿಯ ಕಂಬಕ್ಕೆ ಕಟ್ಟುತ್ತಾರೆ. ಅದರ ಜೊತೆಯಲ್ಲಿಯೇ ಬಿಲ್ಲು ಬಾಣಗಳನ್ನೂ ಅದಕ್ಕೆ ಸಿಕ್ಕಿಸುತ್ತಾರೆ. ನಂತರ ಊರಗೌಡನ ಸಮ್ಮತಿಯನ್ನು ಪಡೆದು ಅರ್ಚಕರು ಬನ್ನಿಯನ್ನು ಪೂಜಿಸುತ್ತಾರೆ. ಪೂಜೆಯ ನಂತರ ಪೂಜಿಸಿದ ಬನ್ನಿಯ ಎಲೆಯನ್ನು, ಹೊಸದಾಗಿ ಬೆಳೆದ ರಾಗಿಯ ತೆನೆಯನ್ನು ಅಲ್ಲಿ ಬಂದವರಿಗೆ ಮುಡಿಯಲು ಹಂಚಲಾಗುತ್ತದೆ. ಇದರ ಜೊತೆಗೆ ಪ್ರಸಾದ ವಿನಿಯೋಗವೂ ಆಗುತ್ತದೆ. ಪ್ರಸಾದದ ಜೊತೆ ಗಾಳಿಯಲ್ಲಿ ತೇಲಿ ಬರುವ ಇಂಪಾದ ದನಿ ಕಿವಿಯನ್ನು ತಾಕುತ್ತಿರುತ್ತದೆ.

ಎಡಗಾಡೆ ಮಾಳಮ್ಮ ಬಲಗಾಡೆ ಪಾರ್ವತಿದೇವಿ
ಇಬ್ಬರ ನಡುವೆ ಘನಲಿಂಗು | ಕೂತುಕೊಂಡು
ಇಬ್ಬರಿಗ್ಹೂವ ಮುಡಿಸ್ಯಾನೆ ||
ಉಂಡೆ ಮೆರೆದಾವು ವಿಭೂತಿ ಮೆರೆದಾವು
ದಂಡೆ ಮೆರೆದಾವು ಕೊರಳಲ್ಲಿ | ಗಂಗೆ ಮಾಳಿ
ಗಿನ ಪುರುಷ ಮೆರೆದಾನೆ ಪರುಸೇಲಿ ||
ತೇರು ಹರಿದಾವು ತಾನಾಕೆ ನಿಂದಾವು
ತಾರೋ ತಮ್ಮಯ್ಯ ಜವನಾವ | ಬಾಳೆಹಣ್ಣ
ನಾ ಬೇಡಿಕೊಂಡೇನು ಸೆರಗೊಡ್ಡಿ ||
ಬೀದಿ ಮನೆಯೊಳೆ ಬೀಸಣಿಗೆ ನೆರಿಗೋಳೆ
ಜಾಲದ್ಹೂವಿನ ಜಡೆಯೋಳೆ | ಮಾಳವ್ವ
ನೀ ಜಾಣೆ ತೀರುತವ ಕೊಡು ಬಾರೇ

ಈ ಆಚರಣೆ ಇಷ್ಟಕ್ಕೇ ನಿಲ್ಲುವುದಿಲ್ಲ. ಬನ್ನಿಯ ಕೊಂಬೆಗೆ ಸಿಕ್ಕಿಸಿದ್ದ ಬಿಲ್ಲು ಬಾಣಗಳನ್ನು ಬಳಸಿ, ಪೂರ್ವಾಭಿಮುಖವಾಗಿ ನಿಂತು ಮೂರು ಬಾರಿ ಬಾಣ ಪ್ರಯೋಗ ಮಾಡುತ್ತಾರೆ. ಹಾಗೆ ಪ್ರಯೋಗಿಸಿದ ಬಾಣ ನೆಲದಲ್ಲಿ ಹೋಗಿ ನಾಟಿಕೊಂಡರೆ ಆ ವರ್ಷ ಸುಖ - ಸಮೃದ್ಧಿ ಹೆಚ್ಚೆಂದು ಭಾವಿಸುತ್ತಾರೆ. ಹಾಗಾದಾಗ ಸಂತೋಷದಲ್ಲಿ ಮೈಮರೆಯುತ್ತಾರೆ. ಗೆಲುವು - ನಲಿವುಗಳ ಆಸೆ ಹೊತ್ತು ಹಾಡಿ ಕುಣಿಯುವ ಸರದಿ ಮತ್ತೆ ಆರಂಭ.

ಮತ್ತೆ ದೇವಿಯನ್ನು ಗುಡಿದುಂಬಿಸುವ ಕಾರ್ಯ ಅಷ್ಟೇ ಶ್ರದ್ಧೆಯಿಂದ ನಡೆಯುತ್ತದೆ. ಭಕ್ತರೆಲ್ಲ ದೇವಿಯ ಆಶೀರ್ವಾದವನ್ನು ಮತ್ತೆ ಮತ್ತೆ ಬೇಡುತ್ತಾರೆ. ನವರಾತ್ರಿ ಹಬ್ಬ ಮುಗಿಯುತ್ತ ಬಂದರೂ, ಅದರ ಕೊನೆಯ ದಿನದ 'ವಿಜಯ ದಶಮಿ'ಯ ಆ ಸಂಭ್ರಮದ ಗುಂಗು ಇನ್ನೂ ಮುಗಿದಿರುವುದಿಲ್ಲ. ಆ ಗುಂಗಿನಲ್ಲಿಯೇ ಹೊಸ ಹುರುಪನ್ನು ಹೊತ್ತು ಮುಂದಿನ ಕಾರ್ಯಗಳಲ್ಲಿ ಮಗ್ನರಾಗುತ್ತಾರೆ. ಈ ಸಂದರ್ಭದಲ್ಲಿ, ಕೆಟ್ಟದ್ದನ್ನೆಲ್ಲ ಕಳೆದುಕೊಂಡು, ಒಳ್ಳೆಯದನ್ನು ಪಡೆದುಕೊಂಡ ಅನುಭವ ಅವರದ್ದು. ಏಕೆಂದರೆ 'ನವರಾತ್ರಿ' ಅಂತಹ ಶುಭದ ಸಂಕೇತದ ಹಬ್ಬ.

ಸಹಸ್ರನಾಮಗಳ ಆದಿಶಕ್ತಿ ಚಾಮಾಯಿ ಜನಮನದಲ್ಲಿ ನೆಲೆಯೂರಿ ನಿಂತವಳು. ಅವರ ಅಭೀಪ್ಸೆಯನ್ನು ಈಡೇರಿಸುವ ಇಷ್ಟದೇವತೆ. ಜನಪದರು ಆ ಮಹಾನ್ ದೇವತೆಯನ್ನು ಮಹಾನ್ ಶಕ್ತಿಯಾಗಿ ಕಂಡಿರುವಂತೆಯೇ ಒಳ್ಳೆಯ ರಸಿಕ ದೇವತೆಯಾಗಿಯೂ ಕಂಡಿದ್ದಾರೆ. ಜನಪದ ಸಾಹಿತ್ಯದಲ್ಲಿ ಬರುವ ನಂಜುಂಡ - ಚಾಮುಂಡಿಯರ ಪ್ರಣಯ ಪ್ರಸಂಗ ಅಪರೂಪದ್ದು. ಅವರ ರಸಿಕತೆಯನ್ನು ಬಣ್ಣಿಸುವಲ್ಲಿ ಜನಪದರ ರಸಿಕ ಗುಣವೂ ವ್ಯಕ್ತಗೊಂಡಿದೆ. ಜನಪದ ಸಾಹಿತ್ಯದಲ್ಲಿ ಬರುವ ಚಾಮಾಯಿಯ ಕಥೆಯನ್ನು ಗಮನಿಸುವಾಗ, ಅವರ ಪ್ರಣಯ ಪ್ರಸಂಗದ ಕಡೆ ಕಣ್ಣು ಹಾಯಿಸದೆ ಹೋದರೆ, ಅದು ಅಪೂರ್ಣವಾದಂತೆಯೇ. ಜನಪದ ವೃತ್ತಿಗಾಯಕರಲ್ಲಷ್ಟೇ ಅಲ್ಲದೆ, ಕೋಲಾಟದ ಪದಗಳಲ್ಲಿಯೂ ಈ ಪ್ರಸಂಗ ರೋಚಕವಾಗಿ ಮೂಡಿ ಬಂದಿದೆ. ಚಾಮುಂಡಿ, ಕಾರಂಜಿ ಕೆರೆಯಲ್ಲಿ

ಜಳಕವನ್ನಾಡುವಾಗ, ನಂಜನಗೂಡಿನ ನಂಜುಂಡ ಅವಳ ನವರತ್ನದ ಸೀರೆಯನ್ನು ಕದ್ದೊಯ್ದ ಪ್ರಸಂಗದ ವರ್ಣನೆ ಜನಪದ ಕಾವ್ಯದ ಒಂದು ಉತ್ಕೃಷ್ಟ ಭಾಗ :

ಕಾರಂಜಿ ಕೆರೆಯ ಏರಿಮೇಕೆ ಬಂದು
ನವ್ರತ್ನದ್ ಸೀರೆ ಅಳಿದಿಟ್ಟು - ಕೋಲೆ
ನವ್ರತ್ನದ್ ಸೀರೆ ಅಳಿದಿಟ್ಟು ಚಾಮುಂಡಿ

ಗಂಡು ಧ್ವನಿ : ಮನಸಿಗೆ ಬಂದ್ಹಂಗೆ ಜಳಕವ - ಕೋಲೆ
ಮನಸಿಗೆ ಬಂದ್ಹಂಗೆ ಜಳಕವಾಡುತಾಳೆ
ತಾಯಿ ಕಾರಂಜೀ ಕೆರೆಯಾಗೆ - ಕೋಲೆ
ಜಳಕವನಾಡುವಾಗ ಮತ್ಯಾರೆ ನೋಡಿದೋರು
ನಂಜನಗೂಡಿನ ನಂಜುಂಡ - ಕೋಲೆ

ಹೆಣ್ಣು ಧ್ವನಿ : ನಂಜನಗೂಡಿನ ನಂಜುಂಡ ತಾ ಕಂಡು
ಮಡದಿಯನೊಮ್ಮೆ ನೋಡುತಾನೆ -ಕೋಲೆ
ಬೂದಿ ಭೈರಾಗಿಯ ವೇಷವ ತಾಳಿದ
ಭೂಮಿಯನಾಳುವ ನಂಜುಂಡ - ಕೋಲೆ

ಗಂಡು ಧ್ವನಿ : ಭೂಮಿಯನಾಳುವ ನಂಜುಂಡ ತಾನಾಗ
ಹೊರಟನೆ ಕಾರಂಜೀ ಕೆರೆಗಾನಿ - ಕೋಲೆ
ಕೆರೆಯಾಗೆ ಚಾಮುಂಡಿ ಜಳಕವಾಡುವಾಗ
ನವ್ರತ್ನದ್ ಸೀರೆ ಕದ್ದುಕೊಂಡು - ಕೋಲೆ

ಹೆಣ್ಣು ಧ್ವನಿ : ನವ್ರತ್ನದ್ ಸೀರೆ ಕದ್ದುಕೊಂಡ್ ಹೋಗುವಾಗ
ಕರೆದು ಚಪ್ಪಾಳೆ ಹೊಡೆದನು - ಕೋಲೆ
ಎಲೆ ಎಲೆ ಹೆಣ್ಣೇ ಮುಂದ್ ಮುಂದ್ಹೋಗೋಳ್ನೀನ್ಯಾರೆ
ನಿಲ್ಲೆ ನಾನ್ಯಾವೆ ಬರುತೀನಿ - ಕೊಲೆ

ಗಂಡು ಧ್ವನಿ : ನಿಲ್ಲೆ ನಾನ್ಯಾವೆ ಬರುತೀನಿ ಎಂಬುತ
ಲೋಲ ನಂಜುಂಡ ಕರೆದನೆ - ಕೋಲೆ

ಚಾಮಾಯಿ - ನಂಜುಂಡರ ಪ್ರಣಯ ಪ್ರಸಂಗ ರಸದುಂಬಿ ಹೀಗೇ ಮುಂದುವರೆಯುತ್ತದೆ. ಅವಳನ್ನು ಆದಿಶಕ್ತಿಯಾಗಿ ಕಂಡ ಅವರ ಕಣ್ಣುಗಳೇ ಅವಳನ್ನು ಸಾಮಾನ್ಯಳಂತೆಯೂ ಕಂಡೂ, ತಮ್ಮ ಹತ್ತಿರದ ಸಂಬಂಧವನ್ನು ಗುರುತಿಸಿಕೊಂಡಿದ್ದಾರೆ. ಜನಪದರ ಪಾಲಿಗೆ ದೇವತೆಗಳು ಯಾರೂ ದೂರದವರಲ್ಲ ; ತಮ್ಮ ಹತ್ತಿರದ ಬಂಧುಗಳು ಎಂಬುದನ್ನು ಮತ್ತೆ ಮತ್ತೆ ವ್ಯಕ್ತಪಡಿಸುತ್ತಾರೆ.

ಚಾಮಾಯಿ, ಜನಪದರ ಇಷ್ಟದೇವತೆಯೆಂತೋ, ಅಂತೆಯೇ ಶಿಷ್ಟರ ಆರಾಧ್ಯ ದೇವತೆಯೂ

ಹೌದು. ಇಬ್ಬರೂ ಆ ಶಕ್ತಿ ದೇವತೆಯನ್ನು ಹಲವು ರೂಪಗಳಲ್ಲಿ ಕಂಡು ಆರಾಧಿಸುತ್ತ ; ಬೇಕಾದ ವರವನ್ನು ಕೇಳಿ ಈಡೇರಿದ ಧನ್ಯತೆಯ ಭಾವವನ್ನೂ ಹೊಂದುತ್ತ ಬಂದಿದ್ದಾರೆ :

ಪಾಲಿಸಮ್ಮ ವರವ - ಮಾತೆಯೆ
ಪಾಲಿಸಮ್ಮ ವರವ
ನಿಮ್ಮ ಮಂಡೆ ಮೇಗಲ ಮಜ್ಜಣದ್ಹೂವ
ಪಾಲಿಸಮ್ಮ ವರವ
ಧೂಪದೀಪ ದೇವರಿಗೆ
ಧೂಪ ಹಾಕಿರೋ ಮಹತಾಯಿಗೆ
ನಿಮ್ಮ ಮಂಡೆ ಮೇಗಲ
ಮಸ್ಕಾದ ಹೂವ ಪಾಲಿಸಮ್ಮ ದೇವೀ

ಹೀಗೆ ಭಕ್ತಿಭಾವದಿಂದ ಪೂಜಿಸಿ ವರವನ್ನು ಬೇಡುವುದಷ್ಟೇ ಅಲ್ಲ ; ಆ ತಾಯಿಯ ಕಥೆಯನ್ನು ಹೇಳಿದವರಿಗೆ, ಕೇಳಿದವರಿಗೆ ಎಲ್ಲರಿಗೂ ಪುಣ್ಯ ಲಭಿಸುತ್ತದೆ ಎಂಬ ನಂಬಿಕೆ ಅವರದ್ದು. ಇಂದಿಗೂ ಅದೇ ನಂಬಿಕೆ ಅಷ್ಟೇ ಪ್ರಬಲವಾಗಿ ಉಳಿದಿದೆ :

ಚಾಮಾಯಿ ಕಥೆಯ ಹೇಳಿದ
ಚಾಮಾಯಿ ಕಥೆಯ ಕೇಳಿದ
ಪುಣ್ಯ ನಮಗೆಲ್ಲ ಬರಲಿ
ಧರ್ಮ ನಮ್ಮೊತ್ತೀಲಿರಲಿ
ತಂದನ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಾನಂದನ್ನ ತಾನಾನಾ

*   *   *   *   *

"ಜಾನಪದ ಸೋಪಾನ"

ಜಾನಪದ ಕ್ಷೇತ್ರ ಬಂಜರಾಗದ ಭೂಮಿ, ಬತ್ತಿ ಹೋಗದ ಸಾಗರ. ಅದನ್ನು ಅಗೆದಷ್ಟು, ಮೊಗೆದಷ್ಟು ಅಕ್ಷಯವಾಗುವ ನಿಧಿ. ಎಂತಹವರೇ ಕೈ ಹಾಕಿದರೂ ಅವರಿಗೆ ನಿರಾಶೆಯನ್ನುಂಟು ಮಾಡದೆ, ಅವರವರ ಶಕ್ತ್ಯಾನುಸಾರ ತೋಡಿಕೊಂಡು ಹೋಗಲು ಅವಕಾಶ ಮಾಡಿಕೊಡುವ ಕಾಮಧೇನುವೂ ಹೌದು.

ಜಾನಪದ ನಮ್ಮ ಮೂಲ ಸಂಸ್ಕೃತಿಯ ಸಾರವನ್ನೊಳಗೊಂಡ ಬಹು ಅಮೂಲ್ಯವಾದ ನಿಧಿಯಾದುದರಿಂದ ನಮ್ಮ ಇಂದಿನ ಅನೇಕ ಆಚಾರ, ವಿಚಾರ, ವ್ಯವಹಾರಗಳ ಮೇಲೂ ಅದರ ಹಿಡಿತವಿರುವುದರಿಂದ, ಅದನ್ನು ಕುರಿತಾದ ಚಿಂತನೆ, ಮರುಚಿಂತನೆ ಮೇಲಿಂದ ಮೇಲೆ ನಡೆದಷ್ಟು ಅಪೂರ್ವವೆಂಬಂತೆಯೇ ತೋರುತ್ತಿರುವುದು ಅದರ ಒಂದು ವೈಶಿಷ್ಟ್ಯವೊ ಎಂಬಂತಾಗಿದೆ. ನಾವು ಇಂದು ಚಂದ್ರಲೋಕವನ್ನು ಹೊಕ್ಕು ಬಂದಿದ್ದರೂ ರಾಸಾಯನಿಕ ವಸ್ತುವನ್ನು ಸಿಂಪಡಿಸುವುದರ ಮೂಲಕ ಬೇಕಾದೆಡೆಯಲ್ಲಿ ಬೇಕಾದಾಗ ಮಳೆ ತರಿಸಿಕೊಳ್ಳುವುದು ಸಾಧ್ಯ ಎಂಬಪ್ರಯತ್ನದಲ್ಲಿ ತೊಡಗಿದ್ದರೂ, "ದೇವರು ಕೊಟ್ಟರೆ ಉಂಟು ಅಥವಾ ದೇವರು ಕೊಟ್ಟಷ್ಟು" ಎಂದು ಮಕ್ಕಳನ್ನು ಪಡೆಯುವುದರ ಬಗ್ಗೆ ಹೇಳಿಕೊಳ್ಳುತ್ತಿದ್ದ ಕಾಲ ಹೋಗಿ ಅದರ ಮೇಲೆ ನಿಯಂತ್ರಣವನ್ನು ಸಾಧಿಸಿದ್ದೇವೆಯಾದರೂ ; ನಾವು ಇಂದು ಅನೇಕ ಜನಪದ ನಂಬಿಕೆಗಳಿಂದ, ಸಂಪ್ರದಾಯಗಳಿಂದ, ವಿಚಾರಗಳಿಂದ ಮುಕ್ತವಾಗಿಲ್ಲ. 'ಆಕ್ಟೋಪಸ್'ನ ಹಿಡಿತಕ್ಕೆ ಒಳಗಾದಂತೆ ಅದರ ತೆಕ್ಕೆಯಲ್ಲಿ ಬಂದಿಯಾಗಿದ್ದೇವೆ.

ಜಾನಪದ ಅನಕ್ಷರಸ್ಥ ಸಮಾಜದ ಕೊಡುಗೆ ಎಂದು ಹೇಳುತ್ತೇವೆಯಾದರೂ ಅತ್ಯಂತ ಶಿಕ್ಷಿತ ಸಮಾಜದಲ್ಲಿಯೂ ಅದರ ಸವಕಲು ರೂಪಗಳು ಒಂದಲ್ಲ ಒಂದು ರೂಪದಲ್ಲಿ ಮೆರೆದಾಡುತ್ತಿವೆ. ಕೆಲವೆಡೆ ಮಾವಿನ ಸೊಪ್ಪಿನ ತೋರಣಕ್ಕೆ ಬದಲಾಗಿ ಪ್ಲಾಸ್ಟಿಕ್ ಎಲೆಯ ತೋರಣಗಳು, ರಂಗವಲ್ಲಿ ಪುಡಿಯ ಚಿತ್ರಣಕ್ಕೆ ಬದಲಾಗಿ ಸೀಮೆಸುಣ್ಣದ ಚಿತ್ರಣ, ಮುಂಬಾಗಿಲು ಹೊಸ್ತಿಲಿಗೆ ಅರಿಶಿನ - ಕುಂಕುಮದ ಲೇಪನಕ್ಕೆ ಬದಲಾಗಿ, ಏಷಿಯನ್ ಪೇಯಿಂಟ್ ಇತ್ಯಾದಿ ಇತ್ಯಾದಿಗಳು ಕಂಡು ಬರುತ್ತಿರುವುದು ಸಾಮಾನ್ಯ. ಅಷ್ಟೇ ಅಲ್ಲ ನಗರದ ಎಷ್ಟೊಂದು ಮನೆಯ ಒಳಕೋಣೆಯ ಮೂಲೆಗಳು ನೀವಳಿಸಿದ ಅಂಚಿಕಡ್ಡಿಯ ಮಸಿಯಿಂದ ಕಪ್ಪಾಗಿರುವುದಿಲ್ಲ ! ನಗರದ ಎಷ್ಟೊಂದು ಬೀದಿಗಳು ಮಂತ್ರಿಸಿದ ನಿಂಬೆಹಣ್ಣು, ಇದ್ದಿಲು, ಮೆಣಸಿನಕಾಯಿ, ಅರಿಶಿನಗಳಿಂದ ತುಂಬಿರುವುದಿಲ್ಲ !

ಇವನ್ನೆಲ್ಲ ಪರಿಶೀಲಿಸಿದಾಗ, ಆಧುನಿಕ ಸಮಾಜ ಕೂಡ ಇಂದಿನವರೆಗೂ ಜಾನಪದದೊಂದಿಗೆ ಎಂತಹ ಸಂಬಂಧವನ್ನು ಉಳಿಸಿಕೊಂಡು ಬಂದಿದೆ ಎಂಬುದು ವೇದ್ಯವಾಗುತ್ತದೆ. ನಮ್ಮ ಮೂಲ ಸಂಸ್ಕೃತಿಯ ಅನೇಕ ಅಂಶಗಳು ವಿವಿಧ ರೂಪಗಳಲ್ಲಿ ಇಂದಿಗೂ ನಮ್ಮನ್ನು ನಿರ್ದೇಶಿಸುತ್ತಿವೆ.

ಹಲವು ಮೂಢ ನಂಬಿಕೆಗಳಿಂದ ಶಿಷ್ಟ ಸಮಾಜ ದೂರ ಸರಿದಿದೆ ಎಂದು ಭಾವಿಸಬಹುದಾದರೂ ಮತ್ತೆ ಕೆಲವೊಂದು ವಿಚಾರಗಳಲ್ಲಿ ಅದರ ಅಡಿಯಾಳಾಗಿಯೇ ನಡೆದು ಬಂದಿದೆ. ಆದರೆ ಅದರೊಂದಿಗೇ ಪರ - ವಿರೋಧವಾದ ಚರ್ಚೆಯೂ ನಡೆಯುತ್ತ ಬಂದಿವೆ. ಇಂದು ನಾವು ಆಚರಿಸುವ ಹಬ್ಬಗಳಲ್ಲಿ, ಸಂಪ್ರದಾಯಗಳಲ್ಲಿ ಹಿಂದಿನ ವೈಭವವಾಗಲಿ, ಶ್ರದ್ಧೆಯಾಗಲಿ ಕಂಡು ಬರದೇ ಇದ್ದರೂ, ಅದರ ಆಚರಣೆ ಮಾತ್ರ ಯಾಂತ್ರಿಕವಾಗಿ ಶಿಥಿಲ ರೂಪದಲ್ಲಿ ವ್ಯಾಪಕವಾಗಿಯೇ ಕಂಡು ಬರುತ್ತಿದೆ. ಸಂಪ್ರದಾಯ ಮತ್ತು ನಂಬಿಕೆ ಇವೆರಡು ಅವಳಿ - ಜವಳಿಗಳಂತೆ. ಒಂದನ್ನು ಬಿಟ್ಟು ಮತ್ತೊಂದಿಲ್ಲ. ಸಂಪ್ರದಾಯ ಉಳಿದಿರುವುದೇ ನಂಬಿಕೆಗಳ ತಳಹದಿಯ ಮೇಲೆ. ಯಾವಾಗ ಆ ಸಂಬಂಧವಾದ ನಂಬಿಕೆ ಸಡಿಲಗೊಳ್ಳುತ್ತದೆ ಆಗ ಆ ಒಂದು ಸಂಪ್ರದಾಯವೂ ಶಿಥಿಲಗೊಳ್ಳುತ್ತದೆ. ಆದ್ದರಿಂದ ನಂಬಿಕೆಗಳ ಬಲಾಬಲದ ಮೇಲೆ ಸಂಪ್ರದಾಯಗಳ ಅಳಿವು ಉಳಿವು ಇರುತ್ತದೆ. ಯಾವಾಗಲೂ ವೈಚಾರಿಕ ಬೆಳವಣಿಗೆ, ನಂಬಿಕೆಯ ಶತ್ರು. ಅದು ಬೆಳೆದಂತೆ ನಂಬಿಕೆ ಮಂಜುಗೆಡ್ಡೆಯಂತೆ ಕರಗುತ್ತ ಬರುತ್ತದೆ. ಇದು ಕಾಲದುದ್ದಕ್ಕೂ ನಡೆದು ಬಂದಿರುವ ಸಂಗತಿ. ಹಾಗೆಯೇ ಅದೊಂದು ಅನಿವಾರ್ಯ ಆಗತ್ಯ ಸ್ಥಿತಿಯೂ ನಿಜ. ಯಾರೋ, ಯಾವಾಗಲೋ, ಯಾವುದೋ ಹಿನ್ನೆಲೆಯಲ್ಲಿ ಕೈಗೊಂಡ ತೀರ್ಮಾನವೊಂದು ಎಲ್ಲಾ ಕಾಲಕ್ಕೂ, ಎಲ್ಲಾ ಸಂದರ್ಭಕ್ಕೂ ಅನ್ವಯವಾಗಬೇಕೆಂದಿಲ್ಲ. ಹಲವು ಸಂದರ್ಭಗಳಲ್ಲಿ ಅದು ಸಾಧ್ಯವೂ ಆಗದ ವಿಚಾರ. ಜನಪದರೇ ಹೇಳುವ ಹಾಗೆ "ಚಿನ್ನದ ಸೂಜಿ ಅಂತ ಕಣ್ಣು ಚುಚ್ಚಿಕೊಳ್ಳಲಾಗುವುದಿಲ್ಲ".

ಪ್ರತಿಯೊಂದು ವಿಚಾರಕ್ಕೂ ಆಯಾ ಕಾಲದ ಚಿಕಿತ್ಸೆ ಆಗಲೇಬೇಕಾಗುತ್ತದೆ. ಆದರೆ ಈ ರೀತಿಯ ಚಿಕಿತ್ಸಕ ಕಾರ್ಯ ಎಲ್ಲಾ ಸಮಾಜದಲ್ಲಿಯೂ ಒಂದೇ ರೀತಿ ನಡೆಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಗ್ರಾಮೀಣ ಸಮಾಜಗಳಲ್ಲಿ ಮೂಲ ಸಂಸ್ಕೃತಿಯ ಹಲವೊಂದು ವಿಚಾರಗಳು ದಟ್ಟವಾಗಿ ಕಂಡು ಬಂದರೆ, ಅದಕ್ಕಿಂತ ಸ್ವಲ್ಪ ಮುಂದುವರಿದ ಸಮಾಜದಲ್ಲಿ ಅದರ ಸವಕಲು ರೂಪಗಳನ್ನು ಕಾಣುತ್ತೇವೆ. ಹೀಗೆಯೇ ಅದರ ವಿವಿಧ ಹಂತಗಳು ಗೋಚರಿಸುತ್ತವೆ. ನಗರಗಳಲ್ಲಿ ಇಂದು ಗೌರಿ - ಗಣೇಶ ಹಬ್ಬವನ್ನು ಮಾಡುವವರು ಅವುಗಳನ್ನು ವಿಸರ್ಜಿಸುವಾಗ ಮೆರವಣಿಗೆಯಲ್ಲಿ ಹೋಗಿ ಕೆರೆಗೆ ಬಿಡದೆ ಹೋಗಬಹುದು, ಆದರೆ ಅದಕ್ಕೆ ಬದಲಾಗಿ ಮನೆಯ ಒಳಗೇ ಪ್ಲಾಸ್ಟಿಕ್ ಬಕೆಟ್‌ನಲ್ಲಿ ನೀರು ತುಂಬಿ, ಅದರಲ್ಲಿಯೇ ವಿಸರ್ಜಿಸಿ ಬೆಳಿಗ್ಗೆ ಅದನ್ನು ತುಳಸಿಯ ಗಿಡಕ್ಕೊ ಅಥವಾ ತೆಂಗಿನ ಮರದ ಬುಡಕ್ಕೊ ಹಾಕುವುದರ ಮೂಲಕ ಆ ಸಂಪ್ರದಾಯದ ಪಾಲನೆಯನ್ನು ನೋಡುತ್ತೇವೆ.

ಹೀಗಾಗಿ ಜಾನಪದ ಇಂದು ಎಲ್ಲರಿಗೂ ಬೇಕಾದ, ಆಸಕ್ತಿಯ ಹಾಗೂ ಕುತೂಹಲದ ವಿಷಯವಾಗಿದೆ. ಅತ್ಯಂತ ವೈವಿಧ್ಯ ಪೂರ್ಣವಾಗಿ ಕಂಡು ಬರುವ ಅದರ ವಿವಿಧ ರೂಪಗಳು ಅತ್ಯಂತ ಆಕರ್ಷಕವಾದುವುಗಳೂ ಆಗಿವೆ. ಪ್ರಾದೇಶಿಕ ವೈಶಿಷ್ಟ್ಯಗಳೊಂದಿಗೆ ಅಚ್ಚರಿಯನ್ನುಂಟು ಮಾಡುವ, ಈ ಜಾನಪದ ಜಗತ್ತು ಸಂಶೋಧಕರಿಗೆ, ಸಮಾಜ ಶಾಸ್ತ್ರಜ್ಞರಿಗೆ, ಮಾನವ ಶಾಸ್ತ್ರಜ್ಞರಿಗೆ ಒಂದು ಸವಾಲಾಗಿಯೂ ನಿಂತಿದೆ.

ಪ್ರಸ್ತುತ ಕೃತಿ "ಜಾನಪದ ಸೋಪಾನ" ಮೇಲಿನ ಅಂಶಗಳ ಹಲವು ವಿಚಾರಗಳನ್ನೊಳಗೊಂಡ ಕೃತಿ. ಇದೊಂದು ವಿಶಿಷ್ಟ ಕೃತಿ ಕೂಡ. ಏಕೆಂದರೆ ಜಾನಪದದ ವಿವಿಧ ಮುಖಗಳನ್ನು ಇದು ಒಳಗೊಂಡಿದೆ. ಜಾನಪದದಲ್ಲಿ ವಿಷಯ ಸಂಗ್ರಹಣೆ ಒಂದು ಭಾಗವಾದರೆ, ಅದನ್ನು ಕುರಿತಾದ

ಅಧ್ಯಯನ ಮತ್ತೊಂದು ಭಾಗ. ಈ ಎರಡೂ ಕಾರ್ಯಗಳು ಸಮ ಸಮವಾಗಿ ನಡೆದಾಗಲೇ ಜಾನಪದ ಕಾರ್ಯ ಪೂರ್ಣಗೊಂಡಂತಾಗುವುದು. ಜಾನಪದದ ವಿವಿಧ ಶಾಖೆಗಳ ಸಂಪೂರ್ಣ ವಿಶ್ಲೇಷಣೆ, ವಿಮರ್ಶೆ ಇಂದು ಅಗತ್ಯವಾಗಿ ಆಗಬೇಕಾಗಿರುವ ಕೆಲಸ. ಆ ನಿಟ್ಟಿನಲ್ಲಿ ಇದೂ ಒಂದು ಪ್ರಯತ್ನ.

'ಜಾನಪದ ಸೋಪಾನದ' ಮೊದಲ ಲೇಖನವೇ 'ಜನಪದ ಸಾಹಿತ್ಯದಲ್ಲಿ ಮಹಿಳೆ'. ಜನಪದ ಸಾಹಿತ್ಯದ ಬಹು ಮುಖ್ಯವಾದ ಭಾಗವೇ ಸ್ತ್ರೀ ಪ್ರಪಂಚದ್ದು. ಅವರ ನೋವು ನಲಿವುಗಳು, ಆಚಾರ - ವಿಚಾರಗಳು, ನಂಬಿಕೆ - ನಡಾವಳಿಗಳು ಇಲ್ಲಿ ಸಾಹಿತ್ಯ ರೂಪವನ್ನು ತಾಳಿವೆ. ಹೆಣ್ಣಿನ ಬಾಳು ಕಹಿ - ಸಿಹಿಗಳ ಸಂಗಮ, ಅದರಲ್ಲಿಯೂ ಹಿಂದಿನ ಮಹಿಳೆಯ ಬಾಳಿನಲ್ಲಿ ಕಹಿಯದ್ದೇ ಸಿಂಹಪಾಲು. ಅಂತಹ ಹೆಣ್ಣಿನ ವಿವಿಧ ಮುಖಗಳ ಪರಿಚಯ ಈ ಲೇಖನ.

ಹೆಣ್ಣು ಮಗಳಾಗಿ, ಅಕ್ಕನಾಗಿ, ತಂಗಿಯಾಗಿ, ಮಡದಿಯಾಗಿ, ನಾದಿನಿಯಾಗಿ, ಸೊಸೆಯಾಗಿ, ಅತ್ತೆಯಾಗಿ, ತಾಯಿಯಾಗಿ ನಿರ್ವಹಿಸುವ ಪಾತ್ರ, ಪಡುವ ಪಾಡು ವರ್ಣನೆಗೆ ಮೀರಿದ್ದು. ಈ ಒಂದೊಂದು ಸ್ಥಾನದಲ್ಲಿಯೂ ಅವಳು ಕೈಗೊಳ್ಳುವ ತೀರ್ಮಾನಗಳು, ನಡೆದುಕೊಳ್ಳುವ ರೀತಿ ಇಡೀ ಕುಟುಂಬದ ಅಳಿವು - ಉಳಿವಿನ ಪ್ರಶ್ನೆಯಾಗಿರುತ್ತದೆ. ಹೆಣ್ಣಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ಹಲವು ಗಾದೆಗಳು, ಕತೆಗಳು, ತ್ರಿಪದಿಗಳು, ಅವಳ ಸ್ಥಿತಿ ಎಷ್ಟೊಂದು ಕಷ್ಟವಾದದ್ದು ಎಂಬುದನ್ನು ಸೂಚಿಸುತ್ತದೆ. ಹೆಣ್ಣಾಗಿ ಎಂತಹದೇ ಪರಿಸ್ಥಿತಿಯಲ್ಲಿ ಹೇಗೇ ನಡೆದುಕೊಂಡರೂ ನಿಂದನೆಗೆ ಗುರಿಯಾಗುವವಳು ಅವಳೇ. ಬಂಜೆತನಕ್ಕೆ ಅವಳನ್ನೇ ಸಂಪೂರ್ಣ ಹೊಣೆಗಾರಳನ್ನಾಗಿ ಮಾಡಿ ಇಡೀ ಸಮಾಜ ಅವಳನ್ನು ಹೀನಾಯವಾಗಿ ಕಾಣುವ ಪರಿಸ್ಥಿತಿ ಇಂದಿಗೂ ಸಂಪೂರ್ಣ ದೂರವಾಗಿದೆ ಎಂದು ಹೇಳುವಂತಿಲ್ಲ. ಹಾಗಾಗಿಯೇ ಅವಳು "ಆಗ ಹುಟ್ಟಿ ಆಗ ಸಾಯುವಂತ ಕಂದನ ಕೊಡು ಶಿವನೆ ಬಂಜೆಂಬ ಸಬುದ ಹೊರಲಾರೆ" ಎಂದು ಶಿವನನ್ನು ಬೇಡುತ್ತಾಳೆ. ಇಂತಹ ನಿದರ್ಶನಗಳ ಹಿನ್ನೆಲೆಯಲ್ಲಿ 'ಹೆಣ್ಣಿನ ಬಾಳು ಕಣ್ಣೀರು' ಎಂಬ ಮಾತು ಅಚ್ಚರಿ ಹುಟ್ಟಿಸುವಂತಹುದೇನೂ ಅಲ್ಲ. ಅವಳು ಮೇಣದ ಬತ್ತಿಯಂತೆ ತನ್ನನ್ನು ತಾನು ಬಲಿ ಕೊಟ್ಟುಕೊಂಡು ಇತರರಿಗೆ ಬೆಳಕಾಗಿ ಬಾಳಬೇಕಾದವಳು. ಆದರೂ ನಿಂದೆ ತಪ್ಪಿದ್ದಲ್ಲ.

'ಗೌರಿ ಗಣೇಶನ ಹಬ್ಬ', 'ಹಳ್ಳಿಗರ ನಂಬಿಕೆಯ ಹಲವು ಶಾಸ್ತ್ರಗಳು', 'ಬೊಮ್ಮೂರಮ್ಮನ ಹಬ್ಬ', 'ಹಬ್ಬ ಒಂದು ವಿವೇಚನೆ', 'ನಗುವನಹಳ್ಳಿಯ ಸಂಕ್ರಾಂತಿ ಹಬ್ಬ', ಹಾಗೂ 'ಆರತಿ ಉಕ್ಕಡ : ಒಂದು ಪರಿಚಯ' ಇವುಗಳು ಜನಪದ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ಲೇಖನಗಳು.

ಸಂಪ್ರದಾಯದ ಆಚರಣೆಯಲ್ಲಿ ಜನಪದರಿಗೂ ಶಿಷ್ಟರಿಗೂ ಸಾಕಷ್ಟು ಅಂತರವಿದೆ. ದೇವರ ಬಗೆಗೆ, ಆ ಸಂಬಂಧವಾದ ಆಚಾರ - ವಿಚಾರಗಳ ಬಗೆಗೆ ಅವರ ನಿಲುವೇ ಬೇರೆ. ದೇವರು ಅವರಿಗೆ ಹತ್ತಿರದ ಬಂಧುವಿನಂತೆ. ತಮ್ಮ ಬದುಕಿನ ಹಲವು ಘಟನೆಗಳನ್ನೇ ಆ ದೇವತೆಗಳಿಗೂ ಆರೋಪಿಸಿ, ಅದರಂತೆ ಕಲ್ಪಿಸಿಕೊಂಡು ಆನಂದಿಸುತ್ತಾರೆ. ಹಬ್ಬದ ಆಚರಣೆಯಲ್ಲಿಯೂ ಆ ಹಿನ್ನೆಲೆಯಲ್ಲಿಯೇ ನಡೆಯುತ್ತದೆ. ಅಷ್ಟೊಂದು ಆತ್ಮೀಯವಾದ ಸಂಬಂಧ ಅವರದ್ದು. ಅವರಿಗೆ ದೇವರು ಎಲ್ಲಿಯೋ ಆಕಾಶಕ್ಕೆ ಅಂಟಿದ ಶಕ್ತಿಯಲ್ಲ. ಅವರ ಮನೆಗೆ ಬಂದು ಆತಿಥ್ಯವನ್ನು ಸ್ವೀಕರಿಸಿ ಹೋಗುವ ಹತ್ತಿರದ ಬಂಧು. ನಗುವನಹಳ್ಳಿಯ ಸುತ್ತಮುತ್ತ ನಡೆಯುವ ಗೌರಿ - ಗಣೇಶನ ಹಬ್ಬದ ವೈಶಿಷ್ಟ್ಯವನ್ನು ನಗುವನಹಳ್ಳಿ ರತ್ನ ಅವರು ಪರಿಚಯಿಸಿಕೊಟ್ಟಿದ್ದಾರೆ.

"ಹಳ್ಳಿಗರ ನಂಬಿಕೆಯ ಹಲವು ಶಾಸ್ತ್ರಗಳು" ಕುತೂಹಲ ಕೆರಳಿಸುವ ಒಂದು ಲೇಖನ ಇದರಲ್ಲಿ ಕವಡೆಶಾಸ್ತ್ರ, ಕೊರವಂಜಿಶಾಸ್ತ್ರ, ರಾಗಿಶಾಸ್ತ್ರ, ಗಿಣಿಶಾಸ್ತ್ರ ಹಾಗೂ ಜಲಚಿಂತಾಮಣಿ ಶಾಸ್ತ್ರಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಅವುಗಳ ಸ್ವರೂಪ ಲಕ್ಷಣಗಳನ್ನು ವಿವರಿಸಿದ್ದಾರೆ. "ರಾಗಿಶಾಸ್ತ್ರ" ಇಲ್ಲಿ ಹೆಚ್ಚು ಗಮನ ಸೆಳೆಯುವಂತಹುದು. 'ಜನಪದ ನಂಬಿಕೆಗಳು' ಇಲ್ಲಿಯ ಮತ್ತೊಂದು ಪುಟ್ಟ ಲೇಖನ. ಜನಪದರ ದೃಷ್ಟಿಯಿಂದ ಅವುಗಳ ಮಹತ್ವ ಹಾಗೂ ಅವುಗಳ ವೈಶಿಷ್ಟ್ಯಗಳನ್ನು ಕುರಿತು ಹೇಳಿದ್ದಾರೆ.

ಶಾಸ್ತ್ರ - ಸಂಪ್ರದಾಯ ಎಂಬುದು ಹಳ್ಳಿಗರ ಬಾಯಲ್ಲಿ ಒಟ್ಟೊಟ್ಟಿಗೇ ಹೊರ ಹೊಮ್ಮುವ ಮಾತು. ಸಂಪ್ರದಾಯ ಯಾವುದೇ ಸಂಸ್ಕೃತಿಯ ಸಾರವತ್ತಾದ ಭಾಗ. ಸಂಸ್ಕೃತಿ ರೂಪುಗೊಳ್ಳುವುದೇ ಅಂತಹ ಹಲವು ಸಂಪ್ರದಾಯಗಳ ತಿರುಳಿನಿಂದ. ಒಂದು ಸಮಾಜ ರೂಪುಗೊಳ್ಳುವ ಹಿನ್ನೆಲೆಯಲ್ಲಿ ಇಂತಹ ಸಂಪ್ರದಾಯಗಳು ಹುಟ್ಟಿಕೊಂಡು ಆ ಸಮಾಜದ ಗೊತ್ತು ಗುರಿಗಳನ್ನು ನಿರ್ಣಯಿಸಿ ನಿರ್ದೇಶಿಸುತ್ತವೆ. ಬದುಕಿಗೆ ವಿಶಿಷ್ಟವಾದ ಚೌಕಟ್ಟೊಂದನ್ನು ನಿರ್ಮಿಸಿಕೊಡುತ್ತದೆ. ಹಾಗೆ ನೋಡುವಾಗ ಸಂಪ್ರದಾಯಗಳ ನಂಬಿಕೆಗಳ ಒಟ್ಟು ಮೊತ್ತವೇ ಸಂಸ್ಕೃತಿ. ಅವೆರಡು ಪರಸ್ಪರ ಪೂರಕ. ಸಂಸ್ಕೃತಿ ಒಂದು ಜನಾಂಗ ಅಥವಾ ಒಂದು ಸಮಾಜ ಬೆಳೆದು ಬಂದ ಬಗೆಯನ್ನೂ ಅವರ ಪರಿಸರ ಹಾಗೂ ಬದುಕಿನ ಬಗೆಯನ್ನೂ ತಿಳಿಸುವಲ್ಲಿ ಸಹಾಯಕವಾಗುವಂತಹುದು. ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವುದರ ಮೂಲಕ ಅವು ಹೆಚ್ಚು ಹೆಚ್ಚು ಆಳಕ್ಕೆ ಬೇರು ಬಿಡುತ್ತ, ಭದ್ರಗೊಳ್ಳುತ್ತಾ ಹೋಗುತ್ತವೆ. ಆ ಸಮಾಜದಲ್ಲಿ ಬದುಕುವ ವ್ಯಕ್ತಿಯ ಅರಿವಿಗೇ ಬರದಂತೆ ಅವು ಅವನ ಸ್ವತ್ತಾಗಿ ಆಚರಣೆಯಲ್ಲಿ ಕಾಣಿಸಿಕೊಳ್ಳುತ್ತವೆ. ಇದರ ಕಲಿಕೆಗೆ ವ್ಯಕ್ತಿಯ ಪ್ರಯತ್ನವೇನೂ ಬೇಕಾಗುವುದಿಲ್ಲ. ಅದು ರೂಢಿಯಲ್ಲಿ ಸ್ವತ್ತಾಗಿ ಪರಿಣಮಿಸುವಂತಹುದು.

ನಂಬಿಕೆ, ಶಾಸ್ತ್ರ, ಸಂಪ್ರದಾಯಗಳು ಒಂದು ರೀತಿಯಲ್ಲಿ ಸಮಾಜವನ್ನು ನಡೆಸುವ, ವ್ಯಕ್ತಿಯನ್ನು ನಿರ್ದೇಶಿಸುವ ಶಕ್ತಿಗಳಾಗಿ, ಅಸ್ತ್ರಗಳಾಗಿ ಕಂಡು ಬರುತ್ತವೆ. ಅನಕ್ಷರಸ್ಥ ಸಮಾಜದಲ್ಲಂತೂ ಅವುಗಳದ್ದೇ ಮೇಲುಗೈ. ಅವುಗಳ ಹೊರತಾಗಿ ಅವರ ಬದುಕಿನ ಮುನ್ನಡೆ ಇಲ್ಲವೇ ಇಲ್ಲ. ಅಷ್ಟರ ಮಟ್ಟಿಗೆ ಅವರನ್ನು ನಿಯಂತ್ರಿಸುವ ಪ್ರಬಲ ಅಸ್ತ್ರಗಳಾಗಿ ನಂಬಿಕೆ ಸಂಪ್ರದಾಯಗಳು ಕಂಡು ಬರುತ್ತವೆ.

ಇಂತಹ ನಂಬಿಕೆ ಸಂಪ್ರದಾಯಗಳಿಂದ ಸಮಾಜಕ್ಕೆ ಒಳ್ಳೆಯದು ಆಗಿರುವಂತೆ ಕೆಡಕು ಆಗಿವೆ. "ಅಪ್ಪ ಹಾಕಿದ ಆಲದ ಮರ ಅಂತ ನೇಣು ಹಾಕಿಕೊಳ್ಳಲು ಸಾಧ್ಯವೆ ?" ಎಂಬ ಪ್ರತಿಭಟನೆಯ ಧ್ವನಿ ಅವರಲ್ಲಿಯೇ ಕಂಡು ಬರುವುದು, ಅಂತಹ ಕೆಲವು ಕೆಟ್ಟ ಆಚರಣೆಗಳ ಅಥವಾ ಸಂಪ್ರದಾಯಗಳ ಬಗೆಗಿನ ಮಾತಾಗಿದೆ. ಯಾವುದೋ ಕಾಲದ ನಂಬಿಕೆ ಅಥವಾ ಸಂಪ್ರದಾಯ ಮತ್ತಾವುದೋ ಕಾಲದ ಅಥವಾ ಎಲ್ಲಾ ಕಾಲದ ನಂಬಿಕೆಯಾಗಿ ಉಳಿಯಬೇಕಾಗಿಲ್ಲ, ಅದರ ಅಗತ್ಯವೂ ಇರುವುದಿಲ್ಲ. ಕೆಲವೊಂದು ಆಚರಣೆಗಳು ಆ ಒಂದು ಕಾಲದ ಯಾವುದೋ ನಂಬಿಕೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡದ್ದಾಗಿರುತ್ತದೆ. ಅದು ಅವರ ಒಂದು ಅಂಧಶ್ರದ್ಧೆಯ ಕಾರಣದಿಂದಲೂ ಆಗಿರಬಹುದಾದಂತಹುದು. ಅಂತಹ ಅನೇಕವು ಯಾವುದೇ ಸಂಸ್ಕೃತಿಯಲ್ಲಿ ಕಂಡು ಬರುತ್ತವೆ. ಇವು ಒಳ್ಳೆಯ ಬೆಳೆಯ ಜೊತೆಯಲ್ಲಿ ಹುಟ್ಟಿ ಬರುವ ಕಳೆಯಿದ್ದಂತೆ. ಆ ಕಳೆಯನ್ನು ಕಿತ್ತೊಗೆದು ಹಸನು ಮಾಡದ ಹೊರತು ಒಳ್ಳೆಯ ಬೆಳೆ ಪೂರ್ಣ ಪ್ರಮಾಣದಲ್ಲಿ ಕೈ ಸೇರುವುದಿಲ್ಲ. ನಮ್ಮ ನಮ್ಮ ಸಂಸ್ಕೃತಿಯನ್ನು ನಾವು ಎತ್ತಿ ಹಿಡಿಯುವ ಸಂದರ್ಭದಲ್ಲಿ, ಉತ್ಸಾಹದಲ್ಲಿ ಇಂತಹವುಗಳ ಕಡೆಗೆ ಗಮನ ಹರಿಸದೆ ಹೋದರೆ ದೊಡ್ಡ ತಪ್ಪೆಸಗಿದಂತಾಗುತ್ತದೆ. ಅಲ್ಲಿರುವುದೆಲ್ಲ ಸರ್ವಶ್ರೇಷ್ಠ

ಎಂದು ಹೇಳುವುದರ ಮೂಲಕ ಮತ್ತೆ ಮೌಢ್ಯವನ್ನೇ ಬಿತ್ತುವ ಕೆಲಸವನ್ನು ಮಾಡಬಾರದು. ಎಲ್ಲಾ ವಿಷಯಗಳಿಗೂ ಎಲ್ಲಾ ಕಾಲದಲ್ಲಿಯೂ ಒಂದಲ್ಲ ಒಂದು ಬಗೆಯ ಚಿಕಿತ್ಸೆ ನಡೆಯುವುದು ಅಗತ್ಯ.

ಜನಪದ ಸಾಹಿತ್ಯ, ಸಂಸ್ಕೃತಿ, ನಂಬಿಕೆ, ಸಂಪ್ರದಾಯ, ಶಾಸ್ತ್ರ ಮುಂತಾದುವುಗಳ ಬಗೆಗೆ ವ್ಯಾಖ್ಯಾನಿಸುವಾಗ ಈ ಎಚ್ಚರ ಅಗತ್ಯವೆನಿಸುತ್ತದೆ. ಅವುಗಳ ಮಹತ್ವವನ್ನು ವೈಜ್ಞಾನಿಕ ಹಿನ್ನೆಲೆಯೊಂದಿಗೆ ಪರಿಶೀಲಿಸಬೇಕಾಗುತ್ತದೆ. ಅವುಗಳಲ್ಲಿ ಜೊಳ್ಳೆಷ್ಟು, ಗಟ್ಟಿಯೆಷ್ಟು ಎಂಬುದನ್ನು ನಿರ್ಣಯಿಸಿ ಸ್ವೀಕರಿಸುವುದು ಸೂಕ್ತ.

ಮುಂದಿನ ಲೇಖನಗಳು ಹಬ್ಬ - ಜಾತ್ರೆಗಳಿಗೆ ಸಂಬಂಧಿಸಿದ್ದು. ಹಬ್ಬ ಜಾತ್ರೆಗಳು ನಮ್ಮ ಸಮಾಜದ ಬೆಳವಣಿಗೆಯ ಜೊತೆ ಜೊತೆಯಲ್ಲಿಯೇ ಬೆಳೆದು ಬಂದವುಗಳು, ದೇವರು - ಧರ್ಮ ಇತ್ಯಾದಿಗಳೇ ಅವುಗಳ ತಳಹದಿ. ಹಾಗಾಗಿ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿಯೂ ಅವು ಕಂಡು ಬರುತ್ತವೆ. ಒಂದು ರೀತಿಯಲ್ಲಿ ಹಬ್ಬ ಮತ್ತು ಜಾತ್ರೆಗಳು ಪರಸ್ಪರ ಪೂರಕ.

ಪ್ರತ್ಯೇಕವಾಗಿ ನಡೆಯುವ ಹಬ್ಬಗಳಿದ್ದರೂ, ಜಾತ್ರೆಗಳು ಮಾತ್ರ ಯಾವುದಾದರೂ ದೇವತೆಯ ಹಬ್ಬದ ಸಂದರ್ಭಗಳಲ್ಲಿ ಆ ದೇವತೆಯ ಹೆಸರಿನಲ್ಲಿಯೇ ನಡೆಯುವಂತಹುದು. ಬಿಡಿ ದಿನದ ಹಬ್ಬಕ್ಕಿಂತ ಜಾತ್ರೆಯ ಸಡಗರ ಸಂಭ್ರಮ ದೊಡ್ಡದು. ಊರಿನವರ ದೃಷ್ಟಿಯಿಂದಲಂತೂ ಅದೊಂದು ಮಹೋತ್ಸವ. ಧಾರ್ಮಿಕವಾದ ಆರ್ಥಿಕವಾದ ಸಾಂಸ್ಕೃತಿಕವಾದ ಆಚಾರ ವಿಚಾರ, ವ್ಯವಹಾರಗಳ ಸಂಗಮ. ಸಾಂಪ್ರದಾಯಿಕವಾದ ಅಡಿಗೆ ಉಡಿಗೆ ತೊಡಿಗೆಗಳ ಆಗರ. ಇಂತಹ ಜಾತ್ರೆಗಳ ಅಧ್ಯಯನ ಸಾಂಸ್ಕೃತಿಕ ದೃಷ್ಟಿಯಿಂದಷ್ಟೇ ಅಲ್ಲ. ಅವರ ಬದುಕಿನ ತಿರುವು ಮುರುವುಗಳ ದೃಷ್ಟಿಯಿಂದಲೂ ಗಮನಾರ್ಹ. ಅವು ಅವರ ಕೆಲವು ಅಗತ್ಯಗಳನ್ನು ಪೂರೈಸುವ, ಬದುಕಿನಲ್ಲಿ ಹೊಸತನ್ನು ಕಾಣಿಸುವ, ಕಂಡು ಅನುಭವಿಸಿ ಆನಂದಿಸುವಂತೆ ಮಾಡುವ ಹಿನ್ನೆಲೆಯಲ್ಲಿ ಹಬ್ಬ ಜಾತ್ರೆಗಳ ಮಹತ್ವ ಹಿರಿದಾದದ್ದು.

ಜನಾಂಗವೊಂದನ್ನು ಕುರಿತು ಲೇಖನವೂ ಇದರಲ್ಲಿ ಸ್ಥಾನ ಪಡೆದಿದೆ. ಜನಪದ ಸಂಗೀತ, ಜನಪದ ಕಥೆ, ಜನಪದ ಗೀತಾಂಜಲಿ - ಒಂದು ಸಮೀಕ್ಷೆ. ಈ ಎಲ್ಲಾ ಲೇಖನಗಳು ಕೇವಲ ಪರಿಚಯಾತ್ಮಕ ಲೇಖನಗಳಾಗಿ ನಿಂತು ಬಿಡುತ್ತವೆ. ಸಾಕಷ್ಟು ವಿಸ್ತಾರಗೊಳ್ಳಬಹುದಾಗಿದ್ದ ಈ ಲೇಖನಗಳು ಹಲವು ಇತಿಮಿತಿಗೆ ಒಳಗಾಗಿ ರಚನೆಗೊಂಡಂತೆ ಕಂಡು ಬರುತ್ತವೆ. ಒಂದು ನಿರ್ದಿಷ್ಟ ಸಂದರ್ಭದಲ್ಲಿ ಬರೆದವುಗಳಾದ್ದರಿಂದ ಪರಿಮಿತಿಗಳು ಇದ್ದೇ ಇವೆ ನಿಜ. ಪುಸ್ತಕ ರೂಪದಲ್ಲಿ ಹೊರ ತರುವಾಗ ಅವುಗಳನ್ನು ವಿಸ್ತರಿಸಿದ್ದರೆ ಇನ್ನೂ ನ್ಯಾಯವನ್ನು ದೊರಕಿಸಿದಂತಾಗುತ್ತಿತ್ತು ಎಂಬುದು ನನ್ನ ಅನಿಸಿಕೆ.

ಶ್ರೀಮತಿ ನಗುವನಹಳ್ಳಿ ಪಿ. ರತ್ನ ಅವರು ಈಗಾಗಲೇ ತಮ್ಮ ಊರಾದ ನಗುವನಹಳ್ಳಿಗೆ ಸಂಬಂಧಿಸಿದಂತೆ ಒಳ್ಳೆಯ ಕೆಲಸ ಮಾಡಿದ್ದಾರೆ. ತಮ್ಮ ಊರಿನ ಜನಪದ ಕತೆಗಳನ್ನು ಸಂಗ್ರಹಿಸಿದ್ದಾರೆ. ಹಾಗೆಯೇ "ಜಾನಪದ ವಿವೇಚನೆ" ಎಂಬ ತಮ್ಮ ಇನ್ನೊಂದು ಕೃತಿಯಲ್ಲಿ ಜಾನಪದದ ಕೆಲವೊಂದು ವಿಚಾರಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಜಾನಪದವನ್ನು ವಿಶೇಷ ವಿಷಯವನ್ನಾಗಿ ತೆಗೆದುಕೊಂಡು ಅಧ್ಯಯನ ಮಾಡಿರುವ ಅವರು ಅದರ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ದಿಸೆಯಲ್ಲಿ ಸರ್ವ ಪ್ರಯತ್ನ ಮಾಡುತ್ತ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಶ್ರದ್ಧೆ ಆಸಕ್ತಿ ಉತ್ಸಾಹಗಳು

ಎದ್ದು ತೋರುತ್ತವೆ.

ಜನಪದ ಸಾಹಿತ್ಯ - ಸಂಸ್ಕೃತಿ ಇವುಗಳ ಕಡೆಗೆ ಹೆಚ್ಚು ಒಲವನ್ನು ತೋರುತ್ತಾ ಬಂದಿರುವ ಪಿ. ರತ್ನ ಅವರು ಅವುಗಳನ್ನೇ ಕೇಂದ್ರವಾಗಿರಿಸಿ ಕೊಂಡು ತಮ್ಮ ಕಾರ್ಯವನ್ನು ಮುಂದುವರಿಸಿ ದ್ದಾರೆ. ಅದರಲ್ಲಿಯೂ ತಮ್ಮ ಹುಟ್ಟಿದ ಊರನ್ನು ಕೇಂದ್ರವಾಗಿಟ್ಟುಕೊಂಡು ಅದರ ಸಮಗ್ರ ಸ್ವರೂಪವನ್ನು ಪರಿಚಯಿಸಿಕೊಡುವ ಹೊಣೆಯನ್ನು ಹೊತ್ತಂತೆ ಅವರು ಕಾರ್ಯ ನಿರ್ವಹಿಸುತ್ತ ಬಂದಿದ್ದಾರೆ. "ಹಾಲುಂಡ ತವರೀಗೆ ಏನೆಂದು ಹಾಡಲಿ ಹೊಳೆದಂಡೆಲಿರುವ ಗರಕೀಯ ಕುಡಿಯಂಗೆ ಹಬ್ಬಲಿ ಅವರ ರಸಬಳ್ಳಿ" ಎಂಬಂತೆ ಹುಟ್ಟಿದ ಊರಿನ ಋಣವನ್ನು ತೀರಿಸುವ ಕೆಲಸವನ್ನು ಕೈಗೊಂಡಿದ್ದಾರೆ. ಶ್ರೀಮತಿ ನಗುವನಹಳ್ಳಿ ಪಿ. ರತ್ನ ಅವರಲ್ಲಿ ಕಂಡು ಬರುವ ಅತೀವವಾದ ಉತ್ಸಾಹ ಹಾಗೂ ಶ್ರದ್ಧೆ ಅವರಿಂದ ಇನ್ನೂ ಇಂತಹ ಒಳ್ಳೆಯ ಕೆಲಸವನ್ನು ಮಾಡಿಸುತ್ತವೆ ಎಂಬುದರಲ್ಲಿ ಅನುಮಾನವಿಲ್ಲ. ಹಾಗಾಗಲಿ ಎಂದು ಆಶಿಸುತ್ತೇನೆ.

* * * * *

"ಮಲೆನಾಡು ಶೈವ ಒಕ್ಕಲಿಗರು"

ಒಂದು ಕಾಲಕ್ಕೆ ಜನಪದ ಗೀತೆಗಳ ಸಂಗ್ರಹ ಕಾರ್ಯಕ್ಕಷ್ಟೇ ಸೀಮಿತವಾಗಿದ್ದ ಕರ್ನಾಟಕ ಜಾನಪದ ಕ್ಷೇತ್ರ, ಕಾಲ ಕಳೆದಂತೆ ಅದರ ಆಳ ಅಗಲಗಳನ್ನು ಗುರುತಿಸಿ ಕೊಳ್ಳುತ್ತ ಅದರಲ್ಲಿ ಪಾತಾಳ ಗರಡಿಯನ್ನು ಬಿಟ್ಟು ಅತ್ಯಮೂಲ್ಯವಾದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಸಂಗತಿಗಳನ್ನು ಶೋಧಿಸಿ ತೆಗೆಯುತ್ತ ಮುಂದುವರೆದದ್ದು ಕರ್ನಾಟಕ ಜಾನಪದ ಅಧ್ಯಯನದ ಒಂದು ಪ್ರಮುಖ ಘಟ್ಟ.

ಇಡೀ ವಿಶ್ವದಲ್ಲಿ ಒಂದು ರೀತಿ ಜಾನಪದ ಅಧ್ಯಯನ ರೂಪುಗೊಂಡದ್ದೇ ಹೀಗೆ. ಮೊದಮೊದಲು ಕೇವಲ ಅದರ ಸಾಹಿತ್ಯಿಕ ಸೊಬಗಿಗೆ ಆಕರ್ಷಿತರಾಗಿ, ಅನಂತರ ಅದರ ಒಳಪದರಗಳ ಸತ್ವಕ್ಕೆ ಮಾರುಹೋದದ್ದೇ ಹೆಚ್ಚು. ಜಾನಪದ ಅಧ್ಯಯನಕ್ಕೆ ಚುರುಕಿನ ಚಾಲನೆ ಯನ್ನು ಕೊಟ್ಟ ಗ್ರಿಮ್ ಸಹೋದರರೂ, ಜಾನಪದವನ್ನು ಒಂದು ಶಾಸ್ತ್ರೀಯ ಅಧ್ಯಯನದ ಚೌಕಟ್ಟಿಗೆ ಅಳವಡಿಸುವ ಮೊದಲು ಅದನ್ನು ಆರಂಭಿಸಿದ್ದು ಜನಪದ ಕತೆಗಳ ಸಂಗ್ರಹ ಮತ್ತು ಅಧ್ಯಯನದ ಮೂಲಕವೇ. ಇಂತಹ ಒಂದು ಅಧ್ಯಯನದ ಮೂಲಕ ಇಡೀ ಮಾನವ ಸಾಂಸ್ಕೃತಿಕ ಚರಿತ್ರೆಯನ್ನು ಪತ್ತೆ ಹಚ್ಚಿ ಪುನರ್ರಚಿಸಲು ಸಾಧ್ಯ ಎಂಬುದನ್ನು ಮನಗಂಡಾಗ, ಜಾನಪದ ಅಧ್ಯಯನದ ದಿಕ್ಕೇ ಬದಲಾದದ್ದು ಹಾಗೂ ಅದು ವಿಶಿಷ್ಟ ಮಹತ್ವವನ್ನು ಪಡೆದುಕೊಂಡದ್ದು ಒಂದು ಐತಿಹಾಸಿಕ ಸತ್ಯ. ಇಂದು ಮಾನವನ ಮೂಲ ಸಂಸ್ಕೃತಿಯನ್ನು ಗುರುತಿಸುವಲ್ಲಿ, ಅದರ ಹಲವು ಅಚ್ಚರಿಗಳನ್ನು ಅರ್ಥೈಸುವಲ್ಲಿ, ಹಲವು ವಿಷಯಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳ ಲಾಗುತ್ತಿದೆ. ಅವುಗಳಲ್ಲಿ ಬಹು ಮುಖ್ಯವಾದದ್ದು ಜಾನಪದ. ಜಾನಪದೀಯ ಅಧ್ಯಯನದ ಮೂಲಕ ಮನುಷ್ಯ ಸಂಬಂಧಿಯಾದ ಯಾವುದೇ ವಿಷಯವನ್ನು ಹೆಚ್ಚು ಸಮರ್ಥವಾಗಿ ವಿಶ್ಲೇಷಿಸಲು ಸಾಧ್ಯ ಎಂಬುದು ಈಗಾಗಲೇ ಮನದಟ್ಟಾಗಿದೆ. ಏಕೆಂದರೆ ಜಾನಪದದಲ್ಲಿ ಬರುವ ಸಂಗತಿಗಳೆಲ್ಲವೂ ಬಹುತೇಕವಾಗಿ ಅವರ ಬದುಕಿನೊಂದಿಗೆ ಅಂಟಿ ಬಂದವುಗಳು. ಅದರ ಬದುಕಿನ ಅವಿಭಾಜ್ಯ ಅಂಗವೆನಿಸಿ, ತಮ್ಮದೇ ಆದ ವಿಶಿಷ್ಟ ಪರಿಸರದಲ್ಲಿ ಅರಳಿ ನಿಂತವುಗಳು. ಅವರ ಬದುಕಿನ ಈ ಅಮೂಲ್ಯ ಸಂಗತಿಗಳನ್ನು ಹೆಕ್ಕಿ ತೆಗೆದು, ಅವುಗಳನ್ನು ಸಮರ್ಥವಾಗಿ ವಿಶ್ಲೇಷಿಸಲೂ ಈ ವಿಶಿಷ್ಟ ಪರಿಸರದ ಪರಿಶ್ರಮ ಬೇಕಾಗುತ್ತದೆ. ಅದಿಲ್ಲದೆ ಸಾರ್ಥಕವಾದ ಅಧ್ಯಯನ ಸಾಧ್ಯವಾಗದು. ಏಕೆಂದರೆ ಜಾನಪದದಲ್ಲಿ ಊಹೆಗೆ ಅವಕಾಶ ಹೆಚ್ಚಿರುವುದಿಲ್ಲ. ಅಲ್ಲಿ ವಾಸ್ತವಿಕತೆಗೇ ಹೆಚ್ಚು ಬೆಲೆ. ಆದರೆ, ಆ ವಾಸ್ತವಿಕತೆ ಬಹು ವೇಳೆ ಅಚ್ಚರಿಯನ್ನುಂಟು ಮಾಡುತ್ತಾ ಕೌತುಕದಲ್ಲಿಡುವುದೇ ಹೆಚ್ಚು. ಇಂತಹ ಸಂದರ್ಭಗಳು ಸಂಶೋಧಕನಿಗೆ ಸವಾಲಾಗಿ ನಿಲ್ಲುವುದು ಸಹಜ. ಆಗ ಅವನು ಎಚ್ಚರ ವಹಿಸಬೇಕಾಗುತ್ತದೆ. ಇಲ್ಲವಾದರೆ ಸಂಶೋಧನೆ ತಪ್ಪು ದಾರಿ ಹಿಡಿಯುವುದು ಅನಿವಾರ್ಯವಾಗುತ್ತದೆ. ಜನಾಂಗೀಯ ಅಧ್ಯಯನದಲ್ಲಿಯಂತೂ ಈ ಬಗ್ಗೆ ಕಟ್ಟೆಚ್ಚರವಿರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀಮತಿ ವೈ. ಸಿ. ಭಾನುಮತಿ ಅವರ

'ಮಲೆನಾಡು ಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ' ಅಪೂರ್ವ ರೀತಿಯಲ್ಲಿ ಗಮನ ಸೆಳೆಯುವ ಕೃತಿ.

'ಮಲೆನಾಡು ಶೈವ ಒಕ್ಕಲಿಗರು' - ಕರ್ನಾಟಕದ ಒಕ್ಕಲಿಗ ಜನಾಂಗದ ಒಂದು ವರ್ಗ. ಹೊರಳುದಾರಿಯಲ್ಲಿರುವ ಈ ಜನಾಂಗವನ್ನು ಕುರಿತು, ಆ ಜನಾಂಗದಿಂದಲೇ ಬಂದ ಶ್ರೀಮತಿ ಭಾನುಮತಿ ಅವರು ಆ ಬಗ್ಗೆ ತಲಸ್ಪರ್ಶಿಯಾದ ಶಾಸ್ತ್ರೀಯ ಅಧ್ಯಯನವನ್ನು ನಡೆಸುವಲ್ಲಿ ಯಶಸ್ವಿಯಾಗಿದ್ದಾರೆ. ಹೆಚ್ಚಿನ ಶ್ರದ್ಧೆ, ಕಠಿಣ ಪರಿಶ್ರಮ ಹಾಗೂ ತೀವ್ರ ಸಂಶೋಧನ ದೃಷ್ಟಿಯನ್ನೊಳಗೊಂಡ ಇಲ್ಲಿನ ಅಧ್ಯಯನ ಹೆಚ್ಚು ಮೌಲಿಕವಾದುದಾಗಿದೆ. ಲೇಖಿಕರೇ ಹೇಳಿಕೊಂಡಿರುವಂತೆ, "ಅಂತರಂಗದಲ್ಲಿ ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಂಡು ಬಹಿರಂಗದಲ್ಲಿ ನಾಗರಿಕತೆಯನ್ನು ಬಿಂಬಿಸುತ್ತಿರುವ ಒಂದು ಜನಾಂಗ" ಇದು. ಅಂತಹ ಒಂದು ಜನಾಂಗದ ಅಂತರಂಗದ ಲಕ್ಷಣಗಳು ವಿರೂಪಗೊಳ್ಳುವ ಮೊದಲೇ, ಅದನ್ನು ಸೆರೆಹಿಡಿದಿಡುವ ಮಹತ್ವಾಕಾಂಕ್ಷೆಯನ್ನು ಹೊತ್ತ ಇಲ್ಲಿನ ಸಂಶೋಧನ ಬರವಣಿಗೆ ಒಂದು ಅಪೂರ್ವ ಸಾಂಸ್ಕೃತಿಕ ದಾಖಲಾತಿಯಾಗಿ ವಿದ್ವಾಂಸರ ಗಮನ ಸೆಳೆಯುತ್ತದೆ. ಈ ಶ್ಲಾಘನೀಯ ಕಾರ್ಯ ನಿಜಕ್ಕೂ ಅವರಿಗೆ ಗೌರವ ತರುವಂತಹುದು. ಈ ಕಾರಣಕ್ಕಾಗಿ ಅವರು ಅಭಿನಂದನೀಯರು.'

'ಮಲೆನಾಡು ಶೈವ ಒಕ್ಕಲಿಗರು' ಗ್ರಂಥದ ಆರಂಭದಲ್ಲಿಯೇ ಅದರ 'ಅಧ್ಯಯನದ ಉದ್ದೇಶ'ವನ್ನು ಕುರಿತು ಲೇಖಿಕರು ಹೀಗೆ ಹೇಳಿಕೊಂಡಿದ್ದಾರೆ ; "ಮೌಖಿಕ ಪರಂಪರೆಯಲ್ಲಿನ ಜಾನಪದವನ್ನು ಆಧರಿಸಿ, ಸಾಂಸ್ಕೃತಿಕ ಶಿಸ್ತಿನ ಹಿನ್ನೆಲೆಯಲ್ಲಿ ಈ ಜನಾಂಗದ ವಿವಿಧ ಮಗ್ಗುಲನ್ನು ವಿಶ್ಲೇಷಿಸುವುದು ಇಲ್ಲಿನ ಉದ್ದೇಶ. ಆದ್ದರಿಂದ ಜನಾಂಗದ ಪರಂಪರಾನುಗತ ಸಂಪ್ರದಾಯಗಳತ್ತ ಹೆಚ್ಚು ಒತ್ತು ಕೊಡಲಾಗಿದೆ" ಎಂದು ಅಧ್ಯಯನದ ಚೌಕಟ್ಟನ್ನು ಮೊದಲೇ ಸ್ಪಷ್ಟಪಡಿಸಿ ದ್ದಾರೆ. ಯಾವುದೇ ಒಂದು ಶಿಸ್ತಿನ ಅಧ್ಯಯನಕ್ಕೆ ಅಗತ್ಯವಾಗಿ ಬೇಕಾದ ಎಲ್ಲೆಯನ್ನು ಆರಂಭ ದಲ್ಲಿಯೇ ಗುರುತಿಸಿಕೊಂಡಿರುವುದು, ಕ್ರಮಬದ್ಧ ಅಧ್ಯಯನದ ಮುನ್ಸೂಚನೆಯಾಗಿಯೂ ಕಂಡು ಬರುತ್ತದೆ. ಇತ್ತೀಚಿನ ದಿನಗಳಲ್ಲಿ, ಸಂಶೋಧನೆಗೆ ಕೈ ಹಾಕುವ ಮೊದಲೇ 'ಈ ಕ್ಷೇತ್ರದಲ್ಲಿ ತಮ್ಮದೇ ಮೊದಲ ಹೆಜ್ಜೆ' ಎಂದು ಹೇಳಿಕೊಳ್ಳುವ ಸಂದರ್ಭದಲ್ಲಿ ಶ್ರೀಮತಿ ಭಾನುಮತಿ ಅವರು. ಈ ಕ್ಷೇತ್ರದಲ್ಲಿ ಈಗಾಗಲೇ ಕೆಲಸ ಮಾಡಿರುವವರನ್ನು ಹೆಸರಿಸಿ, ಅದರ, ಇತಿಮಿತಿಗಳನ್ನು ಗುರುತಿಸಿ ತಮ್ಮ ಕೃತಿಯಲ್ಲಿ ಆ ಅರೆಕೊರೆಗಳನ್ನು ತುಂಬಿ ಕೊಡಲು ಮಾಡಿರುವ ಪ್ರಯತ್ನವನ್ನು ಮೊದಲೇ ತಿಳಿಸಿ ಸೌಜನ್ಯವನ್ನು ಮೆರೆದಿದ್ದಾರೆ.

"ಜನಾಂಗದ ಹಿನ್ನೆಲೆ"ಯಿಂದ ಆರಂಭವಾಗುವ, 'ಮಲೆನಾಡು ಶೈವ ಒಕ್ಕಲಿಗರ' ಅಧ್ಯಯನ, ಆ ವಿಭಾಗದಲ್ಲಿ ಹಲವು ಮಹತ್ವದ ಸಂಗತಿಗಳನ್ನು ಸ್ಪಷ್ಟಪಡಿಸಲು ಪ್ರಯತ್ನಿಸುತ್ತದೆ. ಜನಾಂಗವೊಂದರ ಮೂಲವನ್ನು ಪತ್ತೆ ಹಚ್ಚುವ ಕಾರ್ಯ ಎಷ್ಟು ಕ್ಲಿಷ್ಟ ಎಂಬುದರ ಅರಿವಿನೊಂದಿಗೇ, ಆ ಬಗ್ಗೆ ದೊರೆಯಬಹುದಾದ ಹಲವು ಮಾಹಿತಿಗಳನ್ನು ದೊರಕಿಸಿಕೊಡುವಲ್ಲಿ ಯಶಸ್ವಿಯಾಗಿ ದ್ದಾರೆ. ಹಲವು ಜಾತಿಮತಗಳ, ಧರ್ಮಗಳ, ದೈವಗಳ ಹಾಗೂ ಭಾಷೆಗಳ ಒಂದು ಸಂಕೀರ್ಣ ಸ್ವರೂಪ ಭಾರತ. ಒಂದು ಕಾಲಕ್ಕೆ ವೃತ್ತಿ ಸೂಚಕವಾದ ಪದಗಳು ಯಾವಾಗ ಜಾತಿಸೂಚಕ ವಾದುವು ? ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಈ ಸಂಬಂಧವಾಗಿ, 'ಒಕ್ಕಲಿಗ' 'ಗೌಡ' - ಎಂಬ ಶಬ್ದಗಳನ್ನು ಇಟ್ಟುಕೊಂಡು ಲೇಖಿಕಿ ನೀಡಿರುವ ವಿವರಣೆ ಸ್ಪಷ್ಟವಾಗಿದೆ. ಕರ್ನಾಟಕದ ವಿವಿಧ

ಭಾಗಗಳಲ್ಲಿ ಇವುಗಳ ಅರ್ಥವ್ಯಾಪ್ತಿಗೆ ಇರುವ ಕಾರಣಗಳನ್ನು ಅವರು ಸಮಂಜಸವಾಗಿ ಗುರುತಿಸಿದ್ದಾರೆ.

ಕರ್ನಾಟಕದ ಒಂದು ದೊಡ್ಡ ಜನಾಂಗವಾಗಿ ಕಂಡು ಬರುವ ಒಕ್ಕಲಿಗರು, ಪ್ರಾದೇಶಿಕವಾಗಿ ಮೂರು ಪ್ರಮುಖ ವರ್ಗಗಳಾಗಿ ಕಂಡು ಬರುವುದಷ್ಟೇ ಅಲ್ಲದೆ, ಹಲವು ಒಳ ಪಂಗಡ ಗಳಾಗಿಯೂ ಭಿನ್ನವೆನಿಸಿ ತಮ್ಮದೇ ಆದ ವಿಶಿಷ್ಟ ಆಚರಣೆ, ಸಂಪ್ರದಾಯ, ನಂಬಿಕೆಗಳಿಂದ ಗಮನ ಸೆಳೆಯುತ್ತದೆ. ಪ್ರಾದೇಶಿಕ ಭಿನ್ನತೆಯ ಕಾರಣಗಳಿಂದ, ಭೌಗೋಳಿಕ ಪ್ರಭಾವಗಳ ಪರಿಣಾಮಗಳಿಂದ ಈ ಭಿನ್ನತೆ ಸಹಜವೆನಿಸುತ್ತದೆ. ಅಲ್ಲಲ್ಲಿಯ ನಂಬಿಕೆ, ಶ್ರದ್ಧೆಗಳಿಗನುಗುಣ ವಾಗಿ, ಅಲ್ಲಲ್ಲಿಯ ಆಚರಣೆಗಳು, ಸಂಪ್ರದಾಯಗಳು ತಲೆದೋರುತ್ತವೆ. ಪ್ರಸ್ತುತ ಗ್ರಂಥದಲ್ಲಿ ಗುರುತಿಸಿರುವಂತೆ ಮಲೆನಾಡು ಒಕ್ಕಲಿಗರಾಗಲಿ, ಬಯಲುಸೀಮೆ ಒಕ್ಕಲಿಗರಾಗಲಿ ಅಥವಾ ತುಳು ಗೌಡರಲ್ಲಾಗಲಿ ಭಿನ್ನತೆ ಕಂಡು ಬರುವುದಕ್ಕೆ ಇದೇ ಕಾರಣ. ಹಾಗೆಯೇ ಮಲೆನಾಡು ಒಕ್ಕಲಿಗರಲ್ಲಿಯೇ ವೈಷ್ಣವ ಸಂಪ್ರದಾಯದ ನಾಮಧಾರಿಗೌಡರು, ಶೈವ ಸಂಪ್ರದಾಯದ ವಿಭೂತಿಗೌಡರು ಪಂಗಡಗಳಾಗಿ ತಲೆ ಎತ್ತುವುದಕ್ಕೂ ಈ ಹಿನ್ನೆಲೆಯೇ ಕಾರಣ ಎಂಬುದನ್ನು ಸಮರ್ಥ ರೀತಿಯಲ್ಲಿ ಕೃತಿ ಸ್ಪಷ್ಟಪಡಿಸುತ್ತದೆ.

ಪ್ರಸ್ತುತ ಗ್ರಂಥ, ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ಮತ್ತು ಮೂಡಿಗೆರೆ ತಾಲ್ಲೂಕು, ಹಾಸನ ಜಿಲ್ಲೆಯ ಸಕಲೇಶಪುರ ಹಾಗೂ ಬೇಲೂರು ತಾಲ್ಲೂಕುಗಳು ಮತ್ತು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿ ವಾಸವಾಗಿರುವ 'ಶೈವ ಒಕ್ಕಲಿಗ'ರನ್ನು ಕುರಿತದ್ದಾಗಿದೆ. ಶೈವ ಧರ್ಮಾವಲಂಬಿಗಳಾದ ಇವರ ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದುಕಿನ ವಿವಿಧ ಎಳೆಗಳ ಅಧ್ಯಯನ ಒಂದೊಂದು ಅಧ್ಯಾಯದಲ್ಲಿಯೂ ಗರಿ ಬಿಚ್ಚಿ ಹರಡಿರುವುದು ಗಮನ ಸೆಳೆಯುತ್ತದೆ.

'ಶಾಸನಗಳಲ್ಲಿ ಒಕ್ಕಲಿಗರು' ಈ ಗ್ರಂಥದ ಬಹುಮುಖ್ಯ ಭಾಗಗಳಲ್ಲಿ ಒಂದು. ಮುಂದಿನ ಇವರ ಅಧ್ಯಯನಕ್ಕೆ ಪೂರಕವಾದ ಹಲವು ಮಾಹಿತಿಗಳನ್ನು ಅದು ಒಳಗೊಂಡಿದೆ. ಸಾಮಾಜಿಕ ವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಮಾನವೀಯವಾಗಿ ಅವರು ಕಾಲದಿಂದ ಕಾಲಕ್ಕೆ ತೋರುತ್ತ ಬಂದ ಹಲವು ಸದ್ಗುಣಗಳ ಒಂದು ಅಪೂರ್ವ ದಾಖಲೆ ಆದಾಗಿದೆ. ಸಾಮಾಜಿಕವಾದ ಹಲವು ಜವಾಬ್ದಾರಿಗಳನ್ನು ಹೊತ್ತು, ಅವರು ಮಾನವೀಯವಾಗಿ ನಡೆದುಕೊಂಡ ಹಲವು ನಿದರ್ಶನಗಳನ್ನು ಇಲ್ಲಿ ಗುರುತಿಸಿ ಪ್ರಸ್ತಾಪಿಸಲಾಗಿದೆ. "ಯಾವುದೇ ಧರ್ಮವನ್ನು ಅನುಸರಿಸಲಿ ಧರ್ಮನಿರಪೇಕ್ಷತೆ ಇವರ ಬದುಕಿನ ಮೂಲ ಮಂತ್ರವಾಗಿತ್ತು" ಎಂಬಂಶವನ್ನು ಸ್ಪಷ್ಟಪಡಿಸುತ್ತ ಒಕ್ಕಲಿಗರ ಧೈರ್ಯ, ಸಾಹಸ, ಔದಾರ್ಯ, ದಯೆ ಮುಂತಾದ ಗುಣಗಳನ್ನು ಶಾಸನಗಳ ಮೂಲಕ ಗುರುತಿಸಿ, ಮುಂದಿನ ಅಧ್ಯಯನಕ್ಕೆ ತಳಹದಿಯನ್ನು ನಿರ್ಮಿಸುತ್ತಲೇ ತಮ್ಮ ವಾದಕ್ಕೆ ಸಮರ್ಥನೆಯನ್ನು ದೊರಕಿಸಿಕೊಟ್ಟಿದ್ದಾರೆ.

ಮುಂದಿನ ಅಧ್ಯಾಯಗಳು, ಶೈವ ಒಕ್ಕಲಿಗರಲ್ಲಿನ ಸಂಪ್ರದಾಯ, ಆಚರಣೆಗಳನ್ನು ಕುರಿತದ್ದು. ಇಲ್ಲಿ ಜನನ, ಮದುವೆ, ಮರಣ, ಹಬ್ಬ ಹರಿದಿನಗಳು ಮೊದಲಾದುವುಗಳ ವಿವರ ವಾದ ವಿಶ್ಲೇಷಣೆ ಇದೆ. ಸಂಪ್ರದಾಯಗಳು, ಆಚರಣೆಗಳು, ನಂಬಿಕೆಗಳು - ಇವೆಲ್ಲ ಆಯಾ ಜನಾಂಗದ ಸ್ವತ್ತು. ಅಲ್ಲಲ್ಲಿಯ ಪ್ರಾದೇಶಿಕ ಹಿನ್ನೆಲೆಯಲ್ಲಿ, ಅವರವರ ಮನೋಭಾವಕ್ಕೆ ಅನುಗುಣವಾಗಿ ಹುಟ್ಟಿಕೊಂಡು, ಒಂದು ಸಮೂಹವಲ್ಲಿ ಒಂದು ಕಟ್ಟುಪಾಡಾಗಿ ಮೂಡಿಬಂದವು ಗಳು. ಇವುಗಳನ್ನು ಭಿನ್ನಭಿನ್ನ ಜನಾಂಗಗಳೊಂದಿಗೆ ತೌಲನಿಕವಾಗಿ ನೋಡುವಾಗ ಕೆಲವೊಂದು ಅಂಶಗಳಲ್ಲಿ ಹೋಲಿಕೆಯಿರುವಂತೆಯೇ, ವ್ಯತ್ಯಾಸಗಳೂ ಇರುವುದು ಸಹಜ. ಭಿನ್ನತೆಗೆ ಅವರವರ ಭಿನ್ನ

ಮನೋಭಾವ ಕಾರಣವಿರಬಹುದಾದಂತೆಯೇ, ಸಾಮ್ಯತೆಗೆ ಅವರವರ ಸಮಾನ ಮನೋಧರ್ಮ ಕಾರಣವಾಗಿರಲೂ ಸಾಧ್ಯ. ಕೆಲವೊಂದೆಡೆ ಪರಸ್ಪರ ಕೊಳುಕೊಡುಗೆಯೂ ಸಾಧ್ಯವಾಗಿರುತ್ತದೆ.

ಜನನ ಸಂಸ್ಕಾರಕ್ಕೆ ಸಂಬಂಧಿಸಿದಂತೆ ಶೈವ ಒಕ್ಕಲಿಗರಲ್ಲಿ ಕಂಡು ಬರುವ ಕೆಲವೊಂದು ಸಂಪ್ರದಾಯಗಳು ವಿಶಿಷ್ಟವಾಗಿವೆ. 'ಸೀಮಂತ' 'ಅಟ್ಟೆಕ್ಕುವುದು' 'ಬಸಿರ ಹಬ್ಬ' ಈ ಯಾವ ಸಂಪ್ರದಾಯವೂ ಅವರಲ್ಲಿಲ್ಲ. ಆದರೆ ಮಗುವಿಗೆ ಕಣ್ಣಾಸರವಾದಾಗ ಮಾಡುವ ಆಚರಣೆ ಯಾಗಲಿ ಅಥವಾ ಬಾಣಂತನಕ್ಕೆ ಸಂಬಂಧಿಸಿದಂತೆ ನಡೆಸುವ ಆಚರಣೆಯಾಗಲಿ ಇನ್ನುಳಿದ ಭಾಗಗಳ ಆಚರಣೆಗಳಿಗಿಂತ ತೀರ ಭಿನ್ನವೆನಿಸುವುದಿಲ್ಲ. ಸಕಲೇಶಪುರ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ರೂಢಿಯಲ್ಲಿರುವ 'ಮಕ್ಕಳ ದೇವರು ಮಾಡುವುದು' ಸಂಪ್ರದಾಯ ಅಲ್ಲಿಗೇ ವಿಶಿಷ್ಟವಿದ್ದಂತೆ ತೋರುತ್ತದೆ. ಉಳಿದ ಭಾಗದ ಯಾವ ಒಕ್ಕಲಿಗರಲ್ಲಿಯೂ ಇದು ಇದ್ದಂತೆ ಕಾಣುವುದಿಲ್ಲ. ಅದರ ಹಿಂದೆ ಅಡಗಿರುವ ನಂಬಿಕೆಯೂ ವಿಶಿಷ್ಟವಾಗಿದೆ.

ಬಯಲು ಸೀಮೆಯ ಒಕ್ಕಲಿಗರಲ್ಲಿ 'ಒಸಗೆ'ಗೆ ಸಂಬಂಧಿಸಿದಂತೆ ಹೆಣ್ಣನ್ನು 'ಗುಡ್ಲು ಕೂಡುವ' ಸಂಪ್ರದಾಯವಿದೆ. ಇಲ್ಲಿ ಸೋದರಮಾವನ ಪಾತ್ರ ಹೆಚ್ಚಾಗಿ ಕಂಡು ಬರುತ್ತದೆ. ಆದರೆ, ಮಲೆನಾಡು ಶೈವ ಒಕ್ಕಲಿಗರಲ್ಲಿ ಈ ಸಂಪ್ರದಾಯವಿಲ್ಲ. ಇನ್ನುಳಿದಂತೆ ಆಚರಿಸುವ ಎಲ್ಲ ಸಂಪ್ರದಾಯಗಳಲ್ಲಿಯೂ ಹೆಚ್ಚು ಸಾಮ್ಯವಿರುವುದು ಕಂಡು ಬರುತ್ತದೆ. ಇಲ್ಲೆಲ್ಲ ಒಂದೇ ಬಗೆಯ ಆಶಯ ವ್ಯಕ್ತವಾಗುತ್ತದೆ.

ಮದುವೆ ಎಲ್ಲ ವರ್ಗದ, ಎಲ್ಲ ಪ್ರದೇಶದ, ಎಲ್ಲ ಜನಾಂಗಗಳಲ್ಲಿಯೂ ಅತ್ಯಂತ ಮಹತ್ವದ ಒಂದು ಘಟ್ಟ. ಶಾಶ್ವತವಾಗಿ ಉಳಿಯಬೇಕಾದ ಒಂದು ಪವಿತ್ರ ಸಂಬಂಧವದಾದ್ದರಿಂದ ಅದಕ್ಕೆ ಎಲ್ಲ ಜನಾಂಗದವರೂ ಅತಿ ಹೆಚ್ಚಿನ ಮಾನ್ಯತೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಪ್ರಾದೇಶಿಕವಾದ ಕೆಲವು ವ್ಯತ್ಯಾಸಗಳು ಇವೆಯಾದರೂ, ಹೆಚ್ಚಿಲ್ಲ. ಮಲೆನಾಡು ಶೈವ ಒಕ್ಕಲಿಗರು ಈ ಸಂಬಂಧದಲ್ಲಿ ಆಚರಿಸುವ ಆಚರಣೆಗಳಿಗೂ, ಬಯಲುನಾಡಿನ ಒಕ್ಕಲಿಗರು ನಡೆಸುವ ಆಚರಣೆ ಗಳಿಗೂ ಹೆಚ್ಚು ಅಂತರವಿದ್ದಂತಿಲ್ಲ. ಮಲೆನಾಡಿನ ಶೈವ ಒಕ್ಕಲಿಗರು ಮದುವೆಯ ದಿನವೇ 'ಮಾಂಸದ ಊಟ' ಮಾಡಿ ಮೋಜಿನಿಂದ ಕುಣಿದು ಮೈ ಮರೆಯುವುದನ್ನು ಬಿಟ್ಟರೆ, ಇನ್ನುಳಿದಂತೆ ಹೆಣ್ಣನ್ನು ನೋಡಲು ಹೋಗುವುದರಿಂದ ಚಪ್ಪರ ತೆಗೆವ ಶಾಸ್ತ್ರದವರೆಗೆ ಎಲ್ಲವೂ ಸಮಾನವಾಗಿ ಕಂಡು ಬರುತ್ತವೆ. ಗಂಡಿನ ಕೈಗೆ ಕಂಕಣ ಕಟ್ಟುವುದು, ಕಳಸ ಹಿಡಿಯುವುದು, ಎಣ್ಣೆ ಅರಿಶಿನಶಾಸ್ತ್ರ, ಶಾಸ್ತ್ರದ ನೀರು, ಚಪ್ಪರ ಶಾಸ್ತ್ರ, ಬಳೆಶಾಸ್ತ್ರ, ಚಪ್ಪರದ ಊಟ, ಕರಿಕಂಬಳಿ ಗದ್ದುಗೆ, ತಾಯುಡಿಕೆ ಸೀರೆ, ಮುಯ್ಯಿಪಟ್ಟಿ, ಗಂಗೆಪೂಜೆ, ಹೆಣ್ಣು ಒಪ್ಪಿಸುವುದು, ಬೀಗರೂಟ - ಇವೆಲ್ಲವೂ ಅಲ್ಲಿಯೂ ಇವೆ, ಇಲ್ಲಿಯೂ ಇವೆ.

ಮಲೆನಾಡಿನ ಒಕ್ಕಲಿಗರಲ್ಲಿ ಎಲ್ಲ ಸಂದರ್ಭದಲ್ಲಿಯೂ, ನಾಗರಪಂಚಮಿಯಂತಹ ಒಂದೆರಡು ಸಂದರ್ಭಗಳನ್ನು ಹೊರತು ಪಡಿಸಿ 'ಮಾಂಸದ ಅಡುಗೆ'ಯನ್ನು ಮಾಡುವ ಸಂಪ್ರದಾಯವಿದೆ. ಆದರೆ ಬಯಲುಸೀಮೆಯ ಒಕ್ಕಲಿಗರು, ಹಬ್ಬ ಅಥವಾ ಮದುವೆಯಂತಹ ಯಾವ ಸಂದರ್ಭದಲ್ಲಿಯೂ 'ಮಾಂಸದ ಅಡುಗೆ'ಯನ್ನು ಮಾಡುವುದಿಲ್ಲ. ಏನಿದ್ದರೂ ಅದರ ಮುಂದಿನ ದಿನವೇ ಆ ಕಾರ್ಯಕ್ರಮ. ಬಹುಶಃ ಇದಕ್ಕೆ ಭೌಗೋಳಿಕ ಕಾರಣವಿರುವಂತೆಯೇ, ಬ್ರಾಹ್ಮಣ ಸಂಸ್ಕೃತಿಯ ಪ್ರಭಾವವೂ ಪ್ರಬಲ ಕಾರಣವಿದ್ದಂತೆ ತೋರುತ್ತದೆ. ಮಲೆನಾಡಿನ ಭೌಗೋಳಿಕ ಪರಿಸರಕ್ಕೆ ಮಾಂಸ, ಹೆಂಡ, ಕುಣಿತ

ಅನಿವಾರ್ಯವೆನಿಸುವಷ್ಟು ಹೊಂದಿಕೊಂಡು ಬಂದು, ಒಂದು ಸಂಪ್ರದಾಯವಾಗಿ ಉಳಿದು ಬಂದಿರಲೂಬಹುದು. ಜೊತೆಗೆ ಬ್ರಾಹ್ಮಣ ಸಂಸ್ಕೃತಿಯ ಪ್ರಭಾವ ಬಯಲುನಾಡಿನಷ್ಟು ಅಲ್ಲಿರದಿರುವುದೂ ಕಾರಣವಿರಬಹುದು.

ಬದುಕಿನ ಒಂದು ಮುಖ 'ಜನನ'ವಾದರೆ, ಮತ್ತೊಂದು ಮುಖ 'ಮರಣ'. ಒಂದು ಅನಿರೀಕ್ಷಿತ, ಇನ್ನೊಂದು ನಿರೀಕ್ಷಿತ. ಯಾವುದೇ ಜನಾಂಗದಲ್ಲಿ ವ್ಯಕ್ತಿ ಹುಟ್ಟಿದಾಗ ಮಾಡುವ ಕೆಲವೊಂದು ಆಚರಣೆಗಳಂತೆಯೇ, ಅವನು ಸತ್ತಾಗಲೂ ಅಷ್ಟೇ ನಿಷ್ಠೆಯಿಂದ ಕೆಲವೊಂದು ಆಚರಣೆಗಳನ್ನು ಕಡ್ಡಾಯವಾಗಿ ಮಾಡುತ್ತಾರೆ. ಕಾರಣ, ಅವರ ದೃಷ್ಟಿಯಲ್ಲಿ ಇವೆರಡೂ ಮಹತ್ವದ ಘಟ್ಟಗಳೇ. ಹುಟ್ಟಿನ ಬಗೆಗೆ ಜನಪದರಿಗೆ ಕೆಲವೊಂದು ಕಲ್ಪನೆಗಳಿರುವುದಕ್ಕಿಂತ ಹೆಚ್ಚಾದ ಕಲ್ಪನೆಗಳು ಸಾವಿನ ಬಗೆಗೂ ಅವರಲ್ಲಿರುವುದೇ ಇದಕ್ಕೆ ಕಾರಣ. 'ಜನನ'ದ ಬಗ್ಗೆ ಕೆಲವೊಂದು ನಂಬಿಕೆಗಳು ರೂಢಿಯಲ್ಲಿರುವಂತೆ, 'ಮರಣ'ದ ಬಗ್ಗೆಯೂ ಕೆಲವೊಂದು ವಿಚಿತ್ರ ನಂಬಿಕೆಗಳು ಎಲ್ಲ ಜನಾಂಗದಲ್ಲಿಯೂ ರೂಢಿಯಲ್ಲಿವೆ. ಅದಕ್ಕೆ ತಕ್ಕ ಸಂಪ್ರದಾಯಗಳೂ, ಆಚರಣೆಗಳೂ ಹುಟ್ಟಿಕೊಂಡಿವೆ. ಕಾಗೆ, ಗೂಬೆ, ಇವು ಮನೆಯ ಮೇಲೆ ಕುಳಿತುಕೊಳ್ಳುವುದು, ಅನ್ನ ಅಥವಾ ಹಣ ಕನಸಿನಲ್ಲಿ ಕಾಣಿಸಿ ಕೊಳ್ಳುವುದು ಸಾವಿನ ಮುನ್ಸೂಚನೆ ಎಂದು ಭಾವಿಸುವುದು ಬಹುತೇಕ ಜನಾಂಗಗಳಲ್ಲಿ ಕಂಡು ಬರುತ್ತದೆ.

ಸತ್ತವರನ್ನು ಸುಡುವುದು, ಹೂಳುವುದು, ಸತ್ತಾಗ ಹೊರಗೆ ಓಡಿಯುವುದು, ಬಾಯಿಗೆ ಹಾಲು ಬಿಡುವುದು, ಕೈ ಕಾಲು ಮುರಿಯುವುದು, ತಲೆಯ ಬಳಿ ಹಣತೆ ಹಚ್ಚಿಡುವುದು, ಹೆಣವನ್ನು ಹೊತ್ತುಕೊಂಡು ಹೋಗುವಾಗ ಅದರ ಮೇಲೆ ದಾರಿಯುದ್ದಕ್ಕೂ ಪುರಿ, ಹಣ ಎರಚುವುದು ಮುಂತಾದ ಹತ್ತು ಹಲವು ಆಚರಣೆಗಳಲ್ಲಿ ಬಯಲು ನಾಡಿನ ಒಕ್ಕಲಿಗರ ಸಾವಿನ ಸಂದರ್ಭದ ಆಚರಣೆಗಳೊಂದಿಗೆ ಸಾಮ್ಯವಿದ್ದರೂ, ಮಲೆನಾಡಿನ ಶೈವ ಒಕ್ಕಲಿಗರಿಗೇ ಸೀಮಿತ ವಾದ ಹಲವು ಆಚರಣೆಗಳು ಅಷ್ಟೇ ವಿಶಿಷ್ಟವಾಗಿವೆ. 'ಇಲ್ಲಿ ಹೆಣವನ್ನು ಅಲಂಕರಿಸಿದ ಕೂಡಲೇ ವೀರಶೈವ ಜನಾಂಗದ 'ಅಯ್ಯ' ಬಂದು ಶವಪೂಜೆಯ ನೇತೃತ್ವ ವಹಿಸುತ್ತಾನೆ. ಆತ ತನ್ನ ಒಂದು ಪಾದವನ್ನು ಶವದ ಪಾದದ ಮೇಲೆ ಮೆಟ್ಟಿಕೊಂಡು ಕುಳಿತುಕೊಳ್ಳುವನು.' ಜಂಗಮನನ್ನು ಇವರು ರುದ್ರಗಣದ ಪ್ರತೀಕವೆಂದು ಭಾವಿಸುತ್ತಾರೆ. ಅವನ ಪವಿತ್ರ ಪಾದಸ್ಪರ್ಶದಿಂದ ಕ್ಷುದ್ರಶಕ್ತಿಗಳು ಶವವನ್ನು ಸ್ಪರ್ಶಿಸುವುದಿಲ್ಲವೆಂಬ ನಂಬಿಕೆಯೇ ಇದಕ್ಕೆ ಕಾರಣ. ವೀರಶೈವ ಧರ್ಮದ ಪ್ರಭಾವ ಇದಕ್ಕೆ ಕಾರಣವಿರುವುದೂ ಸ್ಪಷ್ಟ. ಆದರೆ, ಅವರ ಊಟೋಪಚಾರಗಳ ಮೇಲೆ ಅದು ಪ್ರಭಾವ ಬೀರಲಿಲ್ಲವೆಂಬುದು ಗಮನಾರ್ಹ. ಈ ಅಂಶವನ್ನು ಗಮನಿಸವಾಗ, ವೀರಶೈವ ಧರ್ಮದ ಪ್ರಭಾವದ ಕಾಲದಲ್ಲಿ ಬಯಲುಸೀಮೆಯ ಒಕ್ಕಲಿಗರು ವೀರಶೈವ ಧರ್ಮಕ್ಕೆ ಪರಿವರ್ತನೆ ಹೊಂದಿ ಮಾಂಸಾಹಾರವನ್ನು ಬಿಟ್ಟರಾದರೂ ಅನಂತರ, ಅದನ್ನು ಬಿಟ್ಟಿರಲಾರದೆ ಮತ್ತೆ ಸ್ವಧರ್ಮಕ್ಕೆ ಹಿಂತಿರುಗಿದರು ಎಂಬ ಕಥೆಯೇ ಇದೆ. ಹಾಗಾಗಿ ಈಗಲೂ "ಲಿಂಗ ಕಿತ್ತು ಬಾವಿಗೆ ಹಾಕಿ ಬಾಡು ತಿಂದೋರು" ಎಂದು ಅವರನ್ನು ಛೇಡಿಸುವುದುಂಟು. "ಈ ದೃಷ್ಟಿಯಿಂದ ನೋಡುವಾಗ ಮಲೆನಾಡಿನ ಈ ಶೈವ ಒಕ್ಕಲಿಗರು ಪ್ರಾರಂಭದಿಂದಲೂ ಊಟೋಪಚಾರದ ಬಗೆಗೆ ಕಟ್ಟಾಭಿಮಾನವನ್ನು ಕಟ್ಟಾಭಿರುಚಿಯನ್ನು ಇಟ್ಟುಕೊಂಡು ಬಂದವರು. "ಸಾಯಲಿರುವ ವ್ಯಕ್ತಿ ಮದ್ಯಪಾನಿಯಾಗಿದ್ದರೆ ಸೇಂದಿ, ಬ್ರ್ಯಾಂದಿ ಮೊದಲಾದ ಪಾನೀಯಗಳನ್ನು ನೆಂಟರಿಷ್ಟರು ಕೊಡುವುದುಂಟು. ಹನ್ನೊಂದನೆಯ ದಿನದ ತಿಥಿಗೆ, ಕುರಿ, ಹಂದಿ, ಮೀನು,

ಕಾಡುಮಾಂಸ, ಕೋಳಿ ಎಲ್ಲವೂ ಬೇಕಾಗುತ್ತದೆ. ತಿಥಿಗೆ ಬರುವ ಹತ್ತಿರದ ಬಂಧುಗಳು ಅಕ್ಕಿ, ಕಾಯಿಯ ಜೊತೆಗೆ ಒಂದು ಕೋಳಿಯನ್ನು ಕೊಂಡೊಯ್ಯುವುದುಂಟು. ಬಹುಶಃ ಇವೆಲ್ಲವೂ ಮಲೆನಾಡಿನ ಶೈವ ಒಕ್ಕಲಿಗರಿಗೇ ಸೀಮಿತವಾದ ಹಾಗೂ ವಿಶಿಷ್ಟವಾದ ಆಚರಣೆಗಳಾಗಿ ತೋರುತ್ತವೆ. ಹಾಗೆಯೇ ಇದರ ಹಿಂದೆ ಅಡಗಿರುವ ಸಹಕಾರ ಮನೋಭಾವವೂ ವ್ಯಕ್ತವಾಗುತ್ತದೆ, "ವಿಧವೆಯ ಬಗೆಗೆ ಕಠಿಣವಾದ ಆಚರಣೆಗಳು ಈ ಜನಾಂಗದಲ್ಲಿಲ್ಲದಿರುವುದು ಇವರ ಮನೋ ವೈಶಾಲ್ಯಕ್ಕೆ ಸಾಕ್ಷಿಯಾಗಿದೆ" ಎಂಬುದೂ ಈ ಭಾಗದ ಒಕ್ಕಲಿಗರ ಒಂದು ವೈಶಿಷ್ಟ್ಯವೇ ಆಗಿದೆ. ಯಾವುದೇ ಸಂಸ್ಕೃತಿಗೆ ಕಳಂಕವೆನಿಸಬಹುದಾದ ಇಂತಹ ಕ್ರೂರಪದ್ಧತಿ ಇಲ್ಲಿ ಆಶ್ಚರ್ಯಕರವಾಗಿ ಕಾಣಸದಿರುವುದುದರ ಹಿನ್ನೆಲೆ ನಿಗೂಢವೇ ಅನಿಸುತ್ತದೆ.

ಶೈವ ಒಕ್ಕಲಿಗರು ಆಚರಿಸುವ ಹಬ್ಬಗಳು ಕೆಲವು ವೈಶಿಷ್ಟ್ಯವನ್ನು ಪಡೆದು ಕೊಂಡಿವೆ. ಇಲ್ಲಿ ಆಚರಿಸುವ 'ಹಿಂದಲಹಬ್ಬ' 'ನೂಲುಹಬ್ಬ'ಗಳ ಹಿನ್ನೆಲೆ ಕುತೂಹಲವನ್ನುಂಟು ಮಾಡುತ್ತವೆ. ಶಿವಾರಾಧಕರಾದ ಇವರು 'ನೂಲು ಹಬ್ಬ'ದಲ್ಲಿ ಬ್ರಾಹ್ಮಣ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದಂತೆ ತೋರಿದರೂ ಮತ್ತೆ ಮಲೆನಾಡ ಒಕ್ಕಲಿಗರ ವೈಶಿಷ್ಟ್ಯವನ್ನು ಬಿಟ್ಟು ಕೊಟ್ಟವರಲ್ಲ. ಅಲ್ಲಿಯೂ ಕಡುಬಿನೊಂದಿಗೆ ಕೋಳಿಸಾರು ಮಾಡಿ ಹಿರಿಯರಿಗೆ ಎಡೆಯಿಡುವ ಪದ್ಧತಿಯನ್ನು ಉಳಿಸಿಕೊಂಡಿದ್ದಾರೆ. ಶಿಷ್ಟ ಸಂಸ್ಕೃತಿಯಲ್ಲಿ ಕಂಡು ಬರುವ ಹಲವು ಹಬ್ಬಗಳ ಆಚರಣೆ ಈ ಭಾಗದ ಒಕ್ಕಲಿಗರಲ್ಲಿಯೂ ಉಳಿದುಕೊಂಡು ಬಂದಿವೆಯಾದರೂ ಅವುಗಳು ತಮ್ಮದೇ ಆದ ಸ್ವಂತಿಕೆಯನ್ನು ಉಳಿಸಿಕೊಂಡು ಬಂದಿವೆ. ಗಣೇಶ ಮತ್ತು ಶಿವರಾತ್ರಿಯ ಹಬ್ಬಗಳಲ್ಲಿಯೂ ಅವರು ಮಾಂಸದಡಿಗೆಯನ್ನು ಮಾಡಿ, ದೇವರಿಗೆ ಬದಲಾಗಿ ಹಿರಿಯರಿಗೆ ಎಡೆಯಿಡುತ್ತಾರೆ, ಎಲ್ಲ ಹಬ್ಬಗಳಲ್ಲಿಯೂ ಹಿರಿಯರಿಗೆ ಎಡೆಯಿಡುವ ಪದ್ಧತಿ ಅಲ್ಲಿಯ ಸಂಸ್ಕೃತಿಯ ವೈಶಿಷ್ಟ್ಯವೇ ಆಗಿದೆ. 'ನಾಗರಿಕ ಸಂಸ್ಕೃತಿ'ಗೆ ದೂರವಾದ ಸಂಸ್ಕೃತಿಯೊಂದು ಇಲ್ಲಿ ಇನ್ನೂ ಜೀವಂತವಾಗಿರುವುದು ಸ್ಪಷ್ಟ. ಆದರೆ ಆ ಭಾಗದಲ್ಲಿಯೇ ಕೆಲವೆಡೆ ಅದು ನಾಗರಿಕತೆಯ ಪ್ರಭಾವಕ್ಕೆ ಒಳಗಾಗುತ್ತಿದೆ ಎಂಬುದು, ಸಾಂಸ್ಕೃತಿಕ ಮಹತ್ವದ ದೃಷ್ಟಿಯಿಂದ ತುಂಬಲಾಗದ ನಷ್ಟ. ಯಾವುದೇ ಒಂದು ಜನಾಂಗ ತನ್ನ ಮೂಲಸಂಸ್ಕೃತಿಯನ್ನು ಕಳೆದುಕೊಳ್ಳುವುದರ ಜೊತೆ ಜೊತೆಯಲ್ಲಿಯೇ ತನ್ನ ಮೂಲಸತ್ವವನ್ನು ಮಸುಕಾಗಿಸಿಕೊಳ್ಳುತ್ತದೆ ಎಂಬುದನ್ನು ಮರೆಯಬಾರದು.

ಶೈವ ಒಕ್ಕಲಿಗರಲ್ಲಿರುವ 'ಸುಗ್ಗಿ ಹಬ್ಬ' ಅದರಲ್ಲಿಯೂ 'ಹೆಣ್ಣು ಮಕ್ಕಳ ಸುಗ್ಗಿ' ಹಬ್ಬ ಹೆಚ್ಚು ವಿಶಿಷ್ಟವಾದುದು. ಒಕ್ಕಲಿಗ ಜನಾಂಗದಲ್ಲಿ ಹೆಣ್ಣು ಮಕ್ಕಳು ಕುಣಿಯುವುದು ಮಿಕ್ಕ ಯಾವ ಭಾಗದಲ್ಲಿಯೂ ಕಂಡು ಬರುವುದಿಲ್ಲ. ಈ ಸಂದರ್ಭದಲ್ಲಿ ಗಂಡಸರ ಪ್ರವೇಶ ನಿಷಿದ್ಧ.

ಮಲೆನಾಡು ಶೈವ ಒಕ್ಕಲಿಗರ ಹಬ್ಬಗಳಲ್ಲಿ ಪೂರ್ವ ಸಂಸ್ಕೃತಿಯೊಂದರ ಪಳೆಯುಳಿಕೆ ಇನ್ನೂ ಜೀವಂತವಾಗಿರುವುದನ್ನು ಕಾಣಬಹುದು. ಅದರಲ್ಲಿ ಅನೇಕ ಜಾನಪದೀಯವಾದ ಅಂಶಗಳೂ ತುಂಬಿಕೊಂಡಿವೆ. ಅನ್ಯ ಸಂಸ್ಕೃತಿಗಳ ಅಧ್ಯಯನಕ್ಕೂ ಇಂಬು ಕೊಡುವಂತಹ ಹಲವು ಸಂಗತಿಗಳು ಅದರಲ್ಲಿ ಮೈ ದುಂಬಿವೆ.

ಸಂಸ್ಕೃತಿಯ ಹಲವಂಶಗಳು ಅಲ್ಲಿಯ ಪರಿಸರ ಪ್ರಭಾವದಿಂದಲೇ ಹುಟ್ಟಿಕೊಳ್ಳುತ್ತವೆ ಎಂಬುದಕ್ಕೆ 'ಬೇಟೆ'ಯಂತಹ ಪದ್ಧತಿಯೇ ಸಾಕ್ಷಿ. ಇದು ಬೇಟೆಗಷ್ಟೇ ಸೀಮಿತವೆನಿಸದೆ, ಅವರ ಬದುಕಿನ ರೀತಿ ನೀತಿ ಆಚರಣೆಗಳಷ್ಟೇ ಅಲ್ಲದೆ, ಆಹಾರ ಪದ್ಧತಿಯ ಮೇಲೂ ಪ್ರಬಲವಾದ ಪ್ರಭಾವವನ್ನು ಉಂಟು

ಪ್ರತಿಯೊಂದು ಸಂದರ್ಭದಲ್ಲಿಯೂ ಮಾಂಸಾಹಾರ ಪ್ರಮುಖವಾಗುವುದಕ್ಕೂ ಇದೇ ಕಾರಣ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಬೇಟೆಯ ಸಂಸ್ಕೃತಿಯೇ ಒಂದು ಬಗೆಯದು. ಅದರ ನಂಬಿಕೆಗಳು, ಆಚರಣೆಗಳು, ವಿಧಾನಗಳು, ಒಂದೊಂದೂ ಆ ಒಂದು ಸಂಸ್ಕೃತಿಯ ವಿಶಿಷ್ಟತೆಗೆ ಕಾರಣವಾಗುವಂತಹವು.

ಮಲೆನಾಡಿನ ಶೈವ ಒಕ್ಕಲಿಗರ ವ್ಯವಸಾಯ ಪದ್ಧತಿಯಲ್ಲಿ ಎದ್ದು ಕಾಣುವಂತಹ ವಿಶೇಷಗಳು ಇಲ್ಲದಿದ್ದರೂ, ಅಲ್ಲಿಯ 'ಅಡುಗೆ ಸಂಪ್ರದಾಯ' ನಿಜಕ್ಕೂ ವಿಶಿಷ್ಟವಾದದ್ದೇ. ಆ ಭಾಗದ ವಿಶಿಷ್ಟ ಸಂಸ್ಕೃತಿಯನ್ನೇ ಅದು ಪ್ರತಿಬಿಂಬಿಸುತ್ತದೆ. ಬೇಟೆಗೆ ನಿರ್ಬಂಧವಿಲ್ಲದೆ ಇದ್ದ ಕಾಲದಲ್ಲಿ ತರಕಾರಿ ಸಾರನ್ನೇ ಅಪರೂಪವಾಗಿ ಬಳಸುತ್ತಿದ್ದ ಈ ಭಾಗದ ಜನ, ಇನ್ನುಳಿದಂತೆ ಸಿದ್ಧಪಡಿಸುವ ಹಲವು ಬಗೆಯ ತಿನಿಸುಗಳು ಮಲೆನಾಡಿನ ವಿಶಿಷ್ಟತೆಯನ್ನು ಸಾರುತ್ತವೆ. ಕಡುಬು, ರೊಟ್ಟಿಗಳೇ ಅಲ್ಲದೆ ಹಣ್ಣು ಜೇನಿನಲ್ಲಿ ಹಲವು ಬಗೆಯ ಅಡುಗೆಗಳು ವಿಶಿಷ್ಟವಾದವೇ. ಅರಿತೋ ಅರಿಯದೆಯೋ ಆರೋಗ್ಯದ ಕಡೆಗೇ ಹೆಚ್ಚು ಗಮನ ಕೊಟ್ಟಂತೆ ಬಳಸುತ್ತ ಬಂದಿರುವ ಇಲ್ಲಿನ ಅಡುಗೆ ವಿಧಾನಗಳು ಅಡ್ಡಿಯಿಲ್ಲದೆ ಮುಂದುವರೆಯುವ ಲಕ್ಷಣಗಳನ್ನೂ ಹೆಚ್ಚಾಗಿ ಉಳಿಸಿಕೊಂಡಿವೆ.

ಪರಿಸರ ಒಂದಲ್ಲ ಒಂದು ರೀತಿಯಲ್ಲಿ ಎಲ್ಲದರ ಮೇಲೆಯೂ ತನ್ನ ಹಿಡಿತವನ್ನು ಸಾಧಿಸಿರುತ್ತದೆ. ಅದಕ್ಕನುಗುಣವಾದ ಆಹಾರವನ್ನು ದೊರಕಿಸುವಂತೆಯೇ, ರೋಗಗಳನ್ನು ಅದು ಹುಟ್ಟು ಹಾಕುತ್ತದೆ. ಮಲೆನಾಡಿನ ಭಾಗದ ಜನರನ್ನೇ ವಿಶೇಷವಾಗಿ ಕಾಡುವ ಕೆಲವು ಕಾಯಿಲೆಗಳು, ಅದಕ್ಕನುಗುಣವಾದ ವೈದ್ಯ ಇವು ಗಮನ ಸೆಳೆಯುತ್ತವೆ. ಜನಗಳಿಗಾಗಲಿ, ದನಗಳಿಗಾಗಲಿ ಇದು ತಪ್ಪಿದ್ದಲ್ಲ, ಜನಪದ ವೈದ್ಯ ಪ್ರಮುಖವಾಗಿ ಪರಿಸರ ಬದ್ಧವಾದದ್ದು. ಹಾಗಾಗಿಯೇ ಅವುಗಳಲ್ಲಿ ಕೆಲವೊಂದು ವಿಶೇಷತೆ ಕಾಣಲು ಸಾಧ್ಯವಾಗುತ್ತದೆ.

ಶ್ರೀಮತಿ ಭಾನುಮತಿ ಅವರ 'ಮಲೆನಾಡು ಶೈವ ಒಕ್ಕಲಿಗರು - ಜಾನಪದೀಯ ಅಧ್ಯಯನ' ಅಲ್ಲಿಯ ಸಂಸ್ಕೃತಿಯಂತೆಯೇ ಒಂದು ವಿಶಿಷ್ಟ ಬಗೆಯ ಕೃತಿ. ತನ್ನ ಮೂಲ ಸಂಸ್ಕೃತಿಯೊಂದನ್ನು ಮಸುಕಾಗಿಸಿಕೊಳ್ಳುತ್ತಿರುವ ಜನಾಂಗವೊಂದರ ಸಂಸ್ಕೃತಿಯನ್ನು ಗ್ರಂಥ ರೂಪದಲ್ಲಿ ಹಿಡಿದಿಡುವ ಕಾರ್ಯವನ್ನು ಅವರು ಶ್ರದ್ಧಾಪೂರ್ವಕವಾಗಿ ಮಾಡಿದ್ದಾರೆ. ಒಂದು ಜನಾಂಗಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನು ಅವರು ಎಚ್ಚರಿಕೆಯಿಂದ ಕಲೆ ಹಾಕಿದ್ದಾರೆ. ಅವುಗಳನ್ನು ವಿಶ್ಲೇಷಿಸಿ ವಿಮರ್ಶಿಸುವ ಕಾರ್ಯವನ್ನು ಎಸಗಿದ್ದಾರೆ. ಅಲ್ಲಿಯ ಮನೆಕಟ್ಟುವ ವಿಧಾನವನ್ನಾಗಲಿ, ಉಡುಗೆ ತೊಡಿಗೆಯ ವಿಷಯವನ್ನಾಗಲಿ, ಆರ್ಥಿಕ ಸ್ಥಿತಿಗತಿಯನ್ನಾಗಲಿ ಅಥವಾ ಅವರ ಭಾಷೆ ಮತ್ತು ಸಾಹಿತ್ಯ ವಿಷಯವನ್ನೂ ವಿವರವಾಗಿ ಸಂಗ್ರಹಿಸಿ ಕೊಟ್ಟಿದ್ದಾರೆ. ಭಾನುಮತಿ ಅವರ ಬರವಣಿಗೆಯ ವೈಶಿಷ್ಟ್ಯವೆಂದರೆ, ಅವರು ಜನಾಂಗವೊಂದರ ಜಾನಪದೀಯ ಅಧ್ಯಯನಕ್ಕೆ ತೊಡಗಿದ್ದರೂ, ಸಂದರ್ಭವೊದಗಿದೆಡೆಯಲ್ಲೆಲ್ಲ ಪ್ರಾಚೀನ ಕಾವ್ಯಗಳು ಹಾಗೂ ಶಾಸನಗಳ ಸಮರ್ಥನೆಯನ್ನು ನೀಡುತ್ತ ಅವುಗಳ ಬೆಲೆ ಕಟ್ಟುವ ಕೆಲಸ ಮಾಡುವುದು, ಇವೆಲ್ಲಕ್ಕೂ ಜಾನಪದ ಮೂಲ ಎಂಬುದನ್ನು ಮಾಡುತ್ತದೆ. ಕಾಡಿಗೂ ಪ್ರಾಣಿಗಳಿಗೂ ಸಂಬಂಧವಿರುವಂತೆಯೇ, ಅದಕ್ಕೆ ಹತ್ತಿರವಾದ ಮಾನವ ಪ್ರಾಣಿಗೂ ಅವುಗಳೊಂದಿಗೆ ಸಂಬಂಧ ಉಂಟಾಗುವುದು ಅನಿವಾರ್ಯ. ಹಾಗಾಗಿಯೇ ಬೇಟೆಯಂತಹ ಒಂದು ಕಲೆ ಅಲ್ಲಿ ಕ್ರೀಡೆಯಾಗಿಯೂ ಬದುಕಿನ ಒಂದು ಮಾರ್ಗವಾಗಿಯೂ ಆರಂಭಗೊಂಡು ಮುಂದುವರೆದದ್ದು ಸಹಜವಾಗಿಯೇ ಇದೆ. ಮಲೆನಾಡಿನ ಭಾಗದ ಪ್ರತಿಯೊಂದು ಜನಾಂಗದಲ್ಲಿಯೂ,

ಬಲ್ಲವರಾದರೂ, ಲಿಖಿತ ರೂಪದ ಐತಿಹಾಸಿಕ ದಾಖಲೆಗಳನ್ನು ಕೊಡುವುದು ಅವರ ಉದ್ದೇಶವಿದ್ದಂತೆ ತೋರುತ್ತದೆ. ಜೊತೆಗೆ ಅವುಗಳಲ್ಲಿ ಹೆಚ್ಚಿನ ಆಸಕ್ತಿ ಮತ್ತು ಪರಿಶ್ರಮ ಇರುವುದೂ ಕಾರಣವಾಗಿದೆ. ಮೂಲತಃ ಸಂಶೋಧಕಿಯಾದ ಅವರಿಗೆ ಯಾವುದೇ ವಿಷಯದ ಒಳಹೊಕ್ಕು ನೋಡುವ ದೃಷ್ಟಿ ಸಹಜವಾಗಿ ಸಿದ್ಧಿಸಿದ್ದಾಗಿದೆ. ಜಾನಪದ ಕ್ಷೇತ್ರಕ್ಕೆ ಇದೊಂದು ಮಹತ್ವದ ಕೊಡುಗೆ ಎನ್ನುವುದರಲ್ಲಿ ಎರಡು ಮಾತಿಲ್ಲ. ತಮ್ಮ ಸ್ವಚ್ಛ ಹಾಗೂ ನೇರ ಬರವಣಿಗೆಯಿಂದ ಅತ್ಯಂತ ಚೇತೋಹಾರಿಯಾಗಿ ವಿಷಯವನ್ನು ವಿಶ್ಲೇಷಿಸಿ ಮುಂದಿಡುವ ಅವರ ಕಲೆಗಾರಿಕೆ ಈ ಕೃತಿಗೊಂದು ಮಹತ್ವವನ್ನು ತಂದು ಕೊಟ್ಟಿದೆ. ಇದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತ, ಅವರಿಂದ ಇನ್ನು ಇಂತಹ ಮಹತ್ವದ ಕೃತಿಗಳು ಹೊರಬರುವಂತಾಗಲಿ ಎಂದು ಆಶಿಸುತ್ತೇನೆ.

* * * * *

ಶ್ರೀ ರಾಮಾಯಣ ದರ್ಶನಂ ಮತ್ತು ಜನಪದ ರಾಮಾಯಣಗಳು

ರಾಮಾಯಣದ ಕತೆ ಕಾಲದ ಅಂತರದಲ್ಲಿ ಎಷ್ಟೆಷ್ಟು ವ್ಯತ್ಯಾಸಗಳನ್ನು ಹೊಂದುತ್ತ ಬಂದಿದೆ ಎಂಬುದಕ್ಕೆ 'ಶ್ರೀ ರಾಮಾಯಣ ದರ್ಶನಂ' ಒಂದು ಸ್ಪಷ್ಟ ನಿದರ್ಶನ. ವಾಲ್ಮೀಕಿ ರಾಮಾಯಣವೇ ಮೂಲರಾಮಾಯಣ ಎಂದು ಇಟ್ಟುಕೊಂಡರೂ, ಅಲ್ಲಿಂದ ಇಲ್ಲಿಯವರೆಗೆ ಅದು ನಡೆದು ಬಂದಿರುವ ದಾರಿಯನ್ನು ಗಮನಿಸುವಾಗ ಹಲವು ಸ್ಥಿತ್ಯಂತರಗಳು ಸಹಜವಾಗಿಯೇ ಕಂಡು ಬರುತ್ತವೆ. ಹೊಸ ಪ್ರಜ್ಞೆ - ಸಂವೇದನೆಗಳಿಂದ, ತನ್ನ ಕಾಲದ ಸಾಮಾಜಿಕ ಜವಾಬ್ದಾರಿಯನ್ನು ಹೊತ್ತು ಹೊರ ಹೊಮ್ಮಿದ ಕಾವ್ಯ ಮಹತ್ವದ ಕಾವ್ಯವಾಗಿ ಮನ್ನಣೆ ಪಡೆಯುತ್ತದೆ. ಸಾಮಾಜಿಕ ಕಾಳಜಿಯನ್ನು ಹೊತ್ತು ಕಾವ್ಯರಚನೆಗೆ ಕೈ ಹಾಕಿದ ವ್ಯಕ್ತಿ ಕತೆ ಬೆಳೆಸಿಕೊಂಡು ಹೋಗುವಷ್ಟರಲ್ಲಿಯೇ ತೃಪ್ತನಾಗುವುದಿಲ್ಲ. ತನ್ನ ಕಾಲದ ಎಲ್ಲ ತೊಡಕುಗಳನ್ನು ಹಾದು ಹೋಗುತ್ತಾನೆ. ಅವುಗಳನ್ನು ಬಿಡಿಸಲು ಮಾರ್ಗಗಳನ್ನು ತೋರುತ್ತ ಹೋಗುತ್ತಾನೆ. ವಿಶ್ವಪಥ - ಮನುಜಮತದಂತಹ ದಾರಿಯನ್ನು ತೋರಿ ಸಂಕೋಲೆಯಿಂದ ಹೊರ ಬರಲು ಸಹಾಯಕನಾಗುತ್ತಾನೆ. ಹೀಗೆ ಒಂದು ಹೊಸ ಪಥವನ್ನು ತೋರಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಪೂರ್ಣ ಪ್ರಜ್ಞಾಯುಕ್ತ ಕವಿಯಿಂದ ಮಾತ್ರ ಅದು ಸಾಧ್ಯವಾಗುತ್ತದೆ. ರಸಋಷಿ ಕುವೆಂಪು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಮೂಲಕ ಆ ಕೆಲಸವನ್ನು ಮಾಡಿದ್ದಾರೆ. ಈ ದೃಷ್ಟಿಯಿಂದ ಶ್ರೀ ರಾಮಾಯಣ ದರ್ಶನಂ ಈ ಯುಗದ ಮಹಾಕಾವ್ಯವಾಗಿ, ಶ್ರೇಷ್ಠ ಕಾವ್ಯವೆನಿಸಿ ಎಲ್ಲರ ಗಮನ ಸೆಳೆದಿದೆ.

ಮೂಲ ರಾಮಾಯಣದಿಂದ ಹಲವಂಶಗಳಲ್ಲಿ ಶ್ರೀರಾಮಾಯಣ ದರ್ಶನಂ ಭಿನ್ನವಾಗಿದೆ. ಮೂಲ ರಾಮಾಯಣದಲ್ಲಿಯಂತೆ, ಸಿದ್ಧ ಪಾತ್ರಗಳನ್ನಾಗಲಿ ಅಥವಾ ಪಾತ್ರಗಳಲ್ಲಿ ಮೇಲು - ಕೀಳೆಂಬ ಭೇದವನ್ನಾಗಲಿ ತರಲು ಹೋಗದೆ - ಸಮಾನತೆಯನ್ನು ಹಾಗೂ ಮಾನವ ಸಹಜವಾದ ದೌರ್ಬಲ್ಯಗಳನ್ನು ಸಹಜವಾಗಿ ತಂದಿದ್ದಾರೆ. ಈ ದೃಷ್ಟಿಯಿಂದಲೂ ಶ್ರೀರಾಮಾಯಣ ದರ್ಶನಂ ಸಹೃದಯರಿಗೆ ಮೆಚ್ಚುಗೆಯಾದ ಕೃತಿಯಾಗಿದೆ.

ಬದಲಾವಣೆ, ಬದುಕಿನಲ್ಲೆಂತೋ ಅಂತೆಯೇ ಸಾಹಿತ್ಯದಲ್ಲಿಯೂ ಒಂದು ಸಹಜ ಕ್ರಿಯೆ. ದ್ರಷ್ಟಾರನಾದ ಕವಿ ಅದನ್ನು ಹೆಚ್ಚು ಸಮರ್ಥವಾಗಿ ತರುತ್ತಾನೆ. ಕವಿಯ ದೃಷ್ಟಿ, ಅವನ ಮನೋಭಾವ, ಅವಕ್ಕೆ ಹಿನ್ನೆಲೆಯಾಗಿ ನಿಲ್ಲುವ ಅವನ ಪ್ರತಿಭೆ ಇದಕ್ಕೆ ಕಾರಣವಾಗುತ್ತವೆ. ಮೂಲವನ್ನು ನೆಪಮಾತ್ರವಾಗಿಟ್ಟುಕೊಂಡು, ಆ ಚೌಕಟ್ಟಿನಲ್ಲಿ ತನ್ನ ಪಟ್ಟುಗಳನ್ನು ತೋರುತ್ತಾನೆ. ಹಲವೊಮ್ಮೆ ಆ ಚೌಕಟ್ಟಿನಿಂದ ಹೊರಬರುವುದು ಸಮರ್ಥನಾದ ಕವಿಗೆ ಮಾತ್ರ ಸಾಧ್ಯವಾಗುವಂಥದು. ಈ ಹಿನ್ನೆಲೆಯಲ್ಲಿ ಗಮನಿಸುವಾಗ ವಾಲ್ಮೀಕಿ ರಾಮಾಯಣಕ್ಕೂ - ಶ್ರೀರಾಮಾಯಣ ದರ್ಶನಂಗೂ ಇರುವ ಅಂತರ ಗಣನೀಯ.

ಶಿಷ್ಟ ರಾಮಾಯಣ ಪರಂಪರೆಯಲ್ಲಿ ವಾಲ್ಮೀಕಿ ರಾಮಾಯಣ ಮೂಲವೆನ್ನಬಹುದಾದರೂ, ರಾಮಾಯಣದ ಕಥಾ ಪರಂಪರೆಯಲ್ಲಿಯೇ ಮೂಲ ಎಂದು ಹೇಳಲಾಗುವುದಿಲ್ಲ. ಇದ್ದಕ್ಕಿದ್ದಂತೆಯೇ ಯಾವುದೊಂದೂ ಉದ್ಭವಿಸಲು ಸಾಧ್ಯವಿಲ್ಲ. ಅದಕ್ಕೊಂದು ಮೂಲವಸ್ತು ಇದ್ದೇ ಇರುತ್ತದೆ. ರಾಮಾಯಣ, ಮಹಾಭಾರತ ಕಥೆಗಳಿಗೂ ಅಂತಹ ಮೂಲವಸ್ತು ಜನಪದ ಮೂಲದಿಂದಲೇ ಬಂದಿರಬೇಕು. ಮಣ್ಣು ಮೊದಲು, ನಂತರ ಮಡಕೆ. ಮಣ್ಣೇ ಇಲ್ಲದೆ ಮಡಿಕೆ ಮಾಡಲು ಎಂತು ಸಾಧ್ಯ ? ಎಲ್ಲ ಶಿಷ್ಟ ಕಾವ್ಯ, ನಾಟಕಗಳಿಗೂ ಜನಪದವೇ ಮೂಲ ಎಂಬುದು ವಿದ್ವಾಂಸರ ಅಭಿಪ್ರಾಯ. ಮೂಲವಸ್ತು ಕಾಲಾನಂತರ ಪ್ರತಿಭೆಗಳಿಗೆ ಸಿಕ್ಕಿ, ವೈವಿಧ್ಯವನ್ನು - ವೈಶಿಷ್ಟ್ಯವನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಇದರಿಂದಾಗಿ ತನ್ನ ಗಾತ್ರವನ್ನು ಅದು ಹೆಚ್ಚಿಸಿಕೊಳ್ಳುತ್ತದೆ. ಅಪೌರುಷೇಯವಾದ ಸಂಬಂಧಗಳನ್ನು ಬದಿಗೊತ್ತಿ ವಾಸ್ತವಿಕತೆಯ ನೆಲೆಗಟ್ಟಿನಲ್ಲಿ ನಿಂತು ಚಿಂತಿಸುವಾಗ ಈ ಅಂಶಗಳು ಬೆಳಕಿಗೆ ಬರುತ್ತವೆ ಅನ್ನಿಸುತ್ತದೆ.

ರಾಮಾಯಣ, ಮಹಾಭಾರತಗಳ ಕಥೆ ಜನಪದರ ಬಾಯಲ್ಲಿ ಇಂದು ಸಂಪೂರ್ಣವಾಗಿ ನಮಗೆ ದೊರೆಯದಿರುವುದು ಆಶ್ಚರ್ಯದ ಸಂಗತಿಯಾದರೂ, ಅದರ ಅರಿವು ಅವರಿಗಿರಲಿಲ್ಲ ವೆಂದು ಹೇಳುವಂತಿಲ್ಲ. ವಾಲ್ಮೀಕಿಯೇ ರಾಮಾಯಣದ ಮೂಲ ಕರ್ತೃ ಎಂದೂ ಹೇಳಬರುವು ದಿಲ್ಲ. ಜನಪದ ಮೂಲವಾದ ಕಥೆಯೊಂದು ಮೊದಲಿನಿಂದಲೂ ಇದ್ದಿರಬೇಕು. ಅನಂತರ ಅದು ಶಿಷ್ಟರ ಕೈಸೇರಿ ಶಿಷ್ಟ ರೂಪವನ್ನು ಪಡೆದಿರಲು ಸಾಧ್ಯ. ರಾಮಾಯಣ, ಮಹಾಭಾರತ, ಭಾಗವತಗಳಲ್ಲಿ ಬರುವ ಅನೇಕ ಉಪಾಖ್ಯಾನ ಸನ್ನಿವೇಶ ಘಟನೆಗಳಿಗೆ ಜನಪದ ಸಾಹಿತ್ಯವೇ ಮಹಾ ಆಕರ. ನಿದರ್ಶನಾರ್ಥವಾಗಿ ಧರ್ಮವ್ಯಾಧನ ಕಥೆಯನ್ನೂ ನಳೋಪಾಖ್ಯಾನವನ್ನೂ ಹೆಸರಿಸಬಹುದು. ವೇದಗಳಲ್ಲಿಯೂ ಈ ಸಂಪ್ರದಾಯ ಹಾಸುಹೊಕ್ಕಾಗಿ ಸೇರಿಕೊಂಡಿದೆ ಯಾದರೂ, ಊರ್ವಶಿ-ಪುರೂರವರ ಕಥೆ ಜಾನಪದೀಯವೆಂದೂ, ಸೂರ್ಯ ಚಂದ್ರರ ಪ್ರತೀಕ ಕಲ್ಪನೆ ಪುರಾತನವಾದುದೆಂದೂ ವಿದ್ವಾಂಸರು ಸ್ಪಷ್ಟ ಪಡಿಸಿದ್ದಾರೆ[೧] ಹೇಗೋ ಜನಸಾಮಾನ್ಯರ ಬಾಯಲ್ಲಿ ಹುಟ್ಟಿಕೊಂಡು, ಉಳಿದು ಬಂದ ಅನೇಕ ವಿಚಾರಗಳು ರೆಕ್ಕೆ ಪುಕ್ಕವನ್ನು ಕಾಲಾನಂತರ ದಲ್ಲಿ ಬೆಳೆಸಿಕೊಂಡು, ಅನಂತರ ಯಾರೋ ಒಬ್ಬ ಶಿಷ್ಟನ ಕೈಗೆ ಸಿಕ್ಕಾಗ ಅದು ಒಂದು ಸಮಗ್ರತೆಯನ್ನು, ಸ್ಪಷ್ಟತೆಯನ್ನು ಪಡೆದುಕೊಳ್ಳುವುದು ಸಾಮಾನ್ಯ. ರಾಮಾಯಣ, ಮಹಾಭಾರತಗಳಂತಹ ಕಥೆಗಳ ವಿಚಾರದಲ್ಲಿಯೂ ಹೀಗೆ ಆಗಿರಲು ಸಾಧ್ಯ. ಈ ಸಂಬಂಧದಲ್ಲಿ 'Vedic Folklore'ನಲ್ಲಿ ಬರುವ ಮಾತೂ ಗಮನಾರ್ಹ.

It seems quite Probable that the Puranas and the great dramatist kalidasa took their account from Pre existing folklore tradition.

ವಾಲ್ಮೀಕಿ, ವ್ಯಾಸರಿಗಿಂತಲೂ ಮೊದಲೇ ರಾಮಾಯಣ, ಭಾರತದ ಕಥೆಗಳು ಜನರ ಬಾಯಲ್ಲಿ ಕೇಳುತ್ತಿದ್ದು ಅನಂತರ ಅವೇ ಇವರುಗಳಿಗೆ ಆಕರಗಳಾಗಿರಲೂ ಸಾಧ್ಯ. ಅನಂತರವೂ ಅವು ಹಾಗೇ ಜನರ ಬಾಯಲ್ಲಿ ಉಳಿದು ಬಂದಿರುವುದೂ ಸತ್ಯ. ಕಾಲಾನಂತರದಲ್ಲಿ ಇದರ ಹಲವು ಪಾಠಾಂತರಗಳು ಅಲ್ಲಲ್ಲಿ ಹುಟ್ಟಿಕೊಂಡು ಜನಮನವನ್ನು ರಂಜಿಸುತ್ತ ಬಂದಿರಬೇಕು. ಆದರೆ ಅದರ ಚೌಕಟ್ಟು ಮಾತ್ರ ಹೆಚ್ಚು ಕಡಿಮೆ ಒಂದೇಯಾಗಿ ಉಳಿದು ಬಂದಿದೆಯೆಂಬುದೂ ಗಮನಾರ್ಹ. ಕಾರಣ,

---

೧. ಡಾ. ದೇಜಗೌ : (ಮುನ್ನುಡಿ) ಜನಪದ ಸಾಹಿತ್ಯ ಸಮೀಕ್ಷೆ

ರಾಮಾಯಣದ ಕಥೆ ನಿಶ್ಚಿತ ಪ್ರದೇಶವೊಂದರಲ್ಲಿ ಜನ್ಮ ತಾಳಿದ್ದಾಗಿದ್ದು, ಆಮೇಲೆ ರಾಷ್ಟ್ರೀಯ ಘಟನೆಯಾಗಿ, ಸಂಸ್ಕೃತಿಯ ಪ್ರತಿನಿಧಿಯಾಗಿ ರೂಪಿತವಾದುದಾಗಿರಬೇಕು. ಇದರ ಮೂಲ ರಚನಾಕಾರ ನಮಗಿಂದು ಅನಾಮಧೇಯ. ಸಮೂಹವೊಂದು ಅದನ್ನು ಕೈಗೆತ್ತಿ ಕೊಂಡಾಗ ಸಮೂಹದ್ದಾಯಿತು. ಪರಂಪರಾಗತವಾಗಿ ವಹನಿಸಿದಾಗ ಸಾಂಪ್ರದಾಯಿಕವಾಯಿತು. ಇದು ದೇಶದ ತುಂಬ ಹರಡಿ, ತಲೆಮಾರುಗಳ ಮೂಲಕ ಹರಿದಾಗ ಹಲವಾರು ಪಾಠಾಂತರಗಳು, ರೂಪಾಂತರಗಳು, ಪ್ರಾದೇಶಿಕ ವ್ಯತ್ಯಯಗಳು, ಕಡೆಗೆ ಭಿನ್ನ ಕಥಾ ಸಂಪ್ರದಾಯಗಳು ಹುಟ್ಟಿಕೊಳ್ಳಲು ಕಾರಣವಾಯಿತು. ಹೀಗೆ ರಾಮಾಯಣದ ಬೇರೆ ಬೇರೆ ಸಂಪ್ರದಾಯಗಳು ರೂಪುಗೊಂಡ ಎಷ್ಟೋ ವರ್ಷಗಳ ತರುವಾಯ ಬಂದ ವಾಲ್ಮೀಕಿ ಕವಿ ಅಂತಹ ಒಂದು ಸಂಪ್ರದಾಯಕ್ಕೆ ಮಾತ್ರ ತನ್ನ ಕಾವ್ಯರೂಪದಲ್ಲಿ ಅಭಿವ್ಯಕ್ತಿ ನೀಡಿದ್ದಾನೆಂದು ಭಾವಿಸಬಹುದು.[೨] "ಜನಪದ ಕಾವ್ಯ ರೂಪದಲ್ಲಿ ಕಂಠಸ್ಥ ಮೂಲದಲ್ಲಿ ಉಳಿದಿದ್ದ, ಈ ಕಾವ್ಯ ವೃತ್ತಗಳನ್ನು ವಾಲ್ಮೀಕಿ ವ್ಯಾಸರು ಸ್ವೀಕರಿಸಿ, ಪರಿಷ್ಕರಿಸಿರಬಹುದು. ರಕ್ತಮಾಂಸಗಳನ್ನು ತುಂಬಿ ಬೆಳೆಸಿರಬಹುದು.[೩]

ರಾಮಾಯಣ, ಭಾರತದ ಕಥೆಗಳು ಒಂದು ದೇಶೀಯ ಸ್ವತ್ತಾಗಿ ಉಳಿದು ಬಂದಿವೆ. ಭಾರತೀಯ ಸಂಸ್ಕೃತಿಯ ಪ್ರತಿನಿಧಿಗಳಾಗಿ ಸ್ಥಾನ ಪಡೆದಿವೆ. ದೇಶೀಯ ಭಾಷೆಗಳಲ್ಲಿ ಕಂಡು ಬರುವ ರಾಮಾಯಣದ ಕತೆಯ ವ್ಯತ್ಯಾಸದಂತೆಯೇ ಜನಪದ ರಾಮಾಯಣದಲ್ಲಿಯೂ ಕಂಡು ಬರುತ್ತದೆ. ಹಲವು ಸಣ್ಣ - ಪುಟ್ಟ ವ್ಯತ್ಯಾಸಗಳು ಇಲ್ಲಿ ಧಾರಾಳವಾಗಿ ಕಂಡು ಬರುತ್ತವೆ. ಗೋಂಡ ಜನರಲ್ಲಿ ಕಂಡು ಬರುವ ರಾಮಾಯಣದ ಕಥೆಯನ್ನು ವೆರಿಯರ್ ಎಲ್ವಿನ್ನರು ತಮ್ಮ 'ಗಿರಿಜನ ಪ್ರಪಂಚ'ದಲ್ಲಿ ಹೆಸರಿಸಿದ್ದಾರೆ. ಹೀಗೆಯೇ ಇನ್ನಿತರ ಭಾಗಗಳಲ್ಲಿಯೂ, ಭಾಷೆಗಳಲ್ಲಿಯೂ, ಜನಾಂಗದಲ್ಲಿಯೂ ಬೇರೆ ಬೇರೆ ಕಥಾ ಸಂಪ್ರದಾಯಗಳು ಕಂಡು ಬಂದರೆ ಆಶ್ಚರ್ಯವೇನೂ ಇಲ್ಲ. ಕನ್ನಡ ಜಾನಪದ ರಾಮಾಯಣದ ಕಥೆಯನ್ನೇ ಪರಿಶೀಲಿಸುವಾಗಲೂ ಹಲವು ಭಿನ್ನಪಾಠಗಳು ಕಂಡು ಬರುವುದು ಗಮನಾರ್ಹ. ಸಂಪೂರ್ಣ ರಾಮಾಯಣದ ಕಥೆ ಒತ್ತಟ್ಟಿಗೆ ಇಲ್ಲಿ ದೊರೆಯದಿದ್ದರೂ, ಅದರ ಹಲವು ಭಾಗಗಳು ಇಂದಿಗೂ ಜನಪದ ಗಾಯಕರ ಬಾಯಲ್ಲಿ ಉಳಿದು ಬಂದಿವೆ.

ಜಾನಪದ ಮುದ್ರೆ ಎಲ್ಲ ಶಿಷ್ಟ ಸಾಹಿತ್ಯ, ಸಂಸ್ಕೃತಿ, ಕಲೆಗಳ ಮೇಲೂ ಆಗಿದೆ ಎಂಬುದನ್ನು ಎಲ್ಲ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ರಾಮಾಯಣ ಭಾರತದ ಕಥೆಗಳು ಇದರಿಂದ ಹೊರತಾದುವು ಎಂದು ಹೇಳಲಾಗುವುದಿಲ್ಲ.[೪] ಆದರೆ ಒಂದಂಶವನ್ನು ಇಲ್ಲಿ ಸ್ಪಷ್ಟಗೊಳಿಸಿಕೊಳ್ಳಬೇಕಾಗುತ್ತದೆ. ಅದು : ವಾಲ್ಮೀಕಿ - ವ್ಯಾಸರ ರಾಮಾಯಣ, ಭಾರತಗಳ ಸ್ವರೂಪಕ್ಕೂ, ಜನಪದ ರಾಮಾಯಣ, ಭಾರತಗಳ ಸ್ವರೂಪಕ್ಕೂ ಇರುವ ಅಂತರ. ಪ್ರಾರಂಭದಿಂದಲೂ ಜನರ ತಿಳುವಳಿಕೆಯಲ್ಲಿ ಬಂದ ರಾಮಾಯಣದ ಕಥೆಯ ಸ್ವರೂಪವೇ ಬೇರೆ, ವಾಲ್ಮೀಕಿ - ವ್ಯಾಸರ ಕಥೆಯ ಸ್ವರೂಪವೇ ಬೇರೆ. ಇಲ್ಲಿಯ ಕಥಾಮೂಲ ಒಂದೇ ಆಗಿದ್ದರೂ,

೨. ಡಾ. ರಾಗೌ : ಜನಪದ ರಾಮಾಯಣ

೩. ಡಾ. ದೇಶಂಪ : ಕುವೆಂಪು ಸಾಹಿತ್ಯ ಲೋಕ

4.The influence of folk culture, art music, dance litrature- is directly to be found every where in all his activities and creations-Influence of folk art on some modern artists, by Chittaranjan Dev :pub in vol. 1,No-5,p-342.

ಒಂದೇ ಸ್ವರೂಪದ್ದಾಗಿದ್ದರೂ - ವ್ಯಾಸ ವಾಲ್ಮೀಕಿಗಳ ಕಾವ್ಯ ಚಿಂತನೆಯಾಗಲಿ, ಆಲೋಚನೆಯ ಅಥವಾ ದರ್ಶನಾದಿಗಳ ವಿವರವಾಗಲಿ ಅಲ್ಲ. ಹಾಗೆಯೇ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ'ನಲ್ಲಿನ 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯಲಿ' ಎಂಬ ದಿವ್ಯ ಸಂದೇಶವನ್ನಾಗಲಿ ಅಲ್ಲ. ಅಪೇಕ್ಷಿಸುವುದು ಸಾಧುವೂ ಅಲ್ಲ. ಸಾಧ್ಯವೂ ಇಲ್ಲ. ಇಲ್ಲಿಯ ಕಥೆಗಳ ಸ್ವರೂಪವೇ ಬೇರೆ, ಸ್ವಾರಸ್ಯವೇ ಬೇರೆ.

ಶ್ರೀರಾಮಾಯಣ ದರ್ಶನಂ ಮತ್ತು ಜನಪದ ರಾಮಾಯಣಗಳ ತೌಲನಿಕ ಅಧ್ಯಯನ ನಡೆಸುವವರಿಗೆ ಮೊದಲ ಹಂತದಲ್ಲೇ ಎದುರಾಗುವ ತೊಡಕೆಂದರೆ, ಜನಪದ ರಾಮಾಯಣ ಗಳಾವುವೂ ಸಮಗ್ರವಾಗಿ ದೊರೆಯದಿರುವುದು. ಸ್ವಲ್ಪಮಟ್ಟಿಗೆ ಹಾಗೆ ದೊರೆಯುವ ರಾಮಾಯಣವೆಂದರೆ ಭಾಗವಂತಿಕೆ ಸಂಪ್ರದಾಯದ್ದು, ಇದು ಇಂದಿಗೂ ಕಂಠಸ್ಥ ಸಂಪ್ರದಾಯ ದಲ್ಲಿ ಉಳಿದು ಬಂದಿರುವುದರ ಜೊತೆಗೆ, ಇದರ ಕಾಗದದ ಹಸ್ತಪ್ರತಿಯೂ ಲಭ್ಯವಾಗುತ್ತದೆ. ಅಲ್ಲದೆ ಶಿಷ್ಟಕವಿಯೊಬ್ಬ ಇದರ ಕಥೆಯನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಿದಂತೆಯೂ ತೋರುತ್ತದೆ. ಭಾಗವಂತಿಕೆ ಸಂಪ್ರದಾಯದ ಮುಖ್ಯ ಕಾವ್ಯವೂ ಇದೇ ಆಗಿದೆ. ಭಾಗವಂತಿಕೆ ಸಂಪ್ರದಾಯದ ಹಾಡುಗಳಲ್ಲಿ ರಾಮಾಯಣವೂ ಕಂಡು ಬರುತ್ತದೆ. ಆ ಸಂಪ್ರದಾಯದ ಮುಖ್ಯ ಕಾವ್ಯವೇ ಇದಾಗಿದೆ. ಸಮಗ್ರ ರಾಮಾಯಣವನ್ನು ಅಳವಡಿಸಿ ಭಾಗವಂತಿಕೆ ರಾಮಾಯಣವನ್ನು ರಚಿಸಲಾಗಿದೆ. ಶಿಷ್ಟ ಮೂಲದ ರಾಮಾಯಣದ ಕಥಾ ಚೌಕಟ್ಟನ್ನೇ ಈ ಕತೆಯೂ ಹೋಲುತ್ತತೆ. ಆದರೆ ಅನೇಕ ಜನಪದ ಆಶಯಗಳು ಈ ಕತೆಯೊಡನೆ ಬೆರೆತು ಸುಂದರವಾದ ಜನಪದ ಕಾವ್ಯದ ಆವರಣವನ್ನು ಇಲ್ಲಿ ಕಲ್ಪಿಸಿಬಿಡುತ್ತವೆ. ಬ್ರಹ್ಮ ಕೌಸಲ್ಯೆಗೆ ರಾಮಾವತಾರದ ವಾರ್ತೆಯನ್ನು ಕೊರವಂಜಿಯ ರೂಪದಲ್ಲಿ ಬಂದು ಹೇಳುವುದು, ಸಮುದ್ರ ತೀರದಲ್ಲಿ ಆಂಜನೇಯ ಬಾಲವನ್ನು ಬಿಟ್ಟು, ಆಳವನ್ನು ನೋಡುವುದು, ಕುಂಭಕರ್ಣ 'ಮಾರಿಯಂದದಿ ಬಿದ್ದು', 'ಘೋರೆಂದು' ನಿದ್ರೆ ಮಾಡುತ್ತಿದ್ದುದು ಮುಂತಾದ ಅನೇಕ ಸನ್ನಿವೇಶಗಳು 'ಭಾಗವಂತಿಕೆ ರಾಮಾಯಣ'ವೂ ಜನಪದ ಮೂಲದ ಕಾವ್ಯವೇ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಶಿಷ್ಟ ಕವಿಯೊಬ್ಬ ಈ ಕತೆಯನ್ನು ಸುಧಾರಿಸಿದಂತೆ ತೋರುತ್ತದೆ. ಸಾಂಗತ್ಯ ಕಾವ್ಯವೊಂದು ಕಂಠಸ್ಥ ಸಂಪ್ರದಾಯದಲ್ಲಿ ಉಳಿದು ಬಂದಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ಸಮಗ್ರ ರಾಮಾಯಣ ಜನಪದ ಸಂಪ್ರದಾಯದಲ್ಲಿ ಕಂಡು ಬರುವುದೂ ಗಮನಾರ್ಹವಾಗಿದೆ.[೫]

ಭಾಗವಂತಿಕೆ ಸಂಪ್ರದಾಯದ ರಾಮಾಯಣವನ್ನು ಬಿಟ್ಟರೆ, ಅಷ್ಟೇ ಪ್ರಮುಖವಾದ ಮತ್ತೊಂದು ಜನಪದ ಮೂಲದ ರಾಮಾಯಣ ತಂಬೂರಿ ಸಂಪ್ರದಾಯದ 'ಸಂಪೂರ್ಣ ರಾಮಾಯಣ'[೬]. ತಂಬೂರಿಯವರು ಹಾಗೂ ಭಾಗವಂತಿಕೆ ಮೇಳದವರು, ಇವರಿಬ್ಬರೂ ಜನಪದ ಕಾವ್ಯ ಸಂಪ್ರದಾಯದಲ್ಲಿ ಹೆಸರಾದವರು. ತಂಬೂರಿಯವರು ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವಿಶೇಷವಾಗಿ ಕಂಡುಬಂದರೆ, ಭಾಗವಂತಿಕೆ ಮೇಳದವರು ಮಂಡ್ಯ, ಪಾಂಡವಪುರ, ಮಾಗಡಿ, ರಾಮನಗರ, ಚೆನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ವಿಶೇಷವಾಗಿ ಕಂಡು ಬರುತ್ತಾರೆ. ಭಾಗವಂತಿಕೆ ಮೇಳ ವೈಷ್ಣವ ಸಂಪ್ರದಾಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರಬಹುದಾದ ಬಯಲು ಸೀಮೆಯ ಒಂದು ವಿಶಿಷ್ಟ ಸಂಪ್ರದಾಯ. ಈ

೫. ಡಾ. ಜೀಶಂಪ : ದ.ಕ.ಜ.ಕಾ. ಪ್ರಕಾರಗಳು

೬. ಡಾ. ರಾಗೌ ಮತ್ತು ಸಂಗಡಿಗರು ಸಂಪಾದಿಸಿರುವ 'ಜನಪದ ರಾಮಾಯಣ'ದ ಕಥೆಯನ್ನು ಇಲ್ಲಿ ಹೆಚ್ಚಾಗಿ ಗಮನಿಸಲಾಗಿದೆ.

ಸಂಪ್ರದಾಯವನ್ನು ವಿಶೇಷವಾಗಿ ದೀವಳಿಗೆಯ ಸಂದರ್ಭದಲ್ಲಿ ಆಚರಿಸುತ್ತಾರೆ. ಇವರ ತಂಡವನ್ನು 'ದೀವಳಿಗೆ ದಂಡು' ಎಂದೂ ಕರೆಯುತ್ತಾರೆ. ಇವರುಗಳು ಊರೂರಿನ ಮೇಲೆ ಹೊರಟು ರಾಮಾಯಣ, ಭಾರತದ ಕಥೆಗಳನ್ನು ಹಾಡುತ್ತಾರೆ. ಬೇರೆ ಬೇರೆ ಊರಿನ ಎರಡು ತಂಡಗಳು ಸೇರಿದಾಗ ಹಲವೊಮ್ಮೆ ತೀವ್ರ ಸ್ಪರ್ಧೆ ನಡೆಯುವುದೂ ಉಂಟು :

ಕೇಳಿರಿ ದಶರಥ ರಾಮರ ಚರಿತೆಯ
ಲಾಲಿಸಿ ಕೇಳಿರಿ ಜನರೆಲ್ಲ
ರಾಮರ ಕಂಡನು ಹನುಮಂತ
ಸಂಜೀವನ ತಂದನು ಹನುಮಂತ
ಬಂದಳು ಕೈಕೆ ದಶರಥನೋಲಗಕೆ
ನಿಂದಳು ಮಾತಾಡಿದಳು
ರಾಮ ರಾಮ ಎನ್ನಿರಿ ಮಾಜನರೆಲ್ಲ
ಶ್ರೀರಾಮ ಎನ್ನವುದೇ ಪಾವನವು

ಹೀಗೆ ಕಥೆಯ ಭಾಗಗಳನ್ನು ಹಾಡುತ್ತಾ ಹೋಗುತ್ತಾರೆ. ಲಘು ಕುಣಿತ, ವಾದ್ಯಗಳ ಹಿನ್ನೆಲೆಯಲ್ಲಿ ಹಿಮ್ಮೇಳ - ಮುಮ್ಮೇಳಗಳ ಮಧುರ ಕಂಠ ಸ್ವಾರಸ್ಯವನ್ನು ತರುತ್ತದೆ.

ತಂಬೂರಿಯವರೂ, ಇವರಂತೆಯೆ ಒಂದು ಕಾಲಕ್ಕೆ ಧಾರ್ಮಿಕ ಸಂಪ್ರದಾಯದವರಾಗಿದ್ದು ಈಗ ಲೌಕಿಕ ಗಾಯಕ ವರ್ಗದಲ್ಲಿ ಕಂಡುಬರುವವರಾಗಿದ್ದಾರೆ. ಬಹುವಾಗಿ ಮಂಟೆಸ್ವಾಮಿ ಸಂಪ್ರದಾಯದ ನೀಲಗಾರರನ್ನು ಹೋಲುವ ಇವರು ಈಗ ಅವರೊಂದಿಗೆ ಯಾವ ಸಂಬಂಧವನ್ನು ಇಟ್ಟುಕೊಂಡಂತೆ ಕಾಣುವುದಿಲ್ಲ. ಸೊಗಸಾದ ಕಥನಗೀತೆಗಳ ಜೊತೆಗೆ ರಾಮಾಯಣದ ಕಥೆಯನ್ನು ಹಾಡಿಕೊಂಡು ಜನಪ್ರಿಯ ಕಲಾವಿದರಾಗಿದ್ದಾರೆ.

ಈ ಎರಡು ಸಂಪ್ರದಾಯಗಳನ್ನು ಬಿಟ್ಟರೆ, ರಾಮಾಯಣದ ಕಥಾಭಾಗಗಳು ನಮಗೆ ವಿಶೇಷವಾಗಿ ದೊರೆಯುವುದು ಯಕ್ಷಗಾನ ಪ್ರತಿಗಳಲ್ಲಿ. ಬಯಲಾಟದಲ್ಲಿ ರಾಮಾಯಣ, ಮಹಾಭಾರತ ಹಾಗೂ ಭಾಗವತಗಳ ಪ್ರಸಂಗಗಳೇ ಪ್ರಧಾನ. ಯಕ್ಷಗಾನ ಪ್ರಸಂಗದ ಕವಿಗಳು ತಮ್ಮದೇ ಆದ ರೀತಿಯಲ್ಲಿ ಆ ಪ್ರಸಂಗಗಳನ್ನು ಕಲ್ಪಿಸಿ ಚಿತ್ರಿಸಿದ್ದಾರೆ. ಹಾಗಾಗಿ ಎಲ್ಲ ಪ್ರಸಂಗಗಳನ್ನೂ ಒಟ್ಟುಗೂಡಿಸಿದರೆ - 'ಸಂಪೂರ್ಣ ರಾಮಾಯಣ' ಸಿದ್ಧವಾಗುವಂತಿದೆ. ಏಕೆಂದರೆ, ಬಿಡಿಬಿಡಿಯಾಗಿ ಎಲ್ಲ ಭಾಗಗಳೂ ಅಲ್ಲಿ ಕಂಡು ಬರುತ್ತವೆ: ಪುತ್ರಕಾಮೇಷ್ಠಿ, ಸೀತಾಸ್ವಯಂವರ, ರಾಮರಾಜ್ಯವಿಯೋಗ, ಪಂಚವಟಿವಾಲಿ ಸುಗ್ರೀವರ ಕಾಳಗ, ರಾವಣೋದ್ಭವ, ರಾವಣಪ್ರತಾಪ, ಅಂಗದ ಸಂಧಾನ, ಚೂಡಾಮಣಿ, ಮಕರಾಕ್ಷ ಕಾಳಗ, ನಾಗಾಸ್ತ್ರ, ಕುಂಭಕರ್ಣ ಕಾಳಗ, ಮೈರಾವಣ ಕಾಳಗ, ರಾವಣಾಸುರ ಕಾಳಗ, ಇಂದ್ರಜಿತು ಕಾಳಗ, ಸೀತಾವಿಜಯ, ರಾಮಾಂಜನೇಯ ಕಾಳಗ, ಸುಬಾಹು ಕಾಳಗ, ಅತಿಕಾಯ ಕಾಳಗ, ಲವಕುಶರ ಕಾಳಗ, ಅಶ್ವಮೇಧ ಇತ್ಯಾದಿ. ಹೀಗೆ ಯಕ್ಷಗಾನ ಸಾಹಿತ್ಯದಲ್ಲಿ ಹೇರಳವಾಗಿ ರಾಮಾಯಣದ ಕಥಾಪ್ರಸಂಗಗಳು ಕಂಡು ಬರುತ್ತವೆ.

ಇವಲ್ಲದೆ ಕೆಲವು ಸಾಮಾನ್ಯ ಗಾಯಕ - ಗಾಯಕಿಯರು ಹಾಡುವ ರಾಮಾಯಣ ಕಥೆಯ ಬಿಡಿ

ಹಾಡುಗಳು ಸಿಗುತ್ತವೆ. ತಮಗೆ ಪ್ರಿಯವಾದ ಹಾಗೂ ಮೆಚ್ಚುಗೆಯಾದ ಹಲವು ಕಥಾ ಭಾಗಗಳನ್ನು ಅವರು ಉಳಿಸಿಕೊಂಡು ಬಂದಿದ್ದಾರೆ. ಸಮಗ್ರ ಕಥೆ ಈ ಗಾಯಕರಲ್ಲಿ ದೊರೆಯುವುದಿಲ್ಲವಾದರೂ, ಅವರು ಉಳಿಸಿಕೊಂಡು ಬಂದಿರುವ ಭಾಗಗಳ ಸ್ವಾರಸ್ಯ ಮಾತ್ರ ವಿಶೇಷವಾಗಿ ಉಳಿದು ಬಂದಿದೆ. ತ್ರಿಪದಿಯ ರೂಪದಲ್ಲಿ ಕಂಡು ಬರುವ ಈ ಬಿಡಿ ಹಾಡುಗಳು ರಾಮಾಯಣದ ಸ್ವಾರಸ್ಯವನ್ನು ಅದ್ಭುತವಾಗಿ ಚಿತ್ರಿಸುತ್ತವೆ. ಕುಟ್ಟುವಾಗ, ಬೀಸುವಾಗ, ಕಳೆ ಕೀಳುವಾಗ ಹಾಡುವ ಹಾಡುಗಳಿವಾದರೂ, ರಾಮಾಯಣದ ಕಥೆ ಅವರಲ್ಲಿ ಎಷ್ಟು ಆಳವಾಗಿ ಬೇರು ಬಿಟ್ಟಿವೆ ಎಂಬುದನ್ನು ಅವು ಮನದಟ್ಟಾಗಿಸುತ್ತವೆ. ಈ ಕೆಲವು ತ್ರಿಪದಿಗಳನ್ನು ಗಮನಿಸಬಹುದು :

ರಾಗಿಯ ಕಲ್ಲಿಡಿದು ಸಿರಿರಾಮರ ಪಾದ ನೆನೆದೇವು
ರಾವುಳನ ಕೊಂದು ರಣದಲ್ಲಿ - ಚೆಂಡಾಡಿದ
ಸಿರಿ ರಾಮರ ಪಾದ ನೆನೆದೇವು

ರಾಮ ರಾಮನೆ ರಾಮ ನನ್ನಯ್ಯನೆ
ರಾಮ ಜಾನಕಿಯ ರಾಮನೆ - ಕೌಸಲ ದೇವಿ
ಪ್ರೇಮದಲ್ಲಿ ರಾಮನ ಕರೆದಳು

ಸೀತಮ್ಮ ಹುಟ್ಟಿವಳೆಂದು ಮಾತಾದೊ ಲಂಕೇಲಿ
ಸೀತೆ ಸಿರಿರಾಮರ ಮಡದಿಯು - ಆದಳೆಂದು
ಮಾತಾದೊ ಲೆಂಕೆ ಪುರದಲ್ಲಿ

ಆದರಿಸಿ ತಂದಾರೊ ಗೋದುವೆ ಮೈಯೋಳ
ಎಳ್ಳೂವಿಸಂಗೆ ಬಳುಕೋಳ - ಸೀತಮ್ಮ
ಎಲ್ಲರಸಿ ತಂದ್ರಿ ರಾಮದೇವ್ರ

ಬಾರೆ ಸೀತಮ್ಮ ನಿಮ್ಮ ಮಾವ ನೋಡಾರಂತೆ
ಅಂಗಾಲು ಪದ್ಮ ಸುಳಿಶುದ್ಧ - ನೋಡಾರಂತೆ
ಸೀತೆಗು ರಾಮನಿಗು ಸರಿಯುಂಟು

ಅಡವಿ ಅರಣ್ಯದಲ್ಲಿ ಗಿಡನೋಡಿ ರಾಮಗೆ
ಹೊನ್ನ ಮಿರುಗ್ಯವ ಎಳೆತಂದ - ರಾವುಳ
ಸೀತಾದೇವಿಯ ಕದ್ದು ಸೆರೆತಂದ

ಸೀತಮ್ಮ ಸೆರೆ ಹೋದ್ರೆ ಯಾರೂ ಕಾಣರಂತೆ
ಮೇಘದಲ್ಲಾಡೊ ಗರುಡಾಳ - ಕಂಡುಕೊಂಡು
ರಾವಳನ ದಂಡ ಎದುರಿಸಿದೊ

ಸೀತೆ ಕದ್ದೋರ್ಯಾರೋ ಸಿರಿರಾಮರ ಮಡದೀಯ

ಹೊತ್ತಿನಲಿ ಕೊಂಡ್ಹೋದ ರಾವಳ - ಸೀತಮ್ನ
ಜಗಳ ಮಾಡ್ಯಾನೆ ಜಟಾಯು
ರಾವಳನ ದಂಡ ತಡೆದು ಯುದ್ಧವ ಮಾಡಿ
ರಾಮರಿಗೆ ಬರೆದ ಸುದ್ದಿಯ - ಏನೆಂದು
ಸೀತಮ್ಮ ರಾವಳನ ಸೆರೆಹೋದ್ಲು
ಚೆಂದಾಕೆ ರಾಮರು ಮಿರುಗದ ಬ್ಯಾಟೆಗೆ ಹೋಗಿ
ಆದಂಗ್ಹೋಗಿ ನಂದಿ ವನಸೇರಿ - ಸೀತಮ್ಮ
ಸಿರಿ ರಾಮರ ದಂಡ ನಡಸ್ಯಾಳು
ದೊಡ್ಡೋನು ಹನುಮಯ್ಯ ದೊರೆಗೆ ತಾನಂಜೋನು
ತಿದ್ದೀದ ಮೀಸೆ ಸುಲಿಪಲ್ಲು - ಹನುಮಯ್ಯ
ಬಗ್ಗಿ ರಾಮರಿಗೆ ಶರಣೆನ್ನಿ
ಡೊಂಕು ಮೋರೆಯ ಹನುಮ ಲೆಂಕೆಗೆ ಬಲುಚೆಲುವ
ಟೊಂಕದ ಮೇಲೆ ಎಡಗೈಯ - ಇಟುಕೊಂಡು
ಲಂಕಾಕ ಲಾಗ ಹೊಡೆದಾನೂ
ಆನೆಗಾತ್ರದ ಕೆಂಡ ಆರಿಸಿ ಬೀಳುವಾಗ
ಇವನ್ಯಾರೂ ಲೆಂಕೆ ಸುಡುವೋನು - ಹನುಮಂತ
ತಾಸಿನಲೆ ಹಾಕಿದ ಜಲದೀಗೆ
ಉಂಗುರವ ತಂದ ರಂಗಪಿಲ್ಲಿಯ ತಂದ
ಇಂಬಿಯ ವನದಲ್ಲಿ ಸೆರೆಯಿರುವ - ಸೀತೆಯ
ಉಂಗುರವ ತಂದ ಹನುಮಂತ
ರಾಮರು ಬಿಟ್ಟ ಬಾಣ ರಾಜ್ಯಕ್ಕೆ ಹೆಸರಾದೊ
ರಾಮ ದೇವರ ತಮ್ಮ ಲಕ್ಷ್ಮಣ - ಬಿಟ್ಟ ಬಾಣ
ಮೇಲು ಲೋಕದಲಿ ಗುಡುಗೀದೊ
ಮದ್ದು ತಾರೆಂದರೆ ಮರವ ತಂದಿಳುಕಿದ
ಮದಗಿರಿ ಬೆಟ್ಟವ ತಲೆಕೆಳಗ - ಮಾಡಿದ
ಮುದ್ದು ರಾಮರ ಬಂಟ ಹನುಮಂತ
ರಾಮರು ಬರುವಾಗ ರಾಜ್ಯವೆ ಹಗಲಾದೊ

ರಾಮರು ಒಬ್ಬ ಲಕ್ಷ್ಮಣ - ಲಂಕೆಯ ಹನುಮ

ಅವರ್ಹೊವರಾಳಿದರು ದುರ್ಗವ

ಈ ಬಿಡಿ ಬಿಡಿ ತ್ರಿಪದಿಗಳು ಸಮಗ್ರ ರಾಮಾಯಣದ ಚಿತ್ರವನ್ನು ತಂದು ಕೊಡುವಲ್ಲಿ ಸಮರ್ಥವಾಗಿವೆ. ಆಕಾರದಲ್ಲಿ ವಾಮನಾಕಾರದ ಇವು ಅರ್ಥದಲ್ಲಿ, ವ್ಯಾಪ್ತಿಯಲ್ಲಿ, ತ್ರಿವಿಕ್ರಮ ರೂಪಿಯಾಗಿ ನಮ್ಮ ಕಣ್ಣೆದುರಿಗೆ ನಿಲ್ಲುತ್ತವೆ. ಹೇಳುವುದನ್ನು ಸಂಕ್ಷಿಪ್ತವಾಗಿ : ಆದರೆ ಅರ್ಥಪೂರ್ಣವಾಗಿ, ಸ್ವಾರಸ್ಯಪೂರ್ಣವಾಗಿ ಹೇಳುವ ಗುಣ ಜನಪದರಿಗೆ ಹುಟ್ಟಿನೊಡನೆ ಬಂದದ್ದು. ರಾಮ ಲಕ್ಷ್ಮಣರ ಪರಾಕ್ರಮದ ವರ್ಣನೆಯಾಗಲಿ, ಸೀತಾದೇವಿಯ ಸೌಂದರ್ಯದ ವರ್ಣನೆಯಾಗಲಿ ಅಥವಾ ಸೀತೆಯ ಅಪಹರಣಕ್ಕೆ ಕಾರಣವಾದ ಅಂಶವನ್ನಾಗಲಿ ಅವರು ಚಿತ್ರಿಸುವಲ್ಲಿ ಅವರದ್ದೆ ವೈಶಿಷ್ಟ್ಯವನ್ನು ಮೆರೆದಿದ್ದಾರೆ. ಸೀತೆ, ರಾವಣನಿಗೆ ಸೆರೆಯಾಗಲು ಸೀತೆಯೇ ಕಾರಣಳು ಎಂದು ಅವರು ಹೇಳುವ ರೀತಿ ಸೊಗಸಾಗಿ -

ಚೆಂದಾಕೆ ರಾಮರು ಮಿರುಗದ ಬ್ಯಾಟೆಗೆ ಹೋಗಿ

ಅದಂಗ್ಹೋಗಿ ನಂದಿವನಸೇರಿ - ಸೀತಮ್ಮ

ಸಿರಿರಾಮರ ದಂಡ ನಡಸ್ಯಾಳು

ಧ್ವನಿಪೂರ್ಣವಾಗಿ, ಹೆಣ್ಣಿನ ಸ್ವಭಾವವನ್ನೇ ಈ ತ್ರಿಪದಿ ಒಳಗೊಂಡಿದೆ. ಹೆಣ್ಣಿನ ಆಸೆ - ಆಕಾಂಕ್ಷೆ, ಮೊಂಡುತನ, ಹಲವೊಮ್ಮೆ ಅದರಿಂದಾಗುವ ಪರಿಣಾಮ, ಈ ಎಲ್ಲವನ್ನೂ ಅಲ್ಲಿ ಕಾಣಬಹುದು.

"ಸಾಮಾನ್ಯ ಗಾಯಕರು ಹಾಡುವ ಇಂತಹ ತ್ರಿಪದಿಗಳು. ರಾಮಾಯಣದ ಕಥೆಯ ಹಲವು ಸ್ವಾರಸ್ಯವಾದ ಅಂಶಗಳನ್ನು ಹೊರಗೆಡಹುತ್ತವೆ. ರಾಮಾಯಣದ ಸಮಗ್ರ ಚಿತ್ರವನ್ನು ಕೊಡುವ ಈ ತ್ರಿಪದಿಗಳು ಮೂಲ ಜನಪದ ರಾಮಾಯಣವೊಂದರ ಅಸ್ತಿತ್ವದ ಕಡೆ ಬೆರಳು ಮಾಡಿ ತೋರಿಸುತ್ತವೆ. ಬೇರೆ ಬೇರೆ ಅಧ್ಯಾಯಗಳಲ್ಲಿ ಕಂಠಸ್ಥ ಸಂಪ್ರದಾಯದಲ್ಲಿ ಉಳಿದಿದ್ದ ಅಪೂರ್ವ ಜನಪದ ರಾಮಾಯಣವೊಂದು ಕ್ರಮೇಣ ಕೆಲವು ಭಾಗಗಳನ್ನು ಕಳೆದುಕೊಳ್ಳುತ್ತ ಅಲ್ಲಿಷ್ಟು ಇಲ್ಲಿಷ್ಟು ಚೆಲ್ಲಿ ಹೋದ ತ್ರಿಪದಿಗಳಲ್ಲಿ ಮಾತ್ರ ಉಳಿದಂತೆ ತೋರುತ್ತದೆ"[೭] ಇವೆಲ್ಲವನ್ನು ಸಮಗ್ರವಾಗಿ ಸಂಗ್ರಹಿಸಿದಾಗ ಸಂಪೂರ್ಣ ಜನಪದ ರಾಮಾಯಣದ ಸ್ವರೂಪವನ್ನು ಕಾಣಬಹುದು.

ಜನಪದ ರಾಮಾಯಣಕ್ಕೆ ಸಂಬಂಧಿಸಿದಂತೆ ಕೆಲವು ವೃತ್ತಿ ಗಾಯಕರು ಹಾಡುವುದರ ಜೊತೆಗೆ; ಯಕ್ಷಗಾನ ಪ್ರಸಂಗಗಳಲ್ಲಿ, ತ್ರಿಪದಿಗಳಲ್ಲಿ ದೊರೆಯುವ ಕೆಲವು ಭಾಗಗಳು. ಜನಪದ ರಾಮಾಯಣದ ಪ್ರಾಚುರ್ಯವನ್ನು ತಿಳಿಸುತ್ತವೆ. ಇವಲ್ಲದೆ, "ರಾಮಾಯಣ ಮಹಾಭಾರತಗಳಿಗೆ ಸಂಬಂಧಿಸಿದಂತೆ ನಾಡಿನ ಎಲ್ಲ ಕಡೆಗಳಲ್ಲೂ ಐತಿಹ್ಯಗಳು ಕೇಳಿ ಬರುತ್ತವೆ. ಪಾಂಡವರ ಗವಿ, ಭೀಮನ ಹೆಜ್ಜೆ, ರಾಮತೀರ್ಥ, ಸೀತೆಕಟ್ಟೆ, ಧನುಷ್ಕೋಟಿ, ಮುಂತಾದ ವೈವಿಧ್ಯಮಯ ಐತಿಹ್ಯಗಳನ್ನೊಳಗೊಂಡ ನೆಲೆಗಳು ಅಸಂಖ್ಯಾತವಾಗಿವೆ. ಸಿದ್ಧಗಂಗೆಯ ಬೆಟ್ಟವೊಂದರ ಮೇಲೆ ಸೀತೆಯ ಸೆರಗಿನ ಗುರುತಿದೆ. ಚುಂಚನಕಟ್ಟೆಯ ಬಳಿ ಕಾವೇರಿಯಲ್ಲಿ ಸೀತೆ ಮಿಂದುದರಿಂದ ನೀರು

೭. ಡಾ. ಜೀಶಂಪ : ದ.ಕ.ಜ.ಕಾ. ಪ್ರಕಾರಗಳು. ಪು. ೨೮೭

ಇನ್ನೂ ಹಳದಿಯ ವರ್ಣದಲ್ಲೇ ಹರಿಯುತ್ತದೆ. ದಾವಣಗೆರೆಯ ಬೆಟ್ಟದ ನೆತ್ತಿಯೊಂದರಲ್ಲಿ ತಟ್ಟೆಯೋಪಾದಿಯಲ್ಲಿ ದೊಡ್ಡ ಕುಳಿ ಬಿದ್ದಿದೆ; ಅದು ಭೀಮ ಊಟ ಮಾಡಿದ ನೆಲೆ, ಪಾಂಡವಪುರದ ಬೆಟ್ಟದಲ್ಲಿ ಪಾಂಡವರು ವಾಸವಾಗಿದ್ದರು........"[೮]

ಹೀಗೆ ಕರ್ನಾಟಕದಾದ್ಯಂತವೂ, ತಾವು ಕಂಡ ಪ್ರಕೃತಿಯ ಅದ್ಭುತಗಳಿಗೆ, ರಾಮಾಯಣ, ಮಹಾಭಾರತದ ಪ್ರಸಂಗಗಳನ್ನು ಆರೋಪಿಸಿ ಆನಂದಿಸಿದ್ದಾರೆ. ತೃಪ್ತಿ ಪಟ್ಟಿದ್ದಾರೆ. ಕರ್ನಾಟಕದ ಎಲ್ಲ ಊರಿನ ಕೆರೆ ಕಟ್ಟೆ, ಬೆಟ್ಟ, ಗುಡ್ಡಗಳಿಗೆ ಸಂಬಂಧಿಸಿದಂತೆ ಇಂತಹ ಒಂದೊಂದು ಐತಿಹ್ಯಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದು - ಕೇಳಬಹುದು. ಇವೆಲ್ಲವೂ ಜನಪದ ದೃಷ್ಟಿಯಲ್ಲಿ ರಾಮಾಯಣದ ಕಥೆ ಏನು ? ಎಂಬುದನ್ನು ಸ್ಪಷ್ಟಪಡಿಸುತ್ತವೆ. ಅದರ ದೃಷ್ಟಿಯಂತೆ ಅವರ ಈ ಎಲ್ಲ ಸೃಷ್ಟಿಗಳೂ ಕಂಡು ಬರುತ್ತವೆ.

ಪ್ರಸ್ತುತ ವಿಷಯ : 'ಶ್ರೀ ರಾಮಾಯಣ ದರ್ಶನಂ' ಮತ್ತು 'ಜನಪದ ರಾಮಾಯಣಗಳು'. ಕನ್ನಡದಲ್ಲಿ ದೊರೆತಿರುವ ಜನಪದ ರಾಮಾಯಣಗಳನ್ನು ಶ್ರೀರಾಮಾಯಣ ದರ್ಶನಂ ಮಹಾಕಾವ್ಯದೊಂದಿಗೆ ಹೋಲಿಸಿ ನೋಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಹೀಗೆ ಜನಪದ ರಾಮಾಯಣವೊಂದನ್ನು ಶಿಷ್ಟ ರಾಮಾಯಣದೊಂದಿಗೆ ಹೋಲಿಸಿ ನೋಡುವಾಗ ಅನಿವಾರ್ಯವಾಗಿ ಹಲವು ಮಿತಿಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಜನಪದ ರಾಮಾಯಣಕ್ಕೂ, ಶಿಷ್ಟ ರಾಮಾಯಣಕ್ಕೂ ಮೂಲಭೂತವಾಗಿಯೇ ಹಲವು ವ್ಯತ್ಯಾಸಗಳಿರುವುದು ಗಮನಾರ್ಹ. ಶಿಷ್ಟ ಕಾವ್ಯದ ದೃಷ್ಟಿಯಿಂದ, ಜನಪದ ಕಾವ್ಯವನ್ನು ಅಳೆಯುವುದು ಎಷ್ಟು ಸಮಂಜಸ ಎಂಬ ಪ್ರಶ್ನೆಯನ್ನು ಮೊದಲು ಹಾಕಿಕೊಳ್ಳಬೇಕಾಗುತ್ತದೆ. ಅದಕ್ಕೆ ಅದರದ್ದೇ ಆದ ಅಳತೆಗೋಲು ಬೇಕಾಗುತ್ತದೆ. ಜನಪದ ಕಾವ್ಯಕ್ಕೆ ಆದರದ್ದೇ ಆದ ಕೆಲವು ಪರಿಮಿತಿಗಳು ಇರುವುದು ಇದಕ್ಕೆ ಕಾರಣ.

ಹೀಗೆ ಈ ಕಾವ್ಯಗಳನ್ನು ತೌಲನಿಕವಾಗಿ ಪರಿಶೀಲಿಸುವಾಗ, ಪ್ರಧಾನವಾಗಿ ಕಥೆಯಲ್ಲಿ ಕಂಡುಬರುವ ಮಾರ್ಪಾಡುಗಳನ್ನು ಗಮನಿಸಲಾಗಿದೆ. ಅಲ್ಲಿ ಬರುವ ವರ್ಣನೆಗಳ ವೈಶಿಷ್ಟ್ಯವನ್ನು ಸ್ವಲ್ಪ ಮಟ್ಟಿಗೆ ಗಮನಿಸಬಹುದು. ಆದರೆ ಸಾಹಿತ್ಯದ ಇನ್ನಿತರ ಅಂಶಗಳನ್ನು, ಅಷ್ಟಾಗಿ ಗಮನಿಸದಿರುವುದೇ ಸೂಕ್ತ ಅನ್ನಿಸುತ್ತದೆ. ಏಕೆಂದರೆ ಜನಪದ ಕವಿಗಳ ಕಾವ್ಯದ ರೀತಿಯೇ ಬೇರೆ, ನೀತಿಯೇ ಬೇರೆ. ಅವರ ಕಾವ್ಯ ಸೃಷ್ಟಿ ಅವರಿಗೆ ವಿಶಿಷ್ಟವಾದದು. "ಕನ್ನಡ ಜನಪದ ಕಾವ್ಯಗಳಲ್ಲಿ ಪೌರಾಣಿಕ ವಿಷಯಗಳನ್ನೊಳಗೊಂಡಂತೆ ರಾಮಾಯಣ, ಮಹಾಭಾರತ, ಭಾಗವತ ಹಾಗೂ ಶಿವಕಲ್ಯಾಣಕ್ಕೆ ಸಂಬಂಧಪಟ್ಟ ಕತೆಗಳು ಲಭ್ಯವಾದರೂ, ಅವೆಲ್ಲ ಪುರಾಣಕತೆಗಳ ಅಥವಾ ಕಾವ್ಯಗಳ ಜಾಡಿನಲ್ಲಿ ನಡೆಯದೆ ಆ ಕತೆಗಳ ಜನಪದ ಸಂಪ್ರದಾಯವೊಂದನ್ನು ಸ್ಥಾಪಿಸಿರುವುದು ಅತ್ಯಂತ ಗಮನಾರ್ಹ ವಿಷಯವಾಗಿದೆ. ಶಿಷ್ಟ ಕಾವ್ಯಸಂಪ್ರದಾಯದಿಂದ ಯಾವ ರೀತಿಯಿಂದಲೂ ಪ್ರಭಾವಿತನಾಗದೆ, ತನ್ನದೇ ಆದ ರಮ್ಯ ಆವರಣದಲ್ಲಿ ಪುರಾಣ ಕಥೆಗಳನ್ನು ಬೆಳೆಸಿರುವ ರೀತಿ ಮೋಹಕವಾದುದು. ರೈತನ ಬದುಕಿಗೆ ಹತ್ತಿರವಾದಂತೆ, ತಮ್ಮ ಜೀವನಾನುಭವಕ್ಕೆ ನಿಷ್ಠವಾಗಿರುವಂತೆ ಪೌರಾಣಿಕ ವಸ್ತುಗಳನ್ನು ಬಳಸಿಕೊಳ್ಳುವುದು ಜನಪದ ಕವಿಗಳಿಗೆ ಮಾತ್ರ ಸಾಧಿಸಿದ ಒಂದು ವರವೆನ್ನಬೇಕು. ಆದುದರಿಂದಲೇ ಪಾಂಡವರು ಕ್ಷತ್ರಿಯ ಕುಮಾರರಾಗಿ ತೋರದೆ, ಜನಪದ ಕವಿಗಳ ಕಲ್ಪನೆಯಲ್ಲಿ ಒಕ್ಕಲು ಮಕ್ಕಳಾಗಿ

---

೮. ಅದೇ

ತೋರಿ ಬರುತ್ತಾರೆ. ಶಿವ ಪಾರ್ವತಿಯರಾಗಲಿ, ರಾಮ ಸೀತೆಯರಾಗಲಿ, ಕೃಷ್ಣ ರುಕ್ಮಿಣಿಯರಾಗಲೀ ಯಾವುದೋ ಅಲೌಕಿಕ ಆವರಣದಲ್ಲಿ ಚಿತ್ರಿತವಾಗಿರುವ ಅಜ್ಞಾತ ದೇವತೆಗಳಾಗಿತೋರದೆ ಮಾನವರಂತೆಯೇ ಕಷ್ಟಸುಖಗಳನ್ನು ಹಂಚಿಕೊಳ್ಳುವ ಜೀವ ಭಾಗಗಳಿಂದ ಕೂಡಿದ ಮಣ್ಣಿನ ಮಕ್ಕಳಾಗಿ ಕಾಣಿಸುತ್ತಾರೆ. ಅವರಿಗೆ ಸುಖವುಂಟು, ದುಃಖವುಂಟು, ನೋವು ನಲಿವು ಎಲ್ಲವೂ ಉಂಟು ; ಸೋಲು ಗೆಲುವುಗಳೂ ಉಂಟು"[೯] ಸಾಮಾನ್ಯ ಮಾನವರಂತೆಯೇ ಅವರನ್ನು ಕಂಡು ಚಿತ್ರಿಸಿರುವುದು ಜನಪದ ಕಾವ್ಯಗಳ ಒಂದು ವೈಶಿಷ್ಟ್ಯವಾಗಿದೆ.

ಯಕ್ಷಗಾನದ ರಾಮಾಯಣ ಪ್ರಸಂಗಗಳು ಸೇರಿದಂತೆ, ಜನಪದ ಗಾಯಕರು ಹಾಡುವ ಕೆಲವು ಬಿಡಿಭಾಗಗಳು ಈಗ ಲಭ್ಯವಾಗುತ್ತವೆ. ಸೀತೆಯ ಜನನ, ಸೀತೆಯ ಸ್ವಯಂವರ, ಲಂಕಾದಹನ, ಸೀತಾಪಹರಣ, ಇಂತಹ ಹಲವು ಬಿಡಿ ಭಾಗಗಳೂ ದೊರೆಯುತ್ತವೆ. ಈ ಸಂದರ್ಭದಲ್ಲಿ ನಾನು ಸ್ವಲ್ಪ ಸಮಗ್ರ ಎನ್ನಬಹುದಾದ ಹಾಗೂ, ಶ್ರೀರಾಮಾಯಣ ದರ್ಶನಂ, ಕಾವ್ಯಕ್ಕೆ ಸ್ವಲ್ಪ ಹತ್ತಿರವಾಗಬಹುದಾದ - 'ತಂಬೂರಿ ಸಂಪ್ರದಾಯದ ರಾಮಾಯಣ' ಹಾಗೂ 'ಭಾಗವಂತಿಕೆ ಸಂಪ್ರದಾಯದ ರಾಮಾಯಣ'ಗಳನ್ನು ಪ್ರಮುಖವಾಗಿಟ್ಟುಕೊಂಡು, ವರ್ಣನೆಯ ಸಂದರ್ಭದಲ್ಲಿ ಉಳಿದ ಭಾಗಗಳನ್ನು ಗಮನಿಸಿದ್ದೇನೆ. ಮೊದಲು, 'ಶ್ರೀ ರಾಮಾಯಣ ದರ್ಶನಂ', ಮತ್ತು 'ತಂಬೂರಿ ಸಂಪ್ರದಾಯದ ರಾಮಾಯಣ'ವನ್ನು ಪರಿಶೀಲಿಸಬಹುದು.

ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಕನ್ನಡದ ಮಹಾಕಾವ್ಯಗಳಲ್ಲಿ ಒಂದು. ಆಧುನಿಕ ಯುಗದ ಮಹಾಕಾವ್ಯವೆನಿಸಿ, ಕನ್ನಡದ ಕೀರ್ತಿಯನ್ನು ಬೆಳಗಿದ ಕೃತಿ. ಸಂಸ್ಕೃತದ ವಾಲ್ಮೀಕಿ ರಾಮಾಯಣವೇ ಇದಕ್ಕೂ ಆಕರ ಗ್ರಂಥವೆನಿಸಿದರೂ - ಕೇವಲ ಕಥಾ ಚೌಕಟ್ಟಿನಲ್ಲಿ ಮಾತ್ರ. ವಾಲ್ಮೀಕಿ ಕಥೆಯನ್ನು ನೆಪವಾಗಿಟ್ಟುಕೊಂಡು, ಶ್ರೀರಾಮಾಯಣ ದರ್ಶನಂ ಕಲಾತ್ಮಕತೆಯಲ್ಲಿ ಕುವೆಂಪು ಅವರು ತಮ್ಮ ಪ್ರತಿಭೆಯನ್ನು ಅಸಾಧಾರಣ ರೀತಿಯಲ್ಲಿ ತೋರಿದ್ದಾರೆ. ಕಥೆ ಹಳೆಯದಾದರೂ ಕುವೆಂಪು ಅವರು ಹೊಸ ದರ್ಶನದ ಮೂಲಕ ರಸವತ್ತಾಗಿಸಿ, ಸರ್ವಾದರಣೀಯವಾಗಿಸಿದ್ದಾರೆ, ಅವರೇ ಹೇಳುವಂತೆ :

ಪಿಂತೆ

ವಾಲ್ಮೀಕಿಯುಲಿದ ಕಥೆಯಾದೊಡಂ, ಕನ್ನಡದಿ
ಬೇರೆ ಕಥೆಯೆಂಬಂತೆ, ಬೇರೆ ಮೈಯಾಂತಂತೆ
ಮರುವುಟ್ಟುವಡೆದಂತೆ ಮೂಡಿದೀ ಕಾವ್ಯಮಂ
ವಿಶ್ವವಾಣಿಗೆ ಮುಡಿಯ ಮಣಿ ಮಾಡಿಹೆನ್

ಕವಿಯೇ ಹೇಳುವಂತೆ ಇದೊಂದು 'ಮರುವುಟ್ಟುವಡೆದ' ಕಥೆ. ಅಷ್ಟೇ ಅಲ್ಲ, ಶ್ರೀರಾಮಾಯಣ ದರ್ಶನಂ -

ಬಹಿರ್ಘಟನೆಯಂ ಪ್ರತಿಕೃತಿಸುವಾ ಲೌಕಿಕ
ಚರಿತ್ರೆಯಲ್ತಿದು, ಅಲೌಕಿಕ ನಿತ್ಯಸತ್ಯಂಗಳಂ

೯. ಅದೇ

ಪ್ರತಿಮಿಸುವ ಸತ್ಯಸ್ಯ ಸತ್ಯ ಕಥನಂ ಕಣಾ...........

ಎನ್ನುತ್ತಾರೆ. ಆದರೆ ಜನಪದ ರಾಮಾಯಣಗಳಲ್ಲಿ ಈ ಯಾವ ದರ್ಶನವನ್ನಾಗಲಿ, ಚಿಂತನೆ ಆಲೋಚನೆಗಳನ್ನಾಗಲಿ ಅಥವಾ ಕಲಾತ್ಮಕತೆಯ ನಿರ್ದಿಷ್ಟ ರೂಪವನ್ನಾಗಲಿ ಕಾಣಲು ಸಾಧ್ಯವಿಲ್ಲ. ಅಲ್ಲಿ ಪ್ರಧಾನವಾಗಿ ಕಂಡು ಬರುವುದು ಒಂದು ಕಥೆ. ಆ ಕಥೆಯನ್ನು ಹೇಳಿಕೊಂಡು ಹೋಗಲು ಅವರದ್ದೇ ಆದ ಒಂದು ವಿಶಿಷ್ಟ ತಂತ್ರ. ಹೆಚ್ಚು ವರ್ಣನೆಗಳಿಗೂ ಅವರು ಕಾಲ ವ್ಯಯ ಮಾಡುವುದಿಲ್ಲ. ಆದರೆ ಕೊಡುವ ವರ್ಣನೆಗಳನ್ನು ಆತ್ಮೀಯವಾಗಿ, ತೊಡಕಿಲ್ಲದೆ ಮನಮುಟ್ಟುವಂತೆ ಕೊಡಬಲ್ಲರು. ಆಯಾ ಸಂದರ್ಭದ ಘಟನೆಗಳನ್ನು ನೇರವಾಗಿ ಸ್ಪಷ್ಟವಾಗಿ ಹೇಳುವ ಒಂದು ವೈಶಿಷ್ಟ್ಯವನ್ನು ಜನಪದರಲ್ಲಿ ಕಾಣಬಹುದು.

ಮೊದಲು ಜನಪದ ರಾಮಾಯಣದಲ್ಲಿನ ಒಂದು ಘಟನೆಯನ್ನು ತೆಗೆದುಕೊಂಡು, ಅದೇ ಘಟನೆ ಶ್ರೀರಾಮಾಯಣ ದರ್ಶನಂನಲ್ಲಿ ಹೇಗೆ ಮೂಡಿ ಬಂದಿದೆ ಎಂಬುದನ್ನು ಕೆಲವು ಪರಿಮಿತಿಗಳೊಡನೆ ಪರಿಶೀಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ತಂಬೂರಿ ಸಂಪ್ರದಾಯದವರು ಹಾಡುವ 'ಸಂಪೂರ್ಣ ರಾಮಾಯಣ'ದ ಕಥೆ ಶಿಷ್ಟ ರಾಮಾಯಣದ ಕಥೆಗಿಂತ ಭಿನ್ನವಾದುದು, "ಈ ಸಂಪೂರ್ಣ ರಾಮಾಯಣದ ಕಥೆಯನ್ನು ಅನುಸರಿಸದೆ ಭಿನ್ನ ಹಾದಿಯನ್ನು ಹಿಡಿದಿರುವುದು ಇಲ್ಲಿ ಎತ್ತಿ ಹೇಳಬೇಕಾಗಿರುವ ವಿಷಯ. ಕೆಲವು ವಿಚಾರಗಳಲ್ಲಿ ಹೋಲಿಕೆ ಕಾಣಿಸಿಕೊಂಡರೂ, ಅದು ವಾಲ್ಮೀಕಿಯ ಅನುಸರಣೆಯಿಂದಾದು ದಲ್ಲದೆ, ಇವೆರಡಕ್ಕೂ ಮೂಲವಾಗಿರುವ ಮತ್ತು ಎಲ್ಲಕ್ಕೂ ಸಾಮಾನ್ಯವಾಗಿರುವ ಸಾರ್ವತ್ರಿಕ ಕಥಾಮಾದರಿ ಎಂಬುದನ್ನು ಮನಗಾಣಬೇಕಾಗುತ್ತದೆ. ವಾಲ್ಮೀಕಿಗೂ - ರಾಮ ಕಥೆಗೂ ಇರುವ ವೈಯಕ್ತಿಕ ಸಂಬಂಧವಾಗಲಿ, ಉತ್ತರ ರಾಮಾಯಣದ ಕಥನ ರೀತಿಯಾಗಲಿ ಯಾವುದೂ ಇಲ್ಲಿನ ಕಥೆಯಲ್ಲಿ ಕಾಣಿಸುವುದಿಲ್ಲ. ಇದು ವಾಲ್ಮೀಕಿಯ ರಾಮಾಯಣದ ಪರಂಪರೆಯ ಪ್ರಭಾವದಿಂದ ಬಿಡಿಸಿಕೊಂಡಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ, ಪರಿಣಾಮವಾಗಿ ಪ್ರತ್ಯೇಕ ಪರಂಪರೆಯಿಂದಾಗಿ ಜನಪದದಲ್ಲಿ ಬಹಳ ಕಾಲ ಹರಿದು ಬಂದಿರುವ ಕತೆಯೊಂದನ್ನು ಸಾಕ್ಷಿ ಪಡಿಸುತ್ತದೆ. ಈ ಎಲ್ಲ ಕಾರಣಗಳಿಂದ ತಂಬೂರಿಯವರ ರಾಮಾಯಣ ಪ್ರಕೃತ ಗ್ರಂಥದಲ್ಲಿ ವಿಶೇಷ ಸ್ಥಾನವನ್ನು ಸ್ಥಾಪಿಸುತ್ತದೆ ; ಮತ್ತು ರಾಮಾಯಣದ ತೌಲನಿಕ ಅಧ್ಯಯನಕ್ಕೆ ಕೆಲವು ಪೂರಕ ಸಾಮಗ್ರಿ ಗಳನ್ನದು ಒದಗಿಸುತ್ತದೆ."[೧೦]

ತಂಬೂರಿ ಸಂಪ್ರದಾಯದ ಜನಪದ ರಾಮಾಯಣದಲ್ಲಿ 'ಉತ್ತರ ರಾಮಾಯಣ'ದ ಪ್ರಸ್ತಾಪವೇ ಇಲ್ಲ. ರಾವಣನ ಅಂತ್ಯ ಹಾಗೂ ಶ್ರೀರಾಮನ ಪಟ್ಟಾಭಿಷೇಕದೊಂದಿಗೆ ಕಥೆ ಮುಕ್ತಾಯವಾಗುತ್ತದೆ. ಆದರೆ 'ಉತ್ತರ ರಾಮಾಯಣ'ಕ್ಕೇ ಸಂಬಂಧಿಸಿದ ಕಾವ್ಯವೊಂದು ನೀಲಗಾರರಲ್ಲಿ ಲಭ್ಯವಾಗುತ್ತದೆ. ವೃತ್ತಿಗಾಯಕ ಪರಂಪರೆಯ ಈ ಕಲಾವಿದರಲ್ಲಿ ಈ ಭಾಗ ಸ್ವತಂತ್ರವಾಗಿ ಉಳಿದು ಬಂದಿದೆ. ಅತ್ಯಂತ ಕುತೂಹಲಕಾರಿಯಾದ ಹಲವು ವೈಶಿಷ್ಟ್ಯಗಳನ್ನು ಒಳಗೊಂಡು ಈ ಭಾಗ ತುಂಬ ಆಕರ್ಷಕವಾಗಿದೆ. ವಾಲ್ಮೀಕಿ ರಾಮಾಯಣಕ್ಕೂ - ಇದಕ್ಕೂ ಅನೇಕ ಅಂಶಗಳಲ್ಲಿ ಭಿನ್ನತೆ ಇರುವುದು ಕಂಡು ಬರುತ್ತದೆ. ನೀಲಗಾರರ ರಾಮಾಯಣ ದಲ್ಲಿಯೂ ಶ್ರೀರಾಮ ಲೋಕಾಪವಾದಕ್ಕೆ ಅಂಜಿ ಸೀತೆಯನ್ನು ಕಾಡಿಗೆ ಲಕ್ಷ್ಮಣನೊಂದಿಗೆ ಕಳುಹಿಸುತ್ತಾನೆಯಾದರೂ, ಅದರ ಮುಂದಿನ ಭಾಗಗಳೂ

೧೦. ಡಾ. ರಾಗೌ : ಜನಪದ ರಾಮಾಯಣ (ಪ್ರಸ್ತಾವನೆ)

ಜನಪದ ಧಾಟಿಯವೇ ಆಗಿದ್ದು ಮನ ಮುಟ್ಟುತ್ತವೆ.

ಸೀತೆಯನ್ನು ಕಾಡಿಗಟ್ಟಿ ಅವಳ ಶಿರಚ್ಛೇದನವನ್ನು ಮಾಡುವಂತೆ ಆಜ್ಞೆ ಮಾಡಿದ ಮೇಲೆ, ರಾಮನಿಗೂ ದುಃಖವಾಗುತ್ತದೆ. ಕಾಡಿನಿಂದ ಹಿಂತಿರುಗಿದ ಲಕ್ಷ್ಮಣನನ್ನು ಕಂಡ ಕೂಡಲೇ ಅವನ ದುಃಖದ ಕಟ್ಟೆಯೊಡೆದು ಕಣ್ಣೀರು ಹರಿಯುತ್ತದೆ. ಆ ಕಣ್ಣೀರ ಧಾರೆ ಹೊಳೆಯಾಗಿ ಹರಿದು ಸೀತೆಗೆ ಅಡ್ಡವಾಗುತ್ತದೆ. ಆ 'ಕಣ್ಣೀರ ಹೊಳೆ'ಯನ್ನು ಸೀತೆ ದಾಟಬೇಕಾಗಿ ಬರುತ್ತದೆ. ಆಗ ಲಕ್ಷ್ಮಣ 'ಮರಿಜವಳಿಕಡ್ಡಿ'ಯನ್ನು ಮಂತ್ರಿಸಿ ಎರಡು ಮೀನುಗಳಾಗಿ ಮಾಡಿ ಆ ಹೊಳೆಯಲ್ಲಿ ತೇಲಿ ಬಿಟ್ಟು, ಆಚೆಯ ದಡಕ್ಕೆ ಸೀತೆಯನ್ನು ಮುಟ್ಟಿಸುವಂತೆ ಸೂಚಿಸುತ್ತಾನೆ. ಅವೇ 'ಅವಲು ಮೀನು - ಕುಶಲ ಮೀನು'. ಅವೆರಡೂ ಸೀತೆಯನ್ನು ಆ ದಡಕ್ಕೆ ಮುಟ್ಟಿಸಿ, ಸೀತಾದೇವಿಯ ಮುಂದೆ ತಮ್ಮ ಒಂದು ಬೇಡಿಕೆಯನ್ನು ಮುಂದಿಡುತ್ತವೆ. ತನ್ನ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳಿಗೆ ತಮ್ಮ ಹೆಸರಿಡಬೇಕೆಂದು ಪ್ರಾರ್ಥಿಸುತ್ತವೆ. ಹೀಗೆ ಸೀತೆ ತನ್ನ ಮಕ್ಕಳಿಬ್ಬರಿಗೆ 'ಕುಶ - ಲವ'ರೆಂದು ಹೆಸರಿಡಲೂ ಈ 'ಅವಲು - ಮೀನು, ಕುಶಲು - ಮೀನು'ಗಳೇ ಕಾರಣ ಎಂಬಂತೆ ಜನಪದ ಕವಿ ಚಿತ್ರಿಸುತ್ತಾನೆ.

ಮತ್ತೊಂದು ಇಂತಹದೇ ಅಪೂರ್ವ ಬದಲಾವಣೆ ಜನಪದ ಕಾವ್ಯದಲ್ಲಿ ಕಂಡು ಬರುತ್ತದೆ. ಇದರ ಪ್ರಕಾರ, ವಾಸ್ತವವಾಗಿ ಸೀತೆಗೆ ಜನಿಸಿದುದು ಒಂದೇ ಮಗು. ಆ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ, ತಂದೆ ವಾಲ್ಮೀಕಿಯ ಬಳಿ ಬಿಟ್ಟು ಗಂಗೆ ಪೂಜೆಗೆ ಹೊರಡುತ್ತಾಳೆ. ಕುತೂಹಲದಿಂದ ಮಧ್ಯೆ ಹಿಂತಿರುಗಿ ಬಂದು ನೋಡುತ್ತಾಳೆ. ತಂದೆ ನಿದ್ರೆ ಹೋಗಿರುತ್ತಾನೆ. ಆಗ ಸೀತೆ ಮಗುವನ್ನೂ ತನ್ನ ಜೊತೆಯಲ್ಲಿಯೇ ತೆಗೆದುಕೊಂಡು ಹೋಗುತ್ತಾಳೆ. ಇದಾದ ಮೇಲೆ ತಂದೆ ವಾಲ್ಮೀಕಿಗೆ ಎಚ್ಚರವಾಗುತ್ತದೆ. ತೊಟ್ಟಿಲಲ್ಲಿ ಮಗುವಿರುವುದಿಲ್ಲ. ಸೀತೆಗೆ ಏನೆಂದು ಹೇಳುವುದೆಂದು ಹೆದರಿ, ದರ್ಭೆಯೊಂದರಿಂದ ಅಂತಹದೇ ಮಗುವನ್ನು ಸೃಷ್ಟಿಸಿ ತೊಟ್ಟಿಲಲ್ಲಿ ಮಲಗಿಸುತ್ತಾನೆ. ಸೀತೆ ಹಿಂತಿರುಗಿ ಬಂದಾಗ ತೊಟ್ಟಿಲಲ್ಲಿ ಮಲಗಿರುವ ಮಗುವನ್ನು ಕಂಡು ಇಬ್ಬರೂ ಆಶ್ಚರ್ಯ ಪಡುತ್ತಾರೆ. ವಾಲ್ಮೀಕಿ ಸ್ವಲ್ಪ ಅಪ್ರತಿಭನಾದರೂ, ಅದನ್ನು ತೋರಿಸಿಕೊಳ್ಳದೆ ತಕ್ಷಣ ಪರಿಹಾರ ವೊಂದನ್ನು ಕಂಡುಕೊಳ್ಳುತ್ತಾನೆ. ಆ ಎರಡೂ ಮಕ್ಕಳೂ ಸೀತೆಯದೇ ಎಂದು ವಾದಿಸುತ್ತಾನೆ. ಒಂದನ್ನು ಸ್ವಲ್ಪ ಕಾಲ ಸುಮ್ಮನೆ ಮರೆಮಾಡಿದ್ದೆ ಎಂದು ತೇಲಿಸಿಬಿಡುತ್ತಾನೆ. ಸೀತೆ ಅದನ್ನು ಒಪ್ಪಿಕೊಂಡು ಸುಮ್ಮನಾಗುತ್ತಾಳೆ. ಹೊಳೆಯನ್ನು ದಾಟುವಾಗ ಆ ಮೀನುಗಳಿಗೆ ಮಾತುಕೊಟ್ಟಂತೆ ಮಕ್ಕಳಿಬ್ಬರಿಗೂ - 'ಕುಶಲಯ್ಯ' 'ಅವಲಯ್ಯ' ಎಂದು ಹೆಸರಿಡುತ್ತಾಳೆ.

ಜನಪದ ಕವಿ ಮಾಡಿಕೊಂಡಿರುವ ಈ ಒಂದು ಬದಲಾವಣೆ, ಜನಪದ ಪ್ರತಿಭೆಗೆ ತಕ್ಕನಾಗಿರುವುದಷ್ಟೇ ಅಲ್ಲ. ಹೆಚ್ಚು ಕುತೂಹಲವುಂಟು ಮಾಡುವುದೂ ಆಗಿದೆ. ಅದರ ವಿಶಿಷ್ಟ ಪ್ರತಿಭೆಗೆ ಒಂದು ಸ್ಪಷ್ಟ ನಿದರ್ಶನ ಕೂಡ. "...........ಈ ಜನಪದ ಕಾವ್ಯ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ. ರಾಮಸೀತೆಯರ ಗಾಢವಾದ ಪ್ರೇಮ, ಲಕ್ಷ್ಮಣನ ಸಮಯೋಚಿತ ವರ್ತನೆ, ಕುಶ - ಲವರ ಸಾಹಸದ ಚಿತ್ರಣ, ಅಪೂರ್ವ ವರ್ಣನೆಗಳು, ಇವುಗಳಿಂದಾಗಿ ಈ ಜನಪದ ಉತ್ತರ ರಾಮಾಯಣ ಒಂದು ಉತ್ತಮ ಖಂಡ ಕಾವ್ಯವಾಗಿ ನಿಂತಿದೆ."[೧೧] ಜನಪದ ಕವಿಗಳ ಕಲ್ಪನೆ ಅಪೂರ್ವ ರೀತಿಯದು. ಆ ಒಂದು ಸಂದರ್ಭದ ಹಿನ್ನೆಲೆಯಲ್ಲಿ ಅವು ಅಚ್ಚುಕಟ್ಟಾಗಿಯೇ ತೋರುತ್ತವೆ. ಅವುಗಳನ್ನು

೧೧. ಡಾ. ಜೀಶಂಪ : ದ.ಕ.ಜ.ಕಾ. ಪ್ರಕಾರಗಳು. ಪು. ೨೮೮

ಹೆಚ್ಚು ಹಿಂಜಿ - ಹಿಂಡಿದಾಗ ಮಾತ್ರ ಸ್ವಲ್ಪ ಜಾಳೆನಿಸಬಹುದೇ ಹೊರತು ಉಳಿದಂತೆ ಅವು ವಿಜೃಂಭಿಸುತ್ತವೆ. ಇಲ್ಲಿ 'ಉತ್ತರ ರಾಮಾಯಣ'ದಲ್ಲಿ ಬರುವ ಸಂದರ್ಭಗಳು ಅಂತಹವು.

ತಂಬೂರಿಯವರು ಹಾಡುವ ರಾಮಾಯಣದಲ್ಲಿ ಈ ಉತ್ತರ ರಾಮಾಯಣದ ಪ್ರಸಂಗ ಬರುವುದಿಲ್ಲ. ಶ್ರೀರಾಮಾಯಣ ದರ್ಶನಂನಲ್ಲಿಯೂ ಉತ್ತರ ರಾಮಾಯಣ ಪ್ರಸಂಗವಿಲ್ಲ. ಆದರೆ, 'ದಶಾನನ ಸ್ವಪ್ನಸಿದ್ಧಿ'ಯಲ್ಲಿ ಉತ್ತರ ರಾಮಾಯಣ ಪ್ರಸಂಗದ ಒಂದಂಶವನ್ನು ಕುವೆಂಪು ಅವರು ಅತ್ಯಂತ ಧ್ವನಿಪೂರ್ಣವಾಗಿ ತಂದಿದ್ದಾರೆ, ರಾವಣನು ತನ್ನ ಸಂಕಲ್ಪ ಸಿದ್ಧಿಗೆ ಮಹಾ ದುರ್ಗೆಯ ಆರಾಧನೆಯಲ್ಲಿ ತೊಡಗಿ, ವರವನ್ನು ಬೇಡಲು ತೊಡಗಿದ ಸಂದರ್ಭದಲ್ಲಿ ದುರ್ಗೆಯ ಕಾರಣ ದಿಂದಲೇ ರಾವಣನು ಸಮಾಧಿ ಸ್ಥಿತಿಗೇರುತ್ತಾನೆ. ಆಗ ಅವನು ಕಾಣುವ ಹಲವು ಕನಸುಗಳು ಕುಂಭಕರ್ಣ ಮತ್ತು ರಾವಣರಿಬ್ಬರೂ ಮಕ್ಕಳಾಗಿ ಸೀತೆಯ ತೊಡೆಯ ಮೇಲೆ ಮಲಗುವ ಒಂದು ಭವ್ಯಾದ್ಭುತ ಚಿತ್ರವನ್ನು ಕುವೆಂಪು ಅವರು ಕೊಡುತ್ತಾರೆ. ಜಗದಂಬೆ ಶಿವೆ ಮತ್ತು ರಾವಣರ ಸಂಭಾಷಣೆಯಿಂದಲೇ ಅದು ಆರಂಭವಾಗುತ್ತದೆ. ರಾವಣನು ತನ್ನ ಬೇಡಿಕೆಗಳನ್ನು ಒಂದೊಂದಾಗಿ ಮುಂದಿಡುತ್ತಾನೆ :

"ದಶರಥ ಸುತಂ
ರಣದಿ ಸೋಲ್ವಂತೆನಗೆ ಮಾಡು ಕೃಪೆಯನ್ !"
"ತಥಾಸ್ತು !"
"ಸೀತೆ ವಶವಪ್ಪಂತೆ !"
"ತಥಾಸ್ತು !"
"ನೀಂ ತಾಯ್ ದಿಟಂ !
ನೀಂ ಕೃಪಾಬ್ಧಿಯೆ ದಿಟಂ ! ರಾಮಜಯಕಿಂ ಮಿಗಿಲ್
ಸೀತೆ ಸೋಲ್ವುದೆ ಸೋಜಿಗಂ !"
"ಸೋಜಿಗಮದೇಕೆ ?
ಒಲಿದ ಕಂದಗೆ ತಾಯಿ ಸೋಲ್ವುದೇನಚ್ಚರಿಯೆ
ಸಹಜಂ !"
"ಅದೇನ್ ಮತ್ತೆ ವಕ್ರೋಕ್ತಿ !"
"ವಕ್ರಮೇನ್ !
ನಿನ್ನೆರ್ದೆಯ ಗೂಢವೃತ್ತಿಗೆ ನನ್ನದುಕ್ತಿಯಯ್ !"
"ಸೀತೆ ಸೋಲ್ವಳೆ ? ರಾಮನಂ ಗೆಲ್ವೆನಿದು ದಿಟಮೆ ?"
"ಸೀತೆಯಾಲಿಂಗಿಪಳ್, ಚುಂಬಿಸೆರ್ದೆಗೊತ್ತುವಳ್ ;
ರಣದಿ ರಾಮನ ಸೋಲಿಷಯ್, ಪುನರ್ ಜನ್ಮದೊಳ್ !
ಕಾಣ್ ತೋರ್ಪುದಂ" :

ಎಂದು ಹೇಳಿ, ಮುಂದಿನ ಅದ್ಭುತ ದೃಶ್ಯವನ್ನು ಕುವೆಂಪು ಅವರು ಅಪೂರ್ವ ರೀತಿಯಲ್ಲಿ ಕಂಡು ಡಿದಿದ್ದಾರೆ:

......................ಬಿರುಬಿರನೆ
ತೇಲ್ದುದಸುರನ ನೌಕೆ, ನೆಗೆನೆಗೆದು ಮುಂದುರುಳಿ
ಧುಮ್ಮಿಕ್ಕಿದುದು ದುಢಮ್ಮನೆ ಕುದುರೆಮುಂಡಂ
ನದೀಜೀವನಂ ನೆತ್ತರೋಕುಳಿಯಾಗಿ ಕೆರಳೆ.
ತೆರೆ ಮುಸುಗಿದುದು. ದೋಣಿ ಮಗುಚಿತು ದರ್ಶನಂ
ರಕ್ತಮಯ ಜೀವನ ತರಂಗಿಣಿಯ ವಾಹದೊಳ್
ಸಿಲ್ಕಿದನ್ ; ತೇಲ್ದನೀಜಿದನಯ್ಯೊ ಕಂತಿದನ್ ;
ಮುಳುಗಿದನ್, ಮುಳುಗಿದನ್, ಕೆಳಕೆಳಗೆ ಮುಳುಗಿದನ್,
ತೆಕ್ಕನೆಯ, ಕುಂಭಕರ್ಣನ ಕಂಡು' ಕೂಗಿದನ್
ತಮ್ಮನಂ, ಬರ್ದುಕುವಾಸೆಗೆ ಸಹೋದರರೀರ್ವರುಂ
ಹೊಳೆಯೊಡನೆ ಹೋರಾಡಿ ದಡಕೇರ್ದರೇನಿದೇನ್
ಶಿಶುಗಳೊಲ್ ! ಸುತ್ತಲೆಸೆದಿರ್ದುದೊಂದಾಂತಮಂ
ಚಿತ್ರಕಾದುದು ತಪಶ್ಶಾಂತಿ ಮರೆತುದು ಮನಂ
ತನ್ನ ಪಿಂತಣ ಪೂರ್ವಮಂ ನೆನೆಯಲೆಳಸಿದನ್
ಯತ್ನಮನಿತುಂ ವ್ಯರ್ಥಮಾದತ್ತು ವಿಸ್ಮೃತಿಯ
ವೈತರಣಿಗಳ್ದುದಾತ್ಮಂ, ಶಿಶು ಶರೀರದಿಂ
ಸಹೋದರಂ ಕುಂಭಕರ್ಣಂ ಪಸುಳೆಯೋಲಂತೆ
ರೋದಿಸುತ್ತಿರ್ದುದಂ ಕಂಡಾ ಶಿಶುಶರೀರಿ
ತಾನುಮಳತೊಡಗಿದನು ದೈತ್ಯೇಂದ್ರನಾಗಳೆಯೆ
ಪುಟ್ಟಿದರ್ಭಕನಂತೆವೊಲ್, ಬಂದಳಲ್ಲಿಗದೊ
ಸೀತೆ ! ಮಕ್ಕಳನೆತ್ತಿ ಮುದ್ದಾಡಿದಳ್ ! ಪಾಡಿ
ಮೊಲೆಯೂಡಿದಳ್ ! ತೊಡೆಯನೇರಿಸಿದಳೆರ್ದೆಗಪ್ಪಿ
ಲಲ್ಲಯ್ಯಿದಳು ತನ್ನವಳಿಮಕ್ಕಳಂ, ತಮ್ಮನಂ
ಕುಂಭಕರ್ಣನನೊತೆ ತನ್ನನ್ನುಂ !

ಆ ಕನಸನ್ನು ಕಂಡ ರಾವಣ ಬೆಚ್ಚಿ ಎಚ್ಚರಗೊಳ್ಳುತ್ತಾನೆ. ಸೀತೆಯ ಬಗೆಗೆ ಅವನ ಅಂತರಾಳ ದಲ್ಲಿ ಅಡಕವಾಗಿರುವ ಸಾತ್ವಿಕ ಭಾವನೆಯನ್ನು ಕುರಿತು ಮಂಡೋದರಿ ಹೇಳುತ್ತಾಳೆ. ಕುವೆಂಪು

ಅವರು ರಾವಣನ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಈ ಸನ್ನಿವೇಶವನ್ನು ಸಾರ್ಥಕವಾಗಿ ಬಳಸಿಕೊಂಡು ಉತ್ತರ ರಾಮಾಯಣದ ಸನ್ನಿವೇಶವನ್ನೂ ಧ್ವನಿಪೂರ್ಣವಾಗಿ ತಂದಿದ್ದಾರೆ.

ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂಬಂಧವಾದ ಸಾಹಿತ್ಯವೇ ಹೆಚ್ಚು. ಅಲ್ಲಿ ಬರುವ ಸಾಹಿತ್ಯದಲ್ಲಿ ಸ್ತ್ರೀ ಪ್ರಾಧಾನ್ಯತೆಯೇ ಹೆಚ್ಚು. ಜನಪದ ರಾಮಾಯಣವೂ ಇದಕ್ಕೆ ಹೊರತಾಗಿಲ್ಲ. ಬಿಡಿ ಹಾಡಿನಿಂದ ಹಿಡಿದು, ಸಮಗ್ರ ರಾಮಾಯಣದವರೆಗೂ ಸೀತಾ ಪ್ರಧಾನವಾದ ಅಂಶವನ್ನೇ ಹೆಚ್ಚಾಗಿ ಕಾಣುತ್ತೇವೆ.

'ಸೀತೆಯ ಜನನ ವೃತ್ತಾಂತ'ದಿಂದಲೇ ತಂಬೂರಿ ಸಂಪ್ರದಾಯದ ರಾಮಾಯಣದ ಕಥೆ ಆರಂಭವಾಗುತ್ತದೆ. ಆದರೆ ಎಲ್ಲಿಯೂ ದಶರಥನ ಪುತ್ರಾಪೇಕ್ಷೆಯಾಗಲಿ ಅಥವಾ ರಾಮಾದಿಗಳ ಜನನ ವೃತ್ತಾಂತವಾಗಲಿ ಪ್ರಸ್ತಾಪವಾಗಿಲ್ಲ. ಜನಪದ ರಾಮಾಯಣದಲ್ಲಿ ಸೀತಾಜನನ ವೃತ್ತಾಂತಕ್ಕೆ ಕೊಟ್ಟಿರುವ ಮಹತ್ವ, ಶಿಷ್ಟ ರಾಮಾಯಣದಲ್ಲಿ ಶ್ರೀರಾಮ ಜನನಕ್ಕೆ ಕೊಟ್ಟಿರುವುದು ಗಮನಾರ್ಹ. ಶಿಷ್ಟ ರಾಮಾಯಣದಲ್ಲಿ ಸೀತೆಯ ಜನನ ವೃತ್ತಾಂತಕ್ಕೆ ಪ್ರಾಧಾನ್ಯತೆ ಇಲ್ಲ : ಜನಪದ ರಾಮಾಯಣದಲ್ಲಿ ಶ್ರೀರಾಮ ಜನನ ವೃತ್ತಾಂತಕ್ಕೆ ಪ್ರಾಧಾನ್ಯತೆ ಇಲ್ಲ. ಆದರೆ ಜನಪದ ರಾಮಾಯಣದಲ್ಲಿ ಸೀತಾಜನನಕ್ಕೆ ಸಂಬಂಧಿಸಿದಂತೆ ವಿವಿಧ ಪಾಠಾಂತರಗಳು ದೊರೆಯುತ್ತವೆ. ಅಷ್ಟೇ ಅಲ್ಲ, ಅವು ಜನಪದರ ವಿಶಿಷ್ಟ ಪ್ರತಿಭೆಗೆ, ಕಲ್ಪನೆಗೆ ಮೀಸಲಾದುವುಗಳೇ ಆಗಿವೆ.

ಜನಪದ ರಾಮಾಯಣದಲ್ಲಿ ಸೀತೆ, ರಾವಣನ ಸ್ವಂತ ಮಗಳು. ಅವನ ಹೊಟ್ಟೆಯಲ್ಲೇ ಹುಟ್ಟಿದವಳು. ಸೀತೆಯ ಜನನಕ್ಕಿರುವ ಒಂದು ಅತಿಮಾನುಷ ಹಿನ್ನೆಲೆಯೂ ಇಲ್ಲಿ ಕಂಡುಬರುತ್ತದೆ. ಸೀತಾಜನನ ವೃತ್ತಾಂತಕ್ಕೆ ಸಂಬಂಧಿಸಿದ 'ಮಾವಿನ ಹಣ್ಣಿನ ಪ್ರಸಂಗ' ಹಾಗೂ 'ತಾವರೆ ಹೂವಿನ ಪ್ರಸಂಗ'ಗಳು ಗಮನಾರ್ಹವಾದವು. ತಂಬೂರಿ ಸಂಪ್ರದಾಯದ ರಾಮಾಯಣ ದಲ್ಲಿ 'ಮಾವಿನ ಹಣ್ಣಿನ ಪ್ರಸಂಗ'ದಿಂದ ಇದು ಕೂಡಿದೆ :

ಮದುವೆಯಾಗಿ ಹನ್ನೆರಡು ವರ್ಷಗಳಾದರೂ ಮಕ್ಕಳಾಗದ ಮಂಡೋದರಿ. ಮಕ್ಕಳಿಗಾಗಿ ಹಂಬಲಿಸುತ್ತಾಳೆ :

ಹಕ್ಕೀಗೆ ಮಕ್ಕಳು ಚೆಕ್ಕೀಗೆ ಮಕ್ಕಳು
ನನ್ನಂತ ಪಾಪಿಗೆ ಮಕ್ಕಳಿಲ್ಲವಲ್ಲ ಶಿವನೆ
ನನಗೊಂದು ಫಲ ನೀನು ಕೊಡಲಿಲ್ಲ ಶಿವುರಾಯ
ಕೊಡಪ್ಪ ಶಿವುರಾಯ ನನಗೊಂದು ಫಲವ

ಎಂದು ಶಿವರಾಯನನ್ನು ಬೇಡುತ್ತಾಳೆ. ಮಡದಿಯ ದುಃಖವನ್ನು ಕಂಡು ರಾವಣನು ಶಿವನನ್ನು ಕುರಿತು ತಪಸ್ಸು ಮಾಡುತ್ತಾನೆ. ಶಿವರಾಯ ಮಾವಿನ ಹಣ್ಣೊಂದನ್ನು ಮಂತ್ರಿಸಿ ಕೊಡುತ್ತಾನೆ. ಹಣ್ಣಿನ ಭಾಗವನ್ನು ಮಂಡೋದರಿಗೆ ಕೊಟ್ಟು, ಅದರ ವಾಟೆಯ ಭಾಗವನ್ನು ತಾನು ತಿನ್ನುವಂತೆ ಹೇಳಿಕಳುಹಿಸುತ್ತಾನೆ. ಆದರೆ, ಅದಕ್ಕೆ ಬದಲಾಗಿ ರಾವಣ ಹಣ್ಣಿನ ಭಾಗವನ್ನು ತಿಂದು ಮಂಡೋದರಿಗೆ ವಾಟೆಯ ಭಾಗವನ್ನು ಕೊಡುವ ಆಚಾತುರ್ಯ ನಡೆದು ಹೋಗುತ್ತದೆ. ಇದರಿಂದ ರಾವಣನೇ ಗರ್ಭ ಧರಿಸಬೇಕಾಗಿ ಬರುತ್ತದೆ. ಗಂಡು ಗರ್ಭ ಧರಿಸುವ ವಿಚಿತ್ರ ಆಶಯದೊಂದಿಗೆ ಇಲ್ಲಿಯ ಕಥೆ ಆರಂಭವಾಗುತ್ತವೆ. ಮತ್ತೊಂದು ಪಾಠಾಂತರದಲ್ಲಿ ಮಾವಿನ ಹಣ್ಣಿಗೆ ಬದಲಾಗಿ 'ತಾವರೆಯ ಹೂ' ಬರುತ್ತದೆ. ಸೀತೆಯೇ ಒಡಮೂಡಿದ್ದ ತಾವರೆಯ ಹೂವೊಂದನ್ನು ರಾವಣ ಅರಿಯದೆ

ಮೂಸಿದಾಗ, ಸೀತೆ ರಾವಣನ ಮೂಗಿನ ಮೂಲಕ ಒಳಸೇರುತ್ತಾಳೆ. ಆದರೆ ಸೀನುವುದರ ಮೂಲಕ ಸೀತೆ ಹೊರ ಬಂದಳು ಎಂಬುದು ಎರಡರಲ್ಲಿಯೂ ಒಂದೇ ಆಗಿದೆ.

ಸೀತೆಯ ಜನನ ಈ ರೀತಿಯಲ್ಲಿ ಆದದ್ದು ಅನಿಷ್ಟಕಾರಕ, ಆದ್ದರಿಂದ ಲಂಕೆಗೇ ಕೇಡು ಎಂಬ ಸಂಗತಿ ಹುಟ್ಟಿಕೊಳ್ಳುತ್ತದೆ. ಈ ಕಾರಣಕ್ಕಾಗಿ ಲಂಕೆಯಿಂದ ಹೊರ ಹಾಕುತ್ತಾರೆ. ಪೆಟ್ಟಿಗೆಯೊಂದನ್ನು ಮಾಡಿಸಿ ಅದರಲ್ಲಿ ಮಗುವನ್ನಿಟ್ಟು ನದಿಯಲ್ಲಿ ತೇಲಿ ಬಿಡುತ್ತಾನೆ :

ತುಂಬೀದ ಹೊಳೆಯಲಿ ಕಬ್ಬಿಣದ ಪೆಟ್ಗೇಲಿ
ಕಬ್ಬಿಣದ ಪೆಟ್ಗೇಲಿ ನಿನ್ನ ಬಿಡುತೀನಿ ಮಗಳೆ
ತುಂಬಿದ ಹೊಳೆಯಲಲ್ಲಿ ಬಿಟ್ಟಾರೆ ಎಲೆ ಮಗಳೆ
ನೀನು ಅಂಬಿಗರಿಗೋಲಾಗಿ ಬೆಳೆಬಾರೆ ಮಗಳೆ

ಎಂದು ಹೇಳಿ ರಾವಣ ಹಿಂತಿರುಗುತ್ತಾನೆ. ಅದು ಮುಂದೆ ನದಿಯಲ್ಲಿ ಸ್ನಾನ ಮಾಡುತ್ತಿದ್ದ ಜನಕರಾಜನಿಗೆ ಸಿಕ್ಕುತ್ತದೆ. ಸೀತೆಯನ್ನು ನದಿಯಲ್ಲಿ ಪೆಟ್ಟಿಗೆಯಲ್ಲಿಟ್ಟು ತೇಲಿ ಬಿಡುವ ಪ್ರಸಂಗ, ಮಹಾಭಾರತದಲ್ಲಿ ಕರ್ಣನ ಪ್ರಸಂಗವನ್ನು ನೆನಪಿಗೆ ತರುತ್ತದೆ. ಜನಪದ ಕವಿಯ ಮೇಲೆ ಅದೇ ಇಲ್ಲಿಯೂ ಪ್ರಭಾವ ಬೀರಿರಬೇಕು. ಇದು ಜನಪದ ಸಾಹಿತ್ಯದಲ್ಲಿ ಸಾಮಾನ್ಯ ಅಂಶ.

"ಸೀನೂವೆ ಬಂದಾಗ ಸೀತೆ ಹುಟ್ಟುವ" ಪ್ರಸಂಗವಾಗಲಿ, "ತುಂಬೀದ ಹೊಳೆಯಲ್ಲಿ ಕಬ್ಬಿಣದ ಪೆಟ್ಟಿಗೇಲಿ" ತೇಲಿಬಿಡುವ ಪ್ರಸಂಗವಾಗಲೀ, ಇವೆರಡೂ ಘಟನೆಗಳೂ ಶಿಷ್ಟ ರಾಮಾಯಣದಿಂದ ಸಂಪೂರ್ಣ ಭಿನ್ನವಾಗಿವೆ. ಜನಪದರ ಶಿಷ್ಟ ಕಲ್ಪನೆಯ ಹಿನ್ನೆಲೆಯಲ್ಲಿ ಇವು ಆಕರ್ಷಕವಾಗಿ ಮೂಡಿ ಬಂದಿವೆ. ಸಾಮಾನ್ಯ ಜನಪದ ಕತೆಗಳ ಕುತೂಹಲ, ಆಸಕ್ತಿಗಳನ್ನೇ ಇಲ್ಲಿಯೂ ಕಾಣಬಹುದು. ಮತ್ತೊಂದು ಪಾಠಾಂತರದ ಪ್ರಕಾರ, ಸೀತೆಯನ್ನು ಬ್ರಾಹ್ಮಣರಿಗೆ ದಾನವಾಗಿ ಕೊಡುತ್ತಾರೆ. ಆದರೆ ಅವಳು ಮುಂದೆ ಜನಕರಾಜನನ್ನು ಸೇರಿದ ಬಗೆ ಹೇಗೆ ಎಂಬುದು ತಿಳಿಯುವುದಿಲ್ಲ.

ಜನಪದ ರಾಮಾಯಣ, ಸೀತೆಯ ಜನನದೊಂದಿಗೆ ಆರಂಭಗೊಂಡರೆ ; ಶ್ರೀರಾಮಾಯಣ ದರ್ಶನಂ, ಶ್ರೀರಾಮನ ಜನನದೊಂದಿಗೆ ಆರಂಭವಾಗುತ್ತದೆ. ಅಲ್ಲಿ ಮಂಡೋದರಿ ಮದುವೆಯಾಗಿ ಹನ್ನೆರಡು ವರ್ಷಗಳಾದರೂ ಮಕ್ಕಳಿಲ್ಲವೆಂಬ ಕೊರಗಿನಲ್ಲಿ "ಹಕ್ಕೀಗೆ ಮಕ್ಕಳು ಬೆಕ್ಕೀಗೆ ಮಕ್ಕಳು" ಎಂದು ಕೊರಗುತ್ತಿದ್ದರೆ ; ಇಲ್ಲಿ ದಶರಥ -

ತಾನೊರ್ಮೆ ತಿರುಗುತಿರಲರಮನೆಯ ಸಿರಿದೋಂಟದೊಳ್ ;
ಮರಿಯ ತೆರೆವಾಯ್ಗಿಡುತೆ ತನ್ನ ಕ್ಕೊಕು, ಕುಟುಕು
ಕೊಡುತಿರ್ದ ತಾಯ್ಹಕ್ಕಿಯಂ ಕಂಡು, ಕಣ್‌ನಟ್ಟು,
ಕಾಲ್‌ನಟ್ಟು ನಿಂದನು ಮರಂಬಟ್ಟು, ಮಕ್ಕಳು
ಪಡೆದ ಪಕ್ಕಿಯ ಸಿರಿತನಂ ಚಕ್ರವರ್ತಿಗೆ ತನ್ನ
ಬಡತನವನಾಡಿ ಮೂದಲಿಸಿತೆನೆ, ಕರುಬಿ ಕುದಿದನ್
ಕೋಸಲೇಶ್ವರನಾ ವಿಹಂಗಮ ಸುಖಕೆ ಕಾತರಿಸಿ,

ದೇವತೆಗಳಾಶಿತವೊ ? ಋತಚಿದಿಚ್ಛೆಯೊ ? ವಿಧಿಯೊ ?
ಪಕ್ಕಿ ಗುಬ್ಬಚ್ಚಿಯಾದೊಡಮೇಂ ? ವಿಭೂತಿಯಂ
ತಿರೆಗೆ ಕರೆವಾಸೆಯಂ ಕೆರಳಿಸಿದುದಾದೊರೆಯ
ಹೃದಯದಲಿ !

ಜನಪದ ರಾಮಾಯಣದಲ್ಲಿ ಮಂಡೋದರಿಗೆ ಹಕ್ಕಿ - ಬೆಕ್ಕುಗಳ ಮರಿಗಳನ್ನು ನೋಡಿ ತನಗೆ ಕ್ಕಳಿಲ್ಲವೆಂಬ ದುಃಖ ಹೆಚ್ಚಾಗಿ, ಮಕ್ಕಳನ್ನು ಪಡೆಯುವ ಅಭೀಪ್ಸೆ ತೀವ್ರಗೊಂಡರೆ ; ರಾಮಾಯಣ ದರ್ಶನಂನಲ್ಲಿ ದಶರಥನಿಗೆ, ತನ್ನ ಮರಿಗೆ ತಾಯ್ವಕ್ಕಿಯೊಂದು ಗುಟುಕು ಕೊಡುತ್ತಿದ್ದ ್ಯವನ್ನು ಕಂಡು ಆ ಆಸೆ ಇಮ್ಮಡಿ ಮುಮ್ಮಡಿಯಾಗುತ್ತದೆ. ಈ ಎರಡೂ ಸಂದರ್ಭಗಳಲ್ಲಿ ದು ಸಮಾನತೆ ಕಂಡು ಬಂದಿರುವುದು ಆಕಸ್ಮಿಕವಾದರೂ ಅಷ್ಟೇ ಆಶ್ಚರ್ಯವನ್ನು ಟುಮಾಡುವಂತಹುದು. ಅಲ್ಲಿ ರಾವಣ ಮಕ್ಕಳ ಫಲಕ್ಕಾಗಿ ಶಿವನನ್ನು ಕುರಿತು ತಪಸ್ಸು ಮಾಡಿದರೆ, ್ಲಿ ದಶರಥ 'ಪುತ್ರಕಾಮೇಷ್ಟಿ'ಯನ್ನು ಕೈಗೊಳ್ಳುತ್ತಾನೆ. ಇವುಗಳ ಫಲವಾಗಿ ರಾವಣನ ಮಗಳಾಗಿ ತೆ ಜನಿಸಿದರೆ, ಇಲ್ಲಿ ದಶರಥನಿಗೆ ಶ್ರೀರಾಮಚಂದ್ರ ಮುಂತಾದವರು ಜನಿಸುತ್ತಾರೆ. ಶ್ರೀರಾಮ ನದ ಉತ್ಸಾಹ ಸಂದರ್ಭಗಳು ಒಂದೆಡೆಯಾದರೆ, ಸೀತಾದೇವಿಯ ಜನನ, ಸೀತೆಯ ಮುಂದಿನ ಖತಪ್ತ ಬದುಕನ್ನು ಸೂಚಿಸುವಂತೆ, ಅಮಂಗಳಕಾರಿ ಎಂಬಂತೆ ಪ್ರಾರಂಭವಾಗುತ್ತದೆ.

ಮುಂದಿನ ಭಾಗಗಳಾದ - ಶ್ರೀರಾಮನ ಅಯೋಧ್ಯೆ ನಿರ್ಗಮನ, ಶ್ರೀರಾಮ ಪಟ್ಟಾಭಿಷೇಕ, ಅದನ್ನು ಅಡ್ಡಿಪಡಿಸುವುದು ಮುಂತಾದ ವಿಚಾರಗಳು ಬಹುವಾಗಿ ಶಿಷ್ಟ ರಾಮಾಯಣದಂತೆಯೇ ರಿಯಾದರೂ, ಕಥನವಿಧಾನದಲ್ಲಿ ಮಾತ್ರ ವ್ಯತ್ಯಾಸ ಕಂಡು ಬರುತ್ತದೆ. ಜನಪದ ಕವಿ ಅಲ್ಲಿ ದೇ ಆದ ಹೊಸ ಹಾದಿ ಹಿಡಿದಿದ್ದಾನೆ.

ಜನಪದ ರಾಮಾಯಣದಲ್ಲಿ ವಿಶ್ವಾಮಿತ್ರನ ಪ್ರಸ್ತಾಪವಾಗಲಿ, ರಾಮಲಕ್ಷ್ಮಣರು ಅವರ ತೆಯಲ್ಲಿ ರಕ್ಷಣೆಗೆ ಹೋಗುವ ಪ್ರಸ್ತಾಪವಾಗಲಿ ಬರುವುದೇ ಇಲ್ಲ. ಮತ್ತೊಂದು ಪ್ರಮುಖ ತ್ಯಾಸ - 'ಸೀತಾ ಸ್ವಯಂವರ'ಕ್ಕೆ ಸಂಬಂಧಿಸಿದ್ದು. ಶಿಷ್ಟ ರಾಮಾಯಣದಲ್ಲಿ, ವನವಾಸಕ್ಕೆ ಮೊದಲೇ ತಾ ಸ್ವಯಂವರ ನಡೆದು ರಾಮ - ಸೀತೆಯರಿಗೆ ವಿವಾಹ ನಡೆದಿದ್ದರೆ, ಜನಪದ ರಾಮಾಯಣದಲ್ಲಿ ಮ ನಡೆಯುವುದು ವನವಾಸದ ಸಂದರ್ಭದಲ್ಲಿ. ಆದ್ದರಿಂದ ಅದನ್ನು ಮುಂದೆ ಗಮನಿಸಬಹುದು.

ಶ್ರೀರಾಮ ಪಟ್ಟಾಭಿಷೇಕ ಸಂದರ್ಭ ತಂಬೂರಿ ಸಂಪ್ರದಾಯದ ರಾಮಾಯಣದಲ್ಲಿ ವಿಶಿಷ್ಟ ತಿಯಲ್ಲಿ ಬರುತ್ತದೆ. ದಶರಥ - ಕೈಕೆಯರ ವಾದ ವಿವಾದದಲ್ಲಿ ಪೂರ್ಣವಾಗದ ಚರ್ಚೆ ಕೊನೆಗೆ ಂಡಿ'ನ ತೀರ್ಮಾನಕ್ಕೆ ಹೋಗುತ್ತದೆ :

ರಾಮದೇವರ್ಗೆ ಪಟ್ಟಕಟ್ಟುಬೇಕು ಶಿವನೆ
ಹತ್ತಿರಕೆ ಬಾಯಿಮಾತು ದೂರಕೆ ಕಾಗದ ಬರ್ದು
ಹತ್ತು ಜನಕೆ ತಿಳಿಸಿ ಪಟ್ಟಕಟ್ಟಬೇಕು ಶಿವನೆ

ಎಂದು ವ್ಯವಸ್ಥೆ ಮಾಡುತ್ತಿರುವಾಗಲೇ, ಕೈಕೆ :

ನನ್ನ ಮಗ ಭರತನಿಗೆ ಪಟ್ಟವ ನೀವು ಶಿವನೆ

ನನ್ನ ಮಗ ಭರತನಿಗೆ ಪಟ್ಟವ ಕಟ್ಟಬೇಕು..........

ನೀವು ಭರವಸೆ ಕೊಟ್ಟು ನಂಬಿಸಿದ್ರಿ ಶಿವನೆ

ಎಂದು ಪಟ್ಟು ಹಿಡಿಯುತ್ತಾಳೆ. ಕೊನೆಗೆ ದಶರಥ ಅದರ ಪರಿಹಾರವನ್ನು ದಂಡಿಗೆ ಒಪ್ಪಿಸುವ ತೀರ್ಮಾನವನ್ನು ಕೈಗೊಳ್ಳುತ್ತಾನೆ :

ಸಾವಿರ ದಂಡನು ಸೇರಿಸುತೀನಿ ಶಿವನೆ

ಸಾವಿರ ದಂಡೂ ಏನೇಳುತಾರೆ ಕೇಳು

ಎಂದು ದಂಡಿನ ತೀರ್ಮಾನಕ್ಕೆ ಬಿಡುತ್ತಾನೆ. ಕೊನೆಗೆ ದಂಡಿನ ತೀರ್ಮಾನ - 'ಹಿರಿಯರಾದವರಿಗೆ ಪಟ್ಟಾಭಿಷೇಕದ ಹಕ್ಕು' ಎಂದಾಗುತ್ತದೆ. ಆದರೆ ಕೈಕೆ ಅದಕ್ಕೂ ಸಮ್ಮತಿಸದೆ, ಮತ್ತೊಂದು ಚಮತ್ಕಾರದ ಸವಾಲನ್ನು ಒಡ್ಡುತ್ತಾಳೆ.

ಸತ್ಯದ ಮಗನಾಗಿ ಹುಟ್ಟಿದ್ರೆ ಶ್ರೀರಾಮ

ಆನಂದಡವೀಲಿ ಜೇನುಕಲ್ಲು ಮರಡಿಲಿ

ಆನಂದಡವೀಲಿ ಹನ್ನೆರಡೂರಸ ಇರಲಿ

ತಬಸಾನೆ ಮಾಡಿಕೊಂಡು ಗೆದ್ದುವೆ ಬಂದಾರೆ

ಪಟ್ಟಣದ ರಾಜ ಪಟ್ಟ ಕಟ್ಟಿಸ್ತೀವಿ ಶಿವನೆ

ಎಂದು ಹಠ ಹಿಡಿಯುತ್ತಾಳೆ. ದಶರಥ ತನಗೆ ಕೊಟ್ಟ ಭಾಷೆಯನ್ನೇ ಕೈಕೆ ಪಟ್ಟಾಗಿ ಹಿಡಿಯುತ್ತಾಳೆ.

ದಶರಥ ಪಟ್ಟಾಭಿಷೇಕದ ತೀರ್ಮಾನವನ್ನು ದಂಡಿಗೊಪ್ಪಿಸುವುದು ಜನಪದ ರಾಮಾಯಣದ ಒಂದು ವಿಶೇಷವಾಗಿದೆ. ಪ್ರಜಾಪ್ರಭುತ್ವದ ದಾರಿಯನ್ನು ಹಿಡಿದು ನಡೆದಿರುವುದು ಗಮನಾರ್ಹ ಅಂಶ. ಶಿಷ್ಟ ರಾಮಾಯಣಗಳಲ್ಲೆಲ್ಲಿಯೂ ಇದು ಕಂಡು ಬರುವುದಿಲ್ಲ.

'ಶ್ರೀ ರಾಮಾಯಣ ದರ್ಶನಂ'ನ ಕೈಕೆ ಈ ಸಂದರ್ಭದಲ್ಲಿ ದಶರಥ ತನಗೆ ಹಿಂದೆ ಕೊಟ್ಟ ವರವನ್ನು ನೆನಪು ಮಾಡಿ -

.............ಲೇಸಾಯ್ತು, ಲೇಸಾಯ್ತು ! ತಪ್ಪು

ನಿನ್ನದಾಗಿರಲೇತಕೆನ್ನ ನೀಪರಿ ಬಯ್ದು

ವರ್ತಿಸುತಿರ್ಪೆ ಸಾಮಾನ್ಯನೊಲ್, ವನ್ಯನೊಲ್,

ಕೋಸಲಾಧೀಶ ! ನೀನೆಯೆ ಮೆಚ್ಚಿಕೊಟ್ಟೆ ನನಗಾ

ವರಂಗಳಂ, ನೀನೊಪ್ಪಿ ಕೇಳೆಂದೊಡಾಂ ಕೇಳ್ದೆನಯ್

ಎಂದು ವಾದಿಸಿದರೆ ; ಜನಪದ ರಾಮಾಯಣದಲ್ಲಿನ ಕೈಕೆ -

ಸಾವಿರಾರು ದಂಡಮಾತು ಹಿಂದೆ ಇರಲಿ ಶಿವನೆ

ಸಾವಿರಾರು ದಂಡಿನ ಮಾತು ಕೇಳುತೀನಿ ಅಂತೇಳಿ

ನೀವು ಈ ಮೊದಲೇಯ ನನಗೆ ಹೇಳಿರಲಿಲ್ಲ ಶಿವನೆ

ನೀವು ಕೊಟ್ಟಾವ ಮಾತನೀಗ

ನೀವು ತಪ್ಪಿ ಹೇಳುತೀರಿ

ಎಂದು ಮರುಪ್ರಶ್ನೆ ಹಾಕುತ್ತಾಳೆ. ಈ ಸಂದರ್ಭದಲ್ಲಿ, ಕೈಕೆಯ ಸ್ವಭಾವ ಎರಡೂ ಕಡೆಯೂ ಒಂದೇಯಾಗಿ ಬಂದಿದೆ. ಆದರೆ ಇವರ ಮಾತಿನಲ್ಲಿ ಕಂಡು ಬರುವ ಒಂದು ವ್ಯತ್ಯಾಸವೆಂದರೆ - ಶಿಷ್ಟ-ರಾಮಾಯಣದ ಕೈಕೆ ; ತನ್ನ ಮಗನಿಗೆ ಪಟ್ಟಾಭಿಷೇಕ, ರಾಮನಿಗೆ ಹದಿನಾಲ್ಕು ವರ್ಷ ವನವಾಸ ಎಂದಷ್ಟೇ ಕೇಳಿದರೆ; ಜನಪದ ರಾಮಾಯಣದಲ್ಲಿನ ಕೈಕೆ - ತನ್ನ ಮಗನಿಗೆ ಪಟ್ಟಾಭಿಷೇಕ ; ಹನ್ನೆರಡು ವರ್ಷ ವನವಾಸ ಮುಗಿಸಿ ಕೊಂಡು ಹಿಂತಿರುಗಿ ಬಂದ ಮೇಲೆ ರಾಮನಿಗೆ ಪಟ್ಟಾಭಿಷೇಕ ಎಂದು ಹೇಳುತ್ತಾಳೆ. ಇಲ್ಲಿಯ ಕೈಕೆಗೆ, "ಮುಂದಿನದನ್ನು ನೋಡಿಕೊಳ್ಳೋಣ." ಎಂಬ ಭಾವನೆಯೂ ಇರಬಹುದು. ಇಲ್ಲವೆ "ಹನ್ನೆರಡು ವರ್ಷ ಕಾಡಿನಲ್ಲಿ ತಪಸ್ಸು ಮಾಡಿ ರಾಮ ಮತ್ತೆ ಉಳಿದು ಹಿಂತಿರುಗಲಾರ" ಎಂಬ ಭಾವನೆಯೂ ಇರಬಹುದು.

ಮಂಥರೆಯ ಪ್ರಸ್ತಾಪ ಶ್ರೀ ರಾಮಾಯಣ ದರ್ಶನಂನಲ್ಲಿ ಭವ್ಯಾದ್ಭುತವಾಗಿ, 'ಮರುವುಟ್ಟು'ಪಡೆದು ಬಂದಿದ್ದರೆ, ಜನಪದ ರಾಮಾಯಣದಲ್ಲಿ ಆ ಪ್ರಸ್ತಾಪವೇ ಬರುವುದಿಲ್ಲ.

ಜನಪದ ರಾಮಾಯಣದಲ್ಲಿ, 'ಸೀತಾಸ್ವಯಂವರ' ಏರ್ಪಡುವುದು ರಾಮ - ಲಕ್ಷ್ಮಣರು ವನವಾಸದಲ್ಲಿದ್ದ ಸಂದರ್ಭದಲ್ಲಿ. ಇಲ್ಲಿ ವನವಾಸಕ್ಕೆಂದು ಹೊರಡುವವರು ರಾಮ - ಲಕ್ಷ್ಮಣರಿಬ್ಬರೇ. ಮಧ್ಯೆ ಸೀತೆ ಅವರನ್ನು ಸೇರಿಕೊಳ್ಳುತ್ತಾಳೆ. ಜನಪದ ರಾಮಾಯಣದಲ್ಲಿ ಕಂಡು ಬರುವ ಮಹತ್ವದ ಬದಲಾವಣೆಗಳಲ್ಲಿ ಇದೂ ಒಂದು.

ರಾಮ - ಲಕ್ಷ್ಮಣರು ವನವಾಸದಲ್ಲಿರುವಾಗಲೇ, ಮಧ್ಯವರ್ತಿಯೊಬ್ಬನಿಂದ 'ಸೀತಾಸ್ವಯಂವರ'ದ ಸುದ್ದಿ ಅವರಿಗೆ ತಿಳಿಯುತ್ತದೆ. ರಾಮ - ಲಕ್ಷ್ಮಣರು ಅಲ್ಲಿಗೆ ತೆರಳುತ್ತಾರೆ, ಆದರೆ ಜನಪದ ಕವಿ ಇಲ್ಲಿಯೂ, ಜನಪದ ಪ್ರತಿಭೆಗನುಗುಣವಾದ ವಿಶೇಷತೆಯನ್ನು ಮೆರೆದಿದ್ದಾನೆ. ಸೀತಾಸ್ವಯಂವರಕ್ಕೆ ಹೋಗುವ ಮುನ್ನವೇ ಅವಳ ಗುಣ - ಸ್ವಭಾವಗಳನ್ನು ತಿಳಿಯಲು ಮಾರುವೇಷದಲ್ಲಿ ಹಲವಾರು ಪರೀಕ್ಷೆಗಳನ್ನು ನಡೆಸುತ್ತಾರೆ; ಬಿಲ್ಲು ಬಾಣಗಳನ್ನು ಮುಚ್ಚಿಟ್ಟುಕೊಂಡು ರಾಮ - ಲಕ್ಷ್ಮಣರಿಬ್ಬರೂ ಭಿಕ್ಷುಕ ವೇಷದಲ್ಲಿ ಹೊರಡುತ್ತಾರೆ. ಭಿಕ್ಷೆ ನೀಡಲು ಬಂದ ಸೀತೆಯನ್ನು ಬಗೆಬಗೆಯಾಗಿ ಪರೀಕ್ಷಿಸುತ್ತಾರೆ:

ಕೇಳು ಕೇಳು ತಾಯಿ ನೀವು ಕೇಳಿ ತಾಯಿ

ನೀವು ಒಳಗೆ ಇರುವರ‍್ಯಾರು ಅಂತ ನೋಡಿ

ತಮ್ಮ ಲಕ್ಷ್ಮಣನ ಕೇಳುವಂತ ಕಾಲದಲ್ಲಿ

ಅವಳು ಭಿಕ್ಷುವನಾದರೆ ತರುತಾಳೆ ಶಿವನೆ

....

ಅವಳು ಭಿಕ್ಷವ ತರುವಾಗ ಜೋಳಿಗೆ ಬಿಟ್ಟಾರು

ಮುಂಗೈನಾದರೆ ತರುತಾರೆ ಶಿವನೆ

ಮುಂಗೈನಾದರೆ ತರುವಾಗ ಅವರು

ಅವಳು ಏನೆಂದು ಕೇಳುತಾಳೆ ಶಿವನೆ

ಹಾಗೆಂದು ಬೇಗದಲಿ ಏನೆಂದು ಕೇಳೀಳು

ಹಾಗಿಲ್ಲ ಭಿಕ್ಷುಗಾರ ಹೀಗೆ ಒಡ್ಡು ಎಂದು

ಮುಂಗೈಯ ಒಡ್ಡಬೇಡ ಅಂಗೈಯ ಒಡ್ಡಿ ನೀವು

ಅಂತೇಳಿ ತನ್ನ ಕೈಯ ಒಡ್ಡುತಾಳೆ ಶಿವ

ಹಾಗೆಂದು ಬೇಗುದಲ್ಲಿ ಭಿಕ್ಷಾವ ಕೊಡನಿಲ್ಲ

ಅಂಗೈಯನಾದರೆ ತೋರಿಸಾಳು ಬೇಗುದಲ್ಲಿ

....

ಹೀಗೆ ಒಂದೊಂದು ಬಗೆಯಲ್ಲಿ ಸೀತೆಯ ಪರೀಕ್ಷೆ ನಡೆಯುತ್ತದೆ. ಇದಾದ ನಂತರವೇ ಅವರು ಸ್ವಯಂವರಕ್ಕೆ ಹೋಗುವುದು. ಉಳಿದೆಲ್ಲ ಜನಪದ ಕಥೆಗಳಲ್ಲಿಯೂ ಸಾಮಾನ್ಯವಾಗಿ ಬರುವ ಅಂಶವನ್ನೇ ಜನಪದ ಕವಿ ಇಲ್ಲಿಯೂ ಬಳಸಿಕೊಂಡಿದ್ದಾನೆ. ಮತ್ತೊಂದು ಇಲ್ಲಿಯ ವಿಶೇಷ : ಶ್ರೀ ರಾಮನ ಬಿಲ್ಲುಬಾಣಗಳ ಜೊತೆ ಸೀತೆಯನ್ನು ಧಾರೆಯೆರೆದು ಕೊಡುವುದು. ಈ ವಿಶೇಷಗಳಾವುವೂ ಶಿಷ್ಟ ರಾಮಾಯಣದಲ್ಲಿ ಬರುವುದಿಲ್ಲ. ಇಲ್ಲಿ ಬರುವ, ಮೀನಿನ ಕಣ್ಣಿಗೆ ಗುರಿಯಿಟ್ಟು ಹೊಡೆದು ಸೀತೆಯನ್ನು ಗೆಲ್ಲುವ ಪ್ರಸಂಗವೂ ಭಾರತದ ಕಥೆಯಿಂದ ಪ್ರಭಾವಿತವಾದುದು. ಕಂಠಸ್ಥ ಸಂಪ್ರದಾಯದ ಈ ಕಾವ್ಯಗಳಲ್ಲಿ ಇಂತಹ ಸೇರ್ಪಡೆಗಳು ಸಾಮಾನ್ಯ. ಹಾಗೆಯೇ ಇರುವ ಭಾಗಗಳು ಬಿಟ್ಟು ಹೋಗುವುದು, ಬದಲಾಗುವುದೂ, ಅಷ್ಟೇ ಸಾಮಾನ್ಯ.

ಜನಪದ ರಾಮಾಯಣದಲ್ಲಿ ಬರುವ ಶೂರ್ಪನಖಿ ಪ್ರಸಂಗ, ಜನಪದದ ಒಂದು ಅದ್ಭುತ ಕಲ್ಪನೆ. ಯಾವ ಶಿಷ್ಟ ರಾಮಾಯಣದಲ್ಲಿಯೂ ಕಾಣದ ಒಂದು ವಿಶೇಷತೆ ಇದರಲ್ಲಿದೆ. ಇಲ್ಲಿ ಶೂರ್ಪನಖಿ ಮದುವೆಯಾಗಿರುವುದು, ಅವಳಿಗೊಬ್ಬ ಮಗನಿರುವುದು ಶೂರ್ಪನಖಿಯ ಗಂಡ ಹಲ್ಲೂರನನ್ನು ರಾವಣ ಕೊಲ್ಲುವುದು, ತನ್ನ ಗಂಡನನ್ನು ಕೊಂದ ಕಾರಣಕ್ಕಾಗಿ ಅಣ್ಣ ರಾವಣನನ್ನು ಕೊಲ್ಲುವಂತೆ ತನ್ನ ಮಗ ಸಣ್ಣುಮಾರನನ್ನು ಪ್ರೇರೇಪಿಸುವುದು - ಮುಂತಾದುವು ಜನಪದ ರಾಮಾಯಣದ ವಿಶಿಷ್ಟ ಅಂಶಗಳಾಗಿವೆ.

'ಸೀತಾಪಹರಣ'ದ ಸಂದರ್ಭದಲ್ಲಿಯೂ ಜನಪದ ರಾಮಾಯಣ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಇಲ್ಲಿ ರಾವಣನೇ ಮಾಯಾಜಿಂಕೆಯಾಗಿ ಬರುತ್ತಾನೆ. ಜೊತೆಗೆ ಸೀತೆಯನ್ನು ಅಪಹರಿಸುವಾಗ ರಾವಣ ಸನ್ಯಾಸಿವೇಷದಲ್ಲಿ ಬರುವುದಿಲ್ಲ ; ರಾಮನಂತೆಯೇ ಕಾಣಿಸಿಕೊಂಡು ಬರುತ್ತಾನೆ. ರಾಮನಂತೆಯೇ ನಟಿಸುತ್ತಾನೆ. ಸೀತೆಯೂ ನಂಬಿ ಬಿಡುತ್ತಾಳೆ. ಆದರೆ ಅವನು ತನ್ನ ಜೊತೆಯಲ್ಲಿ ಕರೆದಾಗ, ಮೈದುನ ಲಕ್ಷ್ಮಣ ಬರುವವರೆಗೂ ಹೋಗುವುದು ಬೇಡವೆಂದು ಹಠ ಹಿಡಿಯುತ್ತಾಳೆ. "ನಮ್ಮ ಪಟ್ಟಣಕ್ಕೆ ಹೋಗುವ ಸೀತೆ" ಎಂದು ರಾಮವೇಷಧಾರಿ ರಾವಣ ಕರೆದಾಗ, ಸೀತೆ -

ನೀವು ಜೋಡೀಲಿ ಇರುವೋರು ಶಿವನೆ

ಬಿಟ್ಟು ನೀವು ಹೋದರೆ ಅವರೇಗೆ ಬರುತಾರೆ

ಮೂರಾಳು ಒಟ್ಟಿಗೆ ಹೋಗುವ ಶಿವನೆ

....

ನಾನು ಮುಂದಕೊಂದೆಜ್ಜೆ ಬರದಿಲ್ಲ ಶಿವನೆ

ಎಂದು ಜಗ್ಗದೆ ಅಲ್ಲಿಯೇ ನಿಲ್ಲುತ್ತಾಳೆ. ಇಲ್ಲಿ ಮಾರೀಚ ಪ್ರಸಂಗವಾಗಲಿ, ಜಟಾಯು ಪ್ರಸಂಗವಾಗಲಿ ಬರುವುದಿಲ್ಲ. ಕಳೆದುಹೋದ ಸೀತೆಯನ್ನು ಹುಡುಕುವ ಸಮಸ್ಯೆಯೇ ರಾಮ - ಲಕ್ಷ್ಮಣರಿಗೆ ಉದ್ಭವಿಸುವುದಿಲ್ಲ. ಸೀತೆಯನ್ನು ಯಾರು ಅಪಹರಿಸಿದ್ದಾರೆಂಬುದು ಅವರಿಗೆ ಕೂಡಲೇ ತಿಳಿಯುತ್ತದೆ. ರಾವಣನೇ ಈ ಕಾರ್ಯವನ್ನು ಮಾಡಿರುವವನು ಎಂಬುದು ಅವರಿಗೆ ದೃಢವಾಗುತ್ತದೆ. ಈ ದೃಢನಿರ್ಧಾರಕ್ಕೆ ಪ್ರಬಲ ಕಾರಣ ; ಸೀತಾಸ್ವಯಂವರ ಸಂದರ್ಭದಲ್ಲಿ ಬಿಲ್ಲನ್ನು ಎತ್ತಲಾರದೆ ಮೇಲೆ ಕೆಡವಿಕೊಂಡು ಬಿದ್ದು ಅವಮಾನಿತನಾದ ರಾವಣ, ಆ ಸಂದರ್ಭದಲ್ಲಿ ಮಾಡಿದ ಪ್ರತಿಜ್ಞೆಯೇ ಕಾರಣವಾಗುತ್ತದೆ.

ನಾನು ಜಿಂಕೆಯ ಮರಿನಾಗಿ ಅವತಾರ ತಾಳಿ
ಜಿಂಕೆಯ ಮರಿನಾಗಿ ಅವತಾರ ತಾಳಿಕೊಂಡು
ನಿನ್ನ ಬಿಲ್ಲ ಬಾಣದಲಿ ಹೊಡೆಸಾದೆ ಬಿಟ್ಟಾನೆ
ಹಾಗೆಂದು ಬೇಗದಲಿ ನೀನು ಬಾಣವ ಹಿಡಕೊಂಡು
ನೀನು ಜಿಂಕೆಯ ಹುಡುಕುತ್ತ ಇರಬೇಕು ಶಿವನೆ
ಜಿಂಕೆಯ ಹೊಡೆದಲ್ಲಿ ಅಣ್ಣ ತಮ್ಮೀರು
ಇಬ್ರಾಳು ಅಲ್ಲಿ ಹುಡುಕುತ್ತಾ ಶಿವನೆ
ಹಾಗೆಂದು ಬೇಗದಲಿ ಹುಡುಕುತ್ತಾ ಇರುವಾಗ
ನಾನು ಸೀತಾದೇವಿಯ ಹೊರದೆ ಬಿಟ್ಟೇನೆ
ಹಾಗೆಂದು ರಾವುಳಸುರ ಮೀಸೆಯ ತಿರುವುತ್ತ
ಸಭೆಯ ಮುಂದುಗಡೆ ಕೂತಿದಾನೆ ಶಿವನೆ

'ಸೀತಾಪಹರಣ'ದ ಸೂಚನೆ, 'ಸೀತಾಸ್ವಯಂವರ' ಸಂದರ್ಭದಲ್ಲಿಯೇ ರಾಮನಿಗೆ ತಿಳಿದಂತೆ ಜನಪದ ರಾಮಾಯಣದಲ್ಲಿ ಚಿತ್ರಿತವಾಗಿದ್ದರೂ ; ಆ ಬಗೆಗೆ ಅವರು ಸಂಪೂರ್ಣ ಅವಜ್ಞೆ ತೋರಿದಂತೆ ಇರುತ್ತಾರೆ.

ಜನಪದ ರಾಮಾಯಣದಲ್ಲಿನ ಈ ಕೆಲವು ಮಹತ್ವದ ಬದಲಾವಣೆಯಿಂದಾಗಿ, ಶಿಷ್ಟಪದದ ಅನೇಕ ಅಂಶಗಳು ಇಲ್ಲಿ ಕಾಣೆಯಾಗುತ್ತವೆ. ವಾಲಿ ಸುಗ್ರೀವರ ಪ್ರಸಂಗವಾಗಲಿ, ಹನುಮಂತ ಅಶೋಕವನಕ್ಕೆ ಹೋಗಿ ಬರುವ ಇತ್ಯಾದಿ ಸಂದರ್ಭಗಳು ಬರುವುದಿಲ್ಲ. ನೇರವಾಗಿ ರಾಮ - ಲಕ್ಷ್ಮಣರೇ ಸೀತೆಯನ್ನು ಬಿಡಿಸಿಕೊಂಡು ಬರಲು ಹೊರಡುತ್ತಾರೆ. ಆಗ ಅವರು ಮೊದಲು ಸಂಧಿಸುವುದು - ಮಂಡೋದರಿಯನ್ನು. ಇಲ್ಲಿಯ ಮತ್ತೊಂದು ಪ್ರಮುಖ ಬದಲಾವಣೆ, ರಾವಣ ಅಪಹರಿಸಿದ ಸೀತೆಯನ್ನು ಬೇರೊಂದು ಪಟ್ಟಣದಲ್ಲಿಟ್ಟಿರುತ್ತಾನೆ. ರಾಮ - ಲಕ್ಷ್ಮಣರಿಗೆ ಮಂಡೋದರಿಯಿಂದ ಈ ಎಲ್ಲ ವಿಷಯಗಳು ತಿಳಿಯುತ್ತವೆ. ಅಷ್ಟೇ ಅಲ್ಲ, ರಾವಣನ ಪ್ರಾಣದ

ಗುಟ್ಟನ್ನು ಮಂಡೋದರಿ ಬಯಲು ಮಾಡುತ್ತಾಳೆ. ತನ್ನ ಗಂಡನ ಪ್ರಾಣಾಪಹರಣದ ಗುಟ್ಟನ್ನು ಹೇಳಿಕೊಡುವ ಮಂಡೋದರಿ ಇಲ್ಲಿ ವಿಚಿತ್ರವಾಗಿ ಕಾಣುತ್ತಾಳೆ. ಜನಪದ ಕತೆಗಳ ಆಶಯವೇ ಇಲ್ಲಿಯೂ ಪ್ರಬಲವಾಗಿ ಕೆಲಸ ಮಾಡಿರುವುದು ಗಮನಾರ್ಹ. ಮಂಡೋದರಿಯ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಘಟನೆಗಳೇ ಇಲ್ಲಿ ಮೇಲಿಂದ ಮೇಲೆ ಬರುತ್ತವೆ. ಇವೆಲ್ಲ ಯಾವುದೇ ಶಿಷ್ಟಪದದಲ್ಲಿ ಕಾಣದ ಅಂಶಗಳಾಗಿವೆ.

ಶ್ರೀರಾಮಾಯಣ ದರ್ಶನಂನಲ್ಲಿ ಕುವೆಂಪು ಅವರು ಚಿತ್ರಿಸಿರುವ ಮಂಡೋದರಿಯ ಪಾತ್ರಕ್ಕೂ, ಜನಪದ ಕವಿ ಚಿತ್ರಿಸಿರುವ ಮಂಡೋದರಿ ಪಾತ್ರಕ್ಕೂ ಅಜಗಜಾಂತರ. ರಾಮನನ್ನು ಗೆದ್ದು ಸೆರೆ ಹಿಡಿದು ತರುವವರೆಗೂ ಸೀತೆಯನ್ನು ಸೇವಿಸುತ್ತಿರು, ಎಂದು ಹೇಳಿ ಯುದ್ಧರಂಗಕ್ಕೆ ಹೊರಡುವ ರಾವಣನ ಪಾದಕ್ಕೆ ಎರಗುವ ಮಂಡೋದರಿ, ರಾವಣನ ಪಾಲಿಗೆ - "ಪಾಪಿಯಂ ಕೈ ಬಿಡದೆ ಪುಣ್ಯಕೊಯ್ಯುವ ದೇವಿ". ಯುದ್ಧರಂಗಕ್ಕೆ ಪತಿಯನ್ನು ಆಕೆ ಕಳುಹಿಸಿಕೊಡುವ ರೀತಿಯಾದರೂ, ಮನಮಿಡಿಯುವ ದೃಶ್ಯ :

ಮುಡಿಯನಡಿಗಿಟ್ಟು, ನಮಿಸಿದಳ್,
ಶಿರದೊಳಾಂತಳು ಪತಿಚರಣಧೂಳಿಯಂ, 'ಗೆಲ್ಗೆ
ನಿನ್ನೀ ಪವಿತ್ರತಮ ವಿಜಯಯಾತ್ರಾರಣಂ !'
ಎಂಬ ಹೃದಯ ಧ್ವನಿಗೆ ಬಾಷ್ಪಂಗಳುರುಳುತಿರೆ
ಬೀಳ್ಕೊಂಡಳಿನಿಯನಂ ಲಂಕಾಮಹಾರಾಜ್ಞಿ !

ಆದರೆ ಜನಪದ ರಾಮಾಯಣದ ಮಂಡೋದರಿ, ರಾವಣನ ಪ್ರಾಣದ ಗುಟ್ಟನ್ನು ಧಾರಾಳವಾಗಿ ಬಯಲು ಮಾಡುತ್ತಾಳೆ :

ಏಳು ಸಮುದ್ರ ಇಳಿಬೇಕು ಶಿವನೆ
ಲಂಕೆಯ ಸಮುದ್ರದಲ್ಲಿ ಉಕ್ಕಿನ ಪಂಜರ
ಉಕ್ಕಿನ ಪಂಜರಲ್ಲಿ ಮಗ್ಗಿನ ಗಿಳಿ ಉಂಟು
ಮಗ್ಗಿನ ಗಿಳಿಯನ್ನು ಹಿಡಿದು ಏನ್ ಮಾಡ್ಬೇಕು
ಅದರ ಪುಕ್ಕವ ನೀವು ಕೀಳಬೇಕು ಶಿವನೆ
ಅದರ ರೆಕ್ಕ ಮುರಿದಾರೆ ಅವನರೆಟ್ಟೆ ಮುರಿದಂಗೆ
....
ಅದರ ಮೂಳೆ ಮುರಿದಾರೆ ಅವ ಸತ್ತೋಯ್ತನೆ ಶಿವನೆ

ಎಂದು ದಾರಿ ತೋರುತ್ತಾಳೆ. ಜನಪದ ಜಾಯಮಾನಕ್ಕೆ ಒಗ್ಗಿದ, ಜನಪದ ಕತೆಯ ಆಶಯಗಳು ಇಲ್ಲಿಯೂ ಕಾಣಿಸಿಕೊಂಡಿವೆ. ರಾಕ್ಷಸ ಕತೆಗಳಲ್ಲಿ ಈ ಆಶಯ ಸಾಮಾನ್ಯ. ರಾವಣ ಅವರ ದೃಷ್ಟಿಯಲ್ಲಿ ಅವರಿಗಿಂತ ಭಿನ್ನವಾಗಿ ಕಂಡಿಲ್ಲ - ಮಂಡೋದರಿ ಕೂಡ. ರಾಕ್ಷಸನೊಬ್ಬನನ್ನು ಕೊಲ್ಲಲು ಬಂದ ರಾಜಕುಮಾರನಿಗೆ, ಮುದುಕಿಯೊಬ್ಬಳು ಆ ಗುಟ್ಟನ್ನು ಹೇಳಿಕೊಡುವ, ಸಾಮಾನ್ಯ ರೀತಿಯಲ್ಲಿಯೇ

ಇದೂ ನೆಡೆದುಹೋಗುತ್ತದೆ.

ಇನ್ನು ಕೊನೆಯ ಭಾಗವಂತೂ ತೀರಾ ಸಪ್ಪೆಯಾಗಿಬಿಡುತ್ತದೆ. ಇಲ್ಲಿ ಬರುವ ಯುದ್ಧ ಸಂದರ್ಭವಿರಲಿ, ರಾಮ - ರಾವಣರ ಪರಾಕ್ರಮದ ಸುಳಿವು ಇಲ್ಲಿ ಸಿಗುವುದಿಲ್ಲ. ಒಬ್ಬ ಹೇಡಿಯನ್ನು ಮತ್ತೊಬ್ಬ ಹೇಡಿ ಮೂರ್ಖನಾಗಿ ಕೊಲ್ಲುವಂತೆ ಚಿತ್ರಿಸಲಾಗಿದೆ :

ಎಲಾ ಹಾಳಾದ ದುಷ್ಟದೂಳಾದ ದುಷ್ಟ
ನನ್ನಯ ಮಡದೀಯ ಕರಕಂಡು ಬಂದೆ
ನಾನು ರಾಮಯಾಸ ತಾಳಿ ನಿನ್ನ ಕೊಲ್ಲುತೀನಿ
ಹಾಗಂದು ಬೇಗುದಲ್ಲಿ ಬಾಣವ ಬಿಟ್ಟಲ್ಲಿ
ಇಸದ ಬಾಣವ ತಗದವರೆ ರಾಮರು
ಕೇಳಿ ಕೇಳಿ ರಾಮರೆ ನಾನು ಮಾಡಿದ್ದು ತಪ್ಪಾಯ್ತು
ನಿಮ್ಮಯ ಕಾಲೀಗೆ ನಾನೀಗ ಬೀಳುತೀನಿ ರಾಮಾರೆ
ನಿಮ್ಮಯ ಕಾಲೀಗೆ ಬೀಳುತೀನಿ ಶಿವನೆ
ನನ್ನನ್ನು ನೀವು ಕೊಲ್ಲಬೇಡಿ ರಾಮರೆ
ಹಾಗೆಂದು ಬೇಗದಲ್ಲಿ ಬಾಣವ ಎಸೆದಾರು
ರಾವುಳನ ಎದೆಗೆ ಬಿತ್ತಲ್ಲೊ ಶಿವನೆ

ಮಾಡಿದ್ದು ತಪ್ಪಾಯ್ತು ಎಂದು ರಾವಣ ಬೇಡಿಕೊಂಡರೂ ಬಿಡದೆ ಬಾಣಬಿಟ್ಟು ರಾಮ ಅವನನ್ನು ಕೊಲ್ಲುತ್ತಾನೆ. ಶ್ರೀರಾಮಾಯಣ ದರ್ಶನಂನಲ್ಲಿ ಬರುವ ರಾಮ - ರಾವಣರ ಪಾತ್ರ ಚಿತ್ರಣಕ್ಕೂ, ಜನಪದ ರಾವಣ ರಾಮರ ಪಾತ್ರ ಚಿತ್ರಣಕ್ಕೂ ಹೋಲಿಕೆಯೇ ಇಲ್ಲ ; ಸಾಹಿತ್ಯ ದೃಷ್ಟಿಯಿಂದಿರಲಿ, ಕೇವಲ ಸಂದರ್ಭದ ದೃಷ್ಟಿಯಿಂದಲೂ ಯಾವ ಹೋಲಿಕೆಯ ಅಂಶವೂ ಕಂಡು ಬರುವುದಿಲ್ಲ. ರಾಮಾಯಣ ದರ್ಶನಂನ ರಾವಣ ಕಾಣುವ ಕನಸಿನ ದೃಶ್ಯ ಅವನ ಘನತೆಗೆ ತಕ್ಕುದಾದುದು :

ಮೂಲೋಕಮಿನ್ನೆಗಂ ಮತ್ತಮಿನ್ನಾದೊಡಂ
ಕಂಡರಿಯದಾ ಕಾಣಲಾರದಾ ಕೊಳುಗುಳದಿ
ರಘುಕುಲ ಲಲಾಮನಂ, ಜಗದೇಕವೀರನಂ
ಗೆಲ್ದು, ಸೆರೆಯಾಳ್ ಮಾಡಿ ತಂದು, ಲಂಕೇಶ್ವರನ
ಸರ್ವಗರ್ವವನಿರದೆ ಸೋಲಿಸಿದ ಮೈಥಿಲಿಗೆ
ಕಪ್ಪಮೆನೆ ಕಾಣಿಕೆಯೊಪ್ಪಿಸುವ ಭವ್ಯತಾ
ದಿವ್ಯ ದೃಶ್ಯಂ !

ತಂಬೂರಿ ಸಂಪ್ರದಾಯದ ರಾಮಾಯಣದಲ್ಲಿ 'ಸೀತಾಪರೀಕ್ಷೆ' ಸಂದರ್ಭ ವರ್ಣಿತವಾಗಿಲ್ಲ. ಅವರಲ್ಲಿ ಬಿಟ್ಟು ಹೋದ ಭಾಗ ಇರಬೇಕು. ಆದರೆ ಗೀತಭಾಗಗಳಲ್ಲಿ ಈ ಘಟನೆ ವರ್ಣಿತವಾಗಿದೆ.

ಅಗ್ನಿಪರೀಕ್ಷೆಯ ಜೊತೆಗೆ - ಮರಳು ಹರಬಿಯಲ್ಲಿ ನೀರು ತರುವುದು, ಹಾಗೂ ಹಾವಿನ ಸಿಂಬೆ ಮಾಡಿಕೊಂಡು 'ಒಂದರಿ'ಯಲ್ಲಿ ನೀರು ತರುವಂತಹ ಕಠಿಣ ಪರೀಕ್ಷೆಗಳನ್ನು ಒಡ್ಡುತ್ತಾರೆ. ಜನಪದ ರಾಮಾಯಣದಲ್ಲಿ ವರ್ಣಿತವಾಗಿರುವ ಈ ಘಟನೆ, ವಾಲ್ಮೀಕಿ ರಾಮಾಯಣಕ್ಕೆ ಕೆಲವಂಶಗಳಲ್ಲಿ ಸಾಮ್ಯವನ್ನು ಪಡೆದಿದ್ದರೂ, ಶ್ರೀರಾಮಾಯಣ ದರ್ಶನಂನಿಂದ ಸಂಪೂರ್ಣ ಭಿನ್ನವಾಗುತ್ತದೆ - ವಾಲ್ಮೀಕಿ ರಾಮಾಯಣವೂ ಸೇರಿದಂತೆ. ಶ್ರೀ ರಾಮಾಯಣ ದರ್ಶನಂನ ವಿಶಿಷ್ಟ ಪ್ರಸಂಗಗಳಲ್ಲೊಂದಾದ - ಸೀತೆಯೊಡನೆ, ರಾಮನೂ ಅಗ್ನಿ ಪ್ರವೇಶ ಮಾಡುವ ಚಿತ್ರಣ ಕುವೆಂಪು ಅವರ ಒಂದು ಅದ್ಭುತ ಸೃಷ್ಟಿ.

'ಶ್ರೀ ರಾಮಾಯಣ ದರ್ಶನಂ' ಮತ್ತು 'ಜನಪದ ರಾಮಾಯಣ' ಎನ್ನುವಾಗ, ನಾನು ಇಲ್ಲಿ ಜನಪದ ರಾಮಾಯಣಗಳಲ್ಲಿ ತಂಬೂರಿ ಸಂಪ್ರದಾಯದ ಒಂದೇ ಪಾಠವನ್ನು ಪ್ರಧಾನವಾಗಿ ಇಟ್ಟುಕೊಂಡು ನೋಡಿದ್ದೇನೆ. ಏನೇ ಆದರೂ ಶಿಷ್ಟ ಕಾವ್ಯವೊಂದರ ಜೊತೆಯಲ್ಲಿ ಜನಪದ ಕಾವ್ಯವೊಂದನ್ನು ತುಲನೆ ಮಾಡಿ ನೋಡುವಾಗ ಕೆಲವು ಪರಿಮಿತಿಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಜನಪದರ ಪ್ರತಿಭೆ ಎಷ್ಟೇ ಇದ್ದರೂ, ಜನಪದ ಜಾಯಮಾನಕ್ಕೆ ತಕ್ಕಂತೆ ಕತೆ ಹೇಳುವುದಷ್ಟೇ ಅವರ ದೃಷ್ಟಿಯಾಗುತ್ತದೆಯೇ ಹೊರತು - ಶಿಷ್ಟ ಕವಿಗಳಂತೆ ಪಾತ್ರ ಚಿತ್ರಣದ ಕಡೆಗಾಗಲಿ, ಸನ್ನಿವೇಶಗಳ ನಿರ್ಮಾಣ ಅಥವಾ ವರ್ಣನೆಗಳ ಕಡೆಗಾಗಲಿ ಹೆಚ್ಚು ಇರುವುದಿಲ್ಲ. ಅಲ್ಲಿ ಜನಪದ ಸಾಹಿತ್ಯ ಕಂಠಸ್ಥ ಸಂಪ್ರದಾಯದಲ್ಲಿರುವುದರಿಂದ ಅದರ ಮೊದಲ ರೂಪ ನಮಗೆ ನಿರ್ದಿಷ್ಟವಾಗಿ ತಿಳಿಯುವುದಿಲ್ಲ. ಅಲ್ಲದೆ ಕಾಲಾನಂತರದಲ್ಲಿ ಅದು ಹೊಂದಿರಬಹುದಾದ ಬದಲಾವಣೆಗಳನ್ನು ಗುರುತಿಸುವುದು ಕಷ್ಟವಾಗುತ್ತದೆ. ಅವರು ಎಲ್ಲೋ ಕೇಳಿದ ಘಟನೆಗಳು ಮತ್ತೆಲ್ಲಿಯೋ ಸೇರಿಕೊಳ್ಳುವುದು ಇಲ್ಲಿ ಸಾಮಾನ್ಯ. ಜನಪದ ರಾಮಾಯಣದಲ್ಲಿ ಮಹಾಭಾರತದ ಸನ್ನಿವೇಶವನ್ನು ಹೋಲುವ ಘಟನೆಗಳು ಆ ಪ್ರಭಾವದಿಂದಲೇ ಯಾವಾಗ ಬೇಕಾದರೂ ಸೇರಿರಲು ಅಥವಾ ಸೇರಲು ಸಾಧ್ಯ. ಸೀತೆ ಮಗುವಾಗಿದ್ದಾಗ ನದಿಯಲ್ಲಿ ತೇಲಿ ಬಿಡುವ ಪ್ರಸಂಗವಾಗಲಿ ಅಥವಾ ಸೀತಾ ಸ್ವಯಂವರದಲ್ಲಿನ ಸಂದರ್ಭವಾಗಲೀ ಮಹಾಭಾರತದ ಘಟನೆಯನ್ನು ನೆನಪಿಗೆ ತರುತ್ತದೆ.

ಇದರಿಂದಾಗಿ ಜನಪದ ರಾಮಾಯಣವನ್ನು ನೋಡುವ ನಮ್ಮ ದೃಷ್ಟಿಯೇ ಬೇರೆಯಾಗ ಬೇಕಾಗುತ್ತದೆ. 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್' ಎಂಬ ಶ್ರೀ ರಾಮಾಯಣ ದರ್ಶನಂ ಧ್ವನಿ ಈ ಸಂದರ್ಭದಲ್ಲಿ ಅರ್ಥಹೀನವಾಗುತ್ತದೆ.

ಜನಪದ ರಾಮಾಯಣದಲ್ಲಿ ಏನಿದ್ದರೂ ಜನಪದ ಕವಿಯ ಕೆಲವು ವಿಶಿಷ್ಟ ಕಲ್ಪನೆಗಳ ವಿನ್ಯಾಸವನ್ನು ಗುರುತಿಸಬಹುದು ಅಷ್ಟೇ. ಶಿಷ್ಟ ಕಾವ್ಯದಲ್ಲಿ ಕಾಣಲಾರದ ಇಂತಹ ಸಂದರ್ಭಗಳು ನಮ್ಮ ಗಮನ ಸೆಳೆಯುವಲ್ಲಿ ಯಶಸ್ವಿಯಾಗುತ್ತವೆ. ಯಾವುದೇ ಪಾತ್ರದ ಅಥವಾ ಸನ್ನಿವೇಶದ ಬೆಳವಣಿಗೆಗೆ ಇಲ್ಲಿ ಅಷ್ಟಾಗಿ ಅವಕಾಶವಿರುವುದಿಲ್ಲ.

ಜನಪದರು ಚಿತ್ರಿಸುವಾಗ ರಾಮನಾಗಲಿ - ಸೀತೆಯಾಗಲಿ, ಶಿವನಾಗಲಿ, ಪಾರ್ವತಿಯಾಗಲಿ, ಯಾರನ್ನೇ ಆದರೂ ಆತ್ಮೀಯವಾಗಿ ಕಾಣುತ್ತಾರೆ. ತಮ್ಮ ಹತ್ತಿರದ ಬಂಧುವಿನಂತೆಯೇ ಕಂಡು, ಸಾಮಾನ್ಯ ರೀತಿಯಲ್ಲಿಯೇ ಬಣ್ಣಿಸುತ್ತಾರೆ. ಗಂಗೆ - ಗೌರಿ ಮುಂದಲೆ ಹಿಡಿದು ಜಗಳವಾಡುತ್ತಾರೆ. ಶಿವನೊಂದಿಗೆ ಜಗಳವಾಡಿ ಮನೆಯ ಒಳಗೂ ಸೇರಿಸದೆ ಬಾಗಿಲ ಆಚೆಯೇ ನಿಲ್ಲಿಸುತ್ತಾರೆ. ಹಾಗೆಯೇ ರಾಮ, ಸೀತೆಯರೂ ಹಲವು ಸಂದರ್ಭದಲ್ಲಿ ಕಂಡು ಬರುತ್ತಾರೆ.

ಶ್ರೀ ರಾಮಾಯಣ ದರ್ಶನಂನೊಂದಿಗೆ ಜನಪದ ರಾಮಾಯಣವನ್ನು ಹೋಲಿಸಿ ನೋಡುವಾಗ ವಿಶೇಷವಾಗಿ ಕಥಾಸಂದರ್ಭಗಳನ್ನಷ್ಟೇ ಗಮನಿಸಲಾಗಿದೆ. ಪ್ರಮುಖ ಬದಲಾವಣೆಗಳನ್ನು ಗುರುತಿಸಲಾಗಿದೆ. ಈಗ ನಮಗೆ ದೊರೆತಿರುವ ಜನಪದ ರಾಮಾಯಣಗಳು ಅದರ ಸಮೆದ ರೂಪಗಳು ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅಂತಹ ಒಂದು ಸಮೆದ ರೂಪದೊಂದಿಗೆ, ಶಿಷ್ಟ ಪದವನ್ನು ಹೋಲಿಸುತ್ತಿದ್ದೇವೆಂಬ ಎಚ್ಚರವೂ ಅಗತ್ಯ. ಈ ಕೆಲವು ಪರಿಮಿತಿಗಳ ಚೌಕಟ್ಟಿನಲ್ಲಿ ಇವುಗಳ ಪರಿಶೀಲನೆ ಇಲ್ಲಿ ನಡೆದಿದೆ.

"ಯಾವುದೇ ಸಾಹಿತ್ಯದಲ್ಲಾದರೂ ಕಥಾವಸ್ತು ತುಂಬ ಪ್ರಾಚೀನವಾದದ್ದಾಗಿ ತನ್ನದೇ ಆದ ಪರಂಪರೆಯನ್ನು ಬಹುಮಟ್ಟಿಗೆ ಪಡೆದುಕೊಂಡಿರುತ್ತದೆ. ಅದು ಒಂದು ನಿಮಿತ್ತ ಮಾತ್ರವಾಗಿ ಉಳಿದು ಕವಿಯ ಶಕ್ತಿಯನ್ನು ಅವಲಂಬಿಸಿ ಆಯಾ ಕಾಲದಲ್ಲಿ ತನ್ನದೇ ಆದ ಸ್ವಂತಿಕೆಯನ್ನು ತುಂಬಿಕೊಂಡು ಅವತರಿಸುತ್ತದೆ. ಹೀಗಾಗಿ ನಮ್ಮಲ್ಲಿ ರಾಮಾಯಣ, ಮಹಾಭಾರತಾದಿಗಳು ಅನಂತ ಮುಖವಾಗಿ ಕಾಣಿಸಿಕೊಂಡಿವೆ. ಒಬ್ಬೊಬ್ಬ ಕವಿಯ ಕೈಯಲ್ಲಿ ಒಂದೊಂದು ದಿವ್ಯದೃಷ್ಟಿಯನ್ನು ಪಡೆದುಕೊಂಡು ಮೂಲಕಾವ್ಯಗಳ ಹೊಸ ವ್ಯಾಖ್ಯಾನಗಳೆಂಬಂತೆ, ಭಾಷ್ಯಗಳೆಂಬಂತೆ ಕಥೆಯಲ್ಲಿ ಹೊಸ ಅರ್ಥವನ್ನೂ ವಿನೂತನತೆಯನ್ನೂ ತಂದು ಕೊಡುತ್ತವೆ."[೮] ಆದ್ದರಿಂದ ಇತ್ತೀಚಿನ ಕೃತಿಯೊಂದಿಗೆ, ಬಹಳ ಹಿಂದಿನ ಕೃತಿಯೊಂದನ್ನು - ಅದೂ ಕಂಠಸ್ಥವಾಗಿ ಬರುವ ಕೃತಿಯೊಂದನ್ನು ಪರಿಶೀಲಿಸುವಾಗ ಅದಕ್ಕೆ ತಕ್ಕ ಅಳತೆಗೋಲನ್ನೇ ಬಳಸುವುದು ಅನಿವಾರ್ಯವಾಗುತ್ತದೆ.

* * * * *

ಶ್ರೀರಾಮಾಯಣದರ್ಶನಂನಲ್ಲಿ ವಿಶ್ವಮಾನವ ಪ್ರಜ್ಞೆ

'ವಿಶ್ವಮಾನವ ಸಂದೇಶ' ಶ್ರೀ ಕುವೆಂಪು ಅವರು ಈ ಜಗತ್ತಿಗೆ ಕೊಟ್ಟ ವಿಶಿಷ್ಟ ಕೊಡುಗೆ. ಅವರ ಬಹು ಕಾಲದ ಸಾಧನೆ - ಸಿದ್ಧಿಯ ಫಲ. ವಿಶಾಲ ಮನಸ್ಸಿನ, ವಿಶಾಲ ಭಾವನೆಯ, ತಪಸ್ಸಿದ್ಧಿ. ಮಲೆನಾಡಿನ ಮೂಲೆಯೊಂದರ ಪುಟ್ಟ ಹಳ್ಳಿಯಲ್ಲಿ ಹುಟ್ಟಿದ ಶ್ರೀ ಪುಟ್ಟಪ್ಪನವರಲ್ಲಿ ಈ 'ವಿಶ್ವ ಮಾನವ ಪ್ರಜ್ಞೆ' ಮೂಡಿಬಂದದ್ದು ಆಶ್ಚರ್ಯವೇ ಆದರೂ, ವಾಸ್ತವಿಕ ಸಂಗತಿ ಧಾರ್ಮಿಕವಾಗಿ ಅಸಂಘಟಿತವಾಗಿದ್ದ, ಯಾವ ಒಂದು ದೇವರನ್ನಾಗಲಿ, ಮಠ ಅಥವಾ ಮಠಾಧಿಪತಿಯನ್ನಾಗಲಿ, ಇಲ್ಲವೆ ಲಾಂಛನವನ್ನಾಗಲಿ ಹೊಂದಿರದ ಜನಾಂಗವೊಂದರಿಂದ ಬಂದ ಕುವೆಂಪು ಅವರಿಂದ ಇದು ಸಾಧ್ಯವಾದದ್ದು ಅಷ್ಟೇ ಸಹಜ. ವಿಶಾಲ ಹೃದಯದ, ವಿಶ್ವಮಾನವತ್ವದ ಬೀಜಾಂಕುರಕ್ಕೆ ಅವೆಲ್ಲವೂ ಒಳ್ಳೆಯ ವಾತಾವರಣವನ್ನು ಸೃಷ್ಟಿಸಲು ಕಾರಣವಾದುವು ಎನ್ನಬಹುದು.

ಅಣುಬಾಂಬು ಹಾಗೂ ವಿಷಾನಿಲಗಳ ಯುದ್ಧ ಸಾಮಗ್ರಿಗಳನ್ನು ಹೊಂದಿ ಚೆಲ್ಲಾಟವಾಡುತ್ತಿರುವ ಜಗತ್ತಿನ ಇಂದಿನ ಪರಿಸ್ಥಿತಿಯಲ್ಲಿ ವಿಶ್ವಮಾನವ ಪ್ರಜ್ಞೆಯ ಎಚ್ಚರ ಇನ್ನೂ ಜಾಗೃತಗೊಳ್ಳಬೇಕಾಗಿದೆ. ವಿಶ್ವದ ಯಾವದೊಂದು ರಾಷ್ಟ್ರವೂ ಇಂದು ತಾನು ಸ್ವತಂತ್ರ - ಸುಖಿ ಎಂದು ಭಾವಿಸುವಂತಿಲ್ಲ. ತನ್ನ ಪಾಡಿಗೆ ತಾನು ಇರಬಹುದು ಎಂದು ಭ್ರಮಿಸಿ ಸುಮ್ಮನೆ ಕೈ ಕಟ್ಟಿ ಕೂರುವಂತಿಲ್ಲ. ಎಲ್ಲರ ತಲೆಯ ಮೇಲೂ ತೂಗಾಡುವ ಕತ್ತಿ ಇದ್ದೇ ಇದೆ. ಜಗತ್ತಿನ ಯಾವುದೇ ಒಂದು ಮೂಲೆಯಲ್ಲಿ ಅಶಾಂತಿ ತಲೆದೋರಿದರೂ ಅದು ಇಡೀ ಜಗತ್ತನ್ನು ವ್ಯಾಪಿಸುತ್ತದೆ, ತಲ್ಲಣಗೊಳಿಸುತ್ತದೆ.

'ವಿಶ್ವಮಾನವ ಪ್ರಜ್ಞೆ' ಕುವೆಂಪು ಅವರ ನರನಾಡಿಗಳಲ್ಲಿ ಹರಿಯುತ್ತಿರುವ ಶಕ್ತಿಯಾಗಿದೆ. ಅವರ ಉಸಿರಾಗಿದೆ. 'ವಿಶ್ವ ಮಾನವ ಸಂದೇಶ' ವಿಶ್ವದ ಮೂಲೆ ಮೂಲೆಯನ್ನು ಮುಟ್ಟಬೇಕೆಂಬುದು ಅವರ ಅಭೀಪ್ಸೆ. ಅದರ ಹೊರತಾಗಿ ಜಗತ್ತಿನಲ್ಲಿ ಶಾಂತಿಯಾಗಲಿ, ನೆಮ್ಮದಿಯಾಗಲಿ, ಸಹಬಾಳ್ವೆ, ಸಹಚಿಂತನೆಯಾಗಲಿ ಸಾಧ್ಯವಿಲ್ಲ ಎಂಬುದು ಅವರ ದೃಢ ನಿಲುವು. ಅದರ ಚಿಂತನೆ, ಮರು ಚಿಂತನೆಗಳು ಕುವೆಂಪು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ, ಸೂಕ್ತವಾದ ಎಲ್ಲ ಸಂದರ್ಭಗಳಲ್ಲಿಯೂ ಹಾಸು ಹೊಕ್ಕಾಗಿ ಬಂದಿದೆ. ಅದರ ಜೀವನ್ಮಂತ್ರವಾಗಿ ತನ್ನ ಪ್ರಖರತೆಯನ್ನು ಸಾಕಷ್ಟು ಬೀರಿದೆ.

'ವಿಶ್ವ ಮಾನವ ಪ್ರಜ್ಞೆ'ಯಾಗಲಿ 'ವಿಶ್ವ ಮಾನವ ಸಂದೇಶ'ವಾಗಲಿ ಕುವೆಂಪು ಅವರಲ್ಲಿ ಇದ್ದಕ್ಕಿದ್ದಂತೆಯೇ ಅವತರಿಸಿದ್ದಲ್ಲ. ಅದು ಅವರ ಬಹುಕಾಲದ ಚಿಂತನೆಯ ಫಲ. ಶ್ರಮದ ಸೃಷ್ಟಿ. ವ್ಯಾಪಕ ಅಧ್ಯಯನದ, ಆಧ್ಯಾತ್ಮ ಚಿಂತನೆಯ ಅಪೂರ್ವ ಕೊಡುಗೆ. ಈ ವಿಶ್ವಮಾನವ ಪ್ರಜ್ಞೆಯ ಹಿಂದೆ, ಅನಾದಿ ಕಾಲದಿಂದಲೂ ವಿಶ್ವ ಮೈತ್ರಿಯನ್ನು ಬಯಸುತ್ತ ಬಂದ ಮಾನವತಾವಾದಿಗಳ

ಚಿಂತನೆಯ ಫಲಶ್ರುತಿ ಇದೆ. ಇದನ್ನು ಬಳಸಿ, ಬೆಳೆಸಿ ಅದಕ್ಕೊಂದು ಸ್ಪಷ್ಟ ಹಾಗೂ ನಿರ್ದಿಷ್ಟ ಸ್ವರೂಪವನ್ನು ತಂದು ಕೊಟ್ಟ ಕೀರ್ತಿ ಕುವೆಂಪು ಅವರದ್ದು.

ಕುವೆಂಪು ಅವರೇ ಒಂದೆಡೆ ಹೇಳುತ್ತಾರೆ : "ಭಾರತ ರಾಷ್ಟ್ರವು ಅನಾದಿ ಕಾಲದಿಂದಲೂ ವಿಶ್ವಮೈತ್ರಿಗಾಗಿ ದುಡಿಯುತ್ತಾ ಬಂದಿದೆ. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿಕೊಂಡು ಬಂದ ಹಾಗೆ ನಮ್ಮವರು" ಲೋಕಾಸ್ಸಮಸ್ತಾ : ಸುಖಿನೋಭವಂತು" ಎಂಬ ಶಾಂತಿ ಮಂತ್ರವನ್ನು ಘೋಷಿಸಿ ತಮ್ಮ ಆದರ್ಶವನ್ನು ಸಾರಿದ್ದಾರೆ. ಈ ಮೈತ್ರಿಯ ವಾತಾವರಣ ಇಲ್ಲದಿದ್ದರೆ ಇಂದು ನಮ್ಮ ಹಿಮಾಲಯವೂ ಕೂಡ 'ಭಗ್' ಎಂದು ಹೊತ್ತಿಕೊಳ್ಳುತ್ತಿತ್ತು. ಆದರೆ ಈ ಮೈತ್ರಿಯ ಭಾವನೆ ಜಗತ್ತನ್ನು ವ್ಯಾಪಿಸುತ್ತಿರುವುದರಿಂದ ಹಿಮಾಲಯ ಇನ್ನೂ ತಣ್ಣಗೆ ಉಳಿದು ಕೊಂಡಿದೆ. ನಮ್ಮ ಜನ ವಿಶ್ವಪ್ರಜ್ಞೆಯನ್ನು ಪಡೆದವರಾಗಿದ್ದರು, ಆ ವಿಶ್ವಮೈತ್ರಿ ಮತ್ತು ಆ ವಿಶ್ವಮಾನವತೆ ನಮ್ಮೆಲ್ಲರ ಹೃದಯದಲ್ಲೂ ಇರಬೇಕು. ಆದ್ದರಿಂದಲೇ ನಾವು ಇಂದಿಗೂ ಜಗತ್ತಿನ ಎಲ್ಲರೊಡನೆಯೂ ಮೈತ್ರಿಯಿಂದ ಬಾಳಲು ಪ್ರಯತ್ನಿಸುತ್ತಿದ್ದೇವೆ. ಇದು ಭಾರತೀಯರ ಸಂಸ್ಕೃತಿ". (ಕುವೆಂಪು; ಷಷ್ಠಿನಮನ - ಪುಟ. ೫೨)

ಕುವೆಂಪು ಅವರ 'ವಿಶ್ವ ಮಾನವ ಪ್ರಜ್ಞೆ'ಯ ಬೇರುಗಳು ಅನಾಥವಾದವುಗಳಲ್ಲ. ಅವುಗಳು ನಮ್ಮ ಪ್ರಾಚೀನ ಸಂಸ್ಕೃತಿಯ ಭದ್ರತೆಯಲ್ಲಿ ಕೀಲಿಸಿವೆ. ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಹರಿದು ಬಂದಿವೆ. ಆದರೆ ಇಂದು ಯಂತ್ರಯುಗದ, ವೈಜ್ಞಾನಿಕ ಶೋಧನೆಗಳ ಆರ್ಭಟದ ಹಿನ್ನೆಲೆಯಲ್ಲಿ ಅಸ್ವಾಧವಾಗುತ್ತಿದ್ದ ಅದಕ್ಕೆ ಪುನಶ್ಚೇತನವನ್ನು ನೀಡಿ - "ಮರುವುಟ್ಟು ಪಡೆದಂತೆ", "ವಿಶ್ವ ಮಾನವ ಸಂದೇಶ"ವನ್ನು ಜಗತ್ತಿನ ಉದ್ದಗಲಕ್ಕೂ ಹರಡುವ ಸಂಕಲ್ಪವನ್ನು ಕೈಗೊಂಡವರು ಕುವೆಂಪು. ಅದು ಈ ಯುಗದ ಮಂತ್ರವಾಗಬೇಕು ಎಂಬುದು ಅವರ ಇಚ್ಛೆ. ಅದಕ್ಕೆ 'ವಿಶ್ವ ವಿದ್ಯೆ'ಯ ಅಗತ್ಯವಿದೆಯೆಂದೂ ಅವರು ಒಂದು ಕಡೆ ಹೇಳುತ್ತಾರೆ :

'ವಿಶ್ವ ವಿದ್ಯೆ ನಮಗೆ ಬರಬೇಕು. ಆ ವಿದ್ಯೆಯಿಂದ ವಿಶ್ವಪ್ರಜ್ಞೆ ಉಂಟಾಗಬೇಕು. ಜಗತ್ತೆಲ್ಲ ಒಂದಾಗುತ್ತಿರುವ ಈ ಸಮಯದಲ್ಲಿ, ಯುದ್ಧವನ್ನು ಯಾವ ದೇಶವಾದರೂ ಬಯಸಿದರೆ, ಎಲ್ಲ ದೇಶಗಳೂ ಸರ್ವನಾಶವಾಗುವ ಈ ಸಮಯದಲ್ಲಿ, ಈ ವಿಶ್ವವಿದ್ಯೆ, ಅದರಿಂದ ಉಂಟಾಗುವ ವಿಶ್ವ ಪ್ರಜ್ಞೆ. ಅದರಿಂದ ಉಂಟಾಗುವ ವಿಶ್ವ ಮೈತ್ರಿ -ಇದು ಎಲ್ಲದಕ್ಕಿಂತಲೂ ಅತ್ಯಂತ ಅವಶ್ಯಕವಾದುದಾಗಿದೆ. ಎಲ್ಲ ಶಕ್ತಿಗಳಿಗಿಂತಲೂ ಅತ್ಯಂತ ಅವಶ್ಯಕವಾಗಿರುವ ಶಕ್ತಿ. ನಮ್ಮ ಪ್ರಪಂಚವನ್ನು ಬದುಕಿಸುವ ಶಕ್ತಿ ವಿಶ್ವ ಮೈತ್ರಿ. ಈ ವಿಶ್ವ ವಿದ್ಯೆಯಿಂದ ವಿಶ್ವ ಪ್ರಜ್ಞೆ, ಅದರಿಂದ ಈ ವಿಶ್ವಮೈತ್ರಿ, ಅಂಥ ವಿಶ್ವ ಮೈತ್ರಿಯನ್ನು ಪಡೆದ ಮಾನವ - ವಿಶ್ವಮಾನವ' (ಕುವೆಂಪು : ಷಷ್ಠಿನಮನ - ಪುಟ ೪೬)

ಇದು ಕುವೆಂಪು ಅವರ 'ವಿಶ್ವಮಾನವ ಪ್ರಜ್ಞೆ'ಯ ಸ್ವರೂಪ. ತಾನೊಬ್ಬ ಶುಚಿಯಾಗಿ, ಸುಖಿಯಾಗಿ, ಶ್ರೀಮಂತನಾಗಿದ್ದರೆ ಸಾಲದು, ಇತರರಿಗೂ ಅವು ದೊರೆಯುವಂತಾಗಲು ಪ್ರಯತ್ನಿಸಬೇಕು. ಹಾಗೆಂದು ; ಊರನ್ನು ಶುಚಿಗೊಳಿಸಲು ಹೋಗಿ ತನ್ನ ಮನೆಯನ್ನೇ ಶುಚಿಗೊಳಿಸಿಕೊಳ್ಳದೆಯೂ ಇರಬಾರದು. ಇದು ನಿತ್ಯದ ಮಂತ್ರವಾದಾಗ, ಬಾಳಿನ ಸೂತ್ರವಾದಾಗ ವಿಶ್ವಶಾಂತಿ ಸಾಧ್ಯ - ಇದು ಕುವೆಂಪು ಅವರ ದೃಢ ವಿಶ್ವಾಸ. ಅವರು ಅಂತೆಯೇ ಬಾಳುತ್ತ ಬಂದವರು ಮತ್ತು ತಮ್ಮೆಲ್ಲ ಕೃತಿಗಳಲ್ಲಿಯೂ

ನಿರಂತರವಾಗಿ ಆ ಸಂದೇಶವನ್ನು ಸಾರುತ್ತ ಬಂದವರು.

'ವಿಶ್ವಮಾನವ ಪ್ರಜ್ಞೆ' ಕುವೆಂಪು ಸಾಹಿತ್ಯದ ಕೇಂದ್ರ ಬಿಂದು. ಹಲವು ವಿಧಗಳಲ್ಲಿ, ಹಲವು ರೂಪಗಳಲ್ಲಿ ಅದು ಅವರೆಲ್ಲ ಸಾಹಿತ್ಯ ಪ್ರಕಾರಗಳಲ್ಲಿಯೂ ಹರಡಿಕೊಂಡಿದೆ. ಹಾಗಾಗಿ ಅವರ ಕೃತಿಗಳು ಕೇವಲ ಸಾಹಿತ್ಯಿಕ ದೃಷ್ಟಿಯಿಂದಷ್ಟೇ ಮಹತ್ವದ್ದಾಗಿ ತೋರದೆ ; ಜೀವನ ದೃಷ್ಟಿ, ಸಾಮಾಜಿಕ ಹಾಗೂ ಜೀವನ ಪ್ರಜ್ಞೆಯ ದೃಷ್ಟಿಯಿಂದಲೂ ಮಹತ್ವಪೂರ್ಣವಾಗಿ ತೋರುತ್ತವೆ. ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ಕಂಡುಕೊಂಡ ಮಾನವತೆಯ ಅಂತಃಸ್ಸತ್ವ ಅವರ 'ವಿಶ್ವ ಮಾನವ ಪ್ರಜ್ಞೆ'ಯಲ್ಲಿ ಹೊರ ಹೊಮ್ಮಿದೆ. ಅದರಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಸಮನ್ವಯ ದೃಷ್ಟಿ, ಸ್ವಾಮಿ ವಿವೇಕಾನಂದರ ವೇದಾಂತ, ಅರವಿಂದರ ಪೂರ್ಣದೃಷ್ಟಿ ಹಾಗೂ ಗಾಂಧೀಜಿಯ ಸರ್ವೋದಯ ತತ್ತ್ವ - ಇವೆಲ್ಲವೂ ಸಂಚಯಗೊಂಡಿವೆ.

ಕುವೆಂಪು ಅವರ 'ವಿಶ್ವ ಮಾನವ ಪ್ರಜ್ಞೆ' ಸರ್ವರ ಉದಯವನ್ನೂ ಬಯಸಿದ್ದು. 'ಸರ್ವರಿಗೂ ಸಮಪಾಲು -ಸರ್ವರಿಗೆ ಬಾಳು' ತತ್ವವನ್ನು ಒಳಗೊಂಡದ್ದು 'ಮನುಜಮತ - ವಿಶ್ವಪಥ'ದ ಘೋಷಣೆಯನ್ನು ಕೂಗಿ ; 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ಕೂಗಿಗೆ ಧ್ವನಿ ಏರಿಸಿದ್ದು - ಈ ಎಲ್ಲ ಹಿನ್ನೆಲೆಯಲ್ಲಿ ಪೂರ್ಣದೃಷ್ಟಿಯಿಂದ ಪುಷ್ಟಿಗೊಂಡ ವಿಶ್ವ ಮಾನವ ಪ್ರಜ್ಞೆ-ಎಲ್ಲರನ್ನೂ ಮೇಲಕ್ಕೆತ್ತುವ, ಎಲ್ಲರನ್ನೂ ಒಂದಾಗಿಸುವ ವಿಶ್ವಮಾನವತ್ವವನ್ನು ಅದು ಸಾರುತ್ತ ಬಂದಿದೆ. ಕುವೆಂಪು ಅವರ ಉಳಿದ ಸಾಹಿತ್ಯ ಪ್ರಕಾರಗಳಲ್ಲಿ ಈ ತತ್ತ್ವ ಬಿಡಿ ಬಿಡಿಯಾಗಿ ಕಾಣಿಸಿಕೊಂಡಿದ್ದರೆ ; ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಅದು ಸಮಗ್ರವಾಗಿ ರೂಪುಗೊಂಡಿದೆ. "ಸಮನ್ವಯ ಸರ್ವೋದಯ ಮತ್ತು ಪೂರ್ಣದೃಷ್ಟಿ ಇವುಗಳೇ ಶ್ರೀರಾಮಾಯಣದರ್ಶನದ ತ್ರಿನೇತ್ರಗಳಾಗಿವೆ" ಎಂದು ಅವರೇ ಒಂದು ಕಡೆ ಹೇಳಿಕೊಂಡಿದ್ದಾರೆ. ಕಾವ್ಯದ ಆರಂಭದಲ್ಲಿಯೇ ಅವರು ಹೇಳುವ : "ಕಲೆಯನಲ್ಲದೆ ಶಿಲ್ಪಿ ಶಿಲಿಯನೇಂ ಸೃಷ್ಟಿಪನೆ" ಎಂಬ ಮಾತಾಗಲಿ - ಇವು 'ಶ್ರೀ ರಾಮಾಯಣ ದರ್ಶನಂ'ದ ಸ್ವರೂಪವೇನೆಂಬುದನ್ನು, ಕವಿಯ ಮನೋಧರ್ಮವೆಂತಹುದೆಂಬುದನ್ನು ಸ್ಪಷ್ಟಗೊಳಿಸುತ್ತವೆ.

'ಶ್ರೀರಾಮಾಯಣ ದರ್ಶನಂ', ವಿಶ್ವಮಾನವ ಸಂದೇಶವನ್ನು ಸಾರುವ, ವಿಶ್ವಮಾನವ ಪ್ರಜ್ಞೆಯಿಂದ ಸಮನ್ವಯಿಸಿದ ಮಹಾಕಾವ್ಯ. ಮಹಾವಸ್ತುವನ್ನು ನಿರ್ವಹಿಸಲು ಮಹಾಛಂದಸ್ಸೇ ಬೇಕಾಗುವಂತೆ, ವಿಶ್ವಮಾನವನ ತತ್ತ್ವದಂತಹ ಸಂದೇಶವನ್ನು ಸಾರಲು ಕುವೆಂಪು ಅವರು ಮಹಾ ಕಾವ್ಯ ಹರಹನ್ನೇ ಆಶ್ರಯಿಸಿರುವುದು ಗಮನಾರ್ಹ. ಇಲ್ಲಿ ರಾಮಾಯಣದ ಕಥೆ ನೆಪ ಮಾತ್ರ. ಆದರೆ ಕವಿ ಅದರ ಹಂದರದಲ್ಲಿ ತನ್ನ ದರ್ಶನವನ್ನು ತುಂಬಿದ್ದಾನೆ. ವಿಶ್ವಮಾನವ ಪ್ರಜ್ಞೆ ಕಾವ್ಯದ ಉದ್ದಗಲಕ್ಕೂ ಬಿಚ್ಚಿಕೊಂಡಿದೆ. ಕಾವ್ಯದ ಆರಂಭದ "ಕವಿಕ್ರತುದರ್ಶನಂ" ನಲ್ಲಿಯೇ ಕವಿ ಕುವೆಂಪು ಅವರು ವಿಶ್ವಮಾನವ ಪ್ರಜ್ಞೆಯನ್ನು ಧಾರಾಳವಾಗಿ ಮೆರೆದು ತೋರಿದ್ದಾರೆ :

ಹೋಮರಗೆ ವರ್ಜಿಲಗೆ ಡಾಂಟೆ ಮೇಣ್ ಮಿಲ್ಟನಗೆ
ನಾರಣಪ್ಪಂಗೆ ಮೇಣ್ ಪಂಪನಿಗೆ, ಋಷಿವ್ಯಾಸ
ಭಾಸ ಭವಭೂತಿ ಮೇಣ್ ಕಾಳಿದಾಸಾದ್ಯರಿಗೆ,
ನರಹರಿ ತುಲಸಿದಾಸ ಮೇಣ್ ಕೃತ್ತಿವಾಸಾದಿ

ನನ್ನಯ್ಯ ಫಿರ್ದೂಸಿ ಕಂಬಾರವಿಂದರಿಗೆ,
ಹಳಬರಿಗೆ ಹೊಸಬರಿಗೆ ಹಿರಿಯರಿಗೆ ಕಿರಿಯರಿಗೆ
ಕಾಲದೇಶದ ನುಡಿಯ ಜಾತಿಯ ವಿಭೇದಮಂ
ಲೆಕ್ಕಿಸದೆ ಜಗತೀ ಕಲಾಚಾರ್ಯರೆಲ್ಲರ್ಗೆ,
ಜ್ಯೋತಿಯಿರ್ಪೆಡೆಯಲ್ಲಿ ಭಗವದ್ ವಿಭೂತಿಯಂ
ದರ್ಶಿಸುತೆ, ಮುಡಿಬಾಗಿ ಮಣಿದು ಕೈ ಜೋಡಿಸುವೆನಾಂ
ಲೋಕ ಗುರು ಕೃಪೆಯಿರಲಿ ; ಲೋಕ ಕವಿ ಕೃಪೆ ಬರಲಿ ;
ಲೋಕ ಹೃದಯದ ಬಯಕೆಯಾಶೀರ್ವಾದವೈತರಲಿ
ಮಣಿದಿರಲಿ ಮುಡಿ ; ಮತ್ತೆ ಮುಗಿದಿರಲಿ ಕಯ್ ; ಮತ್ತೆ
ಮಡಿಯಾಗಿರಲಿ ಬಾಳ್ವೆ, ಜಯಿಸುಗೆ ರಸತಪಸ್ಯೆ ;
ದೊರೆಕೊಳುಗೆ ಚಿರಶಾಂತಿ ;

ವಿಶ್ವದ, ವಿಶ್ವವಿಖ್ಯಾತ ಕವಿಗಳನ್ನೆಲ್ಲ ಸ್ಮರಿಸಿ, ಅವರ ಬಯಕೆಗಳ ಆಸೆಯನ್ನು ಹೊತ್ತು, ಕಾಲದೇಶದ ನುಡಿಯ ಜಾತಿಯ ವಿಭೇದವನ್ನು ಲೆಕ್ಕಿಸದೆ, ಜಗತ್ತಿನ ಕಲಾಚಾರ್ಯರೆಲ್ಲರಿಗೂ ಮುಡಿಬಾಗಿ ನಮಿಸುತ್ತ "ಲೋಕ ಗುರು ಕೃಪೆಯಿರಲಿ ; ಲೋಕ ಕವಿ ಕೃಪೆ ಬರಲಿ ; ಲೋಕ ಹೃದಯದ ಬಯಕೆಯಾಶೀರ್ವಾದವೈತರಲಿ" ಎನ್ನುವ ಅವರ ಪ್ರಾರ್ಥನೆಯಲ್ಲಿಯೇ ವಿಶ್ವ ಮಾನವ ಪ್ರಜ್ಞೆ ಮಡುಗಟ್ಟಿರುವುದನ್ನು ಕಾಣಬಹುದು. ಅದರ ಮೂಲ ಆಶಯ ಅಲ್ಲಿ ಪೂರ್ಣ ವಾಗಿ ವ್ಯಕ್ತಗೊಂಡಿದೆ. ಸುಸ್ಪಷ್ಟವಾಗಿ ಗೋಚರಿಸಿದೆ. ಅದೇ ಶ್ರೀರಾಮಾಯಣ ದರ್ಶನಂನ ಉದ್ದಕ್ಕೂ ಅಂತರ್ಗಾಮಿ ಶಕ್ತಿಯಾಗಿ ಹರಿದು ಬಂದಿದೆ.

ಮಕ್ಕಳಿಲ್ಲದ ದಶರಥನಿಗೆ ಪುತ್ರಕಾಮೇಷ್ಠಿಯನ್ನು ಮಾಡಿ ಮಕ್ಕಳನ್ನು ಪಡೆಯುವಂತೆ ಗುರು ವಸಿಷ್ಠರು ಹೇಳಿ ಅಲ್ಲಿಂದ ಯಜ್ಞಶಾಲೆಗೆ ತೆರಳುತ್ತಾರೆ. ಅನಂತರ ದಶರಥನಿದ್ದೆಡೆಗೆ ಬಂದ ಜಾಬಾಲಿ ಋಷಿಗಳು ಹೇಳುವ ಮಾತುಗಳಲ್ಲಿ, ಕುವೆಂಪು ಅವರ 'ಸರ್ವೋದಯ, ಸಮನ್ವಯ ಹಾಗೂ ಪೂರ್ಣದೃಷ್ಟಿ' ವ್ಯಕ್ತಗೊಂಡಿರುವುದಲ್ಲದೆ, ಅವರ 'ಸರ್ವರಿಗೂ ಸಮಪಾಲು ಸರ್ವರಿಗೆ ಸಮಬಾಳು' ತತ್ತ್ವ ಹಾಗೂ 'ಮನುಜ ಮತ - ವಿಶ್ವ ಪಥ'ದ -ಸಂದೇಶವೂ ಅಡಗಿದೆ. ಅವುಗಳ ಮೂಲಕ ವಿಶ್ವಮಾನವ ಪ್ರಜ್ಞೆ ಉಜ್ವಲಗೊಂಡು ಹೊರಹೊಮ್ಮಿರುವುದನ್ನು ಕಾಣಬಹುದು.

"............ರಘುಕುಲ ವಾರ್ಧಿಕ ಚಂದ್ರಮನೆ,
ಕುಲಪುರೋಹಿತರೊರೆದ ಜನ್ನಮಂ ಕೈಕೊಂಡು
ಪಸುಳೆರನ್ನರ ಪಡೆವೆಯದುವಿಟಂ, ಕೇಳಾದೊಡಂ
ನನ್ನದೊಂದು ಕಾಕ್ಕೆಯಂ, ಪೂರ್ವ ಪದ್ಧತಿ ವಿಡಿದು
ಮಾಳ್ಪ ದಿಗ್ವಿಜಯ ಹಯಮೇಧ ಮೊದಲಾದುವಂ
ತೊರೆದು, ಹಿಂಸಾ ಕ್ರೌರ್ಯಮಿಲ್ಲದಿಹ ಪ್ರೇಮಕ್ಕೆ

ನೋಂತು, ದೇವರ್ಕಳಂ ಪೂಜಿಸಲ್ ಮೆಚ್ಚುವುದು
ಜಗವನಾಳುವ ಋತಂ. ನೆಲದಲ್ಲಿ, ಬಾನಲ್ಲಿ,
ಕಡಲು ಕಾಡುಗಳಲ್ಲಿ ಪಕ್ಕಿ ಮಿಗ ಪುಲ್ಗಳಲಿ
ಆರ್ಯರಲಿ ಮೇಣ್ ಅನಾರ್ಯರಲಿ, ಕೇಳ್, ವಿಶ್ವಮಂ
ಸರ್ವತ್ರ ತುಂಬಿದಂತರ್ಯಾಮಿ ಚೇತನಂ ತಾಂ
ಪ್ರೇಮಾತ್ಮವಾಗಿರ್ಪುದದರಿಂದೆ, ಹಿಂಸೆಯಿಂ
ಪ್ರೇಮ ಮೂರ್ತಿಗಳಾದ ಸಂತಾನಮುದಯಿಸದಯ್

....
...................................ಪ್ರಜೆಗಳಂ, ಬಡವರಂ
ಸತ್ಕರಿಸವರ್ಗೆ ಬಗೆತಣಿವವೋಲ್, ತೃಪ್ತಿಯಿಂ
"ದೊರೆಗೊಳ್ಳಿತಕ್ಕೆ !" ಎಂದಾ ಮಂದಿ ಪರಿಸಲ್ಕೆ
ಪರಕೆಯದೆ ದೇವರಾಶೀರ್ವಾದಕೆಣೆಯಾಗಿ
ಕೃಪಣ ವಿಧಿಯಂ ಪಿಂಡಿ ತಂದೀವುದ್ಮೆ ನಿನಗೆ
ನೆಲದರಿಕೆಯೊಳ್ಮಕ್ಕಳಂ ಜನಮನದ ಶಕ್ತಿ
ಮೇಣ್ ಅವರಭೀಪ್ಸೆಯೆ ಮಹಾತ್ಮರಂ ನಮ್ಮೊಳಗೆ
ತಪ್ಪದೆಳೆತರ್ಪುದು ಕಣಾ !"

ಸಮಾನತೆ, ಅಹಿಂಸೆ ಹಾಗೂ ಜನಶಕ್ತಿಯ ಪವಾಡ ಎಂತಹುದೆಂಬುದನ್ನು, ಪ್ರೀತಿ - ಪ್ರೇಮಗಳಲ್ಲಿ ಅಡಗಿರುವ ಚೇತನಶಕ್ತಿ ಎಂತಹುದೆಂಬುದನ್ನು ಕವಿ ಇಲ್ಲಿ ಸ್ಪಷ್ಟಪಡಿಸಿದ್ದಾರೆ.

'ಸರ್ವೋದಯ ತತ್ತ್ವ' - 'ಶ್ರೀ ರಾಮಾಯಣ ದರ್ಶನಂ'ನಲ್ಲಿ ವಿಶಿಷ್ಟ ರೀತಿಯಲ್ಲಿ ಕಾವ್ಯದುದ್ದಕ್ಕೂ ಕಂಡು ಬರುತ್ತದೆ. "ಪಾಪಿಗುದ್ಧಾರ ಮಿಹುದೌ ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್" - ಎಂಬುದೇ ಆ ದಿವ್ಯ ಸಂದೇಶ. ಯಾರೂ ಮೇಲಲ್ಲ, ಯಾರೂ ಕೀಳಲ್ಲ, ಎಂತಹವರಿಗೂ ಮೇಲೇರಿ ಬರಲು ಸಾಧ್ಯವಿದೆ. ಆದರೆ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕು. ರಾವಣ, ಮಂಥರೆ, ಕೈಕೆಯಂತಹ ಪಾತ್ರಗಳ ಮೂಲಕ ಕುವೆಂಪು ಅವರು ಆ ದರ್ಶನವನ್ನು ಮಾಡಿಸಿದ್ದಾರೆ. ಆ ಪಾತ್ರಗಳನ್ನು ಕಡೆದು ನಿಲ್ಲಿಸುವ ಹಿನ್ನೆಲೆಯಲ್ಲಿ ವಿಶ್ವಮಾನವತೆಯ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ವಿಶ್ವ ಮಾನವ ಪ್ರಜ್ಞೆಯ ಸಂದೇಶವನ್ನು ಸಾರಿದ್ದಾರೆ:

"ಬದುಕೆನಗೆ ಸಾವಿಗೆಣೆ ಅಣ್ಣದೇವನನುಳಿದು ; ಪಾಳ್ ಮಣ್ಣು ಈ ಕೀಳ್ ನೆಲದ ಸಿರಿ !" ಎಂದು ತಿರಸ್ಕರಿಸಿ ಹೊರಟ ಭರತನ ಬಿರುನುಡಿಗೆ ನೊಂದ ತಾಯಿ ಕೈಕೆ ಹೇಳುವ ಮಾತುಗಳು ಅಲ್ಲಿಗಷ್ಟೇ ಮಿತಿಗೊಳ್ಳದೆ, ಇಡೀ ಜಗತ್ತಿಗೇ ಕೊಟ್ಟ ಮಾನವತಾವಾದಿಯ ಅಮರ ಸಂದೇಶವಾಗಿದೆ:

"ಹೊಲೆಗೆ ಹೊಲೆ ಮಡಿಯಲ್ತು ; ಕೊಲೆಗೆ ಕೊಲೆ ಪಡಿಯಲ್ತು ;
ನೋವು ನೋವಿಗೆ ಸಾವುಮಲ್ತು. ನಾಂ ಗೈದುದನೆ
ನೀಂ ಗೈದರೇಂ ತಪ್ಪು ತಪ್ಪಿನಿಂದೊಪ್ಪಮಂ
ಪೊರ್ದುವುದೆ ?

ದ್ವೇಷ, ಅಸೂಯೆ, ಸೇಡು, ಅಹಿಂಸೆ - ಇವು ಇಂದು ಮಾನವನನ್ನು ಆಳುತ್ತಿರುವ ದುಷ್ಟ ಶಕ್ತಿಗಳಾಗಿವೆ. ಇವೇ ನಿಜವಾದ ಮೌಲ್ಯಗಳೆಂದು ಭ್ರಮಿಸಿದಂತೆ ತೋರುತ್ತದೆ. ಯಾರೊಬ್ಬರೂ ಇವುಗಳ ಸಾಮ್ರಾಜ್ಯದಿಂದ ಕಾಲ್ತೆಗೆಯಲು ಆಶಿಸಿದಂತೆ ತೋರುವುದಿಲ್ಲ. ವಿಶ್ವದ ಅಶಾಂತಿಗೆ, ಮಾನವನ ಅಧಃಪತನಕ್ಕೆ ಇವುಗಳೇ ಕಾರಣ ಎಂಬುದನ್ನು ಅವನು ಅರಿತಂತೆ ಅನಿಸುವುದಿಲ್ಲ. ಪ್ರಸ್ತುತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕುವೆಂಪು ಅವರ ಈ ಮಾತುಗಳು ಎಷ್ಟೊಂದು ಸತ್ಯವಾಗಿ ತೋರುತ್ತವೆ!

'ಶ್ರೀರಾಮಾಯಣ ದರ್ಶನಂ'ನಲ್ಲಿ ಯಾವುದೂ ಅಪೂರ್ಣವಲ್ಲ. ಪೂರ್ಣದೃಷ್ಟಿ ಕಾವ್ಯದುದ್ದಕ್ಕೂ ಮೆರೆದಾಡಿದೆ. ಆದ್ದರಿಂದಲೇ ವಾಲ್ಮೀಕಿ ರಾಮಾಯಣದಲ್ಲಿನ ಪಾತ್ರಗಳೆಲ್ಲವೂ ಇಲ್ಲಿ ಉದ್ಧಾರದ ಹಾದಿಯನ್ನು ಹಿಡಿದು ಮಿಂಚಿವೆ. ಇಲ್ಲಿ ಯಾವುದೊಂದು ಪತಿತವೆನಿಸುವುದಿಲ್ಲ. ಎಲ್ಲಕ್ಕೂ ಉದ್ಧಾರದ ಹಾದಿ ಇದೆ ಎಂಬುದೇ ಕುವೆಂಪು ಅವರ ದರ್ಶನದ ಹೊಸ ಹೊಳಹು. ಪ್ರತಿಯೊಬ್ಬ ವ್ಯಕ್ತಿಯೂ ಹುಟ್ಟುವಾಗ ವಿಶ್ವಮಾನವನಾಗಿಯೇ ಹುಟ್ಟುತ್ತಾನೆ, ಆದರೆ ಬೆಳೆಯುತ್ತಾ ಅವನು ಸಂಕುಚಿತ ಭಾವನೆಗಳಿಂದ ಕೂಡಿ ಅದನ್ನು ಕಳೆದುಕೊಳ್ಳುತ್ತಾನೆ. ವ್ಯಕ್ತಿ ಮತ್ತೆ ಅದನ್ನು ಗಳಿಸಿಕೊಳ್ಳಬೇಕಾದರೆ ಪೂರ್ಣದೃಷ್ಟಿಯನ್ನು ಹೊಂದಬೇಕಾಗುತ್ತದೆ - ಎಂಬುದೇ ಕುವೆಂಪು ಅವರ ದರ್ಶನ.

'ಮನುಜ ಮತ - ವಿಶ್ವ ಪಥ' ಈ ಸಂದೇಶವನ್ನು ಸಾರುವ ವಿಶ್ವ ಮಾನವ ಪ್ರಜ್ಞೆಗೂ ಇಲ್ಲಿ ಮಿತಿ ಇಲ್ಲ.

ಅತ್ರಿಮುನಿಯಾಶ್ರಯದಲ್ಲಿ ರಾಮ ಲಕ್ಷ್ಮಣ ಸೀತೆಯರು ತಂಗಿರುವ ಸಂದರ್ಭ. ರಾಕ್ಷಸರ ವಧೆಗೈದು ಮುನಿಗಳಿಗೆ ರಕ್ಷಣೆಯನ್ನು ನೀಡುವ ಭರವಸೆಯನ್ನು ರಾಮ ಕೊಟ್ಟಿದ್ದಾನೆ. ಅವನ ಮಾತುಗಳಲ್ಲಿ ರಾಕ್ಷಸರ ಮೇಲಿನ ಸೇಡು ಎದ್ದು ಕಾಣುತ್ತದೆ. ಅದನ್ನು ಗಮನಿಸಿದ ಸೀತೆ ರಾಮನೋರ್ವ ಏಕಾಂಗಿಯಾಗಿದ್ದಾಗ ಹೇಳುತ್ತಾಳೆ:

"ಬಗೆಯೊಂದು ಶಂಕೆಯನರುಹಿದಪೆನಾಂ,
ಹೃದಯ ಪ್ರಿಯ, ಬಾಲಭಾಷಿತವನಾದರದಿಂದೆ
ಕೇಳ ಕರುಣಿಪುದೆನಗೆ ; ಋಷಿಗಳ್ಗೆ ನುಡಿಗೊಟ್ಟೆಯಯ್ ;
ರಾಕ್ಷಸ ವಧೆಗೆ ಪೂಣ್ದೆಯಯ್ ; ವೈರಮಂ ವ್ರತಮಾಂತೆಯಯ್,
ಹೇ ಸ್ನೇಹನಿಧಿ ! ಓರ್ವನನ್ಯಾಯಿಯಾದೊಡೇಂ
ಸರ್ವ ರಾಕ್ಷಸರೆಂತು ಸಂಹಾರಕರ್ಹರಯ್ ?
ಕ್ಷಾತ್ರಕೇಂ ಕ್ರೌರ್ಯಂ ಕಿರೀಟಮಂ" ?

ರಾಮ, ಸೀತೆಯ ಮಾತಿಗೆ ತಲೆದೂಗುತ್ತಾನೆ. "ದರಹಸಿತೆ, ರಾಜ ಋಷಿ ಜನಕಸುತೆ, ಆ ತಂದೆಯ

ಮಗಳ್ಗೆ ತಕ್ಕುದನೆ ನುಡಿದೆ. ವಿಶ್ವಪ್ರೇಮ ಸಿದ್ಧನಿಂ ಪಡೆದಿರ್ಪ ಕರುಣೆಯನ್ನೊರೆಯುತಿಹೆಯಾದೊಡಂ, ಪೂಜ್ಯಮಹುದಾದೊಡಾ ತತ್ತ್ವಂ ಪೂರ್ಣದರ್ಶನಕೆ ಪೊರ್ದದಿರ್ಪುದು ಸರಳೆ...... ಆರ್ಯ ಸಂಸ್ಕೃತಿಯ ಸುಕೃತಮಂ ರೂಕ್ಷ ರೀತಿಯೊಳಡ್ಡಗಟ್ಟುವೀ ರಾಕ್ಷಸರ ಗಾಮ್ಯತನಮಂ ಮುರಿಯಲಾಂ ಪೂಣ್ದೆ ನಿನ್ನದಂ, ... ಕರ್ತವ್ಯವೆಮಗಾಯ್ತು ಋಷಿ ರಕ್ಷಣಂ. ಇಷ್ಟಮುಂ ಮತ್ತೆ ನಿಷ್ಠೆಯುಂ ಗೋಷ್ಠಿಗೊಂಡೊರೆಯುತಿಹಸೀ ದಸ್ಯುಹನನಮಂ !" ಎಂದು ನುಡಿಯುತ್ತಾನೆ. ರಾಮನ ಮಾತನ್ನು ಕೇಳಿದ ಸೀತೆ : "ತೊದಲಾಗುತಿದೆ ನನ್ನ ನಾಲಗೆ ನಿನ್ನ ದನಿಗೇಳ್ದು, ಮನದನ್ನ" ಎನ್ನುತ್ತಾಳೆ. ಮುಂದುವರಿದು ಹೇಳುವ ಸೀತೆಯ ಮಾತುಗಳು - "ಸರ್ವರಿಗೆ ಸಮಪಾಲು - ಸರ್ವರಿಗೆ ಸಮಬಾಳು" ತತ್ತ್ವದ ಆಧಾರ ಸ್ಥಂಭದಂತಿದೆ. 'ಸರ್ವೋದಯ' ತತ್ತ್ವದ ಸ್ಪಷ್ಟ ನಿರೂಪಣೆಯಾಗಿದೆ. ವಿಶ್ವಮಾನವತ್ವದ ವ್ಯಾಖ್ಯಾನವಾಗಿದೆ :

"ಪುಣ್ಯಾಶ್ರಮಂಗಳಂ ನೆವವೊಡ್ಡುತೈತಂದು
ತಮ್ಮ ನೆಲಮಂ ಸುಲಿಯಿತೊಯ್ಯನೆ ವಸತಿಗೈದು,
ದಿನದಿನಕೆ ತಮ್ಮನೊತ್ತುವರಾರ್ಕರಾದೊಡಂ
ದಸ್ಯುಗಳೆ ದಿಟಮಲ್ತೆ ?

"ತಿಮಿರಕ್ಕೆ ರವಿ ದಸ್ಯು.
ಜ್ಞಾನಮಜ್ಞಾನಕ್ಕೆ ದಸ್ಯು. ಮಾಯೆಯನಳಿಸಿ
ಮನುಜ ಹೃದಯವನಾಕ್ರಮಿಸುತಾತ್ಮಮಂ ತನ್ನ
ಕೃಪೆಗುಯ್ವ ಪರಮಾತ್ಮನುಂ ದಸ್ಯು. ನಾಂ ನಿನಗೆ
ನೀನೆನಗೆ ದಸ್ಯು. ಕೇಳಂತೆವೋಲಾರ್ಕರುಂ
ದಸ್ಯುಗಳ್ ದಂಡಕಾರಣ್ಯ ದಕ್ಷಿಣ ಜನದ
ನಯಕೆ. ಪಿರಿತನಕೆ ಮಣಿವುದೆ ಕಿರಿಯ ಸಂಸ್ಕೃತಿಗೆ
ಮೇಲ್ಮೆ ಪುಣ್ಯಂ ವಿಪತ್ತಿನ ತೆರೆದಿನೋರೊರ್ಮೆ
ದೈತ್ಯನೋಲಾಕ್ರಮಿಪುದಾತ್ಮಮಂ ಜನತೆಯಂ
ನಾಡೂರ್ಗಳಂ: ಕೃಪಾಬಾಹು ನೀಡಲ್ಕದರ
ನೆಳಲಲ್ತೆ ಪೇಳ್ ರಾಹು !"

ಸೀತೆಯ ಮೂಲಕ ಕುವೆಂಪು ಅವರು ಇಲ್ಲಿ ವಿಶ್ವಮಾನವ ಸಂದೇಶವನ್ನು ಸಾರಿದ್ದಾರೆ. ಮೇಲು - ಕೀಳೆಂಬ ಅಸಮಾನತೆಯ ಭಾವನೆಯನ್ನು ತೊಲಗಿಸಿ, ಸಮಾನತೆಯ ಧ್ವಜವನ್ನು ಎತ್ತಿ ಹಿಡಿದು ಸರ್ವೋದಯಕೆ ಸಮರ್ಪಿಸಿಕೊಳ್ಳುವಂತೆ ಕರೆ ನೀಡಿದ್ದಾರೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಅರಿವನ್ನು ಮೂಡಿಸಿದ್ದಾರೆ.

"ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯದಲ್ಲಿ ಸರ್ವೋದಯ ಅಪೂರ್ವ ರೀತಿಯಲ್ಲಿ ಪ್ರತಿಮಿತವಾಗಿದೆ ; 'ಪಾಪಿಗುದ್ಧಾರಮಿಹುದೌ ಸೃಷ್ಟಿ ಮಹದ್ ವ್ಯೂಹ ರಚನೆಯೊಳ್' ಎಂಬುದು

ಕೃತಿಯ ಕಾಣ್ಕೆ. ಪಾಪಿಗಳಿಗಷ್ಟೇ ಅಲ್ಲ, ದೀನದಲಿತರಿಗೂ ಉದ್ಧಾರವುಂಟು. ರಾವಣನ ಉದ್ಧಾರದಲ್ಲಿ ಸರ್ವೋದಯದ ಆಧ್ಯಾತ್ಮಿಕ ಸ್ತರವಿದ್ದರೆ, ದಸ್ಯು ಸ್ತ್ರೀ ಮಂಥರೆಯ ಉದ್ಧಾರದಲ್ಲಿ ಅದರ ಲೌಕಿಕ ಸ್ತರವಿದೆ. ರಾಮ - ರಾವಣರು ಒಂದೇ ಎಂಬ ಅದ್ವೈತ ದರ್ಶನ ಲೌಕಿಕ ನೆಲೆಯಲ್ಲಿ ಸಮಾನತಾ ತತ್ತ್ವವಾಗುತ್ತದೆ. ದ್ವೈತ ಸಿದ್ಧಾಂತ ಪ್ರಜಾಪ್ರಭುತ್ವಕ್ಕೆ ಅನುಗುಣವಾದುದಲ್ಲ ; ಎಂತಲೇ ಕುವೆಂಪು ದ್ವೈತವನ್ನು ಮನ್ನಿಸುವುದಿಲ್ಲ ಎಂಬುದು ಗಮನಾರ್ಹ" - (ಡಾ. ಸಿ.ಪಿ.ಕೆ. : 'ಕುವೆಂಪು ಕಿರಣಗಳು' - ಪುಟ - ೧೪) ಇಲ್ಲಿ 'ಆರ್ಯ ದ್ರಾವಿಡ' ಎಂಬ ಭೇದ ಕಲ್ಪನೆಯಲ್ಲಿ ಉಂಟಾಗುವ ಅನಾಹುತವನ್ನು ; ಮೇಲು ಕೀಳು ಎಂಬ ಭಾವನೆಯಲ್ಲಿ ತಲೆದೋರುವ ಘೋರ ಆಪತ್ತನ್ನು ಸುಸ್ಪಷ್ಟಗೊಳಿಸಿದ್ದಾರೆ. ಇಂತಹ ಅಲ್ಪ ವಿಚಾರಗಳೇ ಮಾನವನ ಮಹೋದ್ದೇಶಗಳ ಈಡೇರಿಕೆಗೆ ಅಡ್ಡಿಯಾಗಿವೆ ಎಂಬ ಸತ್ಯವನ್ನು ಹೊರಗೆಡಹಿದ್ದಾರೆ.

'ವಿಶ್ವ ಮಾನವತೆ' ಎಂಬುದು ಕುವೆಂಪು ಅವರೇ ಒಂದೆಡೆ ಹೇಳುವಂತೆ : "ಆಧ್ಯಾತ್ಮಿಕತೆಯ ವೈಯಕ್ತೀಕರಣ, ಅದು ಸರ್ವರ ಪಾಲಾಗಬೇಕು. ಆಗ ಸಮ ಬಾಳು ದೊರೆತು ಸರ್ವರ ಉದಯವೂ ಆಗುತ್ತದೆ. 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಕುವೆಂಪು ಅವರು ಹಲವು ರೀತಿಯಲ್ಲಿ ಆ ತತ್ತ್ವವನ್ನು ವಿವರಿಸಿ ಹೇಳಿದ್ದಾರೆ. ಅದರ ಒಂದು ಬಿಂದುವನ್ನು ಮಾತ್ರ ಇಲ್ಲಿ ಕೊಟ್ಟಿದ್ದೇನೆ.

ಕಾವ್ಯದ ಆರಂಭದಲ್ಲಿ ಕವಿ ಕುವೆಂಪು ಅವರು ; "ಲೋಕಗುರುಕೃಪೆಯಿರಲಿ ಲೋಕ ಕವಿ ಕೃಪೆ ಬರಲಿ" ಎಂದು ಗೌರವದಿಂದ ಸ್ಮರಿಸುತ್ತ -

> ಲೋಕ ಹೃದಯದ ಬಯಕೆಯ್ತಾಶೀರ್ವಾದವನ್ನೆ ತರಲಿ
> ಮಣಿದಿರಲಿ ಮುಡಿ ; ಮತ್ತೆ ಮುಗಿದಿರಲಿ ಕೈ ; ಮತ್ತೆ
> ಮಡಿಯಾಗಿರಲಿ ಬಾಳ್ವೆ. ಜಯಿಸುಗೆ ರಸ ತಪಸ್ಯೆ ;
> ದೊರೆ ಕೊಳುಗೆ ಚಿರಶಾಂತಿ ;

ಎಂದು ಪ್ರಾರ್ಥಿಸಿ ಕೃತಿ ರಚನೆಗೆ ತೊಡಗಿದಂತೆ ಅಷ್ಟೇ ಶ್ರದ್ಧೆ - ಭಕ್ತಿ - ಗೌರವ ಭಾವಗಳಿಂದ ಮುಕ್ತಾಯವನ್ನೂ ಹಾಡಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು, ಅವರಲ್ಲಿಯ 'ವಿಶ್ವ ಪ್ರಜ್ಞೆ' ಸ್ಥಾಯಿಯಾಗಿ ಕಾವ್ಯದುದ್ದಕ್ಕೂ ಎಚ್ಚರಗೊಂಡು ಹರಿದು ಬಂದಿರುವುದು. ಅದು ಎಲ್ಲಿಯೋ ಕಾಣಿಸಿಕೊಂಡು, ಮತ್ತೆಲ್ಲಿಯೋ ಮಾಯವಾಗಿ, ಇನ್ನೆಲ್ಲಿಯೋ ಸೇರಿಕೊಂಡಿಲ್ಲ. ಕಾವ್ಯದ ಉದ್ದಕ್ಕೂ ಆ ಪ್ರಜ್ಞೆ ನಿರಂತರವಾಗಿ ಜೀವರಸವಾಗಿ ಹರಿದು ಬಂದಿದೆ. ಆ ಭಾಗವನ್ನು ಇಲ್ಲಿ ಉದ್ಧರಿಸಿ ಲೇಖನವನ್ನು ಮುಗಿಸುತ್ತೇನೆ :

> ಕವಿ ವಿಭೂತಿಗೆ ನಮೋ ! ಕೃತಿ ವಿಭೂತಿಗೆ ನಮೋ !
> ದರ್ಶನಧ್ವನಿರಸಾಮೃತ ಪಾನದಾನಂದದಿಂ
> ಲೋಕ ಶೋಕ ವನಳಿಸಿ ಭುವತ್ರಯಂಗಳಂ
> ತಣಿಪ ನಂದನತಪೋದೀಕ್ಷೆಯಂ ಕೊಂಡೆಸೆಪ
> ರಸ ಋಷಿಗೆ ಯೋಗಮತಿ ಸಹೃದಯ ವಿಭೂತಿಗೆ ನಮೋ !

೨೩೦

ಯುಗಯುಗದಿ ಸಂಭವಿಪೆನೆಂಬ ಭಗವದ್ದಿವ್ಯಮಾ
ವಚನಮೇಂ ನರರೂಪಮಾತ್ರಕ್ಕೆ ಮುಡಿಪೆ, ಪೇಳ್ ?
ನರಸಿಂಹ ಮತ್ಸ್ಯ ಕೂರ್ಮಾದಿ ಚರಮಾ ಲೀಲೆಗೇಂ
ಪೊರತೆ ಈ ಕೃತಿ ರೂಪಮಾ ಭಗವದಾವಿರ್ಭಾವ
ಬಹುರೂಪ ಸೂತ್ರತೆಗೆ ?

*   *   *

ಸಾಹಿತ್ಯ ಮತ್ತು ಮನಃಶಾಸ್ತ್ರ

ಸಾಹಿತ್ಯಕ್ಕೂ - ಮನೋವಿಜ್ಞಾನಕ್ಕೂ ಇರುವ ಸಂಬಂಧವಾದರೂ ಏನು ? ಇವೆರಡೂ ಬೇರೆ ಬೇರೆ ವಿಷಯಗಳಲ್ಲವೆ ? ಎಂದು ಅನ್ನಿಸುವುದು ಸಹಜ. ಆದರೆ ಸಾಹಿತ್ಯಕ್ಕೂ ಉಳಿದ ಯಾವುದೇ ಜ್ಞಾನಕ್ಷೇತ್ರಕ್ಕೂ ಇರುವ ಸಂಬಂಧ ನಿಕಟವಾದದ್ದು, ಅಷ್ಟೇ ಅಲ್ಲ, ಸಹಜ ಹಾಗೂ ಅನಿವಾರ್ಯ ಎಂಬುದು ಅದರ ಒಳ ಹೊಕ್ಕಾಗ ವ್ಯಕ್ತವಾಗುವ ಅಂಶ. ಏಕೆಂದರೆ, ಸಾಹಿತ್ಯ ಬದುಕಿಗೆ ಸಂಬಂಧಿಸಿದ್ದು. ಬದುಕು ಇವೆಲ್ಲವುಗಳನ್ನು ಒಳಗೊಂಡದ್ದು. ಈ ಒಂದೊಂದು ವಿಷಯವೂ ಪ್ರತ್ಯೇಕವಾಗಿ ತನ್ನದೇ ಆದ ಕ್ಷೇತ್ರವನ್ನು ಆಳವಾಗಿ ತೆರೆದು ತೋರಿಸಿದರೂ, ಸಾಹಿತ್ಯ ಕ್ಷೇತ್ರದೊಂದಿಗೆ ಅವುಗಳ ಸಂಬಂಧ ಮಹತ್ವದ್ದು ಹಾಗೂ ಪರಸ್ಪರ ಅರ್ಥಮಾಡಿ ಕೊಳ್ಳಲು ನೆರವಾಗುವಂತಹುದು. ಸಾಹಿತಿಯಾದವನು ತೆರೆದ ಕಣ್ಣಿನಿಂದ ತನ್ನ ಸುತ್ತಲ ಜಗತ್ತನ್ನು ನೋಡುತ್ತಿರುತ್ತಾನೆ. ಅಲ್ಲಿಯ ಆಗು ಹೋಗುಗಳನ್ನು ಆಸಕ್ತಿಯಿಂದ ಗಮನಿಸುತ್ತಿರುತ್ತಾನೆ. ಅವುಗಳ ಏಳು - ಬೀಳನ್ನು ಕಂಡು ಅದಕ್ಕೆ ಸ್ಪಂದಿಸುತ್ತಾನೆ. ಅದು ರಾಜಕೀಯವಾಗಿರಬಹುದು, ಸಾಮಾಜಿಕವಾಗಿರಬಹುದು, ಧಾರ್ಮಿಕ, ಚಾರಿತ್ರಿಕ ಅಥವಾ ತಾತ್ವಿಕವಾದುದಾಗಿರಬಹುದು. ಸಾಹಿತಿಯಾದವನು ಇವುಗಳಿಂದ ಒಂದು ಪ್ರಚೋದನೆಗೆ ಒಳಗಾಗಿ ಅದನ್ನು ಅಭಿವ್ಯಕ್ತಿಸಲು ತೊಡಗುತ್ತಾನೆ. ಇದು ಸಾಹಿತಿಯಲ್ಲಿಯ ಒಂದು ಅನಿವಾರ್ಯವಾದ ಕ್ರಿಯೆ. ಯಾವುದೇ ಸಾಹಿತ್ಯ ಕೃತಿ ಇಂತಹ ಒಂದು ಪ್ರಚೋದನೆಗೆ ಒಳಗಾಗಿಯೇ ಸೃಷ್ಟಿಗೊಳ್ಳುವಂತಹುದು. ಇಂತಹ ಪ್ರಚೋದನೆ ಎಲ್ಲರಲ್ಲಿಯೂ ಉಂಟಾಗುವುದಿಲ್ಲ. ಅದು ಕವಿಗೇ ಕೆಲವೊಮ್ಮೆ ಆಶ್ಚರ್ಯದ ಸಂಗತಿಯೂ ಆಗಬಹುದು. ಕವಿಯೇ ಒಂದು ಕಡೆ ಹೇಳಿಕೊಳ್ಳುತ್ತಾನೆ :

> ಜಗದೀ ದೈನಂದಿನ ಜಂಗಮತೆ
>
> ನನ್ನೊಳು ಜನಿಮಿಸಿತೇತಕೆ ಮಮತೆ ?
>
> ಈ ಹೊರ ಜಗಕೂ ನನ್ನೊಳ ಮುದಕೂ
>
> ಏತರ ನಂಟೆಂತದಕೂ ಇದಕೂ ?

ಹೊರ ಜಗತ್ತಿನ ಚಟುವಟಿಕೆಗಳು ಸಾಹಿತಿಯೊಬ್ಬನ ಒಳಜಗತ್ತಿನಲ್ಲಿ ಪರಿಭಾವನೆಯ ವಸ್ತುವಾಗಿ ಕಲಾಕೃತಿಯೊಂದಕ್ಕೆ ಕಾರಣವಾಗುತ್ತದೆ. ಅಂತರಂಗ - ಬಹಿರಂಗಗಳ ಜೋಡಿಯ ಮೋಡಿಯೊಂದಿಗೆ ರಸಲೋಕವೊಂದನ್ನು ಸಾಹಿತಿ ನಿರ್ಮಿಸುತ್ತಾನೆ. ಸಾಹಿತ್ಯ ಕೃತಿಯೊಂದು ನಿರ್ಮಾಣವಾಗುತ್ತದೆ.

ಸಾಹಿತ್ಯ ಕೃತಿ ನಿರ್ಮಾಣವಾಗುವ ವಿವಿಧ ಹಂತಗಳನ್ನು - ಬಗೆಯನ್ನೂ ವಿಮರ್ಶಕರೊಬ್ಬ ಹೀಗೆ ವಿವರಿಸುತ್ತಾರೆ : ನಮ್ಮ ಅನುಭವಗಳಿಗೆ ಕಾರಣವಾದುದು ಈ ಲೋಕ ಮತ್ತು ಅದಕ್ಕೆ ಪರಿಮಿಡಿಯುವ ಇಂದ್ರಿಯಗಳು. ಈ ಲೋಕ ವ್ಯಾಪಾರಗಳಿಗೆ ಪರಿಮಿಡಿಯುವ ಕ್ರಿಯೆಗೆ ಅಥವಾ ಇಂದ್ರಿಯಗಳಿಗೆ ವಸ್ತುಗಳ ಇರವು ಅರಿವಾಗುವ ವ್ಯಾಪಾರಕ್ಕೆ ವೇದನೆ (Sensation) ಎನ್ನಬಹುದು. ನಮ್ಮ ಅನುಭವ

ಸಂಗ್ರಹದಲ್ಲಿ ಈ ವೇದನೆಗಳ ಪಾತ್ರ ತುಂಬ ಪ್ರಮುಖ ವಾದುದು. ಹಲವು ವಸ್ತುಗಳಿಗೆ ಹಲವು ತೆರನಾಗಿ ತೋರುವ ಈ ಪ್ರತಿಕ್ರಿಯೆಗಳಿಗೆ ಮೂಲವಾದುದು ಸ್ವಭಾವ (instinet). ಹೀಗೆ ಸ್ವಭಾವಜನ್ಯವಾದ ವೇದನೆಗಳ ಅಥವಾ ಇಂದ್ರಿಯಗಳ ಪ್ರತಿಕ್ರಿಯೆಗಳ ಆಧಾರದಿಂದ ಮನಸ್ಸಿನಲ್ಲಿ ಆ ವಸ್ತುವನ್ನು ಕುರಿತ ಸಂವೇದನೆ (feeling) ಉಂಟಾಗುತ್ತದೆ. ಇಂತಹ ಸಹಸ್ರಾರು ಸಂವೇದನೆಗಳು ಪ್ರಜ್ಞೆಯ ದ್ವಾರಾ ನಮ್ಮ ಸುಪ್ತ ಚಿತ್ತ (Sub Consious)ವನ್ನು ಪ್ರವೇಶಿಸಿ ಅಲ್ಲಿ ಹುದುಗಿರುತ್ತದೆ. ಹೀಗೆ ಒದಗಿದ ಸಂವೇದನೆಗಳಿಂದ ಪ್ರಜ್ಞೆ, ಆ ಸಂವೇದನೆಯನ್ನು ಪ್ರಚೋದಿಸುವ ವಸ್ತುಗಳನ್ನು ಕುರಿತು ಸ್ವತಂತ್ರವಾದ ಭಾವನೆ (idea)ಗಳನ್ನು ಕಟ್ಟುತ್ತದೆ. ಇಂತಹ ಭಾವಗಳು ಅಂತರಂಗದಲ್ಲಿ ಒಂದು ಭಾವಕ್ಷೇತ್ರವನ್ನು ನಿರ್ಮಿಸಿ ದಿನವೂ ಒದಗುವ ಅನುಭವಗಳನ್ನು ಅಳೆಯಲು ಅಳತೆ ಗೋಲಾಗಬಹುದು. ಈ ಎಲ್ಲ ಆಂತರಿಕ ಕ್ರಿಯೆಯೂ ನಾವು ವಸ್ತು ಒಂದನ್ನು ನೋಡಿದಾಗ ಆಗುವ ವ್ಯಾಪಾರದ ತಳಹದಿಯಾಗಿದ್ದುಕೊಂಡು ಆ ವಸ್ತುವಿನ ಬಗೆಗೆ ಪ್ರಿಯವಾದ ಅಥವಾ ಅಪ್ರಿಯವಾದ ಭಾವನೆಗಳನ್ನುಂಟು ಮಾಡುತ್ತದೆ.

ಸಾಹಿತ್ಯ ಮತ್ತು ಮನೋವಿಜ್ಞಾನಕ್ಕೆ ಇರುವ ಸಂಬಂಧ ನಿಗೂಢವಾದದ್ದು. ಸೂಕ್ಷ್ಮವಾದದ್ದು. ಸಾಹಿತ್ಯ ಬದುಕಿಗೆ ಸಂಬಂಧಿಸಿದ್ದು ; ಮನೋವಿಜ್ಞಾನ ಮಾನಸಿಕ ಕ್ರಿಯೆ - ಪ್ರತಿಕ್ರಿಯೆಗೆ ಸಂಬಂಧಿಸಿದ್ದು ಎಂದು ಹೇಳಿಬಿಡಬಹುದಾದರೂ, ಸಾಹಿತ್ಯಿಕ ಕೃತಿಯೊಂದು ನಿರ್ಮಾಣ ವಾಗುವುದು ಈ ಮಾನಸಿಕ ಕ್ರಿಯೆ ಹಾಗೂ ಪ್ರತಿಕ್ರಿಯೆಯ ಹಿನ್ನೆಲೆಯಲ್ಲಿಯೇ ಎಂಬುದು ಗಮನಾರ್ಹ. ಏಕೆಂದರೆ, ಒಂದು ಕೃತಿಯ ಆತ್ಮವೆನಿಸಿದ ಭಾವ, ರಸ ಇತ್ಯಾದಿಗಳನ್ನು ಮನೋವಿಜ್ಞಾನದ ಬೆಳಕಿನಲ್ಲಿಯೇ ಒರೆ ಹಚ್ಚಿ ನೋಡಬೇಕಾಗುತ್ತದೆ; ಹಾಗೆ ನೋಡಿದಾಗಲೇ ಕೃತಿಕಾರನೊಬ್ಬನ ಒಳಸ್ಥಿತಿ ಅರ್ಥವಾಗುವುದು ಹಾಗೂ ಆ ಕೃತಿಯ ಸ್ಥಾನ ನಿರ್ಣಯವಾಗುವುದು.

ಸಾಹಿತ್ಯಕ್ಕೆ ಹೋಲಿಸಿದರೆ ಮನೋವಿಜ್ಞಾನ ಇತ್ತೀಚಿನದು. ಸಾಹಿತ್ಯ ಕೃತಿಗಳಲ್ಲಿ, ಕೃತಿಕಾರನಲ್ಲಿ ಅದನ್ನು ಗುರುತಿಸಿ ಅದಕ್ಕೊಂದು ವಿಶೇಷ ಸ್ಥಾನವನ್ನು ಕೊಟ್ಟಿದ್ದು ಕೇವಲ ನೂರು ವರ್ಷಗಳಿಂದೀಚೆಗಷ್ಟೆ. ಆದರೆ ಸಾಹಿತ್ಯ ಅದಕ್ಕಿಂತ ಎಷ್ಟೋ ಪಟ್ಟು ಹಳೆಯದು. ಹಾಗೆಂದಾಕ್ಷಣ ಮನೋವಿಜ್ಞಾನ ಅದಕ್ಕೆ ಹಿಂದೆ ಸಾಹಿತ್ಯ ಕ್ಷೇತ್ರದಲ್ಲಿ ಇರಲೇ ಇಲ್ಲ ಎಂದಲ್ಲ. ಯಾವೊಂದು ಸಾಹಿತ್ಯ ಕೃತಿಯೂ ವ್ಯಾಪಕಾರ್ಥದಲ್ಲಿ ಸಾಹಿತಿಯೊಬ್ಬನ ಯಾವುದಾದರೂ ಒಂದು ಮನಸ್ಥಿತಿಯಲ್ಲಿಯೇ ರೂಪುಗೊಳ್ಳುವಂತಹುದು. ಸಾಹಿತಿ ತನ್ನ ಕೃತಿಯಲ್ಲಿ ಯಾವುದಾದರೂ ಒಂದು ಮನಸ್ಥಿತಿಯ ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡೇ ಕೃತಿ ರಚನೆ ಮಾಡುತ್ತಾನೆ. ಕಾವ್ಯ ಸೃಷ್ಟಿ ಒಂದು ಬಗೆಯ ಭೂತ ಚೇಷ್ಟೆ ಎಂಬ ನಂಬಿಕೆ ಹಲವು ಸಂಸ್ಕೃತಿಯಲ್ಲಿ ಇರುವುದಾಗಿ ಹೇಳುತ್ತಾರೆ. ಭೂತಚೇಷ್ಟೆಗೂ - ಮನೋವಿಕಾರಕ್ಕೂ ಸಂಬಂಧ ಕಲ್ಪಿಸುವುದೂ ಉಂಟು. ಶೇಕ್ಸ್‌ಪಿಯರ್ - ಹುಚ್ಚರ ಹಾಗೂ ಪ್ರೇಮಿಗಳ ಗುಂಪಿನಲ್ಲಿ ಕವಿಗಳನ್ನು ಸೇರಿಸುತ್ತಾನೆ. ಸಾಕ್ರಟೀಸ್ ಕೂಡ - ಕವಿಯಾದವನಲ್ಲಿ ಸ್ವಲ್ಪ ಹುಚ್ಚಿನ ಅಂಶ ಇದ್ದರೆ ಮಾತ್ರ ಉತ್ತಮ ಕಾವ್ಯ ರಚಿಸಬಲ್ಲ ಎನ್ನುತ್ತಾನೆ. ಅಂದರೆ ಇವೆಲ್ಲವೂ - ಸೃಷ್ಟಿ ಕ್ರಿಯೆಗೂ, ವ್ಯಕ್ತಿಯೊಬ್ಬನ ಮನೋವಿಕಾರಕ್ಕೂ ಇರುವ ಸಂಬಂಧವನ್ನು ಸೂಚಿಸುತ್ತವೆ.

ನಮ್ಮ ಪ್ರಾಚೀನ ಕಾವ್ಯಗಳಾದ ರಾಮಾಯಣ, ಮಹಾಭಾರತಗಳಿಂದ ಹಿಡಿದು ಇಲ್ಲಿಯವರೆಗಿನ ಕೃತಿಗಳೆಲ್ಲವೂ ಇಂತಹ ಒಂದು ಮನಃಸ್ಥಿತಿಯಲ್ಲಿಯೇ ರಚನೆಗೊಂಡುವುಗಳು. ಏಕೆಂದರೆ

ತೊಳಲುವ, ವಿಚಿತ್ರವಾಗಿ ವರ್ತಿಸುವ ಹೆಣ್ಣೊಬ್ಬಳ ಧಾರುಣ ಚಿತ್ರವನ್ನು ಕಾದಂಬರಿಕಾರ್ತಿ ಕೊಟ್ಟಿದ್ದಾರೆ. ಹಾಗೆಯೇ ಹೊರ ನೋಟಕ್ಕೆ ಎಲ್ಲಾ ಸರಿಯಾಗಿ ತೋರಿದರೂ, ಸುಪ್ತ ಚೇತನದ ತೊಳಲಾಟ - ಬಳಲಾಟ ಯಾರಿಗೂ ಗೋಚರವಾಗದೆ ನರಳಾಡುವ ವಸ್ತುವೊಂದನ್ನು ಚಿತ್ರಿಸುವ 'ದೂರದ ಬೆಟ್ಟ' ಕಾದಂಬರಿ ಮತ್ತೊಂದು ಇಂತಹದೇ ಸಮಸ್ಯೆಯನ್ನು ಸ್ವಾರಸ್ಯವಾಗಿ ಬಣ್ಣಿಸುತ್ತದೆ. ಹೀಗೆ ಅವರ 'ಶರಪಂಜರ', 'ಮುಚ್ಚಿದ ಬಾಗಿಲು' ಕಾದಂಬರಿಗಳು ಗಮನಾರ್ಹ.

ಮನೋವಿಜ್ಞಾನದ ಹಿನ್ನೆಲೆಯಲ್ಲಿ ರೂಪುಗೊಳ್ಳುವ ಈ ತರಹದ ಕಾದಂಬರಿಗಳು ಹಲವು ದೃಷ್ಟಿಯಿಂದ ತಮ್ಮ ವೈಶಿಷ್ಟ್ಯತೆಯನ್ನು ಉಳಿಸಿಕೊಳ್ಳುತ್ತವೆ, ಆ ಒಂದು ಭಾಷೆಯ ಸಾಹಿತ್ಯ ಕ್ಷೇತ್ರಕ್ಕೆ ಒಳ್ಳೆಯ ಕೊಡುಗೆಗಳಾಗುತ್ತವೆ ಎಂಬುದೇನೋ ನಿಜ. ಆದರೆ ಅವು ಸ್ವಲ್ಪ ಆಯ ತಪ್ಪಿದರೂ, ಅವುಗಳ ಕಲಾತ್ಮಕತೆ ದಾರಿ ತಪ್ಪುವ ಅಪಾಯ ಉಂಟು. ಅವು ಬದುಕಿನ ಅನುಭವದ ಅಭಿವ್ಯಕ್ತಿಯಾಗುವ ಬದಲು, ವೈಜ್ಞಾನಿಕ ಸರಳ ನಿರೂಪಣೆಗೆ ಸಾಧನವಾಗಿಬಿಡುವ ಸಾಧ್ಯತೆಯೂ ಇರುತ್ತದೆ.

ಸಾಹಿತ್ಯ ಕೃತಿಯೊಂದರ ಸೃಷ್ಟಿ, ಸ್ವರೂಪ, ವಿಷಯ ನಿರೂಪಣೆ ಹಾಗೂ ಅದರ ಪರಿಣಾಮಗಳ ಮೇಲೆ ಮನೋವಿಜ್ಞಾನವು ವಿಶೇಷವಾದ ಬೆಳಕು ಚೆಲ್ಲುತ್ತದೆ. ಮನೋವಿಜ್ಞಾನ ಇಲ್ಲಿ ಕೃತಿಕಾರನೊಬ್ಬನ ವಿವಿಧಾನುಭವಗಳನ್ನು, ಸ್ಫೂರ್ತಿಯನ್ನು ಅಧ್ಯಯನಕ್ಕೆ ಒಳಪಡಿಸಿ ಅದರ ವೈಶಿಷ್ಟ್ಯವನ್ನು ಪತ್ತೆ ಹಚ್ಚುತ್ತದೆ. ಈ ಹಿನ್ನೆಲೆಯಲ್ಲಿಯೇ ಮನೋವಿಜ್ಞಾನಿ ಆ ಕೃತಿಯ ಒಳ ಹೊಕ್ಕು ಕವಿಗೂ ಅವನ ಸ್ಫೂರ್ತಿಗೂ ಹಾಗೂ ಅವನ ಕೃತಿಗೂ ಕಾರ್ಯನುಕಾರಣ ಸಂಬಂಧವನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. ಈ ಶೋಧನೆಗೆ ಕವಿಯ ವ್ಯಕ್ತಿತ್ವವನ್ನೇ ಆಧರಿಸುತ್ತದೆ. ಅವನ ದೈಹಿಕ ಮತ್ತು ಮಾನಸಿಕ ಗತಿ - ಸ್ಥಿತಿಯನ್ನು ಅವಲಂಬಿಸುತ್ತದೆ. ಏಕೆಂದರೆ, ಯಾವುದೇ ಒಂದು ಉತ್ತಮ ಕೃತಿ ಹೊರಗಿನ ಒತ್ತಡಗಳಿಂದ, ಅನುಭವಗಳಿಂದ ಎಷ್ಟೇ ಪ್ರೇರಣೆ ಪಡೆದಿದ್ದರೂ, ಅದರ ಕಲಾತ್ಮಕ ಸಿದ್ಧ ರೂಪ ಹೊರಚಿಮ್ಮುವುದು ಕೃತಿಕಾರನ ಮಾನಸಿಕ ಸ್ಥಿತಿಯಿಂದಲೇ. ಇದನ್ನು ಹೊರತೆಗೆಯುವಲ್ಲಿ ಮನೋವಿಜ್ಞಾನ ಸಹಾಯಕವಾಗುತ್ತದೆ. ಅನೇಕ ಕೃತಿಗಳ ಅಂತಸ್ಸತ್ವವನ್ನು ಭೇದಿಸಲು ಆ ಕವಿಗಳ ಆಂತರಿಕ ಜೀವನದ ಪರಿಚಯ ಬೇಕಾಗುತ್ತದೆ. ಅದರ ಹೊರತು ಕೃತಿಯ ಪೂರ್ಣ ಪರಿಚಯ ಸಾಧ್ಯವಾಗುವುದಿಲ್ಲ. ಕವಿಗೂ - ಕೃತಿಗೂ ಇರುವ ಸಂಬಂಧವನ್ನು, ಅದು ರೂಪುಗೊಂಡಿರಬಹುದಾದ ಸಂದರ್ಭದ ಹಿನ್ನೆಲೆಯನ್ನು ಅರಿಯಲು ವಿಮರ್ಶಕನಾದವನಿಗೆ ಮನೋವಿಜ್ಞಾನದ ನೆರವು ಅನಿವಾರ್ಯವಾಗುತ್ತದೆ.

ಸಾಹಿತ್ಯ ಕ್ಷೇತ್ರದಲ್ಲಿ ಮನೋವಿಜ್ಞಾನ ಪ್ರಮುಖವಾಗಿ ವಿಮರ್ಶಕನಿಗೆ ನೆರವಾಗುವಂತ ಹುದು. ಮನೋವೈಜ್ಞಾನಿಕ ವಿಮರ್ಶೆ ರಿನೆವೆಲೆಕ್ ಮತ್ತು ಆಸ್ಟೈನ್ ವಾರನ್ ಅವರುಗಳು ಹೇಳುವ ಹಾಗೆ : "ಲೇಖಕನ ಮನೋವೈಜ್ಞಾನಿಕ ಅಧ್ಯಯನವಾಗಬಹುದು, ಸೃಜನ ಕ್ರಿಯೆಯ ಅಧ್ಯಯನವಾಗಬಹುದು, ಸಾಹಿತ್ಯ ಕಲಾ ಕೃತಿಗಳಲ್ಲಿರುವ ಮನೋವೈಜ್ಞಾನಿಕ ಮಾದರಿಗಳ ಮತ್ತು ನಿಯಮಗಳ ಅಧ್ಯಯನವಾಗಬಹುದು ಅಥವಾ ವಾಚಕರ ಮೇಲೆ ಸಾಹಿತ್ಯದ ಪರಿಣಾಮ ಗಳ ಅಧ್ಯಯನವಾಗಬಹುದು............. ಇವುಗಳಲ್ಲಿ ಪ್ರಾಯಃ ಮೂರನೆಯದು ಮಾತ್ರ ನಿಯತಾರ್ಥದಲ್ಲಿ ಸಾಹಿತ್ಯಕ ಅಧ್ಯಯನಕ್ಕೆ ಸಂಬಂಧಿಸಿದ್ದು."

ಆದರೆ, ಸಾಹಿತ್ಯ ಸೃಷ್ಟಿಯಲ್ಲಾಗಲಿ ಅಥವಾ ಸಾಹಿತ್ಯ ವಿಮರ್ಶೆಯಲ್ಲಾಗಲಿ ಮನೋವಿಜ್ಞಾನವನ್ನು ಬಳಸಿಕೊಳ್ಳುವಾಗ ಎಚ್ಚರ ವಹಿಸುವುದು ಅಗತ್ಯ ಎಂಬುದು ಬಹುಜನರ ಅಭಿಪ್ರಾಯ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬರುವ ಇತರೆ ಯಾವುದೇ ವಿಜ್ಞಾನವಾದರೂ ಅದು, ಸಾಹಿತ್ಯದ ಆಸ್ವಾದನೆಗೆ, ರಸಾನುಭವಕ್ಕೆ ಪೂರಕವಾಗುವಂತಿರಬೇಕೇ ಹೊರತು ಮಾರಕವಾಗಬಾರದು. ಮನೋವಿಜ್ಞಾನಿ ಆಡ್ಲರ್ ಒಂದು ಕಡೆ ಹೀಗೆ ಹೇಳುತ್ತಾನೆ: "ಒಂದು ಕಲಾಕೃತಿಯ ಆಕರ್ಷಣೆ ಅದರ ಸಂಶ್ಲೇಷಣದಿಂದ ಹುಟ್ಟುತ್ತದೆ, ವಿಜ್ಞಾನದ ವಿಶ್ಲೇಷಣೆ ಅದನ್ನು ಕೆಡಿಸಿ ನಾಶಗೊಳಿಸ ಬಹುದು". ಕಲೆ ಪ್ರತಿಭೆಯಿಂದ ಜನ್ಮ ತಳೆಯುವಂತಹುದೇ ಹೊರತು, ಕೃತಿಕಾರನೊಬ್ಬನ ಮನೋವಿಶ್ಲೇಷಣ ಕ್ರಿಯೆಯಿಂದಲ್ಲ.

ರಿನೆವೆಲೆಕ್ ಮತ್ತು ವಾರೆನ್‌ರು ಹೇಳುವ ಹಾಗೆ: "ಕೆಲವೊಮ್ಮೆ ಮನೋವೈಜ್ಞಾನಿಕ ಒಳನೋಟ ಕಲಾಮೌಲ್ಯವನ್ನು ಹೆಚ್ಚಿಸಬಹುದು. ಇಂಥ ಸಂದರ್ಭಗಳಲ್ಲಿ ಅದು ಮುಖ್ಯ ಕಲಾಮೌಲ್ಯಗಳನ್ನು ಸಂಕೀರ್ಣತೆ ಸುಸಂಬದ್ಧತೆಗಳ ಮೌಲ್ಯವನ್ನು - ದೃಢೀಕರಿಸುತ್ತದೆ....... ಮನಸ್ಸು ಮತ್ತು ಅದರ ವ್ಯಾಪಾರಗಳ ಪ್ರಜ್ಞಾಪೂರ್ವಕ ವ್ಯವಸ್ಥಿತ ತತ್ತ್ವವೆಂಬ ಅರ್ಥದಲ್ಲಿ ಮನೋವಿಜ್ಞಾನ ಕಲೆಗೆ ಅನಗತ್ಯ ; ತನಗೆ ತಾನೇ ಅದು ಕಲಾಮೌಲ್ಯವನ್ನು ಪಡೆದಿಲ್ಲ..... ಮನೋವಿಜ್ಞಾನ ಸೃಷ್ಟಿ ಕ್ರಿಯೆಗೆ ಸಿದ್ಧತೆಯಷ್ಟೇ. ಕೃತಿಯಲ್ಲಿ ಮನೋವೈಜ್ಞಾನಿಕ ಸತ್ಯ ಕಲಾಮೌಲ್ಯವಾಗುವುದು ಯಾವಾಗ ಎಂದರೆ, ಅದು ಸುಸಂಬದ್ಧತೆಯನ್ನು ಹೆಚ್ಚಿಸಿದಾಗ - ಎಂದರೆ ಅದು ಕಲೆಯಾದಾಗ ಮನೋವಿಜ್ಞಾನದ ಹೆಸರಿನಲ್ಲಿ ಬರುವ ಕೆಟ್ಟ ಕಾದಂಬರಿಗಳೆಲ್ಲಾ ಇದಕ್ಕೆ ಉದಾಹರಣೆಯಾಗಿ ನಿಲ್ಲುತ್ತವೆ.

ಮನೋವಿಜ್ಞಾನ ಮತ್ತು ಸಾಹಿತ್ಯದ ಸಂಬಂಧ ಅಥವಾ ಸಾಹಿತ್ಯದ ಮೇಲೆ ಮನೋವಿಜ್ಞಾನದ ಪ್ರಭಾವ ಇರುವುದು ಸ್ಪಷ್ಟವಾದರೂ, ಮನೋವಿಜ್ಞಾನದ ಸಹಾಯ ಹೆಚ್ಚಾಗಿ ಬೇಕಾಗುವುದು ವಿಮರ್ಶಕನಿಗೇ ಹೊರತು ಕೃತಿಕಾರನಿಗಲ್ಲ ಎಂಬ ವಿಚಾರವೂ ದಟ್ಟವಾಗಿದೆ. ಮನೋವಿಜ್ಞಾನದ ಸೂತ್ರಗಳನ್ನು ಬಳಸುವುದರ ಮೂಲಕ, ಸಾಹಿತ್ಯ ಕೃತಿಯ ಮೂಲಾಂಶವನ್ನು ನಿರ್ದಿಷ್ಟವಾಗಿ ಮತ್ತು ಶಾಸ್ತ್ರೀಯವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಸಾಹಿತ್ಯ ಕೃತಿಯೊಂದರ ಪಾತ್ರಗಳನ್ನು ಅರ್ಥೈಸಲು ಮನೋವಿಜ್ಞಾನದ ತಂತ್ರಗಳನ್ನು ಬಳಸಬಹುದು. ಕತೆ, ಕಾವ್ಯ, ನಾಟಕ, ಕಾದಂಬರಿಯೊಂದರಲ್ಲಿ ಬರುವ ಪಾತ್ರಗಳನ್ನು ನಿಜಜೀವನದ ಪಾತ್ರಗಳೆಂದೇ ಭಾವಿಸಿ, ಅವುಗಳ ಸ್ವಭಾವ, ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಗಿರುವ ಕಾರಣಗಳನ್ನು ಮನೋವಿಶ್ಲೇಷಣ ಸಿದ್ಧಾಂತದ ಸೂತ್ರಗಳ ಮೂಲಕ ವಿವರಿಸಲು ಸಾಧ್ಯವಾಗುತ್ತದೆ. ಅಂತಹ ಕಾರ್ಯ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ನಡೆದಿದೆ. ಹೀಗೆ ಸಾಹಿತ್ಯ ಕೃತಿಯೊಂದರ ಪಾತ್ರಗಳನ್ನು ನೋಡುವ ದೃಷ್ಟಿ ತೀರ ಹಳೆಯದಲ್ಲದಿದ್ದರೂ, ಅನಂತರ ಅದರ ಸಂಪುಟಗಳೇ ಹೊರ ಬಂದಿವೆ.

ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ಮನೋವಿಜ್ಞಾನವನ್ನು ಸಮರ್ಥವಾಗಿ ಹಾಗೂ ಶಾಸ್ತ್ರೀಯವಾಗಿ ಬಳಸಲು ಪ್ರಾರಂಭಿಸಿದ್ದು ಈ ಶತಮಾನದಲ್ಲಿಯೇ. ಇದರ ಮೂಲ ಕಾರಣ ಕರ್ತ ; ಮನೋವಿಜ್ಞಾನದ ಜನಕನೆನಿಸಿದ ಸಿಗ್ಮಂಡ್ ಫ್ರಾಯ್ಡ್. ಮನೋವಿಜ್ಞಾನದ ರತ್ನತ್ರಯರೆನಿಸಿದ - ಕಾರ್ಲ್ ಗುಸ್ಟಾಫ್ ಯೂಂಗ್ ಮತ್ತು ಆಲ್‌ಫ್ರೆಡ್ಲರ್ ಈ ಗುಂಪಿನಲ್ಲಿ ಇವನೇ ಹಿರಿಯ ಹಾಗೂ ಆ ತಂಡದ ನಾಯಕ. ಮೂವರೂ ಒಟ್ಟಿಗೇ ಇದ್ದು ಅನಂತರ ತಮ್ಮ ತಮ್ಮ ಅಭಿಪ್ರಾಯ ಭೇದದಿಂದಾಗಿ ಬೇರೆಯಾದವರು. ಸಾಹಿತ್ಯದಲ್ಲಿ ಈ ಬಗೆಯ ಮನೋವೈಜ್ಞಾನಿಕ ವಿಮರ್ಶೆಗೆ ಫ್ರಾಯ್ಡನ 'ಸ್ವಪ್ನಗಳ ವಿವರಣೆ' (The interpretation of Dreams) ಎಂಬ ಜರ್ಮನ್

ಭಾಷೆಯ ಕೃತಿಯೇ ನಾಂದಿ. ಅಲ್ಲಿಯವರೆಗೆ ಸಾಹಿತ್ಯ ವಿಮರ್ಶಕನ ಸ್ವಂತ ಅನುಭವ ಹಾಗೂ ಸಾಮಾನ್ಯ ಮಟ್ಟದಲ್ಲಿದ್ದು ನಿರ್ಧರಿತವಾಗುತ್ತಿದ್ದ ವಿಮರ್ಶೆ, ಫ್ರಾಯ್ಡನ ತರುವಾಯ ಅದು ಪ್ರಯೋಗಸಿದ್ಧ ತತ್ತ್ವಗಳ ನೆಲೆಗಟ್ಟಿನ ಮೇಲೆ ನಿರ್ದಿಷ್ಟ ರೂಪದಲ್ಲಿ ಹೊರಬರಲಾರಂಭಿಸಿತು. ಈ ಕ್ಷೇತ್ರದಲ್ಲಿ ಫ್ರಾಯ್ಡ್ ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿದ ಪ್ರತಿಭಾವಂತ. ಕಲೆ, ಸಾಹಿತ್ಯದ ಮೇಲೆ ಗಾಢವಾದ ಪ್ರಭಾವ ಬೀರಿದ ಈ ಮನೋವಿಜ್ಞಾನಿಯ ವಾದವನ್ನು 'ಲೈಂಗಿಕ ವಾದ' ಎಂದು ಕರೆಯುವವರೂ ಉಂಟು. ಮನೋರೋಗಕ್ಕೆ ಈ ಲೈಂಗಿಕತೆಯೇ ಕಾರಣವೆಂದು, ಎಲ್ಲಕ್ಕೂ ಅದರ ಸಂಬಂಧವನ್ನೇ ಮೂಲವಾಗಿ ಫ್ರಾಯ್ಡ್ ಪರಿಗಣಿಸುವುದೇ ಇದಕ್ಕೆ ಕಾರಣ.

ವಾಸ್ತವಿಕ ಬದುಕಿನಲ್ಲಿ ಈಡೇರಿಸಿಕೊಳ್ಳಲಾರದ ಬಯಕೆಗಳನ್ನು ಕಲಾವಿದ ಅಥವಾ ಸಾಹಿತಿ ತನ್ನ ಕೃತಿಯ ಮೂಲಕ ಅವನ್ನು ಅಭಿವ್ಯಕ್ತಿಗೊಳಿಸುತ್ತಾನೆ ಎಂಬುದು ಫ್ರಾಯ್ಡ್‌ನ ಸಿದ್ಧಾಂತ. ಇಲ್ಲಿ ಫ್ರಾಯ್ಡ್ ಕಲೆ ವೈಯಕ್ತಿಕವಾದುದೆಂದು ಹೇಳಿದರೆ, ಯೂಂಗ್ ಅದನ್ನೇ ಸಮಷ್ಟಿ ಸ್ವರೂಪದ್ದು ಎಂದು ಸಾಧಿಸುತ್ತಾನೆ. ಈ ದೃಷ್ಟಿಯಿಂದ ನೋಡುವಾಗ ಯೂಂಗ್‌ನ ವಿಚಾರಧಾರೆ ಭಾರತೀಯ ಮನೋಧರ್ಮಕ್ಕೆ ಹೆಚ್ಚು ಹೊಂದಿಕೊಳ್ಳುವಂತಹುದು. ಇಲ್ಲಿ ಕಾಮ ಧರ್ಮಕ್ಕೆ ಅಧೀನವೇ ಹೊರತು, ಫ್ರಾಯ್ಡ್ ಹೇಳುವಂತೆ ಕಾಮವೇ ಸರ್ವಸ್ವವಲ್ಲ - ಸ್ಥಾಯಿ ಅಲ್ಲ.

ಮುಖ್ಯವಾಗಿ ಮನೋವಿಜ್ಞಾನ, ಸಾಹಿತಿಯೊಬ್ಬನ ಸಾಹಿತ್ಯ ಕೃತಿಯ ಒಳ ಹೊಕ್ಕು ಅಧ್ಯಯನ ಮಾಡಲು ನೆರವಾಗುತ್ತದೆ ಮತ್ತು ಅದಕ್ಕೆ ಬೇಕಾದ ಸೂತ್ರಗಳನ್ನು ಒದಗಿಸುತ್ತದೆ. ಹಾಗೆಯೇ ಮನಃಶಾಸ್ತ್ರದ ಕೆಲವೊಂದು ಮೂಲಭೂತ ವಿಚಾರಗಳೂ ಲೇಖಕರಿಗೂ ತಿಳಿದಿರುವುದು ಸೃಷ್ಟಿ ಕ್ರಿಯೆಯ ದೃಷ್ಟಿಯಿಂದ ಒಳ್ಳೆಯದು. ಯಾವುದೇ ವಿಚಾರದ ಬಗ್ಗೆ ಎಚ್ಚರ ಉಂಟು ಮಾಡಲು ಅದು ಸಹಾಯಕವಾಗುತ್ತದೆ.

ಸಾಹಿತ್ಯ ಮತ್ತು ಮನಃಶಾಸ್ತ್ರದ ಸಂಬಂಧ ಇಷ್ಟೆಲ್ಲಾ ಇದೆ ಎಂದು ಏನೇ ಹೇಳಿದರೂ ; ಸಾಹಿತ್ಯಕ್ಕೆ ತನ್ನದೇ ಆದ ಪ್ರಭುತ್ವವಿದೆ. ಅದು ಈ ಬದುಕಿನ ವ್ಯಾಪ್ತಿಗೆ ಬರುವ ಎನೆಲ್ಲವನ್ನೂ ತಬ್ಬಿನಿಂತ ಮಹಾನ್ ವೃಕ್ಷ. ಅದರ ಬಿಳಿಲುಗಳು ಉಳಿದೆಲ್ಲ ಕ್ಷೇತ್ರಗಳಲ್ಲಿಯೂ ಚಾಚಿ ನಿಂತಿವೆ. ಆ ಬಿಳಿಲುಗಳ ಮೂಲಕ ತನಗೆ ಬೇಕಾದಷ್ಟನ್ನು, ಬೇಕಾದ ಕ್ಷೇತ್ರದಿಂದ ಸಾಕಷ್ಟನ್ನು ಹೀರಿ ಪುಷ್ಟಿಗೊಳ್ಳುತ್ತ ಬಂದಿದೆಯೇ ಹೊರತು, ವೈಶಿಷ್ಟ್ಯ - ವೈವಿಧ್ಯಗಳನ್ನು ಸಾಧಿಸಿಕೊಂಡಿದೆಯೇ ಹೊರತು ; ಯಾವುದೊಂದಕ್ಕೂ ತನ್ನನ್ನೇ ಈಡುಮಾಡಿಕೊಂಡಿಲ್ಲ, ನಷ್ಟವನ್ನನುಭವಿಸಿಲ್ಲ.

* * * * *

ಕನ್ನಡ ಸಾಹಿತ್ಯದಲ್ಲಿ ಕನಕದಾಸರ ಸ್ಥಾನ

೧

ಕನ್ನಡ ಸಾಹಿತ್ಯದಲ್ಲಿ ಕನಕದಾಸರ ಸ್ಥಾನ ಹೆಚ್ಚು ವೈಶಿಷ್ಟ್ಯದಿಂದ ಕೂಡಿದುದು. ಅದರಲ್ಲಿಯೂ ದಾಸಸಾಹಿತ್ಯದಲ್ಲಿಯಂತೂ ಇನ್ನೂ ಹೆಚ್ಚಿನ ರೀತಿಯದು. ಅವರ ವರ್ಣಮಯ ಬದುಕು, ಅದಕ್ಕನುಗುಣವಾದ ಸಾಹಿತ್ಯ ಸೃಷ್ಟಿ, ಕನ್ನಡಸಾಹಿತ್ಯದಲ್ಲಿ ಅವರಿಗೊಂದು ವಿಶೇಷ ಸ್ಥಾನವನ್ನು ದೊರಕಿಸಿ ಕೊಡುವಷ್ಟು ವಿಶಿಷ್ಟವಾದುದಾಗಿದೆ.

ಕನಕದಾಸರು ಕವಿ ಅಷ್ಟೇ ಅಲ್ಲ, ಕಲಿಯೂ ಹೌದು. ಕವಿ ಕಲಿಯಾಗಿ ಕೀರ್ತಿ ಗಳಿಸಿದ ಪಂಪನಿಗಿಂತ ಒಂದು ಕೈ ಮಿಗಿಲೆಂಬಂತೆ - ಸಂಸಾರಿಯಾಗಿ, ಸಂತನಾಗಿ, ದೊಡ್ಡ ಭಕ್ತನಾಗಿ ಕೀರ್ತನಕಾರನಾಗಿ, ಎಲ್ಲಕ್ಕಿಂತ ಮಿಗಿಲಾಗಿ ಮಹಾರಸಿಕತೆಯನ್ನು ತೋರುವ ಕವಿಯಾಗಿ ಮೆರೆಯು ವಂತೆಯೇ ಕೀರ್ತನೆಗಳ ಮೂಲಕ ದೊಡ್ಡ ಸಮಾಜ ಸುಧಾರಕನಾಗಿ ಹಾಗೂ ಆಧ್ಯಾತ್ಮಿಕ ಶಿಖರದ ತುತ್ತ ತುದಿಯನ್ನೇರಿದ ಸಿದ್ಧಪುರುಷನಾಗಿ ವಿಶೇಷ ಗಮನ ಸೆಳೆಯುತ್ತಾರೆ. ತಮ್ಮ ವೈಯಕ್ತಿಕ ಬದುಕಿನಲ್ಲಿ ಕಂಡ ಹಲವೆಂಟು ಏರಿಳಿತಗಳು, ಕಷ್ಟ ಸುಖಗಳು ಅವರನ್ನು ಆಧ್ಯಾತ್ಮಿಕತೆಯ ಕಡೆಗೆ ಹೊರಳಿಸಲು ಕಾರಣವಾದರೂ, ಕೇವಲ ಧ್ಯಾನಸ್ಥಿತಿಯಲ್ಲಷ್ಟೇ ಮೈಮರೆಯದೆ ವೈಚಾರಿಕತೆಯ ತುತ್ತತುದಿಗೂ ಅವರನ್ನು ಕೊಂಡೊಯ್ದು ಅದರ ವಾಸ್ತವಿಕತೆಯನ್ನು ಬಯಲು ಮಾಡುವುದರ ಮೂಲಕ ಹಲವರ ಕಣ್ಣು ತೆರೆಸಲು ಕಾರಣವಾದಂತೆ ಆದದ್ದು ಕನಕದಾಸರ ವ್ಯಕ್ತಿತ್ವದ ಒಂದು ವೈಶಿಷ್ಟ್ಯವೆಂದೇ ಹೇಳಬಹುದು.

ಕನಕದಾಸರು ಅಂದು ದಾಸಪಂಥದಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಹೋರಾಟ ನಡೆಸಿದಂತೆ, ಇಂದು ಅವರಿಂದ ರಚಿತವಾದ ಸಾಹಿತ್ಯ ಅಂತಹುದೇ ಸಮಸ್ಯೆಯನ್ನು ಎದುರಿಸುವಂತಾಗಿದೆ. ಅವರ ಸಾಹಿತ್ಯಶಕ್ತಿಯನ್ನು ಸಮಸ್ಥಿತಿಯಲ್ಲಿ ತೂಗಿ ನೋಡುವ ಕಾರ್ಯ ಸಾರ್ವತ್ರಿಕವಾಗಿ ನಡೆದಿಲ್ಲ ಎಂದೇ ಹೇಳಬಹುದು. ಉಳಿದ ಕೀರ್ತನಕಾರರಿಗಿಂತ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡು ಸಾಹಿತ್ಯ ಸೃಷ್ಟಿಯನ್ನು ಮಾಡಿದ ಅವರ ಪ್ರತಿಭೆಯ ಅಪೂರ್ವತೆಯನ್ನು ನಿರ್ಧರಿಸುವ ಕೆಲಸ ಇನ್ನೂ ಆಗ ಬೇಕಾಗಿದೆ. ಕನಕದಾಸರ ವೈಯಕ್ತಿಕ ಬದುಕು ಎಷ್ಟು ವೈವಿಧ್ಯವನ್ನು ಗಳಿಸಿಕೊಂಡಿತ್ತೋ, ಅದರಂತೆಯೇ ಅವರ ಸಾಹಿತ್ಯವೂ ವೈವಿಧ್ಯ ವೈಶಿಷ್ಟ್ಯಗಳ ಸಂಗಮವಾಗಿ ಹೊರ ಚಿಮ್ಮಿರುವುದು ಗಮನಿಸಬೇಕಾದ ಅಂಶ. ತನ್ನದಲ್ಲದ ಒಂದು ಕ್ಷೇತ್ರವನ್ನು ಪ್ರವೇಶಿಸಿ, ದೈವಪ್ರೇರಣೆಯಿಂದ ಹರಿದಾಸರ ಸಂಸರ್ಗವನ್ನು ಪಡೆದು ಹಲವು ಸಾಧನೆಗಳನ್ನು ಮಾಡಿದ ಕನಕದಾಸರ ಶಕ್ತಿ - ಪ್ರತಿಭೆ ಕಾವ್ಯಕುಸುಮವಾಗಿ ಅರಳಿದ್ದು, ಆಧ್ಯಾತ್ಮಿಕ ಜ್ಯೋತಿಯಾಗಿ ಬೆಳಗಿದ್ದು, ವೈಚಾರಿಕತೆಯ ಕ್ರಾಂತಿಯಾಗಿ ಕಂಗೊಳಿಸಿದ್ದು - ಇವೆಲ್ಲ ಪವಾಡಸದೃಶವಾಗಿ ತೋರುತ್ತವೆ.

ಪ್ರಥಮತಃ ಕನಕದಾಸರು ಕವಿ ಹೃದಯವುಳ್ಳವರು. ದಾಸ ಪಂಥದಲ್ಲಿ ಕವಿಗಳೆನಿಸಿ ವಿಶಿಷ್ಟ ಸ್ಥಾನವನ್ನು ಪಡೆದವರು. ಕೀರ್ತನೆ ಮತ್ತು ಕಾವ್ಯ ಎರಡರಲ್ಲಿಯೂ ಜೀವಂತಿಕೆಯನ್ನು ಮೆರೆದವರು.

ಅವರು ಒಳ್ಳೆಯ ಕೀರ್ತನಕಾರರಾಗಿ ತಮ್ಮ ಪ್ರತಿಭೆಯನ್ನು, ಭಕ್ತಿಯ ಪರಾಕಾಷ್ಠತೆಯನ್ನು, ಸಾಮಾಜಿಕ ಕಾಳಜಿಯನ್ನು ತೋರಿರುವಂತೆಯೇ, ಕವಿಗಳಾಗಿ ಕಾವ್ಯತ್ವದ ಸತ್ವವನ್ನು ಮೆರೆದಿದ್ದಾರೆ. ಉಳಿದ ಕೀರ್ತನಕಾರರ ಕೀರ್ತನೆಗಳಲ್ಲಿ ಕಾವ್ಯಗುಣ ಇದ್ದರೂ, ಸಾಮಾಜಿಕ ಕಾಳಜಿ ಹಾಗೂ ಭಕ್ತಿಯ ಆವೇಶ ಇದ್ದರೂ, ಕಾವ್ಯಗುಣ ಅವರಲ್ಲಿ ಸಂಚಾರಿ ಯಾದದ್ದೇ ಹೊರತು, ಕನಕದಾಸರಲ್ಲಿಯಂತೆ ಸ್ಥಾಯಿಯಾದುದಲ್ಲ. ಕನಕದಾಸರು ದಾಸಪಂಥ ವನ್ನು ಸೇರಿದ್ದು ಒಂದು ಆಕಸ್ಮಿಕ ಘಟನೆ ಎನ್ನಬಹುದು. ಅವರ ಜೀವನದಲ್ಲಾದ ಒಂದು ಮಹತ್ತರವಾದ ಘಟನೆ ಅದಕ್ಕೆ ಕಾರಣವೆನ್ನಬಹುದು. ಒಂದು ಪಕ್ಷ ಅವರು ದಾಸಕೂಟವನ್ನು ಸೇರದೆ ಇದ್ದಿದ್ದರೆ, ಅವರಿಂದ ಕೀರ್ತನೆಗಳ ರಚನೆಯಾಗುತ್ತಿರಲಿಲ್ಲ ಅಷ್ಟೆ, ಆದರೆ ಅವರ ಹೃದಯದಲ್ಲಿ ತುಡಿಯುತ್ತಿದ್ದ ಕವಿಪ್ರಜ್ಞೆಗೆ ಯಾವ ಅಡ್ಡಿಯೂ ಬರುತ್ತಿರಲಿಲ್ಲ. ನಿರಾತಂಕವಾಗಿ ಆ ಕಾವ್ಯಧಾರೆ ಹರಿಯುತ್ತಿತ್ತು. ಆ ದೃಷ್ಟಿಯಿಂದ ನೋಡುವಾಗ ಕನಕದಾಸರು ಹುಟ್ಟು ಕವಿಪ್ರತಿಭೆಯುಳ್ಳ ಕವಿ.

ಕನಕದಾಸರಲ್ಲಿ ಭಕ್ತಿ ಮತ್ತು ಕಾವ್ಯಶಕ್ತಿ ಎರಡೂ ಮೇಲುಗೈಯಾಗಿ ಬೆಸೆದುಕೊಂಡು ಬಂದಿವೆ. ಕೀರ್ತನೆಗಳಲ್ಲಿ ಹಾಗೂ 'ಹರಿಭಕ್ತಿಸಾರ'ದಲ್ಲಿ ಅವರ ಭಕ್ತಿಯ ಪರಾಕಾಷ್ಠತೆಯನ್ನು ಕಾಣಬಹುದಾದರೆ, ಅವರ 'ಮೋಹನ ತರಂಗಿಣಿ', 'ನಳ ಚರಿತೆ' ಹಾಗೂ 'ರಾಮಧಾನ್ಯ ಚರಿತೆ' ಇವುಗಳಲ್ಲಿ ಕಾವ್ಯಗುಣ ದಟ್ಟೈಸಿ ಹರಿದಿರುವುದನ್ನು ಕಾಣಬಹುದು. ಮೊದಲನೆಯದರಲ್ಲಿ ತಮ್ಮ ಅಂತರಂಗವನ್ನು ತೋಡಿಕೊಂಡಿದ್ದರೆ, ಎರಡನೆಯದರಲ್ಲಿ ಸಂಪೂರ್ಣ ಕವಿಯಾಗಿಯೇ ನಿಂತು ಕಾವ್ಯಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಹೀಗಾಗಿ ಕನಕದಾಸರು ಒಬ್ಬ ಪರಿಪೂರ್ಣ ಭಕ್ತನೂ, ಕವಿಯೂ ಆಗಿ ಗಮನ ಸೆಳೆಯುತ್ತಾರೆ. ಅವರ ಈ ಎರಡೂ ಬಗೆಯ ಕೃತಿಗಳಲ್ಲಿ ಅದನ್ನು ಪರಿಶೀಲಿಸಬಹುದು.

ಮೊದಲು ಅವರ ಭಕ್ತಿಭಾವ ಸ್ಥಾಯಿಯಾಗಿ ರಚನೆಗೊಂಡಿರುವ ಕೀರ್ತನೆಗಳನ್ನು ಹಾಗೂ 'ಹರಿಭಕ್ತಿಸಾರ' ಕೃತಿಯನ್ನು ಪರಿಶೀಲಿಸಿ ಅನಂತರ ಕಾವ್ಯ ಪ್ರಜ್ಞೆ ಸ್ಥಾಯಿಯಾದ ಇನ್ನುಳಿದ ಕೃತಿಗಳನ್ನು ಪರಿಶೀಲಿಸಬಹುದು. ಈ ಬಗೆಯಾದ ವಿಂಗಡಣೆ ಒಂದರ್ಥದಲ್ಲಿ ಸಾಧುವಾದುದಲ್ಲವಾದರೂ, ಕೇವಲ ಅಧ್ಯಯನದ ಅನುಕೂಲಕ್ಕೆ ಮಾಡಿಕೊಳ್ಳಬಹುದಾದ್ದಷ್ಟೇ. ಏಕೆಂದರೆ ಕಾವ್ಯಪ್ರಜ್ಞೆ ಇಲ್ಲದ ಕೀರ್ತನೆಯಾಗಲೀ - ಕೃತಿಯಾಗಲಿ ಇಷ್ಟು ಕಾಲ ಉಳಿದು ಬರಲು ಸಾಧ್ಯವಿಲ್ಲ ; ಉಳಿದು ಬಂದರೂ ಕವಿಯೊಬ್ಬನ ಹೆಸರನ್ನು ಇಷ್ಟು ಜನಪ್ರಿಯವಾಗಿ ಉಳಿಸಲು ಸಾಧ್ಯವಾಗುವುದಿಲ್ಲ.

೨

ವಚನಕಾರರಾಗಲೀ, ಕೀರ್ತನಕಾರರಾಗಲೀ ಭಕ್ತಿಭಾವ ಪ್ರೇರಿತರಾದವರು. ಆದರೆ ಅಷ್ಟಕ್ಕೇ ನಿಂತವರಲ್ಲ. ಆ ವಲಯವನ್ನು ಪ್ರವೇಶಿಸಬೇಕಾದರೆ ಬದುಕಿನ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವುದು ಮುಖ್ಯ ಎಂದು ಸಾರಿದವರು. ಆ ಕಡೆಗೆ ಹೆಚ್ಚು ಒತ್ತು ಕೊಟ್ಟವರು. ಹಾಗಾಗಿ ಮೊದಲು ಸಮಾಜದ ನಾನಾ ಬಗೆಯ ನಾನಾ ವರ್ಗದ ಜನರ ಸಣ್ಣತನಗಳನ್ನು ಎತ್ತಿ ತೋರಿ ಬಯಲಿಗೆಳೆದು ಅವುಗಳನ್ನು ದೂರ ಮಾಡಲು ಪ್ರಚೋದಿಸಿದವರು ಇವರುಗಳು. ಆ ಕಾರಣದಿಂದಾಗಿ ಇವರುಗಳ ಈ ಬಗೆಯ ರಚನೆಗಳಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿ ಹೊರಹೊಮ್ಮಿರುವುದನ್ನು ಕಾಣಬಹುದು.

ದಾಸ ಪರಂಪರೆಯಲಿ ಕನಕದಾಸರು ಸಮಾಜದ ಕೆಳಗಿನ ಸ ರದಿಂದ ಬಂದವರು. ಅವರು ಆ

ವಲಯವನ್ನು ಪ್ರವೇಶಿಸಿ, ಉಳಿದು ಕೀರ್ತಿ ಗಳಿಸಲು ಬಹಳ ಹೋರಾಟವನ್ನೇ ನಡೆಸ ಬೇಕಾಯಿತು. ಮೇಲ್ವರ್ಗದ ಒಬ್ಬ ವ್ಯಕ್ತಿ ಅಲ್ಲಿಯೇ ನಿಂತು ಈ ಕೆಳವರ್ಗದ ಆಗು - ಹೋಗು ಗಳನ್ನು ಗಮನಿಸುವುದಕ್ಕೂ, ಅಲ್ಲಿಂದಲೇ ಮೇಲೇರಿ ಬಂದು ಮತ್ತೆ ಅದನ್ನು ನೋಡುವುದಕ್ಕೂ ಸಾಕಷ್ಟು ವ್ಯತ್ಯಾಸವಿರುತ್ತದೆ. ಕನಕದಾಸರು ಹಾಗೆ ಈ ಸಮಾಜವನ್ನು ನೋಡಿ ವಿಶಿಷ್ಟಾನುಭವಕ್ಕೆ ಒಳಗಾದವರು. ಅಲ್ಲಲ್ಲಿಯ ನೆಲೆಬೆಲೆಗಳನ್ನು ಚೆನ್ನಾಗಿ ಅರಿತವರು. ಅವರ ಕೀರ್ತನೆಗಳಲ್ಲಿ ಅಂದಿನ ಸಮಾಜದ ಕೆಲವೊಂದು ಕೆಟ್ಟ ಪದ್ಧತಿಗಳನ್ನು ಕಿತ್ತೊಗೆಯುವ ಮನೋಧರ್ಮವಿದೆ. ಕೆಲವೊಂದು ಬರಡು ಭ್ರಮೆಗಳಿಂದ ಬಳಲುತ್ತಿದ್ದವರನ್ನು ತಿದ್ದುವ ಪ್ರಯತ್ನವಿದೆ. ನಿಜವಾದ ಧರ್ಮ ಯಾವುದು, ಸತ್ಯ ಯಾವುದು ಎಂಬುದನ್ನು ತೋರಿಸಿಕೊಡುವ ಋಜು ಮಾರ್ಗವಿದೆ. ಅವರು ತಮ್ಮ ಒಂದು ಕೀರ್ತನೆಯಲ್ಲಿ ಇಡೀ ಸಮಾಜದ ವಿವಿಧ ವರ್ಗದ, ವಿವಿಧ ಬಗೆಯ ಜನರನ್ನು ಪಟ್ಟಿ ಮಾಡಿದಂತೆ "ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ" ಎಂದು ಹೇಳುವಲ್ಲಿ ವಾಸ್ತವಿಕ ಸತ್ಯವನ್ನು ನಿರ್ಭಯವಾಗಿ ಹೇಳಿದ್ದಾರೆ. "ವೇದಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಬೋಧನೆ ಮಾಡುವವರಿಂದಲೇ ಜಾತಿ ಮತಗಳ ಭೇದಭಾವ ಕಂಡು ಬಂದಾಗ ಅವರು ಅದನ್ನು ಕಟುವಾಗಿಯೇ ಟೀಕಿಸಿದ್ದಾರೆ. ಹೇಳುವುದೊಂದು, ಮಾಡುವುದೊಂದು ಆಗಬಾರದು, ನಿಜವಾದ ಸತ್ಯವನ್ನು ಶೋಧಿಸುವ ಕೆಲಸವನ್ನು ಮಾಡುವಂತೆ ಘೋಷಿಸಿದ್ದಾರೆ:

ಕುಲಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ
ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಿಜನಾಭನಿಗರ್ಪಿಸಲಿಲ್ಲವೆ
ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ
ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮಾಂತರಾತ್ಮ ನೆಲೆಯಾದಿ ಕೇಶವನೊಲಿದ .
ಆತನೊಲಿದ ಮೇಲೆ ಯಾತರ ಕುಲವಯ್ಯಾ ll

ಕನಕದಾಸರಲ್ಲಿ ಪೂರ್ವಾಪರ ಯೋಚಿಸುವ ಶಕ್ತಿಯಿದೆ. ತಾರ್ಕಿಕವಾಗಿ ವಿವೇಚಿಸಿ ತೀರ್ಮಾನಿಸುವ ಸಂಕಲ್ಪವಿದೆ. ಅದರಲ್ಲಿಯೂ ದೊಡ್ಡ ಭಕ್ತನೆನಿಸಿ ಮೆರೆಯುವಲ್ಲಿ ದೇವರ ಪ್ರತಿನಿಧಿಯೆಂಬಂತೆ ವರ್ತಿಸುವವರಲ್ಲಿ ಕಂಡು ಬರುವ ಕೀಳುತನದ ಬಗೆಗೆ ಅವರಿಗೆ ಅಷ್ಟೇ ತುಚ್ಛ ಭಾವನೆ ಇದೆ. ಎಲ್ಲವನ್ನು ತಿಳಿದವರು ಎಂದು ಹೇಳಿಕೊಳ್ಳುವ ಜ್ಞಾನಿಗಳು ಕೆಲವೊಂದು ಮೂಲಭೂತ ವಿಚಾರಗಳ ಬಗ್ಗೆ ಅಜ್ಞಾನಿಗಳಾಗಿ ವರ್ತಿಸುವುದನ್ನು ಕಂಡಾಗ ಅವರು ಸಿಡಿದೇಳುತ್ತಾರೆ. ಮೇಲಿನಂತೆ ಪ್ರಶ್ನೆಗಳ ಮಳೆಗರೆಯುತ್ತಾರೆ. ಜಾತಿ ಮತಗಳ ತಿಕ್ಕಾಟವನ್ನು ಪ್ರಬಲವಾಗಿ ಮೇಲಿಂದ ಮೇಲೆ ಖಂಡಿಸುವುದನ್ನು

ಕಂಡಾಗ, ಕನಕದಾಸರು ಅವರಿಂದ ಎಷ್ಟು ನೊಂದಿದ್ದಾರೆ ಎಂಬುದೂ ಸ್ಪಷ್ಟವಾಗುತ್ತದೆ. ಇಂತಹ ತುಳಿತಕ್ಕೆ ಒಳಗಾದರೂ ಲೆಕ್ಕಿಸದೆ, "ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ" ಎಂದು ಅವರಿಗೆ ಎಚ್ಚರಿಕೆ ನೀಡಿ, "ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ" ಎಂದು ಸವಾಲನ್ನು ಹಾಕಿದರೂ, "ಸಾಕು ಸಾಕು ಮನುಜ ಸೇವೆಯು ರಂಗಯ್ಯ ಇನ್ನು | ಮನುಜ ಸೇವೆ ಮಾಡಿ ದಣಿದು ನೊಂದೆ ನಾನು" ಎಂದು ಹೇಳುವಲ್ಲಿ ಸಮಾಜ ಸುಧಾರಣೆಯಲ್ಲಿ ಕಂಡ ಕಹಿಯ ಅನುಭವದ ಪರಾಕಾಷ್ಠತೆ ವ್ಯಕ್ತವಾದರೂ "ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು ! ಪದುಮನಾಭನ ಪಾದದೊಲುಮೆ ಎನಗಾಯಿತು |" ಎಂಬಲ್ಲಿ ತೃಪ್ತಿಗೊಂಡ ಅವರ ಬದುಕು ಸಾಫಲ್ಯವನ್ನೇ ಕಂಡಿದೆ.

ಯಾವುದೇ ಪಂಥಕ್ಕೆ ಸಿಲುಕದ ಕನಕದಾಸರು, ಸಮಗ್ರ ಮಾನವ ಜೀವನದ ಏಳಿಗೆಗಾಗಿ ಹಾತೊರೆದವರು. ಅವರ ಅಂತಿಮ ಗುರಿ "ಪದುಮನಾಭನ ಪಾದದೊಲುಮೆ"ಯೇ ಆದರೂ, ಕನಕದಾಸರು ಮೂಲಭೂತವಾಗಿ ಸಮಾಜ ಸುಧಾರಣೆಯತ್ತ ಗಮನ ಹರಿಸಿದರು. ತಮ್ಮ ಉದಾತ್ತ ವ್ಯಕ್ತಿತ್ವದಿಂದ ಅಧಿಕಾರಯುತವಾಗಿ ಕರೆ ನೀಡಿದವರು. ಸಮಾಜದಲ್ಲಿ ಸಮಾನತೆ ಯನ್ನು ತರಲು ಹಾತೊರೆಯುತ್ತಿದ್ದ ಅವರ ಮನದ ಅಳಲು ಅವರ ಎಲ್ಲ ಕೃತಿಗಳಲ್ಲಿಯೂ ವ್ಯಕ್ತಗೊಂಡಿರುವುದನ್ನು ಕಾಣಬಹುದು.

ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಭಾವ, ಸಮಾಜ ಸುಧಾರಣೆ ಹಾಗೂ ವ್ಯಕ್ತಿತ್ವ ನಿರ್ಮಾಣಕ್ಕೆ ಅಗತ್ಯವಾದ ಅಂಶಗಳು ಘನೀಭೂತವಾಗಿ ವ್ಯಕ್ತಗೊಂಡಿದ್ದರೆ ; ಅವರ 'ಹರಿಭಕ್ತಿಸಾರ' - ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಪರಿಣಾಮಕಾರಿಯಾಗಿ ಸಾರುವ ವೈಶಿಷ್ಟ್ಯಪೂರ್ಣವಾದ ಕೃತಿ. 'ರಕ್ಷಿಸು ನಮ್ಮನನವರತ' ಎಂಬ ಮುಕ್ತಾಯದಿಂದ ಕೂಡಿದ ನೂರ ಹತ್ತು ಭಾಮಿನಿ ಷಟ್ಪದಿಗಳನ್ನುಳ್ಳ ಈ ಕಿರುಕೃತಿ ಅಪೂರ್ವ ರೀತಿಯದು. 'ಹರಿಭಕ್ತಿಸಾರ' - ಹೆಸರೇ ಸೂಚಿಸುವಂತೆ ಭಕ್ತಿರಸ ತೊಟ್ಟಿಕ್ಕುವಂತಿದೆ. 'ಹರಿಭಕ್ತಿಸಾರದ ಚರಿತೆಯನ್ನು ಹರಿಭಕ್ತರಾಲಿಸುವಂತೆ ರಚಿಸುವೆ' ಎಂದು ಹೇಳುವಲ್ಲಿಯೇ ಅದರ ಉದ್ದೇಶ ಸ್ಪಷ್ಟವಾಗುತ್ತದೆಯಾದರೂ, ಕನಕದಾಸರು ಅಲ್ಲಿ ತಮ್ಮ ಅಂತರಂಗವನ್ನು ಬಿಚ್ಚಿ ಹೇಳಿರುವ ರೀತಿ ವಿಶಿಷ್ಟವಾದುದು. ಭಕ್ತ ಹೃದಯದ ಸಮರ್ಪಣ ಭಾವ ಹೃದಯಸ್ಪರ್ಶಿಯಾಗಿ ಒಂದೊಂದು ಪದ್ಯದಲ್ಲಿಯೂ ಗರಿಗೆದರಿದೆ : "ದೀನ ನಾನು ಸಮಸ್ತ ಲೋಕಕೆ ದಾನಿ ನೀನು, ವಿಚಾರಿಸಲು ಮತಿಹೀನ ನಾನು, ನೆರೆ ಸುಜ್ಞಾನ ಮೂರುತಿ ನೀನು, ನಿನ್ನ ಸಮಾನರುಂಟೇ ದೇವ, ರಕ್ಷಿಸು ನಮ್ಮನನವರತ" ಎಂಬಂಥ ಪದ್ಯಗಳಲ್ಲಿನ ದೈನ್ಯ - ಭಕ್ತ ಭಗವಂತನ ನಡುವಣ ಮಧುರ ಸಂಬಂಧದ ದ್ಯೋತಕವಾಗಿದೆ. ಮನಕರಗುವಂತೆ ಕರುಣಾಪೂರ್ಣವಾಗಿ ಕಿವಿಗೆ ಬೀಳುವ ಆ ನುಡಿಗಳಲ್ಲಿ ಕಾವ್ಯತ್ವ ಕೆಲಸ ಮಾಡಿರುವುದನ್ನು, ಅದರೊಂದಿಗೆ ಕನಕದಾಸರ ಸಹಜವಾದ ಕವಿ ಪ್ರತಿಭೆ ವ್ಯಕ್ತಗೊಂಡಿರುವುದನ್ನು ಗುರುತಿಸ ಬಹುದಾಗಿದೆ.

'ಕೀರ್ತನೆಗಳು' ಹಾಗೂ 'ಹರಿಭಕ್ತಸಾರ' ಕನಕದಾಸರನ್ನು ದಾಸಪಂಥದಲ್ಲಿಯ ಭಕ್ತಿಸಾಗರದಲ್ಲಿ ಸ್ಥಾಯಿಯಾಗಿಸಿದರೆ, ಅವರ 'ಮೋಹನ ತರಂಗಿಣಿ', 'ನಳಚರಿತ್ರೆ' ಹಾಗೂ 'ರಾಮಧಾನ್ಯಚರಿತೆ' ಈ ಮೂರು ಕೃತಿಗಳು ಕನಕದಾಸರನ್ನು ಕವಿಯಾಗಿಸಿ ಕನ್ನಡ ಕವಿಗಳ ಸಾಲಿನಲ್ಲಿ ನೆಲೆಯೂರಿಸಿವೆ. ಇವುಗಳಲ್ಲಿ 'ಮೋಹನ ತರಂಗಿಣಿ' ಹಾಗೂ 'ನಳಚರಿತ್ರೆ' ಒಂದು ಚೌಕಟ್ಟಿನಲ್ಲಿ ನಿಲ್ಲುವ ಕೃತಿಗಳಾದರೆ, 'ರಾಮಧಾನ್ಯ ಚರಿತೆ' ಇವುಗಳಿಂದ ಭಿನ್ನವಾಗಿ ನಿಲ್ಲುವ ಕೃತಿ.

ಒಂದರ್ಥದಲ್ಲಿ 'ಮೋಹನ ತರಂಗಿಣಿ' ಹಾಗೂ 'ನಳಚರಿತ್ರೆ' - ಇವೆರಡೂ ಪ್ರೇಮಕಥೆಗಳು. ಶೃಂಗಾರ ಮೂಲವಾದ ಕಾವ್ಯಗಳು. ಭಕ್ತಿಪ್ರತಿಪಾದನೆಯ ಉದ್ದೇಶವಾಗಲೀ ಗುರಿಯಾಗಲಿ ಅದರ ಸುಳಿವಾಗಲಿ ಅಲ್ಲಿಲ್ಲ. ಭಕ್ತಿಭಾವವೇ ಮೈವೆತ್ತಂತೆ ಹೊರಬಂದಿರುವ 'ಹರಿಭಕ್ತಿಸಾರ' ಹಾಗೂ ಕೀರ್ತನೆಗಳ ಕರ್ತೃವಿನಿಂದಲೇ ಹೊರಬಂದಿರುವ ಈ ಕಾವ್ಯಗಳನ್ನು ಗಮನಿಸಿದಾಗ ಕವಿಯೊಬ್ಬನ ವಿಶಿಷ್ಟ ವ್ಯಕ್ತಿತ್ವದ ಅರಿವಾಗಿ ಆಶ್ಚರ್ಯಕ್ಕೂ ಕಾರಣವಾಗುತ್ತದೆ. 'ನೆಚ್ಚದಿರು ಸಂಸಾರ ನೆಲೆಯಲ್ಲವೀಕಾಯ' ಎಂದು ಹೇಳಿದ ಕನಕದಾಸರೇ 'ಮೋಹನ ತರಂಗಿಣಿ'ಯಲ್ಲಿ "ನುಣ್ಮೊಲೆಯ ಸ್ಥಳದಲ್ಲಿ ಮೊಗವಿಟ್ಟು ಮುಂಡಾಡಿ ಸೊಗ ಮೈಯೊಳಪಟ್ಟು ಸಾವುದಚ್ಚರಿಯೆ" ಎಂದು ಬಣ್ಣಿಸುತ್ತಾರೆ.

ಕನಕದಾಸರಲ್ಲಿಯ ಶೃಂಗಾರಪ್ರಿಯತೆಯನ್ನು ಅವರ ಸಹಜ ಕವಿತ್ವವನ್ನು ತೋರಲು ಇದೊಂದೇ ಉದಾಹರಣೆ ಸಾಕೆನಿಸುತ್ತದೆ. ಶೃಂಗಾರದ ಕಾವ್ಯವೊಂದನ್ನು ರಸವತ್ತಾಗಿ ಬರೆಯುವ ಅವರ ಕವಿ ಹೃದಯಕ್ಕೆ ಭಕ್ತಿ ಭಾವ ಎಲ್ಲಿಯೂ ಅಡ್ಡ ಬಂದಿಲ್ಲ, ಅಡ್ಡಿಯಾಗಿಲ್ಲ. ಬಹಳ ತೆಳುವಾಗಿ ಬರುವ ಭಕ್ತಿಭಾವವನ್ನು ಮರೆಮಾಚಿ ಇಲ್ಲಿಯ ಶೃಂಗಾರ ಭಾವ ಮೆರೆದಿದೆ. ಇಲ್ಲಿ ಬರುವ ಕೃಷ್ಣ - ರುಕ್ಮಿಣಿ, ರತಿ - ಮನ್ಮಥ, ಉಷಾ - ಅನಿರುದ್ಧರ ಪ್ರೇಮಕಥೆಯ ಮೂಲಕ ಕವಿ ಕನಕದಾಸರು ಸಂತ - ಕೀರ್ತನಕಾರರೆಂಬುದನ್ನು ಸಂಪೂರ್ಣವಾಗಿ ಮರೆತಿದ್ದಾರೆ ; ಕವಿಯಾಗಿ ಮೆರೆದಿದ್ದಾರೆ. 'ಮೋಹನ ತರಂಗಿಣಿ'ಯಲ್ಲಿ ಕನಕದಾಸರ ಕವಿಪ್ರಜ್ಞೆ ಎಲ್ಲಿಯವರೆಗೆ ವಿಸ್ತರಿಸಿದೆಯೆಂದರೆ, ಮಹಾಕಾವ್ಯದ ಹದಿನೆಂಟು ವರ್ಣನೆಗಳ ಗಂಟಿನಲ್ಲಿ ಸಿಕ್ಕಿಹಾಕಿಕೊಳ್ಳುವಷ್ಟು ಪ್ರಬಲವಾಗಿ ಅದು ಎಚ್ಚರಗೊಂಡಿದೆ.ಹಾಗಾಗಿ ಮೋಹನ ತರಂಗಿಣಿ ಪೌರಾಣಿಕ ವಸ್ತುವನ್ನೊಳಗೊಂಡ ಶೃಂಗಾರ ಕಾವ್ಯವಾಗಿ, ಪ್ರಾಚೀನ ಕಾವ್ಯ ಪರಂಪರೆಯಲ್ಲಿ ನಡೆದು ಬಂದರೂ ಇದರ ವೈಶಿಷ್ಟ್ಯ ಉಳಿದಿರುವುದು. ಅಲ್ಲಿಯೂ ಸಮಕಾಲೀನ ಸಮಾಜದ ಸಹಜತೆಯನ್ನು ಸೆರೆ ಹಿಡಿದಿಡುವಲ್ಲಿ, ವಿಜಯನಗರ ಕಾಲದ ವೈಭವದ ಚಿತ್ರಕವಿ ಕನಕದಾಸರಿಂದ ಅದ್ಭುತವಾಗಿ ಮೂಡಿಬಂದಿದೆ. ಕವಿಯ ಸಮಕಾಲೀನ ಪ್ರಜ್ಞೆಗೆ ಅದು ಸಾಕ್ಷಿಯಂತಿದೆ. ವಿಷಯವನ್ನು ಒಟ್ಟುಗೂಡಿಸುವಲ್ಲಿ, ವಿಚಾರವನ್ನು ಪ್ರತಿಪಾದಿಸುವಲ್ಲಿ ಕನಕದಾಸರು ತೋರುವ ಜಾಣ್ಮೆ - ಪ್ರತಿಭೆ ವಿಶಿಷ್ಟವಾದುದು. 'ಮೋಹನ ತರಂಗಿಣಿ'ಯಲ್ಲಿ ಒಬ್ಬ ನಾಯಕ - ನಾಯಕಿ ಯನ್ನು ನಿರ್ದಿಷ್ಟವಾಗಿ ಗುರುತಿಸಲಾಗದೆ ಹೋದರೂ, ನವರಸಭರಿತವಾಗಿ, ಅಷ್ಟಾದಶವರ್ಣನೆ ಗಳಿಂದ ಪ್ರೇರಿತವಾಗಿಸಿ ಮಹಾಕಾವ್ಯದ ಚೌಕಟ್ಟಿಗೆ ತರಲೆಳಸಿದ ಕವಿ ಕನಕದಾಸರ ಪ್ರಯತ್ನ ಪೂರ್ಣ ಯಶಸ್ಸನ್ನು ಹೊಂದದೇ ಹೋದರೂ, ಅದು ರಸಭರಿತ ಶೃಂಗಾರ ಕಾವ್ಯವಾಗಿ ಕವಿಯೇ ಹೇಳಿಕೊಂಡಿರುವಂತೆ 'ಜೇನು ತುಪ್ಪದ ತೊರೆ'ಯಾಗಿ ಹೃದಯವನ್ನು ಗೆಲ್ಲಬಲ್ಲ ಕಾವ್ಯ.

'ಮೋಹನ ತರಂಗಿಣಿ'ಯಲ್ಲಿ ಕನಕದಾಸರ ಕವಿಪ್ರಜ್ಞೆ ಹೆಚ್ಚು ಎಚ್ಚರಗೊಂಡು ಕೆಲಸ ಮಾಡಿದಂತೆ ಕಂಡು ಬಂದರೆ ; 'ನಳಚರಿತ್ರೆ'ಯಲ್ಲಿ ಅದು ಗುಪ್ತವಾಗಿ ಪುಷ್ಪದೊಳಗಿನ ಸುಗಂಧ ದಂತೆ ಕಂಪಾಗಿ - ತಂಪಾಗಿ ಹರಡಿದೆ. ಎರಡು ಕಾವ್ಯಕೃತಿಗಳ ವಸ್ತುವೂ ಪ್ರೇಮಪ್ರೇರಿತವಾದುದೇ ಆದರೂ, ಮೋಹನ ತರಂಗಿಣಿಯ ಪ್ರೇಮ - ಶೃಂಗಾರ 'ನಳಚರಿತ್ರೆ'ಯಲ್ಲಿ ಸಂಯಮವನ್ನು ಸಾಧಿಸಿದೆ. ಅಲ್ಲಿ ಭೋಗ ಲಾಲಸೆಯಿಂದ ಕೂಡಿದ ಪ್ರೇಮ, ಇಲ್ಲಿ ತ್ಯಾಗಲಾಲಸೆಯಲ್ಲಿ ಪಕ್ವಗೊಂಡಂತೆ ಪರಿಪೂರ್ಣಗೊಂಡಿದೆ. ನಳದಮಯಂತಿಯರ ಪ್ರೇಮ ಅಮರ ಪ್ರೇಮವಾಗಿ ಅರಳಿರುವುದನ್ನು ಈ ಕೃತಿಯ ಉದ್ದಕ್ಕೂ ಕಾಣಬಹುದು. ಎಲ್ಲಿಯೂ ಅಪಸ್ವರ ಕೇಳಿ ಬರದೆ ನೈಜ ಪ್ರೇಮದ ಕಥೆಯಾಗಿ 'ನಳಚರಿತ್ರೆ' ಮನಸೆಳೆಯುತ್ತದೆ. ಅವರ ಪ್ರೀತಿ ಹಲವು ಸಂಕಷ್ಟಗಳ ನಡುವೆ ಸಿಕ್ಕಿದರೂ ಎಲ್ಲಿಯೂ ಸ್ವಲ್ಪವೂ

ಕುಂದದೆ, ಕಲುಷಿತವಾಗದೆ ಇನ್ನೂ ಇಮ್ಮಡಿ ಯಾಗುತ್ತಾ ಹೋಗುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ಒಂದೊಂದು ಪರೀಕ್ಷೆಗೆ ಒಳಗಾ ದಂತೆಲ್ಲಾ ಪುಟವಿಟ್ಟ ಚಿನ್ನದಂತೆ ಪರಿಶುದ್ಧವಾಗುತ್ತಾ ಹೋಗುವುದು ಇಲ್ಲಿಯ ಪ್ರೇಮದ ಅಪೂರ್ವತೆ ಎನ್ನಬಹುದು. ಆ ದೃಷ್ಟಿಯಿಂದ ನೋಡುವಾಗ 'ಮೋಹನ ತರಂಗಿಣಿ' ಶೃಂಗಾರ ಮೂಲವಾದ ಪ್ರೇಮಕಥೆಯಾದರೆ, 'ನಳಚರಿತ್ರೆ' ಅಮರ ಪ್ರೇಮದ ಸ್ವಾರ್ಥ ರಹಿತವಾದ ಅಪೂರ್ವ ಕಥೆ.

ಕನಕದಾಸರು ಈ ಎರಡೂ ಕಾವ್ಯಗಳನ್ನು ನಿರ್ವಹಿಸುತ್ತಿರುವ ರೀತಿ ವಿಶಿಷ್ಟವಾದುದು. ಸಂಸಾರಿಯಾಗಿ, ಯೋಧನಾಗಿ, ಸಂತನಾದ ಕವಿ ಕನಕದಾಸರ ಜೀವನಾನುಭವ ವಿಶಿಷ್ಟ ಅದರಂತೆಯೇ ಅವರ ಕಾವ್ಯ ಕೂಡ. ಆಧ್ಯಾತ್ಮದ ತುತ್ತತುದಿಯನ್ನೇರಿದಂತೆಯೇ ಶೃಂಗಾರದ ರಸಘಳಿಗೆಗಳನ್ನು ಕಾವ್ಯವಾಗಿಸುವ ಅವರ ಪ್ರತಿಭೆ ಉಜ್ವಲವಾದುದು. ತ್ಯಾಗ - ಭೋಗಗಳ ಸಮನ್ವಯ ದೃಷ್ಟಿ ಕವಿ ಕನಕದಾಸರ ಕಾವ್ಯ ಪ್ರತಿಭೆಯಲ್ಲಿ ವ್ಯಕ್ತವಾಗುತ್ತದೆ. ಇದು ಕನ್ನಡ ಕವಿ ಪರಂಪರೆಯಲ್ಲಿ ಅಪರೂಪವಾದುದು. ಇವೆರಡನ್ನೂ ಒಬ್ಬನೇ ಕವಿ - ಅದೂ ಭಕ್ತ ಹಾಗೂ ಸಂತ ಕವಿ ಅಷ್ಟೇ ಸಮರ್ಥವಾಗಿ ಎರಡನ್ನೂ ನಿರ್ವಹಿಸಿರುವುದು ಕನಕದಾಸರ ಅಪ್ರತಿಮ ಕವಿ ಪ್ರತಿಭೆಗೆ ಸಾಕ್ಷಿಯಾಗಿದೆ. ವ್ಯಕ್ತಿಚಿತ್ರವನ್ನಾಗಲಿ ಪ್ರಕೃತಿ ಚಿತ್ರವನ್ನಾಗಲಿ ಅಥವಾ ಸನ್ನಿವೇಶ ಚಿತ್ರವನ್ನಾಗಲಿ ಹದವರಿತು ಚಿತ್ರಿಸಬಲ್ಲ ಕಲೆಗಾರಿಕೆ ಕನಕದಾಸರಿಗೆ ಸಿದ್ಧಿಸಿದುದಾಗಿದೆ. ಅಂತಹ ಒಂದೆರಡನ್ನಿಲ್ಲಿ ಗಮನಿಸಬಹುದು. ವಿವಾಹ ಮಂಟಪಕ್ಕೆ ಬರುವ ದಮಯಂತಿಯ ರೂಪವನ್ನು ಕವಿ ಹೀಗೆ ಚಿತ್ರಿಸುತ್ತಾನೆ :

ಕುಡಿತೆಗಂಗಳ ಸಿರಿಮುಡಿಯ ಬಡ
ನಡುವ ಸೆಳವತಿಬೆಡಗಿನಲಿ ಹೊಂ
ಗೊಡ ಮೊಲೆಯ ವೈಯ್ಯಾರದುಡುಗೆಯ ಸಿರಿಯ ಸಡಗರದ
ತೊಡರ ಝಣಝಣರವದ ಮೆಲ್ಲಡಿ
ಯಿಡುವ ಗಮನದ ಭರದಿ ಕಿರುಬೆಮ
ರಿಡುತ ಬಂದಳು ಸಖಿಯರೊಡನೆ ವಿವಾಹ ಮಂಟಪಕೆ ||

ಹೆಣ್ಣಿನ ಅದ್ಭುತ ಶೃಂಗಾರವನ್ನೂ ರಸಿಕ ಕವಿಯಾಗಿ ವರ್ಣಿಸಬಲ್ಲ ಕನಕದಾಸರು ನಳನ ವಿಕಾರ ರೂಪವನ್ನು ಚಿತ್ರಿಸುವಲ್ಲಿಯೂ ಅಷ್ಟೇ ಅದ್ಭುತವನ್ನು ಮೆರೆದಿದ್ದಾನೆ :

ದೊಡ್ಡ ಹೊಟ್ಟೆಯ ಗೂನು ಬೆನ್ನಿನ
ಅಡ್ಡ ಮೋರೆಯ ಗಂಟು ಮೂಗಿನ
ದೊಡ್ಡ ಕೈಕಾಲುಗಳ ವುದುರಿದ ರೋಮ ಮೀಸೆಗಳ
ಜಿಡ್ಡು ದೇಹದ ಗುಜ್ಜುಗೊರಲಿನ
ಗಿಡ್ಡುರೂಪಿನ ಹರುಕು ಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ ||

'ಮಾರನಾಕಾರದ ನೃಪಾಲಕ ಕ್ರೂರರೂಪಾದನು'. ಕನಕದಾಸರು ಚಿತ್ರಿಸಿರುವ ಇಂತಹ ಒಂದೊಂದು

ಚಿತ್ರವೂ ಭವ್ಯಾದ್ಭುತವಾದುದು. ಕ್ಲಿಷ್ಟತೆಯ ಸೋಂಕಿಲ್ಲದೆ ಸರಳತೆಯಲ್ಲಿಯೇ ಸಾರ್ಥಕತೆಯನ್ನು ತಂದು ಕೊಡುವ ಕವಿಯ ಕೈ ಚಳಕ ಬೆರಗುಗೊಳಿಸುವಂತಹುದು. ಕನಕದಾಸರ ಕಾವ್ಯದ ಹಾಗೂ ಜನಪ್ರಿಯತೆಯ ಗುಟ್ಟು ಅದೇ ಆಗಿದೆ. ಕನ್ನಡ ಕಾವ್ಯಗಳ ಸಾಲಿನಲ್ಲಿ 'ನಳಚರಿತ್ರೆ'ಗೆ ಒಂದು ವಿಶಿಷ್ಟ ಸ್ಥಾನವಿದೆ. ಜನಪ್ರಿಯತೆಯ ದೃಷ್ಟಿಯಿಂದ ಇಂತಹ ಕೃತಿಗಳ ಸಂಖ್ಯೆ ತೀರ ವಿರಳ. ಕನಕದಾಸರ ಕಾವ್ಯ ಶಕ್ತಿ - ಪ್ರತಿಭೆ ಇಲ್ಲಿ ಮಯೂರ ನರ್ತನದಂತೆ ಗರಿಗೆದರಿ ಸಹಜವಾಗಿ ಮೈದೆರೆದುಕೊಂಡಿದೆ, ಅದರಂತೆಯೇ ಮೋಹಕವಾಗಿ ಮನ ಸೆಳೆಯುವ ಮೋಹಕಾಸ್ತ್ರವಾಗಿಯೂ ಹೊರಚಿಮ್ಮಿದೆ.

ಕನಕದಾಸರು 'ರಾಮಧಾನ್ಯ ಚರಿತೆ'ಯ ಮೂಲಕ ತೋರಿರುವ ವೈಶಿಷ್ಟ್ಯ ಅವರನ್ನು ಮತ್ತಷ್ಟು ಮೇಲಕ್ಕೆತ್ತಿದೆ. ಇದು ಒಂದು ಚಮತ್ಕಾರದ ಕಾಲ್ಪನಿಕ ವಸ್ತುವನ್ನೊಳಗೊಂಡ ಕೃತಿಯಾದರೂ, ಕನಕದಾಸರು ಮುಖ್ಯವಾಗಿ ಆ ಮೂಲಕ ಹೇಳಹೊರಟಿರುವ ಸಂದೇಶ ಮತ್ತು ಉದ್ದೇಶ ಸ್ಪಷ್ಟವಾದುದು. ರಾಗಿ ಮತ್ತು ಭತ್ತಗಳ ನಡುವೆ ಉಂಟಾಗುವ ಜಗಳ, ವಾಸ್ತವವಾಗಿ ಮೇಲು - ಕೀಳು ಎಂಬ ಭಾವನೆಯ ಹಿನ್ನೆಲೆಯನ್ನು ಪ್ರತಿನಿಧಿಸುವಂತಹುದೇ ಆಗಿದೆ. ರಾಘವನಿಗೂ, ರಾಗಿಗೂ ಸಂಬಂಧವನ್ನು ಕಲ್ಪಿಸುವುದರ ಮೂಲಕ ರಾಗಿಯ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಪ್ರಯತ್ನವಾಗಲಿ, ಮಹಾಭಾರತ ಪುರಾಣಗಳ ಹಿನ್ನೆಲೆಯನ್ನೊದಗಿಸುವುದರ ಮೂಲಕ ಅದರ ಗಾಂಭೀರ್ಯವನ್ನು ಹೆಚ್ಚಿಸುವ ಪ್ರಯತ್ನವಾಗಲಿ ಅಷ್ಟೊಂದು ಪರಿಣಾಮವೆನಿಸದಿದ್ದರೂ, ಕನಕದಾಸರ ಮೂಲೋದ್ದೇಶ ಅಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಿಗೊಂಡಿದೆ. ಇಲ್ಲಿ ಬರುವ ಪಾತ್ರಗಳು - ಕಾಡು ಪ್ರಾಣಿಗಳಾಗಲಿ, ಊರು ಪ್ರಾಣಿಗಳಾಗಲಿ ಅಥವಾ ಮಾನವ ಪ್ರಾಣಿಗಳಾಗಲಿ ಆಗಿರದೆ ಧಾನ್ಯಗಳಾಗಿರುವುದು ಗಮನಾರ್ಹ. ಬಹುಶಃ ಇದೊಂದು ಅಪರೂಪದ ಅಪೂರ್ವ ಸಂಗತಿ ಎನ್ನಬಹುದು. ಕನಕದಾಸರ ಅಸಾಧಾರಣ ಕಲ್ಪನಾ ಪ್ರತಿಭೆಯ ಫಲವೇ 'ಶ್ರೀರಾಮಧಾನ್ಯಚರಿತೆ'. ಅಂದೂ (ಇಂದೂ) ಸಮಾಜದಲ್ಲಿ ತಾಂಡವವಾಡುತ್ತಿದ್ದ ಮೇಲು ಕೀಳೆಂಬ ಭಾವನೆಯಿಂದ ಹದಗೆಟ್ಟ ಸಮಾಜವನ್ನು ಕಂಡು ನೊಂದ ಕನಕದಾಸರ ಅಂತರಂಗ ಮಿಡಿದ ನಾದವೇ ಈ ಕೃತಿ. ನರದೆಲಗ (ರಾಗಿ) ಮತ್ತು ವ್ರೀಹಿ (ಭತ್ತ) ಇವುಗಳ ನಡುವೆ ನಡೆಯುವ ಜಗಳದಲ್ಲಿ ಅದು ವ್ಯಕ್ತವಾಗಿರುವುದನ್ನು ಕಾಣಬಹುದು.

ಭತ್ತ : ಕ್ಷಿತಿಯಮರರುಪಮೆಯೆನದಲಿ ಸು
ವ್ರತ ಸುಭೋಜನ ಪರಮ ಮಂತ್ರಾ
ಕ್ಷತೆಗಳಲಿ ಶುಭಶೋಭನದಲಾರತಿಗೆ ಹಿರಿಯರಲಿ
ಕ್ರತುಗಳೆಡೆಯೊಳನಗೆ ಮನೆಯಲಿ
ಪ್ರತಿದಿನವು ರಂಜಿಸುತ ದೇವರಿ
ಗತಿಶಯದ ನೈವೇದ್ಯ ತಾನೆಂದನಾ ವ್ರಿಹಿಗ ||

ರಾಗಿ : ಸತ್ವಹೀನನು ಬಡವರಸು ಕ
ಣ್ಣೆತ್ತಿ ನೋಡೆ ಧನಾಢ್ಯರನು ಬೆಂ
ಬತ್ತಿ ನಡೆವವುಪೇಕ್ಷೆ ನಿನ್ನದು ಹೇಳಲೇನದನು
ಹೆತ್ತ ಬಾಣಂತಿಯರು ರೋಗಿಗೆ

ಪತ್ರ ನೀನಹೆ ಹೆಣದ ಬಾಯಿಗೆ
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕವೆಂದ ||

ಅತ್ಯಂತ ಸ್ವಾರಸ್ಯವಾಗಿ ಹೀಗೆ ಮುಂದುವರಿಯುವ ಈ ಜಗಳ ಕೊನೆಗೆ "ದೇವರಿಗೆ ಪರಮಾನ್ನ ನೀ. ಮನುಜಾವಳಿಗೆ ಪಕ್ವಾನ್ನಮೀತನು" ಎಂಬ ತೀರ್ಮಾನದೊಂದಿಗೆ ಮುಕ್ತಾಯವಾಗುವ ಕಾವ್ಯ ಕನಕದಾಸರ ಹೊಸ ಬಗೆಯ ಸೃಷ್ಟಿ. ವಸ್ತು ಬೇರೆಯಾದರೂ ಅದರ ನಿರ್ವಹಣೆ ಗಂಭೀರ ಕಾವ್ಯದ ನಿರ್ವಹಣೆಯಂತೆಯೇ ಇದೆ. ಇದೊಂದು ಅಣಕು ಮಹಾಕಾವ್ಯವಾಗಿ, ವಿನೋದ ವಿಡಂಬನೆಗಳ ಮೂಲಕ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ದೊಡ್ಡ ಪಿಡುಗೊಂದನ್ನು ಬುಡಮೇಲು ಮಾಡುವ ಕಾರ್ಯದಲ್ಲಿ ಪಾಲ್ಗೊಂಡಿದೆ. ಇಂತಹ ವಿಷಯವನ್ನು ಕುರಿತು ಕೀರ್ತನೆಗಳಲ್ಲಿ ಸಾಕಷ್ಟು ಸ್ಪಷ್ಟವಾಗಿಯೇ ಮನದಟ್ಟಾಗಿಸಿದ್ದರೂ, ಕನಕದಾಸರು ಇಲ್ಲಿ ಅದನ್ನು ಮತ್ತೊಂದು ರೀತಿಯಲ್ಲಿ ಪರಿಣಾಮಕಾರಿಯಾಗಿಸುವ ಪ್ರಯತ್ನವೆಸಗಿದ್ದಾರೆ.

ವಚನ ಸಾಹಿತ್ಯದಲ್ಲಿ ಕಂಡು ಬರುವ 'ಬೆಡಗಿನ ವಚನ'ಗಳಂತೆ ಕನಕದಾಸರು ಕೀರ್ತನೆಗಳ ಸಾಲಿನಲ್ಲಿ ರಚಿಸಿರುವ 'ಮುಂಡಿಗೆ'ಗಳು 'ಕನಕನ ಮುಂಡಿಗೆ'ಗಳೆಂದೇ ಪ್ರಖ್ಯಾತವಾಗಿವೆ. ಅವು ಕನಕದಾಸರ ಮತ್ತೊಂದು ಮುಖವನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿವೆ. 'ಕನಕದಾಸರ ಮುಂಡಿಗೆ'ಗಳಲ್ಲಿ ಚಮತ್ಕಾರದ ಜೊತೆಜೊತೆಯಲ್ಲಿಯೇ ಪಾಂಡಿತ್ಯ, ತತ್ವಜ್ಞಾನ, ಆತ್ಮಾನುಭವ ಮುಂತಾದವುಗಳು ಆಕರ್ಷಕವಾದ ರೀತಿಯಲ್ಲಿ ವ್ಯಕ್ತಗೊಂಡಿವೆ. ಉಳಿದವರ ಜಾಣ್ಮೆಯನ್ನು ಪರೀಕ್ಷಿಸುವ ಸವಾಲಾಗಿ ಇವು ಕಂಡು ಬರುತ್ತವೆ.

೩

ಕನಕದಾಸರ ಕೃತಿಗಳ ಸ್ಥೂಲವಾದ ಸಮೀಕ್ಷೆಯ ನಂತರ ಕನ್ನಡ ಕವಿಗಳ ಸಾಲಿನಲ್ಲಿ ಅವರ ಸ್ಥಾನವೇನು ? ಎಂಬುದರ ಒಂದು ವಿವೇಚನೆಯೂ ಅಗತ್ಯವೆನಿಸುತ್ತದೆ. ಇದುವರೆಗೆ ಗಮನಿಸಿದಂತೆ ಕನಕದಾಸರು ವಿಶಿಷ್ಟ ವ್ಯಕ್ತಿತ್ವದ, ಅದ್ಭುತ ಪ್ರತಿಭೆಯ ಕವಿ ಹಾಗೂ ಕೀರ್ತನಕಾರ; ಅಷ್ಟೇ ಅಲ್ಲ ಸಂಸಾರಿಯಾಗಿದ್ದು, ಸಂತನಾಗಿ, ಜ್ಞಾನಿಯಾಗಿ ಮೆರೆದವನು. ಆ ಹಿನ್ನೆಲೆಯಲ್ಲಿ ಅವನ ಬಗ್ಗೆ ಹುಟ್ಟಿಕೊಂಡಿರುವ ಹಲವು ದಂತಕಥೆಗಳು ಕನಕದಾಸನೊಬ್ಬ ಭಕ್ತಶ್ರೇಷ್ಠ, ಕುಶಲಮತಿಯಾದ ಜ್ಞಾನಿ ಎಂಬುದರ ನಿದರ್ಶನಗಳಾಗಿವೆ. ವಿದ್ವದ್ಗೋಷ್ಠಿಯಲ್ಲಿ ಅವರು ಉತ್ತರಿಸಿದ 'ನಾನು ಹೋದರೆ ಹೋದೇನು' ಪ್ರಸಂಗವಾಗಲಿ, ಬಾಳೇ ಹಣ್ಣಿನ ಪ್ರಸಂಗವಾಗಲಿ, ಅಥವಾ ಶ್ರೀಕೃಷ್ಣದರ್ಶನಕ್ಕೆ ಅರ್ಚಕರಿಂದ ಅಡ್ಡಿಯಾದಾಗ ಅವನಿದ್ದೆಡೆಗೆ ಕಿಂಡಿಯ ಮೂಲಕ ಕೃಷ್ಣನೇ ದರ್ಶನ ಕೊಟ್ಟ ಪ್ರಸಂಗವಾಗಲಿ ಕನಕದಾಸರ ಅಪಾರ ಭಕ್ತಿಯ ಹಾಗೂ ಜ್ಞಾನ ಪ್ರತಿಭೆಗಳ ದ್ಯೋತಕವಾಗಿವೆ. ಬಹುಶಃ ಮಹಾಭಾರತ ಕಥೆಯನ್ನು ಬರೆಯುವಾಗ ಕುಮಾರವ್ಯಾಸ ಒದ್ದೆಯ ವಸ್ತ್ರವನ್ನು ಹೊದೆದು ಗದುಗಿನ ವೀರನಾರಾಯಣನ ಗುಡಿಯಲ್ಲಿ ಕುಳಿತು ಬರೆಯುತ್ತಿದ್ದು, ಆ ವಸ್ತ್ರ ಒಣಗಿದಂತೆ ಅವನ ಕಾವ್ಯ ಪ್ರತಿಭೆಯೂ ಕುಗ್ಗುತ್ತಿತ್ತು ಎಂಬಂಥ ದಂತ ಕಥೆಯನ್ನು ಬಿಟ್ಟರೆ ಇಷ್ಟೊಂದು ಪ್ರಮಾಣದ ದಂತಕಥೆಗಳು ಒಬ್ಬನೇ ಕವಿಯ ಬಗೆಗೆ ಇದ್ದಂತೆ ಕಾಣುವುದಿಲ್ಲ. ಕನಕದಾಸರು ಒಬ್ಬ ಶೂದ್ರ ಸಂತ ಕವಿಯಾಗಿ, ಮೇಲೆ ಬಂದುದರಿಂದ, ಅವರು ಹೊಕ್ಕ ಹೊಸ ಕ್ಷೇತ್ರದಲ್ಲಿ ಹೋರಾಟ ನಡೆಸಬೇಕಾಗಿ ಬಂದುದರಿಂದಈ ಬಗೆಯ ದಂತಕಥೆಗಳಿಗೆ ಅವಕಾಶವಾಗಿರಬೇಕು. ಅಲ್ಲದೆ ಕನಕದಾಸರ

ನೈಜ ಭಕ್ತಿ, ಜ್ಞಾನ ಹಾಗೂ ಕುಶಲ-ಮತಿತ್ವಕ್ಕೆ ಹಲವರು ಅಸೂಯೆ ಪಟ್ಟದ್ದು ಇದಕ್ಕೆ ಕಾರಣವಿರಬೇಕು. ಆದರೆ ಕನಕದಾಸರು ಇವೆಲ್ಲಕ್ಕೂ ಕಿವಿಗೊಟ್ಟರೂ, ಮನಗೊಡದೆ ತಮ್ಮ ಕೀರ್ತನೆಗಳ ಮೂಲಕವೇ ಸರಿಯಾಗಿ ಉತ್ತರಿಸಿ ಅವರನ್ನೆಲ್ಲ ತಣ್ಣಗಾಗಿಸಿದ್ದು ಅವರ ಅದ್ಭುತಪ್ರತಿಭೆಗೆ ಸಾಕ್ಷಿ. ಕನಕದಾಸರ ಕೀರ್ತನೆಗಳಲ್ಲಿ ಕಂಡು ಬರುವ ತೀಕ್ಷ್ಣವಾದ ಅಭಿವ್ಯಕ್ತಿಗೆ ಅವರು ಎದುರಿಸಿದ ಘಟನೆಗಳೇ ಕಾರಣವೆನ್ನಬಹುದು. ಆದರೆ ಉಳಿದ ಕೀರ್ತನಕಾರರಿಗಾಗಲಿ, ಕವಿಗಳಿಗಾಗಲಿ ಇಂತಹ ಸಂದಿಗ್ಧ ಪರಿಸ್ಥಿತಿ ಇದ್ದುದು ಕಂಡು ಬರುವುದಿಲ್ಲ.

ದಾಸಪಂಥದಲ್ಲಿಯೂ ಹಲವು ಹರಿದಾಸರಲ್ಲಿ ಎಲ್ಲರನ್ನು ಒಂದಾಗಿಸುವ, ಅಥವಾ ಒಂದಾಗಿ ಭಾವಿಸುವ ಮಾತುಗಳು ಕೇಳಿ ಬರುತ್ತವೆಯಾದರೂ, ಅದು ಕಾರ್ಯರೂಪದಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ಜಾತಿ ಮತಗಳ ಅಂತರವನ್ನು ತೊಡೆದು ಹಾಕುವ ಅಥವಾ ಕಡಿಮೆ ಮಾಡುವ ಪ್ರಯತ್ನ ಕೇವಲ ಪ್ರಯತ್ನವಾಗಿಯೇ ಕಂಡು ಬರುತ್ತದೆ. ಅದು ಕನಕದಾಸರನ್ನೂ ಕಾಡಿತು ಎಂದಾಗ ಅದರ ಕರಾಳ ಸ್ವರೂಪದ ಬಗೆಗೆ ಯಾರಾದರೂ ಸುಲಭವಾಗಿ ಆಲೋಚಿಸಬಹುದು. ವ್ಯಾಸರಾಯರು ಅಥವಾ ಪುರಂದರದಾಸರಂತಹವರೊಬ್ಬಿಬ್ಬರು ಅವರನ್ನು ಅರ್ಥಮಾಡಿಕೊಂಡು - "ಕನಕದಾಸರ ಮೇಲೆ ದಯಮಾಡು, ವ್ಯಾಸಮುನಿ ಮಠದ ಜನರೆಲ್ಲ ದೂರಿಕೊಂಬುವರು" ಎಂಬಂತಹ ಸಂದರ್ಭವನ್ನು ಬಿಟ್ಟರೆ ಮಿಕ್ಕವರೆಲ್ಲ ಅವರನ್ನು ಕಾಡಿದ್ದೇ ಹೆಚ್ಚು. ಹಾಗಾಗಿಯೇ ಅವರ ರಚನೆಗಳು ಹೆಚ್ಚು ಮೊನಚಾಗಿ, ಪರಿಣಾಮಕಾರಿಯಾಗಿ ಉಳಿದವರಿಗಿಂತ ಭಿನ್ನವಾಗಿ ಹೊರ ಹೊಮ್ಮಲು ಸಾಧ್ಯವಾಯಿತು.

ಆದರೆ ವೀರಶೈವ ಧರ್ಮದ ಹಿನ್ನೆಲೆಯಲ್ಲಾಗಲಿ, ಅಥವಾ ವಚನ ಸಾಹಿತ್ಯದ ಸಂದರ್ಭದಲ್ಲಿಯಾಗಲಿ ಇಂತಹ ಪರಿಸ್ಥಿತಿಕಂಡು ಬರುವುದಿಲ್ಲ. ಅವರು ಒಟ್ಟಾರೆ ಸಮಾಜ ಸುಧಾರಣೆ ಯತ್ತ ನಡೆದವರು. ಮೇಲು - ಕೀಳನ್ನು ನಿರ್ಮೂಲ ಮಾಡಲು ದೃಢ ಹೆಜ್ಜೆಯನ್ನಿಟ್ಟವರು. ಹಾಗಾಗಿ ಧಾರ್ಮಿಕ ವಿಚಾರಗಳಲ್ಲಿಯಾಗಲಿ, ಸಾಮಾಜಿಕ ವಿಚಾರಗಳಲ್ಲಿಯಾಗಲೀ ಅಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಲು ಸಾಧ್ಯವೇ ಆಗಲಿಲ್ಲ. ಎಲ್ಲರಿಗೂ ಸಮಾನಾವಕಾಶವನ್ನು ಕಲ್ಪಿಸುವ ಹಿನ್ನೆಲೆಯಲ್ಲಿ ಸಮಾನ ಚಿಂತನೆ - ಸಮಾನ ಅವಕಾಶಗಳು ಪ್ರಾಪ್ತವಾದುವು. ಇದರಿಂದಾಗಿ ಸಮಾಜದ ಯಾವುದೇ ವರ್ಗದಿಂದ, ಯಾವುದೇ ಸ್ಥಿತಿಯಿಂದ ಬಂದ ವ್ಯಕ್ತಿಯಾದರೂ ಅವನ ಮಾತಿಗೆ ಬೆಲೆ ಕೊಡುವ ಹಾಗೂ ಪರಸ್ಪರ ಗೌರವಿಸುವ ವಾತಾವರಣ ವೀರಶೈವ ಧರ್ಮದ ಹಿನ್ನೆಲೆಯಲ್ಲಿ ಉಂಟಾಗಿತ್ತು. ವೈದಿಕ ಧರ್ಮದ ಹಿನ್ನೆಲೆಯಲ್ಲಿ ದಾಸ ಸಾಹಿತ್ಯದ ಸಂದರ್ಭದಲ್ಲಿ ಕನಕದಾಸರು ಎದುರಿಸಿದ ಸಮಸ್ಯೆಗಳು, ಇಲ್ಲಿ ಕಂಡು ಬರುವುದಿಲ್ಲ. ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಕೆಲವೊಂದು ಕಂದಾಚಾರಗಳನ್ನು, ಅಸಮತೆಯನ್ನು, ಮೂಢನಂಬಿಕೆಗಳನ್ನು ಕಿತ್ತೊಗೆಯಲು ಧರ್ಮದ ಮುಖಂಡರಾಗಿ ಬಸವಣ್ಣನವರು ಮತ್ತೆ ಅಂತಹಕೆಲವರು ಆಡಿದ ಮಾತುಗಳನ್ನು ಬಿಟ್ಟರೆ, ಉಳಿದವರಲ್ಲಿ ಅಂತಹ ಮಾತುಗಳು ಕೇಳಿ ಬರುವುದಿಲ್ಲ. ಕನಕದಾಸರಂತೆ ಅಲ್ಲಿ ಯಾವೊಬ್ಬ ಶರಣನೂ ತನ್ನ ಅಸ್ತಿತ್ವಕ್ಕಾಗಿ ಹೋರಾಟ ನಡೆಸಬೇಕಾದ ಸನ್ನಿವೇಶವೇ ಬರುವುದಿಲ್ಲ. ಕನಕದಾಸರ ಸಾಹಿತ್ಯದ ಕೊಡುಗೆಯಲ್ಲಿ ಕಂಡು ಬರುವ ವೈಶಿಷ್ಟ್ಯಕ್ಕೆ ಇದೂ ಒಂದು ಕಾರಣವಾಗಿದೆ.

ಕನ್ನಡ ಸಾಹಿತ್ಯದ ಆರಂಭ ಕವಿಗಳಂತೆ ಕನಕದಾಸರು ಚಂಪುವಿನಲ್ಲಿ ಕಾವ್ಯರಚನೆ ಮಾಡಲಿಲ್ಲವಾದರೂ, ಕನ್ನಡದ ಆದಿಕವಿ ಪಂಪನಂತೆ ಕಲಿಯಾಗಿದ್ದು, ಕವಿಯಾಗಿ ಕೀರ್ತಿ

ಗಳಿಸಿದವನು. ಪಂಪ, ಕನಕದಾಸರಂತೆ ಸಂತನೆನಿಸದಿದ್ದರೂ, ಧರ್ಮಶ್ರದ್ಧೆಯುಳ್ಳ ರಸಿಕ ಹಾಗೂ ಶೃಂಗಾರಪ್ರಿಯ ಕವಿ. ಕನಕದಾಸರು ತಮ್ಮ 'ಮೋಹನ ತರಂಗಿಣಿ' ಯಲ್ಲಿ ಅದನ್ನು ಮೆರೆದಿದ್ದರೆ, ಪಂಪ ತನ್ನ ಧಾರ್ಮಿಕ ಕಾವ್ಯವಾದ 'ಆದಿಪುರಾಣ'ದಲ್ಲಿಯೇ - 'ನೀಲಾಂಜನೇಯ' ಹಾಗೂ 'ಶ್ರೀಮತಿ ವಜ್ರಜಂಘ'ರ ಸಂದರ್ಭದಲ್ಲಿ ಅದನ್ನು ಉತ್ತುಂಗ ಶಿಖರಕ್ಕೇರಿಸಿದ್ದಾನೆ. ಆ ಮಟ್ಟದ ಕೃತಿ ಇದಲ್ಲವಾದರೂ, ಸನ್ನಿವೇಶ ನಿರ್ಮಾಣ ಹಾಗೂ ಔಚಿತ್ಯ ಪ್ರಜ್ಞೆಯನ್ನು ತೋರುವಲ್ಲಿ ಕನಕದಾಸರು ಪಂಪನಿಗೆ ಹೆಗಲೆಣೆಯಾಗಿ ನಿಲ್ಲದಿದ್ದರೂ, ನಿರಾಶೆಯುಂಟು ಮಾಡುವ ಕವಿಯಲ್ಲ, ಕನಕದಾಸರನ್ನು ಪಂಪನೊಂದಿಗೆ ತೂಗಿ ನೋಡುವುದೇ ಕೆಲವರಿಗೆ ಕಸಿವಿಸಿಯುಂಟು ಮಾಡಬಹುದಾದ ಸಂಗತಿಯಾಗಬಹುದಾದರೂ, ಕೆಲವೊಂದು ಸನ್ನಿವೇಶಗಳ ಚಿತ್ರಣ ಹಾಗೂ ವರ್ಣನೆಗಳು ಕನಕದಾಸರಿಗೆ ಕೀರ್ತಿಯನ್ನು ತಂದುಕೊಡಬಲ್ಲಂತಹವು. ಪಂಪನ 'ಆದಿಪುರಾಣ' ಧಾರ್ಮಿಕ ಕಾವ್ಯವಾದಂತೆ ಕನಕದಾಸರ 'ಮೋಹನ ತರಂಗಿಣಿ'ಯೂ ಒಂದರ್ಥದಲ್ಲಿ ದೈವೀಪಾತ್ರಗಳನ್ನೊಳಗೊಂಡ ಶೃಂಗಾರ ಕಾವ್ಯ. ಎರಡರಲ್ಲಿಯೂ ಪುರಾಣ ವಸ್ತುವನ್ನು ಕಾಣಬಹುದು. ಆದರೆ ಒಂದು 'ಚಂಪು' ಇನ್ನೊಂದು 'ಸಾಂಗತ್ಯ'. ಚಂಪುವಿನ ಚೌಕಟ್ಟಿನಲ್ಲಿ ಬರುವ ಬಂಧ, ಸಾಂಗತ್ಯದಲ್ಲಿ ತರಲಾಗುವುದಿಲ್ಲ ಎಂಬ ಅಂಶವನ್ನು ಮನಗಂಡು ಇವುಗಳ ಇತಿಮಿತಿಯನ್ನು ಗುರುತಿಸಬೇಕಾಗುತ್ತದೆ. ವಾಸ್ತವವಾಗಿ ಇವರಿಬ್ಬರ ತುಲನೆ ಸಮಂಜಸವಲ್ಲವೆನಿಸಬಹುದಾದರೂ 'ಸತ್ಕಾವ್ಯ'ದ ಸಾಲಿನಲ್ಲಿ ನಿಲ್ಲಬಲ್ಲ 'ಮೋಹನ ತರಂಗಿಣಿ' ಕಾವ್ಯಗುಣವನ್ನು ಧಾರಾಳವಾಗಿಯೇ ಪ್ರಕಟಿಸುತ್ತದೆ:

ರಸಪೂರಿತ ಸುಪ್ರಬಂಧ ವಿಲಕ್ಷಣ
ವೆಸೆವಂತೆ ಪೇಳ್ದಪೆನಿದನು
ಹಸನಾದುದೆಂದು ಯೋಗ್ಯರು ತಲೆದೂಗಲು
ಉಸಿರುವೆ ಹರಿಕೃಪೆಯಿಂದ ||

ಎಂದು ಪೀಠಿಕೆಯಲ್ಲಿಯೇ ಹೇಳಿಕೊಂಡಿರುವ ಈ ಕವಿ ಅದನ್ನು ಹುಸಿಯಾಗಿಸಿಲ್ಲ. ಆದರೆ ಪಂಪನ ಕಾವ್ಯದಲ್ಲಿನ - "ನೋಡಿ ಕಣ್ ತಣಿವಿನಂ ಅಪ್ಪಿ, ತೋಳ್ ತಣಿವಿನಂ ಸುರತಾಮೃತ ಸೇವೆಯೊಳ್, ಮನಂತಣಿವಿನಂ ಆದಲಂಪು ಮಿಗೆ ಭೋಗಿಸಿದಂ ಸುರಲೋಕ ಸೌಖ್ಯಮಂ" ಮಟ್ಟದ ಬಿಗಿ ಪ್ರಕಟವಾಗದೆ ಹೋದರೂ, ಉಷಾ - ಅನಿರುದ್ಧರ ಸಮಾಗಮ ಸಂದರ್ಭದಲ್ಲಿ ಬರುವ ಕನಸಿನ ಪ್ರಣಯ ಬೇಟೆಯೇ ಮೊದಲಾದ ಶೃಂಗಾರ ಸನ್ನಿವೇಶಗಳಲ್ಲಿ ಕವಿ ಕನಕದಾಸರು ತಾವು ಸಂತರೆಂಬುದನ್ನು ಸಂಪೂರ್ಣ ಮರೆತು, ಕಾವ್ಯ ರಚಿಸಿರುವುದು ಕಂಡು ಬರುತ್ತದೆ. ಶೃಂಗಾರ ಕವಿಯಾಗಿ ಮೆರೆದಿರುವುದು ಕಂಡು ಬರುತ್ತದೆ:

ನಿದ್ರಾನ್ವಿತೆಯಾಗಿ ಕಣ್ಮುಟ್ಟಿಯೊಳಗನಿ
ರುದ್ಧನ ಕಂಡಮರ್ದಪ್ಪಿ
ಮುದ್ದಾಡಿ ಮುದ್ದು ಬಾಯೊಳಗಿಟ್ಟು ಚುಂಬಿಸು
ತಿದ್ದಳು ರತಿಶಾಸ್ತ್ರದಲಿ ||
ಚಾಪಲಾಕ್ಷಿಯ ಪರವಶಬೀತು ಕಾಮೋ

ದ್ವೀಪನ ತಲೆದೋಱೆ ಮಗುಳೆ
ರೂಪಕಂದರ್ಪನೆಂದೆನಿಸುವ ತನ್ನ ಪ್ರಾ
ಣೋಪನ ತಡವಿ ನೋಡಿದಳು ||

ಪಂಪನದು 'ಚಂಪು', ಕನಕನದು 'ಸಾಂಗತ್ಯ'. ಆದರೆ ಬಂಧವೇ ಬೇರೆ, ಇದರ ಚಂದವೇ ಬೇರೆ. ಆದರೂ ಕಾವ್ಯದ ಸ್ವಾದ, ರಸಿಕತೆಯ ಮೋದ ಇದ್ದೇ ಇದೆ. ಪ್ರಧಾನವಾಗಿ ಶೃಂಗಾರ ಕಾವ್ಯವೆನಿಸಿದ 'ಮೋಹನ ತರಂಗಿಣಿ'ಯಲ್ಲಿ ಕವಿ ಹೇಳಬೇಕಾದ್ದನ್ನು ಔಚಿತ್ಯವರಿತು ಸಂಕೋಚವಿಲ್ಲದೆ ಹೇಳಿದ್ದಾನೆ - ನಿಜವಾದ ಕಾವ್ಯವಾಗಿಸಿದ್ದಾನೆ.

ಕನಕದಾಸರ ಕಾವ್ಯದಲ್ಲಿ ಹೆಚ್ಚಿನ ವಿಶೇಷತೆ ಇರುವುದು ಅವರು ತೋರುವ ಸಮಕಾಲೀನ ಪ್ರಜ್ಞೆ ಹಾಗೂ ಸಾಮಾಜಿಕ ಪ್ರಜ್ಞೆಯಲ್ಲಿ. ಆರಂಭದ ಚಂಪೂ ಕವಿಗಳು ತಾವು ಕೈಗೆತ್ತಿಕೊಂಡ ವಸ್ತುವಿನ ಕಾರಣದಿಂದಾಗಿ ಪ್ರಕಟಿಸಲಾಗದ ಹಲವಂಶಗಳನ್ನು ಅನಂತರದ ಕವಿಗಳು ಧಾರಾಳವಾಗಿ ತಮ್ಮ ಕೃತಿಗಳಲ್ಲಿ ಪ್ರಕಟಿಸಿರುವುದನ್ನು ಕಾಣಬಹುದು. ಅಲ್ಲದೆ ಅಂದಿನ ಸಾಹಿತ್ಯಿಕ ಸಂದರ್ಭವೂ ಅವರಿಗೆ ಅವಕಾಶ ಕೊಡಲಿಲ್ಲ ಎಂಬುದೂ ಸತ್ಯ. ಹಾಗಾಗಿ ಪಂಪ, ಪೊನ್ನ, ರನ್ನನಂತಹ ಕವಿಗಳೂ ಕೂಡ ಕೃತಿ ರಚನೆಯ ಸಂದರ್ಭದಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಮೆರೆಯಲಾಗಲಿಲ್ಲ. ಪಂಪ 'ವಿಕ್ರಮಾರ್ಜುನ ವಿಜಯ'ದಲ್ಲಿ ಮೆರೆದ ಸ್ವಾತಂತ್ರ್ಯವನ್ನು 'ಆದಿಪುರಾಣ'ದಲ್ಲಿ ಮೆರೆಯಲಾಗಲಿಲ್ಲ ಎಂಬುದೇ ಸಾಕು ಅಂದಿನ ಕಾವ್ಯದ ವಸ್ತು, ಸಾಹಿತ್ಯದ ಸಂದರ್ಭದಂತಹ ಅಂಶಗಳು ಕವಿಗಳಿಗೆ ಹೇಗೆ ಕಡಿವಾಣವಾಗಿತ್ತು ಎಂಬುದನ್ನು ತೋರುವುದಕ್ಕೆ. ಆದರೆ ಅವು ವಸ್ತುನಿಷ್ಠ ಕಾವ್ಯವಾಗಿ ಪಂಡಿತವರ್ಗಕ್ಕೆ ಮೆಚ್ಚುಗೆಯಾದುವು ಎಂಬುದು ಸತ್ಯ ಸಂಗತಿ.

ವಚನಕಾರರಿಂದ ಆರಂಭವಾದ ಹೊಸ ಅಲೆಯೊಂದು ಸಮಗ್ರ ಕ್ರಾಂತಿಯನ್ನೇ ಉಂಟು ಮಾಡಿತೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಅದು ಮುಖ್ಯವಾಗಿ - ಕಾವ್ಯದ ವಸ್ತು, ಭಾಷೆ, ಅಭಿವ್ಯಕ್ತಿಯ ರೀತಿಯ ಮೇಲೆ ಉಂಟು ಮಾಡಿದ ಪ್ರಭಾವ ಅತಿಶಯವಾದುದು. ಅದರ ಜೊತೆ ಜೊತೆಯಲ್ಲಿಯೇ ಕವಿಗಳಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆತದ್ದು ಮಹತ್ವದ ಸಂಗತಿ. ಹೀಗಾಗಿ ಧಾರ್ಮಿಕ ಚಿಂತನೆಯಷ್ಟೇ, ವ್ಯಕ್ತಿ ಸ್ವಾತಂತ್ರ್ಯದ ಕಡೆಗೂ ಅವರು ಗಮನ ಕೊಟ್ಟರು. ಸಾಹಿತ್ಯ ಪ್ರಪಂಚದಲ್ಲಿ ತುಂಬಿ ತುಳುಕಾಡುತ್ತಿದ್ದ ಪುರಾಣ ವಿಷಯಗಳು ಹಾಗೂ ರಾಜ ಮಹಾರಾಜರುಗಳ ವಿಷಯಕ್ಕೆ ಬದಲಾಗಿ ಮಾನವ ಸಂಬಂಧವಾದ ಯಾವುದೇ ವಿಷಯ ಸಾಹಿತ್ಯದ ವಸ್ತುವಾಗುವಂತಾದುದು ಮಾನವನ ವೈಚಾರಿಕ ಜಗತ್ತಿನ ಒಂದು ವೈಜಯಂತಿ.

ಸಮಕಾಲೀನ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ ಹಾಗೂ ವ್ಯಕ್ತಿಯ ಸಚ್ಚಾರಿತ್ರ್ಯವನ್ನು ಕುರಿತಾದ ವಿಷಯಗಳು ವಚನಕಾರರಿಂದ ಸಾಹಿತ್ಯದಲ್ಲಿ ಧಾರಾಳವಾಗಿ ಪ್ರಕಟಗೊಳ್ಳಲಾರಂಭಿಸಿತೆಂಬುದು ಗಮನಾರ್ಹ. ಇದು ಎಲ್ಲಾ ವಚನಕಾರರ ಹಾಗೂ ದಾಸರ ಕೃತಿಗಳಲ್ಲಿ ಸ್ಪಷ್ಟವಾಗಿ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆಯಾದರೂ, ಕನಕದಾಸರು ಕವಿಯಾಗಿ ತಮ್ಮ ಕೃತಿಗಳಲ್ಲಿಯೂ ಇದನ್ನು ಅಷ್ಟೇ ದಟ್ಟವಾಗಿ ಪ್ರಕಟಿಸಿರುವುದು ವಿಶೇಷ ಅಂಶವಾಗಿದೆ. ಹಿಂದಿನ ಕೃತಿಗಳಲ್ಲಿ ಕಾಣದ ಅಥವಾ ತೀರ ವಿರಳವೆನ್ನಬಹುದಾದ ಸಮಕಾಲೀನ ಜೀವನದ ಯಥಾವತ್ತಾದ ಚಿತ್ರಣ ಕನಕದಾಸರಲ್ಲಿ ಅತ್ಯಂತ ಸಹಜವಾಗಿ ಕಂಡು ಬರುತ್ತದೆ. ಆ ದೃಷ್ಟಿಯಿಂದ ನೋಡುವಾಗ ಕನಕದಾಸರ 'ಮೋಹನ ತರಂಗಿಣಿ'

ಒಂದು ಅದ್ವಿತೀಯವಾದ ಶ್ರೇಷ್ಠ ಕೃತಿ. ಕನಕದಾಸರ ಸಹಜ ಕಾವ್ಯಪ್ರತಿಭೆ ಇಲ್ಲಿ ಭೋರ್ಗರೆದು ಹರಿದಿರುವುದನ್ನು ಕಾಣಬಹುದು. 'ಮೋಹನ ತರಂಗಿಣಿ' ಯಲ್ಲಿ ದೈವೀ ಪಾತ್ರಗಳು ಬಂದರೂ - ಅಲ್ಲಿ ಶೃಂಗಾರವನ್ನು ಮೆರೆದಿರುವುದರ ಜೊತೆಗೆ, ಸಮಕಾಲೀನ ಬದುಕಿನ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುವಲ್ಲಿ ಕನಕದಾಸರು ಪೂರ್ಣ ಯಶಸ್ವಿಯಾಗಿದ್ದಾರೆ. ಅನೇಕ ಪ್ರಾಚೀನ ಕವಿಗಳು ಕಾವ್ಯವಸ್ತುವಲ್ಲ ಎಂದೇ ಪರಿಗಣಿಸಿರಬಹುದಾದ, ಅಥವಾ ಗಮನಿಸದೆಯೇ ಹೋಗಿರಬಹುದಾದ, ಗಮನಿಸಿದರೂ ನಿರ್ಲಕ್ಷಿಸಿರಬಹುದಾದ ಬಹು ಸೂಕ್ಷ್ಮ ವಿಷಯಗಳನ್ನು ಸೊಗಸಾಗಿ ಜೀವ ತುಂಬಿ ತಂದಿದ್ದಾರೆ. ವಿಜಯನಗರ ಕಾಲದ ರಸಿಕ ಶ್ರೀಮಂತ ಉಜ್ವಲದ ಬದುಕು ಕನಕದಾಸರಲ್ಲಿ ಒಳ್ಳೆಯ ಕಾವ್ಯವಾಗಿದೆ. ಕವಿಗಿರ ಬೇಕಾದ ಸೂಕ್ಷ್ಮಮತಿ ಹಾಗೂ ಸೂಕ್ಷ್ಮ ದೃಷ್ಟಿಗಳೆರಡೂ ಕನಕದಾಸರಲ್ಲಿ ಎದ್ದು ಕಾಣುತ್ತವೆ. 'ಮೋಹನ ತರಂಗಿಣಿ'ಯ ೩-೪ನೆಯ ಅಧ್ಯಾಯದಲ್ಲಿ ಬರುವ ಪುರವರ್ಣನೆ ಕನಕದಾಸರನ್ನು ಒಬ್ಬ ವಿಶಿಷ್ಟ ಕವಿಯಾಗಿಸಿರುವಂತೆಯೇ ಒಬ್ಬ ಮಹಾನ್ ಕಲಾಕಾರನನ್ನಾಗಿಯೂ ಮಾಡಿದೆ. ವಿಜಯನಗರ ಸಾಮ್ರಾಜ್ಯದ ಸುವರ್ಣ ಯುಗದ ಬಣ್ಣನೆಯನ್ನು ಕವಿ ಕಣ್ಣಿಗೆ ನಾಟಿಸಿದ್ದಾನೆ

ಸೋಮ ಸೂರಿಯ ವೀಥಿ ವೀಥಿಯಿಕ್ಕೆಲದಲ್ಲಿ
ಹೇಮ ನಿರ್ಮಿತ ಸೌಧದೋಳಿ
ರಮಣೀಯತೆವೆತ್ತ ಕಳಸದಂದಡಿಯಿರ್ದು
ವಾ ಮಹಾದ್ವಾರಕಾ ಪುರದ ||
ಭೋಜಿಪ ಕರ್ಪೂರ ಕಸ್ತೂರಿ ಜೀರ್ಣಜಿ
ನವಾಜಿ ಪುಣುಗು ಬಹುತೈಲ
ಸೋಜಿಗವಡೆದ ಸುಗಂಧದಂಗಡಿಗಳು
ರಾಜಿಸುತ್ತಿರ್ದುವಿಕ್ಕೆಲದಿ ||
ಚಪ್ಪನ್ನ ದೇಶದ ನಾಣೆಯಂಗಳ ನೋಟ
ತುಪ್ಪದ ಚವಲ ಸೆಟ್ಟಿಗಳು
ಒಪ್ಪವಡೆದು ಕುಳಿತಿರ್ದರು ಹಣ ಹೊನ್ನ
ಕುಪ್ಪೆಯ ಮುಂದಿಟ್ಟುಕೊಂಡು ||
ಸುರಗಿ ಸೇವಂತಿಗೆ ಕುಂದ ಮಂದಾರ ಪಾ
ದರಿ ಕಂಚಿ ಕಣಿಗಲೆ ದವನ
ಬಿರಿದ ಕೆಂಜಾಜಿಯೆಂಬುವ ಪುಷ್ಪದಂಗಡಿ
ಪರುಠವಿಸಿರ್ದುದೇನೆಂಬೆ ||
ಉತ್ತುತ್ತೆ ಖರ್ಜೂರ ದ್ರಾಕ್ಷಿ ಸಕ್ಕರೆ ಬೆಲ್ಲ
ಮೆತ್ತಿಸಿದ ಕಾಯಭಾಗ

ಒತ್ತರದ ಕಳಿತ ಸಮಸ್ತ ಪಣ್ಯಸರಂಗ
ಳಿತ್ತಬದಲಿ ಮಾಱುತಿಹವು ||

ಅಷ್ಟೇ ಅಲ್ಲ, ಅಲ್ಲಿಯ ಶ್ರೀಮಂತರ ಅಟ್ಟಹಾಸ ವೈಭವವೆಂದರೆ :

ಓರಂತೆ ಮರಕಾಲರು ಹಡಗಿನ ವ್ಯವ
ಹಾರದಿ ಗಳಿಸಿದ ಹಣವ
ಭಾರ ಸಂಖ್ಯೆಯಲಿ ತೂಗುವರು ಬೇಡಿದರೆ ಕು
ಬೇರಂಗೆ ಕಡವ ಕೊಡುವರು ||

ಅದರ ಜೊತೆ ಜೊತೆಯಲ್ಲಿಯೇ ಮಾನವ ಸ್ವಭಾವಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಚಿತ್ರಿಸಿರುವ ಬಗೆಯೂ ವಿಶಿಷ್ಟ ಬಗೆಯದಾಗಿದೆ.

ಅಷ್ಟಾದಶವರ್ಣನೆಗೆ ಸಿಕ್ಕಿ ಹಾಕಿಕೊಂಡ ಅನೇಕ ಪ್ರಾಚೀನ ಕವಿಗಳು ಅದರಿಂದ ಬಿಡಿಸಿಕೊಳ್ಳಲಾಗದೆ ಕಾವ್ಯವನ್ನು ಬರಡಾಗಿಸಿರುವ ಅಥವಾ ಹೊರೆಯಾಗಿಸಿರುವ ನಿದರ್ಶನಗಳೇ ಹೆಚ್ಚು. ಆದರೆ 'ಮೋಹನ ತರಂಗಿಣಿ'ಯಲ್ಲಿಯ ಅದರ ರೀತಿಯೇ ಬೇರೆ. ಕನಕದಾಸರು ಅಷ್ಟಾದಶ ವರ್ಣನೆಗಳನ್ನು ತಂದಿದ್ದರೂ ಅದರಲ್ಲಿ ಅವರು ಸಿಕ್ಕಿ ಹಾಕಿಕೊಂಡಿಲ್ಲ. ಬದಲಾಗಿ ಅದನ್ನು ಹೆಚ್ಚು ಚೇತೋಹಾರಿಯನ್ನಾಗಿ ಮಾಡಿದ್ದಾರೆ. ಕುಸುರಿ ಕೆಲಸದ ಇಲ್ಲಿಯ ವರ್ಣನೆಗಳು ಕವಿಯ ಅದ್ಭುತ ಕಲಾಸೃಷ್ಟಿಯೇ ಆಗಿದೆ. ಕಾವ್ಯ ಕಲೆಯನ್ನು ಕನಕದಾಸರು ಇಲ್ಲಿ ವಿಶಿಷ್ಟ ರೀತಿಯಲ್ಲಿ ಮೆರೆದಿದ್ದಾರೆ. ಇಲ್ಲಿ ಬರುವ ದ್ವಾರಕಾಪುರ ವರ್ಣನೆಯಂತೂ ಕನಕದಾಸರ ವಾಸ್ತವಿಕ ಪ್ರಜ್ಞೆಯ ಜೀವಂತ ಸಾಕ್ಷಿ. ಮನೆಯ ಮುಂಭಾಗದಲ್ಲಿನ ತುಳಸೀಕಟ್ಟೆ, ಅದನ್ನು ಪೂಜಿಸುತ್ತಿರುವ ಸ್ತ್ರೀಯರು, ಹೋಮದಲ್ಲಿ ತೊಡಗಿರುವ ಬ್ರಾಹ್ಮಣರು, ಊಟದ ಮನೆಯ ಮುಂದೆ ಹೊಟ್ಟೆ ಮುಂದುಮಾಡಿ ಒಳನುಗ್ಗಲು ಹಾತೊರೆಯುತ್ತಿರುವವರ ಚಿತ್ರವೇ ಮೊದಲಾಗಿ ನೂರೆಂಟು ಅತ್ಯದ್ಭುತ ಚಿತ್ರಗಳನ್ನು ಕನಕದಾಸರು ತಮ್ಮ ಕಾವ್ಯದಲ್ಲಿ ಹಿಡಿದಿಟ್ಟಿದ್ದಾರೆ :

ಮಲ್ಲಿಗೆಯರಳಂತೆ ಬಿಚ್ಚೋಗರ ಮೋಸ
ಚೆಳ್ಳೆಯ ಬಹಳುಪ್ಪುಗಾಯಿ
ಘುಲ್ಲಿಸಿ ಗಟ್ಟಿಯ ಕಟ್ಟಿದ ಪಿರಿಯರು
ಪುಲ್ಲಿಗೆಗಳು ತರತರಿಸೆ ||

ರಸಾಯನವ ಚಪ್ಪರಿದು ನೀರ್ಮಜ್ಜಿಗೆ
ಹಸಗೆಯ್ದುರಲೀಂಟಿದರು
ಪೊಸ ವಿಘ್ನರಾಜನ ಬಳಗವೆಂಬಂತೇಟಿ
ವಶವಲ್ಲದೆದ್ದರುತ್ಸವದಿ ||

ಶರಧಿಯೊಳೊಗೆದ ಹೋಂದಾವರೆಯಂತಿರ್ಪ

ಪುರಮಧ್ಯದಲಿ ಕೃಷ್ಣರಾಯ
ಅರಮನೆ ಕನ್ನಿಕೆಯೆಂಬಂತೆ ಜನ ಮೋ
ಹರಿಸಲು ಕಣ್ಗೆ ರಂಜಿಸಿತು ||

'ಮೋಹನ ತರಂಗಿಣಿ'ಯಲ್ಲಿ ಬರುವ ವನವಿಹಾರದ ವರ್ಣನೆ ಕನಕದಾಸರ ಸೋಪಜ್ಞತೆಗೊಂದು ಉಜ್ವಲ ಸಾಕ್ಷಿ. ಕನ್ನಡದ ಬಹುತೇಕ ಕವಿಗಳಲ್ಲಿ ಬರುವ ವರ್ಣನೆ ಗಳಂತಲ್ಲ ಇಲ್ಲಿಯ ವನವಿಹಾರ ವರ್ಣನೆ ; ಇದರ ಸೊಬಗೇ ಬೇರೆ. ಕನಕದಾಸರ ವಿಶಿಷ್ಟ ಪ್ರತಿಭೆ ಇಲ್ಲಿ ಜೀವಂತಗೊಂಡಿದೆ. ವನವಿಹಾರಕ್ಕೆಂದು ಬರುವ ಇಲ್ಲಿಯ ಅರಮನೆಯ ಹೆಂಗಸರು, ಕೇವಲ ರಾಣಿಯರಾಗಿ ಅಥವಾ ರಾಣೀವಾಸದ ಜಂಬಗಾರ್ತಿಯರಾಗಿ ವನವನ್ನು ಅಂದಗೆಡಿಸುವ ಸೊಕ್ಕುಗಾರ್ತಿಯರಲ್ಲ. ಅದನ್ನು ಕಂಡು, ಅದರ ಸೊಬಗನ್ನು ಉಂಡು ಆನಂದಿಸುವ ಪುಷ್ಪಪ್ರಿಯರು, ಪ್ರಕೃತಿ ಆರಾಧಕರು. ಅಷ್ಟೇ ಅಲ್ಲ ಕವಿ ಇನ್ನೂ ಮುಂದೆ ನಡೆದು, ಪ್ರಾಚೀನ ಕಾವ್ಯಕೃಷ್ಟೇ ಕಟ್ಟುಬಿದ್ದವರು ಕಲ್ಪಿಸಿಕೊಳ್ಳಲೂ ಆಗದ ಸುಂದರ ಸಾಂಸಾರಿಕ ಚಿತ್ರವನ್ನು ಉಸಿರಾಡುವಂತೆ ಬಣ್ಣಿಸಿದ್ದಾನೆ. ಇಲ್ಲಿಯ ವನವಿಹಾರಿ ರಾಣಿಯರು ಬರಿಯ ವಿಲಾಸಿನಿಯರಲ್ಲ ಒಳ್ಳೆಯ ಗೃಹಿಣಿಯರು, ಗರತಿಯರು. ಅವರೆಲ್ಲರೂ ಸಂಸಾರದ ಹೊರೆ ಹೊತ್ತ ಸಾಮಾನ್ಯ ಹೆಂಗಸರಂತೆ ಕಂಡು ಬರುತ್ತಾರೆ. ವನವಿಹಾರದಲ್ಲಿದ್ದರೂ ಅವರೆಲ್ಲಾ ಅಡುಗೆಮನೆಯ ಜವಾಬ್ದಾರಿಯಲ್ಲಿ ಮುಳುಗಿದವರಂತೆ ತೋರುತ್ತಾರೆ. ಕನಕದಾಸರ ವೈಶಿಷ್ಟ್ಯ ಇಲ್ಲಿ ಎದ್ದು ಕಾಣುತ್ತದೆ :

ಕೈದಣಿವ ತನಕ ನಾನಾ ಪುಷ್ಪಂಗಳ
ಕೊಯ್ದು ಪೊಟ್ಟಣವ ಕಟ್ಟಿದರು
ತೊಯ್ದರು ನೀರಾಟವನಾಡಿ ಸೊಬಗಾಂತು
ಐದೆಯರುಗಳು ಸಂತಸದಿ ||
ಅಂಬೆ ಹಳದಿ ಕಾರ್ಗೆಣಸು ನೀರುಳ್ಳಿ ಕೊ
ತ್ತುಂಬರಿ ಕರಿಬೇವು ಸಹಿತ
ಸಿಂಬೆ ಕೂಗಲಿ ಪಿಪ್ಪಲಗಾ ಕೊಯ್ದರು
ನಿಂಬೆಯ ಕಟಿವಣ್ಣಳೊಡನೆ

ಇಂತಹ ಹಲವು ಹೊಸತನಗಳನ್ನು ಮೆರೆಯುವುದರ ಮೂಲಕ ಕನಕದಾಸರು ತಮ್ಮ ವಿಶಿಷ್ಟ ಪ್ರತಿಭೆಯನ್ನು ತೋರಿರುವುದರ ಜೊತೆಗೆ ಹೆಚ್ಚು ಆತ್ಮೀಯವಾಗಿಸಿದ್ದಾರೆ. ಏಕೆಂದರೆ ಕಣ್ಣೊಪ್ಪುವ, ಮನಮಿಡಿಯುವ ಇಂತಹ ಚಿತ್ರಗಳು ಕನ್ನಡ ಸಾಹಿತ್ಯದಲ್ಲಿ ಅಪರೂಪವೆಂದೇ ಹೇಳಬೇಕು. ಪಾಂಡಿತ್ಯ ಪ್ರದರ್ಶನ ಅಥವಾ ಸಾಂಪ್ರದಾಯಿಕ ವರ್ಣನೆಗಳಲ್ಲಿಯೇ ಕಾವ್ಯವನ್ನು ನಡೆಸಿಕೊಂಡ ನಮ್ಮ ಹಲವು ಕವಿಗಳಿಗಿಂತ ಇಲ್ಲಿ ಕನಕದಾಸರು ತೀರ ಭಿನ್ನವಾಗಿಯೇ ನಿಲ್ಲುತ್ತಾರೆ.

* * * * *

ಪ್ರಾಚೀನ ಕವಿಗಳನ್ನು ಹೊರತು ಪಡಿಸಿ ಸ್ವಲ್ಪ ಮಟ್ಟಿಗೆ ಕಾವ್ಯದ ರೂಪ, ರೀತಿ ಹಾಗೂ

ಕಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಕನಕದಾಸರಿಗೆ ಹತ್ತಿರವಾಗಬಹುದಾದ ರುದ್ರಭಟ್ಟ, ಕುಮಾರವ್ಯಾಸ, ರತ್ನಾಕರವರ್ಣಿ, ನಂಜುಂಡ ಕವಿ, ವಚನಕಾರರು ಹಾಗೂ ಕೀರ್ತನಕಾರರ ಜೊತೆಯಲ್ಲಿ ಕನಕದಾಸರನ್ನು ಇಟ್ಟು ನೋಡುವ ಪ್ರಯತ್ನ ಮಾಡಬಹುದು.

ಕನಕದಾಸರೂ ಕೂಡ - ಕುಮಾರವ್ಯಾಸ, ರುದ್ರಭಟ್ಟರಂತೆ, ಷಟ್ಪದಿಯಲ್ಲಿ ಕಾವ್ಯ ರಚಿಸಿದ್ದಾರೆ; ರತ್ನಾಕರ ವರ್ಣಿ, ನಂಜುಂಡ ಕವಿಯರಂತೆ ಸಾಂಗತ್ಯದಲ್ಲಿ ಕೃತಿ ರಚನೆ ಮಾಡಿದ್ದಾನೆ. ಅಷ್ಟೇ ಅಲ್ಲ, ಅವರೀರ್ವರಂತೆ ಶೃಂಗಾರವನ್ನು ಮೆರೆದಿದ್ದಾನೆ. ರುದ್ರಭಟ್ಟ, ಕುಮಾರವ್ಯಾಸರಂತೆ ಶ್ರೀ ಕೃಷ್ಣ ಭಕ್ತಿಯನ್ನು ತೋರಿದ್ದಾನೆ. ವಚನಕಾರರು ಹಾಗೂ ಇತರ ಕೀರ್ತನಕಾರರಂತೆ ಸಾಮಾಜಿಕ ಪ್ರಜ್ಞೆಯನ್ನು, ಬೆಡಗಿನ ವಚನಗಳಂತೆ 'ಮುಂಡಗೆ'ಗಳನ್ನು ಬರೆದಿದ್ದಾನೆ. ಹಾಗೆಯೇ 'ರಾಮಧಾನ್ಯ ಚರಿತೆ'ಯಂತಹ ವಿಶಿಷ್ಟ ಕಾವ್ಯವಸ್ತುವನ್ನೂ ನೀಡಿದ್ದಾನೆ.

ರುದ್ರಭಟ್ಟನ 'ಜಗನ್ನಾಥವಿಜಯ', ಕುಮಾರವ್ಯಾಸನ 'ಭಾರತ ಕಥಾಮಂಜರಿ' ಹಾಗೂ ಕನಕದಾಸರ 'ಹರಿಭಕ್ತಿಸಾರ' ಇವು ಮೂರೂ ಒಂದರ್ಥದಲ್ಲಿ ಶ್ರೀಕೃಷ್ಣ ಪಾರಮ್ಯವನ್ನು ಸಾರುವ ಕೃತಿಗಳು. ಹಾಗೆಯೇ 'ಜಗನ್ನಾಥ ವಿಜಯ' ಹೊರತಾಗಿ ಉಳಿದೆರಡು ಷಟ್ಪದಿಯಲ್ಲಿ ರಚನೆಗೊಂಡ ಕೃತಿಗಳು.

ಕನಕದಾಸ - ಕುಮಾರವ್ಯಾಸರಿಗೆ ಹೋಲಿಸಿದರೆ, ರುದ್ರಭಟ್ಟ ಕವಿಗಿಂತ ಹೆಚ್ಚಾಗಿ ಪಾಂಡಿತ್ಯವುಳ್ಳವನು. ಅವನ ಬಂಧ ಬಿಗಿ 'ವೈಷ್ಣವ ಕಾವ್ಯ ರಸಾವರ್ಣಂ ತುಳು ಕಾಡುಗೆ' ಎಂಬ ಆಸೆಯನ್ನು ಹೊತ್ತು ಕೃತಿ ರಚನೆ ಮಾಡಿದ್ದರೂ, ಅದು ಸಾಮಾನ್ಯನಿಗೆ ನಿಲುಕುವಂತಾದುದು ಕವಿಯ ಪಾಂಡಿತ್ಯ ಪ್ರದರ್ಶನದ ಕಾರಣದಿಂದಾಗಿ. ಶ್ರೀಕೃಷ್ಣನ ಜನನದಿಂದ - ಬಾಣಾಸುರನ ವಧೆಯವರೆಗೆ ಕಥೆ ಹಬ್ಬಿದ್ದರೂ, ಸ್ವಾರಸ್ಯವಾದ ಭಾಗಗಳನ್ನು ಒಳಗೊಂಡಿದ್ದರೂ, 'ನಾರಿಕೇಳ ಪಾಕದ' ಭಾಷಾ ಪ್ರೌಢಿಮೆಯಿಂದಾಗಿ ಕಾವ್ಯಾಸ್ವಾದನೆಗೆ ಅಡ್ಡಿಯಾಗುತ್ತದೆ. ವಿಮರ್ಶಕರು ಅಭಿಪ್ರಾಯಿಸುವಂತೆ ; 'ಕವಿಯ ಕಾವ್ಯದಲ್ಲಿ ಆನಂದಕ್ಕೆ ವಸ್ತುವಿದೆ, ಅದನ್ನು ಕಷ್ಟಪಟ್ಟು ಪಡೆಯಬೇಕಾಗಿದೆ. ಕವಿಯ ರಚನೆ ದ್ರಾಕ್ಷಾರಸವಲ್ಲ 'ನಾರೀಕೇಳ ಪಾಕ' ಎಂಬ ಮಾತು ಸತ್ಯ.

ಆದರೆ ಈ ದೃಷ್ಟಿಯಿಂದ ನೋಡುವಾಗ - ಕನಕದಾಸರು ಹಾಗೂ ಕುಮಾರವ್ಯಾಸ ಬೇರೆಯಾಗಿಯೇ ನಿಲ್ಲುತ್ತಾರೆ. ಇವರ ಕಾವ್ಯ ರುದ್ರಭಟ್ಟನ ಕಾವ್ಯದಂತೆ ನಾರಿಕೇಳ ಪಾಕವಲ್ಲ, ದ್ರಾಕ್ಷಾರಸ. ಭಕ್ತಿಮಾರ್ಗಕ್ಕೆ ಭಾಷೆ ಪಾಂಡಿತ್ಯ ಅಡ್ಡಿಯಾಗದಂತೆ ಇವರಿಬ್ಬರೂ ನೋಡಿಕೊಂಡಿದ್ದಾರೆ. ಕುಮಾರವ್ಯಾಸ ಕೃಷ್ಣಭಕ್ತನೇ ಆದರೂ, ಕನಕದಾಸರಂತೆ ಸಂತನಲ್ಲ. ಅನುಭಾವಿ ಕವಿಯಲ್ಲ, ದೊಡ್ಡ ಕಥಾಸಾಗರದ ಹರಹಿನಲ್ಲಿ ಅವನು ಕೃಷ್ಣಭಕ್ತಿಯನ್ನು ಮೆರೆದವನು :

> ತಿಳಿಯ ಹೇಳುವೆ ಕೃಷ್ಣಕಥೆಯನು
> ಇಳೆಯ ಜಾಣರು ಮೆಚ್ಚುವಂತಿರೆ
> ನೆಲೆಗೆ ಪಂಚಮ ಶ್ರುತಿಯನೊರೆವೆನು ಕೃಷ್ಣಮೆಚ್ಚಲಿಕೆ
> ಹಲವು ಜನ್ಮದ ಪಾಪರಾಶಿಯ
> ತೊಳೆವ ಜಲವಿದು ಶ್ರೀಮದಾಗಮ
> ಕುಲಕೆ ನಾಯಕ ಭಾರತಾಕೃತಿ ಪಂಚಮ ಶ್ರುತಿಯ ||

ಎಂದು ಹೇಳುವಲ್ಲಿ ತನ್ನ ಕಾವ್ಯೋದ್ದೇಶವನ್ನೂ, ರೀತಿಯನ್ನು ಸ್ಪಷ್ಟಪಡಿಸುತ್ತಾನೆ. ಕುಮಾರವ್ಯಾಸ

ಜನತೆಯ ಕವಿ. ಮಹಾಕಾವ್ಯದ ನಿರ್ವಹಣೆಯನ್ನು ಹೊತ್ತರೂ ಅವನು ಈ ನೆಲಕ್ಕೆ ಜಲಕ್ಕೆ ಬೆಲೆ ಕೊಟ್ಟ ಕವಿ. ಸರಳತೆಯಲ್ಲಿಯೇ ಸುಭಗತೆಯನ್ನು ಮೆರೆದ ಕವಿ. ಜನಭಾಷೆಯನ್ನು ಕಾವ್ಯ ಭಾಷೆಯಲ್ಲಿ ಬೆರೆಸಿ ಹೊಸ ರುಚಿಯನ್ನೂ, ಸತ್ವವನ್ನೂ ಮೂಡಿಸಿದ ಮೋಡಿಕಾರ. ಶ್ರೀಕೃಷ್ಣನ ಅದ್ಭುತ ಶಕ್ತಿಯನ್ನು, ಮಹಿಮೆ - ಹಿರಿಮೆಗಳನ್ನು ಕಾವ್ಯದಲ್ಲಿ ಅಂತರ್ಗತವಾದಂತೆ ವೈಶಿಷ್ಟ್ಯಪೂರ್ಣವಾಗಿ ಹೊರಹೊಮ್ಮಿಸಿದ ಜಾದೂಗಾರ. ಮಹತ್ತಿನೊಡನೆ ಜನಪ್ರಿಯತೆಯನ್ನು ಮೆರೆದ ಈ ಕವಿಯ ಕಾವ್ಯ ಮೈಯಲಿ ಮಿಂಚಿನ ಹೊಳೆ ತುಳುಕಾಡುವಂತೆ, ಮಾಡಬಲ್ಲ ಶಕ್ತಿಯುಳ್ಳದ್ದು. ಆದರೆ ಇದರ ವ್ಯಾಪ್ತಿಯೇ ಬೇರೆ.

ಕುಮಾರವ್ಯಾಸನ ಭಾರತದೊಂದಿಗೆ ಹೋಲಿಸಿದಾಗ ಕನಕದಾಸರ 'ಹರಿಭಕ್ತಿಸಾರ' ಕೇವಲ ೧೧೦ ಷಟ್ಪದಿಗಳುಳ್ಳ ಕಿರು ಕೃತಿ. ಆದರೆ ಕುಮಾರವ್ಯಾಸ ಕೃಷ್ಣ ಮಹಿಮೆಯನ್ನೂ, ಭಕ್ತಿಯನ್ನೂ ಇಡೀ ಕಾವ್ಯದಲ್ಲಿ ಹರಡಿರುವುದನ್ನು ಕನಕದಾಸರು ಈ ೧೧೦ ಪದ್ಯಗಳಲ್ಲಿ ರಸವತ್ತಾಗಿ ಬಣ್ಣಿಸಿದ್ದಾರೆ. ಸೂತ್ರಧಾರಿಯೆನಿಸಿದ ಕೃಷ್ಣನ ಮಹಿಮೆಯನ್ನು ಮೈ ಮರೆತುಕೊಂಡಿದ್ದಾರೆ. ಕನಕದಾಸರು ಕವಿಯಾದರೂ ಸಂತ. ಆದರೆ ಕುಮಾರವ್ಯಾಸ ಸಂತನಲ್ಲ - ಕೃಷ್ಣ ಭಕ್ತ. ಕೃಷ್ಣ ಭಕ್ತಿಯನ್ನು ಮೆರೆಯುವುದಷ್ಟೇ ಅವನ ಉದ್ದೇಶವಲ್ಲ. ಅವನು ಸಾಗಬೇಕಾದ ದಾರಿ ಸಾಗರದಷ್ಟು ದೊಡ್ಡದು. ಆದರೆ ಕನಕನದು ಹಾಗಲ್ಲ. ಉದ್ದೇಶ ನೇರ - ಸ್ಪಷ್ಟ. ಹಾಗಾಗಿ ಭಟ್ಟಿ ಇಳಿಸಿದಂತೆ ಅವನ ಭಾವನೆಗಳು ಮಡುಗಟ್ಟಿ ವ್ಯಕ್ತಗೊಂಡಿವೆ. ಕನಕದಾಸರ ಕಾವ್ಯಪ್ರತಿಭೆ ಹಾಗೂ ಭಕ್ತಿಯ ಅಮಲು ಇಲ್ಲಿ ಉಕ್ಕಿ ಹರಿದಿರುವುದನ್ನು ಕಾಣಬಹುದು. 'ಹರಿಭಕ್ತಿಸಾರ'ದ ಪ್ರತಿಯೊಂದು ಪದ್ಯವೂ 'ರಕ್ಷಿಸು ನಮ್ಮನನವರತ' ಎಂಬ ಅಂಕಿತದೊಡನೆ ಅಂತ್ಯಗೊಳ್ಳುವುದು ಒಂದು ವಿಶೇಷವಾಗಿದೆ ಅಷ್ಟೇ.

ಕುಮಾರವ್ಯಾಸ ಮಹಾಭಾರತದ ಪೀಠಿಕಾಭಾಗದಲ್ಲಿ ಮಹಾಭಾರತದ ಕಥೆಯನ್ನೂ, ಆ ಮೂಲಕ ಕೃಷ್ಣಕಥೆಯನ್ನೂ ಕೇಳಿದವರಿಗೆ ದೊರೆಯುವ ಹಲವು ಪುಣ್ಯದ ಒಂದು ಪಟ್ಟಿಯನ್ನು ಕೊಡುತ್ತಾನೆ :

ವೇದ ಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನ ಫಲ ಕೃ
ಚ್ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮ ಯಾಗ ಫಲ |
ಮೇದಿನಿಯ ನೊಲಿದಿತ್ತ ಫಲ ವ
ಸ್ತ್ರಾದಿ ಕನ್ಯಾದಾನ ಫಲ ವಹು
ದಾದರಿಸಿ ಭಾರತದೊಳೊಂದಕ್ಷರವ ಕೇಳ್ವರಿಗೆ ||

ಕನಕದಾಸರು ತಮ್ಮ 'ಹರಿಭಕ್ತಿಸಾರ'ದ ಕೊನೆಯಲ್ಲಿ :

ನೂರು ಕನ್ಯಾದಾನವನು ಭಾ
ಗೀರತಿ ಸ್ನಾನವನು ಮಿಗೆ ಕೈ
ಯಾರೆ ಗೋವ್ಗಳ ಪ್ರೇಮದಿಂದಲಿ ಭೂಸುರರಿಗೊಲಿದು ||
ಊರುಗಳ ನೂರಗ್ರಾಹಾರವ
ಧಾರೆಯೆರೆದಿತ್ತಂತೆ ಫಲ ಕೈ

ಸೇರುವುದು ಹರಿಭಕ್ತಿಸಾರದ ಕಥೆಯ ಕೇಳ್ದವಗೆ ||

ಎಂದು ಈ ಕಾವ್ಯದ ಫಲವನ್ನು ಹೇಳಿದ್ದಾರೆ. ಇಲ್ಲಿ ಸಹಜವಾಗಿಯೇ ಕನಕದಾಸರ ಮೇಲೆ ಕುಮಾರವ್ಯಾಸನ ಪ್ರಭಾವ ಆಗಿರಬಹುದೆಂಬ ಶಂಕೆ ಮೂಡಿರಬಹುದಾದರೂ ಅದು ಕವಿಯ ಪ್ರತಿಭೆಗೆ ಅಡ್ಡ ಬರುವಂತಹುದಲ್ಲ. ಇಲ್ಲಿ ಕನಕದಾಸರು ಭಕ್ತಿಸಾಗರದಲ್ಲಿ ಎಷ್ಟು ಮುಳುಗಿದ್ದಾರೆ ಎಂಬುದಕ್ಕೆ ಸಾಕ್ಷಿ : ತಮ್ಮ ಕೀರ್ತನೆಗಳಲ್ಲಿ ಸಮಾಜದ ಏರು ಪೇರನ್ನು, ಮೇಲು - ಕೀಳನ್ನು ಕುರಿತು ಕಟುವಾಗಿ ಟೀಕಿಸುವ ಕನಕದಾಸರು ಇಲ್ಲಿ 'ಕೈಯಾರೆ ಗೋವ್ಗಳ ಪ್ರೇಮದಿಂದಲಿ ಭೂಸುರರಿಗೊಲಿದು ಊರುಗಳ ನೂರಗ್ರಾಹಾರವ ಧಾರೆಯೆರೆದಿತ್ತಂತೆ ಫಲ ಕೈಸೇರುವುದು ಹರಿಭಕ್ತಿಸಾರದ ಕಥೆಯ ಕೇಳ್ದವಗೆ' ಎಂದು ಮೈಮರೆತು ಹೇಳುತ್ತಾರೆ.

ಕುಮಾರವ್ಯಾಸನಲ್ಲಿಯ ಪ್ರಚಂಡ ಪ್ರತಿಭೆ ಕನಕದಾಸರಲ್ಲಿ ಕಂಡು ಬರದಿದ್ದರೂ ಸ್ವೋಪಜ್ಞತೆಗೆ ಕೊರತೆ ಇಲ್ಲ. ಸಂತಕವಿಯಾದ ಕನಕದಾಸ 'ಹರಿಭಕ್ತಿಸಾರ'ದ ಸಂದರ್ಭದಲ್ಲಿ ಆ ಸ್ವೋಪಜ್ಞತೆಯನ್ನು ಮೆರೆದಿದ್ದಾನೆ :

ಎಂಟುಗೇಣಿನ ದೇಹ ರೋಮಗ
ಳೆಂಟು ಕೋಟಿಯ ಕೀಲ್ಗಳಿರುವ
ತ್ತೆಂಟು ಮಾಂಸಗಳಿಂದ ಮಾಡಿದ ಮನೆಯ ಮನವೊಲಿದು
ನೆಂಟ ನೀನಿರ್ದಗಲಿದಡೆ ಒಣ
ಹೆಂಟೆಯಲಿ ಮುಚ್ಚುವರು ದೇಹವ
ಉಂಟೆ ಫಲ ಪುರುಷಾರ್ಥ ರಕ್ಷಿಸು ನಮ್ಮನನವರತ ||
ಬೀಗ ಮುದ್ರೆಗಳಿಲ್ಲದೂರಿಗೆ
ಬಾಗಿಲುಗಳೊಂಬತ್ತು ಹಗಲಿರು
ಳಾಗಿ ಮುಚ್ಚದೆ ತೆರೆದಿಹುದು ಜೀವಾತ್ಮ ತಾನಿರುತ
ನೀಗಿಯೆಲ್ಲವ ಬಿಸುಟು ಬೇಗದಿ
ಹೋಗುತಿಹ ಸಮಯದಲಿ ಇವರವ
ರಾಗಬಲ್ಲರೆ ನೀನೆ ರಕ್ಷಿಸು ನಮ್ಮನನವರತ ||

ಕುಮಾರವ್ಯಾಸ ಭಾರತ ಕಥೆಯ ಸಾಗರ. 'ಹರಿಭಕ್ತಿಸಾರ' ಅದರಲ್ಲಿ ವ್ಯಕ್ತವಾಗುವ ಕೃಷ್ಣಭಕ್ತಿಯ ಒಂದು ಭಾಗ. ಇದಕ್ಕೆ ತನ್ನದೇ ಆದ ಮಿತಿ ಇದೆ. ಸಂತಕವಿ ಕನಕನ ದೃಷ್ಟಿಯೇ ಬೇರೆ. ಭಗವದ್ಭಕ್ತಿಯನ್ನು ಮೆರೆಯುವುದು, ಭಕ್ತ - ಭಗವಂತನ ಸಂಬಂಧ ಇಲ್ಲಿ ನೇರವಾಗಿ ವ್ಯಕ್ತಗೊಂಡಿದೆ :

ನಿನ್ನ ಸೂತ್ರದೊಳಾಡುವುವು ಚೈ
ತನ್ಯ ಸಚರಾಚರಗಳೆಲ್ಲವು
ನಿನ್ನ ಸೂತ್ರವು ತಪ್ಪಿದರೆ ಮುಗ್ಗುವುವು ಹೂಹೆಗಳು
ಇನ್ನು ನಮಗೆ ಸ್ವತಂತ್ರವೆಲ್ಲಿಯ

ದನ್ನ ಕರ್ಮ ಸುಕರ್ಮವೆಲ್ಲ

ನಿನ್ನದೆಂದೊಪ್ಪಿಸದೆ ರಕ್ಷಿಸು ನಮ್ಮನನವರತ ||

ಚಂಪುವಿನಲ್ಲಿ ಪಂಪ ಪ್ರಭಾವ ಬೀರಿದಂತೆ, ಸಾಂಗತ್ಯದಲ್ಲಿ ರತ್ನಾಕರವರ್ಣಿ, ರಗಳೆಯಲ್ಲಿ ಹರಿಹರ ಎದ್ದು ಕಾಣುವಂತೆ, ಷಟ್ಪದಿ ಕವಿಗಳಲ್ಲಿ ಕುಮಾರವ್ಯಾಸ ಅದ್ವಿತೀಯ ಎಂಬುದು ನಿಜವಾದರೂ ಅನಂತರದ ಕವಿಗಳ ಸ್ವೋಪಜ್ಞತೆಯನ್ನು ತಳ್ಳಿ ಹಾಕುವಂತಿಲ್ಲ. ಕನಕದಾಸರು ಕುಮಾರವ್ಯಾಸನ ಪ್ರಭಾವಕ್ಕೆ ಪ್ರತ್ಯಕ್ಷವಾಗಿಯೋ - ಪರೋಕ್ಷವಾಗಿಯೋ ಒಳಗಾಗಿದ್ದರೂ ಅವನು ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ಅದನ್ನು ಕನಕದಾಸರ 'ಹರಿಭಕ್ತಿಸಾರ'ದಂತೆಯೇ ಅವರ 'ನಳಚರಿತ್ರೆ'ಯಲ್ಲಿಯೂ ಕಾಣಬಹುದು. ಪಂಪ, ಕುಮಾರವ್ಯಾಸರಂತಹ ಕವಿಗಳನ್ನು ಅನುಕರಿಸುವುದು ಸುಲಭವಲ್ಲ - ತಪ್ಪೂ ಅಲ್ಲ. ಆದರೆ ಹಾಗೆ ಅನುಕರಿಸಿ ತಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳುವುದು ದೊಡ್ಡ ವಿಷಯ. ಆ ದೊಡ್ಡಸ್ತಿಕೆಯನ್ನು ಕನಕದಾಸರ ಈ ಎರಡೂ ಕೃತಿಗಳಲ್ಲಿಯೂ ಕಾಣಬಹುದು.

ಅತ್ಯಂತ ಜನಪ್ರಿಯವಾದ 'ನಳಚರಿತ್ರೆ' ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಾಣಿಸಿಕೊಂಡಿದ್ದು ಬಹು ಮೆಚ್ಚಿಗೆ ಗಳಿಸಿದ ಕಥೆಯಾಗಿದೆ. ಇಷ್ಟೊಂದು ಜನಪ್ರಿಯವಾದ ಈ ಕಥೆ ಹದಿಮೂರನೆಯ ಶತಮಾನದಲ್ಲಿಯೇ ಕನ್ನಡದಲ್ಲಿ ಚೌಂಡರಸನಿಂದ ರಚನೆಗೊಂಡರೂ, ಚೌಂಡರಸನ ಈ 'ನಳಚಂಪು' ಅಷ್ಟೊಂದು ಜನಪ್ರಿಯವಾಗಲಿಲ್ಲ. ಸುಮಾರು ಎಂಟುನೂರು ಪದ್ಯಗಳನ್ನುಳ್ಳ ಈ ಚಂಪೂ ಕೃತಿ ಕಥೆಯ ಸ್ವಾರಸ್ಯಕ್ಕೆ ತಕ್ಕಂತೆ ಅರಳದೆ, ವರ್ಣನೆಗಳ ಭಾರದಲ್ಲಿ ಸೊರಗಿದೆ. ಪಾತ್ರಗಳ ಪೋಷಣೆಯೂ ಹೇಳಿಕೊಳ್ಳುವಂತಹುದೇನಲ್ಲ. ಚಂಪುವಿನ ಬಿಗಿಯಲ್ಲಿ ಬೀಗಿ, ಪ್ರೌಢತೆಯನ್ನಷ್ಟೇ ಮೆರೆದಿದೆ.

ನಳಚರಿತ್ರೆಯ ವಸ್ತುವೇ ಅತ್ಯಂತ ಆಕರ್ಷಕವಾದುದು. ಸ್ವಾರಸ್ಯದಿಂದ ಕೂಡಿದುದು. ನಿಪುಣ ಕವಿಯ ಕೈಯಲ್ಲಿ ಅದು ಹೇಗೆ ಬೇಕಾದರೂ ಅರಳಿ ಪ್ರಶಂಸೆಗೆ ಪಾತ್ರವಾಗಬಲ್ಲ ಸತ್ವವುಳ್ಳದ್ದು. ಸಂಸ್ಕೃತ ಮಹಾಭಾರತದ ವನಪರ್ವದಲ್ಲಿ ವಿಸ್ತಾರವಾಗಿ ಹರಡಿರುವ ನಳೋಪಾಖ್ಯಾನವೇ ಕನಕದಾಸರ 'ನಳಚರಿತ್ರೆ'ಗೆ ಆಕರ. ಇದರ ಮೂಲ ಹಾಗೂ ಪೂರ್ವಕವಿಗಳಿಂದ ರಚನೆಗೊಂಡ ಕೃತಿಗಳನ್ನು ಕನಕದಾಸರು ನೋಡಿದ್ದರೂ, ತಮ್ಮದೇ ಆದ ವಿಶಿಷ್ಟ ಮುದ್ರೆಯನ್ನು ಅವರು ಈ ಕೃತಿಯಲ್ಲಿ ಒತ್ತಿದ್ದಾರೆ. ಮೂಲದಲ್ಲಿಲ್ಲದ ಎಷ್ಟೋ ಸ್ವಾರಸ್ಯವನ್ನು ತಮ್ಮ ಕಾವ್ಯದಲ್ಲಿ ತರುವುದರ ಮೂಲಕ ಅದನ್ನೊಂದು ಪರಿಪೂರ್ಣ ಸ್ವತಂತ್ರ ಕೃತಿಯನ್ನಾಗಿ ಮಾಡಿದ್ದಾರೆ. ಅವರು ಅನೇಕ ವಿಷಯಗಳಲ್ಲಿ ಹಿಂದಿನ ಕವಿಗಳಿಗೆ ಬಹುಮಟ್ಟಿಗೆ ಋಣಿ ಎಂದು ಹೇಳಬಹುದಾದರೂ, ಅವರ ಸ್ವತಂತ್ರ ಪ್ರತಿಭೆ ಮತ್ತು ಕಲ್ಪನಾ ಚಮತ್ಕಾರಗಳು ಕಾವ್ಯದಲ್ಲೆಲ್ಲ ಪ್ರಕಾಶಿಸುತ್ತವೆ. ರಂಬೆಯೇ ಮೊದಲಾದ ಅಪ್ಸರ ಸ್ತ್ರೀಯರು ಇಂದ್ರಾಜ್ಞೆಯ ಮೇರೆಗೆ ನಳನಿಗೆ ಮುಂಚೆಯೇ ದಮಯಂತಿಯ ಬಳಿಗೆ ಬಂದರೆಂಬುದು ದಾಸರ ಸ್ವಕಪೋಲಕಲ್ಪನೆ. ದಮಯಂತಿಯ ಪ್ರೇಮೋತ್ಕರ್ಷವನ್ನೂ, ನಳನೃಪನ ಪ್ರಾಮಾಣಿಕತೆಯನ್ನೂ ಪರೀಕ್ಷಿಸುವ ಸಲುವಾಗಿ ಈ ಸಂದರ್ಭವನ್ನು ಕವಿ ಸೃಷ್ಟಿಸಿಕೊಂಡಂತೆ ಕಾಣುತ್ತದೆ. ದಮಯಂತಿ ಯಾಗಪುತ್ರಿಯೆಂದು ಹೇಳುವಲ್ಲಿ ಅಲೌಕಿಕವಾದ ಶಕ್ತಿಯ ಪ್ರಭಾವಲಯದಲ್ಲಿ ಕಥೆಯನ್ನು ನಡೆಸುವ ಉದ್ದೇಶ ಕವಿಗಿತ್ತೆಂದು ಹೇಳಬಹುದಾಗಿದೆ. ಹೆಬ್ಬಾವಿನ ಪ್ರಸಂಗವಂತೂ ಕವಿಯ ಕಲ್ಪನಾ ಪ್ರತಿಭೆಗೆ ದ್ಯೋತಕವಾಗಿದೆ. ಇಲ್ಲಿಯ ದಮಯಂತಿ ಕ್ರೂರಿಯಲ್ಲ, ದ್ವೇಷಶೀಲೆಯಲ್ಲ. ಕೃತಘ್ನಳಲ್ಲ. ಶೀಘ್ರ ಕೋಪಿಯಲ್ಲ. ಹೆಸರಿಗೆ ತಕ್ಕಂತೆ ಸಂಯಮಶೀಲೆ ಎಂಬ ಅವಳ ಸಹಜಸ್ವರೂಪ ಈ ಪ್ರಕರಣದಲ್ಲಿ

ಎದ್ದು ಕಾಣುತ್ತದೆ" ಎಂಬ ವಿಮರ್ಶಕರ ಮಾತು ಸ್ವೀಕಾರಾರ್ಹವಾಗಿದೆ. ಕವಿ ಕಾವ್ಯದುದ್ದಕ್ಕೂ ಸ್ವಂತಿಕೆಯನ್ನು ಮೆರೆದಿದ್ದಾನೆ. ಕನಕದಾಸರು ತಮ್ಮ ಸಹಜ ಪ್ರತಿಭೆಯಿಂದ ಇದನ್ನೊಂದು ಸರಳ-ಸುಂದರ ಕಾವ್ಯವನ್ನಾಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿ ಬರುವ ವರ್ಣನೆಗಳು, ಪಾತ್ರ ಚಿತ್ರಣ, ಕಥಾನಿರ್ವಹಣ ರೀತಿ, ಅದಕ್ಕೆ ತಕ್ಕ ಭಾಷೆ - ಇವುಗಳಲ್ಲಿ ತಮ್ಮ ಕಾವ್ಯ ಕಲೆಯನ್ನು, ವಿಶಿಷ್ಟ ಪ್ರತಿಭೆಯನ್ನು ತೋರಿದ್ದಾರೆ. 'ಭಾಮಿನಿ ಷಟ್ಪದಿ' ಇಲ್ಲಿ ಅವರ ಪ್ರತಿಭೆಯ ಪುಂಗಿನಾದಕ್ಕೆ ತಕ್ಕಂತೆ ನರ್ತಿಸಿದೆ. ಉಪಮೆಗಳ ಸಂದರ್ಭದಲ್ಲಿ ಕುಮಾರವ್ಯಾಸನ ಪ್ರಭಾವಕ್ಕೆ ಹೆಚ್ಚು ಒಳಗಾಗಿರುವುದು ಅಲ್ಲಲ್ಲಿ ಸ್ಪಷ್ಟವಾದರೂ ಮಿಕ್ಕ ವಿಷಯದಲ್ಲಿ ಅದನ್ನು ಮರೆಸಿ, ಕಾವ್ಯ ಪ್ರತಿಭೆಯನ್ನು ತೋರುವ ಶಕ್ತಿ ಕನಕದಾಸರಲ್ಲಿ ಕಂಡು ಬರುತ್ತದೆ. ಒಂದು ಕಡೆ ದಮಯಂತಿಯನ್ನು ಕವಿ ಹೀಗೆ ಬಣ್ಣಿಸುತ್ತಾನೆ :

ಮಿಸುನಿಯೋಲೆಯ ಢಾಳ ಕದಪಿನೊ
ಳೆಸೆಯ ಮೇಲುದು ಜಾರೆ ಕುಚಭರ
ಕುಸಿಯೆ ನಡುವಲ್ಲಾಡೆ ಮಸಗಿದ ಮಂದಹಾಸದಲಿ ||
ಎಸೆವ ಸೋರ್ಮುಡಿ ಭಾರದಲಿ ಬಾ
ಗಿಸಿದ ಕೊರಳಿನ ಕೈಯ ವೀಣೆಯ
ಬಿಸರುಹಾಕ್ಷಿಯ ಸೊಬಗ ಬಣ್ಣಿಸಲರಿಯೆ ನಾನೆಂದ ||
ಕುಡಿತೆಗಂಗಳ ಸಿರಿಮುಡಿಯ ಬಡ
ನಡುವ ಸೆಳೆವತಿ ಬೆಡಗಿನಲಿ ಹೊಂ
ಗೊಡ ಮೊಲೆಯ ವೈಯ್ಯಾರದುಡುಗೆಯ ಸಿರಿಯ ಸಡಗರದ ||
ತೊಡರ ಝಣಝಣ ರವದ ಮೆಲ್ಲಡಿ
ಯಿಡುವ ಗಮನದ ಭರದಿ ಕಿರು ಬೆವ
ರಿಡುತ ಬಂದಳು ಸಖಿಯರೊಡನೆ ವಿವಾಹ ಮಂಟಪಕೆ ||

ಕಾನನದಲ್ಲಿ ಪತಿಯ ಕಾಣದೆ ಹಂಬಲಿಸುವ ದಮಯಂತಿಯ ಚಿತ್ರ ಕವಿಯ ವರ್ಣನಾ ವೈಖರಿಗೆ ಮತ್ತೊಂದು ನಿದರ್ಶನವಾಗುತ್ತದೆ :

ನಳಿನಮುಖಿ ಮೈಮುರಿದು ನಿದ್ರೆಯ
ತಿಳಿದು ಮೆಲ್ಲನೆ ನೋಡಿದಳು ಎಡ
ಬಲವನೀಕ್ಷಿಸಿ ಪತಿಯ ಕಾಣದೆ ಬಲಿದ ಮೂರ್ಛೆಯಲಿ |
ಮಲಗಿದಳು ಮೈ ಮರೆದು ನಿಮಿಷಕೆ
ತಿಳಿದು ಕಾಣದೆ ಕಾತರದಿ ಹಂ
ಬಲಿಸಿ ಹಲುಬಿದಳಲ್ಲಿ ಗಿರಿತರುನಿಕರ ಮಧ್ಯದಲಿ ||

ಕನಕದಾಸರು ಚಿತ್ರಿಸಿರುವ ನಳನ ವಿಕಾರರೂಪ ವರ್ಣನೆ ಅವರ ವರ್ಣನಾ ವೈಖರಿಗೆ ಮತ್ತೊಂದು ನಿದರ್ಶನ. ಅವರ ಸ್ವೋಪಜ್ಞತೆಗೆ ಒಂದು ಸ್ಪಷ್ಟ ಸಾಕ್ಷಿ.

ದೊಡ್ಡ ಹೊಟ್ಟೆಯ ಗೂನು ಬೆನ್ನಿನ
ಅಡ್ಡ ಮೋರೆಯ ಗಂಟು ಮೂಗಿನ
ದೊಡ್ಡ ಕೈಕಾಲುಗಳ ವುದುರಿದ ರೋಮ ಮೀಸೆಗಳ
ಜಿಡ್ಡು ದೇಹದ ಗುಜ್ಜುಗೊರಲಿನ
ಗಿಡ್ಡುರೂಪಿನ ಹರಕು ಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ ||

ಕನಕದಾಸರು ಯಾರಿಂದ ಎಷ್ಟೇ ಪ್ರಭಾವಿತರಾಗಿದ್ದಾರೆ ಎಂಬ ಮಾತಿದ್ದರೂ, ಅವರ ಕಾವ್ಯ ಕುಮಾರವ್ಯಾಸ ಭಾರತದಷ್ಟೇ ಜನಪ್ರಿಯವಾಗಿದೆ. ಜನಮನ್ನಣೆ ಗಳಿಸಿದ ಕಾವ್ಯವಾಗಿದೆ. ಅಲ್ಲಿಯ ವಸ್ತು, ಅದರ ನಿರ್ವಹಣೆ ಹಾಗೂ ಅಲ್ಲಿ ಬರುವ ವರ್ಣನೆಗಳು ಎಂತಹವರನ್ನೂ ಸೆಳೆದುಕೊಳ್ಳ ಬಲ್ಲ ಮೋಹಕ ಶಕ್ತಿಯನ್ನು ಪಡೆದಿವೆ. ಇದಕ್ಕೆ ಮೇಲಿನ ಕೆಲವು ಪಧ್ಯಗಳೇ ಸಾಕ್ಷಿ. ಸಣ್ಣ ಕಥಾವಸ್ತುವೊಂದಕ್ಕೆ ಒಳ್ಳೆಯ ಕಾವ್ಯದ ಚೌಕಟ್ಟನ್ನೂ, ಸ್ಥಾನವನ್ನೂ ಕೊಟ್ಟ ಯಶಸ್ಸು ಕನಕದಾಸರದ್ದು. ಚೌಂಡರಸನ ಕೈಯಲ್ಲಿ ಸೊರಗಿ ಮೂಲೆಗುಂಪಾಗಿದ್ದ ಕಾವ್ಯವಸ್ತುವಿಗೆ ಜೀವಕಳೆಯನ್ನಿತ್ತ ಕೀರ್ತಿ ಕನಕದಾಸರಿಗೆ ಸಲ್ಲುತ್ತದೆ. ಯಾವುದೇ ಸನ್ನಿವೇಶವನ್ನು ಕಥಾವಸ್ತುವನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಶಕ್ತಿ ಅವರದ್ದು. ಶೈಲಿಯಲ್ಲಿ ಸರಳತೆಕಂಡು ಬಂದರೂ ಕಾವ್ಯ ಸೌಂದರ್ಯಕ್ಕೆ ಕೊರತೆಯಿಲ್ಲ. ಕುಮಾರವ್ಯಾಸನಂತೆಯೇ ದೇಸೀಯ ಸೊಗಡು ಇಲ್ಲಿಯೂ ಕಂಡು ಬರುತ್ತದೆ. ಎಲ್ಲ ವಿಷಯದಲ್ಲೂ ಕುಮಾರವ್ಯಾಸನನ್ನು ಮೀರಿಸದಿದ್ದರೂ ಅವನೊಂದಿಗೆ ಮರ್ಯಾದೆಯ ಸ್ಥಾನವನ್ನು ಪಡೆಯಬಲ್ಲ ಅರ್ಹತೆ ಪಡೆದ ಕವಿ ಕನಕದಾಸರು.

ಕನಕದಾಸರ ಸೃಷ್ಟಿಯೇ ಆದ 'ರಾಮಧಾನ್ಯ'ದ ವಸ್ತುವನ್ನೊಳಗೊಂಡ ಕಾವ್ಯ ಕೂಡ ಷಟ್ಪದಿಯಲ್ಲಿಯೇ ರಚನೆಗೊಂಡಿರುವ ಕೃತಿ. ಇಲ್ಲಿ ಅವರು ಹೊಸ ಬಗೆಯ ಕಾವ್ಯವಸ್ತುವನ್ನು ಸೃಷ್ಟಿಸಿರುವುದಷ್ಟೇ ಅಲ್ಲದೆ ವೈಶಿಷ್ಟ್ಯವನ್ನು ಮೆರೆದಿದ್ದಾರೆ. ವಸ್ತು ಸಾಮಾನ್ಯದ್ದೇ ಆದರೂ, ನಿಶ್ಚಿತ ಉದ್ದೇಶದೊಂದಿಗೆ ಕಾವ್ಯ ಗಂಭೀರವಾಗಿಯೇ ಸಾಗಿದೆ :

ಅಲ್ಲಿ ನೆರೆದ ಮಹಾಮುನೀಶ್ವರ
ರೆಲ್ಲ ತರಿಸಿದರಖಿಳ ವಸ್ತುವ
ಬೆಲ್ಲ ಸಕ್ಕರೆ ಜೇನುತುಪ್ಪ ರಸಾಯನಂಗಳಲಿ ||
ಭುಲ್ಲವಿಸಿ ರಚಿಸಿದ ಸುಭಕ್ಷ್ಯಗ
ಳೆಲ್ಲವನು ತುಂಬಿದರು ಹೆಡಗೆಗೆ
ಳಲ್ಲಿ ಜೋಡಿಸಿ ಹೊರಿಸಿ ತಂದರು ರಾಯನೋಲಗಕೆ ||

ಧಾನ್ಯವನ್ನು ಕಥೆಯ ಪ್ರಮುಖ ಪಾತ್ರವಾಗಿಸಿ ಕಾವ್ಯ ರಚಿಸಿದ ಮೊದಲ ಕೃತಿ ಇದೆನ್ನಬಹುದು.

ಆ ಕೀರ್ತಿಯೂ ಕನಕದಾಸರಿಗೇ ಸಲ್ಲುವಂತಹುದು, ಹಲವು ಪೌರಾಣಿಕ ಪಾತ್ರಗಳನ್ನು ಬಳಸಿಕೊಂಡು, ಸಾಮಾಜಿಕ ಪ್ರಜ್ಞೆಯನ್ನು ಮೆರೆದಿರುವ, 'ರಾಮಧಾನ್ಯ ಚರಿತೆ' ಕನಕದಾಸರ ಕಲ್ಪನೆಯ ಒಂದು ಬೃಹತ್ ಸೃಷ್ಟಿ.

* * * * *

ಕನಕದಾಸರು ಷಟ್ಪದಿಯಲ್ಲಿ ಕಾವ್ಯ ರಚಿಸಿ ಕುಮಾರವ್ಯಾಸನನ್ನು ನೆನಪಿಗೆ ತರುವಂತೆ, ತಮ್ಮ ಪ್ರತಿಭೆಯನ್ನು ತೋರಿಸಿರುವಂತೆಯೇ 'ಮೋಹನ ತರಂಗಿಣಿ' ಕೃತಿ ರಚನೆಯ ಮೂಲಕ ಸಾಂಗತ್ಯ ಕವಿಗಳ ಸಾಲಿನಲ್ಲಿಯೂ ಗಮನ ಸೆಳೆಯಬಲ್ಲ ಕಾವ್ಯ ಪ್ರತಿಭೆಯನ್ನೂ ತೋರಿದ್ದಾರೆ. ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯನಾದ ರತ್ನಾಕರವರ್ಣಿ, ನಂಜುಂಡರ ಕಾವ್ಯಗಳ ಸಾಲಿನಲ್ಲಿ ಕನಕದಾಸರ 'ಮೋಹನ ತರಂಗಿಣಿ'ಯನ್ನು ಇಟ್ಟು ನೋಡುವಾಗ ವಸ್ತುವಿನ ದೃಷ್ಟಿಯಿಂದ 'ಭರತೇಶ ವೈಭವ' ಹಾಗೂ 'ಮೋಹನ ತರಂಗಿಣಿ' ಒಂದರ್ಥದಲ್ಲಿ ಹತ್ತಿರವಾಗಬಲ್ಲ ಕೃತಿಗಳಾದರೆ, 'ಕುಮಾರ ರಾಮನ ಸಾಂಗತ್ಯ' ಮತ್ತೊಂದು ದೃಷ್ಟಿಯಿಂದ ಇವೆರಡಕ್ಕೂ ಹತ್ತಿರವಾಗಿ ನಿಲ್ಲಬಲ್ಲ ಕೃತಿ.

ಕನಕದಾಸರ ಮೋಹನ ತರಂಗಿಣಿ ಪ್ರಧಾನವಾಗಿ ಶೃಂಗಾರ ಕಾವ್ಯ. ಪ್ರೇಮದ ಕಥೆ. ಅಲ್ಲಿ ಬರುವ ಕೃಷ್ಣ - ರುಕ್ಮಿಣಿ, ರತಿ - ಮನ್ಮಥ ಹಾಗೂ ಉಷಾ - ಅನಿರುದ್ಧರ ಶೃಂಗಾರ ಕಾವ್ಯದ ಮೂಲ ಸತ್ವವಾಗಿದೆ. ಇಲ್ಲಿ ಬರುವ ಶ್ರೀ ಕೃಷ್ಣನ ಮೂಲಕ ಭಕ್ತಿಯ ಸೋಂಕು ಕಂಡು ಬಂದರೂ ಗೌಣ. ರತ್ನಾಕರ ವರ್ಣಿಯ ಭರತೇಶನಿಗೂ, ಶ್ರೀಕೃಷ್ಣನಿಗೂ ಹಲವಂಶಗಳಲ್ಲಿ ಸಾಮ್ಯವಿದೆ. ಶ್ರೀಕೃಷ್ಣನು ಹದಿನಾರು ಸಾವಿರ ಪತ್ನಿಯರನ್ನು ಹೊಂದಿ ಲೋಲುಪ್ತನಾಗಿರುವಂತೆ ತೋರಿದರೂ ಅವನು ಯೋಗಿ. ಹಾಗೆಯೇ ಭರತ ತೊಂಬತ್ತಾರು ಸಾವಿರ ಪತ್ನಿಯರನ್ನು ಹೊಂದಿ 'ಗಣನೆಯಿಲ್ಲದ ಸುಖದೊಳೋಲಾಡಿ'ದರೂ ಅದರಲ್ಲಿಯೇ ನಿಂತವನಲ್ಲ. ಆದರೆ ರತ್ನಾಕರನ ಪ್ರಕಾರ ಭೋಗವು ಯೋಗದ ಮೊದಲ ಮೆಟ್ಟಿಲು ಎಂಬ ಪ್ರತಿಪಾದನೆ. ಆ ಹಿನ್ನೆಲೆಯಲ್ಲಿ ರತ್ನಾಕರವರ್ಣಿ, ಭರತನ ಭೋಗಜೀವನವನ್ನು ಬಣ್ಣಿಸುವಾಗ ಶೃಂಗಾರವನ್ನೂ ಅದರ ತುತ್ತತುದಿಗೊಯ್ದಿದ್ದಾನೆ. ಆ ಮೂಲಕ ಇಡೀ ಕಾವ್ಯವನ್ನು ಶೃಂಗಾರಮಯವಾಗಿಸಿದ್ದಾನೆ.

ಕನಕದಾಸರ 'ಮೋಹನ ತರಂಗಿಣಿ'ಯ ಕಥಾವಸ್ತು ಇದಕ್ಕಿಂತ ಸ್ವಲ್ಪ ಬೇರೆಯಾದರೂ, ತಿರುಳು ಒಂದೇ - ಶೃಂಗಾರ ಪ್ರಧಾನ. ಅಲ್ಲಿ ರತ್ನಾಕರವರ್ಣಿ ತ್ಯಾಗ - ಭೋಗಗಳ ಸಮನ್ವಯವನ್ನು ಸಾಧಿಸುವ ದೃಷ್ಟಿ ತೋರಿದ್ದರೆ, ಇಲ್ಲಿ ಕನಕದಾಸರು ಜೀವನದಲ್ಲಿ ಭೋಗಕ್ಕೂ ಸ್ಥಾನವಿದೆ ಎಂಬುದನ್ನು ಹೇಳ ಹೊರಟಂತೆ ಕಾಣುತ್ತದೆ. ಸಂತ ಕವಿಯಾದ ಕನಕದಾಸರು ಒಂದು ಕಡೆ ಅಪಾರವಾದ ಭಕ್ತಿಯನ್ನು, ಆಧ್ಯಾತ್ಮವನ್ನು ಮೆರೆದಿರುವಂತೆಯೇ ಮತ್ತೊಂದು ಕಡೆ ಶೃಂಗಾರದೆಡೆಗೂ ಗಮನ ಕೊಟ್ಟಿರುವುದನ್ನು ನೋಡಿದರೆ ರತ್ನಾಕರವರ್ಣಿಯ ಮನೋಭಾವ ಕನಕರಲ್ಲಿಯೂ ಕಂಡು ಬರುತ್ತದೆ. ಅದೇನೇ ಇದ್ದರೂ ಶೃಂಗಾರ ಕವಿಗಳಾಗಿ ಇಬ್ಬರೂ ಮನಸೆಳೆಯುತ್ತಾರೆ. ಕಾವ್ಯವನ್ನು ರಸಮಯವಾಗಿಸುವಲ್ಲಿ ಇಬ್ಬರೂ ಸ್ಪರ್ಧಿಸಿದ್ದಾರೆಂಬಂತೆ ಸನ್ನಿವೇಶಗಳು, ವರ್ಣನೆಗಳೂ ಕಾವ್ಯದುದ್ದಕ್ಕೂ ಬರುತ್ತವೆ. ಇಲ್ಲಿಯ ಶೃಂಗಾರ ಶ್ರೀಮಂತಿಕೆಯನ್ನು ನೋಡುವಾಗ, ಕನಕದಾಸರು ಇದನ್ನು ತರುಣದಲ್ಲಿಯೇ ಇನ್ನೂ ಆಧ್ಯಾತ್ಮಿಕತೆಯ ಕಡೆಗೆ ಪೂರ್ಣ ವಾಲುವ ಮೊದಲೇ ರಚಿಸಿರುವರೆಂಬುದು ಸ್ಪಷ್ಟ. ಕನಕದಾಸರು ತರುವ ಶೃಂಗಾರ ವಿಲಾಸದ ಲಾಸ್ಯವನ್ನು ಈ ಪದ್ಯಗಳಲ್ಲಿ ನೋಡಬಹುದು :

ನಳಿನೋದ್ಭವ ಕೋಟಿ ವತ್ಸರ ತನುಪಿಡಿ
ದಳದೊಡದೇನು ವೃಥಾಯ
ಝಳ ಗುರುಳ ಒಲೆಯ ತೋಳ ತಕ್ಕೆಯೊಳೊಂದು
ಗಳಿಗೆ ಬಾಳಲು ಮುಕ್ತಿಯಹುದು |
ಹೊಳೆವ ಕೆಂಬಲ್ಲು ಚೆಂದುಟಿ ಕಂಬು ಕಂಠ ಕೌಂ
ಕುಳ ಕೋಮಲತ್ವ ನುಣ್ಮೊಲೆಯ
ಸ್ಥಳದಲ್ಲಿ ಮೊಗವಿಟ್ಟು ಮುಂಡಾಡಿ ಸೊಗ ಮಯ್ಮೊ
ಳಳವಟ್ಟು ಸಾವುದಚ್ಚರಿಯೆ ||

ಇದು ಕನಕದಾಸರ ವೈಖರಿಯಾದರೆ, ಶೃಂಗಾರ ರಸದಲ್ಲಿಯೇ ಮುಳುಗಿದ ರತ್ನಾಕರವರ್ಣಿಯ ವರ್ಣನಾವೈಖರಿ ಮತ್ತೊಂದು ಬಗೆಯದು ; ಮಲಗಿದ್ದ ಭರತನು ಬಳಿಯಿದ್ದ ಪದ್ಮಿನಿಯನ್ನು ಕಂಡು,

ಕಣ್ದೆರೆದಾಕ್ಷಣ ಬರಸೆಳೆದಾ ತೊಂಡೆ
ವಣ್ಬಾಟಿಯ ಬಲೆಯನಪ್ಪಿ
ನಾಣ್ಪಾಣ ಜುಮ್ಮನೆ ಚುಂಬಿಸಿ ಲಲನೆಗೆ
ಗೇಣ್ಮೀರಿದನು ಸ್ವರ್ಗಸುಖವ ||

ಇದು ರತ್ನಾಕರವರ್ಣಿ ಕಾವ್ಯದಲ್ಲಿ ಬರುವ ಶೃಂಗಾರ ರಸದ ಒಂದು ಬಿಂದು ಮಾತ್ರ. ಕುಮಾರವ್ಯಾಸನ ಮಹಾಭಾರತದಂತೆ ರತ್ನಾಕರವರ್ಣಿಯ ಕಾವ್ಯದ ಹರಹೂ ಬಹಳ ದೊಡ್ಡದು. ಆ ವಿಸ್ತಾರದಲ್ಲಿ ಇಂತಹ ವರ್ಣನೆಗಳ ರಾಗ ಅದೆಷ್ಟೋ ಇದೆ.

ಸಾಂಗತ್ಯ ಕವಿಗಳ ಸಾಲಿನಲ್ಲಿ ನಂಜುಂಡ ಕವಿಯೂ ಗಮನ ಸೆಳೆಯುವ ಕವಿ. ಅವನ 'ಕುಮಾರ ರಾಮ ಸಾಂಗತ್ಯ' ಕನ್ನಡದ ವಿಶಿಷ್ಟ ಕೃತಿಗಳಲ್ಲಿ ಒಂದು. ಇದೊಂದು ಐತಿಹಾಸಿಕ ಕಾವ್ಯವಾಗಿ ಬಾಳಿ - ಬದುಕಿ, ಭಾರತೀಯ ಇತಿಹಾಸದಲ್ಲಿ ಸೇರಿದ ವ್ಯಕ್ತಿಗಳನ್ನೊಳಗೊಂಡು ವಿಶೇಷ ಮನ್ನಣೆಗೂ ಪಾತ್ರವಾಗಿದೆ. ಕುಮಾರ ರಾಮನ ಕಥೆ ಕರ್ನಾಟಕದಲ್ಲಿ ಒಂದು ವಿಶಿಷ್ಟ ಸ್ಥಾನವನ್ನೂ ಪಡೆದಿದೆ. ಅದೂ ಕೂಡ 'ನಳಚರಿತ್ರೆ', 'ಕುಮಾರವ್ಯಾಸಭಾರತ', 'ಭರತೇಶ ವೈಭವ'ಗಳಂತೆ ಜನಪ್ರಿಯ ಕಾವ್ಯ - ಜನಾದರಣೀಯ ಕಾವ್ಯ. ಸಹಜವಾಗಿಯೇ ಇಲ್ಲಿ ಯುದ್ಧ ವರ್ಣನೆಯನ್ನು ಕಾಣಬಹುದು. ನಂಜುಂಡ ಕವಿ ಶೃಂಗಾರರಸವನ್ನು ಕಾವ್ಯದಲ್ಲಿ ರಸ ಮಿಡಿಯುವಂತೆ ತಂದಿರುವಂತೆಯೇ, ಯುದ್ಧ ವರ್ಣನೆಯನ್ನು ಅದ್ಭುತವಾಗಿಯೇ ತಂದಿದ್ದಾನೆ. ಕ್ಷತ್ರಿಯನಾದ ನಂಜುಂಡ ಕವಿಗೆ ಅದು ಸುಲಭ ಸಾಧ್ಯವಾಗಿರುವಂತೆಯೇ ಸ್ವತಃ ದಂಡನಾಯಕನಾಗಿದ್ದ ಕನಕದಾಸನಿಗೂ ಅದು ದಕ್ಕಿದ ವಿಷಯವಾಗಿದೆ.

ಯುದ್ಧವರ್ಣನೆಗೆ ಸಾಂಗತ್ಯ ಅಷ್ಟಾಗಿ ಒಗ್ಗಿಬಂದ ಛಂದಸ್ಸಲ್ಲ ಎಂಬುದು ನಿಜವಾದರೂ, ಈ ಈರ್ವರೂ ಅದನ್ನು ಸ್ವಲ್ಪಮಟ್ಟಿಗೆ ಸುಳ್ಳಾಗಿಸಿದ್ದಾರೆ. ಮೃದು ಮಧುರ ಭಾವನೆಗಳ ಅಭಿವ್ಯಕ್ತಿಗೆ ಹೇಳಿ ಮಾಡಿಸಿದಂತೆಯೇ, ಯುದ್ಧವರ್ಣನೆಗೂ ಹೊಂದಿಕೊಳ್ಳಬಲ್ಲದೆಂಬುದನ್ನು ಸಾಬೀತು

ಮಾಡಿದ್ದಾರೆ. ಶೃಂಗಾರ ವರ್ಣನೆಯಲ್ಲಿ ರತ್ನಾಕರವರ್ಣಿ, ಕುಮಾರವ್ಯಾಸ, ನಂಜುಂಡ ಕವಿಗಳೊಂದಿಗೆ ಸ್ಪರ್ಧಿಸಿರುವಂತೆಯೇ, ಯುದ್ಧವರ್ಣನೆಯಲ್ಲಿಯೂ ಕನಕದಾಸರು ಗಮನ ಸೆಳೆದಿದ್ದಾರೆ. ಕುಂಬಾಂಡನಿಗೂ - ಅನಿರುದ್ಧನಿಗೂ ನಡೆಯುವ ಯುದ್ಧ ವರ್ಣನೆಯ ಚಿತ್ರ ಕನಕದಾಸರಲ್ಲಿ ಹೀಗೆ ಬರುತ್ತದೆ:

ಬಾಗಿಲ ತಿವಿದು ನೂಂಕುವ ದಂತಶಿರವ ವಿ
ಭಾಗಿಸಿ ಕೂರ್ಗಣೆಯಿಂದೆ
ತಾಗಿಸಿಜೋದರ ತಲೆಯನಾಗಕಾಗಿಪ
ಸಾಗಿಸಿದನು ಕೇಳ ಕೆಳದಿ ||
ತುಂಡುಗಳ್ ತುಟಿಗಚ್ಚಿ ಗಗನದೊಳ್ ಮಾತಾಡೆ
ಮುಂಡಗಳ್ ನೆಲದೊಳು ಕುಣಿಯೆ
ಕೊಂಡಾಡುತಿರ್ದುವು ಕುಶಲವಿ ಕುಸುಮ ಕೋ
ದಂಡಾತ್ಮಜನ ಪೌರುಷವ ||
ಅಜವಿಂಡ ಹೊಕ್ಕ ಹೆಬ್ಬುಲಿಯಂತೆ ಸೊಕ್ಕಿದ
ಗಜವಿಂಡ ಸಿಂಹ ಹೊಕ್ಕಂತೆ
ಭುಜಗ ಸಮೂಹವ ಖಗರಾಜ ಹೊಕ್ಕಂತೆ
ಕುಜನರ ಕುಟ್ಟಿಹಾಯ್ದಿದನು ||

ಮತ್ತೊಂದೆಡೆ 'ಬಂದುದು ಯಾದವ ಬಲ ನೆಲನೀದಂತೆ' ಎಂಬಂತಹ ಉಪಮೆಗಳ ಮಾಲೆಯಲ್ಲಿ ರಣರಂಗದ ಚಿತ್ರವನ್ನು ಸೊಗಸಾಗಿ ತಂದಿದ್ದಾನೆ. ಕಂದ - ವೃತ್ತಗಳಲ್ಲಿಯಂತಹ ಅಥವಾ ಷಟ್ಪದಿಯಲ್ಲಿಯಂತಹ ಬಿರುಸನ್ನು ಇಲ್ಲಿ ಕಾಣದೆ ಹೋದರೂ, ಸಾಂಗತ್ಯದಂತಹ ಸರಳ ಛಂದಸ್ಸಿನಲ್ಲಿಯೂ ಕವಿ ಪ್ರತಿಭೆಯನ್ನು ತೋರಿ ಪರಿಣಾಮಕಾರಿಯಾಗಿಸಿರುವುದು ಪ್ರಶಂಸನೀಯ. ನಂಜುಂಡನೊಂದಿಗೆ ಕನಕದಾಸರನ್ನು ತೂಗಿ ನೋಡುವುದಾದರೆ ಈ ವಿಷಯದಲ್ಲಿ ಇಬ್ಬರೂ ಸಮಬಲರಾಗಿಯೇ ನಿಲ್ಲುತ್ತಾರೆ:

ಬಿಡಲು ಮೈಯ್‌ದಡವಿ ಗಿಡಗ ಗಿಳಿವಿಂಡ
ಕೆಡಹಿ ಕೊಡಹಿ ಕೊಲುವಂತೆ
ಕಡುಗಲಿ ರಾಮನೆನಲು ಕೂರ್ಗಣೆಗಳು
ಬಿಡದೆ ಕೊಂದವು ರಿಪುಗಳನು ||
ಕರಿಯ ಹಿಂಡನು ಕೇಸರಿ ಕವಳೇವನಾಂ
ತರವ ಕಾಡಾನೆ ಪೊಕ್ಕಂತೆ
ಧುರ ಧರಣಿಯೊಳು ಕೊಂದನು ಬರಿಕಯ್ದುನು
ಸುರತಾಳಬಲವನಾರಾಮ ||

ಕಾಕತಿಯ ರುದ್ರನು ದಂಡೆತ್ತಿ ಬಂದನೆಂಬ ವಿಷಯವನ್ನು ತಿಳಿದು ಕಂಪರಾಜನು ಕೋಪಗೊಳ್ಳುವ ಬಗೆಯನ್ನು ನಂಜುಂಡ ಕವಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ : "ಮೀಸೆ ಕುಣಿಯೆ ಮೈಯ್ಯ ರೋಮ ಕಾರಿಡೆ ಕಣ್ಣು | ಸೂಸೆ ಕಿಡಿಯ ಮೊಗ ಹೊಗೆಯೆ, ಘಾಸಿಯಾಗಲು ಗಂಟಿನಿಂ ಪುರ್ಬು ನೃಪಕೇಟ್ಯಾಸುರವಸು ತಾಳಿದನು ||"

ದೇಪರಾಜನ 'ಸೊಬಗಿನ ಸೋನೆ', ಕನಕದಾಸರ 'ಮೋಹನ ತರಂಗಿಣಿ'ಯಂತೆಯೇ ಶೃಂಗಾರ ಕಾವ್ಯ. ಕವಿ ತನ್ನ ಕೃತಿಯ ಬಗೆಗೆ 'ಜಾಣರ ಮೆಚ್ಚು' 'ರಸಿಕರ ರಸಾಯನ' ಎಂದು ಮುಂತಾಗಿ ಕರೆದುಕೊಂಡಿದ್ದಾನೆ. ಇದೂ ಸಾಂಗತ್ಯ ಕೃತಿಯೇ. ಆದರೆ ಕವಿ ತಾನೇ ಹೇಳಿಕೊಂಡಿರುವಷ್ಟು ಉತ್ತಮ ಕೃತಿಯೇನೂ ಅಲ್ಲ. 'ರಸಿಕರ ರಸಾಯನ' ಎಂದು ಕವಿ ಹೇಳಿಕೊಂಡಿದ್ದರೂ, ಅದು ಹಲವು ಅನೌಚಿತ್ಯಗಳಿಂದಾಗಿ ಸೊರಗಿದೆ. ಹದಿನೆಂಟು ವರ್ಣನೆಗಳನ್ನು ತನ್ನ ಕಾವ್ಯದಲ್ಲಿ ತಂದರೂ ಕನಕದಾಸರು, ಲಾಲಿತ್ಯದ ಭಾಷಾ ಬಳಕೆಯಿಂದಾಗಿ ರಸಿಕರ ಎದೆ ಮಿಡಿಯುವಂತೆ ಮಾಡಿದ್ದಾರೆ. ಆದರೆ ದೇಪರಾಜ ಅದರಲ್ಲಿ ಸಿಕ್ಕಿಹಾಕಿಕೊಳ್ಳುವುದರ ಜೊತೆಗೆ ಭಾಷಾ ಪ್ರೌಢಿಮೆಯಿಂದ ಕಾವ್ಯವನ್ನು ಬಳಲಿಸಿದ್ದಾನೆ. ಆ ವಿಷಯದಲ್ಲಿ ಕನಕದಾಸರು ಜಾಣರು. ಭಾವಕ್ಕೆ ತಕ್ಕ ಭಾಷಾ ಬಳಕೆ ಅವರ ಯಶಸ್ಸಿನ ಗುಟ್ಟು. ಇಲ್ಲಿ ದೇಪರಾಜ ಪ್ರತಿಭೆಗಿಂತ ಪಾಂಡಿತ್ಯವನ್ನು ಹೆಚ್ಚಾಗಿ ಮೆರೆದಿದ್ದರೆ, ಅಲ್ಲಿ ಕನಕದಾಸರು ಪಾಂಡಿತ್ಯವನ್ನು ಬದಿಗೊತ್ತಿ ಪ್ರತಿಭೆಯನ್ನು ಧಾರಾಳವಾಗಿ ಮೆರೆದಿದ್ದಾರೆ. 'ಸೊಬಗಿನ ಸೋನೆ'ಯ ಕಥೆ 'ಮೋಹನ ತರಂಗಿಣಿ'ಯ ಕಥೆಯಂತೆ ಒಳ್ಳೆಯದೇ ಆದರೂ, ನಿರ್ವಹಣೆ ಹಾಗೂ ಔಚಿತ್ಯ ಪ್ರಜ್ಞೆಯ ಕೊರತೆಯಿಂದಾಗಿ ಕಾವ್ಯ ಕಳೆಗುಂದಿದೆ. ಕವಿ ಔಚಿತ್ಯ ಪ್ರಜ್ಞೆಯನ್ನು ಕಳೆದುಕೊಂಡಾಗ ಕಾವ್ಯ ಏನಾಗುತ್ತದೆ ಎಂಬುದಕ್ಕೆ ಇದು ಸಾಕ್ಷಿ.

ಕನಕದಾಸ, ಕುಮಾರವ್ಯಾಸ, ರತ್ನಾಕರವರ್ಣಿ ಹಾಗೂ ನಂಜುಂಡಕವಿ - ಈ ನಾಲ್ವರೂ, ಕನ್ನಡದ ಜನಪ್ರಿಯ ಕವಿಗಳೆ. ಇವರಲ್ಲಿ ರತ್ನಾಕರವರ್ಣಿ 'ಭರತೇಶ ವೈಭವ'ದಲ್ಲಿ ಯೋಗ - ಭೋಗ ಸಮನ್ವಯವನ್ನು ಒಬ್ಬ ಚಕ್ರವರ್ತಿಯ ಕಥೆಯ ಮೂಲಕ ಸಾಧಿಸಿ ಅದನ್ನೊಂದು ಶೃಂಗಾರ ಕಾವ್ಯವಾಗಿಸುವುದರ ಮೂಲಕ ಪ್ರಶಂಸೆಗೆಪಾತ್ರನಾದರೆ,ಉಳಿದ ಮೂವರು ಪ್ರಚಲಿತ ವಸ್ತುವನ್ನೇ ತೆಗೆದುಕೊಂಡು ಅದಕ್ಕೆ ತಮ್ಮ ಪ್ರತಿಭೆಯ ಚಿನ್ನದ ಮೆರಗನ್ನು ಕೊಡುವುದರ ಮೂಲಕ ಜನಾದರಣೀಯವಾದವರು. ಜನಪ್ರಿಯತೆಯ ದೃಷ್ಟಿಯಿಂದ ಈ ನಾಲ್ವರ ಕೃತಿಗಳೂ ಸಮಾನ ಸ್ಥಾನದಲ್ಲಿವೆ ; ಹಾಗೆಯೇ ಜನಾದರಣೀಯ ದೃಷ್ಟಿಯಿಂದಲೂ ಈ ನಾಲ್ವರೂ ಜೊತೆ ಜೊತೆಯಲ್ಲಿಯೇ ನಿಲ್ಲುವಂತಹವರು. ಕಾವ್ಯದ ಸಂದರ್ಭಗಳಲ್ಲಿಹಾಗೂ ಕಾವ್ಯಗುಣದ ಸಂದರ್ಭಗಳಲ್ಲಿ ಒಬ್ಬೊಬ್ಬರು ಒಂದು ರೀತಿಯ ಮೇಲುಗೈ ಸಾಧಿಸಿದವರು. ಒಬ್ಬರು ಒಂದರಲ್ಲಿ ಹೆಚ್ಚು ಮಿಂಚುವಂತೆ ಕಂಡು ಬಂದರೆ ಮತ್ತೊಬ್ಬರು ಮತ್ತೊಂದರಲ್ಲಿ ಅತಿಶಯವಾಗಿ ಆಕರ್ಷಿಸುವಂತಹವರು. ಒಂದರಲ್ಲಿ ತಲೆದೋರಬಹುದಾದ ಕೊರತೆಯನ್ನು ಮತ್ತೊಂದರಲ್ಲಿ ತುಂಬಿ ಕೊಡುವ ಅಸಾಧಾರಣ ಪ್ರತಿಭಾಶಕ್ತಿಯುಳ್ಳ ಕವಿಗಳಿವರು. ಕನಕದಾಸರಲ್ಲಿ ಆ ಒಂದು ಶಕ್ತಿ ಹೆಚ್ಚಾಗಿಯೇ ಕಂಡು ಬರುತ್ತದೆ. ಕಾರಣ : ಕನಕದಾಸರ ವ್ಯಕ್ತಿತ್ವ ವಿಶಿಷ್ಟ ಬಗೆಯದು. ಅವರು ಬೆಳೆದು ಬಂದ ಹಿನ್ನೆಲೆ ಅವರ ಕಾವ್ಯಕ್ಕೆ ಒಂದು ಹೊಸ ಹಾಗೂ ವಿಶಿಷ್ಟ ಮೆರಗನ್ನು ತಂದಿತ್ತಿದೆ. ಅವರ ಅನುಭವ, ಭಾಷಾ ಬಳಕೆ, ಸನ್ನಿವೇಶ ನಿರ್ಮಾಣ, ನುಡಿಗಟ್ಟುಗಳ ಹಾಗೂ ನಾಣ್ಣುಡಿಗಳ ಬಳಕೆ ಇವುಗಳಿಂದಾಗಿ ಕೆಲವೊಂದು ರಚನೆಗಳಲ್ಲಿ ಅವರ ಕಾವ್ಯದ ವಿಶಿಷ್ಟತೆ ಎದ್ದು ಕಾಣುತ್ತದೆ.

ಹಾಗೆಯೇ ಕೆಲವೆಡೆ ಪ್ರೌಢತೆಯನ್ನು ತೋರಿದ್ದರೂ, ಅದು ಎಲ್ಲಿಯೂ ಕಡಲೆಯ ಮಧ್ಯದ ಕಲ್ಲಾಗಿಲ್ಲ, ಬೆಲ್ಲವಾಗಿದೆ.

ಕನಕದಾಸರ ಕೀರ್ತನೆಗಳು ಸಂಖ್ಯೆಯ ದೃಷ್ಟಿಯಿಂದ ಹೆಚ್ಚಿಲ್ಲ. ಆದರೆ ಮೌಲ್ಯದ ದೃಷ್ಟಿಯಿಂದ ಹೆಚ್ಚಿನವು. ಕನಕದಾಸರ ಮನೋಧರ್ಮವನ್ನು ಪ್ರಕಟಗೊಳಿಸುವಲ್ಲಿ ಅವು ಸಫಲಗೊಂಡಿವೆ. ಕಂಡದ್ದನ್ನು ಕಂಡಂತೆ ಹೇಳುವ ಅವರ ಗುಣದಿಂದಾಗಿ, ಅವರ ಕೀರ್ತನೆಗಳಲ್ಲಿ ಕಂಡು ಬರುವ ಮೊನಚು ಉಳಿದ ಕೀರ್ತನಕಾರರಲ್ಲಿ ಕಾಣಲಾರದಂತಹುದು. 'ಅಹುದಾದವರಹುದೆನ್ನಿ ಅಲ್ಲಾವಾದರಿಲ್ಲವೆನ್ನಿ' ಎಂಬ ಕೀರ್ತನೆಯಲ್ಲಿನ ಅವರ ಬಿಚ್ಚು ನುಡಿ ಉಳಿದವರಲ್ಲಿ ಅಪರೂಪ. "ಧರ್ಮವಿಲ್ಲದ ಅರಸು ಮುರಿದ ಕಾಲಿನ ಗೂರಸು, ನಿರ್ಮಲಿಲ್ಲದ ಮನಸು ತಾ ಕೊಳಚೆ ಹೊಲಸು" ಮುಂತಾದ ಕೀರ್ತನೆಗಳಲ್ಲಿ ಕಂಡು ಬರುವ ಮನೋಧರ್ಮ ವಿಶಿಷ್ಟವಾದುದು. "ಕರುಣ ಬಂದರೆ ಕಾಯೋ ಮರಣ ಬಂದರೆ ಒಯ್ಯೊ" ಎಂಬ ಜನಪದ ದಿಟ್ಟ ನುಡಿಗಳಂತೆಯೇ ಗಟ್ಟಿಯಾದುದು, ಬಿರುಸಾದುದು. ಈ ದೃಷ್ಟಿಯಿಂದ ಉಳಿದ ಕೀರ್ತನಕಾರರಿಗಿಂತ ಇವರದ್ದು ಭಿನ್ನ ಶೈಲಿ. ಅಲ್ಲಿಯ ಭಾಷೆಯ ಸೊಗಡೇ ಬೇರೆ. ಗ್ರಾಮೀಣ ಪರಿಸರದಿಂದ, ಆ ನೆಲದ - ಜಲದ ಒಡನಾಟದಿಂದ ಬಂದ ಈತನಲ್ಲಿ ಧಾರಾಳವಾದ ಜಾನಪದ ಸೊಗಡಿದೆ. ಅದು ಅವರ ಅನುಭವದ ಅಭಿವ್ಯಕ್ತಿಗೆ ವಿಶಿಷ್ಟತೆಯನ್ನು ತಂದಿತ್ತಿದೆ. ಅಷ್ಟೇ ಅಲ್ಲ, ಸಮಾಜದ ಕೆಳವರ್ಗದಿಂದ ಬಂದ ಈ ಕವಿಗೆ ಎಲ್ಲಾ ದೇವರುಗಳೂ ಬೇಕು. ಸಾಮಾನ್ಯವಾಗಿ ಗ್ರಾಮೀಣ ಜನರಲ್ಲಿ ಕಂಡು ಬರುವ ಸರ್ವಧರ್ಮ ಸಮನ್ವಯ ದೃಷ್ಟಿ - ಧೋರಣೆಗಳು ಈ ಕವಿಯಲ್ಲಿಯೂ ಅಷ್ಟೇ ಸಹಜವಾಗಿ ಕಂಡು ಬರುತ್ತವೆ. ಕನಕದಾಸರಿಗಿದ್ದಂತೆ ಉಳಿದ ಕವಿಗಳಿಗಾಗಲೀ ಅದರಲ್ಲಿಯೂ ಹರಿದಾಸರಿಗೆ ಈ ಒಂದು ಹಿನ್ನೆಲೆ ಇರಲಿಲ್ಲವೆಂಬುದು ಗಮನಾರ್ಹ. ಆ ಕಾರಣದಿಂದಾಗಿಯೇ ಕನಕದಾಸರ ರಚನೆಗಳು ಅವರ ಸಾಹಿತ್ಯದ ಮಧ್ಯೆ ಎದ್ದು ಕಾಣುತ್ತದೆ :

ಡೋಲಿನ ಮೇಲ್ಕಯ್ಯ ಭರಮಪ್ಪ ಹಾಕ್ಯಾನು
ತಾಳವ ಶಿವನಪ್ಪ ತಟ್ಯಾನ್ಯಾಂ
ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನ್ಯಾಂ
ಚಲುವ ಕನಕಪ್ಪ ಕುಣಿದಾನ್ಯಾಂ ||

ಪೂರ್ಣ ಜನಪದ ಧಾಟಿಯ ಈ ಕೀರ್ತನೆಯಲ್ಲಿ ಸರ್ವಧರ್ಮದ ಸಮನ್ವಯವನ್ನೂ ಸಾಧಿಸಿರುವುದು ಕನಕದಾಸರ ವಿಶಿಷ್ಟ ಪ್ರತಿಭೆಯೇ ಆಗಿದೆ. ಹಾಗೆಯೇ, "ಏನೆಂದಳೇ ನೆಂದಳೋ, ನಿನ್ನೋಳು ಸೀತೆ ಹನುಮಯ್ಯ" ಎಂಬ ಪಲ್ಲವಿ ಕೋಲಾಟದ ಹಾಡಿನ ಪಲ್ಲವಿಯನ್ನು ಕೂಡಲೇ ನೆನಪಿಸುತ್ತದೆ. "ಊರಿಗೆ ಬಂದರೆ ದಾಸಯ್ಯ, ನಮ್ಮ ಕೇರಿಗೆ ಬಾ ಕಂಡ್ಯ ದಾಸಯ್ಯ" ಎಂಬ, ಹಾಗೂ ಪೂರ್ಣವಾಗಿ ಕೋಲಾಟದ ಹಾಡನ್ನೇ ಹೋಲುವ :

ಕೋಲು ಕೊಳಲು ಕೈಲಿ ದಾಸಯ್ಯ ನೀ
ಕಲ್ಲಿಗೆ ವರವಿತ್ತೆ ದಾಸಯ್ಯ
ಮಲ್ಲನ ಮರ್ದಿಸಿ ಮಾವನ ಮಡುಹಿದ
ನೀಲಮೇಘಶ್ಯಾಮ ದಾಸಯ್ಯ ||

ಕೀರ್ತನೆಗಳನ್ನು ಗಮನಿಸಿದಾಗ ಕನಕದಾಸರ ಸಾಚಾ ಜಾನಪದ ಶೈಲಿ ವ್ಯಕ್ತವಾಗುತ್ತದೆ.

ಹರಿದಾಸರುಗಳಲ್ಲಿ ಭಕ್ತಿಭಾವಕ್ಕೆ ಸಂಬಂಧಿಸಿದಂತೆ, ಸಮಾಜೋದ್ಧಾರಕ್ಕೆ ಸಂಬಂಧಿಸಿದಂತೆ ಅವರ ರಚನೆಗಳಲ್ಲಿ ಸಮಾನತೆ ವ್ಯಕ್ತವಾದರೂ, ಮುಖ್ಯವಾಗಿ ಅಭಿವ್ಯಕ್ತಿಯಲ್ಲಿ ಕನಕದಾಸರು ಅವರುಗಳಿಂದ ಭಿನ್ನವಾಗಿಯೇ ನಿಲ್ಲುತ್ತಾರೆ. ಗ್ರಾಮೀಣ ಸೊಗಡನ್ನು ಸೂಸುವುದರ ಮೂಲಕ ವಿಶಿಷ್ಟತೆಯನ್ನು ತೋರುತ್ತಾರೆ.

ಆದರೆ ವಚನಾಕಾರರ ಸಾಲಿನಲ್ಲಿ ಗಮನಿಸುವಾಗ, ಕನಕದಾಸರು ಹೆಚ್ಚು ಕಡಿಮೆ ಸಮಸಮವಾಗಿಯೇ ನಿಲ್ಲಬಲ್ಲರು. ಭಕ್ತಿಮಾರ್ಗದ ದೃಷ್ಟಿಯಿಂದಾಗಲಿ, ಕಾವ್ಯಾಭಿವ್ಯಕ್ತಿಯ ಅಥವಾ ಕಾವ್ಯಮೌಲ್ಯದ ದೃಷ್ಟಿಯಿಂದಲಾಗಲಿ ಪರಸ್ಪರ ಹೆಚ್ಚು ಹೋಲುತ್ತಾರೆ. ಏಕೆಂದರೆ ಕನಕದಾಸರಂತೆಯೇ ವಚನಕಾರರೂ ಸಮಾಜದ ವಿವಿಧ ಕ್ಷೇತ್ರದಿಂದ ಬಂದವರು. ಬದುಕಿನಲ್ಲಿ ಹೆಚ್ಚು ಹೋರಾಟ ನಡೆಸಿದವರು. ವ್ಯವಸ್ಥೆಯೊಂದರ ವಿರುದ್ಧ ಹೋರಾಟ ನಡೆಸುತ್ತಾ ತಮ್ಮ ಅಸ್ತಿತ್ವಕ್ಕಾಗಿ ಧ್ವನಿಯೆತ್ತಿದವರು. ಜೊತೆಜೊತೆಯಲ್ಲಿಯೇ ಭಕ್ತಿಮಾರ್ಗದ ಸುಗಮದಾರಿಯನ್ನು ತೋರಿಸಿಕೊಟ್ಟವರು. ಒಂದು ಕಡೆ ಬಸವಣ್ಣನವರು 'ನಿಮ್ಮ ಶರಣರ ಮನೆಯ ಮಗ ನಾನಯ್ಯ' ಎಂದು ಹೇಳಿ ಕೊಂಡಿರುವಂತೆಯೇ ಕನಕದಾಸರು ಒಂದೆಡೆ, "ದಾಸದಾಸರ ಮನೆಯ ದಾಸಿಯ ಮಗ ನಾನು" ಎಂದು ತಮ್ಮ ದಾಸತ್ವದ ಬಗೆಗೆ ಹೇಳಿಕೊಳ್ಳುತ್ತಾರೆ. "ಆನು ಭಕ್ತನಲ್ಲಯ್ಯ ಆನು ವೇಷದಾರಿಯಯ್ಯಾ" ಎಂಬಂತೆಯೇ ಕನಕದಾಸರಲ್ಲಿ ಬರುವ: "ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ" ಎಂಬ ವಾಸ್ತವಿಕ ಸತ್ಯವನ್ನು ಬಯಲು ಮಾಡುತ್ತಾರೆ:

> ಹಲವು ಮಣಿಗಳ ಕಟ್ಟಿ ಕುಣಿಕುಣಿದಾಡಿ
> ಉಂಡು, ತಾಂಬೂಲಗೊಂಡು, ಹೋಹುದಲ್ಲಾ !
> ಹಲವು ಪರಿಯಲಿ ವಿಭೂತಿಯ ಹೂಸಿ
> ಗುಹಾಡಂಬರದ ನಡುವೆ ನಲಿನಲಿದಾಡಿ
> ತನು-ಮನ-ಧನವ ಸಮರ್ಪಿಸದವರ
> ಕೂಡಲ ಸಂಗಮದೇವರೆಂತೊಲಿವನಯ್ಯಾ ?

ಎಂದು ಬಸವಣ್ಣನವರು ಪ್ರಶ್ನಿಸಿದರೆ, ಕನಕದಾಸರು :

> ಪಟ್ಟೆನಾಮವ ಬಳಿದು, ಪಾತ್ರೆ ಕೈಲಿ ಪಿಡಿದು
> ಗುಟ್ಟಿನಲಿ ರಹಸ್ಯದ ಗುರುತರಿಯದೆ
> ಕೆಟ್ಟ ಕೂಗನು ಕೂಗಿ ಬೊಗಳಿ ಬಾಯಾರುವಂಥ
> ಹೊಟ್ಟೆಗುಡ ಮೃಗಗಳೆಲ್ಲ ಶ್ರೀವೈಷ್ಣವರೆ ಕೃಷ್ಣ ?

ಇವರಿಬ್ಬರ ಧೋರಣೆ ಒಂದೇ ಆದರೂ, ಭಾಷಾ ಬಳಕೆಯಲ್ಲಿ ಕನಕದಾಸರು ಇನ್ನೂ ಮುಂದೆ ಹೋಗುತ್ತಾರೆ. ಅವರ ಭಾಷೆಯ ಮೊನಚು ನೇರವಾಗಿ ತಿವಿದು ಎಚ್ಚರಿಸುವಂತಹುದು.

ಕನಕದಾಸರು ಬಂದ ನೆಲೆ ಸೆಲೆಯ ಕಾರಣದಿಂದಾಗಿ ಅವರ ಸಾಹಿತ್ಯದ ಸೊಗಸೇ ವಿಶಿಷ್ಟವಾಗಿ

ಕಂಡು ಬರುತ್ತದೆ. ಅದು ಅವರ ಸಾಹಿತ್ಯದ ಮೌಲ್ಯವನ್ನು ಹೆಚ್ಚಿಸಿದೆ:

ನಾವು ಕುರುಬರು ನಮ್ಮ ದೇವರೊ ಬೀರಯ್ಯ
ಕಾವ ನಮ್ಮಜ್ಜ ನರಕುರಿಯ ಹಿಂಡುಗಳ ||
ಅಷ್ಟ ಮದ ಮತ್ಸರಗಳೆಂತೆಂಬ ಟಗರುಗಳ
ದೃಷ್ಟಿ ಜೀವಾತ್ಮನೆಂಬೊ ಆಡು
ಸೃಷ್ಟಿ ಪ್ರಸಿದ್ಧವೆಂತೆಂಬುವಾ ಹೋತಗಳು
ಕಟ್ಟಿ ಕೋಲಿನಲಿ ಇರುತಿರುವ ನಮ್ಮಜ್ಜ ||

ಈ ಬಗೆಯ ರಚನೆ ಕನಕದಾಸರಂತಹ ಕವಿಗೆ ಮಾತ್ರ ಸಾಧ್ಯವಾಗುವಂತಹುದು, ಅದನ್ನು ಬಿಟ್ಟರೆ ಅಂತಹ ಪರಿಸರದಿಂದ ಬಂದಂತಹವರಿಗೆ ಮಾತ್ರ ಸಾಧ್ಯವಾಗಬಹುದಾದಂತಹುದು. ದಾಸಸಾಹಿತ್ಯದಲ್ಲಿ ಕನಕದಾಸರೊಬ್ಬರನ್ನು ಬಿಟ್ಟರೆ, ವಚನ ಸಾಹಿತ್ಯದ ಹಲವರಲ್ಲಿ ಇಂತಹ ವಿಶಿಷ್ಟತೆ ಸ್ವಲ್ಪಮಟ್ಟಿಗೆ ಕಂಡು ಬರುತ್ತದೆ.

ದಾಸರಾಗಲಿ, ವಚನಕಾರರಾಗಲಿ ಬರಿಯ ಒಣ ತತ್ತ್ವವನ್ನಷ್ಟೇ ಬೋಧಿಸ ಹೊರಟವರಲ್ಲ. ನಡೆ - ನುಡಿಯ ಮಹತ್ವವನ್ನೂ ಕುರಿತು ಸಾರಿದವರು. ಇವುಗಳ ಹೊರತು ಮುಕ್ತಿ ಸಾಧ್ಯವಿಲ್ಲವೆಂಬುದನ್ನು ತಿಳಿಯ ಹೇಳಿದವರು. ಇವರಿಬ್ಬರಲ್ಲಿ ಹೇಳುವ ರೀತಿಯಲ್ಲಿ ವ್ಯತ್ಯಾಸ ಕಂಡು ಬರುವುದೇ ಹೊರತು, ಉದ್ದೇಶದಲ್ಲಲ್ಲ:

ಏನು ಬರುವುದೋ ಸಂಗ | ಡೇನು ಬರುವುದೋ
ದಾನ ಧರ್ಮ ಮಾಡಿ ಬಹು ನಿ | ಧಾನಿ ಎನಿಸಿಕೊಳ್ಳು ಮನುಜ ||
ಹೆಂಡರಿಲ್ಲ ಮಕ್ಕಳಿಲ್ಲ ಮಂಡೆ ತುಂಬ ಬಂಧು ಬಳಗ
ಕಂಡು ಬಿಡಿಸಿಕೊಂಬರಾರೋ ದಿಂಡಿಯಮನ ದೂತರೆಳೆಯೆ
ಬಂಡಿ ತುಂಬ ಇದ್ದ ಧನವು ಹಿಂದೆ ಉಳಿವುದಲ್ಲೊ ನಿನ್ನ
ಪೊಂದಿಕೊಂಡು ಬರುವ ವಸ್ತು ಕೀರ್ತಿ ಅಪಕೀರ್ತಿ ಎರಡೆ ||

ಎಂದು ಕನಕದಾಸರು ಹೇಳಿದರೆ, ಬಸವಣ್ಣನವರಲ್ಲಿ ಅದು;

ಸಂಸಾರವೆಂಬುದೊಂದು ಗಾಳಿಯ ಸೊಡರು,
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ |
ಇದನೆಚ್ಚಿ ಕೆಡಬೇಡ - ಸಿರಿಯೆಂಬುದ |
ಮಱೆಯದೆ ಪೂಜಿಸು ನಮ್ಮ ಕೂಡಲ ಸಂಗಮದೇವ ||

ಪಂಚೇಂದ್ರಿಯಗಳು ಒಂದು ರೀತಿಯಲ್ಲಿ ಮಾನವನ ವೈರಿಗಳೂ ಹೌದು. ಅವು ಆತನನ್ನು ತಪ್ಪು ದಾರಿಗೆ ಎಳೆಯುವ ಸಾಧನಗಳು. ಅವುಗಳನ್ನು ನಿಯಂತ್ರಿಸಲು ಆತ್ಮ ಸಂಯಮ ಬೇಕಾಗುತ್ತದೆ. ಅದರ ಕೊರತೆಯಿಂದ ಕೆಟ್ಟವರೇ ಬಹುಮಂದಿ ಎಂಬ ವಿಚಾರವನ್ನು ಎಲ್ಲಾ ಸಾಧಕರೂ ವಿವಿಧ

ರೀತಿಯಲ್ಲಿ ಹೇಳಿದ್ದಾರೆ. ಸರ್ವಜ್ಞ ಒಂದೆಡೆ ಅದನ್ನು :

ಕಣ್ಣು ನಾಲಗೆ ಮನವು ತನ್ನದೆಂದೆನಬೇಡ
ಅನ್ಯರು ಕೊಂದರೆನಬೇಡ | ಇವು ಮೂರು
ತನ್ನನೇ ಕೊಲ್ಲುವುವು ಸರ್ವಜ್ಞ ||

ಎಂದು ಹೇಳಿದ್ದರೆ, ಬಸವಣ್ಣನವರು ಬೇರೆ ಸಂದರ್ಭದ ಹಿನ್ನೆಲೆಯಲ್ಲಿ :

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ ತಂದೆ ;
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ ;
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ ;
ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳಸದಂತೆ ಇರಿಸು, ಕೂಡಲ ಸಂಗಮ ದೇವ ||

ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತಾರೆ. ಸಾಧನೆಗೆ ಅಡ್ಡಿಯಾಗುವ ಈ ಇಂದ್ರಿಯಗಳ ಬಗ್ಗೆ ವಹಿಸಬೇಕಾದ ಎಚ್ಚರವನ್ನು ಹಾಗೂ ಅವುಗಳ ಸ್ವರೂಪವನ್ನೂ ಹೇಳಿದ್ದಾರೆ. ಆದರೆ ಕನಕದಾಸರಲ್ಲಿ ಇದು ಬೇರೊಂದು ರೀತಿಯಲ್ಲಿಯೇ ಬಣ್ಣಿತವಾಗಿದೆ. ಆ ಪಂಚೇಂದ್ರಿಯಗಳ ನೆರವಿನಿಂದಲೇ ಹೇಗೆ ಮಾನವ ಉದ್ಧಾರದ ಹಾದಿಯನ್ನು ಹಿಡಿಯಬಹುದು ಎಂಬುದನ್ನು ಹೇಳುವಲ್ಲಿ ವಿಶಿಷ್ಟತೆಯನ್ನು ಕನಕದಾಸರು ತೋರಿದ್ದಾರೆ :

"ಕಣ್ಣೇ ಕಾಮನ ಬೀಜ
ಕಣ್ಣಿನಿಂದಲೆ ನೋಡು ಮೋಕ್ಷ ಸಾಮ್ರಾಜ್ಯ
ಕಣ್ಣಿನ ಮೂರುತಿ ಬಿಗಿದು | ಒಳ
ಗಣ್ಣಿನಿಂದಲೆ ದೇವರ ನೋಡಣ್ಣ ||
ಮೂಗೆ ಶ್ವಾಸ ನಿಶ್ವಾಸ | ಈ
ಮೂಗಿನಿಂದಲೆ ಕಾಣೋ ಯೋಗ ಸನ್ಯಾಸ
ಮೂಗನಾದರೆ ವಿಶೇಷ | ಒಳ
ಮೂಗಿನಿಂದ ನೋಡಣ್ಣ ಲೀಲಾವಿಲಾಸ ||
ಕಿವಿಯೆ ಕರ್ಮಕೆ ದ್ವಾರ | ಈ
ಕಿವಿಯಿಂದಲೆ ಕೇಳೋ ಮೋಕ್ಷಸಾರ
ಕವಿಯೆ ಕರ್ಮಕುಠಾರ | ಒಳ
ಗಿವಿಯಲ್ಲಿ ಕಾಣೊ ನಾದದ ಬೇರ ||

ಕಿವಿ, ಕಣ್ಣು, ಮೂಗು ಮುಂತಾದ ಇಂದ್ರಿಯಗಳು ವ್ಯಕ್ತಿಯ ನಾಶಕ್ಕೆಂತೋ, ಅಂತೆಯೇ ಉದ್ಧಾರಕ್ಕೂ ಕಾರಣವಾಗಬಲ್ಲವು - ನೆರವಾಗಬಲ್ಲವು. ಆದರೆ ಅವನ್ನು ಬಳಸಿಕೊಳ್ಳುವ ಮಾರ್ಗವನ್ನು

ಕಂಡುಕೊಳ್ಳಬೇಕು. ಹಿಂದಿನವರು ಯಾವುದನ್ನು ಮಾನವನ ಶತ್ರುಗಳೆಂದು ಹೇಳಿದ್ದರೋ, ಅವುಗಳಲ್ಲಿಯೇ ಮಿತ್ರತ್ವವನ್ನು ಕಾಣುವ ಬಗೆಯನ್ನು ಕನಕದಾಸರು ತೋರಿದ್ದಾರೆ.

ಕನಕದಾಸರ ಮತ್ತೊಂದು ವೈಶಿಷ್ಟ್ಯ ಕಂಡು ಬರುವುದು ಅವರು ರಚಿಸಿರುವ 'ಮುಂಡಿಗೆ'ಗಳಲ್ಲಿ. ಇವುಗಳು ಕುಮಾರವ್ಯಾಸನಲ್ಲಿ ಬರುವ -

ವೇದ ಪುರುಷನ ಸುತನಸುತನ ಸ
ಹೋದರನ ಹೆಮ್ಮಗನ ಮಗನ ತ
ಳೋದರಿಯ ಮಾತುಳನ ಮಾವನನತುಳ ಭುಜಬಲದಿ
ಕಾದಿಗೆಲಿದವನನಣ್ಣನವ್ವೆಯ
ನಾದಿನಿಯ ಜಠರದಲಿ ಜನಿಸಿದ
ನಾದಿ ಮೂರುತಿ ಸಲಹೊ ಗದುಗಿನ ವೀರನಾರಾಯಣ ||

ಪದ್ಯಗಳಂತಹ ಹಾಗೂ ವಚನ ಸಾಹಿತ್ಯದಲ್ಲಿ ಬರುವ ಬೆಡಗಿನ ವಚನಗಳನ್ನು ಹೋಲುವಂತಹವು. ಬೌದ್ಧಿಕ ಕಸರತ್ತಿಗೆ ಎಡೆಮಾಡಿಕೊಡುವ ಇಂತಹ ಸಾಂಕೇತಿಕ ಶೈಲಿಯಲ್ಲಿ ಕನಕದಾಸರೂ 'ಮುಂಡಿಗೆ'ಗಳನ್ನು ರಚಿಸಿದ್ದಾರೆ :

ಬಾಯೊಳಗಿಹ ಗಂಡನ ನಿಜ ತಮ್ಮನ
ತಾಯ ಪಿತನ ಮಡದಿಯ ಧರಿಸಿದನ
ಸ್ತ್ರೀಯಳ ಸುತನ ಕೈಯಲಿ ಶಾಪಪಡೆದನ
ದಾಯಾಧ್ಯನ ಮಗನ
ಸಾಯಕವದು ತೀವ್ರದಿ ಬರುತಿರೆ ಕಂಡು
ಮಾಯಾಪತಿ ಭೂಮಿಯನೊತ್ತಿ ತನ್ನಯ
ಬೀಯಗಾರನ ತಲೆಗಾಯಿದಂಥ
ರಾಯನ ಕರೆದು ತೋರೆ ರಮಣಿ ||

ಈ ಬಗೆಯ ರಚನೆಗಳು ಜಾಣ್ಮೆ, ಚಮತ್ಕಾರ ಹಾಗೂ ಪಾಂಡಿತ್ಯ, ಪ್ರತಿಭೆಗಳಿಂದ ಕೂಡಿದವುಗಳು. ಗೂಢಾರ್ಥದಿಂದ ಕೂಡಿದ ಇವುಗಳನ್ನು ತಿಳಿಯಬೇಕಾದರೆ ಸಾಕಷ್ಟು ತಿಣುಕಬೇಕಾಗುತ್ತದೆ; ಪೌರಾಣಿಕವಾದ ಹಾಗೂ ಆಧ್ಯಾತ್ಮದ ಸ್ಪಷ್ಟ ಪರಿಚಯವಿರಬೇಕಾಗುತ್ತದೆ. ಕನಕದಾಸರು ಕೀರ್ತನೆ, ಕಾವ್ಯರಚನೆಗಳ ಜೊತೆಗೆ ಇಂತಹ 'ಮುಂಡಿಗೆ'ಗಳನ್ನು ರಚಿಸುವುದರ ಮೂಲಕ ಗಾಢವಾದ ಪಾಂಡಿತ್ಯವನ್ನೂ ಮೆರೆದಿದ್ದಾರೆ. ಹಲವು ಟೀಕಾಕಾರರ ಬಾಯಿ ಮುಚ್ಚಿಸುವುದಕ್ಕೂ ಇವು ಸಹಾಯಕವಾಗಿರಬೇಕು. ಆ ಮೂಲಕ ತಮ್ಮ ಬಹುಮುಖ ಪ್ರತಿಭೆಯನ್ನು ಕನಕದಾಸರು ತೋರಿದ್ದಾರೆ. ಕೀರ್ತನೆ, ಷಟ್ಪದಿ, ಸಾಂಗತ್ಯಗಳಂತಹ ಛಂದಸ್ಸಿನಲ್ಲಿ ಸರಳ ರಚನೆಯನ್ನು ಮಾಡಿ ಜನಪ್ರಿಯ ಕವಿಯಾದಂತೆಯೇ, 'ಮುಂಡಿಗೆ'ಗಳಂತಹ ರಚನೆಗಳ ಮೂಲಕ ಪಂಡಿತ ಕವಿಗಳ ಸಾಲಿನಲ್ಲಿಯೂ ಸ್ಥಾನ ಪಡೆದಿದ್ದಾರೆ.

* * * * *

ಕನಕದಾಸರ ವ್ಯಕ್ತಿತ್ವ ಮತ್ತು ಪ್ರತಿಭೆ ವಿಶಿಷ್ಟ ಬಗೆಯದು. ಅವರು ನಡೆದು ಬಂದ ಹಾದಿಯ ಹಿನ್ನೆಲೆಯಲ್ಲಿ ಅದಕ್ಕೊಂದು ವಿಶಿಷ್ಟ ಮಹತ್ವವಿದೆ - ಸತ್ವವಿದೆ ಹಾಗೂ ತತ್ವವೂ ಇದೆ. ಕನ್ನಡ ಸಾಹಿತ್ಯದ ಚಂಪೂ ಕವಿಗಳ ಸಾಲಿನಲ್ಲಾಗಲಿ; ಷಟ್ಪದಿ, ಸಾಂಗತ್ಯ ಅಥವಾ ಕೀರ್ತನಕಾರರ ಸಾಲಿನಲ್ಲಾಗಲಿ ಕನಕದಾಸರು ತಮ್ಮದೇ ಆದ ಸ್ಥಾನವನ್ನು ಕಾಯ್ದುಕೊಂಡು ಬಂದಿದ್ದಾರೆ. ಕೀರ್ತನಕಾರ, ಸಂತ, ಕವಿ ಹಾಗೂ ಕಲಿ ಎನಿಸಿದ ಕನಕದಾಸರ ಅನುಭವ ವ್ಯಾಪಕವದುದು, ವಿಶಿಷ್ಟ ರೀತಿಯದು. ಚಂಪೂ ಕವಿಗಳ ಸಾಲಿನಲ್ಲಿ ಪ್ರತಿಭೆಯಲ್ಲಿ ಕನಕದಾಸರಿಗಿಂತ ದೊಡ್ಡವರಿರ ಬಹುದು ; ಆದರೆ ಅವರಾರೂ ಇವರಂತೆ ಕೀರ್ತನೆಗಳನ್ನಾಗಲಿ, ಮುಂಡಿಗೆಗಳನ್ನಾಗಲಿ ರಚಿಸಿದವ ರಲ್ಲ ; ಸಂತರೆನಿಸಿಕೊಂಡವರೂ ಅಲ್ಲ. ಷಟ್ಪದಿ ಕವಿಗಳ ಗುಂಪಿನಲ್ಲಾಗಲಿ ಅಥವಾ ಸಾಂಗತ್ಯ ಕವಿಗಳ ಗುಂಪಿನಲ್ಲಾಗಲೀ ಇದೇ ಪರಿಸ್ಥಿತಿ. ವಚನಕಾರರ ಸಾಲಿನಲ್ಲಿ ಹಲವಂಶಗಳಲ್ಲಿ ಅವರಿಗೆ ಹೆಗಲೆಣೆಯಾಗಿ ನಿಲ್ಲಬಲ್ಲವರಾದರೂ, ಅವರಲ್ಲಿಯ ಬಹುತೇಕ ಮಂದಿಯಂತೆ ಕೇವಲ ವಚನಕ್ಕಷ್ಟೇ ಸೀಮಿತಗೊಳ್ಳದೆ ಕಾವ್ಯರಚನೆಗೂ ಕೈ ಹಾಕಿದ್ದು ಕನಕದಾಸರ ವಿಶಿಷ್ಟ ಪ್ರತಿಭೆಗೆ ಮತ್ತೊಂದು ನಿದರ್ಶನ. ದಾಸಪರಂಪರೆಯಲ್ಲಿ ಉಳಿದೆಲ್ಲ ಅಂಶಗಳ ಜೊತೆಗೆ ಕನಕದಾಸರು ತೋರಿದ ಕ್ರಾಂತಿಕಾರಕ ಮನೋಭಾವ ಅವರ ದಿಟ್ಟತನಕ್ಕೆ ಸಾಕ್ಷಿ. ಅವರ ಕೀರ್ತನೆಗಳಲ್ಲಿ ಕಂಡು ಬರುವ ನಿರ್ಭಯ ಅಭಿವ್ಯಕ್ತಿ ಕನಕದಾಸರ ಸಾಹಿತ್ಯಕ್ಕೆ ಒಂದು ಅಪೂರ್ವತೆಯನ್ನು ತಂದು ಕೊಟ್ಟಿದೆ : "ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೆ, ಜನ್ಮ ಸಾರ್ಥಕವಿಲ್ಲ ದವರೆಲ್ಲ ಭಾಗವತರೆ" ಎಂಬಂತಹ ನುಡಿಗಳು ಆ ಕಾಲಕ್ಕೆ ಸಾಮಾನ್ಯವಾದುವುಗಳೇನೂ ಅಲ್ಲ.

ಭಾಷೆಯ ಬಳಕೆಯ ದೃಷ್ಟಿಯಿಂದ ಕನಕದಾಸರು ಕುಮಾರವ್ಯಾಸನಿಗೆ ಹತ್ತಿರವಾಗುವಂತೆಯೇ, ಸಾಂಗತ್ಯ ಕವಿಗಳ ಸಾಲಿನಲ್ಲಿ ಎದ್ದು ಕಾಣುವ ಸಿದ್ಧಿಯನ್ನು ಪಡೆದವರು. ಕೀರ್ತನಕಾರರ ಗುಂಪಿನಲ್ಲಿಯಂತೂ ಅವರದ್ದು ವಿಶಿಷ್ಟ ಶೈಲಿ. ಹಲವೆಡೆ ಅವರು ಬಳಸಿರುವ ದಟ್ಟವಾದ ಗ್ರಾಮ್ಯ ಶೈಲಿಯಿಂದಾಗಿ ಅವರ ರಚನೆಗಳು ವಿಶೇಷ ಆಕರ್ಷಣೆಯನ್ನು ಹೊಂದಿರುವುದುಷ್ಟೇ ಅಲ್ಲದೆ, ಪರಿಣಾಮ ಬೀರುವ ಶಕ್ತಿಯನ್ನೂ ಅಪೂರ್ವ ರೀತಿಯಲ್ಲಿ ಪಡೆದುಕೊಂಡಿವೆ. ಸಮಕಾಲೀನ ವಾಸ್ತವಿಕ ಚಿತ್ರಣವನ್ನು ಕೊಡುವಲ್ಲಿಯಾಗಲಿ, ಅಗತ್ಯವಾದೆಡೆಗಳಲ್ಲಿ ಸುಂದರವಾದ ವಿಸ್ತಾರ ವರ್ಣನೆಗಳನ್ನು ತರುವಲ್ಲಿಯಾಗಲಿ ಕನಕದಾಸರ ವಿಶಿಷ್ಟ ಪ್ರತಿಭೆ ಗರಿಗೆದರಿರುವುದನ್ನು ಕಾಣ ಬಹುದು. ಆಧ್ಯಾತ್ಮ - ಶೃಂಗಾರಗಳೆರಡನ್ನೂ ಏಕಕಾಲದಲ್ಲಿ ಮೆರೆಯುವಲ್ಲಿ ರತ್ನಾಕರವರ್ಣಿಗೆ ಸಮನಾದ ಪ್ರತಿಭೆಯನ್ನು ಕನಕದಾಸರು ತೋರಿದ್ದಾರೆ; ಎಲ್ಲಿಯೂ 'ಸೊಬಗಿನ ಸೋನೆ'ಯ ದೇಪರಾಜನಂತೆ ಅನೌಚಿತ್ಯಕ್ಕೆ ಮಣೆ ಹಾಕಿಲ್ಲ.

ಕನಕದಾಸರ ಸಮಗ್ರ ಕೃತಿಗಳನ್ನು ಒಟ್ಟಾರೆ ಪರಿಶೀಲಿಸುವಾಗ; ಕೀರ್ತನಕಾರ ಕನಕದಾಸರೇ ಬೇರೆ, ಕಾವ್ಯಗಳ ಕನಕದಾಸರೇ ಬೇರೆ ಎಂಬಂತೆ ಭ್ರಮೆ ಹುಟ್ಟಿಸುವ ವಿಶಿಷ್ಟ ಕಾವ್ಯ ಪ್ರತಿಭೆ ಅವರದ್ದು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕನಕದಾಸರ ಸ್ಥಾನ ವಿಶಿಷ್ಟವಾದುದು; ಕೀರ್ತನಕಾರರ ಸಾಲಿನಲ್ಲಿ ಅಪೂರ್ವತೆಯನ್ನು ತೋರಿದಂತೆಯೇ ಕನ್ನಡ ಕವಿಗಳ ಸಾಲಿನಲ್ಲಿ ಸಮಾನವಾಗಿ ಸ್ಪರ್ಧಿಸಬಲ್ಲ ಸಾಮರ್ಥ್ಯದ ಕನಕದಾಸರು; ಸಂತರ ಸಾಲಿನಲ್ಲಿ ತಮ್ಮ ಸಮತೋಲನ ಹಾಗೂ ಪಂಥಾತೀತ ಗುಣಗಳನ್ನು ಮೆರೆದು ಅದ್ವಿತೀಯರೆನಿಸಿದವರು.

ಇಷ್ಟಾದರೂ, ಕನಕದಾಸರ ಕಾವ್ಯ ಪ್ರತಿಭೆಗೆ ದೊರೆಯಬೇಕಾದ ಮನ್ನಣೆ ದೊರೆತಿಲ್ಲ. ಅವರ

ಬಹುಮುಖ ಪ್ರತಿಭೆಗೆ ಸಲ್ಲಬೇಕಾದ ಗೌರವ ಸಂದಿಲ್ಲ. ಕಾವ್ಯ ಮೌಲ್ಯ, ಜೀವನ ಮೌಲ್ಯಗಳೆರಡನ್ನೂ ಸಂಗಮಗೊಳಿಸಿ ನೀಡಿದ ಈ ಕವಿಯ ಪ್ರತಿಭೆಗೆ ತಕ್ಕ ಗೌರವ ಸಲ್ಲುವ ಕಾಲ ಹತ್ತಿರವಾಗಲೆಂಬ ಅನಿಸಿಕೆ ಸಹಜವಾದದ್ದು.

ಗ್ರಂಥಋಣ

೧. ಕನ್ನಡ ಸಾಹಿತ್ಯ ಚರಿತ್ರೆ - ರಂ. ಶ್ರೀ. ಮುಗಳಿ

೨. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ - ತ. ಸು. ಶಾಮರಾಯ

೩. ನಳಚರಿತ್ರೆ - (ಸಂ.) ದೇ. ಜವರೇಗೌಡ

೪. ರಾಮಧಾನ್ಯ ಚರಿತೆ - (ಸಂ.) ದೇ. ಜವರೇಗೌಡ

೫. ಮೋಹನ ತರಂಗಿಣಿ ಸಂಗ್ರಹ - (ಸಂ.) ಬಿ. ಎಸ್. ಸಣ್ಣಯ್ಯ

೬. ಜನಪ್ರಿಯ ಕನಕ ಸಂಪುಟ - (ಸಂ.) ದೇ. ಜವರೇಗೌಡ

೭. ಹರಿದಾಸ ಸಾಹಿತ್ಯ - ಆರ್. ಎಸ್. ಪಂಚಮುಖಿ

೮. ಹರಿದಾಸ ಹೃದಯ - ಜಿ. ವರದರಾಜರಾವ್

೯. ದಾಸಸಾಹಿತ್ಯ ದರ್ಶನ - (ಸಂ.) ಎಚ್ಚೆಸ್ಕೆ

೧೦. ಕನಕದಾಸರು - ಎಸ್. ಕೆ. ರಾಮಚಂದ್ರರಾವ್

೧೧. ಪರಿಶೀಲನ - ಜಿ. ಎಸ್. ಶಿವರುದ್ರಪ್ಪ

೧೨. ಕನಕಸುಧೆ - ಪರಮೇಶ

೧೩. ಕರ್ನಾಟಕ ಜನಜೀವನ - ಬೆಟಗೇರಿ ಕೃಷ್ಣಶರ್ಮ

೧೪. ಹರಿದಾಸ ಸಾಹಿತ್ಯ ಸಾರ - ಜಿ. ವರದರಾಜರಾವ್

೧೫. ಕನಕಕಿರಣ - (ಸಂ.) ಕಾ. ತ. ಚಿಕ್ಕಣ್ಣ

೧೬. ಕವಿ ಕನಕದಾಸರು - ಕಟ್ಟೆ ಶೇಷಾಚಾರ್ಯ

೧೭. ಕವಿ ರಶ್ಮಿ - ಎನ್. ಬಿ. ಮುತಾಲಿಕರ

೧೮. ಕನ್ನಡ ವಿಶ್ವಕೋಶ.

* * * * *

'ಶ್ರೀ ರಾಮಕೃಷ್ಣ ಪರಮಹಂಸ - ಸ್ವಾಮಿ ವಿವೇಕಾನಂದ'

೧

ಶ್ರೀ ಕುವೆಂಪು ಅವರು ಸಾಹಿತ್ಯ ಲೋಕದ ಹಲವು ಪ್ರಕಾರಗಳಲ್ಲಿ ಲೇಖನಿ ಆಡಿಸಿ ಯಶಸ್ಸು ಗಳಿಸಿರುವಂತೆಯೇ ಈ ಒಂದು ಪ್ರಕಾರದಲ್ಲಿಯೂ ಅದ್ಭುತ ಜಯ ಗಳಿಸಿದ್ದಾರೆ. ಅವುಗಳು ವಾಸ್ತವವಾಗಿ ಜೀವನ ಚರಿತ್ರೆಗಳೇ ಆದರೂ, ರಸವತ್ತಾದ ಕಾವ್ಯಾಂಶಗಳನ್ನು ಅದರಲ್ಲಿ ತುಂಬಿ ಆದರ್ಶ ಕೃತಿಗಳನ್ನಾಗಿಸಿದ್ದಾರೆ. ಶ್ರೀ ಕುವೆಂಪು ಅವರ ದೈತ್ಯ ಪ್ರತಿಭೆ ಲೀಲಾಜಾಲವಾಗಿ ಭಾರತೀಯ ಆಧ್ಯಾತ್ಮ ಲೋಕದ ಆ ಎರಡು ಮೇರು ಸದೃಶ ವ್ಯಕ್ತಿಗಳ ಜೀವನವನ್ನು ಅತ್ಯಂತ ಸುಂದರವಾಗಿ ಸೆರೆ ಹಿಡಿದಿಟ್ಟಿದೆ. "ಈ ಎರಡು ಕೃತಿಗಳೂ ಕವಿ ಶ್ರೇಷ್ಠರಾದ ಕುವೆಂಪು ಅವರ ಆಧ್ಯಾತ್ಮಿಕ ಪ್ರಗತಿಯ ಪಥದಲ್ಲಿ ನಿತ್ಯವೂ ಬೆಳಗುತ್ತಿರುವ ಎರಡು ನಂದಾದೀವಿಗೆಗಳಂತಿವೆ. ಗ್ರಂಥವಿಷಯ ಬೇರೆಯಲ್ಲ. ಲೇಖಕರ ಅಂತರಂಗ ಬೇರೆಯಲ್ಲ. ಶ್ರೀ ರಾಮಕೃಷ್ಣರ ಸಾನ್ನಿಧ್ಯದಲ್ಲಿ ವಿವೇಕಾನಂದರ ವ್ಯಕ್ತಿತ್ವ ವಿಕಾಸವಾದಂತೆಯೇ, ಈ ಪುಣ್ಯ ಪುರುಷರ ಪ್ರಭಾವದಿಂದ ಕೃತಾರ್ಥವಾಗಿರುವ ಕವಿವಾಣಿ ಇಲ್ಲಿ ತಾನಾಗಿಯೇ ತುಂಬು ಹೊನಲಾಗಿ ಪ್ರವಹಿಸಿರುವುದನ್ನು ಮನಗಾಣಬಹುದು."[೧]

ಶ್ರೀ ಕುವೆಂಪು ಅವರು ರಚಿಸಿದ ಈ ಎರಡು ಕೃತಿಗಳೂ ೧೯೩೨-೧೯೩೪ರ ಅವಧಿಯಲ್ಲಿ ರಚನೆಗೊಂಡವುಗಳು. ಸ್ವಾಮಿ ವಿವೇಕಾನಂದ ೧೯೩೨ರಲ್ಲಿ ಪ್ರಕಟಗೊಂಡರೆ, ೧೯೩೪ರಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಬೆಳಕು ಕಂಡಿತು.

'ಸ್ವಾಮಿ ವಿವೇಕಾನಂದ' ಜೀವನ ಚರಿತ್ರೆಗಳ ಸಾಲಿನಲ್ಲಿ ಮಹತ್ವದ ಕೃತಿಯಾಗಿದೆ. ಜೀವನ ಚರಿತ್ರೆಯೆಂದಾಕ್ಷಣ ಆತನ ಜನನ, ಬಾಲ್ಯ, ವಿದ್ಯಾಭ್ಯಾಸ ಮುಂತಾಗಿ ಒಂದು ಬಗೆಯಾದ ಯಾಂತ್ರಿಕ ಜೋಡಣೆ ಕಂಡು ಬರುವುದು ಸಾಮಾನ್ಯ. ಆದರೆ, ಶ್ರೀ ಕುವೆಂಪು ಅವರು ಇಲ್ಲಿ ಹೊಸ ಜಾಡನ್ನು ಹಿಡಿದು ನಡೆದಿದ್ದಾರೆ. ತಾವು ರಚಿಸಲಿರುವ ಜೀವನ ಚರಿತ್ರೆಯ ನಾಯಕನ ಭವ್ಯಾತೀತವಾದ ವ್ಯಕ್ತಿತ್ವಕ್ಕೆ ಸರಿ ಹೊಂದುವಂತೆ ಆತನ ಬದುಕಿನ ಮಹತ್ವದ ಘಟನೆಯೊಂದನ್ನು ನಿರೂಪಿಸುವುದರ ಮೂಲಕ ಒಮ್ಮೆಗೇ ನಮ್ಮ ಆಸಕ್ತಿಯನ್ನು ಅತ್ತ ಸೆಳೆಯುತ್ತಾರೆ. ಬೆರಗುಗೊಳ್ಳುವಂತೆ ಮಾಡಿ ಒಮ್ಮೆಗೇ ಓದುಗನನ್ನೂ ಗೆದ್ದುಕೊಳ್ಳುತ್ತಾರೆ. ಕುತೂಹಲ ಕೆರಳಿ ಆಸಕ್ತಿ ಗರಿಗೆದರುವಂತೆ ತಮ್ಮ ಲೇಖನಿಯನ್ನು ಮಿಡಿದಿದ್ದಾರೆ. ಜೀವನ ಚಿತ್ರಕಾರ ತನ್ನ ಪ್ರತಿಭೆಯನ್ನು ತೋರಬೇಕಾದುದು ಇಂತಹ ಕಡೆಗಳಲ್ಲಿಯೇ ಎಂಬುದನ್ನು ಮನಗಾಣಿಸಿದ್ದಾರೆ.

೧. ಡಾ. ಜಿ. ವರದರಾಜರಾವ್ - ಗಂಗೋತ್ರಿ. ಪು. ೬೫೨

ಕೃತಿಯ ಆರಂಭವೇ ಕುತೂಹಲ ಭರಿತವಾಗಿ - 'ಯಾರಿವನು ?' ಎಂಬ ಪ್ರಶ್ನಾರ್ಥಕ ಸೂಚಕವಾಗಿ ಓದುಗರ ಗಮನವನ್ನು ಸೆಳೆಯುತ್ತದೆ. ಸ್ವಾಮಿ ವಿವೇಕಾನಂದರ ದಿವ್ಯ ವ್ಯಕ್ತಿತ್ವಕ್ಕೆ ತಕ್ಕ ಭವ್ಯ ಹಿನ್ನೆಲೆಯೊಡನೆ ಆ ಮಹಾಚೇತನದ ಜೀವನ ಚಿತ್ರಣವನ್ನು ಕಡೆಯಲು ತೊಡಗುತ್ತಾರೆ. ಆ ಅದ್ಭುತ ಚೇತನದ ಜೀವಿತದಲ್ಲಿನ ಮಹತ್ತರ ಘಟನೆಯೊಂದನ್ನು ಮುಂದಾಗಿಸಿಕೊಂಡು, ಆ ಅಪೂರ್ವ ವ್ಯಕ್ತಿತ್ವದ ಎತ್ತರ ಬಿತ್ತರಗಳನ್ನು ಒಮ್ಮೆಗೇ ನಮ್ಮ ಮುಂದೆ ಚಿತ್ರಿಸಿ ತತ್ತರಿಸುವಂತೆ ಮಾಡುತ್ತಾರೆ.

"ಮಾಗಿಯ ಕಾಲದ ಒಂದುದಿನ. ಇನ್ನೂ ಉಷಃಕಾಲ. ಮೂಡಲ ದೆಸೆವೆಣ್ಣು ದರೋನ್ಮೀಲಿತ ನಯನೆಯಾಗಿದ್ದಾಳೆ. ಕತ್ತಲೆಯ ಮೊತ್ತವು ಮೆಲ್ಲ ಮೆಲ್ಲನೆ ಹಿಂಜರಿಯ ತೊಡಗಿದೆ." (ಪು. ೧) ಅಂತಹ ಸಂದರ್ಭದಲ್ಲಿ ಸನ್ಯಾಸಿಯೊಬ್ಬನು ಶಾಂತಗತಿಯಿಂದ ದೇವಾಲಯವನ್ನು ಪ್ರವೇಶಿಸುತ್ತಾನೆ. ಪವಿತ್ರ ಪುಣ್ಯ ಕ್ಷೇತ್ರವಾದ ಕನ್ಯಾಕುಮಾರಿಗೆ ಬರುವ ಅನೇಕ ಸನ್ಯಾಸಿಗಳನ್ನು, ಸಂಸಾರಿಗಳನ್ನು ಕಂಡ ಆ ಜನ ಈ ವ್ಯಕ್ತಿಯ ಅಪೂರ್ವ ನಿಲುವನ್ನು ಕಂಡು ಬೆರಗಾಗುತ್ತಾರೆ. ಶ್ರೀ ಕುವೆಂಪು ಅವರು ಆ ಅಪೂರ್ವ ವ್ಯಕ್ತಿತ್ವದ ನಿಲುವನ್ನು ಅಷ್ಟೇ ಅತಿಶಯವಾಗಿಯೇ ಬಿಡಿಸಿದ್ದಾರೆ.

> "ದೀರ್ಘ ದೇಹ, ಅಜಾನುಬಾಹು, ವಜ್ರಶರೀರಿ, ಕಾಷಾಯವಸ್ತ್ರಧಾರಿ, ದಂಡಧಾರಿ, ಬ್ರಹ್ಮವನ ವಿಹಾರಿ, ಅಂತರಂಗದ ಐಶ್ವರ್ಯದ ಸಮುಜ್ವಲ ಕಾಂತಿಯು ತಳತಳಿಸುತ್ತಿದ್ದ ನಯನಗಳ ಸಿರಿಯಲ್ಲಿ ಮೈದೋರಿತ್ತು. ಆತ್ಮಶ್ರೀಯು ಓಜಸ್ವಿಯಾದ ಸುಂದರ ಗಂಭೀರ ವದನದಿಂದ ಹೊರಸೂಸುತ್ತಿತ್ತು. ಕಾವಿಯ ರುಮಾಲನ್ನು ಸುತ್ತಿದ್ದ ಆತನು ಅರ್ಚಕರ ದೃಷ್ಟಿಗೆ ಛದ್ಮವೇಷದ ರಾಜಪುರುಷನಂತೆ ತೋರಿದನು" (ಪು. ೨)

ಶ್ರೀ ಕುವೆಂಪು ಅವರ ಶೈಲಿ ಆ ಮಹಾನ್ ವ್ಯಕ್ತಿತ್ವದ ಎತ್ತರಕ್ಕೆ ಏರಿ ನಿಲ್ಲುತ್ತದೆ. ಯಾವುದೋ ಒಂದು ಸಂಕಲ್ಪವನ್ನು ಮಾಡಿಕೊಂಡು ದೃಢ ಮನಸ್ಕವಾಗಿದ್ದರೂ ; ಒಮ್ಮೊಮ್ಮೆ ಕಡಲಿನಲ್ಲಿ ಏಳುತ್ತಿದ್ದ ಅಲೆಗಳಂತೆ ಆತನ ಮನಸ್ಸಿನಲ್ಲಿ ಉಂಟಾಗುತ್ತಿದ್ದ ಭಾವೋದ್ವೇಗವನ್ನು ತುಮುಲವನ್ನು ಅಷ್ಟೇ ಪರಿಣಾಮಕಾರಿಯಾಗಿ ಅವರ ಲೇಖನಿ ಬಿಡಿಸಿದೆ :

> "ಸುತ್ತಲೂ ಕಡಲಿನ ತೆರೆಗಳು ಮೊರೆದವು. ಆದರೆ, ಆತನ ಹೃದಯದಲ್ಲಿ ಭಾವತರಂಗಗಳು ಇನ್ನೂ ಅತಿಶಯವಾಗಿ ಮೊರೆಯತೊಡಗಿದವು. ಭಾರತ ವರ್ಷದ ತುತ್ತ ತುದಿಯ ಬಂಡೆಯ ಮೇಲೆ ಕುಳಿತ ಆ ದೇಶಭಕ್ತ ಧೈರ್ಯ ಸನ್ಯಾಸಿಯು ಮಾತೃಭೂಮಿಯು ಭೂತ ಭವಿಷ್ಯದ್ವರ್ತಮಾನಗಳನ್ನು ಕುರಿತು ಚಿಂತಿಸತೊಡಗಿದನು........ ಒಮ್ಮೆ ಚಿಂತೆಗಳ ಭರದಲ್ಲಿ ನಡು ನಡುವೆ ನಿಟ್ಟುಸಿರು ಬಿಡುವನು. ಒಮ್ಮೆ, ಧ್ಯಾನಾಸಕ್ತನಾದ, ಮತ್ತೊಬ್ಬ ಮಹಾಬುದ್ಧನೋ ಎಂಬಂತೆ ಆತನ ವದನದಲ್ಲಿ ಜ್ಯೋತಿಯು ತಾಂಡವವಾಡುವುದು. ಒಮ್ಮೆ ಮಹಾವೀರ ನೋಪಾದಿಯಲ್ಲಿ ಮೆಲೆಯುವನು. ಒಮ್ಮೆ ಹಸುಳೆಯಂತೆ ದೀನನಾಗುವನು. ಒಮ್ಮೆ ಕಂಬನಿ ತುಂಬಿದ ಕಣ್ಣುಗಳನ್ನು ವಿಶಾಲವಾಗಿ ತೆರೆದು ಅನಂತವಾದ ಜಲನಿಧಿಯನ್ನು ಅನಿಮಿಷ ನಯನನಾಗಿ ನಿಟ್ಟಿಸುವನು........ ಒಮ್ಮೆ ಹರ್ಷ, ಒಮ್ಮೆ ದುಃಖ ; ಒಮ್ಮೆ ಸರಳತೆ, ಒಮ್ಮೆ ಗಾಂಭೀರ್ಯ ; ಒಮ್ಮೆ ಮುನಿಸು, ಒಮ್ಮೆ ಶಾಂತಿ ಹೀಗೆ ನಾನಾ ಭಾವಗಳಿಂದ ಆ ಓಜಸ್ವಿಯಾದ

ಸನ್ಯಾಸಿಯು ಕಡಲಿನೆದೆಯ ಬಡಬನಂತಾ ದನು" (ಪು. ೫)

ಎಲ್ಲರಲ್ಲಿಯೂ ಪ್ರಶ್ನಾರ್ಥಕವಾಗಿ ಎದ್ದುನಿಂತ ಈ ಅಪೂರ್ವ ಚೇತನ ಯಾವುದು, ಅವರಲ್ಲಿ ಈ ಚೈತನ್ಯ ಶಕ್ತಿ ಹೇಗೆ ಮೂಡಿಬಂತು ? ಎಂಬುದನ್ನು ಶ್ರೀ ಕುವೆಂಪು ಅವರು ಮುಂದಿನ ಪುಟಗಳಲ್ಲಿ ವಿವರವಾಗಿ, ಆದರೆ ಅಷ್ಟೇ ಉನ್ನತ ಮಟ್ಟದಲ್ಲಿ ಚಿತ್ರಿಸುತ್ತಾರೆ. ಒಂದೆಡೆ ಅವರು ಆ ದಿವ್ಯ ಚೇತನದ ಸಮಗ್ರ ಚಿತ್ರವನ್ನು ಹೀಗೆ ಕೊಡುತ್ತಾರೆ :

> "ನರೇಂದ್ರನು ಜನಿಸಿದನು ; ಬೆಳೆದನು ; ವಿದ್ಯಾರ್ಜನೆ ಮಾಡಿದನು; ವಿದ್ವನ್ಮಣಿಯಾದನು ; ಶ್ರೀ ಸ್ವಾಮಿ ವಿವೇಕಾನಂದನಾದನು ; ಲೋಕ ಕಲ್ಯಾಣ ಕೃತನಾದನು ; ನವಯುಗ ಪ್ರವರ್ತಕನಾದನು ; ಧರ್ಮ ಗುರುವಾದನು ; ಸರ್ವಧರ್ಮ ಸಮನ್ವಯಾ ಚಾರ್ಯನಾದನು ; ವಿಶ್ವ ವಿಖ್ಯಾತನಾದನು ; ಸರ್ವಜನ ವಂದಿತನಾದನು ; ಭಾರತ ವರ್ಷದ ಚಿರನೂತನ ಚೇತನ ಪುನರುತ್ಥಾನ ಕಾರಣನಾದನು ; ಆಚಂದ್ರಾರ್ಕ ಚಿರಸ್ಥಾಯಿಯಾದನು ! ಇದರ ರಹಸ್ಯವೇನು ?" (ಪು. ೨೬)

ಮುಂದೆ ಸ್ವಾಮಿ ವಿವೇಕಾನಂದರೆಂದು ಹೆಸರಾದ ಬಾಲಕ ನರೇಂದ್ರನ ಬಾಲ್ಯದ ಬದುಕಿನ ಒಂದೊಂದು ಘಟನೆಯನ್ನು ಲೇಖಕರು ಅತ್ಯಾಸಕ್ತಿಯಿಂದ ಪರಿಶೀಲಿಸಿ, ವಿವಿಧ ಕೋನಗಳಲ್ಲಿ ಗಮನಿಸಿ, ಮುಂದೆ ಮಹಾನ್ ವ್ಯಕ್ತಿಯೆನಿಸಿದ ಆ ದಿವ್ಯ ಚೇತನದ ಮೇಲೆ ಇವೆಲ್ಲವೂ ಹೇಗೆ ಪರಿಣಾಮ ಬೀರಿರಬಹುದೆಂಬುದನ್ನು ಮನಗಂಡು ಬಣ್ಣಿಸಿದ್ದಾರೆ. ಆ ಬಾಲಕನ ಮನೋಧರ್ಮ ಆಗಲೇ ಹೇಗೆ ಗೋಚರಿಸುತ್ತಿತ್ತೆಂಬುದನ್ನು ಚಿಕ್ಕಂದಿನ ಹಲವಾರು ಘಟನೆಗಳ ಮೂಲಕ ಸೂಚಿಸುತ್ತಾರೆ. ಮುಂದೆ ಯುಗ ಪರಿವರ್ತಕನೆಂದು ಕರೆಸಿಕೊಂಡ ಮಹಾಪುರುಷನೊಬ್ಬನ ಬಾಲ್ಯ ಜೀವನ ಕೂಡ ಎಷ್ಟೊಂದು ಚೇತೋಹಾರಿಯಾಗಿರುತ್ತದೆ ಎಂಬುದನ್ನು ಶ್ರೀ ಕುವೆಂಪು ಅವರು ಅದ್ವಿತೀಯವಾಗಿ ನಿರೂಪಿಸಿದ್ದಾರೆ. ನರೇಂದ್ರನು ಬಾಲ್ಯದಲ್ಲಿ ತುಂಬಾ ತುಂಟನಾಗಿದ್ದ ಎಂಬುದನ್ನು ಹೇಳುತ್ತ ಅದರ ಪರಾಕಾಷ್ಠತೆಯನ್ನು ಆತನ ತಾಯಿಯ ಬಾಯಿಂದ ಒಂದೇ ಮಾತಿನಲ್ಲಿ ಶ್ರೀ ಕುವೆಂಪು ಅವರು ಹೇಳಿಸಿ ಬಿಡುತ್ತಾರೆ - "ಮಗನನ್ನು ಕೊಡು ಎಂದು ನಾನು ಬೇಡಿದರೆ ಶಿವನು ಮಂಗನನ್ನು ಕೊಟ್ಟಿದ್ದಾನೆ" ಎಂದು ಆ ತಾಯಿ ಮಗನ ತುಂಟಾಟವನ್ನು ಕಂಡಾಗಲೆಲ್ಲಾ ಅಂದುಕೊಳ್ಳುತ್ತಿದ್ದಳು. ಆದರೆ ಆತನ ತುಂಟುತನದಂತೆಯೇ ಅವನ ಬಾಲ್ಯ ಜೀವನದಲ್ಲಿ ನಡೆದ ಹಲವು ವಿಚಿತ್ರ ಘಟನೆಗಳು ಎಲ್ಲರನ್ನೂ ಬೆರುಗುಗೊಳಿಸಿದ್ದುವು. ಅನೇಕರು ಆಗಲೇ ಈ ಬಾಲಕನಲ್ಲಿ ಮಹಿಮಾಮಯ ಭವಿಷ್ಯತ್ತನ್ನೂ ಕಂಡಿದ್ದರು. ಸ್ವಾತಂತ್ರ್ಯ ಪ್ರಿಯನೂ, ತೀಕ್ಷ್ಣಮತಿಯೂ -ಸಾಹಿತ್ಯ, ಸಂಗೀತ, ಕಲೆ, ಸೌಂದರ್ಯ ಹಾಗೂ ಭಾಷಾಭಿ ಮಾನಿಯೂ ಆಗಿದ್ದ ನರೇಂದ್ರನು ಬಹುಮುಖ ಪ್ರತಿಭೆಯ ಒಂದು ಅದ್ಭುತ ಶಕ್ತಿಯಂತಿದ್ದ ಎಂಬುದನ್ನೂ ಅವನ ಬಾಲ್ಯದ ಘಟನೆಗಳಿಂದಲೇ ಗುರುತಿಸುವಂತೆ ಕುವೆಂಪು ಅವರು ತಮ್ಮ ಅಪೂರ್ವ ಪ್ರತಿಭೆಯನ್ನು ತೋರಿದ್ದಾರೆ.

ಆ ದಿವ್ಯ ಚೇತನ ಮತ್ತೊಂದು ಮಹಾಚೇತನವಾದ ಶ್ರೀರಾಮಕೃಷ್ಣ ಪರಮಹಂಸರನ್ನು ಸಂದರ್ಶಿಸಿದ್ದು ಒಂದು ಆಕಸ್ಮಿಕ ಸಂದರ್ಭದಲ್ಲಿಯೇ. ಮೊದಲ ಭೇಟಿಯಲ್ಲಿಯೇ ಶ್ರೀ ರಾಮಕೃಷ್ಣರು ತಮ್ಮ ಅಂತರಂಗ ಶಿಷ್ಯನನ್ನು ಕಂಡುಕೊಂಡು ಒಮ್ಮೆ ದಕ್ಷಿಣೇಶ್ವರಕ್ಕೆ ಬರುವಂತೆ ಆಹ್ವಾನಿಸುತ್ತಾರೆ. ಕುವೆಂಪು ಅವರು ಈ ಸಂದರ್ಭವನ್ನು ಅತ್ಯದ್ಭುತವಾಗಿ ವಿವರಿಸಿದ್ದಾರೆ :

"ನೆರೆತ ನವಿರಿನ ಸನಾತನ ಪ್ರಾಚೀನವು, ಸಿರಜವ್ವನದ
ನೂತನ ಅರ್ವಾಚೀನವನ್ನು ಭವತಾರಿಣಿಯ ಪ್ರಶಾಂತ
ಮಂದಿರದಲ್ಲಿ ಸಂಧಿಸಲು ತನ್ನಡೆಗೆ ಆಹ್ವಾನಿಸಿತು !
ದಿವ್ಯ ಆಹ್ವಾನ !" (ಪು. ೫೩)

ಮುಂದೆ ಈ ಎರಡು ಮಹಾಚೇತನಗಳೂ ದಕ್ಷಿಣೇಶ್ವರದಲ್ಲಿ ಮೊದಲ ಬಾರಿಗೆ ಒಂದಾಗಿ ಸೇರಿದಾಗ ಪರಸ್ಪರ ಉಂಟಾದ ಅನುಭವಗಳನ್ನು ಭಾವನೆಗಳನ್ನು ತಿಳಿಸಲು ಲೇಖಕರು ಅತ್ಯಂತ ಜಾಣ್ಮೆಯಿಂದ ಅವರವರ ಮಾತುಗಳನ್ನೇ ಉದ್ಧರಿಸಿದ್ದಾರೆ.

ಈ ಅದ್ಭುತ ಶಕ್ತಿಗೆ ಶ್ರೀ ರಾಮಕೃಷ್ಣರ ಚೈತನ್ಯ ಚೇತೋಹಾರಿಯಾಗಿ ನಿಲ್ಲುತ್ತದೆ. ವಿವೇಕಾನಂದರಿಗೆ ಶ್ರೀ ರಾಮಕೃಷ್ಣರ ದರ್ಶನವಾದ ಮೇಲೆ ಅವರ ಬದುಕಿನಲ್ಲಿ ಒಂದು ನಿರ್ದಿಷ್ಟ ಗುರಿಯಲ್ಲಿ ನಡೆಯಲು ಕಾರಣವಾಗುತ್ತದೆ. ಈ ಗುರು ಶಿಷ್ಯರ ಸಂಬಂಧ ಅತ್ಯದ್ಭುತವಾದುದು. ಕುವೆಂಪು ಅವರು ಅದೆಲ್ಲವನ್ನು ಇನ್ನಿಲ್ಲವೆಂಬಂತೆ ಎಳೆ ಎಳೆಯಾಗಿ ಬಿಡಿಸಿ ಚಿತ್ರಿಸಿದ್ದಾರೆ. ಆ ಎರಡು ಮಹಾ ಚೇತನಗಳ ಸಂಬಂಧವನ್ನು ಕುರಿತು ಅವರು ಹೀಗೆ ಹೇಳಿದ್ದಾರೆ:

"ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಗುರು ಶಿಷ್ಯ ಸಂಬಂಧದಲ್ಲಿ ಒಂದು ಅಲೌಕಿಕತೆಯಿದೆ. ಅದು ಪ್ರಾಕೃತವಾಗಿಲ್ಲ : ಯೌಗಿಕವಾಗಿದೆ. ಅದು ಮಾಡಿದ ಉಪದೇಶದಂತಿಲ್ಲ ; ನೀಡಿದ ಆವೇಶದಂತಿದೆ. ಅದು ಎರಡು ವ್ಯಕ್ತಿಗಳಲ್ಲಿರುವ ಪರಿಚಯ ಮಾತ್ರದಂತಿಲ್ಲ. ಎರಡು ವ್ಯಕ್ತಿಗಳ ವಿದ್ಯುದಾಲಿಂಗನದಿಂದಹೊಮ್ಮಿದ ಅದ್ಭುತವಾದ ಆತ್ಮ ಜ್ಯೋತಿಯಂತಿದೆ. ಅವರಿಬ್ಬರೂ ಒಂದೇ ಶಕ್ತಿಯ ಎರಡು ಮುಖಗಳಂತಿದ್ದಾರೆ. ಒಬ್ಬರನ್ನು ಬಿಟ್ಟರೆ ಇನ್ನೊಬ್ಬರು ನಮ್ಮ ಭಾಗಕ್ಕಾದರೂ ಅಪೂರ್ಣವಾಗುತ್ತಾರೆ." (ಪು. ೯೨)

ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರಾಗಿ ಅವರು ನಿಯೋಜಿಸಿದ ಮಹತ್ಕಾರ್ಯವನ್ನು ಕೈಗೊಂಡು ಮುಂದುವರಿಸಿಕೊಂಡು ಹೋಗುವುದಕ್ಕಾಗಿಯೇ ಹುಟ್ಟಿಬಂದವರು ; ಈ ಇಬ್ಬರು ಮಹಾತ್ಮರ ಜನ್ಮ ಲೋಕಕಲ್ಯಾಣಕ್ಕಾಗಿಯೇ ಮೀಸಲಾದುದು ಎಂಬುದನ್ನು ಲೇಖಕರು ಅಂದವಾಗಿ ನಿರೂಪಿಸಿದ್ದಾರೆ. ಹುಟ್ಟಿನಿಂದಲೇ ಈ ಇಬ್ಬರು ವ್ಯಕ್ತಿಗಳಲ್ಲಿ ಒಂದು ಅಪೂರ್ವತೆಯನ್ನು ಗುರುತಿಸುತ್ತೇವೆ. ಶ್ರೀ ರಾಮಕೃಷ್ಣರಂತಹ ಮಹಾನ್ ವ್ಯಕ್ತಿಯನ್ನೇ ಮತ್ತೆ ಮತ್ತೆ ಪರೀಕ್ಷಿಸಿ ನಂತರ ಗುರುವನ್ನಾಗಿ ಒಪ್ಪಿಕೊಂಡ ವಿವೇಕಾನಂದರ ವ್ಯಕ್ತಿತ್ವವಾದರೂ ಸಾಮಾನ್ಯವಾದುದಲ್ಲ ಎಂಬುದು ಅವರ ಜೀವನ ಚಿತ್ರಣದುದ್ದಕ್ಕೂ ಅರಿವಾಗುವಂತೆ ಚಿತ್ರಿಸಲಾಗಿದೆ. ಅವರನ್ನು 'ಗುರು' ಎಂದು ಒಪ್ಪಿಕೊಂಡ ಮೇಲೆ ಸ್ವಾಮಿ ವಿವೇಕಾನಂದರು ಅವರ ಮಾರ್ಗದಲ್ಲಿಯೇ ತಮ್ಮ ಸಾಧನೆಯ ಹಾದಿಯನ್ನು ಹಿಡಿದು ಜಯಶಾಲಿಗಳಾಗುತ್ತಾರೆ. ದೇಶವಿದೇಶಗಳಲ್ಲಿ ತಮ್ಮ ಸಿಂಹ ಘರ್ಜನೆಯಿಂದ ಜ್ಞಾನದ ಅರಿವನ್ನೂ, ಮಾನವೀಯತೆಯ ಮರ್ಮವನ್ನು ಧರ್ಮದ ತಿರುಳನ್ನು ಬೋಧಿಸಿ ವಿಶ್ವಪ್ರಜೆಯೆನಿಸಿದರು. ಶ್ರೀ ರಾಮಕೃಷ್ಣ ಪರಮ ಹಂಸರು ದೈಹಿಕವಾಗಿ ಇಹಲೋಕದಿಂದ ಕಣ್ಮರೆಯಾದರೂ, ಅವರ ದಿವ್ಯಪ್ರಭೆ ಅವರ ಶಿಷ್ಯರಿಗೆ ದಾರಿದೀಪವಾಯಿತು. ಶ್ರೀ ಶಾರದಾಮಣಿದೇವಿಯರ ನೇತೃತ್ವದಲ್ಲಿ ಶ್ರೀ ರಾಮಕೃಷ್ಣರ ವಾಣಿಯನ್ನು ಭಾರತದ ಮೂಲೆ ಮೂಲೆಯನ್ನು

ಮುಟ್ಟಿಸುವ ವ್ಯವಸ್ಥೆ ಸಮರ್ಥ ರೀತಿ ಏರ್ಪಾಡಾಯಿತು. ಅವರ ಹೆಸರಿನಲ್ಲಿ ಸ್ಥಾಪನೆಗೊಂಡ ಸಂಘ ಸಂಸ್ಥೆಗಳು, ಆಶ್ರಮಗಳು - ಆಧ್ಯಾತ್ಮಿಕ ವಿಚಾರ ವಿಮರ್ಶೆಯ ಕೇಂದ್ರಗಳಾದುವು. ಸಮಾಜದಲ್ಲಿ ದಟ್ಟವಾಗಿ ಕವಿದಿದ್ದ ಅಂಧಕಾರವನ್ನು ತೊಡೆದು ಹಾಕುವ, ಅಜ್ಞಾನವನ್ನು ನಿವಾರಿಸುವ ಸಮಾಜವನ್ನು ಸಂಸ್ಕರಣ ಗೊಳಿಸುವ ಕಾರ್ಯದಲ್ಲಿ ನಿರತ ವಾದುವು. ಸ್ವಾಮಿ ವಿವೇಕಾನಂದರ ಸಿಂಹವಾಣಿ ಇದಕ್ಕಾಗಿ ಅನೇಕ ಶಿಷ್ಯರನ್ನು ಸಂಪಾದಿಸಿಕೊಟ್ಟಿತು. ಇದೆಲ್ಲದರ, ಇವರೆಲ್ಲರ ನೇತೃತ್ವವನ್ನು ವಿವೇಕಾನಂದರೇ ವಹಿಸಿದರು. ವೇದಾಂತ ಕೇಸರಿಯಂತಿದ್ದ ಅವರು ಭರತಖಂಡದ ಮೂಲೆ ಮೂಲೆಯನ್ನು ಹೊಕ್ಕು ಸನಾತನ ಹಿಂದೂ ಧರ್ಮದ ಹಿರಿಮೆ ಗರಿಮೆಗಳನ್ನು ಅದರ ಉಳಿವಿನ ಅವಶ್ಯಕತೆಗಳನ್ನು ಒತ್ತಿ ಒತ್ತಿ ಹೇಳಿದರು.

ಇದರಂತೆಯೇ ಭರತಖಂಡದ ಹೊರಗೆ ಶ್ರೀ ಸ್ವಾಮಿಜಿಯವರು ಕೈಗೊಂಡ ಯಾತ್ರೆ ಕೂಡ ಎಂದೆಂದಿಗೂ ಮರೆಯಲಾರದ್ದು. ಈ ಸಂದರ್ಭವನ್ನು ಕುರಿತು ಶ್ರೀ ಕುವೆಂಪು ಅವರು ಹೀಗೆ ಹೇಳುತ್ತಾರೆ. "ಭರತಖಂಡದ ಚರಿತ್ರೆಯಲ್ಲಿ ಸನ್ಯಾಸಿಯು ಕಡಲನ್ನು ಶಾಸ್ತ್ರ ನಿಷಿದ್ಧವಾದ ಕಾಳಜಲವನ್ನೂ ದಾಟಿದುದು ಅದೇ ಮೊತ್ತ ಮೊದಲು." (ಪು. ೧೩೮)

'ಕಡಲಿನಾಚೆ'ಗೆ ಕಾಲಿರಿಸಿ ಭಾರತದ ಕೀರ್ತಿಯನ್ನು ಬೆಳಗಿದ ಸ್ವಾಮಿ ವಿವೇಕಾನಂದರ ಬದುಕು ಇಲ್ಲಿಂದ ಮತ್ತೊಂದು ತಿರುವನ್ನು ಪಡೆದುಕೊಳ್ಳುತ್ತದೆ. ಅಮೆರಿಕಾದ ಚಿಕಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಅವರು ಮಾಡಿದ ಭಾಷಣ ಅಪೂರ್ವವಾದುದು. ಭಾರತದ ಖ್ಯಾತಿಯನ್ನು ವಿಶ್ವಮಟ್ಟಕ್ಕೆ ಏರಿಸಲು ಕಾರಣವಾದುದು. ತಮ್ಮ ಸರದಿ ಬಂದಾಗ ಅವರು ವೇದಿಕೆಯ ಮೇಲೆ ಎದ್ದು ನಿಂತು ಸಹಜ ಸುಂದರವಾದ ತಮ್ಮ ಕಂಠದಿಂದ ಅಮೆರಿಕೆಯ ಜನರನ್ನು ಉದ್ದೇಶಿಸಿ - ಅವರನ್ನು ಸಂಬೋಧಿಸಿದ ರೀತಿ ಮಾಡಿದ ಭಾಷಣ ರೋಮಾಂಚಕರ ವಾದುದು. ಇಡೀ ಅಮೇರಿಕದ ಜನತೆಯನ್ನು ತಬ್ಬಿಬ್ಬಾಗಿಸಿತು. ದಿಗ್ಮೂಢರನ್ನಾಗಿ ಮಾಡಿತು. ಎಲ್ಲರ ಮುಖದಲ್ಲೂ ಆಶ್ಚರ್ಯದ ಚಿಹ್ನೆಗಳು ಸ್ಪಷ್ಟವಾಗಿ ಗೋಚರಿಸತೊಡಗಿದವು. ಆ ಸಂದರ್ಭವನ್ನು ವಿವರಿಸುತ್ತ ಶ್ರೀ ಕುವೆಂಪು ಅವರ ಲೇಖನಿ ಇಮ್ಮಡಿ ಉತ್ಸಾಹವನ್ನು ತಾಳುತ್ತದೆ. ಅವರ ಮಾತುಗಳನ್ನೇ ಕೇಳಿ :

> "ಎದ್ದು ನಿಂತರು. ಒಂದು ಸಾರಿ ದೃಷ್ಟಿ ಪ್ರಸಾರ ಮಾಡಿ ಆ ಮಹಾ ಗುರುದೇವನನ್ನು ಸ್ಮರಿಸಿದರು, ಸರಸ್ವತೀ ದೇವಿಯನ್ನೂ ನೆನೆದರು. ಇದ್ದಕ್ಕಿದ್ದ ಹಾಗೆ ಅವರ ಹೃದಯದ ಅಂತರಾಳದ ಜ್ಞಾನ ಸೂರ್ಯನ ಜ್ಯೋತಿ ಮುಖ ಮಂಡಲದಲ್ಲಿ ಪ್ರಕಾಶಿಸಿತು. ಕಣ್ಣುಗಳು ಮಿಂಚಿದವು. ದಕ್ಷಿಣೇಶ್ವರದ ದೇವನಿಲಯದ ಪರಮ ಯೋಗೀಶ್ವರನ ದಿವ್ಯಶಕ್ತಿ ಅವರಲ್ಲಿ ಸಂಚರಿಸತೊಡಗಿತು".

ಆ ಮಹಾ ಸದಸ್ಯ ಮಂಡಲಿಯನ್ನು ಕುರಿತು "ಅಮೇರಿಕಾ ದೇಶದ ಭ್ರಾತೃಭಗಿನಿಯರೆ" ಎಂದು ಸಂಬೋಧಿಸಿದರು.

ಕೂಡಲೇ ಸಹಸ್ರಾರು ಸಿಡಿಲುಗಳು ಕೋಲಾಟವಾಡುವಂತೆ ದೊಡ್ಡ ಸದ್ದಾಯಿತು. ಸಹಸ್ರ ಸಹಸ್ರ ಜನರ ಕರತಾಡನದ ಮಹಾಧ್ವನಿಯಿಂದ ಮಂದಿರವೆಲ್ಲವೂ ಪ್ರತಿಧ್ವನಿತವಾಗಿ ಕಿವಿ ಕಿವುಡುಗಟ್ಟುವಂತಾಯಿತು. ನೆರೆದಿದ್ದವರೆಲ್ಲರಿಗೂ ಹುಚ್ಚು. ಸಂತಸದ ಹುಚ್ಚು ! ಸ್ವಾಮೀಜಿ ವಿಸ್ಮಯ

ಸ್ತಂಭಿತರಾದರು. ಈ ಬ್ರಹ್ಮನಿನಾದದ ಅರ್ಥವೇನು ? ಆಗ ಗೊತ್ತಾಯಿತು. ವಾಣಿ ತಮಗೆ ಬೆಂಬಲವಾಗಿದ್ದಾಳೆಂದು, ಸಂಪೂರ್ಣವಾಗಿ ಎರಡು ನಿಮಿಷಗಳವರೆಗೆ ಉತ್ಸಾಹ ಘೋಷ ನಿಲ್ಲಲಿಲ್ಲ. ಉಳಿದವರೆಲ್ಲರೂ'ಮಹನೀಯರೆ, ಮಹಿಳೆಯರೇ' ಎಂದು ಮೊದಲಾಗಿ ಸಂಬೋಧಿಸಿದ್ದರು. ಆದ್ದರಿಂದ 'ಭ್ರಾತೃ ಭಗಿನಿಯರೆ' ಎಂಬ ಸಂಬೋಧನೆ ಅವರ ಹೃದಯಗಳನ್ನು ಹುಚ್ಚೆಬ್ಬಿಸಿತು." (ಪು. ೧೪೭)

ಶ್ರೀ ರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರಾಗಿ ಸ್ವಾಮಿ ವಿವೇಕಾನಂದರು ದೇಶ ವಿದೇಶಗಳಲ್ಲಿ ಮಾನವಕೋಟಿಯ ಉದ್ಧಾರಕ್ಕಾಗಿ ಮಾಡಿದ ಸಾಧನೆ ಸಾಮಾನ್ಯವಾದುದಲ್ಲ. ಭಾರತದ ಆಧ್ಯಾತ್ಮಿಕ ಪುನರುಜ್ಜೀವನ ಕಾರ್ಯದಲ್ಲಿ ನಿರತರಾಗಿ ಶ್ರೀರಾಮಕೃಷ್ಣ ಪರಮಹಂಸರ ಹೆಸರಿನಲ್ಲಿ ದೊಡ್ಡ 'ಸಂಘ'ವನ್ನೇ ಸ್ಥಾಪಿಸಿ, ನೂರಾರು ಶಿಷ್ಯರನ್ನು ಸಂಪಾದಿಸಿ - ಭಾರತದ ಜನತೆಯ ಉದ್ಧಾರಕ್ಕಾಗಿ ಪಣತೊಟ್ಟು, ನಿಂತಂತೆಯೇ, ವಿದೇಶಗಳಿಂದಲೂ ಆಧ್ಯಾತ್ಮಿಕ ಪಿಪಾಸುಗಳಾಗಿ ಬಂದವರಿಗೆ ದಾರಿ ತೋರಿದರು. ಜನರ ದೈಹಿಕ, ಮಾನಸಿಕ ಹಾಗೂ ಪಾರಮಾರ್ಥಿಕ ಉನ್ನತಿಗೆ ಸಾಧನವಾಗುವಂತೆಯಷ್ಟೇ ಅಲ್ಲದೆ, ಮಾನವನ ಸರ್ವತೋಮುಖ ಪ್ರಗತಿಗೆ ಅನುಕೂಲವಾಗುವಂತೆ ಉದ್ದೇಶಿಸಿ ಹಲವು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ವ್ಯವಸ್ಥಿತವಾದ ರೀತಿಯಲ್ಲಿ ಅದನ್ನು ಪ್ರಸಾರ ಮಾಡತೊಡಗಿದರು.

ಶ್ರೀ ಕುವೆಂಪು ಅವರು, ಸ್ವಾಮಿ ವಿವೇಕಾನಂದರ ಈ ಸಾಧನೆಯ ಹಾದಿಯನ್ನು 'ವೇದಾಂತ ಕೇಸರಿ'ಯ ಮಹತ್ಸಾಧನೆಯನ್ನು 'ಯುಗ ಪ್ರವರ್ತಕ'ರೆಂದು ಕರೆಸಿಕೊಂಡ ಆ ಮಹಾನ್ ವ್ಯಕ್ತಿಯ ದಿವ್ಯಶಕ್ತಿಯನ್ನು ಮಾನವ ಕುಲದ ಬಗೆಗೆ, ಆತ್ಮೋದ್ಧಾರದ ಬಗೆಗೆ ಅವರಿಗಿದ್ದ ಕಾಳಜಿಯನ್ನು ಎಣೆಯಿಲ್ಲದೆ ಬಣ್ಣಿಸಿದ್ದಾರೆ. ಅವರು ಸುತ್ತಿದ ಪ್ರದೇಶದ ವಿಸ್ತೀರ್ಣ, ಮಾಡಿದ ಭಾಷಣಗಳ ಸಂಖ್ಯೆ, ಸಂದರ್ಶಿಸಿದ ಜನಗಳ ಗುಂಪು ಎಣಿಕೆಗೆ ಸಿಗಲಾರದಂತಹುದು. ಆ ಮಹಾಚೇತನದ ಚೈತನ್ಯಶಕ್ತಿ ಅಷ್ಟೊಂದು ಅಪರಿಮಿತವಾದುದು, ಅದ್ವಿತೀಯವಾದುದು.

ಇಂತಹ ಅಮರಜೀವಿಯ 'ಜೀವನ ಸಂಧ್ಯೆ'ಯನ್ನು ಕುವೆಂಪು ಅವರು ಅಷ್ಟೇ ಧ್ವನಿಪೂರ್ಣವಾಗಿ ನಿರೂಪಿಸಿದ್ದಾರೆ. ಅಲ್ಪಾಯುವಾದ ಅವರು ತಮ್ಮ ಜೀವಿತಾವಧಿಯಲ್ಲಿ ಮಾಡಿದ ಮಹತ್ಸಾಧನೆ ಹಲವು ಜನ್ಮಗಳಲ್ಲಿ ಒಬ್ಬ ಸಾಧಿಸಲಾರದ್ದು, ಯೋಜಿಸಲಾರದ್ದು. "ವಿವೇಕಾನಂದರ ಲೋಕಾನುಬೋಧನೆಯು ಗ್ರಂಥ ಭಂಡಾರದಿಂದ ಹೊರಟಿದುದಲ್ಲ, ಶ್ರವಣ ಪರಿಚಯದಿಂದ ಬಂದುದಲ್ಲ, ಅದು ಅವರ ಅಂತರಾತ್ಮ ವಿಕಸನದಿಂದ ಗಿಡದಿಂದ ಹೂವು ಹುಟ್ಟುವಂತೆ ತಾನಾಗಿ ಹುಟ್ಟಿಬಂದುದು. ಆದುದರಿಂದಲೇ ಅದರಲ್ಲಿ ಒಂದು ಜೀವಧ್ವನಿ, ಒಂದು ಜೀವೋತ್ತೇಜಕ ಪ್ರಭೆ, ಒಂದು ಜೀವನೋಪಯುಕ್ತ ಶಕ್ತಿ - ಇವು ತುಂಬಿವೆ." (ಮುನ್ನುಡಿ)

ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣ ಪರಮಹಂಸರಂತೆಯೇ ದೈವಾಂಶ ಸಂಭೂತರು. ಇಲ್ಲವಾಗಿದ್ದರೆ ಒಬ್ಬ ವ್ಯಕ್ತಿ ಇಷ್ಟು ಅಲ್ಪಾವಧಿಯಲ್ಲಿ ಇಡೀ ವಿಶ್ವವನ್ನೇ ಆಕರ್ಷಿಸಿ, ಇಡೀ ವಿಶ್ವಕ್ಕೇ ಬೆಳಕಾಗಿ ಬೆಳಗಲು ಸಾಧ್ಯವಾಗುತ್ತಿರಲಿಲ್ಲ. ಇಂತಹ ಮಹಾನ್ ವ್ಯಕ್ತಿಯ ಅಂತ್ಯ ಅಲ್ಪಾಯುವಾಗಿರುವಾಗಲೇ ಸಂಭವಿಸಿದ್ದು ಒಂದು ದುರಂತವೇ ಸರಿ.

'ತಂಗಾಳಿಯಂತೆ ಸುಳಿದು, ಬಿರುಗಾಳಿಯಂತೆ ಬ್ರಹ್ಮಾಂಡವನ್ನೇ ಬೆರಗುಗೊಳಿಸಿ ನೂತನ ಜಾಗೃತಿಯನ್ನುಂಟುಮಾಡಿ ತೆರಳಿದ ಈ ವಿಭೂತಿ ಪುರುಷನ ದಿವ್ಯಕಥೆ ಕುವೆಂಪು ಅವರ

ಮಾತಿನಲ್ಲಿ ಮಹಾಕಾವ್ಯದಂತೆ ಒಡಮೂಡಿ ಬಂದಿದೆ."[೨]

ಯೋಗಿವರ್ಯ ಸ್ವಾಮಿ ವಿವೇಕಾನಂದರ ಅನಂತ ನಿದ್ರೆಯನ್ನು, ಚಿರಮೌನವನ್ನು ಕುವೆಂಪು ಲೇಖನಿ ತಕ್ಕ ರೀತಿಯಲ್ಲಿ ನಿರೂಪಿಸಿದೆ. ಆಧ್ಯಾತ್ಮಿಕ ಮಹಾಪುರುಷನಿಗೆ ತಕ್ಕ ಅಂತಿಮ ನುಡಿ. ಲೇಖಕರ ನುಡಿಗಳನ್ನೇ ಕೇಳಿ :

> "ಯೋಗಿವರ್ಯನು ಅನಂತನಿದ್ರೆಯಲ್ಲಿದ್ದನು ! ಕವಿದಿದ್ದ ಕಗ್ಗತ್ತಲೆಯ ಅಂತರಾಳದಿಂದ ಬಂದು ಜಗನ್ಮಾತೆ ತನ್ನ ರಣ ಶ್ರಾಂತ ವೀರ ಪುತ್ರನನ್ನು ಎದೆಗಪ್ಪಿಕೊಂಡು ಹೋಗಿಬಿಟ್ಟಿದ್ದಳು. ಯೋಗಿ ಅಂತರ್ಧಾನವಾಗಿದ್ದನು ! ಮಂತ್ರದ್ರಷ್ಟನು ಮಾಯವಾಗಿದ್ದನು ! ಶ್ರೀರಾಮಕೃಷ್ಣ ಪರಮಹಂಸರ ಪ್ರಿಯತಮ ಶಿಷ್ಯನು ಗುರು ಚರಣಸ್ಥನಾಗಿದ್ದನು ! ವೇದಾಂತ ಕೇಸರಿಯಾದ ಜಗದ್ಗುರು, ಸನಾತನ ಧರ್ಮ ಮೂರ್ತಿ, ವೇದಾಂತ ತತ್ವಗತನಾಗಿದ್ದನು ! ನರನಾಗಿ ಬಂದ ವರಮಹರ್ಷಿ ನಾರಾಯಣನಲ್ಲಿ ಕಣ್ಮರೆಯಾಗಿದ್ದನು. (ಪು. ೨೪೬)

ಶ್ರೀ ಕುವೆಂಪು ಅವರು ಭಾವಸಮಾಧಿಯಲ್ಲಿ ನಿಂತು ಈ ಮಹಾಪುರುಷನ ಜೀವನವನ್ನು ಕೃತಿಗಿಳಿಸಿದ್ದಾರೆ. ಅದು ಕೇವಲ ಒಬ್ಬ ವ್ಯಕ್ತಿಯ ಜೀವನದ ಘಟನೆಗಳ ನಿರೂಪಣೆ ಎಂದಷ್ಟೇ ಭಾವಿಸದೆ, ಆ ಯೋಗಿಯ ಅಂತರಂಗದಲ್ಲಿ ಬೆರೆತು ಒಂದಾಗಿ ಸಕಲ ಸಹಜ ಸೌಂದರ್ಯ ದೊಂದಿಗೆ ಭವ್ಯ ಮೂರ್ತಿಯೊಂದನ್ನು ಕಡೆದು ನಿಲ್ಲಿಸಿದ್ದಾರೆ. ಜೀವನ ಚರಿತ್ರೆಗಳ ಸಾಲಿನಲ್ಲಿ ಇದೊಂದು ಅನರ್ಘ್ಯ ರತ್ನ.

೨

"ನಂದಿಗೆ ನಮಸ್ಕರಿಸಿ ಈಶ್ವರನನ್ನು ಕಾಣಬಯಸುವಂತೆ ಶ್ರೀ ಕುವೆಂಪು ಅವರು ಮೊದಲು ಶ್ರೀ ವಿವೇಕಾನಂದರ ಮಹತ್ಪೂರ್ಣವಾದ ಜೀವನವನ್ನು ಅವಲೋಕಿಸಿ ಅನಂತರ ಶ್ರೀ ರಾಮಕೃಷ್ಣ ಪರಮಹಂಸರ ದಿವ್ಯ ಜೀವನವನ್ನು ಪ್ರಕಟಿಸಿ"[೩] ಶ್ರೀ ರಾಮಕೃಷ್ಣ ಪರಮಹಂಸರಂಥ ಮಹಾನ್ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವ ದಾರಿಯನ್ನು ತೋರಿಸಿಕೊಟ್ಟಿದ್ದಾರೆ. ಶ್ರೀ ವಿವೇಕಾನಂದರ ಬದುಕು ಶ್ರವಣಬೆಳಗೊಳದ ಗೊಮ್ಮಟನಂತೆ ದೃಷ್ಟಿಗೋಚರವಾದುದು. ಆದರೆ, ಶ್ರೀರಾಮ ಕೃಷ್ಣರದು ಬೇಲೂರಿನ ಶಿಲ್ಪ ಕಲೆಯಂತೆ ಸೂಕ್ಷ್ಮ ದೃಷ್ಟಿಗೆ ಮಾತ್ರ ಗೋಚರಿಸುವಂತಹುದು. ಇನ್ನೂ ಬಹಳ ದೂರದಲ್ಲಿರುವಾಗಲೇ ಬಹಳ ಎತ್ತರದಲ್ಲಿ ಕಾಣಿಸಿಕೊಂಡು ತನ್ನ ಭವ್ಯ ರೂಪವನ್ನು ತೋರುವುದರ ಮೂಲಕ ಶ್ರವಣಬೆಳಗೊಳದ ಗೊಮ್ಮಟ ಆಕರ್ಷಿಸಿದರೆ ; ಬೇಲೂರಿನ ಶಿಲಾಬಾಲಿಕೆಯರು ಅಗೋಚರವಾಗಿ ನಿಂತು ನಮ್ಮ ಶ್ರಮದಿಂದಲೇ ಅವುಗಳನ್ನು ಅರಿಯುವ, ಅರ್ಥೈಸಿ ಕೊಳ್ಳುವ, ಕೊನೆಗೆ ಆನಂದಿಸುವ ಸ್ಥಿತಿಗೆ ಎಳೆದೊಯ್ಯುತ್ತವೆ. ಮೊದಲು ಗೊಮ್ಮಟನಂತಹ ಚಿತ್ರವನ್ನು ನೋಡುವುದರ ಮೂಲಕ - ಕಲೆಯ ಆಸಕ್ತಿಯನ್ನು ಬೆಳೆಸಿಕೊಂಡು, ಅನಂತರ ಕಲೆಯ ಬಲೆಯ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು ಬಿಡಿಸಿ ನೋಡುವ, ಅರ್ಥೈಸಿಕೊಳ್ಳುವ ಸಾಹಸವನ್ನು ಮಾಡಬೇಕಾಗುತ್ತದೆ. ಶ್ರೀ ಕುವೆಂಪು ಅವರು ಆ ಕಾರ್ಯವನ್ನು ಈ ಮೂಲಕ ಮಾಡಿ ತೋರಿಸಿದ್ದಾರೆ.

---

೨. ಡಾ. ಜಿ. ವರದರಾಜಾರಾವ್ - ಗಂಗೋತ್ರಿ. ಪು. ೬೬೦

೩. ಅದೇ. ಪು. ೯೯೦

ಶ್ರೀ ರಾಮಕೃಷ್ಣ ಪರಮಹಂಸರು ಅವತಾರ ಪುರುಷರು. ಮಹಾನ್ ವ್ಯಕ್ತಿತ್ವವುಳ್ಳ ಅಪೂರ್ವ ಶಕ್ತಿಪುರುಷರು. ಅವರ ಜನ್ಮಧಾರಣೆ ಒಂದು ಮಹತ್ತರವಾದ ಕಾರಣಕ್ಕಾಗಿ ಉಂಟಾದದ್ದು. ಲೋಕದ ವ್ಯವಹಾರ ಹದಗೆಟ್ಟಾಗ ಅದನ್ನು ಸರಿಪಡಿಸಲು ಆಗಾಗ್ಗೆ ಅವತಾರ ಪುರುಷರು ಜನ್ಮವೆತ್ತಿ ಬರುವಂತೆ ಜನ್ಮೆವೆತ್ತಿ ಬಂದವರು. ಲೋಕಹಿತವನ್ನು ಬಯಸಿದವರು. ಜಾತಿ ಮತ ಭೇದಗಳನ್ನು ತೊಡೆದು ಹಾಕಿ, ನಾನಾ ಧರ್ಮ, ಪಂಥಗಳ ಗೊಂದಲವನ್ನು ನಿವಾರಿಸಿ, ಸರ್ವಧರ್ಮ ಸಮನ್ವಯ ಸಾಧಿಸಬಲ್ಲ ಮಹಾಪುರುಷನೊಬ್ಬನ ಅಗತ್ಯ ಅನಿವಾರ್ಯವೆಂಬ ಸಂದರ್ಭದಲ್ಲಿ ಜನ್ಮ ತಾಳಿದ ಮಹಾನ್ ವ್ಯಕ್ತಿ - ಶ್ರೀ ರಾಮಕೃಷ್ಣ ಪರಮಹಂಸರು. ಸದ್ದು ಗದ್ದಲವಿಲ್ಲದೆ ಸಾಧನೆಗಳನ್ನು ಮಾಡಿ ಸಿದ್ಧಿಯನ್ನು ಪಡೆದವರು. ಭಾರತೀಯರ ಭಾರತೀಯತ್ವ ಬಣ್ಣಗೆಡುತ್ತಿದ್ದ ಕಾಲದಲ್ಲಿ ಅದಕ್ಕೆ ರಕ್ಷಣೆಯನ್ನು ನೀಡಲು ಮುಂದಾದವರು. ಶ್ರೀ ವಿವೇಕಾನಂದರಂತಹ ಮಹಾನ್ ಶಿಷ್ಯನನ್ನು ಪಡೆದು - ತಾವು ಮೂಲಮೂರ್ತಿ ಎನಿಸಿ, ಅವರನ್ನು ಉತ್ಸವ ಮೂರ್ತಿಯಾಗಿಸಿ ತಮ್ಮ ಉಪದೇಶವನ್ನು ದೇಶವಿದೇಶಗಳಲ್ಲಿ ಹಬ್ಬುವಂತೆ ಮಾಡಿ ವಿಶ್ವಕ್ಕೇ ಬೆಳಕಾದ - ದಿವ್ಯ ಭವ್ಯ ಚೇತನ ಶ್ರೀರಾಮಕೃಷ್ಣ ಪರಮಹಂಸರು.

ಒಟ್ಟು ಒಂಬತ್ತು ಭಾಗಗಳಲ್ಲಿ ಶ್ರೀ ಪರಮಹಂಸರ ಬದುಕಿನ ಜಾಡನ್ನು ಬಿಡಿಸಿ ತೋರಿದ್ದಾರೆ. 'ಪೀಠಿಕಾ ಭಾಗ'ದಲ್ಲಿ ಅಂದಿನ ಭಾರತದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಚಯಿಸಿ ಕೊಟ್ಟಿದ್ದಾರೆ. ರಾಜಕೀಯವಾಗಿ ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಂದಿನ ಭಾರತದ ಪರಿಸ್ಥಿತಿ ಏನಿತ್ತೆಂಬುದನ್ನು ವಿವರಿಸುತ್ತಾ - "ದೇಶದಲ್ಲಿ ಸಮಾಜಗಳೂ, ಸಂಸ್ಥೆಗಳೂ ಆಂದೋಲನಗಳೂ ಭಿನ್ನಾಭಿಪ್ರಾಯಗಳೂ ತುಮುಲವಾಗುತ್ತಿದ್ದುವು. ಭರತಖಂಡ ಕುಲುಮೆಯ ಮೇಲಿನ ಮೂಷೆಯಂತಿತ್ತು........."[೪]

ಮುಂದಿನ ಭಾಗಗಳಲ್ಲಿ ಈ ಚೈತನ್ಯ ಶಕ್ತಿ ಅವತರಿಸಿ ಮಾಡಿದ ಸಾಧನೆ ಸಿದ್ಧಿಗಳ ಅಪೂರ್ವ ವಿವರಗಳನ್ನು ಅಷ್ಟೇ ಸತ್ಯಪೂರ್ಣವಾಗಿ, ಸ್ವಾರಸ್ಯಪೂರ್ಣವಾಗಿ ನೀಡುತ್ತಾ ಹೋಗಿದ್ದಾರೆ.

ಇತಿಹಾಸವು ಸಮನ್ವಯಾಚಾರ್ಯನೊಬ್ಬನನ್ನು ನಿರೀಕ್ಷಿಸುತ್ತಿದ್ದ ಸಮಯದಲ್ಲಿ - ಬುದಿರಾಮ ಚಟ್ಟೋಪಾಧ್ಯಾಯ - ಚಂದ್ರಮಣಿದೇವಿಯವರಿಗೆ 'ಗದಾಧರನು' ಉದಯಿಸುತ್ತಾನೆ. ಇವನೇ ಮುಂದೆ ಶ್ರೀ ರಾಮಕೃಷ್ಣ ಪರಮಹಂಸ ಎಂಬ ಹೆಸರಿನಲ್ಲಿ ಲೋಕ ಕಲ್ಯಾಣ ಸಾಧಕರಾಗಿ ಜಗದ್ವಿಖ್ಯಾತರಾದವರು. ಶ್ರೀ ಕುವೆಂಪು ಅವರು ಗದಾಧರನ ಬಾಲ್ಯ ಜೀವನವನ್ನು ತಕ್ಕ ರೀತಿಯಲ್ಲಿ ಬಣ್ಣಿಸಿದ್ದಾರೆ. ಅಂತಹ ಮಹಾಪುರುಷನೊಬ್ಬನ ಉದಯದ ಸಂದರ್ಭವನ್ನೂ, ಅದರ ವಿಶೇಷತೆಯನ್ನು ಅರ್ಥಗರ್ಭಿತವಾಗಿಸಿದ್ದಾರೆ. ಅಲ್ಲಿಯ ಹಲವು ಸನ್ನಿವೇಶಗಳು ಪವಾಡಗಳಂತೆ ಕೆಲವರಿಗೆ ಅನ್ನಿಸಬಹುದಾದರೂ ಅದು ವ್ಯಾಪಕ ವಿಚಾರದ ಅಭಾವದ ಕಾರಣದಿಂದ ಎನ್ನಬೇಕಾಗುತ್ತದೆ. ಮಹಾತ್ಮರ ಉದಯ ಅನೇಕ ವೇಳೆ ಅಪೂರ್ವ ಘಟನಾವಳಿಗಳಿಂದ ಕೂಡಿರುತ್ತದೆಯೆಂಬುದನ್ನು ಸುಲಭವಾಗಿ ಅಲ್ಲಗಳೆಯಲಾಗುವುದಿಲ್ಲ.

ಬಾಲಕ ಗದಾಧರನ ಬಾಲ್ಯ ಜೀವನವನ್ನು, ಹಲವು ಘಟನೆಗಳನ್ನು ಶ್ರೀ ಕುವೆಂಪು ಅವರು ಆಕರ್ಷಕವಾದ ರೀತಿಯಲ್ಲಿ ನಿರೂಪಿಸಿದ್ದಾರೆ. ಬಾಲ್ಯ ಜೀವನದ ಕೆಲವು ಅತಿರೇಕಗಳನ್ನು, ಆಧ್ಯಾತ್ಮಿಕಾಸಕ್ತಿ

೪. ಕುವೆಂಪು - ಶ್ರೀ ರಾಮಕೃಷ್ಣ ಪರಮಹಂಸರು. ಪು. ೧೪

ಸನ್ಯಾಸ ಜೀವನಾಸಕ್ತಿ, ಶಿವಪೂಜಾಸಕ್ತಿ ಮುಂತಾದುವುಗಳನ್ನು ವರ್ಣಿಸಿ ; ಇವುಗಳು ತಾಯಿಯಲ್ಲಿ ಉಂಟು ಮಾಡಿದ ತಳಮಳವನ್ನೂ, ನಾಲ್ಕು ಗೋಡೆಗಳ ಮಧ್ಯೆ ಕುಳಿತು ಕಲಿಯುವ ವಿದ್ಯೆಯಿಂದ ದೂರವಾದ ಈತನನ್ನು ಕಂಡು ಅಣ್ಣ ಪಟ್ಟ ಕಳವಳವನ್ನು ಲೇಖಕರು ಔಚಿತ್ಯವರಿತು ಚಿತ್ರಿಸಿದ್ದಾರೆ.

ಶ್ರೀರಾಮಕೃಷ್ಣ ಪರಮಹಂಸರ ಸಾಧಕ ಬದುಕನ್ನು ಮುಂದಿನ 'ಚೈತ್ರ ಯಾತ್ರೆ' ಭಾಗದಲ್ಲಿ ಅತ್ಯದ್ಭುತವಾಗಿ ನಿರೂಪಿಸಿದ್ದಾರೆ. ತಂದೆಯ ಸ್ಥಾನದಲ್ಲಿದ್ದು ಅವರ ಬದುಕಿಗೆ ಆಶ್ರಿತನಾಗಿದ್ದ ಪ್ರೀತಿಯ ಅಣ್ಣ ತೀರಿಕೊಂಡ ಮೇಲೆ, ಲೋಕದ ನಶ್ವರತೆಯಲ್ಲಿ ನಂಬುಗೆ ಹೆಚ್ಚು ಸ್ಥಿರಪಟ್ಟಂತಾಗಿ ಅವರ ಗುರಿಯು ದೃಢಗೊಳ್ಳುತ್ತದೆ. ಇದರಿಂದಾಗಿ "ಈಶ್ವರ ಪರವಾದ ವ್ಯಾಕುಲತೆ ನೂರ್ಮಡಿಯಾಯಿತು. ಚಿಂತೆ ಅಗಾಧವಾಯಿತು. ಸಾಹಸವು ಕಂಕಣಧಾರಿ ಯಾಯಿತು. ಮಹಾಹಂಸವು ಪರ್ವತೋಪಮಭೀಷಣ ತರಂಗಮಯವಾದ ಅನಂತವಾದ ಸರ್ವದಾ ವಿಕ್ಷುಬ್ಧ ಸಂಸಾರ ಸಮುದ್ರವನ್ನು ಹಾರಿ ದಾಟಲೆಂದು ತನ್ನ ಶ್ವೇತ ವಿಶಾಲ ಪಕ್ಷ ವಿಸ್ಫಾಲನಗೈದು ಮಹಾಯಾತ್ರೆಗ ಸಿದ್ಧವಾಯಿತು."[೫]

ಶ್ರೀ ಕುವೆಂಪು ಅವರು ಈ ಭಾಗವನ್ನು 'ಚೈತ್ರಯಾತ್ರೆ' ಎಂದು ಕರೆದಿರುವುದೂ ಅನ್ವರ್ಥವೂ, ಹೆಚ್ಚು ಅರ್ಥಪೂರ್ಣವೂ ಆಗಿದೆ. ರಾಮಕೃಷ್ಣರು ತಮ್ಮ ಸಾಧನೆಯ ಹಾದಿಯಲ್ಲಿ ಆಧ್ಯಾತ್ಮಿಕ ಲೋಕದ ಒಂದು ಯಾತ್ರೆಯನ್ನೇ ಕೈಗೊಳ್ಳುತ್ತಾರೆ. ಧರ್ಮಸಂಬಂಧವಾದ, ಮತಸಂಬಂಧವಾದ, ಪೂಜಾಸಂಬಂಧವಾದ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳನ್ನು ಅರಿಯಲು ಹೋರಾಟ ನಡೆಸುತ್ತಾರೆ. ಅವರು ಮಾಡುತ್ತಿದ್ದ ಪೂಜಾ ರೀತಿ ಸಾಮಾನ್ಯವಾದುದಾಗಿರಲಿಲ್ಲ. ಸಂಪೂರ್ಣವಾಗಿ ತಮ್ಮನ್ನೇ ಅದಕ್ಕೆ ಅರ್ಪಿಸಿಕೊಂಡಿದ್ದರು. ನಿದ್ರಾಹಾರವಿಲ್ಲದೆ, ಹಗಲಿರುಳೆನ್ನದೆ, ಆಯಾಸವನ್ನೆಣಿಸದೆ ಸದಾ ಆ ದೇವಿಯ ಸ್ಮರಣೆಯಲ್ಲಿ ಅವಳ ದರ್ಶನ ಭಾಗ್ಯಕ್ಕಾಗಿ ಹಾತೊರೆದು ಕುಳಿತರು. ಅವರ ಒಂದೊಂದು ವರ್ತನೆಯೂ ವಿಚಿತ್ರವಾಗಿ, ಹುಚ್ಚುತನದ್ದಾಗಿ - ದೂರದವರಿಗಿರಲಿ, ಅವರ ಬಳಿಯೇ ತೀರ ಹತ್ತಿರದಲ್ಲಿದ್ದವರಿಗೂ ಅನ್ನಿಸಿತು. ಲೇಖಕರ ಮಾತಿನಲ್ಲಿಯೇ ಹೇಳುವುದಾದರೆ:

".............ಆರಾಧನೆ ಮುಗಿದ ಮೇಲೆ ತಾಯಿಯ ವಿಗ್ರಹದ ಎದುರು ಅಲುಗಾಡದೆ ಬಹುಕಾಲ ಧ್ಯಾನಸ್ಥರಾಗಿ ಕುಳಿತು ಬಿಡುವರು. ಕೆಲವು ಬಾರಿ ರಾಮಪ್ರಸಾದ, ಕಮಲಾಕಾಂತ ಮೊದಲಾದ ವಂಗದೇಶದ ಭಕ್ತ ಕವಿಗಳ ಕೀರ್ತನೆಗಳನ್ನು ಹಾಡಿ ಹಾಡಿ ಹರುಷದಲಿ ಮೈ ಮರೆತು ಬಿಡುವರು. ಹಿಂದಿನಂತೆ ಜನಗಳ ಮಾತುಕತೆಗಳಲ್ಲಿ ಭಾಗಿಯಾಗುವುದನ್ನು ನಿಲ್ಲಿಸಿಬಿಟ್ಟರು. ನಡುಹಗಲಿನಲ್ಲಿಯೂ, ನಡುರಾತ್ರಿಯಲ್ಲಿಯೂ ಮಂದಿಯ ಮಂದೆಯಿಂದ ಹೊರಬಿದ್ದು ಧ್ಯಾನಕ್ಕಾಗಿ ಪಂಚವಟಿಯ ಅರಣ್ಯಕ್ಕೆ ಹೋಗುತ್ತಿದ್ದರು.........ಎಷ್ಟು ಪ್ರಯತ್ನಪಟ್ಟರೂ ಜಯಶೀಲನಾಗದ ಹೃದಯನು ಕುಪಿತನಾಗಿ ಕಡೆಗೆ ಒಂದು ದಿನ ಮಾವನು ಏನು ಮಾಡುತ್ತಾನೆ ಎಂಬುದನ್ನು ನೋಡಿಯೇ ಬಿಡುವೆನೆಂದು ನಿಶ್ಚಯಿಸಿ ನುಗ್ಗಿದನು. ಕಣ್ಣಿಗೆ ಬಿದ್ದ ದೃಶ್ಯದಿಂದ ದಿಗ್ಭ್ರಾಂತನಾದನು. ಪರಮಹಂಸರು ನೆಲ್ಲಿಯ ಮರದ ಬುಡದಲ್ಲಿ ನಿಷ್ಪಂದ ಧ್ಯಾನಮೂರ್ತಿಯಾಗಿ ಕುಳಿತಿದ್ದರು. ಬಾಹ್ಯಪ್ರಜ್ಞೆಯೇ ಇರಲಿಲ್ಲ. ಸಂಪೂರ್ಣ ನಗ್ನರಾಗಿದ್ದರು. ಬಟ್ಟೆಯೆಲ್ಲಾ ದೂರಬಿದ್ದಿದ್ದವು. ಜನಿವಾರವೂ ಕೂಡ ದೂರ ಬಿದ್ದಿತ್ತು ! ಹೃದಯನು ಮಾವನಿಗೆ ನಿಜವಾಗಿಯೂ ಹುಚ್ಚು ಹಿಡಿದಿರಬೇಕೆಂದು ನಿರ್ಧರಿಸಿ ಬಳಿಗೆ ನುಗ್ಗಿ ಹೋಗಿ ಗಟ್ಟಿಯಾಗಿ ಕಿರುಚಿದನು!........."

ರಾಮಕೃಷ್ಣರು ಜನಿವಾರವನ್ನು ಬಿಚ್ಚಿಟ್ಟು, ಬಟ್ಟೆಯನ್ನು ಬಿಚ್ಚಿಟ್ಟು ನಗ್ನರಾಗಿ ಧ್ಯಾನಿಸುತ್ತ

---

೫. ಅದೇ. ಪು. ೩೬

ಕುಳಿತಿದ್ದದ್ದೇ ಹೃದಯನ ಕೋಪಕ್ಕೆ ಕಾರಣವಾಗಿತ್ತು. ಆದರೆ, ಪರಮಹಂಸರು ಅಷ್ಟೇ ನಿಧಾನವಾಗಿ ಹೃದಯನ ಕೋಪಕ್ಕೆ ತಣ್ಣೀರೆರಚಿ ತಣ್ಣಗಾಗಿಸುತ್ತಾರೆ : ಪರಮಹಂಸರ ವಾಣಿ ಶಾಂತವಾಗಿ ಹೊರಬೀಳುತ್ತದೆ -

"ನಿನಗೇನು ಗೊತ್ತು ? ಧ್ಯಾನ ಮಾಡುವಾಗ ಬಂಧನಗಳೊಂದು ಇರಬಾರದು. ಮನುಷ್ಯನು ಹುಟ್ಟಿದಂದಿನಿಂದ ದ್ವೇಷ, ಲಜ್ಜೆ, ಕುಲ, ಶೀಲ, ಭಯ, ಜಾತಿ, ಮಾನ ಅಭಿಮಾನಗಳೆಂಬ ಅಷ್ಟಪಾಶಗಳಿಂದ ಬದ್ಧನಾಗಿರುತ್ತಾನೆ. ಜನಿವಾರವೂ ಒಂದು ಪಾಶ - ನಾನು ಬ್ರಾಹ್ಮಣ, ಎಲ್ಲರಿಗಿಂತಲೂ ಹೆಚ್ಚಿನವನು ಎಂಬ ಅಹಂಕಾರಕ್ಕೆ ಅದೊಂದು ಚಿಹ್ನೆ. ದಿವ್ಯ ಮಾತೆಯನ್ನು ಧ್ಯಾನಿಸುವಾಗ ಈ ಬಂಧಗಳನ್ನೆಲ್ಲ ತೆಗೆದೊಗೆಯಬೇಕು. ಆದ್ದರಿಂದಲೇ ಜನಿವಾರ, ಬಟ್ಟೆ ಎಲ್ಲವನ್ನು ತೆಗೆದು ಬಿಸುಟು ಬೆತ್ತಲೆಯಾಗಿ ಧ್ಯಾನ ಮಾಡುತ್ತಿದ್ದೇನೆ. ಹಿಂದಿರುಗುವಾಗ ಅವುಗಳನ್ನೆಲ್ಲ ಮತ್ತೆ ಹಾಕಿಕೊಂಡು ಬರುತ್ತೇನೆ."[೬]

ಅವರ ಸಾಧನೆಯ ಹಾದಿಯಲ್ಲಿ ಇಂತಹ ವಿಚಿತ್ರ ಘಟನೆಗಳು ನೂರಾರು. ಬರಬರುತ್ತ ಅವರಿಗೆ ದೇವರ ಹುಚ್ಚು ಹೆಚ್ಚಾಗಿ ದಿನಕ್ಕೊಂದು ರೀತಿಯಲ್ಲಿ ಆಡತೊಡಗಿದರು. ಅವರ ಸ್ಥಿತಿಯನ್ನು ಕಂಡ ಇತರರು ಅವರ ವರ್ತನೆಗೆ ಮರುಗಿದರು. ಕೊರಗಿದರು ; "ಅಯ್ಯೊ ಏನಾಗಿದೆ ಈ ಹುಡುಗನಿಗೆ ? ನಿಜವಾಗಿಯೂ ಅವನಮ್ಮ ತೀರಿಕೊಂಡಳೆ ? ಅಥವಾ ಹೊಟ್ಟೆಗಿಟ್ಟೆ ಬೇನೆಯೋ ?" (ಪು. ೪೫) ಎಂದು ಅಂದುಕೊಳ್ಳುತ್ತಿದ್ದರು. ಆದರೆ, ಪರಮಹಂಸರು ಇದಾವುದನ್ನೂ ಲೆಕ್ಕಿಸದೆ ದೇವಿಯ ಧ್ಯಾನದಲ್ಲಿ ಮಗ್ನರಾಗಿರುತ್ತಿದ್ದರು.

ಶ್ರೀ ಕುವೆಂಪು ಅವರು ಪರಮಹಂಸರ ಈ ಅವಸ್ಥೆಯ ಸ್ಥಿತಿಗತಿಗಳನ್ನು ಇನ್ನಿಲ್ಲವೆಂಬಂತೆ ಚಿತ್ರಿಸಿದ್ದಾರೆ. ದೇವರನ್ನು ಕಾಣಲು ಬಯಸುವುದೂ ಒಂದು ಹುಚ್ಚು. ಆ ಹುಚ್ಚು ಹೊಳೆಯಲ್ಲಿ ಸಿಲುಕಿದವನು ಏನಾಗಬಹುದು ? ಹೇಗೆ ಹೇಗೆ ನಡೆದುಕೊಳ್ಳಬಹುದು ? ಎಂಬುದನ್ನು ಬಣ್ಣಿಸುವುದರ ಮೂಲಕ ಶ್ರೀ ರಾಮಕೃಷ್ಣರ ದಿವ್ಯಾನುಭವವನ್ನು ಪರಿಚಯಿಸುತ್ತಾರೆ. ಪರಮಹಂಸರ ಈ ಬಗೆಯ ದಿವ್ಯಾನುಭವಗಳನ್ನು ವರ್ಣಿಸುತ್ತಾ ಲೇಖಕರು ಆ ಬಗೆಗೆ ಹೇಳುವ ಮಾತುಗಳು ತುಂಬ ಗಮನಾರ್ಹವಾಗಿವೆ :

> "ಜಗತ್ತಿನ ಅನುಭವಿಗಳ, ಮಹಾಭಕ್ತರ ಮತ್ತು ರಸ ಋಷಿಗಳ ಜೀವನ ಚರಿತ್ರೆಗಳನ್ನು ಅರಿತವರಿಗೆ ಶ್ರೀ ರಾಮಕೃಷ್ಣರ ದಿವ್ಯೋನ್ಮಾದ ಅರ್ಥಹೀನವಾಗುವುದಿಲ್ಲ. ಪ್ರೇಮಮಯ ಭಗವಂತನ ವಿಯೋಗ ದುಃಖದಿಂದ ಅಗ್ನಿಸ್ನಾನ ಮಾಡಿದ ಭಕ್ತನ ಆತ್ಮ ಆತನ ದರ್ಶನದಿಂದ ಉನ್ಮತ್ತವಾಗುತ್ತದೆ. ಆಗ ಭಕ್ತನಿಗೆ ತನ್ನ ಇಷ್ಟದೈವದಹೊರತು ಉಳಿದುದೆಲ್ಲವೂ ಮಿಥ್ಯೆಯಾಗಿ ತೋರುತ್ತದೆ. ಇಷ್ಟದೈವ ಆತನನ್ನು ಸತತವಾಗಿ ಸುತ್ತುತ್ತದೆ, ಪ್ರಭಾತ ಸೂರ್ಯನ ತೇಜಸ್ಸು ಶ್ವೇತ ಜಲಧರವನ್ನು ತಪ್ತ ಕಾಂಚನ ರಾಗದಿಂದ ಸುತ್ತುವಂತೆ. ಆಗ ಭಕ್ತನು ಸಂಪ್ರದಾಯದ ವಿಧಿ ನಿಷೇಧಗಳನ್ನು ಅನೈಚ್ಛಿಕವಾಗಿಯೇ ಉಲ್ಲಂಘಿಸಿ ಭಗವಂತನೊಡನೆ ಸಲುಗೆಯಿಂದ ಆಚರಿಸುತ್ತಾನೆ. ಗಾಢಪ್ರೇಮವಿದ್ದಲ್ಲಿ ಸಂಪ್ರದಾಯದ ಸಂಕೋಲೆಗಳು ಕರಗಿ ಹೋಗುತ್ತವೆ. ಇಷ್ಟದೈವವು ಭಕ್ತನ ಮನದಲ್ಲಿರುವ ಬರಿಯ ಕಲ್ಪಿತ

೬. ಅದೇ. ಪು. ೪೩ - ೪೪

ಭಾವವಾಗಿರದೆ ರಕ್ತ ಮಾಂಸಗಳಿಂದ ಕೂಡಿದ ಮೂರ್ತಿಯಂತೆ ನಲಿಯುತ್ತದೆ. ಇದು ಬ್ರಹ್ಮಸಾಕ್ಷಾತ್ಕಾರಕ್ಕೆ ಪ್ರಥಮ ಸೋಪಾನ." (ಪು. ೪೯-೫೦)

ಶ್ರೀ ಪರಮಹಂಸರ ಈ ಭಾವನೆಯನ್ನು 'ಹುಚ್ಚು' ಎಂದೇ ಭಾವಿಸಿದ ಹಲವರು, ಹಲವಾರು ಪರಿಹಾರಕ ಸೂಚನೆಗಳನ್ನೂ ನೀಡಿದರು. 'ಮದುವೆಯ ನಂತರ ಈ ಹುಚ್ಚು ಬಿಡಿಸಬಹುದು' ಎಂದು ತಾಯಿ ಯೋಚಿಸಿದಳು. ಆದರೆ, ಹೆಣ್ಣು ಕೊಡುವವರು ಯಾರು ? ಆಗ ರಾಮಕೃಷ್ಣರೇ ತಮ್ಮ ದಿವ್ಯದೃಷ್ಟಿಯಿಂದ ಆ ದಿಕ್ಕನ್ನು ತೋರುತ್ತಾರೆ : "ಅಲ್ಲಿ ಇಲ್ಲಿ ಹುಡುಕಿ ಪ್ರಯೋಜನವಿಲ್ಲ. ಜಯರಾಂ ಬಾಟಿಯ ರಾಮಚಂದ್ರ ಮುಖ್ಯೋಪಾಧ್ಯಾಯನ ಮನೆಯಲ್ಲಿ ವಿಧಿ ನನಗಾಗಿ ಎಳೆಕಟ್ಟಿ ಮೀಸಲಾಗಿರಿಸಿರುವ ಹುಡುಗಿಯೊಬ್ಬಳಿದ್ದಾಳೆ ; ಹೋಗಿ ನೋಡಿ !" (ಪು. ೫೯) ಎಂದು ತಿಳಿಸುತ್ತಾರೆ. ಆ ಸಂಗತಿ ನಿಜವಾದರೂ ಆ ಹುಡುಗಿಗೆ ಐದೇ ವರ್ಷ. ೧೮೫೯ರಲ್ಲಿ ಶ್ರೀಮತಿ ಶಾರದಾಮಣಿ ದೇವಿಯೊಂದಿಗೆ ಶ್ರೀರಾಮಕೃಷ್ಣರ ವಿವಾಹ ನಡೆಯುತ್ತದೆ. ಅದು ವಿಧಿಯೇ ಹಾಕಿದ ಗಂಟು ಎಂಬುದು ಮುಂದೆ ದೃಢಪಡುತ್ತದೆ. ಶಾರದಾಮಣಿ ದೇವಿಯವರು ಪರಮಹಂಸರಿಗೆ ಇಂಗಿತಜ್ಞಳಾದ ಸತಿಯಾಗಿ, ಮಹಾತಪಸ್ವಿನಿಯೇ ಎನಿಸಿ ಪತಿಯಂತೆಯೇ ಲೋಕಕಲ್ಯಾಣಕ್ಕಾಗಿ ಪ್ರಾರ್ಥಿಸುವವರಾಗುತ್ತಾರೆ.

ಶ್ರೀ ಪರಮಹಂಸರು ಸರ್ವಧರ್ಮ ಸಮನ್ವಯ ಸಾಧಿಸ ಹೊರಟವರು. ಹಿಂದೂ ಧರ್ಮದ ಮೂಲಚೂಲಗಳನ್ನು ಶೋಧಿಸಿ ಅರಿತಂತೆಯೇ ಕ್ರೈಸ್ತ ಮತ್ತು ಇಸ್ಲಾಂ ಮತಗಳ ಶೋಧನೆಯಲ್ಲಿಯೂ ತೊಡಗಿ ಅವುಗಳಲ್ಲಿ ಹೊಂದಾಣಿಕೆಯನ್ನು ಕಾಣಲು ಆಶಿಸಿದವರು. ತಮ್ಮ ಆತ್ಮಕಲ್ಯಾಣದ ನಂತರ ಲೋಕ ಕಲ್ಯಾಣವನ್ನು ಸಾಧಿಸಲು ಇಚ್ಛಿಸಿ ಆದರತ್ತ ತಮ್ಮ ದಿಟ್ಟ ಹೆಜ್ಜೆಯನ್ನು ಇಡುತ್ತಾರೆ. ಸರ್ವಧರ್ಮ ಸಮನ್ವಯಾಚಾರ್ಯರಾಗಿ ಕಾರ್ಯೋನ್ಮುಖರಾಗುತ್ತಾರೆ.

'ಯಾತ್ರಿಕರು' ಭಾಗದಲ್ಲಿ ಶ್ರೀರಾಮಕೃಷ್ಣರು ಲೋಕಮಾನ್ಯರಾಗಿ ಅನೇಕ ಶಿಷ್ಯರನ್ನು ಪಡೆದುಕೊಂಡ ವಿವರ ಬರುತ್ತದೆ. ಪರಮಹಂಸರ ದಿವ್ಯ ವ್ಯಕ್ತಿತ್ವವನ್ನು ಕೇಳಿ ತಿಳಿದವರೆಲ್ಲರೂ ಅವರನ್ನು ಕಾಣಲು, ಅರ್ಥಮಾಡಿಕೊಳ್ಳಲು ಅದರ ಮೂಲಕ ತಮ್ಮ ತೊಡಕುಗಳನ್ನು ಬಿಡಿಸಿಕೊಂಡು ಸಾಧನೆಯ ಹಾದಿಯನ್ನು ಸುಗಮವಾಗಿಸಿಕೊಳ್ಳಲು ಮುಂದಾಗಿ ಬರುತ್ತಾರೆ. ಹೀಗೆ ಬಂದವರಲ್ಲಿ ಅನೇಕರು ಇವರ ಅನುಯಾಯಿಗಳಾಗಿ ಉಳಿಯುತ್ತಾರೆ. ಅವರ ದಿವ್ಯ ತೇಜಸ್ಸಿನ ಪ್ರಭೆಯಲ್ಲಿ ಮುಕ್ತಿಯ ಮಾರ್ಗವನ್ನು ಕಂಡುಕೊಳ್ಳುತ್ತಾರೆ. ಹಲವು ಮಂದಿ ಮಹರ್ಷಿಗಳ ದರ್ಶನವೂ ಅವರಿಗಾಗುತ್ತದೆ. ಅವರಲ್ಲನೇಕರನ್ನು ತೀಡಿ ತಿದ್ದಿ ನೋಡುವ ಹಲವರ ಕಣ್ಣು ತೆರೆಯಿಸುವ ಕಾರ್ಯವನ್ನು ಶ್ರೀ ರಾಮಕೃಷ್ಣರು ಮಾಡುತ್ತಾರೆ.

'ಕಾಮಿನಿ' ಈ ಭಾಗದಲ್ಲಿ ಶ್ರೀರಾಮಕೃಷ್ಣರು ಸರ್ವಧರ್ಮ ಸಮನ್ವಯಾಚಾರ್ಯರಾಗಿ ದ್ದಂತೆಯೇ, ಸರ್ವಭಾವಗಳ ಸಮನ್ವಯ ಮೂರ್ತಿಗಳೂ ಆಗಿದ್ದರೆಂಬುದನ್ನು ಕುವೆಂಪು ಅವರು ಮನದಟ್ಟಾಗಿಸಿದ್ದಾರೆ. ಶ್ರೀರಾಮಕೃಷ್ಣರ ದೃಷ್ಟಿಯಲ್ಲಿ 'ಕಾಮನಿ ಕಾಂಚನ ತ್ಯಾಗ' ವಿಶೇಷಾರ್ಥವುಳ್ಳದ್ದು. 'ಕಾಮಿನಿ' ಎಂಬ ಪದವನ್ನು ಅವರು 'ಕಾಮ' ಎಂಬ ಪದಕ್ಕೆ ಪರ್ಯಾಯವಾಗಿ ಬಳಸಿದ್ದಾರೆ. "ಸ್ತ್ರೀಯರಲ್ಲಿ ಕಾಮಿನಿಯನ್ನು ಕಾಣಬೇಡ, ಜಗನ್ಮಾತೆಯನ್ನು ಕಾಣು ಎಂಬುದೇ ಅವರ ಉಪದೇಶದ ತಾತ್ಪರ್ಯ". (ಪು. ೧೬೭) ದಕ್ಷಿಣೇಶ್ವರಕ್ಕೆ ಪುರುಷರು ಬರುತ್ತಿದ್ದಂತೆಯೇ ಶ್ರೀರಾಮಕೃಷ್ಣರ ದರ್ಶನಾಕಾಂಕ್ಷಿಗಳಾಗಿ ಸ್ತ್ರೀಯರೂ ಅಲ್ಲಿಗೆ ಬರುತ್ತಿದ್ದರು. ಅವರಲ್ಲಿ ಅನೇಕರು ಶ್ರೀರಾಮಕೃಷ್ಣರ ಪರಮಭಕ್ತರಾದರು. ಅವರ ಸ್ತ್ರೀ ಭಕ್ತರಲ್ಲಿ ಸರ್ವಶ್ರೇಷ್ಠರಾದವರೆಂದರೆ ಅವರ ಸಹಧರ್ಮಿಣಿ ಶ್ರೀ

ಶಾರದಾಮಣಿ ದೇವಿಯವರೇ. ಶ್ರೀ ಕುವೆಂಪು ಅವರ ಲೇಖನಿಯಲ್ಲಿಯ ಮಾತುಗಳಲ್ಲಿಯೇ ಆ 'ಶ್ರೀಮಾತೆ'ಯ ಭವ್ಯ ಜ್ಯೋತಿಯನ್ನು; ಪತಿ - ಪತ್ನಿಯರಾದರೂ ಉಳಿದು ಬಂದ ಅವರ ಸಂಬಂಧದ ಬಗೆಯನ್ನು ಅರಿಯುವುದು ಸೂಕ್ತ - "........ಪತಿ ಪತ್ನಿಯರಿಬ್ಬರೂ ಪರಸ್ಪರಾನುಮತಿಯಿಂದ ಆಜೀವ ಬ್ರಹ್ಮಚರ್ಯ ವ್ರತವನ್ನು ಗ್ರಹಣ ಮಾಡಿದ್ದು, ಪರಮಹಂಸರು ತಮ್ಮ ಅರ್ಧಾಂಗಿಯನ್ನು ದೇವಿಯ ಪೀಠದ ಮೇಲೆ ಕುಳ್ಳಿರಿಸಿ ಪೂಜೆ ಮಾಡಿ ತಮ್ಮ ತಪಃ ಫಲ ಜಪಮಾಲೆಗಳನ್ನು ಆಕೆಯ ಪದತಲದಲ್ಲಿ ವಿಸರ್ಜಿಸಿ ನಿವೇದಿಸಿದ್ದು, ಪತ್ನಿ ಪತಿಯನ್ನು ಗುರುವೆಂದು ಸ್ವೀಕರಿಸಿ ಮುಖ್ಯ ಶಿಷ್ಯೆಯಾಗಿ ನಿಂತಿದ್ದು....... ಅಂದಿನಿಂದ ಶ್ರೀಮಾತೆ ಪರಮಹಂಸರನ್ನು 'ಗುರುದೇವ'ನೆಂದು ಭಾವಿಸಿ, ಸಂಭಾವಿಸಿ, ಸಂಬೋಧಿಸಿ, ದೈಹಿಕ ಸಂಬಂಧ ವಿಹೀನವಾದ ದೈವಿಕ ಪ್ರೇಮಪಾಶಬದ್ಧಳಾಗಿ, ಐಹಿಕ ಪಾರಲೌಕಿಕ ವ್ಯಾವಹಾರಿಕ, ಪಾರಮಾರ್ಥಿಕ ಸಕಲ ವಿದ್ಯೆಗಳನ್ನು ಅವರಿಂದ ಕಲಿಯುತ್ತ ಆದರ್ಶ ಮಹಿಳೆಯಾಗಿ, ಮಹಿಳೆಯರಿಗೆ ಆದರ್ಶವಾಗಿ ಬೆಳೆದಳು". (ಪು. ೧೫೧-೫೨)

ಶ್ರೀ ಕುವೆಂಪು ಅವರು ಒಂದೇ ಏಟಿಗೆ ಎರಡು ಗುರಿಗಳನ್ನು ಸಾಧಿಸಬಲ್ಲ ಸಿದ್ಧರು. 'ಶ್ರೀಮಾತೆ'ಯ ಆದರ್ಶ ಬದುಕನ್ನು ಪರಿಚಯಿಸಿ ಕೊಡುವಲ್ಲಿಯೇ ಶ್ರೀ ರಾಮಕೃಷ್ಣರು ಸ್ತ್ರೀಯರ ಬಗ್ಗೆ ತಾಳಿದ್ದ ಭಾವನೆಯನ್ನು ಇತರ ಸ್ತ್ರೀ ಭಕ್ತರಲ್ಲಿ ಹೊಂದಿದ ಭಾವನೆಯೇನೆಂಬುದನ್ನು ಸ್ಪಷ್ಟಪಡಿಸುತ್ತಾರೆ.

'ಶ್ರೀಮಾತೆ' ಎಂಬ ಭಾಗದಲ್ಲಿ ಶ್ರೀ ರಾಮಕೃಷ್ಣರ ಸಾಧನೆಯ ಮಾರ್ಗದಲ್ಲಿ 'ಶ್ರೀ ಮಾತೆ'ಯವರ ಪಾತ್ರವೇನೆಂಬುದನ್ನು ಪ್ರತ್ಯೇಕವಾಗಿ ಪರಿಶೀಲಿಸಿದ್ದಾರೆ. "ಶ್ರೀ ರಾಮಕೃಷ್ಣ ಮತ್ತು ವಿವೇಕಾನಂದರು ಗಂಗಾ ಯಮುನಾ ನದಿಗಳಂತೆ ಬಹಿರಂಗವಾಗಿ ಹರಿಯುತ್ತಾ ಜಗಚ್ಚಕ್ಷುಗಳನ್ನು ಆಕರ್ಷಿಸುತ್ತಿದ್ದರೆ, ಲಜ್ಜಾ ಪಟಾವೃತಳಾದ ಶ್ರೀಮಾತೆ ಶಾರದಾದೇವಿ ಗುಪ್ತಗಾಮಿನಿಯಾದ ಸರಸ್ವತೀ ನದಿಯಂತೆ ಹರಿದು ಶ್ರೀ ಗುರುದೇವ ಮತ್ತು ಸ್ವಾಮೀಜಿಯವರ ಜೀವನ ಲೀಲೆಗೆ ತನ್ನ ಗೂಹ್ಯ ಜೀವನವನ್ನು ಸಮರ್ಪಿಸಿ ಒಂದು ದಿವ್ಯತರವಾದ ತ್ರಿವೇಣಿ ಸಂಗಮವನ್ನು ನಿರ್ಮಿಸಿದ್ದಾರೆ." (ಪು. ೧೬೫) ಎಂಬುದನ್ನು ಮನೋಜ್ಞವಾಗಿ ಶ್ರೀ ಕುವೆಂಪು ಲೇಖನಿ ಬಿಡಿಸಿದೆ.

"ಅವತಾರ ಪುರುಷರೆಲ್ಲರೂ ಭೂಮಿಗೆ ಬರುವಾಗ ತಮ್ಮ ಅಂತರಂಗದ ಗೋಷ್ಠಿಗೆ ಸೇರಿದ ಶಿಷ್ಯರೊಡಗೂಡಿಯೇ ಜನ್ಮವೆತ್ತುವರೆಂದು ಇತಿಹಾಸದಿಂದ ಗೊತ್ತಾಗುತ್ತದೆ. ಅನೇಕರು ಅವರಿಗೆ ಭಕ್ತರಾಗಬಹುದು ; ಆದರೆ ಕೆಲವರು ಮಾತ್ರವೇ ಅಂತರಂಗದ ಶಿಷ್ಯರಾಗುತ್ತಾರೆ" ಎಂಬುದನ್ನು ಹೇಳಿ ಸೊಗಸಾದ ಹೋಲಿಕೆಯ ಮೂಲಕ ಅದನ್ನು ಸ್ಪಷ್ಟಪಡಿಸಿ, ಪರಮಹಂಸರು ಸ್ವಾಮಿ ವಿವೇಕಾನಂದರನ್ನು ಅಂತರಂಗ ಶಿಷ್ಯರನ್ನಾಗಿ ಸ್ವೀಕರಿಸಿ ಅವರ ಮೂಲಕ ತಮ್ಮ ಗುರಿ ಸಾಧನೆಗೈದ ಬಗೆಯನ್ನು 'ದೇವಶಿಲ್ಪಿ' ಭಾಗದಲ್ಲಿ ಅಚ್ಚುಕಟ್ಟಾಗಿ ಶ್ರೀ ಕುವೆಂಪು ಅವರು ನಿರೂಪಿಸಿದ್ದಾರೆ. "ಕ್ರಿ.ಶ. ೧೮೮೧ನೆಯ ಸಂವತ್ಸರದಲ್ಲಿ ದಕ್ಷಿಣೇಶ್ವರದ ಮಹಾಜ್ಯೋತಿಯ ಬಳಿಗೆ ಮತ್ತೊಂದು ಮಹಾಜ್ಯೋತಿ ಬಂದಿತು...... ಶ್ರೀ ರಾಮಕೃಷ್ಣ ಮತ್ತು ನರೇಂದ್ರರ ಪರಸ್ಪರ ಸಂದರ್ಶನವು ಭೂಮಂಡಲದ ಧರ್ಮ ಚರಿತ್ರೆಯಲ್ಲಿ ಒಂದು ಮಹಾ ಸಂಘಟನೆ. ಅದರಿಂದ ಪ್ರಾಚೀನ ಅರ್ವಾಚೀನಗಳೆರಡಕ್ಕೂ ಅಭಿಮಾನದ ವಿಷಯವಾದ ಒಂದು ದಿಗ್ವಿಜಯ ಸಂಭವಿಸಿತೆಂದೇ ಹೇಳಬಹುದು" (ಪು. ೧೭೮) ಎಂದು ಆ ಇಬ್ಬರು ಗುರುಶಿಷ್ಯರ ಸಂದರ್ಶನದ ಸಂದರ್ಭವನ್ನು ಶ್ರೀ ಕುವೆಂಪು ಅವರು ಅರ್ಥವತ್ತಾಗಿ ಬಣ್ಣಿಸಿದ್ದಾರೆ. ಅಲ್ಲದೆ ಶ್ರೀ ಪರಮಹಂಸರು ತಮ್ಮ ಶಿಷ್ಯರಿಗೆ ನೀಡುತ್ತಿದ್ದ ಉಪದೇಶದ, ಮಾರ್ಗದರ್ಶನದ ರೀತಿಯನ್ನು ಸ್ವಾರಸ್ಯವಾಗಿ ಅವರ ಲೇಖನಿ ಹಿಡಿದಿಟ್ಟಿದೆ.

ದಿವ್ಯ ಚೇತನವೊಂದರ ಅಂತ್ಯವನ್ನು 'ಮಹಾಸಮಾಧಿ' ಭಾಗದಲ್ಲಿ ಲೇಖಕರು ಅದ್ಭುತವಾಗಿ, ಅಷ್ಟೇ ಭಾವಪೂರ್ಣವಾಗಿ ಚಿತ್ರಿಸಿದ್ದಾರೆ. ಮಹಾಪುರುಷರ ಬದುಕು ಎಲ್ಲ ಹಂತಗಳಲ್ಲಿಯೂ ವಿಶೇಷತೆಗಳಿಂದ ಕೂಡಿರುತ್ತದೆ ಎಂಬುದನ್ನು ಆ ವಾಣಿ ಧ್ವನಿಸುತ್ತದೆ : "ಮೂಡುವ ಸೂರ್ಯನಲ್ಲೊಂದು ಸಲಿಲ ಸೌಂದರ್ಯವಿದೆ. ಮಧ್ಯಾಹ್ನ ಸೂರ್ಯನಲ್ಲೊಂದು ಮಹಾ ತೇಜಸ್ಸಿದೆ. ಸೂರ್ಯಾಸ್ತದಲ್ಲೊಂದು ಗೌರವಮಯ ಗಾಂಭೀರ್ಯವಿದೆ. ಮಹಾಪುರುಷರ ಜೀವನದಲ್ಲಿಯೂ ಅದೇ ಗುಣಗಳು ತೋರಿ ಬರುತ್ತವೆ. ಅವರ ಶೈಶವದಲ್ಲಿ ಮಾಧುರ್ಯವೂ, ಯೌವನದಲ್ಲಿ ತಪಸ್ಸೂ, ಅವಸಾನ ಸಮಯದಲ್ಲಿ ಕಾರುಣ್ಯವೂ ಕಂಡು ಬರುತ್ತದೆ." (ಪು. ೨೦೪) ಎಂದು ಹೇಳಿ ಶ್ರೀರಾಮಕೃಷ್ಣರು "ನದಿ ಸಮುದ್ರದಲ್ಲಿ ಸಮಾಧಿ ಹೊಂದುವ ಮಹಿಮಾಮಯ ದೃಶ್ಯವನ್ನು ಸಂದರ್ಶಿಸಿ ಬನ್ನಿ" (ಪು. ೨೦೮) ಎಂದು ಕರೆನೀಡಿ ಮುಂದಿನ ಆ ಮಹಿಮಾಮಯ ದೃಶ್ಯದ ಅದ್ಭುತ ಚಿತ್ರವನ್ನು ಶ್ರೀ ಕುವೆಂಪು ಅವರು ನೀಡುತ್ತಾರೆ.

ಶ್ರೀ ರಾಮಕೃಷ್ಣ ಪರಮಹಂಸರ ಭವ್ಯ ದಿವ್ಯ ಜೀವನ ಚಿತ್ರಣದ ಮುಕ್ತಾಯವನ್ನು ಹಾಡುತ್ತ, ಆ ಅಮರ ಜೀವಿಯ ಜೀವಿತದ ಬಗೆಗೆ, ಆ ಅಪೂರ್ವ ಚೇತನದ ಬಗೆಗೆ ಕೊನೆಯದಾಗಿ ಲೇಖಕರು ಆಡಿರುವ ಮಾತುಗಳು - ಮಹಾನ್ ವ್ಯಕ್ತಿಯ ಜೀವನ ಚಿತ್ರಣಕ್ಕೆ ಹಾಕಿದ ಸುವರ್ಣ ಚೌಕಟ್ಟಾಗಿದೆ. ಅವರ ವಾಣಿಯಲ್ಲಿ ಕೇಳಿ : "ಮಹಾಪುರುಷರ ಜನ್ಮಚರಿತ್ರೆ ಕಾಲದಲ್ಲಿ ಕೊನೆಗೊಂಡರೂ ಅವರ ಜೀವನಯಾತ್ರೆ ಕಾಲಕ್ಕಿಂತಲೂ ಚಿರಂಜೀವಿಯಾದುದು. ಮಹಾಪುರುಷನಿಗೆ ಮರಣವಿಲ್ಲ. ಆತನು ಚಿರಂಜೀವಿ. ಕರ್ಮಮಯ ಜಗತ್ತಿನಲ್ಲಿ ಆತನ ಚೈತನ್ಯ ನಿರ್ಝರಿಣಿ ಚಿರಂತರಂಗಿಣಿ (ಪು. ೨೨೫) ಎಂದು ಸಾರುತ್ತಾರೆ. ಮಹಾಪುರುಷನ ಅಂತ್ಯಕ್ಕೊಂದು ಅಮರ ಗೀತೆಯನ್ನೇ ಹಾಡುವುದರ ಮೂಲಕ ಶ್ರೀ ಕುವೆಂಪು ಅವರು ತಮ್ಮ ಗೌರವವನ್ನು ಅಪೂರ್ವವಾದ ರೀತಿಯಲ್ಲಿ ಸೂಚಿಸಿದ್ದಾರೆ.

* * * * *

ಈ ಎರಡು ಅಪೂರ್ವ ಚೇತನಗಳ ಜೀವನ ಚಿತ್ರಣವನ್ನು ಬಿಡಿಸುವುದರ ಮೂಲಕ ಶ್ರೀ ಕುವೆಂಪು ಅವರು ತಮ್ಮ ಪಾಲಿನ ಒಂದು ಮಹತ್ಕಾರ್ಯವನ್ನು ಪೂರೈಸಿದಂತಾಗಿದೆ. ಮಹಾತ್ಮರ ಅಂತರಂಗವನ್ನು ಪ್ರವೇಶಿಸಲು ಮಹಾತ್ಮರೇ ಬೇಕಾಗುತ್ತದೆ. ಶ್ರೀರಾಮಕೃಷ್ಣ ಪರಮಹಂಸರಿಗೆ ಸ್ವಾಮಿ ವಿವೇಕಾನಂದರಂತಹ ಮಹಾನ್ ಅಂತರಂಗ ಶಿಷ್ಯ ದೊರೆತು ಅವರ ಜೀವನೋದ್ದೇಶಗಳನ್ನು ನಿತ್ಯಸತ್ಯವನ್ನು ವಿಶ್ವಕ್ಕೇ ಸಾರಿದಂತೆ ; ಆ ಇಬ್ಬರು ಮಹಾಪುರುಷರ ಜೀವನ ಚಿತ್ರಣವನ್ನು ಸುಂದರವಾಗಿ, ಅರ್ಥಪೂರ್ಣವಾಗಿ ಅತಿಶಯವಾದ ರೀತಿಯಲ್ಲಿ ; ಆದರೆ, ಅತಿರೇಕಗಳಿಗೆ ಎಡೆಮಾಡಿ ಕೊಡದಂತೆ ಕಡೆದು ನಿಲ್ಲಿಸಲು ಶ್ರೀ ಕುವೆಂಪು ಅವರಂತಹ ಮಹಾನ್ ವ್ಯಕ್ತಿಯೇ ಬೇಕಾಯಿತು. ಕೊನೆಯದಾಗಿ ವಿಮರ್ಶಕರೊಬ್ಬರ ಅಭಿಪ್ರಾಯದೊಂದಿಗೆ ಈ ಪ್ರಬಂಧಕ್ಕೆ ಮುಕ್ತಾಯವನ್ನು ಹಾಡಬಹುದೆಂದು ಕಾಣುತ್ತದೆ: "ಭರತ ಖಂಡದ ಆಧ್ಯಾತ್ಮಿಕ ಇತಿಹಾಸದಲ್ಲಿ ಈ ಮಹಾಪುರುಷರಿಬ್ಬರ ಪ್ರಖ್ಯಾತಿ ಹೇಗೆ ಇಂದಿಗೂ ಮಾಸದಂತಿರುವುದೋ ಹಾಗೆಯೇ ಕನ್ನಡ ಜೀವನ ಚರಿತ್ರೆಗಳಲ್ಲಿ ಈ ಎರಡು ಕೃತಿಗಳು ಚಿರಂಜೀವಿಯಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ."[೭] ಇದಕ್ಕೆ ನಮ್ಮೆಲ್ಲರ ಧ್ವನಿಯನ್ನೂ ಕೂಡಿಸಲು ಅನುಮಾನಿಸಬೇಕಾಗಿಲ್ಲ ಅನ್ನಿಸುತ್ತದೆ.

* * * * *

೭. ಡಾ. ಜಿ. ವರದರಾಜಾರಾವ್ - ಗಂಗೋತ್ರಿ. ಪು. ೬೬೫

ಆನಂದಕಂದ : 'ಮಾತನಾಡುವ ಕಲ್ಲು'

'ಮಾತನಾಡುವ ಕಲ್ಲು' ಎಂಟು ಕಥೆಗಳ ಒಂದು ವಿಶಿಷ್ಟ ಕಥಾಸಂಕಲನ. ಜಾನಪದ ಬದುಕನ್ನು ಕಂಡು, ಉಂಡು, ಅದರ ಸಾರಸರ್ವಸ್ವವನ್ನೂ ಮೈಗೂಡಿಸಿಕೊಂಡು ಬೆಳೆದ ಆನಂದಕಂದರು, ಜನಪದ ಸಂಸ್ಕೃತಿಯ ಹಾಗೂ ಜನಪದ ಬದುಕಿನ ಹಲವು ಮುಖಗಳನ್ನು ಇಲ್ಲಿ ತೆರೆದು ತೋರಿದ್ದಾರೆ. ಇಲ್ಲಿಯ ಎಂಟೂ ಕಥೆಗಳೂ ಹಳ್ಳಿಯ ಬದುಕಿನ ಸುತ್ತ ಹೆಣೆದುಕೊಂಡುವುಗಳೇ ಆದರೂ, ಮೊದಲ ಆರು ಕಥೆಗಳು ಒಂದು ವರ್ಗವಾಗಿ ನಿಂತರೆ, ಉಳಿದೆರಡು ಕಥೆಗಳು ಮತ್ತೊಂದು ವರ್ಗವಾಗಿ ನಿಲ್ಲುತ್ತವೆ.

ಈ ಕಥಾ ಸಂಕಲನಗಳು ಪ್ರಕಟಗೊಂಡದ್ದು ೧೯೪೯ರಲ್ಲಿ ; ಎಂದರೆ ಇಂದಿಗೆ ಮೂವತ್ತು ಮೂರು ವರ್ಷಗಳ ಹಿಂದೆ. ಆದ್ದರಿಂದ ರಚನೆಯ ಕಾಲವನ್ನು ಗಣನೆಗೆ ತೆಗೆದುಕೊಂಡು ಇಲ್ಲಿಯ ಕತೆಗಳನ್ನು ವಿಮರ್ಶಿಸಬೇಕಾಗುತ್ತದೆ. ಆಧುನಿಕ ಕಥಾ ತಂತ್ರಗಳು ಇಲ್ಲಿ ಕಂಡು ಬರದಿದ್ದರೂ, ಆಕರ್ಷಣೆಗೆ ಅಡ್ಡಿಯಿಲ್ಲ. ಕುತೂಹಲವನ್ನು ಕೆರಳಿಸಿ ಓದಿಸಿಕೊಂಡು ಹೋಗುವ ಸತ್ವ ಅವುಗಳಲ್ಲಿದೆ. ಇಲ್ಲಿಯ ಆಕರ್ಷಕ ಹಾಗೂ ಬೆರಗುಗೊಳಿಸುವ ಕಥಾ ವಸ್ತು, ಅದಕ್ಕೊಪ್ಪುವ ಅಂದವಾದ ಶೈಲಿ, ಇದಕ್ಕೆ ಮುಖ್ಯ ಕಾರಣವೆನ್ನಬಹುದು.

'ಮಾತನಾಡುವ ಕಲ್ಲು' ಸಂಕಲನದ ಮೊದಲ ಆರು ಕತೆಗಳು ಉಳಿದೆಲ್ಲ ಸಣ್ಣ ಕತೆಗಳಿಗಿಂತ ಭಿನ್ನವಾದುವು. ವಸ್ತು, ನಿರೂಪಣಾ ರೀತಿ, ಭಾಷೆ - ಎಲ್ಲಾ ದೃಷ್ಟಿಯಿಂದಲೂ ಗಮನಾರ್ಹ. ವಿಮರ್ಶಕರೊಬ್ಬರು ಭಾವಿಸುವಂತೆ 'ವರ್ತಮಾನ ಕಾಲಕ್ಕೆ ಇತಿಹಾಸ ಕಾಲದ ಸಜೀವ ಪರಿಚಯವನ್ನು ಮಾಡಿಕೊಡುವ'[1] ಪ್ರಯತ್ನವನ್ನು ಇಲ್ಲಿ ಕಾಣಬಹುದು. ಮುನ್ನುಡಿಯಲ್ಲಿ ದ.ರಾ. ಬೇಂದ್ರೆ ಅವರು ಅಭಿಪ್ರಾಯಪಟ್ಟಿರುವಂತೆ "ಬೆಳಗಾಂವಿ ನಾಡಿನ ಹೋದ ಮುನ್ನೂರು ನಾನೂರು ವರ್ಷಗಳ ರಾಜಕೀಯ - ಸಾಮಾಜಿಕ ಜೀವನ ದರ್ಶನವೊಂದನ್ನು ಶ್ರೀ ಆನಂದಕಂದರು ತಮ್ಮ ಸಹೃದಯ ದೃಷ್ಟಿಯಿಂದ ಮಾಡಿಕೊಟ್ಟಿದ್ದಾರೆ" ಎಂಬ ಅಂಶವೂ ಇಲ್ಲಿ ಗಮನಾರ್ಹ.

ನಮ್ಮ ನಾಡಿನ ಉದ್ದಗಲಕ್ಕೆ ಹೊರಟರೆ, ನಮ್ಮ ಕುತೂಹಲವನ್ನು ಕೆರಳಿಸುವ, ಸಂಶೋಧನ ದೃಷ್ಟಿಯನ್ನು ವಿಶಾಲವಾಗಿಸುವ ಹಲವು ಅಂಶಗಳು ಎದುರಾಗುತ್ತವೆ. ನಾವು ದಾರಿಯಲ್ಲಿ ಸಾಗುವಾಗ ಎಡವುವ ಒಂದೊಂದು ಕಲ್ಲೂ, ಬಂಡೆಯ ಮೇಲೆ ಕಾಣುವ ಒಂದೊಂದು ಚಿಹ್ನೆಯೂ ನಡೆದು ಹೋಗಿರಬಹುದಾದ ಒಂದೊಂದು ಘಟನೆಯ ಅಥವಾ ಕತೆಯ ಸಾಕ್ಷಿಯಾಗಿ ನಿಲ್ಲಬಲ್ಲುವು. ಅಥವಾ ಅಂತಹವುಗಳನ್ನು ಕಂಡು, ಕಲ್ಪನಾ ಲೋಕದಲ್ಲಿ ವಿಹರಿಸುವ ಮನಸ್ಸು ಅದಕ್ಕೆ ಯಾವುದೋ ಪುರಾಣದ, ಇಲ್ಲವೇ ಇತಿಹಾಸದ ಘಟನೆಯೊಂದರ ಸಂಬಂಧವನ್ನು ಕಲ್ಪಿಸಿ, ಸೊಗಸಾದ ಕಥೆಯೊಂದನ್ನು ಕಟ್ಟಿ,

೧. ರಂ. ಶ್ರೀ ಮುಗಳಿ : 'ವಿಮರ್ಶೆಯ ವ್ರತ'- ಪು. ೯೫

ಚಾಲ್ತಿಗೆ ಬಿಡಬಲ್ಲುದು. ಯಾವುದೋ ಬೆಟ್ಟದ ಮೇಲೆ ಕಾಣುವ ಒಂದು ದೊಡ್ಡ ಹೆಜ್ಜೆ ಆಕಾರದ ಗುರುತು ಭೀಮನಿಗೆ ಸಂಬಂಧಿಸಿದ ಕಥೆಯನ್ನು ಕಟ್ಟಲು ಕಾರಣವಾಗಬಲ್ಲುದು. ಅಲ್ಲಿಯೇ ಕಾಣುವ ಒರಳುಕಲ್ಲಿನಾಕಾರದ ಮತ್ತೊಂದು ಕಲ್ಲು ವನವಾಸ ಕಾಲದಲ್ಲಿ ಕುಂತಿಯೋ, ದ್ರೌಪದಿಯೋ ಖಾರ ಆಡಿಸಿದ ಅಥವಾ ಮತ್ತೇನನ್ನೋ ಕುಟ್ಟಿದ ಕತೆಯನ್ನು ಹೇಳಲು ಕಾರಣವಾಗಬಲ್ಲುದು. ಹಾಗೆಯೇ ಸೀರೆಯ ಸೆರಗನ್ನು ಹೋಲುವ ಬಂಡೆಯ ಮೇಲಿನ ಗುರುತೊಂದು ರಾಮಾಯಣದ ಸೀತೆಯ ವನವಾಸದ ಕತೆಗೆ ಸಂಬಂಧಿಸಿದ ಘಟನೆಯೊಂದನ್ನು ನಿರೂಪಿಸಲು ನೆರವಾಗಬಹುದು.

ಇವೆಲ್ಲಾ ನೈಜ ಘಟನೆಯೊಂದರ ಮೇಲೆಯೇ ಹುಟ್ಟಿಕೊಂಡಂತೆ ಕಂಡು ಬರುತ್ತವೆ. ಪ್ರಕೃತಿಯ ನಾನಾ ಅದ್ಭುತಗಳನ್ನು ವರ್ಣಿಸುವ ಇಂತಹ ಕತೆಗಳು ಜಾನಪದದ ಪರಿಭಾಷೆಯಲ್ಲಿ ಐತಿಹ್ಯಗಳೆನಿಸಿಕೊಳ್ಳುತ್ತವೆ. ಯಾವುದೋ ಒಂದು ವಸ್ತುವನ್ನು ನಿರ್ದೇಶಿಸಿ ಐತಿಹ್ಯ ಕತೆಯನ್ನು ಹೆಣೆಯುತ್ತದೆ. ಪ್ರಕೃತಿಯಲ್ಲಿ ಕಂಡ ಇಂತಹ ವೈವಿಧ್ಯಮಯ, ವರ್ಣಮಯ ವಸ್ತುವನ್ನು ಆಧರಿಸಿ ಕಟ್ಟಿದ ಭವ್ಯಾದ್ಭುತ ಕತೆಗಳು ನಾಡಿನಾದ್ಯಂತವೂ ಹಬ್ಬಿವೆ.

ಇನ್ನು ನಾವು ಊರ ಒಳಗೆ, ಹೊರಗೆ ಕಾಣುವ 'ವೀರಗಲ್ಲು' ಮತ್ತು 'ಮಾಸ್ತಿಕಲ್ಲು'ಗಳು ನೈಜ ಘಟನೆಗಳನ್ನು ಕುರಿತ ಸಾಕ್ಷಿ ಕಲ್ಲುಗಳೇ ಆಗಿವೆ. ವೀರತ್ವಕ್ಕೆ ಹಾಗೂ ಮಹಾ ಸತೀತ್ವಕ್ಕೆ ನಿರ್ಮಿಸಿದ ಸ್ಮಾರಕಗಳೆನಿಸಿ, ನಮ್ಮ ಪರಂಪರೆಯ ಅರಿವಿಗೆ ನೆರವಾಗಿವೆ.

ಈ ಚೌಕಟ್ಟಿನಲ್ಲಿ ಬರುವ ಈ ಸಂಕಲನದ ಮೊದಲ ಆರು ಕತೆಗಳೂ ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ಲೇಖಕರು ಕಂಡು - ಕೇಳಿದ ಇಂತಹ ಘಟನೆಗಳ ಆಧಾರದ ಮೇಲೆ ಸೊಗಸಾದ ಕತೆಯನ್ನು ಕಟ್ಟಿದ್ದಾರೆ. ಆ ಮೂಲಕ ನಮ್ಮ ಜನಪದ ಸಂಸ್ಕೃತಿಯ ಸಾರವನ್ನು ನಿರೂಪಿಸುವ ಪ್ರಯತ್ನ ನಡೆಸಿದ್ದಾರೆ. ಒಳಿತು - ಕೆಡುಕುಗಳ ಪರಿಣಾಮವನ್ನು ಸ್ಪಷ್ಟಗೊಳಿಸುವುದರ ಮೂಲಕ - ಕೆಟ್ಟದ್ದರ ಪಾಡನ್ನು, ಒಳ್ಳೆಯದರ ಜಾಡನ್ನು ತೋರಿದ್ದಾರೆ. "ಯಾವ ಕಥೆಯಲ್ಲಿಯೂ ಎರಡು ಪಕ್ಷಗಳು ಎದ್ದು ಕಾಣುತ್ತವೆ. ಒಂದು ಸತ್ಯ, ನ್ಯಾಯ, ಪ್ರೀತಿ, ದಯೆ, ದಾಕ್ಷಿಣ್ಯ ಮೊದಲಾದ ಸದ್ಗುಣಗಳಿಗೆ ಜೀವತೆರಲು ನಿಂತರೆ ; ಇನ್ನೊಂದು ರೂಢಿ ಪ್ರಬಲ ವಾಸನೆ, ತಾಮಸ, ಅಹಂಕಾರ ಮೊದಲಾದುವುಗಳಿಗೆ ಬಲಿಯಾಗಿ ಸದ್ಗುಣಿಗಳೊಡನೆ ಹೋರಾಡಲು ನಿಲ್ಲುವುದು. ಸೋಲು - ಗೆಲುವು ಯಾರದೇ ಇರಲಿ ; ಮಾನವ ಹೃದಯ ಸೋಲುವುದು ಯಾವುದಕ್ಕೋ ಅದೇ ಸತ್ಯ. ಅದೇ ಕಡೆಗೆ ಬಾಳುವುದು. ಇಲ್ಲಿಯ ಕಥೆಗಳಿಗೆ ನೀತಿಯ ಸೆರಗೊಂದಿದ್ದರೂ ಅದು ತನ್ನ ಮರ್ಯಾದೆಯನ್ನು ಮೀರಿಲ್ಲ."[೨]

ಬಹುತೇಕವಾಗಿ ಎಲ್ಲಾ ಕತೆಗಳೂ ಒಂದು ಬೋಧನೆಯೊಂದಿಗೆ ಮುಕ್ತಾಯ ಹೊಂದುವಂತೆ ತೋರಿದರೂ, ಅದು ನಮಗರಿವಿಲ್ಲದಂತೆಯೇ ಆಗುವ ಪರಿಣಾಮ. ಅದರಿಂದ ಕತೆಯ ಆಸ್ವಾದನೆಗೆ ಯಾವ ಅಡಚಣೆಯೂ ಆದಂತೆ ಅನಿಸುವುದಿಲ್ಲ. ಅಂತಹ ಒಂದು ವಿಶಿಷ್ಟ ರೀತಿಯಲ್ಲಿ ಕತೆಗಳನ್ನು ಬೆಳೆಸಿಕೊಂಡು ಹೋಗುವ ವಿಶಿಷ್ಟ ಕೈ ಚಳಕವನ್ನು ಇಲ್ಲಿಯ ಕತೆಗಳಲ್ಲಿ ಕಾಣುತ್ತೇವೆ.

ಈ ಸಂಕಲನದ ಮೊದಲ ಕತೆಯೇ 'ಮಾತನಾಡುವ ಕಲ್ಲು'. ಇಡೀ ಸಂಕಲನಕ್ಕೆ ಅನ್ವಯವಾಗುವ

---

೨. ಮಾತನಾಡುವ ಕಲ್ಲು - ಮುನ್ನುಡಿ

ಅರ್ಥಪೂರ್ಣವಾದ ಹೆಸರು. ಕತೆಯ ಪ್ರಾರಂಭದಲ್ಲಿಯೇ, ಒಂದು ರೀತಿ ಇಡೀ ಸಂಕಲನಕ್ಕೆ ಪೀಠಿಕಾರೂಪದಂತೆ, ಕತೆಗಾರರು ಹೇಳುವ ಮಾತು ಇಲ್ಲಿಯ ಕತೆಗಳನ್ನು ಗಮನಿಸುವಾಗ ನೆನಪಿನಲ್ಲಿಡಬೇಕಾದ ಮಹತ್ವದ್ದು : "ನಮ್ಮ ಕನ್ನಡ ನಾಡಿನಲ್ಲಿ ಮಾತನಾಡುವ ಕಲ್ಲುಗಳು ಬಹಳ. ವೀರಗಲ್ಲು, ಮಾಸ್ತಿಕಲ್ಲು, ನಿಷಿದಿಕಲ್ಲು ಇವೆಲ್ಲ ನಮಗೆ ವೀರರ, ಮಾನಿನಿಯರ, ಸಾಧುಸಂತರ ಮಾಹಾತ್ಮ್ಯವನ್ನು ಹೇಳಿ ನಮಗೆ ಹೆಮ್ಮೆಯನ್ನು ಹುಟ್ಟಿಸುವುದಾದರೆ, ಬರೆಹದ ಕಲ್ಲುಗಳು ನಮ್ಮ ಪೂರ್ವಜರ ವೀರ - ವೈಭವ - ಸಂಸ್ಕೃತಿಗಳ ಮೇಲ್ಮೆಯನ್ನು ಸಾರುತ್ತಿರುವುವು. ಇವುಗಳನ್ನು ಬಿಡಿರಿ, ನಮ್ಮ ನಾಡಿನ ಪ್ರತಿಯೊಂದು ಊರ ಅಗಸೆಯ ಮುಂದಿರುವ 'ಬೋರ್‌ಗಲ್ಲು' (ಗೋರ್ಕಲ್ಲು)ಗಳೂ ತಮ್ಮ ಅಡಿಯಲ್ಲಿ ಒಂದೊಂದು ಕತೆಯನ್ನು ಅಡಗಿಸಿಕೊಂಡು ಕುಳಿತಿರುವುವು. ರಾಮಾಯಣ, ಮಹಾಭಾರತದ ಕತೆಗಳನ್ನು ಹೇಳುವ ಕಲ್ಲುಗಳಂತೂ ನಮ್ಮಲ್ಲಿ ನೋಡಿದಲ್ಲೆಲ್ಲಾ ಸಿಕ್ಕುವುವು.

ನಾನೀಗ ಹೇಳಬೇಕೆಂದಿರುವ ಮಾತನಾಡುವ ಕಲ್ಲಿನ ವಿಷಯ ಈ ಜಾತಿಗೆ ಸೇರಿದುದಲ್ಲ. ಅದು ಹೇಳುವ ಕತೆ, ಬೋಧಿಸುವ ತತ್ತ್ವ ಇವೆಲ್ಲ ಒಂದು ವೈಶಿಷ್ಟ್ಯದಿಂದ ಕೂಡಿವೆ. ಸಂಪ್ರದಾಯಶರಣರಿಗೆಲ್ಲ ಮಾನವತೆಯ ತಿರುಳನ್ನು ತಿಳುಹುವಂತಿದೆ."

ಇಲ್ಲಿ ಮಾತನಾಡುವ ಕಲ್ಲು ಉಳಿದೆಲ್ಲ ಮಾತನಾಡುವ ಕಲ್ಲುಗಳಿಗಿಂತ ಭಿನ್ನವಾಗಿದ್ದು, ಸಂಪ್ರದಾಯಶರಣರಿಗೆ ಮಾನವತೆಯ ತಿರುಳನ್ನು ತಿಳುಹುವಂತಹುದು. ಅಂದರೆ ಒಂದು ಚೌಕಟ್ಟನಲ್ಲಿ ಇಲ್ಲಿಯ ಕತೆಗಳು ಏರಕಹೊಯ್ದಂತೆ ರೂಪು ತಳೆದಿವೆ ಅನ್ನಿಸಿದರೂ, ವಾಸ್ತವವಾಗಿ ಹಾಗಿಲ್ಲ.

ಒಕ್ಕಲಿಗರ ಹೆಣ್ಣು ಮಗಳು - ಹೊಲೆಯ ಹನುಮಪ್ಪ ಇವರಿಬ್ಬರ ನಡುವೆ ನಡೆದ ಹುಡುಗಾಟಿಕೆಯ ಒಂದು ಮಾತಿಗೆ ಸಾಕ್ಷಿ ನುಡಿಯಲು, ಕೋಟೆ ಕಟ್ಟಿದಂತೆ ಕಾಣುವ ಬಂಡೆಗಳ ಬಳಗದಿಂದ ಉರುಳಿ ಬಂದ ಬಂಡೆಯೊಂದು ದಾರಿ ಬದಿಯಲ್ಲಿ ನಿಂತು, ಹೋಗಿ ಬರುವವರ ಕಣ್ಸೆಳೆದು, ನಡೆದ ಘಟನೆಗೆ ತನ್ನ ಮೌನ ಭಾಷೆಯಲ್ಲಿಯೇ ವಿವರಣೆ ನೀಡುವ ಸಂದರ್ಭವನ್ನೊಳಗೊಂಡದ್ದು 'ಮಾತನಾಡುವ ಕಲ್ಲು'.

ಗೌರಿ, ಒಕ್ಕಲಿಗರ ಮನೆಯ ಹೆಣ್ಣು ಮಗಳು. ಸಂಕಪ್ಪನ ಹೆಂಡತಿ. ಚೊಕ್ಕವಾದ ಸಂಸಾರ. ಆದರೆ, ಮಕ್ಕಳಿಲ್ಲದ ಕೊರಗು. ಗಂಡನ ಆತುರ, ಅತ್ತೆಯ ಹರಕೆ, ಹಾಗೂ ಅವಳ ಬಯಕೆಯಿಂದ ಗೌರಿ ಸ್ವಲ್ಪ ಕಾಲದಲ್ಲಿಯೇ ಗರ್ಭಿಣಿಯಾದಳು. ಗೌರಿ ಕೆಲಸ - ಕಾರ್ಯಗಳ ಬಗೆಗೆ ಮತ್ತೂ ಹೆಚ್ಚಿನ ಉತ್ಸಾಹವನ್ನು ತೋರತೊಡಗಿದಳು. ಮನೆಯ ಕೆಲಸ, ಹೊಲದ ಕೆಲಸ ಅವಳಿಗೆ ಹಿಗ್ಗನ್ನು ತರುತ್ತಿತ್ತು.

ಎಂಟು ತಿಂಗಳ ಗರ್ಭಿಣಿಯಾದರೂ, ಹೊಲದಲ್ಲಿ ಕೆಲಸ ಮಾಡುವ, ತನ್ನ ಪತಿಗೆ ಬುತ್ತಿ ಯನ್ನು ಕೊಂಡೊಯ್ಯುವ ಉತ್ಸಾಹ ಬತ್ತಿರಲಿಲ್ಲ. ಕೋಡುಗಲ್ಲುಗಳಿದ್ದ ಗುಡ್ಡದ ಅಡಿ ಯಲ್ಲಿಯೇ, ದಾರಿಯ ಬಲಬದಿಗೆ ಚಾಚಿಕೊಂಡಂತಹ ಹೊಲ. ತುಂಬಿದ ಹೊಲ. ಗೌರಿಗೆ ತನ್ನ ಬಸಿರಿನಷ್ಟೇ ಈ ತುಂಬಿದ ಹೊಲವೂ ಆನಂದವನ್ನು ತರುತ್ತಿತ್ತು. ತುಂಬಿದ ಹೊಲವಾದ್ದರಿಂದ ಕಾವಲಿನ ಅಗತ್ಯವೂ ಇತ್ತು.

ಅದೊಂದು ದಿನ ಸಂಕಪ್ಪ ಸಂತೆಗೆ ಹೋಗಬೇಕಾಗಿ ಬಂದದ್ದರಿಂದ ಗೌರಿ ತಾನೇ ಕಾವಲಿನ

ಕಾರ್ಯವನ್ನು ಕೈಗೊಂಡಿದ್ದಳು. ಹೊಲಕ್ಕೆ ಹೋದ ಗೌರಿ ಸಂಜೆಯಾಗುವವರೆಗೂ ದನಗಳಿಗೆ ಬೇಕಾದ ಹುಲ್ಲನ್ನು ಕಿತ್ತು, ಅದೇ ದಾರಿಯಲ್ಲಿ ಬರಲಿರುವ ತನ್ನ ಪತಿಯ ದಾರಿಯನ್ನು ಕಾದು ಕುಳಿತಳು. ಸೂರ್ಯ ಗುಡ್ಡದ ತುದಿಯಲ್ಲಿ ಮರೆಯಾದ. ಕತ್ತಲು ಸ್ವಲ್ಪಸ್ವಲ್ಪವಾಗಿ ಮುಸುಕತೊಡಗಿತು. ಸಂಕಪ್ಪ ಕಾಣಲಿಲ್ಲ. ಗೌರಿಗೆ ದಾರಿ ಕಾಯುವುದರಿಂದ ಪ್ರಯೋಜನವಿಲ್ಲ ಅನ್ನಿಸಿತು. ಮನೆ ಕಡೆ ಹೊರಡಲು ಅನುವಾದಳು. ಆದರೆ ಅವಳು ಕಟ್ಟಿದ್ದ ಹುಲ್ಲು ಹೊರೆಯನ್ನು ತಲೆಯ ಮೇಲೆ ಹೊರಿಸಲು ಒಬ್ಬರ ನೆರವು ಬೇಕಿತ್ತು.

ಅದೇ ವೇಳೆಗೆ ದಾರಿ ಹಿಡಿದು ಒಬ್ಬ ಹೊರಟಿದ್ದ. ದೃಷ್ಟಿಸಿ ನೋಡಲಾಗಿ ತನ್ನ ಊರಿನ ಹೊಲೆಯರ ಹನುಮಪ್ಪನೆಂದು ತಿಳಿಯಿತು. ಆದರೆ, ಆ ಕ್ಷಣವೇ "ಈ ಮುಚ್ಚಂಜೆಯ ವೇಳೆಯಲ್ಲಿ ಹೊಲೆಯನನ್ನು ಮುಟ್ಟಿ ಹೊರಿಸಿಕೊಳ್ಳುವುದು ಹೇಗೆ ?" ಎಂಬ ಸಮಸ್ಯೆಯೂ ಕಾಡತೊಡಗಿತು. ವಿಧಿಯಿಲ್ಲದೆ ಅವನ ಸಹಾಯವನ್ನು ಪಡೆದುಕೊಳ್ಳಲು ನಿರ್ಧರಿಸಿದಳು.

ಹೊರೆ ಹೊರಿಸಲು ಬಂದ ಆ ಮುಪ್ಪಿನ ಮುದುಕನ ಮನಸ್ಸಿನಲ್ಲಿ ಆಸೆಯೊಂದು ಆ ಕ್ಷಣದಲ್ಲಿ ಚಿಗುರಿತು : "ಇಂತಹ ಚೆಲುವಿನ ಸಂಬಂಧ ತನಗೂ ಇರಬಾರದೆ ?" ಎಂದೆನಿಸಿತು. - ಆ ಚೊಚ್ಚಲು ಬಸುರಿಯನ್ನು ಕಂಡು ಹೊರೆ ಹೊರಿಸುವ ಮೊದಲು ತನ್ನ ಒಂದು ಮಾತನ್ನು ನಡೆಸಿಕೊಡಬೇಕೆಂದು ಹೇಳಿ ತನ್ನ ಮಾತನ್ನು ಮುಂದಿಟ್ಟ : "ನೀನು ಹೆಣ್ಣು ಮಗಳನ್ನು ಹೆತ್ತರೆ ಅದನ್ನ ನನ್ನ ಮೊಮ್ಮಗ ಚಿಕ್ಕೆಲ್ಲಿಗನಿಗೆ ಮದವೀ ಮಾಡಿಕೊಡಬೇಕು ನೋಡು" ಎಂದ. ಅದೊಂದು ನಗೆಯಾಟದ ಮಾತೆಂದು ಭಾವಿಸಿ ಗೌರಿ ನಕ್ಕು ಸಮ್ಮತಿಸಿದಳು.

ದಿನಗಳುರುಳಿದುವು. ಗೌರಿ ಹೆಣ್ಣು ಮಗುವನ್ನು ಹಡೆದಳು. ಹನುಮಪ್ಪ ಮಗುವಿಗೆ ಎಲ್ಲ ಮಂಗಳ ಕಾರ್ಯಗಳಿಗೂ ಉಡುಗೊರೆಗಳನ್ನು ಕಳುಹಿಸುತ್ತಿದ್ದ. ಅದು ಅಷ್ಟಾಗಿ ಯಾರ ಗಮನಕ್ಕೂ ಬರಲಿಲ್ಲ. ಗೌರಿಯೂ ಈ ವಿಚಾರವನ್ನು ಯಾರ ಬಳಿಯೂ ಹೇಳಿರಲಿಲ್ಲ. ಗೌರಿಯ ಮಗಳು ಮಾದೇವಿ ಬೆಳೆದು ದೊಡ್ಡವಳೂ ಆದಳು. ಒಂದು ದಿನ ಹನುಮಪ್ಪ ಸಂಕಪ್ಪನ ಬಳಿ ಬಂದು ತನ್ನ ಮೊಮ್ಮಗನ ಮದುವೆ ವಿಚಾರ ಪ್ರಸ್ತಾಪಿಸಿದ. ಏನೂ ತಿಳಿಯದ ಸಂಕಪ್ಪ ಎಲ್ಲ ಮಾತಿಗೂ ತಲೆ ಆಡಿಸುತ್ತಿದ್ದ. ಆದರೆ, ಇದ್ದಕ್ಕಿದ್ದಂತೆ 'ನಿನ್ನ ಮಗಳನ್ನು ತಗೊಳ್ಳೋದೂ ಅಂತ ಎಂದೋ ಗೊತ್ತಾಗಿ ಹೋಗೇಯ್ತಲ್ರೀ ಎಂದಾಗ' ಸಂಕಪ್ಪ "ಇದೇನೋ ಹನುಮಪ್ಪ, ಮುಪ್ಪಿನ ಕಾಲಕ್ಕ ನಿನಗ ಹುಚ್ಚುಗಿಚ್ಚು ಹಿಡಿತೋ ಏನ" ಎಂದು ಗದರಿದ.

ಆದರೆ, ಹನುಮಪ್ಪ ಎಂದೂ ಅದನ್ನು ಹುಡುಗಾಟಿಕೆಯಾಗಿ ತೆಗೆದುಕೊಂಡಿದ್ದವನಲ್ಲ. ಸಂಕಪ್ಪ ಹನುಮಪ್ಪನ ಮುಂದೆ ಗೌರಿಯನ್ನು ಕರೆದು ಕೇಳಿದಾಗ : "ನಾನೆಂದೂ ಅವನ ಕೈಯಿಂದ ಹುಲ್ಲು ಹೊರೆಯನ್ನೇ ಹೊರೆಸಿಕೊಂಡಿಲ್ಲ" ಎಂದು ಎಲ್ಲವನ್ನೂ ತಳ್ಳಿ ಹಾಕಿ ಬಿಟ್ಟಳು.

ವಿಷಯ ಹಳ್ಳಿಯ ಪಂಚಾಯಿತಿಯ ಮುಂದೆ ಬಂತು. ಹನುಮಪ್ಪನೇ ಅವರನ್ನೆಲ್ಲಾ ಕೂರಿಸಿ ನ್ಯಾಯ ಬೇಡಿದ. ಅಲ್ಲಿಯೂ ಗೌರಿ ಸುಳ್ಳೆಂದು ಸಾಧಿಸಿದಳು. ಕೊನೆಗೆ ಪಂಚರು ಸಾಕ್ಷಿ ಒದಗಿಸುವಂತೆ ಹನುಮಪ್ಪನನ್ನು ಕೇಳಿದರು. ಮನುಷ್ಯರಾರೂ ಸಾಕ್ಷಿಯಿಲ್ಲದಾಗ ಹನುಮಪ್ಪ 'ತಾಯಿ ಗುಡ್ಡದವ್ವ'ನ ಮೊರೆ ಹೊಕ್ಕ. ಎಲ್ಲರನ್ನೂ ಹೊಲದ ಬಳಿಯ ಗುಡ್ಡದ ಹತ್ತಿರ ಕರೆದೊಯ್ದ. ಗುಡ್ಡದ ಕಡೆ ಮುಖ ಮಾಡಿ ಕೈ ಮುಗಿದು "ನಂ ತಾಯೀ ಗುಡ್ಡದವ್ವಾ ! ನೀನು ಸತ್ತುಳ್ಳಾಕಿ ಆದರ, ಈ

ಪಂಚರಿಗೆ ನನ್ನ ಮಾತು ನಿಜಾ ಅನಸೂ ಹಾಂಗ ಏನಾದರೂ ಒಂದು ಸಾಕ್ಷಿ ಕೊಡು ತಾಯಿ !" ಎಂದು ಬೇಡಿದ. "ಗುಡ್ಡದ ತುದಿಯಲ್ಲಿ ಒಮ್ಮೆಲೆ ಗುಡುಗಿನ ಗರ್ಜನೆ ಕೇಳಿಸಿತು. ಮುಂಗಾರಿನ ಕೋಲ್ಮಿಂಚು ಸುಳಿದಂತಾಗಿ, ನಿಂತವರೆಲ್ಲರ ಕಣ್ಣಳನ್ನು ಕುಕ್ಕಿಸಿತು. ಇದ್ದಕ್ಕಿದ್ದಂತೆ ದೊಡ್ಡದೊಂದು ಬಂಡೆಗಲ್ಲು, ಗುಡ್ಡದ ತುದಿಯಿಂದ ಗಡಗಡನೆ ಉರುಳಿಕೊಂಡು ಬಂದು, ಹಿರಿಯ ಪಂಚನ ಬಳಿ ನಿಂತುಕೊಂಡಿತು". ಹನುಮಪ್ಪನ ಮಾತು ಸತ್ಯವೆಂದು ಊರೆಲ್ಲ ಒಪ್ಪಿಕೊಂಡಿತು. ಮೂಕಕಲ್ಲು ಸಾಕ್ಷಿ ನುಡಿದಿತ್ತು. ಇದಿಷ್ಟು ಸಾರಾಂಶ.

ಇಲ್ಲಿ ಉತ್ತಮ ಜಾತಿಯವಳೆನಿಸಿದ ಹೆಣ್ಣುಮಗಳೊಬ್ಬಳು ಸುಳ್ಳಾಡುವುದು, ಕೀಳು ಜಾತಿಯವನೆನಿಸಿದ ಗಂಡೊಂದು ಸತ್ಯಕ್ಕಾಗಿ ಹೋರಾಡುವುದು, ಇದೆಲ್ಲಕ್ಕೂ ಮುಖ್ಯ ಕಾರಣವೆನಿಸುವುದು - ಒಂದು ಆಕಸ್ಮಿಕ ಘಟನೆ, ಒಬ್ಬರು ಅದನ್ನು ಲಘುವಾಗಿ, ತಮಾಷೆಯ ವಿಷಯವೆಂದು ಭಾವಿಸುವುದು ; ಮತ್ತೊಬ್ಬರು ಗಂಭೀರವಾಗಿ, ತೀವ್ರವಾಗಿ ತಿಳಿಯುವುದು.

ಈ ಎಲ್ಲದರ ಹಿಂದೆ ಅಡಕವಾಗಿರುವ ಅಂಶ : ಲೋಕದಲ್ಲಿ ದೇವರು, ಧರ್ಮ, ನ್ಯಾಯ ಸತ್ತಿಲ್ಲ ಎಂಬುದು. ಹಾಗೆಯೇ ಅದು ಯಾವುದೋ ಒಂದು ಮತಕ್ಕೆ, ಜಾತಿಗೆ ಸೀಮಿತವಾದು ದಲ್ಲ ಎಂಬುದು. ಸತ್ಯವನ್ನು ಮುಚ್ಚಲು ಯಾರಿಂದಲೂ ಸಾಧ್ಯವಿಲ್ಲವೆಂಬುದರ ಜೊತೆಗೆ, ಸತ್ಯವನ್ನು ಮಾತು ಬಲ್ಲ ಮನುಷ್ಯ ಮುಚ್ಚಿಡಲು ಪ್ರಯತ್ನಿಸಿದರೂ, ಮೂಕ ಕಲ್ಲು ಅದಕ್ಕೆ ಸಾಕ್ಷಿಯಾಗಿ ನಿಲ್ಲಬಲ್ಲುದು ಎಂಬುದು. ಹೊಲೆಯರ ಹನುಮಪ್ಪನ ಸಲುವಾಗಿ ಗುಡ್ಡದವ್ವ ಗುಡ್ಡದಿಂದ ಬಂದು ಸಾಕ್ಷಿ ಹೇಳಿತು, ಎಂಬ ಪ್ರಸಂಗದ ಸತ್ಯಾಸತ್ಯತೆಗಳು ಏನೇ ಇದ್ದರೂ - ಎಂದೆಂದಿಗೂ ಸತ್ಯಕ್ಕೇ ಜಯ ಎಂದು ಈ ಪ್ರಸಂಗ ನಿರೂಪಿಸುತ್ತದೆ. ಆನಂದಕಂದರು ಸೊಗಸಾದ ರೀತಿಯಲ್ಲಿ ಅದನ್ನು ನಿರೂಪಿಸಿದ್ದಾರೆ.

ಸಣ್ಣದೊಂದು ಕಾರಣದಿಂದ ಹುಡುಗಾಟಿಕೆಯೆಂಬಂತೆ ಆರಂಭವಾಗಿ, ದೊಡ್ಡ ಸಮಸ್ಯೆ ಯೊಂದನ್ನು ಒಡ್ಡುವ ಇಲ್ಲಿಯ ಘಟನೆ ಸತ್ಯದ ಮಹತ್ವವನ್ನು ಎತ್ತಿ ತೋರುವ ಕೈದೀವಿಗೆಯಾಗಿ ನಿಲ್ಲುತ್ತದೆ.

'ಮಾತನಾಡುವ ಕಲ್ಲು', ಸತ್ಯಕ್ಕೆ ಸಾಕ್ಷಿ ನುಡಿಯಲು ಬಂದು ನಿಂತ ಕಲ್ಲಾಗಿ ತೋರಿದರೆ, 'ಸೀಮೆಯ ಕಲ್ಲು' ಕಥೆಯ ರೀತಿಯೇ ಬೇರೆ. ಅದು ಒಳ್ಳೆಯದರ ಒಂದು ಸಂಕೇತವಾದರೆ, ಇದು ಕೆಟ್ಟದ್ದರ ಸಂಕೇತವಾಗಿ ನಿಲ್ಲುತ್ತದೆ. ಎಂದೋ, ಹೇಗೋ ನಡೆದು ಹೋದ ಘಟನೆಗಳನ್ನು ನೆನಪಿಗೆ ತರುವ ಇಂತಹ ನಿದರ್ಶನಗಳು ಜನರ ಮನಸ್ಸಿನಲ್ಲಿ ಹಸುರಾಗಿ ಉಳಿಯುವುದರ ಮೂಲಕ ಸದಾ ಅವರನ್ನು ಎಚ್ಚರಿಸುವ ಕಾರ್ಯವನ್ನು ನಿರ್ವಹಿಸುತ್ತ ಬಂದಿವೆ.

'ಸೀಮೆಕಲ್ಲು' ಕತೆಯ ಸಾರಾಂಶ ಇಷ್ಟು : ಊರಿನ ಹೊರಭಾಗದಲ್ಲಿ, ಬೀದಿಯ ಪಕ್ಕದಲ್ಲಿ ಬಿದ್ದಿದ್ದ ದಪ್ಪನೆಯ ಹಾಸುಗಲ್ಲೇ - ಈ ಸೀಮೆಕಲ್ಲು. ಆ ದಾರಿಯಲ್ಲಿ ಓಡಾಡುವವರೆಲ್ಲರೂ ಅದನ್ನು ಕಂಡು ಅದರ ಮೇಲೆ ಉಗಿದು, ಒಂದು ಕಲ್ಲನ್ನು ಅದರ ಮೇಲೆ ಒಗೆದು ಮುಂದೆ ನಡೆಯುತ್ತಿದ್ದರು. ಇದರ ಬಗೆಗೆ ಕುತೂಹಲ ಉಂಟಾದ ಕತೆಗಾರರು ಅದರ ಹಿನ್ನೆಲೆಯನ್ನು ಪತ್ತೆ ಹಚ್ಚಲು ತೊಡಗುತ್ತಾರೆ. ಅದರಿಂದ ಆ ಊರಿನ ಹಿರಿಯರಿಂದ ಅವರಿಗೆ ಸಿಕ್ಕುವ ಉತ್ತರ ಮತ್ತು ಅವರ ಬಳಿಯೇ ದೊರೆತ ಹಳೆಯ ಕರಡು ಕಾಗದದ ಪ್ರಕಾರ ವಿಷಯ ಹೀಗಿದೆ :

ಅದು ಸುಮಾರು ಹದಿನೇಳನೆಯ ಶತಮಾನದ ಬರಹ. ಹಿರಿಯೂರು ಗೌಡರ ಮನೆತನಕ್ಕೆ

ಸಂಬಂಧಿಸಿದ್ದು. ಅಲ್ಲಿ ಇಬ್ಬರು ಅಣ್ಣತಮ್ಮಂದಿರು, ಅಣ್ಣ ಮಲ್ಲಿಗೊಂಡ, ತಮ್ಮ ಚಿಕ್ಕಗೊಂಡ. ಅಣ್ಣ ಧರ್ಮರಾಯನಂತಹವನು. ತಮ್ಮ ಕೀಚಕನಂತಹವನು.

ಸಾವಿರ ಹೆಣ್ಣುಗಳಲ್ಲಿ ಎದ್ದು ತೋರುವಂತಹ ರೂಪನ್ನುಳ್ಳ ಹೂವಮ್ಮ ಆ ಊರಿಗೆ ಸೊಸೆಯಾಗಿ ಬರುತ್ತಾಳೆ. ಸಹಜವಾಗಿಯೇ ಕೀಚಕ ಚಿಕ್ಕಗೊಂಡನ ಕಣ್ಣು ಅವಳ ಮೇಲೆ ಬೀಳುತ್ತದೆ. ಹಲವು ಪ್ರಯತ್ನಗಳ ನಂತರ ಒಂದು ದಿನ ಬಿಡದೆ ಅವಳ ಬೆನ್ನು ಹತ್ತುತ್ತಾನೆ.

ಸಹಿಸಿ ಸಾಕಾಗಿದ್ದ ಅವಳ ಗಂಡ ಜಕ್ಕಣ್ಣ ಮತ್ತು ಅವಳ ತಮ್ಮ ಹೋರಿಗ ಇಬ್ಬರು ಕೂಡಿ ಚಿಕ್ಕಗೊಂಡನನ್ನು ಮುಗಿಸುತ್ತಾರೆ. ಈ ಸುದ್ದಿಯನ್ನು ಸ್ವತಃ ತಾವೇ ಹೋಗಿ ಅವನ ಅಣ್ಣ ಮಲ್ಲಿಗೊಂಡನಿಗೆ ತಿಳಿಸಿ ಬೇಕಾದರೆ ತಮಗೆ ಶಿಕ್ಷೆ ವಿಧಿಸುವಂತೆ ಕೇಳುತ್ತಾರೆ. ಸತ್ಯಶೀಲ ಮಲ್ಲಿಗೊಂಡ ಅವರನ್ನು ಕ್ಷಮಿಸಿ, ಜೊತೆಗೆ "ಸ್ತ್ರೀ ದೇವತೆಯನ್ನು ಅವಮಾನಗೊಳಿಸಿದ ಕಾಮದ ಕೈಗೊಂಬೆ ಚಿಕ್ಕಗೊಂಡನಿಗೆ ಆಗಿರುವ ಶಿಕ್ಷೆ ಸಾಲದೆಂದು ಅಸಮಾಧಾನ ಪಟ್ಟುಕೊಂಡು ಚಿಕ್ಕಗೊಂಡನ ಹೆಣ ಬಿದ್ದ ಸ್ಥಳದಲ್ಲಿ ಆತನ ಮೂರ್ತಿಯನ್ನು ಕೊರೆದ ಕಲ್ಲೊಂದನ್ನು ಚೆಲ್ಲಿಸಿ ಹೋಗುವ ಬರುವ ಹಾದಿಕಾರರೆಲ್ಲ ಮೂರ್ತಿಯ ಮೇಲೆ ಉಗುಳಿ ಹಿಡಿಗಲ್ಲನ್ನು ಹಾಕಿ ಹೋಗಬೇಕು" ಎಂದು ಕಟ್ಟಳೆಯನ್ನು ಮಾಡಿದ.

ಪರಸ್ತ್ರೀಯನ್ನು ಬಯಸಿದ ತಪ್ಪಿಗೆ ಆದ ಶಿಕ್ಷೆ ಇದು. ಅಣ್ಣನ ಸದ್ಗುಣ, ತಮ್ಮನ ದುರ್ಗುಣ ಮತ್ತು ಅದರ ಪರಿಣಾಮ ಅವುಗಳನ್ನು ಎತ್ತಿ ತೋರುವ ಬೋಧನೆಯ ಅಂಶ ಇಲ್ಲಿದೆ. ಕೆಟ್ಟ ಸಂಗತಿಯಾದರೂ ಅದು ಅಲ್ಲಿಗೇ ಅಳಿಸಿ ಹೋಗಬಾರದು, ಮುಂದಿನವರಿಗೂ ಎಚ್ಚರವನ್ನುಂಟು ಮಾಡುವ ಮಾರ್ಗದರ್ಶಿಯಾಗಬೇಕು ಎಂಬ ಸದುದ್ದೇಶವನ್ನು ಇಲ್ಲಿ ಕಾಣುತ್ತೇವೆ.

ಧರ್ಮನಿಷ್ಠ ಮಲ್ಲಿಗೊಂಡ, ಮಗನ ಸಾವಿನಿಂದ ಕಣ್ಣೀರಿಡದೆ 'ಪಾಪಿ ಮಕ್ಕಳು ಸಾಯುವುದೇ ಕುಲಕ್ಕೆ ಕ್ಷೇಮ' ಎಂದು ಭಾವಿಸುವ ತಾಯಿ, ಇಂತಹ ಒಂದು ಮನೆತನ - ಇವೆಲ್ಲ ವರ್ತಮಾನಕ್ಕೆ ಬೇಕಾದ ಬೆಳಕನ್ನು ತೋರುವ ಭೂತಕಾಲದ ಭವ್ಯಾದ್ಭುತ ಸಂಗತಿಗಳಾಗಿವೆ.

'ಜೋಗತಿ ಕಲ್ಲು' ಜನಪದ ಸಂಪ್ರದಾಯವೊಂದನ್ನು ಒಳಗೊಂಡಿದ್ದು, ಜಾನಪದ ಚೌಕಟ್ಟಿನಲ್ಲಿ ಬರುವ ಕಥೆ. ಊರಿಗೆ ಹೊಸದಾಗಿ ಬಂದ ಮದುವಣಗಿತ್ತಿಯರೆಲ್ಲರೂ, ಮಾರನೆಯ ದಿನವೇ ಹೋಗಿ, ಈ 'ಜೋಗತಿ ಕಲ್ಲ'ನ್ನು ಪೂಜಿಸಿ ಬರಬೇಕಾದುದು ಸಂಪ್ರದಾಯ. ಅಲ್ಲಿಯ ಮುಸಲ್ಮಾನ ಮಹಿಳೆಯರು ಕೂಡ ಈ ಸಂಪ್ರದಾಯವನ್ನು ಆಚರಿಸುತ್ತಾ ಬಂದವರು. ಇದರಿಂದ ಅವರ ಮುತ್ತೈದೆತನದ ಸೌಭಾಗ್ಯ, ಸಂತಾನ, ಸಂಪತ್ತು ಹೆಚ್ಚುತ್ತದೆ ಎಂಬುದು ಇಲ್ಲಿಯ ಜನರ ನಂಬಿಕೆ. ಇದು ಆ ಹಳ್ಳಿಯದೇ ಆದ ಒಂದು ವೈಶಿಷ್ಟ್ಯವೂ ಹೌದು. ಅಲ್ಲಿಯ ಹೆಣ್ಣು ಮಕ್ಕಳೆಲ್ಲಾ ಅತ್ಯಂತ ಭಯಭಕ್ತಿಯಿಂದ ಈ ಜೋಗತಿಕಲ್ಲನ್ನು ಪೂಜಿಸುತ್ತಾರೆ.

ಈ 'ಜೋಗತಿಕಲ್ಲು' ಎಂಬುದೇನು ? ಇದನ್ನು ಪೂಜಿಸುವ ಸಂಪ್ರದಾಯ ಹೇಗೆ ಹುಟ್ಟಿಕೊಂಡಿತು ? ಅದರ ಹಿನ್ನೆಲೆಯೇನು ? ಎಂಬುದನ್ನು ತಿಳಿದುಕೊಳ್ಳಲು ಹೊರಟ ಕತೆಗಾರರಿಗೆ, ಅದರ ಹಿಂದೆ ಅಡಕವಾಗಿರುವ ಪ್ರಣಯ ಕಥೆಯೊಂದು ಸುರುಳಿ ಬಿಚ್ಚುತ್ತಾ ಹೋಗುವುದು ಕಂಡು ಬರುತ್ತದೆ. ಒಬ್ಬರ ಸುಖದ ಸಲುವಾಗಿ ಇನ್ನೊಬ್ಬರು ಜೀವ ಕೊಡುವ ಮಹಾ ತ್ಯಾಗದ ಸಂಗತಿ ಇಲ್ಲಿ ಕಂಡು ಬರುತ್ತದೆ. ಆ ಕಾರಣದಿಂದಲೇ ಆ ವ್ಯಕ್ತಿ ದೈವತ್ವದ ಸ್ಥಾನಕ್ಕೆ ಅರ್ಹವಾಗುತ್ತದೆ.

ಎಲ್ಲಮ್ಮ ದೇವತೆಗೆ ಸಂಬಂಧಿಸಿದಂತೆ ಜೋಗತಿಯರು ಕಂಡು ಬರುತ್ತಾರೆ. ಇವರು ಎಲ್ಲಮ್ಮನ 'ಜಗಾ' ಹೊತ್ತು ಊರೂರು ಮೇಲೆ ಹೋಗಿ ಎಲ್ಲಮ್ಮನ ಕಥೆಯನ್ನು ಹಾಡಿ ಬರುತ್ತಾರೆ. ಜನಪದ ಧಾರ್ಮಿಕ ವೃತ್ತಿಗಾಯಕರಲ್ಲಿ ಇದೊಂದು ವರ್ಗ. ಈ ಜೋಗತಿಯರು 'ಬೇಲಿ ಇಲ್ಲದ ಹೊಲ ಇದ್ಹಾಂಗ.... ಎಂತಾ ಬಿಡಾಡಿ ದನಕ್ಕೂ ಹೊಕ್ಕು ಮೇಯಾಕ' ಅವಕಾಶ ಉಂಟು.

ಈ ಕತೆಯ ಕಥಾನಾಯಕಿ 'ಚಂದಾ', ಅಂತಹ ಜೋಗತೀ ರೇಣವ್ವನ ಸಾಕುಮಗಳು. ಕಡ್ಡಿಯಲಿ ಕೊರೆದು ಕೊರೆದು ಬರೆದರೂ ಕ್ಯಾದಗೀ ಗರಿಯಂತಹ ಮೈಬಣ್ಣ, ಕಪ್ಪು ಉಂಗುರಗೂದಲಿನ ಆ ಹೆಣ್ಣಿನ ಕಣ್ಣು, ಮೂಗು ವರ್ಣನೆಗೆ ನಿಲುಕದ್ದು. ರೇಣವ್ವ ಅವಳಿಗೂ ಕಟ್ಟಿ ಜೋಗತಿಯನ್ನಾಗಿ ಮಾಡುತ್ತಾಳೆ. ಅವಳ ಬಾಳು ಬೇಲಿ ಇಲ್ಲದ ಹೊಲದಂತಾಗುತ್ತದೆ. ಆದರಿಂದ ಅವಳ ಕನಸೆಲ್ಲ ಮಣ್ಣುಗೂಡುತ್ತದೆ, ಆಸೆ ಆಕಾಂಕ್ಷೆಗಳೆಲ್ಲ ಹೇಳಹೆಸರಿಲ್ಲದಂತಾಗುತ್ತವೆ. ಬೇರೆ ಹೆಣ್ಣು ಮಕ್ಕಳಂತೆ ತಾನೂ ಗಂಡನೊಂದಿಗೆ ಸುಖವಾಗಿದ್ದು, ಒಳ್ಳೆ ಬಾಳ್ವೆ ನಡೆಸಬೇಕೆಂಬ ಬಯಕೆ ಬಯಕೆಯಾಗಿಯೇ ಉಳಿಯುತ್ತದೆ.

ಇಲ್ಲಿಯ ಕಥಾನಾಯಕ - ಹೆಬ್ಬುಲಿನಾಯಕ. ಒಳ್ಳೆಯ ಪರಾಕ್ರಮಿ. ತಂದೆ ಕಾಡನಾಯಕನಂತೆಯೇ ಒಳ್ಳೇ ಗಂಡ ಗಜವೀರ. "ಸಾದೂನೂ ಅಲ್ಲ, ಸಂನ್ಯಾಸಿ ಆಗಬೇಕಂಬೂ ಲೆಕ್ಕದಾಂವಲ್ಲ. ಬ್ಯಾಡಾದ ವೈರಿನ್ನ ಎದುರಿಸಬೇಕನ್ನೂ ಬಂಟ ; ಬೇಕಾದ ಚಲುವೀನ ಆಳಬೇಕಂಬೂ ಬ್ಯಾಟಗಾರ".

ಇವರಿಬ್ಬರ ಕಣ್ಮನಗಳನ್ನು ಕೂಡಿಸುವ ಸಂದರ್ಭವೊಂದು ಇದ್ದಕ್ಕಿದ್ದಂತೆಯೇ ಒದಗಿ ಬರುತ್ತದೆ. ಯುದ್ಧದಲ್ಲಿ ಗೆದ್ದು ಬಂದ ಹೆಬ್ಬುಲಿ ನಾಯಕನನ್ನು ವೀರೋಚಿತವಾಗಿ ಸ್ವಾಗತಿಸುವಾಗ ಚಂದಾಳ ದೃಷ್ಟಿ ಇವನ ಮೇಲೆ ಬೀಳುತ್ತದೆ. ಅವಳ ಮನಸ್ಸಿನಲ್ಲಿ ಸುಪ್ತವಾಗಿ ಅಡಗಿದ್ದ ಬಯಕೆ ಚಿಗುರೊಡೆದು ಬಯಲಾಗುತ್ತದೆ. ಕೂಡಲೆ ಕೈಲಿದ್ದ ದೇವಿಹಾರವನ್ನು ಅವನ ಕೊರಳಿಗೆ ಬೀಳುವಂತೆ ನಿಂತಲ್ಲಿಂದಲೇ ಎಸೆಯುತ್ತಾಳೆ. ಹೆಬ್ಬುಲಿ ನಾಯಕನೂ ಅವಳತ್ತ ನೋಡುತ್ತಾನೆ. ಮತ್ತೆ ಆ ದೃಷ್ಟಿಯನ್ನು ಕದಲಿಸುವುದು ಕಷ್ಟವಾಗುತ್ತದೆ.

ಹೆಬ್ಬುಲಿನಾಯಕನ ಹೆಂಡತಿ ಚಂಗಲವ್ವ ಇದರಿಂದ ಕಣ್ಣೀರಿಡುವಂತಾಗುತ್ತದೆ. ತನ್ನ ಪತಿಯನ್ನು ಪೂರ್ಣವಾಗಿ ತನ್ನವನನ್ನಾಗಿಸಿಕೊಳ್ಳಲು ಹೆಣಗಾಡುತ್ತಾಳೆ.

ಒಂದು ದಿನ ಇದ್ದಕ್ಕಿದ್ದಂತೆಯೇ ಚಂದಾಳ ಮನೆಗೆ ರಾತ್ರೋರಾತ್ರಿ ಹೋಗುತ್ತಾಳೆ. ಚಂದಾಳ ಕಾಲನ್ನು ಹಿಡಿದು ಬೇಡುತ್ತಾಳೆ. ಚಂಗಲವ್ವನ ಸ್ಥಿತಿ ಚಂದಾಳ ಮನ ಕರಗಿಸುತ್ತದೆ. ಕೊನೆಗೆ, "ತಾಯೀ, ಅಳಬ್ಯಾಡ ! ನೀ ಚಿಂತೀ ಬಿಟ್ಟು ಹೋಗು ; ನಿನ್ನ ಬಾಳೀ ಹೊಂದುಗೂಡೂಹಾಂಗ ನಾ ಮಾಡತೇನಿ" ಎಂದು ಹೇಳಿ ಚಂಗಲವ್ವನನ್ನು ಕಳುಹಿಸಿ ಕೊಡುತ್ತಾಳೆ. ಮಾರನೆಯ ದಿನ ಹಳ್ಳಿಯ ದಂಡೆಯ ಆಲದ ಮರದ ಕೆಳಗೆ ಚಂದಾಳ ಹೆಣ ಕಣ್ಣಿಗೆ ಬೀಳುತ್ತದೆ. ಎಲ್ಲರಿಗೂ ಆಶ್ಚರ್ಯ ! ಹೆಬ್ಬುಲಿನಾಯಕನೂ ಬಂದು ನೋಡಿ, ಬೆದರಿ ಅಲ್ಲಿಂದ ಹೊರಟು ಹೋಗುತ್ತಾನೆ.

ಚೆಂಗಲವ್ವನಿಗೂ ಸುದ್ದಿ ಮುಟ್ಟುತ್ತದೆ. ಕಣ್ಣೀರಿಡುತ್ತ ಓಡಿಬಂದು ಹೆಣದ ಕಾಲನ್ನು ಹಿಡಿದು, ನಮಸ್ಕಾರ ಮಾಡಿ, ಕುಂಕುಮ ಅರಶಿನ ಹಚ್ಚಿ, ಹೂಮಾಲೆ ಹಾಕಿ ನಮಸ್ಕಾರ ಮಾಡುತ್ತಾಳೆ. ಮಾವ ಕಾಡನಾಯಕನಿಗೆ ಹೇಳಿ ತ್ಯಾಗಮಯಿ ಚಂದಾಳ ನೆನಪಿಗಾಗಿ ಅವಳು ಸತ್ತುಬಿದ್ದಲ್ಲೇ ಒಂದು ಕಟ್ಟೆಯನ್ನು ಕಟ್ಟಿಸಿ, ಅದರ ಮೇಲೆ ಅವಳ ಮೂರ್ತಿಯನ್ನು ಕೆತ್ತಿಸಿದ ಕಲ್ಲನ್ನು ಸ್ಥಾಪನೆ ಮಾಡಿಸುತ್ತಾಳೆ.

ಕೈ ಬಿಟ್ಟು ಹೋಗಿದ್ದ ಗಂಡ ಕೈ ಸೇರಿದ ನೆನಪಿಗಾಗಿ ಪ್ರತಿ ವರ್ಷವೂ ಹೋಗಿ ಚೆಂಗಲವ್ವ ಅಲ್ಲಿ ಪೂಜೆ ಸಲ್ಲಿಸಲು ತೊಡಗಿದಳು. ಅದೇ ಒಂದು ಸಂಪ್ರದಾಯವಾಗಿ ಬೆಳೆಯಿತು. ಆ ಊರಿಗೆ ಬಂದ ಸೊಸೆಯರೆಲ್ಲರೂ ಅಲ್ಲಿಗೆ ಹೋಗಿ ಪೂಜೆ ಸಲ್ಲಿಸಿ ಬರುವುದು ಇಲ್ಲಿಯವರೆಗೂ ರೂಢಿಯಲ್ಲಿ ಉಳಿದು ಬರುವಂತೆ ಅದರ ಕೀರ್ತಿ ಬೆಳೆಯಿತು.

ಸಂಪ್ರದಾಯದ ಸಂಕೋಲೆಗೆ ಸಿಕ್ಕಿದ ಹೆಣ್ಣೊಂದರ ದಾರುಣ ಚಿತ್ರ ಇದೆನ್ನಬಹುದು. ತನ್ನ ಮನಸ್ಸಿನ ಆಸೆ, ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲಾಗದಿದ್ದರೂ, ಬೇರೊಂದು ಹೆಣ್ಣಿನ ಸ್ಥಿತಿಗತಿಯನ್ನು ಅರ್ಥಮಾಡಿಕೊಳ್ಳುವ, ಅವಳ ಒಳಿತಿಗಾಗಿ ತನ್ನ ಪ್ರಾಣವನ್ನು ತ್ಯಾಗ ಮಾಡಬಲ್ಲ ಪೂಜನೀಯ ವ್ಯಕ್ತಿಯಾಗಿ ಚಂದಾ ಸ್ಥಾನ ಪಡೆಯುತ್ತಾಳೆ.

ಚೆಂಗಲವ್ವ ಗರತಿಯಾಗಿ, ಸಹಜವಾಗಿ ತನಗಾದ ಅನ್ಯಾಯವನ್ನು ತೋಡಿಕೊಂಡರೂ, ಅವಳ ಸಾವನ್ನು ಬಯಸಿದವಳಲ್ಲ. ಚಂದಾಳ ಆ ದೃಢನಿರ್ಧಾರ, ಅವಳನ್ನು ದುಃಖಕ್ಕೀಡುಮಾಡುತ್ತದೆ. ತನ್ನ ಪ್ರಾಣವನ್ನು ತೆತ್ತು, ಬೇರೊಬ್ಬರ ಸುಖವನ್ನು ಬಯಸುವ ಅವಳ ಹೃದಯಶ್ರೀಮಂತಿಕೆ ಚೆಂಗಲವ್ವಳಿಗೆ ಪೂಜನೀಯವಾಗಿ ತೋರುತ್ತದೆ.

ಇವೆಲ್ಲ ಹಳ್ಳಿಯ ಸಾಮಾನ್ಯ ಸಂಗತಿಗಳು. ಆದರೆ, ಅವು ಸಾರುವ ತತ್ವಗಳು ಮಾತ್ರ ಲೋಕಮಾನ್ಯವಾದುವು. ಜನಪದ ಸಂಸ್ಕೃತಿಯ ಹಾಗೂ ಅಲ್ಲಿ ವ್ಯಕ್ತಗೊಳ್ಳುವ ಅಪೂರ್ವ ಜೀವನಮೌಲ್ಯಗಳ ನೆನಪನ್ನುಂಟುಮಾಡುವ ಇಂತಹ ಕತೆಗಳು ಸ್ವಾಗತಾರ್ಹ. ಇಂತಹ ಮೌಲ್ಯವೊಂದನ್ನು ಒಳಗೊಂಡ ಘಟನೆಯೊಂದಕ್ಕೆ ಕತೆಯ ಸ್ವರೂಪವನ್ನು ಕೊಟ್ಟು ಸ್ವಾರಸ್ಯವಾಗಿಸುವಲ್ಲಿ ಆನಂದಕಂದರು ಯಶಸ್ವಿಯಾಗಿದ್ದಾರೆ.

ಮುಂದಿನ ಕಥೆಗಳೂ ಇದೇ ಧಾಟಿಯವು. 'ಕಂಕಣದ ಕೈ' ಸತೀ ಹೋದ ಸ್ತ್ರೀ ರತ್ನದ ಕಥೆ. ಆದರೆ, ಅಷ್ಟರಲ್ಲಿಯೇ ಅದರ ಮಹತ್ವ ಅಡಗಿಲ್ಲ. ಆಕೆ ಒಬ್ಬಳು ಅಸಾಮಾನ್ಯ ಹೆಣ್ಣು. "ನಾಗಲಬ್ಬೆ ವೀರರ ಉತ್ಸಾಹದ ಗಾಳಿಯನ್ನೇ ಉಸಿರಾಡುತ್ತಾ ಬೆಳೆದವಳು. ಅಣ್ಣ - ತಮ್ಮಂದಿರ ಕೈಯಲ್ಲಿಯ ಕತ್ತಿ ಭಲ್ಲೆಗಳನ್ನು ತೆಗೆದುಕೊಂಡು ತಾನೂ ತಿರುವಿ ಆಡಿಸಿದವಳು. ಮನೆಯಲ್ಲಿಯ ಅರಬ್ಬೀ ಕುದುರೆಯನ್ನು ಹತ್ತಿ ಓಡಿಸಿ ದಣಿದವಳು. ಹಬ್ಬದ ಬೇಟೆಯ ಬೇಟೆಗಾರರ ಹುಮ್ಮಸ್ಸನ್ನು ಕಂಡು ಮೈ ಜುಮ್ಮದಟ್ಟಿಸಿಕೊಂಡವಳು. ಕಾಳಗದಲ್ಲಿ ಗೆದ್ದಾಗಲೀ, ಬೇಟೆಯನ್ನಾಡಿಯಾಗಲಿ ಮನೆಗೆ ಬಂದ ಅಣ್ಣ - ತಮ್ಮಂದಿರಿಗೆ ವಿಜಯದ ಆರತಿಯನ್ನೆತ್ತಿ ಹೆಮ್ಮೆ ಪಟ್ಟವಳು." ಅಂತಹವಳಿಗೆ ಪತಿಯಾಗಿ ದೊರೆತ ರಾಯಗೊಂಡ "ತಾಯಿ - ತಂದೆಗಳ ಮೋಹದ ಮಗುವಾಗಿ ಹಾಯಾಗಿ ಬೆಳೆದ. ತಾಯಿ ಲಕ್ಕಬ್ಬೆ ಮಗನನ್ನು ಗರಡಿಯಾಟಕ್ಕೆ ಬಿಡಲಿಲ್ಲ; ಕುದುರೆಯ ವೈಹಾಳಿಗೆ ಹೋಗಲು ಕೊಡಲಿಲ್ಲ. ಕತ್ತಿ - ಸುರಿಗೆಗಳನ್ನು ಕೈಯಿಂದ ಮುಟ್ಟಗೊಡಲಿಲ್ಲ. ಹಾಲು ಸಕ್ಕರೆಯ ಸವಿಯೂಟ, ಕೆಲಸಕ್ಕೆ ಬಾರದ ಅಲೆದಾಟ....... ತನ್ನ ಹೆಸರನ್ನು ಬರೆಯುವಾಗ 'ರಾಯಗೊಡ' ಎಂದೋ 'ರಾಯಗೊಡ್ಡ' ಎಂದೋ ಬರೆಯುವನು."

ಇದು ನಾಗಲಬ್ಬೆಗೆ ಸಹಿಸಲಾರದ ದುಃಖಕ್ಕೆ ಕಾರಣವಾಗುತ್ತದೆ. ತನ್ನ ಪತಿ ರಣಧೀರನಾಗಿರಬೇಕೆಂದು ಬಯಸಿದ್ದ ಆಕೆಗೆ ತಣ್ಣೀರೆರಚಿದಂತಾಗಿತ್ತು. ಆದರೆ, ಎಲ್ಲವೂ ನುಂಗಲಾರದ ತುತ್ತಾಗಿ ಮೌನಿಯಾದಳು. ಇದು ಅತ್ತೆಯ ಗಮನವನ್ನು ಸೆಳೆಯದೆ ಇರಲಿಲ್ಲ. ಒಂದು ದಿನ

ಸೊಸೆಯನ್ನು ಒತ್ತಾಯಿಸಿದಾಗ, ಆವೇಶದ ಧ್ವನಿಯಲ್ಲಿ ನಾಗಲಬ್ಬೆ ನುಡಿದಳು : "ನೋಡು ಅತ್ತೆಮ್ಮಾ........ ಅವರು ಗರಡಿಯಾಗಿ ಜಟ್ಟಿಯಾಗಬೇಕಂತ ನನಗೆ ಆಶೆ. ಗುರಿಯಿಟ್ಟು ಹೊಡೆಯೂ ಬ್ಯಾಟಿಗಾರರು ಆಗಬೇಕಂತ ಒಳಬಯಕಿ. ಕತ್ತೀಬಾಲಿ ಹಿಡಿದು ಕಾಳಗದ ಬಂಟರಾಗಬೇಕೂ ಅಂತ ನನ್ನ ಇಚ್ಛಾ ! ಅವರು ಹೀಗೆಲ್ಲ ಆದ ಮೇಲೆ, ನನ್ನ ಪ್ರೀತಿ ಅವರಿಗೆ ತನ್ನ ಪೂಜೆ ಸಲ್ಲಿಸತೀನಿ - ಅಂತ್ಯದ."

ನಾಗಲಬ್ಬೆಯ ಇಚ್ಛೆಯನ್ನು ಅರಿತ ರಾಯಗೊಂಡ, ಕೊನೆಗೊಂದು ದಿನ ಅವೆಲ್ಲವೂ ಆದ. ಮನೆಯಲ್ಲಿ ಸಾಮರಸ್ಯದ ಸುಖ - ಸಂತೃಪ್ತಿ ಉಕ್ಕಿ ಹರಿಯತೊಡಗಿತು. ರಾಯಗೊಂಡ ರಣಧೀರನೆನಿಸಿ ನಾಗಲಬ್ಬೆಯ ಮೆಚ್ಚಿನ ಪತಿಯಾಗಿದ್ದ.

ರಣಕಲಿಯಾಗಿ, ವಿಜಾಪುರದ ಸುಲ್ತಾನನ ಸರದಾರ ಅಸದ್‌ಖಾನನ ದೊಡ್ಡ ಸೈನ್ಯವನ್ನು ಎದುರಿಸಲು ಹೊರಟ. ಅದು ನಾಗಲಬ್ಬೆಗೆ ಹೆಮ್ಮೆಯನ್ನು ಉಂಟು ಮಾಡಿತು.

ರಾಯಗೊಂಡ ಯುದ್ಧದಲ್ಲಿ ವೀರಾವೇಶದಿಂದ ಕಾದಿ, ತನ್ನವರಿಗೆ ಗೆಲುವನ್ನು ತಂದಿತ್ತನಾದರೂ, ತಾನು ಮಾತ್ರ ಹಿಂತಿರುಗಲಿಲ್ಲ. ಗಂಡನ ಸಾವು ಅವಳ ಹೃದಯಕ್ಕೆ ಸಿಡಿಲು ಬಡಿದಂತಾದರೂ, ಕಣ್ಣೀರು ಹೊರಡಲಿಲ್ಲ. ಗಂಡನ ವೀರ ಮರಣ ಅವಳಲ್ಲಿ ಒಂದು ಬಗೆಯ ಆವೇಶವನ್ನು ತುಂಬಿತು. ತನ್ನ ಮನಸ್ಸಿನಲ್ಲಿಯೇ ಸತೀ ಹೋಗುವ ದೃಢನಿರ್ಧಾರವನ್ನು ನಾಗಲಬ್ಬೆ ಮಾಡಿದ್ದಳು. ಯಾರ ಮಾತಿಗೂ ಕಿವಿಗೊಡದೆ ತನ್ನ ನಿರ್ಧಾರದಂತೆ ನಡೆದಳು.

ಚಿತೆ ಏರಿದ ನಾಗಲಬ್ಬೆ, ಯಾರಿಗೂ ಅಳದಿರುವಂತೆ ಸೂಚಿಸಲು ಕಂಕಣ ಕಟ್ಟಿದ ತನ್ನ ಬಲದ ಕೈಯನ್ನು ಮೇಲಕ್ಕೆ ಎತ್ತಿದಳು. ಚಿತೆ ಉರಿದು ಎಲ್ಲವೂ ಭಸ್ಮವಾಯಿತು, ಆದರೆ ನಾಗಲಬ್ಬೆ ಕಟ್ಟಿದ್ದ ಕೈ 'ಕಂಕಣ' ಮಾತ್ರ ಬೆಂಕಿಗೆ ಆಹುತಿಯಾಗದೆ ಹಾಗೆಯೇ ಉಳಿದಿತ್ತು. ಅಚ್ಚರಿಗೊಂಡ ಕೆಂಚಗೊಂಡ, ತನ್ನ ಸೊಸೆಯ ನೆನಪಿಗಾಗಿ ರುದ್ರಭೂಮಿಯಲ್ಲಿ ಸತೀ ಕಲ್ಲನ್ನು ನೆಡಿಸಿ ಬೆಳ್ಳಿಯೊಂದರ ಬಲಗೈಯನ್ನು ಮಾಡಿಸಿ, ಚಿತೆಯಲ್ಲಿ ದೊರೆತ ಕಂಕಣಗಳನ್ನು ಆ ಕೈಗೆ ತೊಡಿಸಿ, ಮನೆಯ ದೇವರ ಜಗುಲಿಯಲ್ಲಿರಿಸಿ, ನಿತ್ಯವೂ ಅದರ ಪೂಜೆ ನಡೆಯುವಂತೆ ಏರ್ಪಾಡು ಮಾಡಿದ್ದಾನೆ.

ಇದು, ನಾಗಲಬ್ಬೆಯ ಸತೀತ್ವದ ಕತೆಯಷ್ಟೇ ಅಲ್ಲ, ವೀರ ವನಿತೆಯ ತ್ಯಾಗಮಯ ಬದುಕಿನ ಸತ್ಯಕತೆಯೂ ಹೌದು. ಇಲಿಯೊಂದನ್ನು ಕಲಿಯನ್ನಾಗಿ ಮಾಡಿದ ಸಾಹಸ ಅವಳದ್ದು. ಸತಿಯಾದವಳು ಪತಿಯಿಂದ ಬಯಸುವುದು ಬರಿಯ ಪ್ರೀತಿ ಪ್ರೇಮಗಳನ್ನಷ್ಟೇ ಅಲ್ಲ, ಅವನು ಸಾಹಸಿಯೂ ಆಗಿರಬೇಕು ಎಂಬುದನ್ನು. ಆ ಕಾರ್ಯಕ್ಕೆ ಅವಳು ಪ್ರಯತ್ನ ಪಟ್ಟಳು, ಯಶಸ್ವಿಯೂ ಆದಳು.

ಒಂದರ್ಥದಲ್ಲಿ ಅವಳ ವೈಧವ್ಯಕ್ಕೆ ಅವಳೇ ಕಾರಣಳೆನ್ನಬಹುದು. ರಾಯಗೊಂಡ ಮೊದಲಿನಂತೆ ಹೇಡಿಯಾಗಿಯೇ ಇದ್ದಿದ್ದರೆ, ಅವನು ಯುದ್ಧದಲ್ಲಿ ಕಾದುವ ಪ್ರಸಂಗವೇ ಬರುತ್ತಿರಲಿಲ್ಲ - ಹಾಗಾಗಿ ಅವನು ಬದುಕುತ್ತಿದ್ದ, ಆದರೆ, ಅಂತಹ ಬದುಕಿಗಿಂತ ಇಂತಹ ಸಾವು ನಾಗಲಬ್ಬೆಗೆ ತೃಪ್ತಿಯನ್ನು ಉಂಟುಮಾಡಿರುವುದರಲ್ಲಿ ಅನುಮಾನವಿಲ್ಲ. ಅದಕ್ಕೆ ಪ್ರಾಯಶ್ಚಿತ್ತವೆಂಬಂತೆ ಸತೀ ಹೋಗುವ ತನ್ನ ನಿರ್ಧಾರವನ್ನು ಅವಳು ಕೈ ಬಿಡಲಿಲ್ಲ. ನಾಗಲಬ್ಬೆಯ ವ್ಯಕ್ತಿತ್ವ ಇಲ್ಲಿ ಎದ್ದು ಕಾಣುತ್ತದೆ, ಪ್ರಜ್ವಲಿಸುತ್ತದೆ.

ರಾಯಗೊಂಡ ಹೇಡಿಯಾಗಿ ಬೆಳೆಯಲು ಸಂಪೂರ್ಣ ಅವನೇ ಕಾರಣನಲ್ಲ. ಅವನ ತಂದೆ -

ತಾಯಿಗಳ ಪಾತ್ರವೇ ಹೆಚ್ಚು. ಹುಟ್ಟಿದ ಒಬ್ಬನೇ ಮಗನನ್ನು ಮಡಿಲಲ್ಲಿಯೇ ಇಟ್ಟು ಮುದ್ದಿನಿಂದ ಸಾಕಿದ್ದರು ; ಆದರೆ, ನಾಗಲಬ್ಬೆ ಅವನಲ್ಲಿ ಹುದುಗಿದ್ದ ವೀರತ್ವ ಪ್ರಜ್ವಲಿಸಿ ಹೊರಬರಲು ಕಾರಣಳಾದಳು. ಅವನ ವೀರ ಮರಣಕ್ಕೂ ಕಾರಣಳೆನಿಸಿ ಅವನ ಕೀರ್ತಿಯನ್ನು ಶಾಶ್ವತಗೊಳಿಸಿದಳು - ತಾನೂ ಸ್ತ್ರೀತ್ವದ ಸಂಕೇತವಾಗಿ ಬೆಳಗಿದಳು.

'ವೀರಮಾನ್ಯ' ಇದೇ ಜಾತಿಯ ಕಥೆ. "ಹುಲಿರಾಯ ಆಗಿ ಒಂದು ದಿನ ಬದುಕಿದರೆ ಸಾಕು ! ಹದ್ದು ಆಗಿ ಹೆಣ ತಿನ್ನತ್ತ್ಯ - ಹತ್ತು ಸಾವಿರ ಬದುಕಿದರೂ ಏನು ಆದ್ಹಾಂಗ ಆತು" ಎಂಬ ಸಂದೇಶವನ್ನು ಸಾರುವ ಕತೆ. ಕತೆಯ ನಾಯಕ ವೀರ ಹುಲಿಯಣ್ಣನ ಶೌರ್ಯವನ್ನು ಮೆರೆಯುವ ಕಥೆ.

'ಬಡವಿಯ ಬಾವಿ' - ಮಾನವತೆಯ ಧರ್ಮಬುದ್ಧಿಗೆ ಹಿಡಿದ ಕೈಗನ್ನಡಿ. ಇತಿಹಾಸದ ಒಂದು ಸಂಗತಿಯಾದ ಮಹತ್ತರ ಘಟನೆ. ಬೇರೇನನ್ನೂ ದಾನ ಮಾಡಲಾಗದ ಬಡವಿಯೊಬ್ಬಳು ದೂರದಿಂದ ನೀರನ್ನು ಹೊತ್ತು ತಂದು, ಬಾಯಾರಿ ಬಂದ ದಾರಿಹೋಕರಿಗೆ ನೀರನ್ನು ಕೊಡುವ ಕಾಯಕವನ್ನು ನಡೆಸುತ್ತಿದ್ದಳು.

೧೬೫೨ರ ಬೇಸಿಗೆಯ ಒಂದು ದಿನ ತೊರೆಗಲ್ಲ ಪುರವರಾದೀಶ ಹಿರಿಯ ಜಾಯೇಂದ್ರ ಪ್ರಭು ನಾಡನ್ನು ಸುತ್ತಿ ಬರಲು ಏಕಾಕಿಯಾಗಿ ಹೊರಟಿದ್ದನು. ಬಿಸಿಲ ಧಗೆಯಿಂದ ಬಾಯಾರಿ ನೀರಿಗಾಗಿ ಹಾತೊರೆಯುತ್ತಿದ್ದಾಗ, ಈ ಬಡವಿಯ ದರ್ಶನವಾಗಿ ಅವಳಿಂದ ನೀರನ್ನು, ಪಡೆದು ಕುಡಿದ. ಅವನಿಗೆ ಮರುಜನ್ಮವೇ ಬಂದಂತಾಯಿತು : 'ಮನ ಬಯಸಿದುದ ಬೇಡು' ಎಂದು ಹೇಳಲು, ಆಕೆ ವಿನಯದಿಂದ : 'ನನಗಾಗಿ ಏನೂ ಬೇಡ, ಆದರೆಬಾಯಾರಿ ಬಂದ ಜನಕ್ಕೆ ನೀರನ್ನು ಪೂರೈಸುವ ಶಕ್ತಿ ಮುದುಕಿಯಾದ ನನಗೆ ಇಲ್ಲವಾಗಿದೆ. ಆದ್ದರಿಂದ ಇಲ್ಲೊಂದು ಬಾವಿಯನ್ನು ತೆಗೆಸಿಕೊಡು' ಎಂದು ಬೇಡುತ್ತಾಳೆ. ರಾಜ ಅದರಂತೆಯೇ ಬಾವಿಯೊಂದನ್ನು ಅಲ್ಲಿ ತೆಗೆಸಿಕೊಟ್ಟು ಶಾಸನವನ್ನು ಕೊರೆಯಿಸಿದ. ಇದು 'ಬಡವಿಯ ಬಾವಿ'ಯ ಇತಿಹಾಸ. ಇದಕ್ಕೆ ಮತ್ತೊಂದು ಐತಿಹಾಸಿಕ ಮಹತ್ವವೂ ಇದೆ. ಇಲ್ಲಿ ಕೆತ್ತಲ್ಪಟ್ಟಿರುವ ಶಾಸನ, ೧೭ನೆಯ ಶತಮಾನದಲ್ಲಿಯೇ ಸಾರ್ವಜನಿಕ ಬಾವಿಯಲ್ಲಿ ನೀರನ್ನು ಬಳಸುವ ಹಕ್ಕನ್ನು ಸ್ಥಾಪಿಸಿಕೊಟ್ಟಿದೆ. ಇಲ್ಲಿಯ ಶಾಸನ ಬರಹ ಹೀಗಿದೆ :

"...... ಹೊಲೆಯ, ಮಾದಿಗ, ಚಮ್ಮಾರ ಕಡೆಯಾಗಿ ಆವುದೆ
ಜಾತಿಯವರುಂ, ಆವುದೆ ನೀತಿಯವರುಂ, ಭೇದವಿಲ್ಲದಂತೆ
ಈ ವಾಪಿಯೊಳಿದು ತೀರ್ಥಮಂ ಕೊಳಲಕ್ಕುಂ ಇದು
ತಡೆಯಲಾಟಿಪ ಮೇಲು ಕುಲಜರು, ಪಂಚ ಮಹಾ
ಪಾತಕಕ್ಕೆ ಪಕ್ಕಾದಪರ್ ; ಮುಂದಿನ ಭವದೊಳ್
ಪಲ್ಲಿಯಾಗಿ ಕೀತನಾಗಿ ಪುಟ್ಟದಪರ್..........."

'ಬಡವಿಯ ಬಾವಿ'ಯ ಕತೆ ಇದಾದರೂ, ಅದು ಸ್ಥಾಪಿಸಿರುವ ದಾಖಲೆಗಳು ಹಲವು. ಆಕೆ ಬಡವಿಯಾದರೂ, ಅವಳ ಹೃದಯಶ್ರೀಮಂತಿಕೆ ದೊಡ್ಡದು. ಆ ಕಾರಣದಿಂದಲೇ ಅವಳು ಆದರ್ಶ ವ್ಯಕ್ತಿಯಾಗಿದ್ದಾಳೆ. ಇತಿಹಾಸದ ಪುಟದಲ್ಲಿ ಸ್ಥಾನ ಪಡೆದಿದ್ದಾಳೆ.

ಈ ಸಂಕಲನದ ಕೊನೆಯ ಎರಡು ಕತೆಗಳು ಮೊದಲ ಆರು ಕತೆಗಳಿಗಿಂತ ಭಿನ್ನವಾದವು. ಇವುಗಳಲ್ಲಿ 'ಸಿಬ್ಬಣದ ನಿಬ್ಬಣ' ಹಳ್ಳಿಯಲ್ಲಿ, ಹಳ್ಳಿಯ ಎರಡು ಗೌಡಮನೆತನಗಳ ನಡುವೆ ತಲೆದೋರುವ ಸೇಡಿನ ಕಿಡಿ, ವಿವಿಧ ಘಟ್ಟಗಳಲ್ಲಿ ಬೆಳೆದು ಬೆಂಕಿಯ ಬೆಟ್ಟವೇ ಆಗುವುದನ್ನು ಕಂಡರೆ, 'ದನಗಾಹಿ' ಕತೆಯಲ್ಲಿ ಸ್ಪಷ್ಟವಾಗಿ ಎರಡು ವ್ಯಕ್ತಿಗಳ ತೌಲನಿಕ ಅಧ್ಯಯನ ನಡೆದಿರುವುದನ್ನು ಕಾಣುತ್ತೇವೆ. ಇಲ್ಲಿ ಶ್ರೀಮಾನ್ ಅಂಗಡಿ ವಕೀಲರು ಸುಳ್ಳಿನಲ್ಲಿಯೇ ಸೌಧ ಕಟ್ಟಿ ಶ್ರೀಮಂತ ಬದುಕು ನಡೆಸುವ ವ್ಯಕ್ತಿಯಾದರೆ, ಅವರ ಮನೆಯ ಆಳು 'ದನ ಗಾಹಿ' ಗಂಗಣ್ಣ ಒಂದೇ ಒಂದು ಸುಳ್ಳು ಹೇಳಿದರೂ ಶ್ರೀಮಂತನಾಗಿ ಬದುಕಬಹುದಾದ ಅವಕಾಶವನ್ನು ಕಳೆದುಕೊಂಡು ಜೀವನದ ಸವಿಗನಸನ್ನೇ ಹಾಳು ಮಾಡಿಕೊಂಡ. ಆದರೂ ಅವನು ಕೊನೆಯಲ್ಲಿ ಜೀವನವನ್ನು ನೋಡುವ ದೃಷ್ಟಿ, ಸತ್ಯದ ಮಹತ್ವವನ್ನು ಎತ್ತಿ ಹಿಡಿಯುವಂತಹುದು: "ನಾನು ಸತ್ಯಮಾರ್ಗ ಹಿಡಿದದ್ದು, ಕೆಡಿಸಿದ್ದರ ನನ್ನೊಬ್ಬನ ಬಾಳೇ ಕೆಡಿಸಿದ್ದೀತು. ಈ ಜನರ ಸುಳ್ಳಿನ ಮಾರ್ಗ ಲೋಕಾನೆಲ್ಲ ಕೆಡಸಕಾ ಹೊಂಟೈತಿ ಅಲ್ಲಾ".

'ಸತ್ಯ' ಎಂದು ಹೊರಟವನಿಗೆ ಕುಡಿಯಲು ನೀರೂ ಗತಿಯಿಲ್ಲದಂತಾಗುತ್ತದೆ - ಎಂಬ ಮಾತುಗಳು ಕೇಳಿ ಬರುತ್ತಿರುವ ಇಂದಿನ ಸಮಾಜದಲ್ಲಿ ದನಗಾಹಿ ಗಂಗಣ್ಣನಂತಹವರ ಪಾಡೇನು ಎಂಬುದನ್ನು ಕತೆಗಾರರು ಮನದಟ್ಟು ಮಾಡಿಸಿದ್ದಾರೆ. ಆದರೂ ಸತ್ಯಕ್ಕೆ ಬೆಲೆ ಇದ್ದೇ ಇರುತ್ತದೆ ಎಂಬುದರ ಧ್ವನಿಯೂ ಅಲ್ಲಿದೆ.

ಇಲ್ಲಿ ಆನಂದಕಂದರು ಐತಿಹಾಸಿಕ ಘಟನೆಗಳಿಗೆ ಸಣ್ಣ ಕತೆಗಳ ತಿರುವನ್ನು ಕೊಟ್ಟಿದ್ದಾರೆ. ಸ್ವಾರಸ್ಯಕರವಾದ ರೀತಿಯಲ್ಲಿ ಆ ಘಟನೆಗಳನ್ನು ನಿರೂಪಿಸಿದ್ದಾರೆ. ಹಾಗೆ ಮಾಡುವಲ್ಲಿ ಆಯಾ ವ್ಯಕ್ತಿಗಳ ವ್ಯಕ್ತಿತ್ವವನ್ನು ಸ್ಪಷ್ಟ ರೀತಿಯಲ್ಲಿ ತೋರಿಸಿಕೊಡುವ, ಆ ವ್ಯಕ್ತಿತ್ವದ ಮಹತ್ವವನ್ನು ಎತ್ತಿ ತೋರುವ ಪ್ರಯತ್ನ ಮಾಡಿದ್ದಾರೆ.

ಮುಖ್ಯವಾಗಿ ಆನಂದಕಂದರು 'ಮಾತನಾಡುವ ಕಲ್ಲು' ಕಥಾಸಂಕಲನದ ಮೂಲಕ ಏನನ್ನು ಮಾಡಿದ್ದಾರೆ ಎಂಬುದಕ್ಕೆ ಉತ್ತರ ಅವರಿಂದಲೇ ದೊರೆಯುತ್ತದೆ. 'ಕಂಕಣದ ಕೈ' ಕತೆಯ ಆರಂಭದ ಸಾಲುಗಳಲ್ಲಿ ಇದನ್ನು ಕಾಣಬಹುದು.

"ನಮ್ಮ ಕನ್ನಡ ನಾಡಿನ ಇತಿಹಾಸ ಬರೆದಿರುವುದಕ್ಕಿಂತ ಬರೆಯದೇ ಇರುವುದೇ ಹೆಚ್ಚಾಗಿದೆ. ಬರೆದಿಟ್ಟಿರುವ ಇತಿಹಾಸವೆಂದರೆ ಬರೀ ರಾಜ ಸಾಮ್ರಾಜರ ವಂಶನಾಮಗಳ ಅನುಕ್ರಮಣಿಕೆ. ಆ ಆ ರಾಜ - ಸಾಮ್ರಾಜರ ಕಾಲದಲ್ಲಿ ನಡೆದ ಯುದ್ಧದೊಂಬೆಗಳ ವಿವರಣೆ. ಇನ್ನೇನಾದರೂ ಬರೆದಿರಿಸಿದುದು ಇದೆಯೆಂದರೆ, ಅವೇ - ಆ ದಾನದತ್ತಿಗಳ ಶಿಲಾಶಾಸನ - ತಾಮ್ರಪಟಗಳು. ಕನ್ನಡಿಗರ ಮಾನವತೆಯ - ಸಾಮಾಜಿಕ - ವೈಯಕ್ತಿಕ ಜೀವನದ ವಿವರಣೆಗಳು ನಮಗೆ ಸಿಕ್ಕಬೇಕೆಂದರೆ, ಅದಕ್ಕಾಗಿ ನಾವು ಇನ್ನೂ ಬರೆಯದಿರುವ ನಮ್ಮ ಇತಿಹಾಸಕ್ಕೆ ಶರಣು ಹೋಗಬೇಕಾಗುವುದು. ಆದರೆ ಅದನ್ನು ಕಾಣುವುದಕ್ಕೆ ವಿಶಿಷ್ಟ ಪ್ರಕಾರದ ದೃಷ್ಟಿಗಳು ಬೇಕು ; ಅದನ್ನು ಅರಿತುಕೊಳ್ಳುವುದಕ್ಕೆ ವಿಶಿಷ್ಟ ರೀತಿಯ ಬುದ್ಧಿ - ಮನಸ್ಸುಗಳು ಬೇಕು. ನಾವು ನಮ್ಮ ನಾಡಿನ ಇಂತಹ ಅಲಿಖಿತ ಇತಿಹಾಸದ ಪುಟಗಳು ಕೆಲವನ್ನು ಕಂಡು, ಓದಿ, ಅರಿತು, ಹಿಗ್ಗು - ಹೆಮ್ಮೆಗಳಿಂದ ಬೀಗಿ, ಮಿಕ್ಕ ಜನಕ್ಕೂ ಗೊತ್ತಾಗಲೆಂದು ಅದನ್ನೀಗ ವಿವರಿಸಬೇಕೆಂದಿದ್ದೇವೆ."

ಹಾಗಾಗಿ ಅಲಿಖಿತವಾಗಿದ್ದ ಇತಿಹಾಸದ ಹಲವು ಘಟನೆಗಳನ್ನು ಗುರುತಿಸಿ, ಅವನ್ನು ಲಿಖಿತ

ರೂಪಕ್ಕೆ ತಂದಿದ್ದಾರೆ. ಮಿಕ್ಕ ಜನಕ್ಕೂ ಅವು ತಿಳಿಯುವಂತಾಗಬೇಕು ಎಂಬುದು ಅವರ ಉದ್ದೇಶ. ಆ ಘಟನೆಗಳನ್ನು ವಿವರಿಸಿ ಹೇಳುವಾಗ ನಮ್ಮ ಸಂಸ್ಕೃತಿಯ ಶ್ರೇಷ್ಠತೆಯನ್ನು ಎತ್ತಿ ತೋರುವ ಕೆಲಸ ಮಾಡಿದ್ದಾರೆ.

ನಡೆದು ಹೋದ ಘಟನೆಗಳ ಸರಳ ನಿರೂಪಣೆ ಇವೆನಿಸಿದರೂ, ಆನಂದಕಂದರ ನಿರೂಪಣಾ ವೈಖರಿ ಸಣ್ಣ ಕತೆಗಳ ತಿರುವನ್ನು ಪಡೆದುಕೊಂಡಿರುವುದು ಒಂದು ವೈಶಿಷ್ಟ್ಯವೆನ್ನಬಹುದು. ಈ ಸಂಕಲನದ ಮುನ್ನುಡಿಯಲ್ಲಿ ದ.ರಾ. ಬೇಂದ್ರೆಯವರು ಅಭಿಪ್ರಾಯಿಸುವಂತೆ: "ಇಂದಿನ ಕತೆಗಳಂತೆ ಹಿಂದಿನ ಕತೆಗಳು ವಾಸ್ತವಿಕವಲ್ಲ. ಕತೆಗಾರರು ಕವಿಯ ದೃಷ್ಟಿಯಿಂದ ಅವುಗಳನ್ನು ರೂಪುಗೊಳಿಸಿದ್ದಾರೆ. ಕಥೆಗಾರರ ರಸಿಕತೆಯೊಂದಿಗೆ, ಆ ನಾಡಿನ ರಸಿಕತೆಯೂ, ಅವರ ಮರುಕದೊಡನೆ ಜನತೆಯ ಕಾರುಣ್ಯಾಸ್ಪದತೆಯೂ, ಅವರ ಉತ್ಸಾಹದೊಡನೆ ಅಲ್ಲಿಯ ಜೀವನದ ಕೆಚ್ಚಿನ ಸ್ವಭಾವವೂ, ಕಥೆಗಾರರ ವಿಲಾಸ ವಿಲಾಸವಾಗಿ ಹರಿದು ಬರುವ ಶೈಲಿಯೊಡನೆ ಓದುಗರ ಹೃದಯವನ್ನು ಹೊಗುವುದು".

ಈ ಎಲ್ಲ ಅಂಶಗಳ ಜೊತೆಗೆ, ಇಲ್ಲಿಯ ವಸ್ತುವಿನ ಹೊಸತನವೂ ಸೇರಿ ಇಲ್ಲಿಯ ಕತೆಗಳು ಓದುಗರಿಗೆ ಮೆಚ್ಚೆನಿಸುತ್ತವೆ.

* * * * *

ಬೇಂದ್ರೆ : ಒಂದು ಟಿಪ್ಪಣಿ

ಬೇಂದ್ರೆ ಅವರ ಕಾವ್ಯವನ್ನು ಕುರಿತು ಚರ್ಚಿಸುವಾಗಲೆಲ್ಲ, ವಿಚಾರ ಮಾಡುವಾಗಲೆಲ್ಲ ಎರಡು ಅಂಶಗಳು ಮುಖ್ಯವಾಗಿ ಮುಂದಾಗುತ್ತವೆ. ಒಂದು, ಅವರ ಕಾವ್ಯದಲ್ಲಿ ಮೈಮುರಿದು ಮಲಗಿರುವ ಜಾನಪದ ಸೊಗಡಿನ ಛಂದೋವೈವಿಧ್ಯ ; ಮತ್ತೊಂದು ಅಷ್ಟೇ ಪ್ರಮುಖವಾಗಿ ಎದುರಾಗುವ ಅಲ್ಲಿನ ಕ್ಲಿಷ್ಟತೆ. ಬೇಂದ್ರೆ ಕಾವ್ಯ ತೋರಿಕೆಗೆ ಕಾಣುವಷ್ಟು ಸರಳವಾದದ್ದಲ್ಲ ; ಸುಲಭವಾದದ್ದಲ್ಲ ಎಂಬುದು ಬಹುಮಂದಿ ವಿಮರ್ಶಕರ ಅಭಿಪ್ರಾಯ. ಅದು ನಿಜವೂ ಹೌದು. ನಾದದ ಲಯದಲ್ಲಿ ಓದುಗರನ್ನು ಸೆರೆ ಹಿಡಿದು ಮೈ ಮರೆಸುವ ಅವರ ಕಾವ್ಯ ; ಅಲ್ಲಿಯ ಪದಜಾಲದ ಶೋಧನೆಗೆ ಹೊರಟಾಗ ದಾರಿ ತಪ್ಪುವುದು ಸಹಜವೆಂಬಂತಾಗಿಬಿಟ್ಟದೆ. ಅರ್ಥದ ಜಾಲದಲ್ಲಿ ತಿಣುಕಾಡಬೇಕಾಗುತ್ತದೆ.

ಕವಿ ಕಾಲದ ಶಿಶು - ಎಂಬುದು ನಿಜ. ತನ್ನ ಕಾಲದ ಸುತ್ತಮುತ್ತಲ ಬದುಕನ್ನು ಹಾಗೂ ವೈಯಕ್ತಿಕ ಭಾವನೆಗಳನ್ನು ಒಟ್ಟುಗೂಡಿಸಿ ಕಾವ್ಯ ರಚಿಸುತ್ತಾನೆ. ಪ್ರಜ್ಞಾವಂತನಾದ ಸೂಕ್ಷ್ಮ ದೃಷ್ಟಿಯ ಕವಿಯ ಹೃದಯಕ್ಕೆ ಹಾಗೂ ಕಣ್ಣಿಗೆ ಅವೆಲ್ಲವೂ ವಿಶಿಷ್ಟ ರೀತಿಯಲ್ಲಿ ಗೋಚರಿಸಿ ಕಾವ್ಯ ಸ್ವರೂಪವನ್ನು ತಾಳುತ್ತವೆ. ಅನೇಕ ವೇಳೆ ಕವಿಯ ವೈಯಕ್ತಿಕ ಭಾವನೆಗಳು ಒತ್ತಟ್ಟಿಗುಳಿದು, ಮಿಕ್ಕವುಗಳಷ್ಟೇ ಕಾವ್ಯ ಸ್ವರೂಪವನ್ನು ಪಡೆದುಕೊಳ್ಳುತ್ತವೆ ಎಂಬುದು - "ಎನ್ನ ಪಾಡೆನಗಿರಲಿ - ಎನ್ನ ಹಾಡನಷ್ಟೆ ಕೇಳೊ ರಸಿಕ" ಎಂಬಂತಹ ಕವಿಯ ಮಾತುಗಳಿಂದಲೇ ವೇದ್ಯವಾಗುತ್ತವೆಯಾದರೂ, ಎಲ್ಲ ಸಂದರ್ಭಗಳಲ್ಲಿಯೂ ಅದು ನಿಜ ಎಂದು ಹೇಳುವುದು ಕಷ್ಟ.

ನವೋದಯ ಕಾಲದ ಕವಿಗಳ ಸಾಲಿನಲ್ಲಿ ಕುವೆಂಪು, ಬೇಂದ್ರೆ, ಹಾಗೂ ಪು.ತಿ. ನ - ಈ ಮೂವರೂ, ನಮ್ಮ ಹಳಗನ್ನಡ ಕಾವ್ಯ ಪರಂಪರೆಯಲ್ಲಿ ಬರುವ - ಪಂಪ, ಪೊನ್ನ, ರನ್ನರಂತೆ ಗೌರವಕ್ಕೆ ಪಾತ್ರರಾಗುವವರು. ಕಾವ್ಯ ಜಗತ್ತನ್ನು ಬೆಳಗಿದ ಕೀರ್ತಿಯಲ್ಲಿಯೂ ಅದೇ ಸ್ಥಾನಮಾನಕ್ಕೆ ಅರ್ಹರೆನಿಸಿದರೂ, ಆ ಒಬ್ಬೊಬ್ಬರು ಹುಟ್ಟಿ ಬಂದ ಹಿನ್ನೆಲೆ ಬೆಳೆದು ಬಂದ ಪರಿಸರಗಳಿಂದ ಅವರುಗಳ ಕಾವ್ಯದ ದೃಷ್ಟಿ, ಅಭಿವ್ಯಕ್ತಿಯ ಸ್ವರೂಪ ಬೇರೆ ಬೇರೆಯಾದದ್ದು ಸಹಜವೇ ಆಗಿ ಕಂಡು ಬರುತ್ತದೆ. ಕವಿಯೊಬ್ಬನ ವೈಯಕ್ತಿಕ ಬದುಕು ಹಾಗೂ ಬೆಳೆದು ಬಂದ ಸಾಮಾಜಿಕ ಪರಿಸರ ಕಾವ್ಯಾಭಿವ್ಯಕ್ತಿಯ ಮೇಲೆ ಗಣನೀಯ ಪರಿಣಾಮವನ್ನೂ ಪ್ರಭಾವವನ್ನೂ ಉಂಟು ಮಾಡುತ್ತದೆ ಎಂಬುದನ್ನು ಮರೆಯುವಂತಿಲ್ಲ. ಅವರವರ ಕಾವ್ಯದ ಶ್ರೇಷ್ಠತೆ, ವೈಶಿಷ್ಟ್ಯ ಹಾಗೂ ವೈವಿಧ್ಯಗಳು ಗೋಚರಿಸುವುದು ಆಗಲೇ.

ಬೇಂದ್ರೆ ಅವರು ನವೋದಯ ಕಾಲದ ಕವಿಗಳ ಸಾಲಿನಲ್ಲಿ ಭಾವಗೀತ ಪ್ರತಿಭೆಗೆ ಹೆಸರಾದವರು. ಅವರು ಸಾಹಿತ್ಯದ ಇನ್ನಿತರ ಹಲವು ಪ್ರಮುಖ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದರೂ, ಛಂಗದ

ಬೆನ್ನೇರಿ ಹೊರಟ ಅವರ ಕಲ್ಪನಾ ವಿಲಾಸ ಅವರನ್ನು ಕಾವ್ಯ ಜಗತ್ತಿನಲ್ಲಿ ಮೆರೆಸಿರುವುದೇ ಹೆಚ್ಚು. ಬೇಂದ್ರೆ ಅವರು ಪದಜಾಲದ ಮೋಡಿಕಾರರು. ಆ ಕಾರಣದಿಂದ ಅವರ ಭಾವಗೀತೆಗಳು, ತಮ್ಮ ನಾದದ ಮೋಹಕತೆಯಿಂದ ಕಿವಿಯನ್ನು ಅಷ್ಟೇ ಮೋಹಕವಾಗಿ ಹೊಕ್ಕರೂ, ಮಿದುಳನ್ನು ಕಲಕುವುದು ಹೆಚ್ಚು. ಈ ಮಾತು ಎಲ್ಲ ಕವಿತೆಗಳ ವಿಷಯದಲ್ಲಿ ನಿಜ ಅಲ್ಲವೆನಿಸಿದರೂ, ಕೆಲವೊಂದು ಕವಿತೆಗಳ ವಿಷಯಕ್ಕಂತೂ ಸುಳ್ಳೆನಿಸುವುದಿಲ್ಲ. ಒಂದು ಕಡೆ ಅವು ಅನುಭಾವದ ಭಾರದಲ್ಲಿ ಬಾಗಿ - ಬೀಗಿ ಕೆಲವರನ್ನು ತಲುಪುವುದು ಕಷ್ಟವಾಗಬಹುದೆನಿಸಿದರೂ ; ಅದಕ್ಕೂ ಮೊದಲು ಅಲ್ಲಿನ ಜಾನಪದ ಸೊಗಡಿನ ಪದ ಜಾಲ ನಮ್ಮನ್ನು ಮೈಮರೆಸಿರುತ್ತದೆ.

ಬೇಂದ್ರೆ ಮತ್ತು ಕುವೆಂಪು ಬೇರೆಯಾಗುವುದೂ ಇಲ್ಲಿಯೇ ಅನಿಸುತ್ತದೆ. ಇಲ್ಲಿಯ ಸಂವಾದ ಗೋಷ್ಠಿಯ ಹಲವರ ಮಾತುಗಳನ್ನು ಕೇಳಿದಾಗ ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚು ಒತ್ತನ್ನು ಕೊಟ್ಟಿದ್ದು ಕಂಡು ಬಂತು. ಕುವೆಂಪು - ಬೇಂದ್ರೆ ಅವರುಗಳ ಬಗ್ಗೆ ಬಂದಿರುವ ಇದುವರೆಗಿನ ವಿಮರ್ಶೆಗಳನ್ನು ಗಮನಿಸಿದಾಗ, ಕವಿಯಾಗಿ ಕುವೆಂಪು ಅವರನ್ನು ವಾರೆನೋಟದಲ್ಲಿಯೇ ಗಮನಿಸುತ್ತ ಬಂದಿರುವುದು ಸ್ಪಷ್ಟ. ಬೇಂದ್ರೆ ಅವರ ಕವಿತೆಗಳಲ್ಲಿ ಕಂಡು ಬರುವ ಧ್ವನಿಯಾಗಲಿ, ಅನುಭಾವದ ಅಂಶವಾಗಲಿ, ಆಧ್ಯಾತ್ಮಿಕತೆಯ ಹೆಚ್ಚಳವಾಗಲಿ ಇವು ಕುವೆಂಪು ಅವರಲ್ಲಿ ಕಡಿಮೆ ಎಂದು ಭಾವಿಸುತ್ತ ಬಂದಿರುವುದೇ ಹೆಚ್ಚಾಗಿ ಕಂಡು ಬರುತ್ತದೆ. ಆ ಮೂಲಕ ಬೇಂದ್ರೆ ಅವರ ಕಾವ್ಯದ ಗಟ್ಟಿತನವನ್ನು ಅವರ ಕಾವ್ಯ ಪ್ರತಿಭೆಯನ್ನು ಗುರುತಿಸುತ್ತ ಬಂದಿರುವುದು ಸ್ಪಷ್ಟ. "ನನ್ನ ಜೀವನದಲ್ಲಿ ಪೌರುಷ ನಿಮಿತ್ತ ಮಾತ್ರ. ದೈವಾವಲಂಬನವೇ ನನಗೆ ಎಚ್ಚರದ ದನಿಯಾಗಿ ಬಿಟ್ಟಿದೆ" ಎಂದು ಹೇಳಿಕೊಂಡಿರುವ ಬೇಂದ್ರೆ ಅವರು ಸಹಜವಾಗಿಯೇ ಅಪೌರುಷವಾದುದರ ಕಡೆಗೇ ವಾಲಿ ಆ ದೃಷ್ಟಿ - ಧೋರಣೆಯಲ್ಲಿಯೇ ಕಾವ್ಯ ರಚನೆಯಲ್ಲಿಯೂ ತೊಡಗಿದ್ದು ಅಸಹಜವಾದುದೇನೂ ಅಲ್ಲ. ಆದರೆ, "ಕಾವ್ಯ ಬರೆಯಲು ಹೆಚ್ಚಿಗೇನು ಬೇಕ | ಸಣ್ಣ ಹುಣಿಸೆ ಮರ ಸಾಕ" ಎಂದು ಹೇಳುವ ಕವಿ, ಸಾಮಾಜಿಕಕ್ಕೆ ಸ್ಪಂದಿಸಿದ್ದೆಷ್ಟು ? ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ, ಕುವೆಂಪು ಅಲ್ಲಿ ಮೇಲುಗೈಯಾಗಿ ಕಂಡು ಬರುತ್ತಾರೆ. ಈ ಸಂಬಂಧವಾದ ಬೇಂದ್ರೆ ಅವರ ಕವಿತೆಗಳನ್ನು ಗಮನಿಸುವಾಗ ಅಲ್ಲಿಯೂ ಸಂಕೀರ್ಣತೆಯ ಅಥವಾ ಆಧ್ಯಾತ್ಮದ ತೊಡಕಿನಿಂದ ಬಿಡಿಸಿಕೊಂಡವುಗಳಾಗಿರುವುದಿಲ್ಲ.

ಕುವೆಂಪು, ಬೇಂದ್ರೆ - ಇಬ್ಬರದ್ದೂ ಅಸಾಧಾರಣ ಪ್ರತಿಭೆಯೇ ; ಅದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ, ಅವರುಗಳು ಈ ಸಮಾಜದಲ್ಲಿದ್ದುಕೊಂಡು ಸ್ಪಂದಿಸಿದ ರೀತಿ ಭಿನ್ನ ಅಷ್ಟೆ. ಅವರುಗಳ ಕಾವ್ಯದ ಸತ್ವವಾಗಲಿ, ಸ್ವರೂಪವಾಗಲಿ ಭಿನ್ನ ಭಿನ್ನ ಅನಿಸುವುದು ಈ ಕಾರಣದಿಂದ ಅನಿಸುತ್ತದೆ. ಬೇಂದ್ರೆ ಅವರು ಬಂದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸರ ; ಕುವೆಂಪು ಅವರು ಬಂದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸರ ಎರಡೂ ಬೇರೆ ಬೇರೆ. ಎರಡೂ ತದ್ವಿರುದ್ಧವಾದ ಸ್ಥಿತಿಯವು ಎನ್ನುವುದನ್ನು ಮರೆಯಬಾರದು. ಬೇಂದ್ರೆ ಅವರಿಗೆ ಸಿದ್ಧವಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ವೇದಿಕೆ ಇತ್ತು. ಆದರೆ, ಕುವೆಂಪು ಅವರು ಸಾಹಿತ್ಯಕವಾಗಿ ಮುನ್ನಡೆಯನ್ನು ಸಾಧಿಸಬೇಕಾದರೆ, ಅಂತಹ ಒಂದು ವೇದಿಕೆಯನ್ನು ತಾವೇ ಸ್ವತಃ ಸಿದ್ಧಪಡಿಸಿಕೊಳ್ಳಬೇಕಾದ ಪರಿಸ್ಥಿತಿಯಿತ್ತು. ಒಂದು ರೀತಿಯಲ್ಲಿ ಕುವೆಂಪು ಅವರದ್ದು ಪಂಪನ ಸ್ಥಿತಿಯೇ ಆಗಿತ್ತೆನ್ನಬಹುದು. ಅವನು ಧಾರ್ಮಿಕವನ್ನೂ ಬಿಡುವಂತಿರಲಿಲ್ಲ, ಲೌಕಿಕವನ್ನೂ ಬಿಡುವಂತಿರಲಿಲ್ಲ. ಏಕೆಂದರೆ ರಾಜಾಶ್ರಯವಿಲ್ಲದೆ ಅಂದು ಕವಿಯಾಗಿ ಮಾನ್ಯತೆ ಪಡೆಯುವುದು ಸಾಧ್ಯವಿರಲಿಲ್ಲ ಎಂಬುದು ಗೊತ್ತಿರುವ ಸಂಗತಿ. ಇಲ್ಲಿ ಕುವೆಂಪು

ಅವರದ್ದೂ ಒಂದು ತೆರನಾಗಿ ಅದೇ ಸ್ಥಿತಿ ಎನ್ನಬಹುದು. ಅವರು ಒಂದು ರೀತಿಯಲ್ಲಿ ತನ್ನ ಜನದ, ನೆಲದ ಕಾಳಜಿಯನ್ನೂ ಆರಂಭದಿಂದಲೇ ಹೊತ್ತು ಬಂದರು, ಹಾಗಾಗಿ ಅವರ ಕಾವ್ಯದ ವಸ್ತು, ಭಾಷೆ ಮತ್ತು ಸ್ವರೂಪವೇ ಆಗಿನ ಸಂದರ್ಭದ ಕವಿಗಳ ವಸ್ತು - ಭಾಷೆ - ಸ್ವರೂಪಗಳಿಗಿಂತ ಬೇರೆಯೇ ಆಗಬೇಕಾಯಿತು. ಮತ್ತೊಂದು ಕಡೆ ಅವರು ಸಿದ್ಧವಾದ ವೇದಿಕೆಯಿಂದ ಕಾವ್ಯ ರಚಿಸುತ್ತಿದ್ದವರೊಂದಿಗೆ ಸ್ಪರ್ಧಿಸಬೇಕಾಗಿತ್ತು. ಹಾಗಾಗಿ ಭಾವಗೀತಕಾರರಾಗಿ ಅವರು ಸರಳತೆಯನ್ನೂ, ಕಾವ್ಯ ಹಾಗೂ ಗದ್ಯಕಾರರಾಗಿ ಅವರು ಸಂಕೀರ್ಣತೆಯನ್ನೂ ತಮ್ಮ ಬರವಣಿಗೆಯಲ್ಲಿ ತರುವುದು ಅನಿವಾರ್ಯವಾಯಿತು.

ಭಾವಗೀತೆಯನ್ನು ಕುರಿತು ಬೇಂದ್ರೆ ಅವರು ಒಂದು ಕಡೆ ಹೇಳಿಕೊಂಡಿರುವ ಮಾತುಗಳು ಅವರ ಕಾವ್ಯಕ್ಕೆ ಹೆಚ್ಚಾಗಿ ಹೊಂದಿಕೊಳ್ಳುವುದೇ ಆಗಿದೆ :

ಇದು ಮಂತ್ರ
ಅರ್ಥಕೊಗ್ಗದ ಶಬ್ದಗಳ
ಪವಣಿಸುವ ತಂತ್ರ

ಹಾಗೆಯೇ "ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ" ಎಂಬ ಮಾತು ಅರ್ಥವತ್ತಾಗಿಯೇ ಕಂಡು ಬರುತ್ತದೆ. ಕುವೆಂಪು ಅವರ ಭಾವಗೀತೆಗಳು ಸಾಮಾಜಿಕ ಅಸ್ತ್ರವಾಗಿ ಬಳಕೆಯಾದಷ್ಟು ಪ್ರಮಾಣದಲ್ಲಿ, ಬೇಂದ್ರೆ ಅವರ ಭಾವಗೀತೆಗಳು ಆಗಲು ಸಾಧ್ಯವಾಗಲಿಲ್ಲ ಎಂಬುದು ಚರ್ಚೆಯ ವಿಷಯವೇನೂ ಆಗಲಾರದು. ಬೇಂದ್ರೆ ಅವರು ಭಾವಗೀತಕಾರರಾಗಿ, ಅಲ್ಲಿಯ ಕಲಾಸ್ವರೂಪವನ್ನು ಪೂರ್ಣವಾಗಿ ಕಾಯ್ದುಕೊಂಡು ಬಂದಿದ್ದಾರೆ ಎಂಬ ಮೆಚ್ಚುಗೆಯ ಮಾತುಗಳು ಇವೆಯಾದರೂ ; ಸಾಮಾಜಿಕ ಕಾಳಜಿ ಅವುಗಳಲ್ಲಿ ವಿರಳ ಎಂಬ ಧ್ವನಿಯೂ ಇದೆ. ಆದರೆ ಕುವೆಂಪು ಅವರು ಭಾವಗೀತೆಗಳಲ್ಲಿ ಕೆಲವೊಂದು ಕವಿತೆಗಳಲ್ಲಿ ಕಲಾ ಸೌಂದರ್ಯ ಸೊರಗಿದ್ದರೂ, ಅದು ಕವಿಯ ದೌರ್ಬಲ್ಯದಿಂದಲ್ಲ ; ಕವಿಯ ಕಾವ್ಯದ ಉದ್ದೇಶದಿಂದ. "ಸಾಮಾಜಿಕ ಅಸ್ತ್ರ"ವಾಗಿ ಅದನ್ನು ಬಳಸಿಕೊಂಡದ್ದರ ಕಾರಣದಿಂದಾಗಿ. ಶ್ರೀ ಸಾಮಾನ್ಯನ ಬಗ್ಗೆ ಅವರು ವಹಿಸಿದ ಎಚ್ಚರದಿಂದ. ಈ ನೆಲದ, ಜನಮನದ ಸುಪ್ತ ಬಯಕೆಗಳಿಗೆ ಬಾಯಾದವರು ಕುವೆಂಪು. ಹಾಗಾಗಿಯೇ ಕುವೆಂಪು ಅವರು ಬೇಂದ್ರೆ ಅವರಂತೆ ಕಲಾತ್ಮಕತೆಯ ಕಡೆಗೆ ಹೆಚ್ಚು ಗಮನ ಹರಿಸದೆ, ವೈಚಾರಿಕ ಕ್ರಾಂತಿಗೆ ಅದನ್ನು ಬಳಸಿದರು. ೧೯೪೦ರಲ್ಲಿಯೇ ಬರೆದ 'ನಾನು ಕವಿಯಲ್ಲ' ಎನ್ನುವ ಕವಿತೆಯಲ್ಲಿ ಕುವೆಂಪು ಅವರೇ ಅದನ್ನು ಸ್ಪಷ್ಟಪಡಿಸಿರುವುದು ಗಮನಾರ್ಹ :

ನನ್ನ ಕೃತಿ ಕಲೆಯಲ್ಲ ;
ನಾನು ಕವಿಯಲ್ಲ
ಕಲೆಗಾಗಿ ಕಲೆಯೆಂಬ
ಹೊಳ ನೆಲೆಯಿಲ್ಲ
ಮೆಚ್ಚುಗೆಯೆ ನನಗೆ ಕೂಲೆ ;
ಬದುಕುವುದೆ ನನಗೆ ಬೆಲೆ

ಸಾಧನೆಯ ಛಾಯೆ ಕಲೆ ;

ವಿಶ್ವಾತ್ಮವದಕೆ ನೆಲೆ

ನಿನಗದು ಚಮತ್ಕಾರ ;

ನನಗೋ ಸಾಕ್ಷಾತ್ಕಾರ ;

ಮೌನದಿಂದನುಭವಿಸು ;

ಕೋ ನಮಸ್ಕಾರ ;

ಕಲೆಯೊಂದೆ ಹೊಗಳುವೊಡೆ

ಕೋಟಿ ಧಿಕ್ಕಾರ !

ಆದರೆ ಬೇಂದ್ರೆ ಅವರ ಕವಿತೆಗಳಲ್ಲಿ ಕಲೆಯ ಅಂಶ ಸ್ಥಾಯಿಯಾಗಿ ಕಂಡು ಬಂದರೆ ; ಕುವೆಂಪು ಅವರಲ್ಲಿ ಶ್ರೀಸಾಮಾನ್ಯನ ಉದ್ಧಾರ ಸ್ಥಾಯಿಯಾಗಿ ಕಂಡು ಬರುತ್ತದೆ. ಕುವೆಂಪು ಅವರ ಕವಿತೆಗಳಲ್ಲಿ ಸೋಲನ್ನು ಗುರುತಿಸುವ ವಿಮರ್ಶಕರು, ಒಂದು ರೀತಿಯಲ್ಲಿ ಮಿತಿಗೆ ಒಳಗಾದವರು ಅನ್ನಿಸುತ್ತದೆ.

ನವೋದಯ ಕಾಲದ ಭಾವಗೀತಕಾರರನ್ನು ಗಮನಿಸುವಾಗ ಬೇಂದ್ರೆ ಮತ್ತು ಕುವೆಂಪು ಅವರನ್ನು ಒಟ್ಟೊಟ್ಟಿಗಿಟ್ಟು ನೋಡುವುದು ಒಂದು ಪರಿಪಾಠವಾಗಿ ಬಂದು ಬಿಟ್ಟಂತಿದೆ. ಅದು ತಪ್ಪಲ್ಲ. ಆದರೆ ಹಾಗೆ ಗಮನಿಸುವಾಗ ಕವಿಯ ಮನೋಧರ್ಮವನ್ನೂ, ಸಾಮಾಜಿಕ ಹಿನ್ನೆಲೆಯನ್ನೂ ದೃಷ್ಟಿಯಲ್ಲಿಟ್ಟುಕೊಳ್ಳಬೇಕಾದ್ದು ಅನಿವಾರ್ಯ ಅನಿಸುತ್ತದೆ. ಇಲ್ಲವಾದರೆ ಯಾರಿಗೇ ಆದರೂ ದ್ರೋಹ ಬಗೆದಂತಾಗುತ್ತದೆ. ಭಾವಗೀತೆ ರಚನೆಯಲ್ಲಿ ಕುವೆಂಪು ಅವರು ಬಿಗಿ ಕಳೆದುಕೊಳ್ಳುತ್ತಾರೆ ಎಂದು ವಾದಿಸುವವರು, ಅದಕ್ಕಿರುವ ಕಾರಣವನ್ನು ಹುಡುಕುವ ಪ್ರಯತ್ನವನ್ನೂ ಮಾಡದೆ ಹೋಗುವುದು ಕವಿಗೆ ಮಾಡಿದ ಅನ್ಯಾಯ. ಅಂತಹವರೇ ಮತ್ತೆ ಅವರ ಗದ್ಯ ಬರಹಗಳನ್ನು ಕುರಿತು ವಿಮರ್ಶಿಸುವಾಗ ಅದನ್ನು ಸಂಸ್ಕೃತ ಭೂಯಿಷ್ಠ - ಕ್ಲಿಷ್ಟ ಮುಂತಾಗಿ ಹೇಳುವುದೂ ಆಶ್ಚರ್ಯ. ಆದರೆ, ಕುವೆಂಪು ಅವರ ವಿಷಯದಲ್ಲಿ ಅವರು ಬರೆಯುತ್ತಿದ್ದ ಸಂದರ್ಭದಲ್ಲಿ ಅವೆರಡೂ ಅವರಿಗೆ ಅನಿವಾರ್ಯ ಸ್ಥಿತಿಯಾಗಿತ್ತು ಎಂಬುದನ್ನು ಮನಗಾಣುವುದು ಅಗತ್ಯ.

ಕುವೆಂಪು ಮತ್ತು ಬೇಂದ್ರೆ ಕಾವ್ಯ ಜಗತ್ತಿನ ಎರಡು ಅದ್ಭುತ ಚೇತನಗಳು. ಅದರಲ್ಲಿ ಅನುಮಾನವಿಲ್ಲ. ಇವರಲ್ಲಿ ಯಾರು ದೊಡ್ಡವರು ? ಎಂಬ ಪ್ರಶ್ನೆ ಇಲ್ಲಿ ಮುಖ್ಯ ಅಲ್ಲವೇ ಅಲ್ಲ. ಅವರುಗಳ ಸಾಹಿತ್ಯ ಶಕ್ತಿಯನ್ನಾಗಲಿ, ಪ್ರತಿಭೆಯನ್ನಾಗಲಿ ಯಾರೂ ಪ್ರಶ್ನಿಸುವಂತಿಲ್ಲ. ಆದರೆ, ಅವರವರ ದೃಷ್ಟಿ - ಧೋರಣೆಯ ಹಿನ್ನೆಲೆಯಲ್ಲಿ ಅವರವರ ಸಾಹಿತ್ಯ ಮೂಡಿಬಂದ ಬಗೆಯನ್ನು ಹಾಗೂ ಅವುಗಳ ಸ್ವರೂಪ - ಉದ್ದೇಶ ಮುಖ್ಯವೆನಿಸುತ್ತದೆ.

ಕಲಾಜಗತ್ತನ್ನೇ ಶ್ರೀಮಂತಗೊಳಿಸಲು ಹೊರಟ ಬೇಂದ್ರೆ ಅವರ ಕಾವ್ಯದ ಸ್ವರೂಪ ಎಂತಹುದು : ಅದರ ಜೊತೆಗೇ, ಶ್ರೀಸಾಮಾನ್ಯನನ್ನೇ ಗುರಿಯಾಗಿಟ್ಟುಕೊಂಡು ಒಂದು ಸಾಮಾಜಿಕ ಅಸ್ತ್ರವಾಗಿ ಕಾವ್ಯವನ್ನು ಬರೆದ ಕುವೆಂಪು ಅವರ ಕಾವ್ಯದ ಸ್ವರೂಪ ಎಂತಹುದು? ಎಂಬುದನ್ನು ಗುರುತಿಸುವುದು ಮುಖ್ಯವಾಗುತ್ತದೆಯೇ ಹೊರತು, ಹಾಗಲ್ಲದೆ ಅವರ ಕಾವ್ಯ ಶಕ್ತಿಯನ್ನಲ್ಲ. ಹಾಗೆ ಹೊರಡುವುದಾದರೆ, ಈರ್ವರ ಒಟ್ಟು ಸಾಹಿತ್ಯವನ್ನು ತುಲನೆ ಮಾಡಿ ನೋಡಬೇಕಾಗುತ್ತದೆ.

ಸಾಹಿತ್ಯ ವಿಮರ್ಶೆಯ ಗುರಿ, ಸಾಹಿತ್ಯದ ಸ್ವರೂಪ ಲಕ್ಷಣ ಹಾಗೂ ಮೌಲ್ಯ ಗುಣಗಳನ್ನು ಗುರುತಿಸುವಂತಹುದಾಗಬೇಕೇ ಹೊರತು, ಬದಲಾಗಿ ; ಕರ್ತೃಗಳ ಸ್ಥಾನಮಾನ ನಿರ್ಣಯಿಸುವ ಮೂಲ ಗುರಿಯದ್ದಾಗಬಾರದು. ಆ ಮೂಲಕ ಅವರ ಶ್ರೇಣಿಯನ್ನು ಗುರುತಿಸಿ, ಹಣೆಪಟ್ಟಿ ಕಟ್ಟುವ ಉದ್ದೇಶ ಆಗಿರಲೂ ಬಾರದು.

ಇಂತಹ ಸಂವಾದ ಕಾರ್ಯಕ್ರಮಗಳು ಅಂತಹ ಮುಕ್ತ ಆಲೋಚನೆಗೆ ಅವಕಾಶ ಮಾಡಿಕೊಡುವುದಾದರೆ ಹೆಚ್ಚು ಪ್ರಯೋಜನಕಾರಿ ಎಂದು ನನ್ನ ಭಾವನೆ.

* * * * *

ದೇಜಗೌ ಕೃತಿ ಸಮೀಕ್ಷೆ

೧

ಪ್ರೊ. ದೇಜಗೌ ಅವರು ಕನ್ನಡದ ವರಿಷ್ಠ ಸಾಹಿತಿ. ಕನ್ನಡನಾಡು ನುಡಿಗಾಗಿ ಹೋರಾಡುತ್ತಿರುವ ಒಂದು ದಿವ್ಯ ಚೇತನ. ಅವುಗಳ ಮೇಲ್ಮೆಗಾಗಿ ಅವರಿಂದ ಸಂದಿರುವ ಸೇವೆ ಅಪಾರ. "ಕನ್ನಡವೆಂಬ ತ್ರ್ಯಕ್ಷರಿಯೇ ನನ್ನ ಗಾಯತ್ರಿ. ಕನ್ನಡವೇ ನನ್ನ ತಾಯಿ - ತಂದೆ, ಅದೇ ನನ್ನ ಬಂಧು - ಬಳಗ, ಅದೇ ನನ್ನ ಜಾತಿ, ಗತಿ, ಮತಿ, ಯಾವ ಸಭೆಯಲ್ಲೇ ಆಗಲಿ, ಯಾರ ಸಮ್ಮುಖದಲ್ಲೇ ಆಗಲಿ ಕೀಳರು ಕನ್ನಡವನ್ನು ಹೀಗಳೆದರೆ ನಾನು ನನ್ನ ಹೆಸರನ್ನು ಸಾರ್ಥಕಪಡಿಸಿ ಕೊಂಡೇನು !" ಎಂಬ ಅವರ ಮಾತು ಬರಿಯ ಟೊಳ್ಳಲ್ಲ. ಕನ್ನಡದ ದೀಕ್ಷೆಯನ್ನು ತೊಟ್ಟು ಅದರ ಏಳಿಗೆಗಾಗಿ ಸದಾ ಶ್ರಮಿಸುತ್ತಿರುವ ಒಂದು ದಿವ್ಯ ಚೇತನದ ಚೈತನ್ಯದಾಯಕ ಮಂತ್ರ. ಅವರು ಹೀಗೆ ಬಿಚ್ಚುನುಡಿಯಾಡಿ ಕೆಚ್ಚೆದೆಯಿಂದ ಮುಂದುವರಿಯದೇ ಹೋಗಿದ್ದರೆ, ರಾಹುವಿನಂತೆ ಕನ್ನಡದ ಬೆನ್ನಟ್ಟಿ ಬರುತ್ತಿರುವ ಹಲವು ದುಷ್ಟಶಕ್ತಿಗಳನ್ನು ನುಂಗಿ ನೀರು ಕುಡಿಯಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ಅವರು 'ಬುಲ್‌ಡೋಜರ್'ನಂತೆ ಮುನ್ನುಗ್ಗಿ ಕಾರ್ಯ ಸಾಧಿಸಿದ್ದಾರೆ. ವಿಜಯದ ವೈಜಯಂತಿಯನ್ನು ಎತ್ತಿ ಹಿಡಿದಿದ್ದಾರೆ.

ದುಡಿಮೆಯೇ ಬದುಕಿನ ಗುರಿಯಾಗಿ ಹೊಂದಿರುವ ಅವರು ಆ ಗುರಿ ಸಾಧನೆಗಾಗಿ ಎಂತಹ ಹೋರಾಟವನ್ನಾದರೂ ನಡೆಸಬಲ್ಲರು : "ಬಾಳು ಮಣ್ಣುಗೂಡುವ ತನಕ ಈ ಹೋರಾಟವಂತೂ ನನಗೆ ತಪ್ಪಿದ್ದಲ್ಲ" ಎಂಬ ಅವರ ಮತು ಅಕ್ಷರಶಃ ಸತ್ಯವಾದುದು. ಹೋರಾಟಕ್ಕೆ ಕೈ ಬಾಯಿ ಎರಡೂ ಮುಖ್ಯ ತಾನೇ ? ದೇಜಗೌ ಇವೆರಡನ್ನೂ ತಕ್ಕ ರೀತಿಯಲ್ಲಿ ಬಳಸಿಕೊಂಡಿದ್ದಾರೆ. ಆದರಿಂದ ನಾಡು - ನುಡಿಗಳೆರಡರ ಸೇವೆಯನ್ನು ಸಮತೋಲನದಲ್ಲಿ ಅನುಪಮ ರೀತಿಯಿಂದ ಸಾಧಿಸಿಕೊಂಡು ಬಂದಿದ್ದಾರೆ. ಕನ್ನಡದ ಅಂಥಾ ಇಬ್ಬರು ಮೂವರು ಮಹಾವ್ಯಕ್ತಿಗಳಲ್ಲಿ ದೇಜಗೌ ಅವರು ಒಬ್ಬರು ಹಾಗೂ ಪ್ರಮುಖರು. "ನಾಲ್ಕೈದು ಜನರ ಒಂದು ಚಿಕ್ಕ ಇಲಾಖೆಯನ್ನು ಆಶ್ಚರ್ಯಕರ ಅಲ್ಪ ಅವಧಿಯಲ್ಲಿ ಅರವತ್ತು ಎಪ್ಪತ್ತರ ಒಂದು ಮಹಾ ಸಂಸ್ಥೆಯಾಗಿ ಮಾರ್ಪಡಿಸಿದ್ದು ಅವರ ಒಂದು ಪವಾಡ. ಈಚಿನ ವರ್ಷಗಳ ಮೈಸೂರು ವಿಶ್ವವಿದ್ಯಾನಿಲಯದ ಕೀರ್ತಿಯ ಬಹುಪಾಲು ದೇಜಗೌ ಅವರ ಸಮರ್ಥ ನೇತೃತ್ವದಲ್ಲಿ ಕನ್ನಡ ವಿಭಾಗ ನಡೆಸಿದ ಸಾಧನೆಯ ಮೇಲೆ ನಿಂತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಒಟ್ಟಿನಲ್ಲಿ ಹೇಳುವುದಾದರೆ ದೇಜಗೌ ಕನ್ನಡ ಕಾಯಕದ ಸಂಕೇತವಾಗಿದ್ದಾರೆ. ಕನ್ನಡ ಜನ ಶಕ್ತಿಯ ಪ್ರತಿನಿಧಿಯಾಗಿದ್ದಾರೆ".[೧] ಅವರ ಕಾರ್ಯದಕ್ಷತೆ, ವ್ಯವಹಾರ ಚತುರತೆ ಅನುಕರಣೀಯ ಕನ್ನಡ ಇಂಗ್ಲಿಷ್ ಎರಡು ಕ್ಷೇತ್ರದಲ್ಲೂ ಸಾಕಷ್ಟು ಹೆಸರು ಗಳಿಸಿರುವ

---

೧. ಡಾ. ಹಾ.ಮಾ.ನಾಯಕ : ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ (ಸಂಪಾದಕರ ಮಾತಿನಿಂದ)

ಪ್ರೊ. ಎಸ್. ವಿ. ರಂಗಣ್ಣ ಅವರು : "ಜವರೇಗೌಡರೇ ಕನ್ನಡ, ಕನ್ನಡವೇ ಜವರೇಗೌಡರು" ಎಂದು ಸಮೀಕರಿಸಿ ಹೇಳಿರುವುದು ಸಮಂಜವಾಗಿದೆ. ಇದು ಅವರ ಕಾರ್ಯಕ್ಷೇತ್ರದ ಒಂದು ಮುಖ. ಮತ್ತೊಂದು ಮುಖವಾದ ಅವರ ಸಾಹಿತ್ಯ ಕ್ಷೇತ್ರವೂ ಅಷ್ಟೇ ಉಜ್ವಲವಾದದ್ದು, ಪ್ರತಿಭಾಪೂರ್ಣವಾದದ್ದು.

ಪ್ರೊ. ದೇ. ಜವರೇಗೌಡರು ಶ್ರೇಷ್ಠ ಮಟ್ಟದ ಹೋರಾಟಗಾರರಂತೆಯೋ, ಅಂತೆಯೇ ವರಿಷ್ಠ ವರ್ಗದ ಸಾಹಿತಿಗಳೂ ಹೌದು. ಅವರು ಉತ್ತಮ ಮಟ್ಟದ ಭಾಷಾಂತರಕಾರರಾಗಿ ಹೆಸರು ಗಳಿಸಿರುವಂತೆಯೇ, ಶ್ರೇಷ್ಠ ವಿದ್ವಾಂಸರೂ ಆಗಿದ್ದಾರೆ. ವಿಮರ್ಶನ ಕಾರ್ಯದಷ್ಟೇ ಗ್ರಂಥ ಸಂಪಾದನಾ ಕಾರ್ಯವೂ ಅವರಿಗೆ ಪ್ರಿಯವಾದದ್ದೆ. ಮಹಾವ್ಯಕ್ತಿಗಳ ಜೀವನಚರಿತ್ರೆಯನ್ನು ಬರೆಯುವಲ್ಲಿ ಅವರದು ಎತ್ತಿದ ಕೈ. ಕನ್ನಡದ ಶ್ರೇಷ್ಠ ಗದ್ಯ ನಿರ್ಮಾಪಕರಲ್ಲಿ ದೇಜಗೌ ಅವರದು ಒಂದು ದೊಡ್ಡ ಹೆಸರು. ಅವರಂತೆ ಗದ್ಯಶೈಲಿಯನ್ನು ಪಳಗಿಸಿಕೊಂಡು ಬಳಸಿದವರು ಹೆಚ್ಚು ಮಂದಿ ಇಲ್ಲವೆಂದೇ ಹೇಳಬಹುದು. ಜಾನಪದ ಕ್ಷೇತ್ರದಲ್ಲಿಯೂ ಅಪಾರ ಆಸಕ್ತಿ. ಅನೂಚಾನವಾಗಿ ಬೆಳೆದು ಬಂದ ಜನಪದ ಸಂಸ್ಕೃತಿಯ ನೆಲಗಟ್ಟನ್ನು ಉಳಿಸಿಕೊಂಡು ಬರಬೇಕೆಂಬ ಅವರ ಹಂಬಲವೇ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಲ್ಲಿ ರೂಪುತಳೆದಿರುವ ವಿಶಿಷ್ಟ - "ಜಾನಪದ ವಸ್ತು ಸಂಗ್ರಹಾಲಯ". ವಿಶ್ವವಿದ್ಯಾನಿಲಯದಲ್ಲಿ 'ಜಾನಪದ'ಕ್ಕೆ ಒಂದು ಸ್ಥಾನವನ್ನು ದೊರಕಿಸಿಕೊಟ್ಟ ಕೀರ್ತಿ ಅವರದು.

ಬಿಡುವಿಲ್ಲದ ಹೋರಾಟದ ನಡುವೆಯೂ ಸಾರಸ್ವತ ಲೋಕಕ್ಕೆ ದೇಜಗೌ ಅವರಿಂದ ಸಂದಿರುವ ಸೇವೆ ಅಪಾರ. ಅಷ್ಟೇ ವೈವಿಧ್ಯಮಯ. ಕನ್ನಡ ಸಾಹಿತ್ಯ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಅವರಿಂದ ಸಂದಿರುವ ಕಾಣಿಕೆಯೂ ಅಪಾರ. "ಸಾಹಿತ್ಯ ಸೃಷ್ಟಿಗಿಂತ ಕನ್ನಡ ಪ್ರಚಾರ ಜರೂರಿನ ಕಾರ್ಯವಾಗಿದೆ. ಕನ್ನಡ ಉಳಿದರೆ ಸಾಹಿತ್ಯ ಉಳಿದೀತು ಅದು ಅಳಿದರೆ ಸಾಹಿತ್ಯ ಅಳಿದೀತು" ಎಂಬುದಾಗಿ ಅವರು ಭಾವಿಸಿದವರು. ನಿಸ್ವಾರ್ಥತೆಯಿಂದ ತನು ಮನ ಧನವನ್ನು ಲೆಕ್ಕಿಸದೆ, ಕೀರ್ತಿಯ ಲಾಲಸೆಗೆ ಒಳಗಾಗದೆ ಕನ್ನಡದ ಸ್ಥಾನ ಮಾನವನ್ನು ಎತ್ತರಕ್ಕೊಯ್ಯುವಲ್ಲಿ ಶ್ರಮಿಸಿದ ಬೆರಳೆಣಿಕೆಯ ವ್ಯಕ್ತಿಗಳಲ್ಲಿ ದೇಜಗೌ ಮೊದಲಿಗರು. ಇಷ್ಟಾದರೂ ಸಂಖ್ಯೆಯ ದೃಷ್ಟಿ ಯಿಂದಾಗಲೀ, ಮೌಲ್ಯದ ದೃಷ್ಟಿಯಿಂದಾಗಲೀ ಅವರಿಂದ ರಚಿತವಾಗಿರುವ ಸಾಹಿತ್ಯ ಬೆರಗು ಗೊಳಿಸುವಂಥದು. ಅವರು ಬರೆದಿರುವ ಲೇಖನಗಳದ್ದೇ ಒಂದು ದೊಡ್ಡ ಪಟ್ಟಿ. ಕೃತಿಗಳ ಸಂಖ್ಯೆ ಈಗಾಗಲೇ ನಲವತ್ತೈದಕ್ಕೂ ಮೀರಿ ಬೆಳೆದಿದೆ. ಅವರು ಶ್ರೇಷ್ಠ ವರ್ಗದ ಭಾಷಾಂತರಕಾರ ರಾಗಿರುವಂತೆಯೇ, ವಿಮರ್ಶಕರಾಗಿರುವಂತೆಯೇ, ಗ್ರಂಥ ಸಂಪಾದಕರಾಗಿರುವಂತೆಯೇ, ಸೃಜನಶೀಲ ಲೇಖಕರೂ ಹೌದು. ಅವರ ಎರಡು ಕಿರು ಕಾದಂಬರಿಗಳಾದ : 'ಕಡುಗಲಿ ಕುಮಾರರಾಮ' ಮತ್ತು 'ಬೆಂಗಳೂರು ಕೆಂಪೇಗೌಡ' ಐತಿಹಾಸಿಕ ಕಾದಂಬರಿಗಳಾಗಿರುವಂತೆಯೇ ಶೈಲಿಯ ದೃಷ್ಟಿಯಿಂದ ಉತ್ತಮ ಕಾವ್ಯಗುಣಗಳನ್ನು ಹೊಂದಿವೆ. 'ರಾಷ್ಟ್ರಕವಿ ಕುವೆಂಪು' ಜೀವನ ಚರಿತ್ರೆಗಳ ಸಾಲಿನಲ್ಲಿ ಒಂದು ಅನುಪಮ ಕೃತಿ. "ಒಂದಿನಿತೂ ಬಿಡುವಿಲ್ಲದಂತೆ ಸದಾ ಕಾರ್ಯಕ್ಷೇತ್ರದಲ್ಲಿ ಮಗ್ನರಾಗಿದ್ದರೂ ಸಾಹಿತ್ಯ ರಂಗದಲ್ಲಿ ಅವರೆಸಗಿರುವ ಸಾಧನೆ ಅನನ್ಯ, ಆಶ್ಚರ್ಯಕರ, ಸಾಹಿತ್ಯ ಸೃಷ್ಟಿಯೊಂದನ್ನೇ ಅವರು ಧ್ಯೇಯ ಸರ್ವಸ್ವವನ್ನಾಗಿ ಮಾಡಿ ಕೊಂಡಿದ್ದಲ್ಲಿ ಮತ್ತೂ ಸಮೃದ್ಧವಾದ ಕೃತಿರಚನೆ ಅವರಿಂದ ನಡೆಯಬಹುದಿತ್ತು".[೨]

---

೨. ಸಿ.ಪಿ.ಕೆ. : ಸಮಾವೇಶ ಪು. ೮೩

ಬಿಡುವಿಲ್ಲದ ಗಡಿಬಿಡಿಯ ಜೀವನದಲ್ಲೂ ಸಾಹಿತ್ಯಾರಾಧನೆಯನ್ನು ಅವರು ಮುಂದುವರಿಸಿಕೊಂಡು ಬರುತ್ತಿರುವುದು ಸೋಜಿಗವನ್ನುಂಟುಮಾಡುವಂತಹುದು. ಬೆಳಿಗ್ಗೆ ಎದ್ದರೆ ತಡೆಯಿಲ್ಲದಂತೆ ಬರುವ ಸಂದರ್ಶಕರನ್ನು ಸಂಧಿಸುವುದು, ದಿನಕ್ಕೆ ನಾಲ್ಕಾರು ಭಾಷಣಗಳನ್ನು ಮಾಡುವುದು, ಕಛೇರಿಯ ಕಾಗದ ಪತ್ರಗಳನ್ನು ನೋಡುವುದು, ಅದರಲ್ಲಿನ ತಲೆ ತಿನ್ನುವ ಹಲವಾರು ಸಮಸ್ಯೆಗಳನ್ನು ಬಿಡಿಸುವುದು - ಇಷ್ಟೆಲ್ಲಾ ಕಾರ್ಯ ಚಿಂತನೆಗಳ ನಡುವೆಯೂ ಅವರ ಲೇಖನಿ ಸಾಹಿತ್ಯ ಕ್ಷೇತ್ರದಲ್ಲಿಯೂ ಮಗ್ನವಾಗಿರುವುದನ್ನು ಕಂಡಾಗ ಆಶ್ಚರ್ಯವೆನಿಸುತ್ತದೆ. ದೊಡ್ಡ ಗದ್ದುಗೆಯೇರಿದ ಅಧಿಕಾರಿಗಳು ಹೇಳುವುದುಂಟು: "ದಿನಪತ್ರಿಕೆ ಓದುವುದಕ್ಕೂ ಪುರುಸೊತ್ತಿರುವುದಿಲ್ಲ" ಎಂದು. ಆದರೆ ದೇಜಗೌ ಅವರು ಕುಲಪತಿಗಳಾದ ಮೇಲೂ ತಮ್ಮ ಬರವಣಿಗೆಯ ಕಾಯಕವನ್ನು ಹಿಂದಿನಂತೆಯೇ ಮುಂದುವರಿಸಿಕೊಂಡು ಬಂದಿದ್ದಾರೆ. ಡಾ. ಹಾ. ಮಾ. ನಾಯಕ್ ಅವರು ಹೇಳುವಂತೆ "ದೇಜಗೌ ಕನ್ನಡ ಕಾಯಕದ ಸಂಕೇತ"ವೇ ಸರಿ. ಅವರ ಕಾರ್ಯನಿಷ್ಠೆ ಸಾಹಿತ್ಯಪ್ರೇಮ ಎಣೆಯಿಲ್ಲದ್ದು.

ದೇಜಗೌ ಅವರು ಕುಲಪತಿಗಳಾದ ಮೇಲೆ ಈವರೆಗೂ ಐದು ಉತ್ತಮ ಕೃತಿಗಳು ವೈವಿಧ್ಯದೊಡನೆ ಹೊರಬಂದಿವೆ. ಅಚ್ಚಿನಲ್ಲಿರುವುವೆಷ್ಟೋ! ಮುನ್ನುಡಿಗಳು, ಕುಲಪತಿ ಭಾಷಣಗಳು, ವಿದೇಶದಲ್ಲಿ ನಾಲ್ಕು ವಾರ, ರಾಷ್ಟ್ರಕವಿ ಕುವೆಂಪು, ಬೆರಕೆ ಸೊಪ್ಪು - ಇವೇ ಆ ಐದು ಕೃತಿಗಳು. ಅವುಗಳಲ್ಲಿ ಮೂರನ್ನು ಮಾತ್ರ ಇಲ್ಲಿ ಸಮೀಕ್ಷಿಸಿದ್ದೇನೆ.

"ಮುನ್ನುಡಿಗಳು" ದೇ. ಜವರೇಗೌಡರು ಕುಲಪತಿಗಳಾದ ಮೇಲೆ ಬೆಳಕು ಕಂಡ ಮೊದಲ ಕೃತಿ. ಹೆಸರೇ ಸೂಚಿಸುವಂತೆ ಈ ಗ್ರಂಥ ಹಲವಾರು ಮುನ್ನುಡಿಗಳ ಸಂಗ್ರಹ. ಮಿತ್ರರ ಕೃತಿಗಳಿಗೆ ಬರೆದ ಮುನ್ನುಡಿಗಳೆಲ್ಲಾ ಇಲ್ಲಿ ಸಮಾವೇಶಗೊಂಡಿವೆ. ಈ ಒಂದು ಸಂಕಲನ ನಲವತ್ತೊಂಬತ್ತು ಕೃತಿಗಳಿಗೆ ಬರೆದ ಮುನ್ನುಡಿಗಳನ್ನೊಳಗೊಂಡಿದೆ. ಇದರ ಪುಟಸಂಖ್ಯೆ ಇನ್ನೂರೆಂಟು.

ಒಪ್ಪಿಕೊಂಡ ತಪ್ಪಿಗೋ ಅಥವಾ ಬಿಡದೆ ಗಂಟು ಬಿದ್ದ ಇಕ್ಕಟ್ಟಿಗೆ ಸಿಲುಕಿಯೋ ಅಲ್ಲಲ್ಲಿ ನಾಲ್ಕಾರು ಪುಟಗಳನ್ನು ತಿರುವಿ ಹಾಕಿ, ಆ ನಾಲ್ಕಾರು ಪುಟಗಳನ್ನೇ ಆಧರಿಸಿ ಮುನ್ನುಡಿಯಾಗಿ ಬರೆದು ಕೈ ತೊಳೆದುಕೊಂಡೆನೆಂದು ನಿಶ್ಚಿಂತಿಸುವ ಜಾಯಮಾನಕ್ಕೆ ಹೊರತಾಗಿ ಇಲ್ಲಿಯ ಮುನ್ನುಡಿಗಳು ಮೂಡಿ ಬಂದಿವೆ. ಇದು ದೇಜಗೌ ಬರೆದಿರುವ ಮುನ್ನುಡಿಗಳ ಒಂದು ವೈಶಿಷ್ಟ್ಯವೆಂದೇ ಹೇಳಬೇಕು. ಆಮೂಲಾಗ್ರವಾಗಿ ಕೃತಿಯನ್ನು ಓದಿ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಕೃತಿಯ ಕರ್ತೃವಿಗೆ ಸಂಬಂಧಿಸಿದಂತೆ ವಿಸ್ತಾರವಾದ ಹಿನ್ನೋಟ ಮುನ್ನೋಟಗಳನ್ನು ಓದುಗರಿಗೆ ದೊರಕುವಂತೆ ಮಾಡುವುದು ಇವರ ಮುನ್ನುಡಿಗಳ ಮತ್ತೊಂದು ಅಪೂರ್ವ ಅಂಶ. ಅವರ ವಿಸ್ತಾರವಾದ ಮುನ್ನುಡಿಗಳನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಯಾವುದೇ ವಿಷಯವನ್ನು ಕುರಿತು ದಿಟ್ಟತನದಿಂದ ಲೀಲಾಜಾಲವಾಗಿ ಬರೆಯಬಲ್ಲ ವಿದ್ವತ್ತು ಹಾಗೂ ಪ್ರತಿಭಾಶಕ್ತಿ ಅವರಲ್ಲಿ ದಟ್ಟೈಸಿರುವುದನ್ನು ಇಲ್ಲಿ ಗುರುತಿಸಬಹುದು.

ಭಾರತೀಯ ಸ್ತ್ರೀಗೆ ಮೂಗುತಿಯಂತೆ, ಅರಿಶಿನ - ಕುಂಕುಮದಂತೆ ಒಂದು ಕೃತಿಗೆ ಮುನ್ನುಡಿ. ಅದು ಸೌಂದರ್ಯವರ್ಧಕವೂ ಹೌದು, ಶುಭದ ಸಂಕೇತವೂ ಹೌದು. ಒಳಹೊಕ್ಕು ನೋಡುವ ಮೊದಲೇ ಅದರ ಹಣೆಬರಹವನ್ನು ಈ ಸಂಕೇತ ಬಹುಮಟ್ಟಿಗೆ ಅರ್ಥೈಸಿ ಬಿಡುತ್ತದೆ - ಸಮರ್ಥರು ಬರೆದದ್ದಾದರೆ. ಅಷ್ಟೇ ಅಲ್ಲ, ಅದರ ಹಣೆಬರಹವನ್ನು ತಿದ್ದುವಲ್ಲಿಯೂ ಇದು

ಸಹಾಯಕವಾಗಬಲ್ಲುದು. ಹಲವು ವೇಳೆ ಮುನ್ನುಡಿ ಕೃತಿಕಾರನ ದೃಷ್ಟಿಯಿಂದ ಶಾಪವಾಗಿ ಪರಿಣಮಿಸುವಂತೆ ವರವಾಗಿಯೂ ಪರಿಣಮಿಸಬಲ್ಲದು. ಕಸವರವನ್ನು ಬಿಟ್ಟು ಕಸವನೆ ಹುಡುಕಿ ಹಿಡಿಯುವುದರಿಂದ ಶಾಪವೇ ಹೆಚ್ಚು. ಆದರೆ ಈ ಎಲ್ಲಕ್ಕೂ ದೇಜಗೌ ಅಪವಾದವಾಗಿದ್ದಾರೆ. ಅವರ ಮುನ್ನುಡಿಗಳು ಆಶೀರ್ವಚನವಿದ್ದಂತೆ. ತಪ್ಪು ಹುಡುಕುವುದೇ ಒಂದು ಗುರಿಯಾದರೆ ಎಲ್ಲಿ ತಾನೇ ತಪ್ಪುಗಳು ಸಿಕ್ಕುವುದಿಲ್ಲ ? ಆದ್ದರಿಂದ ಅದನ್ನೇ ಗುರಿಯಾಗಿ ಹೊಂದಿರದೆ : "ಕನ್ನಡ ಸಾಹಿತ್ಯದಲ್ಲಿ ಈಗ ತಾನೇ ಕಾಲಿಡುತ್ತಿದ್ದೇನೆ. ಒಂದು ಪರಿಚಯಾತ್ಮಕವಾದ, ಪ್ರೋತ್ಸಾಹ ಕರವಾದ ಮಾತಿನಿಂದ ನನ್ನಂಥಾ ಹೊಸಬನಿಗೆ ಧೈರ್ಯ ಹೆಚ್ಚುತ್ತದೆ". ಎಂದು ಮುನ್ನುಡಿ ಬಯಸಿ ಬಂದವರಿಗೆ ಸಂತೋಷದಿಂದ ಒಪ್ಪಿ, ಮುನ್ನುಡಿಯನ್ನು ಬರೆದು ಕೊಟ್ಟಿದ್ದಾರೆ, ಅವರ ಮೇಲ್ಮೆಗೆ ಕಾರಣರಾಗಿದ್ದಾರೆ. ದೇಜಗೌ ಅವರ ವಿನಯ, ವಿದ್ವತ್ತು ಹೆಸರಾದದ್ದು. ಬೇರೆಯವರು ಕೆಲಸ ಮಾಡುವುದನ್ನು ಕಂಡಾಗ ಅವರ ಮನ ಉಬ್ಬುತ್ತದೆ, ಹೃದಯ ಅರಳುತ್ತದೆ, ಸಂತೋಷ ಇಮ್ಮಡಿಗೊಳ್ಳುತ್ತದೆ. ಅಂತಹವರನ್ನು ಹುರಿದುಂಬಿಸಿ ಮತ್ತಷ್ಟು ಕೆಲಸ ಅವರಿಂದ ಸಾಧ್ಯವಾಗುವಂತೆ ಮಾಡುವ ಒಂದು ಚಮತ್ಕಾರ ಅವರ ಮುನ್ನುಡಿಗಳಿಗಿದೆ. ಪ್ರೋತ್ಸಾಹದ ಮಾತುಗಳನ್ನಾಡುವುದರ ಮೂಲಕ, ಅವರ ಪ್ರತಿಭಾಶಕ್ತಿಯನ್ನು ಎತ್ತಿ ಹೇಳುವುದರ ಮೂಲಕ ಹಾಗೂ ಅವರ ಕಾರ್ಯಗಳನ್ನು ಶ್ಲಾಘಿಸುವುದರ ಮೂಲಕ ಹೊಸಬರನ್ನು ಹುರಿದುಂಬಿಸಿದ್ದಾರೆ, ಕಾರ್ಯೋನ್ಮುಖರನ್ನಾಗಿಸಿದ್ದಾರೆ.

ಮುನ್ನುಡಿಗಳನ್ನು ಓದದೆಯೇ ಪುಸ್ತಕವನ್ನು ಓದಲು ಪ್ರಾರಂಭಿಸುವ ವ್ಯಕ್ತಿಗಳೂ ಇಲ್ಲದಿಲ್ಲ. ಅಂತಹವರಿಗೆ ಈ ಮುನ್ನುಡಿಗಳು ಕಣ್ಣು ತೆರಸುತ್ತವೆ ಎಂದರೆ ತಪ್ಪಲ್ಲ. ಮುನ್ನುಡಿಗಳಲ್ಲಿಯೂ ಎಂಥಾ ರಸಭಾವಗಳು ವಿದ್ವತ್ಪ್ರತಿಭೆಗಳು ಅಡಗಿರುತ್ತವೆ ಎಂಬುದನ್ನು ಈ ಒಂದು ಕೃತಿ ಸ್ಪಷ್ಟವಾಗಿ ಪರಿಚಯಿಸುತ್ತದೆ. ದೇಜಗೌ ಅವರ ಮುನ್ನುಡಿಗಳು ಓದುಗನಿಗೆ ಹಲವು ರೀತಿಗಳಲ್ಲಿ ನೆರವಾಗುವಂತೆಯೇ ಆ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಬೇರೆ ಬೇರೆ ವಿಷಯಗಳ ಪರಿಚಯವನ್ನು ಮಾಡಿಕೊಡುತ್ತವೆ. ಕೃತಿಕಾರನಿಗೂ ಅನುಪಮವಾದ ರೀತಿಯಲ್ಲಿ ಹಲವು ಸಲಹೆಗಳನ್ನು ನೀಡುವುದರ ಮೂಲಕ ಅವನ ಉತ್ತಮತೆಗೆ ಪ್ರೇರಕರಾಗಿದ್ದಾರೆ. ಆ ಎಲ್ಲ ಅಂಶಗಳೂ ಅದರ ಮುನ್ನುಡಿಗಳಲ್ಲಿ ಮೈಗೂಡಿ ಬಂದಿರುವುದನ್ನು ಕಾಣಬಹುದು. ಆ ಮೂಲಕ ಅನೇಕರನ್ನು ಕೈ ಹಿಡಿದು ಎತ್ತಿರುವಂತೆಯೇ, ಅವರಿಗೆ ಸಾಕಷ್ಟು ಶಕ್ತಿ ಪ್ರೋತ್ಸಾಹಗಳನ್ನು ತುಂಬಿ ಅನೇಕ ಉತ್ತಮ ಬರಹಗಾರರನ್ನು ದೇಜಗೌ ಸೃಷ್ಟಿಸಿದ್ದಾರೆ.

ನಲವತ್ತೊಂಬತ್ತು ಕೃತಿಗಳಿಗೆ ಬರೆದಿರುವ ಅವರ ಮುನ್ನುಡಿಗಳನ್ನು ಗಮನಿಸಿದಾಗ ಅವರ ಅಪಾರ ವಿದ್ವತ್ತಿನ ಅರಿವಾಗುತ್ತದೆ. ಕೃತಿಯ ವಿಶಾಲತೆಯನ್ನು ವೈವಿಧ್ಯವನ್ನು ಸೂಕ್ಷ್ಮವಾಗಿ ಬಗೆದು ನೋಡುವಂತೆಯೇ, ಕೃತಿಕಾರನ ಬಗೆಗೂ ಸೂಕ್ಷ್ಮ ದೃಷ್ಟಿ ಹರಿಸಿ ಅವರ ನಿಲುವನ್ನು ಸ್ಪಷ್ಟಪಡಿಸುವ ದೇಜಗೌ ಅವರ ಬರಹ ಅನುಪಮವಾದದ್ದು, ಅನುಕರಣೀಯವಾದದ್ದು. ಒಂದು ವಿಷಯವನ್ನು ಹೇಳುವಾಗ ಉಳಿದ ಹತ್ತಾರು ಸಮಸ್ಯೆಗಳತ್ತ ನಮ್ಮ ಗಮನ ಹರಿಯುವಂತೆ ಮಾಡುವುದು ಅವರ ಮುನ್ನುಡಿಗಳಲ್ಲಿ ಕಾಣಬರುವ ಒಂದು ಹಿರಿಮೆ. ಭಾಷಾಂತರ ಕೃತಿಯೊಂದಕ್ಕೆ ಅವರು ಬರೆದಿರುವ ಮುನ್ನುಡಿಯನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. "ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ಬರಬೇಕಾದ ಕೃತಿಗಳು ಬಹಳ ಇವೆ. ಇಂಗ್ಲಿಷ್ ಕಲಿತ ಕನ್ನಡಿಗರಿಂದ ಕನ್ನಡ ಜನ ನಿರೀಕ್ಷಿಸುವ ಸೇವೆ ಇದು. ನಾವು ಇಂಗ್ಲಿಷ್ ಭಾಷೆಯಲ್ಲಿ ಎಷ್ಟೇ ಪರಿಣಿತರಾಗಿರಲಿ ಅದನ್ನು ಉದ್ಧರಿಸಲಾರೆವು. ಏಕೆಂದರೆ

ನಮ್ಮ ತಾಯ್ನುಡಿಗಳಲ್ಲಿ ನಮ್ಮ ಭಾವಾನುಭಾವಗಳನ್ನು ಸ್ಪಷ್ಟವಾಗಿ ಸುಲಭವಾಗಿ, ಪ್ರಯೋಜನಕಾರಿಯಾಗಿ ವ್ಯಕ್ತಪಡಿಸುವಂತೆ ಪರಭಾಷೆಯಲ್ಲಿ ಸಾಧ್ಯವಿಲ್ಲ. ಅಷ್ಟೇ ಅಲ್ಲ, ಹಿಂದಿನಿಂದ ಗೀರ್ವಾಣ ಭಾಷೆ ದೇಶ ಭಾಷೆಗಳ ಮೂಲಕ ಬದುಕುತ್ತಿರುವಂತೆ, ಉದ್ಧಾರವಾಗುತ್ತಿರುವಂತೆ ಇನ್ನು ಮುಂದೆ ಇಂಗ್ಲಿಷ್ ದೇಶ ಭಾಷೆಗಳ ಮೂಲಕ ಉಳಿಯಬೇಕಾಗಿದೆ".

ಇಂದು ಇಂಗ್ಲಿಷ್ ಕಲಿತ ಜನ ಮಾಡಬೇಕಾಗಿರುವ ಮಹತ್ಕಾರ್ಯದತ್ತ ಜನರ ಗಮನ ಸೆಳೆಯುವುದಷ್ಟೇ ಅಲ್ಲದೆ, ಇಂಗ್ಲಿಷ್‌ನ ಸ್ಥಾನ ಮಾನ ಎಷ್ಟು ? ಎಂಬುದನ್ನು ನಿರ್ಧರಿಸಿದ್ದಾರೆ. ಮತ್ತೊಂದು ಕೃತಿಗೆ ಮುನ್ನುಡಿ ಬರೆಯುತ್ತಾ ಅವರು ಹರಿಸಿರುವ ವಿಚಾರಧಾರೆ ಅತ್ಯಂತ ಪ್ರಚೋದಕವಾಗಿದೆ. ಭಾಷಾಂತರ ಕಾರ್ಯದ ಅಗತ್ಯತೆಯನ್ನು, ಅವಶ್ಯಕತೆಯನ್ನು ಒತ್ತಿ ಹೇಳುವಂತಿದೆ : "ಭಾಷಾಂತರ ಗ್ರಂಥಗಳಿಲ್ಲದ ಸಾಹಿತ್ಯವೇ ಅಪರೂಪವೆನ್ನಬೇಕು. ಪೂರ್ವ - ಪಶ್ಚಿಮ ಮತ್ತು ಉತ್ತರ - ದಕ್ಷಿಣಗಳ ಅಂತರ ತೀರಾ ಕಡಿಮೆಯಾಗಿ ನಾನಾ ಜನಾಂಗದ ಸಂಸ್ಕೃತಿ ಏಕರೂಪವಾಗಲು ಹವಣಿಸುತ್ತಿರುವ, ಜಗತ್ತಿನ ಸಾರಸ್ವತ ಏಕಾಖಂಡವಾಗಿ ನಿರ್ದಿಗಂತವಾಗುತ್ತಿರುವ ಆಧುನಿಕ ಯುಗದಲ್ಲಂತೂ ಭಾಷಾಂತರ ಗ್ರಂಥಗಳಿಲ್ಲದ ಸಾಹಿತ್ಯ ಕೃಶವಾಗುತ್ತದೆ. ಅಪೂರ್ಣವಾಗುತ್ತದೆ, ಶಕ್ತಿಹೀನವಾಗುತ್ತದೆ".

ಕೃತಿಯ ಮೌಲ್ಯನಿರ್ಣಯದ ಜೊತೆಗೆ, ಲೇಖಕನ ಬೆನ್ನು ತಟ್ಟಿ ಪ್ರೋತ್ಸಾಹದ ಮಾತು ಗಳನ್ನಾಡಿ ಎಚ್ಚರಿಸುವುದರ ಜೊತೆಗೆ ಆ ವಿಷಯದಲ್ಲಿ ಮತ್ತಷ್ಟು ಮುಂದುವರಿದು ಆತ ಮಾಡಬಹುದಾದ ಕಾರ್ಯದತ್ತ ಹತ್ತಾರು ದಾರಿಗಳನ್ನು ತೋರಿಸುವಂತಹ ವಿಶಿಷ್ಟ ರೀತಿಗಳನ್ನು ವಿದ್ವತ್ತನ್ನು ದೇಜಗೌ ಅವರ ಮುನ್ನುಡಿಗಳಲ್ಲಿ ಕಾಣಬಹುದು. ಅವರ ಬರವಣಿಗೆಯ ಧಾಟಿಯೇ ವಿಶಿಷ್ಟವಾದದ್ದು. ಅದು ಒಂದು ಕ್ಷಣ ಮಿಂಚಿದರೂ ಸಾಕು ಅಷ್ಟೇ ಪ್ರಮಾಣದ ಪ್ರತಿಕ್ರಿಯೆಯನ್ನು ಹಾಗೂ ಪ್ರತಿಫಲವನ್ನು ಉಂಟು ಮಾಡಬಲ್ಲದು, ನೀಡಬಲ್ಲದು.

ಅಷ್ಟೇ ಅಲ್ಲ ; ಅವರ ವಿಶಾಲದೃಷ್ಟಿ ಅವರ ಮುನ್ನುಡಿಗಳಲ್ಲಿ ಕಂಡು ಬರುವ ಮತ್ತೊಂದು ವಿಶೇಷಾಂಶ. ಯಾವ ವಿಷಯವನ್ನಾದರೂ ಭೇದಿಸಿ ಒಳಹೊಕ್ಕು ಅದರ ಮೂಲಚೂಲಗಳನ್ನೆಲ್ಲಾ ಶೋಧಿಸಿ ಆ ಬಗ್ಗೆ ಮತ್ತೊಂದು ಹೊಸ ಅಂಶವನ್ನು ಗುರುತಿಸಿ ಸೂಚಿಸುವುದು ಅವರ ವಿದ್ವತ್ತಿನ ಪ್ರತೀಕ. ಅವರ ವಿಶಾಲದೃಷ್ಟಿ, ಅಪಾರ ವಿದ್ವತ್ತು ಅಪ್ರತಿಮ ಪ್ರತಿಭೆ ಇವು ಎಲ್ಲೆಲ್ಲೂ ಕೆಲಸ ಮಾಡಿರುವುದನ್ನು ಕಾಣಬಹುದು : 'ಜನಪದ ಸಾಹಿತ್ಯ ಸಮೀಕ್ಷೆ' ಎಂಬ ಒಂದು ಕೃತಿಗೆ ಅವರು ಬರೆದಿರುವ ವಿಸ್ತೃತ ಮುನ್ನುಡಿ. ಅವರ ವಿಶಾಲ ಹಾಗೂ ಸಂಶೋಧನಾದೃಷ್ಟಿಗೆ ಒಂದು ಸ್ಪಷ್ಟ ಉದಾಹರಣೆ : "ಪ್ರತಿಯೊಂದು ಕಾಲೇಜಿನಲ್ಲಿಯೂ ಒಂದೊಂದು ಜಾನಪದ ಸಂಘ ನಿರ್ಮಾಣವಾಗಿ ಸಂಘದ ಸದಸ್ಯರು ಈ ಕಾರ್ಯಕ್ಕೆ ನಿಯೋಜನೆಗೊಳ್ಳಬೇಕು. ಈ ಸಂಘಗಳು ವಿಶ್ವ ವಿದ್ಯಾನಿಲಯದ ಜಾನಪದ ಸಂಘ (Folklore)ದ ಅಂಗ ಸಂಸ್ಥೆಯಾಗಿರಬೇಕು. ಮಾತೃ ಸಂಘವು ಸಂಗ್ರಹಕಾರರಿಗೆ ಒಂದು ಅಥವಾ ಎರಡು ವಾರ ಸಂಗ್ರಹ ವಿಧಾನದಲ್ಲಿ ತರಪೇತಿ ನೀಡಬೇಕು. ಆರು ತಿಂಗಳಿಗೊಮ್ಮೆ ಸಂಗ್ರಹಿತವಾದ ಸಾಮಾಗ್ರಿಯನ್ನು ಅಂಗಸಂಸ್ಥೆ ಕ್ರೋಢೀಕರಿಸಿ ಮಾತೃಸಂಸ್ಥೆಗೆ ರವಾನಿಸಬೇಕು. ವಿಶ್ಲೇಷಣೆ ವಿಂಗಡಣೆ ಸಂಶೋಧನಾದಿ ವ್ಯಾಪಾರಗಳು ಇಲ್ಲಿ ನಡೆಯಬೇಕು. ಮಾತೃ ಸಂಸ್ಥೆಯಲ್ಲಿ ಪ್ರಕಟವಾಗುವ ಅರ್ಧವಾರ್ಷಿಕೆಯಲ್ಲಿ ಸಂಶೋಧನಾ ಫಲಿತಾಂಶ ಹೊರಬೀಳಬೇಕು. ಇದಕ್ಕೆಲ್ಲಾ ಬೇಕಾಗುವ ವಾಹನಸಾಧನಾದಿ ಸೌಕರ್ಯಗಳನ್ನು ವಿಶ್ವವಿದ್ಯಾನಿಲಯ ಒದಗಿಸಬೇಕು". ಹೀಗೆ ಅವರು

ಒಂದು ಕೃತಿಗೆ ಬರೆಯುವ ಮುನ್ನುಡಿ ಹಲವು ಯೋಜನೆಗಳನ್ನು ರೂಪಿಸುವುದಕ್ಕೆ ನೆರವಾಗುತ್ತದೆ. ಇಂಥ ಒಂದು ಯೋಜನೆ ಕಾರ್ಯರೂಪಕ್ಕೆ ಬಂದಲ್ಲಿ ಜಾನಪದ ಜೀರ್ಣೋದ್ಧಾರ ಕಾರ್ಯ ಎಷ್ಟು ತೀವ್ರ ಗತಿಯಲ್ಲಿ ನಡೆಯಬಲ್ಲುದು ಎಂಬುದು ಊಹೆಗೂ ನಿಲುಕದಂಥದು. ಅಷ್ಟೇ ಏಕೆ ಜಾನಪದ ಮಹತ್ವವನ್ನು ಗಮನಿಸಿ, ಅದರ ಅವಶ್ಯಕತೆಯನ್ನರಿತು ವಿಶ್ವವಿದ್ಯಾನಿಲಯದಲ್ಲಿ ಅದಕ್ಕೊಂದು ಸ್ಥಾನ ದೊರೆಯುವಂತೆ ಮಾಡಿದ್ದು ದೇಜಗೌ ಅವರ ಅಪ್ರತಿಮ ದೂರದೃಷ್ಟಿಗೆ ನಿದರ್ಶನವಾಗಿದೆ. ಅದಕ್ಕೊಂದು 'ಜಾನಪದ ವಸ್ತು ಸಂಗ್ರಹಾಲಯ'ದ ಆವಶ್ಯಕತೆಯನ್ನು ಅರಿತು, ಅದನ್ನು ಕಾರ್ಯಗತಗೊಳಿಸಿದ್ದು ಅವರ ಕಾರ್ಯಾನುಶೀಲತೆಗೆ ಒಂದು ಜ್ವಲಂತ ಸಾಕ್ಷಿ.

ಒಳ್ಳೆಯ ಕಾರ್ಯವನ್ನು ಮತ್ಸರವಿಲ್ಲದೆ ಮೆಚ್ಚಿ ಮನಸ್ಸಿಸ್ತುತಿಸುವುದು ಶ್ರೀಯುತರಲ್ಲಿ ಕಾಣಬರುವ ಮತ್ತೊಂದು ಮಹತ್ವದ ಗುಣ. ಯಾರೇ ಆಗಲಿ ಕನ್ನಡಕ್ಕಾಗಿ ಶ್ರಮಿಸುತ್ತಿದ್ದಾನೆ ಎಂದು ತಿಳಿದಾಗ ಹತ್ತಿರ ಕರೆದು ಬೆನ್ನು ಚಪ್ಪರಿಸಿ ಉತ್ತೇಜನ ಕೊಡುವುದು ಅವರ ಸ್ವಭಾವಕ್ಕೆ ಒಗ್ಗಿ ಬಂದ ಗುಣ: "ಮಿತ್ರರ ಪುಸ್ತಕಗಳನ್ನು ಕುರಿತವಾದ್ದರಿಂದ ಇಲ್ಲಿಯ ವಿಮರ್ಶೆಗಳು ಪ್ರಶಂಸೆಯ ರೂಪದಲ್ಲಿರುವಂತೆ ತೋರಬಹುದು" - ಎನ್ನುವ ಮಾತು ಅವರ ಹೃದಯ ಕೋಮಲತೆಯನ್ನು ಪ್ರದರ್ಶಿಸುವಂಥದು. ಅವರ ಮುನ್ನುಡಿಗಳನ್ನು ಗಮನಿಸಿದಾಗ ಈ ಧಾರಾಳತೆ ನಿರಂತರವಾಗಿ ಹರಿದು ಬಂದಿರುವುದು ತಿಳಿಯುತ್ತದೆ:

'ಹೊರೇಸನ ಸಾಹಿತ್ಯ ವಿಮರ್ಶೆ' ಎಂಬ ಒಂದು ಕೃತಿಗೆ ಮುನ್ನುಡಿಯನ್ನು ಬರೆಯುವಾಗ ಅವರು ಹೇಳಿರುವ ಮಾತುಗಳು ಲೇಖಕರಿಗೆ ತೃಪ್ತಿ ನೀಡುವಂತೆಯೇ, ಇನ್ನು ಕೆಲವರಿಗೆ ಚಾಟಿ ಏಟಿನಂತೆಯೂ ತೋರಬಹುದು : "ಬಾಲಸುಬ್ರಮಣ್ಯಂ ಅವರು ಶ್ರಮಸಾಧ್ಯವಾದ ಈ ಮಹಾಕಾಯಕವನ್ನು ಆರಿಸಿಕೊಂಡಿರುವುದು ಅವರ ಅಧ್ಯಯನಶೀಲತೆ ಮತ್ತು ಅಭಿರುಚಿಗಳಿಗೆ ಸಾಕ್ಷಿಯಾಗಿದೆ. ಇದಕ್ಕಾಗಿ ವ್ಯಯ ಮಾಡಿರುವ ಕಾಲವನ್ನು ಅವರು ಕಥೆ ಕಾದಂಬರಿಗಳನ್ನು ಬರೆಯಲೋ ಅಥವಾ ಟ್ಯೂಶನ್ ಹೇಳಲೋ ಬಳಸಿಕೊಂಡಿದ್ದರೆ ಅಪಾರವಾಗಿ ಹಣವನ್ನು ಸಂಪಾದಿಸಬಹುದಿತ್ತು, ಆದರೆ ಅವರು ಆರಿಸಿಕೊಂಡಿರುವುದು ಇತರರು ಪ್ರವೇಶಿಸಲು ಹೆದರುವಂತಹ ಕ್ಷೇತ್ರವನ್ನು, ಹಲವರು ಓದದಿದ್ದರೂ ಓದಿದ ಕೆಲವರಾದರೂ ಕೃತಜ್ಞತೆಯಿಂದ ವಂದಿಸುವಂತಹ ಸ್ತುತ್ಯ ಕಾರ್ಯವನ್ನೆಸಗಿದ್ದಾರೆ. ಸಮಸ್ತ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಕನ್ನಡ ಕಾವ್ಯ ಮಿಮಾಂಸೆಗೆ ಹೊಸ ಮುಖವನ್ನು ನೀಡಿದ್ದಾರೆ". ಇಂಥಾ ಕಿಚ್ಚಿಲ್ಲದ ಬಿಚ್ಚುನುಡಿಗಳು ಕೆಲಸ ಮಾಡುವವರಿಗೆ ಹೆಚ್ಚಿನ ಉತ್ತೇಜನವನ್ನು ಕೊಡುತ್ತವೆ, ಶಕ್ತಿಯನ್ನು ನೀಡುತ್ತವೆ, ಎದ್ದಾಳನ್ನಾಗಿ ಮಾಡುತ್ತವೆ. ಮತ್ತೊಬ್ಬರ ಅಂತರಂಗವನ್ನು ಪ್ರವೇಶಿಸಿ ಅವರೊಳಗಿನ ಸದ್ಗುಣಗಳನ್ನು ಗ್ರಹಿಸಿ ಅದನ್ನು ಎತ್ತಿ ತೋರಿಸುವುದು ದೇಜಗೌ ಅವರ ದೊಡ್ಡ ಗುಣ. ಅವರ ಮುನ್ನುಡಿಗಳಲ್ಲೆಲ್ಲ ಈ ಅಂಶವು ದಟ್ಟವಾಗಿ ಕವಿದಿರುವುದನ್ನು ಕಾಣಬಹುದು.

'ಮುನ್ನುಡಿಯ' ಮಹತ್ವ ಹಲವರಿಗೆ ಅರ್ಥವಾದದ್ದು ದೇಜಗೌ ಅವರ 'ಮುನ್ನುಡಿಗಳು' ಹೊರ ಬಿದ್ದ ಮೇಲೆ ಎಂದರೆ ಅತಿಶಯೋಕ್ತಿಯೇನಲ್ಲ. ಏಕೆಂದರೆ ಮುನ್ನುಡಿಯನ್ನೇ ಗಮನಿಸದೆ ನೇರವಾಗಿ ಕೃತಿಯ ಒಳನುಗ್ಗುವ ಎಷ್ಟೋ ಮಂದಿ ನಮ್ಮಲ್ಲಿ ಇದ್ದಾರೆ. ಹಲವು ಮುನ್ನುಡಿಗಳು ಅವರನ್ನು ಅಂಥ ಕ್ರಿಯೆಗೆ ಒಳಗು ಮಾಡಲು ಕಾರಣವೂ ಆಗಿರಬಹುದು ಎಂದರೂ ಆಶ್ಚರ್ಯವಿಲ್ಲ. ಯಾವುದೂ ನಾಲ್ಕು ಪುಟಗಳನ್ನು ತಿರುವಿ ಅಲ್ಲಿಯ ವಿಷಯವನ್ನೇ ಮುನ್ನುಡಿಯಲ್ಲಿ ಮತ್ತೊಂದು ರೀತಿಯಲ್ಲಿ ಅಭಿವ್ಯಕ್ತಪಡಿಸಿದಾಗ ಅಂಥಾ ಮುನ್ನುಡಿಯನ್ನು ಓದುವ ಅವಶ್ಯಕತೆಯಿರುವುದಿಲ್ಲ ಎಂಬುದು ನಿಜ.

ಆದರೆ, ಎಲ್ಲರಿಗೂ ಈ ಮಾತು ಅನ್ವಯಿಸುವುದಿಲ್ಲ. ದೇಜಗೌ ಅವರ ಮುನ್ನುಡಿಗಳು ಈ ವಲಯದಿಂದ ಹೊರತಾದುವು ಎಂಬುದು, ಅವರ ಬರಹವನ್ನು ಗಮನಿಸಿದ ಎಲ್ಲರಿಗೂ ವೇದ್ಯವಾಗುವ ಅಂಶ. ಏಕೆಂದರೆ ಅವರ ಮುನ್ನುಡಿಗಳು ನೇರವಾಗಿ ಕೃತಿಯನ್ನು ಕುರಿತು ವಿವೇಚಿಸುವುದರ ಜೊತೆಗೆ, ಉಳಿದ ಅದರ ಹತ್ತಾರು ಮಾರ್ಗಗಳತ್ತ ದೃಷ್ಟಿ ಹರಿಸಿ ನಮ್ಮನ್ನು ಅದರ ದರ್ಶನಕ್ಕೆ ಕರೆದೊಯ್ಯುವ ಒಂದು ಸಾಫಲ್ಯತೆಯನ್ನು ಇವರಲ್ಲಿ ಕಾಣುತ್ತೇವೆ. ಉಳಿದವರು ಈ ನಿಟ್ಟಿನಲ್ಲಿ ಕೆಲಸ ಮಾಡಬಹುದಾದ ಹಲವು ದಾರಿಗಳನ್ನು ಅವರು ಅಲ್ಲಿ ನಿರ್ದೇಶಿಸಿರುತ್ತಾರೆ.

ಅವರ ಮುನ್ನುಡಿಗಳಲ್ಲಿ ಕಂಡು ಬರುವ ಮತ್ತೊಂದು ಗಮನಾರ್ಹ ಅಂಶವೆಂದರೆ : ಅಪಾರ ವಿದ್ವತ್ತು ಮತ್ತು ವಿಶಾಲದೃಷ್ಟಿ. ಯಾವ ವಿಷಯವನ್ನೇ ಆಗಲಿ ತನ್ನದನ್ನಾಗಿ ಮಾಡಿಕೊಂಡು ಸುಲಿದ ಬಾಳೆಹಣ್ಣಿನಂತೆ ಅದನ್ನು ಕನ್ನಡದಲ್ಲಿ ಹಿಡಿದಿಡುವ ಮಾಂತ್ರಿಕ ಕಲೆ ದೇಜಗೌ ಅವರಿಗೆ ಸಿದ್ಧಿಸಿದೆ. ಅವರ ಮುನ್ನುಡಿಗಳನ್ನು ಗಮನಿಸಿದಾಗ ಇದರ ವ್ಯಾಪಕತೆ ಅರ್ಥವಾಗುತ್ತದೆ. ಒಂದು ವಿಷಯವನ್ನು ಕುರಿತು ಬರೆಯುವಾಗ ಅದಕ್ಕೆ ಹಿನ್ನೆಲೆಯಾಗಿ, ಆ ವಿಷಯವನ್ನು ಒಳಗೊಂಡಂತೆ ಹಲವಾರು ವಿಷಯಗಳು ಹೇಗೆ ಅದರ ಸುತ್ತುವರಿದು ಬರುತ್ತವೆ ಎಂಬುದು ವಿಷಯ ವಿಶಾಲತೆಗೆ ಸಂಬಂಧಿಸಿದ ಮತ್ತೊಂದು ಅಂಶ : ಪ್ರಬುದ್ಧ ಕರ್ನಾಟಕದ ಚಿನ್ನದ ಸಂಚಿಕೆಗೆ ಮುನ್ನುಡಿಯನ್ನು ಬರೆಯುವಾಗ ಅವರು ಕೊಡುವ ಹಿನ್ನೆಲೆ ಇಂಥದ್ದು : ಒಂದು ಪತ್ರಿಕೆ ಪ್ರಬಲ ಬೋಧನ ಮಾಧ್ಯಮವಾಗಿರುವಂತೆ ನವೋನವವಾದ ಚಲನ ವಿಶ್ವಕೋಶವಾಗಿರುವಂತೆ, ಸಾಮಾಜಿಕ, ರಾಜಕೀಯ ವಿಚಾರಗಳ ಸಮರ್ಥ ಪ್ರಸಾರ ಸಾಧನವಾಗಿರುವಂತೆ, ರನ್ನ ನಾಡಿನ ಭಾಷಾ ಸಾಹಿತ್ಯಗಳ ತುಂಬು ಬೆಳವಣಿಗೆಗೆ ಪ್ರೇರಕ ಹಾಗೂ ಆಶ್ರಯಶಕ್ತಿಯಾಗಿರುತ್ತದೆ. ಸಮಕಾಲೀನ ರಾಜಕೀಯ ಸಾಮಾಜಿಕ ವಿಚಾರ ವೇದಿಕೆಗಳಾಗಿ ಉಗಮಗೊಂಡ ದೈನಿಕ ವಾರ್ಷಿಕ ಮಾಸಿಕಗಳು ಸಾಹಿತ್ಯದ ಹಲವು ಪ್ರಕಾರಗಳನ್ನು ಪೋಷಿಸಿ, ಬೆಳೆಸಿ, ಅಜರಾಮರವಾಗುಳಿದಿವೆ...... ಈ ಅಪಾರ ಸಂಖ್ಯೆಯ ಪತ್ರಿಕೆಗಳು ಆ ದೇಶದಲ್ಲಿ ತಲೆಯೆತ್ತದಿದ್ದರೆ ಅಲ್ಲಿಯ ಮಾನವ ಪ್ರತಿಭೆ ಬತ್ತಿ ಹೋಗುತ್ತಿತ್ತು, ಕಾವ್ಯಸ್ಫೂರ್ತಿ ಹಿಂಗಿ ಹೋಗುತ್ತಿತ್ತು".

ಇಂಥ ಒಂದು ಹಿನ್ನೆಲೆಯೊಡನೆ ಪ್ರಾರಂಭಿಸಿ, "ಪ್ರಬುದ್ಧ ಕರ್ನಾಟಕದ ಮಾಹಿತಿಯನ್ನು ಕೊಡುವಾಗ ಸಹಜವಾಗಿಯೇ ಅದರ ಯೋಗ್ಯತೆ ಎತ್ತರಕ್ಕೇರುತ್ತದೆ. ಒಂದು ಗ್ರಂಥಕ್ಕೆ ಮುನ್ನುಡಿ ಬರೆಯುವವರಿಗೆ ಆ ವಿಷಯಕ್ಕೆ ಸಂಬಂಧಿಸಿದಂತೆ ಹಿನ್ನೋಟ ಮುನ್ನೋಟಗಳೆರಡು ಸಾಕಷ್ಟು ಪ್ರಮಾಣದಲ್ಲಿ ಇದ್ದಲ್ಲಿ ಅದು ಕೃತಿಯ ಸ್ಥಾನವನ್ನು ಏರಿಸುವುದಷ್ಟೇ ಅಲ್ಲ, ಓದುಗರ ದೃಷ್ಟಿಯಿಂದಲೂ ಮಹದುಪಕಾರವಾದಂತಾಗಿರುತ್ತದೆ ಎಂಬುದು ಇಂಥ ಮುನ್ನುಡಿಗಳಿಂದ ಸಂವೇದ್ಯವಾಗುತ್ತದೆ.

ದೇಜಗೌ ಅವರಲ್ಲಿನ ಕನ್ನಡಾಭಿಮಾನ ಎಣೆಯಿಲ್ಲದ್ದು. ಗುರುಕೃಪೆಗೆ ಒಳಗಾಗಿ ಕನ್ನಡಕ್ಕಾಗಿ ಕೈಯೆತ್ತಿ ಅದನ್ನು ಕಲ್ಪವೃಕ್ಷವಾಗಿಸಿಕೊಂಡಿದ್ದಾರೆ. ಅದರಿಂದಾಗಿ ಅವರು ಈ ನಿಟ್ಟಿನಲ್ಲಿ ನಡೆದದ್ದೇ ದಾರಿ, ಮುಟ್ಟಿದ್ದೆಲ್ಲಾ ಚಿನ್ನ. ಕನ್ನಡದ ಸ್ಥಾನಮಾನವನ್ನು ಪೂರ್ವಸ್ಥಿತಿಯಿಂದ ಈ ಸ್ಥಿತಿಗೆ ತಂದದ್ದಷ್ಟೇ ಅಲ್ಲ, ಅದಕ್ಕೆ ಸಲ್ಲಬೇಕಾದ ಪೂರ್ಣ ಗೌರವ ಸಂದಿಲ್ಲ ಎಂದು ಅದಕ್ಕಾಗಿ ಅವರು ನಡೆಸುತ್ತಿರುವ ಹೋರಾಟ ಸರ್ವವೇದ್ಯವಾದುದಾಗಿದೆ. ಕನ್ನಡ ಆಡಳಿತ ಭಾಷೆಯಾಗಿರಬೇಕು, ಶಿಕ್ಷಣ ಮಾಧ್ಯಮವಾಗಬೇಕು ಎಂಬುದರ ಬಗ್ಗೆ ಹೋದಹೋದೆಡೆಗಳಲ್ಲೆಲ್ಲಾ ಅವಕಾಶ ಸಿಕ್ಕಿದೆಡೆಗಳಲ್ಲೆಲ್ಲಾ ಅದರ ಅವಶ್ಯಕತೆಯನ್ನು ಕುರಿತು ಒತ್ತಿ ಒತ್ತಿ ಹೇಳಿರುವುದು ಅವರಿಗೆ

ಬೇಸರವೆನಿಸಿರುವಷ್ಟಾಗಿರಬಹುದು ! ಆದರೂ ರೋಗ ವಾಸಿಯಾಗುವವರೆಗೂ ಔಷಧಿ ನಿಲ್ಲಿಸುವಂತಿಲ್ಲ ! ಅವರ ಮುನ್ನುಡಿಗಳಲ್ಲಿಯೂ ಈ ಅಂಶ ಆಳವಾಗಿ ಎಲ್ಲೆಡೆಯೂ ಒಂದಲ್ಲ ಒಂದು ರೀತಿಯಲ್ಲಿ ಬೇರು ಬಿಟ್ಟಿರುವುದನ್ನು ಕಾಣಬಹುದು. ಕನ್ನಡದ ವಿಷಯದಲ್ಲಿ ಕಡೆಗಣಿಸಿ ಮಾತಾಡುವವರನ್ನು ಕಂಡಾಗ ಅವರು ಸಿಡಿದೇಳುತ್ತಾರೆ. ಎಲ್ಲಿಲ್ಲದ ಕೋಪ, ಛಲ ದಟ್ಟೈಸಿ ಬರುತ್ತವೆ. ಆಂಗ್ಲರ ದತ್ತುಪುತ್ರರಂತೆ ಅವರ ಭಾಷೆಯತ್ತಲೇ ಓಲೈಸಿ ಅದಕ್ಕೆ ಚಾಮರ ಬೀಸುವವರನ್ನು ಕಂಡಾಗ ಅಂತಹ ತಿಳಿಗೇಡಿತನಕ್ಕಾಗಿ ಮರುಗಿದ್ದಾರೆ. ಹಲವೊಮ್ಮೆ ಕೋಪಗೊಂಡು ಸಿಡಿದೆದ್ದಿದ್ದಾರೆ. ಅಂದರೆ, ಇಂಗ್ಲೀಷ್ ಬಗ್ಗೆ ಅವರಿಗೆ ಅವಜ್ಞೆ ಇದೆ ಎಂದಾಗಲಿ ತಾತ್ಪರವಿದೆಯೆಂದಾಗಲಿ ಅಲ್ಲ. ಕನ್ನಡ ಕಲಿತ ಜನ ಹೆಚ್ಚು ಹೆಚ್ಚು ಇಂಗ್ಲೀಷ್ ಕಲಿಯಬೇಕು, ಇಂಗ್ಲೀಷ್‌ನಲ್ಲಿರುವುದನ್ನು ಕನ್ನಡಕ್ಕೆ ತರ್ಜುಮೆ ಮಾಡುವುದರ ಮೂಲಕ ಇಂಗ್ಲೀಷ್ ಕಲಿಯದ ಜನರಿಗೆ ನೆರವಾಗಬೇಕು ಎಂಬ ಹಿತ ನುಡಿ ಅವರ ಶಿಷ್ಯರಾದವರೆಲ್ಲರಿಗೂ ಗೊತ್ತಿರುವ ವಿಷಯ.

ಶಾಲಾ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವಿರಬೇಕು. ರಾಜ್ಯಭಾಷೆ ಆಡಳಿತ ಭಾಷೆಯಾಗಬೇಕೆಂಬ ಅವರ ವಾದ, ವೈಯಕ್ತಿಕ ದ್ವೇಷ ಸಾಧಕರಲ್ಲದವರೆಲ್ಲರಿಗೂ ಹಿಡಿಸುವಂಥ ವಿಷಯ, ಅರ್ಥವಾಗುವಂಥ ವಿಷಯ : "ದೇಶಭಾಷೆ ಆಡಳಿತ ಮಾಧ್ಯಮವಾಗದಿದ್ದರೆ ಪ್ರಜಾಪ್ರಭುತ್ವ ಲಜ್ಜಾಸ್ಪದವಾಗುತ್ತದೆ. ಜನಸಾಮಾನ್ಯ ಭಾಷೆಯಲ್ಲಿ ಸರ್ಕಾರ ವ್ಯವಹಾರ ನಡೆಸದಿದ್ದರೆ ಜನತೆಯ ಮೂಲಭೂತ ಹಕ್ಕನ್ನು ಮೊಟಕು ಮಾಡಿ, ಸಮಾಜಕ್ಕೆ ದ್ರೋಹವೆಸಗಿದಂತಾಗುತ್ತದೆ..... ಅಂತೆಯೇ ವಿದ್ಯಾರ್ಥಿಗಳ ಮನವುಗದ ಬೋಧನೆ ಬರಿಯ ವ್ಯರ್ಥಾಲಾಪ. ಗುರು - ಶಿಷ್ಯ ಹೃದಯಗಳನ್ನು ಕೂಡಿಸುವ ಕೊಂಡಿ ಭಾಷೆ. ಅವು ಸಮನಿಲ್ಲದಾಗ ಅವು ಪರಸ್ಪರ ದೂರ ಸರಿಯುತ್ತವೆ. ವಿದ್ಯಾರ್ಥಿಗೆ ಅರ್ಥವಾಗದ ರೀತಿಯಲ್ಲಿ ಶಿಕ್ಷಕ ಪಾಠ ಹೇಳಿದ್ದಾದರೆ ಅವನು ದೇಶ ಸಮಾಜಗಳಿಗೆ ದ್ರೋಹಗೈದಂತಾಗುತ್ತದೆ". ಈ ಮಾತುಗಳು ಪೂರ್ವಗ್ರಹ ಪೀಡಿತರಲ್ಲದವರೆಲ್ಲರಿಗೂ ಹಿಡಿಸುವಂಥವು.

ದೇಜಗೌ ಅವರ ಮಾತಿನಲ್ಲಾಗಲಿ, ಕೃತಿಯಲ್ಲಾಗಲಿ ಕಂಡು ಬರುವ ಮತ್ತೊಂದು ಅಂಶವೆಂದರೆ - ಗುಂಡಿನಷ್ಟೇ ನೇರವಾಗಿ, ಅಷ್ಟೇ ನಿರ್ದಿಷ್ಟವಾಗಿ ಅಡೆತಡೆಯಿಲ್ಲದೆ ಸರಿಯೆನಿಸಿದ್ದನ್ನು ಹೇಳಿಬಿಡುವುದು. ಇದರಿಂದ ಉಂಟಾಗುವ ಪ್ರತಿಕ್ರಿಯೆಗಳಿಗಾಗಲಿ, ಪ್ರಕೋಪಗಳಿಗಾಗಲಿ ಎದೆಗುಂದುವವರು ಅವರಲ್ಲ. ವಿಷಯದ ಒಳಹೊಕ್ಕು ಅದನ್ನು ಕೆಣಕಿ ಸಮಸ್ಯೆಯನ್ನು ಸುಲಭಗೊಳಿಸುವಂತೆ ಅಷ್ಟೇ ಸರಳವಾಗಿ, ನಯವಾಗಿ ಪರಿಸ್ಥಿತಿಯನ್ನು ತೆರೆದಿಡಲು ಅವರ ಭಾಷೆ, ಬರವಣಿಗೆ ಬಲ್ಲದು : - "ಸ್ವಭಾಷಾ ಮೂಲಕದ ಜ್ಞಾನಾರ್ಜನೆ ಎದೆಹಾಲು ಕುಡಿದಂತೆ ನೇರವಾಗಿ ಹೃತ್ಕೋಶಕ್ಕೆ ಸೇರುತ್ತದೆ. ಪರಭಾಷೆಯ ಮೂಲಕದ ವಿದ್ಯಾರ್ಜನೆ ಒಳಲೆಯ ಮೂಲಕ ಔಷಧಿ ಹುಯ್ದಂತೆ ಮೈ ಹತ್ತುವುದಿಲ್ಲ". ಇಂಥಾ ಸವಿನುಡಿಗಳು ಎಂಥವರ ಕಣ್ಣನ್ನಾದರೂ ತೆರೆಸಬಲ್ಲವು, ಪರಿಸ್ಥಿತಿಯ ಅರಿವನ್ನುಂಟು ಮಾಡಿಕೊಡಬಲ್ಲವು. ಅವರ ಮುನ್ನುಡಿಗಳು ಇಂಥ ವಿಚಾರಧಾರೆಯ, ವಿಚಾರ ಪ್ರಚೋದನೆಯ ಮಾಂತ್ರಿಕ ಉಕ್ತಿಗಳು. ಸಾಮಾಜಿಕ ಮತ್ತು ಸಾಹಿತ್ಯಕ್ಕೆ ಸ್ಥಿತಿಗತಿಗಳ ಅರಿವನ್ನುಂಟು ಮಾಡಿಕೊಡುವುದರ ಜೊತೆಗೆ ಇಂದಿನ ಯುವ ಜನಾಂಗ ಎತ್ತ ಸಾಗುತ್ತಿದೆ ಎಂಬುದನ್ನು ಸೂಚಿಸಿದ್ದಾರೆ. ಇವುಗಳಿಗೆಲ್ಲಾ ಪರಿಹಾರ ಮಾರ್ಗವನ್ನು ಕಂಡುಕೊಳ್ಳುವಲ್ಲಿಯೂ ಅವರ ಲೇಖನಿ ಫಲಕಾರಿಯಾಗಿದೆ. ಇಂತಹ ಹಲವಾರು ಸಮಸ್ಯೆಗಳನ್ನು ಬಿಡಿಸುವಲ್ಲಿ ಹಾಗೂ ಅವುಗಳಿಗೆ ಪರಿಹಾರ

ಮಾರ್ಗವನ್ನು ತೋರಿಸುವಲ್ಲಿ ಒಂದು ಆಕರ ಗ್ರಂಥ ಇದಾಗಿದೆ. ಅವರ ವಿಶಿಷ್ಟ ಶೈಲಿ ಇದಕ್ಕೆ ಮತ್ತಷ್ಟು ಹೆಚ್ಚಿನ ಮೆರುಗನ್ನು ಮತ್ತು ಬೆಡಗನ್ನು ನೀಡಿದೆ.

ದೇಜಗೌ ಅವರು ಒಬ್ಬ ಶ್ರೇಷ್ಠ ಸಾಹಿತ್ಯಾರಾಧಕರಷ್ಟೇ ಅಲ್ಲ, ಅಪ್ರತಿಮ ಭಾಷಾ ಪ್ರೇಮಿಯೂ ಹೌದು. "ಕನ್ನಡ ಉಳಿದರೆ ಸಾಹಿತ್ಯ ಉಳಿದೀತು, ಕನ್ನಡ ಅಳಿದರೆ ಸಾಹಿತ್ಯ ಅಳಿದೀತು" - ಇದು ಕನ್ನಡಿಗರಿಗೆ ಅವರು ನೀಡಿರುವ ಒಂದು ಎಚ್ಚರಿಕೆ. ಅವರ ವಿಚಾರಧಾರೆಯಲ್ಲಿ ಇಂಥಾ ಬಹುಜನ ಸಮ್ಮತ ಅಭಿಪ್ರಾಯಗಳೇ ಹೆಚ್ಚು. ಅವರ 'ಮುನ್ನುಡಿಗಳು' ಈ ದೃಷ್ಟಿಯಿಂದ ಒಂದು ಉದ್ಗ್ರಂಥ. ಅಲ್ಲಿಯ ವಿಚಾರಗಳ ಹರವು, ವಿದ್ವತ್ತಿನ ಹಾಗೂ ವಿಸ್ತಾರವಾದ ವಿಷಯ ಪರಿಜ್ಞಾನದಿಂದಾಗಿ ಸಮಕಾಲೀನ ಹಾಗೂ ವೈಚಾರಿಕ ದೃಷ್ಟಿಯ ಎತ್ತರ ಬಿತ್ತರಗಳಿಂದ ಕೂಡಿ ಇದೊಂದು 'ಉಪಾದೇಯಗ್ರಂಥ'ವೆನಿಸಿಕೊಂಡು ಕನ್ನಡದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ.

೨

ದೇಜಗೌ ಅವರು ಇದುವರೆವಿಗೂ ಮೂವರ ಜೀವನ ಚರಿತ್ರೆಗಳನ್ನು ಬರೆದು ಖ್ಯಾತರೆನಿಸಿಕೊಂಡಿದ್ದಾರೆ. 'ರಾಷ್ಟ್ರಕವಿ ಕುವೆಂಪು', 'ತೀ.ನಂ.ಶ್ರೀ', ಹಾಗೂ 'ಮೋತಿಲಾಲ್ ನೆಹರೂ' - ಇವೇ ಆ ಮೂರು ಕೃತಿಗಳು.

'ರಾಷ್ಟ್ರಕವಿ ಕುವೆಂಪು' ದೇಜಗೌ ಅವರ ಗದ್ಯಶೈಲಿಗೆ ಒಂದು ಸ್ಪಷ್ಟ ನಿದರ್ಶನ. ಅಷ್ಟೇ ಏಕೆ ಜೀವನ ಚರಿತ್ರೆಯ ಕರ್ತೃಗಳಿಗೆ ಇದು ಒಂದು ಉನ್ನತ ಮಾದರಿ. ರಾಷ್ಟ್ರ ಕವಿಯೊಬ್ಬನ ಜೀವನ ಚಿತ್ರಣವನ್ನು ಹಿಡಿದಿಡುವುದು ಸುಲಭವಲ್ಲ. ಅವರ ಅಂತರಂಗ ಬಹಿರಂಗಗಳೆರಡನ್ನೂ ಅರಿತವರಾಗಿರಬೇಕು. ಅವರ ಓರೆಕೋರೆಗಳನ್ನೆಲ್ಲಾ ಗಮನಿಸಿದವರಾಗಿರಬೇಕು. ಅವರ ಎತ್ತರ ಬಿತ್ತರಗಳು ಸುಲಭವಾಗಿ ಸಾಮಾನ್ಯರಿಗೆ ನಿಲುಕುವಂತಹವುಗಳಲ್ಲ. ಹಾಗೆ ನಿಲುಕಿದರೂ ಅದನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡಿದ್ದೇನೆಂದು ಹೇಳುವುದು ಕಷ್ಟ. ಅಂತಹವರ ಚಿತ್ರವನ್ನೂ ಚರಿತ್ರೆಯನ್ನು ಬರೆಯುವವರಿಗೆ ಬರಿಯ ಭಕ್ತಿಯಷ್ಟೇ ಸಾಲದು, ಅವರ ಕೃತಿಗಳನ್ನು ಅರ್ಥಮಾಡಿಕೊಳ್ಳುವ, ಅವರ ವಿದ್ವತ್ತನ್ನು ಎದುರಿಸುವ ಅಪಾರ ಶಕ್ತಿ ಪ್ರತಿಭೆಗಳೂ ಮುಖ್ಯ.

ದೇಜಗೌ ಅವರಲ್ಲಿ ಇವೆಲ್ಲವೂ ಮೇಳೈಸಿವೆ ಎನ್ನುವಲ್ಲಿ ಯಾವ ಸಂಶಯವೂ ಇಲ್ಲ, ಶ್ರೀ ಕುವೆಂಪು ಅವರನ್ನು ದೇಜಗೌ ಅವರಂತೆ ಹತ್ತಿರದಿಂದ ನೋಡಿ ಅರ್ಥಮಾಡಿಕೊಂಡಿರುವವರು ಮತ್ತೊಬ್ಬರಿಲ್ಲವೆನ್ನಬಹುದು. ಅಂತಹ ಕೆಚ್ಚೆದೆಯಿಲ್ಲದೆ ಮಹಾಕವಿಯೊಬ್ಬನ ಜೀವನ ಚಿತ್ರವನ್ನು ಚಿತ್ರಿಸುವ ಸಾಹಸವನ್ನು ಯಾರೂ ಮಾಡಲಾರರು. ಆದರೂ ಅವರ ವಿನಯ ದೊಡ್ಡದು : "ಶ್ರೀ ಕುವೆಂಪು ಅವರನ್ನು ನಾನು ನೋಡಿದ್ದೇನೆ ನಿಜ : ಆದರೆ ಅವರನ್ನು ಸಂಪೂರ್ಣವಾಗಿ ಕಂಡುಕೊಂಡಿದ್ದೇನೆಂದು ಹೇಳುವ ಧೈರ್ಯ ನನಗಿಲ್ಲ" - ಎಂದು ಹೇಳುವಲ್ಲಿ ಅವರ ಪ್ರತಿಭೆಯಷ್ಟೇ ಪ್ರಧಾನವಾಗಿ ವಿನಯವೂ ಪ್ರದರ್ಶಿತವಾಗಿರುವುದನ್ನು ಕಾಣುತ್ತೇವೆ.

ಒಟ್ಟು ಒಂಬತ್ತು ಪ್ರಕರಣಗಳನ್ನಾಗಿ ವಿಭಾಗಿಸಿಕೊಂಡು ಅವರ ಜೀವನ ಚರಿತ್ರೆಯನ್ನು ರೂಪಿಸಿದ್ದಾರೆ. ಶ್ರೀ ಕುವೆಂಪು ಅವರ ಎಲ್ಲ ಸಾಧನೆ ಸಿದ್ಧಿಗಳೂ ಇಲ್ಲಿಯ ಒಂದೊಂದು ಪ್ರಕರಣದಲ್ಲಿಯೂ ಉಜ್ವಲವಾಗಿ ಮೈತಳೆದು ಬಂದಿವೆ. ಕನ್ನಡ ಸಾಹಿತ್ಯ ಪ್ರಪಂಚಕ್ಕಂತೂ ಇದೊಂದು ವಿಶಿಷ್ಟವಾದ ಕೃತಿ. ಕನ್ನಡ ಸಾಹಿತಿಯೊಬ್ಬನನ್ನು ಕುರಿತು ಇಷ್ಟು ವಿಸ್ತಾರವಾದ ಹಾಗೂ ವಿಶಿಷ್ಟವಾದ

ಕೃತಿ ಇದೊಂದೇ ಎನ್ನಬೇಕು. ಅವರ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ವಿಶಿಷ್ಟ ಘಟನೆಗಳನ್ನು ಮುಖ್ಯ ಮೈಲಿಗಲ್ಲುಗಳನ್ನು ಅತ್ಯುನ್ನತವಾಗಿ ಚಿತ್ರಿಸಿರುವುದನ್ನು ಇಲ್ಲಿ ಕಾಣಬಹುದು.

೧. ಸಹ್ಯಾದ್ರಿಯಲ್ಲಿ ಶ್ರೀ ಗುರುಕೃಪೆ :

ಮಹಾಕವಿಯೊಬ್ಬನ ಜೀವನ ಚರಿತ್ರೆಯ ಪ್ರಾರಂಭವೇ, ಮಹಾಕಾವ್ಯವೊಂದರ ಪ್ರಾರಂಭದಂತೆ ಮೈನವಿರೇಳಿಸುತ್ತದೆ. ದೇಜಗೌ ಅವರ ಗದ್ಯಶೈಲಿ ಇಲ್ಲಿ ಕಾವ್ಯಶೈಲಿಯಾಗಿದೆ : "ದೇವೇಂದ್ರನ ನಂದನವನ್ನು ಸ್ವರ್ಗದಿಂದಿಳಿಸಿ ಭೂಲೋಕದಲ್ಲಿ ಸ್ಥಾಪಿಸಿರುವಂತೆ, ಗಂದರ್ವ ಲೋಕವನ್ನಣಕಿಸುವಂತೆ ಮೈಸೂರು ದೇಶದ ಮಲೆನಾಡು ಕಂಗೊಳಿಸುತ್ತಿದೆ ; ಸ್ವಿಟ್ಜರ್‌ಲೆಂಡ್ ಕಾಶ್ಮೀರಗಳಂತೆ ಜಗತ್ತಿನ ಕಣ್ಮನಗಳನ್ನು ಸೂರೆಗೊಂಡಿದೆ". ಇದೊಂದು ಜೀವನ ಚರಿತ್ರೆ ಎಂಬುದನ್ನು ಮರೆತು, ಇದರ ಪ್ರಾರಂಭವನ್ನು ಗಮನಿಸುವವರಿಗೆ ಇದೊಂದು ಮಹಾಕಾವ್ಯದ ಪ್ರಾರಂಭದಂತೆಯೇ ಗೋಚರಿಸುತ್ತದೆ. ಇಲ್ಲಿ ಮಲೆನಾಡಿನ ಚಿತ್ರವನ್ನು ಹೆಚ್ಚು ಕವಿವಾಣಿಯಲ್ಲಿಯೇ ಭವ್ಯಾದ್ಭುತವಾಗಿ ಚಿತ್ರಿಸಿದ್ದಾರೆ.

'ಬಯಲು ಸೀಮೆಯ ಬೋಳು ಬಾಳನ್ನು' ಬಾಳಿದವರಿಗೆ ಮಲೆನಾಡಿನ ಸೌಂದರ್ಯರಾಶಿಯ ಶ್ರೀಮಂತಿಕೆಯನ್ನು ಕೇಳಿದಾಗ ಆಶ್ಚರ್ಯವೆನಿಸುವಷ್ಟೇ, ಅದು ಬೇರೊಂದು ಲೋಕದ ವರ್ಣನೆ ಎಂಬಂತೆ ಅನ್ನಿಸಿದರೂ ಆಶ್ಚರ್ಯವಿಲ್ಲ. "ಗಗನ ಚುಂಬಿಗಳಾದ ಸಹ್ಯಾದ್ರಿ ಪರ್ವತ ಶ್ರೇಣಿಗಳು, ಆ ವಿಶಾಲ ನೀಲಗಗನ, ಶತಶತಮಾನಗಳಿಂದಲೂ ಮರದ ಬುಡದೆಡೆ ಬಿಸಿಲನ್ನೇ ಕಾಣದೆ ಬೆಳೆದು ನಿಂತಿರುವ ಆ ಅಪಾರ ಅರಣ್ಯರಾಶಿ". - ಮಹಾಕವಿಯೊಬ್ಬರ ಮಹತ್ ಜೀವನ ಚರಿತ್ರೆಗೆ ತಕ್ಕ ಪ್ರಾರಂಭವಿದಾಗಿದೆ.

ಮಹಾಕವಿಯೊಬ್ಬರು ಜನ್ಮ ತಾಳುವ ನಾಡು ಇಂತಲ್ಲದೆ ಮತ್ತೆಂತಿರಲು ಸಾಧ್ಯ ? 'ರಾಷ್ಟ್ರಕವಿ ಕುವೆಂಪು' ಅವರು ಹುಟ್ಟಿದ ಊರನ್ನು ಹೇಳಹೋಗುವ ಮುನ್ನ ಅಲ್ಲಿಯ ಪ್ರಕೃತಿ ಸೌಂದರ್ಯದ ಶ್ರೀಮಂತಿಕೆಯ ಸೊಬಗನ್ನು ಮನತಣಿಯುವಂತೆ ಚಿತ್ರಿಸಿದ್ದಾರೆ. ಅವರ ಕಾವ್ಯಶೈಲಿ ಇಲ್ಲಿ ಸಿದ್ಧಿಗೊಂಡಿದೆ : "ಮಲೆನಾಡಿನ ಸೌಂದರ್ಯ ಅಲ್ಲಿದೆ, ಆಗುಂಟು ಈಗುಂಟು, ಅಲ್ಲಿಲ್ಲ ಇಲ್ಲಿಲ್ಲ, ಆಗಿಲ್ಲ ಈಗಿಲ್ಲ ಎನ್ನುವಂತಿಲ್ಲ. ಮಲೆನಾಡಿನ ಪ್ರಕೃತಿ ಸದಾ ಸೌಭಾಗ್ಯವತಿ, ಸೌಂದರ್ಯಶಾಲಿ, ಚಿರಯೌವನೆ. ಅವಳ ಸಮಸ್ತ ಅಂಗೋಪಾಂಗಗಳು ಚೆಲುವಿನ ಕಣೆ". ಇಂಥ ಚೆಲುವಿನ ಕಣಿಯ ಬಳಿಯೇ ಮಹಾಕವಿಯ ಜನ್ಮಸ್ಥಳ.

ರಾಷ್ಟ್ರಕವಿ ಕುವೆಂಪು ಅವರ ಹುಟ್ಟಿದ ಊರಾದ 'ಕುಪ್ಪಳ್ಳಿ'ಯನ್ನು ತೋರುವ ದೇಜಗೌ ಅವರ ಬರವಣಿಗೆ ಮಹಾಕಾದಂಬರಿಯೊಂದರ ಭಾಗದಂತಿದೆ : 'ಕೊಪ್ಪ ರಸ್ತೆಯಲ್ಲಿ ಒಂಬತ್ತನೆಯ ಮೈಲಿಕಲ್ಲಿನ ಬಳಿ ಎಡಗಡೆಗೆ ತಿರುಗಿ ಒಳದಾರಿಯಲ್ಲಿ ನಡೆದು ಹೋದರೆ ಕಾಕಿಮನೆಯೂ, ಇಳಿಜಾರಾದ ಕಾಡೂ, ತುಸು ದೂರದಲ್ಲಿ ಗದ್ದೆಗಳೂ ಸಿಗುತ್ತವೆ...... ಗದ್ದೆಗಳನ್ನು ದಾಟಿದರೆ ಏರುದಿಣ್ಣೆ ಸಿಗುತ್ತದೆ. ದಿಣ್ಣೆ ಏರುತ್ತ ಹೋದರೆ ಎಡಗಡೆ ಅಡಿಕೆ ತೋಟವೂ ಮುಂದೊಂದು ಕಣವೂ, ಕಣದ ತೆಂಕಣ ತುದಿಯಲ್ಲಿ ಮನೆಯೂ ಸಿಗುತ್ತವೆ. ಮನೆಯ ಬಡಗಣ ದಿಕ್ಕಿಗೆ ಅಂದರೆ ಕಣದ ಕಡೆಗಿರುವ ಬಾಗಿಲ ಮೂಲಕ ಪ್ರವೇಶಿಸಿದರೆ, ಪ್ರಾಚೀನ ಕಾಲದ ದಾಕ್ಷಿಣಾತ್ಯ ದೇವಾಲಯಗಳನ್ನು ಹೊಕ್ಕಂತಾಗುತ್ತದೆ'. ಇನ್ನು ಆ ಮನೆಯ ಸುತ್ತಮುತ್ತಣ ಸೌಂದರ್ಯದ ವರ್ಣನೆಯಂತೂ ವರ್ಣನೆ ಸಿದ್ಧಿಯ ಮಹತ್ತನ್ನು ಮುಟ್ಟಿದೆ.

೨. ಕವಿಶೈಲದಿಂದ ಚಾಮುಂಡಿಗೆ :

ಮಹಾಕವಿಯೊಬ್ಬನಿಗೆ ಜನ್ಮವಿತ್ತ ಮಲೆನಾಡಿನ ಭವ್ಯ ಚಿತ್ರವನ್ನು ಭವ್ಯಾದ್ಭುತ ರೀತಿಯಲ್ಲಿ

ವರ್ಣಿಸಿರುವಂತೆಯೇ ಅವರಿಗೆ ಜನ್ಮ ಕೊಟ್ಟ ತಂದೆ ತಾಯಿಗಳ ವಂಶವೃಕ್ಷವನ್ನು ಸಾಕಷ್ಟು ವಿವರವಾಗಿಯೇ ಬಿಡಿಸಿ ನೋಡಿದ್ದಾರೆ. ಮಹಾಕವಿಯ ಭವಿಷ್ಯ ಹೊತ್ತಿದ್ದ ಬಾಲಕನ ಮೇಲೆ ಸಂಸ್ಕಾರರೂಪವಾಗಿ ಉಂಟಾದ ಹಲವಾರು ಪ್ರಭಾವಗಳನ್ನು ಗುರುತಿಸಿದ್ದಾರೆ. ಕುವೆಂಪು ಕುಮಾರರಾಗಿದ್ದಾಗಿನಿಂದಲೂ ಅವರ ಅಭಿರುಚಿ, ಚಟುವಟಿಕೆ ಸಾಹಸಗಳನ್ನು ಕುರಿತು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ.

ಇಂತಹ ಮಹಾಕವಿಯೊಬ್ಬರಿಗೆ ಜನ್ಮ ಕೊಟ್ಟ ತಂದೆ ತಾಯಿಗಳ ಸ್ವಭಾವವನ್ನೂ, ಸಂಸ್ಕಾರವನ್ನು ಸ್ಪಷ್ಟವಾಗಿ ಮೂಡಿಸಿದ್ದಾರೆ : "ಸಂಕೋಚ ಪ್ರವೃತ್ತಿಯ, ಸಾಧು ಶೀಲದ, ನಿವೃತ್ತಿ ಮನೋಭಾವದ ಅವರಿಗೆ ಲೌಕಿಕ ವ್ಯವಹಾರಗಳು ಅಷ್ಟಾಗಿ ಹಿಡಿಸುತ್ತಿರಲಿಲ್ಲ. ಮೋಸ, ತಟವಟ, ತಳಕು ಕುಯುಕ್ತಿಗಳು ಅವರ ಜಾಯಮಾನಕ್ಕೆ ಒಗ್ಗುವಂಥವಾಗಿರಲಿಲ್ಲ. ಊರು ಬಿಟ್ಟು ಹೊರಗೆ ಎಂದೂ ಹೋದವರಲ್ಲ ; ಪೇಟೆ ಕೋಟೆಗಳಲ್ಲಿ ತಿರುಗಿದವರಲ್ಲ, ಅತ್ಯಾಸೆಯಾಗಲೀ ಅತೃಪ್ತಿಯಾಗಲೀ ಅವರ ಬಳಿ ಸುಳಿಯುತ್ತಿರಲಿಲ್ಲ. ಇದು ಬೇಕು, ಅದು ಬೇಕು ಎಂದು ಹಾತೊರೆಯುತ್ತಿರಲಿಲ್ಲ......... ಇಂಥಾ ವ್ಯಕ್ತಿಯ ಮನಸ್ಸು ಸದಾ ಭಗವಂತನ ಕಡೆಗೆ ತಿರುಗಿದ್ದುದರಲ್ಲೇನೂ ಆಶ್ಚರ್ಯವಿಲ್ಲ". ತಂದೆ ಇಂತಹ ಭಗವದ್ಭಕ್ತರಾದರೆ ತಾಯಿಯಾದ ಸೀತಮ್ಮನವರೂ ಅಷ್ಟೇ ವಿನಯಶೀಲರು, ದೈವಭಕ್ತರು ; ಸುಸಂಸ್ಕೃತ ಗೃಹಸ್ಥರ ಮನೆಯಲ್ಲಿ ಬೆಳೆದು ಬಂದವರು. ಮನೆಯ ವಾತಾವರಣವೂ ಅಷ್ಟೇ ಶುಭ್ರವಾದದ್ದು. "ಅಜ್ಜಯ್ಯನ ಅಭ್ಯಂಜನವೆಂತೋ ಅವರ ದೇವರ ಪೂಜೆಯೂ ಅಂತೆಯೇ ಆ ಮಗುವಿನ ಹೂ ಮನಸ್ಸಿನ ಮೇಲೆ ಅಚ್ಚೊತ್ತಿದಂತಿತ್ತು....... ಆಗಾಗ್ಗೆ ಮನೆಯಲ್ಲಿ ಏರ್ಪಾಟಾಗುತ್ತಿದ್ದ ರಾಮಾಯಣ, ಭಾರತ ವಾಚನಗಳನ್ನು ಮಗು ಅತ್ಯಾಸಕ್ತಿಯಿಂದ ಕೇಳುತ್ತಿತ್ತು ; ಲಕ್ಷ್ಮೀಶನ ಬಬ್ರುವಾಹನ ಕಾಳಗವನ್ನು ಕೇಳಿದಾಗಲಂತೂ ಆ ಎಳೆಯ ಮೈಯಲ್ಲಿ ನವಚೇತನ ಸಂಚಾರವಾಗಿ ರೋಮಾಂಚನವಾಗುತ್ತಿತ್ತು...... ಆಂಜನೇಯನ ಸಮುದ್ರ ಲಂಘನ ಪ್ರಸಂಗವಂತೂ ಆ ಮಗುವಿನ ಮನಸ್ಸಿನಲ್ಲಿ ಬಲವಾಗಿ ಬೇರೂರಿತು".

ಹೀಗೆ ಮಹಾಕವಿಯ ಮೇಲೆ ಬಾಲ್ಯದಲ್ಲಿ ಉಂಟಾದ ಪ್ರಭಾವಗಳನ್ನು ಉನ್ನತ ಮಟ್ಟದಲ್ಲಿ ಚಿತ್ರಿಸಿದ್ದಾರೆ. ಅವರ ದೃಷ್ಟಿ ವಿಸ್ತೃತಗೊಳ್ಳಲು, ಹೃದಯ ವಿಕಸಿಸಲು ಕಾರಣವಾದ ಎಲ್ಲಾ ಶಕ್ತಿಗಳ ಮಹಿಮೆಯನ್ನು ಹೃದಯಂಗಮವಾಗಿ ಹೇಳಿದ್ದಾರೆ - ಇಂತಹ ಕಡೆಗಳಲ್ಲೆಲ್ಲ ದೇಜಗೌ ಅವರ ಭಾಷೆ ಔನ್ನತ್ಯವನ್ನು ಮುಟ್ಟಿದೆ. ಅವರ ಬಾಲ್ಯ ಜೀವನದ ಹಲವು ಘಟನೆಗಳನ್ನೂ ಹಾಗೂ ತರಗತಿಯಲ್ಲಿನ ಹಲವು ಘಟನೆಗಳನ್ನು ಸ್ವಾರಸ್ಯಪೂರ್ಣವಾಗಿ ಚಿತ್ರಿಸಿದ್ದಾರೆ.

ವಿದ್ಯಾರ್ಜನೆಯೇ ಗುರಿಯಾಗಿ ಹೊಂದಿದ್ದ ಪುಟ್ಟಪ್ಪನವರು, ಓದಿಗೆ ಬಂದ ಅಡಚಣೆಗಳನ್ನೆಲ್ಲಾ ಎದುರಿಸಿ, ಮುನ್ನುಗ್ಗಿದರು. "ಮನೆ ಹಿಸ್ಸೆಯಾಗಬೇಕೆಂದೂ ಊರಲ್ಲೇ ಉಳಿದು ತಮ್ಮ ಹಿಸ್ಸೆಯ ಮೇಲ್ವಿಚಾರಣೆ ನೋಡಿಕೊಳ್ಳಬೇಕೆಂದೂ" ಹಟ ಹಿಡಿದ ರಾಮಣ್ಣಗೌಡರ ಮಾತಿಗೆ ಒಪ್ಪದೆ ಪ್ರೌಢಶಾಲೆಗೆ ಸೇರಲು ಮೈಸೂರಿಗೆ ಬಂದರು. ಮೈಸೂರಿಗೆ ಬಂದ ಮೇಲೆ ಅವರ ಮೇಲೆ ಪ್ರಭಾವ ಬೀರಿದ ಹಲವು ಶಕ್ತಿಗಳ ಹಾಗೂ ಅದರಿಂದುಂಟಾದ ಪ್ರತಿಭಾಚಲನೆಯ ಶಕ್ತಿ ಸ್ವರೂಪವನ್ನು ಸ್ವಾರಸ್ಯಪೂರ್ಣವಾಗಿ ಸೂರೆಗೊಂಡಿದ್ದಾರೆ. ಇಂಥ ಕಡೆಗಳಲ್ಲೆಲ್ಲಾ ಅವರ ಭಾಷೆ ಕಾವ್ಯ ಸ್ವರೂಪವನ್ನು ತಾಳಿರುವುದನ್ನು ಕಾಣಬಹುದು : "ಸಹ್ಯಾದ್ರಿಯ ಶಿಶು ಬಯಲು ಸೀಮೆಗೆ ಬಂದಾಗ ಮೀನು ನೀರಿನಿಂದ ಹೊರಬಿದ್ದಂತಾಯಿತು. ಸೌಂದರ್ಯಾರಾಧನೆ ಮತ್ತು ಜ್ಞಾನೋಪಾಸನೆ ಆಧ್ಯಾತ್ಮ ಜೀವನದ

ಎರಡು ಮುಖಗಳು. ಒಂದಿಲ್ಲದೆ ಮತ್ತೊಂದು ಪೂರ್ಣವಾಗುವುದಿಲ್ಲ. ಪರಿಪೂರ್ಣ ಜೀವನಕ್ಕೆ ಎರಡೂ ಅವಶ್ಯಕ. ಕುಪ್ಪಳ್ಳಿಯಲ್ಲಿ ಸಾಧ್ಯವಾಗದ ಜ್ಞಾನೋಪಾಸನೆ ಮೈಸೂರಿನಲ್ಲಿ ಸಾಧ್ಯವಾಯಿತು. ಆ ಸುಂದರ ನಗರ ಅವರ ಪಾಲಿಗೆ ಜ್ಞಾನಪೀಯೂಷದ ಅಕ್ಷಯ ಪಾತ್ರೆಯಾಯಿತು. 'ಸಹ್ಯಶಿಶು'ಗೆ ಚಾಮುಂಡಿಯೇ ಸ್ತನ್ಯವಾಯಿತು....... ಅಲ್ಲಿ ಅವರ ಸುಪ್ತ ಚಿತ್ತದಲ್ಲಿ ಗುಪ್ತವಾಗಿ ನೆಲೆಸಿದ್ದ ಪ್ರತಿಭಾಶಕ್ತಿ ಬೀಜ ಮೊಳೆಯಲು, ಬೆಳೆಯಲು, ಪಸರಿಸಲು ತಕ್ಕ ಸನ್ನಿವೇಶ ವಾತಾವರಣಗಳು ಒದಗಿದುವು". ಅವರು ಪ್ರೌಢಶಾಲೆಯಲ್ಲಿದ್ದಾಗ ನಡೆದ ಹಲವಾರು ಘಟನೆಗಳನ್ನು ಅದು ಪುಟ್ಟಪ್ಪನವರ ಕಾವ್ಯ ಜೀವನಕ್ಕೆ ನೆರವಾದ ಬಗೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಭಾವ ಪೂರ್ಣವಾಗಿ ಓದುಗರಿಗೆ ನೀಡಿದ್ದಾರೆ. ಪುಟ್ಟಪ್ಪನವರ ಕಾವ್ಯತಿರುವಿನ ಎಲ್ಲಾ ಘಟನೆಗಳನ್ನೂ ವಿವರವಾಗಿ ನಿರೂಪಿಸಿದ್ದಾರೆ. ಇಂದು ಕನ್ನಡದ ಮಹಾ ಕವಿಯಾಗಿರುವ, ರಾಷ್ಟ್ರಕವಿ ಎನಿಸಿಕೊಂಡಿರುವ ಶ್ರೀ ಕುವೆಂಪು ಅವರು ತಮ್ಮ ಕಾವ್ಯಜೀವನವನ್ನು ಪ್ರಾರಂಭಿಸಿದ್ದು ಇಂಗ್ಲೀಷ್ ಗೀತೆಗಳನ್ನು ಬರೆಯುವುದರ ಮೂಲಕ ಎಂಬುದು ಗಮನಾರ್ಹ. ಈ ಅಂಶವನ್ನು ದೇಜಗೌ ಅವರ ಲೇಖನಿ ಸೊಗಸಾಗಿ ಚಿತ್ರಿಸಿದೆ.

೩. ಗುರುವಿನೊಡನೆ ದೇವರೆಡೆಗೆ :

ಶ್ರೀ ಕುವೆಂಪು ಅವರು ರಾಮಕೃಷ್ಣಾಶ್ರಮವನ್ನೂ ಹಾಗೂ ಸ್ವಾಮಿಗಳ ಸಂಪರ್ಕ ಪಡೆದ ಘಟನೆಯನ್ನು ಅನಂತರ ಅವರ ಮೇಲೆ ಉಂಟಾದ ಪ್ರಭಾವವನ್ನು ಉನ್ನತ ಮಟ್ಟದಲ್ಲಿ ನಿರೂಪಿಸಿದ್ದಾರೆ. ಶ್ರೀಮಾನ್ ತಳುಕಿನ ವೆಂಕಣ್ಣಯ್ಯನವರು ಹಾಗೂ ಶ್ರೀ ಕುವೆಂಪು ಅವರ ಸಂದರ್ಶನದ ವಿಶೇಷ ಘಟನೆಯೂ ಸ್ವಾರಸ್ಯಕರವಾಗಿದೆ.

ಶ್ರೀ ರಾಮಕೃಷ್ಣಾಶ್ರಮವನ್ನು ಸೇರಿದ ಮೇಲೆ ಕುವೆಂಪು ಅವರ ವ್ಯಕ್ತಿತ್ವವೇ ಒಂದು ಮಹತ್ತರ ತಿರುವನ್ನು ಪಡೆದುಕೊಂಡಿತು. ಸ್ವಾಮಿ ಸಿದ್ದೇಶ್ವರಾನಂದರ ಹಾಗೂ ಶ್ರೀ ಕುವೆಂಪು ಅವರ ಭಾಂಧವ್ಯ ಅತ್ಯಂತ ನಿಕಟವಾದದ್ದು. ಆಶ್ರಮದಲ್ಲಿದ್ದಾಗ ನಡೆದ ಹಲವು ಘಟನೆಗಳ ವಿವರ ಇಲ್ಲಿದೆ. ಅವುಗಳು ಕುತೂಹಲಕಾರಿಯಾಗಿರುವಂತೆಯೇ, ಸ್ವಾರಸ್ಯವಾಗಿಯೂ ಇವೆ. ಕುವೆಂಪು ಅವರ ಪ್ರತಿಭೆ ಆ ವೇಳೆಗಾಗಲೇ ಪರಿಪೂರ್ಣವಾಗಿ ರೂಪುಗೊಂಡು ಎಲ್ಲರ ಮೆಚ್ಚುಗೆಗೂ ಪಾತ್ರರಾಗಿದ್ದರೆಂಬುದು ಉದ್ದಕ್ಕೂ ಸ್ಪಷ್ಟವಾಗಿ ಮೂಡಿಬಂದಿದೆ. ಒಮ್ಮೆ ಅವರು ಖಾಯಿಲೆಯಿಂದ ನರಳುವಾಗ ನಡೆದ ಘಟನೆಯನ್ನು ಹೀಗೆ ಚಿತ್ರಿಸಿದ್ದಾರೆ. "ನನಗೆ ಸ್ವಾಮಿ ಸಿದ್ದೇಶ್ವರಾನಂದರು ಬೇಕು ! " ಎಂದು ಪ್ರಲಾಪಿಸುತ್ತಿದ್ದರು. ಸ್ವಾಮೀಜಿಗೆ ಕಾಗದ ಬರೆದರು. ಅವರು ಕಾರ್ಯಗೌರವದಿಂದ ಬರಲಾಗದೆ ಕಾಳಿಕಾದೇವಿಯ ಪ್ರಸಾದವನ್ನು ಕಳುಹಿಸಿಕೊಟ್ಟರು. ಅದನ್ನು ಹಣೆಗೆ ಹಚ್ಚಿಕೊಂಡ ಕೂಡಲೇ ಹನ್ನೆರಡು ಆಳುಗಳ ಶಕ್ತಿ ಶರೀರದಲ್ಲಿ ಪ್ರವಹಿಸಿದಂತಾಯಿತಂತೆ. ಶರೀರ ಸವೆದು ಸಣಕಲಾಗಿದ್ದರೂ ಅವರು ಒದರಾಡುವಾಗ ಎಂಟು ಜನ ಕೂಡಿ ಅವರನ್ನು ಹಿಡಿಯಲಾಗುತ್ತಿರಲಿಲ್ಲವಂತೆ. 'ಜಯ್ ಗುರು ಮಹರಾಜ್' ಎಂದ ಕೂಡಲೇ ಪಕ್ಕದ ಜನ ಭೀತಿಯಿಂದ ದೂರ ಸರಿಯುತ್ತಿದ್ದರಂತೆ. ಆ ಸಮಯದಲ್ಲಿ ಎಷ್ಟು ತಿಂಡಿ ಕೊಟ್ಟರೂ ಗಬಕ್ಕನೆ ತಿನ್ನುತ್ತಿದ್ದರಂತೆ. ಹಸಿವು ಹಸಿವು ಎಂದು ಕೂಗಿಕೊಳ್ಳುತ್ತಿದ್ದರಂತೆ.

ಮಹಾಪುರುಷರೆನಿಸಿಕೊಂಡಿದ್ದ ಸ್ವಾಮಿ ಶಿವಾನಂದರನ್ನು ಕಂಡ ದಿನ ಅವರ ಬಾಳಿನಲ್ಲಿ ಒಂದು ಮಹತ್ತರದ ದಿನವಾಗಿದೆ. "ಸುಮಾರು ನಾಲ್ಕು ವರ್ಷಗಳ ಆಶ್ರಮ ವಾಸವೂ, ಸ್ವಾಮಿಗಳ

ಸಹವಾಸವೂ, ಶ್ರೀ ರಾಮಕೃಷ್ಣ ಸಂಕೀರ್ತನ ಮಹಿಮೆಯೂ ಕುವೆಂಪು ಅವರ ತಪೋಜೀವನವನ್ನು ಪರಿಪಕ್ವಗೊಳಿಸಿ ಪಾರಮಾರ್ಥಿಕದ ಕಡೆಗೆ ತಿರುಗಿಸಿತು..... ಅವರ ಆಧ್ಯಾತ್ಮ ಸಾಧನೆಗೆ ಸಹಾಯವಾಗಲೆಂದು ಸ್ವಾಮಿ ಸಿದ್ದೇಶ್ವರಾನಂದಜಿಯವರು ಅವರನ್ನು ದೀಕ್ಷಾ ಗ್ರಹಣಕ್ಕೊಪ್ಪಿಸಿದರು. ಗುರುಮಹಾರಾಜರ ಸಾಕ್ಷಾತ್ ಅಂತರಂಗ ಶಿಷ್ಯರೂ ಸ್ವಾಮಿ ವಿವೇಕಾನಂದರ ನಿಕಟವರ್ತಿಗಳೂ ಶ್ರೀ ರಾಮಕೃಷ್ಣ ಮಹಾಸಂಸ್ಥೆಯ ಅಧ್ಯಕ್ಷರೂ ಆಗಿದ್ದ ಸ್ವಾಮಿ ಶಿವಾನಂದರಿಂದ ದೀಕ್ಷೆ ಕೊಡಿಸಲು ಸ್ವಾಮಿಗಳು ಸನ್ನದ್ಧರಾದರು". - ಈ ಎಲ್ಲಾ ಪರಿವರ್ತನೆ ಘಟ್ಟಗಳನ್ನು ದೇಜಗೌ ಅವರು ಪ್ರತಿಭಾಪೂರ್ಣವಾಗಿ ಚಿತ್ರಿಸಿದ್ದಾರೆ. ಶ್ರೀ ರಾಮಕೃಷ್ಣಾಶ್ರಮದಲ್ಲಿದ್ದಾಗ ಅವರು ಮಿತ್ರರಿಗೆ ಬರೆಯುತ್ತಿದ್ದ ಪತ್ರದಲ್ಲಿ ಕೆಲವನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಅವರ ಸದಭಿರುಚಿ ಸದಾ ಏನಾಗಿತ್ತೆಂಬುದು ಇವುಗಳಿಂದ ಸಂಪೂರ್ಣವಾಗಿ ಸ್ಪಷ್ಟವಾಗುತ್ತದೆ.

೪. ಉದಯರವಿ :

ಈ ಭಾಗದಲ್ಲಿ ಹೆಚ್ಚಾಗಿ ಚಿತ್ರಿತಗೊಂಡಿರುವುದು ಕುವೆಂಪು ಅವರ ಸಾಂಸಾರಿಕ ಜೀವನಕ್ಕೆ ಸಂಬಂಧಿಸಿದ್ದು, ಅವರ ಕಾವ್ಯಸಿದ್ಧಿಯ ಉತ್ತುಂಗ ಶಿಖರವಾದ 'ಶ್ರೀ ರಾಮಾಯಣದರ್ಶನಂ' ಕೃತಿಯ ರಚನೆಯ ಹಾಗೂ ಕನ್ನಡದ ಏಳಿಗೆಯ ಹಲವು ಘಟ್ಟಗಳನ್ನು ಕುರಿತದ್ದು.

'ಉದಯರವಿ' ಶ್ರೀ ಕುವೆಂಪು ಅವರ ಮನೆಯ ಹೆಸರು. ಆದರೆ ಅದಕ್ಕೆ ಎಂಥ ಮಹತ್ವವಿದೆ ಎಂಬುದನ್ನು ದೇಜಗೌ ಅವರು ಸ್ವಾರಸ್ಯವಾಗಿ ಹೇಳಿದ್ದಾರೆ. "ಯಾತ್ರಿಕರು ಸಾಮಾನ್ಯವಾಗಿ ಜೋಗಿನಂಥ ಸೌಂದರ್ಯಸ್ಥಾನಗಳನ್ನೋ, ಎಲ್ಲೋರ ಅಜಂತಾದಂತಹ ಕಲಾಕೇಂದ್ರಗಳನ್ನೋ, ಕಾಶಿ, ರಾಮೇಶ್ವರದಂಥ ಪವಿತ್ರ ಸ್ಥಳಗಳನ್ನೋ ಅರಸಿ ಆರಿಸಿಕೊಂಡು ಹೋಗುತ್ತಾರೆ. ಮೈಸೂರಿಗೆ ಬರುವ ಕಲಾಭಿಮಾನಿಗಳಾದ ಜನ ಚಾಮುಂಡಿ ಕನ್ನಂಬಾಡಿಗಳ ಜೊತೆಗೆ ಉದಯರವಿಯೂ ಪ್ರೇಕ್ಷಣೀಯ ಸ್ಥಳವೆಂದು ಕುತೂಹಲಭರಿತರಾಗಿ ಬರುತ್ತಾರೆ".

ಕುವೆಂಪು ಅವರ ಸಾಂಸಾರಿಕ ಜೀವನದ ಹಲವು ಘಟ್ಟಗಳನ್ನೂ ಅವರ ದೃಷ್ಟಿಯಲ್ಲಿ ಸಂಸಾರ ವೆಂದರೇನು ? ಎಂಬುದನ್ನೂ ನಿರೂಪಿಸಿದ್ದಾರೆ. "ಕುವೆಂಪು ಅವರ ಜೀವನ ರಮ್ಯಮಯವಾಗಿರು ವಂತೆ, ತಪೋಮಯವಾಗಿರುವಂತೆ, ಅವರ ಸಂಸಾರವೂ ಕಾವ್ಯಮಯವಾಗಿದೆ, ಸ್ನೇಹಮಯ ವಾಗಿದೆ. ಅಲ್ಲಿ ಪ್ರೇಮ ವೈರಾಗ್ಯಗಳ ಸ್ನೇಹವಿದೆ, ಲೌಕಿಕ ಪಾರಮಾರ್ಥಿಕಗಳ ಮಧುರ ಬಾಂಧವ್ಯ ಎದೆ, ಸರಳತೆ ಶ್ರೀಮಂತಿಕೆಗಳ ಗೆಳೆತನವಿದೆ, ಭೋಗ ಯೋಗಗಳ ಸುಂದರ ಸಮನ್ವಯವಿದೆ...... ಸಂಸಾರ ಪಾಶವಲ್ಲ, ಆತ್ಮ ಸಾಧನೆಯ ಮಾರ್ಗ ಅದೊಂದು ಶಿವಪೂಜೆ ; ಅಲ್ಲಿ ರಾಗವೇ ವೈರಾಗ್ಯ, ಭೋಗವೇ ತ್ಯಾಗ, ಮೋಹವೇ ಭಕ್ತಿ, ಪ್ರೇಮವೇ ಶಕ್ತಿ". ಇಷ್ಟಾದರೂ ಲೌಕಿಕ ರೀತಿಯ ಸಂಸಾರ ಜೀವನವನ್ನು ಅವರು ನಡೆಸಿದ್ದು ಕೇವಲ ಹತ್ತು ವರ್ಷಗಳು, ಅನಂತರ ಬ್ರಹ್ಮಚರ್ಯವನ್ನು ಪ್ರಾರಂಭಿಸಿದರೆಂಬುದು ಅವರ ಜೀವನ ಚರಿತ್ರೆಯಲ್ಲಿನ ಒಂದು ಪ್ರಮುಖ ಮೈಲಿಗಲ್ಲು. ಇಲ್ಲಿ ನಡೆದಿರಬಹುದಾದ ಹೋರಾಟವನ್ನು ದೇಜಗೌ ಅವರ ಪ್ರತಿಭಾ ಲೇಖನಿ ಮಾರ್ಮಿಕವಾಗಿ ಧ್ವನಿಸಿದೆ.

ಅನಂತರ ಅವರ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದ ರಚನೆಯ ಹಲವು ಪ್ರಮುಖ ಘಟ್ಟಗಳನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಮಹಾಕವಿಯೊಬ್ಬರ ಕಾವ್ಯಜೀವನಕ್ಕೆ ಸಂಬಂಧಿಸಿದ

ಈ ಆಂತರಿಕ ಅಂಶಗಳು ಎಲ್ಲರಿಗೂ ದೊರೆಯುವುದು ಕಷ್ಟ. ಆದರೆ, ಮಹಾಕವಿಯೊಬ್ಬನ ಜೀವನ ಚರಿತ್ರೆಯನ್ನು ಬರೆಯುವಾಗ ಇವುಗಳೆಲ್ಲವೂ ಅಗತ್ಯ. ದೇಜಗೌ ಅವರು ಇವೆಲ್ಲವನ್ನೂ ಸಂಗ್ರಹಿಸಿಕೊಟ್ಟಿದ್ದಾರೆ. ಇದೇ ಕಾಲದಲ್ಲಿ ರೂಪುಗೊಂಡ ಅವರ ಇತರ ಕೃತಿಗಳ ರಚನಾ ವೈಶಿಷ್ಟ್ಯವನ್ನೂ, ವೈವಿಧ್ಯವನ್ನೂ ಕುರಿತು ಹೇಳಿದ್ದಾರೆ. ಶ್ರೀರಾಮಾಯಣದರ್ಶನಂ ಮಹಾಕಾವ್ಯ ಹೊರಬಿದ್ದ ಮೇಲೆ ಉಂಟಾದ ಪ್ರತಿಕ್ರಿಯೆಗಳನ್ನು, ಸ್ಪಷ್ಟವಾಗಿ ನಿರ್ದೇಶಿಸಿದ್ದಾರೆ. ಅವರಿಗೆ ನಡೆದ ಸನ್ಮಾನ ಸಮಾರಂಭಗಳ ವರ್ಣನೆಯಂತೂ ಅತ್ಯದ್ಭುತ ಶೈಲಿಯಲ್ಲಿ ಮೂಡಿಬಂದಿದೆ. "ದಕ್ಷಿಣೇಶ್ವರದ ಶ್ರೀ ಕೃಪೆ ಸಹ್ಯಾದ್ರಿಯಲ್ಲಿ ಮೊಳೆತು, ಚಾಮುಂಡಿಯಲ್ಲಿ ಬಳ್ಳಿಗೊಂಡು, ಉದಯರವಿಯಲ್ಲಿ ಹೂವಾಗಿ ನಾಡಿನಲ್ಲೆಲ್ಲಾ ಪರಿಮಳವನ್ನು ಬೀರಿತು. ಕುವೆಂಪು ಬೇರೆಯಲ್ಲ, ಉದಯರವಿ ಬೇರೆಯಲ್ಲ ; ಎರಡೂ ಅವಿಭಾಜ್ಯ ಅಭಿನ್ನ ಶಕ್ತಿಗಳು !" - ಎಂಬುದನ್ನು ಅವರ ಜೀವನ ಘಟನೆಗಳಿಂದ ಹಾಗೂ ಕಾವ್ಯ ಘಟ್ಟಗಳಿಂದ ಸ್ಪಷ್ಟವಾಗಿ ಅಭಿವ್ಯಕ್ತಿಸಿದ್ದಾರೆ.

೫. ಕುಲಪತಿ

ಶ್ರೀ ಕುವೆಂಪು ಅವರು ಪ್ರಿನ್ಸಿಪಾಲರಾಗಿ, ಕುಲಪತಿಗಳಾಗಿ ಕಾರ್ಯನಿರ್ವಹಿಸಿದ ಬಗೆಯನ್ನು ಹಾಗೂ ಅವರ ಸಾಧನೆ ಸಿದ್ಧಿಗಳನ್ನು ಈ ಪ್ರಕರಣದಲ್ಲಿ ನಿರೂಪಿಸಲಾಗಿದೆ. ಶ್ರೀ ಕುವೆಂಪು ಅವರ ಸ್ವಭಾವ ಗುಣಗಳನ್ನು ಇಲ್ಲಿ ಸ್ಪಷ್ಟವಾಗಿ ತೆರೆದಿಟ್ಟಿದ್ದಾರೆ. ಕನ್ನಡ ತನ್ನ ಸ್ಥಾನಮಾನ ಹೀನವಾಗಿ ಮೂಲೆಗುಂಪೆನಿಸಿದ್ದ ಕಾಲದಲ್ಲಿ ಅಧಿಕಾರಕ್ಕೆ ಬಂದ ಕುವೆಂಪು ಅವರು ಮಾಡಿದ ಮಹತ್ಕಾರ್ಯಗಳನ್ನು, ನಡೆಸಿದ ಹೋರಾಟವನ್ನು ಪಟ್ಟಿ ಮಾಡಿದಂತೆ ಹೇಳಿದ್ದಾರೆ. "ಕನ್ನಡದ ಹಿಂದಿನ ಮಹಾಕವಿಗಳಲ್ಲಿ ಕೆಲವರು ಮಂತ್ರಿಗಳಾಗಿ, ಸೇನಾಧಿಪತಿಗಳಾಗಿ ನಾಡಿನ ಸರ್ವಾಂಗೀಣ ಪ್ರಗತಿಗೆ ನೆರವಾದದ್ದುಂಟು. ಆಧುನಿಕ ಮಹಾಕವಿಯೊಬ್ಬರಿಗೆ ಅಂಥದೇ ಅಧಿಕಾರ ಸ್ಥಾನ ಲಭಿಸಿದ್ದಲ್ಲಿ ಭಗವತ್ಸಂಕಲ್ಪ ರೂಪದ ಐತಿಹಾಸಿಕ ಘಟನೆಯ ಪುನರಾವರ್ತನೆಯನ್ನು ಗಮನಿಸಬಹುದಾಗಿದೆ" - ಎಂದು ಸರಿ ನುಡಿದಿದ್ದಾರೆ. ಶ್ರೀ ಕುವೆಂಪು ಅವರು ಅಧಿಕಾರವನ್ನು ಅರಸಿ ಹೋದವರಲ್ಲ, ಅದು ತಾನೇ ಆಗಿ ಅವರನ್ನರಸಿ ಬಂತು. ಆದರೆ ಜಾತೀಯತೆಯ ಪೆಡಂಭೂತ ಅದಕ್ಕೊಡ್ಡಿದ್ದ ಅಡೆತಡೆಗಳನ್ನು ಹೇಳಿದ್ದಾರೆ. ಮೂವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಅವರು ಕಾರ್ಯನಿರ್ವಹಿಸಿದ ಬಗೆಯನ್ನು ವಿವರಿಸಿದ್ದಾರೆ. ಗೌರವ ಡಾಕ್ಟರೇಟ್ ಪದವೀದಾನ ಸಮಾರಂಭದಲ್ಲಿ ಪ್ರಪ್ರಥಮವಾಗಿ ಕನ್ನಡದಲ್ಲಿ ಭಾಷಣ ಮಾಡಿದ ಆ ಸುದಿನವನ್ನು - "ಕನ್ನಡ ಅನ್ಯಾಕ್ರಮಣದಿಂದ ಪಾರಾಗಿ ಆತ್ಮಪ್ರತ್ಯಯದಿಂದ ಒಡೆತನದ ಬಾವುಟವನ್ನು ಹಾರಿಸಿ ಮುಂದಿನ ಮಹತ್ಕಾರ್ಯಕ್ಕೆ ಸನ್ನದ್ಧವಾದ ಮಹಾ ಮಂಗಳ ದಿನ" - ಎಂದು ಕರೆದಿದ್ದಾರೆ.

ಶ್ರೀ ಕುವೆಂಪು ಅವರು ಕುಲಪತಿಗಳಾದ ಮೇಲೆ ಕನ್ನಡಕ್ಕಾಗಿ ಮಾಡಿದ ಮಹತ್ಕಾರ್ಯಗಳನ್ನು ಹಾಗೂ ಅವರು ಕುಲಪತಿಗಳಾದ ಸಂದರ್ಭದಲ್ಲಿ ನಡೆದ ಮಹತ್ ಘಟನೆಗಳನ್ನು ಚಿತ್ರಿಸಿದ್ದಾರೆ. ಅವರು ಆ ಸಮಯದಲ್ಲಿ ಮಾಡಿದ ಭಾಷಣಗಳ ಸಾರವನ್ನು ನೀಡಿದ್ದಾರೆ. ಅವರು ಕುಲಪತಿಗಳಾಗುವ ಮೊದಲು ವಿಶ್ವವಿದ್ಯಾನಿಲಯದ ಸ್ಥಿತಿಗಳನ್ನು ನಿರೂಪಿಸಿ, ಕುಲಪತಿಗಳಾದ ಮೇಲೆ ವಿಶ್ವವಿದ್ಯಾನಿಲಯದ ಸ್ಥಿತಿಗಳು ಸ್ಥಿತ್ಯಂತರಗೊಂಡ ಬಗೆಯನ್ನೂ ಅದಕ್ಕಾಗಿ ಪಟ್ಟ ಶ್ರಮವನ್ನೂ ಸೊಗಸಾಗಿ ಚಿತ್ರಿಸಿದ್ದಾರೆ. ಕುವೆಂಪು ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಕರುಬು ಜನ ಮಾಡಿದ ಕುತಂತ್ರಗಳನ್ನೆಲ್ಲ ಪತ್ರಗಳ

ಸಹಿತ ಹಿಡಿದಿಟ್ಟಿದ್ದಾರೆ.

ಶ್ರೀ ಕುವೆಂಪು ಅವರ ಕಾವ್ಯಕತೆಯಲ್ಲಿ ಈ ಅಧಿಕಾರದ ಕತೆಯೂ ಒಂದು ಸ್ಥಾನವನ್ನು ಪಡೆದುಕೊಂಡಿದೆ. ದೇಜಗೌ ಅವರು ಅವರ ಬದುಕಿನ ಈ ಎರಡು ಮುಖಗಳನ್ನು ಸೊಗಸಾಗಿ ನಿರೂಪಿಸಿದ್ದಾರೆ. ಮಹಾಕವಿಯೊಬ್ಬರ ಬದುಕು ಸರ್ವಾಂಗ ಸುಂದರವಾಗಿ ನಡೆದು ಬಂದಿರುವ ಮಜಲುಗಳನ್ನೆಲ್ಲಾ ಸ್ಪಷ್ಟವಾಗಿ ಗುರುತಿಸಿರುವುದನ್ನು ಕಾಣಬಹುದು.

೬. ಮಾನಸಗಂಗೋತ್ರಿ

ಶ್ರೀ ಕುವೆಂಪು ಅವರ ಜೀವನದಲ್ಲಿ ನಡೆದ ಹಲವು ಮುಖ್ಯ ಘಟನೆಗಳನ್ನು ಇಲ್ಲಿ ಚಿತ್ರಿಸಿದ್ದಾರೆ : ಧಾರವಾಡದಲ್ಲಿ ನಡೆದ ಮೂವತ್ತೊಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದು, ಅದರಿಂದ ನಾಡಿನಲ್ಲುಂಟಾದ ಸಂಭ್ರಮ, ಸಮ್ಮೇಳನದ ಮಹಾಪರ್ವೋತ್ಸವದ ಸಡಗರ, ಆ ಸಮಯದಲ್ಲಿ ಶ್ರೀ ಕುವೆಂಪು ಅವರು ಮಾಡಿದ ದೀರ್ಘ ಭಾಷಣದ ವರದಿಯನ್ನು ಮನಮುಟ್ಟುವಂತೆ ಕಲಾವಂತಿಕೆಯಿಂದ ನೇಯ್ದಿದ್ದಾರೆ. ಮಹಾಕವಿಯೊಬ್ಬರ ಮಹತ್ ಘಟನೆಗಳನ್ನು ಚಿತ್ರಿಸಲು ಮಹಾ ಸಾಹಿತಿಯೊಬ್ಬರ ಕಟ್ಟುಮಸ್ತಿನ ಗದ್ಯಶೈಲಿ ಅತ್ಯುನ್ನತ ರೀತಿಯಲ್ಲಿ ನೆರವಾಗಿರುವುದನ್ನು ಉದ್ದಕ್ಕೂ ಕಾಣಬಹುದು.

ರಾಷ್ಟ್ರಕವಿ ಕುವೆಂಪು ಅವರ ಹಾಗೂ ಸಂತ ವಿನೋಬಾಜಿಯವರ ಸಂದರ್ಶನ ಸಂದರ್ಭವನ್ನು ಹೃದಯಂಗಮವಾಗಿ ವರ್ಣಿಸಿದ್ದಾರೆ. "ಪ್ರಕೃತಿ ಸೌಂದರ್ಯದ ಮಡಿಲಿನಲ್ಲಿ ನಡೆದ ಕವಿ - ಸಂತರ ಸಮ್ಮಿಲನ ಸ್ವರ್ಗೀಯವಾಗಿತ್ತು. ಎರಡು ಮಹಾ ಸಾಗರಗಳು ಸಂಧಿಸಿದಂತೆ, ಎರಡು ದಿವ್ಯಜ್ಯೋತಿಗಳು ಒಂದುಗೂಡಿದಂತೆ, ಎರಡು ಶುದ್ಧಜೀವಿಗಳು ಸಮಾಗಮಗೊಂಡಂತೆ ಆ ಸಮ್ಮಿಲನ ಭವ್ಯಭವ್ಯವಾಗಿ ಕಾಣುತ್ತಿತ್ತು. ನೈರ್ಮಲ್ಯವೇ ತನುವಾದಂತೆ, ಮುಕ್ತಿಯೇ ಸಾಕಾರತೆಯನ್ನು ಪಡೆದಂತೆ ಒಳಗಿನಿಂದ ಬಂದ ವಿನೋಬಾರವರನ್ನು ಕಂಡ ಕೂಡಲೇ ತಪಸ್ಸೆ ಮೂರ್ತಿವೆತ್ತಂತಿದ್ದ ಕುವೆಂಪು ಅವರು ಭಕ್ತಿಯೇ ಬಾಗಿದಂತೆ ತಲೆಬಾಗಿ ಕೈ ಜೋಡಿಸಿ, ಮುಂದುವರಿದರು. ವಿನೋಬಾರವರು ರಾಮಮಂತ್ರವನ್ನುಚ್ಚರಿಸುತ್ತ ಕುವೆಂಪು ಅವರೆಡೆಗೆ ಸರಸರನೆ ನಡೆದು ಕವಿಯ ಹಸ್ತಗಳನ್ನು ತಮ್ಮ ಕೈಗೆ ತೆಗೆದುಕೊಂಡು ಹಣೆಗೊತ್ತಿ ಕೊಂಡರು......" ಹೀಗೆ ಅವರಿಬ್ಬರ ಸಮ್ಮಿಲನದ ಸಂದರ್ಭವನ್ನು ಮೈ ರೋಮಾಂಚನಗೊಳ್ಳುವಂತೆ ವರ್ಣನೆಯ ಉನ್ನತ್ಯ ಸ್ಥಿತಿಯಲ್ಲಿ ಚಿತ್ರಿಸಿದ್ದಾರೆ. ಆ ದಿವ್ಯಚೇತನಗಳೆರಡರ ಮಹಾನ್ ಶಕ್ತಿ ಸಾಮರ್ಥ್ಯವನ್ನು ಪ್ರಭಾವಶಾಲಿಯಾಗಿ ಬಣ್ಣಿಸಿದ್ದಾರೆ.

ಮಹಾಕವಿಗಳಾಗಿ ಮಹಾವಿದ್ಯಾತಜ್ಞರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಹಾಗೂ ವಿಶ್ವ ವಿದ್ಯಾನಿಲಯದಲ್ಲಿ ಅವರು ನಡೆಸಿದ ಹೋರಾಟ ಹಾಗೂ ಮಹತ್ಸಾಧನೆಗಳನ್ನು ಬಿಡಿ ಬಿಡಿಯಾಗಿ ಉಲ್ಲೇಖಿಸಿರುವುದನ್ನು ಕಾಣಬಹುದು. ಈ ಮಹತ್‌ಕಾರ್ಯಕ್ಕಾಗಿ ರಾಷ್ಟ್ರಪತಿಗಳು 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿದಾಗಲೂ ದಿವ್ಯ ನಿರ್ಲಕ್ಷ್ಯದಿಂದ ಅದನ್ನು ಸ್ವೀಕರಿಸಲು ಹೋಗದಿದ್ದ ಅವರ ಮನೋಭಾವವನ್ನು ಇಲ್ಲಿ ಸ್ಪಷ್ಟ ಪಡಿಸಿದ್ದಾರೆ.

ಶ್ರೀ ಕುವೆಂಪು ಅವರು ವಿಶ್ವವಿದ್ಯಾನಿಲಯದಲ್ಲಿ ನಡೆಸಿದ ಕ್ರಾಂತಿಕಾರಕ ಬದಲಾವಣೆಗಳನ್ನು ಅದರ ಇತಿಹಾಸವನ್ನು ವಿವರವಾಗಿ ಪ್ರಸ್ತಾಪಿಸಿದ್ದಾರೆ. ಅವರಲ್ಲಿ ಮೂಡಿದ 'ಮಾನಸ ಗಂಗೋತ್ರಿ'ಯ ಕಲ್ಪನೆ ಹಾಗೂ ಅದರ ರೂಪಧಾರಣೆಗೆ ಅವರು ಪಟ್ಟ ಶ್ರಮದ ಇತಿಹಾಸವನ್ನು ಸ್ವಾರಸ್ಯಪೂರ್ಣವಾಗಿ

ಬಣ್ಣಿಸಿದ್ದಾರೆ. ಆ ಒಂದು ಸಾಧನೆಯಲ್ಲಿ ಅಡ್ಡಿ ಬಂದ ಅಡಚಣೆಗಳನ್ನೆಲ್ಲಾ ಎದುರಿಸಿ ತಮ್ಮ ಕಲ್ಪನೆಗೆ ಜೀವ ತುಂಬಿದ ಶ್ರೀ ಕುವೆಂಪು ಅವರ ಸಾಹಸವನ್ನು ಮನತುಂಬಿ ಸ್ತುತಿಗೈದಿದ್ದಾರೆ. ಲೋಕಾಕರ್ಷಕವಾಗಿ, ಸಾರಸ್ವತಕ್ಷೇತ್ರವಾಗಿ ಜ್ಞಾನನಿಧಿಯಾಗಿ ಅಭಿವೃದ್ಧಿ ಹೊಂದುತ್ತಿರುವ 'ಮಾನಸ ಗಂಗೋತ್ರಿ'ಯು ದಿವ್ಯ ಕವಿ ಚೇತನದ ಕನಸಿನ ಫಲ ಎಂಬುದನ್ನು ಸಾರಿದ್ದಾರೆ.

೭. ನಿವೃತ್ತಿ ಮುಕ್ತ

ಕವಿ ಚೇತನ ಲೌಕಿಕ ವೃತ್ತಿಯಿಂದ ಮುಕ್ತಿ ಪಡೆದು ನಿವೃತ್ತರೆನಿಸಿಕೊಂಡ ಮೇಲೆ ಅವರ ಬದುಕಿನ ಸಾರ್ಥಕತೆಯನ್ನು ಕವಿಹೃದಯದಿಂದ ದೇಜಗೌ ಅವರು ನಿರ್ವಹಿಸಿದಂತಿದೆ. ಅವರು ನಿವೃತ್ತರಾದ ಮೇಲೆ ನಡೆಸುತ್ತಿದ್ದ ದಿನಚರಿಯನ್ನು ಕ್ರಮಬದ್ಧವಾಗಿ ನಿರೂಪಿಸಿದ್ದಾರೆ. ಅವರ ತೌರೂರಿನಲ್ಲಿ ಅನಂತರ ನಡೆದ ಸನ್ಮಾನ ಸಮಾರಂಭವನ್ನು, ಕರ್ನಾಟಕ ವಿಶ್ವವಿದ್ಯಾನಿಲಯ ಶ್ರೀ ಕುವೆಂಪು ಅವರು ಕನ್ನಡ ಭಾಷಾಸಾಹಿತ್ಯಗಳಿಗೆ ಮಾಡಿದ ಅಪೂರ್ವ ಸೇವೆಗಾಗಿ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸುವ ಹಂಬಲವನ್ನು ವ್ಯಕ್ತಪಡಿಸಿದಾಗ ನಡೆದ ಸ್ವಾರಸ್ಯಕರ ಘಟನೆಯನ್ನು ವರದಿ ಮಾಡಿದ್ದಾರೆ. ಅವರಿಗೆ ಅರವತ್ತು ವರುಷ ತುಂಬಿದ ಶುಭ ಸಂದರ್ಭದಲ್ಲಿ ನಡೆದ ಸಮಾರಂಭಗಳ ವಿವರವನ್ನು ಹಾಗೂ ಇದೇ ಸಂದರ್ಭದಲ್ಲಿ ಮೈಸೂರು ಸರಕಾರ ಕುವೆಂಪು ಅವರಿಗೆ 'ರಾಷ್ಟ್ರಕವಿ' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದ ಶುಭ ಸಂದರ್ಭಗಳನ್ನು ದೇಜಗೌ ಅವರು ಅತ್ಯಂತ ಉತ್ಸುಕ ಶೈಲಿಯಲ್ಲಿ ಉಲ್ಲೇಖಿಸಿದ್ದಾರೆ.

ಈ ಪ್ರಕರಣದಲ್ಲೆಲ್ಲ ಹೆಚ್ಚಾಗಿ ಪ್ರಸ್ತಾಪಗೊಂಡಿರುವುದು ಕುವೆಂಪು ಅವರಿಗೆ ಸಂದ ಸನ್ಮಾನ ಸಮಾರಂಭಗಳ ವೈಭವ ಪೂರ್ಣವಾದ ವಿಜೃಂಭಿತ ನೋಟ. ದೇಜಗೌ ಅವರ ಪ್ರಭಾವಪೂರ್ಣ ಶೈಲಿಯಲ್ಲಿ ಇದು ಮತ್ತಷ್ಟು ವರ್ಣರಂಜಿತವಾಗಿದೆ. ತೀರ್ಥಂಕರರ ಅಭಿಷೇಕ ಸಮಯದಲ್ಲಿನ ವರ್ಣನೆಗಳಂತೆ ಅದು ವೈವಿಧ್ಯಮಯವಾಗಿ ದೇಜಗೌ ಅವರ ಪ್ರತಿಭಾ ಲೇಖನಿಯಿಂದ ಸ್ಫೂರ್ತಿಗೊಂಡು ಅಭಿವ್ಯಕ್ತಿ ಪಡೆದಿದೆ. "ಸಂಜೆ ರಾಷ್ಟ್ರೀಯ ವಿದ್ಯಾಶಾಲೆಯ ಪ್ರಾಂಗಣ ಹಸಿರು ತೋರಣಗಳಿಂದ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಹೆಬ್ಬದ ಸಿಂಗಾರದಿಂದ ಕಣ್‌ಕುಕ್ಕುವ ಉಡಿಗೆ ತೊಡಿಗೆಗಳಿಂದ ಸ್ವರ್ಗಲೋಕವೇ ಭೂಮಿಗಿಳಿದಂತೆ ವಿರಾಜಮಾನವಾಗಿತ್ತು. ವೇದಮಂತ್ರಘೋಷ ಹಾಗೂ ಕಳಶಗನ್ನಡಿಗಳ ಆರತಿಯೊಡನೆ ಪುರಪ್ರಮುಖರು ಕವಿದ್ವಯರನ್ನು ಪ್ರವೇಶ ದ್ವಾರದಲ್ಲಿ ಇದಿರುಗೊಂಡು ಮೆರವಣಿಗೆಯಲ್ಲಿ ವೇದಿಕೆಗೆ ಕರೆದೊಯ್ದರು". - ಇಂಥಾ ಹೃನ್ಮನ ತಣಿಸುವ ಸುಂದರ ಭವ್ಯಾಕರ್ಷಕ ವರ್ಣನೆಗಳನ್ನು ಉದ್ದಕ್ಕೂ ಕಾಣಬಹುದು. ದೇಜಗೌ ಅವರು ಶ್ರೇಷ್ಠ ಗದ್ಯ ನಿರ್ಮಾಪಕರು ಎಂಬುದನ್ನು ಇವೆಲ್ಲಾ ಸಾರಿ ಹೇಳುತ್ತವೆ. ಓಜಃಪುಂಜವಾದ ಅವರ ನಿರರ್ಗಳ ಶೈಲಿ, ಅವರು ರಚಿಸುವ ಜೀವನ ಚರಿತ್ರೆಗಳಿಗೆ ಒಂದು ಮೆರುಗನ್ನು ತುಂಬುತ್ತದೆ.

೮. ದೀಕ್ಷಾಗುರು

ಕುವೆಂಪು ಅವರು ನಾಡುನುಡಿಗಳ ಬಗ್ಗೆ ಜನತೆಯನ್ನು ಎಚ್ಚರಗೊಳಿಸಲು ಶ್ರಮಿಸಿದ ಬಗೆಯನ್ನೂ ಹಾಗೂ ವಿದ್ಯಾಭ್ಯಾಸವನ್ನು ಕುರಿತು, ಶಿಕ್ಷಣ ಮಾಧ್ಯಮವನ್ನು ಕುರಿತು ಕನ್ನಡಾಭಿಮಾನವನ್ನು ಕುರಿತು, ಇಲ್ಲಿ ಪ್ರಸ್ತಾಪಿಸಿದ್ದಾರೆ. ಹೋದ ಹೋದೆಡೆಯಲ್ಲೆಲ್ಲಾ ಕೊಂಚವೂ ಬೇಸರವಿಲ್ಲದೆ ಈ ವಿಷಯಗಳ ಬಗ್ಗೆ ಮಾತನಾಡುವ ಅವರ ಸ್ವಭಾವದ ಹಿನ್ನೆಲೆಯನ್ನು ಚೆನ್ನಾಗಿ ಸ್ಪಷ್ಟೀಕರಿಸಿದ್ದಾರೆ. "ಕನ್ನಡ ಸಂಘದಲ್ಲಾಗಲೀ, ಮನಃಶ್ಶಾಸ್ತ್ರ ಸಂಘದಲ್ಲಾಗಲೀ, ಕಾರ್ಪೊರೇಷನ್ ಏರ್ಪಡಿಸಿದ ಸಭೆಯಲ್ಲಾಗಲೀ,

ಕೊನೆಗೆ ಪ್ರಪಂಚ ಸಂಸ್ಥೆಯ ಪ್ರತಿನಿಧಿಗಳ ಸಭೆಯಲ್ಲಾಗಲೀ ಎಲ್ಲಿಯಾದರೂ ಸರಿಯೆ ಭಾಷಾ ಮಾಧ್ಯಮದ ಸಮಸ್ಯೆಯ ಬಗ್ಗೆ ಬೇಸರವಿಲ್ಲದೆ ಭಾಷಣ ಮಾಡುತ್ತಾರೆ" - ಹೀಗೆ ಹೇಳುವಲ್ಲಿ ಕುವೆಂಪು ಅವರ ಕನ್ನಡ ದೀಕ್ಷೆಯ ಗುರಿಯನ್ನು ಧ್ವನಿಸಿದ್ದಾರೆ. ಕರ್ನಾಟಕದ ಬಹು ಭಾಗದಲ್ಲಿ ತಮ್ಮ ಭಾಷಣದ ಮೂಲಕ ತರುಣರ ರಕ್ತವನ್ನು ಕುದಿಸಿ, ಆ ಮೂಲಕ ಕನ್ನಡದ ಏಳಿಗೆಯ ಸಾರೋದ್ಧಾರಕ್ಕೆ ಶ್ರಮಿಸಿದ ಕತೆಯನ್ನು ನಿರೂಪಿಸಿದ್ದಾರೆ. ಅವರ ಭಾಷಣಗಳ ಬಗ್ಗೆ ಎದ್ದ ಪ್ರತಿಕ್ರಿಯೆಗಳನ್ನು ಇಲ್ಲಿ ಕ್ರೋಢೀಕರಿಸಿದ್ದಾರೆ. ವಿದ್ಯಾರ್ಥಿಗಳನ್ನುದ್ದೇಶಿಸಿ ಅವರು ಮಾಡಿದ ಭಾಷಣಗಳಲ್ಲಿನ ಸಾರವನ್ನು ಇಲ್ಲಿ ಭಟ್ಟಿ ಇಳಿಸಿ ಕೊಟ್ಟಿದ್ದಾರೆ.

ದೀಕ್ಷೆಯ ತೊಡು ಇಂದೇ ;
ಕಂಕಣ ಕಟ್ಟಿಂದೇ !
ಕನ್ನಡ ನಾಡೊಂದೇ ;
ಇನ್ನೆಂದೂ ತಾನೊಂದೆ !

ಎಂಬ ದಿವ್ಯ ಮಂತ್ರವನ್ನು ಹೇಳಿಕೊಟ್ಟ 'ದೀಕ್ಷಾಗುರು'ಗಳ ಭವ್ಯ ಮಂತ್ರವನ್ನು ದೇಜಗೌ ಅವರು ಅಷ್ಟೇ ಶಕ್ತಿಯುತ ಶೈಲಿಯಲ್ಲಿ ನಿರೂಪಿಸಿದ್ದಾರೆ. ಕುವೆಂಪು ಅವರ ಉಪನ್ಯಾಸಗಳಲ್ಲಿ ಕಂಡು ಬರುವ ದಿಟ್ಟ ಮತ್ತು ದಟ್ಟ ಅನುಭವವನ್ನು ಹಾಗೂ ಅವರ ಉಪನ್ಯಾಸದ ಶೈಲಿಯನ್ನು ದೇಜಗೌ ಅವರು ತಮ್ಮ ಪ್ರಖರ ಶೈಲಿಯಲ್ಲಿ ಲೇಖನಿಸಿದ್ದಾರೆ. "ಸಮಾಜದ ಲೋಪದೋಷಗಳನ್ನು ಲೇಖನಿಸುವಾಗ ಅವರ ಮಾತಿಗೆ ಚಾವಟಿಯ ಚುರುಕೂ ಪರಶುವಿನ ಕೂರ್ಪು, ಸಿಡಿಲ ತೀಕ್ಷ್ಣತೆಯೂ, ಅಶನಿ ನಿರ್ಘೋಷವೂ, ಸಮನಿಸುತ್ತವೆ". ಎಂಬುದನ್ನು ಗುರುತಿಸಿದ್ದಾರೆ.

೯. ಗೌರವದ ಪರಂಪರೆ

'ಶ್ರೀ ರಾಮಾಯಣ ದರ್ಶನಂ' ಮಹಾಕೃತಿಯನ್ನು ರಚಿಸಿ, ಕನ್ನಡ ಸಾಹಿತ್ಯದ ಕೀರ್ತಿ ಕಂಗೊಳಿಸುವಂತೆ ಮಾಡಿದ ರಾಷ್ಟ್ರಕವಿ ಕುವೆಂಪು ಅವರಿಗೆ, 'ಭಾರತದ ನೊಬೆಲ್ ಪ್ರಶಸ್ತಿ'ಯೆಂದೇ ಹೇಳಬಹುದಾದ ಪ್ರಶಸ್ತಿಯನ್ನಿತ್ತು ಗೌರವಿಸಿದ್ದು ಕನ್ನಡಿಗರೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ. ಕುವೆಂಪು ಅವರಿಗೆ ಗೌರವದ ಮೇಲೆ ಗೌರವ ಸಲ್ಲುತ್ತಾ ಬಂದವು. ಋಷಿಕವಿ ಇವಾವುದನ್ನು ಬಯಸದಿದ್ದರೂ ಅವು ಅವರನ್ನು ಹುಡುಕಿ ಹುಡುಕಿ ಬಂದವು ಎಂಬುದನ್ನು ದೇಜಗೌ ಅವರು ಸ್ವಾರಸ್ಯವಾಗಿ ಹೇಳಿದ್ದಾರೆ. ಕುವೆಂಪು ಅವರನ್ನು ಜ್ಞಾನಪೀಠ ಪ್ರಶಸ್ತಿಯನ್ನು ಸ್ವೀಕರಿಸುವುದಕ್ಕೆ ದೆಹಲಿಗೆ ಬರಮಾಡಿಕೊಳ್ಳಲು ನಡೆಸಿದ ಸಾಹಸ ಕಥೆಯನ್ನು ವಿಸ್ತಾರವಾಗಿ ಲೇಖನಿಸಿದ್ದಾರೆ. ಕನ್ನಡದ ಕವಿಶ್ರೇಷ್ಠರೊಬ್ಬರಿಗೆ ಹೀಗೆ ಗೌರವಗಳ ಪರಂಪರೆಯೇ ಒದಗಿದುದು ಇದೇ ಮೊದಲಾಗಿದೆ.

ಕುವೆಂಪು ಅವರನ್ನು ಹೇಗೋ ದೆಹಲಿಗೆ ಬರುವಂತೆ ಒತ್ತಾಯಿಸಿ ಒಪ್ಪಿಸಿಯಾಯಿತು. ಹಾಗೆ ಹೋಗಲೇಬೇಕಾದ ಸಂದರ್ಭ ಬಂದಾಗ, ಅದೇ ಮೊದಲು ಅವರು ವಿಮಾನವನ್ನು ಏರಿದ್ದು. ಆಗ ಕುವೆಂಪು ಅವರು ವಿಮಾನದಲ್ಲಿ ಕುಳಿತು ಕಿಟಕಿಯಾಚೆ ನೋಡುತ್ತಿದ್ದ ಬಗೆಯನ್ನು ಅತ್ಯಂತ ರಮ್ಯ ಶೈಲಿಯಲ್ಲಿ ಚಿತ್ರಿಸಿದ್ದಾರೆ - "ಎಳೆಯ ಮಗುವಿನಂತೆ ಅವರು ಕಿಟಕಿಯಾಚೆ ಕಣ್ಣಾಗಿ ಕುಳಿತರು. ಕೆಳಗೆ ಬೆಂಕಿಪೊಟ್ಟಣದ ಸಾಲುಗಳಂತಿದ್ದ ಮನೆಗಳನ್ನೂ ಹಸಿರು ದಿಬ್ಬಗಳಂತಿದ್ದ ಬೆಟ್ಟಗಳನ್ನೂ

ಬೆಳ್ಳಿಯುಡಿದಾರದಂತೆ ಕಾಣಿಸುತ್ತಿದ್ದ ನದಿಗಳನ್ನೂ ದೂರದಲ್ಲಿ ಗೋಪುರೋಪಮವಾಗಿ ಹೈಮಾಚಲದೋಪಾದಿಯಲ್ಲಿ ಧವಳ ದೇವಾಲಯಗಳಂತೆ ನಯನ ಮನೋಹರವಾಗಿದ್ದ ಮುಗಿಲ ತಂಡಗಳನ್ನು ನೋಡುತ್ತಾ ಮುಗಿಲ ನಾವೆಯ ಪ್ರಯಾಣ ಸುಖವನ್ನನುಭವಿಸುತ್ತಿದ್ದರು". ದೇಜಗೌ ಅವರು ಇಲ್ಲಿ ಕವಿಗಳಾಗಿದ್ದಾರೆ. ಅವರ ಕವಿ ಹೃದಯ ಇಲ್ಲಿ ಪರಿಪೂರ್ಣವಾಗಿ ಅರಳಿದೆ. ಅವರ ಕಲ್ಪನಾ ದೃಷ್ಟಿ ಹಾಗೂ ಸೃಷ್ಟಿ ಔನ್ನತ್ಯವನ್ನು ಮುಟ್ಟಿದೆ.

ಅಲ್ಲಿಯ ಸಮಾರಂಭದ ವರ್ಣನೆಯನ್ನು ಹಾಗೂ ಅಲ್ಲಿ ಕುವೆಂಪು ಅವರಿಗೆ ಸಂದ ಗೌರವವನ್ನು, ಅಲ್ಲಿಯ ಜನ ಕುವೆಂಪು ಅವರನ್ನು ಗೌರವದಿಂದ ಸನ್ಮಾನಿಸಿದ ಬಗೆಯನ್ನು ಉನ್ನತ ರೀತಿಯಲ್ಲಿ ಉಲ್ಲೇಖಿಸಿದ್ದಾರೆ.

ಅಲ್ಲಿಂದ ಹಿಂತಿರುಗುತ್ತಿದ್ದ ಹಾಗೆಯೇ ಬೆಂಗಳೂರು ವಿಶ್ವವಿದ್ಯಾನಿಲಯ ಕುವೆಂಪು ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿದ್ದು, ಬೆಂಗಳೂರು ನಾಗರಿಕರು ಪುರಭವನದಲ್ಲಿ ಸನ್ಮಾನ ಪತ್ರವನ್ನು ಅರ್ಪಿಸಿ ಗೌರವಿಸಿದ ಸಂದರ್ಭದಲ್ಲಿಯ ಸನ್ನಿವೇಶಗಳನ್ನು ದೇಜಗೌ ಅವರು ವರ್ಣರಂಜಿತವಾಗಿ ಚಿತ್ರಿಸಿದ್ದಾರೆ. ಕುವೆಂಪು ಅವರಿಗೆ ಒಂದರ ಹಿಂದೆ ಒಂದರಂತೆ, ಒಂದರ ಮೇಲೆ ಒಂದರಂತೆ ಒದಗಿ ಬಂದ ಗೌರವಗಳ ಪಟ್ಟಿಯನ್ನು ಸನ್ಮಾನ ಸಮಾರಂಭಗಳ ಭವ್ಯಾದ್ಭುತರಂಜಿತ ವರ್ಣನೆಯನ್ನು ದೇಜಗೌ ತಮ್ಮ ಪ್ರೌಢಶೈಲಿಯಲ್ಲಿ ಅತ್ಯುನ್ನತ ರೀತಿಯಲ್ಲಿ ಲೇಖನಿಸಿದ್ದಾರೆ.

"ರಾಷ್ಟ್ರಕವಿ ಕುವೆಂಪು" - ಕನ್ನಡ ಸಾಹಿತ್ಯ ಕ್ಷೇತ್ರದಲ್ಲಷ್ಟೇ ಅಲ್ಲ ಯಾವುದೇ ಸಾಹಿತ್ಯರಂಗದ ಕವಿಯೊಬ್ಬರನ್ನು ಕುರಿತು ರಚಿತವಾಗಿರುವ ಜೀವನ ಚರಿತ್ರೆಗಳಲ್ಲಿ ಅತ್ಯುನ್ನತವಾದುದೆನ್ನ ಬಹುದು. ಮಹಾಕವಿಯೊಬ್ಬರ ಜೀವನದ ಮಹತ್ ಘಟನೆಗಳೆಲ್ಲವನ್ನೂ ಕುವೆಂಪು ಅವರ ಅತ್ಯಂತ ನಿಕಟವರ್ತಿಗಳಾಗಿದ್ದುಕೊಂಡು ದೇಜಗೌ ಅವರು ಶ್ರೇಷ್ಠ ರೀತಿಯಲ್ಲಿ ಕೃತಿಗಿಳಿಸಿದ್ದಾರೆ. ಅವರ ಅತ್ಯಪೂರ್ವ ಗದ್ಯಶೈಲಿ ಇಲ್ಲಿ ಪರಿಪೂರ್ಣ ಸಿದ್ಧಿಯನ್ನು ಮುಟ್ಟಿದೆ. ಅವರ ಕವಿ ಹೃದಯ ಅಲ್ಲಲ್ಲಿ ಬಾಯ್ದೆರೆದು ಓದುಗರನ್ನು ರೋಮಾಂಚನಗೊಳಿಸುತ್ತದೆ. ಇಲ್ಲಿಯ ಹಲವು ವರ್ಣನೆ ಗಳು ಮಹಾಕಾವ್ಯದಲ್ಲಿನ ಅತ್ಯಪೂರ್ವ ಸಂದರ್ಭದ ವರ್ಣನೆಯಂತೆ ನಮ್ಮನ್ನಾಕರ್ಷಿಸುತ್ತದೆ. ಮಹಾಕವಿಯೊಬ್ಬರ ಸಮಗ್ರ ಜೀವನ ಚರಿತ್ರೆಯನ್ನು ಕೃತಿಗಿಳಿಸಲು ಮಹಾಸಾಹಿತಿಯೊಬ್ಬರ ಲೇಖನಿ ಪ್ರತಿಭಾಪೂರ್ಣವಾಗಿ ಕೆಲಸ ಮಾಡಿರುವುದನ್ನು ಇಲ್ಲಿ ಕಾಣಬಹುದು. ದೇಜಗೌ ಅವರ ಕೀರ್ತಿ ಇದರಿಂದ ಇಮ್ಮಡಿ ಮುಮ್ಮಡಿಗೊಂಡಂತಾಗಿದೆ ಎನ್ನಬಹುದು.

೩

'ಬೆರಕೆಸೊಪ್ಪು' ಪ್ರೊ. ದೇಜಗೌ ಅವರ ತೀರ ಇತ್ತೀಚಿನ ಕೃತಿ. ಒಂದು ವಿಶಿಷ್ಟ ಕೃತಿ ಕೂಡ. ಈ ಕೃತಿಯಲ್ಲಿ ಜೀವನದ ಬಹುಮುಖಗಳಿಗೆ ಸಂಬಂಧಿಸಿದ, ವೈವಿಧ್ಯಪೂರ್ಣವೂ ವಿಚಾರ ಸಂಪನ್ನವೂ ಆದ ಐವತ್ತು ಬರಹಗಳು ಸಂಕಲಿತವಾಗಿವೆ. ಸ್ವತಂತ್ರ ಲೇಖನಗಳೊಡನೆ ಭಾಷಾಂತರಗಳೂ, ಇಲ್ಲಿ ಸ್ಥಾನ ಪಡೆದಿವೆ. 'ಊರ ಹೆಸರು'ಗಳಿಂದ 'ಬದಲಾಗುತ್ತಿರುವ ಜಗತ್ತಿನಲ್ಲಿ ಸಾಹಿತಿ'ಯವರೆಗೆ ದೇಜಗೌ ಅವರ ವಿಚಾರ ವಿಲಾಸದ ಹರಹು ಕಂಡು ಬರುತ್ತದೆ. ಸಾಹಿತ್ಯ, ಭಾಷೆ, ಶಿಕ್ಷಣ, ಆರೋಗ್ಯ, ಪ್ರಾಣಿ ಜೀವನ - ಹೀಗೆ ಹತ್ತಾರು ವಿಷಯಗಳಿಗೆ ಸಂಬಂಧಿಸಿದಂತೆ ಅವರು ಸಮೃದ್ಧವಾಗಿ ಬರೆದಿದ್ದಾರೆ. ಅವರ ಆಳವಾದ, ಹರಿತವಾದ ವಿಚಾರ ವಿಮರ್ಶೆಗಳು ಪ್ರಚೋದಕವೂ

ಬೋಧಪ್ರದವೂ ಆಗಿದ್ದು ತುಂಬಾ ಉಪಾದೇಯವಾಗಿವೆ. ಮೆದುಳು ಹೃದಯಗಳೆರಡಕ್ಕೂ ಇಲ್ಲಿ ಪುಷ್ಕಳವಾದ ಆಹಾರವನ್ನೊದಗಿಸಲಾಗಿದೆ. ವಿಚಾರ ವೈಭವಕ್ಕೆ ತಕ್ಕ ರಮ್ಯೋಜ್ವಲವಾದ ಶೈಲಿ ದೇಜಗೌ ಅವರಿಗೆ ಸಿದ್ಧಿಸಿದೆ. ಕನ್ನಡದಲ್ಲಿ ವಿರಳವಿರುವ ಬೌದ್ಧಿಕ ಸಾಹಿತ್ಯಕ್ಕೆ ಈ 'ಬೆರಕೆಸೊಪ್ಪು' ಒಂದು ಉತ್ತಮವಾದ ಕೊಡುಗೆಯಾಗಿದ್ದು ಕನ್ನಡವನ್ನು ಬುದ್ಧಿಯ, ಆಲೋಚನೆಯ ಭಾಷೆಯನ್ನು ಬೆಳೆಸುವಲ್ಲಿ ಬಹಳ ದೂರ ಹೋಗಬಲ್ಲುದು".[೩]

ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಪತ್ರಿಕೆಗಳಿಗೆ, ಕೆಲವಾರು ನಿಬಂಧನೆಗಳಿಗೆ ಒಳಗಾಗಿ ಬರೆದ ಲೇಖನಗಳು ಇಲ್ಲಿ ಸಂಕಲಿತಗೊಂಡಿವೆ. ಇಂತೆಯೇ ಇದಕ್ಕೆ ಇಟ್ಟಿರುವ ತಲೆಬರಹವೂ ಅನ್ವರ್ಥವಾಗಿದೆ: "ಇಲ್ಲಿಯ ಒಂದೊಂದು ಲೇಖನವೂ ಒಂದೊಂದು ವಿಷಯಗಳನ್ನೊಳಗೊಂಡಿದೆ. ಭಿನ್ನ ಭಿನ್ನ ವಸ್ತುವಿನ ಭಿನ್ನ ಭಿನ್ನ ಶೈಲಿಯ ವಿವಿಧ ರುಚಿಯ ಪರಸ್ಪರ ಸಂಬಂಧವಿರದ ಈ ಲೇಖನಗಳ ಸಂಗ್ರಹಕ್ಕೆ ಹೆಸರಿಡುವುದೂ ಕಷ್ಟವೇ! ಆಗ ನೆನಪಿಗೆ ಬಂತು ನನಗೆ ಪ್ರಿಯವಾದೊಂದು ವಸ್ತುವಿನ ಹೆಸರು, ಬೆರಕೆ ಸೊಪ್ಪು!" - ಎಂದಿದ್ದಾರೆ ಲೇಖಕರು. ಮಣ್ಣಿನ ವಾಸನೆಯಿಂದ ಮೂಡಿ ಬಂದ ಈ ಒಂದು ನುಡಿ, ಈ ಕೃತಿಯ ಮುಡಿಯನ್ನಲಂಕರಿಸಿದೆ. ಐವತ್ತು ಲೇಖನಗಳಿಂದ ಕೂಡಿ ಮುನ್ನೂರ ಇಪ್ಪತ್ತೆಂಟು ಪುಟಗಳ ವ್ಯಾಪ್ತಿಯುಳ್ಳ ಈ ಕೃತಿಯ ವಿಷಯ ವೈವಿಧ್ಯವನ್ನು ಗಮನಿಸಿದಾಗ, ಇದರ ತಲೆಬರಹದ ಔಚಿತ್ಯ ಅರ್ಥವಾಗುತ್ತದೆ. ಇಲ್ಲಿಯ ಐವತ್ತು ಲೇಖನಗಳಲ್ಲಿ ಇಪ್ಪತ್ತೊಂದು ಅನುವಾದಿತ ಲೇಖನಗಳು, ಉಳಿದವು ಸ್ವತಂತ್ರ ಬರಹಗಳು. ಅವರ ಸ್ವತಂತ್ರ ಲೇಖನಗಳ ಕಡೆ ನಾನು ಇಲ್ಲಿ ಹೆಚ್ಚು ದೃಷ್ಟಿ ಹರಿಸಿದ್ದೇನೆ.

ಇದರ ಮೊದಲ ಲೇಖನವೇ 'ಊರ ಹೆಸರುಗಳು' ಎಂಬುದು. ನಾವು ಪ್ರತಿ ನಿತ್ಯವೂ ಹತ್ತಾರು ಊರುಗಳ ಹೆಸರನ್ನು ಹೆಸರಿಸುತ್ತಿದ್ದರೂ, ಆ ಹೆಸರುಗಳ ಬಗ್ಗೆ ಸ್ವಲ್ಪವೂ ಸಂಶೋಧನ ದೃಷ್ಟಿಯನ್ನು ಹರಿಸದೆ ಯಾಂತ್ರಿಕವಾಗಿ ನುಡಿಯುವುದರ ಬಗ್ಗೆ ಎಚ್ಚರಿಸಿದ್ದಾರೆ. ವಿದ್ಯಾವಂತರಾಗಲೀ ಅವಿದ್ಯಾವಂತರಾಗಲೀ ಆ ಹೆಸರುಗಳ ಹುಟ್ಟಿನ ಬಗ್ಗೆ, ಸ್ವಲ್ಪವೂ ಕುತೂಹಲ ತೋರದೆ ಇರುವುದು - ನಮ್ಮಲ್ಲಿಯ ವಿಷಯಾಸಕ್ತಿಯ ಅಭಾವಕ್ಕೆ ನಿದರ್ಶನದಂತಿದೆ. ಒಂದೊಂದು ಹೆಸರಿನ ಹಿಂದೆಯೂ ಅಡಗಿರುವ ಸತ್ಯಾಂಶವನ್ನು ಅರ್ಥವ್ಯಾಪ್ತಿಯನ್ನು ಬೆದಕಿ ನೋಡಿದಾಗ ಆಶ್ಚರ್ಯವಾಗುತ್ತದೆ. ಸ್ವಸ್ಥಳಾಭಿಮಾನದಿಂದ ತಮ್ಮ ತಮ್ಮ ಊರುಗಳ ಬಗ್ಗೆ ಸ್ವಾರಸ್ಯವಾಗಿ ಕತೆಕಟ್ಟಿ ಹೇಳುವುದು ಆಕರ್ಷಕವಾಗಿ ಕಾಣುತ್ತದೆಯಾದರೂ ಶಾಸ್ತ್ರೀಯ ದೃಷ್ಟಿಯಿಂದ ಭಾಷಾಶಾಸ್ತ್ರದ ಕಟ್ಟಿಗೆ ಒಳಪಡಿಸಿ ನೋಡಿದಾಗ ಅದರಿಂದ ಹೊರಬರುವ ಸತ್ಯಾಂಶವೇ ಬೇರೆ ಎಂಬುದನ್ನು ಅವರು ಪ್ರಸ್ತಾಪಿಸಿದ್ದಾರೆ. ಪಾಶ್ಚಾತ್ಯರಲ್ಲಿ ಈ ಬಗ್ಗೆ ನಡೆದಿರುವ ಪರಿಶೋಧನೆಯನ್ನು ಗಮನಿಸಿ, ಭಾರತದಲ್ಲಿ ಇತ್ತೀಚೆಗೆ ಇಂಥಾ ಒಂದು ಕಾರ್ಯ ಆರಂಭಗೊಂಡಿದ್ದರೂ ಇನ್ನು ತೃಪ್ತಿಕರವಾಗಿ ಮುಂದುವರಿಯುತ್ತಿಲ್ಲ ಎಂಬುದನ್ನು ಸ್ಪಷ್ಟಗೊಳಿಸಿದ್ದಾರೆ. ಕನ್ನಡದಲ್ಲಿ ಈ ಬಗ್ಗೆ ಕೆಲಸ ಮಾಡಿರುವವರನ್ನು ಸ್ಮರಿಸಿಕೊಂಡಿದ್ದಾರೆ.

ಸಂಸ್ಕೃತಿ ಹೇಗೆ ಬೆಳೆದು ರೂಪುಗೊಂಡಿತು, ಹಲವು ಸಂಸ್ಕೃತಿಗಳ ಸಮ್ಮಿಳನ ಹೇಗೆ ಸಾಧ್ಯವಾಯಿತು, ಸಾಮಾಜಿಕ ವ್ಯವಸ್ಥೆ ಹೇಗೆ ರೂಪು ತಳೆಯಿತು. ಊರುಗಳು ಮುಂತಾದುವು ಹೇಗೆ

---

೩. **ಬೆರಕೆಸೊಪ್ಪು: ಹೊದಿಕೆಯ ಒಳಭಾಗ**

ನಿರ್ಮಾಣಗೊಂಡವು - ಸಂಸ್ಕೃತಿಯ ಪ್ರತಿಬಿಂಬ ಹೇಗೆ ವ್ಯಕ್ತಗೊಂಡಿತು ಮೊದಲಾದ ಅಂಶವನ್ನು ದೇಜಗೌ ಇಲ್ಲಿ ಪ್ರಸ್ತಾಪಿಸಿದ್ದಾರೆ.

'ಊರು' ಎಂಬ ಪದದ ನಿಷ್ಪತ್ತಿ ಹಾಗೂ ಅದರ ಮೂಲದತ್ತಲೂ ದೃಷ್ಟಿ ಹರಿಸಿದ್ದಾರೆ. 'ಊರು' ಎಂಬ ಪದ 'ಪುರ' ಎಂಬ ಸಂಸ್ಕೃತ ಪದದಿಂದ ಸಿದ್ಧಗೊಂಡಿದೆ ಎಂಬುದಾಗಿ ಕೆಲವು ಸಂಸ್ಕೃತ ವಿದ್ವಾಂಸರು ಅಭಿಪ್ರಾಯ ಪಡುತ್ತಾರಾದರೂ, ಮತ್ತೆ ಕೆಲವರು ಮೂಲ ದ್ರಾವಿಡದಿಂದ ಬಂದುದು ಎಂದು ಹೇಳುವ ಅಭಿಪ್ರಾಯವನ್ನು ಇವರು ಅನುಮೋದಿಸುತ್ತಾರೆ. "ಸಾಮಾನ್ಯವಾಗಿ ತಮ್ಮ ತಮ್ಮ ಕ್ರಿಯಾ ಸ್ವಭಾವಗಳಿಗನುಸಾರವಾಗಿ ಸಚರಾಚರ ವಸ್ತುಗಳ ಹೆಸರುಗಳು ಬೆಳೆದಿವೆ. ಮನುಷ್ಯನಿಗೆ ಅಲೆದಾಟ ಬೇಸರವಾಗಿ ಫಲವತ್ತಾದ ವಸತಿ ನೋಟಕ್ಕೆ ಬಿದ್ದಾಗ ಒಂದು ಕಡೆ ತನ್ನ ಒಕ್ಕಲನ್ನು ಊರಿನಿಂತನು. ಹಾಗೆ ಒಂದೆಡೆ ನಾಲ್ಕಾರು ಕುಟುಂಬಗಳು ಊರಿಕೊಂಡಾಗ ಊರು ಹುಟ್ಟಿಕೊಂಡಂತೆ ಕಾಣುತ್ತದೆ" - ಎಂಬ ಅವರ ಅಭಿಪ್ರಾಯ ಸರ್ವಸಮ್ಮತವಾಗಿದೆ. ಯಾವ ಒಂದು ಹಿನ್ನೆಲೆಯೂ ಇಲ್ಲದೆ, ಯಾವ ಒಂದು ಹೆಸರೂ ಹುಟ್ಟಿಕೊಳ್ಳಲಾರದು. ಊರುಗಳ ಹೆಸರುಗಳನ್ನು ಗಮನಿಸಿದಾಗಲೂ ಅಷ್ಟೆ, ಅಲ್ಲಿಯ ಸ್ವಾಭಾವಿಕ ಗುಣಗಳಿಗನುಗುಣ ವಾಗಿ ಇಲ್ಲದೇ ಪ್ರಾಕೃತಿಕ ಸನ್ನಿವೇಶಗಳಿಗನುಗುಣವಾಗಿ ಅಥವಾ "ಯಾವ ಮುಖಂಡ ಮುಂದೆ ಬಂದು ಗುದ್ದಲಿ ಊರಿದನೋ ಆತನ ಹೆಸರೇ ಊರಿಗೆ ನಿಲ್ಲುವುದುಂಟು.... ಸೀನಪ್ಪನ ದೊಡ್ಡಿ, ದೇವೇಗೌಡನ ದೊಡ್ಡಿ", ಹಾಗೆಯೇ ಬಹುಸಂಖ್ಯಾತ ಜಾತಿಯ ಅಥವಾ ಗುಂಪಿನವರ ಹೆಸರೇ ಆ ಊರಿನ ಹೆಸರೂ ಆಗುತ್ತಿತ್ತು ; ಕುರುಬರ ಹಳ್ಳಿ, ಗೊಲ್ಲಹಳ್ಳಿ. ಅಲ್ಲಿ ಮೊದಮೊದಲು ನೆಲೆಗೊಂಡವರ ಕುಲದೇವರ ಹೆಸರೇ ಆ ಊರಿನ ಹೆಸರೂ ಆಗಬಹುದು. ದೇಜಗೌ ಅವರು ಈ ಎಲ್ಲಾ ಅಂಶಗಳನ್ನೂ ಸಂಗ್ರಹಿಸಿ ಸ್ವಾರಸ್ಯವಾದ ವಿವರಣೆಗಳೊಡನೆ ಇಲ್ಲಿ ನಿರೂಪಿಸಿದ್ದಾರೆ. ಹೀಗೆ ನಿರ್ಮಾಣಗೊಂಡ ಹೆಸರುಗಳು ಕಾಲಕ್ರಮೇಣ ಹಲವಾರು ಕಾರಣಗಳಿಂದಾಗಿ ಪರಕೀಯರ ಉಚ್ಚಾರಣಾ ಧಾಟಿಯಿಂದಾಗಿ ಹಾಗೂ ದೇಶೀಯರ ಸೌಲಭ್ಯಾಕಾಂಕ್ಷೆಯ ಉದ್ಧಟತನದಿಂದಾಗಿ ವ್ಯತ್ಯಾಸಗೊಳ್ಳುವುದೂ ಉಂಟು. "ಆಂಗ್ಲೇಯರ ಬಾಯಿಯಲ್ಲಿ ಮುಂಬೈ, ಬೊಂಬೆ ಆಗುತ್ತದೆ. ಶ್ರೀರಂಗಪಟ್ಟಣ ಸಿರಂಪಟ್ಟಾಮ್ ಆಗುತ್ತದೆ" - ಇಂಥಾ ಕೆಲವು ಉದಾಹರಣೆಗಳನ್ನು ಅವರು ನೀಡಿದ್ದಾರೆ.

ಒಂದು ಊರಿಗೆ ಮೊದಲಿದ್ದ ಹೆಸರೇ ಈಗಲೂ ಉಳಿದಿದೆ ಎಂದು ಧೈರ್ಯವಾಗಿ ಹೇಳುವಂತಿಲ್ಲ. ಉಳಿದಿದ್ದರೂ ಅವು ತಮ್ಮ ಮೂಲ ಸ್ವರೂಪವನ್ನು ಉಳಿಸಿಕೊಂಡು ಉಳಿದಿವೆ ಎಂಬುದನ್ನು ನಿರ್ಧರಿಸುವುದು ಮತ್ತೂ ಕಷ್ಟವೇ. "ದ್ರಾವಿಡರ ಹೆಸರುಗಳಂತೂ ಉಪಖಂಡ ದಲ್ಲೆಲ್ಲಾ ಹೇರಳವಾಗಿ ಸಿಗುತ್ತವೆ. ಆರ್ಯರು ಬಂದು ದ್ರಾವಿಡರನ್ನು ದಕ್ಷಿಣಕ್ಕೆ ಓಡಿಸಿ, ಉತ್ತರ ದೇಶದಲ್ಲಿ ನೆಲಸಿದ ಮೇಲೆ ದ್ರಾವಿಡರ ಹೆಸರುಗಳನ್ನು ಆರ್ಯೀಕರಣ ಮಾಡಿಕೊಂಡರು". ಈ ಅಂಶ ಗಮನೀಯವಾದದ್ದು. ದೇಜಗೌ ಅವರು ಈ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ.

ಈ ಎಲ್ಲಾ ಅಂಶಗಳನ್ನು ಗಮನಿಸಿ ಮೂಲವನ್ನು ನಿಷ್ಕರ್ಷಿಸಲು ಭಾಷಾಶಾಸ್ತ್ರದ ನೆರವು ಅಗತ್ಯ. ಈ ಗ್ರಾಮನಾಮಗಳ ಸಂಶೋಧನೆ ಭಾಷಾಶಾಸ್ತ್ರಕ್ಕೆ ನೆರವಾಗುವುದಷ್ಟೇ ಅಲ್ಲ. ಭಾಷಾಚರಿತ್ರೆಗೂ ಇದರಿಂದ ಮಹೋಪಕಾರವಾದಂತಾಗುತ್ತದೆ. ಹಾಗೆಯೇ ಶಾಸನಗಳು, ವೀರಗಲ್ಲುಗಳತ್ತಲೂ ದೃಷ್ಟಿ ಹರಿಸಬೇಕಾಗುತ್ತದೆ. ಗೆಜೆಟಿಯರ್‌ಗಳು, ಸರ್ಕಾರಿ ಕಾಗದ ಪತ್ರಗಳು - ಇವೆಲ್ಲವನ್ನೂ ಗಮನಿಸುವುದು ಒಳ್ಳೆಯದು. "ಒಟ್ಟಿನಲ್ಲಿ ಪುರಾತನ ನಾಗರಿಕತೆ, ಸಂಸ್ಕೃತಿ, ಆಚಾರ ವ್ಯವಹಾರಗಳೂ ಆಯಾ

ಜನಾಂಗದ ಪೂರ್ವಜರ ಹೃದಯವನ್ನು ಆಶೋತ್ತರಗಳನ್ನು ಊರ ಹೆಸರುಗಳು ಸಾರಿ ಹೇಳುತ್ತವೆ". ಆದರೆ ಇದಕ್ಕೆ ಭಾಷಾ ಶಾಸ್ತ್ರದ ನೆರವಿನಿಂದ ಕೂಡಿದ ಸಂಶೋಧನಾ ದೃಷ್ಟಿ ಅಗತ್ಯ. ದೇಜಗೌ ಅವರು ಇಂತಹ ಒಂದು ಸಂಶೋಧನೆಯಲ್ಲಿ ತೊಡಗುವವರಿಗೆ ನೆರವಾಗುವ ತಕ್ಕ ಆಹಾರವನ್ನು ಇಲ್ಲಿ ಒದಗಿಸಿದ್ದಾರೆ.

"ಜೇನ್ - ಭೂಲೋಕದ ದಿವ್ಯಾಮೃತ !" ಇದೊಂದು ಅನುವಾದಿತ ಪ್ರಬಂಧ. ಆದರೆ ಲೇಖಕರೇ ಪೀಠಿಕೆಯಲ್ಲಿ ಹೇಳಿರುವಂತೆ ಹೆಸರಿಗೆ ಮಾತ್ರ ಇದೊಂದು ಅನುವಾದಿತ ಪ್ರಬಂಧ ಅಷ್ಟೇ. ಮೂಲದ ವಿಷಯವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಅದಕ್ಕೆ ಜೀವಕಳೆಯಿತ್ತಿದ್ದಾರೆ.

ಜೇನಿನ ಮಹತ್ವ ಎಂಥದು ? ಅದು ಏನೆಲ್ಲಾ ಸತ್ವಗಳನ್ನು, ಪೌಷ್ಟಿಕಾಂಶಗಳನ್ನು ಒಳಗೊಂಡಿದೆ. ಪುರಾತನರೂ ಸಹ ಈ ಜೇನನ್ನು ಹೇಗೆ ಹೇಗೆ ಬಳಸುತ್ತಿದ್ದರು, ಎಂಬೆಲ್ಲವನ್ನೂ ಇಲ್ಲಿ ತಿಳಿಯಬಹುದು. "ಈಜಿಪ್ಟ್ ದೇಶದ ಪುರಾತನ ನಾಗರೀಕತೆಯ ಕಾಲದಿಂದ ಇಂದಿನ ತನಕ ಜೇನು ಮಾಧುರ್ಯ. ಪರಿಶುದ್ಧತೆಗಳ ಹೆಗ್ಗುರು ಆಗಿ ವಿವಾಹ ಮಂದಿರದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ರೋಮ್ ನಗರದಲ್ಲಿ ನವದಂಪತಿಗಳ ಮನೆಯ ಹೊಸಲಿನ ಮೇಲೆ ಜೇನಿನ ಹನಿಗಳನ್ನೂ ಚೆಲ್ಲುತ್ತಿದ್ದರು. ಆ ಹೊಸಿಲ ಮೂಲಕ ಹೆಣ್ಣನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಎತ್ತಿಕೊಂಡು ಹೋಗುತ್ತಿದ್ದರು. ಹಂಗೇರಿಯಿಂದ ಹಿಂದೂಸ್ತಾನದವರೆಗೆ ಜೇನುತುಪ್ಪದ ಬಳಕೆಯಿಲ್ಲದೆ ಜರುಗುವ ವಿವಾಹವೇ ಇಲ್ಲ........ ನವದಂಪತಿಗಳ ವಿವಾಹಾನಂತರ ಪ್ರಣಯಯಾತ್ರೆ 'ಹನೀಮೂನ್' ಎಂಬ ಹೆಸರಿನಿಂದಲೇ ಅನೇಕ ಭಾಷೆಗಳಲ್ಲಿ ಪ್ರಸಿದ್ಧವಾಗಿದೆ". ಈ ಎಲ್ಲಾ ವಿಶಿಷ್ಟ ಅಂಶಗಳೂ ಇಲ್ಲಿ ವ್ಯಕ್ತಗೊಂಡಿವೆ.

ಜೇನು ಔಷಧಿಯ ರೂಪದಲ್ಲಿ ಎಷ್ಟು ಉಪಯುಕ್ತವೆನಿಸಿದೆ. ಜೇನು ಸಾಕಣೆ, ಪ್ರಪಂಚದ ಹಲವು ಕಡೆಗಳಲ್ಲಿ ಹೇಗೆ ನಡೆದಿದೆ ಹಾಗೂ "ಅಮೆರಿಕಾ ದೇಶದಲ್ಲಿ ಹತ್ತು ಲಕ್ಷವನ್ನು ಮೀರಿ ಜೇನು ಸಾಕುವವರಿದ್ದಾರೆ. ಅವರು ಪ್ರತಿ ವರ್ಷವೂ ೨,೦೦೦ ಪೌಂಡುಗಳಷ್ಟು ಜೇನನ್ನು ಮಾರುತ್ತಾರೆ". ಮಮುಂತಾದ ಅನೇಕ ಅಂಶಗಳು ಇದರಿಂದ ತಿಳಿದು ಬರುತ್ತವೆ. ಎಲ್ಲಾ ಬಗೆಯ ಗಿಡಗಳೂ ಒಳ್ಳೆಯ ಮಕರಂದ ಉದ್ಭವಕ್ಕೆ ಕಾರಣವಾಗಲಾರವು. ಯೋಗ್ಯವಾದ ಮಕರಂದ ಲಭಿಸುವುದು ಕೆಲವು ಗಿಡಗಳಿಂದ ಮಾತ್ರ. ಉಳಿದ ಪುಷ್ಪಗಳಿಂದ ಉದ್ಭವಿಸಿದ ಜೇನೂ ಇತರ ಕೆಲಸಗಳಿಗೆ ಉಪಯುಕ್ತವಾಗಿರುತ್ತದೆ.

ಒಟ್ಟಿನಲ್ಲಿ 'ಜೇನು - ಭೂಲೋಕದ ದಿವ್ಯಾಮೃತ'ವಾಗಿದೆ. "ಸಾವಿರಾರು ವರ್ಷಗಳುರುಳಿ ದರೂ ಜೇನಿಗಿಂತ ಪರಿಶುದ್ಧವೂ, ಮಧುರವೂ ಆದ ಆಹಾರವನ್ನು ಯಾರೂ ಇಲ್ಲಿಯ ತನಕ ಕಂಡು ಹಿಡಿದಿಲ್ಲ" ಎಂಬುದು ಮನಗಾಣಬೇಕಾದ ಅಂಶ. ಇದು ಭೂ ಲೋಕದ ದಿವ್ಯಾಮೃತ ಎಂದ ಮೇಲೆ ಅದರ ಮಹತ್ವ ಎಂಥದೆಂಬುದನ್ನು ಅದೇ ಧ್ವನಿಸುತ್ತದೆ.

'ಭರತ ಖಂಡದ ರಾಜಕೀಯದಲ್ಲಿ ಮೂಲತತ್ವಗಳ ಪರಸ್ಪರ ಸಂಘರ್ಷಣೆಗಳು' ಇದು ಹಿಂದೂ ಪತ್ರಿಕೆಯ 'ರಿಪಬ್ಲಿಕ್' ಸಂಚಿಕೆಯಲ್ಲಿ ಪ್ರಕಟಗೊಂಡ ಸಿ.ಆರ್. ರೆಡ್ಡಿಯವರ ಲೇಖನದ ಅನುವಾದ. ದೇಜಗೌ ಅವರು ಭಾಷಾಂತರ ಕಲೆಯನ್ನು ವಶೀಕರಿಸಿಕೊಂಡವರು. ಮೂಲಕ್ಕೆ ಚ್ಯುತಿ ಬಾರದಂತೆ ಅದರ ಸ್ವಾರಸ್ಯ ಕೆಡದಂತೆ ಮೂಲದ ಎಲ್ಲಾ ಭಾವರಸಗಳನ್ನು ಅನುವಾದದಲ್ಲಿ ಮೂಡಿಸುವ ಅವರ

ಮಾಂತ್ರಿಕ ಶಕ್ತಿ ಅನುಕರಣೀಯ. ಇದು ಅನುವಾದಿತ ಎಂಬ ಅಂಶವನ್ನೇ ಗಮನಕ್ಕೆ ತರದಂತೆ ಓದಿಸಿಕೊಂಡು ಹೋಗುವುದು ಅವರ ಭಾಷಾಂತರ ಕಲೆಯಲ್ಲಿ ಕಂಡು ಬರುವ ಒಂದು ವಿಶಿಷ್ಟ ಲಕ್ಷಣ.

ಭರತಖಂಡದ ರಾಜಕೀಯದಲ್ಲಿ ಮೂಲತತ್ವಗಳ ಪರಸ್ಪರ ಸಂಘರ್ಷಣೆಗಳಿಗೆ ಕಾರಣಗಳಾವುವು ? ರಾಷ್ಟ್ರ ಹಾಗೂ ವ್ಯಕ್ತಿ, ಪ್ರಜಾಪ್ರಭುತ್ವದಲ್ಲಿ ಮುಂದಾಳುತನದ ಜವಾಬ್ದಾರಿ ಎಂಥದು ? ಪ್ರಾಂತ್ಯಾಭಿಮಾನ ಮತ್ತು ಕಲಾಭಿಮಾನ ಇವುಗಳ ವ್ಯಾಪ್ತಿ ಹಾಗೂ ಪರಿಮಿತಿ ಎಷ್ಟೆಷ್ಟಿರಬೇಕು, ಮಂತ್ರಿಗಳ ಆರಾಧನೆ ಇತಿಮಿತಿ ಎಷ್ಟು, ವ್ಯವಸ್ಥಾಬದ್ಧ ಪ್ರಭುತ್ವದ ಹಿರಿಮೆ ಎಂತಿರುತ್ತವೆ. ಉತ್ತಮ ಸಂಘ ಸ್ಥಾಪನೆ ಹೇಗೆ ಸಾಧ್ಯ. ಅದರ ಉಪಯುಕ್ತತೆ ಎಷ್ಟಿರುತ್ತದೆ - ಈ ಎಲ್ಲಾ ವಿಷಯ ವ್ಯಾಪ್ತಿಯನ್ನು ಒಳಗೊಂಡ ಈ ಒಂದು ಪ್ರಬಂಧ ವಿಚಾರಪೂರಿತವಾಗಿದೆ, ಅದೇನೇ ಇರಲಿ, ದೇಜಗೌ ಅವರು ಇದನ್ನು ಕನ್ನಡಕ್ಕೆ ಹೇಗೆ ತಂದಿದ್ದಾರೆ ಎಂಬುದು ಮುಖ್ಯ.

"ಶೀಲ ಪ್ರಾಮುಖ್ಯವೇ ಹೊರತು ರಾಜ್ಯಾಂಗ ನಿಬಂಧನೆಯ ಯಾಂತ್ರಿಕ ಸಂಯೋಜನೆಯಲ್ಲ. ರಾಜ್ಯಾಂಗ ನಿಬಂಧನೆಯೇ ಇಲ್ಲವೆ ಶೀಲದ ಮಹಿಮೆಯಿಂದಲೇ ಇಂಗ್ಲೆಂಡ್ ಮುನ್ನಡೆಯಬಲ್ಲದು. ರಾಜ್ಯಾಂಗ ನಿಬಂಧನೆ ಇರಲಿ, ಇಲ್ಲದಿರಲಿ, ಶೀಲ ಸದಾ ಬಳಕೆಯಲ್ಲಿರಬಹುದು. ಆದರೆ ಶೀಲವಿಲ್ಲದೆ ರಾಜ್ಯಾಂಗ ನಿಬಂಧನೆ ಉಳಿಯಲಾರದು" ಇಂಥಾ ಅಮೂಲ್ಯ ಅಂಶಗಳನ್ನು ಸರಳ ಶೈಲಿಯಲ್ಲಿ ಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗುವಂತೆ ಅನುವಾದಿಸುವ ಮಾಂತ್ರಿಕತೆ ದೇಜಗೌ ಅವರಿಗೆ ಸಿದ್ಧಿಸಿದ್ದು.

ಅಷ್ಟಪಾದಿಯೊಡನೊಂದು ಗಳಿಗೆ 'ಮಿರರ್' ಪತ್ರಿಕೆಯಲ್ಲಿ ಬೆಳಕು ಕಂಡ ಸರ್. ಆರ್ಥರ್ ಗ್ರೀಬಲ್ ಅವರ ಲೇಖನದ ಅನುವಾದ.

ಇದೊಂದು ವಿಚಿತ್ರ ಬಗೆಯ ಅಷ್ಟೇ ವಿಕಾರವಾದ ರಾಕ್ಷಸೀಮೃಗ. ಇದು ನೀರಿನಲ್ಲಿ ವಾಸಿಸುತ್ತದೆ. ಅತ್ಯಂತ ಶಕ್ತಿಯುತವಾದ ಪ್ರಾಣಿ ಕೂಡ. ಈ ಜಂತುವಿನ ಕೆಲವು ಭಾಗಗಳನ್ನು ತಿನ್ನುತ್ತಾರೆ. ಇದನ್ನು ಹಿಡಿಯಲು ನಡೆಸುವ ಹೋರಾಟ, ಮಾಡುವ ಚಮತ್ಕಾರ ಅಷ್ಟಿಷ್ಟಲ್ಲ. ಹೊಂಚು ಹಾಕಿ ಅದನ್ನು ಹಿಡಿಯುವುದು ಒಂದು ಸಾಹಸಕರ ಕತೆಯೇ ಆಗುತ್ತದೆ.

ಈ ಪ್ರಬಂಧದ (ಮೂಲ) ಲೇಖಕರು ಚಿಕ್ಕಂದಿನಲ್ಲಿಯೇ ವಿಕ್ಟರ್ ಹ್ಯೂಗೋರಿಂದ ಈ ರಾಕ್ಷಸಿ ಜಲಚರದ ಬಗೆಗೆ ಕಥೆಗಳನ್ನು ಕೇಳಿ ಬೆರಗಾಗಿ, ಅದು ವರಿಗೆ ದಿನನಿತ್ಯದ ಕನಸಾಗಿತ್ತು. ದೊಡ್ಡವರಾದ ಮೇಲೂ ಅದರೊಡನೆ ಹೋರಾಡುವ ಸಾಹಸವನ್ನು ಅವರು ಹೊತ್ತರು. ಅಂಥಾ ಒಂದು ಸೆಣಸಾಟಕ್ಕೂ ಅವರು ಸಿದ್ಧರಾದರು. ಆ ಒಂದು ಅನುಭವದ ಘಟನೆಯನ್ನು ಇಲ್ಲಿ ಸ್ವಾರಸ್ಯವಾಗಿ ಬಣ್ಣಿಸಿದ್ದಾರೆ. ಮೂಲದ ಈ ಸ್ವಾರಸ್ಯಾನುಭವವನ್ನು ದೇಜಗೌ ಅವರು ಕನ್ನಡಕ್ಕೆ ಅನುವಾದಿಸಿ ಅದರ ಸೊಗಸನ್ನು ಕನ್ನಡಿಗರಿಗೂ ಉಣಿಸಿದ್ದಾರೆ, ಬಣ್ಣಿಸಿದ್ದಾರೆ. ಭಾಷಾಂತರದ ಅವಶ್ಯಕತೆಯೇನೆಂಬುದು ಇಂಥಾ ಅನುವಾದಿತ ಪ್ರಬಂಧಗಳಿಂದ ವ್ಯಕ್ತವಾಗುತ್ತದೆ. ತಾನೊಬ್ಬನೇ ತಿಂದು ತೇಗಿದರೆ ಸಾಲದು, ಇತರರಿಗೂ ಅದರ ಸವಿ ದೊರೆಯುವಂತೆ ಮಾಡುವುದೂ ಮುಖ್ಯ. ಅನುವಾದಕನ ಹಲವು ಧ್ಯೇಯಗಳಲ್ಲಿ ಇದೂ ಒಂದಾಗಿರುತ್ತದೆ. ದೇಜಗೌ ಅವರಲ್ಲಿ ಇದು ದಟ್ಟವಾಗಿ ಕಂಡು ಬರುತ್ತದೆ.

ಜಗತ್ತಿಗೆ ಗಾಂಧೀಜಿಯವರ ಅಮರ ಸಂದೇಶ ಏನು ? ಎಂಬುದನ್ನು ವಿವೇಚಿಸುವ ಲೇಖನ

ಇದು. ಗಾಂಧೀಜಿಯವರು ಏಕದಲ್ಲಿ ಅನೇಕವನ್ನು, ಅನೇಕದಲ್ಲಿ ಏಕವನ್ನು ಕಂಡವರು. ಅವರ ಜೀವನ ದೃಷ್ಟಿ ವಿಶಾಲವಾದುದು. ಜಗತ್ತಿನ ಮತವೆಲ್ಲ ಒಂದೇ ಎಂಬ ವಿಶಾಲ ಮನೋಧರ್ಮ ಅವರದು. ಗಾಂಧೀಜಿಯವರಲ್ಲಿ ಅಪಾರವಾದ ಸ್ವದೇಶಾಭಿಮಾನವಿದ್ದುದು ಕಂಡು ಬರುತ್ತಿತ್ತಾದರೂ ವಿದೇಶೀಯರನ್ನು ಅವರು ಎಂದೂ ದೂಷಿಸಿದವರಲ್ಲ. "ಅವರ ನಡೆಯೇ ನುಡಿ, ನುಡಿಯೇ ನಡೆ. ಅವರು 'ಅಣೋರಣೀಯಾನ್ ಮಹತೋಮಹೀಯಾನ್'. ಕುಲಿಗೆ ದಬ್ಬಾಳಿಕೆಗಳು ಹಿಂಸೆಯ ಲಕ್ಷಣ. ಹಿಂಸೆ ದಾಸ್ಯ ಜೀವನದ ಲಕ್ಷಣ ; ತ್ಯಾಗ ಸಹನೆಗಳು ಅಹಿಂಸೆಯ ಲಕ್ಷಣ, ಅಹಿಂಸೆ ಮಾನವ ಜೀವನದ ಸ್ವಾಭಾವಿಕ ನಿಯಮ ; ಅಹಿಂಸೆಯಿಂದ ಹೊರತಾದ ಸತ್ಯವಿಲ್ಲ ; ರಾಮರಾಜ್ಯದ ಸ್ಥಾಪನೆ, ಹಿಂಸೆ ಅಸತ್ಯಗಳಿಂದ ಅಸಾಧ್ಯ, ಅಹಿಂಸೆಯ ಸಾಮ್ರಾಜ್ಯದಲ್ಲಿ ಮಾತ್ರ ವ್ಯಕ್ತಿಸ್ವಾತಂತ್ರ್ಯ ಸಾಧ್ಯ" ಜಗತ್ತಿಗೆ ಇದೇ ಅವರ ಅಮರ ಸಂದೇಶ.

ವಿಶ್ವಭಾರತಿ ತ್ರೈಮಾಸಿಕ ಪತ್ರಿಕೆಯ ಗಾಂಧೀ ಸ್ಮಾರಕ ಸಂಚಿಕೆಗೆ, ಶ್ರೀ ರಾಯವಾಕರ್ ಎಂಬುವವರು ಬರೆದ ಲೇಖನ ಇದಕ್ಕೆ ಮೂಲ. ದೇಜಗೌ ಅವರ ಈ ಅನುವಾದ ಒಂದು ಸ್ವತಂತ್ರ ಲೇಖನದಂತೆ ಮೈ ತಳೆದಿದೆ.

ಇಂಡಿಯಾ ಸರ್ಕಾರದ ಎಜ್ಯುಕೇಷನ್ ಕ್ವಾರ್ಟರ್ಲಿಯಲ್ಲಿ ಗನ್ನರ್ ಬ್ರಾಂಡೆಲ್ ಎಂಬುವರು ಬರೆದ ಲೇಖನದ ಅನುವಾದ. ಸ್ಕಾಂಡಿನೇವಿಯ ವಿದ್ಯಾಪೀಠಗಳ ವೈಶಿಷ್ಟ್ಯವನ್ನು ಹಿರಿಮೆಯನ್ನು ಲೇಖನಿಸಿದ್ದಾರೆ. "ಅವು ನೋಡಲು ಅಂದವಾಗಿಲ್ಲದಿರಬಹುದು ಆದರೆ ಅವು ನೂರು ವರ್ಷಗಳ ತಮ್ಮ ಬಾಳಿನಲ್ಲಿ ಅಲ್ಲಿಯ ಸಮಾಜದ ಮೇಲೆ ಬೀರಿರುವ ಪ್ರಭಾವ ಅಷ್ಟಿಷ್ಟಲ್ಲ, ಆ ಶಾಲೆಗಳಲ್ಲಿ ಶುಷ್ಕವಾದ ಪಾಠಪ್ರವಚನಗಳ ಬಡಿದಾಟವಿಲ್ಲ ; ಪರೀಕ್ಷೆಗಳ ಕಾಟವಿಲ್ಲ ; ಬೇಸರ ಆಲಸ್ಯಗಳಿಗೆ ಅವಕಾಶವಿಲ್ಲ ; ಶಿಸ್ತಿನ ಹೆಸರಿನಲ್ಲಿ ದಾಸ್ಯವಿಲ್ಲ. ಶಿಕ್ಷಕರ ಸ್ನೇಹಪೂರ್ಣವಾದ ಬಾಂಧವ್ಯ ತಾಂಡವವಾಡುವ ಮಧುರ ವಾತಾವರಣವದು...... ಬಾಲ್ಯದಲ್ಲಿ ಹೆಚ್ಚು ವಿದ್ಯೆಯನ್ನು ಕಲಿಯಲು ಅವಕಾಶ ದೊರೆಯದ ವಯಸ್ಕರಿಗಾಗಿ ಅವು ಏರ್ಪಾಡಾಗಿವೆ". ಇಂಥ ವಿದ್ಯಾಪೀಠಗಳ ಮಹತ್ವವನ್ನು ಹಾಗೂ ಅವುಗಳ ಪ್ರಾಧಾನ್ಯತೆಯನ್ನು ಈ ಲೇಖನ ಎತ್ತಿ ಹಿಡಿಯುತ್ತದೆ.

ಪ್ರೊ. ದೇಜಗೌ ಅವರು ಇಂಥ ಹಲವು ವೈಶಿಷ್ಟ್ಯಪೂರ್ಣ, ವಿಚಾರಪೂರ್ಣ ಲೇಖನಗಳನ್ನು ಇದರಲ್ಲಿ ಅನುವಾದಿಸಿಕೊಟ್ಟಿದ್ದಾರೆ. ಅವರ ರಮ್ಯೋಜ್ವಲ ಶೈಲಿ ಅನುವಾದಿತ ಲೇಖನಗಳಿಗೂ ಜೀವರಸವನ್ನು ತುಂಬಿ ತರುತ್ತದೆ. ಅವರ ಅನುವಾದಿತ ಕೃತಿಯಾದ 'ಪುನರುತ್ಥಾನ' ಭಾಷಾಂತರ ಕಲೆಗೆ ಒಂದು ಒರೆಗಲ್ಲಿನಂತಿದೆ. ಭಾಷಾಂತರ ಕೇವಲ ಕೂಡಿ ಕಳೆಯುವ ಲೆಕ್ಕದಂತಲ್ಲ. ಪ್ರತಿಭಾನ್ವಿತ ವ್ಯಕ್ತಿಯೊಬ್ಬ ಬಳಸಿಕೊಳ್ಳುವ ಧಂದ್ಸಿನಂತೆ. ಎಷ್ಟೇ ಕಟ್ಟುಪಾಡುಗಳಿದ್ದರೂ ಅದರಲ್ಲಿಯೂ ಒಂದು ವೈಶಿಷ್ಟ್ಯವನ್ನು ಮೆರೆದಿರುತ್ತಾನೆ. ದೇಜಗೌ ಅವರ ಭಾಷಾಂತರ ಕಲೆ ಈ ವರ್ಗದ್ದು.

ಈ ಕೃತಿಯಲ್ಲಿ ಮೇಲೆ ಪರಿಚಯಿಸಿರುವ ಅನುವಾದಿತ ಲೇಖನಗಳೇ ಅಲ್ಲದೆ - ಸರ್ದಾರ್ ವಲ್ಲಭಬಾಯಿ ಪಟೇಲರು, ನವಭಾರತಕ್ಕೆ ನವೀನ ಶಿಕ್ಷಣ ಯೋಜನೆ, ಮಹಿಳೆಯರ ಮುನ್ನಡೆ, ನೀವು ಅಂದವಾಗಿಲ್ಲದಿರುವುದು ಕ್ಷೇಮ, ಕಾನೂನು ಮತ್ತು ಸ್ವಾತಂತ್ರ್ಯ ರಕ್ಷಣೆ, ಸುಳ್ಳು ಅವಶ್ಯಕವೆ, ಸಮೃದ್ಧಿಯ ದಾರಿಯಲ್ಲಿ, ಮಕ್ಕಳು ಮಕ್ಕಳಂತೆ ಇರುತ್ತವೆ..... ಏಕೆ ? ಮಕ್ಕಳ ಗುರು ಜಾನ್ ಡ್ಯೂಯಿ, ವಿದ್ಯಾಪೀಠಗಳ ಜನಕ ಗ್ರುಂಟ್‌ವಿಗ್, ವಿವಾಹ ಜೀವನದ ರಹಸ್ಯ, ಬೊಜ್ಜುಮೆಯ್.

ಬಿಡುವಳಿ - ಒಂದು ಸಮಸ್ಯೆ, ಪ್ರಾಣಿಗಳ ಭಾವಜೀವನ, ಹಾವುಗಳ ಬದುಕು, ಯೌವನದಲ್ಲಿ ಕಾಲಿಡುವಾಗ - ಇಷ್ಟನ್ನು ಇಲ್ಲಿ ಅನುವಾದಿಸಿ ಸಂಕಲಿಸಿದ್ದಾರೆ. ಅವುಗಳಲ್ಲಿ ಒಂದೊಂದೂ ವಿಶಿಷ್ಟ ವಿಷಯಗಳನ್ನೊಳಗೊಂಡವು, ವಿಚಾರಯುಕ್ತವಾದವುಗಳು. ಅವುಗಳನ್ನು ಪೂರ್ಣವಾಗಿ ಓದಿಯೇ ತಣಿಯಬೇಕು. ಅವೆಲ್ಲವೂ ಸ್ವತಂತ್ರ ಲೇಖನಗಳಂತೆಯೇ ಮೂಲದಿಂದ ಪರಿವರ್ತನಗೊಂಡಿವೆ. ಅನುವಾದ ಹೇಗಿರಬೇಕು ಎಂಬುದಕ್ಕೆ ಇವೆಲ್ಲವೂ ಮಾದರಿಯಾಗಿವೆ.

ಇಲ್ಲಿ ನಾನು ಅವರ ಸ್ವತಂತ್ರ ಲೇಖನಗಳ ಕಡೆಗೆ ಹೆಚ್ಚು ಗಮನ ಹರಿಸಿದ್ದೇನೆ. ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಈ ಲೇಖನಗಳು ಹಲವಾರು ವಿಷಯಗಳ ವ್ಯಾಪ್ತಿಯನ್ನು ಒಳಗೊಂಡಿವೆ. ಹೆಚ್ಚಾಗಿ ಕನ್ನಡದ ಸ್ಥಾನಮಾನ ರಕ್ಷಣೆಗಾಗಿ ನಡೆಸಿದ ಹೋರಾಟ ಮತ್ತು ನಾಡು ನುಡಿಗಳ ಬಗ್ಗೆ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳು, ನೂತನ ಶಿಕ್ಷಣ ಪದ್ಧತಿ, ಕನ್ನಡ ಭಾಷೆಯ ಇಂದಿನ ಬೆಳವಣಿಗೆ, ಕನ್ನಡ ನುಡಿಯ ಹಿರಿಮೆ. ಭಾಷಾಂತರ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಭಿಮಾನ ಮುಂತಾದ ಹಲವು ಪ್ರಮುಖ ವಿಷಯಗಳತ್ತ ಅವರ ವಿಚಾರಧಾರೆ ಹರಿದಿರುವುದನ್ನು ಕಾಣಬಹುದು.

ದೇಜಗೌ ಅವರ ಕನ್ನಡಾಭಿಮಾನ ದೊಡ್ಡದು. ಅದು ಬರಿಯ ಅಂಧಾಭಿಮಾನವಲ್ಲ. ತಿಳಿವಿನಿಂದ ಮೂಡಿಬಂದದ್ದು. ನಾಡಿನ ಪರಿಸ್ಥಿತಿಯನ್ನು ಹಾಗೂ ಅವುಗಳಿಗೆ ಸಲ್ಲತಕ್ಕ ಸ್ಥಾನಮಾನದ ಪೂರ್ಣ ಅರಿವಿನಿಂದ ಕೂಡಿಬಂದದ್ದು. ಆದ್ದರಿಂದ ಅವರು ಕನ್ನಡದ ಬಗ್ಗೆ ಏನು ಹೇಳಿದರೂ, ಎಷ್ಟೇ ಹೇಳಿದರೂ ಅಲ್ಲಿ ನಾವು ಕಾಣುವುದು ಕನ್ನಡ ಭಾಷೆಯ ಹಾಗೂ ನಾಡಿನ ಹಿತದೃಷ್ಟಿಯನ್ನೇ. ಅನೇಕರಿಗೆ ಅವರು ಹೇಳುವ ಮಾತುಗಳು ಚರ್ವಿತ ಚರ್ವಣದಂತೆ ತೋರಬಹುದು. ಭಾವುಕತೆಯಿಂದ ಕೂಡಿದ್ದೆನಿಸಬಹುದು. ಆದರೆ, ಅದರಲ್ಲಿ ಉನ್ನತಿಯ ಕ್ರಮಬದ್ಧ ಸೂತ್ರ ಅಡಗಿರುತ್ತದೆ, ಏಳಿಗೆಯ ಹೊಸ ಬೀಜ ಮೊಳೆತಿರುತ್ತದೆ, ನವನವೋನ್ಮೇಷಣೆಯ ವಿಶಾಲದೃಷ್ಟಿ ಹರಿದಿರುತ್ತದೆ, ಎನ್ನುವುದನ್ನು ಮನಗಾಣಬೇಕು. ಕಾಯಿಲೆ ಪೂರ್ಣವಾಗಿ ಗುಣವಾಗುವವರೆಗೂ ಔಷಧಿಯ ಸೇವನೆ ಅನಿವಾರ್ಯ. ಉದಾಸೀನದಿಂದ ಔಷಧಿಯ ಸೇವನೆಯನ್ನು ಬಿಟ್ಟರೆ ಕಾಯಿಲೆ ಉಲ್ಬಣಿಸುತ್ತದೆ ಅಷ್ಟೇ. ಈ ದೃಷ್ಟಿಯಿಂದ ಅವರ ಒಂದೊಂದು ಮಾತೂ ಗಮನೀಯವೇ.

ದೇಶಭಾಷೆಯ ಮಹತ್ವ ಎಂಥದು, ವಿಶ್ವವಿದ್ಯಾನಿಲಯಗಳಲ್ಲಿ, ಶಾಲೆಗಳಲ್ಲಿ ದೇಶ ಭಾಷೆಯ ಸ್ಥಾನಮಾನ ಎಷ್ಟಿರಬೇಕು ಮೊದಲಾದ ವಿಷಯಗಳನ್ನು ಮುಂದಿಟ್ಟು ಚರ್ಚಿಸಿದ್ದಾರೆ. ಅಂದರೆ ಉಳಿದ ಭಾಷೆಗಳನ್ನು ಕೈ ಬಿಡಬೇಕೆಂದು ಅವರು ಎಂದೂ ಹೇಳಿದವರಲ್ಲ. "ಮಾತೃಭಾಷೆಯ ಮೂಲಕ ಮಕ್ಕಳ ಜ್ಞಾನಕೋಶ, ಭಾವಕೋಶಗಳು ವಿಕಾಸಗೊಳ್ಳುವಂತೆ ಅನ್ಯಭಾಷೆಯ ಮೂಲಕ ಸಾಧ್ಯವಿಲ್ಲವೆಂಬ ತತ್ವವನ್ನು ಪ್ರಪಂಚದ ಹಿರಿಯ ವಿದ್ವಾಂಸರೆಲ್ಲ ಒಪ್ಪಿಕೊಂಡಿರುವವರಲ್ಲದೆ ಅದು ಪ್ರತಿಯೊಬ್ಬನ ನಿತ್ಯಾನುಭವದ ಸಂಗತಿಯೂ ಆಗಿದೆ" ಇದು ಅಗತ್ಯವಾಗಿ ಆಗಬೇಕಾದ್ದು. ಆದರೆ ಇಷ್ಟೇ ಸಾಲದು, ಕನ್ನಡ ಭಾಷೆಯ ಬೆಳವಣಿಗೆಗೆ "ಆಂಗ್ಲಭಾಷಾ ಜ್ಞಾನವೂ, ನವೀನ ರೀತಿಯ ತೋಲನ ದೃಷ್ಟಿಯೂ ಇಲ್ಲದೆ ಕನ್ನಡ ಭಾಷಾ ಸಾಹಿತ್ಯಗಳನ್ನು ಕಸಿ ಕಟ್ಟಿ ಸುಪುಷ್ಟವಾಗಿ ಬೆಳೆಯಿಸುವುದು ಅಸಾಧ್ಯ. ಪಂಡಿತ ಪರೀಕ್ಷೆಯ ವ್ಯಾಸಂಗ ಕ್ರಮ ಬೋಧನಾ ಕ್ರಮಗಳು ಪರಿಷ್ಕಾರಗೊಂಡು, ತಕ್ಕಮಟ್ಟಿಗಾದರೂ ಆಂಗ್ಲಭಾಷಾ ಜ್ಞಾನ ಸಂಪಾದನೆಗೆ ಅವಕಾಶವನ್ನು ಕಲ್ಪಿಸಿಕೊಡುವುದಾದರೆ, ಅವರ ಪಾಂಡಿತ್ಯ ಸ್ವಸಂಪೂರ್ಣವಾಗುತ್ತದೆ" ಎಂದು ಹೇಳುವಲ್ಲಿ ಅವರ ಪೂರ್ಣದೃಷ್ಟಿ

ಅರ್ಥವಾಗುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರೊ - ಚಾನ್ಸಲರ್ ಆಗಿದ್ದ ಡಾ. ಸಿ.ಆರ್. ರೆಡ್ಡಿಯವರು ಶಿಕ್ಷಣ ವ್ಯವಸ್ಥೆಯ ಬಗ್ಗೆ ಸೂಚಿಸುತ್ತಾ, ಕನ್ನಡದ ಬಗ್ಗೆಯೂ ಸೂಚಿಸಿರುವ ಕೆಲವು ಅಂಶಗಳನ್ನು ಇಲ್ಲಿ ಹೇಳಿದ್ದಾರೆ. ಡಾ. ರೆಡ್ಡಿಯವರ ಯೋಜನೆಯ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಮಾತೃಭಾಷೆ ಯಾವುದೇ ಆಗಿರಲಿ ಪ್ರಾಂತೀಯ ಭಾಷೆಯನ್ನು ಕಲಿಯಲೇಬೇಕಾಗುತ್ತದೆ. 'ಡಾ. ಸಿ.ಆರ್. ರೆಡ್ಡಿಯವರೂ ಅವರ ವರದಿಯೂ' ಎಂಬ ಮತ್ತೊಂದು ಲೇಖನದಲ್ಲಿ ಶಿಕ್ಷಣ ಸುಧಾರಣೆಯ ಬಗೆಗೆ ಅವರು ಸೂಚಿಸಿರುವ ಅಂಶಗಳನ್ನೂ ಕನ್ನಡದ ಸ್ಥಾನಮಾನದ ಬಗ್ಗೆ ಅವರು ಹೇಳಿರುವ ಕೆಲವು ಮಾತುಗಳನ್ನೂ ಇಲ್ಲಿ ಪ್ರಸ್ತಾಪಿಸಿದ್ದಾರೆ.

ಕನ್ನಡದ ಹಿರಿಮೆಯ ಬಗ್ಗೆ, ಅದರ ಸತ್ವ ಹಾಗೂ ಪ್ರಬುದ್ಧತೆಯ ಬಗ್ಗೆ ಶಂಕೆಯನ್ನು ಹೊಂದಿ ಇನ್ನೂ ಆಳುಕು ನುಡಿಯನ್ನು ಆಡುವ ಅಂಜುಬುರುಕು ಜನರನ್ನು ಕುರಿತು ಬರೆದ ಲೇಖನ - 'ರಾಜಸೇವಾಸಕ್ತರೊಬ್ಬರ ವಿಚಾರ ಧೋರಣೆ' ಎಂಬುದು. ಮರ ಹತ್ತಲು ಬಾರದಿದ್ದರೂ ಒಂದು ಪಕ್ಷ ಬಂದರೂ ಎಟುಕಿಸಿ ಎಳನೀರು ಕಿತ್ತು ಕುಡಿಯುವ ತಾಕತ್ತಿಲ್ಲದೆ ಹೋದರೆ ಮರವನ್ನೇ ದೂಷಿಸುವ ಸ್ವಭಾವದವರು. "ಕನ್ನಡ ಪ್ರಥಮ ಭಾಷೆಯಾಗುವ ಮತ್ತು ಶಿಕ್ಷಣ ಮಾಧ್ಯಮವಾಗುವ ಅರ್ಹತೆಯನ್ನು ಸಧ್ಯಕ್ಕೆ ಪಡೆದಿಲ್ಲವೆಂದು" ಹೇಳುವವರು ಈ ಜಾಯಮಾನಕ್ಕೆ ಸೇರಿದವರು. ದೇಜಗೌ ಅವರು ಇಂಥಾ ಸಂದೇಹವಾದಿಗಳಿಗೆಲ್ಲ ಕೊಟ್ಟ ಉತ್ತರ ಈ ಲೇಖನ.

ಈ ಸಂದೇಹವಾದಿಗಳು ಕೊಡುವ ಕಾರಣ : "ಕನ್ನಡ ಪ್ರಥಮ ಭಾಷೆಯಾದರೆ ಪಂಪ ರನ್ನ ಮೊದಲಾದವರ ಕಾವ್ಯಗಳನ್ನು ವ್ಯಾಸಂಗ ಮಾಡುವುದಕ್ಕೆ ಇಂಗ್ಲೀಷಿನಲ್ಲಿರುವಂತೆ ವಿಮರ್ಶಾಗ್ರಂಥಗಳ ಸೌಕರ್ಯವಿಲ್ಲ........ ಒಟ್ಟು ಭಾರತಕ್ಕೆ ಸಮಾನವಾಗಿ ಪಾರಿಭಾಷಿಕ ಪದಗಳ ಪ್ರಯೋಗವನ್ನು ಗೊತ್ತು ಮಾಡುವವರೆಗೂ ಬಹುಶಃ ಕನ್ನಡ ಮಾಧ್ಯಮವನ್ನು ಶಾಸ್ತ್ರಭಾಗಕ್ಕೆ ಅನ್ವಯಿಸುವುದು ಸಾಧ್ಯವಾಗದೇ ಹೋಗಬಹುದು....... ಎಷ್ಟು ಶಾಸ್ತ್ರಗಳನ್ನು ಕನ್ನಡ ಮಾಧ್ಯಮದ ಮೂಲಕ ಕಲಿಸಬಹುದು ?" - ಇವೇ ಮುಂತಾದ ಸಂದೇಹಗಳು ಅವರವು. ದೇಜಗೌ ಅವರು ಈ ಎಲ್ಲಾ ಸಂದೇಹಗಳಿಗೂ ಸೂಕ್ತ ಸಲಹೆ ಇತ್ತಿರುವುದನ್ನು ಇಲ್ಲಿ ಕಾಣಬಹುದು. ಹೀಗೆ ಹೆದರುವವರ ಮೇಲೆ ಕಪ್ಪ ಎಸೆಯುವ ಮನೋಭಾವದವರಿಗೆ ಅವರು ದೃಢವಾಗಿ ಹೇಳುವ ಮಾತು ಇದು. "ಕನ್ನಡ ಸಾಹಿತ್ಯ ಸರ್ವತೋಮುಖವಾಗಿ ಬೆಳೆದಿದೆ, ಬೆಳೆಯುತ್ತಿದೆ. ಕನ್ನಡ ಪ್ರಥಮ ಭಾಷೆಯಾಗುವ ಮಾಧ್ಯಮವಾಗುವ ಶಕ್ತಿ ಸಾಮರ್ಥ್ಯಗಳನ್ನು ಪಡೆದಿದೆ, ಪಡೆಯುತ್ತಿದೆ. ಅಭಿಮಾನದ ಮಾತಲ್ಲ, ಇದು ಸತ್ಯಸ್ಯ ಸತ್ಯವಾದ ಮಾತು."

ಶಿಕ್ಷಣ ತತ್ವದ ತರಗತಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಮಾಧ್ಯಮ ಎಂಬ ವಿಷಯದ ಬಗ್ಗೆ ಪ್ರೊ. ಎ.ಸಿ. ದೇವೇಗೌಡರ ನೇತೃತ್ವದಲ್ಲಿ ಜರುಗಿದ ಚರ್ಚಾಗೋಷ್ಠಿಯ ವಿವರಗಳನ್ನು ಇದರಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಶಿಕ್ಷಣ ಮಾಧ್ಯಮ ಯಾವುದಿರಬೇಕು ಎಂಬುದರ ಬಗ್ಗೆ ಪರ - ವಿರೋಧವಾಗಿ ನಡೆದ ಸ್ವಾರಸ್ಯವಾದ ಚರ್ಚೆಯ ವರದಿ ಇಲ್ಲಿದೆ. ಕೊನೆಯಲ್ಲಿ ಒಪ್ಪಿಗೆ ಪಡೆದ ತೀರ್ಮಾನಗಳಲ್ಲಿ "ವಿಶ್ವವಿದ್ಯಾನಿಲಯದಲ್ಲಿ ದೇಶ ಭಾಷೆ ಇಂಗ್ಲೀಷಿನ ಸ್ಥಾನಕ್ಕೇರಬೇಕು. ಈ ಕೂಡಲೇ ಪ್ರೈಮರಿ ಮೂರನೆಯ ತರಗತಿಯಿಂದ ಎಲ್ಲಾ ಶಾಲೆಗಳಲ್ಲಿಯೂ ಕನ್ನಡವನ್ನು ಕಡ್ಡಾಯವಾಗಿ ಜಾರಿಗೆ ತಂದರೆ ೯ ವರ್ಷಗಳ ಕೊನೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸಂಪೂರ್ಣವಾಗಿ

ಶಿಕ್ಷಣ ಮಾಧ್ಯಮವಾಗುತ್ತದೆ" - ಎಂಬುದೂ ಒಂದು. ಇದು ೧೯೫೨ರಲ್ಲಿ ಆದ ತೀರ್ಮಾನ. ಆದರೆ ಎರಡು ದಶಕಗಳು ಕಳೆಯುತ್ತಾ ಬಂದರೂ ಸಂಪೂರ್ಣವಾಗಿ ವಿಶ್ವವಿದ್ಯಾನಿಲಯಗಳಲ್ಲಿ ಕಾರ್ಯಗತವಾಗದೇ ಹೋಗಿರುವುದು ದುರ್ದೈವದ ಸಂಗತಿ. ಮೇಲಿನ ನಿರ್ಣಯಗಳ ಹಿಂದೆ ಪ್ರಾಮಾಣಿಕತೆ ಇದೆ, ಸಮನ್ವಯ ದೃಷ್ಟಿಯಿದೆ, ಔದಾರ್ಯವಿದೆ. ಮೇಲಾಗಿ ಯುವಕರ ಮತ್ತು ನಾಡಿನ ಶ್ರೇಯೋಭಿವೃದ್ಧಿಯನ್ನು ಸಾಧಿಸುವ ತೀವ್ರಾಭಿಲಾಷೆಯಿದೆ" ಎಂಬ ದೇಜಗೌ ಅವರ ಅಭಿಪ್ರಾಯ ಸರ್ವಸಮ್ಮತವಾದುದಾಗಿದೆ.

'ಶಿಕ್ಷಣ ಮಾಧ್ಯಮ ವಿಚಾರದ ಮುನ್ನಡೆ' ಮತ್ತೊಂದು ವಿಚಾರಪೂರಿತ ಲೇಖನ. ಸಮಾಜದ ವ್ಯವಸ್ಥೆಯನ್ನೇ ಅರಿಯದವರು, ಸಮಾಜ ಸುಧಾರಣೆಯ ಬಗ್ಗೆ ಮಾತನಾಡಲು ಹೋಗುತ್ತಾರೆ. ಸಲಹೆ ನೀಡಲು ಮುಂದಾಗುತ್ತಾರೆ. ಭಾಷೆಯ ಮಹತ್ವವನ್ನೇ ಅರಿಯದ ಜನರು ಹೀಗೆ ಬೆಲೆಯಿಲ್ಲದ ತರ್ಕಕ್ಕೆ ತೊಡಗುತ್ತಾರೆ. ಅದರಲ್ಲಿ ಸತ್ವ ಎಷ್ಟಿರುತ್ತದೆ ಎಂಬುದು ಅವರಿಗೆ ಗೊತ್ತಾಗಬೇಕು. ಶಿಕ್ಷಣ ಮಾಧ್ಯಮದ ಅವಶ್ಯಕತೆಯನ್ನು ಕುರಿತು ನಾಡಿನ ಹಿರಿಯರೂ, ವಿದ್ವನ್ಮಣಿಗಳು ನಿರಂತರವಾಗಿ ಸಲಹೆ ನೀಡುತ್ತಾ ಬಂದಿದ್ದರೂ ನಮ್ಮಲ್ಲಿ ಇನ್ನೂ ಕೆಲವರಿಗೆ ಅದು ಹಿಡಿಸದೇ ಇರುವುದಕ್ಕೆ ಕಾರಣವನ್ನು ಹುಡುಕಬೇಕಾಗಿದೆ. ಡಾ. ರಾಜೇಂದ್ರ ಪ್ರಸಾದರಂಥವರು "ಮಾತೃ ಭಾಷೆಯ ಮೂಲಕವೇ ವಿದ್ಯಾಭ್ಯಾಸವನ್ನು ನಡೆಸದಿದ್ದರೆ ರಾಷ್ಟ್ರದ ಪ್ರಗತಿಗೆ ಬಹುಮಟ್ಟಿಗೆ ಅಡಚಣೆಯಾಗುವುದು" ಎಂದು ಸಾರಿ ಸಾರಿ ಹೇಳಿದ್ದರೂ, ಅವರ ಮೊಂಡು ವಾದಕ್ಕೇ ಅವರು ಬಲಿಯಾಗುತ್ತಾರೆ.

ಕನ್ನಡದ ಬಗ್ಗೆ ಇನ್ನೂ ಅನುಮಾನವನ್ನು ವ್ಯಕ್ತಪಡಿಸುವವರನ್ನು ಕಂಡಾಗ ದೇಜಗೌ ಅವರ ಮನ ಮರುಗುತ್ತದೆ, ಹಲವೊಮ್ಮೆ ಕಿಡಿಯಾಗುತ್ತಾರೆ. "ಸ್ವಾತಂತ್ರ್ಯ ಪೂರ್ವ ಕಾಲದಲ್ಲಿಯೇ ಆರಂಭವಾದ ಶಿಕ್ಷಣ ಮಾಧ್ಯಮದ ಮತ್ತು ಪ್ರಥಮ ಭಾಷೆಯ ವಿಷಯದ ಚರ್ಚೆ ಇನ್ನೂ ಕೊನೆ ಮುಟ್ಟಿಲ್ಲದಿರುವುದು ಭರತ ಖಂಡದ ದುರ್ದೈವ" ಎನ್ನುತ್ತಾರೆ. ತಿರುಳಿಲ್ಲದ ವಾದಗಳನ್ನು ತಳುಕಾಗಿ ಹೂಡಿ ಸಾಮಾನ್ಯರ ಮನಸ್ಸನ್ನು ಹದಗೆಡಿಸುವುದು ಇಂದು ಕೆಲವರಿಗೆ ಚಾಳ್ಯವಾಗಿ ಬಿಟ್ಟಿದೆ. "ಜನತೆಯ ಕಲ್ಯಾಣದ ದೃಷ್ಟಿಯಿಂದ ಇಂಥ ಹಾನಿಮೂಲವಾದ ಅಭಿಪ್ರಾಯಗಳನ್ನು ತಿದ್ದಿ, ಜನತೆಯ ಅಭಿರುಚಿಯನ್ನು ಪರಿಷ್ಕಾರಗೊಳಿಸಿ ನ್ಯಾಯವಾದ ಮಾರ್ಗದಲ್ಲಿ ನಡೆಸಿಕೊಂಡು ಹೋಗುವುದು ಕನ್ನಡ ಪತ್ರಿಕೆಗಳ ಕರ್ತವ್ಯ" ಎಂಬುದು ದೇಜಗೌ ಅವರ ಖಚಿತಾಭಿಪ್ರಾಯ.

ಈ ಲೇಖನದಲ್ಲಿ ಇನ್ನೂ ಕೆಲವು ಪ್ರಮುಖರ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಶಿಕ್ಷಣ ಮಾಧ್ಯಮದ ಬಗೆಗೆ ಅವರುಗಳಿಗಿರುವ ಖಚಿತಾಭಿಪ್ರಾಯಗಳನ್ನು ಕ್ರೋಢೀಕರಿಸಿದ್ದಾರೆ.

ಕನ್ನಡ ಮಾಧ್ಯಮದ ವಿಷಯ ಬಂದಾಗಲೆಲ್ಲಾ ದೇಜಗೌ ಮೈಯೆಲ್ಲ ಕಿವಿಯಾಗಿ ನಿಲ್ಲುತ್ತಾರೆ. ಅದರ ವಿರುದ್ಧ ವರ್ತಿಸುವವರನ್ನು ಕಂಡಾಗ ಅವರ ಮೈಮನವೆಲ್ಲ ರೋಷ ಜ್ವಾಲೆಯಿಂದ ಸೆಟೆದು ನಿಲ್ಲುತ್ತದೆ. ತಕ್ಷಣ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಗೊಳಿಸುತ್ತದೆ. ಅವರ ಬಹುತೇಕ ಲೇಖನಗಳಲ್ಲಿ ಈ ಅಂಶ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು. ೧೯೫೩ರ ವಿಶ್ವವಿದ್ಯಾನಿಲಯದ ಅಕ್ಯಾಡೆಮಿಕ್ ಕೌನ್ಸಿಲ್, ಇಂಟರ್‌ಮೀಡಿಯೇಟ್ ದರ್ಜೆಯಲ್ಲಿ ಕನ್ನಡ ವನ್ನು ಮಾಧ್ಯಮವಾಗಿ ಬಳಸಲಾಗುವುದಿಲ್ಲವೆಂಬ ತೀರ್ಮಾನವನ್ನು ಕೈಗೊಂಡುದನ್ನು ತಿಳಿದಾಗ ದೇಜಗೌ ಖೇದದಿಂದ ತಮ್ಮ ಅಭಿಪ್ರಾಯವನ್ನು ಹೊರಗೆಡಹಿದ್ದಾರೆ. ಇದು ನಿಜವಾಗಿಯೂ ಶೋಚನೀಯವಾದ ವಿಚಾರ. ಹಿಂದಿನಿಂದ ದೇಶ ವಿದೇಶಗಳಲ್ಲಿ ಶಿಕ್ಷಣ ತಜ್ಞರೆಲ್ಲ ಒಕ್ಕೊರಲಿ ನಿಂದ ದೇಶ ಭಾಷೆಯ ಶಿಕ್ಷಣ

ಮಾಧ್ಯಮವಾಗಬೇಕೆಂದು ಒಪ್ಪಿಕೊಂಡಿದ್ದಾರೆ...... ಈ ವಿಷಯದಲ್ಲಿ ಗಾಂಧೀಜಿ ಹೇಳಿಯಾಯಿತು, ಸರದಾರರು ಹೇಳಿ ಆಯಿತು, ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಹೇಳಿ ಆಯಿತು ; ಹೇಳಬೇಕಾದವರೆಲ್ಲ ಖಚಿತವಾದ ನಿಷ್ಪಕ್ಷವಾದ ಅಭಿಪ್ರಾಯ ವನ್ನು ನಿಸ್ಪೃಹತೆಯಿಂದ ದೇಶದ ಹಿತದೃಷ್ಟಿಯಿಂದ ನೀಡಿದ್ದಾರೆ. ಈ ವಿಷಯವನ್ನು ಕುರಿತು ಮಾತನಾಡಬಾರದವರು ಮಾತನಾಡಲು ಅರ್ಹತೆಯಿಲ್ಲ ಏನೋನೋ ಮಾತನಾಡುತ್ತಿದ್ದಾರೆ.

'ಕನ್ನಡ ಕೂಡಲೆ ಶಿಕ್ಷಣ ಮಾಧ್ಯಮವಾಗಲಿ' ಎಂಬುದರ ಬಗೆಗೆ ಮೈಸೂರು ವಿಶ್ವವಿದ್ಯಾ ನಿಲಯದ ಸೆನೆಟ್ ಸಭೆ ಚರ್ಚಿಸಿ ತನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ ಸಂದರ್ಭದ ಕೆಲವರ ಹೇಳಿಕೆಗಳನ್ನು ಇಲ್ಲಿ ಉದ್ಧರಿಸಿ ತಮ್ಮ ನಿಲುವನ್ನು ಸ್ಪಷ್ಟೀಕರಿಸಿದ್ದಾರೆ. ಕನ್ನಡ ಶಿಕ್ಷಣ ಮಾಧ್ಯಮ ವಾಗುವುದು ಬೇಡ ಎನ್ನುವವರು ಸ್ವಾರ್ಥಿಗಳು, ಒಳ ಬಂಡವಾಳವಿಲ್ಲದವರು. ಕನ್ನಡ ಮಾಧ್ಯಮ ವಾಗುವ ತನಕ ಸಾಮಾನ್ಯ ಜನತೆಯ ಜ್ಞಾನದ ಮಟ್ಟ ಏರಲಾರದು, ವಿದ್ಯಾರ್ಥಿಗಳ ಶ್ರಮ ಕಡಿಮೆಯಾಗದು, ಅವರ ಜ್ಞಾನ ಕೋಶ ವಿಕಾಸಗೊಳ್ಳದು. ಒಟ್ಟಿನಲ್ಲಿ ನಾಡು ಶೀಘ್ರವಾಗಿ ಅಭಿವೃದ್ಧಿ ಹೊಂದಲಾರದು ಎಂಬ ದೇಶದ ಹಿತಚಿಂತನೆಯನ್ನು ಹೊಂದಿದವರು. ಆದರೆ ಕನ್ನಡ ಮಾಧ್ಯಮದ ವಿರೋಧಿಗಳ ದೃಷ್ಟಿಯೇ ಬೇರೆ ! ಆಂಗ್ಲ ಭಾಷೆಯ ಮೂಲಕ ತಮ್ಮ ಕೆಲಸ ಹೇಗೋ ಹಾಗೆ ಆಗಿ ಹೋಗುತ್ತಲ್ಲ, ಕನ್ನಡ ಮಾಧ್ಯಮವಾದರೆ ತಮ್ಮ "ಪರೀಕ್ಷೆ" ನಡೆಯುತ್ತದಲ್ಲ ಎಂಬ ಸಂಕಟ ಕನ್ನಡ ವಿರೋಧಿಗಳದು". ಬಹುಶಃ ಇದೇ ನಿಜವಾದ ಕಾರಣವೆನ್ನಿಸುತ್ತದೆ. ಇಲ್ಲವಾದರೆ ಹೆತ್ತ ತಾಯನ್ನು ದೂರ ನೂಕಲು ಯಾರು ಇಚ್ಛಿಸುತ್ತಾರೆ?

ದೇಶಭಾಷೆ ಶಿಕ್ಷಣ ಮಾಧ್ಯಮವಾಗುವುದರ ಬಗೆಗೆ ಶ್ರೀ ಕೆ. ಎಂ. ಮುನ್ಷಿಯವರು ಶಂಕೆಯನ್ನು ವ್ಯಕ್ತಪಡಿಸಿ, "ಆಂಗ್ಲ ಭಾಷೆಯೇ ಸಾರೋದ್ಧಾರವಾಗಿ ನಮ್ಮನ್ನು ಆಳುತ್ತಿರಲಿ, ಇಲ್ಲದಿದ್ದರೆ ಅದರ ಸ್ಥಾನಕ್ಕೆ ಹಿಂದಿ ಬಂದು ನಿಲ್ಲಲಿ, ಉತ್ತರದ ಕೆಲವು ಸಂಸ್ಥಾನಗಳು ಮತ್ತು ದಕ್ಷಿಣದ ಎಲ್ಲ ಸಂಸ್ಥಾನಗಳು ಹಿಂದಿಯನ್ನು ವಿರೋಧಿಸುತ್ತಿವೆ. ಇವನ್ನೆಲ್ಲ ಕೇಂದ್ರ ಸರಕಾರ ಎಚ್ಚರಿಕೆಯಿಂದ ಗಮನಿಸಬೇಕು" ಎಂದು ಎಚ್ಚರಿಕೆಯ ಮಾತನ್ನಿಟ್ಟು ಆಡಿರುವ ಮುನ್ಷಿಯವರ ಅಭಿಪ್ರಾಯವನ್ನು ತೀವ್ರವಾಗಿ ಖಂಡಿಸಿ ಉತ್ತರ ನೀಡಿದ್ದಾರೆ. ಪ್ರಮುಖರೆನಿಸಿಕೊಂಡ ಇಂಥಾ ಮುಂದಾಳುಗಳು ದೇಶದ ಸ್ಥಿತಿ ಗತಿಗಳನ್ನು, ಭಾಷೆಯ ಸ್ಥಾನಮಾನವನ್ನು ಅರಿಯದಷ್ಟು ಅಂಧರಾದಾಗ ಎಚ್ಚೆತ್ತ ಜನ ಇಂಥವರಿಗೆ ಸದಾ ಚುರುಕನ್ನು ಮುಟ್ಟಿಸುತ್ತಿರಬೇಕಾಗುತ್ತದೆ. ದೇಜಗೌ ಅವರು ಅಂಥ ಕೆಲಸವನ್ನು ಉದ್ದಕ್ಕೂ ಚ್ಯುತಿ ಬಾರದಂತೆ ಮಾಡಿಕೊಂಡು ಬಂದಿದ್ದಾರೆ. ಮುನ್ಷಿಯವರ ತಿರುಳಿಲ್ಲದ ಮಾತಿಗೆ ದೇಜಗೌ ಅವರ ಉತ್ತರ ಸ್ಪಷ್ಟವಾಗಿದೆ. ದೇಜಗೌ ಅವರ ಮಾತು ತುಂಬಾ ಕಠಿಣವಾದುದೆಂಬಂತೆ ತೋರಿದರೂ ಅಂಥವರಿಗೆ ಅರ್ಥವಾಗುವ ಭಾಷೆಯೇ ಅದೆನ್ನಿಸುತ್ತದೆ.

"ಮುನ್ಷಿ ಮಹಾಶಯರಾಗಲೀ ಅವರಂಥ ಪ್ರತಿಗಾಮಿ ಮನೋಧರ್ಮದ ಗುಂಪಿಗೆ ಸೇರಿದ ಜನರಾಗಲೀ ಹೀಗೆ ದೇಶಭಾಷೆ ಮಾಧ್ಯಮದ ವಿರುದ್ಧವಾಗಿ ಮಾತನಾಡುವುದನ್ನು ನೋಡಿದರೆ ಅವರು ಸಂಪ್ರದಾಯ ಶರಣರಾದ ಪ್ರತಿಗಾಮಿ ಪಕ್ಷದವರು ಇಲ್ಲವೆ ಶಿಕ್ಷಣ ಸಮಸ್ಯೆಯನ್ನು ಸರ್ವಾಂಕಷವಾಗಿ ಅರ್ಥಮಾಡಿಕೊಂಡಿರದ ಅಪರಿಣಿತರು. ಇಲ್ಲವೆ ಜನತೆಯ ಆಶೋತ್ತರಗಳನ್ನು ಲಕ್ಷಿಸದ ಶ್ರೀಮಂತ ಮನೋಧರ್ಮದ ಮಹನೀಯರೆಂದು ಭಾವಿಸಲು ಅವಕಾಶವಾಗುತ್ತದೆ". ಎಂಬ ಮಾತು ಸತ್ಯಸ್ಯಸತ್ಯವಾದುದಾಗಿದೆ. ದೇಶ ಭಾಷಾ ಮಾಧ್ಯಮದ ಬಗೆಗೆ ವಿರೋಧ ಕಂಡು

ಬರುವೆಡೆಯಲ್ಲೆಲ್ಲಾ ಈ ಅಂಶಗಳನ್ನು ಕಾಣುವಂತೆ, ಅದರ ಇನ್ನೊಂದು ಮುಖದಲ್ಲಿಯೇ ದೇಜಗೌ ಅವರ ಉದ್ರಿಕ್ತ ನುಡಿಗಳನ್ನು, ವಿಚಾರಪೂರಿತ ಅಭಿಪ್ರಾಯಗಳನ್ನು ಕಾಣಬಹುದು. ಅವರು ನಿರಂತರವಾಗಿ ಕನ್ನಡ ಮಾಧ್ಯಮದ ಬಗೆಗೆ, ಅವಶ್ಯಕತೆಯ ಬಗೆಗೆ ತಮ್ಮ ದಿಟ್ಟ ಹಾಗೂ ಸ್ಪಷ್ಟ ನಿಲುವನ್ನು ಸೂಚಿಸುತ್ತಾ ಬಂದಿದ್ದಾರೆ. ಅವುಗಳನ್ನು ವಿಚಾರವಂತಿಕೆಯುಳ್ಳ ಯಾರೂ ತಳ್ಳಿ ಹಾಕಲಾರರು.

ಭಾಷಾಭಿಮಾನ, ಪ್ರಾಂತಾಭಿಮಾನ - ಎಂಬುವು ದೊಡ್ಡವು. ವಿಶೇಷ ಸಂಸ್ಕಾರದಿಂದ ಒಬ್ಬ ವ್ಯಕ್ತಿಯಲ್ಲಿ ನೆಲಸುವಂಥವು. ಎಂದರೆ ಅವು ಸಮಗ್ರ ರಾಷ್ಟ್ರದ ದೃಷ್ಟಿಯಿಂದ ಮಾರಕವಾಗುವಂತಿರಬಾರದು. ಅದರ ಮುನ್ನಡೆಗೆ ಪೂರಕವಾಗಿರಬೇಕು ಅಷ್ಟೇ. ಇಂಥ ವಿಶಾಲಾರ್ಥವನ್ನು ಹೊಂದಿ 'ತನ್ನ ಭಾಷೆ, ತನ್ನ ಪ್ರಾಂತ' ಎಂಬ ಅಭಿಮಾನ ಪ್ರತಿಯೊಬ್ಬನಲ್ಲಿಯೂ ಇರಬೇಕಾದ್ದೇ. ತನ್ನ ಪ್ರಾಂತ ವಿಶಾಲಗೊಂಡರೆ, ತನ್ನ ಭಾಷೆ ಬೆಳೆದು ಉಜ್ವಲ ಸ್ಥಿತಿಯನ್ನು ಹೊಂದಿದರೆ, ಅವುಗಳ ಅಭಿಮಾನಿಯಾದ ಪ್ರತಿಯೊಬ್ಬನ ಮನಸ್ಸೂ ಅರಳುತ್ತದೆ, ಸಂತೋಷ ಮುಗಿಲು ಮುಟ್ಟುತ್ತದೆ, ದೃಷ್ಟಿ ವಿಶಾಲವಾಗುತ್ತದೆ. ಇವುಗಳನ್ನು ಸದಾ ಎಚ್ಚೆತ್ತಿರುವ ವ್ಯಕ್ತಿ ತಕ್ಷಣ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾನೆ, ಸಂತೋಷವನ್ನು ತೋರ್ಪಡಿಸುತ್ತಾನೆ. ಇದು ಜೀವಂತ ವ್ಯಕ್ತಿಯ ಲಕ್ಷಣವೂ ಹೌದು.

ಬಳ್ಳಾರಿ ಜಿಲ್ಲೆ ಮೈಸೂರು ಸಂಸ್ಥಾನದ ಆಡಳಿತ ವರ್ಗಕ್ಕೆ ಸೇರ್ಪಡೆಯಾದಾಗ, ಅಲ್ಲಿಯ ಏಳು ಲಕ್ಷ ಮಂದಿ ಕನ್ನಡಿಗರು ಕನ್ನಡಿಗರೊಡನೆ ಸರ್ವವಿಧದಲ್ಲಿಯೂ ಒಂದಾದಾಗ ಕನ್ನಡಿಗರು ವ್ಯಕ್ತಪಡಿಸಿದ ಸಂತೋಷ ಅಷ್ಟಿಷ್ಟಲ್ಲ. ಬಳ್ಳಾರಿ ಕನ್ನಡಿಗ, ಕನ್ನಡಿಗರೊಡನೆ ಬೆರೆತಾಗ, ಮೈಸೂರು ಕನ್ನಡಿಗರು ಅವರನ್ನು ಹರ್ಷೋದ್ಗಾರಗಳೊಡನೆ ಸ್ವಾಗತಿಸಿ ತಮ್ಮ ಹೃದಯವಂತಿಕೆಯನ್ನು ತೋರ್ಪಡಿಸಿದ ದಿನ ಒಂದು ಸುದಿನವಾಗಿದೆ (ಇಂಥ ಸಂದರ್ಭ). ಇಂಥಾ ಸಂದರ್ಭದಲ್ಲಿ ದೇಜಗೌ ಅವರು ಅಭಿವ್ಯಕ್ತಿಸಿರುವ ಅಭಿಪ್ರಾಯಗಳು ಚಿರಸ್ಮರಣೀಯವಾದವುಗಳಷ್ಟೇ ಅಲ್ಲ, ವಿಶಾಲ ಹೃದಯದಿಂದ ದೀಪ್ತಗೊಂಡು ಬಂದಂಥವುಗಳು, "ಇಂತಹ ಮಿಲನಕ್ಕೆ ಕಾರಣಕರ್ತ ರಾದ ಜನನಾಯಕರ ವಿಷಯದಲ್ಲಿ ಕೃತಜ್ಞತೆಯನ್ನು ಮೊದಲು ನಾವು ಸಲ್ಲಿಸಬೇಕಾಗಿದೆ. ಕನ್ನಡ ನಾಡು, ನುಡಿಗಳ ವಿಷಯದಲ್ಲಿಯೂ ಕನ್ನಡಿಗರ ಇತಿಹಾಸ, ಸಾಹಿತ್ಯ, ಸಂಸ್ಕೃತಿಯ ವಿಷಯದಲ್ಲಿಯೂ ಅಪೂರ್ವವಾದ, ಅನ್ಯಾದೃಶವಾದ ಶ್ರದ್ಧಾ ಭಕ್ತಿಗಳನ್ನು ತೋರಿ 'ನಾವೆಲ್ಲ ಒಂದು' ಎಂಬ ಅಭಿಪ್ರಾಯವನ್ನು ಕನ್ನಡ ಮಹಾಜನರಲ್ಲಿ ಮುಖ್ಯವಾಗಿ ಬಳ್ಳಾರಿಯ ಕನ್ನಡಿಗರಲ್ಲಿ ಸರಿಯಾದ ರೀತಿಯಲ್ಲಿ ರೂಪುಗೊಳಿಸಿ ಅವರಿಂದ ನ್ಯಾಯ ಸಮ್ಮತವಾದ ಸೇರ್ಪಡೆಗೆ ಒಮ್ಮತ ದೊರೆಯುವಂತೆ ನೋಡಿಕೊಂಡ ನಮ್ಮ ಜನ ನಾಯಕರನ್ನು ನಾವು ಕೃತಜ್ಞತೆಯಿಂದ ನೆನೆಯುತ್ತೇವೆ.... ಸ್ನೇಹ ಮತ್ತು ವಿಶ್ವಾಸ ಎನ್ನುವುದು ಎಲ್ಲಕ್ಕಿಂತ ದೊಡ್ಡ ವಸ್ತು. ಬಳ್ಳಾರಿಯ ಜನ ಮೈಸೂರಿನ ವಿಷಯದಲ್ಲಿ ತೋರಿಸಿರುವ ಸ್ನೇಹ ಅನುಕರಣೀಯವಾದದ್ದು, ವಿಶ್ವಾಸ ಅಮೂಲ್ಯವಾದದ್ದು. ಅವರ ಈ ಸ್ನೇಹಕ್ಕೆ ಪ್ರತಿಯಾಗಿ ನಾವು ಮರಳಿ ನಮ್ಮ ಕಟ್ಟೆರಕದ ಬಂಧು ಸ್ನೇಹವನ್ನು ತೋರಿ ಪ್ರೀತಿಯ ಸ್ವಾಗತ ಬಯಸಿ ಬಳ್ಳಾರಿಯ ಬಾಂಧವರನ್ನು ಬರಮಾಡಿಕೊಳ್ಳಬೇಕು. ಇಂಥಾ ಕೃತಜ್ಞತಾ ಪೂರ್ವಕ ಹೃದಯ ವೈಶಾಲ್ಯದ ಜನ ವಿರಳವೆಂದೇ ಹೇಳಬೇಕು. ಈ ಸೇರ್ಪಡೆಯೇ ನಾಂದಿಯಾಗಿ ಅಖಂಡ ಕರ್ನಾಟಕ ಪ್ರಾಂತವೊಂದು ರೂಪುಗೊಳ್ಳುವ ಸುದಿನ ಬೇಗ ಬೇಗನೆ ಉದಯವಾಗಲಿ ಎಂದು ಹಾರೈಸುತ್ತೇನೆ"

ಎಂಬ ಅವರ ಹಾರೈಕೆಯ ನುಡಿ ಅವರ ವ್ಯಕ್ತಿತ್ವಕ್ಕೆ ಒರೆಗಲ್ಲು.

ತನ್ನವರು, ತನ್ನ ಸಂಸಾರ ಚೆನ್ನಾಗಿರಬೇಕು ಎಂದು ಆಶಿಸಿದರೆ, ಉಳಿದವರು ಬಾಳಬಾರದು ಬದುಕಬಾರದು ಎಂದರ್ಥವಲ್ಲ. ಭಾಷಾವಾರು ಪ್ರಾಂತ ನಿರ್ಮಾಣ ಅಗತ್ಯ. ಆದರೆ ಅದು ಸಂಕುಚಿತವಾಗಬಾರದು. ಈ ಬಗ್ಗೆ ದೇಜಗೌ ಅವರ ಅಭಿಪ್ರಾಯ ಸ್ಪಷ್ಟವಾಗಿದೆ. "ನಮ್ಮ ಪ್ರಾಂತಾಭಿಮಾನ ರಾಷ್ಟ್ರಾಭಿಮಾನಕ್ಕೆ ಮುಳುವಾಗದಂತೆ ನಾವು ನೋಡಿಕೊಳ್ಳಬೇಕು. ಒಂದು ಭಾಷೆಯನ್ನಾಡುವವರು ಇನ್ನೊಂದು ಭಾಷೆಯನ್ನಾಡುವವರ ವಿಷಯದಲ್ಲಿ ಸೌಹಾರ್ದದಿಂದ ವರ್ತಿಸುವುದನ್ನು ಕಲಿಯಬೇಕು". ಎಂಬ ವಿಶಾಲ ದೃಷ್ಟಿ ಸರ್ವಾದರಣೀಯವಾದದ್ದು.

'ಭಾರತೀಯ ಪ್ರಾಂತಗಳ ಮೇಲೆ ಕರ್ನಾಟಕದ ಪ್ರಭಾವ' - ಈ ಸಂಕಲನದ ಮತ್ತೊಂದು ವೈಶಿಷ್ಟ್ಯಪೂರ್ಣ ಲೇಖನ. ಕರ್ನಾಟಕದ ಮಹಿಮಾತಿಶಯಗಳನ್ನೆಲ್ಲ ವಿಶದವಾಗಿ ಬಣ್ಣಿಸುತ್ತ ಅದು ಭಾರತದ ಉಳಿದ ಪ್ರಾಂತಗಳ ಮೇಲೆ ಬೀರಿರುವ ಪ್ರಭಾವವನ್ನು ಅಂಕಿ ಅಂಶಗಳ ಸಹಿತ ಇಲ್ಲಿ ಛಟ್ಟಿ ತಿಳಿಸಿದ್ದಾರೆ. ಕರ್ನಾಟಕದ ಪ್ರಾಚೀನತೆಯನ್ನು ಹಲವಾರು ಆಧಾರಿತ ಅಂಶಗಳಿಂದ ಪತ್ತೆ ಹಚ್ಚುವ ಪ್ರಯತ್ನ ಮಾಡಿದ್ದಾರೆ. ಪ್ರಾಚೀನವಾದ ಕರ್ನಾಟಕ, ರಮ್ಯೋಜ್ವಲ ವಾದ ಇತಿಹಾಸದಿಂದ ಕೂಡಿ ತನ್ನ ಪ್ರಭಾವವನ್ನು ಭಾರತದ ಇತರ ಪ್ರಾಂತಗಳ ಮೇಲೆ ಗಾಢವಾಗಿ ಬೀರಲು ಅದಕ್ಕಿರುವ ವಿಶಿಷ್ಟ ಲಕ್ಷಣಗಳಾದರೂ ಏನು ? ಎಂಬ ಪ್ರಶ್ನೆಗೆ ದೇಜಗೌ ಅವರ ಬರಹ ತಕ್ಕ ಉತ್ತರಗಳನ್ನು ನೀಡುತ್ತದೆ. "ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನ ಇಂಪುಗಳ್ಗೆ ಆಗರಮಾದ ಮಾನಿಸರ ಮಹಾ ಮಾತೃವೃಕ್ಷ. ದ್ವೈತ, ಅದ್ವೈತ, ಜೈನ, ಬೌದ್ಧ, ಶೈವ, ವೀರಶೈವ ಧರ್ಮಗಳ ಮಹಾ ಸಂಗಮ ; ಸರ್ವ ಜನ ಮನೋಲ್ಲಾಸಿಗಳಾದ ಅಭೂತಪೂರ್ವ ಕಲಾ ವಿಭೂತಿಗಳ ಪುಣ್ಯಭೂಮಿ ; ಶೌರ್ಯ, ಔದಾರ್ಯ, ಗಾಂಭೀರ್ಯ ಗಳಿಂದ, ವಿಶಾಲ ಹೃದಯ ಭವ್ಯ ಬುದ್ಧಿಮತ್ತೆಗಳಾದ ಜಗನ್ನೇತ್ರಗಳನ್ನು ತಮ್ಮತ್ತ ಸೆಳೆದ ಮಹಾಕಲಿಗಳೂ ಮಹಾ ಸಾಹಿತ್ಯ ಕಲಾ ಪೋಷಕರೂ ಸಾಧನೆ ಸಿದ್ಧಿಗಳಿಂದ, ಅಜ್ಞಾನ ಅಂಧಕಾರ ದಲ್ಲಿ ಅಂಬೆಗಾಲಿಡುತ್ತಿದ್ದ ಜಗತ್ತಿಗೆ ಚಿರಸ್ಮರಣೀಯವೂ ಆದರ್ಶವೂ ಲೋಕ ಕಲ್ಯಾಣ ಕಾರಿಯೂ ಆದ ಪ್ರಗತಿ ಮಾರ್ಗವನ್ನು ತೋರಿಸಿ ಮೆರೆದ ಮಹಾತ್ಮರುಗಳ ಕಾರ್ಯಕ್ಷೇತ್ರ ; ಕಲಾ ಸರಸ್ವತಿಯ ಲೀಲಾ ವಿಲಾಸದ ಭವ್ಯ ಭೂಮಿಕೆ - ಈ ನಾಡು !"

ಇಂಥಾ ನಾಡು ಭಾರತದ ಇತರ ಪ್ರಾಂತಗಳ ಮೇಲೆ ಅಚ್ಚಳಿಯದ ತನ್ನ ಪ್ರಭಾವವನ್ನು ಬೀರಿದೆ ಎಂಬುದರಲ್ಲಿ ಸಂಶಯವಿಲ್ಲ. ದೇಜಗೌ ಅವರು ತಕ್ಕ ಸಾಕ್ಷಿಗಳೊಡನೆ ಇದನ್ನು ಸ್ಪಷ್ಟೀಕರಿಸಿದ್ದಾರೆ: "ಕೊಂಕಣಿ ಭಾಷೆಯಲ್ಲಿ ವಿಪುಲವಾಗಿ ಕನ್ನಡ ಪದಗಳು ತುಂಬಿವೆ. ವ್ಯಾಕರಣಾಂಶಗಳಲ್ಲಿ ಕನ್ನಡದ ಪ್ರಭಾವವಿದೆ" ಎಂಬುದನ್ನು ಆಧಾರ ಸಹಿತ ನಿರೂಪಿಸಿದ್ದಾರೆ. "ಮೇಲುನೋಟಕ್ಕೆ ವಿಸ್ಮಯಕಾರಿಯಾಗಿ ಕಾಣಬಹುದಾದ ಕರ್ನಾಟಕ - ಗುಜರಾತ್ ಸಂಬಂಧ ಆಂತರಿಕವಾಗಿ ವಿವೇಚಿಸಿದಂತೆಲ್ಲಾ ಆಳವಾಗಿ ಬೇರೂರಿರುವುದು ಗೋಚರವಾಗುತ್ತದೆ..... ಕನ್ನಡಿಗರ ರಾಜತಂತ್ರ ಕೌಶಲ, ಸಾಹಸಾಭಿರುಚಿ, ಧರ್ಮಪ್ರೇಮ, ಅಪ್ರತಿಮ ಕಲಾಶಕ್ತಿ, ಜಗತ್ತನ್ನೇ ಅಚ್ಚರಿಗೊಳಿಸಿದಂತಹ ಅದ್ವಿತೀಯ ಮಹೋನ್ನತ ಆದರ್ಶ, ಸಂಸ್ಕೃತಿ, ಅಖಿಲ ಭಾರತದ ವ್ಯಾಪ್ತಿಯನ್ನು ದಾಟಿ ಹರಡಿದ್ದುವೆಂದರೆ ಗುಜರಾತಿನ ಮೇಲಿನ ಪ್ರಭಾವವನ್ನು ಅಲ್ಲಗಳೆಯಲಾದೀತೆ ?" ಎಂಬುದನ್ನು ನಿದರ್ಶನಗಳ ಸಹಿತ ನಮ್ಮನ್ನು ಅಚ್ಚರಿಗೊಳಿಸಿದ್ದಾರೆ. "ಇಂದು ತನ್ನ ಸಾಹಿತ್ಯ ಮತ್ತು ಕಲೆಗಳ ಮುಖಾಂತರ ವಿಶ್ವವಿಖ್ಯಾತವಾಗಿರುವ

ಬಂಗಾಳಕ್ಕೂ ಕರ್ನಾಟಕಕ್ಕೂ ಒಂದು ಸಹಸ್ರ ವರ್ಷಗಳ ಹಿಂದಿನಿಂದಲೂ ಕೇವಲ ವ್ಯವಹಾರ ಸಂಬಂಧ ಮಾತ್ರವಲ್ಲದೆ ಸಾಂಸ್ಕೃತಿಕ ಹಾಗೂ ರಕ್ತಸಂಬಂಧವೂ ಇದೆ" ಎಂಬುದನ್ನು ಸ್ಪಷ್ಟೀಕರಿಸಿದ್ದಾರೆ. "ಕರ್ನಾಟಕ ಮತ್ತು ತಮಿಳುನಾಡುಗಳೆರಡೂ ಒಂದೇ (ದ್ರಾವಿಡ) ಪಂಗಡಕ್ಕೆ ಸೇರಿದ ಪ್ರದೇಶಗಳಾದ್ದರಿಂದ ಅವೆರಡಕ್ಕೂ ಭಾಷೆ ಹಾಗೂ ಸಂಸ್ಕೃತಿಗಳಲ್ಲಿ ನಿಕಟ ಸಂಪರ್ಕವುಂಟು ಎಂಬುದನ್ನು ತೋರಿಸಿದ್ದಾರೆ. "ಸಾಹಿತ್ಯಕವಾಗಿ ಹಾಗೂ ರಾಜಕೀಯವಾಗಿ ಕರ್ನಾಟಕ ತೆಲುಗಿನ ಮೇಲೆ ಅಪಾರ ವರ್ಚಸ್ಸನ್ನು ಬೀರಿದೆ. ಕರ್ನಾಟಕ ಭಾಗ್ಯವಿಧಾತರಾಗಿದ್ದ ಹಲವಾರು ರಾಜರುಗಳು ತೆಲುಗು ನಾಡನ್ನು ಆಳುತ್ತಿದ್ದುದರಿಂದ ಏಕಪ್ರಕಾರವಾದ ಮನ್ನಣೆಯನ್ನು ಸಲ್ಲಿಸಿದ್ದಾರೆ". ಎಂಬುದೂ ದೇಜಗೌ ಅವರು ನೀಡಿರುವ ವಿವರಣೆಗಳಿಂದ ಮನಗಟ್ಟಾಗುತ್ತದೆ.

ಸಂಸ್ಕೃತ ಸಾಹಿತ್ಯ ಭರತ ಖಂಡದ ಅತ್ಯಂತ ಪ್ರಾಚೀನ ಸಾಹಿತ್ಯ ಎಂಬುದು ಸರ್ವ ವಿದಿತ. ಅದರ ಗಾಢವಾದ ಪ್ರಭಾವ ಭಾರತದ ಉಳಿದೆಲ್ಲ ಭಾಷೆಗಳ ಮೇಲೆಯೂ ಆಗಿದೆ ಎಂಬುದು ತಿಳಿದ ವಿಷಯ. "ಅಂತೆಯೇ ದೇಶಭಾಷೆಗಳೂ ಸಹ ಸಾಕಷ್ಟು ಪ್ರಮಾಣದಲ್ಲಿ ಮಾತೃಋಣವನ್ನು ತೀರಿಸಿವೆ. ಹೀಗಿರುವಾಗ ಕರ್ನಾಟಕವೂ ಸಹ ಸಂಸ್ಕೃತಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸುವಲ್ಲಿ ಹಿಂದುಳಿದಿಲ್ಲ" ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ.

ಸಂಗೀತ ರಂಗದಲ್ಲಿ ಕರ್ನಾಟಕ ಹೆಸರಾದದ್ದು. "ಕನ್ನಡಿಗರು ಸಾಧಿಸಿದ ಸಾಧನೆ, ಪಡೆದ ಯಶಸ್ಸು ಅನುಪಮವಾದುದು, ಅವೋಘವಾದುದು. ಒಂದಲ್ಲ, ಎರಡಲ್ಲ, ನೂರಾರು ಗಾನಯೋಗಿಗಳು ತಮ್ಮ ಅಪಾರ ಅಲೌಕಿಕ ಪ್ರತಿಭೆಯಿಂದ ಇಡೀ ಭರತ ಖಂಡವನ್ನು ನಾದತರಂಗದಲ್ಲಿ ತೇಲಿಸಿದ್ದಾರೆ ; ವಿಶ್ವಮಾನ್ಯತೆ ಗಳಿಸಿದ್ದಾರೆ. ದಾಕ್ಷಿಣಾತ್ಯ ಸಂಗೀತಕ್ಕೆ ಕರ್ನಾಟಕ ಸಂಗೀತವೆಂದೇ ಹೆಸರಿದೆ..... ಈಗಿನ ಹಿಂದೂಸ್ತಾನೀ ಸಂಗೀತ ಪದ್ಧತಿಗೆ ಬುನಾದಿಯನ್ನು ನಿರ್ಮಿಸಿದ ಪ್ರತಿಭಾವಂತ ಕನ್ನಡಿಗ ಗೋಪಾಲ ನಾಯ್ಕನೆಂದರೆ ಆಶ್ಚರ್ಯವಾಗಬಹುದು" ಮುಂತಾದ ವಿವರಣೆಗಳಿಂದ ಭಾರತೀಯ ಸಂಗೀತಕ್ಕೆ ಕರ್ನಾಟಕ ಕೊಡಿಗೆ ಏನೆಂಬುದನ್ನು ಗುರುತಿಸಿದ್ದಾರೆ. "ಶಿಲ್ಪ ಕಲೆಯಲ್ಲಂತೂ ಕರ್ನಾಟಕವು ಅಖಿಲ ವಿಶ್ವ ಮಹತಿಯನ್ನು ಗಳಿಸಿದೆ. ಭಾರತೀಯ ಶಿಲ್ಪ ಕಲೆಯ ಸರ್ವ ಮಾದರಿಗಳೂ ಕರ್ನಾಟಕದಲ್ಲಿ ದೊರೆಯುತ್ತವೆ. ಬೌದ್ಧ ರೀತಿ, ಔತ್ತರೇಯ ರೀತಿ, ದ್ರಾವಿಡ ರೀತಿ, ಚಾಲುಕ್ಯ ಶೈಲಿ, ಭಾರತೀಯ - ಮುಸ್ಲಿಂ ಶೈಲಿ ಎಲ್ಲದರಲ್ಲಿಯೂ ನಮ್ಮವರು ನಿಷ್ಣಾತರು" ಎಂಬುದು ಅವರು ನೀಡಿರುವ ವಿವರಣೆಯಿಂದ ವ್ಯಕ್ತವಾಗುತ್ತದೆ.

ಇದೊಂದು ಅತ್ಯುತ್ಕೃಷ್ಟ ವಿಚಾರಪೂರ್ಣ ಲೇಖನ. ದೇಜಗೌ ಅವರ ಅಪಾರ ಜ್ಞಾನ, ವಿದ್ವತ್ತು ಹಾಗೂ ಅವರ ಸಂಶೋಧನಾ ದೃಷ್ಟಿ ಇದರಲ್ಲಿ ಸುವ್ಯಕ್ತಗೊಂಡಿದೆ. ಕರ್ನಾಟಕದ ಮಹಿಮಾತಿಶಯಗಳನ್ನು ಸಕಾರಣವಾಗಿ ವಿವರಿಸಿ, ಕರ್ನಾಟಕದ ಭವ್ಯ ಪರಂಪರೆಯನ್ನು ಹಾಗೂ ಅದರ ಹಿರಿಮೆಯನ್ನು ತೆರೆದು ತೋರಿದ್ದಾರೆ.

'ನಗೆಗಾರ ಗಾಂಧೀಜಿ', 'ಭಾರತೀಯ ಪ್ರಖ್ಯಾತ ವಾಗ್ಮಿಗಳು', 'ಠಾಕೂರರು ಮತ್ತು ವಿಯೆಟ್‌ನಾಮ್' - ಇವುಗಳು ಭಾರತದ ಪ್ರಮುಖ ವ್ಯಕ್ತಿಗಳು ಹಾಗೂ ಅವರ ಅನುಪಮ ವ್ಯಕ್ತಿತ್ವವನ್ನು ಬಿಚ್ಚಿ ತೋರುವಂತಹವು.

ಜೀವನದಲ್ಲಿ ನಗುವಿನ ಮಹತ್ವ ಎಂತಹುದು ಎಂಬುದಕ್ಕೆ ಅವರು ಕೊಟ್ಟ ಹೋಲಿಕೆ

ಸಮಂಜಸವಾಗಿದೆ "ಸುಟ್ಟ ಮುಸುಡಿಯ ಹಣವಂತನಿಗಿಂತಲೂ ನಗುಮುಖದ ಕಡುಬಡುವ ಭಾಗ್ಯಶಾಲಿಯೆಂದೇ ಹೇಳಬೇಕು" ಎನ್ನುವಲ್ಲಿ ನಗುವಿನ ಸ್ಥಾನ ಏನು ಎನ್ನುವುದು ವ್ಯಕ್ತವಾಗುತ್ತದೆ. ನಗೆಯ ವಿಧಾನಗಳನ್ನು ಗುರುತಿಸಿ ಹೇಳಿದ್ದಾರೆ.

ಈ ಲೇಖನದಲ್ಲಿ ದೇಜಗೌ ಅವರು ಗಾಂಧೀಜಿಯ ಜೀವನದಲ್ಲಿ ನಡೆದ ಕೆಲವು ನಗೆ ಮಿಂಚಿನ ಸಂದರ್ಭಗಳನ್ನು ಕಲೆ ಹಾಕಿದ್ದಾರೆ. ಗಾಂಧೀಜಿಯವರ ನಗೆ ಸ್ವಭಾವವನ್ನು ಕೆಲವು ಸನ್ನಿವೇಶಗಳೊಡನೆ ಇಲ್ಲಿ ಸೆರೆ ಹಿಡಿದಿದ್ದಾರೆ. "ಉದ್ದಕ್ಕೂ ಅವರ ಮಾತಿನಲ್ಲಿ ನಗೆಯ ಮಿಂಚು ಮಿನುಗುತ್ತದೆ. ಆದರೆ ಅದು ಯಾರ ಎದೆಯನ್ನೂ ನೋಯಿಸುವಂಥಾದ್ದಲ್ಲ. ತಮ್ಮ ತಪ್ಪುಗಳನ್ನು ಬಯಲಿಗೆಳೆದು ಲೋಕದ ಮುಂದಿರಿಸಿ, ಅವರನ್ನು ನಗಿಸಿ ತಮ್ಮನ್ನು ತಾವೇ ಗೇಲಿ ಮಾಡಿಕೊಳ್ಳುವ ಸ್ವಭಾವ ಅವರದು. ತನ್ನ ವಿಷಯದಲ್ಲಿ ನಗುವಾಗ ಲೋಕ ಕಾರುಣ್ಯ ಯಾವಾಗಲೂ ಜೊತೆಗೂಡಿರುತ್ತದೆ. ಜಿತೇಂದ್ರಿಯನೂ ಸರ್ವಭೂತಹಿತನೂ ಆತ್ಮಸುಖಿಯೂ ಆದ ಮಹಾತ್ಮನಿಗೆ ಮಾತ್ರ ಆ ನಗು ಸಾಧ್ಯ" ಎಂಬುದನ್ನು ಗಾಂಧೀಜಿಯವರ ಅಮರ ಜೀವನದ ಹಲವು ನಿದರ್ಶನಗಳಿಂದಲೇ ನಿರೂಪಿಸಿದ್ದಾರೆ.

ಮಾತಿನ ಮಹತ್ವ ಎಂತಹುದು, ಮಾತುಗಾರಿಕೆ ಅಥವಾ ವಾಗ್ಮಿತೆಯೂ ಒಂದು ಕಲೆಯೆನ್ನಿಸಿ ಕೊಳ್ಳುವುದು ಯಾವಾಗ, ನಿಜವಾದ ವಾಗ್ಮಿ ಯಾರು, ಉತ್ತಮ ವಾಗ್ಮಿತೆಯ ಗುಣಗಳೇನು - ಮುಂತಾದವುಗಳನ್ನು ಪ್ರಸ್ತಾಪಿಸಿ, ಭಾರತೀಯ ಪ್ರಖ್ಯಾತ ವಾಗ್ಮಿಗಳನ್ನು ಕುರಿತು ದೇಜಗೌ ಅವರು ಇಲ್ಲಿ ಪ್ರಸ್ತಾಪಿಸಿದ್ದಾರೆ. "ಉತ್ತಮ ವಾಗ್ಮಿಯ ಮಾತು ಸಮತಲ ಭೂಮಿಯ ಪ್ರವಾಹದಂತೆ ದಡವನ್ನು ಕೊಚ್ಚದೆ ಸಭಿಕರ ಮನಸ್ಸನ್ನು ಸೆಳೆಯುತ್ತದೆ. ಅವನ ನಿಲುವಿನಲ್ಲಿ ಗಾಂಭೀರ್ಯ ಕಾಣುತ್ತದೆಯೇ ಹೊರತು ಗರ್ವವಲ್ಲ ; ವಿನಯ ಹೊರಸೂಸುತ್ತದೆಯೇ ಹೊರತು ಹೇಡಿತನವಲ್ಲ" ಎಂಬುದನ್ನು ಹೇಳಿ ಇಂಥಾ ವಿಶಿಷ್ಟ ವಾಗ್ಮಿತೆಯ ಲಕ್ಷಣಗಳನ್ನು ಹೊಂದಿದ್ದ ಭಾರತೀಯರಲ್ಲಿ ಪ್ರಮುಖರು : ಸ್ವಾಮಿ ದಯಾನಂದ ಸರಸ್ವತಿ, ರಾಜಾರಾಮ ಮೋಹನರಾಯ, ಸ್ವಾಮಿ ವಿವೇಕಾನಂದ, ವಿಠಲಬಾಯ್ ಪಟೇಲ, ಗೋಪಾಲ ಕೃಷ್ಣ ಗೋಖಲೆ, ಶ್ರೀನಿವಾಸ ಶಾಸ್ತ್ರಿ, ಸರೋಜಿನಿ ದೇವಿ, ಮುದವೀಡು ಕೃಷ್ಣರಾಯ - ಮೊದಲಾದವರ ಹೆಸರುಗಳನ್ನು ಹೇಳಿ, ಅದರಲ್ಲಿ ಕೆಲವರ ಪರಿಚಯವನ್ನು ಇಲ್ಲಿ ಮಾಡಿಕೊಟ್ಟಿದ್ದಾರೆ.

ನೆನ್ನೆ ಮೊನ್ನೆಯ ತನಕ ಜೀವಿಸಿದ್ದ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳು ಅತ್ಯುತ್ತಮ ವಾಗ್ಮಿಗಳೆಂದು ಭಾರತೀಯರಿಂದ ಮಾತ್ರವಲ್ಲದೆ ಬ್ರಿಟಿಷರಿಂದಲೂ ಸ್ತುತ್ಯರಾಗಿದ್ದರು...... ಅವರ ಭಾಷಣಗಳನ್ನು ಕುತೂಹಲಭರಿತರಾಗಿ ಕೇಳದವರೇ ಇರಲಿಲ್ಲ. ವಿಷಯ ಸಂಪತ್ತು, ನಿರೂಪಣಾ ವೈಖರಿ ಮೂಲಕ ಪ್ರಕಟವಾಗುತ್ತಿದ್ದ ವಿದ್ವತ್ತು ; ಇವುಗಳಿಗಿಂತ ಹೆಚ್ಚಾಗಿ ಜನರನ್ನು ಸೆಳೆಯುತ್ತಿದ್ದುದು ಅವರ ಮಾತಿನ ಮೋಡಿ". ಶ್ರೀನಿವಾಸ ಶಾಸ್ತ್ರಿಗಳ ಮಾತಿನ ಮೋಡಿ ಈ ಬಗೆಯದಾದರೆ ಗೋಖಲೆಯವರ ವಾಗ್ಮಿತಯೆ ವೈಖರಿ ಮತ್ತೊಂದು ಬಗೆಯದು : "ಸೂಕ್ಷ್ಮಾಂಶ ವಿವರ ಜ್ಞಾನ ಅದರ ಸಕ್ರಮ ಮತ್ತು ಸರಳ ನಿರೂಪಣಾ ಕೌಶಲ್ಯ. ವಿರೋಧ ಪಕ್ಷದವರನ್ನು ಒಲಿಸಿಕೊಳ್ಳುವ ಚಾಕಚಕ್ಯತೆ ಅವರ ವ್ಯಕ್ತಿತ್ವದ ವಿಶಿಷ್ಟ ಲಕ್ಷಣಗಳು".

ಯುಗಪುರುಷ ಸ್ವಾಮಿ ವಿವೇಕಾನಂದರ ವಾಗ್ಮಿತೆಯ ಪ್ರಶ್ನೆ ಬಂದಾಗ ದೇಜಗೌ ಅವರ ಲೇಖನಿ ಇದ್ದಕ್ಕಿದ್ದಂತೆಯೇ ಬೇರೊಂದು ರೂಪವನ್ನು ತಾಳುತ್ತದೆ. "ಯಾರ ಡಿಂಡಿಮವಾಣಿ ವಿಂಧ್ಯಾದ್ರಿ ಹೇಮಾದ್ರಿಗಳಲ್ಲಿ ಅನುರಣಿತವಾಗಿ ದೀರ್ಘ ನಿದ್ರಾಮುದ್ರಿತರಾಗಿದ್ದ ಭಾರತೀಯರನ್ನು ಎಚ್ಚರಿಸಿ

ಅವರ ಕ್ಲೈಬ್ಯ ದೌರ್ಬಲ್ಯಗಳನ್ನು ನಿರ್ಮೂಲಗೊಳಿಸಿ ಆತ್ಮಪ್ರಜ್ಞರಾಗುವಂತೆ ಮಾಡಿತೋ, ಯಾರ ಸಿಂಹವಾಣೀ ಭಾರತೀಯರ ನೈಜ ಸತ್ಯ ತೇಜಸ್ಸುಗಳನ್ನು ಪರಿಚಯ ಮಾಡಿಕೊಟ್ಟು ಅವರ ಹೃದಯದಲ್ಲಿ ಭಾರತೀಯರ ಬಗ್ಗೆ ಗೌರವ ನೆಲಸುವಂತೆ ಮಾಡಿತೋ......." ಅಂಥವರ ವಾಗ್ಮಿತೆಯ ಪ್ರಶ್ನೆ ಬಂದಾಗ ಅವರ ಬರಹ ಕಾವ್ಯಮಯವಾಗಿದೆ. ಶ್ರೀ ಸ್ವಾಮಿ ವಿವೇಕಾನಂದರು ಯಾವೊಂದು ಕ್ಷೇತ್ರದ ಪ್ರತಿನಿಧಿಯೂ ಅಲ್ಲ ; ಆದರೆ ಅವರು ಎಲ್ಲಾ ಕ್ಷೇತ್ರದ ಪ್ರತಿನಿಧಿಯೂ ಹೌದು. "೧೮೯೩ರಲ್ಲಿ ಚಿಕಾಗೋ ನಗರದಲ್ಲಿ ವಿಶ್ವಧರ್ಮ ಸಮ್ಮೇಳನದ ಮುಂದೆ ಅವರು ಮಾಡಿದ ಭಾಷಣ ಅಂದು ಅಲ್ಲಿಯ ಜನರನ್ನು ರೋಮಾಂಚನ ಗೊಳಿಸಿದುದು ಮಾತ್ರವಲ್ಲ. ಅಂದಿನಿಂದ ಇಂದಿನ ತನಕ ಎಲ್ಲಾ ದೇಶದ ಜನರನ್ನು ರೋಮಾಂಚನಗೊಳಿಸುತ್ತಿದೆ. ಅವರ ಭಾಷಣಗಳಲ್ಲಿ ಗರ್ಭಿತವಾಗಿರುವ ವಿಷಯ ಬರಿಯ ವೇದಾಂತವಲ್ಲ ; ಎಲ್ಲವೂ ಇದೆ".

ಇಂಥಾ ಶ್ರೇಷ್ಠ ವಾಗ್ಮಿಗಳು ಯಾವ ನಾಡಿನಲ್ಲೇ ಆದರೂ ವಿರಳವೆಂದೇ ಹೇಳಬೇಕು. ಒಬ್ಬಿಬ್ಬರು ಸಿಕ್ಕಿದರೆ ಹೆಚ್ಚು. ದೇಜಗೌ ಅವರು ಇಂಥಾ ಒಂದು ಸಮೀಕ್ಷೆಯನ್ನು ನಡೆಸಿರುವುದು ನಿಜಕ್ಕೂ ಶ್ಲಾಘನೀಯ.

ಕವಿ ರವೀಂದ್ರನಾಥ್ ಠಾಕೂರ್ ಅವರು ತಮ್ಮ ಮಹಾಯಾತ್ರೆಯ ಸಂದರ್ಭದಲ್ಲಿ ಚೀಣಾ ಮತ್ತು ವಿಯೆಟ್‌ನಾಮ್ ದೇಶಗಳಲ್ಲಿ ತಂಗಿದ್ದಾಗ ನಡೆದ ಕೆಲವು ಘಟನೆಗಳ ಸ್ವಾರಸ್ಯ ಇದರಲ್ಲಿ ಚಿತ್ರಿತವಾಗಿದೆ. ಠಾಕೂರರು ತಮ್ಮ ಯಾತ್ರೆಯ ಸಂದರ್ಭದಲ್ಲಿ ಹೋದೆಡೆಯಲ್ಲೆಲ್ಲಾ ಅಲ್ಲಿಯ ಪ್ರಗತಿಯ ಬಗ್ಗೆ ಹಾಗೂ ಸಾಧನೆಗಳ ಬಗ್ಗೆ ತಮ್ಮ ತೀವ್ರಾಸಕ್ತಿಯನ್ನು ಅಭಿವ್ಯಕ್ತಗೊಳಿಸಿರುವುದು ಇಲ್ಲಿ ವ್ಯಕ್ತಗೊಂಡಿದೆ. ಕವಿವರ್ಯರು ಹೋದೆಡೆಯಲ್ಲೆಲ್ಲ ನಡೆದ ಘಟನೆಗಳ ಪೂರ್ಣ ವಿವರಗಳನ್ನು ಪತ್ರಿಕೆಗಳು ಪ್ರಕಟಗೊಳಿಸಿರುವುದನ್ನು ಇಲ್ಲಿ ಸೇರಿಸಿಕೊಡಲಾಗಿದೆ.

'ಕನ್ನಡ ಭಾಷೆ - ಇಂದು', 'ಕನ್ನಡ ನುಡಿಯ ಹಿರಿಮೆ', 'ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ' - ಇವು ಕನ್ನಡ ನುಡಿಯ ಹಿರಿಮೆಯನ್ನು, ಕನ್ನಡ ಭಾಷೆ ಬೆಳೆದು ನಿಂತಿರುವ ಬಗೆಯನ್ನು ಹಾಗೂ ಕನ್ನಡ ಭಾಷೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಗಳಿಸಿಕೊಂಡಿರುವ ಸ್ಥಾನವನ್ನು ಅರಿವು ಮಾಡಿಕೊಡುವಂತಹವು.

ಭಾಷೆ ನಿಂತ ನೀರಲ್ಲ, ಹರಿಯುವ ನದಿ. ಹಾಗೆ ಹರಿಯುವಾಗ ಅದು ತನಗೆ ದಕ್ಕುವುದೆಲ್ಲವನ್ನು ಒಳಗಾಗಿಸಿಕೊಂಡು ಹರಿಯುತ್ತದೆ. ತನ್ನ ವಿಸ್ತಾರವನ್ನು ಹೆಚ್ಚಿಸಿಕೊಳ್ಳುತ್ತದೆ. ಕನ್ನಡ ಭಾಷೆ ಹೀಗೆ ಬೆಳೆಯುತ್ತಾ ಬಂದಿದೆ. "ಈ ಭಾಷೆಯ ಇತಿಹಾಸವನ್ನು ನಾಲ್ಕು ಮೆಟ್ಟಿಲುಗಳಾಗಿ ವಿಂಗಡಿಸುತ್ತಾರೆ. ಇವುಗಳನ್ನು ಆಯಾ ಕಾಲದ ಶಾಸನ ಗ್ರಂಥಗಳಿಂದ ನಿಚ್ಚಳವಾಗಿ ಗುರುತಿಸಬಹುದು. ಈ ಬಗೆಯ ಸ್ಥಿತ್ಯಂತರಕ್ಕೆ ಸೌಲಭ್ಯಾಕಾಂಕ್ಷೆ, ಮಿತವ್ಯಯಾಸಕ್ತಿ, ಅವಜ್ಞೆಗಲ್ಲದೆ ಬೇರೆ ಬೇರೆ ಕಾರಣಗಳೂ ಉಂಟು. ಅನ್ಯಭಾಷಾ ಸಂಪರ್ಕ, ಅನ್ಯ ನಾಗರೀಕತೆ ಸಂಸ್ಕೃತಿಗಳ ಸಂಸರ್ಗ, ಕಾಲಕಾಲಕ್ಕೆ ಜನಜೀವನದಲ್ಲಾಗುವ ಮಾರ್ಪಾಟುಗಳು, ಸಾಮಾಜಿಕ ಧಾರ್ಮಿಕ ವಿಪ್ಲವಗಳು, ಜ್ಞಾನ ವಿಜ್ಞಾನದ ಬೆಳವಣಿಗೆಯಿಂದ ತೋರುವ ದೃಷ್ಟಿ ವೈವಿಧ್ಯ, ಅನುಕರಣ ಹಾಗೂ ಸ್ವತಂತ್ರ ಸೃಷ್ಟ್ಯಾತ್ಮಕ ಮನೋಭಾವ ಇವುಗಳ ಫಲವಾಗಿ ಕನ್ನಡ ಭಾಷೆ ಉತ್ಕೃಷ್ಟವಾಗಿ ಹೊರವಾಗಿ ಬೆಳೆಯುತ್ತಿದೆ". - ದೇಜಗೌ ಅವರು ಇವೆಲ್ಲವುಗಳನ್ನು ಗುರುತಿಸಿ, ಅವುಗಳ ಹಲವು ಮಜಲುಗಳನ್ನು ಗುರುತಿಸಿ, ಕನ್ನಡ ಭಾಷೆಯ ಹಿಂದಿನ ಸ್ಥಿತಿಯನ್ನು ಹೇಳಿದ್ದಾರೆ. "ಭಾಷೆಯ ಮೂಲೋದ್ದೇಶ

ಹಾಗೂ ಅದರ ಪ್ರಥಮ ಕರ್ತವ್ಯ ವಿಷಯ ವೇದನೆ ಅದು ಸಮರ್ಥವಾಗಿ ನಡೆಯಿತೆಂದರೆ ಅದರ ಮುಖ್ಯೋದ್ದೇಶ ಕೈಗೂಡಿದಂತೆಯೇ ; ತಪ್ಪು ನೆಪ್ಪುಗಳು ಲೆಕ್ಕಕ್ಕಿಲ್ಲ. ಸರಿತಪ್ಪುಗಳ ವಿಚಿಕಿತ್ಸೆ ಆರಾಮವಾಗಿ ಪಂಡಿತ ಗೋಷ್ಠಿಗಳಲ್ಲಿ ನಡೆಯಲಿ !" ಪಂಡಿತ ಕಟ್ಟಳೆಗಳು ಭಾಷೆಯನ್ನು ಬೆಳೆಸಲಾರವು, ಜೀವಂತಗೊಳಿಸಲಾರವು. ಅವುಗಳನ್ನು ಸ್ವತಂತ್ರವಾಗಿ ಬೆಳೆಯಲು ಬಿಡಬೇಕು. ಇಂಥವರಿಂದ ಭಾಷೆ ಕುಂಠಿತವಾಗುತ್ತದೆಯೇ ಹೊರತು ರಸಪೊಸರುವಂತಿರು ವುದಿಲ್ಲ. ಈ ದೃಷ್ಟಿಯಿಂದ ಭಾಷೆಗೆ ಹೊಸ ಕಳೆ ತುಂಬುವ ಶಕ್ತಿಗಳು ಮೂರೇ ಮೂರು ಅನ್ನುತ್ತಾರೆ ದೇಜಗೌ ; "ಒಂದು ಕವಿ ಶಕ್ತಿ, ಎರಡನೆಯದು ಪತ್ರಿಕಾಶಕ್ತಿ, ಮೂರನೆಯದು ರೈತಶಕ್ತಿ".

ದೇಜಗೌ ಅವರು ಕನ್ನಡದ ಜಾಯಮಾನವನ್ನು ಚೆನ್ನಾಗಿ ಬಲ್ಲವರು. ಅದರ ಒಳನಾಡಿ ಮಿಡಿತವನ್ನು ಅವರು ಸುಲಭವಾಗಿ ಪತ್ತೆ ಹಚ್ಚಬಲ್ಲರು. ನಿರಂತರವಾಗಿ ಅವರು ಆ ಬಗ್ಗೆ ಹರಿಸುತ್ತ ಬಂದಿರುವ ಶ್ರದ್ಧಾಭಿಮಾನವೇ ಇದಕ್ಕೆ ಕಾರಣ. ಅವರು ಆ ನಿಲುವಿನಲ್ಲಿ ನಿಂತು ಆಡುವ ಮಾತುಗಳು ಅನೇಕರಿಗೆ ಭಾವುಕತನದಲ್ಲಿ ಆಡುವಂತೆ ತೋಚಬಹುದಾದರೂ ಅದು ಕೇವಲ ಅನಿಸಿಕೆಯೇ ಹೊರತು ಅದರಲ್ಲಿ ಸಾಂಗತ್ಯವೇನೂ ಕಂಡು ಬರುವುದಿಲ್ಲ.

ಭಾಷೆ ಚೆನ್ನಾಗಿ ದಷ್ಟಪುಷ್ಟವಾಗಿ ಬೆಳೆಯಬೇಕಾದರೆ, ಎಲ್ಲದರೊಡನೆಯೂ ಬೆರೆತು ಸ್ವೀಕರಿಸಿದ್ದನೆಲ್ಲಾ ಜೀರ್ಣಿಸಿಕೊಳ್ಳುವ ಶಕ್ತಿ ಅದಕ್ಕೂ ಇರಬೇಕಾಗುತ್ತದೆ. "ಈ ಸ್ವೀಕರಣ ಕ್ರಿಯೆ ದೌರ್ಬಲ್ಯದ ಲಕ್ಷಣವಲ್ಲ. ಅದು ಜೀರ್ಣಾಗ್ನಿ ಪ್ರಬಲವಾಗಿರುವ ಆರೋಗ್ಯ ದೃಢಕಾಯದ ವಿಶಿಷ್ಟ ಲಕ್ಷಣ. ಇಂಥಾ ಜೀರ್ಣಶಕ್ತಿ ಮೊದಲಿನಿಂದಲೂ ಕನ್ನಡದಲ್ಲಿ ಸಾಕಷ್ಟಿದೆ" ಎಂದು ಹೇಳಿ ಕನ್ನಡ ಭಾಷೆ ಅನ್ಯ ಭಾಷೆಗಳಿಂದ ಧಾರಾಳವಾಗಿ ಸ್ವೀಕರಿಸುವುದನ್ನು ತೋರಿಸಿದ್ದಾರೆ. ಎಲ್ಲದರೊಡನೆಯೂ ಬೆರೆಯುವ ಕನ್ನಡ ನುಡಿಯ ಹಿರಿಮೆ ವೈಶಿಷ್ಟ್ಯಪೂರ್ಣವಾದದ್ದು. "ಕನ್ನಡ ಸ್ವೀಕರಣ ಭಾಷೆಯಾಗಿರುವುದರ ಜೊತೆಗೆ ಉತ್ಪಾದಕ (Creative) ಭಾಷೆಯೂ ಆಗಿದೆ". ಎಂಬುದನ್ನು ಹೇಳಿ ಅದರ ಸಾಧನೆ ಸಿದ್ಧಿಗಳನ್ನು ಸೂಚಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಇಂದು ಪಡೆದುಕೊಂಡಿರುವ ಸ್ಥಾನಮಾನದ ಪೂರ್ಣ ವಿವರಣೆ ಇಲ್ಲಿದೆ. ವಿಶ್ವವಿದ್ಯಾನಿಲಯದ ಪೂರ್ಣೋದ್ದೇಶ ಹಾಗೂ ಅದರ ಗುರಿ, ಸಾಧನೆಗೆ ಬೇಕಾದ ಪ್ರಮುಖ ಅಂಗಗಳ ಕಾರ್ಯಚಟುವಟಿಕೆ ಎಂಥದು ಎಂಬುದನ್ನು ದೇಜಗೌ ಇಲ್ಲಿ ಲೇಖನಿಸಿದ್ದಾರೆ : "ಉನ್ನತ ಶಿಕ್ಷಣದ ಪ್ರಸಾರ ವಿಶ್ವವಿದ್ಯಾನಿಲಯಗಳ ಗುರಿ. ಈ ಶಿಕ್ಷಣ ಕೇವಲ ವಿದ್ಯಾರ್ಥಿಗಳಿಗೆ ಸೀಮಿತವಾದದ್ದಲ್ಲ ; ವಿಶ್ವವಿದ್ಯಾನಿಲಯದಲ್ಲಿ ಸಂಗ್ರಹವಾಗಿರುವ ಜ್ಞಾನ ದೇಶದ ನಾಡಿನಲ್ಲೆಲ್ಲಾ ಪ್ರವಹಿಸುವಂತಾಗಬೇಕು. ಆಗ ಮಾತ್ರ ವಿಶ್ವವಿದ್ಯಾನಿಲಯದ ಅಸ್ತಿತ್ವ ಸಾರ್ಥಕವಾಗುತ್ತದೆ". ಎಂಬುದನ್ನು ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕೈಗೊಂಡಿರುವ ಕಾರ್ಯವನ್ನು ಇಲ್ಲಿ ನಿರೂಪಿಸಿದ್ದಾರೆ. ಪ್ರಬುದ್ಧ ಕರ್ನಾಟಕ, ಪ್ರಸಾರಾಂಗ, ಗೃಹಸರಸ್ವತೀ ಗ್ರಂಥ ಮಾಲೆ - ಇವುಗಳು ಈ ದಿಸೆಯಲ್ಲಿ ವಹಿಸುತ್ತಿರುವ ಪಾತ್ರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸ್ನಾತಕೋತ್ತರ ತರಗತಿಗಳ ಪ್ರಾರಂಭ, ಕನ್ನಡ ಮಾಧ್ಯಮದ ಆರಂಭ, ಕನ್ನಡ ಅಧ್ಯಯನ ಸಂಸ್ಥೆಯ ಚಟುವಟಿಕೆಗಳು, ವಿಜ್ಞಾನ - ಮಾನವಿಕ - ಕರ್ನಾಟಕ - ಇವುಗಳು ಸಾಧಿಸಿರುವ ಸಿದ್ಧಿಯ ಪೂರ್ಣ ವಿವರ ಇಲ್ಲಿದೆ. ರಾಷ್ಟ್ರಕವಿ ಕುವೆಂಪು ಅವರು ಕುಲಪತಿಗಳಾಗಿದ್ದಾಗ ಇವೆಲ್ಲಕ್ಕೂ ಕೋಡು ಮೂಡಿಸುವಲ್ಲಿ ಮಾಡಿದ ಪ್ರಯತ್ನವೂ ವಿವರವೂ ಇಲ್ಲಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ

ಕನ್ನಡ ಸರ್ವತೋಮುಖವಾಗಿ ನತ್ನ ಪ್ರಗತಿಯನ್ನು ಹೊಂದಿದೆ. "ನನ್ನ ಮಟ್ಟಿಗೆ ಹೇಳುವುದಾದರೆ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಪ್ರಗತಿಗಾಗಿ ಮಾಡಬೇಕಾದ ಕೆಲಸವುಳಿದಿಲ್ಲ", ಎಂದು ದೇಜಗೌ ಅದರಿಂದ ಸಂತೃಪ್ತರಾಗಿದ್ದಾರೆ. ಇದು ಭಾವುಕತೆಯ ಮಾತಲ್ಲ. ಮೈಸೂರು ವಿಶ್ವವಿದ್ಯಾನಿಲಯ ಕನ್ನಡದಲ್ಲಿ ಏನೇನು ಸಾಧಿಸಿದೆ ಎನ್ನುವುದಕ್ಕೆ ದೇಜಗೌ ಅವರಿಂದಲೇ ರೂಪುಗೊಂಡ ಕನ್ನಡ ಅಧ್ಯಯನ ಸಂಸ್ಥೆಯೊಂದೇ ಸಾಕು. ಅವರ ಎಲ್ಲ ಸಾಧನೆ ಸಿದ್ಧಿಗಳಿಗೂ ಸಾಕ್ಷಿಯಾಗಿದೆ.

ಭಾಷಾಂತರ ದೇಜಗೌ ಅವರಿಗೆ ಪ್ರಿಯವಾದದ್ದೆಂತೋ ಅಂತೆಯೇ ಅದರ ಬಗ್ಗೆ ಅವರಿಗಿರುವ ಒಲವು ಅಪಾರ. "ಒಂದು ನಾಡಿನ ಸಾಹಿತ್ಯಾಭಿವೃದ್ಧಿಗೆ ಸೃಷ್ಟಿಕಾರ್ಯ ಎಷ್ಟು ಮುಖ್ಯವೋ ಭಾಷಾಂತರ ಕಾರ್ಯ ಅಷ್ಟೇ ಮುಖ್ಯ". ಎಂಬ ದೃಢ ನಿರ್ಧಾರ ಅವರದು. ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟವಾದ ಸಾಹಿತ್ಯ ಸಂಪತ್ತನ್ನು, ವಿವಿಧ ಬಗೆಯ ವಿಷಯ ಸಂಪತ್ತನ್ನು ಕನ್ನಡಿಗರಿಗೂ ಉಣಿಸಬೇಕು. ಅದರಿಂದ ಅವರ ಧ್ಯೇಯೋದ್ದೇಶಗಳು ಉನ್ನತವಾಗಬೇಕು ಎಂಬ ವಿಶಾಲದೃಷ್ಟಿ ಅವರದು. ಕನ್ನಡ ಶಿಕ್ಷಣ ಮಾಧ್ಯಮವಾಗುತ್ತಿರುವ ಈ ಕಾಲದಲ್ಲಂತೂ ಭಾಷಾಂತರದ ಅಗತ್ಯ ಬಹಳವಿದೆ ಎನ್ನುವುದು ಅವರ ಅಭಿಪ್ರಾಯ. ಈ ದೃಷ್ಟಿಯಿಂದಲೇ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಾಂತರ ಸಂಪಾದನಾ ವಿಭಾಗವನ್ನು ಹಾಗೂ ಸ್ನಾತಕೋತ್ತರ ಡಿಪ್ಲೊಮಾ ತರಗತಿಗಳನ್ನು ಆರಂಭಿಸಿದರು. ಆ ಕೀರ್ತಿ ದೇಜಗೌ ಅವರಿಗೇ ಸಲ್ಲುವಂತಹುದು. ಇದರ ಉದ್ಘಾಟನಾ ಸಂದರ್ಭದಲ್ಲಿ ಸ್ವಾಗತ ಭಾಷಣ ಮಾಡುತ್ತ ಅವರು ಆಡಿರುವ ಮಾತುಗಳು ಭಾಷಾಂತರದ ಬಗೆಗೆ ಅವರಿಗಿರುವ ಪೂರ್ಣದೃಷ್ಟಿಯ ಅರಿವು ಮಾಡಿಕೊಡುತ್ತದೆ.

ವಯಸ್ಕರ ಸಾಹಿತ್ಯ ರಚನಾಲಯದ ಉದ್ಘಾಟನೋತ್ಸವದ ಸಂದರ್ಭದಲ್ಲಿ, ವಯಸ್ಕರ ಶಿಕ್ಷಣದ ಅಗತ್ಯತೆಯ ಬಗ್ಗೆ ಹಾಗೂ ವಯಸ್ಕರ ಸಾಹಿತ್ಯ ನಿರ್ಮಾಣದ ಬಗೆಗಿನ ದೇಜಗೌ ಅವರ ಅಭಿಪ್ರಾಯಗಳು ಈ ಲೇಖನದಲ್ಲಿ ವ್ಯಕ್ತಗೊಂಡಿವೆ. ಒಂದಲ್ಲ ಒಂದು ರೀತಿಯಲ್ಲಿ ವಯಸ್ಕರ ಶಿಕ್ಷಣ ಸಮಿತಿಗೆ ಸೇವೆ ಸಲ್ಲಿಸಿರುವ ದೇಜಗೌ ಅವರು ; ವಯಸ್ಕರ ಶಿಕ್ಷಣ ಸಮಿತಿ ಸಾಧಿಸಿರುವ ಮಹತ್ಸಿದ್ಧಿಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಇದರ ಆಶ್ರಯದಲ್ಲಿ ಬೆಳಕು ಕಾಣುತ್ತಿರುವ 'ಬೆಳಕು' ಹಾಗೂ 'ಪುಸ್ತಕ ಪ್ರಪಂಚ' - ಅನೇಕ ಹೊಸ ಬರಹಗಾರರನ್ನು ಸೃಷ್ಟಿಸು ವಲ್ಲಿ ನೆರವಾಗುವುದರ ಜೊತೆಗೆ, ಸಾಹಿತ್ಯ ಪ್ರಪಂಚಕ್ಕೆ ಅನುಪಮ ಕಾಣಿಕೆ ಸಲ್ಲಿಸಿರುವುದನ್ನು ಸ್ಮರಿಸಿದ್ದಾರೆ.

ವಯಸ್ಕರ ಸಾಹಿತ್ಯ ನಿರ್ಮಾಣ ಕ್ಲಿಷ್ಟವಾದದ್ದು. ಕೆಲವು ವಿಶೇಷ ಅಂಶಗಳನ್ನು ಗಮನ ದಲ್ಲಿಟ್ಟುಕೊಂಡು ಅದನ್ನು ನಿರ್ಮಾಣ ಮಾಡಬೇಕಾಗುತ್ತದೆ. ಈ ಅಂಶಗಳು ಯಾವುವು ಎಂಬು ದನ್ನು ಅವರು ಇಲ್ಲಿ ಸೂಚಿಸಿದ್ದಾರೆ ; "ವಯಸ್ಕರಿಗಾಗಿ ಬರೆದ ಸಾಹಿತ್ಯ ಅವರ ಮನೋಧರ್ಮ ಕ್ಕನುಗುಣವಾಗಿರಬೇಕು. ವಸ್ತುವಿನ ಆಯ್ಕೆ, ಅದನ್ನು ರೂಪಿಸುವ ತಂತ್ರ, ಶೈಲಿ ಈ ಮೂರು ಮೂಲಾಂಶಗಳಲ್ಲಿ ವಯಸ್ಕರ ಸಾಹಿತ್ಯ ಶಿಷ್ಟ ಸಾಹಿತ್ಯದಿಂದ ಭಿನ್ನವಾಗಿರಬೇಕಾದ್ದು ಅತ್ಯಗತ್ಯ. ಪೌರಾಣಿಕ ಅಥವಾ ಐತಿಹಾಸಿಕ ವಸ್ತು ಅವನ ಮನಸ್ಸನ್ನು ಸೆರೆಹಿಡಿಯುವಂತೆ ಸಾಮಾಜಿಕ ವಸ್ತು ಆಕರ್ಷಿಸಲಾರದು. ಕಾಲ್ಪನಿಕ ಕತೆಯೂ ತಕ್ಕಮಟ್ಟಿಗೆ ನಡೆದೀತು", ಎಂಬ ಕೆಲವು ಅಮೂಲ್ಯ ಸಲಹೆಗಳನ್ನು ಅವರು ಇಲ್ಲಿ ಸೂಚಿಸಿದ್ದಾರೆ. ಹಾಗೆಯೇ ಶೈಲಿ, ಯಾವುದೇ ತಂತ್ರವನ್ನು ನಡೆಸಿಕೊಂಡು ಹೋಗುವ ರೀತಿ, ಕಥೆಯ ಓಟ, ಇದೆಲ್ಲವೂ ಸರಳವಾಗಿದ್ದು ಅವನನ್ನು ಆಕರ್ಷಿಸುವಂತಿರುವುದರ ಜೊತೆಗೆ ವ್ಯಕ್ತಿತ್ವದ ಪೂರ್ಣ ವಿಕಾಸಕ್ಕೂ ದಾರಿ ಮಾಡಿಕೊಡುವಂತಿರಬೇಕು ಎಂಬ ಅಂಶವನ್ನು

ಇಲ್ಲಿ ಸ್ಪಷ್ಟೀಕರಿಸಿದ್ದಾರೆ.

ಸಮಾಜ ಶಿಕ್ಷಣದ ಆವಶ್ಯಕತೆಯನ್ನು ಅದು ವಿಕಾಸಗೊಂಡು ಬೆಳೆಯಬೇಕಾದ ಮಾರ್ಗವನ್ನು, ಹಾಗೂ ಅದರ ಇದುವರೆಗಿನ ಸಾಧನೆ ಸಿದ್ಧಿಗಳನ್ನು "ಸಮಾಜ ಶಿಕ್ಷಣ ; ಸಾಧನೆ - ಸಿದ್ಧಿ" ಎಂಬ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ. ಒಂದು ಸಮಾಜದಲ್ಲಿ ಒಬ್ಬಿಬ್ಬರು ತಿಳುವಳಿಕಸ್ಥರಾಗಿದ್ದರೆ ಸಾಲದು, ಮುಂದಾಳುಗಳಾಗಿದ್ದರೆ ಸಾಲದು. ಉಳಿದವರ ದೃಷ್ಟಿಯಿಂದ ಅದು ಮತ್ತೂ ಹೆಚ್ಚಿನ ಅಪ್ರಗತಿಗೆ ಕಾರಣವಾಗಬಹುದು. ಇಡೀ ಸಮಾಜ ಶಿಕ್ಷಣ ಕ್ಷೇತ್ರದಲ್ಲಿ ಮುಂದಾಗದ ಹೊರತು ಅದು ಪ್ರಗತಿಯತ್ತ ನಡೆಯಲಾರದು. "ಪ್ರಜಾಶಕ್ತಿ ಬರಡಾದರೆ ನಾಯಕ ಶಕ್ತಿಯೂ ಬರಡಾಗುತ್ತದೆ. ವಿದ್ಯೆಯಿಂದ ಪರಿಷ್ಕಾರಗೊಳ್ಳದ, ವಿವೇಕದಿಂದ ಹರಿತವಾಗದ ಪ್ರಜಾಶಕ್ತಿ ನಾಯಕ ಶಕ್ತಿಗೆ ಕಾಲ್ತೊಡಕಾಗುತ್ತದೆ. ವಿದ್ಯೆಯಿಂದ ನಯ ವಿನಯಗಳು, ಅರಿವು ತಿಳಿವುಗಳು, ಕೂರ್ಪು ನೇರ್ಪುಗಳು ಕೊನರುತ್ತವೆ" ಸಮಾಜ ಶಿಕ್ಷಣ ಕಾರ್ಯದಲ್ಲಿ ವಯಸ್ಕರ ಶಿಕ್ಷಣ ಸಮಿತಿ ವಹಿಸಿರುವ ಪಾತ್ರವನ್ನು ಮತ್ತು "ಸಮಾಜ ಶಿಕ್ಷಣ ಸಮಿತಿ ಮತ್ತು ವಿಶ್ವವಿದ್ಯಾನಿಲಯಗಳು ಒಟ್ಟುಗೂಡಿ ಪರಸ್ಪರ ಸಹಕಾರದಿಂದ ಕೆಲಸ ಮಾಡುವುದಾದರೆ ಕೇವಲ ಹತ್ತು ವರ್ಷಗಳಲ್ಲಿ ನಿರಕ್ಷರತೆಯನ್ನು ಹೋಗಲಾಡಿಸಿ ವಯಸ್ಕರನ್ನು ವಿದ್ಯಾವಂತರನ್ನಾಗಿ ಮಾಡಬಹುದು" ಎಂಬ ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಸಮಾಜ ಶಿಕ್ಷಣ ಪೂರ್ಣಗೊಳ್ಳದ ಹೊರತು ದೇಶದ ಪ್ರಗತಿ ಸಾಧ್ಯವಿಲ್ಲ. ಗಾಂಧೀಜಿಯವರು ಕನಸು ಕಂಡ ರಾಮರಾಜ್ಯ, ಕನಸಿನಲ್ಲಿಯೇ ಉಳಿಯಬೇಕಾಗುತ್ತದೆ.

ಸಂಸ್ಕೃತ ಭಾಷೆಯ ಪ್ರಾಚೀನತೆ, ಅದು ಗಳಿಸಿಕೊಂಡಿದ್ದ ಸ್ಥಾನ, ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ಪ್ರತಿಬಿಂಬಿಸುವಲ್ಲಿ ಅದು ವಹಿಸಿದ್ದ ಪಾತ್ರ, ಅದು ಜನ ಸಾಮಾನ್ಯರನ್ನು ಪ್ರಾರಂಭದಿಂದಲೂ ದೂರವೇ ಇಟ್ಟುಕೊಂಡು ಬಂದಿದ್ದರಿಂದ ಉಂಟಾದ ಪರಿಣಾಮ, ಇಂದೂ ಸಹ ಸಂಸ್ಕೃತವನ್ನು ಕಲಿತ ಜನ ಕೆಲವೊಮ್ಮೆ ಆಡುವ ಮಾತುಗಳು ಹಾಗೂ ಇಂದೂ ಸಂಸ್ಕೃತ ವನ್ನು ಕಲಿಯುವುದರ ಆವಶ್ಯಕತೆಯನ್ನು ಸೂಕ್ಷ್ಮವಾಗಿ ಹೇಳಿ, "ತ್ರಿಭಾಷಾ ಸೂತ್ರದ ಧೃತರಾಷ್ಟ್ರ ಮುಷ್ಟಿಯಲ್ಲಿ ಸಂಸ್ಕೃತ ಅಪ್ಪಚ್ಚಿಯಾಗುವ ದುಸ್ಥಿತಿ ಈಗ ಸಂಪ್ರಾಪ್ತವಾಗಿದೆ. ಚಾಕರಿಯೇ ವಿದ್ಯಾಭ್ಯಾಸದ ಏಕೈಕ ಗುರಿಯಾಗಿರುವಾಗ ಸಂಸ್ಕೃತವನ್ನು ಕೇಳುವವರಿಲ್ಲ........ ಸಂಸ್ಕೃತ ಪುನರ್ಜನ್ಮ ಪಡೆಯಬೇಕಾದರೆ ಧೈರ್ಯದಿಂದ ಈಗಿನ ತ್ರಿಭಾಷಾ ಸೂತ್ರವನ್ನು ತುಸು ಮಾರ್ಪಡಿಸಬೇಕು. ಮಕ್ಕಳಿಗೆ ಕನ್ನಡ ವರ್ಣಮಾಲೆಯ ಜೊತೆಗೆ ನಾಗರಿಲಿಪಿಯನ್ನು ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯ ಜೊತೆಗೆ ಕಲಿಸಬೇಕು". ಎಂದು ಅದನ್ನು ಪುನರುಜ್ಜೀವನಗೊಳಿ ಸುವ ವಿಧಾನವನ್ನು ಸೂಚಿಸಿದ್ದಾರೆ. ಹಾಗೆಯೇ ಸಂಸ್ಕೃತ ಪಂಡಿತರೆನಿಸಿಕೊಂಡವರು ಕನ್ನಡವನ್ನು ಉನ್ನತ ಮಟ್ಟದಲ್ಲಿ ಕಲಿಯದೆಯೇ ಅದರಲ್ಲಿ ಪಾರಂಗತರಾಗಬಹುದು ಎಂಬ ಭ್ರಮೆಯನ್ನು ಕಳೆದು, ಕನ್ನಡವನ್ನು ಕಲಿಯಬೇಕಾಗುತ್ತದೆ, ಏಕೆಂದರೆ, "ಸಂಸ್ಕೃತ ಕಲಿತವರು ಸಾಮಾನ್ಯವಾಗಿ ದೇಶಭಾಷೆಯ ಮೂಲಕವೇ ಸಂಶೋಧನಾ ಲೇಖನಾದಿ ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಸಂಸ್ಕೃತ ಕಲಿತಷ್ಟರಿಂದಲೇ ಕನ್ನಡದಲ್ಲಿ ಪ್ರಭುತ್ವ ಒದಗುವುದಿಲ್ಲ ; ಬೆಳೆಯುತ್ತಿರುವ ಭಾಷೆಯಲ್ಲಿ ಪಾಂಡಿತ್ಯ ಕೈಗೂಡುವುದಿಲ್ಲ" ಮುಂತಾದ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ.

ದೇಜಗೌ ಅವರು ಖ್ಯಾತ ಸಾಹಿತಿಗಳೆಂತೋ, ಉತ್ತಮ ವಾಗ್ಮಿಗಳೆಂತೋ, ಉಚ್ಚ ಆಡಳಿತಾಧಿಕಾರಿಗಳೆಂತೋ ಅಂತೇ ಶ್ರೇಷ್ಠ ಶಿಕ್ಷಣ ತಜ್ಞರೂ ಕೂಡ. ಅವರು ನೀಡುವ ಸಲಹೆಗಳು

ಆದರ್ಶಪ್ರಾಯವಾದವುಗಳು. ಅವುಗಳನ್ನೆಲ್ಲ ಬಳಕೆಗೆ ತಂದಲ್ಲಿ ಕೆಲವೇ ವರ್ಷಗಳಲ್ಲಿ ಉತ್ತಮ ಹಾಗೂ ಫಲಪ್ರದ ಶಿಕ್ಷಣ ಕ್ಷೇತ್ರ ಸಮೃದ್ಧವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

'ಅಶ್ರುಗಂಗಾ' ಇಲ್ಲಿ ಸಂಕಲಿತಗೊಂಡಿರುವ ಲೇಖನಗಳಲ್ಲಿ ವಿಶಿಷ್ಟ ಬಗೆಯದು. ಕಣ್ಣೀರು ಯಾವ ಯಾವ ಸಂದರ್ಭಗಳಲ್ಲಿ ಬರುತ್ತದೆ, ಹಾಗೆ ಕಣ್ಣೀರು ಸುರಿಸುವವರಲ್ಲಿಯೂ ಎಷ್ಟೋ ಬಗೆಯವರನ್ನು ಗುರುತಿಸಬಹುದು ; ಅದು ಲಿಂಗ ಭೇದವಿಲ್ಲದೆ, ವಯೋಭೇದವಿಲ್ಲದೆ ಕೀಳು ಮೇಲೆನ್ನದೆ ಹೇಗೆ ಎಲ್ಲರಲ್ಲಿಯೂ ಸಾರ್ವತ್ರಿಕವಾಗಿ ಆವರಿಸಿದೆ ಮುಂತಾದ ವಿಷಯಗಳನ್ನು ಹಲವು ಸ್ವಾರಸ್ಯಕರ ನಿದರ್ಶನಗಳೊಡನೆ ಇಲ್ಲಿ ಲೇಖನಿಸಿದ್ದಾರೆ. "ಭಾವಗಳು ಮೂಲದಲ್ಲಿ ಅಹಂಕಾರ ಪ್ರೇರಿತವಾದವು. ಅವೆಲ್ಲ ಕೊಟ್ಟ ಕೊನೆಗೆ ಶಾಂತ ಭಾವದಲ್ಲಿ ವಿಲೀನವಾದಾಗಲೇ ಮಾನವನ ಸರ್ವಂಕಷವಾದ ಕ್ಷೇಮ ಸಾಧ್ಯ. ಹಾಗಾಗಲೂ ಅಹಂಕಾರ ಕಿಲ್ಬಿಷಗಳು ತೊಲಗಿ ಆತ ಪ್ರಜ್ಞೆಯಿಂದ ಪುಲಕಿತವಾಗಬೇಕು. ಅಶ್ರುತೀರ್ಥ ಈ ಅಹಂಕಾರ ಮಮಕಾರಗಳ ಕಿಲ್ಬಿಷವನ್ನು ತೊಳೆಯುತ್ತದೆ..... ಕಣ್ಣೀರು ಶಾರೀರಿಕ ಕ್ರಿಯೆಗಳಿಂದ ಉಚ್ಚಾಟನೆಗೊಂಡ ಕೆಟ್ಟ ನೀರಲ್ಲ ; ಅದು ಆತ್ಮದ ದ್ರವರೂಪ ; 'ಆತ್ಮರಸ'....... ಕಣ್ಣೀರು ದೌರ್ಬಲ್ಯದ ಕುರುಹಲ್ಲ; ದೌರ್ಬಲ್ಯ ನಿವಾರಣೆಯ ಕುರುಹು. ವಿವೇಕನಾಶದ ಕುರುಹಲ್ಲ, ವಿವೇಕ ಪ್ರಚೋದನೆಯ ಕುರುಹು ; ಆತ್ಮವಿಸ್ಮೃತಿಯ ಸಾಧನವಲ್ಲ, ಆತ್ಮದರ್ಶನದ ಸಾಧನ ; ಆತ್ಮ ವಿನಾಶದ ಮೂಲವಲ್ಲ ; ಆತ್ಮೋದ್ಧಾರದ ಮೂಲ ; ಅದು ಇಹಪರಗಳನ್ನು ಕೂಡಿಸುವ ರಸ ಸೇತುವೆ" ಎಂದು ಅದನ್ನು ಆತ್ಮೋದ್ಧಾರದ ಸಾಧನವೆಂದು ಗುಣಗಾನ ಮಾಡಿದ್ದಾರೆ. ಅದರ ವಿವಿಧ ಮುಖಗಳನ್ನು ಇಲ್ಲಿ ಪರಿಚಯಿಸಿದ್ದಾರೆ.

'ಬದಲಾಗುತ್ತಿರುವ ಜಗತ್ತಿನಲ್ಲಿ ಸಾಹಿತಿ' - ಈ ಸಂಕಲನದ ಕೊನೆಯ ಲೇಖನ ಹಾಗೂ ವಿಚಾರ ಸಂಪನ್ನ ಲೇಖನ. ವೈಜ್ಞಾನಿಕ ಕ್ರಾಂತಿಯ ಪರಿಣಾಮವಾಗಿ, ಜ್ಞಾನ ವಿಜ್ಞಾನಗಳ ನಿರಂತರ ಬೆಳವಣಿಗೆಯಿಂದಾಗಿ ಜಗತ್ತಿನ ಮೌಲ್ಯಗಳಲ್ಲಿ ಕಂಡು ಬರುತ್ತಿರುವ ಘರ್ಷ ಪ್ರತಿಘರ್ಷಗಳು ಮಾನವನ ರುಚಿ ಅಭಿರುಚಿ ಹಾಗೂ ಅವನ ಮನೋಧರ್ಮಗಳಲ್ಲಿ ವ್ಯತ್ಯಾಸವು ಕಂಡು ಬರಲು ಕಾರಣಗಳಾಗಿವೆ. ಅದು ತನ್ನ ಈ ರೂಪ ಬದಲಾವಣೆಯನ್ನು ಹಲವಾರು ವಿಧದಲ್ಲಿ ತೋರ್ಪಡಿಸಿದೆ. ಇಂಥ ಒಂದು ಪರಿವರ್ತನಶೀಲ ಜಗತ್ತಿನಲ್ಲಿ ಸಾಹಿತಿಯಾದವನು ಹೇಗೆ ವರ್ತಿಸಬೇಕು, ಅವನ ಕರ್ತವ್ಯ ಏನು ? ಮುಂತಾದ ವಿಷಯಗಳನ್ನು ದೇಜಗೌ ಅವರು ಈ ಲೇಖನದಲ್ಲಿ ಲೇಖಿಸಿದ್ದಾರೆ. "ಇರಬೇಕಾದ ಅಥವಾ ಬರಬೇಕಾದ ಸಮಾಜವನ್ನು ಅವನು ಚಿತ್ರಿಸಬೇಕಾಗುತ್ತದೆ. ಅದರ ಓರೆಕೋರೆಗಳನ್ನು ಪ್ರಾಮಾಣಿಕವಾಗಿ ಪ್ರತಿಪಾದಿಸುವುದರ ಮೂಲಕ ಸಾಹಿತಿ ತನ್ನ ಧ್ಯೇಯವನ್ನು ಸಾಧಿಸಬಹುದು. ಒಟ್ಟಿನಲ್ಲಿ ಅವನು ಪಡೆದದ್ದನ್ನು ನಿರೂಪಿಸುವುದರ ಜೊತೆಗೆ ನಡೆಯಬೇಕಾದುದನ್ನು ನುಡಿಯಬೇಕಾಗುತ್ತದೆ. ಅವನು ಜಗತ್ತಿಗೊಂದು ಧ್ರುವತಾರೆಯಾಗಬೇಕು ; ಸಮಾಜಕ್ಕೊಂದು ದಾರಿದೀಪವಾಗಬೇಕು".

ದೇಜಗೌ ಅವರ ಈ ಮಾತುಗಳು ಸರ್ವಸಮ್ಮತವಾದವುಗಳೆಂತೋ ಅಂತೆಯೇ ಸರ್ವಾಭಿವೃದ್ಧಿಯ ಸಂಕೇತಗಳೂ ಆಗಿವೆ. ಸಾಹಿತಿಯಾದವನಿಗೆ ಇಂದಿನ ಸಮಾಜದ ಸ್ಥಿತಿಗತಿಗಳ ಅರಿವಿರುವುದರ ಜೊತೆಗೆ ಮುಂದಿನ ಸಮಾಜದ ಮುನ್ನೋಟವೂ ಇರಬೇಕಾಗುತ್ತದೆ. ಹಿಂದಿನ ಪರಂಪರೆಯ ಕೊಂಡಿಯಂತೂ ಅದಕ್ಕಿರಲೇಬೇಕು. ಇವೆಲ್ಲವನ್ನು ಗಮನಿಸಿದಾಗ ಸಾಹಿತಿ ತನ್ನ ಪ್ರಜ್ಞೆಯನ್ನು ಇಡಿಯಾಗಿ ಬೆಳೆಸಿಕೊಳ್ಳಬೇಕಾಗುತ್ತದೆ. ಅದರ ಸಾರವನ್ನು ಸಾಹಿತ್ಯದ ಮೂಲಕ

ಪ್ರತಿಫಲಿಸಬೇಕಾಗುತ್ತದೆ.

ಬದಲಾಗುತ್ತಿರುವ ಜಗತ್ತಿನಲ್ಲಿ ಸಾಹಿತಿಯ ಕರ್ತವ್ಯ ಎಂತಿರಬೇಕು ಎಂಬುದಕ್ಕೆ ದೇಜಗೌ ಅವರು ಕೊಡುವ ವಿವರಣೆಯನ್ನು ಗಮನದಲ್ಲಿಟ್ಟು, ಅವರ ಈ ಒಂದು ಕೃತಿಯನ್ನು ಗಮನಿಸಿದಾಗ, ಅವರ ನುಡಿ, ನಡೆಯಲ್ಲಿಯೂ ಹೇಗೆ ಕಾಣಬರುತ್ತದೆ ಎಂಬುದು ಸ್ಪಷ್ಟವಾಗುತ್ತದೆ - ಶಿಕ್ಷಣ ಕ್ಷೇತ್ರದಲ್ಲಿ ಅವರು ನೀಡಿರುವ ಸಲಹೆಗಳು ; ನಾಡು ನುಡಿಯ ವಿಷಯಗಳಲ್ಲಿ ಕುಂದೆನಿಸುವ ಕಾರ್ಯಚಟುವಟಿಕೆಗಳು ನಡೆದಾಗ ಅವರು ತಕ್ಷಣ ತೋರುವ ಪ್ರತಿಕ್ರಿಯೆಯಲ್ಲಿ ಕಂಡು ಬರುವ ಮನೋಭಾವ - ಇವೆಲ್ಲವನ್ನು ಗಮನಿಸಿದಾಗ ; ದೇಜಗೌ ಅವರ ವಿಶಾಲ ದೃಷ್ಟಿ, ಅಪಾರ ಜ್ಞಾನ, ಸಮಾಜದ ಹಿನ್ನೋಟ - ಮುನ್ನೋಟಗಳ ಬಗ್ಗೆ ಅವರಿಗಿರುವ ಅರಿವು ಮನದಟ್ಟಾಗುತ್ತದೆ. "ನೂತನಾನುಭವ ಆಲೋಚನೆಗಳಿಗೆ ಹೊಸ ಪಾತ್ರ ಗಾತ್ರ ಆಕಾರಗಳನ್ನು ಸೃಷ್ಟಿಸುತ್ತ ಮುಂದುವರಿಯಬೇಕಾದ್ದು ಸಾಹಿತಿಯ ಹೊಣೆ" - ಇದನ್ನು ದೇಜಗೌ ಅವರ ಬರಹಗಳಲ್ಲಿ ದಟ್ಟವಾಗಿ ಕಾಣುತ್ತೇವೆ. ನಿಜವಾದ ಸಾಹಿತಿ ಭೂತ ವರ್ತಮಾನಗಳ ಅರಿವಿನೊಡನೆ ಭವ್ಯಪೂರ್ಣ ಭವಿಷ್ಯತ್ತನ್ನು ಚಿತ್ರಿಸಬೇಕಾಗುತ್ತದೆ. ಇದು ಸಮಾಜದ ಸ್ಥಿತಿಗಳಿಗೆ ಶೃತಿ ಹಿಡಿದು ನಡೆಯುವಂತಹ ಜೀವಂತ ಸಾಹಿತಿಯ ಲಕ್ಷಣ. ಸಾಹಿತಿಯಾದವನು ತನಗೂ ಈ ಸಮಾಜಕ್ಕೂ ಯಾವ ಸಂಬಂಧವೂ ಇಲ್ಲವೆಂಬಂತೆ ಕಲ್ಪನಾ ಲೋಕದ ಕನಸುಗಳನ್ನು ಚಿತ್ರಿಸಿಗೊಂಡಿದ್ದರೇ ಸಾಲದು, ತಾನು ಜೀವಿಸುವ ಜಗತ್ತಿನ ದುಷ್ಕ್ರಿಯೆಗಳಿಗೆ ಪ್ರತಿಕ್ರಿಯೆಯನ್ನು ತೋರುವಂತಿರಬೇಕು.. ತನ್ನ ಸಮಾಜದ ಆಗುಹೋಗುಗಳನ್ನು ಚಿತ್ರಿಸುವುದರ ಮೂಲಕ ಒಂದು ಸಾಂಗತ್ಯವನ್ನು ತರುವಂತಿರಬೇಕು. ದೇಜಗೌ ಅವರ "ಬೆರಕೆಸೊಪ್ಪು" ಈ ಜಾತಿಯ ಒಂದು ಕೃತಿ. ಸಮಾಜದ ಗತಿಗೆ ಶೃತಿ ಹಿಡಿದು ನಡೆದುದರ ಪ್ರತಿಫಲನ ಇದರಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ.

*   *   *   *   *

'ನೋಟ' : ಒಂದು ಒಳನೋಟ

ವಿಮರ್ಶೆ ಕೇವಲ ಬೌದ್ಧಿಕ ಸ್ತರದಲ್ಲಿಯೇ ನಡೆಯುವ ಕ್ರಿಯೆ ಅಲ್ಲ, - ಹಾಗಾಗಲೂ ಬಾರದು. ವಿಮರ್ಶೆಯ ಸೂತ್ರಗಳು ಏನೇ ಇದ್ದರೂ, ಅವು ಏನೇ ಹೇಳಿದರೂ ; ವಿಮರ್ಶಕನಾದವನು ಕೇವಲ ಅಷ್ಟಕ್ಕೇ ಕಟ್ಟು ಬಿದ್ದು ನಡೆದಾಗ, ಅವನು ಸಮರ್ಥನಾದ ವಿಮರ್ಶಕನೆನಿಸಿಕೊಳ್ಳಲಾರ - ಅದು ಸಮರ್ಥವಾದ ವಿಮರ್ಶೆಯೆನಿಸಿಕೊಳ್ಳಲಾರದು. ವಿಮರ್ಶೆ ಕೂಡ ಒಂದು ರೀತಿಯಲ್ಲಿ ಸೃಜನಶೀಲತೆಗೆ ಸಂಬಂಧಿಸಿದ್ದು. ಪ್ರತಿಭಾವಂತನಾದ ಕವಿಯೊಬ್ಬ ಹಿಂದಿನ ಹಿರಿಯರ ಗೆರೆಗಳನ್ನು ದಾಟಿ ತನ್ನದೇ ಆದ ಹೊಸ ದಾರಿಯನ್ನು ನಿರ್ಮಿಸುವಂತೆ ; ಸಮರ್ಥನಾದ ವಿಮರ್ಶಕನೂ ಆ ಕೆಲಸವನ್ನು ಮಾಡಬಲ್ಲ, ಮಾಡುತ್ತಾನೆ ; ಮಾಡಬೇಕಾಗುತ್ತದೆ.. ಹಾಗಾಗಬೇಕಾದರೆ ವಿಮರ್ಶಕನಾದವನು ಕೇವಲ ಬೌದ್ಧಿಕ ಅಥವಾ ಪ್ರಜ್ಞಾಪೂರ್ವಕ ನೆಲೆಯಲ್ಲಿಯೇ ನಿಲ್ಲದೆ ಸೃಜನಶೀಲ ಸಾಹಿತಿಯಂತೆ ಸ್ವಲ್ಪ ಅಂತರ್ಮುಖಿಯಾಗಬೇಕಾಗುತ್ತದೆ. ವಿಮರ್ಶೆಯ ಸೂತ್ರಗಳನ್ನೇ ಹಿಡಿದು ನೇಯುವುದರ ಜೊತೆಗೆ, ಸಮಕಾಲೀನವಾದ ವಿಚಾರಗಳ ಹಿನ್ನೆಲೆಯಲ್ಲಿ ಆಲೋಚಿಸಬೇಕಾಗುತ್ತದೆ. ವಿಮರ್ಶೆಯ ಹೊಸ ಮಾನದಂಡಗಳನ್ನು ಕಂಡುಕೊಳ್ಳಬೇಕಾಗುತ್ತದೆ. ವಿಮರ್ಶಕನಾದವನು ಸೃಜನಶೀಲ ಸಾಹಿತಿಯಂತೆ ಅಪ್ರಜ್ಞಾಪೂರ್ವಕ ನೆಲೆಗಟ್ಟಿನಲ್ಲಿ ನಿಂತು, ವೈಚಾರಿಕ ಜಾಗೃತಿಯನ್ನೂ ಹೊಂದಿ ಮಾಡುವ ವಿಮರ್ಶೆ ಹೆಚ್ಚು ಸೃಷ್ಟ್ಯಾತ್ಮಕವಾದುದಾಗಿರುತ್ತದೆ.

ವಾಸ್ತವವಾಗಿ ಸೃಷ್ಟಿ ಮತ್ತು ವಿಮರ್ಶೆ ಸಂಪೂರ್ಣವಾಗಿ ಬೇರೆ ಬೇರೆ ಏನೂ ಅಲ್ಲ. ಅವೆರಡೂ ಒಂದನ್ನೊಂದು ಅವಲಂಬಿಸಿಯೇ ಬಂದಿವೆ. ಸೃಷ್ಟಿ ಕಾರ್ಯದಲ್ಲಿ ತೊಡಗುವವನಿಗೆ ವಿಮರ್ಶಾಪ್ರಜ್ಞೆ ಇರುವಂತೆಯೇ, ವಿಮರ್ಶೆಯಲ್ಲಿ ತೊಡಗುವವನಿಗೆ ಸೃಷ್ಟಿ ಕಾರ್ಯದ ಕಲ್ಪನೆಯೂ, ಅರಿವೂ ಇರಬೇಕಾಗುತ್ತದೆ. ಇಲ್ಲವಾದರೆ ಒಳ್ಳೆಯ ಸೃಷ್ಟಿಯಾಗಲೀ, ಒಳ್ಳೆಯ ವಿಮರ್ಶೆಯಾಗಲೀ ಹೊರಬರಲಾರದು. ಶ್ರದ್ಧೆ, ಆಸಕ್ತಿ, ಆಲೋಚನೆಗಳಿಂದ ಕೂಡಿದ ಯಾವುದೇ ಕಾರ್ಯದಲ್ಲಿ ಈ ಎರಡೂ ಅಂಗಗಳು ಬೆರೆತೇ ಇರುತ್ತವೆ. ಮತ್ತು ಒಬ್ಬನೇ ವ್ಯಕ್ತಿಯಲ್ಲಿ ನೆಲೆಗೊಂಡಿರುತ್ತವೆ. ಆದರೆ, ಅವುಗಳ ಬಳಕೆ ಮಾತ್ರ ವ್ಯಕ್ತಿಗೆ ಸಂಬಂಧಿಸಿದ್ದು. ಬಳಕೆಯ ಮೇಲೆ ಅವುಗಳ ಕಾರ್ಯವಿಧಾನ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗುತ್ತಾ ಹೋಗುತ್ತದೆ.

ಸೃಜನಶೀಲತೆಯಲ್ಲಿ ವಿಮರ್ಶಾದೃಷ್ಟಿ ಬೆರೆಯುವುದು ಸಹಜ. ಔಚಿತ್ಯ ಪ್ರಜ್ಞೆಯ ಹಿನ್ನೆಲೆಯಲ್ಲಿಯೇ ವಿಮರ್ಶಾದೃಷ್ಟಿ ಕೆಲಸ ಮಾಡುವುದನ್ನು ಕಾಣಬಹುದು. ಯಾವುದು ಸರಿ, ಯಾವುದು ತಪ್ಪು, ಯಾವುದು ಬೇಕು, ಯಾವುದು ಬೇಡ - ಎನ್ನುವಲ್ಲಿಯೇ ಆ ಪ್ರಜ್ಞೆ ಎಚ್ಚರಗೊಂಡಿರುವುದನ್ನು ಕಾಣುತ್ತೇವೆ. ಅದನ್ನು ಆಧರಿಸಿಯೇ ಒಂದು ಕಲಾಕೃತಿ ಆದಷ್ಟು ಸುಂದರವಾಗಿ ರೂಪುಗೊಳ್ಳಲು ಕಾರಣವಾಗುತ್ತದೆ. ಕವಿ, ತಾನು ಲೋಕದಲ್ಲಿ ಕಂಡ ಅನುಭವಗಳಿಗೆ

ಅಭಿವ್ಯಕ್ತಿಯನ್ನು ಕೊಡುವಾಗ ಬಹುತೇಕವಾಗಿ ಅದು ಸುಪ್ತ ಚಿತ್ತದಿಂದಲೇ ಒಡಮೂಡಿದ್ದಾದರೂ, ಯಾವುದೋ ಒಂದು ಸ್ತರದಲ್ಲಿ ಭಾವದ ಜತೆಗೆ ಬುದ್ಧಿಯೂ ಕೆಲಸ ಮಾಡಿರುತ್ತದೆ. ಆ ಬುದ್ಧಿಯ ಕೆಲಸದಲ್ಲಿ ವಿಮರ್ಶೆಯ ಅಂಶಗಳು ಬೆರೆತಿರುತ್ತವೆ.

ಹೀಗಾಗಿ ಸೃಜನಶೀಲ ಕವಿ ಮತ್ತು ವಿಮರ್ಶಕ ಸಂಪೂರ್ಣವಾಗಿ ಸಂಬಂಧಪಡದವರಲ್ಲ. ಒಳ್ಳೆಯ ಕವಿಯಾಗಿಯೂ ಒಳ್ಳೆಯ ವಿಮರ್ಶಕರಾದವರೂ ಉಂಟು ; ಹಾಗೆಯೇ ಒಳ್ಳೆಯ ವಿಮರ್ಶಕರೆನಿಸಿಕೊಂಡು ಒಳ್ಳೆಯ ಸೃಜನಶೀಲ ಸಾಹಿತಿಗಳೆನಿಸಿಕೊಂಡವರೂ ಉಂಟು. ಆದರೆ, ಇವರಿಬ್ಬರೂ ಯಾವುದೋ ಒಂದು ಘಟ್ಟದಲ್ಲಿ ಬೇರೆ ಬೇರೆಯಾಗಿ ನಿಲ್ಲುತ್ತಾರೆ. ಆದರೂ, ಸೃಜನಶೀಲ ಸಾಹಿತಿಯಿಂದ ಮೂಡಿಬರುವ ವಿಮರ್ಶೆ, ಸ್ವಲ್ಪ ಮಟ್ಟಿಗೆ ವಿಮರ್ಶೆಯ ಸೂತ್ರಗಳ ಗಡಿಯನ್ನು ದಾಟಿರುತ್ತದೆ. ಬಹುಶಃ ಇದಕ್ಕೆ ಅಂತಹ ವಿಮರ್ಶಕನ ವಿಮರ್ಶಾದೃಷ್ಟಿ ಕೇವಲ ಬೌದ್ಧಿಕ ಸ್ತರದಲ್ಲಿಯೇ ಕೆಲಸ ಮಾಡದೆ, ಅದಕ್ಕಿಂತ ಆಳಕ್ಕಿಳಿದು ನೋಡಲು ಪ್ರಯತ್ನಿಸುವುದು, ಆ ಒಂದು ಕೃತಿಯ ಹಲವು ಒಳ ತೋಟಿಗಳನ್ನು ಗುರುತಿಸಿ, ಹೊಸ ನೋಟವನ್ನು ಕೊಡಲು ಪ್ರಯತ್ನಿಸುವುದು.

ಕನ್ನಡದಲ್ಲಿ ಈವರೆಗೆ ಹಲವು ಬಗೆಯ ವಿಮರ್ಶೆ ಹೊರಬಂದಿವೆ. ಕಾಲಕಾಲಕ್ಕೆ ಅದರ ದಿಕ್ಕು ಬದಲಾಗುತ್ತ, ಹೊಸಹೊಸ ಮಾನದಂಡಗಳನ್ನು ಬಳಸಿಕೊಳ್ಳುತ್ತಾ, ವಿವಿಧ ಹಂತಗಳನ್ನು ದಾಟಿ ವೈವಿಧ್ಯತೆಯನ್ನು ಸಾಧಿಸಿವೆ. ವಿಮರ್ಶೆಯಲ್ಲಿ ಕಂಡು ಬರುವ ಈ ಒಂದು ಸ್ಥಿತ್ಯಂತರ, ಕಾಲದ ಅಂತರದಲ್ಲಿ ತೋರುತ್ತ ಬಂದ ವಿಮರ್ಶಾದೃಷ್ಟಿ - ಧೋರಣೆಗಳ ಫಲವಾಗಿ ಮೂಡಿಬಂದದ್ದು. ಆ ಕಾರಣದಿಂದಾಗಿ ಹೊಸ ಹೊಸ ಆಯಾಮಗಳನ್ನು ಅದು ತಂದು ಕೊಂಡಿತು. ಅದು ಹೆಚ್ಚಾಗಿ, ಬೌದ್ಧಿಕ ನೆಲೆಯ ವಿಚಾರಜಾಗೃತಿಯ ಸ್ತರದಲ್ಲಿಯೇ ನಿಂತಂತೆ ತೋರುತ್ತದೆ. ಇದರ ಜತೆಗೆ ತನ್ನ ವ್ಯಕ್ತಿತ್ವದ ಸುಪ್ತಸ್ತರದ ಕೂಗಿಗೂ ಕಿವಿಗೊಟ್ಟಾಗ, ಅದು ಇನ್ನೂ ಹೆಚ್ಚು ಮೌಲಿಕವಾಗಬಲ್ಲದು. ವಿಮರ್ಶೆ ಕೂಡ ಒಂದು ಸೃಷ್ಟ್ಯಾತ್ಮಕ ರಚನೆಯಾಗಬಲ್ಲದು, ಸುಂದರ ಕಲಾಕೃತಿಯಾಗಬಲ್ಲದು. ಅದು ಕೇವಲ ಬೌದ್ಧಿಕ ಸ್ತರದಲ್ಲಿಯೇ ನಿಲ್ಲದೆ ವಿಮರ್ಶಕನ ಸುಪ್ತಚೇತನದ ಪ್ರಯೋಜನವನ್ನು ಪಡೆದುಕೊಂಡು ಹೊರಹೊಮ್ಮಿದಾಗ.

೨

ಪ್ರಸ್ತುತ ಕೃತಿ "ನೋಟ" ಒಟ್ಟು ಎಂಟು ವಿಮರ್ಶಾ ಲೇಖನಗಳ ಒಂದು ಸುಂದರ ಸಂಚಯ. ಹೆಚ್ಚಾಗಿ ಕವಿತೆ ಮತ್ತು ಕಥಾ ಸಂಕಲನಗಳ ವಿಮರ್ಶೆಯನ್ನೊಳಗೊಂಡದ್ದು. ಹರಿಹರನ 'ಗಿರಿಜಾ ಕಲ್ಯಾಣ'ದಲ್ಲಿ ಬರುವ ಪ್ರಕೃತಿವರ್ಣನೆ - ಋತುವರ್ಣನೆಯಿಂದ ಹಿಡಿದು, ವಿನಾಯಕ ಅವರ 'ಚಿಂತನ' ಕವನ ಸಂಕಲನವನ್ನೂ, ಜಿಎಸ್‌ಎಸ್ ಹಾಗೂ ಕೆಎಸ್‌ನ ಅವರ ಕವನ ಸಂಕಲನಗಳನ್ನೂ ಹಾಗೂ ಆಲನಹಳ್ಳಿ ಶ್ರೀಕೃಷ್ಣ ಅವರ 'ಕಾಡು' ಮತ್ತು 'ಪರಸಂಗದ ಗೆಂಡೆತಿಮ್ಮ' ಕಾದಂಬರಿಗಳನ್ನೂ ಮುಟ್ಟಿ ತಟ್ಟಿದೆ. ಇವುಗಳ ಸಾಲಿನಲ್ಲಿ ಶ್ರೀಮತಿ ಶಾಂತಾದೇವಿ ಕಣವಿ ಅವರ 'ಬಯಲು - ಆಲಯ' ಕಥಾ ಸಂಕಲನ ಹಾಗೂ 'ಜನಪದ ಕಾವ್ಯ : ಜೀಶಂಪ ಅವರ ಕೊಡುಗೆ' ಎಂಬ ಪ್ರಬಂಧ ಕೂಡ ಸೇರಿದೆ. ಹೀಗಾಗಿ ಇದೊಂದು ವಿಶಿಷ್ಟ ಬಗೆಯ ವಿಮರ್ಶಾ ಸಂಕಲನ. ವಿಷಯದ ಆಯಾಮದಲ್ಲಿಯೇ ಅವರ ಆಸಕ್ತಿ ಎಂಥದೆಂಬುದು ಸ್ವಲ್ಪಮಟ್ಟಿಗೆ ವ್ಯಕ್ತವಾಗುತ್ತದೆ. ಅವರ ಒಲವು ಹೆಚ್ಚಾಗಿ ಕವಿತೆಯ ಕಡೆಗೇ ಇರುವುದು ಗಮನಾರ್ಹ. ಅಂದ ಮಾತ್ರಕ್ಕೆ ಉಳಿದವುಗಳ ಬಗೆಗೆ ಅಸಡ್ಡೆಯಿದೆ ಎಂದಲ್ಲ. ಸಾಹಿತ್ಯ ವಿದ್ಯಾರ್ಥಿನಿಯಾಗಿ ಎಲ್ಲ ಪ್ರಕಾರಗಳಲ್ಲಿಯೂ ಸಮಾನಸಕ್ತಿಯನ್ನು ತೋರುತ್ತ ಬಂದವರು

ಜಯಲಕ್ಷ್ಮಿ ಅವರು.

ಈ ಸಂಕಲನದ ಮೊದಲ ಪ್ರಬಂಧ 'ವಿನಾಯಕ ಅವರ "ಚಿಂತನೆ : ಕವನ ಸಂಕಲನ : ಒಂದು ಅವಲೋಕನ'. ಇಪ್ಪತ್ತೆರಡು ಪುಟಗಳ ದೊಡ್ಡ ಲೇಖನ. ಸಾಕಷ್ಟು ವಿವರವಾಗಿ, ವಿಶ್ಲೇಷಣಾತ್ಮಕವಾಗಿ, ಇಲ್ಲಿ ತಮ್ಮ ವಿಮರ್ಶಾ ನೋಟವನ್ನು ಬೀರಿದ್ದಾರೆ. ಕವಿ ಕುವೆಂಪು ಅವರು ವಿನಾಯಕನ್ನು ಕುರಿತು ಒಂದೆಡೆ ಹೇಳಿರುವ : "ವಿನಾಯಕರು ಪ್ರಾಚೀನವನ್ನು ಅರಗಿಸಿಕೊಂಡು ಅರ್ವಾಚೀನದ ಕಡೆಗೆ ಸಾಗುತ್ತಿರುವವರಲ್ಲಿ ಮುಖ್ಯರು ಎಂಬುದನ್ನು ಹೇಳುತ್ತ, ವಿನಾಯಕರ ಕಾವ್ಯದೃಷ್ಟಿ, ಧೋರಣೆ ಹಾಗೂ ಅವುಗಳ ಸತ್ವ ಕಾವ್ಯಗುಣಗಳನ್ನು ಕುರಿತು ವಿಮರ್ಶಿಸಿದ್ದಾರೆ. ಮೊದಲನೆಯದಾಗಿ, 'ಚಿಂತನ' ಕವನ ಸಂಕಲನದಲ್ಲಿ ಬರುವ ಕವನಗಳನ್ನು ಅಧ್ಯಯನದ ದೃಷ್ಟಿಯಿಂದ ಅವರು ವಿಂಗಡಿಸಿಕೊಂಡಿರುವುದೂ ಗಮನಾರ್ಹ. ಇಲ್ಲಿನ ಕವನಗಳನ್ನು ಅವರು ಒಟ್ಟು ಮೂರು ಗುಂಪುಗಳಾಗಿ ವಿಂಗಡಿಸಿಕೊಂಡಿದ್ದಾರೆ :

೧. ಪ್ರಕೃತಿಯನ್ನು ಕುರಿತ ಕವನಗಳು

೨. ವ್ಯಕ್ತಿ ಜೀವನ ಹಾಗೂ ತಾತ್ವಿಕ ಚಿಂತನವನ್ನು ಕುರಿತ ಕವನಗಳು.

೩. ಸ್ಥಳಗಳನ್ನು ಕುರಿತ ಕವನಗಳು

ಪ್ರಕೃತಿಯನ್ನು ಕುರಿತು ವಿನಾಯಕರ ಕವನಗಳ ವೈಶಿಷ್ಟ್ಯವನ್ನು ಅವರು ಗುರುತಿಸಿರುವ ರೀತಿ ಹೀಗಿದೆ : "ವಾಲ್ಮೀಕಿಯಿಂದ ಕುವೆಂಪುವರೆಗೆ ಕವಿಗಳು ಪ್ರಕೃತಿಯನ್ನು ಹಲವು ಹತ್ತು ಬಗೆಯಲ್ಲಿ ವರ್ಣಿಸಿದ್ದುಂಟು. ಆದರೆ ವಿನಾಯಕರು ಪ್ರಕೃತಿಯನ್ನು ವರ್ಣಿಸಿರುವುದು ಆ ಮಾದರಿ ಯಲ್ಲಲ್ಲ. ಮುಗಿಲು, ಕಡಲು, ಬೆಟ್ಟ, ಬಾನು, ಕಾಡು ಹಾಗೂ ಮೋಡಗಳ ಸೌಂದರ್ಯಕ್ಕೆ ಓಗ್ಗಿ ಹೊರ ಹೊಮ್ಮಿದ ಪ್ರತಿಕ್ರಿಯೆ ಉಕ್ಕಂದ ಉಗ್ಗಡಣೆಗಳು ಪೌರಾಣಿಕ ಪ್ರತಿಮೆಗಳ ಮೂಲಕ ನೂತನ ಕಾವ್ಯ ವಿಧಾನದ ಮೂಲಕ ಪ್ರಕೃತಿ ಕವನಗಳಾಗಿ ಹೊರಹೊಮ್ಮಿವೆ. ಈ ಕವಿಪ್ರತಿಭೆಗೆ ತಾಟಸ್ಥ್ಯವೇ ಸ್ಥಾಯಿ ಹಾಗೂ ಪ್ರಕೃತಿ ವರ್ಣನೆಗಳಲ್ಲಿ ಸಂಧ ವೈಚಿತ್ರ್ಯದ ಉಲ್ಲೇಖ ಕಡಿಮೆ. ಅನುಭೂತಿ ಜನ್ಯವಾದ ಭಾವ ಕಲ್ಪನೆಗಳೂ ಒಮ್ಮೆಲೇ ಉದ್ರೇಕಕ್ಕೆ ಬಂದು ಉದ್ಗಾರಗೊಳ್ಳು ವುದು ಇವರ ರಚನೆಗಳಲ್ಲಿ ವಿರಳ. ಅದಕ್ಕೆ ಬದಲಾಗಿ ಕಾವ್ಯ ಕ್ರಿಯೆಯಲ್ಲಿ ವಿವೇಚನೆ ವಿಶ್ಲೇಷಣೆ ಗಳತ್ತ ಅವರ ಸಾಧನೆ ನಡೆದಿದೆ" ಎಂದು ಹೇಳಿ ಈ ಹಿನ್ನೆಲೆಯಲ್ಲಿ ಮೂಡಿಬಂದಿರುವ ಕವನ ಗಳನ್ನು ವಿಶ್ಲೇಷಿಸಿ ವಿಮರ್ಶಿಸಿ ತೋರಿದ್ದಾರೆ.

ಅವರ ಎರಡನೆಯ ಗುಂಪಿನ 'ವ್ಯಕ್ತಿಜೀವನ ಹಾಗೂ ತಾತ್ವಿಕ ಚಿಂತನಗಳನ್ನು ಕುರಿತ ಕವನ ಗಳಲ್ಲಿ ಕಂಡು ಬರುವ ಕಾವ್ಯಗುಣವನ್ನು ಹಾಗೂ ಗೋಕಾಕರ ಕಾವ್ಯದೃಷ್ಟಿಯನ್ನು ಅವರು ಸಂಗ್ರಹಿಸಿರುವುದು ಹೀಗೆ : "ತುಂಬ ಸಂಕೀರ್ಣ ವ್ಯಕ್ತಿತ್ವವುಳ್ಳವರು ವಿನಾಯಕರು, ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಕಾಲ ಕಾಲಕ್ಕೆ ಉಂಟಾದ ತುಮುಲಗಳನ್ನು ಅವು ಕಾಲದಿಂದ ಕಾಲಕ್ಕೆ ಪರಿಹಾರ ಗೊಂಡ ರೀತಿಯನ್ನು ಅದಕ್ಕನುಗುಣವಾಗಿ ಅವರ ಕಾವ್ಯದೃಷ್ಟಿ ತೀವ್ರವಾಗಿ ಹರಿತಗೊಂಡು ಗಂಭೀರವಾಗುತ್ತ ಹೋದ ರೀತಿಯನ್ನು ಜೀವನ ಹಾಗೂ ತಾತ್ವಿಕ ಚಿಂತನೆಗಳನ್ನು ಕುರಿತ ಅವರ ಕವನಗಳಲ್ಲಿ ಗುರುತಿಸಬಹುದಾಗಿದೆ.".

ಇಡೀ ಕವನ ಸಂಕಲನದ ಬಗ್ಗೆ ಅಭಿಪ್ರಾಯ ಸೂಚಿಸುತ್ತ ಪ್ರಬಂಧಕಾರರು ಹೇಳಿರುವ ಮಾತುಗಳು

ಅಷ್ಟೇ ವಿಚಾರಾರ್ಹವಾಗಿವೆ: "ಒಟ್ಟಾರೆ ಹೇಳುವುದಾದರೆ, ವಿನಾಯಕರ ವಿಚಾರ ಕಾವ್ಯದಲ್ಲಿ ಕರಗಿ ಮೊಳಕೆಯೊಡೆದು ಚಿಗುರೇ ಇರುವುದರಿಂದ ಕವಿತೆ ಹಂತ ಹಂತವಾಗಿ ಕ್ರಮಬದ್ಧವಾಗಿ ಬೆಳೆದು ಶಿಖರವನ್ನು ಮುಟ್ಟಿ ನಿಬ್ಬೆರಗು ಗೊಳಿಸುವುದರಿಂದ ಹಾಗೂ ಸಾವಯವ ಶಿಲ್ಪದ ಸಮಗ್ರೀಕರಣ ಸಾಧಿತವಾಗದೆ ಶಿಲ್ಪ ಶಿಥಿಲವಾಗಿ ಕುಸಿದುಬಿಡುವ ದೋಷದಿಂದ ಅವರ ಕಾವ್ಯ ರಸವನ್ನು ಕಳೆದುಕೊಳ್ಳುತ್ತದೆ. ಕೇವಲ ಕವಿಯ ಹಸಿ ಹಸೀ ಅನಿಸಿಕೆಗಳನ್ನು ತುಂಬಿಕೊಂಡ ಹಸುಬೆ ಚೀಲವಾಗಿ ಮಾತ್ರ ಕಂಗೊಳಿಸುತ್ತದೆ ಎಂಬುದೇ ನನ್ನ ಕೊನೆಯ ಅಭಿಪ್ರಾಯ" ಎಂಬ ಅವರ ದಿಟ್ಟ ನಿಲುವು ವಿಚಾರಣೀಯ. ವಿನಾಯಕರ ಕಾವ್ಯದ ಕಲೆಗಾರಿಕೆಯ ಸೋಲು ಗೆಲುವನ್ನು ಹೇಳುವಲ್ಲಿ ಜಯಲಕ್ಷ್ಮಿ ಅವರು ತಮ್ಮ ನಿಶ್ಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯ ಏನೇ ಇದ್ದರು, ವಿಮರ್ಶಕರಾಗಿ ತಮಗೆ ಅನಿಸಿದ್ದನ್ನು ಧೈರ್ಯವಾಗಿ ಹೇಳುವ ಅವರ ಮನೋಭಾವ ಮೆಚ್ಚುವಂತಹುದು. ಪ್ರಾಚೀನ ಅರ್ವಾಚೀನ ಸಾಹಿತ್ಯಗಳೆರಡರ ಸೇತುವೆಯಾಗಿ ನಿಂತಿರುವ ವಿನಾಯಕರು ವಸ್ತು - ವಿಚಾರಗಳ ದೃಷ್ಟಿಯಿಂದ ಶಿಖರಪ್ರಾಯರಾದರೂ, ಅವುಗಳಿಗೆ ಒಟ್ಟಂದವನ್ನು ಕೊಡುವಲ್ಲಿ ಸೋಲುತ್ತಾರೆ ಎಂಬ ಮಾತು ಸಂಪೂರ್ಣ ತಳ್ಳಿಹಾಕುವಂತಹುದಲ್ಲ.

ಈ ಸಂಕಲನದ ಎರಡನೆಯ ಪ್ರಬಂಧ 'ಜಿಎಸ್ ಶಿವರುದ್ರಪ್ಪನವರ 'ದೀಪದ ಹೆಜ್ಜೆ'. ಕವಿಯಾಗಿ, ವಿಮರ್ಶಕರಾಗಿ, ಶಿವರುದ್ರಪ್ಪನವರ ಸ್ಥಾನಮಾನವೇನು ಎಂಬುದನ್ನು ನಿರ್ದೇಶಿಸುವಾಗಲೇ ಅವರ ಕಾವ್ಯದ ಸ್ವೋಪಜ್ಞತೆಯನ್ನು, ಸಹಜತೆ, ಸುಕುಮಾರತೆ, ಶುಚಿತ್ವಗಳನ್ನೂ ಕುರಿತು ಹೇಳಿರುವ ರೀತಿಯೂ ವಿಶಿಷ್ಟವಾಗಿದೆ. "ಅವರ ಕಾವ್ಯದಲ್ಲಿ ಮಾಧುರ್ಯತೆ, ಅಂತಃಸ್ಫುರಣಗೊಂಡ ಆಳವಾದ ಬದುಕಿನ ಭಾವನೆಗಳು, ಸಂಗೀತಾತ್ಮಕವಾದ ಸರಳ ಭಾಷಾಸರಣಿ ಎದ್ದು ಕಾಣುತ್ತದೆ. ಬದುಕಿನ ದುರಂತ ವಿಕಾರವನ್ನು ಅದರೊಂದಿಗಿನ ಸೋಲಿನ ನೋವನ್ನು ಅವರು ಒಪ್ಪಿಕೊಂಡವರು. ಇವರ ಕಾವ್ಯದ ನಾಯಕ ಸಮಾಜದ ಟೀಕಾಕಾರನಾಗಿ ಸಂಭಾಷಿಸ ಬಲ್ಲಂತೆ ವಿದೂಷಕನಾಗಿಯೂ ನಗಬಲ್ಲವನಾಗಿದ್ದಾನೆ....... ಇವರ ಕಾವ್ಯದಲ್ಲಿ ಲಯವಿದೆ, ಗಂಭೀರವಾದ ಗತಿ, ಸಮೃದ್ಧವಾದ ಭಾಷಾ ಸಂಸ್ಕಾರವನ್ನು ಯಾರು ಬೇಕಾದರೂ ಕಾಣಬಹುದು. ಅಭಿವ್ಯಕ್ತಿಯಲ್ಲಿ ಇರುವ ಅನುಭವದ ಆರ್ದ್ರತೆ ಸಹೃದಯರ ಸನಿಹವನ್ನು ಸಂಪಾದಿಸುತ್ತದೆ." ಪ್ರಬಂಧಕಾರರು, ಶಿವರುದ್ರಪ್ಪನವರ ಕಾವ್ಯದೃಷ್ಟಿಯನ್ನೂ, ಕಾವ್ಯ ರೀತಿಯನ್ನು ಹಾಗೂ ಅವರ ಕಾವ್ಯಗುಣಗಳನ್ನೂ ಎಚ್ಚರಿಕೆಯಿಂದ ಗಮನಿಸಿ ತೂಗಿ ನೋಡಿದ್ದಾರೆ. ನವ್ಯ ನವೋದಯಗಳ ಸಮನ್ವಯವನ್ನು ಸಾಧಿಸಿರುವ ಕವಿ ಶಿವರುದ್ರಪ್ಪನವರು ಆ ನಿಟ್ಟಿನಲ್ಲಿ ತಮ್ಮದೇ ಆದ ಸ್ವಂತಿಕೆ ಯನ್ನು ತೋರಿದ್ದಾರೆ ಎಂಬುದನ್ನು ಪ್ರಬಂಧಕಾರರು ಸ್ಪಷ್ಟಗೊಳಿಸಿದ್ದಾರೆ. ಪ್ರಸ್ತುತ ಅವರ 'ದೀಪದ ಹೆಜ್ಜೆ' ಕವನ ಸಂಕಲನದ ಬಗ್ಗೆಯೇ ಬರೆಯುತ್ತ: "ಕವಿ ಹಳತಕ್ಕೆ ತೀರ ಅಂಟಿಕೊಂಡು ಬಿಡದೆ, ಹೊಸತಕ್ಕೆ ಅಷ್ಟು ಬೇಗನೆ ಮರುಳಾಗದ ಮುಕ್ತ ಛಂದಸ್ಸಿನಲ್ಲಿ ತಮ್ಮದೇ ಆದ ರೀತಿಯಲ್ಲಿ ಅವರೇ ಹೇಳುವಂತೆ ತಿಳಿ ಸಿಹಿ ನೀರನ್ನು ತುಂಬಿ ಇಡುತ್ತಾರೆ." ಎಂಬ ಅವರ ಅಭಿಪ್ರಾಯ ಜವಾಬ್ದಾರಿಯುತವಾದುದೇ ಆಗಿದೆ. ಇಲ್ಲಿ 'ಬಿಡುಗಡೆ', 'ಒಂದು ಮಾಗಿಯ ಸಂಜೆ', 'ಇವನು', 'ಮಬ್ಬಿನಿರುಳು', 'ಪ್ರಶ್ನೆ' ಮುಂತಾದ ಕವನಗಳನ್ನು ವಿಮರ್ಶಿಸುತ್ತ ಶಿವರುದ್ರಪ್ಪನವರ ಕಾವ್ಯಗುಣದ ಬಗ್ಗೆ ಹಾಗೂ ವಿಚಾರ ದೃಷ್ಟಿ - ಧೋರಣೆ ಬಗ್ಗೆ ಪ್ರಬಂಧಕಾರರು ತಾಳುವ ನಿಲುವು ಪ್ರಬುದ್ಧವಾದುದಾಗಿದೆ.

ಶಿವರುದ್ರಪ್ಪನವರು ತಮ್ಮ ಕವನಗಳಲ್ಲಿ ಬಳಸಿರುವ ಪ್ರತಿಮೆ, ರೂಪಕ ಮುಂತಾದುವುಗಳ ಕಲೆಗಾರಿಕೆ ಮತ್ತು ಕವಿತೆಗಳಲ್ಲಿ ಅವು ಯಶಸ್ವಿಗೊಂಡಿರುವ ಬಗೆಯನ್ನು ಚೆನ್ನಾಗಿ ಗುರುತಿಸಿ ದ್ದಾರೆ

: "ಕವಿ ಕೊಡುವ ಪ್ರತಿಮೆಗಳ, ರೂಪಕ, ಉಪಮೆ, ಸಂಕೇತಗಳು ಅಳವಡಿಸುವ ಅರ್ಥಗಳು. ಬಳಸುವ ಧಾಟಿ ಸಮರ್ಥವಾಗಿದೆ. ಹೊಸ ಹೊಸ ಪ್ರತಿಮೆಗಳ ಬಳಗವನ್ನೆ ಕಡೆದು ತನ್ನ ಕಲಾ ಶಾಲೆಗೆ ಸೇರಿಸಿಕೊಂಡು ಸಂಪದ್ಭರಿತವಾದುದು." ಎಂಬ ಮಾತಿನಲ್ಲಿ ಸತ್ಯವಿದೆ. ಯಾವ ಸಂಕುಚಿತ ಪ್ರವೃತ್ತಿಗೂ ಒಳಗಾಗದ ಕವಿಯ ಮನಸ್ಸು, ಇಲ್ಲಿಯ ಕವನಗಳಲ್ಲಿ ವ್ಯಕ್ತಗೊಳಿಸಿರುವ ಸಮಾಜದ ವಿವಿಧ ಸ್ತರಗಳ ಬಗೆ ಬಗೆಯ ಸಮಸ್ಯೆಗಳ ಮೇಲಿನ ಅನಿಸಿಕೆಗಳು ಕಾವ್ಯಗುಣದಿಂದ ಶೋಭಿಸಿರುವಂತೆಯೇ ; ಚಿಂತನ - ವೈಚಾರಿಕತೆಗಳಿಂದಲೂ ಕೂಡಿ ಸಮಾಜಕ್ಕೆ ಬೆಳಕಾಗಿವೆ ಎಂಬುದನ್ನು ವಿಮರ್ಶಕರು ಸ್ಪಷ್ಟಗೊಳಿಸಿದ್ದಾರೆ.

"ಕೆಎಸ್‌ನ ಅವರ ಮೈಸೂರು ಮಲ್ಲಿಗೆ : ಒಂದು ವಿಶ್ಲೇಷಣೆ" ಈ ಸಂಕಲನದ ಮೂರನೆಯ ಪ್ರಬಂಧ. ನರಸಿಂಹ ಸ್ವಾಮಿ ಅವರ 'ಮೈಸೂರು ಮಲ್ಲಿಗೆ' ಕವನ ಸಂಕಲನವನ್ನು 'ಪವಿತ್ರವಾದ ಪ್ರೇಮದ ಹೃದಯ ಶ್ರೀಮಂತಿಕೆಯ ಉತ್ತುಂಗ ಶಿಖರ' ಎಂದು ಕರೆದಿರುವ ಇವರು ಅಲ್ಲಿಯ ಕವನಗಳ ಕಲೆಗಾರಿಕೆಯನ್ನೂ, ಕಾವ್ಯ ಸತ್ವವನ್ನು ಹಾಗೂ ಸ್ವಾರಸ್ಯವನ್ನು ಅಚ್ಚುಕಟ್ಟಾಗಿ ವಿಶ್ಲೇಷಿಸಿ ವಿಮರ್ಶೆಗೆ ಒಳಪಡಿಸಿದ್ದಾರೆ. ಆ ಹಿನ್ನೆಲೆಯಲ್ಲಿ ಕೆ.ಎಸ್.ನ ಅವರ ಕವಿತೆಯ ಚೆಲುವನ್ನು, ಅವರ ಜೀವನೋತ್ಸಾಹವನ್ನೂ 'ಪ್ರೇಮ ತೋಟದಲ್ಲಿ ಮಲ್ಲಿಗೆ ಇರುವಂತಿಕೆಗಳನ್ನು ಅರಳಿಸಿದ ಶ್ರೇಯಸ್ಸನ್ನು'. ಬಾಳಿನ ಸತ್ಯ ಹಾಗೂ ಸೌಂದರ್ಯಗಳ ಕಡೆ ಗಮನ ಹರಿಸಲು ಪ್ರೇರೇಪಿಸಿದ ಅವರ ಕಾವ್ಯ ಶಕ್ತಿಯನ್ನು ಉಜ್ವಲವಾಗಿ ತೆರೆದಿಟ್ಟಿದ್ದಾರೆ.

ದುಃಖ, ದಾರಿದ್ರ್ಯ, ನೋವು, ಸಂಕಟಗಳ ಸಂತೆಯೇ ಆಗಿರುವ ಬದುಕಿನಲ್ಲಿಯೂ : ಸುಖದ, ಸಂತೋಷದ, ನಲಿವಿನ ಕ್ಷಣಗಳು ಹೇಗೆ ಇಣುಕಿ ಹಾಕಿ ಬದುಕನ್ನು ಸುಂದರಗೊಳಿಸಬಲ್ಲವು - ಸುಂದರಗೊಳಿಸುತ್ತವೆ ಎಂಬುದನ್ನು ಕೆ.ಎಸ್.ನ ಅವರು ತಮ್ಮ ಪ್ರೇಮದ ಕಣ್ಣಿನಿಂದ ಕಂಡು, ಇತರರಿಗೂ ಆ ದಾರಿಯನ್ನು ತೋರಿಕೊಟ್ಟಿದ್ದಾರೆ ಎಂಬ ಪ್ರಬಂಧಕಾರರ ಮಾತು ಅವರ ಆಳವಾದ ಅಧ್ಯಯನದ ಫಲ. ಹಾಗೆಯೇ ಅವರ ಕವಿತೆಗಳ ಗುಣಗಳನ್ನು ತೂಗಿ ನೋಡುತ್ತ ಪ್ರಬಂಧಕಾರರು ಹೇಳುವ ಮಾತುಗಳೂ ಗಮನಾರ್ಹ : "ಹೆಣ್ಣಿನ ಮನಸ್ಸಿನ ನಿಕಟವಾದ ಪರಿಚಯ, ಅವಳ ಹೂ ಮನಸ್ಸು, ಮನಸ್ಸಿನ ಹೊಂಗನಸುಗಳ ಚಿತ್ರಣ, ಸಂಸಾರದ ನಿಮಿಷಗಳ ಕಲಾತ್ಮಕ - ಅಭಿವ್ಯಕ್ತಿ, ಶೈಲಿಯ ಮಾರ್ದವತೆ ಇವು ಕೆ.ಎಸ್.ನ. ಅವರ ಪ್ರೇಮಗೀತೆಯ ಲಕ್ಷಣಗಳು. ಮಣ್ಣಿನಂತೆ ಕಾಣುವ ಜೀವನದ ಹೊನ್ನನ್ನು ಅನನ್ಯವಾದ ರೀತಿಯಲ್ಲಿ ತೆರೆದು ತೋರಿಸುವ ಈ ಕವಿ, ಜಗತ್ತಿಗೆ ಜನತೆಗೆ ಹತ್ತಿರವಾಗಿ ಮೆಚ್ಚುಗೆಯಾಗಿ ಇರುವಲ್ಲಿ ಸೋಜಿಗವಿಲ್ಲ............ಇವರ ಪ್ರತಿಭೆ ಅಪ್ಸರೆಯಂತೆ, ಈ ಲಾವಣ್ಯವು ಮಣ್ಣು ನೆಲದಿಂದ ಬಂದುದಲ್ಲ ಎನಿಸಿಬಿಟ್ಟಿದೆ, ಎಂದು ಹೇಳುವ ದ.ರಾ. ಬೇಂದ್ರೆಯವರ ಮಾತು ಅಕ್ಷರಶಃ ಸತ್ಯವಲ್ಲವೆ ? ಈ ಮಲ್ಲಿಗೆ ಅರೆಬಿರಿದ ಮೊಗ್ಗಲ್ಲ, ಪ್ರಫುಲ್ಲಪುಷ್ಪ, ಈ ಮಲ್ಲಿಗೆಯ ಕಂಪು - ಬಹು ಇಂಪು, ಅಷ್ಟೇ ತಂಪು." ಎಂಬ ಮಾತುಗಳು, ಕೆ.ಎಸ್.ನ ಅವರ ಕವಿತೆಗಳ ಸ್ವೋಪಜ್ಞತೆಯಿಂದ ಮೂಡಿ ಬಂದದ್ದು. ಪ್ರಬಂಧಕಾರರು ಆ ಅಂಶಗಳನ್ನು ಗುರುತಿಸಿ ಹೇಳುವಲ್ಲಿ ಸಫಲರಾಗಿದ್ದಾರೆ - ಸಮರ್ಥರಾಗಿದ್ದಾರೆ.

ಇನ್ನು ಈ ಸಂಕಲನದ ಮುಂದಿನ ಎರಡು ಪ್ರಬಂಧಗಳು ಶ್ರೀಕೃಷ್ಣ ಆಲನಹಳ್ಳಿ ಅವರ 'ಕಾಡು' ಮತ್ತು 'ಪರಸಂಗದ ಗೆಂಡೆತಿಮ್ಮ' ಕಾದಂಬರಿಗಳನ್ನು ಕುರಿತವುಗಳು.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೀಕೃಷ್ಣ ಆಲನಹಳ್ಳಿ ಅವರ ಸ್ಥಾನವನ್ನು ಹಾಗೂ ಅವರ ಸಾಹಿತ್ಯಕ

ಕೊಡುಗೆಯನ್ನು ಕುರಿತು, ಕೆಲವೇ ಸಾಲುಗಳಲ್ಲಿ ಅವರು ಹೇಳಿರುವ ರೀತಿ ವಿಶಿಷ್ಟವಾಗಿದೆ. "ಶ್ರೀ ಶ್ರೀಕೃಷ್ಣ ಅವರು ನಮ್ಮ ಪ್ರತಿಭಾನ್ವಿತ ಲೇಖಕರು. "ಮಣ್ಣಿನ ಹಾಡು" ಕವನ ಸಂಗ್ರಹದ ಮೂಲಕ ಬೆಳಕಿಗೆ ಬಂದ ಆಲನಹಳ್ಳಿಯವರು "ತಪ್ತ" ಮತ್ತು "ಫೀನಿಕ್ಸ್" ಕಥಾ ಸಂಗ್ರಹಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ಹೊಸತನಕ್ಕೆ ಮತ್ತೊಂದು ಆಯಾಮ ತಂದು ಜೋಡಿಸಿದರು. "ಕಾಡು" ಚಲನಚಿತ್ರವಾಗಿ ಗಳಿಸಿದ ಯಶಸ್ಸು ಅಪಾರ. ಅವರ ಇತ್ತೀಚಿನ 'ಪರಸಂಗದ ಗೆಂಡೆತಿಮ್ಮ' ಹಾಗೂ ಈಗ ಅಚ್ಚಿಗೆ ಹೋಗಲಿರುವ 'ಒಂದು ಅರಮನೆ ಕಥೆ' ಇವೆಲ್ಲ ಶ್ರೀಕೃಷ್ಣರಿಗೆ ಅನುಭವದ ವಿಪುಲತೆ ಹಾಗೂ ವೈವಿಧ್ಯತೆಯ ಸಮರ್ಥ ಅಭಿವ್ಯಕ್ತಿಗೆ ಸೂಕ್ತ ಮಾಧ್ಯಮಗಳಾಗಿವೆ. ಕಾದಂಬರಿಯಲ್ಲಿನ ಸಾರವತ್ತಾದ ಇವರ ವಾಸ್ತವ, ಅಭಿವ್ಯಕ್ತಿಯ ಪ್ರತೀಕ" ಕಿರಿದರಲ್ಲಿ ಹಿರಿದಾದ ಅರ್ಥವನ್ನು ತುಂಬಿ ಹೇಳುವ ಪ್ರಬಂಧಕಾರರ ರೀತಿ ಮೆಚ್ಚುವಂತಹುದು. ಅಷ್ಟರಲ್ಲಿಯೇ ಹೇಳಬೇಕೆಂದಿರುವ ಗಹನ ವಿಚಾರವನ್ನು ಸಂಕ್ಷಿಪ್ತವಾಗಿ - ಆದರೆ ಸಮಗ್ರವಾಗಿ ಹೇಳುವ ಜಯಲಕ್ಷ್ಮೀ ಅವರ ಬರವಣಿಗೆ ಆಕರ್ಷವಾದದ್ದು.

ಇದರಂತೆಯೇ, 'ಕಾಡು' ಕಾದಂಬರಿಯ ವಿವೇಚನೆಗೆ ತೊಡಗುವ ಮುನ್ನ ಪೀಠಿಕೆಯಾಗಿ ರಾಮಾಯಣ, ಮಹಾಭಾರತ ಕಥೆಗಳ ಹಿನ್ನೆಲೆಯನ್ನು ಕೊಟ್ಟುಕೊಂಡು ವಿಷಯ ಪ್ರವೇಶ ಮಾಡುವುದೂ, ಅವರ ವಿಮರ್ಶೆಗೆ ಒಂದು ನಿರ್ದಿಷ್ಟ ನೆಲೆಗಟ್ಟನ್ನು, ಸ್ಪಷ್ಟ ಹಿನ್ನೆಲೆಯನ್ನು - ಗಾಂಭೀರ್ಯವನ್ನೂ ತಂದು ಕೊಡುತ್ತದೆ: ಜೀವನದ ಪ್ರಮುಖ ಆಕರ್ಷಣೆಗಳಾದ ಹೆಣ್ಣು, ಹೊನ್ನು ಮತ್ತು ಮಣ್ಣಿಗಾಗಿ ಪ್ರಾಚೀನ ಕಾಲದಿಂದಲೂ ಮಾನವ ನಡೆಸುತ್ತಾ ಬಂದಿರುವ ಮೋಸ - ವಂಚನೆ, ಕೊಲೆ, ಸುಲಿಗೆ, ಹೋರಾಟ ಕಾದಾಟಗಳ ಘೋರ ಘಟನೆಗಳನ್ನು ಸಾಹಿತ್ಯ ಕ್ಷೇತ್ರದ ಕಾದಂಬರಿ, ಕಾವ್ಯ, ನಾಟಕ, ಮುಂತಾದ ವಿವಿಧ ಪ್ರಕಾರಗಳು ಯಥಾವತ್ತಾಗಿ ಚಿತ್ರಿಸುತ್ತಾ ಬಂದಿರುವುದನ್ನು ಕಾಣಬಹುದು. ಭಾರತೀಯ ಮಹಾಕಾವ್ಯಗಳೆನಿಸಿದ 'ರಾಮಾಯಣ' 'ಮಹಾಭಾರತಗಳು' ಹೆಣ್ಣು ಮತ್ತು ಮಣ್ಣಿಗಾಗಿ ಪರಸ್ಪರ ಬಾಂಧವ್ಯದ ನಡುವೆಯೇ ನಡೆದು ಹೋದ ದುರಂತಗಳ ಚಿತ್ರಣವನ್ನೊಳಗೊಂಡ ಬೃಹತ್ಕೃತಿಗಳಾಗಿವೆ ಎಂದು ಆರಂಭಿಸಿ ವಿಷಯ ಪ್ರವೇಶ ಮಾಡುವ ಪ್ರಬಂಧಕಾರರ ಧಾಟಿ ಹೆಚ್ಚು ಪರಿಣಾಮಕಾರಿಯಾದದ್ದೆಂದೇ ಹೇಳಬಹುದು. ಆ ಮೂಲಕ, ಅಂತಹ ಒಂದು ಪರಂಪರೆ ಭಾರತೀಯ ಪರಿಸರದಲ್ಲಿ ಹೇಗೆ ಅಡೆ ತಡೆಯಿಲ್ಲದೆ ನಡೆದು ಬಂದಿದೆ ಎಂಬುದರತ್ತಲೂ ಗಮನ ಹರಿಸಲು ಕಾರಣರಾಗುತ್ತಾರೆ. ಅವರ ವಿಚಾರಗಳಿಗೆ ಒಂದು ನೆಲೆಗಟ್ಟನ್ನು ನಿರ್ಮಿಸಿಕೊಳ್ಳುತ್ತಾರೆ. ಆ ಪರಿಣಾಮವಾಗಿಯೇ 'ಕಾಡು' ಕೃತಿಯನ್ನು ಕುರಿತಂತೆ ಅವರು ಅಂತಿಮವಾಗಿ ಹೇಳುವ "ಕಾಡುವಿನಲ್ಲಿ ಬರುವ ವಾಸ್ತವ ಸತ್ಯ ಇಂದಿನ ಸಮಾಜದ ಜೀವಂತ ಸಮಸ್ಯೆಗಳಾಗಿ ಕಿಚ್ಚೆಯನ್ನು ಕಾಡುವ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದು, ಇಂದಿಗೂ ಬಗೆಹರಿಸಲಾಗದ ನಿಗೂಢತೆಯಿಂದ ಕೂಡಿರುವ ಬದುಕಿನ ಜಟಿಲ ಸಮಸ್ಯೆಗಳನ್ನೊಳಗೊಂಡ "ಕಾಡು" ಸರ್ವಕಾಲಿಕ ಸತ್ಯತೆಯಿಂದ ಕೂಡಿದ ಜೀವಂತ ಕೃತಿ". ಪ್ರಬಂಧಕಾರರು ಅಪ್ರಜ್ಞಾಪೂರ್ವಕವಾಗಿಯೇ ಆರಂಭಕ್ಕೂ ಅಂತ್ಯಕ್ಕೂ ಗಂಟು ಹಾಕಿರುವುದು; ಅವರ ಬೌದ್ಧಿಕ ವಿಚಾರ ಜಾಗೃತಿಯ ಜೊತೆಯಲ್ಲಿಯೇ ಸುಪ್ತ ಚೇತನವೂ ಪ್ರತಿಭಾಪೂರ್ಣವಾಗಿ ಕೆಲಸ ಮಾಡಿದೆ ಎಂಬುದನ್ನು ಸ್ಪಷ್ಟಗೊಳಿಸುತ್ತದೆ.

'ಪರಸಂಗದ ಗೆಂಡೆತಿಮ್ಮ' ಒಂದು ಪ್ರಾದೇಶಿಕ ಕಾದಂಬರಿಯಾಗಿ ಹೇಗೆ ಯಶಸ್ವಿಯಾಗಿದೆ ಎಂಬುದನ್ನು ಪ್ರಬಂಧಕಾರರು ತೋರಿಸಿಕೊಟ್ಟಿದ್ದಾರೆ. ಜೊತೆಗೆ "ಕಾದಂಬರಿಯಲ್ಲಿ ಹೊಸತನ ಇಲ್ಲ.

ಆದರೂ ಕತೆಯ ನಿರೂಪಣೆ ಮತ್ತು ಅದನ್ನು ನಿರ್ವಹಿಸಿಕೊಂಡು ಹೋಗುವ ರೀತಿ ಚೇತೋಹಾರಿಯಾಗಿದೆ". ಎಂಬ ಅವರ ನಿಲುವೂ ಗಮನಾರ್ಹ. ಕನ್ನಡ ಕಾದಂಬರಿಕಾರರನೇಕರು ಪಾಶ್ಚಾತ್ಯ ಕಾದಂಬರಿಕಾರರ ಪ್ರಭಾವಕ್ಕೆ ಬಲಿಯಾಗಿ ಎಡಬಿಡಂಗಿಗಳಾಗುತ್ತಿರುವ ಕಾಲದಲ್ಲಿ ತಮ್ಮ ನೆಲದ ಮಣ್ಣಿನಲ್ಲಿಯೇ ಹುಲುಸಾದ ಹೊಸ ಬೆಳೆಯನ್ನು ತೆಗೆಯುವ ಮನೋವೃತ್ತಿಯನ್ನು ಗಮನಿಸುವ ಅವರ ಮನೋಭಾವ ಮೆಚ್ಚುವಂತಹುದು.

ಈ ರೀತಿಯಲ್ಲಿ ಸ್ವಂತ ನೆಲದ ಮಣ್ಣಿನಿಂದ ಮೂಡಿಬಂದ ಕಾದಂಬರಿಗಳ ಸಾಲಿನಲ್ಲಿ ಶ್ರೀಕೃಷ್ಣ ಆಲನಹಳ್ಳಿಯವರ ಕಾದಂಬರಿಯ ಸ್ಥಾನವನ್ನು ಕುರಿತು ಪ್ರಬಂಧಕಾರರು ಹೇಳುವ ಮಾತುಗಳೂ ಯೋಗ್ಯ ರೀತಿಯವು : "ಒಟ್ಟಿನಲ್ಲಿ ಈವರೆಗೂ ರಚಿತವಾಗಿರುವ ಅತ್ಯುಚ್ಚವಾದ ಪ್ರಾದೇಶಿಕ ಕಾದಂಬರಿಗಳಾದ 'ಮರಳಿ ಮಣ್ಣಿಗೆ', 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ', 'ಗ್ರಾಮಾಯಣ'ಗಳ ಮಟ್ಟಕ್ಕೇರದಿದ್ದರೂ, ಈ ಕಾದಂಬರಿ ತನ್ನ ಸುಂದರವೂ ಸ್ವೈಜವೂ ಆದ ಗ್ರಾಮ ಜೀವನದ ಚಿತ್ರಣದಿಂದ ಒಂದು ಗಮನಾರ್ಹವಾದ ಪ್ರಾದೇಶಿಕ ಕಾದಂಬರಿಯ ಸತ್ತ್ವವನ್ನು ಮೈಗೂಡಿಸಿಕೊಂಡಿದೆ" ಎಂಬ ಮಾತು ಸಮಂಜಸವಾಗಿದೆ.

ಶ್ರೀಮತಿ ಶಾಂತಾದೇವಿ ಕಣವಿ ಅವರ "ಬಯಲು ಆಲಯ" ಕಥಾ ಸಂಕಲನವನ್ನು ಕುರಿತ ವಿಮರ್ಶೆ ಇಲ್ಲಿ ಆರನೆಯ ಪ್ರಬಂಧ. ಶ್ರೀಮತಿ ಕಣವಿ ಅವರ ಕತೆಗಳ ಸ್ವರೂಪವನ್ನು ವೈಶಿಷ್ಟ್ಯವನ್ನು ಕುರಿತು ಹೇಳುತ್ತ : "ಯಾವ ತೆರನಾದ ಅತಿರೇಕಕ್ಕೂ ಆಸ್ಪದ ನೀಡದ ತೂಕ ತಪ್ಪದ ಸಂಯಮದಿಂದ ಕಥೆಗಳನ್ನು ಬೆಳಸಿಕೊಂಡು ಹೋಗುವ ಪರಿ ಶ್ಲಾಘನೀಯವಾದುದು. ಕಥೆಗಳಲ್ಲಿನ ನಿತ್ಯದ ಬದುಕಿನ ಅನುಭವಗಳು ಕೆಲವೇ ಕೌಟುಂಬಿಕ ಸಮಸ್ಯೆಗಳು ಎಳೆ ಎಳೆಯಾಗಿ ಬಿಚ್ಚಿಕೊಳ್ಳುತ್ತ ಹೋಗುತ್ತವೆ ಎಂಬ ಅವರ ಮಾತುಗಳು, ಆ ಕಥೆಗಳ ಅಧ್ಯಯನದ ಫಲವಾಗಿ ಮೂಡಿ ಬಂದುವು. ಸಾಮಾನ್ಯವಾಗಿ ಪ್ರೀತಿ - ಪ್ರೇಮ - ಪ್ರಣಯ - ಇವುಗಳಿಂದಾದ ನಿರಾಶೆ - ಅತೃಪ್ತಿಗಳನ್ನೊಳಗೊಂಡ ಕಥೆಗಳೇ ಇಲ್ಲಿ ಪ್ರಧಾನವಾಗಿದ್ದು ರಚನೆಯ ದೃಷ್ಟಿಯಿಂದ ಕೆಲವು ಓದುಗರ ಗಮನ ಸೆಳೆದರೂ ಮತ್ತೆ ಕೆಲವು "ಕಥೆಗಳು ಸಡಿಲವಾದ ಬೆಳವಣಿಗೆ" (ಹುತ್ತ, ಸತ್ಕಾರ, ಹುತ್ತದಿಂದ ಹೊರಗೆ) ಮತ್ತು ಘಟನೆಗಳ ನಿರೂಪಣೆಯಲ್ಲಿ ಒಂದು ವ್ಯವಸ್ಥಿತವಾದ ಕ್ರಮವಿರದೆ ಕಥೆಗಳು ಸತ್ವಹೀನವಾಗಿ ಓದುಗರ ಮೇಲೆ ಅಷ್ಟಾಗಿ ಪರಿಣಾಮ ಬೀರುವುದಿಲ್ಲ" ಎಂಬ ಅಂಶವನ್ನು ಎತ್ತಿ ತೋರುತ್ತಾರೆಯಾದರೂ, 'ಸಣ್ಣ ಕಥಾ ಸಾಹಿತ್ಯ ಪ್ರಕಾರದಲ್ಲಿ ಹೆಸರು ಮಾಡಿದ ಕೆಲವೇ ಮಂದಿ ಲೇಖಕಿಯರಲ್ಲಿ ಶ್ರೀಮತಿ ಶಾಂತಾದೇವಿ ಕಣವಿಯವರೂ ಒಬ್ಬರು. ಸುಸಂಸ್ಕೃತ ಪರಿಸರದಲ್ಲಿಯೇ ನೆಲೆನಿಂತ ಇವರು ತಮ್ಮಲ್ಲೇ, ಸುಪ್ತವಾಗಿದ್ದ ಹಲವು ಅನುಭವ ಗಳಿಗೆ ಸರಳ ಭಾವಾಭಿವ್ಯಕ್ತಿಯನ್ನು ನೀಡಿದ್ದಾರೆ" ಎಂಬ ಪ್ರಶಂಸೆಯ ಮಾತಿನಲ್ಲಿ ಮೇಲಿನ ಮಾತನ್ನು ಮರೆಮಾಡುವ ಉದ್ದೇಶ ಅವರದಲ್ಲ. ಒಬ್ಬ ಕೃತಿಕಾರನ ಒಂದೊಂದು ಕೃತಿ ಸಂದರ್ಭದಲ್ಲಿಯ ಅವನ ಏಳು ಬೀಳನ್ನು ಅಳೆದು ನೋಡುವ ನೋಟ ಅವರದ್ದು. ಆದ್ದರಿಂದ ಇಂತಹ ಮಾತುಗಳು ಬಂದಾಗ ಅದನ್ನು ವಿರೋಧಾಭಾಸವೆಂದಾಗಲಿ, ಅಥವಾ ಒಂದು ದೋಷವನ್ನು ಮುಚ್ಚಿ ಹಾಕಲು ಹೇಳಿದ ಮತ್ತೊಂದು ಮೆಚ್ಚುಗೆಯ ಮಾತೆಂದಾಗಲೀ ಭಾವಿಸ ಬೇಕಾಗಿಲ್ಲ. ಈ ಅಂಶವನ್ನು ಇಲ್ಲಿ ಬರುವ ಎಲ್ಲ ಕೃತಿಗಳ - ಕೃತಿಕಾರರ ಸಂದರ್ಭದಲ್ಲಿಯೂ ಗಮನಿಸಬಹುದು.

"ಹರಿಹರನ 'ಗಿರಿಜಾ ಕಲ್ಯಾಣ'ದಲ್ಲಿ ಪ್ರಕೃತಿ ಮತ್ತು ಋತು ಚಿತ್ರಣಗಳು" ಈ ಸಂಕಲನದಲ್ಲಿ ಪ್ರತ್ಯೇಕವಾಗಿಯೇ ನಿಲ್ಲುವ ಒಂದು ಪ್ರಬಂಧ. "ಹರಿಹರನ ಉದಯದಿಂದ ಕರ್ನಾಟಕ ಸಾಹಿತ್ಯಕ್ಕೆ

[illegible] ಹೊಸ, ಶೈಲಿ, ತಿರುವು ಮತ್ತು ಕ್ರಾಂತಿ ಮೂಡಿತು ಎಂದರೆ ತಪ್ಪಲ್ಲ" ಎಂಬ ಅಭಿಪ್ರಾಯ ಜೊತೆಗೆ ಮುಂದುವರಿಯುವ ಅವರ ವಿಚಾರಗಳು ಹರಿಹರನ ಕಾವ್ಯಶಕ್ತಿ, ಪ್ರತಿಭೆ ಮುಂತಾದುವುಗಳ ಬಗ್ಗೆ ಬೆಳಕು ಚೆಲ್ಲಿದೆ. ಪ್ರಕೃತಿ ವರ್ಣನೆಯಲ್ಲಿ ಆ ಕವಿ ತೋರಿರುವ ಪ್ರತಿಭೆಯನ್ನು, ಸ್ವೋಪಜ್ಞತೆಯನ್ನು ಮೆಚ್ಚಿ ನುಡಿದಿದ್ದಾರೆ. ಗಿರಿಜಾ ಕಲ್ಯಾಣದಲ್ಲಿ ಕಂಡು ಬರುವ ಪ್ರಕೃತಿ ಸೌಂದರ್ಯ ವರ್ಣನೆ ಕಾಮಕ್ರೂ ಹೇಗೆ ಪೂರಕವಾಗಿದೆ ಎಂಬುದನ್ನು ಗುರುತಿಸಿದ್ದಾರೆ. "ದ್ವಿಮುಖವಾಗಿರುವ ಹರಿಹರನ ಕಾವ್ಯಶಕ್ತಿಯಲ್ಲಿ - ಒಂದು ಪಂಪಾವಿರುಪಾಕ್ಷನ ಮೇಲಿನ ಭಕ್ತಿ, ಮತ್ತೊಂದು ಪ್ರಕೃತಿಯ ಮೇಲಿನ ಅನುರಕ್ತಿ. ಆದುದರಿಂದಲೇ ಅವನ ಕೃತಿಗಳೆಲ್ಲ ಪವಿತ್ರ, ಪರಮ ಪೂಜ್ಯ" ಎಂಬ ಮಾತು ಅರ್ಥಪೂರ್ಣವಾಗಿ, ಸತ್ತ್ವಪೂರ್ಣವಾಗಿ ಮೂಡಿ ಬಂದದ್ದು. ಹರಿಹರನ ಕಾವ್ಯಶಕ್ತಿಯನ್ನು ಪ್ರತಿಬಿಂಬಿಸುವಂತಹುದು.

ಈ ಸಂಕಲನದ ಎಂಟನೆಯ ಹಾಗೂ ಕೊನೆಯ ಪ್ರಬಂಧ ; "ಜನಪದ ಕಾವ್ಯ ; ಜೀಶಂಪ ಅವರ ಕೊಡುಗೆ". ಕನ್ನಡ ಜಾನಪದ ಕ್ಷೇತ್ರಕ್ಕೆ ಮಹತ್ತರ ಸೇವೆಯನ್ನು ಸಲ್ಲಿಸುತ್ತ ಬಂದಿರುವ, ಅದಕ್ಕೊಂದು ಸ್ಪಷ್ಟ ಹಾಗೂ ನಿರ್ದಿಷ್ಟ ರೂಪವನ್ನು ಕೊಡುವಲ್ಲಿ ಸಮರ್ಥರಾಗಿರುವ ಡಾ. ಜೀಶಂಪ ಅವರು 'ಜನಪದ ಕಾವ್ಯ'ಕ್ಕೆ ಕೊಟ್ಟಿರುವ ಕೊಡುಗೆಯ ವಿವೇಚನೆ ಇಲ್ಲಿದೆ. ಜನಪದ ಕಾವ್ಯ ಸಂಗ್ರಹದ ಐತಿಹಾಸಿಕ ವಿವೇಚನೆಯನ್ನು ಮಾಡುತ್ತ, ೧೯೫೦ರ ಅವಧಿಯಲ್ಲಿಯೇ ಅವರು ಸಂಗ್ರಹ ಕಾರ್ಯಕ್ಕೆ ತೊಡಗಿದರೂ, ಅವನ್ನು ಬೇರೆ ಬೇರೆ ರೂಪದಲ್ಲಿ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸಿದರು" ಎಂಬ ಅಂಶವನ್ನು ಬೆಳಕಿಗೆ ತರುತ್ತಾರೆ. ಅಲ್ಲದೆ "ಅವರು ತಮ್ಮ ಅಪೂರ್ವ ಜನಪದ ಕಾವ್ಯಗಳನ್ನು ಸುಂದರವಾದ ಸಾಹಿತ್ಯ ಚಿತ್ರಗಳ ರೂಪದಲ್ಲಿ ಬರೆದು ಪ್ರಕಟಿಸುತ್ತಾ ಅವುಗಳ ಬಗ್ಗೆ ಕನ್ನಡಿಗರ ಆಸಕ್ತಿಯನ್ನು ಸೆಳೆಯುತ್ತ ಬಂದರು. ಅವರು ಪ್ರಕಟಿಸಿದ ಈ ಜನಪದ ಸಾಹಿತ್ಯಮಾಲೆ ನಾಡಿನಾದ್ಯಂತ ನಮ್ಮ ಜನಪದ ಸಾಹಿತ್ಯದ ಬಗ್ಗೆ ಹೊಸ ಆಸಕ್ತಿಯನ್ನು ಕೆರಳಿಸಿತು. ನಮ್ಮ ಜನಪದ ಸಾಹಿತ್ಯದ ವ್ಯಾಪ್ತಿ ವೈವಿಧ್ಯಗಳನ್ನು ಅರಿಯಲು ಈ ಅಪಾರ ಬರವಣಿಗೆಯ ಮೂಲಕ ಸಾಧ್ಯವಾಯಿತು. ಜೀಶಂಪ ಅವರು ನಡೆಸಿದ ಈ ಕೃಷಿ ಮುಂದಿನ ಜಾನಪದ ಅಧ್ಯಯನಕ್ಕೆ ಒಂದು ಹೊಸ ತಿರುವನ್ನು ಕೊಟ್ಟಿತು" - ಎಂಬ ದೀರ್ಘವಾದ ವಿವೇಚನೆ ಪರಿಶುದ್ಧ ಮನಸ್ಸಿನಿಂದ ಕೂಡಿದ್ದಾಗಿದೆ. ಅವರ ಪರಿಶ್ರಮವನ್ನು ದಾಖಲಿಸುವ ಮುಕ್ತ ಮನಸ್ಸಿನ ಅನಿಸಿಕೆಯಾಗಿದೆ.

ಡಾ|| ಜೀಶಂಪ ಅವರು ಈವರೆಗೆ ಪ್ರಕಟಿಸಿರುವ ಸಮಗ್ರ ಕೃತಿಗಳ ಪರಿಶೀಲನೆಯನ್ನು ಜಯಲಕ್ಷ್ಮಿ ಅವರು ಸಂಶೋಧನ ದೃಷ್ಟಿಯಿಂದಲೂ, ವಿಮರ್ಶಾದೃಷ್ಟಿಯಿಂದಲೂ ಪರಿಶೀಲಿಸಿರುವುದು ಶ್ಲಾಘನಾರ್ಹ. ಅವರ ಎಲ್ಲ ಸಾಧನೆ ಸಿದ್ಧಿಗಳನ್ನು ತುಲನೆ ಮಾಡಿ, ಕೊನೆಯಲ್ಲಿ "೧೯೬೦ರ ಈಚಿನ ನಮ್ಮ ಜಾನಪದ ಅಧ್ಯಯನದ ಮಹತ್ವದ ಕಾಲವನ್ನು "ಜೀಶಂಪ ಯುಗ" ಎನ್ನಬಹುದು ಎಂದು ಹೇಳಿರುವುದು ಔಚಿತ್ಯ ಪೂರ್ಣವಾಗಿದೆ.

ಒಟ್ಟಿನಲ್ಲಿ ಜಯಲಕ್ಷ್ಮಿ ಸೀತಾಪುರ ಅವರ "ನೋಟ" ಸಂಕಲನದ ಈ ಎಂಟು ವಿಮರ್ಶಾ ಪ್ರಬಂಧಗಳು, ಆಯಾ ವಿಷಯಗಳ ಒಟ್ಟು ನೋಟವನ್ನು ವಿಮರ್ಶಾತ್ಮಕವಾಗಿ ಕೊಡುವಲ್ಲಿ ಯಶಸ್ವಿಯಾಗಿವೆ ಎನ್ನಬಹುದು.

ಜಯಲಕ್ಷ್ಮಿ ಸೀತಾಪುರ ಅವರು ಕನ್ನಡ ಎಂ.ಎ.ಯಲ್ಲಿ ನನ್ನ ವಿದ್ಯಾರ್ಥಿಯಾಗಿದ್ದವರು. ಅವರ ವಿಮರ್ಶಾದೃಷ್ಟಿ ಆಗಲೇ ಮೊನಚಾಗಿದ್ದು, ಎಂತಹುದನ್ನಾದರೂ ಭೇದಿಸಿ ಪ್ರಕಟಗೊಳ್ಳಲು

ಹವಣಿಸುತ್ತಿತ್ತು. ಇಲ್ಲಿಯ ಪ್ರಬಂಧಗಳನ್ನು ಗಮನಿಸಿದಾಗ ಅವರ ಸಾಹಿತ್ಯ ಶಕ್ತಿ, ಆಳವಾದ ಅಧ್ಯಯನ, ಸೂಕ್ಷ್ಮ ದೃಷ್ಟಿ, ಎಷ್ಟೆಂಬುದು ಗೊತ್ತಾಗುತ್ತದೆ. ಯಾವುದೇ ವಿಷಯವನ್ನು ಒಳಹೊಕ್ಕು ನೋಡುವ ಅವರ ನೋಟ, ಅಲ್ಲಿಯೇ ಪಾತಾಳಗರಡಿಯನ್ನು ತಿರುವಿ ಬೇಕಾದುದನ್ನು ಹೊರ ತೆಗೆಯುವ ಅವರ ಕೌಶಲ, ಮೆಚ್ಚುವಂತಹುದು.

"ನೋಟ" ಜಯಲಕ್ಷ್ಮಿ ಸೀತಾಪುರ ಅವರ ಪ್ರಥಮ ವಿಮರ್ಶಾ ಸಂಕಲನವಾದರೂ, ಅವರು ತಮ್ಮ ಶ್ರದ್ಧೆ ಶ್ರಮದಿಂದಾಗಿ ಸಾಹಿತ್ಯ ವಿಮರ್ಶೆಗೆ ಬೇಕಾದ ಭಾಷೆಯನ್ನು ರೂಢಿಸಿಕೊಂಡಿದ್ದಾರೆ. ಪೂರ್ವಗ್ರಹ ಪೀಡಿತವಲ್ಲದ ಅವರ ವಿಮರ್ಶೆ ಮುಕ್ತ ಮನಸ್ಸಿನ ಅನಿಸಿಕೆಗಳನ್ನು ಸ್ವಚ್ಛವಾಗಿಯೇ ಹೊರಗೆಡಹುತ್ತದೆ. ಉದ್ದೇಶಪೂರ್ವಕವಾಗಿ ಒಬ್ಬರ ಮನನೋಯಿಸುವುದಾಗಲಿ ಅಥವಾ ಒಬ್ಬರ ಮನ ನೋಯಿಸಬೇಕಾಗುತ್ತದೆಯೆಂದು ಹೇಳಬೇಕಾದುದನ್ನು ಮರೆಮಾಚುವುದಾಗಲಿ ಅವರ ಸ್ವಭಾವವಲ್ಲ. ಹೇಳಬೇಕಾದುದನ್ನು ಸ್ಪಷ್ಟವಾಗಿ ಹೇಳುವ ಎದೆಗಾರಿಕೆ ಅವರದ್ದು. ವಿಮರ್ಶಕನಿಗಿರಬೇಕಾದ ಒಂದು ಮುಖ್ಯ ಗುಣ ಅದೆನಿಸುತ್ತದೆ. ಸಂಕೋಚಕ್ಕೆ, ದಾಕ್ಷಿಣ್ಯಕ್ಕೆ ಒಳಗಾದ ವಿಮರ್ಶೆ ಎಂದಿಗೂ ಸರಿಯಾದ ವಿಮರ್ಶೆಯಾಗಲಾರದು - ಆಗುವುದಿಲ್ಲ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ ವಿಮರ್ಶಕರ ಸಂಖ್ಯೆ ತೀರ ವಿರಳ. ಈ ಕ್ಷೇತ್ರದಲ್ಲಿ ಕಂಡು ಬರುವ ಹಿಡಿಮಂದಿ ವಿಮರ್ಶಕರಲ್ಲಿ ಪುರುಷ ವರ್ಗದವರೇ ಹೆಚ್ಚು. ಕನ್ನಡದ ಬಹುಮಟ್ಟಿನ ಲೇಖಕಿಯರು ಕಥೆ, ಕಾದಂಬರಿಗಳ ರಚನೆಯಲ್ಲಿಯೇ ತೃಪ್ತಿಪಟ್ಟುಕೊಳ್ಳುತ್ತಿರುವ ಈ ದಿನಗಳಲ್ಲಿ ಒಳ್ಳೆಯ ವಿಮರ್ಶನ ಶಕ್ತಿಯನ್ನು ಬೆಳೆಸಿಕೊಂಡು ಈ ಕ್ಷೇತ್ರಕ್ಕೆ ಮಾತ್ರ ತಮ್ಮನ್ನು ಅರ್ಪಿಸಿಕೊಳ್ಳುತ್ತಿರುವ ಶ್ರೀಮತಿ ಜಯಲಕ್ಷ್ಮೀ ಸೀತಾಪುರ ಅವರು ಅಭಿನಂದನಾರ್ಹರು. ವಿದ್ಯಾರ್ಥಿ ದಿಸೆಯಲ್ಲಿಯೇ ವಿಮರ್ಶಾ ಬರಹದಲ್ಲಿ ಇಂತಹ ಪ್ರಬುದ್ಧತೆಯನ್ನು ತೋರಿರುವ ಜಯಲಕ್ಷ್ಮೀ ಸೀತಾಪುರ ಅವರಿಗೆ ಆ ಕ್ಷೇತ್ರದಲ್ಲಿ ಒಳ್ಳೆಯ ಭವಿಷ್ಯವಿದೆ. ಅವರಲ್ಲಿ ವಿಮರ್ಶಾ ದೃಷ್ಟಿಯಿದೆ, ಅದಕ್ಕೆ ಬೇಕಾದ ಭಾಷೆ ಇದೆ, ತಾಳ್ಮೆಯಿಂದ ಓದಿ ಅರ್ಥ ಮಾಡಿಕೊಂಡು ಅರಗಿಸಿಕೊಳ್ಳುವ ಶಕ್ತಿ ಇದೆ, ಜೊತೆಗೆ ಮುಕ್ತ ಆಲೋಚನೆಯ ಮನಸ್ಸಿದೆ. ಇವರನ್ನು ಈ ಕೃತಿಯ ಮೂಲಕ ಕನ್ನಡ ವಿಮರ್ಶಾ ಕ್ಷೇತ್ರಕ್ಕೆ ಸ್ವಾಗತಿಸುತ್ತ ಎಲ್ಲ ಶುಭವನ್ನೂ ಕೋರುತ್ತೇನೆ. ಇನ್ನೂ ಉತ್ತಮ ವಿಮರ್ಶಾ ಕೃತಿಗಳು ಇವರಿಂದ ಬರುವಂತಾಗಲಿ ಎಂದು ಹಾರೈಸುತ್ತೇನೆ.

* * * * *

ವಿಚಾರಶೀಲ ದೇಜಗೌ

'ದೇಜಗೌ' ಮೊದಲನೆಯದಾಗಿ ನನ್ನ ಗುರುಗಳು, ಎರಡನೆಯದಾಗಿ ನನ್ನ ಬಂಧುಗಳು. ಗುರುಗಳಾಗಿ ಅವರು ನನ್ನನ್ನು ಹೆಚ್ಚು ಪ್ರೀತಿ, ವಾತ್ಸಲ್ಯಗಳಿಂದ ಕಂಡಿದ್ದಾರೆ, ಮಾರ್ಗದರ್ಶನ ಮಾಡಿದ್ದಾರೆ, ಒಳ್ಳೆಯ ದಾರಿ ತೋರಿದ್ದಾರೆ. ಬಂಧುಗಳಾಗಿ ಏನೆಂದು ಹೇಳಲಾರೆ ! ಆದರೆ, ಒಮ್ಮೆ ಬಂಧುಗಳನ್ನು ಕುರಿತು ಯಾರೋ ಕೇಳಿದ ಪ್ರಶ್ನೆಗೆ ಉತ್ತರವಾಗಿ : "ನಾನು ಬಂಧುಗಳಾ ರನ್ನೂ ಅಷ್ಟಾಗಿ ಹಚ್ಚಿಕೊಂಡಿಲ್ಲ, ನನಗಿರುವವರೆಲ್ಲಾ ಸ್ನೇಹಿತರೇ" ಎಂದು ಹೇಳಿ ನನ್ನತ್ತ ವಿಶೇಷಾರ್ಥದಲ್ಲಿ ಹುಸಿನಗೆ ಬೀರಿ ನೋಡಿದ್ದು ನೆನಪಿದೆ. ಆದರೆ ನಾನು ಮಾತ್ರ ಅದಕ್ಕಿಂತ ಮೊದಲಿನಿಂದಲೂ, ವ್ಯಾವಹಾರಿಕವಾಗಿ ಅವರ ಬಂಧುವೆನಿಸಿಕೊಳ್ಳುವುದಕ್ಕಿಂತ ಆಚಿನಿಂದಲೂ, ಅನಂತರವೂ ಪ್ರಧಾನವಾಗಿ ಶಿಷ್ಯನಂತೆಯೇ ನಡೆದುಕೊಂಡು ಬಂದದ್ದರಿಂದ ನನಗೆ ಎರಡನೆಯ ಮುಖದ ಪರಿಚಯ ಅಷ್ಟಾಗಿ ಇಲ್ಲ. ಹಾಗಾಗಿ ಅವರು ವಿವಿಧ ಅಧಿಕಾರ ಸ್ಥಾನದಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ಕುಲಪತಿಗಳಾಗಿ ಕಾರ್ಯನಿರ್ವಹಿಸುವಲ್ಲಿ ತೋರಿದ ದಕ್ಷತೆ, ಶಿಸ್ತು, ಸಂಯಮ, ಮಾಡಿದ ಚಿಂತನೆ, ಯೋಜನೆ ಮುಂತಾದವುಗಳನ್ನು ಮಾತ್ರ ಇಲ್ಲಿ ಈ ಲೇಖನದ ವ್ಯಾಪ್ತಿಗೆ ತಂದಿದ್ದೇನೆ.

* * * * *

"ದೇಜಗೌ - ವ್ಯಕ್ತಿ ಮತ್ತು ಸಾಹಿತ್ಯ"ದ 'ಒಳಪಿಡಿ' ಭಾಗವನ್ನು ತೆರೆದು ನೋಡಿದರೆ, ಅವರ ಸ್ನೇಹಿತರು ಹಾಗೂ ಸಹೋದ್ಯೋಗಿಗಳು ಅವರನ್ನು ಕಂಡ ಬಗೆ ಎಂಥದೆಂಬುದು ವೇದ್ಯವಾಗುತ್ತದೆ. ಅವರಿಗಿಂತ ಹಿರಿಯರಿಂದ ಹಿಡಿದು ಕಿರಿಯರವರೆಗೆ ಈ ಪಟ್ಟಿ ದೇಜಗೌ ಅವರ ವ್ಯಕ್ತಿತ್ವದ ಒಂದೊಂದು ಮುಖವನ್ನೂ ಪರಿಚಯಿಸುತ್ತದೆ. ನಮ್ಮನ್ನು ಚಕಿತಗೊಳಿಸುತ್ತದೆ.

ಇಷ್ಟಾದರೂ, ಇದಿಷ್ಟೇ ಅವರ ವ್ಯಕ್ತಿತ್ವದ, ಬಹುಮುಖ ಪ್ರತಿಭೆಯ ಮುಖಗಳೆಂದು ಹೇಳಬರುವಂತಿಲ್ಲ. ಅವುಗಳ ಸಂಖ್ಯೆ ಇನ್ನೂ ಬಹಳಷ್ಟಿದೆ, - ಶಿಕ್ಷಣ ತಜ್ಞರಾಗಿ, ವಿಚಾರಶೀಲರಾಗಿ, ಚಿಂತನ ಶೀಲರಾಗಿ, ಯೋಜನಾಪ್ರಿಯರಾಗಿ...... ಹೀಗೆ ಪಟ್ಟಿ ಇನ್ನೂ ಮುಂದುವರಿಯುತ್ತದೆ.

ಗುಡಿಸಲಿನಿಂದ ಗಂಗೋತ್ರಿಯವರೆಗಿನ ದೇಜಗೌ ಅವರ ಹೋರಾಟದ ಬದುಕನ್ನು ಗಮನಿಸಿದ ಯಾರಿಗಾದರೂ ಅವರ ವ್ಯಕ್ತಿತ್ವ ಎಂಥದೆಂಬುದು ಅರ್ಥವಾಗದೆ ಇರದು. ಬಾಳಿನುದ್ದಕ್ಕೂ ಅವರು ಕಂಡ ಏರಿಳಿತಗಳು, ಅಲ್ಲಿ ಅವರು ನಡೆದುಕೊಂಡ ರೀತಿ ನೀತಿ, ಅವರ ಸ್ವಭಾವ ಎಂಥದೆಂಬುದನ್ನು ಬಯಲಿಗೆಳೆಯುತ್ತದೆ. ತಮ್ಮ ಪಾಲಿಗೆ ಬಂದ ಕಾರ್ಯದಲ್ಲಿ ಅವರು ತೋರಿದ ಶ್ರದ್ಧೆ, ಆಸಕ್ತಿ ಅದಕ್ಕೆ ವಿಶಿಷ್ಟ ರೂಪವನ್ನು ಕೊಡುವಲ್ಲಿ ಅವರು ವಹಿಸಿದ ಪಾತ್ರ, ಹಾಕಿದ ಯೋಜನೆ, ಹಾಗೂ ಮಾಡಿದ ದುಡಿಮೆ ಇವೆಲ್ಲಾ ದೇಜಗೌ ಅವರ ದೂರದರ್ಶಿತ್ವವನ್ನು ಹಾಗೂ ಕಾರ್ಯ ಶ್ರದ್ಧೆಯನ್ನು ಸೂಚಿಸುತ್ತವೆ.

ಅವರು ಯಾವುದೇ ವಿಚಾರವನ್ನು ಕೈಗೆತ್ತಿಕೊಂಡರೂ ಆಳವಾಗಿ ಅಭ್ಯಸಿಸದೆ, ಅದಕ್ಕೆ ಪೂರ್ಣ ಸ್ವರೂಪವನ್ನು ಕೊಡದೆ ಕೈ ಬಿಡುವವರಲ್ಲ. 'ಕೈ ಕೆಸರಾಗದೆ ಬಾಯಿ ಮೊಸರಾಗದು', 'ಕಾಯಕವೇ ಕೈಲಾಸ' ಎಂಬ ಹಿರಿಯೋಕ್ತಿಗಳಿಗೆ ದೇಜಗೌ ಉತ್ತಮ ಉದಾಹರಣೆಯಾಗುತ್ತಾರೆ. ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಬಾಳಿನಲ್ಲಿ ಮೊದಲು ಒಂದು ವ್ಯವಸ್ಥೆಯನ್ನು ಮಾಡಿಕೊಂಡು, ಕಷ್ಟ ಸಹಿಷ್ಣುವಾಗಿ ದುಡಿದು ಮುಂದೆ ಬರದ ಹೊರತು, ಆತ ಸಾರ್ವಜನಿಕ ಕ್ಷೇತ್ರದಲ್ಲಾಗಲೀ, ಅಥವಾ ಒಂದು ಸಂಸ್ಥೆಯಲ್ಲಾಗಲೀ ಮುಂದಡಿಯಿಡಲಾರ, ಯಶಸ್ವಿಯಾಗಿ ಬಾಳಲಾರ ಎಂಬುದನ್ನು ದೇಜಗೌ ತೋರಿಕೊಟ್ಟಿದ್ದಾರೆ.

ದೇಜಗೌ ಅವರ ಬರಹಗಳನ್ನೂ ಭಾಷಣಗಳನ್ನೂ ಮುಖ್ಯವಾಗಿ ಅವರ ಸಾಧನೆಗಳನ್ನು ಬಲ್ಲ ಯಾರಿಗಾದರೂ ಅವರ ಚಿಂತನ - ಮಂಥನದ ರೀತಿ ನೀತಿ ಅರ್ಥವಾಗದಿರದು. ಅವರು ಎಂದೂ ಬರಿಯ ಬರಡು ಯೋಜನೆಗಳನ್ನು ಹಾಕಿದವರಲ್ಲ. ಅವರು ಶಿಕ್ಷಣ ಕ್ಷೇತ್ರದಲ್ಲಿ ಕಾಲಿರಿಸಿದ ಮೇಲೆಯೇ ಅದಕ್ಕೆ ಸಂಬಂಧಿಸಿದಂತೆ ಮಾಡಿದ ಅನೇಕ ಬಗೆಯ ದಕ್ಷತೆಯ ಕಾರ್ಯಗಳು ಅವರ ಹೆಸರನ್ನು ಉಳಿಸಿವೆ. ಅವರು ಪ್ರಾಧ್ಯಾಪಕರಾಗಿ ಕನ್ನಡ ಅಧ್ಯಯನ ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದು ಅವರ ದೂರದರ್ಶಿತ್ವದ ಹಾಗೂ ಶ್ರಮದ ಫಲ. ಡಾ. ಹಾ. ಮಾ. ನಾಯಕ ಅವರ ಮಾತಿನಲ್ಲಿಯೇ ಹೇಳಬಹುದಾದರೆ "ನಾಲ್ಕೈದು ಜನರ ಒಂದು ಚಿಕ್ಕ ಇಲಾಖೆಯನ್ನು ಆಶ್ಚರ್ಯಕರ ಅಲ್ಪ ಅವಧಿಯಲ್ಲಿ ಅರವತ್ತು ಎಪ್ಪತ್ತು ಜನರ ಒಂದು ಮಹಾಸಂಸ್ಥೆಯನ್ನಾಗಿ ಮಾರ್ಪಡಿಸಿದ್ದು ಅವರ ಒಂದು ಪವಾಡ" ಇದರ ಸಂಖ್ಯೆ ಈಗ ಇನ್ನೂ ಇಮ್ಮಡಿ ಮುಮ್ಮಡಿಗೊಂಡು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯದ ಹೃದಯ ಭಾಗವಾಗಿ, ಕಣ್ಣಾಗಿ ಕಂಗೊಳಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ.

ದೇಜಗೌ ಅವರು ಕುಲಪತಿಗಳಾಗಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೈಗೊಂಡ ಕಾರ್ಯವನ್ನು, ಹಾಕಿದ ಯೋಜನೆಗಳನ್ನು ಯಾರೂ ಮರೆಯುವಂತಿಲ್ಲ. ಅವರು ಕುಲಪತಿ ಸ್ಥಾನವನ್ನು ಅಲಂಕರಿಸಿದಂದೇ ಅನೇಕರು ಆಶಾಭಾವನೆಯಿಂದ ತುದಿ ಬೆರಳಲ್ಲಿ ನಿಂತು ನೋಡಿದ್ದುಂಟು. ಅಂಥವರ ಆಶಾಭಾವನೆಗೆ ದೇಜಗೌ ಎಂದೂ ಮಾರಕವಾಗಲಿಲ್ಲ. ಹೊಸ ಹೊಸ ಸ್ನಾತಕೋತ್ತರ ಶಾಖೆಗಳು ಅವರ ಕಾಲದಲ್ಲಿ ಮಾನಸ ಗಂಗೋತ್ರಿಯಲ್ಲಿ ತೆರೆಯಲ್ಪಟ್ಟವು. ಅನೇಕ ಹೊಸ ಹೊಸ ಕಟ್ಟಡಗಳು ನಿರ್ಮಾಣಗೊಂಡು, ಮಾನಸ ಗಂಗೋತ್ರಿ ಸರ್ವತೋಮುಖ ಬೆಳವಣಿಗೆಯನ್ನು ಕಂಡದ್ದು ಇವರ ಕಾಲದಲ್ಲಿ. ವಿದ್ಯಾರ್ಥಿಗಳು, ವಿಶ್ವವಿದ್ಯಾನಿಲಯದ ಬೋಧಕ ಹಾಗೂ ಸಿಬ್ಬಂದಿ ವರ್ಗದ ಹಿತವನ್ನು ಗಮನಿಸಿ ಬೇಕಾದ ವಸತಿ ಸೌಕರ್ಯ ಇವರ ಕಾಲದಲ್ಲಿ ಸಾಕಷ್ಟು ಮಟ್ಟಿಗೆ ಆಯಿತೆನ್ನಬಹುದು.

ದೇಜಗೌ ಎಂದೂ ನಿರಾಶಾವಾದಿಗಳಲ್ಲ. ಅವರ ಬದುಕಿನಲ್ಲಿ ಸೋಲಿನ ಸಂದರ್ಭ ಅಪರೂಪದ್ದೆಂದೇ ಹೇಳಬಹುದು. ಇದಕ್ಕೆ ಕಾರಣ ಅವರ ವಿಚಾರಶಕ್ತಿ. ಚಿಂತನಶೀಲ ದೂರದೃಷ್ಟಿ, ಹಿಡಿದ ಕೆಲಸವನ್ನು ಬಿಡದೆ ಸಾಧಿಸುವ ಛಲ. ಮುಂದಿನ ಹತ್ತು ವರ್ಷಗಳ ಫಲಾಫಲಗಳನ್ನು ದೇಜಗೌ ಊಹಿಸುತ್ತಿದ್ದರು. ಅದಕ್ಕೆ ತಕ್ಕ ಯೋಜನೆಗಳನ್ನು ರೂಪಿಸುತ್ತಿದ್ದರು. ಅವರ ವಿಚಾರಶಕ್ತಿ ಅಷ್ಟೊಂದು ಚುರುಕಾದುದು, ಸೂಕ್ಷ್ಮವಾದದ್ದು ದೂರದೃಷ್ಟಿಯುಳ್ಳದ್ದು.

* * * * *

ಪ್ರೊ. ದೇಜಗೌ ಅವರು ಕುಲಪತಿಯಾಗಿದ್ದ ಆರು ವರ್ಷಗಳಲ್ಲಿ ಮಾಡಿದ ಭಾಷಣಗಳನ್ನಷ್ಟೇ

ಗಮನಿಸಿದವರೂ ಸಾಕು, ಅವರ 'ವಿಚಾರಶೀಲತೆ' ಯಾವ ಬಗೆಯದೆಂಬುದು ಅರ್ಥವಾಗುತ್ತದೆ. ಅವರ ಜ್ಞಾನ ಭಂಡಾರದ ವೈಭವವೂ ತಿಳಿಯುತ್ತದೆ. ಒಂದು ವಿಷಯ ಅವರ ತಲೆಯನ್ನು ಹೊಕ್ಕಾಗ ಅದನ್ನು ವಿಶ್ಲೇಷಿಸುವ ರೀತಿ ಅನುಪಮವಾದದ್ದು. ಯಾವ ವಿಷಯವನ್ನೇ ಆಗಲಿ, ಅವರು ದೀರ್ಘವಾಗಿ ಆಲೋಚಿಸದೆ ತೀರ್ಮಾನ ಕೈಗೊಳ್ಳುವವರಲ್ಲ. ಕೈಗೆತ್ತಿಕೊಂಡ ವಿಷಯವನ್ನು ಆಮೂಲಾಗ್ರವಾಗಿ ವಿಶ್ಲೇಷಿಸಿ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ಅವರ ಮನೋದಾರ್ಢ್ಯ ಅನುಕರಣೀಯ.

ಸಾಹಿತ್ಯಕ, ಸಾಮಾಜಿಕ, ಶೈಕ್ಷಣಿಕ - ಹೀಗೆ ಯಾವುದೇ ಕ್ಷೇತ್ರವಾಗಿರಲಿ, ಅವರು ಯಶಸ್ವಿಯಾಗಿ ಜಯದ ಹಾದಿ ಹಿಡಿದು ಮುನ್ನಡೆದಿದ್ದಾರೆ. ವಿಜಯದ ಪತಾಕೆ ಎತ್ತಿ ಹಿಡಿದಿದ್ದಾರೆ. ತಮ್ಮ ವಿಚಾರ ಸಿದ್ಧಿಯಿಂದ ಹಲವರಿಗೆ ಬೆಳಕು ತೋರಿದ್ದಾರೆ. ಅವರ ಭಾಷಣಗಳು ಕಾಡು ಹರಟೆಗಳಲ್ಲ, ಸಾರವಿಲ್ಲದ ನೀರಸ ನುಡಿಗಳಲ್ಲ. ಅವೆಲ್ಲ ಅಭ್ಯಸನದ ಲೇಖನಗಳಾಗಿ ಕೃತಿಯ ರೂಪವನ್ನು ತಾಳಿವೆ. ಅನೇಕ ವಿಚಾರಗಳ ಮೇಲೆ ಹೊಸ ಬೆಳಕನ್ನು ಚೆಲ್ಲಬಲ್ಲ ವಿಚಾರಪೂರಿತ ಲೇಖನಗಳಾಗಿವೆ. ಭಾಷಣಕ್ಕೆ ಇಂತಹದೇ ವಸ್ತುವೆಂಬುದಿಲ್ಲ, ನಿಜ. ಆದರೆ, ಅದು ದೇಜಗೌ ಅವರಂತಹವರ ವಿಷಯದಲ್ಲಿ ಹೇಳುವ ಮಾತಲ್ಲ. ಯಾವುದೇ ಸಂದರ್ಭವಾಗಿರಲಿ ಅದನ್ನು ಸರಿಯಾದ ಅರ್ಥದಲ್ಲಿ ತೆಗೆದುಕೊಂಡು, ಅದಕ್ಕೊಂದು ವಿಶಿಷ್ಟ ರೂಪ ಕೊಡಲು ಅವರು ಶ್ರಮಿಸಿದ್ದಾರೆ. ಆ ಸಮಯದ ಸದುಪಯೋಗ ಎಲ್ಲರಿಗೂ ಎಲ್ಲ ರೀತಿಯಿಂದಲೂ ಆಗುವಂತೆ ಆಸ್ಥೆ ವಹಿಸಿದ್ದಾರೆ.

ದೇಜಗೌ ಅವರು ಕುಲಪತಿಗಳಾಗಿದ್ದಾಗ ಮಾಡಿದ್ದ ಭಾಷಣಗಳ ಸಂಖ್ಯೆ, ವಿಷಯದ ಅಥವಾ ಸಂದರ್ಭದ ವೈವಿಧ್ಯ ಆಶ್ಚರ್ಯವನ್ನುಂಟುಮಾಡುವಂತಹುದು : ಪ್ರಾದೇಶಿಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಮ್ಮೇಳನ ಮತ್ತು ವಿಚಾರ ಗೋಷ್ಠಿಗಳಲ್ಲಿ ನೀಡಿದ ಭಾಷಣಗಳು ಸಣ್ಣ - ಪುಟ್ಟ ಸಮಾರಂಭಗಳಲ್ಲಿ ಮಾಡಿದ ಭಾಷಣಗಳೂ ಮಹತ್ವದ್ದಾಗಿಯೇ ಇವೆ.

'ಜನಸಂಖ್ಯೆಯ ಸಮಸ್ಯೆ'ಯನ್ನು ಕುರಿತು 'ಭಾರತೀಯ ಕುಟುಂಬ ಯೋಜನಾ ಸಂಸ್ಥೆ'ಯ ಆಶ್ರಯದಲ್ಲಿ ನಡೆದ 'ಜನಸಂಖ್ಯಾ ಶಿಕ್ಷಣ' ವಿಚಾರಗೋಷ್ಠಿಯನ್ನು ಉದ್ಘಾಟಿಸುತ್ತಾ, ದೇಜಗೌ ಮಾಡಿದ ಭಾಷಣ ಅವರ ವಿಚಾರಧಾರೆಗೊಂದು ನಿದರ್ಶನ. ಕುಟುಂಬ ಯೋಜನೆ ವಿಷಯದ ಮೇಲೆಯೇ ಹೊಸ ಬೆಳಕನ್ನು ಚೆಲ್ಲುವ ಅವರ ವಿಶ್ಲೇಷಣಾ ರೀತಿ ವಿಶಿಷ್ಟ ಬಗೆಯದು : "ಕುಟುಂಬ ಯೋಜನೆ ಎಂಬ ಪದಸಮುಚ್ಚಯವನ್ನು ಸಾಮಾನ್ಯವಾಗಿ ಜನನಿಯಂತ್ರಣ ಎಂಬರ್ಥದಲ್ಲಿ ಬಳಸುತ್ತಿದ್ದೇವೆ. ಆದರೆ, ಅದು ಜನ ನಿಯಂತ್ರಣಕ್ಕಿಂತ ವಿಶಾಲವಾದ ಅರ್ಥವುಳ್ಳದ್ದು. ಅದರಲ್ಲಿ ಮಿತಸಂತಾನದ ಕಲ್ಪನೆಯೂ ಅಡಕವಾಗಿದೆ, ಒಂದು ಕುಟುಂಬ ಸುಖವಾಗಿ ಬದುಕು ನಡೆಸಬೇಕಾದರೆ ಏನೆಲ್ಲಾ ಅನುಕೂಲಗಳು ಹಾಗೂ ಮನೋಧರ್ಮ ಬೇಕೋ ಅದನ್ನೆಲ್ಲಾ ಕುಟುಂಬ ಯೋಜನೆ ಎಂಬ ಪದಸಮೂಹ ಒಳಗೊಂಡಿದೆ. ಒಂದೇ ಒಂದು ಮಗುವಿದ್ದ ಮಾತ್ರಕ್ಕೆ ಆ ಕುಟುಂಬ ಸುಖವಾಗಿರುತ್ತದೆಂದು ಹೇಳುವಂತಿಲ್ಲ. ಕುಟುಂಬದಲ್ಲಿ ಸುಖಸಂತೋಷಗಳು ನೆಲಸಬೇಕಾದರೆ ಮೊದಲು ಗಂಡ ಹೆಂಡಿರಲ್ಲಿ ಹೊಂದಾಣಿಕೆ ಇರಬೇಕು. ಅಂಥಾ ಹೊಂದಾಣಿಕೆಯಿಂದ ಬಡತನವೂ ಮುಚ್ಚಿ ಹೋಗುತ್ತದೆ. ಕುಟುಂಬದಲ್ಲಿ ಗಂಡಸು ಮಾತ್ರ ದುಡಿದರೆ ಸಾಲದು, ಇಬ್ಬರೂ ಒಬ್ಬರಿಗೊಬ್ಬರು ಪೂರಕವಾಗಿ ದುಡಿಯಬೇಕು. ಗಂಡ ವ್ಯವಸಾಯ ಮಾಡಿದರೆ, ಹೆಂಡತಿ ಮನೆಗೆಲಸ ಮಾಡಿಕೊಂಡು, ಕೋಳಿ ಸಾಕಾಣಿಕೆಯಲ್ಲಿಯೋ ಹೊಲಿಗೆಯಲ್ಲಿಯೋ, ಎಲೆ ಕಟ್ಟುವುದರಲ್ಲಿಯೋ

ಅಂತೂ ಯಾವುದಾದರೊಂದು ಗೃಹ ಕೈಗಾರಿಕೆಯಲ್ಲಿ ತೊಡಗಿ ಕೊಳ್ಳಬೇಕು. ಇಬ್ಬರೂ ಸೇರಿ ಮನೆಯನ್ನು ಚೊಕ್ಕಟವಾಗಿಡಬೇಕು. ಇಬ್ಬರೂ ಸಂಸಾರದ ಎಲ್ಲಾ ಜವಾಬ್ದಾರಿಯನ್ನು ಹೊರಬೇಕು. ಜೀವನವೊಂದು ಕಲೆ. ಆ ಕಲೆಯ ಸಾಧನೆ ಕೇವಲ ಕುಟುಂಬ ಯೋಜನೆಯಿಂದ ಮಾತ್ರ ಸಾಧ್ಯ. ಇಂಥ ಯೋಜನೆಯಿಂದ ಮಾತ್ರ ಕುಟುಂಬ ಸಾರ್ಥಕವಾಗುತ್ತದೆ. ದೇಶ ಕಲ್ಯಾಣ ಸಾಧ್ಯವಾಗುತ್ತದೆ.[1]

'ಕುಟುಂಬ ಯೋಜನೆ' ಎಂಬುದಕ್ಕಿರುವ ಸೀಮಿತಾರ್ಥವನ್ನು ತೊಡೆದು ಹಾಕಿ ವಿಶೇಷ ಅರ್ಥದಲ್ಲಿ ಅದನ್ನು ವಿಶ್ಲೇಷಿಸಿದ್ದಾರೆ. ಕುಟುಂಬ ಯೋಜನೆ ಕೇವಲ ಮಕ್ಕಳ ನಿಯಂತ್ರಣಕ್ಕೆ ಸೀಮಿತವಾದುದಲ್ಲ; ಇಡೀ ಕುಟುಂಬವನ್ನೇ ಅಚ್ಚುಕಟ್ಟಾದ ರೀತಿಯಲ್ಲಿ ವ್ಯವಸ್ಥೆಗೊಳಿಸಿಕೊಳ್ಳುವಂತಹುದು. ಆಗ ಅದರಲ್ಲಿ ಮಕ್ಕಳ ನಿಯಂತ್ರಣವೂ ಒಂದು ಅಂಶವಾಗಿ ಸೇರಿಕೊಳ್ಳುತ್ತದೆ.

ಅನಕ್ಷರತೆಯನ್ನು 'ರಾಷ್ಟ್ರೀಯ ಪಾತಕ' ಎಂದು ಕರೆಯುವ ದೇಜಗೌ ಆ ಬಗೆಗೆ ತೋರುವ ಕಾಳಜಿ ಅತ್ಯಂತ ಮಹತ್ವವಾದುದು. ಹಲವರ ಕಣ್ಣು ತೆರೆಯಿಸಿ ಆಸಕ್ತಿ ಕೆರಳಿಸುವಂತೆ ಮಾಡುವ ಅವರ ವಿಚಾರಲಹರಿ ಅವರ ದೂರಾಲೋಚನೆಗೆ ಒಂದು ಸಾಕ್ಷಿ. ಅವರ ದೃಷ್ಟಿಯಲ್ಲಿ : - "ಅನಕ್ಷರತೆ, ಅಸ್ಪೃಶ್ಯತೆ ಮತ್ತು ಬಡತನ ಇವು ಮೂರು ಮಹಾಪಾತಕಗಳು ಹಾಗೂ ಭಾರತದ ಅತಿ ಭಯಂಕರ ಶತ್ರುಗಳೂ ಆಗಿವೆ. ಭಾರತದ ಭವಿಷ್ಯವೂ ಉಜ್ವಲಗೊಳ್ಳಬೇಕಾದರೆ ಭಯಂಕರ ಪಾಪ ಈ ಅನಿಷ್ಟಗಳನ್ನು ತೊಲಗಿಸಬೇಕಾಗುತ್ತದೆ. ಬಡವರು, ಶ್ರೀಮಂತರ ಶೋಷಣೆಗೆ ಒಳಗಾಗುವಂತೆ ಅನಕ್ಷರಸ್ಥ ಜನತೆ ಸುಶಿಕ್ಷಿತ ವರ್ಗದ ಶೋಷಣೆಗೆ ಗುರಿಯಾಗುತ್ತದೆ. ಧ್ಯೇಯ ಮಂತ್ರಗಳನ್ನೂ ಉದ್ಘೋಷಿಸುವುದರಿಂದಾಗಲಿ, ಗೋಡೆಗಳ ಮೇಲೆ ಪ್ರಕಟಣ ಪತ್ರಗಳನ್ನು ಅಂಟಿಸುವುದರಿಂದಾಗಲೀ, ಪ್ರಕಟಣೆಯ ಫಲಕಗಳನ್ನು ಹಿಡಿದು ರಸ್ತೆಯಲ್ಲಿ ಮೆರವಣಿಗೆಗಳನ್ನು ನಡೆಸುವುದರಿಂದಾಗಲೀ, ಭಾಷಣ ಮಾಡುವುದರಿಂದಾಗಲೀ ಮತ್ತು ಪತ್ರಿಕೆಗಳಲ್ಲಿ ವಿದ್ವತ್ಪೂರ್ಣ ಲೇಖನಗಳನ್ನು ಬರೆಯುವುದರ ಮೂಲಕವಾಗಲೀ ಈ ಅನಿಷ್ಟಗಳನ್ನೂ ತೊಲಗಿಸಲಿಕ್ಕೆ ಸಾಧ್ಯವಿಲ್ಲ. ನ್ಯಾಯ ಸಮ್ಮತವೂ, ಶಾಸನಬದ್ಧವೂ ಆದ ಕಾರ್ಯಾಭಿಮುಖಿ ಕಾರ್ಯಕ್ರಮಗಳು ಮಾತ್ರ ತನ್ನ ಗುರಿ ಮುಟ್ಟಲು ನೆರವಾಗಬಲ್ಲವು. ಉಳಿದ ಸಮಸ್ತ ಅಭಿವೃದ್ಧಿ ಕಾರ್ಯಕ್ರಮ ಗಳಿಗಿಂತಲೂ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಆದ್ಯತೆ ದೊರೆಯಬೇಕು. ಈ ಕಾರ್ಯದಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣಕ್ಕೆ ಹಾನಿಯಾದರೂ ಚಿಂತೆಯಿಲ್ಲ, ಒಂದೆರಡು ವರ್ಷಗಳವರೆಗೆ ವಿಶ್ವವಿದ್ಯಾನಿಲಯ ಶಿಕ್ಷಣವನ್ನು ನಿಲ್ಲಿಸಿದರೂ ಅಡ್ಡಿಯಿಲ್ಲ ಎಂದು ಸೂಚಿಸುವ ಮಟ್ಟಿಗೂ ನಾವು ಮುಂದುವರಿಯಬಹುದು, ವಿದ್ಯಾವಂತ ರೆಲ್ಲರೂ ಈ ಮೂರು ಬಗೆಯ ಅನಿಷ್ಟಗಳನ್ನು ತೊಲಗಿಸುವ ಪವಿತ್ರ ಕಾರ್ಯದಲ್ಲಿ ಪ್ರವರ್ತಿತ ರಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು".[2]

ನಾವು ಅಗತ್ಯವಾಗಿ ಕಾಳಜಿ ವಹಿಸಬೇಕಾದುದಕ್ಕೆ ಆದ್ಯತೆ ಕೊಡುತ್ತಿಲ್ಲ ಎಂಬುದು ಅವರ ಕೊರಗು. ಅಡಿಪಾಯದ ಭದ್ರತೆ ಮುಖ್ಯ. ಮೇಲಿನ ಕಟ್ಟಡದ ಆಕಾರವನ್ನು ಅನಂತರ ನಾವು ಹೇಗೆ ಬೇಕಾದರೂ ರೂಪಿಸಬಹುದು. ಆದರೆ, ಅದೇ ಅಲುಗಾಡುವ ಸ್ಥಿತಿಯಲ್ಲುಳಿದಾಗ ಇಡೀ ವ್ಯವಸ್ಥೆಯೇ ಅಸ್ತವ್ಯಸ್ತಗೊಳ್ಳುತ್ತವೆ. ಭವಿಷ್ಯ ಅಂಧಕಾರವಾಗುತ್ತದೆ. ಈ ಅರ್ಥದಲ್ಲಿ ದೇಜಗೌ ವ್ಯಾಪಕವಾಗಿ ಹಬ್ಬಿರುವ ಅನಕ್ಷರತೆಯನ್ನು ಹೋಗಲಾಡಿಸಲು ಸ್ವಲ್ಪ ಕಾಲ ವಿಶ್ವವಿದ್ಯಾನಿಲಯ ಗಳನ್ನು

೧. ದೇಜಗೌ : ಕುಲಪತಿ ಭಾಷಣಗಳು. ಪು. ೧೦೪

೨. ಅದೇ.

ಮುಚ್ಚಿದರೂ ಚಿಂತೆಯಿಲ್ಲ ಎಂಬ ಮಾತು ದಂಗು ಬಡಿಸುವಂತೆ ತಕ್ಷಣಕ್ಕೆ ತೋರಿದರೂ ವಿಚಾರ ಪೂರಿತವಾದುದು ಎಂಬುದರಲ್ಲಿ ಸಂಶಯವಿಲ್ಲ. ಮಹಮದ್ ಪೈಗಂಬರ್ ಬಗ್ಗೆ ಇರುವ ಒಂದು ಕಥೆಯನ್ನು ಕೇಳಿದರೆ 'ಅನಕ್ಷರತೆ'ಯ ಭಯಂಕರ ಸ್ವರೂಪ ಎಂಥದೆಂಬುದು ವೇದ್ಯವಾಗುತ್ತದೆ. ಒಮ್ಮೆ ಅಕ್ಬರ್ ತನ್ನ ರಾಜ್ಯದಲ್ಲಿ 'ಘೋರ ಪಾತಕ'ವನ್ನು ಮಾಡಿದವನಿಗೆ ಬಹುಮಾನ ಕೊಡುವುದಾಗಿ ಡಂಗೂರ ಸಾರಿಸಿದನಂತೆ. ಅದಕ್ಕಾಗಿ ಕೆಲವು ದಿನಗಳು ಕಾಲಾವಕಾಶವನ್ನು ಕೊಟ್ಟನಂತೆ. ಕಾಲಾವಧಿ ಮುಗಿದ ಮೇಲೆ ಪಾತಕವನ್ನೆಸಗಿದವರೆಲ್ಲ ಹುಮ್ಮಸ್ಸಿನಿಂದ ತಮ್ಮ ತಮ್ಮ ಸಾಹಸವನ್ನು ತೋಡಿಕೊಂಡರು. ಒಬ್ಬ ಶಿಶುಹತ್ಯೆ ಮಾಡಿದುದಾಗಿ ಹೇಳಿಕೊಂಡರೆ, ಮತ್ತೊಬ್ಬ ಅನೇಕ ಮಂದಿ ಸ್ತ್ರೀಯರ ಮಾನಭಂಗ ಮಾಡಿರುವುದಾಗಿ ಹೇಳಿಕೊಂಡ ; ಮತ್ತೊಬ್ಬ ಇಡೀ ಊರನ್ನೇ ಲೂಟಿ ಹೊಡೆದು ಸರ್ವನಾಶ ಮಾಡಿದುದಾಗಿ ಮೀಸೆ ತಿರುವಿದ. ಆದರೆ, ಕೊನೆಯಲ್ಲಿ ಬಂದವನೊಬ್ಬ "ನಾನು ಶಾಲೆಗೆ ಹೋಗುತ್ತಿದ್ದ ಒಬ್ಬ ಬಾಲಕನನ್ನು ಶಾಲೆಗೆ ಹೋಗದಂತೆ ತಡೆದೆ" ಎಂದ, ಮಹಮದ್ ಪೈಗಂಬರ್ ಅದನ್ನು ಘೋರ ಪಾತಕವೆಂದು ನಿರ್ಣಯಿಸಿ, ಅವನಿಗೆ ಬಹುಮಾನವನ್ನಿತ್ತರಂತೆ.

ಈ ಕಥೆಯ ಸತ್ಯಾಸತ್ಯತೆಯೇನೇ ಇರಲಿ ! ಅದರ ಹಿಂದಿರುವ ಭಾವವಷ್ಟೇ ಇಲ್ಲಿ ಮುಖ್ಯ. ಹಾಗಾಗಿ ಅನಕ್ಷರತೆಯ ಭಯಂಕರ ಪರಿಣಾಮವನ್ನು ನೆನೆದಾಗ, ವಿಶ್ವವಿದ್ಯಾನಿಲಯಗಳನ್ನು ಸ್ವಲ್ಪ ಕಾಲ ಮುಚ್ಚಿ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಹೆಚ್ಚು ಮಹತ್ವ ಕೊಡಬೇಕೆಂಬ ಅಂಶ ಗೋಜಿನದೆಂದೇನೂ ಅನಿಸುವುದಿಲ್ಲ. ಪ್ರಾಣಕ್ಕೇ ಅಪಾಯ ಒದಗುವ ಸ್ಥಿತಿಯಲ್ಲಿರುವಾಗ ಒಂದು ಕಾಲನ್ನೋ ಅಥವಾ ಒಂದು ಕೈಯನ್ನೋ ಕಳೆದುಕೊಳ್ಳಲು ಸಿದ್ಧವಾಗಬೇಕಾಗುವುದು ಅನಿವಾರ್ಯವಾಗುತ್ತದೆ.

ಪರೀಕ್ಷಾ ಸುಧಾರಣೆಗೆ ಸಂಬಂಧಿಸಿದಂತೆ, ಅದರ ಹಲವು ಬಗೆಯ ಸಮಸ್ಯೆಗಳನ್ನು ಹಲವು ದೃಷ್ಟಿಕೋನಗಳಿಂದ ಚರ್ಚಿಸಿ ಆ ಬಗೆಗೆ ಪರಿಹಾರವಾಗಿ ಸೂಚಿಸುವ ಅವರ ನಿರ್ಧಾರ ಪರಿಶೀಲನಾರ್ಹ. ವಿದ್ಯಾರ್ಥಿಗಳ ಅಶಿಸ್ತಿಗೆ, ವಿದ್ಯಾರ್ಥಿಗಳಷ್ಟೇ ಕಾರಣರಲ್ಲ. ಅಧ್ಯಾಪಕರೂ ಅದಕ್ಕೆ ಹೊಣೆಗಾರರು ಎಂಬ ಅವರ ತೀರ್ಮಾನ ಸುಲಭವಾಗಿ ತಳ್ಳಿ ಹಾಕುವಂತಹುದಲ್ಲ. ಶಿಕ್ಷಣ ಕ್ಷೇತ್ರದ ಎಲ್ಲಾ ಹಂತಗಳನ್ನು ಪರಿಶೀಲಿಸಿರುವ ಅವರು ಇದನ್ನು ಚೆನ್ನಾಗಿ ಬಲ್ಲವರು. ಶೈಕ್ಷಣಿಕ ಸುಧಾರಣೆಯ ಒಂದು ಭಾಗವಾಗಿ ಪರೀಕ್ಷಾ ಸುಧಾರಣೆಗಳು ಬರುವುದರಿಂದ, ಮೂಲಭೂತವಾಗಿ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿಯೇ ಬದಲಾವಣೆ ಆಗಬೇಕಾದುದು ಅಗತ್ಯ ವೆಂದು ಅವರು ನೀಡುವ ಸೂಚನೆ ಅವರ ವಿಚಾರಶೀಲತೆಗೆ ಉತ್ತಮ ಉದಾಹರಣೆ : "ಆದರ್ಶ ಸಮಾಜದಲ್ಲಿಯ ಕಾಲೇಜುಗಳಿಗೆ ಸ್ವಾಯತ್ತತೆಯನ್ನು ಅತ್ಯವಶ್ಯವಾಗಿ ನೀಡಬೇಕು. ಆ ತನಕ ಬೇರೊಂದು ವ್ಯವಸ್ಥೆ ಅನಿವಾರ್ಯ. ಹಣದ ಅಭಾವದಿಂದಾಗಿ ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆ ಸಾಧ್ಯವಿಲ್ಲ. ಅದರ ಬದಲು ಸ್ನಾತಕೋತ್ತರ ಕೇಂದ್ರಗಳು ಮಿನಿ ವಿಶ್ವವಿದ್ಯಾನಿಲಯ ಗಳಂತೆ ಕೆಲಸ ಮಾಡಬಹುದು. ಪರೀಕ್ಷೆಗಳನ್ನು ಕೇಂದ್ರೀಕರಿಸಿ ಎರಡು ಮೂರು ಜಿಲ್ಲೆಗಳ ಕಾಲೇಜುಗಳ ಶೈಕ್ಷಣಿಕ ಆಡಳಿತಕ್ಕೆ ಸ್ನಾತಕೋತ್ತರ ಕೇಂದ್ರಗಳೇ ಜವಾಬ್ದಾರವಾಗುವಂತೆ ಏರ್ಪಾಡು ಮಾಡಬಹುದು. ಕೇಂದ್ರದ ನಿರ್ದೇಶಕರ ನೇತೃತ್ವದಲ್ಲಿ ಸಲಹಾ ಮಂಡಳಿ ಯೊಂದಿದ್ದು, ಆ ಮಂಡಳಿ ವಿಶ್ವವಿದ್ಯಾನಿಲಯದ ಪರವಾಗಿ, ಅದರ ಆದೇಶಾನುಗುಣವಾಗಿ ಕಾರ್ಯ ನಿರ್ವಹಿಸಬಹುದು. ಇದರಿಂದಾಗಿ ಕೇಂದ್ರದ ಹಾಗೂ ಕಾಲೇಜುಗಳ ನಡುವೆ ಗಾಢವಾದ

ಸಂಪರ್ಕ ಏರ್ಪಟ್ಟು, ಬಾಂಧವ್ಯ ಕುದುರಿ, ಪರಸ್ಪರ ಪ್ರಭಾವದ ಪ್ರಯೋಜನ ಒದಗುವುದರಲ್ಲಿ ಲೇಶವೂ ಸಂದೇಹವಿಲ್ಲ. ವಿಕೇಂದ್ರೀಕರಣದಿಂದ ದಕ್ಷತೆ ಹೆಚ್ಚುತ್ತದೆ. ಕೇಂದ್ರೀಕರಣದಿಂದ ಅದಕ್ಷತೆ ಅಧಿಕವಾಗುತ್ತದೆ."[೬]

'ಮತ'ವನ್ನು ಕುರಿತಂತೆ ಅವರು ನಡೆಸುವ ವಿಚಾರಧಾರೆಯೂ ಅಷ್ಟೇ ಗಹನ ಹಾಗೂ ಗಂಭೀರವಾದುದು. ಮತದಿಂದ ಆಗಿರುವ, ಆಗುವ ಆಗಬಹುದಾದ ಎಲ್ಲ ಒಳಿತು ಕೆಡುಕುಗಳನ್ನು ಪಟ್ಟಿ ಮಾಡಿ, ಈ ಹಿನ್ನೆಲೆಯಲ್ಲಿ ಮತದ ಅವಶ್ಯಕತೆ ಎಷ್ಟು ? ಎಂಬುದನ್ನು ಚರ್ಚಿಸಿ, ಅಂತಿಮವಾಗಿ ಈಗ ಎಂಥ ಮತದ ಅವಶ್ಯಕತೆಯಿದೆ ಎಂಬುದನ್ನು ಅತ್ಯಂತ ಸೂಕ್ತ ರೀತಿಯಲ್ಲಿ ಹೇಳುವಲ್ಲಿ ಅವರ ಮನೋಭಾವ ವ್ಯಕ್ತವಾಗುತ್ತದೆ. "ಪ್ರತಿಯೊಬ್ಬ ಮನುಷ್ಯನೂ ಭಗವಂತನ ಅಂಶ. ಇತರರೊಡನೆ ಅವನು ಸಮ ಸಮವಾಗಿ ಬಾಳುವ ಹಕ್ಕುಳ್ಳವನಾಗಿದ್ದಾನೆ ಎಂದು ಬೋಧಿಸುವ ಮತ ನಮಗೀಗ ಬೇಕಾಗಿದೆ. ಅದಕ್ಕೆ ಪ್ರೇರಣೆ ರಷ್ಯದಿಂದಲೇ ಬರಲಿ, ಚೀನದಿಂದಲೇ ಬರಲಿ, ಮತ್ತೆಲ್ಲಿಂದಲೇ ಬರಲಿ, ಅದನ್ನು ಸ್ವೀಕರಿಸಬೇಕಾದ್ದು ಹಸನಾಗಿ ಬದುಕ ಬೇಕೆನ್ನುವ ಜನಾಂಗದ ಆದ್ಯ ಕರ್ತವ್ಯ. ಸಮಾಜವಾದದ ನೆಲಗಟ್ಟಿನ ಮೇಲೆ ಪ್ರಸಿದ್ಧ ಮತಗಳ ಸಾರವನ್ನೊಳಗೊಂಡ ವಿಶ್ವ ಮತ ಉದಿಸುವುದಾದರೆ ಮಾನವ ಜನಾಂಗದ ಭಾಗ್ಯಕ್ಕೆ ಎಣೆಯಿಲ್ಲದಂತಾಗುತ್ತದೆ."[೭] ಸಂಕುಚಿತ ಭಾವನೆಯನ್ನು ತಾಳಿದ ಯಾವುದೇ ಮತವಾದರೂ ದೂರತಳ್ಳುವುದೇ ಸರಿ ಅದರಿಂದ ಲೋಕ ಕಲ್ಯಾಣ ಎಂದಿಗೂ ಸಾಧ್ಯವಿಲ್ಲ. ಸರ್ವೋದಯ ತತ್ತ್ವದ ಮೇಲೆ ನಿಂತ ಯಾವ ಮತವಾದರೂ ಆದರಣೀಯ. ದೇಜಗೌ ಆಶಿಸುವುದು ಇಂಥ ಮತವನ್ನು.

* * * * *

ಭಾಷಣಗಳಲ್ಲಿಯ ವಿಚಾರಧಾರೆ ಈ ಬಗೆಯದಾದರೆ, ಇನ್ನು ಅವರು ಬರೆದ ಮುನ್ನುಡಿಗಳ ಮೋಜೇ ಮತ್ತೊಂದು ಬಗೆಯದು. ಸಾಮಾನ್ಯವಾಗಿ ಮುನ್ನುಡಿಗಳಲ್ಲಿ ವಿಮರ್ಶೆಗಿಂತ ಪ್ರಶಂಸೆಯ ಮಾತುಗಳೇ ಹೆಚ್ಚಾಗಿ ಕಂಡು ಬರುವುದು ಸಹಜವಾದರೂ, ದೇಜಗೌ ಅವರು ಅಲ್ಲಿಯೂ ಸಮತೋಲನವನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿದ್ದಾರೆ. ಮುನ್ನುಡಿಯನ್ನು ಬಯಸಿ ಬಂದ ಸ್ನೇಹಿತರಿಗೆ ನಿರಾಶೆಯಾಗದಂತೆಯೂ, ಅವರಿಗೆ ಪ್ರೋತ್ಸಾಹದಾಯಕವಾಗಿರುವಂತೆಯೂ ನೋಡಿಕೊಂಡು, ಆ ಒಂದು ಹಿನ್ನೆಲೆಯಲ್ಲಿ ತಮ್ಮ ಅನೇಕ ವಿಚಾರಗಳನ್ನು ಮುಂದಿಡುವ ಅವರ ದೃಷ್ಟಿ ಹಾಗೂ ಶಕ್ತಿ ವಿಶಿಷ್ಟವಾದುದು. ಅವರ ಅನೇಕ ಮುನ್ನುಡಿಗಳು ಮುಂದಿನ ವಿಮರ್ಶಕರಿಗೆ ಹಾಗೂ ಸಾಹಿತ್ಯಾಸಕ್ತರಿಗೆ ದಿಕ್ಸೂಚಿಯಾಗಿ ಆ ನಿಟ್ಟಿನಲ್ಲಿ ಹೆಚ್ಚು ಕೆಲಸ ಮಾಡುವಂತೆ ಪ್ರೇರೇಪಿಸಿದ್ದೂ ಉಂಟು. ಅವರು ಬರೆದಿರುವ ಮುನ್ನುಡಿಗಳಲ್ಲಿ ಬಹಳಷ್ಟು ಈ ಬಗೆಯವು. ಕಸದಲ್ಲಿಯೂ ರಸವನ್ನು ತೆಗೆಯುವ ಅವರ ಶಕ್ತಿ, ಒಂದು ಸಣ್ಣ ಎಳೆಯನ್ನೇ ಹಿಡಿದರೂ ಅದರ ಮೂಲಕ ಹಲವು ಸಂಶೋಧನ ವಿಷಯಗಳಿಗಾಗುವಷ್ಟು ವಸ್ತುವನ್ನು ತುಂಬಬಲ್ಲಷ್ಟು ಪ್ರತಿಭೆಯುಳ್ಳದ್ದು. ಯಾವ ವಿಷಯವೂ ಅವರಿಗೆ ಹೊಸದೆನಿಸುವುದಿಲ್ಲ, ಹೊರಗಿನದೆನಿಸುವುದಿಲ್ಲ. ಎಲ್ಲದರ ಮೇಲೂ ಒಂದಲ್ಲ ಒಂದು ಬಗೆಯ ಹಿಡಿತವನ್ನು ಅವರು ಹೊಂದಿದ್ದಾರೆ. ಬರವಣಿಗೆಯಲ್ಲಿ ಚೆನ್ನಾಗಿ ಪಳಗಿದ ಅವರ ಲೇಖನಿ

೬. ಅದೇ.

೭. ಅದೇ.

ಯಾವುದೇ ವಿಷಯಕ್ಕೆ ವಿಶಿಷ್ಟ ರೂಪವನ್ನು ಕೊಡಬಲ್ಲುದು. ಅವರು ಬರೆದ 'ಮುನ್ನುಡಿಗಳು' ಕೇವಲ ಒಂದು ಕೃತಿಯ ಪರಿಚಯ ಅಥವಾ ವಿಮರ್ಶೆಯಷ್ಟೇ ಆಗಿರದೆ, ಅದರ ಕರ್ತೃವಿನ ಅಂತರಂಗದ ಪ್ರತಿಭೆಯನ್ನು ಗುರುತಿಸಿ, ಅದು ಸಮೃದ್ಧಿಯಾಗಿ ವಿಕಾಸಗೊಂಡು ಪ್ರಕಾಶಗೊಳ್ಳುವಂತೆ ಮಾಡುವ ಮಾಂತ್ರಿಕ ನುಡಿಗಳೂ ಆಗಿರುತ್ತವೆ.

ಸಣ್ಣ ಕಥೆ, ಕಾದಂಬರಿ, ಪ್ರಬಂಧ, ಕವಿತೆ ಇಲ್ಲವೆ ಜೀವನ ಚರಿತ್ರೆ ಅಥವಾ ಸಾಹಿತ್ಯ ಚರಿತ್ರೆಗಳಾಗಲಿ, ಆಧ್ಯಾತ್ಮಿಕ ಅಥವಾ ವೈಜ್ಞಾನಿಕ ವಿಷಯಗಳಾಗಲೀ ವಿಶ್ವಕೋಶವಾಗಲೀ ಅಥವಾ ಮನೋವಿಜ್ಞಾನಕೋಶವಾಗಲೀ ಜಾನಪದವಾಗಲಿ ಇಲ್ಲವೆ ಗಾಂಧೀವಿಚಾರ ಮಾರ್ಗವಾಗಲಿ, ಭಾಷೆಯಾಗಲಿ, ವೇಶವಾಗಲಿ, ಅಥವಾ ಭಾಷಾಂತರವಾಗಲಿ - ಯಾವುದೇ ವಿಷಯವನ್ನೂ ಕುರಿತಂತೆ ಅವರ ಲೇಖನಿ ಸರಾಗವಾಗಿ ಓಡುತ್ತದೆ. ವಿಚಾರಗಳನ್ನು ಸುರುಳಿ ಬಿಚ್ಚಿದಂತೆ ಬರೆದುಕೊಂಡು ಹೋಗುತ್ತದೆ. ಅವರ ಮೋಹಕ ಬರವಣಿಗೆ ತನ್ನ ಸಮ್ಮೋಹನ ಶಕ್ತಿಯಿಂದ ನಮ್ಮನ್ನು ಆಕರ್ಷಿಸುತ್ತದೆ. ನಮಗರಿವಿಲ್ಲದಂತೆಯೇ ಹಲವು ಹೊಸ ವಿಚಾರಗಳನ್ನು ನಮ್ಮಲ್ಲಿ ತುಂಬುತ್ತದೆ. ಪಾಶ್ಚಾತ್ಯ ಪ್ರಭಾವದಿಂದಾಗಿ ದಿನಗಳೆದಂತೆ ಭಾರತೀಯತ್ವ ಬರಿದಾಗುತ್ತಿರುವುದನ್ನು ಕಂಡು ಮರುಗಿ ಅವರ ಮನದಾಳದಿಂದ ಹೊಮ್ಮಿದ ನುಡಿಗಳು ಎಂತಹವರನ್ನೂ ಚುಚ್ಚಿ ಎಚ್ಚರಗೊಳಿಸುವಂತಹವು. ಆಲೋಚನೆಗೆ ಒಳಗು ಮಾಡುವಂತಹವು.

"ಭಾರತೀಯತ್ವದ ಅಥವಾ ದೇಶೀಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ. ಪಾಶ್ಚಾತ್ಯ ಪ್ರಭಾವದ ಪರಿಣಾಮವಾಗಿ ನಮ್ಮತನ ಬರಿದಾಗಿ, ಧ್ಯೇಯ ಸ್ಥೈರ್ಯಗಳು ಹುಸಿಯಾಗಿ, ನಮ್ಮ ಜನ ವಿದೇಶೀಯರ ಬಾಲಂಗೋಚಿಗಳಂತೆ ಬದುಕು ನೂಕುವಂತಾಗಿದೆ. ರಾಜಕೀಯ ದಾಸ್ಯ ತೊಲಗಿದರೂ, ಬುದ್ಧಿ ದಾಸ್ಯ ಹೋಗಿಲ್ಲ. ನಡೆನುಡಿಗಳಲ್ಲಿ, ವೇಷಭೂಷಣಗಳಲ್ಲಿ ನಾವು ಅವರನ್ನಣಕಿಸುತ್ತೇವೆಯೇ ಹೊರತು, ಅವರಲ್ಲಿ ಯಾರೂ ನಮ್ಮಂತಾಗಿಲ್ಲ........ ಅಲ್ಲಿ ಹುಟ್ಟಿಕೊಂಡ ಸ್ಕೌಟ್ ಸಂಸ್ಥೆ, ಲಯನ್ಸ್ ಕ್ಲಬ್, ರೋಟರಿ ಮಂಡಲಿ, ಜೂನಿಯರ್ ಚೇಂಬರ್ ಇನ್ನೂ ಮೊದಲಾದವು ಇಲ್ಲಿಯ ಹಳ್ಳಿಗಳಿಗೂ ಪ್ರವೇಶಿಸುತ್ತಿವೆ. ಅವರ ದತ್ತು ಮಕ್ಕಳೆಂಬಂತೆ ನಮ್ಮವರು ಅವುಗಳನ್ನು ಸಾಲುಸಾಲಾಗಿ ಬೆಳೆಸುತ್ತಿದ್ದಾರೆ. ನಮ್ಮ ಸಂಸ್ಥೆಗಳನ್ನು ಅವರು ತಮ್ಮ ದೇಶದಲ್ಲಿ ನಾಟಿ ಹಾಕಿ ಬೆಳೆಸುತ್ತಿದ್ದಾರೆಯೇ ? ಅಂಥ ಸಂಸ್ಥೆಗಳನ್ನು ಇಲ್ಲಿಯೇ ಹೊಸದಾಗಿ ಸೃಷ್ಟಿಸುವ ತಾಕತ್ತು ನಮ್ಮವರಿಗಿಲ್ಲವೆ ? ಎಲ್ಲಿಯವರೆಗೆ ಜನ ಪರರ ಭಾವಾಭಿಪ್ರಾಯಗಳನ್ನು ಮೆಲುಕು ಹಾಕುತ್ತಾರೋ ಅಲ್ಲಿಯವರೆಗೆ ತಮ್ಮದೆನ್ನುವ ಭಾವಾಭಿಪ್ರಾಯಗಳು ಹೊರಹೊಮ್ಮುವುದಿಲ್ಲ. ಬುದ್ಧಿ ದಾಸ್ಯ ತೊಲಗುವುದಿಲ್ಲ, ಸೃಜನಶಕ್ತಿ ವಿಕಾಸಗೊಳ್ಳುವುದಿಲ್ಲ. ನಮ್ಮ ಮನೆಗಳಲ್ಲಿ ವಿದೇಶೀಯ ಕವಿಗಳ ಸಂತರ ಭಾವಚಿತ್ರಗಳು ತೂಗಾಡುತ್ತಿರುವಂತೆ ಅವರ ಮನೆಗಳಲ್ಲಿ ಟಾಗೋರ್, ತುಕಾರಾಮ್, ಬಸವೇಶ್ವರ, ಗಾಂಧೀಜಿಯವರ ಭಾವಚಿತ್ರಗಳು ತೂಗಾಡುತ್ತಿವೆಯೇ ?"[೫]

ಇದು ಅನೇಕರಲ್ಲಿ ದೇಶಾಭಿಮಾನವನ್ನು, ಆತ್ಮಾಭಿಮಾನವನ್ನು ಕೆರಳಿಸಿ, ದೇಜಗೌ ಅವರ ವಿಚಾರಧಾರೆಗೆ ತಲೆಬಾಗುವಂತೆ ಮಾಡುವಂತೆಯೇ ಮತ್ತೆ ಕೆಲವರಲ್ಲಿ ಅಸಮಾಧಾನದ ಕಿಡಿಯನ್ನು ಎಬ್ಬಿಸಲೂಬಹುದು. ದೇಜಗೌರವರನ್ನು ಸಂಕುಚಿತ ಮನೋಭಾವದವರೆಂದು ಪರಿಗಣಿಸುವಂತೆ

---

೫. ಅದೇ.

ಮಾಡಬಹುದು. ಆದರೆ, ವಾಸ್ತವವಾಗಿ ಅವರ ಭಾವನೆ ಅಂತಹುದಲ್ಲ. ಅವರ ದೃಷ್ಟಿ ಅತ್ಯಂತ ವಿಶಾಲವಾದದ್ದೇ. ಮುಂದೆ ಅವರೇ ಅದನ್ನು ಸ್ಪಷ್ಟಪಡಿಸಿದ್ದಾರೆ.

"ಇದರಿಂದ ಪಾಶ್ಚಾತ್ಯ ಜ್ಞಾನ ವಿಜ್ಞಾನಗಳನ್ನು ಕಲಿಯಬಾರದೆಂದಿಲ್ಲ, ಕಲಿಯಲೇ ಬೇಕು. ಆದರೆ, ಆ ಕಲಿವು ನಮ್ಮ ತಿಳಿವಿಗೆ ಪೋಷಕವಾಗಿರಬೇಕೇ ಹೊರತು ಮಾರಕವಾಗಬಾರದು. ನಮ್ಮ ಕಾವೇರಿಗೆ ಥೇಮ್ಸ್ ನದಿಯ ನೀರು ಹರಿದು ಬರಲಿ, ವೋಲ್ಗಾ ನದಿಯ ನೀರು ಹರಿದು ಬರಲಿ, ಅಮೆಜಾನ್ ನದಿಯ ನೀರು ಹರಿದು ಬರಲಿ, ಆದರೆ ನಮ್ಮ ಕಾವೇರಿ ಕಾವೇರಿ ಯಾಗುಳಿಯಲಿ. ನಮ್ಮ ಶರೀರ ಪುಷ್ಟಿಗೆ ಅವರ ಗೋಧಿ ಹಾಲು ಬೆಣ್ಣೆ ಬರಲಿ ಆದರೆ ಅವರು ನಮ್ಮ ಆತ್ಮವಿಶ್ವಾಸಕ್ಕೆ ಅಡ್ಡ ಬರದಿರಲಿ......" ಒಂದು ವರ್ಷ ಮಾತ್ರ ತಾಯಿಯ ಹಾಲು ಕುಡಿದು ಅನಂತರ ಆಯುಸ್ಸಿನಲ್ಲಿ ಎಮ್ಮೆಯ ಹಾಲು ಕುಡಿದಿದ್ದರಿಂದ ಕುಡಿದವನಿಗೆ ಕೋಣನ ಬುದ್ಧಿ ಬರಬಾರದು. ತಾನು ಕೋಣನ ವಂಶದವನೆಂದು ಹೇಳಿಕೊಳ್ಳುವ, ತಾಯಿಯನ್ನು ಮರೆಯುವ ಆತ್ಮಾವಹೇಳನ ಬುದ್ಧಿಯನ್ನು ಕಂಡಾಗ ಈ ದೇಶಕ್ಕೆ ಮೋಕ್ಷವುಂಟೇ ಎಂಬ ಸಂಶಯ ಮೂಡದಿರದು".[೬]

ದೇಜಗೌ ಅವರ ದೃಷ್ಟಿ, ವಿಚಾರಧಾರೆ ಈ ಬಗೆಯದು, ಯಾವುದೊಂದನ್ನೂ ಅವರು ಸುಲಭವಾಗಿ ಪುರಸ್ಕರಿಸುವವರೂ ಅಲ್ಲ, ತಿರಸ್ಕರಿಸುವವರೂ ಅಲ್ಲ. ಹಳೆಯ ಕಂದಾಚಾರಗಳಿಗೆ ಅಂಟಿದವರೂ ಅಲ್ಲ, ಹೊಸದರಿಂದ ದೂರ ನಿಂತವರೂ ಅಲ್ಲ. ಸಮಕಾಲೀನ ದೃಷ್ಟಿಯಲ್ಲಿ ಜೀವನದ ಮೌಲ್ಯಗಳನ್ನು ಅಳೆದವರು. ಆದರೆ, ಅದರಲ್ಲಿ ಭೂತ - ಭವಿಷ್ಯತ್‌ಗಳ ತಾಳೆಯನ್ನು ಮರೆತವರಲ್ಲ. 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ! ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ I ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ I ಜಸವು ಜೀವನಕೆ - ಮಂಕುತಿಮ್ಮ" ಎಂಬಂತಹ ಜೀವನ ದೃಷ್ಟಿ ದೇಜಗೌ ಅವರದ್ದು.


ಈ ಲೇಖನದಲ್ಲಿ ದೇಜಗೌ ಅವರ ವಿಚಾರ ಶೀಲತೆಯ ಒಂದು ಕಣವನ್ನು ಮಾತ್ರ ಪರಿಚಯಿಸಿಕೊಡಲು ಸಾಧ್ಯವಾಗಿದೆ. ಲೇಖನದ ಪುಟಮಿತಿ ಅದಕ್ಕೆ ಕಾರಣವಾಗಿದೆ. ಆದರೆ ಸಾಧನೆಯನ್ನು ಗಮನಿಸಿದ ಅವರ ಕೃತಿಗಳನ್ನು ಪರಿಚಯಿಸಿಕೊಂಡ ಯಾರಿಗಾದರೂ ಅದರ ವ್ಯಾಪ್ತಿ ಎಷ್ಟೆಂಬುದು ಅರ್ಥವಾದೀತು.

ದೇಜಗೌ ವಿಚಾರಪ್ರಿಯರು, ವಿಚಾರಶೀಲರು, ಅಂತೆಯೇ ವಿಶಾಲ ಹೃದಯರು. ಧ್ಯೇಯ ಸಂಪನ್ನರು, ಹೋರಾಟಗಾರರು, ಮಾರ್ಗದರ್ಶಕರು. ಅನೇಕರ ಅನುಭವದಲ್ಲಿ ಅವರು "ಹೂವಿಗಿಂತ ಮೃದು : ವಜ್ರಕ್ಕಿಂತ ಕಠೋರ" ಎಲ್ಲ ನಿಜ. ಆದರೆ, ಅವರು ಯಾವಾಗ ಯಾರ ವಿಷಯದಲ್ಲಿ ಹೂವಿಗಿಂತ ಮೃದುವಾಗುತ್ತಾರೆ, ವಜ್ರಕ್ಕಿಂತ ಕಠೋರರಾಗುತ್ತಾರೆ ಎಂಬುದನ್ನು ಊಹಿಸುವುದು ಕಷ್ಟ. ದೇಜಗೌ ಅವರು ತಮ್ಮ ವಿವಿಧ ಅಂತಸ್ತಿನ ಅಧಿಕಾರಾವಧಿಯಲ್ಲಿ ಅನೇಕರನ್ನು ಮುಂದೆ ತಂದಿದ್ದಾರೆ. ಹಲವಾರು ಯೋಜನೆಗಳನ್ನು ರೂಪಿಸಿದ್ದಾರೆ, ಸಂಘ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ, ದೇಶದ ಪ್ರಗತಿಗೆ ಕಾರಣರಾಗಿದ್ದಾರೆ. ಸ್ನೇಹಿತರನ್ನು ಸಂಪಾದಿಸಿಕೊಂಡಿದ್ದಾರೆ. ಬಹುಜನ ಪ್ರಿಯರೆನಿಸಿಕೊಂಡಿದ್ದಾರೆ. ತಮ್ಮ ವಿಚಾರಧಾರೆಯಿಂದ ನಾಡಿಗೇ ಬೆಳಕಾಗಿದ್ದಾರೆ. ಆದರೂ ಅವರಲ್ಲಿಯ ಒಂದು ದೌರ್ಬಲ್ಯ ಅವರಿಗೆ ಶತ್ರುಗಳನ್ನು ಸಂಪಾದಿಸಿಕೊಟ್ಟಿದೆ. ಅವರ ಸರ್ವಾಂಗೀಣ ಸೊಬಗಿಗೆ ಎಲ್ಲೋ ಒಂದು ಮೂಲೆಯ

೬. ಅದೇ.

ಕಪ್ಪುಚುಕ್ಕೆ ಯಾಗಿ ಆ ದೌರ್ಬಲ್ಯ ಮೆರೆದಿದೆ. ಅದು ಅನೇಕ ಸಂದರ್ಭಗಳಲ್ಲಿ ಅವರ ವಿಚಾರ ಶೀಲತೆಯ ಮೇಲೂ ಪ್ರಭಾವವನ್ನು ಬೀರಿ, ಕುಂಠಿತವಾಗಿಸಿರುವುದೂ ಉಂಟು. ಇದು ಸಂಪೂರ್ಣವಾಗಿ ಅವರ ಅಂತರಂಗದಿಂದ ಬಂದುದಾಗಿರದೆ ಹೊರಗಿನ ಪ್ರಭಾವಗಳಿಂದ ಪ್ರೇರಿತವಾದುದೆನ್ನಬಹುದು. ಇದು ದೇಜಗೌ ಅವರನ್ನು ಹತ್ತಿರದಿಂದ ಬಲ್ಲ ಅನೇಕರ ಅಭಿಪ್ರಾಯ. ನಮ್ಮ ವಿಮರ್ಶಕರು, ಕುಮಾರವ್ಯಾಸನ ಕಾವ್ಯ ಪ್ರತಿಭೆಯನ್ನು ಹೊಗಳಿ, ಹಾಡಿ ಹೊಗಳಿಕೆಯ ಮಾಲೆಯನ್ನೇ ಕಟ್ಟಿ ಹಾಕಿದರೂ, ಕೊನೆಯಲ್ಲಿ 'ಆದರೆ' ಎಂಬ ಸೊಲ್ಲನ್ನೆತ್ತಿ, "........ ನಾರಾಣಪ್ಪನ ಪಾತ್ರಗಳಲ್ಲಿ ಅದ್ಭುತ ಶಕ್ತಿಯ ಸಂಚಲನೆ ಇರುವಂತೆಯೇ ಸಂಯಮವೂ ಇದ್ದಿದ್ದರೆ ಪ್ರಪಂಚದ ಸಾಹಿತ್ಯದಲ್ಲಿ ನಮ್ಮ ಕವಿ ಅದ್ವಿತೀಯನಾಗುತ್ತಿದ್ದ. ಆತನಿಗೆ ಪಂಪನ ಸಂಯಮ ಬೇಕು ಎಂದು ಎಷ್ಟೋ ವೇಳೆ ಅನ್ನಿಸುತ್ತದೆ......." ಎಂದು ಮುಕ್ತಾಯಗೊಳಿಸುವುದುಂಟು. ದೇಜಗೌ ಅವರ ಬಗ್ಗೆಯಾದರೂ ಅನೇಕ ವೇಳೆ ಅನೇಕರಿಗೆ ಹೀಗನ್ನಿಸುವುದು, ಅನ್ನಿಸಿರುವುದೂ ಉಂಟು. ಅವರಲ್ಲಿ ಅನೇಕ ಮಹತ್ವದ ಗುಣಗಳು, ವಿಚಾರಶೀಲತೆಗೆ ಬೇಕಾದ ಪರಿಕರಗಳೂ ಮನೆಮಾಡಿಕೊಂಡಿರುವಂತೆಯೇ 'ಪ್ರತ್ಯಕ್ಷ ಕಂಡರೂ ಪ್ರಮಾಣೀಕರಿಸಿ ನೋಡುವ' ತಾಳ್ಮೆ, ಸಂಯಮ ಇದ್ದಿದ್ದರೆ ಅವರನ್ನು ಅನೇಕ ರಂಗದಲ್ಲಿ ಮೀರಿಸುವ ವ್ಯಕ್ತಿ ಇನ್ನೂ ಹುಟ್ಟಿ ಬರಬೇಕಾಗಿತ್ತು ಎಂದೇ ಹೇಳಬಹುದು.

*   *   *   *   *



ಜಾನಪದವು ಈಗ ಹಲವು ಬಗೆಯ ಅಧ್ಯಯನ ಕ್ರಮಗಳಿಗೆ ಒಳಗಾದರೂ ತನ್ನ 'ಅವ್ವ'ನ ಗುಣವನ್ನು ಅದು ಬಿಟ್ಟುಕೊಟ್ಟಿಲ್ಲ. ಈ ಸೂಕ್ಷ್ಮವು ಡಾ. ಡಿ. ಕೆ. ರಾಜೇಂದ್ರ ಅವರಿಗೆ ತಿಳಿದಿದೆ. ದಕ್ಷಿಣ ಕರ್ನಾಟಕದ ಜನಪದದ ಹಲವು ಹಮ್ಮುಗೆಗಳನ್ನು ವ್ಯಾಖ್ಯಾನಿಸುವಾಗ ಮತ್ತು ಕುವೆಂಪು-ಬೇಂದ್ರೆ ಅವರ ಕೃತಿಗಳನ್ನು ಕುರಿತು ಚಿಂತಿಸುವಾಗ ಶಿಷ್ಟ ಮತ್ತು ಪರಿಶಿಷ್ಟಗಳು ಸೂಕ್ಷ್ಮವಾಗಿ ಒಂದರೊಡನೊಂದು ಸೇರಿಕೊಳ್ಳುತ್ತವೆ. ಜನಪದವು ಹೀಗೆ ಅದ್ಯತನಗೊಳ್ಳುವುದೆಂದರೆ: ವರ್ತಮಾನಗೊಳ್ಳುವುದೆಂದೂ ಸಂಸ್ಕೃತಿ ನೆಲೆಗಳಲ್ಲಿ ವ್ಯೈ ಪಡೆಯುವುದೆಂದೂ ಅರ್ಥ. ಈ ಅರ್ಥದ ಹುಡುಕಾಟಗಳು ಇಲ್ಲಿಯ ಲೇಖನಗಳ ತಾತ್ವಿಕ ಸ್ವರೂಪವನ್ನು ನಿರ್ಧರಿಸಿವೆ. ಕಾವ್ಯ, ಮಹಾಕಾವ್ಯ, ಲಾವಣಿ, ಜನಪದ ಗೀತೆ, ಜನಪದ ಕಥನ, ಆತ್ಮಚರಿತ್ರೆ, ಗದ್ಯವಿಮರ್ಶೆ ಹೀಗೆ ಹತ್ತಾರು ವಿಷಯಗಳು ಇಲ್ಲಿ ಸಮಗ್ರೀಕರಣಗೊಂಡಿವೆ; ಕೃತಿಯ ಆಂತರಿಕ ಸ್ವರೂಪವನ್ನು ನಿರ್ಧರಿಸಿವೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಅಧ್ಯಕ್ಷರು

ISBN No. 81-7713-132-X

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಬೆಲೆ ರೂ.120